University of Mysore

Oriental Research Institute Publications
KANNADA SERIES No. 27

GENERAL EDITOR
H. R. RANGASWAMY IYENGAR, M.A.
Superintendent, Oriental Research Institute, Mysore

ಸಿಂಗಿರಾಜಕವಿಕೃತ

ಸಿಂಗಿರಾಜಪುರಾಣ

SINGIRĀJAPURĀṆA

OF

SINGIRĀJA

EDITED BY
H. DEVEERAPPA, M.A.
Assistant Curator, Oriental Research Institute, Mysore

MYSORE:
... THE SENIOR ASST. DIRECTOR AT THE GOVT. BRANCH PRESS
1950

Price : Rs. 6-0-0

ఎస్. ఎస్. సరస్వతి.

వ్యసగారు.

University of Mysore

Oriental Research Institute Publications
KANNADA SERIES No. 27

GENERAL EDITOR
H. R. RANGASWAMY IYENGAR, M.A.,
Superintendent, Oriental Research Institute, Mysore

ಸಿಂಗಿರಾಜಕವಿಕೃತ

ಸಿಂಗಿರಾಜಪುರಾಣ

SINGIRĀJAPURĀNA

OF

SINGIRĀJA

EDITED BY
H. DEVEERAPPA, M.A.,
Assistant Curator, Oriental Research Institute, Mysore

MYSORE :
PRINTED BY THE SENIOR ASST. DIRECTOR AT THE GOVT. BRANCH PRESS
1950

ಪ್ರಸ್ತಾವನೆ

ಧರ್ಮವೀರನೂ ಸಮಾಜ ಸುಧಾರಕನೂ ವೀರಶೈವ ಮತಪ್ರಚಾರಕನೂ ಆದ ಬಸವೇಶ್ವರನ, ಜೀವನಚರಿತ್ರೆಯನ್ನು ತಿಳಿಸುವ, ಕನ್ನಡ ವಾಙ್ಮಯದಲ್ಲಿ ಸುಪ್ರಸಿದ್ಧವಾದ ಪ್ರಾಚೀನ ಗ್ರಂಥಗಳು ನಾಲ್ಕು: ಹರಿಹರನ 'ಬಸವರಾಜ ದೇವರ ರಗಳೆ,' ಭೀಮಕವಿಯ 'ಬಸವಪುರಾಣ,' ಲಕ್ಕಣ್ಣದಂಡೇಶನ 'ಶಿವತತ್ವ ಚಿಂತಾಮಣಿ' (ಕೆಲವು ಭಾಗಗಳು), ಮತ್ತು ಸಿಂಗಿರಾಜನ 'ಸಿಂಗಿರಾಜ ಪುರಾಣ' ಅಥವಾ 'ಬಸವರಾಜಚಾರಿತ್ರ *'. ಹದಿನಾಲ್ಕನೆಯ ಶತಮಾನದಲ್ಲಿದ್ದ ಭೀಮಕವಿ ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣವನ್ನನುಸರಿಸಿ ಕನ್ನಡ ಬಸವಪುರಾಣವನ್ನು ರಚಿಸಿದ್ದಾನೆ. ಇದನ್ನು ಶ್ರೀ॥ ಭಾಸ್ಕರಯ್ಯನವರ ಹೆಸರಿನಲ್ಲಿ ಅಚ್ಚಿಟ್ಟು ಪ್ರಕಾಶಪಡಿಸಿದೆ. 'ಬಸವರಾಜದೇವರ ರಗಳೆ' ಯನ್ನು ಕೀರ್ತಿಶೇಷರಾದ ಶ್ರೀಮಾನ್ ವೆಂಕಣ್ಣಯ್ಯನವರು ಇದೇ ಸಂಸ್ಥೆಯಲ್ಲಿದ್ದ ಕೈಬರಹದ ಪ್ರತಿಗಳ ಸಹಾಯದಿಂದ ವಿಮರ್ಶೆಯೊಡನೆ ಅಚ್ಚಿಟ್ಟು ಪ್ರಕಾಶಪಡಿಸಿರುತ್ತಾರೆ. ಲಕ್ಕಣ್ಣದಂಡೇಶನ 'ಶಿವತತ್ವ ಚಿಂತಾಮಣಿ' ಯನ್ನು ಐದು ಮಾತೃಕೆಗಳ ಆಧಾರದಿಂದ ಶೋಧಿಸಿ ಇದೇ ಸಂಸ್ಥೆಯಿಂದ ಪ್ರಕಟಿಸಲು ಏರ್ಪಾಟಾಗಿದೆ. ಕೊನೆಯದಾದ 'ಸಿಂಗಿರಾಜಪುರಾಣ' ವನ್ನು ಇದರ ಪೀಠಿಕೆಯಲ್ಲಿ ವಿವರಿಸಿರುವ ಏಳು ಹಸ್ತಲಿಖಿತ ಪ್ರತಿಗಳ ಸಹಾಯದಿಂದ ಶೋಧಿಸಿ ವಿಮರ್ಶಪೂರಿತವಾದ ಪೀಠಿಕೆ, ಅನುಬಂಧಗಳೊಡನೆ ಪ್ರಕಾಶಪಡಿಸಿದೆ. ಈ 'ಬಸವ ಚರಿತ್ರೆ' ಗಳನ್ನು ಬರೆದವರಲ್ಲಿ ಯಾರೂ ಬಸವೇಶ್ವರನ ಸಮಕಾಲೀನರಲ್ಲ: ಅವನನ್ನು ಕಂಡವರಲ್ಲ ; ಮತ್ತು ಅವನ ಕಾಲದಲ್ಲಿದ್ದ ಜನರ ಪರಿಚಯವೂ ಅವರಿಗಿರಲಿಲ್ಲವೆಂದು ತೋರುತ್ತದೆ. ಆದುದರಿಂದ ಬಸವೇಶ್ವರನ ನಿಜವಾದ ಜೀವನಚರಿತ್ರೆಯನ್ನು ನಿಷ್ಕೃಷ್ಟವಾಗಿ ನಿರ್ದುಷ್ಟವಾಗಿ ಗೊತ್ತುಹಚ್ಚುವುದು ಕಷ್ಟ. ಆದರೂ ಈ ಕೃತಿಗಳಿಂದಲೂ, ಬಸವಣ್ಣನ ಮತ್ತು ಅವನ ಸಮಕಾಲೀನರ ವಚನಗಳಿಂದಲೂ ಶಾಸನಾಧಾರಗಳಿಂದಲೂ ಈತನ ಚರಿತ್ರೆಯನ್ನು ನಿರ್ಮಿಸಬೇಕಾಗಿದೆ.

ಸಿಂಗಿರಾಜಪುರಾಣವೆಂಬುದೊಂದು ಷಟ್ಪದೀ ಕಾವ್ಯ. ಇದನ್ನು ಬರೆದವನು ಸಿಂಗಿರಾಜ ಅಥವಾ ಶೃಂಗಿರಾಜ. ಈತನು ವೀರಶೈವ ಕವಿ. ಕಾಶೀ ವಿಶ್ವನಾಥನು ಇವನ ಕುಲದೈವ. ಈತನ ಗುರು ಶಾಸ್ತ್ರಾಗಮಗಳಲ್ಲಿ ನಿಷ್ಣಾತನಾದ 'ಸದ್ಗುರುಮೂರ್ತಿ ದೇವಿದೇವ.' ಕನ್ನಡ ಕವಿಚರಿತೆಕಾರರು, ಈತನು ಸು. ಕ್ರಿ. ಶ. ೧೫೦೦ರಲ್ಲಿ ಇದ್ದಿರಬಹುದೆಂದು ಊಹಿಸಿದ್ದಾರೆ. ಈ ಊಹೆಯನ್ನೇ ಪೀಠಿಕೆಯಲ್ಲಿ ಶ್ರೀಮಾನ್ ದೇಪೀರಪ್ಪನವರು ಸಮರ್ಥಿಸಿರುತ್ತಾರೆ.

---

* ಕವಿಚರಿತೆಕಾರರು ಈ ಗ್ರಂಥಕ್ಕೆ 'ಮಲಬಸವರಾಜಚಾರಿತ್ರ' ಎಂದು ಕರೆದಿದ್ದಾರೆ, ಇಲ್ಲಿ 'ಮಲ' ಶಬ್ದದ ಅರ್ಥವೇನೆಂಬುದು ಸ್ಪಷ್ಟವಾಗಿಲ್ಲ

ಸಿಂಗಿರಾಜನು ಬರೆದಿರುವುದು ಒಂದು ಮಹಾಕಾವ್ಯ. ಆದರೆ ಇದು ಸಂಸ್ಕೃತ ಆಲಂಕಾರಿಕರಾದ ದಂಡಿ ಮೊದಲಾದವರು ಹೇಳಿರುವ ಹದಿನೆಂಟು ಅಂಗಗಳುಳ್ಳ ಮಹಾಕಾವ್ಯವಲ್ಲ. 'ಇದು ಹರಪುರಾಣೋಕ್ತಿ, ಶರಣರ ಮಹಾಸ್ತೋತ್ರ್ಯಸಂಗ್ರಹ,' 'ಬಸವನುತಿಸಾರ,' 'ಭರ್ಗನೆರಡನೆಯಮೂರ್ತಿ ವೃಷಭಾವತಾರನು ಬಸವನಾಮದಿಂ ಜನಿಸಿ ಸದ್ಭಕ್ತಿ ಪಥತೋಱಿ ಜಗವ ಪಾವನವಮಾಡಿ ಪರವೆರಸಿದ ಮಹಾರಹಸ್ಯಾವಳಿ'. ಪ್ರಭುಸಂಪಾದನೆ, ಕ್ರಿಯಾಸಂಪಾದನೆ ಮೊದಲಾದ ವಚನಸಂಗ್ರಹಗಳನ್ನನುಸರಿಸಿ, ಪರಶಿವನ ಅಪರಾವತಾರನಾದ ಬಸವೇಶ್ವರನು ಲೋಕಕಲ್ಯಾಣಕ್ಕಾಗಿ ಭಕ್ತರ ಸೇವೆಗಾಗಿ ಮೆರೆದ ಅರುವತ್ತುನಾಲ್ಕು ಪವಾಡಗಳನ್ನು ನಿರೂಪಿಸಿರುವ ದಿವ್ಯಚರಿತ್ರೆ. ಬಸವೇಶ್ವರನು ಪರಶಿವನ ಅವತಾರವೆಂದು ಸ್ಪಷ್ಟಪಡಿಸುವುದೇ ಸಿಂಗಿರಾಜನ ಮುಖ್ಯದೃಷ್ಟಿ. ಬಸವೇಶನೂ ಇತರ ಅವತಾರಪುರುಷರಂತೆ ಅನೇಕ ಅದ್ಭುತಕಾರ್ಯಗಳನ್ನು ಮಾಡಿ ತನ್ನ ಅಮಾನುಷ ಶಕ್ತಿಯನ್ನು ಮೆರೆದಿದ್ದಾನೆ. "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ" (IV-7) ಎಂದು ಗೀತೆಯಲ್ಲಿ ಹೇಳಿರುವಂತೆ, ಸಾಕ್ಷಾತ್ ಪರಶಿವನೇ ಧರ್ಮಗ್ಲಾನಿಯನ್ನು ಹೋಗಲಾಡಿಸಿ, ಧರ್ಮಸಂಸ್ಥಾಪನೆ ಮಾಡಿ ಲೋಕಕ್ಕೆ ಕಲ್ಯಾಣವನ್ನುಂಟು ಮಾಡಲು ಇಹಲೋಕಕ್ಕೆ ಬಂದು ಪ್ರಾಕೃತ ಜನ್ಮವನ್ನು ತಾಳಿ ಸಾಮಾನ್ಯ ಜನರೊಡನೆ ಕಲೆತು, ಅವರಂತೆಯೇ ಕಷ್ಟಸುಖಗಳನ್ನು ಅನುಭವಿಸಿ ತನ್ನ ದಿವ್ಯಶಕ್ತಿಯನ್ನೂ ಭಕ್ತಿಪರಾಕಾಷ್ಠತೆಯನ್ನೂ ತೋರಿಸಿರುವನೆಂಬುದು ಕವಿಯ ಮುಖ್ಯ ಅಭಿಪ್ರಾಯ. ಈ ಅಂಶವನ್ನು ತನ್ನದೇ ಆದ ರೀತಿಯಲ್ಲಿ ಚಿತ್ರಿಸಲು ತನ್ನ ಕವಿತಾಚಾತುರ್ಯವನ್ನೂ ಶಾಸ್ತ್ರಪಾಂಡಿತ್ಯವನ್ನೂ ವಿನಿಯೋಗಿಸಿದ್ದಾನೆ. ಗ್ರಾಮ್ಯ ಭಾಷೆಯನ್ನು ಸೇರಿಸದೆ ಸಾಮಾನ್ಯ ವ್ಯಾಕರಣ ನಿಯಮಗಳನ್ನು ಉಲ್ಲಂಘಿಸದೆ ಗ್ರಂಥವನ್ನು ಬರೆದಿದ್ದರೆ ಈ ಕಾವ್ಯಕ್ಕೆ ಮತ್ತಷ್ಟು ಮೆಚ್ಚುಗೆ ಬರುತ್ತಿತ್ತು.

ಈ ಗ್ರಂಥವನ್ನು ಶೋಧಿಸಿ ಅಚ್ಚಿಡಲು ಪ್ರಾರಂಭಿಸಿ ಬಹಳ ದಿನಗಳಾದುವು. ಗ್ರಂಥದ ಶುದ್ಧವಾದ ಮೂಲಪ್ರತಿಗಳು ದೊರೆಯದೆಯೂ, ಗ್ರಂಥ ಶೋಧನೆ ಮಾಡುತ್ತಿದ್ದವರು ಬೇರೆ ಕೆಲಸದಲ್ಲಿ ನಿಯುಕ್ತರಾಗಿದ್ದುದರಿಂದಲೂ ಮತ್ತಿತರ ಕಾರಣಗಳಿಂದಲೂ ಇದನ್ನು ಪ್ರಕಟಿಸಲು ಸಾವಕಾಶವಾಯಿತು. ಆದರೂ ಮೊದಲು ಮಾಡಿದ ಕಾರ್ಯವು ಮುಗಿದುದಕ್ಕಾಗಿಯೂ, ಕೃತಿಯು ಸವಿಸ್ತಾರವಾದ ಸಂಶೋಧನಾತ್ಮಕವಾದ ಪೀಠಿಕೆಯೊಡನೆ ಹೊರಬಿದ್ದುದಕ್ಕಾಗಿಯೂ ಸಂತೋಷಪಡಬೇಕಾಗಿದೆ. ಈ ಗ್ರಂಥ ಸಂಶೋಧನೆಗೆ ಸಹಾಯ ಮಾಡಿದ ಮಹನೀಯರಿಗೂ ಕೈಬರಹದ ಪ್ರತಿಗಳನ್ನು ಎರವಾಗಿ ಕೊಟ್ಟು ಸಹಕರಿಸಿದ ಸಂಸ್ಥೆಗಳಿಗೂ ಮಹನೀಯರಿಗೂ ನಾನು ಕೃತಜ್ಞನು.

ಎಚ್. ಆರ್. ರಂಗಸಾಮ್ಯೈಯ್ಯಂಗಾರ್,
ಅಧ್ಯಕ್ಷ, ಪ್ರಾಚ್ಯ ಸಂಶೋಧನ ಸಂಸ್ಥೆ.

ವಿಷಯಸೂಚಿಕೆ

ಪೀ ಠಿ ಕೆ

ಕವಿ ಮತ್ತು ಕಾಲ

ಸಿಂಗಿರಾಜಪುರಾಣವೆಂಬ ಈ 'ಅಮಲಬಸವ ಚಾರಿತ್ರ' ವನ್ನು ಬರೆದ ಕವಿ ಸಿಂಗಿರಾಜ. ಇವನು ಇನ್ನಾವ ಗ್ರಂಥವನ್ನೂ ಬರೆದಿರುವಂತೆ ತೋರುವುದಿಲ್ಲ. ಇವನ ಕಾಲದೇಶಾದಿಗಳ ವಿಷಯದಲ್ಲಿ ಪಂಡಿತರಲ್ಲಿ ಏಕಾಭಿಪ್ರಾಯವಿರುವುದಿಲ್ಲ.

ಕವಿಚರಿತೆಕಾರರು—"ಇವನು ವೀರಶೈವಕವಿ, ಇವನ ಗುರು ದೇವಿದೇವ, ಮಹಾದೇವಿಯಕ್ಕನ ಪುರಾಣವನ್ನು ಬರೆದ ಚೆನ್ನಬಸವಾಂಕನು (ಸು. ೧೫೫೦) ಇವನ ಹೆಸರನ್ನು ಹೇಳುವುದರಿಂದ ಇವನು ಅವನಿಗಿಂತ ಹಿಂದೆ ಇದ್ದಿರಬೇಕೆಂಬುದು ಸ್ಪಷ್ಟವಾಗಿದೆ. ಆದರೆ ಎಷ್ಟು ಹಿಂದೆ ಇದ್ದನೋ ತಿಳಿಯದು. ಸುಮಾರು ಕ್ರಿ.ಶ. ೧೫೦೦ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ" ಎಂದಿದ್ದಾರೆ. ಹರ್ಡೇಕರ್ ಮಂಜಪ್ಪನವರು ತಮ್ಮ 'ಶ್ರೀ ಬಸವೇಶ್ವರ ಚರಿತ್ರೆ' ಯಲ್ಲಿಯೂ ಸಿಂದಗಿ ಸಿದ್ದಪ್ಪನವರು 'ಶ್ರೀ ಬಸವೇಶ್ವರನ ಚರಿತ್ರೆ' ಯಲ್ಲಿಯೂ ಬಸವಣ್ಣನ ಚರಿತ್ರೆಯನ್ನು ಹೇಳುವ ಗ್ರಂಥಗಳಲ್ಲಿ ಸಿಂಗಿರಾಜಪುರಾಣವೇ ಮೊದಲನೆಯದೆಂದೂ, ಅದರ ಕರ್ತೃ ಸಿಂಗಿರಾಜನು ದಶಗಣದ ಸಿಂಗಿರಾಜನಿಂದ ಅಭಿನ್ನನೆಂದೂ ಭಾವಿಸಿ ಇವನು ಬಸವಣ್ಣನ ಸಮಕಾಲೀನನೆಂದು (೧೧೬೦) ಬರೆದಿದ್ದಾರೆ. ಆದರೆ ಕವಿಚರಿತೆಕಾರರು ಈ ಅಭಿಪ್ರಾಯವನ್ನು ಸಪ್ರಮಾಣವಾಗಿ ಖಂಡಿಸಿ ಸಿಂಗಿರಾಜನು ಕ್ರಿ.ಶ. ಸು. ೧೫೦೦ರಲ್ಲಿದ್ದನೆಂದು ಸ್ಥಾಪಿಸಿದ್ದಾರೆ. ರೆ. ಕಿಟ್ಟೆಲ್ ಅವರು ಸಿಂಗಿರಾಜನು ಕ್ರಿ.ಶ. ೧೩೩೦ ಕ್ಕಿಂತ ಈಚೆಗೆ ೧೪೭೭ಕ್ಕಿಂತ ಹಿಂದೆ ಜೀವಿಸಿದ್ದಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಅವರು ಕೊಡುವ ಕಾರಣ ಸಿದ್ಧನಂಜೇಶ (ಸು. ೧೭೦೦) ನು ಸಿಂಗಿರಾಜನನ್ನು ಶಿವಗಣಪ್ರಸಾದಿ ಮಹಾದೇವಯ್ಯಗಳು, ಕಲ್ಲುಮಠದ ಆಚಾರ್ಯ, ಮಗ್ಗೆಯ ಮಾಯಿದೇವ ಇವರುಗಳ ಪಂಕ್ತಿಗೆ ಸೇರಿಸಿರುವುದು.

ಈ ಕೃತಿಯಿಂದ ತಿಳಿದುಬರುವ ಅಂಶವೇನೆಂದರೆ, ಸಿಂಗಿರಾಜನು 'ಕಾಶೀಪುರಾಧಿಪ ವಿಶ್ವಪತಿಯ ಪದಕಮಳ ಷಟ್ಚರಣ'ನು, ವೀರಭದ್ರನ ಪರಮಭಕ್ತ, "ಕ್ರೀಭಾವದಂತರ ಪ್ರತಿಷ್ಠಿತಾಚಾರ್ಯ" ಮಂತ್ರಸಿದ್ಧ, ಕವಿಕಮಲನಾಭ, ಕವಿಯ ಮನ್ವಂತರದ ಗೌತುಮನು, 'ದೇವಕವಿ ಶತಪತ್ರನಾಭ ಸಿಂಹ.' ಇವನ ಗುರುವಿನ ಬಗ್ಗೆ,

ವರಪುರಾಣಾಗಮ ವ್ಯಾಕರಣ ಛಂದಸ್ಸು
ಸುರುಚಿರಾಮ್ನಾಯ ಜ್ಯೋತಿಷಜ್ಞಾನ ದರುಶನಾ
ವರಣ ಸಾಲಂಕಾರ ಶಾಸ್ತ್ರ ಘನತರ್ಕ ಪರತತ್ವಾರ್ಥ ಶಿವಯೋಗದ।

ಕರು ಬೊಮ್ಮ ಸಾಕಾರ ಪಂಚಾಕ್ಷರೀ ಮಂತ್ರ
ದೊರೆ ಮಹತ್ವಡೆದ ಸದ್ಗುರುಮೂರ್ತಿ ದೇಮಿದೇ
ವರು . . . . (೧-೪)

ಇಷ್ಟುಮಾತ್ರ ಹೇಳಲ್ಪಟ್ಟಿರುವುದರಿಂದ ಕವಿಯ ಕಾಲದೇಶಗಳನ್ನು ಗ್ರಂಥದಲ್ಲಿ ದೊರೆಯುವ ಸಾಧನಗಳನ್ನು ಮಾತ್ರವೇ ನೆಮ್ಮಿ ನಿರ್ಧರಿಸುವುದು ಕಷ್ಟವಾಗುತ್ತದೆ.

ಸಿಂಗಿರಾಜಪುರಾಣ ವಿಜಯ (ಸಿಂಗಿರಾಜಪುರಾಣದ ಗದ್ಯಾನುವಾದ) ವನ್ನು ಬರೆದಿರುವ ಕೈ.ವಾ. ಬಸವಲಿಂಗಶಾಸ್ತ್ರಿಗಳು ಸಿಂಗಿರಾಜನ ಬಗೆಗೆ ಒಂದು ಕಥೆ ಹೇಳಿರುತ್ತಾರೆ. ಅದಕ್ಕೆ ಆಕರವಾವುದೋ ಗೊತ್ತಾಗುವುದಿಲ್ಲ. ಅದರ ಸಾರಾಂಶ ಹೀಗಿದೆ : ಸಿಂಗಿರಾಜನು ಕಲಚೂರಿ ಬಿಜ್ಜಳನ ಕೈಕೆಳಗೆ ಮಾಂಡಲಿಕನಾಗಿದ್ದನು. ಬಿಜ್ಜಳನು ವೀರಶೈವ ಮತವನ್ನು ಪ್ರಕಾಶಕ್ಕೆ ತರುತ್ತಿದ್ದ ಬಸವಣ್ಣನಿಗೂ ಅವನ ಅನುಯಾಯಿಗಳಿಗೂ ಬೆಂಬಲ, ಪ್ರೋತ್ಸಾಹ ಇತ್ತುದು ಇವನಿಗೆ ಸರಿಹೋಗಲಿಲ್ಲ. ಆದುದರಿಂದ ಬಿಜ್ಜಳನಿಗೆ ಸಲ್ಲಿಸಬೇಕಾಗಿದ್ದ ಕಪ್ಪಕಾಣಿಕೆಗಳನ್ನು ಸಲ್ಲಿಸಲಿಲ್ಲ. ಬಿಜ್ಜಳನು ಸಿಂಗಿರಾಜನನ್ನು ಹಿಡಿತರಿಸಿ ನಾಲ್ಕು ರಾಜಮಾರ್ಗಗಳು ಕೂಡುವೆಡೆಯಲ್ಲಿ ಒಂದು ಉಕ್ಕಿನ ಪಂಜರವನ್ನು ಕಟ್ಟಿಸಿ ಆ ಪಂಜರದಲ್ಲಿ ಅವನನ್ನು ಕೂಡಿದನು. ಕಲ್ಯಾಣನಗರದಲ್ಲಿದ್ದ ಶಿವಭಕ್ತರು ತಮ್ಮ ದಿನಚರಿಯ ಕೆಲಸಗಳಿಗೆ ಹೋಗುವಾಗ ಬರುವಾಗ ಸಹ ಬಸವನಾಮಸ್ಮರಣೆ ಮಾಡುವರು. ಸಿಂಗಿರಾಜನಿಗೆ ಆ ಹೆಸರು ಕಿವಿಗೊರೆಯುವುದು. ಆ ಶಬ್ದ ಕಿವಿಗೆ ಬೀಳಬಾರದೆಂದು ಕಿವಿಗಳೆರಡನ್ನೂ ಮುಚ್ಚಿಕೊಂಡನು, ಕಿವುಡನಾದನು. ಆ ಶಿವಭಕ್ತರ ದರ್ಶನವೂ ಕೂಡದೆಂದು ಕಣ್ಣುಗಳನ್ನು ಮುಚ್ಚಿಕೊಂಡನು, ಕುರುಡನಾದನು. ಕೊನೆಗೆ ತನ್ನ ಪರಿಸ್ಥಿತಿಯ ಅರಿವಾಗಿ ಜ್ಞಾನೋದಯವಾಗುವುದು. ಬಸವಣ್ಣನ ಮಾಹಾತ್ಮ್ಯದ ತಿಳಿವಳಿಕೆ ಹುಟ್ಟುವುದು. ಬಸವೇಶ್ವರನನ್ನು ನಿಂದಿಸಿದುದಕ್ಕೆ ಪಶ್ಚಾತ್ತಾಪಪಟ್ಟು ಅವನ ನಾಮಸ್ಮರಣೆಯೇ ಅಮೃತವೆಂದು ತಾನೂ ಬಸವೇಶ್ವರನನ್ನು ಸ್ತುತಿಸಿ ಮರಳಿ ಕಣ್ಣು ಕಿವಿಗಳನ್ನು ಪಡೆದನು. ಅವನ ಕೈಗೆ ತೊಡಿಸಿದ್ದ ಸಂಕೋಲೆಗಳು ತಾವಾಗಿಯೇ ಕಳಚಬಿದ್ದುವು. ಪಂಜರದ ಬಾಗಿಲು ತಾನಾಗಿಯೇ ತೆರೆಯಿತು. ಸಿಂಗಿರಾಜನಿಗೆ ಬಸವೇಶ್ವರನಲ್ಲಿ ಅಗಾಧ ಭಕ್ತಿ ಹುಟ್ಟಿತು. ಮಹಿಮಾಶಾಲಿಯಾದ ಅವನನ್ನು ಸಂದರ್ಶಿಸಿ ಅವನ ದಿವ್ಯಚರಿತ್ರೆಯನ್ನು ಅವನ ಬಾಯಿಂದಲೇ ಕೇಳಿ ಕೃತಿರಚನೆ ಮಾಡಬೇಕೆಂಬ ಹಿರಿಯ ಬಯಕೆಯಿಂದ ಅವನೆಡೆಗೆ ಬರುವಷ್ಟರಲ್ಲಿಯೇ ಬಸವಣ್ಣನು ತನ್ನ ಮರ್ತ್ಯಲೋಕದ ಮಣಿಹವನ್ನು ಪೂರೈಸಿಕೊಂಡು ಕೂಡಲ ಸಂಗಮಕ್ಕೆ ದಯಮಾಡಿಸಿದ್ದನು. ಸಿಂಗಿರಾಜನು ಅತ್ಯಂತ ವ್ಯಸನಾಕ್ರಾಂತನಾಗಿ ಆಹಾರ ವ್ಯವಹಾರಾದಿಗಳನ್ನು ತೊರೆದು ಪ್ರಾಣತ್ಯಾಗ ಮಾಡಲು ನಿರ್ಧರಿಸಿದನು. ಬಸವೇಶ್ವರನು ಅವನ ಕನಸಿನಲ್ಲಿ ಬಂದು ನೀನು ಕಲ್ಯಾಣಪಟ್ಟಣದಲ್ಲಿರುವ ದೇಮಿದೇವಯ್ಯನವರಲ್ಲಿಗೆ ಹೋಗು, ನಿನ್ನ ಇಷ್ಟಾರ್ಥಗಳೆಲ್ಲವೂ ಪೂರೈಸುವುವು ಎಂದು

ತಿಳಿಸಿದನು. ಆದರಂತೆಯೇ ಸಿಂಗಿರಾಜನು ಕಲ್ಯಾಣದಲ್ಲಿದ್ದ ದೇಮಿದೇವಯ್ಯನವರಲ್ಲಿಗೆ ಹೋಗಿ ಅವರಿಂದ ಜ್ಞಾನೋಪದೇಶಪಡೆದು ವೀರಶೈವ ಸಿದ್ಧಾಂತವನ್ನು ಅಭ್ಯಸಿಸಿ ಮಹಾಪಂಡಿತನೂ ಷಟ್ಸ್ಥಲಬ್ರಹ್ಮಿಯೂ ಆಗಿ ಮೆರೆದನು. ದೇಮಿದೇವಯ್ಯನವರಿಗೆ ತಿಳಿದಿದ್ದ ಅರುವತ್ತು ನಾಲ್ಕು ಪವಾಡಗಳನ್ನು ಮಾತ್ರ ಅವುಲ ಬಸವಚರಿತ್ರೆಯಲ್ಲಿ ನಿರೂಪಿಸಿದನು. ಭಾವಪ್ರಕೃತಿಚೇಷ್ಟಾನಿಮಿತ್ತವಾಗಿ ಬಸವಣ್ಣನು ಮೆರೆದ ಪವಾಡಗಳನ್ನು ವರ್ಣಿಸಲಾಗಲಿಲ್ಲವಲ್ಲಾ ಎಂದು ಕೊರಗುತ್ತಿದ್ದನು. ಹೀಗೆ ಸಿಂಗಿರಾಜನು ಷಟ್ಸ್ಥಲಬ್ರಹ್ಮಿಯಾದುದರಿಂದಲೂ, ಬಸವಣ್ಣನ ಪರಮಭಕ್ತನಾಗಿದ್ದುದರಿಂದಲೂ ಪಾಲ್ಕುರಿಕೆ ಸೋಮನಾಥನು ಗಣಸಹಸ್ರನಾಮದ ದಶಗಣದಲ್ಲಿ ಇವನನ್ನೂ ಸೇರಿಸಿದ್ದಾನೆ.

ಕೈ. ವಾ. ಬಸವಲಿಂಗಶಾಸ್ತ್ರಿಗಳು ಈ ಹೇಳಿಕೆಗೆ ಆಧಾರ ಗ್ರಂಥವಾವುದೆಂಬುದನ್ನು ತಿಳಿಸಿರುವುದಿಲ್ಲ. ಆದರೆ ಈ ಕಥೆಯನ್ನೇ ಹೋಲುವ ಕಥೆ ಹರೀಶ್ವರನ ಪ್ರಭುದೇವರ ಪುರಾಣದಲ್ಲಿ[1] ಈ ರೀತಿ ಇದೆ ಬಸವೇಶ್ವರನನ್ನು ಸ್ತುತಿಗೈದುದರ ಫಲವಾಗಿ ಸಿಂಗಿರಾಜನು ಸೆರೆಮನೆ ಶೃಂಖಲೆಗಳಿಂದ ಮುಕ್ತನಾಗಿ ಬಸವಣ್ಣನನ್ನೇ ಸ್ತುತಿಸುತ್ತ ಬಿಜ್ಜಳನ ಆಸ್ಥಾನಕ್ಕೆ ಬರುತ್ತಾನೆ. ಬಂದವನೇ ಅವನಿಗೆ ನಮಸ್ಕರಿಸಿ, ತೆಗಳಿದುದಕ್ಕಾಗಿ ಮನ್ನಿಸಬೇಕೆಂದು ಬೇಡಿಕೊಳ್ಳುವನಲ್ಲದೆ ತಮ್ಮ ಮಹಾತ್ಮೆಯನ್ನು ಕುರಿತು ಹನ್ನೆರಡುಸಾವಿರ ಗೀತಗಳನ್ನು 'ಷಟ್ಪದ' ದಲ್ಲಿ ರಚಿಸಿರುವೆನೆಂದೂ ನಿವೇದಿಸುತ್ತಾನೆ. ಅಲ್ಲಿಯೇ ಭಕ್ತಿಭಾವಪರವಶನಾಗಿ ಬಸವಣ್ಣನ ಗುಣಮಹಿಮೆಗಳನ್ನು ಕುರಿತು ಕವಿತಾರಚನೆ ಮಾಡುವನು. ಅಲ್ಲಿದ್ದ ಕೊಂಡೆಯರು " ಬಸವಸಚಿವಗೆ ಇನಿತುದೇವತ್ವವುಳ್ಳಡಂ ನಿನ್ನಮಸ್ತಕ ಮಧ್ಯದಿಂ ಶೃಂಗವೊಂದಂ ಮೂಡಿಸಿದೊಡೆ ನೀ ಪೇಳ್ದುದಂ ತುಂಗವಾಕ್ಯಂ ಅಲ್ಲದೊಡೆ ಅನೃತಂ " ಎಂದು ನುಡಿಯಲು ಸಿಂಗಿರಾಜನ ತಲೆಯಲ್ಲಿ "ಘನ ತಂಗದಿರ ಛಾಯದಿಂ " ಪ್ರಕಾಶಿಸುವ ಕೋಡು ಮೂಡಿಯೇಬಿಟ್ಟಿತು. ಅಂದಿನಿಂದ ಸಿಂಗಿರಾಜನು ಶೃಂಗಿರಾಜನಾದನು.

ಶರಣಲೀಲಾಮೃತದಲ್ಲಿ—" ರಾಜ ಬಿಜ್ಜಳನು " ವಾಜಿಪುರದ ಪಾರುಪತ್ಯವನ್ನು 'ಶೃಂಗಿಗೆ' ಕೊಟ್ಟಿರಲಾಗಿ ಅವನು ತುಂಟತನದಿಂದ ಎಂಟುವರುಷಗಳ ಲೆಕ್ಕವನ್ನು ಒಪ್ಪಿಸಿರುವುದಿಲ್ಲ. ಬಿಜ್ಜಳನು ಅವನನ್ನು 'ಪಂಟಿಸಿ' ಹಿಡಿತಂದು ಸಂಕೋಲೆಗಳಿಂದ ಬಿಗಿಸಿರುತ್ತಾನೆ. 'ಬಸವ' ಎನ್ನಲು ಕೊಡಗಳು ಗಗನದಲ್ಲಿಯೇ ನಿಂತುವು ಎಂಬ ಸುದ್ದಿಯನ್ನು ಕೇಳಿದ ಸಿಂಗಯ್ಯನೂ ಬಸವರಾಜನನ್ನು ಸ್ಮರಿಸಿದನು. 'ನೃಪನಿಟ್ಟ ಸಂಕೋಲೆ' ಕಳಚಿ ಬಿದ್ದುವು. ಸಿಂಗಯ್ಯನು ಬಸವನಾಮದ ಮಹಿಮೆಯನ್ನು ಅರಿತವನಾಗಿ ಬಸವಸಹಸ್ರನಾಮವನ್ನು ಪಠಿಸುತ್ತಿರಲು ಚರರು ಬಂದು ಸುದ್ದಿಯನ್ನು ಬಿಜ್ಜಳನಿಗೆ ಅರುಹುವರು. ಬಿಜ್ಜಳ ಮಹಾರಾಜನು 'ಶೃಂಗಿಯನ್ನು' ಕರೆಸಿ ಬಸವ ಮಂತ್ರೀಶನಿಂದಲೇ ಆತನಿಗೆ

---

[1]. IX ಸಂ.

ಮತ್ತೆ ರಾಜತ್ವವನ್ನು ಕೊಡಿಸಿ ಸಿಂಹರಾಜನೆಂದು ಹೆಸರಿಟ್ಟು ಅವನ ರಾಜ್ಯಕ್ಕೆ ಕಳುಹಿಸುತ್ತಾನೆ.

ಮೇಲೆ ಕೊಟ್ಟಿರುವ ಹೇಳಿಕೆಗಳಲ್ಲಿ ಒಂದೊಂದಕ್ಕೂ ಎಷ್ಟೋ ವ್ಯತ್ಯಾಸವಿದೆಯಾದರೂ ಸಿಂಗಿರಾಜನು ಬಸವಣ್ಣ ಬಿಜ್ಜಳರ ಕಾಲದವನು ಎಂಬ ಸಂಗತಿಯನ್ನು ಮಾತ್ರ ಅವೆಲ್ಲವೂ ಸಮರ್ಥಿಸುತ್ತವೆ. ಈ ಹೇಳಿಕೆಗಳು ನಿಜವಾಗಿದ್ದ ಪಕ್ಷದಲ್ಲಿ ಸಿಂಗಿರಾಜನನ್ನು ಆ ಕಾಲದ ಮತ್ತು ಆಮೇಲೆ ಬಂದ ವೀರಶೈವ ಕವಿಗಳು ಅತ್ಯಂತ ಹೆಮ್ಮೆಯಿಂದ ಹೊಗಳುತ್ತಿದ್ದರು. ಅವನನ್ನು ಹೆಸರಿಸಿರುವವರಲ್ಲಿ ಮೊದಲನೆಯವನು 'ಮಹಾದೇವಿಯಕ್ಕನ ಪುರಾಣ' ವನ್ನು ರಚಿಸಿರುವ ಚೆನ್ನಬಸವಾಂಕ (ಸು. ೧೫೫೦). ಕಲ್ಯಾಣಪಟ್ಟಣದಲ್ಲಿ ಆ ಕಾಲಕ್ಕೆ ದೇವಿದೇವಯ್ಯನವರೆಂಬ ಜ್ಞಾನಿಗಳಿದ್ದರೆಂಬುದಕ್ಕೆ ಕೈ. ವಾ. ಬಸವಲಿಂಗಶಾಸ್ತ್ರಿಗಳ ಹೇಳಿಕೆಯ ಹೊರತು ಬೇರಾವ ಆಧಾರಗಳೂ ಇದುವರೆಗೆ ದೊರೆತಿಲ್ಲ.[1] ಸಿಂಗಿರಾಜನಾದರೂ "ಮಂತ್ರಸಿದ್ಧನು ಕವಿಕಮಲನಾಥ ಕವಿಯು ಮನ್ವಂತರದ ಗೌತುಮನು ಸಿಂಗಿರಾಜಾಂಕನು" ಎಂದು ಮಾತ್ರ ಸ್ವವಿಷಯವನ್ನು ಹೇಳಿಕೊಂಡಿದ್ದಾನೆ. ಆದುದರಿಂದ ಇವನು ಮಂತ್ರಿಯೂ ಆಗಿರಲಿಲ್ಲ, ಮನ್ನೆಯನೂ ಆಗಿರಲಿಲ್ಲವೆಂದೂ, ಬಸವೇಶ್ವರನ ಸಮಕಾಲೀನನಾಗಿರಲಾರನೆಂದೂ ಊಹಿಸಬೇಕಾಗುತ್ತದೆ. ಪ್ರಭುದೇವರ ಪುರಾಣ ಮತ್ತು ಶರಣಲೀಲಾಮೃತಗಳ ಕರ್ತೃಗಳು ಬಸವೇಶ್ವರನ ಕಾಲದವನಾದ ದಶಗಣದ ಸಿಂಗಿರಾಜನನ್ನೇ 'ಅಮಲ ಬಸವ ಚಾರಿತ್ರ'ದ ಕರ್ತೃವೆಂದು ಭ್ರಮಿಸಿ ಅರ್ವಾಚೀನನಾದ ಸಿಂಗಿರಾಜನ ಕೃತಿಯನ್ನು ದಶಗಣದ ಸಿಂಗಿರಾಜನಿಗೆ ಕಟ್ಟಿರಬೇಕೆಂದು ತೋರುತ್ತದೆ.

ಇವನು ಬಸವೇಶ್ವರನ ಸಮಸಾಮಯಿಕನಲ್ಲವೆಂಬುದಕ್ಕೆ ಇನ್ನೂ ಹಲವು ಕಾರಣಗಳನ್ನು ಕೊಡಬಹುದು. ಇವನ ಗ್ರಂಥದ ಬಹುಭಾಗ ವಾರ್ಧಕ ಷಟ್ಪದಿಯಲ್ಲಿದೆ[2]. ರಾಘವಾಂಕ ಕವಿಯೇ ವಾರ್ಧಕಷಟ್ಪದಿಯ ನಿರ್ಮಾಪಕನೆಂಬ ಪ್ರತೀತಿ ಇದೆ. ಸಿಂಗಿರಾಜನು ಬಸವಣ್ಣನ ಸಮಕಾಲೀನನೆಂಬುದು ನಿಜವಿದ್ದರೆ ಬಸವಣ್ಣನಿಗಿಂತ ನೂರಾರು ವರ್ಷದ ಈಚಿನವನಾದ ರಾಘವಾಂಕನಿಗೆ 'ಷಟ್ಪದೀನಿರ್ಮಾಪಕ' ಎಂಬ ಕೀರ್ತಿ ಸಲ್ಲುತ್ತಿರಲಿಲ್ಲ. ಈ ವಿಷಯವನ್ನು ವೀರಶೈವ ಕವಿಗಳು ಬಹು ಹೆಮ್ಮೆಯಿಂದ ಸವಿಸ್ತಾರವಾಗಿ ವರ್ಣಿಸದೆ ಬಿಡುತ್ತಿರಲಿಲ್ಲ. ಈ ಊಹೆಯನ್ನು ಬಲಪಡಿಸಲು ಇನ್ನೂ ಕೆಲವು ಆಧಾರಗಳನ್ನು ಕೊಡಬಹುದು.

---

[1] ಬೆಂಗಳೂರು ಜಿಲ್ಲೆಯ ಕಾನಕಾನಹಳ್ಳಿಯ ಒಂದು ಶಾಸನದಲ್ಲಿ ದೇವಿದೇವಯ್ಯ ಎಂಬ ಗುರುವೊಬ್ಬನಿಗೆ ತಮ್ಮುತ್ತಾಳ್ವಾರ್ ಎಂಬ ಹೊಯ್ಸಳ ಅಧಿಕಾರಿ ದತ್ತಿಬಿಟ್ಟಂತೆ ಹೇಳಿದೆ. ಈ ದೇವಿದೇವನೇ ಸಿಂಗಿರಾಜನ ಗುರು ಎಂದು ಹೇಗೆ ಹೇಳುವುದು? ಈ ಶಾಸನದ ಕಾಲ ಕ್ರಿ. ಶ. ೧೨೭೬.

[2] ಇಪ್ಪತ್ತೆಂಟನೆಯ ಸಂಧಿ ಪರಿವರ್ಧಿನೀ ಷಟ್ಪದಿಯಲ್ಲಿಯೂ ಮೂವತ್ತೆರಡನೆಯ ಸಂಧಿ ಶರ ಷಟ್ಪದಿಯಲ್ಲಿಯೂ ಇವೆ.

ಸಿಂಗಿರಾಜ ಪುರಾಣದಲ್ಲಿ ಬರುವ—

. . . .

ಶರಣಪದ ಪಂಕಜಭ್ರಮರ ಮಲೆವರ ಗಂಡ
ಶರಣಾಗತಮಳ ರಕ್ಷಾಮಣಿ ಮಹಾವೀರ
ಶರಣಗಣವಜ್ರಪಂಜರನು ತಾ ಛಲದಂಕಮಲ್ಲ ಮಡಿವಳದೇವನು॥
(೪೦–೭)

. . . . ಮಾಚಿಯಂತ
ರಂಗಮಂ ಸಂಹರಿಪ ಕದನಪ್ರಚಂಡ ಸಮರದ ಶರಧಿಯೆಂಬತಿಬಳ ।
ತುಂಗವಿಕ್ರಮನಹಿತರೆನಿಪ ರಾಯರ ಗಂಡ
ಹಿಂಗದರಿನಿಕುರುಂಬಗಳಿಗೆ ತೊಲಗದಕಂಭ
ಜಂಗುಳಿದರುಶನಗಳ ಲೆಕ್ಕಿಸದ ಮಡಿವಾಳ ವೀರಭದ್ರಾವತಾರ ॥
(೬೦–೮)

"ಸಂಗೀತ ಚೂಡಾಮಣ್ಯಾಗಳಾ ಬಲ್ಲಹಂ" (೭–೫೨)

. . . .

ಆಳುತನದಲಿ ವ್ಯಾಘ್ರನೆಂಬ ಬಿರುದಿನ ಸೋಮ ಛಲದಂಕ ಮಲ್ಲ ಬಿದ್ದ ।
ಗಾಳಿಗತಿವೇಗ ಕಾಲೊಳಗೆ ಶಿರಮನು ಬಿದ್ದ
ಸಾಳುವನ ಬಿರುದುಳ್ಳ ರಣಭೈರವನುಬಿದ್ದ
ಹೇಳುವರೆ ಮೀಸೆಮುಱಿಗಂಡು ತೊಲಗದಕಂಭ ವಿರುಪ ಭೀಮರು
ಬಿದ್ದರು ॥(೨೩–೧೭)

ಈ ಪದ್ಯಭಾಗಗಳಲ್ಲಿ ಕೊನೆಯ ಪದ್ಯಭಾಗವೊಂದನ್ನು ಬಿಟ್ಟು ಉಳಿದುವುಗಳಲ್ಲಿ ಹೇಳಿರುವ ವಿಶೇಷಣಗಳಲ್ಲಿ ಕೆಲವು ಹೊಯ್ಸಳರಾಜರ ಬಿರುದುಗಳು. "ತೊಲಗದ ಕಂಬ" "ಸಂಗೀತಸಾರ" ಈ ಬಿರುದುಗಳು ಕ್ರಿ. ಶ. ೧೨೨೨ರಲ್ಲಿದ್ದ ಪೋಲಾಳ್ವದಂಡನಾಥನವು. ಆದುದರಿಂದ ಸಿಂಗಿರಾಜನು ಹೊಯ್ಸಳ ಶಾಸನಗಳನ್ನು ನೋಡಿರಬೇಕು, ಇಲ್ಲವೆ ಬಾಯಿಂದ ಬಾಯಿಗೆ ಬಂದ ಆ ಬಿರುದಾವಳಿಯನ್ನು ಕೇಳಿರಬೇಕು. "ಸಾಳುವನ ಬಿರುದುಳ್ಳ ರಣಭೈರವ" "ಮೀಸೆಮುಱಿಗಂಡು" ಈ ಮಾತುಗಳನ್ನು ಸಿಂಗಿರಾಜನು ಬಳಸುವಲ್ಲಿ "ಮೇದಿನೀ ಮೀಸರ ಗಂಡ" "ಕಠಾರಿ ಸಾಳುವ" ಮುಂತಾಗಿ ಬಿರುದಾಂಕಿತನಾಗಿರುವ ವಿಜಯನಗರದ ನರಸಿಂಹರಾಯನ (೧೪೮೫–೯೨) ನೆನಪು ಬರುವುದು ಸ್ವಾಭಾವಿಕ.[1]

[1] ಸಾಳುವರ ಈ ಆಳಿಕೆಯಲ್ಲಿ ಸಿಂಗಿರಾಜನು 'ಅಮಲಬಸವರಾಜ ಚಾರಿತ್ರ' ವನ್ನು ಬರೆದಂತೆ ದೇ. ಪಾಂಡುರಂಗರಾಯರ 'ವಿಜಯನಗರ ಸಾಮ್ರಾಜ್ಯ' ದಲ್ಲಿ (ಪು. ೯೪) ಹೇಳಿದೆ.

ಸಿಂಗಿರಾಜನು ಹೊಯ್ಸಳ ರಾಜ್ಯ ಮುಗಿದಮೇಲೆ ಬಾಳಿರಲಿ, ಸಾಳುವ ನರಸಿಂಹನ ಕಾಲದವನಾಗಿರಲಿ, ಬಸವಣ್ಣನ ಸಮಕಾಲೀನನಲ್ಲವೆಂದು ಹೇಳುವುದಕ್ಕೇನೂ ಅಡ್ಡಿಯಿಲ್ಲ.

ಹದಿಮೂರನೆಯ ಶತಮಾನದ ಆದಿಭಾಗದಲ್ಲಿ[1] ಇದ್ದಿರಬಹುದಾದ ಹರಿಹರ ರಾಘವಾಂಕರ ಕೃತಿಗಳ ಛಾಯೆ ಇವನಲ್ಲಿ ಅನೇಕ ಕಡೆ ಕಂಡುಬರುತ್ತದೆ. ಲಿಂಗದರ್ಶನವಿಲ್ಲದೆ ಅನ್ನ, ನೀರು ಮುಟ್ಟದ ವ್ರತವನ್ನು ಕೈಕೊಂಡಿದ್ದ ವಸುದೀಪ್ಯ ರಾಜನಿಗೆ ವೃಷಭನು “ಕರುಣವಳವಟ್ಟು ಸಂಜೀವನಮೃತಾಂಗದಾತ್ಮಜ್ಯೋತಿ ನಿಷ್ಠೆಯನಿಧಾನಜಿಹ್ವಾಗ್ರದೊಳು ಲಿಂಗಮಂ ನಿಲಿಸಿ ನೀಡಿದನು” ಎಂದು ಅಮಲಬಸವ ಚರಿತ್ರೆಯಲ್ಲಿ ಹೇಳಿದ್ದರೆ ಹರಿಹರನು, ‘ಬಸವರಾಜದೇವರ ರಗಳೆ’ಯಲ್ಲಿ, “ಶಿವಲಿಂಗಂ ಮೂರ್ತಿಗೊಂಡು ನಂದಿಯ ಹೃದಯಕಮಳವನೊತ್ತರಿಸಿ ಪೊಱಮಟ್ಟು......ವೃಷಭನ ಮುಖಂ ವಿಕಾಸಮನೆಯ್ದೆ ಜಿಹ್ವೆಸಿಂಹಾಸನಂಗೊಂಡು ನಂದಿಯ ಮುಖದಿಂದೊಗೆತಪ್ಪ ದಿವ್ಯಲಿಂಗಮಂ ಸಂಗನಬಸವಂ . . . . ನೋಡಿ ನೋಡಿ ಮನದೊಳೋವಿ ಲಿಂಗಕ್ಕೆ ಕರಕಮಳಮನಾಂತು ನಂದಿಯ ನಾಲಗೆಯ ತುದಿಗಂ ತನ್ನಕರಪಲ್ಲವಕಂ ಸಂದಿಲ್ಲದಂತೆ ಕಯ್ಯೊಡ್ಡಿರೆ ವೃಷಭರಾಜಂ ಪತಿಯನುಜ್ಞೆಯೊಡನೆ ಬಸವಣ್ಣನ ಹಸ್ತದೊಳು ಸಂಗಮೇಶ್ವರ ಲಿಂಗಮಂ ಛೋಂಕನೆ ಬಿಜಯಂಗೆಯ್ಸಿ” ದನೆಂದು ಹೇಳಿದೆ. ಆದುದರಿಂದ ಇಲ್ಲಿ ಸಿಂಗಿರಾಜನು ಹರಿಹರನನ್ನು ಅನುಸರಿಸಿರಬೇಕೆಂದು ಊಹಿಸಿದರೆ ತಪ್ಪಾಗಲಾರದು. ಸಿಂಗಿರಾಜನ,

ನಾಕಲೋಕವು ಪರಿಧಿ ವಾರಿದ ಪರೂಥ ಗಜ
ನೀಕವೈರಾವತಾದ್ಯಶ್ವವುಚ್ಚೈಶ್ರವಾ
ನೇಕ ಸುರಪರಿವಾರ ಪುರವದಮರಾವತಿಯು ರಾಣಿ ಶಚಿ ನಿಜತನಯನು।
ಪಾಕಶಾಸನಿ ಕಲ್ಪತರು ಕಾಮಧೇನುವೆ ಪ
ಯಾಕರಂ ಸಿದ್ಧರಸ ಪರುಷ ಚಿಂತಾಮಣಿಯ
ನೇಕಪದ ನಿನಗುಂಟದೆಂದು ಮುಂದಱಿಯೆ ಕೇಳ್ಕೇಡಹುದು ನಿಂದೆ
ಯಿಂದ (೨-೩೪)

ಈ ಪದ್ಯವನ್ನು ರಾಘವಾಂಕನ ಹರಿಶ್ಚಂದ್ರಕಾವ್ಯದ,

ಪರುಷವಂಗಣದ ಕಲು ಸುರಭಿ ಕಱುಹಂ ಕಲ್ಪ
ತರು ವನಂ ಸ್ವರ್ಗ ನಿಜದೇಶವಮರಾವತಿಯೆ
ಪುರದುರ್ಗವಸುರರಾಳ್ ಮೇರು ಕೇಳೀಶೈಲವಮೃತವೇ ಮನೆಯ
ಬೀಯಂ।

[1] ಹಂಪೆಯ ಹರಿಹರ — ಶ್ರೀ ಡಿ. ಎಲ್. ಎನ್.

ವರರಂಭೆಸೂಳೆ ಶಚಿರಾಣಿಯ್ಯೆರಾವತಂ
ಕರಿವಜ್ರವಾಯುಧಂ ನವನಿಧಿಯೆ ಭಂಡಾರ
ಹೊರೆವಾಳ್ದನಭವ . . . . .

ಈ ಪದ್ಯದೊಂದಿಗೆ ಹೋಲಿಸಿದರೆ ಸಿಂಗಿರಾಜನು ರಾಘವಾಂಕನ ಪ್ರಭಾವಕ್ಕೆ ಸಿಕ್ಕಿಬಿದ್ದಿಲ್ಲವೆಂದು ಹೇಳುವುದು ಕಷ್ಟವಾಗುತ್ತದೆ. 'ಅಮಲಬಸವ ಚಾರಿತ್ರ' ದಲ್ಲಿ ಸೂಚಿತವಾಗಿರುವ ಬಿಲ್ಲೇಶಬೊಮ್ಮಯ್ಯನ ಕಥೆಗೆ ರಾಘವಾಂಕನ 'ಸಿದ್ಧರಾಮಚಾರಿತ್ರ' ಮೂಲವಾಗಿರಬೇಕು. ಸಿದ್ಧರಾಮನು ಬರಸಿಡಿಲನ್ನು ಅಡಗಿಸಿದ ಪವಾಡವೇ ಬಸವಣ್ಣನಲ್ಲಿ ಆರೋಪಿಸಲ್ಪಟ್ಟು ಬಿಜ್ಜಳಮಹಾರಾಜನಿಗೆ ಎರಗುತ್ತಿದ್ದ ಬರಸಿಡಿಲನ್ನು ಬಸವಣ್ಣನು ಕಯ್ಯಲ್ಲಿ ಹಿಡಿದು ದೊರೆ ಬಿಜ್ಜಳನನ್ನು ಕಾಪಾಡಿದ ಪವಾಡ (ಸಂ. ೪೪) ಹುಟ್ಟಿರಬಹುದು. ಆದುದರಿಂದ ಸಿಂಗಿರಾಜನು ಹರಿಹರ ರಾಘವಾಂಕರಿಗಿಂತ ಈಚಿನವನು ಎಂದು ಸಿದ್ಧವಾಗುತ್ತದೆ.

ಕವಿಯು 'ನೂತನ ಕಥಾಕಲ್ಪದೊಳಗೊಂದು ಚಿತ್ರತರಜ್ಯೋತಿಯ ಚಮತ್ಕೃತಿಯ ಲಹರಿ' (೩೯–೨) ಎಂದು ತನ್ನ ಕೃತಿಯ ವೈಶಿಷ್ಟ್ಯವನ್ನು ಹೊಗಳಿಕೊಂಡಿದ್ದಾನೆ. 'ಬಲದೇವ ಮದುವೆಯಂ ಮಾಡಿ ಕೆಲವಾನ್ದಿನಕ್ಕಳಿದಡಾಪದವ ಬಸವಂಗಿತ್ತರೆಂಬ ಕೃತಿ ವಳಕೆಯುಂಟಂತಲ್ಲವಿದು ಚನ್ನಬಸವೇಶನಮಲವಚನೋಚಿತೋಕ್ತಿ' (೬–೪೮) ಎಂದು ಹೇಳಿ ಬಲದೇವ ಸಿದ್ಧರಸರು ಬಸವೇಶ್ವರನ ವಿವಾಹಾನಂತರ ಬಹುಕಾಲ ಬದುಕಿದ್ದರು ಎನ್ನುತ್ತಾನೆ. ಗೊಲ್ಲತಿಯೊಬ್ಬಳು 'ಎಡಹಿ ಬೀಳುತ ಬಸವಯೆನೆ ಕೇಳಿ ಕೈಯನಾಂತು ನಿಲಿಸಿದನು ಗಗನದಲ್ಲೆಂದೀ ಪವಾಡಮಂ ಕೆಲರು ಪೇಳುವರದನುಚಿತ,' ನಂದಿಕೇಶನು ಗಣಕುಲಕ್ಕೆ ಹೇಳಿದ ಶಾಸ್ತ್ರಮಾರ್ಗ ವರ್ಣನೆಯನ್ನು ಕೇಳಿ ಎಂದು ಭೀಮಕವಿಯ ಬಸವಪುರಾಣದಲ್ಲಿ ವರ್ಣಿತವಾಗಿರುವ ಆ ಪವಾಡದ ಕಥೆಯನ್ನೇ ಇನ್ನಷ್ಟು ಬೆಳೆಸುತ್ತಾನೆ. ಬಹುಶಃ ಬಸವ ಪುರಾಣವನ್ನು ಇವನು ನೋಡಿದ್ದಾನೆ, ಇಲ್ಲವೆ ಬಸವಪುರಾಣದ ಕಥೆಯನ್ನು ಕೇಳಿದ್ದಾನೆ. ಕ್ರಿ. ಶ. ೧೪೯೦ರಲ್ಲಿದ್ದ ಭೀಮಕವಿಗಿಂತ ಇವನು ಈಚಿನವನು ಎಂಬ ಊಹೆಗೆ ಮೇಲ್ಕಂಡ ಅಂಶಗಳು ಆಧಾರವಾಗಬಲ್ಲುವು.

ಸಿಂಗಿರಾಜನು "ಕ್ರಿಭಾವ ಪ್ರತಿಷ್ಠಿತಾಚಾರ್ಯ". ಇವನ ಗ್ರಂಥದಲ್ಲಿ ಬಸವರಾಜನು ಭಾವರೂಪ[1], ಬಿಜ್ಜಳನು ಕ್ರೀರೂಪ[1]. ಈ ವಿಷಯವನ್ನು ಕವಿಯು ಅವಶ್ಯಕವಾದೆಡೆಗಳಲ್ಲೆಲ್ಲಾ ಓದುಗರ ಗಮನಕ್ಕೆ ತರುವುದನ್ನು ಮರೆಯುವುದಿಲ್ಲ. ಒಂದೊಂದು ತತ್ವವನ್ನು ಒಬ್ಬೊಬ್ಬರು ಪ್ರತಿನಿಧಿಸಿದಂತೆ ಭಾವಿಸಿಕೊಂಡು ಕಾವ್ಯರಚನೆ ಮಾಡುವುದು ಆಯಾ ವ್ಯಕ್ತಿಗಳ ಸ್ವಾಭಾವಿಕವಾದ ಚರಿತ್ರೆಯನ್ನೊಳಗೊಂಡ ಪುರಾಣಗಳು ಹುಟ್ಟಿದ ಎಷ್ಟೋ ಶತಮಾನಗಳ ಮೇಲೆ. ಸಿಂಗಿರಾಜನ ಈ

---

[1] ಇಹ, ಪರ, ಲೌಕಿಕ, ಪಾರಮಾರ್ಥಿಕ ಎಂಬ ಅರ್ಥಗಳಲ್ಲಿ ಈ ಮಾತುಗಳು ಬಳಸಲ್ಪಟ್ಟಿವೆ.

'ನೂತನ ಕಥಾವಲ್ಲರಿ' ಬಸವಪುರಾಣಕ್ಕಿಂತ ಈಚಿನದೆಂದು ಹೇಳಲು ಇದೂ ಒಂದು ಆಧಾರವಾಗುತ್ತದೆ.

ಇವನು ಭೀಮಕವಿಗಿಂತ ಎಷ್ಟುಕಾಲ ಈಚಿನವನು ಎಂಬುದನ್ನು ನಿರ್ಧರಿಸುವಲ್ಲಿ ಲಕ್ಕಣ್ಣದಂಡೇಶ (ಕ್ರಿ. ಶ. ೧೪೫೦) ನ ಶಿವತತ್ವ ಚಿಂತಾಮಣಿಯಲ್ಲಿ ಹೇಳಿರುವ ಬಸವಚರಿತ್ರೆ ನಮಗೆ ಬಹುಮಟ್ಟಿಗ ನೆರವಾಗುತ್ತದೆ. ಲಕ್ಕಣ್ಣ ದಂಡೇಶನು ಬಸವಣ್ಣನ ಒಂದೊಂದು ಪವಾಡವನ್ನೂ ಒಂದೋ, ಎರಡೋ ಪದ್ಯಗಳಲ್ಲಿ ಹೇಳಿ ಮುಗಿಸಿದ್ದರೆ ಸಿಂಗಿರಾಜನು ಅದನ್ನೇ ವಿಸ್ತರಿಸಿ ಹೇಳುತ್ತಾನೆ. ಇವನೂ ಲಕ್ಕಣ್ಣದಂಡೇಶನಂತೆಯೇ ಜಗದೇವೋಪಾಖ್ಯಾನವನ್ನೂ ಹರಳಯ್ಯ ಮಧುವಯ್ಯಗಳ ಕೊಲೆಯ ವಿಷಯವನ್ನೂ ಹೇಳಿರುವುದಿಲ್ಲ. ಶಿವತತ್ವ ಚಿಂತಾಮಣಿಯಲ್ಲಿ ಉಲ್ಲೇಖವಾಗಿರುವ ಅನೇಕ ಸಂಸ್ಕೃತ ಶ್ಲೋಕಗಳು 'ಅಮಲ ಬಸವಚಾರಿತ್ರ' ದಲ್ಲಿ ಅದೇ ಆನುಪೂರ್ವಿಯಲ್ಲಿ ದೊರೆಯುತ್ತವೆ. ಇಷ್ಟೇ ಅಲ್ಲ, 'ಶಿವತತ್ವ ಚಿಂತಾಮಣಿ' ಯ ಪ್ರಕಾರ ಬಸವೇಶ್ವರನು ಸಂಗಮೇಶ್ವರನ ಸನ್ನಿಧಿಗೆ ಬಂದು ಕೆಲವುದಿನಗಳಾದ ಮೇಲೆ ಅವನ ಮಹಿಮಾತಿಶಯಗಳು ಬಲದೇವನಿಗೆ ಗೊತ್ತಾಗುವುವು. ಆಗ,

. . . .

ಮುದದೊಳಾತಂ ತನ್ನ ಮಗಳನಾತಗೆ ಕೊಡುವೆ ಪೂರ್ವಸಂಬಂಧ
ವುಂಟು।
ವಿದಿತದಿಂದಾತ ಮಾತಾಮಹರ ದೆಸೆಯಿಂದ
ಲೊಡವಿ ತನಗೆ . . . .
. . . . ॥ (೩೦–೫೮)

ಎಂದು ತನ್ನ ಮತ್ತು ಬಸವಣ್ಣನ ಮನೆತನಗಳ ಹಳೆಯ ಸೇರುವೆಯನ್ನು ಕುರಿತು ಹೇಳಿಕೊಂಡಿರುವನು. ಇದೇ ಸಂಗತಿಯನ್ನು ಸಿಂಗಿರಾಜನು,

ಒಲಿದನೇ ಶಿವ ಶಿವ ನಮಃ ಶಿವಾ ಎನುತ ಮಗುಳ್ದಾದರಿಸು
ತೊಳಹೊಱಗನು ।
ತಿಳಿದವರ ತಾಯ್ನುಮಗೆ ಮಾತಾಮಹರ ದೆಸೆಯ
ವಳಿಯಿಂದ ತಂಗಿಯಹಳಾ ಮಹಾತ್ಮಕನ ಶಿಶ್ರು
ಗೆಲಸಕೆನ್ನಾತ್ಮಜೆಯ ಕೊಡುವೇಂ ಕೃತಾರ್ಥೆಯಹಳೆನುತಲಾ
ಮಗಳ ಕರೆಸಿ॥ (೬–೨೫)

ಬಲದೇವನು ವಿವಾಹ ಮಹೋತ್ಸವವನ್ನು ನೆರವೇರಿಸಿದಂತೆ ವರ್ಣಿಸಿದ್ದಾನೆ.

ಬಲದೇವ ದಂಡೇಶನೆಂದ ನಾಗಾಂಬಿಕೆಗೆ
ಕುಲತಿಲಕನಪ್ಪ ಬಸವೇಶಸಹಿತಂ ನೀವು
ಕೆಲವು ದಿನವಿದ್ದು ಸಮ್ಮಿಚ್ಛೆಯಂ ಸಲಿಸುವುದು ನೀವೆನಲು ಪ್ರೀತಿಯಿಂದ।

ಒಲವುಮಿಗಲಂದೆಥಾ ಸಂಭವದಿ ಜಂಗಮಕ
ಸುಲಭಮತಿ ದಾಸೋಹ ಮಾಡುತಂದರಮನೆಯ
ವಿಳಸವಪ್ಪಾಕರಣ ಶಾಲೆಗೆಡೆಯಾಡುವನ ಚರಣಾಂಬುಜಕೆ ಶರಣು
(೨೧-೨೦)

ಬಳಿಕಸೊಡ್ಡಳ ಬಾಚರಸರು ಬಸವಣ್ಣನಂ
ಬಳಿಸರಿಸಿ ಬರೆವುದಮ್ಮಯ ಹೊರೆಯೊಳಂದೆನಲು
ಬಲವಿದಂ ಬರೆಯುತಿರ್ದಂ ಕರಣಶಾಲೆಯೊಳು . . . . .
. . . ॥ (೨೧-೨೧)

ಶಿವತತ್ವಚಿಂತಾಮಣಿಯ ಈ ಭಾಗವನ್ನು ಇದೇ ಸನ್ನಿವೇಶವನ್ನು ಕುರಿತಿರುವ "ಅಮಲಬಸವಚಾರಿತ್ರ" ದ,

ಬಳುವಳಿಯ ವಸ್ತುವಾಹನವನೊಪ್ಪಿಸಿ ಮಗಳ
ನಳಿಯನಗ್ರಜೆಗಱಿಗಿ ಸುಭಯೋಪಚಾರದಿಂ
ಬಳಿಕವರ ನಲ್ಲೊಂದೆರಡುಕಾಲವಿಪ್ಪಂತೆ ಬೇಡಿಕೊಂಡಿರಿಸಿದರಿರೆ॥
(೬-೪೮)

. . . . . . ಸೋಹದಾಸೋ
ಹಾದಿ ಒಡಗೂಡಿದಂತಿವರು ಚರಲಿಂಗ ಸಿರಿ
ಪಾದ ಸೇವಕರಾಗಿರಲು ಕಂಡು ಶಿವಜ್ಞಾನ
ವೇದ್ಯ ಸೊಡ್ಡಳಬಾಚಿದೇವ ಮನವೆರಸಿರುತಲನುಭವದೊಳೊಂದು
ದಿವಸ॥ (೬-೫೦)

ಶ್ರೀಕರಣವಮ್ಮದಾ ಕರಣಶಾಲೆಯ ಹೊಕ್ಕು
ನೀ ಕಲುವೆಯುಂ ಬರೆವುತಿರಲಿರಲು ಬಲಿದತಿವಿ
ವೇಕವಹುದದಱ ದೆಸೆಯಿಂದರಸು ಮನ್ನಿಸುವ . . . ॥ (೬-೫೨)

ಈ ಭಾಗದೊಡನೆ ಹೋಲಿಸಿದರೆ ಸಿಂಗಿರಾಜನು ಬಸವಣ್ಣನು ಸೊಡ್ಡಳ ಬಾಚರಸನ ಬಳಿಯಲ್ಲಿ ಕರಣಿಕನಾಗಿದ್ದನೆಂಬುದನ್ನು ಶಿವತತ್ವ ಚಿಂತಾಮಣಿಯಿಂದ ಸಂಗ್ರಹಿಸಿರಬೇಕೆಂದು ತೋರುತ್ತದೆ.

ಶಿವತತ್ವಚಿಂತಾಮಣಿ, ಅಮಲಬಸವ ಚಾರಿತ್ರ ಈ ಎರಡು ಗ್ರಂಥಗಳಲ್ಲಿಯೂ ಬಸವೇಶ್ವರನು ನೀಲಾಂಬಿಕೆಯನ್ನು ವರಿಸಿದ ಸಂಗತಿ ಉಕ್ತವಾಗಿದೆ. ಲಕ್ಕಣ್ಣದಂಡೇಶನು ಈ ಸಂದರ್ಭದಲ್ಲಿ,

ಆ ನೃಪಂ ಮಂತ್ರಿಗಂ ತಮ್ಮೊಳಗೆ ಹೊರೆಹುಟ್ಟದಂತೆ ಮಾಳ್ಪ
ನೆಱದಿ ತನ್ನನುಜ ಕನ್ನುವಿನಿಂದ ಕಿಱಿಯಳಾ
ತರುಣಿ ನೀಲಾಂಬಿಕೆಯ ನೊಲಿದಿತ್ತು ಬಸವಗಂ
ಹಿರಿದು ವಿಭವದಿ ಮದುವೆಯುಂ ಮಾಡಿ . . . ॥ (೨೧-೬೭)

ಎಂದು ಮಾತ್ರ ಹೇಳಿದ್ದಾನೆ. "ಭವಿ" ಬಿಜ್ಜಳನ ತಂಗಿಯನ್ನು ವೀರಶೈವ ಮತದ ಜೀವಜೀವಾಳವೇ ಆಗಿದ್ದ ಬಸವೇಶ್ವರನು ಮದುವೆಯಾದನೆಂದು ಹೇಳಿರು ವುದು ಸಿಂಗಿರಾಜನ ಮನಸ್ಸಿಗೆ ಒಪ್ಪಿಗೆಯಾಗಿಲ್ಲ. ಆದರೂ ನೀಲಾಂಬಿಕೆಯು ಬಿಜ್ಜಳನ ತಂಗಿಯಲ್ಲವೆಂದು ಅವನು ಸಾರಲೂ ಪ್ರಯತ್ನಪಟ್ಟಿಲ್ಲ. ಆ ಭ್ರಾತೃ ಭಗಿನಿ ಸಂಬಂಧ ಹೇಗೆ ಉಂಟಾಯಿತೆಂಬುದನ್ನು ಈ ಕೆಳಗಿನ ಪದ್ಯಗಳಲ್ಲಿ ವಿವರಿಸಿದ್ದಾನೆ. ಬಸವೇಶ್ವರನು ಲಿಪಿಯ ಪವಾಡವನ್ನು ಮೆರೆದ ತರುವಾಯ ಮಂತ್ರಿಪಟ್ಟವನ್ನು ಸ್ವೀಕರಿಸಿದನಷ್ಟೆ. ಕೆಲವು ದಿನಗಳಾದಮೇಲೆ,

ಆ ಗಣಸಮೇಳದೊಳು ಸುಖಮಿರುತ ರಾಜವಿಸಿ
ಯೋಗದೊಳು ಮೈದೋಱಿರಲ್ಕೆ ವಿಶ್ವಾಸ ಸ್ವಯ
ವಾಗಿ ಮನ ಬೇಱಿಲ್ಲದಿರಬೇಕೆನುತ್ತರಸು ನೆನೆದನೊಂದನುಬಂಧವ!
ಆಗ ತಾತನ ಪಿಂತೆ ಸಂಗೀತ ಚೂಡಾವ
ಣ್ಯಾಗಳಾ ಬಲ್ಲಹನೊಳೆಮ್ಮ ತಾಯ್ಸಹಗಮನ
ವಾಗಲಾ ದಿನಕೆಮ್ಮ ತಮ್ಮ ಕರ್ಣಹದೇವ ಬಾಲನಾಗಿರಲಾತನ ॥
(೭–೫೨)

ಲೀಲೆಯಿಂ ಪೊಲೆಯೂಡಿ ಸಲಹಿದಳು ಮಂತ್ರಿಕುಲ
ಪಾಲ ಸಿದ್ಧರಸದಣ್ಣಾಯಕರರಸಿ ಪುಣ್ಯ
ಶೀಲದೇವತೆ ಪದ್ಮಗಂಧಿಯಾಕೆಯ ಉದರದಲಿ ಬಳಿಕ ಜನಿಸಿದಾಕೆ ।
ನೀಲಲೋಚನೆ ಯೆಮಗೆ ತಂಗಿಯಹಳಾಕೆಯನು
ನೀಲಲೋಚನ ಬಸವಗೀವೆನೆನುತುತ್ಸಾಹ
ದಾಲಾಪದಲಿ ಪಟ್ಟವಧುವೆಂದು ಮದುವೆಯಂ ಮಾಡಿದಂ ನೃಪ ಬಸವಗೆ॥ ೭–೫೩

ಬಿಜ್ಜಳನು ಸಿದ್ಧರಸಮಂತ್ರಿಗೆ ಹೇಳಿದ ಮಾತನ್ನೂ ಇಲ್ಲಿಯೇ ಕೊಡ ಬಹುದು.—

. . . . ಎಮ್ಮ
ತಂದೆ ತೀರಲ್ತಾಯಿ ಸಹಗಮನಮಾಡೆ ಬಾಲ್ಯದೊಳು ನಿಮ್ಮರಸಿ ಪದ್ಮ ।
ಗಂಧಿ ಮೊಲೆಯೂಡೆಮ್ಮ ಬೆಳಸಿ ಪಟ್ಟಂಗಟ್ಟಿ
ಮುಂದಿಟ್ಟುಕೊಂಡಿರ್ದ ತಂದೆ ನೀವ್ . . . (॥೩೯–೪೦)

ಈ ಪದ್ಯಗಳಿಂದ ಸಿದ್ಧರಸಮಂತ್ರಿಯ ಮನೆತನಕ್ಕೂ ಕಲಚೂರಿ ಮನೆ ತನಕ್ಕೂ ಎಷ್ಟರಮಟ್ಟಿಗೆ ಮಧುರ ಬಾಂಧವ್ಯವಿತ್ತೆಂಬುದು ಗೊತ್ತಾಗುತ್ತದೆ. ಸಿಂಗಿರಾಜನು, ಲಕ್ಕಣ್ಣದಂಡೇಶನು ಹೇಳಿರುವ ಸಂಗತಿಗಳನ್ನೇ ವಿವರಿಸಿ, ನೀಲ ಲೋಚನೆಯೂ ಬಿಜ್ಜಳನೂ ಒಡಹುಟ್ಟಿದವರಲ್ಲವೆಂದೂ ತಿಳಿಸಿದ್ದಾನೆ. ಇವನ ದೃಷ್ಟಿಗೆ ಸರಿಹೊಂದದ ಸಂಗತಿಗಳನ್ನು ತಿದ್ದಿ ತನ್ನ ಮೂಗಿಗೆ ನೇರವಾಗಿ

ವಿವರಣೆ ಕೊಟ್ಟಿದ್ದಾನೆ. ಇವನು ಲಕ್ಕಣ್ಣದಂಡೇಶನಿಗಿಂತ (ಕ್ರಿ. ಶ. ೧೪೫೦) ಈಚೆಯವನಿರಬೇಕೆಂದೇ ಹೇಳಬೇಕಾಗುವುದು.

ಲಕ್ಕಣ್ಣದಂಡೇಶನೇ 'ಅಮಲಬಸವ ಚಾರಿತ್ರ'ದಿಂದ ವಿಷಯಸಂಗ್ರಹ ಮಾಡಿರಬಾರದೇಕೆ ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಇದು ನಿಜವಿದ್ದಲ್ಲಿ ಸಿಂಗಿರಾಜನು ಸುಮಾರು ಕ್ರಿ.ಶ. ೧೪೦೦ರಲ್ಲಿ ಜೀವಿಸಿರಬೇಕೆಂದು ಊಹಿಸಬೇಕಾಗುತ್ತದೆ. ಆದರೆ ಈ ಕವಿಯು ರೇಫ ಶಕಟರೇಫಗಳಿಗೆ ಭೇದವನ್ನೇ ಎಣಿಸಿರುವಂತೆ ತೋರುವುದಿಲ್ಲ. ಅನೇಕ ಪದ್ಯಗಳಲ್ಲಿ ಅವೆರಡೂ ಪ್ರಾಸಸ್ಥಾನಗಳಲ್ಲಿ ಬೆರೆತುಕೊಂಡಿವೆ. ಹದಿನೈದನೆಯ ಶತಮಾನದ ಆದಿಭಾಗದ ಸಾಹಿತ್ಯದಲ್ಲಿ ಇಂತಹ ಉದಾಹರಣೆಗಳು ವಿರಳ. ಆದುದರಿಂದ ಸಿಂಗಿರಾಜನು ಲಕ್ಕಣ್ಣದಂಡೇಶನಿಗಿಂತ ಈಚೆಯವನೆಂದೇ ಹೇಳಬೇಕಾಗುತ್ತವೆ. ಈ ಊಹೆಯನ್ನು ಬಲಪಡಿಸುವುದಕ್ಕೆ ಇನ್ನೊಂದು ಕಾರಣವನ್ನೂ ಕೊಡಬಹುದು. ಈ ಕವಿ "ಇದಕ್ಕೆ ಪ್ರಭುಸಂಪಾದನೆಯಲ್ಲಿ ದೃಷ್ಟಪ್ರತ್ಯಯ ವಾಕ್ಯಮುಖದಿಂದಾದ ಕಥಾಗರ್ಭ ಸೂಚಕ ವಚನಗಳ"ನ್ನೂ ಅವಕ್ಕೆ "ಪ್ರತಿವಚನ" "ಪುನರಪಿ ವಚನ"ಗಳನ್ನೂ ತನ್ನ ಕಾವ್ಯದಲ್ಲಿ ಪವಣಿಸಿರುತ್ತಾನೆ. ಕ್ರಿ.ಶ. ಸುಮಾರು ೧೪೩೦ಕ್ಕಿಂತ ಹಿಂದೆ ವಚನಗಳನ್ನು ಸಂವಾದ ರೂಪದಲ್ಲಿ ಬರೆದಿಡುವ ರೂಢಿ ಇರಲಿಲ್ಲವೆಂದು ತೋರುತ್ತದೆ. ಈ ಎಲ್ಲ ಕಾರಣಗಳಿಂದ ಸಿಂಗಿರಾಜನು ಲಕ್ಕಣ್ಣದಂಡೇಶನಿಗಿಂತ (ಕ್ರಿ.ಶ. ೧೪೫೦) ಈಚೆಯವನು ಎಂದು ಹೇಳಬಹುದು.

ಮುರಿಗಿ ದೇಶಿಕೇಂದ್ರನು (ಸು. ೧೫೬೦) ರಾಜೇಂದ್ರ ವಿಜಯವೆಂಬ ಚಂಪೂಕಾವ್ಯವನ್ನು ಬರೆದಿದ್ದಾನಷ್ಟೆ. ಅಲ್ಲಿ ಸಿಂಗಿರಾಜ ಪುರಾಣದಲ್ಲಿ ಉಕ್ತವಾಗಿರುವ ಅನಿಮಿಷನ ಕಥೆಯನ್ನೇ ವಿಸ್ತಾರವಾಗಿ ಪ್ರೌಢಶೈಲಿಯಲ್ಲಿ ನಿರೂಪಿಸಿದ್ದಾನೆ. 'ಅಮಲ ಬಸವ ಚಾರಿತ್ರ'ದ ಈ ಭಾಗಕ್ಕೂ ರಾಜೇಂದ್ರ ವಿಜಯ[1]ವೆಂಬ ಹಮ್ಮಿರ ಕಾವ್ಯಕ್ಕೂ ಅನೇಕಕಡೆ ಹೋಲಿಕೆ ಇದೆ[2] ಮುರಿಗೆಯ ದೇಶಿಕೇಂದ್ರನೇ

---

[1] ರಾಜೇಂದ್ರ ವಿಜಯದ ನಾಲ್ಕನೆಯ ಆಶ್ವಾಸದ ಮತ್ತು ಒಂಬತ್ತನೆಯ ಆಶ್ವಾಸದ ಅಂತ್ಯದಲ್ಲಿ ಶಾಂತವೀರೇಶ್ವರನ ಸ್ತುತಿ ಇದೆ. ಕವಿಯು ಇವನ ಶಿಷ್ಯನೆಂದು ತೋರುತ್ತದೆ.

[2] 'ರಾಜೇಂದ್ರವಿಜಯ'ದ ಒಂಬತ್ತನೆಯ ಆಶ್ವಾಸದಲ್ಲಿ ಬರುವ "ಧುರಧೀರ ಸ್ಯೆಂಧವ ನಿಃಕುಭ ಧನ್ಯಕ ಪಾಳಾಪತಿ ಹರಿಸಂಹರ ಶಂಖಕೃತರ ಮಾಳವ ಕಳಾ ಚೋರ ಮೊರಕಾ ಕುಂತನ ರಾಷ್ಟ್ರ ಬಂಧಿಳ ಲಾಳಸಿಂಧಕ ಹರಿತ ಹೂಣಗೋಹಿಲರಾಜ ನಣುಗಂ ವೀರ ಬಿಜ್ಜಳಂ ತತ್ಕುಮಾರಕಂ ಹೆಮ್ಮಾಡಿರಾಯ ತದಾತ್ಮಜಂ ಪೆಮ್ಮಡಿರಾಯ ತನ್ನಂದನಂ ಚಾಳುಕ್ಯ ಬಿಜ್ಜಳನುಜ್ಜಳ ಚಿತ್ತಾನುಕೂಲ ಬಳಿಕಂ ನವನಂದರುಂ ದಶಗುಪ್ತರುಂ ವಿಂಶತಿ ಮೌರಿಗಳುಂ ಸಪ್ತವಿಂಶತಿರಾಜೇಂದ್ರರುಂ ವಿಂಶತಿ ಚಾಳೋಕ್ಯ ಚಕ್ರವರ್ತಿಗಳನ್ವಯೋದ್ಧರಣ ತ್ರೈಲೋಕ್ಯಚೂಡಾಮಣಿ ರಾಜಸಂತಾನ ಮನುರಾಜಂ...." ಈ ಗದ್ಯವನ್ನು ಸಿಂಗಿರಾಜನ—

ಚಾಳೋಕ್ಯಸ್ಯೆಂದವ ನಿಕುಂಭಲಬ್ಧಕಧಾನ್ಯ
ಪಾಳ ಪ್ರತಿಹಾರ ಸೆಲ್ಲಾರ ಸೇಕ ಕರಾಟ
ಮಾಳವ ಕರಾಚೂರ ಮೊರಕನಾ ಕುಂತಾನ ರಾಷ್ಟ್ರಕೂಟಂ ಬಂದಿಳ ।

ಸಿಂಗಿರಾಜನಿಗಿಂತ ಈಚೆಯವನು ಎಂದು ಊಹಿಸುವುದಕ್ಕೆ ಇನ್ನು ಕೆಲವು ಕಾರಣಗಳನ್ನು ಕೊಡಬಹುದು. ಸುಮಾರು ಕ್ರಿ.ಶ. ೧೬೦೬ರಲ್ಲಿ ಇದ್ದಿರಬಹುದಾದ ಯಳಂದೂರು ಹರೀಶ್ವರನು, ಸಿಂಗಿರಾಜನು ಬಿಜ್ಜಳನ ಮಂತ್ರಿಯಾಗಿದ್ದನು. ಅವನು ಮೊದಲು ವೀರ ವೈಷ್ಣವನಾಗಿದ್ದು ಅನಂತರ ಬಸವೇಶ್ವರನ ವ್ಯಕ್ತಿತ್ವಕ್ಕೆ ಮಾರುಹೋಗಿ ವೀರಶೈವ ಮತವನ್ನು ಅವಲಂಬಿಸಿದನು. ಬಸವಣ್ಣನ ಮೇಲೆ ಹನ್ನೆರಡು ಸಾವಿರ (ಸಾವಿರದ ಎಂಟುನೂರು ಅಲ್ಲ) ಗೀತೆಗಳನ್ನು ಷಟ್ಪದದಲ್ಲಿ ರಚಿಸಿ ಸದ್ಗತಿ ಹೊಂದಿದನು ಎಂದು ಹೇಳಬೇಕಾದರೆ ಬಸವಣ್ಣನ ಸಮಕಾಲೀನನಿರಬಹುದಾದ ದಶಗಣದ ಸಿಂಗಿರಾಜನ ಚರಿತ್ರೆಯನ್ನೂ 'ಅಮಲಬಸವಚಾರಿತ್ರ'ದ ಸಿಂಗಿರಾಜನ ಚರಿತ್ರೆಯನ್ನೂ ಜನರು ಕಲಸಿಬಿಟ್ಟು ಕಥೆ ಕಟ್ಟಿರಬೇಕು. ಆದುದರಿಂದ ಕವಿ ಸಿಂಗಿರಾಜನು ಯಳಂದೂರು ಹರೀಶ್ವರನಿಗಿಂತ ನೂರಾರು ವರ್ಷ ಹಿಂದಿನವನಿರಬೇಕೆಂದು ಊಹಿಸಬೇಕಾಗುವುದು. ಸುಮಾರು ಕ್ರಿ.ಶ. ೧೫೩೦ರಲ್ಲಿದ್ದ ಸಂಪಾದನೆಯ ಚನ್ನಂಜೇದೇವರು ಕೂಡಿಸಿರುವ ಬಸವಸ್ತೋತ್ರದ ಷಟ್ಪದಿಯಲ್ಲಿ 'ಅಮಲಬಸವಚಾರಿತ್ರ'ದ ಅನೇಕ ಪದ್ಯಗಳೂ, ಸಂಗತಿಯೂ ಈ ಸೇರ್ಪಡೆಯಾಗಿರುವ ಊಹೆಯನ್ನು ಇನ್ನೂ ಬಲಪಡಿಸುತ್ತವೆ.

ಹಾಸನ ಜಿಲ್ಲೆಯ ಒಂದು ಶಾಸನ[1]ದಲ್ಲಿ ಒಬ್ಬ "ಸಿಂಗಿರಾಜಯ್ಯಗಳ" ಹೆಸರು ಉಕ್ತವಾಗಿದೆ. "ಶ್ರೀ ಪರ್ವತ ಶ್ರೀ ಸ್ವಯಂಭು ಶ್ರೀ ಲಿಂಗ ಚಕ್ರವರ್ತಿ ಶ್ರೀ ಮಲ್ಲಿಕಾರ್ಜುನ ಮಹಾಲಿಂಗದೇವರ ದಿವ್ಯ ಶ್ರೀ ಪಾದಪದ್ಮಾರಾಧಕರುಮಪ್ಪ ಶ್ರೀ ಕೈಲಾಸದ ಮೇಲಣ ದೇವಪೃಥ್ವೀ ಮಹಾಮಹತ್ತುವಿಗೆ ಮುಖ್ಯವಾದ

ಲಾಳ ಥಂದಂ ಹರಿತ ಹೂಣಗೋಹಿಲ ರಾಜ
ಪಾಳಕೆನಿಪರಸುಗುಲ ಗಿರಿವಜ್ರವೆಂಬಕೀ
ರ್ತ್ಯಾಗಳಾಪವುಳ್ಳಲಗಿಗಪಕೀರ್ತಿದರಲು ನೆಗಳ್ದಾತನಾತನ ಕರೆಸೆನೆ॥೧೪॥
(ನಂ. ೪೭)

ನಂದ ನಂದರ್ಕಳೊಂಬತ್ತು ಪೀಳಿಗೆಯಾಳ್ದು
ಹಿಂದೆ ಗುಪ್ತರ್ಗುಪ್ತರೆಂಬರಸುಗಳು ಹತ್ತ
ರಿಂದ ಮೋರೆಯ ಮೋರೆಯರ್ಗಳಿಪ್ಪತ್ತೊಂದು ಸಿಂಹಾಸನಂಗಳಿಂದ ।
ಬಂದುದಿಪ್ಪತ್ತೇಳು ಕಾದಂಬ ನಾಮ ರಾ
ಜೇಂದ್ರರಲ್ಲಿಂ ಬಳಿಕ ಚಾಳೋಕ್ಯ ಚಕ್ರೇಶ
ವೃಂದ ವಿಪ್ಪತ್ತೆಂಟು ಪಟ್ಟವಡೆದಾ ಪಟ್ಟಕಲ್ಲೆನಿಪ ಪುರವರದಲ ॥೧೧॥
(ನಂ. ೪)

ಈ ಪದ್ಯಗಳೊಡನೆ ಹೋಲಿಸಿದರೆ ಗೊತ್ತಾಗುತ್ತದೆ. ಷಿಕಾರಿಪುರದ ೨೨ನೆಯ ಶಾಸನದ "ವಸುಧಾಕಾಂತೆಯ ಕುಂತಳೋಪಮಮೆನಿಪ್ಪೀ ಕುಂತಳಕ್ಷೋಣಿಯಂ ಪೆಸರ್ವೆತ್ತಾ ನವನಂದ ಗುಪ್ತಕುಲ ಮೌರ್ಯಕ್ಷ್ಮಾಪರಾಳ್ದರ್ಲನಜ್ಜ ನದಾಣ್ಮ ರ್ಕಲರಟ್ಟರಾಳ್ದರವರಿಂ ಚಾಳುಕ್ಯರಾಳ್ದರ್ವಳಿಕ್ಕೆಸೆದಿದರ್ಾ ಕಳಚುರ್ಯ ವಂಶಜರೊಳ್ ಬಿಜ್ಜಳ ಕ್ಷೋಣಿಪಂ"—ಈ ಭಾಗವನ್ನು ಹೋಲಿಸಿ ನೋಡಬಹುದು. N.P. ಬೇಲೂರಿನ ೧೮೦ನೆಯ ಶಾಸನ.

ವಾದಾನ್ಯದ ಅಯ್ಯಗಳ ಆಜ್ಞಾಧಾರಕರುಮಪ್ಪ ಸಿಂಗಿರಾಜ ಅಯ್ಯಗಳು ವಡಗೂರ ಶ್ರೀ ವೀರಭದ್ರ ದೇವರಿಗೆ'' ದತ್ತಿಯಿತ್ತಂತೆ ಈ ಶಾಸನದಿಂದ ಗೊತ್ತಾಗುತ್ತದೆ. ಇದರ ಕಾಲ ಕ್ರಿ.ಶ. ೧೪೨೨. 'ಅಮಲ ಬಸವಚಾರಿತ್ರ'ವನ್ನು ರಚಿಸಿರುವ ಸಿಂಗಿರಾಜನ ಗುರು ದೇಮಿದೇವ, ಮನೆದೇವರು "ಕಾಶೀಪುರಾಧಿಪ ವಿಶ್ವನಾಥ'' ಮತ್ತು ವೀರಭದ್ರ. ಶಾಸನೋಕ್ತ "ಸಿಂಗಿರಾಜ ಅಯ್ಯಗಳೂ'' ಕವಿ ಸಿಂಗಿರಾಜನೂ ಅಭಿನ್ನರೆಂದು ನಿರ್ಧರಿಸುವುದಕ್ಕೆ ಸಾಕಾದಷ್ಟು ಪ್ರಮಾಣ ಗಳಿಲ್ಲ.

ಅಂತೂ ಈ ಕವಿ ಕ್ರಿ.ಶ. ೧೪೪೦ರಿಂದ ಈಚೆಗೆ ಕ್ರಿ. ಶ. ೧೫೬೦ಕ್ಕಿಂತ ಹಿಂದೆ, ಅಂದರೆ ಕ್ರಿ.ಶ. ೧೫೦೦.ರ ಸುಮಾರಿನಲ್ಲಿ ಇದ್ದಿರಬೇಕೆಂದು ಸದ್ಯಕ್ಕೆ ಹೇಳ ಬಹುದು. ಕವಿಚರಿತೆಕಾರರೂ ಇದೇ ಅಭಿಪ್ರಾಯವನ್ನೇ ಸಮರ್ಥಿಸಿದ್ದಾರೆ.

ಕಥಾಸಾರ

ಕೈಲಾಸದಲ್ಲಿ ಪರಶಿವನ ಒಡ್ಡೋಲಗ (೧). ದೇವಾನುದೇವತೆಗಳು ನೆರೆದಿದ್ದರು. ಆ ಸಮಯದಲ್ಲಿ ಪರಮೇಶ್ವರನಿಂದ ಆಜ್ಞಪ್ತನಾಗಿ ಭೂ ಲೋಕಕ್ಕೆ ಹೋಗಿ ವೀರಶೈವ ಮತವನ್ನು ಪ್ರಸಾರಮಾಡಿ ತನ್ನ ಮಣಿಹವನ್ನು ಪೂರೈಸಿಕೊಂಡು ಬಸವೇಶ್ವರನು ಮರಳಿ ಸುಜ್ಞಾನರಥದಲ್ಲಿ ಕೈಲಾಸಕ್ಕೆ ಬಂದನು. ಇನ್ನೂ ಹೊರಬಾಗಿಲಲ್ಲೇ ಇದ್ದ ಸುಜ್ಞಾನರಥದ ಉಜ್ವಲ ಪ್ರಭೆಯು ಶಂಕರನ ಆಸ್ಥಾನಕ್ಕೂ ಪಸರಿಸಿ ಅಲ್ಲಿದ್ದ ದೇವಾನುದೇವತೆಗಳ ಕಣ್ಣು ಕುಕ್ಕಿತು. ಬಾಗಿಲುಕಾಯುವವರು ಆ ರಥದ ಬಳಿಗೆ ಹೋಗಿ ಒಳಗೆ ಯಾರನ್ನೂ ಕಾಣದೆ ಆಶ್ಚರ್ಯಪಟ್ಟು ಆಸ್ಥಾನದಲ್ಲಿದ್ದ ನಂದಿಯೆಡೆಗೆ ಬಂದು ಆ ಸಂಗತಿಯನ್ನು ಅರುಹಿದರು. ನಂದಿರುದ್ರನು ಹೊರಗೆ ಬಂದು ಬಸವೇಶ್ವರನನ್ನು ಗುರುತಿಸಿ "ಎಂತಾಯ್ತು ಶುದ್ಧತ್ವ ನಿನಗೆ'' ಎನ್ನಲು ಬಸವಣ್ಣನು ತನ್ನ ಹೃದಯವನ್ನೇ ಬಗೆದು ತೋರುತ್ತಾನೆ. ಬ್ರಹ್ಮಾಂಡಗಳೇ ಅವನ ಹೃದಯದಲ್ಲಿ ಮನೆ ಮಾಡಿಕೊಂಡಿದ್ದುವು, ವೇದಾಗಮ ಶಾಸ್ತ್ರಗಳು ಅಚ್ಚೊತ್ತಿದಂತಿದ್ದುವು, ಶಿವ ಶರಣರ ಚರಿತ್ರೆಗಳು, ಬಸವೇಶ್ವರನ ಹುಟ್ಟು, ಬೆಳೆವಣಿಗೆ, ಮಹಿಮೆ, ಬಸವೇ ಶ್ವರನು "ಮೇದಿನೀಪ ಪರಸಮಯದಾಚಾರ್ಯರಹುದೆನಲು'' ತೋರಿ ಮೆರೆದ ಅರುವತ್ತುನಾಲ್ಕು ಪವಾಡಗಳು "ಮುಕ್ತಿವೀಧಿಯಂತೆಸೆದಿದ್ದುವು''. ಆ ದಿವ್ಯ ದೃಶ್ಯಗಳೇ ನಂದಿಯು "ಬಸವಪುರಾಣಪದ್ಧತಿಗೆ ಮೂಲವಾದುವು.'' ಭೂಲೋಕ ದಿಂದ ಬಂದ ವೃಷಭನಿಗೆ ಶಂಕರನೂ, ನಂದಿಯೂ ಮಾಡುವ ಆದರಾತಿಥ್ಯಗಳನ್ನು ಕಂಡು ಅಲ್ಲಿದ್ದ ಪ್ರಮಥರು ಚಕಿತರಾಗಿ ನಂದಿಮಹಾಕಾಳನನ್ನು ಕುರಿತು "ಇಂತಪ್ಪ ಸಾಮರ್ಥ್ಯಮಹಿಮನದಾವ''? "ಮುನ್ನತಾನಾವ ಪದವಿಗಂ?'' "ಬಂದ ಪದವಾವುದು'' ಎನ್ನಲು "ನಂದಿರುದ್ರಂ ಕಥಾರ್ಣವವ ಮಥಿಸ ಲುದ್ಯೋಗಿಸಿದನು''.

ಬಸವೇಶ್ವರನು "ಅನಿಮಿಷೇಂದ್ರತ್ವಪಟ್ಟಾನ್ವಯದ" ಖಾಂಡವ ವನವನ್ನು ಹೊಕ್ಕು ಅಲ್ಲಿದ್ದ ಇಕ್ಷುವಾಟಿಯನ್ನು ತುಳಿದು ಆ ಉದ್ಯಾನವನದ ಕಾವಲುಗಾರರನ್ನು ಹಿಂಸಿಸಿ ತೊಂದರೆಗೀಡು ಮಾಡಿದ್ದರಿಂದ ಅಮರರು ನೊಂದುಕೊಂಡು ಶಿವನೆಡೆಗೆ ಬಂದು ದೂರಿದರೆಂದೂ ಅದನ್ನು ಕೇಳಿದ ಶಂಕರನು "ವೃಷಭ, ನಿನ್ನುಪಟಳಕ್ಕಂಜುವೆವು" ಎಂದು ಆಡಿದನೆಂದೂ ಆದುದರಿಂದ, ಬಸವನು ಮುನಿಸಿಕೊಂಡು ಶಿವಸಭೆಯನ್ನು ಬಿಟ್ಟು ಹೋದನೆಂದೂ "ಅನ್ಯ ಕಥನಾಗಮ"ದಲ್ಲಿ ಹೇಳಿದೆ. ಅದು ಸುಳ್ಳು. ಶೂಲಿಯ ಒಡ್ಡೋಲಗದಲ್ಲಿ ದೇವತೆಗಳೆಲ್ಲರೂ ನೆರೆದಿದ್ದಾಗ ಕ್ರಿಯೆ ಭಾವಗಳಿಗೆ ವಾದ ಮೂಡಿ ಒಂದನ್ನೊಂದು ಮೂದಲಿಸುತ್ತ ಶಿವನೆದುರಿಗೆ ಬಂದು ನಿಂತುವು. ಸದಾಶಿವನು ನಸುನಗುತ್ತ "ಧರ್ಮಾಸನಾಧಿಪತಿ ವೃಷಭನೈದನೆ" ಕೇಳಿರಿ ಎನ್ನಲು ಭಾವವು ವೃಷಭನನ್ನೂ ಕ್ರಿಯೆಯು ಸುರರನ್ನೂ ಸೇರಿಕೊಂಡುವು. ಕ್ರಿಯೆಯು ಆವರಿಸಿದ್ದ ಅನಿಮಿಷನೆಂಬ ಕ್ರತುಪುರುಷನು ಅವನಲ್ಲಿ "ಕೃತಕಬುದ್ಧಿ ಮೊಳೆತು" ತುಂಬಿದ ಶಿವಸಭೆಯಲ್ಲಿ ವೃಷಭನ ಬಾಲದ ಹೂವಿನ ಕೂದಲೊಂದನ್ನು ಹಿಡಿದೆಳೆದನು. ಕುಪಿತನಾದ ವೃಷಭನು ಬಾಲವನ್ನು "ನಭಕ್ಕೆತ್ತಿ" ಆ ಬಾಲದಿಂದಲೇ ಸಮಸ್ತ ದೇವತೆಗಳನ್ನೂ ಜಡಿದನು. ದೇವತೆಗಳ ಮೊಗಗಳು ಮುಗಿದುವು. ಅವ ಮಾನಿತರಾದ ಅವರು ವೃಷಭೇಶ್ವರನಿಗೆ ಮನಬಂದಂತೆ ಅನ್ನುತ್ತಿದ್ದರು. ವೃಷಭನು, ಶಿವನು ನನ್ನ ದೂಷಣೆಯನ್ನು ಕೇಳಿಯೂ ಸುಮ್ಮನಿರುವನಲ್ಲಾ ಎಂದು ಮುನಿಸಿಕೊಂಡು ಶಿವಸಭೆಯನ್ನು ತೊರೆದು ಹೊರಹೊರಟು ಕೀಲಕ ಪರ್ವತಕ್ಕೆ ಬಂದು ಅಲ್ಲಿರುವ ಅಮೃತಶೀಕರಮಯವಾದ ಗಂಡ ಶೈಲಾಗ್ರದಲ್ಲಿ ನಿಂತು ತನ್ನ ಉರಿನೋಟವನ್ನು ಎಂಟು ಮೂಲೆಗೂ ಬೀರಲು ಬಹ್ಮಾಂಡಗಳು ಗಡಗಡನೆ ನಡುಗಿದುವು, "ಹರಿಯಸೊಬಗು"ಡುಗಿತು, "ಅಜನ ಜಾಣ್" ಮಾಯವಾಯಿತು, ಶಕ್ರನ ಉನ್ನತಿ ಇಳಿಯಿತು. "ಧರಾತಳದೊಳುಱೆ ಹರಿವ ಜಲ, ಸುರಿವ ಮೇಘ, ಕಱೆವಪಶು ಬಱಿತವು".

ಮರುದಿನ ಪಶುಪತಿಯ ಸಭೆಯಲ್ಲಿಯೂ ಅವೇ ವಿಪರೀತ. "ಹರಿ ರಜಂಗುಂದಿದ", "ಶಶಾಂಕ ಶಾಂತತೆಯ ತೊಱೆದ"!, ಸುರರ ಮೊಗದಾಯುಷ್ಯ ಮಿಲ್ಲ"! ಇದನ್ನು ಕಂಡ ಬೃಹಸ್ಪತಿಗೆ ಸೋಜಿಗವಾಯಿತು. ಶಿವನು "ಅತಿಶುದ್ಧ ವ್ರತಾಧೀಶರ" ಮನಸ್ಸನ್ನು ನೋಯಿಸಿದುದರಿಂದ ಆದ ಪರಿಣಾಮವಿದು ಎಂದು ಪ್ರಮಥರ ಬಳಗದಲ್ಲಿ ಯಾರಿಲ್ಲವೋ ನೋಡಬೇಕೆಂದು ಹರಿಗೆ ಆಜ್ಞಾಪಿಸಲು ಹರಿಯು ಬಂದು ನೋಡುವಲ್ಲಿ "ವೃಷಭನಲ್ಲಲ್ಲದಿಕ್ಕೆ ವಿಭ್ರಮ ವಿಡಿದಿದೆ" ಎನ್ನುತ್ತ ವೃಷಭನು ಮಾಯುವಾಗಲು ಕಾರಣವೇನೆಂದು ದೇವತೆಗಳನ್ನು ಕೇಳಿದನು. ಇಷ್ಟಕ್ಕೆಲ್ಲಾ ದೇವತೆಗಳೇ ಮೂಲವೆಂದು ಗೊತ್ತಾಗುವುದು. "ನಾಕಲೋಕವು ಪರಿಧಿ ವಾರಿದ ವರೂಥ", "ಪುರವದಮರಾವತಿ, ಶಚಿ ರಾಣಿ" ಎಂದು ಹೆಮ್ಮೆಯಿಂದ ಮುಂದುಗಾಣದೆ ಈ ಅಕೃತ್ಯವನ್ನು ಮಾಡಿದ್ದೀಯೆ ಎಂದು ದೇವೇಂದ್ರನಿಗೆ ಉಪೇಂದ್ರನು ಹೇಳುತ್ತಿರುವುದನ್ನು ನಾಗದನು ಕೇಳಿಸಿಕೊಂಡು

ಶಿವನೆಡೆಗೆ ಬಂದು ಒಂದಕ್ಕೆ ಒಂಬತ್ತು ಸೇರಿಸಿ ವೃಶಭನಿಗಾದ ಗತಿಯನ್ನು ಬಿತ್ತರಿಸಿದನು (೨)

ವೃಷಭನು ಮುನಿಸಿಕೊಂಡು ಮಾಯವಾಗಿರುವನೆಂಬ ಸಂಗತಿಯನ್ನು ಕೇಳಿದ ಅಭವನು "ಕನಲ್ದು" ಅನಿಮಿಷೇಂದ್ರನನ್ನು ಕುರಿತು ವೃಷಭನನ್ನು ಹುಡುಕಿ ಕರೆತರಬೇಕೆಂದು ಆಜ್ಞಾಪಿಸಿದನು. ಸುರಪನೋ, ಅಖಿಳ ಪರಿವಾರ ದೊಂದಿಗೆ ಹೊರಡುತ್ತಾನೆ, ವೃಷಭನನ್ನು ಸೆರೆಹಿಡಿದು ತರುವುದಕ್ಕೆ. "ಏಪರಿಯೊಳಾದೊಡಂ ಬರಿಸುವೆನು ಬಾರದೊಡೆ ಗೋಪನಂ ಹಿಡಿದುತಹೆ" ಎಂದು ಪ್ರತಿಜ್ಞೆಗಯ್ಯುತ್ತಾನೆ. ಸುರಪಡೆಯ ಪದಹತಿಗೆ "ಅಗಿದ ವೇಳ್ಬುವನ" "ಕೂರ್ಮನ ಬೆನ್ನು ಒಡೆದುದು, ಅನಂತನ ಫಣಾರತ್ನ ಕಳಚುದುರೆ ಪೆಡೆಸುಗಿದು ಬಿದ್ದುವು, ದಿಗಿಭವದುರೆ ನಗತತಿಗಳಿಬ್ಬಗಿಗೈದುವು". "ಅಂಬುಧಿಗಳು ಮಿಗೆ ಕದಡಿ ಕರ್ದಮಂ ಮಸಗಿದವು". ಸುರರು ವೃಷಭನಲ್ಲಿಗೆ ಬಂದು ಅವನನ್ನು ಅಲ್ಲಗಳೆದು ಶಿವಸಭೆಗೆ ಹಿಂತಿರುಗು ಎಂದು ನುಡಿದರು. ಮಾತಿಗೆ ಮಾತು ಮಸೆದು ಕಾಳಗಕ್ಕೆ ಮೊದಲಾಯಿತು. ವೃಷಭನನ್ನು ಸುರಪಡೆಯು ಮುತ್ತಿತು. ದೇವತೆಗಳು ಅವನನ್ನು ಹೊಡೆದು ಬಡಿದು "ಹಿಡಿದೆಳೆವ ಕೋಳಾಹಳಕ್ಕೆ" ಬ್ರಹ್ಮಾಂಡ ಘೀಳಿಡುತ್ತಿದ್ದುವು. ವೃಷಭನೂ ಜಗ್ಗಲಿಲ್ಲ, "ಕೋಡ ಝಾಡಿಸುತ್ತ ಜಾಂಡಂಗಳಂ ತಿಪ್ಪೆಯಂ ತೀಡಿಋದು ಮಸೆಮಸೆದು ಮುಂಪದ ಖುರಾಗ್ರವ ನೀಡಿ ಹೇಮಾಚಲವ" ಕೆರೆದೊದೆದನು. ಕಣ್ಣುಗಳು ಕಿಡಿಲನ್ನೇ ಉಗುಳು ತ್ತಿರಲು "ಕೆಂಗಲಿಸಿ ಕಲೆಕಲೆದು ಮಲೆವುತ ನಿಂದನವಗಡಿಸುತ". ದೇವತೆಗಳ ಒಡ್ಡು ಏರೇರಿ ಬರುತ್ತಿದ್ದರೂ ಲೆಕ್ಕಿಸದೆ ವೃಷಭನು ಅವರನ್ನು ತರಿದಟ್ಟುವ ರಭಸಕ್ಕೆ ಬ್ರಹ್ಮಾಂಡವೇ ತಲ್ಲಣಗೊಂಡಿತು. ಸುರರು ಆಶಾಭಂಗಿತರಾಗಿ ಹಿಂತೆರಳಿದರು.

ಇತ್ತ ಭೂಕಾಂತೆಯ ಭಂಗ ಹೇಳತೀರದು. ಭೂಲೋಕದಲ್ಲಿ ಕ್ಷಾಮವು ಮನೆ ಮಾಡಿಕೊಂಡಿತು. ಆ ವೃಷಭನ ದೃಷ್ಟಿಯ ಬಡಬಾನಲನು ಭೂಲೋಕವೆಲ್ಲವನ್ನೂ ಆವರಿಸಿದ್ದುದರಿಂದ ತರುಮರಗಳೆಲ್ಲಾ ಸೀದು ಸೀಕರಿ ಯಾದುವು. ಭೂದೇವಿಯು ತನ್ನ ಅಳಲನ್ನು ಸೈರಿಸಲಾರದೆ ಹೋದಳು. ಹರಿಗೋ, ಬ್ರಹ್ಮನಿಗೋ, ಶಂಕರನಿಗೋ ಮೊರೆಯಿಡಲೆಂದು ಅವರೆಡೆಗೆ ಹೋಗು ತ್ತಿರಲು ದಾರಿಯಲ್ಲಿ ದೇವಲ ಮಹಾಋಷಿಯ ಆಶ್ರಮವು ಸಿಕ್ಕಿತು. ಭೂದೇವಿಯು ಆ ಮಹಾಋಷಿಯೆಡೆಗೆ ಹೋಗಿ ತನ್ನನ್ನು ಕಾಪಾಡಬೇಕೆಂದು ಬೇಡಿಕೊಳ್ಳಲು ದೇವಲ ಮಹಾಋಷಿಯು ವೃಷಭನನ್ನು "ಪರಿ ಪ್ರಾರ್ಥನಂ ಗೈದು ಭೂತಳಕೆ ತಾ ಸಕಲ ಶಾಂತಿಯಹುದು" ಎಂದು ಉಪದೇಶಿಸಿದನು. ಭೂಕಾಂತೆಯು ವೃಷಭನ ಬಳಿಗೆ ಹೋಗಿ ಅವನನ್ನು ಪ್ರಾರ್ಥಿಸಿಕೊಂಡು ವೃಷಭಾಂಕಮಾಲೆಯನ್ನು ಉಚ್ಚರಿಸುತ್ತ ಅವನನ್ನು ಭೂಲೋಕಕ್ಕೆ ಕರೆತಂದಳು. ಲೋಕದಲ್ಲಿ ಸುವೃಷ್ಟಿಯಾಯಿತು, ಶಾಂತಿ ನೆಲಸಿತು. ವೃಷಭನು ಭೂಲೋಕದಲ್ಲಿ

ಸಂಚಾರಮಾಡುತ್ತ ಬಂದು ಬಲಿಗ್ರಾಮವೆಂಬ ಪುರದ “ ಪಸರಿಸಿದ ಪೊಳಲೊಳಾಡುತ್ತ ” ಸುಖವಾಗಿದ್ದನು (೩).

ಇತ್ತ ಅಮರಾವತಿಯಲ್ಲಿ ಅಮರರ ಗೋಳು ಹೇಳತೀರದು. ಪರಶಿವನ ಕ್ರೋಧಾಗ್ನಿಗೆ ತುತ್ತಾಗಬೇಕಲ್ಲಾ ಎಂದು ಅವರು ಕೊರಗಿದರು. ಸುರಗುರುವು “ ಗುರುಮಹಾಕಾಯ ಕರುಣಿಸಿದೊಡಹುದು ” ಎಂದು ಹೇಳಲು ಸುರಪತಿಯು ಮಹಾಕಾಯನನ್ನು ಪ್ರಾರ್ಥಿಸಲು ಮಹಾಕಾಯನು ಪ್ರಸನ್ನನಾಗಿ ಅನಿಮಿಷನ ದೆಸೆಯಿಂದ ಈ ತೊಡಕುಂಟಾಗಿರುವುದು; ಆದುದರಿಂದ ಅವನೇ ಧರಣಿಗೆ ಹೋಗಿ ಭಯಭಕ್ತಿಯಿಂದ ವೃಷಭೇಂದ್ರನನ್ನು ಪ್ರಾರ್ಥಿಸಿ ಅವನ ಪ್ರಾಣಲಿಂಗವನ್ನು ಕೊಂಡು ಬಂದರೆ ಆಗ ವೃಷಭನು ಕೈಲಾಸಕ್ಕೆ ಮರಳುವನೆಂದು ತಿಳಿಸಿದನು.

“ ಯಶವಡೆದ ಮಲಪ್ರಹರಿಯ ಸೋಕಿದ ” ಪುಣ್ಯವೇ ಪಾವನತೆಯಾದಂತಿರುವ ಪಟ್ಟದಕಲ್ಲೆಂಬ ನಗರ. ಆ ನಗರದಲ್ಲಿಯೇ ನಂದರು, ಗುಪ್ತರು, ಮೌರ್ಯರು, ಕದಂಬರು ಚಾಲುಕ್ಯರು, “ ಪಟ್ಟವಡೆದಿದ್ದು.” ಅದೇ ವಂಶಾವಳಿಯಲ್ಲಿ ಜನಿಸಿದ ಧನವಂತನೂ ವ್ಯಾಪಾರದಲ್ಲಿ ಚತುರನೂ “ ಶೈವಾಗಮ ಶಿರೋರತ್ನ”ನೂ ಆಗಿದ್ದ ತ್ರೈಲೋಕ್ಯ ಚೂಡೇಶಾಂಕನ ಪತ್ನಿ ಮಹರ್ಲೇಖೆಯ ಉದರದಲ್ಲಿ ಅನಿಮಿಷನು ವಸುದೀಪ್ಯನಾಗಿ ಜನಿಸಿದನು, “ ಶಾತಕುಂಭಕ್ಕೆ ವರ್ಣಪುಟ್ಟಿದಂತೆ, ಜಲಜಾತಮಿತ್ರಗೆ ವಿಭಾವಸು ಪುಟ್ಟಿದಂತೆ, ಸುಧಾಸೂತಿಯೊಳು ಶಾಂತದಗಭಸ್ತಿ ಪುಟ್ಟಿದಂತೆ. ” ತಾಯಿತಂದೆಗಳು ಮಗುವನ್ನು ಅತ್ಯಂತ ಪ್ರೇಮದಿಂದ ನಡಪಿದರು. ಮಹೇಶನೆಂಬ ಬ್ರಹ್ಮನು ಭಕ್ತಿಯ ರಜವನ್ನು ಜ್ಞಾನಮೂಸೆಯೊಳಗಿಟ್ಟು ಆಚಾರ ಸುಭಾಷಿತಗಳೆಂಬ ತಿದಿಯಿಂದ ಒತ್ತಿ ಸನ್ಮಾರ್ಗಯುಕ್ತಿ ಎಂಬ ಅಗ್ನಿಯಲ್ಲಿ ಕರಗಿಸಿ ಆ ರಸವನ್ನು ಮುಕ್ತಿವಲ್ಲಭಮೂರ್ತಿಯ ಪಡಿಯಚ್ಚಿನಲ್ಲಿ ಎರಕ ಹೊಯ್ದನೋ ಎಂಬಂತಿದ್ದ ಆ ಮಗುವು ಹುಟ್ಟಿದಮೇಲೆ ತ್ರೈಲೋಕ್ಯಚೂಡೇಶನ ಐಶ್ವರ್ಯ ನೂರ್ಮಡಿಯಾಯಿತು. “ವಾಣಿ ವಹಿಯಂ ಬರೆವಳು” “ ಅಮರೇಶ ಲೆಖ್ಖವಂ ಕಾಣಿಸುವ. ” “ಲಕ್ಷ್ಮಿಯು ಭಂಡಾರವನ್ನು ಕಾಯುವವಳು,” “ ಕುಬೇರನು ವೇಳೆಯಾಳು.” ಪ್ರಪಂಚದ ಯಾವ ಭಾಗದಲ್ಲಿಯೂ ತ್ರೈಲೋಕ್ಯಚೂಡೇಶನ ವ್ಯವಹಾರ, ಧನಧಾನ್ಯಾದಿಗಳು ಇಲ್ಲದಿರಲಿಲ್ಲ.

ಬಾಲಕನು ಬೆಳೆದನು. ಸಕಲ ವಿದ್ಯೆಗಳಲ್ಲಿಯೂ ಪ್ರವೀಣನಾದನು. ದೇಶಸಂಚಾರ ಒಂದು ಮಾತ್ರ ಉಳಿಯಿತು. ರಾಜತೇಜಿಗಳಲ್ಲೆಲ್ಲಾ ಶ್ರೇಷ್ಠತಮವಾದ ತನ್ನ ಅಚ್ಚುಮೆಚ್ಚಿನ ‘ ಕ್ರತುಜನ್ನ’ ಎಂಬ ಅಶ್ವವನ್ನು ಏರಿ ದೇಶಪರ್ಯಟನಕ್ಕೆ ಹೊರಟನು. ಮಾರ್ಗದಲ್ಲಿ ಶಬರ ಪಡೆಯೊಂದರ ಗದ್ದಲವನ್ನು ಕೇಳಿದೊಡನೆಯೇ ವಸುದೀಪ್ಯನ ಹಿಂದಿನ ಜನ್ಮದಲ್ಲಿಯೂ ಅವನ ವಾಹನವಾಗಿದ್ದ ಆ ಕ್ರತುಜನ್ನನೆಂಬ ಅಶ್ವವು ಬೆಚ್ಚಿ ವಿಗಡಿಸಿ ದಿಕ್ಕುಗೆಟ್ಟು ಓಡಲಾರಂಭಿಸಿತು. ಪರಿವಾರ ದೂರವಾಯಿತು. ಕ್ರತುಜನ್ನನು ಪೂರ್ವದಲ್ಲಿ

ಬಕಾಸುರನು ವಾಸಿಸುತ್ತಿದ್ದ ಸ್ಥಳಕ್ಕೆ ಬಂದು ನಿಂತಿತು. ವಸುದೀಪ್ಯನು ಕುದುರೆಯನ್ನು ಒಂದು ಗಿಡಕ್ಕೆ ಕಟ್ಟಿ ತಾನು ಒಂದು ಮರದಡಿಯಲ್ಲಿ ಮಲಗಿ ನಿದ್ರೆ ಹೋದನು. ಸ್ವಲ್ಪಹೊತ್ತಿನಮೇಲೆ ಎದ್ದು ನೋಡುವಲ್ಲಿ ಕುದುರೆ ಮಾಯವಾಗಿತ್ತು. 'ಹಾ ಪುಣ್ಯವೇ! ಗಾಳಿಗಿಟ್ಟ ಸೊಡರಿನಂತೆ ಅಶ್ವವು ಮಾಯವಾಯಿತು, ಅಶ್ವವನ್ನು ಬಯಲೇ ನುಂಗಿತೋ ಏನೋ' ಎನ್ನುತ್ತ ಬಿಸಿಗಿನ ಬೆಳೆಯು ಕೇಣಿಗೊಂಡವನಂತಾದನು. ಅಶ್ವವನ್ನು ಹುಡುಕಿ ಹುಡುಕಿ ಬೇಸತ್ತು ಬೆಂಡಾಗಿ ಬಳಲ ನೀರಿದ್ದೆಡೆಯನ್ನು ಹುಡುಕುತ್ತ ಹೊರಟನು. ಆದರೆ ಆ ರಾಜಪುತ್ರನು ಲಿಂಗ ದರ್ಶನ ಮಾಡದೆ ಏನನ್ನೂ ಮುಟ್ಟುವಂತಿರಲಿಲ್ಲ. ಅದು ಅವನ ಮಹಾವ್ರತ. ಹಸಿವು ತೃಷೆಗಳು, ಹಸುವನ್ನು ಹುಲಿಯು ಪೀಡಿಸುವಂತೆ ಪೀಡಿಸತೊಡಗಿದುವು. ವಸುದೀಪ್ಯನು ಬಾಯಾರಿ ಬಸವಳಿದು ನರಳುತ್ತ ಹೋಗುತ್ತಿರಲು "ಹುಲು ಜಲಾ ಹರಗೊಂಡು ಕಾರುಣ್ಯ ಜಲಸಿಂಧು" ವೃಷಭನು "ಗೋಮುಖದಾಸನದೊಳು" ಇದ್ದ ಸ್ಥಳಕ್ಕೇ ಬಂದನು. ವೃಷಭನ ದರ್ಶನವಾಗುವುದು. ಆದರೆ ವೃಷಭನ ಮೈಮೇಲೆ ಲಿಂಗಮುದ್ರೆಯಿರಲಿಲ್ಲ. ವಸುದೀಪ್ಯನು ನಿರಾಶನಾಗಿ ಧೊಪ್ಪನೆ ನೆಲಕ್ಕೆ ಬಿದ್ದು ಲಿಂಗವನ್ನು ಹಂಬಲಿಸಹತ್ತಿದನು. ವೃಷಭನು ಇವನ ಸ್ಥಿತಿಯನ್ನು ಕಂಡು ಮರುಗಿ ತನ್ನ ನಾಲಗೆಯ ತುದಿಗೆ ಆತ್ಮಲಿಂಗವನ್ನು ತಂದು ನಿಲಸಿ ವಸುದೀಪ್ಯನಿಗೆ ಶಿವಲಿಂಗ ದರ್ಶನ ಮಾಡಿಸಿದನು. ವಸುದೀಪ್ಯನು ತನ್ನ ಪಂಚ ಪ್ರಾಣವನ್ನೇ ಕಣ್ಣಿಗೆ ತಂದು ಶಿವಲಿಂಗವನ್ನು ನೋಡಿದವನು ತಿರುಗಿ ಕಣ್ಣುಮುಚ್ಚ ಲಿಲ್ಲ. ಅಷ್ಟೇ ಅಲ್ಲ. 'ನಾಲಿಂಗಪಾಣಿ, ದರುಶನವಾಯ್ತು, ನೀನು ಕರುಣಾಳು ಎನ್ನ ರಕ್ಷಿಪಡೆ ಸ್ಪರ್ಶನಂ ಮಾಳ್ಪಂತೆ ಪಾಲಿಸೆಂದು' ಕೈಯಾನಲು ವೃಷಭನು ಅವನ ಭಕ್ತಿಗೆ ಮೆಚ್ಚಿ ಹಿಂದುಮುಂದಿನ ಆಲೋಚನೆಯಿಲ್ಲದೆ ಲಿಂಗವನ್ನು ಅನಿಮಿಷನಿಗೆ ಕೊಟ್ಟೇಬಿಟ್ಟನು. ವಸುದೀಪ್ಯನಿಗೆ ತನ್ನ ಹಿಂದಿನ ಜನ್ಮದ ಅರಿವಾಯಿತು. ನಿಮಿಷಾರ್ಧವೂ ಬಿಡದೆ ಲಿಂಗವನ್ನು ಈಕ್ಷಿಸುತ್ತಾ ಲಿಂಗಾಂಗಸಾಮರಸದ ಕೊನೆಯ ಮೆಟ್ಟಲನ್ನೇರಿ ಯೋಗಾರೂಢನಾದನು. ವಸುದೀಪ್ಯನು ಅನಿಮಿಷನಾದನು.

"ಅಂತರ್ಧಾನ"ವನ್ನು ಅನ್ಯಕ್ಷೇತ್ರದಲ್ಲಿ ನಿಕ್ಷೇಪಿಸುವಂತೆ ವೃಷಭನು ತನ್ನ ಆತ್ಮಲಿಂಗವನ್ನು ಪರರಿಗೆ ಧಾರೆಯೆರೆದು ಮಗುಳೆ ಶಿವಲೋಕಕ್ಕೆ ಬಂದನು. ಅವನ ಹೃದಯರಂಗದಲ್ಲಿ ಕತ್ತಲು ಕವಿಯಿತು. ಅವನಲ್ಲಿ ಅರಿವು ಅರತು ಮರವು ಮನೆಮಾಡಿಕೊಂಡಿತು. ಸೋಮಶೇಖರನ ಕಳಾಪ್ರಕೃತಿಯೇ ಬಂದು ಉಪಾಯದಿಂದ ಲಿಂಗವನ್ನು ಕೊಂಡೊಯ್ದನೆಂದು ಹಿಗ್ಗುತ್ತ ಕೈಲಾಸಕ್ಕೆ ಬಂದನು. ವೃಷಭನು ಕೈಲಾಸದ ಮಹಾದ್ವಾರಕ್ಕೆ ಬರಲು ದ್ವಾರಪಾಲಕರು ಅವನನ್ನು ಒಳಕ್ಕೆ ಬಿಡಲಿಲ್ಲ. ಸಿಂಗಕೇಶ ದ್ರವಿಡರಾದಿಯಾದ ದ್ವಾರಪಾಲಕರು ಲಿಂಗಬಾಹಿರನಾದ ಮಹಾಪಾಪಿಯನ್ನು ಶಿವಪುರವ ಹೊಗಲೀಸೆವೆಂದು ಅವನನ್ನು 'ಝಡಿದು' ಝಂಕಿಸಿ ನುಡಿಸು ಸೆಳೆಗೋಲನಿಂದ ನಾಲ್ಕು ಸಾರಿ ಬಿಗಿಯುತ್ತಾರೆ. ಶಿವನ ಪರಮಭಕ್ತನಾದ ನನಗೆ ದ್ವಾರಪಾಲಕರಿಂದ ಹೊರನೂಕಿಸಿಕೊಳ್ಳುವ

ಅವಸ್ಥೆ ಬಂದಿತೇ ' ಶಿವಧೋ ' ' ಶಿವಧೋ ' ಎಂದು ವೃಷಭನು ಕೂಗುತ್ತಿರಲು ಶಿವನು ಇದನ್ನರಿತು ತಾನೇ ಅಲ್ಲಿಗೆ ಬಂದು "ವೃಷಭಂಗೇಕೆ ಲಿಂಗ" "ತಾನೆ ಲಿಂಗ" ಎಂದನು. ದ್ವಾರಪಾಲಕನು "ಒಡೆಮುತ್ತು ಬೆಸುಗೆ, ಕಿಡಿ ಹೊಡೆದ ಹೊಸ ವಸ್ತ್ರ, ಅಮೃತಗೊಡಬೊಳೆಬಿಗಿದನಂಜು......ಹಿಡಿಪಡೆದ ವೀರ"–ಇವುಗಳಿದ್ದರೆಷ್ಟು, ಬಿಟ್ಟರೆಷ್ಟು ಎನ್ನುವರು. ನಿಯಮದ ಮೇರೆಯನ್ನು ಬಿಟ್ಟು ಒಂದು ಕೂದಲೆಳೆ ಯಷ್ಟೂ ಚಲಿಸದಿರುವ ದ್ವಾರಪಾಲಕರಿಗೆ ಶಿವನು ಪ್ರಶ್ನಿಸುತ್ತಾನೆ: "ಸಿದ್ಧರಸ ಹುಳಿವುದೇ?" 'ಕಲ್ಪವೃಕ್ಷದೊಳು ಕಪಟ ಫಲ ಪ್ರಬುದ್ಧತವೇ?" 'ಶುದ್ಧ ಪಂಚಾಕ್ಷರಿಗೆ ಭೂತಸೋಂಕೆ?" ವೃಷಭನು ಸರ್ವಾಂಗ ಲಿಂಗಿಯಲ್ಲವೆ? ಎಂದು ಶಿವನ ಶಿಷ್ಯರು ಅಗಲೂ ಬಗ್ಗಲಿಲ್ಲ ; ವಾದವನ್ನು ಮುಂದುವರಿಸಿಯೇಬಿಟ್ಟರು. " ಅತನಧಿಕತೆ ನಿಮ್ಮೊಲುಮೆ"! "ಮುದ್ರಾಭಂಗ, ವೇಶ್ಯೆಯ ಪತಿವ್ರತಾನೀತಿ" ಇವಕ್ಕೆ ಬೆಲೆ ಗಟ್ಟುವುದೆ? ಒಡೆದೋಡನ್ನು ತಿರುಗಿ ಕೂಡಿಸಿ ಜೆಸೆಯಲು ಸಾಧ್ಯವೆ? ಎಂದು ಮರಳಿ ಶಿವನನ್ನೇ ಪ್ರಶ್ನಿಸಿ ಅವನನ್ನು ಬೆರಗುಗೊಳಿಸಿದರು. ಶಿವನು ಅವರಿಗೆ ಉತ್ತರ ಹೇಳಲಾರದಾದನು. ಬಸವನನ್ನು ಕರೆದು " ನೀನಿಳೆಯೊಳವತರಿಸಿ ನಿಂದೆಯ ನೀಗಿ ಬಾ" ಎಂದು ಅವನಿಗೆ ಅಜ್ಞಾಪಿಸುತ್ತಾನೆ. ವೃಷಭನು ತನ್ನನ್ನು ಕಾಪಾಡಬೇಕೆಂದು ಶಿವನಲ್ಲಿ ಮೊರೆಯಿಟ್ಟನು. ಶಿವನು ವೃಷಭನಿಗೆ ಸಮಾಧಾನ ಹೇಳಿ 'ಅಲಸದಂತೀಗಲೇಳ್ಳೂಱಿಪ್ಪತ್ತ ಮರಗಣಕುಲ ಸಹಿತ ಹೋಗೆನುತ್ತಭಯಕರ ಕಮಲವನು ಶಿರದ ಮೇಲಿಟ್ಟು," "ನಿರ್ದೇಹನೊರ್ವ ಬಂದು ನಿಂದುದೆ ಕುಱುಹು ಅತನೇ ನಾನು" ಎಂದು ಹೇಳಿ ಆಶೀರ್ವದಿಸಿ ಧರೆಗೆ ಕಳಿಸಿದನು (೪).

ಶಿವನು ದ್ವಾರಪಾಲಕರನ್ನು ಕರೆದು " ಬಸವಣ್ಣನಂ ಧಿಕ್ಕರಿಸಿದುದಕೆ ನಿಮಗೊಂದುಭವವುಂಟು" ಎಂದು ಅಪ್ಪಣೆಯಿತ್ತನು. ದ್ವಾರಪಾಲಕರು ತಮಗೆ ಮೋಕ್ಷವೆಂದು ಎಂದು ಕೇಳಲು "ತಪ್ಪನಾಧಿಸಿ ಭಕ್ತರೊಳು ಭಕ್ತರಿಂದಲಳಿವಪ್ಪುದು ನಿಮಗೆ" ಎಂದು ಹೇಳಿದನು. ದ್ವಾರಪಾಲಕರಾದ ಸಿಂಗಕೇಶದ್ರವಿಡಾದಿಗಳೂ ಬುವಿಗಿಳಿದರು. ಸಿಂಗಕೇಶನು ಬಿಜ್ಜಳನಾಗಿಯೂ ದ್ರವಿಡನು ಕರ್ಣದೇವ ನಾಗಿಯೂ ಜನಿಸಿದರು.

ಬಸವಣ್ಣನು ಅದೃಶ್ಯಾಂಗನಾಗಿ ಹತ್ತೆಂಟು ವರ್ಷಗಳು ಭರತಖಂಡದ ತೀರ್ಥಕ್ಷೇತ್ರಗಳಲ್ಲೆಲ್ಲಾ ಸಂಚರಿಸಿ ತಾನು ಮುಂದೆ ಅಮಾತ್ಯನಾಗಿ ರಾಜ್ಯಭಾರ ವನ್ನು ವಹಿಸಲಿರುವ ಕಲ್ಯಾಣ ನಗರಿಯನ್ನು ಸಂದರ್ಶಿಸಿ ಇಂಗಳೇಶ್ವರದಾಗೆ ವಾಡಿಗೆ ಬಂದನು. ಅದೇ ಸಮಯಕ್ಕೆ ಸರಿಯಾಗಿ ಆ ಊರಿನ "ಮಹಾಗ್ರಾರದ ಗ್ರಭೂಸುರಶ್ರೇಷ್ಠ"ನಾದ ಮಂಡಿಗೆಯ ಮಾದಿಮರಸರ ಮಡದಿ ಮಾದಲಾಂಬಿಕೆ ಯು ಶಿವಾಯತನಕ್ಕೆ ಹೋಗಿ ನಂದೀಪೂಜೆ ಮಾಡುತ್ತಿದ್ದಳು. ಅವಳ ನಿಸ್ಸೀಮ ಭಕ್ತಿಗೆ ನಂದೀಶ್ವರನು ಮೆಚ್ಚಿ ಪ್ರಸನ್ನನಾಗಿ ಆಕೆ "ಪುತ್ರಾರ್ಥ ಭಿಕ್ಷೆಗೆ ಬಾಯಿತೆಱೆಯಲೊಳ ಹೊಕ್ಕನಾ ಚರವೃಷಭ ಸ್ಥಿರವೃಷಭನೊಳಗಿದ್ದು ಭಕ್ತಿ ಕೂರ್ತು." ಮಾದಲಾಂಬೆಯು ಗರ್ಭವನ್ನು ಧರಿಸಿದಳು. ಎಂದಿನಂತೆಯೇ

ಮಾದಲಾಂಬೆಯು ಗಾಢ ಭಕ್ತಿಯಿಂದ ನಂದೀವ್ರತವನ್ನು ನಡೆಸಿಕೊಂಡೇ ಬರುತ್ತಿದ್ದಳು.

ಆಯಾ ಕಾಲದಲ್ಲಿ ಗರ್ಭದಾನ ಪುಂಸವನಾದಿಗಳು ನೆರವೇರಿದುವು. ಶುಭ ಯೋಗದಲ್ಲಿ 'ಬಾಲ ಭಾಳನೇತ್ರನು' ಉದಯಿಸಿದನು. ಆದರೂ ಬಾಲಚೇಷ್ಟೆ ಯಿಲ್ಲ, ಅಳುವಿಲ್ಲ, ಕಣ್ಣು ತೆರೆಯಲಿಲ್ಲ. ಮಾದಿರಾಜನು ಮಾಡಿಸಿದ ಯಂತ್ರ ತಂತ್ರಾದಿಗಳು ಆ 'ರೋಗ'ವನ್ನು ಹೋಗಲಾಡಿಸಲಿಲ್ಲ. ಕೃಷ್ಣವೇಣೀಸಂಗಮ ದಿಂದ ಅಲ್ಲಿಗೆ ಬಂದಿದ್ದ ಜಾತವೇದಿಗಳೆಂಬ ಮಹಾಗುರುಗಳು ಮಾದರಸನ ಮನೆಗೆ ಬಿಜಯಂಗೈಸಿ ಬಸವಶಿಶುವನ್ನು ಸಂದರ್ಶಿಸಿ ಪಂಚಾಕ್ಷರೀ ಮಂತ್ರವನ್ನು ಉಚ್ಚರಿಸುತ್ತ ಮಗುವಿಗೆ ವಿಭೂತಿಯನ್ನು ಧರಿಸಿದಕೂಡಲೇ ಆ ಶಿವಶಿಶುವು ಕಣ್ದೆರೆದು ಕೈಕಾಲು ಆಡಿಸುತ್ತಾ ಅಳುವುದಕ್ಕೆ ಮೊದಲುಮಾಡಿತು. ವೃಷಭ ವ್ರತದ ಫಲವಾಗಿ ಹುಟ್ಟಿದ ಈ ಶಿಶುವಿಗೆ ವೃಷಭನೆಂದೇ ಕರೆಯಿರಿ ಎಂದು ಹೇಳಿ "ಆಶ್ವೀಜಮಾಸ ಶುದ್ಧ ಚತುರ್ದಶಿಯ ಹಿಮಕರವಾರ ಹಿಮಕರಾದ್ರ್ರಸ್ಥಶಿವ ಯೋಗಗೂಡಿರೆ" ಶಿವಯೋಗದಲ್ಲಿ ಜನಿಸಿದ ಇವನು ಶುದ್ಧಶಿವಯೋಗಿಯಾಗಲೇ ಬೇಕು, ಒಂದು ಲಿಂಗವನ್ನು ಈತನಿಗೆ ಕೊಡುತ್ತೇವೆ," ಇಷ್ಟಾಕೃತಾರ್ಥಬಂದೊಲಿ ದಿತ್ತೆವಾಗಿ ತನ್ನಿಷ್ಟಲಿಂಗಮದಕ್ಕು; ಈ ಲಿಂಗಮಂ ಸಿಂಹವಿಷ್ಟರದೊಳಿಟ್ಟರ್ಚಿಸಿ," ಶಿವಪ್ರಸಾದವಲ್ಲದುದನ್ನು ಮಗುವಿಗೆ ಮುಟ್ಟಿಸಬೇಡಿರೆಂದು ತಿಳಿಸಿ ಹೋದರು. ಸುಮುಹೂರ್ತದಲ್ಲಿ ಮಗುವನ್ನು ತೊಟ್ಟಿಲಗೆ ಹಾಕಿದರು. ಸತ್ಯವನ್ನು ನಿತ್ಯಪೀಠ ದೊಳಿರಿಸುವಂತೆ, ಪರತತ್ವವನ್ನು ಪ್ರಣವದ ಹಾಸಿಗೆಯ ಮೇಲಿಡುವಂತೆ. ಅಣು ವಿಗೆ ಅಣುವಾದ ಮಹತ್ತಿಗೆ ಮಹತ್ತಾದ ಆ ಶಿಶುವು ಎಲ್ಲರ ಕಣ್ಣಾಗಿ ಬೆಳೆಯಿತು. ಆ ಅತ್ಯತಿಷ್ಟದ್ದಶಾಂಗುಲನನ್ನು ಬಾಲೆಯರು ತೊಟ್ಟಿಲಲ್ಲಿಟ್ಟು ತೂಗಿದರು. ಪರಮ ಹಂಸಪವನನೇ "ಲಲನೆಯರ ಗಳದಳದಿ ನಿಂದು" ರಾಗಿಸುವಂತೆ "ಜೋಗುಳ ವೆಸೆದುದು".

"ಬಸವಂಗೆ ಬಾಲ್ಯತೆಯ ಶಶಿಧರಗೆ ವೃದ್ಧತೆಯನುಸುರ್ವರುಸುರಲಿ" "ಗುರುವ ನರಭಾವಕೆ ಲಿಂಗವ ಶಿಲಾಭಾವಕೆ" ಇಕ್ಕುವುದು ಹೊಲ್ಲ. "ಬಸವವೆಸ ರಿನ" ಎಳೆಯ ಕಲ್ಪತರುವು ದಿನದಿನಕ್ಕೆ ಬೆಳೆಯಿತು. ಈಶಾರ್ಪಿತವಾದ ಪ್ರಸಾದ ವನ್ನೇ ಮಗುವಿಗೆ ಉಣಿಸುವರು. "ಲಿಂಗಮುಖದೊಳಲ್ಲದೆ ಜಗನ್ಮಾತೆಮಾದಾಂಬಿ ಕೆಯದೊಂದನಾ ಶಿಶುವಿಗೆ, ಸುನೀತೆ, ಮುಟ್ಟಿಸದೆ ಮಾರ್ಗಾಚಾರಮಾತೆ ಯಾದಂತೆ" ರಕ್ಷಿಸುತ್ತಿದ್ದಳು. ಮಗುವಿಗೆ ಚೌಲಾದಿ ಕರ್ಮಗಳು ನಡೆದುವು. 'ಆಡುವೊಡೆ' 'ನೋಡುವೊಡೆ' 'ಕೂರ್ತುಮಾತಾಡುವೊಡೆ' ಶಿವನ, ಶಿವನವರ ಲೀಲೆಯಲ್ಲದೆ ಬೇರೊಂದಿಲ್ಲ, ಯಾವಾಗಲೂ ಗುರುಲಿಂಗ ಜಂಗಮಸೇವೆ. ಹೀಗಿರಲು ಮಗುವಿಗೆ ಎಂಟು ತುಂಬಿತು.

ಬಾಲಕ ಬಸವನಿಗೆ ಉಪನಯನ ಸಂಸ್ಕಾರ ಮಾಡುವುದಕ್ಕಾಗಿ, ಅವನನ್ನು ಹಡೆದವರು ಸಕಲ ಪಡಿ ಪದಾರ್ಥಗಳನ್ನೂ ಅಣಿ ಮಾಡಿಕೊಂಡರು ಶುಭ

ಯೋಗದಲ್ಲಿ ತಮ್ಮ ಕುಲದ ಆಚಾರ್ಯರನ್ನು ಬರಮಾಡಿಕೊಂಡು ಸಂಪ್ರದಾಯಾನುಸಾರವಾಗಿ ನಾಂದಿ, ಪುಣ್ಯಾಹವೇ ಮೊದಲಾದ ಕರ್ಮಗಳನ್ನು ಮಾಡಿ ಬಸವೇಶನ ಕಟಿಗೆ ಮುಂಜಿಗಟ್ಟಿ, ಯಜ್ಞಸೂತ್ರವನ್ನಿಕ್ಕಿ ಕೌಪೀನವನ್ನು ಹಾಕಿ, ಕೃಷ್ಣಾಜಿನವನ್ನು ಹೊದಿಸಿ, ಒಂದು ಕೈಯಲ್ಲಿ ಹೇಮಪಾತ್ರೆ ಮತ್ತೊಂದು ಕೈಯಲ್ಲಿ ಪಾಲಾಶ ದಂಡವನ್ನು ಕೊಟ್ಟು, ಬಸವನನ್ನು ಕುರಿತು 'ಧೂಮಧ್ವಜಕ್ಕೆರಗು, ಉಪಾಧ್ಯರಿಗೆ ವಂದಿಸು' ಎನ್ನಲು ಆಗ ಬಸವೇಶ್ವರನು 'ಬಾಲದೊಡಿಗೆಯ ತೊಡಿಸುವಂತಿದೊಂದುತ್ಸಾಹ ಲೀಲೆ' ಎಂದುಕೊಂಡಿದ್ದ ; ಆದರೆ ಇದು ಬೇರೆಯ ಮಾರ್ಗವಾಗಿರುವಂತೆ ತೋರುತ್ತದೆ, ಎನ್ನುತ್ತ ಮೌಂಜಿ ಮುಂತಾದುವನ್ನು ಹರಿಯಲನುವಾದನು. "ಹೊಲಬುಗೆಡಿಸುವೊಡೊಡಂಬಡಬಹುದೆ? ಅಂಥ ಪಾರಂಪರೆಯ ಜಾತ್ಯಂಧವಳಿಯೊಳೊಬ್ಬ ಮಳಾಕ್ಷನುದಿಸಿ ದರ್ಪಣ ಗಂಡು ಕಣ್ಮುಚ್ಚುವನೆ ?" ಎಂದು ಅವರ ಮತವನ್ನು ಖಂಡಿಸುತ್ತ "ಸೌಂದರಾಮ್ನಾಯುವರ್ತಿಯ ತೋಱಿದನನಾದಿ ಬ್ರಹ್ಮಾಚಾರ್ಯನು." ನೆರೆದಿದ್ದ ಬಂಧು ಬಾಂಧವರು 'ನೀ ಪರಮ ಕಾರುಣಿಕ' 'ಎತೆಱದೊಳಿವನೀಗ ಪರಿಹರಿಸದಿರು, ತಾನೆ ಬೀತು ಬಿನ್ನಣವಳಿದು' ಹೋದಾಗಲೆ ಹೋಗಲಿ ಎನ್ನಲು ಬಸವೇಶ್ವರನು ಅದಕ್ಕೆ ಒಡಂಬಟ್ಟು ಸುಮ್ಮನಾದನು.

ಸಂಪ್ರದಾಯಕ್ಕೆ ತಲೆತಗ್ಗಿಸದ ಬಸವೇಶ್ವರನನ್ನು ಕಂಡು ಎಲ್ಲರ ಹೊಟ್ಟೆಯಲ್ಲಿಯೂ ಕಿಚ್ಚೆದ್ದಿತು. ಬಾವಿಯ ಬಳಿ ಆ ಊರ ಹುಡುಗರು ಆಟವಾಡುತ್ತಿದ್ದಾಗ ಒಬ್ಬ ಹುಡುಗನು ಬಾವಿಯಲ್ಲಿ ಜಾರಿ ಬಿದ್ದು ಸಾಯಲು ಬಸವೇಶ್ವರನೇ ಆ ಹುಡುಗನನ್ನು ಬಾವಿಗೆ ನೂಕಿದನೆಂದು ದೂರುತ್ತ ಆ ಬ್ರಾಹ್ಮಣ ಬಾಲಕನ ಬಳಗವೆಲ್ಲವೂ 'ಖೋ' ಎಂದು ಅಬ್ಬರಿಸುತ್ತ ಬಸವೇಶ್ವರನನ್ನು ಮುತ್ತಿತು. ಬಸವೇಶ್ವರನು ತಪ್ಪಿಸಿಕೊಂಡು ಮನೆಗೆ ಓಡಿಬಂದು, ಒಳಗೆ ಹೋಗಿ ತನ್ನ ಲಿಂಗವನ್ನು ತೆಗೆದುಕೊಂಡು ತಂದೆತಾಯಿಗಳಿಗೆ 'ಬೆಬ್ಬಳಗೊಳುತುಸುರ್ದ' 'ಬೇರೊಂದು ಬಾಗಿಲಗಳದು ಕಪ್ಪಡಿಯ ಸಂಗಮದ ದೆಸೆಗೆ ಸೈವರಿದ.' ಬ್ರಾಹ್ಮಣರ ಪಡೆಯೂ ಬೆನ್ನಟ್ಟಿತು. ಬಸವನು ಬೀಳುತ್ತ, ಏಳುತ್ತ ಓಡಿಹೋಗಿ ಕೃಷ್ಣಾನದಿಯನ್ನು ಹೊಕ್ಕನು. ನದಿಯು ಇಬ್ಬಾಗವಾಯಿತು, 'ಮಟ್ಟಿಯ ಮರುಳ್ತಂಡವು' ಎದುರು ದಡವನ್ನು ಮುಟ್ಟಿದ ಬಸವನನ್ನು ಕಂಡು 'ಬೆರಗಿನ ಬೆಳೆಯ ಕೇಣಿಗೊಂಡಂತಾದರು'. ಬಸವೇಶ್ವರನು ಕಪ್ಪಡಿಯ ಸಂಗಮೇಶ್ವರನ ಗುಡಿಯನ್ನು ಹೊಕ್ಕು ತಾನು ಹುಟ್ಟಿದೊಡನೆಯೇ ಬಂದು ಲಿಂಗಧಾರಣೆ ನಾಮಕರಣಮಾಡಿ ಹೋಗಿದ್ದ ಜಾತವೇದ ಮುನಿಗಳಿಗೆ ವಂದಿಸಿ ಅವರೊಡನೆ ಇನ್ನೂ ಮಾತಾಡುತ್ತಿರುವಾಗಲೇ ವಿಪ್ರರು ಬಂದು ಶಿವಭವನಕ್ಕೆ ದಾಳಿಯಿಟ್ಟರು. ಜಾತವೇದಮುನಿಗಳು 'ಇವನುತಗದ ಕಾರ್ಯವನ್ನು ಮಾಡಿದುದೇನು?' ಎಂದು ಪ್ರಶ್ನಿಸಲು ಬ್ರಾಹ್ಮಣರು ಒಂದೇ ಉಸಿರಿನಲ್ಲಿ ಸಂಗತಿಯನ್ನೆಲ್ಲಾ ತಿಳಿಸಿದರು. ಬಸವೇಶನು ತಾನು ಆ ಬ್ರಾಹ್ಮಣ ಬಾಲಕನ ಸಾವಿಗೆ ಹೊಣೆಯಲ್ಲವೆಂದು ಹೇಳಿದರೂ ಬ್ರಾಹ್ಮಣರು ಒಡಂಬಡಲಿಲ್ಲ. ಕೊನೆಗೆ ಬಸವನು ನಿರಪರಾಧಿಯೆಂದು ಶಿವನೇ ನುಡಿದರೆ

ಅವನನ್ನು ಕೈಬಿಡುತ್ತೇವೆಂದು ಹೇಳಿದರು. ಬಸವೇಶ್ವರನು ಶಿವಲಿಂಗದ ಬಾಯಿಂದಲೇ ಸಾಕ್ಷಿ ನುಡಿಸಿದನು. ಬ್ರಾಹ್ಮಣರು ಮುಂದುಗಾಣದೆ ಹಿಂದಕ್ಕೆ ತಿರುಗಿದರು. ಬಸವನ ಮಹಿಮೆಯನ್ನು ಕಂಡು ಅಲ್ಲಿ ನೆರೆದಿದ್ದವರೆಲ್ಲರೂ ಅಚ್ಚರಿಗೊಂಡರು. 'ಶಿವನು ತಾನೋ, ತಾನೇ ಶಿವನೋ' ಎನ್ನುತ್ತ ಬಸವೇಶ್ವರನಿಗೆ ಉಪಚಾರಮಾಡಹತ್ತಿದರು. ಬಸವಣ್ಣನ ಕೀರ್ತಿಯನ್ನು ದೆಸೆದೆಸೆಗೆ ಉಸುರಲೋ ಎಂಬಂತೆ 'ಭೇರಿ ನಿಸ್ಸಾಳಘೋಷ್ಮದವು', 'ಮಂಗಳತೂರ್ಯ ವಾಸಗಿದುವು.' ಭಕ್ತರೆಲ್ಲರೂ ಸೇರಿ ಬಸವೇಶ್ವರನಿಗೆ 'ಸಂಗಮೇಶ್ವರನ ಶರಣಾದ್ಯ ಪಟ್ಟಂಗಟ್ಟಿ'ದರು. ಬಸವನು ಅಲ್ಲಿಯೇ ನೆಲಸಿದನು. ಮಗನನ್ನು ನೋಡುವುದಕ್ಕೆಂದು ಬಂದಿದ್ದ ಮಾದರಸಮಾದಲಾಂಬಿಯರು 'ಮನೆಗೆ ಬಾ' ಎಂದು ಕರೆದರೂ ಬಸವೇಶನು ಹಿಂದಿರುಗಲಿಲ್ಲ ; ಪರುಷಮುಟ್ಟಿದ ಕಬ್ಬಿಣ ತಿರುಗಿ ಕಬ್ಬಿಣವಾಗಲಿಲ್ಲ. ಎಷ್ಟು ಬೇಡಿಕೊಂಡರೂ ಇವನು ಬರುವವನಲ್ಲವೆಂದು ತಿಳಿದ ಮೇಲೆ ಅಳಿಯ ಶಿವದೇವನನ್ನೂ, ಮಗಳು ನಾಗಾಯಿಯನ್ನೂ ಅವನ ಸೇವೆಗಾಗಿ ಅಲ್ಲಿಯೇ ಬಿಟ್ಟು ಮಾದರಸಮಾದಲಾಂಬೆಯರು ಹಿಂತಿರುಗಿದರು.

ಒಂದು ದಿನ ಮುಗ್ಧಬಾಲಕ ಬಸವೇಶ್ವರನು ಸಂಗಮನಾಥನನ್ನು ಪೂಜೆಗೈದು 'ಎಡೆ'ಮಾಡಲು 'ಎಡೆ'ಯೊಳಗಿನ ಅನ್ನವು ರವೆಯಷ್ಟೂ ಕಡಮೆಯಾಗದಿದ್ದುದನ್ನು ಕಂಡು "ಲಿಂಗಮುಖಪಱಿಯೆ "ಎಂದು ಲಿಂಗದ ಮಸ್ತಕದ ಮೇಲೆ ಎಡೆಯ ಅನ್ನವನ್ನೆಲ್ಲಾ ಒಟ್ಟಿದನು. ಅವನ ಮುಗ್ಧಭಕ್ತಿಗೆ ಮೆಚ್ಚಿ ಪ್ರಸನ್ನನಾಗಿ ಚರಲಿಂಗರೂಪಿನಿಂದ ಕಾಣಿಸಿಕೊಂಡು "ಇದಾವಾಗಮದ ಪರಿ" ಎಂದು ಶಿವನನ್ನು ಕುರಿತು ಬಸವೇಶ್ವರನು "ನೈಧಾನವಿಸ್ತರೆಯಾಗದಿರಲು ಮುಖದಪ್ಪಿತೆಂದೀ ಮುಖದಿನಿರಿಸಿದೆ" ಎಂದನು. ಆಗ ಶಂಕರನು ಲಿಂಗಸಂತರ್ಪಣೆಯ ಮುಖವಿದಲ್ಲ, ಇಂದು "ಐ ಮುಖಕ್ಕೈದುಗಣ ಮುಖದಿ ನಿನ್ನಮನೆಗೈದಿರದಿರ್ದೊಡೆ ಸರ್ವಜ್ಞರಾವಲ್ಲ ನಿನಗದೇದೃಷ್ಟ ಹೋಗೆಮ್ಮಯ್ಯ" ಎಂದು ಮತ್ತೆ ಲಿಂಗದಲ್ಲಿ ಲೀಯವಾದನು. ಮನೆಗೆ ಬಂದು ನೋಡುತಾನೆ: ಐದು ಜನ ಗಣಂಗಳು ಬಂದಿದ್ದರು. "ಮನಮುಟ್ಟಿ ಸಾಷ್ಟಾಂಗ ಪ್ರಣತನಾದನು," "ನಂಬಿಗೆಯುಂಬಿಟ್ಟು"; "ನವನಿಧಿಗಿದು ನಿಧಾನವಾಯ್ತು, ಕಟ್ಟೆಗಟ್ಟಿತ್ತು ವಿಶ್ವಾಸ, ಜಂಗಮಭಕ್ತಿ ಪಟ್ಟಗಟ್ಟಿತು ತನುಮನಧನಂ ಮುಂಗುಡಿಯ ಕಟ್ಟಿತ್ತು" ಬಸವೇಶ್ವರನು ಲಿಂಗಮುಖಿಗಳ ಸೇವೆಗೈಯುತ್ತ ಸಂಗಮನ ಸನ್ನಿಧಿಯಲ್ಲಿ ಸುಖದಿಂದಿದ್ದನು (೫).

ಬಸವಣ್ಣನ ಅಪಾರಭಕ್ತಿಯ ಅಳವನ್ನೂ, ಆಳವನ್ನೂ ಅಳೆಯುವುದು ಅಸಾಧ್ಯ ಅನುಚಿತ, "ಜಲಕ್ಕೆ ಜಲಸ್ನಾನಮಾಡಿಸಿದಂತೆ, ಮಂತ್ರಕ್ಕೆ ಮಂತ್ರೋಪದೇಶಮಾಡಿದಂತೆ." ಅವನ ಭಕ್ತಿಯ ಬೀಜಕೋಶದಿಂದ ಹೊರಬಿದ್ದ ಬೀಜಗಳು ಸುಕ್ಷೇತ್ರದಲ್ಲಿ ಬಿತ್ತಲ್ಪಟ್ಟು, ಮೊಳೆತು, ಚಿಗಿತು. ಕುಡಿವರಿದು, ಬೆಳೆದ ಬೆಳಸು ಜಂಗಮರಿಗೆ ನಿವೇದಿಸಲ್ಪಡುವುದು. ಬಸವನ ಗಾಢಭಕ್ತಿಯ ಹಿರಿಮೆಗೆ ಮಾರುವೋಗಿ ದೇಶದ ಮೂಲೆಮೂಲೆಗಳಿಂದ ಮಹೇಶ್ವರ ಸ್ತೋಮವು ಬಂದು ಪೂಜೆ

ಪುರಸ್ಕಾರಗಳನ್ನು ಸ್ವೀಕರಿಸುತ್ತಿತ್ತು. "ಅಖಿಳ ಶಿವಪೌರಾಣ ಪಠಿಸಲ್ತೊಡಗಿತ್ತು" "ಆನಂದರಸ ಸರಿವಳೆಗಟಿಯಲ್ತೊಡಗಿತು."

ಭಾದ್ರಪದ ಬಹುಳ ಷಷ್ಠಿ ಮಂಗಳವಾರ ಕಪಿಲಷಷ್ಠಿಯಾದುದರಿಂದ ಅಂದು ಸೀಮೆಯ ಶಿವಭಕ್ತಕುಲವೆಲ್ಲಾ ನೆರೆಯಿತು. ವಿಪ್ರಸಂದೋಹವು ಸಂಗಮನಾಥನನ್ನು "ಗೋಕಲ್ಪೋಕ್ತ"ದಂತೆ ಅರ್ಚಿಸಿರಲು ಬಸವೇಶ್ವರನೂ ಎಂದಿನಂತೆ ಹೂವು ಪತ್ರೆಯನ್ನು ತಿರಿತಂದು ಆ "ಮಹಾಪೂಜೆ"ಯನ್ನು ಪರಿಹರಿಸಿ ತಾನು ತನ್ನ ರೀತಿಯಲ್ಲಿ ಸಂಗಮನನ್ನು ಪೂಜಿಸುತ್ತಿರಲು ಅಲ್ಲಿದ್ದ "ವಿಪ್ರಾಳಿ"ಯು ನೋಡಿ ಬಸವೇಶನಮೇಲೆ ಕೋಪಗೊಂಡು "ಕೊಂದುಹಾಕೆಳೆನೂಕು" ಎಂದು ಅರುಚುತ್ತ ಬಸವಣ್ಣನನ್ನು ಮುತ್ತಿದರು. ಅಲ್ಲಿದ್ದ ಜ್ಞಾನಿಗಳು ಬಂದು ವಿಪ್ರರಿಗೆ ಬುದ್ಧಿಹೇಳಿದರೂ ಅವರು ಕೇಳಲಿಲ್ಲ. ಘರ್ಷಣೆಗೆ ಮಿತಿಮೀರಿತು, ಅಷ್ಟರಲ್ಲಿಯೇ ಬ್ರಹ್ಮನಾದವೊಂದು ಶಿವಲಿಂಗಶಿರದಿಂದ ಹೊರಟು ಬಸವನು ಮಹಿಮಾಪುರುಷನು ಅವನು ಮಾಡಿದ ಪೂಜೆಯೇ ನನಗೆ ಮೆಚ್ಚಿಗೆ ಎಂದು ಸಾರುವುದು. ಆವೇಳೆ ಬಸವೇಶ್ವರನನ್ನು ಬಯ್ಯುತ್ತಿದ್ದ ಬಾಯಿಗಳು ಭಜಿಸಹತ್ತಿದುವು, ಹೊಡೆವ ಕೈಗಳು ಮುಗಿದುವು. ಎಲ್ಲರೂ ಬಸವೇಶ್ವರನನ್ನು ಹೊತ್ತು ಮೆರೆಸಿದರು; ಹಾಡಿ ಹರಸಿದರು. "ಬಸವನಾಮಕಲ್ಪತರು"ವು ಭಕ್ತನ ಹೃದ್ಧ್ಯಾನಮಧ್ಯಸ್ಥಳದಲ್ಲಿ ನೆಲೆಗೊಂಡು, ಆನಂದದ ಅಂಕುರವಾಗಿ, ಉತ್ಸಾಹದ ಎಲೆಯಿಕ್ಕಿ ಜ್ಞಾನ ಕವಲ್ತು, ಆಚಾರವೆಂಬ ಚಿಗುರೇರಿ ಪುಳಕದ ಮೊಗ್ಗುಬಿಟ್ಟು ಸ್ವಾನುಭವ ಹೆಚ್ಚುತ್ತ ಹೆಚ್ಚುತ್ತ ಬಲಿದು ಮೋಕ್ಷವೆಂಬ ಅಮೃತಫಲವನ್ನು ಹೊಂದಿತು.

ಬಸವಣ್ಣನ ಕೀರ್ತಿಭಾನುವಿನ ಪ್ರಭೆಯು ಕಲ್ಯಾಣ ನಗರಕ್ಕೂ ಪಸರಿಸಿತು. ಅಲ್ಲಿ ಮಂತ್ರಿಯಾಗಿದ್ದ ಬಲದೇವನು ಬಸವೇಶನ ಸಂಗತಿಯನ್ನು ಕೇಳಿ ಆನಂದಪಟ್ಟನು. ನಮ್ಮ "ಮಾತಾಮಹರ ದೆಸೆಯ ವಳಿಯಿಂದ" ಅವನು ನಮ್ಮ (ತಂಗಿಯ ಮಗ) ಅಳಿಯನಾಗಬೇಕು, ನನ್ನ ಮಗಳು ಗಂಗಾಂಬೆಯನ್ನು ಅವನಿಗೆ ಧಾರೆಯೆರೆದು ಕೊಡಬೇಕೆಂದು ನಿಶ್ಚಯಿಸಿದನು. ಬಸವಣ್ಣನನ್ನು ಕರೆತರುವುದಕ್ಕಾಗಿ ಓಲೆಕಾರರನ್ನು ಕಳುಹಿಸಿಯೇಬಿಟ್ಟನು. ಬಸವೇಶ್ವರನು ಜಾತವೇದಮುನಿಗಳ ಸನ್ನಿಧಿಯನ್ನು ತೊರೆಯಲು ಇಷ್ಟವಿಲ್ಲದೆ ಮನಸ್ಸಿಲ್ಲದ ಮನಸ್ಸಿನಿಂದ "ಉರಿಬರಲಿ ಸಿರಿ ಬರಲಿ," "ಬೇಕು ಬೇಡೆನ್ನೆ" ಎಂಬ ಗೀತೆಯನ್ನು ಹಾಡುತ್ತ "ಸದುಭಾವ ಸ್ವಸ್ಥಾನಕ್ಕೈದಲುದ್ಯೋಗಿಸುವೊಲು" ಪಯಣಕ್ಕೆ ಅಣಿಯಾದನು.

ಇತ್ತ ಬಸವೇಶ್ವರನ ಬರವನ್ನೆ ಕಾಯುತ್ತಿದ್ದ ಬಲದೇವ ಮಂತ್ರಿಯೂ ಅವನ ಬಂಧುಮಿತ್ರಾದಿಗಳೂ ಅತ್ಯಂತ ಸಂಭ್ರಮದಿಂದ "ವಿವಾಹೋನ್ನತ ಸುಸಾಧನ"ವನ್ನು ಅಣಿಮಾಡುತ್ತಿದ್ದರು. ಬಸವೇಶ್ವರನು ಬಂದುದೇ ತಡ, ಬಲದೇವಮಂತ್ರಿಯು ಅವನನ್ನು "ಭಾಗ್ಯವನು ಅಪ್ಪಿಕೊಳ್ಳುವಂತೆ" ಅಪ್ಪಿಕೊಂಡು ದಂಡಿಗೆಯಲ್ಲಿ ಮೆರೆಸುತ್ತ ಶಿವಜ್ಞಾನಿ ಸೊಡ್ಡಳಬಾಚರಸರ ಮನೆಗೆ ಕರೆತಂದನು.

ಶುಭಮುಹೂರ್ತದಲ್ಲಿ ಬಸವೇಶ್ವರ ಗಂಗಾಂಬೆಯರ ಮದುವೆಯು ನಡೆಯಿತು. ಬಲದೇವನು "ಸುತೆಯ ಸುಕೃತಕೊಪ್ಪಿಸುವೊಲು" ಬಸವೇಶ್ವರನಿಗೆ ಒಪ್ಪಿಸಿದನು.

"ಬಲದೇವ ಮದುವೆಯಂ ಮಾಡಿ ಕೆಲವಾನ್ದಿನಕ್ಕಳಿದಡಾಪದವ ಬಸವಂಗಿತ್ತರೆಂಬ ಕೃತಿವಳಕೆಯುಂಟು," ಅದು ಸುಳ್ಳು. ಸೊಡ್ಡಳಬಾಚರಸನು ಬಸವೇಶನ ನಡೆ, ನುಡಿ, ಆಚಾರ, ಅನುಭವಗಳನ್ನು ಕಂಡು ಮೆಚ್ಚಿ ಅವನನ್ನು ಕರಣಶಾಲೆಯಲ್ಲಿ ಸೇರಿಸಿಕೊಂಡನು. ಬಸವೇಶ್ವರಗಂಗಾಂಬೆಯರು ಸ್ವಾರ್ಜಿತಧನದ ಸಹಾಯದಿಂದ ಗುರುಲಿಂಗಜಂಗಮಸೇವೆ ಮಾಡಲು ಶಕ್ತರಾದರು. ಬಸವೇಶ್ವರನ ಕೀರ್ತಿಯು ದೇಶದಲ್ಲೆಲ್ಲಾ ಪಸರಿಸಿತು. ಆಗಲೇ ನಾಡಿನ ಮೂಲೆ ಮೂಲೆಗಳಿಂದ ಬರಹತ್ತಿದ ಜಂಗಮರ ಸಂಖ್ಯೆ ಮಿತಿಮೀರಿತು. ಸಂಗಮನಾಥನಿಗೆ ಬಸವೇಶ್ವರನ ಕಷ್ಟ ಮನವರಿಕೆಯಾಯಿತು. ಆದುದರಿಂದ "ಯಕ್ಷಸಾಕಲ್ಯ" ನೊಬ್ಬನನ್ನು ಕರೆದು ಒಂದು ಓಲೆಯನ್ನು ಕೊಟ್ಟು ಅದನ್ನು ಬಿಜ್ಜಳನ ಆಸ್ಥಾನದಲ್ಲಿ ಹಾಕಬೇಕೆಂದು ಅಪ್ಪಣೆಯಿತ್ತು ಕಳುಹಿದನು (೬).

ಬಿಜ್ಜಳನ ಸಭೆ. ಮಹಾವೀರರು, ಘನವಿದ್ವಾಂಸರು, ಕಲಾವಿದರು, ರಾಯಸದವರು, ಸಕಲ ಲಿಪಿಗಳನ್ನೂ ಅರಿತವರು—ಎಲ್ಲರೂ ನೆರೆದಿದ್ದರು. ಆಕಾಶದ ದೆಸೆಯಿಂದ ಓಲೆಯೊಂದು ಬಿಜ್ಜಳನ ಎದುರಿಗೆ ಬಿದ್ದಿತು. ಅರಸನು ಆ ಓಲೆಯನ್ನು ಕೈಯಲ್ಲಿ ತೆಗೆದುಕೊಂಡು ನೋಡಿದೊಡನೆಯೇ "ಕಣುಕೀಲಿಸುವೋಲಾಗಲು" ಅತಿಭೀತಿಯಿಂದ ಸಚಿವರ ಕೈಗೆ ಕೊಟ್ಟನು ಅವರು ಅದನ್ನು ಓದಲು ಪ್ರಯತ್ನಿಸಲು "ಅಲಿ ಸಿಡುವಂತಹುದು ತುಟಿಮಿಡುಕತೆಱಹಿಲ್ಲ!" ಗಣಕರು, ವಿದ್ವಾಂಸರು, ಆಗಮಿಕರು, ಕವಿಗಳು, ಗಮಕಿಗಳು, ವಾದಿಗಳು, ವಾಗ್ಮಿಗಳು, ಐವತ್ತಾರು ಭಾಷೆಗಳನ್ನು ಬಲ್ಲವರು ಯಾರಿಂದಲೂ ಆ ಓಲೆಯನ್ನು ಓದುವುದಕ್ಕಾಗಲಿಲ್ಲ. ಅದೇ ಸಮಯದಲ್ಲಿ ಬಸವೇಶ್ವರನಿಗೆ "ನೀನು ಬಿಜ್ಜಳನ ಸಭೆಯಲ್ಲಿ ಬಿದ್ದಿರುವ ಮಾಯದ ಓಲೆಯನ್ನು ಓದು" ಎಂಬ ವಾಣಿ ಕೇಳಿಸಿತು. ಬಸವಣ್ಣನು ಇದು ಸಂಗಮನಾಥನ ನಿರೂಪವೇ ಇರಬೇಕೆಂದು ಭಾವಿಸಿ ಅಲ್ಲಿದ್ದ ಗಣಕರಿಗೆಲ್ಲಾ ತಾನು ಆ ಲಿಖಿತವನ್ನು ಓದುವೆನೆಂದು ತಿಳಿಸಿದನು. ಅವರು ಮನಬಂದಂತೆ ಹಾಸ್ಯಮಾಡುತ್ತಿರಲು ಬಸವೇಶ್ವರನು "ನಾಡನಾಡಲಿವೇಕೆ, ನಗರೇಕೆ?" "ಈ ಲಿಪಿಯ ಗೂಢಗೆಡಿಸುವೆನಲ್ಲದೆ ಬಿಡೆನು" ಎಂದನು. ಈ ಮಾತನ್ನು ಕೇಳಿದ ಗಣಕರಲ್ಲಿ ಯಾರೋ ಆಗಲೇ ಬಸವನು ಓದುವನಂತೆ ಎಂದು ಬಿಜ್ಜಳರಾಜನಿಗೆ ತಿಳಿಸಿಬಿಟ್ಟಿದ್ದರು. ಬಿಜ್ಜಳರಾಜನ ಕಡೆಯಿಂದ ಕರೆಯೂ ಬಂದಿತು. ಬಸವೇಶ್ವರನು ಕಲಚೂರಿ ಚಕ್ರವರ್ತಿ ಬಿಜ್ಜಳನ "ಸಭಾಶರಧಿಮಥನಕ್ಕೆ ಶಿವನಾಡಿಸುವ ಮಂಧರದೊಲು" ನಡೆತಂದನು.

ಹಣೆಯಲ್ಲಿ ವಿಭೂತಿ, ಕಂಠದಲ್ಲಿ ರುದ್ರಾಕ್ಷಿಮಾಲೆ, ಮಾಸಿದ ಬಟ್ಟೆ, "ನಡುಗಟ್ಟಿಗಮರ್ಚಿದ ಕಂಠ", ಬಡವಾದ ಶರೀರ, ಹುರುಳಿಲ್ಲ ಹರೆಯವಿಲ್ಲ,

ದೊರೆಯ ಮುಂದೆ ಬಂದು ನಿಂತನು. ಮಂತ್ರಿಗಳ ಕೈಯಿಂದ ಆ ಲಿಖಿತವನ್ನು "ಸೆಳೆದುಕೊಂಡು" ಅದಕ್ಕೆ ನಮಿಸಿ ಕಣ್ಣಿಗೆ ಒತ್ತಿಕೊಂಡು ಓದಿನೋಡಿ "ವಸ್ತುವಱು ವಸ್ತ್ರಾಱು ಕೋಟಿಯಂ ತೋಱುವ ಸುವಸ್ತುವಂಜನ ದೇವಲಿಪಿ, ನಿನ್ನ ಭಾಗ್ಯದ ಸಮಸ್ತ ಸಾರೋದ್ಧಾರ ಶಾಸನವಿದೆಂದು" ಬಿಜ್ಜಳನಿಗೆ ತಿಳಿಸಿದನು. ನಿಧಿಯಿದ್ದ ಎಡೆಯನ್ನು ತೋರಿಸಿದನು. "ಕಿಱಿದೆನಲಹುದೆ ಪರುಷಮಂ?" ಬಸವೇಶ್ವರನು ತೋರಿಸಿದೆಡೆಯಲ್ಲಿ ಅಗೆಸಲಾಗಿ 'ಕನಕ ಕಣ್ದೆಱೆದುದು" ಬಸವೇಶನ ಭಕ್ತಿಯ ಉನ್ನತಿಯ ದಿನಕರನು ದೆಸೆದೆಸೆಯ ಬೆಳಗುವಂತೆ, ರಾಯನ ಭಾಗ್ಯವನಿತೆಯನ್ನು ಭೂಕಾಂತೆಯು ಪಡೆದಳೋ ಎಂಬಂತೆ. ಪರಿವಾರದವರು, ಪುರಜನರು ಅಲ್ಲಿ ದೊರಕಿದ ಹೊನ್ನನ್ನೆಲ್ಲಾ ಅರಮನೆಗೆ ಅಡಕಿದರು. ಕಲ್ಯಾಣಪುರದ ಅಧಿದೇವತೆಯಂತಿದ್ದ ಬಸವೇಶ್ವರನನ್ನು ಪಲ್ಲಕ್ಕಿಯಲ್ಲಿ ಮೆರೆಸುತ್ತ ಅರಮನೆಗೆ ಕರೆತಂದರು. ಮಂಗಳವು ಮೊಳೆತು ಕುಡಿವರಿದು ಕವಲ್ತು ಬೆಳೆದು, ಮಂಗಳ ಫಲದ ತನಿರಸವನ್ನು ನಾಗರಿಕರೆಲ್ಲ ಉಂಡು ತಣಿದರು. ಬಸವಣ್ಣನು ಪ್ರಧಾನಪದವಿಗೇರಿದನು. ಪುರಜನಗಳೆಲ್ಲಾ "ಪರ್ಮಜ್ಞನೀತ, ಮುನ್ನ ಆವಗಣವರನೊ! ಶಿವನಿರ್ಮಿತವಿದು" ಎಂದು ಬಸವಣ್ಣನನು ಕೊಂಡಾಡಿದರು. ಬಿಜ್ಜಳನು ತನ್ನ ಮತ್ತು ಬಸವೇಶ್ವರನ ಗೆಳೆತನದ ಬೆಸುಗೆ ಬಿಚ್ಚದಿರಲೆಂದು ತನ್ನ ತಮ್ಮನ ಸಾಕುತಾಯಿ ಪದ್ಮಗಂಧಿ (ಸಿದ್ಧರಸನ ಹೆಂಡತಿ) ಯ ಮಗಳು ನೀಲಾಂಬಿಕೆಯನ್ನು ಕೊಟ್ಟು ವಿವಾಹವಮಾಡಿದನು (೭).

ಶಿವಲೋಕದಲ್ಲಿ ಕ್ರಿಯೆಭಾವಗಳಿಗೆ ವಾದ ಹುಟ್ಟಿದ್ದಿತಷ್ಟೆ. ಆ "ವಾದಪರಂಪರೆಯೊಳಾಭಾವಪ್ರಕೃತಿಲೀಲಾವಿಲಾಸೋನ್ನತಿ"ಯನ್ನು ಕೇಳಿ. ವಶಿಮಂತ್ರವೆಂಬ ಬೀಜಾಕ್ಷರವು ಭಕ್ತಿಕ್ಷೇತ್ರದಲ್ಲಿ ಜನಿಸಿ ಜ್ಞಾನಾಚಾರದ ಕುಡಿವಡೆದು, ಕ್ರಿಯಾಚಾರವೆಂಬ ಎಲೆಯನ್ನು ಹೊಂದಲು ಗುರುವಿಟಪಿ ವಿಸ್ತರಿಸಿತು; ಲಿಂಗವೆಂಬ ಚಿಗುರನ್ನು ಬಿಟ್ಟು ಸುಮಕೋಮಲವಾಗಿ ಬೆಳೆಯಿತು, "ಬಸವನಾಮ ಶಿವಕಲ್ಪಭೂಜ." ಹಗಲಿರುಳೂ ಲಿಂಗಪೂಜೆ, ಶಿವಧ್ಯಾನ, ಜಂಗಮ ಸಂತರ್ಪಣೆ. ಬಸವೇಶ್ವರನಿಗೆ ಮನಪರುಷ, ಭಾವಪರುಷ, ನಡೆಪರುಷ, ನುಡಿಪರುಷ, ದೃಕ್ಪರುಷಗಳೆಂಬ ಪಂಚ ಪರುಷಗಳಾದುವು. ಲಿಂಗಭಕ್ತರು ಅವನ ಕುಲದೈವ, ಮನೆದೈವ, ಶ್ರವಣಕ್ಕೆ ವಚನಗಳು, ದರ್ಶನಕ್ಕೆ ಸದ್ಭಕ್ತರು, ತನ್ನ ಕಾಯಸೂತಕ ನಿವಾರಣೆಗೆ ಶಿವಭಕ್ತರ ಪದತಲ, ಮನದ ಸೂತಕವನ್ನು ಕಳೆಯುವುದಕ್ಕೆ ಕೂಡಲಸಂಗನ ಭಜನೆ ಚಿಂತನೆ. ಒಡಲಾಸೆ ಮಡದಿ ಮಕ್ಕಳಿಗೆಂದು ದುಡಿಯೆ, ಲಿಂಗದೊಡಲು ಜಂಗಮಕಲ್ಲದೆ ನಾನು ಮಾಡುವ ಆರಂಭ, ವ್ಯವಹಾರ, ಕಾಯಕ ಇವೆಲ್ಲವೂ ಜಂಗಮಕ್ಕಾಗಿಯೇ ಎಂದು ಸಾರಿದನು, ಅಂತೆಯೇ ವರ್ತಿಸಿದನು. ಬಸವೇಶ್ವರನ ಅಂತರಾತ್ಮದಿಂದ ವಚನಗಳ ಜ್ಯೋತಿರ್ಲಿಂಗಗಳು ಒಡಮೂಡಿದುವು. ಸರಿ, ಈ ಭಕ್ತನನ್ನು ಒರೆದೊರೆದು ಅರಿದರಿದು ಪರಿಕಿಸುವುದಕ್ಕಾಗಿ ಶಿವನೇ ಬಂದನೆಂಬಂತೆ ನಾನಾ ದೇಶಗಳಿಂದ ಪ್ರಮಥರು ಬಂದು ಬಸವೇಶ್ವರನನ್ನು ಆಶ್ರಯಿಸಿದರು (೮).

'ಬಸವನ ಭಕ್ತಿವಾದದ ಪವಾಡ ಪ್ರಬಂಧದಾನಂದ ಭಾಸ್ವದ್ವಿಲಾಸಂ ದೋರ್ಪೆನು.' ಮೂಗುಳ ಮುತ್ತುರಂಗವಲ್ಲಿಗೆ ಬೇಕು, ಇದು ನಮ್ಮ ನೇಮ ಎಂದ ವಾರಣಾಸಿಯ ಶಿವಲೆಂಕ ಮಂಚರಸನಿಗೆ ಬಿಳಿಯ ಜೋಳದ ರಾಶಿಯನ್ನು ಮುತ್ತಿನ ರಾಶಿ ಮಾಡಿ ಅಳೆದು ಕೊಟ್ಟನು ; ಜಂಗಮನೊಬ್ಬನು 'ಈಗಳಿಂತೀದ ಗೋಪಯವಾಗದಾಗದಾಗದು' ಎನ್ನಲು ಅಲ್ಲಿಯೆ ಕಟ್ಟಿದ್ದ ಕರುವನ್ನೆ ಈಯಿಸಿ ಅದರ ಹಾಲು ಕರೆದು ಒಪ್ಪಿಸಿದನು. ಆ ಕಾಲದಲ್ಲಿ, ಒಂದು ಸಾವಿರ ಸಂಪಗೆಯ ಹೂವುಗಳನ್ನು ಶಿವಪೂಜೆಗಾಗಿ ಬೇಡಿದ ಶೀಲವಂತನಿಗೆ ಹೊಂಗಣಗಿಲೆಯ ಹೂವುಗಳನ್ನು ಸಂಪಗೆಯ ಹೂವುಗಳನ್ನಾಗಿ ಮಾಡಿಕೊಟ್ಟನು. ಬಕ್ಕೆವಲಸಿನ ಹಣ್ಣು ಕೇಳಿದ ಜಂಗಮನಿಗೆ ಚಿತ್ರದಲ್ಲಿದ್ದ ಹಲಸಿನ ಹಣ್ಣನ್ನೆ ನಿಜವಾದ ಹಲಸು ಮಾಡಿ ಇತ್ತನು. ಜೂಜಾಡಿ ಸೋತ ಜಂಗಮನು ಬಂದು ಐಗುಳ ರತ್ನ ಬೇಕೆನ್ನಲು ಕೆಂದೊಗರಿಯನ್ನೆ ರತ್ನ ಮಾಡಿ ಅಳೆದುಕೊಟ್ಟನು. 'ನಿಜಲಿಂಗ ವೀರಪ್ರಸಾದಿ' ವೀರಬಂಕಣ್ಣನು ಬಂದು ನೀನು ನಿರ್ದೋಷಿಯಾಗಿದ್ದರೆ ಈ ಕತ್ತಿಗೆ ಮೈಯೊಡ್ಡು ಎಂದು ಖಡ್ಗವನ್ನು ಝಳಪಿಸಲು ಬಸವಣ್ಣನು ಮೈಯೊಡ್ಡಿದನು. ಆದರೆ 'ಇರಿದಲಗು ಬಯಲೊಳ್ತಿರುವ' ಹಾಗೆ ಕಂಡಿತು. ಮಿಂಡನಾಗಯ್ಯನೆಂಬ ವಿಟಜಂಗಮ ಬಂದು ಗಂಗಾಂಬಿಕೆಯುಟ್ಟ ಸೀರೆ ಬೇಕೆಂದು ಕೇಳಲು ಬಸವೇಶ್ವರನು ಆಕೆಯ ಸೀರೆಯನ್ನು 'ಉಗಿದು' ಆ ವಿಟಜಂಗಮನಿಗೆ ಕೊಟ್ಟನು. ಮಡದಿಯುಟ್ಟ ಸೀರೆ ಮೊದಲಿನಂತೆಯೇ ಇದ್ದಿತು. ತೆಲುಗು ಪಂಡಿತಾರಾಧ್ಯರು ಕನ್ನಡದಲ್ಲಿಯೂ ಹರಸ್ತುತಿ ಮಾಡಬೇಕೆಂಬ ಹೆಬ್ಬಯಕೆಯಿಂದ ಓಲೆಯನ್ನು ಬರೆದು ಕನ್ನಡ ತ್ರಿಪುಂಡ್ರದಲ್ಲಿಟ್ಟು ಕಳುಹಿಸಿದರು. ಬಸವಣ್ಣನ ಹಸ್ತಪರುಷ ಪ್ರಭಾವದಿಂದ ಕನ್ನಡ ಭಾಷೆಯನ್ನು ಕಲಿತರು. ಒಂದು ದಿನ ಜಂಗಮನೊಬ್ಬನು ಬಂದು ಬಸವೇಶ್ವರ, ನೀನು ಶಿವಭಕ್ತರು ಯಾಚಿಸಿದುದನ್ನು ಹಿಂದುಮುಂದು ನೋಡದೆ ಗಳಿಗೆಯೂ ತಡಮಾಡದೆ ನೀಡುವ ಮಹಾದಾನಿಯೆಂಬ ವಾರ್ತೆಯನ್ನು ಕೇಳಿ ನಿನ್ನಲ್ಲಿಗೆ ಬಂದಿದ್ದೇನೆ "ಎನಗೆ ಕೊಡು ಫಾಳನೇತ್ರಮನ್" ಎನಲು ಬಸವನು ನಸುನಗುತ್ತ ಕನ್ನಡಿಯನ್ನು ತರಿಸಿ 'ಮುನ್ನವೇ ನೊಸಲಕಣ್ಣುಳ್ಳ ನೀನು' ಎನ್ನುತ್ತ ಅವನ ಮೊಗಕ್ಕೆ ಕನ್ನಡಿಯನ್ನು ಹಿಡಿಯಲು "ಜ್ಯೋತಿರ್ಮಯಸ್ವರೂಪು ರೂಪಿಸಿದಂತೆ ನೊಸಲ ಕಣ್ಣೊಳೆವುತಿರೆ" ಆ ಜಂಗಮಯ್ಯನು ನಾಚಿ ತಲೆಗುತ್ತಿ "ನಾಚಿನ ನಗೆಯ ಭೀತಿಯ ಕೈಯೊಳು" ಮುಚ್ಚುತ್ತ ಮರೆಯಾಗುತ್ತಿರಲು ಬಸವೇಶ್ವರನು "ಓಡದಿರು ಓಡದಿರು, ನಿನ್ನ ಬೇಡುವವ ನಾನಲ್ಲ, ಶಿವನೆ, ನೋಡುವೆ ಕಣ್ಣತುಂಬ" ಎಂದು ಹಲುಬುತ್ತ ಆ ಜಂಗಮಯ್ಯನ ಬೆನ್ನನೇ ಅನುಸರಿಸಿ ಹಿಂಬಾಲಿಸುತ್ತಿರಲು ಆ "ಜಂಗಮ"ನು ಗಣಸಮೂಹದಲ್ಲಿ ಹೊಕ್ಕು ನಿರವಯಲಾದನು (೯).

"ಜಲನೀಲಿಕೆಯ ಮಱೆಯಜಲದಂತೆ ಮೇಘ ಸಂಕುಳಮಱೆಯ ಹಸ್ಕರನ ಖರದಂತೆ" ಇರುವ ಸದಾಶಿವನ ಲೀಲೆಯೋ ಏನೋ, ಒಂದು ದಿನ ಕೀಲಾರದ

ಹಸುಗಳನ್ನು ಕಳ್ಳರು ಅಪಹರಿಸಿಕೊಂಡು ಹೋದರೆಂಬ ದೂರು ಬಸವೇಶ್ವರನ ವರೆಗೆ ಬರಲು 'ಕೊಟ್ಟವನೂ ಸಂಗ, ಕೊಂಡವನೂ ಸಂಗ, ಅಲ್ಲಿ ಉಂಬನು ಸಂಗ, ಇಲ್ಲಿ ಉಂಬನು ಸಂಗ' ಕರುಗಳನ್ನು ಅಟ್ಟಿಕೊಂಡು ಹೋಗಿ ತುರುಗೂಡಿರೆಂದು ಭಾವಬ್ರಹ್ಮ ಬಸವಣ್ಣನು ಗೋಪಾಲರಿಗೆ ಆಜ್ಞಾಪಿಸಿದನು. ಕರುಗಳೂ ತುರುಗಳನ್ನು ಹಿಂಬಾಲಿಸುತ್ತಿರಲು ತಸ್ಕರರಲ್ಲಿ ಸುಜ್ಞಾನ ಉದಯಿಸಿ ಅವರೇ ತುರು, ಕರುಗಳನ್ನು ಹಿಂದಕ್ಕೆ ಅಟ್ಟಿಕೊಂಡು ಹೋಗಿ ಕೀಲಾರಕ್ಕೆ ಅರ್ಪಿಸಿ "ನಿರ್ವಂಚಕತ್ವಮಂ ಕೈಗೊಂಡು ಲೋಕೋಕ್ತ ವೃಷಭಾಂಕ ಮುದ್ರಾಸಮುದ್ರರಾಗೈತಂದು" ಬಸವೇಶ್ವರನ ಪದಕೆರಗಲು ಅವನು ಅವರನ್ನು ಮನ್ನಿಸಿ ಶಿವಭಕ್ತರನ್ನಾಗಿಮಾಡಿ ತನ್ನ ನಚ್ಚಿನ ಸೇವಕರನ್ನಾಗಿ ಮಾಡಿಕೊಂಡನು. ಇನ್ನೊಂದು ದಿನ ಕಳ್ಳನೊಬ್ಬನು ಜಂಗಮವೇಷದಿಂದ ಸರಿರಾತ್ರಿಯಲ್ಲಿ ಬಸವಣ್ಣನ ಅರಮನೆಯನ್ನು ಹೊಕ್ಕು, ಮಲಗಿ ನಿದ್ರಿಸುತ್ತಿದ್ದ ನೀಲಾಂಬಿಕೆಯ ಮೈಮೇಲಿದ್ದ ಒಡವೆಗಳನ್ನೆಲ್ಲಾ ಸುಲಿಗೆ ಮಾಡಿ ಆಕೆಯ ಕಿವಿಯಲ್ಲಿದ್ದ ಓಲೆಗೆ ಕೈಹಾಕಲು ನೀಲಾಂಬಿಕೆ ಎಚ್ಚತ್ತು "ಹೋ ಹಾಲಿಹರಿಯಿತ್ತೆನಲ್ಕೆ" ಬಸವನು "ಎಲೆಲೆ ಪಾತಕಿ, ಬಿಡು ಬಿಡೋಲೆಯಂ ಕಲಹವೇಕೆ, ಅಯ್ಯನ ಕೈಗಳಳುಕುವುವು" ಎನ್ನುತ್ತ ಓಲೆಯನ್ನು ತೆಗೆದು ಭಯಭಕ್ತಿಗಳಿಂದ ಅದನ್ನು ಕಳ್ಳ ಜಂಗಮನಿಗೆ ಕೊಟ್ಟನು. ದೀವಿಗೆ ಪತಂಗದ ಗಳಕ್ಕಳಿವುದೆ? ಕೌಶಿಕಾವಳಿಯ ಕಂಬೆಳಗು ರವಿರಂಗು ಗೊಂಬುದೆ?" ಜಂಗಮ ವೇಷದಲ್ಲಿ ಬಂದಿದ್ದ ಕಳ್ಳನ ಕುರುಡು ಗೊತ್ತಾಯಿತು. ಸೇವಕರು ಅವನನ್ನು ಹಿಡಿದು ಹೊರವೇಷವನ್ನು ಸುಲಿದು ಅವನನ್ನು ಪೀಡಿಸುವಷ್ಟರಲ್ಲಿಯೇ ಬಸವೇಶ್ವರನು ಬಂದು ಅವನನ್ನು ತನ್ನ ದೃಷ್ಟಿಪರುಷದ ಪ್ರಭಾವದಿಂದ ನಿಜವಾದ ಜಂಗಮನನ್ನೇ ಮಾಡಿದನು. ಹೀಗೆಯೇ ಇನ್ನೊಂದು ದಿನ ಎಳೆಯ ವೃಂತಾಕ ಫಲಗಳನ್ನು ಲಿಂಗಗಳೆಂದು ಕೊರಳಿಗೆ ನೇತುಹಾಕಿಕೊಂಡು ಏಳು ಜನ ಕಳ್ಳರು ಬಸವೇಶನ ಮನೆಯನ್ನು ಹೊಕ್ಕರು. ಸಮಯವನ್ನು ಕಾದಿದ್ದು, ಬಸವೇಶ್ವರನು ಮಲಗುವ ಮನೆಯನ್ನು ಹೊಕ್ಕು ಅವನನ್ನು ಇವರು ಇರಿಯುವಷ್ಟರಲ್ಲಿಯೇ ಬಸವೇಶ್ವರನು "ಶರಣು ಶರಣು ಎಮ್ಮಾಳಿದರೆ" ಎನ್ನುತ್ತ ಅವರ ಪಾದಕ್ಕೆ ಬೀಳಲು "ಭಾವಪರುಷದ ವಜ್ರಧಾರೆ ಮುಟ್ಟು ಮೊನೆಗೊಂಡು" ಆ ಕಳ್ಳರು ನಿಜ ಜಂಗಮರಾಗಿಬಿಟ್ಟರು. ತಮ್ಮ ಹಿಂದಿನ ಹುಟ್ಟು ಅವರ ನೆನಪಿಗೆ ಬರುವುದು. "ಕೈಯ ಕೈದುವ ಹಾಕಿ" ಬಸವೇಶನ ಶರಣು ಹೊಕ್ಕು "ಉಪದೇಶವಂ ಕರುಣಿಸುವುದು, ವೃಂತಾಕಫಲವು ದೈವವಲ್ಲೆಂದವಂ ಬಿಚ್ಚಿತೋರಲು" ಅಲ್ಲಿ ವೃಂತಾಕಫಲಗಳಿರಲಿಲ್ಲ; ಜ್ಯೋತಿರ್ಲಿಂಗಗಳಿದ್ದವು ಬಸವೇಶನು ಅವರೆಲ್ಲರನ್ನೂ ಮನ್ನಿಸಿ ಉಪದೇಶವಮಾಡಿ ಕಳುಹಿದನು.

ಪ್ರಧಾನಿ ಬಸವೇಶ್ವರನ ಪ್ರಭಾವವು ಬೆಳೆಯುತ್ತಿರುವುದನ್ನೂ ವೀರಶೈವ ಧರ್ಮವು ಅಖಂಡವಾಗಿ ಹಬ್ಬುತ್ತಿರುವುದನ್ನೂ ನೋಡಿ ಪರಧರ್ಮೀಯರು ಸಹಿಸದಾದರು. ಬಸವೇಶ್ವರನನ್ನೂ, ಅವನ ಅನುಯಾಯಿಗಳನ್ನೂ ಕುಚೋದ್ಯ ಮಾಡುವುದಕ್ಕಾಗಿ ಕೆಲ ಜೈನರು ಮೇಣದ ಗೋಳಕಕ್ಕೆ ಜಿನಮುದ್ರೆಯೊತ್ತಿಕೊಂಡು

ಅಪರಿಶುದ್ಧ ಕಪ್ಪಡದಲ್ಲಿ ಅದನ್ನು ಕೊನೆಗಳಲ್ಲಿ ಕಟ್ಟಿಕೊಂಡು, ಕಾವಿಲಾಂಛನಧಾರಿಗಳಾಗಿ ಬಸವೇಶನ ಕಡೆಗೆ ಬಂದರು. ಅವನ ಮಹಿಮೆಯಿಂದ ಕಪಟವೇಷಧಾರಿಗಳೆಲ್ಲರೂ ನಿಜವಾದ ಜಂಗಮರೇ ಆದರು. "ಮೇರುವಂ ಸಾರಿರ್ದ ಕಾಕ ಹೊಂಬಣ್ಣವಹುದು" ಸುಳ್ಳಲ್ಲ.

ಪೂರ್ವದಲ್ಲಿ ರುದ್ರಪತಿಯೆಂಬ ಮುಗ್ಧ ಭಕ್ತನು ವಿಷವನ್ನು ಸೇವಿಸಬಾರದೆಂದು, ಶಿವನನ್ನು ಬೇಡಿಕೊಂಡಾಗ, ಆ ಕಾಳಕೂಟ ವಿಷವು ಉಗ್ರಕಾಳೋರಗನ ರೂಪುವಡೆದಿತೋ ಎಂಬಂತಿದ್ದ ಸಿಂಗಿಕಾಳೋರಗನು ಬಸವಣ್ಣನವರ ಗೃಹವನ್ನು ಹೊಕ್ಕು ಏಳು ದಿನಗಳು ಕಾಯ್ದುಕೊಂಡಿದ್ದು ಒಂದು ಹಗಲು ನೀಲಲೋಹಿತನಾದ ಬಸವಣ್ಣನು ನಿದ್ರೆಗೈಯ್ಯುತ್ತಿದ್ದಾಗ ಅವನೆಡೆಗೆ ತುಡುಕಿ ಅವನ ಪಾದವನ್ನು ಕಚ್ಚಿ "ನಂಜಿನ ದಾಡೆಗಳೊಳಾಕಿ" ರುಧಿರ ಪಾನಮಾಡುತ್ತಿತ್ತು. ಆಗ ಬಸವಣ್ಣನು ಎಚ್ಚೆತ್ತು, ಅಯ್ಯೋ, ಮಹಾದ್ರೋಹವಾಯಿತು, ಶಿವನ ನಚ್ಚಿನ ತೊಡವಿಗೆ ನನ್ನ ಕಾಲು ತಾಗಿತು ಎನ್ನುತ್ತ ಕಾಲನ್ನು ಬಿಡಿಸಿಕೊಳ್ಳಲು "ದೀಪದಾಹಾರಕ್ಕೆ ಬಂದಳಿದ ಪುಳುವಿನಂತೆ" ಆ ಸರ್ಪವು "ತೊಟ್ಟುಬಿಟ್ಟಂತೆ ಬಾಯ್ಬಿಟ್ಟು ಹರಣವಳಿಯಿತ್ತು." ಪರಿಚಾರಕರು ಆ ಸತ್ತಹಾವನ್ನು ಹೊರೆಗೆಸೆಯುತ್ತಿರಲು ಬಸವಣ್ಣನು "ಭೂತೇಶನಾಭರಣಕ್ಕೆ ಮರಣವೆ?" ಎಂದು ಅದರ ಹರಣವನ್ನು ಮತ್ತೆ ಕೊಟ್ಟು ಅದಕ್ಕೆ ಹಾಲೆರೆದನು (೧೦).

ಜಂಗಮಪ್ರಾಣಿಯೆಂದು ಹೆಸರುವೆತ್ತಿದ್ದ ಬಸವೇಶ್ವರನ ಜಂಗಮಪ್ರಾಣಿತ್ವವನ್ನು ಪರೀಕ್ಷೆ ಮಾಡುವುದಕ್ಕೋ ಎಂಬಂತೆ ಜಂಗಮನೊಬ್ಬನು ಬಂದು ಬಸವೇಶ್ವರನನ್ನು ನೋಡಬಯಸಿದನು. ಬಸವೇಶ್ವರನ ಅರಮನೆಯ ಹೊರಬಾಗಿಲ ಕಾವಲವರು ಈಗ ಅವರು ನಿದ್ರಿಸುತ್ತಿದ್ದಾರೆ, ಉಪ್ಪವಡವಾದಾಗ ಬನ್ನಿರೆಂದು ಆ ಜಂಗಮನಿಗೆ ತಿಳಿಸಲು ಆ ಜಂಗಮದೇವರು "ಆಹಾ ಜಂಗಮಪ್ರಾಣಿಯ ಪರಿಲೇಸುಲೇಸು" ಎಂದುಕೊಳ್ಳುತ್ತ ನಸುನಗುತ್ತ ತೆರಳಿದರು. ಅವರ ಮುಂದೆ ಒಂದು ಚಿದ್ರೂಪಕಳೆಯು ಬಂದು ಅವರಿಗೆ ಅಡ್ಡಬಿದ್ದು ಅವರೊಂದಿಗೆ ಸೇರಿಕೊಂಡು ಹೋಯಿತು. ಎಂದಿನಂತೆ ಪರಿಚಾರಕರು ಬಸವಣ್ಣನನ್ನು ಎಚ್ಚರಿಸುವುದಕ್ಕೆ ಬಂದು ನೋಡಲು ಅವನ ಕಳೇಬರ ಮಾತ್ರ ಅಲ್ಲಿದ್ದಿತು. ಚೆನ್ನಬಸವಣ್ಣನಿಗೆ ಸುದ್ದಿಹೋಯಿತು. ಅವನು ಬಂದು ಬಾಗಿಲವರನ್ನು ಕರೆಸಿ ನಡೆದ ಸಂಗತಿಯೇನೆಂಬುದನ್ನು ಅರಿತು "ಅಮೃತಸಂಜೀವಿನಿಯನ್ನು" ಅರಸುವಂತೆ ಆ ಜಂಗಮರನ್ನು ಅರಸಹತ್ತಿದನು. ಅಷ್ಟರಲ್ಲಿ ಆ ಜಂಗಮರೇ ಬಂದು ಸಂಗತಿಯುನ್ನು ತಿಳಿದು ಕೋಂಗಿ ಮರುಗಿ "ಎಂತಹ ಮಹಾಪರಾಧವನ್ನು ಮಾಡಿದೆ ಬಸವ, ಬಸವಾ" ಎಂದು ಕರೆಯುತ್ತಿರುವಷ್ಟರಲ್ಲಿಯೇ ಬಸವೇಶ್ವರನ ಪ್ರಾಣವು ಅವನ ದೇಹದಲ್ಲಿಯೇ ಹೋಗಿ ಸೇರಿತು. ಕೂಡಲೇ ಬಸವಣ್ಣನು ಶರಣು ಶರಣು, ಶ್ರೀ ಗುರುವು ದಯಮಾಡಿಸಬೇಕೆಂದು ಆ ಜಂಗಮರಿಗೆ ಸಾಷ್ಟಾಂಗ

ಪ್ರಣತನಾಗಿರಲು ಅಲ್ಲಿದ್ದವರೆಲ್ಲರೂ ನೋಡಿ ಸೋಜಿಗಗೊಂಡು ಬಸವಣ್ಣನ ಮಹಿಮೆಯನ್ನು ಕೊಂಡಾಡಿದರು.

ಕೇತಯ್ಯಗಳು ಶಿವೈಕ್ಯರಾದುದನ್ನು ಕಣ್ಣಾರೆ ಕಂಡು ಜಂಗಮ ಪ್ರಾಣಿಯಾದ ಬಸವೇಶನು ಇನ್ನೂ ಜೀವಿಸಿದ್ದಾನೆಯೇ ಎಂಬ ಮಡಿವಾಳ ಮಾಚಿದೇವನ ನುಡಿಯು ಅಣ್ಣನ ಮನದ ಮೈಲಿಗೆಯನ್ನು ತೊಳೆಯಿತು ಅಣ್ಣನ ಮರವೆಯೆಂಬ ಕಳ್ಳನನ್ನು ಮಡಿವಾಳನ ವಚನದ ಅಲಗು ಇರಿದು ಕೊಂದಿತು. ಬಸವೇಶನ ಹರಣವು ಮೇದರ ಕೇತಯ್ಯನ ಹರಣದಲ್ಲಿ ಸೇರಿಕೊಂಡಿತು. ಮಡಿವಳ ಮಾಚಯ್ಯನು ಬಂದು ನೋಡಿ ಕೇತಯ್ಯನನ್ನು ಬದುಕಿಸಿದನು. ಕೇತಯ್ಯನ ಪ್ರಾಣದೊಂದಿಗೆ ಬಸವಣ್ಣನ ಪ್ರಾಣವೂ ಬಂದಿತು. ಕ್ರಿಯಾಚಾರನಿಷ್ಠನಾದ ನೇಮದ ಬ್ರಹ್ಮಯ್ಯನು ತನ್ನ ಕ್ರಿಯಾವ್ರತಕ್ಕೆ ಭಂಗ ಬಂದುದಕ್ಕಾಗಿಯೂ, ಜ್ಞಾನಾಚಾರನಿಷ್ಠನಾದ ಧ್ಯಾನದ ಬ್ರಹ್ಮಯ್ಯನು ತನ್ನ ವ್ರತವು ತಪ್ಪಿದುದಕ್ಕಾಗಿಯೂ ಪ್ರಾಣತ್ಯಾಗಮಾಡಲು ಅವರ ಜೊತೆಯಲ್ಲಿಯೇ ಬಸವೇಶ್ವರನೂ ತನ್ನ ಪ್ರಾಣವನ್ನೂ ಐಕ್ಯಮಾಡಿದನು. ಇದನ್ನು ಕಂಡ ವೀರ ಬಂಕಣ್ಣನು ಶಿವಶರಣರ ಸ್ಥಿತಿಯನ್ನು ಕಂಡು ಮರುಗಿ ತನ್ನ ಕೈಯಲ್ಲಿದ್ದ ಖಡ್ಗದಿಂದ ತನ್ನ ಕತ್ತನ್ನೂ ಕತ್ತರಿಸಿಕೊಳ್ಳುತ್ತಿರುವಾಗಲು ಅಷ್ಟರಲ್ಲಿ ಪರಶಿವನು ಪ್ರತ್ಯಕ್ಷನಾಗಿ ಎಲ್ಲರನ್ನೂ ಬದುಕಿಸಿದನು.

ಅಬ್ಬಲೂರಿನ ಏಕಾಂತರಾಮಯ್ಯನೆಂಬ ಶಿವಶರಣನು ಪ್ರತಿನಿತ್ಯವೂ ಶಿವಪೂಜೆ ಮಾಡಿ ಏಕಾಂತವಾಗಿ ತನ್ನ ಶಿರಸ್ಸನ್ನು ಶಿವಲಿಂಗಕ್ಕೆ ಸಮರ್ಪಿಸಿ ಕೈಲಾಸಕ್ಕೆ ಹೋಗಿ ಶಿವನೊಡನೆಯೂ ಶಿವಗಣಗಳೊಡನೆಯೂ ಶಿವಾನುಭವಗೋಷ್ಠಿಯಲ್ಲಿದ್ದು ಮತ್ತೆ ಭೂಲೋಕಕ್ಕೆ ಬಂದು ತನ್ನ ಶಿರಸ್ಸನ್ನು ಮರಳಿ ಪಡೆಯುತ್ತಿದ್ದನು. ಒಂದು ದಿನ ಯಾರೋ ಕೆಲವರು ಬಂದು ಬಸವನು ಸರ್ವಾಂತರ್ಯಾಮಿಯೆ? ಕೈಲಾಸದಲ್ಲಿಯೂ ಇರುವನೆ? ಎಂದು ಪ್ರಶ್ನಿಸಿದರು. "ಏಕಾಂತ ಶಿವರಾಮ ತಂದೆಯು" ಕೈಲಾಸಕ್ಕೆ ಹೋಗಿ ಶಿವಸಭೆಯಲ್ಲಿ ಬಸವನನ್ನು ಹುಡುಕುತ್ತಿರಲು ಶಿವನು ತನ್ನ ಹೃದಯವನ್ನು ಬಗೆದು ಬಸವೇಶ್ವರನನ್ನು ತೋರಿಸುವನು. ಏಕಾಂತರಾಮತಂದೆಯು ಮರ್ತ್ಯಕ್ಕೆ ಬಂದು ಶಿವನು ತನ್ನ ಹೃದಯಕಮಲವನ್ನು ಬಗೆದು ಬಸವೇಶ್ವರನನ್ನು ತೋರಿಸಿದಂತೆ ತಾನೂ ತನ್ನ ಎದೆಯನ್ನು ಬಗೆದು ಬಸವೇಶ್ವರನನ್ನು ಅಲ್ಲಿ ನೆರೆದಿದ್ದ ಜನರಿಗೆ ತೋರಿಸಿದನು (೧೧).

ಪೊಡೂರಿನ ಗಾನವಿಶಾರದನಾದ ಕಿನ್ನರಿ ಬ್ರಹ್ಮಯ್ಯನೆಂಬ ಶಿವಶರಣನು ಹೊಂಗಾಯಕದಿಂದ ಜೀವನವನ್ನು ನಡೆಸುತ್ತಿದ್ದನು. ಮಂಗಳಾಭರಣಗಳನ್ನು ಮಾಡಿಸುವುದಕ್ಕೋಸ್ಕರ ಬಿಜ್ಜಳನ ಹತ್ತು ಸಾವಿರ ವರಹ ತೂಕದ ಹೊನ್ನನ್ನು ಬಸವೇಶನ ವಶಕ್ಕೆ ಕೊಡಲು ಬಸವೇಶನು ಆ ಹೊನ್ನನ್ನು ಕಿನ್ನರಿ ಬ್ರಹ್ಮಯ್ಯನಿಗೆ ಕೊಟ್ಟು ದಿವ್ಯವಾದ ಆಭರಣಗಳನ್ನು ಮಾಡಹೇಳಿದನು. ಕಿನ್ನರಿ ಬ್ರಹ್ಮಯ್ಯನು ಅಂತೆಯೇ ಮಾಡುತ್ತಿರಲು ಯಾರೋ ಜಂಗಮರು ಬಂದು ಬ್ರಹ್ಮಯ್ಯನನ್ನು ಒಂದು ವರಹ ತೂಕ ಚಿನ್ನವನ್ನು ಕೊಡೆಂದು ಯಾಚಿಸಿದರು. ಬ್ರಹ್ಮಯ್ಯನು

ಅರಮನೆಯ ಚಿನ್ನದಲ್ಲಿಯೇ ಅಷ್ಟನ್ನು ಕತ್ತರಿಸಿ ಕೊಟ್ಟನು. ಇದನ್ನು ನೋಡಿದ ಉಳಿದ ಜಂಗಮರು ಬಂದು ಬ್ರಹ್ಮಯ್ಯನನ್ನು ಬೇಡಲು ಅವರಿಗೂ ಚಿನ್ನ ದೊರೆಕಿತು. ಕೊನೆಗೆ ಅರಮನೆಯವರು ಕೊಟ್ಟಿದ್ದ ಚಿನ್ನವನ್ನು ಬಸವಣ್ಣನು ತೂಗಿಸಿ ನೋಡಿದಾಗ ಒಂದು ರವೆಯಷ್ಟೂ ಕಡಮೆಯಾಗಿರಲಿಲ್ಲ. ಇವನ ಮಹಿಮೆಗೆ ಮಾರುವೋಗಿ ಸಕಲ ಭಂಡಾರವನ್ನೆ ಸೂರೆಮಾಡಿದರೂ ಅಭ್ಯಂತರ ವಿಲ್ಲ ಎಂದು ರಾಜಭಂಡಾರವನ್ನೆಲ್ಲಾ ಕಿನ್ನರಿ ಬ್ರಹ್ಮಯ್ಯನ ವಶಕ್ಕೆ ಕೊಟ್ಟನು. ಬ್ರಹ್ಮಯ್ಯನು ಭಂಡಾರದಲ್ಲಿದ್ದ ಧನವನ್ನೆಲ್ಲಾ ಪೋಲುಮಾಡುತ್ತಿರುವನೆಂದು ದೊರೆಗೆ ದೂರು ಹೋಗುವುದು. ರಾಜನು ಬಂದು ನೋಡಿದಾಗ ಇದ್ದ ಧನ ಇದ್ದಂತೆಯೇ ಇದ್ದಿತು. ಬಿಜ್ಜಳನು ಕಿನ್ನರಿಬ್ರಹ್ಮಯ್ಯನ ಮಹಿಮೆಗೆ ಆಶ್ಚರ್ಯಪಟ್ಟು ಕ್ಷಮಾಯಾಚನೆ ಮಾಡಿ ಅರಮನೆಗೆ ತೆರಳಿದನು (೧೭).

ಸುಧೆಗೆ ಸುಧೆಯಾಗಿ, ಕಲ್ಪತರುವಿಗೆ ಕಲ್ಪತರುವಾಗಿ, ಮುಕ್ತಿಗೆ ಮುಕ್ತಿಯಾಗಿ, ಪರುಷಕ್ಕೆ ಪರುಷವಾಗಿದ್ದ ಬಸವಣ್ಣನ ಮಹಿಮೆಯನ್ನು ಪರೀಕ್ಷಿಸುವುದಕ್ಕೋ ಎಂಬಂತೆ ಇನ್ನೊಂದು ಘಟನೆ ನಡೆಯಿತು ಮಿಂಡಜಂಗಮರು ಬಸವೇಶನಲ್ಲಿಗೆ ಬಂದು ತಮಗೆ ಬೇಕಾದ ಒಡವೆ ವಸ್ತ್ರಗಳನ್ನು ಯಾಚಿಸಿದರು. ಬಸವೇಶ್ವರನು ಕೊಟ್ಟುಬಿಟ್ಟನು ಇದನ್ನು ಕಂಡ ಕೊಂಡೆಯರು ಬಿಜ್ಜಳನಲ್ಲಿಗೆ ಹೋಗಿ ಚಾಡಿಹೇಳಿದರು. ರಾಜನು ಪೆಟ್ಟಿಗೆಗಳನ್ನು ತರಿಸಿನೋಡಿದನು ; ಸ್ವಲ್ಪವೂ ಅರಕೆಯಾಗಿರಲಿಲ್ಲ, ವಸ್ತ್ರಗಳ ಒಂದು ಎಳೆಯೂ ಕದಲಿರಲಿಲ್ಲ. ಬಿಜ್ಜಳನು ಕೊಂಡೆಯರ ಕಡೆಗೆ ನೋಡುತ್ತ "ಪರರ ಬಾಯಲುಂಬನ ಬಸಿಱು ತುಂಬುವುದೆ ಎಂಬ ಅಭಿಪ್ರಾಯ ನೆಲೆಯಾಯ್ತು" ಎಂದುಕೊಂಡು ಹಿಂತೆರಳಿದನು (೧೮).

ಬಿಜ್ಜಳನ ಒಡ್ಡೋಲಗದಲ್ಲಿ ಕೊಂಡೆಯ ಮಂಚಣ್ಣನು, ಬಸವಣ್ಣನು ಸಭೆಗೆ ಬಂದವನು ಸಿಂಹಾಸನಕ್ಕೆ ಎರಗುವುದಿಲ್ಲವೆಂದೂ ನಂದಿಯುಂಗರ ವನ್ನು ಮುಂದಿಟ್ಟುಕೊಂಡು ಅದಕ್ಕೇ ನಮಸ್ಕರಿಸಿ ಅಟಮಟದ ರಾಜಭಕ್ತಿಯನ್ನು ಮೆರೆಯುತ್ತಿರುವನೆಂದೂ ಉಸುರಿದನು. ಬಸವೇಶ್ವರನು ಬಂದು ಎಂದಿನಂತೆ "ನಂದಿಯುಂಗರವ ತಿರುಹಿ ಅಭಿಮುಖ ದೊಳಿಟ್ಟು" ಸಿಂಹಾಸನಕ್ಕೆ ನಮಸ್ಕರಿಸಿದನು. ಬಿಜ್ಜಳನು ಕಿಡಿ ಕಿಡಿಯಾಗಿ "ಸುರಭೂರುಹಕೆ ಜಿನುಗುವಳೆ ಬೀಳದಡೆ ನಿಷ್ಫಲಗಳಕವೆ?" "ಜನಪರಾವ್ಯೂನುತ್ತರಿಗೊಬ್ಬನೀಂ ಕೈಯೆತ್ತಿ ವಿನಮಿಸದೊಡಾದ ಕುಂದೇನು? ಕಪಟದ ಕವಚ ಕಾಯ್ವುದೆ ಬಾಣಹತಿಯ" ಎಂದು ಸಿಡುಕಿದನು. ಇನ್ನುಳಿದ ಸಭಿಕರ ಮಾತುಗಳಿಗೂ ಮೇರೆದಪ್ಪಿತು. "ನಿಷ್ಠೆಯ ನಿಧಾನ" "ಭಕ್ತಿಯಸು ಪಟ್ಟಮದಗಜ" "ಶೀಲದ ಶಿಲಾಸ್ತಂಭ" ನಾದ ಬಸವೇಶ್ವರನು ನಗುತ್ತ ಮಹಾಸ್ವಾಮಿ, ಉಂಗುರಕ್ಕೆ ನಮಿಸದೆ ನಿಮಗೆ ನಮಿಸಿದರೆ ಸಿಂಹಾಸನವೂ ನೀವೂ ಬೆಂದು ಸೀದುಹೋಗುವಿರಿ, ತಾವು ಗದ್ದಿಗೆಯನ್ನಿಳಿದು ಈಚೆಗೆ ದಯ ಮಾಡಿಸಬೇಕು ಎಂದು ಹೇಳಿ ಉಂಗುರವನ್ನು ಎದುರಿಗೆ ತೆಗೆದಿಟ್ಟುಕೊಳ್ಳದೆ ಸಿಂಹಾಸನಕ್ಕೆ ನಮಿಸಿದನು. ಗದ್ದುಗೆಯನ್ನು ಅಗ್ನಿದೇವನು ಆವರಿಸಿದನು.

ಬಿಜ್ಜಳನು ಬಸವೇಶ್ವರನನ್ನು ಬೇಡಿಕೊಂಡಮೇಲೆ ಬಸವೇಶ್ವರನು ಅಗ್ನಿಗೆ "ನಿರ್ಯಾಪಿಸಲು" ಬೆಂಕಿ ಆರಿಹೋಯಿತು. ಬಿಜ್ಜಳನು 'ಎಸೆವುದಂಬಿಟ್ಟು ಹಣಿಗಿದರೆಂಬ ಗಾದೆ'ಯಂತೆ "ದುರ್ಜನರೆಪ್ಪೋಡುಪಿಡಿಯ ಕ್ಕೆ ಮಸಿಯಾಗದಿಹುದೆ"? ಎನ್ನುತ್ತ ಬಸವರಸನಿಗೆ ಕೈಮುಗಿದು ಇನ್ನುಮೇಲೆ ತಾವು ದಯವಿಟ್ಟು ನನಗೆ ನಮಸ್ಕಾರ ಮಾಡಲೇಬೇಡಿರೆಂದು ವಿಜ್ಞಾಪಿಸಿಕೊಂಡನು (೧೪).

ಒಂದು ದಿನ ಬಿಜ್ಜಳನು ಸಕಲ ಸಾಮಂತರ, ಪ್ರಭುಗಳ, ಮಂತ್ರಿಗಳ ವಿಬುಧರ ಸಭೆಯಲ್ಲಿ ಮೆರೆಯುತ್ತಿರಲು ತಟಕ್ಕನೆ ಬಸವೇಶ್ವರನು "ಓಹೋ" ಎನ್ನುತ್ತ ತನ್ನ ಬರಿಗೈಗಳನ್ನೇ ಮೇಲಕ್ಕೆತ್ತಿ ಏನನ್ನೋ ಹಿಡಿದುಕೊಂಡಿರುವಂತೆ ಕಂಡನು. ಉಪ್ಪರಲ್ಲಿ ಗೊಲ್ಲತಿಯೊಬ್ಬಳು ಜಾರಿ ಬಿದ್ದುದು, ಬೀಳುವಾಗ ಬಸವನನ್ನು ಸ್ಮರಿಸಿದುದರಿಂದ ಹೊತ್ತ ಕೊಡವು ಅಂತರದಲ್ಲಿಯೇ ಇದ್ದುದು ಬಿಜ್ಜಳ ರಾಜನಿಗೆ ಗೊತ್ತಾಯಿತು. ಗೊಲ್ಲತಿಯನ್ನು ಕರೆಸಿ ಆಕೆಯಿಂದ ನಿಜ ಸಂಗತಿಯನ್ನು ಅರಿತು ಆಸ್ಥಾನದಲ್ಲಿಯೂ ಆ ಪರಿಂತೆ ನಟಿಸಹೇಳಿದನು. ಆಕೆ ಹಾಗೆಯೇ ಬಿದ್ದಂತೆ ನಟಿಸಿ 'ಬಸವಾ' ಎನಲು ದಧಿಕುಂಭವು ಅಂತರಿಕ್ಷದಲ್ಲಿಯೇ ನಿಂತಿತು. ಇದೇ ರೀತಿಯಲ್ಲಿಯೇ ಅರಮನೆಯ ಸೇವಕರೂ ಆಮೇಲೆ ನಗರದ ಪ್ರಜೆಗಳೂ ನಟಿಸಲು ಅವರು ಹೊತ್ತಿದ್ದ ಕುಂಭಗಳೂ ಅಂತರಿಕ್ಷದಲ್ಲಿಯೇ ನಿಲ್ಲುವುವು. ಬಸವೇಶ್ವರನ ಮಹಿಮಾತಿಶಯಗಳನ್ನು ಎಲ್ಲರೂ ಹೊಗಳುತ್ತ ಅವರವರ ಮನೆಗೆ ತೆರಳಿದರು (೧೫).

ಒಂದು ದಿನ ಬಿಜ್ಜಳನು ನೀಚ ಕೊಂಡೆಯರ ಮಾತುಗಳಿಗೆ ಕಿವಿಗೊಟ್ಟು ಬಸವೇಶ್ವರನು ಸಭೆಗೆ ಬಂದೊಡನೆಯೇ "ಮೇರುವಂ ಮಾರಿಕ್ಕುವನ ತೆಱದಿ ಜಲಧಿಗಳ ನೀರನಳೆವನ ತೆಱದಿ ಗಗನಮಂ ಗಳೆಯಿಂದ ದಾರಿಪನತೆಱದಿ ನಕ್ಷತ್ರಮಂ ಎಣಿಪೆನೆಂಬೂರುಗನ ತೆಱದಿ" ಭಂಡಾರದ ಲೆಕ್ಕವನ್ನು ನೋಡಬೇಕೆಂದೂ ಹೊತ್ತು ಮುಳುಗುವುದರೊಳಗೆ ಲೆಕ್ಕವನ್ನು ಒಪ್ಪಿಸಬೇಕೆಂದೂ ಬಸವಣ್ಣನಿಗೆ ಆಜ್ಞಾಪಿಸಿದನು. ಅರುವತ್ತು ಕರಣದವರೆಲ್ಲರೂ ತಮ್ಮ ತಮ್ಮ ಹೊತ್ತಿಗೆಗಳನ್ನು ತಂದು ಲೆಕ್ಕಮಾಡುತ್ತಿದ್ದರು. ಎಷ್ಟು ಹೊತ್ತಾದರೂ ಲೆಕ್ಕಮುಗಿಯಲಿಲ್ಲ, ಸೂರ್ಯ ಮುಳುಗಲಿಲ್ಲ. ಸೋಮನ ಕುಲ, ಪಾವಕನ ಶುಚಿತ್ವ, ಸುತ್ರಾಮನಪದ ಇವುಗಳಲ್ಲಿ ಕೊರತೆಗಾಣುವನಂತೆ ಬಿಜ್ಜಳನು ಬಸವೇಶ್ವರನ ನಿಜತೆಯಲ್ಲಿ ಸಂಶಯ ಪಡಲು ಬಸವೇಶನು 'ಮುಂದಕಡಿಯಿಡಬೇಡ' ಎಂದು ರವಿಗೆ ಆಜ್ಞಾಪಿಸಿದ್ದನು. ರವಿರಥವು ಮುಂದಕ್ಕೆ ಸಾಗದಿದ್ದುದರಿಂದ ಜೋಯಿಸರು ದಿಗ್ಭ್ರಾಂತರಾಗಿ ಬಿಜ್ಜಳನೆಡೆಗೆ ಬಂದು ಈ ವಿಷಯವನ್ನು ತಿಳಿಸಿದರು. ಹನ್ನೊಂದು ದಿನಗಳು ದಿನಕರನು ನಿಂತಲ್ಲಿಯೇ ನಿಂತಿದ್ದನು. ಬಿಜ್ಜಳನಿಗೆ ತಾನು ಮಾಡಿದ ಮಹಾಪರಾಧದ ಅರಿವಾಯಿತು. ಬಸವೇಶ್ವರನನ್ನು ಕರೆಸಿ ಅವನನ್ನು ಬೇಡಿಕೊಂಡಮೇಲೆ ಸೂರ್ಯನು ಮುಂದಕ್ಕೆ ಅಡಿಯಿಟ್ಟನು (೧೬).

ಜಂಗಮರ ತಂಡವೊಂದು ವೀರಶಿವಭಕ್ತನಾಗಿದ್ದ ಕನ್ನದ ಬ್ರಹ್ಮಯ್ಯನ ಮನೆಗೆ ಬಂದು ತಳವೂರಿತು. ಬ್ರಹ್ಮಯ್ಯನದು ಕನ್ನದಕಾಯಕ. ಮನೆಯಲ್ಲಿ

ಸಾಕಷ್ಟು 'ಪಡಿ' ಇರಲಿಲ್ಲ; ಅರಮನೆಯ ಭಂಡಾರಕ್ಕೆ ಕನ್ನವಿಕ್ಕಬೇಕಾಯಿತು. ಹಾಗೆ ಮಾಡಬೇಕೆಂದು ಬಸವೇಶ್ವರನಿಗೆ ತಿಳಿಸಿ ಸರಿಯಾದ ಮಾರ್ಗವನ್ನು ತೋರಿಸ ಬೇಕೆಂದು ಅವನನ್ನು ಪ್ರಾರ್ಥಿಸಿದನು. ಬಸವೇಶ್ವರನು "ಭಕ್ತರಿಗೆ ಮಾರು ತ್ತರವ ನುಡಿಯದಿರುವ ಭಾಷೆ" ಎಂದು ಪ್ರತಿಜ್ಞೆಮಾಡಿದ್ದುದರಿಂದ ಸರಿಯಾದ ದಾರಿಯನ್ನು ತೋರಿಸಿ ಹೋಗುವನು. ಬ್ರಹ್ಮಯ್ಯನು ಭಂಡಾರಕ್ಕೆ ಕನ್ನ ಹಾಕಿ ದನು. ಇನ್ನೇನು ಕಳುವನ್ನು ಹೊತ್ತುಕೊಂಡು ಹೋಗಬೇಕು, ಅಷ್ಟರಲ್ಲಿ ಕಾವಲು ಗಾರರಿಗೆ ಸಿಕ್ಕಿಬಿದ್ದನು. ಬಸವೇಶ್ವರನು ಬಂದು ಬ್ರಹ್ಮಯ್ಯನನ್ನು ಬಿಡಿಸಿ ದನು. ಅರಸನ ಸನ್ನಿಧಿಗೆ ಹೋಗಿ "ನಿಮ್ಮಯ ಸಿರಿಗೆ ಶೃಂಗಾರವಾಗಿರಿಸಿದತಿ ವಿಶ್ವಾಸಿ ಹಿರಿಯ ಪ್ರಧಾನ ಭಂಡಾರವನಗಿಕ್ಕಿಸಿದ ಕನ್ನ ಕಣ್ದೆರೆದುದು" ಎಂದು ಕೊಂಡೆಯರು ತಿಳಿಸಲು ಅರಸನು ಕಾಹಿನವರನ್ನು ಕರೆಸಿ "ಸಾವ ಕೇಣಿಯಂ ಕೊಂಡಿರಿ" ಎನ್ನ ಪ್ರಾಣದೇವತೆಯಾದ ಲಕ್ಷ್ಮಿಯ ನೆಲೆಮನೆಯಲ್ಲಿ ಕಳವು ನಡೆಯು ತ್ತಿರುವಾಗ "ಅವಕ್ಷೋಣಿಯಂ" ಆಳಹೋಗಿದ್ದಿರೆಂದು ಕೇಳಲು ಭಂಡಾರಿಬಸವಣ್ಣ ಬಿಡಿಸಿದನೆಂದು ಆ ಕಾವಲುಗಾರರು ಹೇಳಲು "ಉಕ್ಕುವೆಣ್ಣೆಯೊಳುದಕ ತಳೆದಂತೆ ಧುಗಿಲೆನುತ್ತ" ಕೋಪಾವಿಷ್ಟನಾಗಿ ಬಸವದಂಡಾಧೀಶನನ್ನು ಕರೆಸಿದನು. ಬಸವೇಶ್ವರನೂ ಬಿಜ್ಜಳನೂ ಬಂದು ಕನ್ನವಿಕ್ಕಿದ ಎಡೆಯನ್ನು ಪರೀಕ್ಷಿಸಲು ಆ ಕನ್ನವಿಕ್ಕಿದ ಎಡೆಯೆಲ್ಲಾ ಸ್ವರ್ಣಮಯವಾಗಿತ್ತು. ಬಿಜ್ಜಳನು ತನ್ನ ತಪ್ಪಿಗೆ ತಾನೇ ಪಶ್ಚಾತ್ತಾಪಪಟ್ಟು ಹಿಂದಿರುಗಿದನು (೧೭).

ಒಂದು ದಿನ ಬಿಜ್ಜಳನು ಒಡ್ಡೋಲಗದಲ್ಲಿ ಶೋಭಿಸುತ್ತಿರುವಾಗ ಒಬ್ಬ ಸಭಿಕನು ಕೇದಗೆಯ ಪುಷ್ಪವೊಂದನ್ನು ಬಿಜ್ಜಳನಿಗೆ ತಂದು ಕೊಟ್ಟನು ಆ ಪುಷ್ಪದ ಸೌರಭವನ್ನೂ ಕಾಂತಿಯನ್ನೂ ಕಂಡು ಆಶ್ಚರ್ಯಪಟ್ಟು ಅದರಲ್ಲಿದ್ದ ಎಸಳೊಂದನ್ನು ತೆಗೆದು ಬಸವೇಶ್ವರನಿಗೆ ಕೊಟ್ಟನು. ಬಸವೇಶ್ವರನು ಆ ಕೇತಕಿಯನ್ನು ತನ್ನ ಇಷ್ಟಲಿಂಗ ಭಾವಲಿಂಗ ಪ್ರಾಣಲಿಂಗಗಳಿಗೆ ಸಮರ್ಪಿಸಿ ಆ ಪುಷ್ಪವನ್ನು ಮುಡಿದನು. ಶಿವಪೂಜೆಗೆ ಹೊರತಾದ ಆ ಕೇತಕೀಪುಷ್ಪ ವನ್ನು ಶಿವನಿಗೆ ಸಮರ್ಪಿಸಿ ಶಿರದಲ್ಲಿ ಧರಿಸಿದ್ದುದನ್ನು ಕಂಡು ಅಲ್ಲಿದ್ದ ಕೊಂಡೆ ಯರಿಗೆ ಆಶ್ಚರ್ಯವಾಯಿತು. ಶಿವಪೂಜೆಗೆ ಅನರ್ಹವಾಗಿರುವ ಕೇತಕೀಪುಷ್ಪ ವನ್ನು ಹೇಗೆ ಮುಡಿದೆಯೆಂದು ಅವರು ಪ್ರಶ್ನೆಮಾಡಲು ಬಸವೇಶನು ಕಲ್ಯಾಣ ನಗರದಲ್ಲಿದ್ದ ಶಿವಲಿಂಗಗಳ ಮೇಲೆಯೂ ಮಹೇಶ್ವರರ ಶಿರದಮೇಲೆಯೂ ಕೇತಕೀ ಪುಷ್ಪ ಶೋಭಿಸುತ್ತಿರುವುದನ್ನು ಬಿಜ್ಜಳನಿಗೂ ಕೊಂಡೆಯರಿಗೂ ತೋರಿಸಿ ತನ್ನ ಮಹಿಮೆಯನ್ನು ಮೆರೆದನು. "ಅರ್ಕನುದಯಿಸೆ ತಮದಗಾವಳಿಯು ಗರುವಾಯೆ ? ಗರುಡಗಿದಿರೇನಹಿಗಳು ?" (೧೮).

ಬಸವೇಶ್ವರನು ಪವಾಡಗಳನ್ನು ಮೆರೆಯುತ್ತ ವಿರೋಧಿಗಳು ಮುಖವೆತ್ತದಂತೆ ಮಾಡುತ್ತಿದ್ದರೂ ಕೊಂಡೆಯರು ಇನ್ನೂ ತಮ್ಮ ದುರ್ಬುದ್ಧಿಯನ್ನು ಬಿಡಲಿಲ್ಲ. ಕೆಲವು ಜನ ತುಂಟರಿಗೆ ಜಂಗಮವೇಷವನ್ನು ಹಾಕಿ

ಅವರನ್ನೂ ಆಸ್ಥಾನಕ್ಕೆ ಕರೆದುಕೊಂಡು ಬರುವರು; ಬಸವಣ್ಣನು ತನ್ನ ದೃಷ್ಟಿ ಪ್ರಭಾವದಿಂದಲೇ ಅವರನ್ನೆಲ್ಲಾ ನಿಜಜಂಗಮರನ್ನಾಗಿ ಮಾಡಿದನು (೧೯).

ಒಂದು ದಿನ ವನವಿಹಾರವನ್ನು ಮುಗಿಸಿಕೊಂಡು ಬಿಜ್ಜಳ ನರೇಂದ್ರನು ಬರುತ್ತಿರುವಲ್ಲಿ ಕೇತಲೇಶ್ವರದೇವಾಲಯದ ದೇವಲಕನು ಅವಸರದಲ್ಲಿ ತನ್ನ ತಲೆಯಲ್ಲಿ ಮುಡಿವಿದ್ದ ಹೂವನ್ನೇ ಪ್ರಸಾದವೆಂದು ಹೇಳಿ ದೊರೆಗೆ ಕೊಡುವನು. ದೊರೆಯ ಕೈಗೆ ಹೂವಿನ ಜೊತೆಯಲ್ಲಿ ಅದಕ್ಕೆ ಅಂಟಿಕೊಂಡಿದ್ದ ಆ ದೇವಲಕನ ತಲೆಯ ಕೂದಲೂ ಹೋಯಿತು. ಬಿಜ್ಜಳನು ಇದನ್ನು ಕಂಡು ಕೋಪಿಸಲು ಬಸವೇಶನು ಲಿಂಗಮಸ್ತಕದಲ್ಲಿ ಕೇಶವಿದೆಯೆಂದು ಹೇಳಿ ದೊರೆಯನ್ನು ಲಿಂಗದೆಡೆಗೆ ಕರೆದುಕೊಂಡು ಹೋಗಿ ಅದರ ಮಸ್ತಕದಲ್ಲಿ ಕೇಶವನ್ನು ಪ್ರತ್ಯಕ್ಷವಾಗಿ ತೋರಿಸಿದನು(೨೦). ಬೂದುಗುಂಬಳಕಾಯಿಗಳು ಭಸ್ಮಧಾರಿಗಳು, ಅವೂ ಲಿಂಗಧಾರಿಗಳೇ? ಎಂದು ಕೊಂಡೆಯರು ಪ್ರಶ್ನಿಸಲು ಕುಂಬಳಕಾಯಿಗಳ ಒಳಗೂ ಜ್ಯೋತಿರ್ಲಿಂಗಗಳನ್ನು ತೋರಿಸಿ ಅರಸನನ್ನೂ ಕೊಂಡೆಯರನ್ನೂ ಬೆರಗುಮಾಡಿದನು (೨೧). "ವೀರಶೈವಾಂಬುನಿಧಿ ವಿವರ್ಧನ ಸುಧಾಸೂತಿಯಾದ" ಬಸವೇಶನು ಸತ್ಯಶರಣರ ಸೇವೆಗೈಯುತ್ತಿರುವಲ್ಲಿ ಕೊಂಡೆಯರ ಅಸಹನೆ ಮಿತಿಮೀರಿತು. ಭಂಡಾರದ ಧನವನ್ನೆಲ್ಲಾ ಬೂದಿಬಡಕ ಜಂಗಮರಿಗಾಗಿ ವ್ಯಯಮಾಡುತ್ತಿರುವನೆಂದು ದೊರೆಯಲ್ಲಿ ದೂರಿದರು, "ಚಹಡಿಯ ವಹಿಯ ಚಾವಡಿಯರು"; ಅಸ್ತವ್ಯಸ್ತವಾಗಿ "ನಮಃಶಿವಾಯ" ಎಂಬ ಅಕ್ಷರಗಳನ್ನು ಮಾತ್ರ ಲೆಕ್ಕದ ಹೊತ್ತಗೆಯಲ್ಲಿ ಬರೆಯುತ್ತಿರುವನೆಂದು ತಿಳಿಸಿದರು. ರಾಜನು ಬಸವೇಶ್ವರನನ್ನು ಕರೆಸಬೇಕೆನ್ನುವಷ್ಟರಲ್ಲಿ ಪಿಸುಣರು, "ಸ್ವಾಮಿ, ಬಸವರಸರ ನೂರ್ಮಡಿಸಿದ ಕುಲಮಂತ್ರಿಗಳ್ಮೊಱು ಮಂದಿ" ಇದ್ದಾರೆ, ಅವರನ್ನೇ ಮೊದಲು ವಿಚಾರಿಸುವುದು ಎನ್ನಲು, ರಾಜನು ಸಿದ್ಧರಸ, ಮಧುವರಸ, ಜಗದೇವ ಶಾಂತರಸ ಬಲದೇವರನ್ನು ಕರೆದು ಸೂರ್ಯೋದಯದೊಳಗೆ ಲೆಕ್ಕವನೊಪ್ಪಿಸಬೇಕೆಂದು ಆಜ್ಞಾಪಿಸಿದನು. ಬಸವರಸನಿಗೆ ಈ ಸಂಗತಿ ಗೊತ್ತಾಗುವುದು. ಚಂದ್ರನನ್ನು ಮುನ್ನಡೆಯದಂತೆ ತಡೆದನು. ಹೀಗೆಯೇ ಏಳುದಿನಗಳವರೆಗೆ ಚಂದ್ರನು ನಿಂತೆಡೆಯಲ್ಲಿಯೇ ಇದ್ದನು. ರಾಜನು, ಪ್ರಜೆಗಳು, ಜೋಯಿಸರು ಎಲ್ಲರೂ ಸೋಜಿಗಗೊಂಡರು. ಬಸವಣ್ಣನೇ ಇದಕ್ಕೆ ಮೂಲ ಎಂಬುದು ಗೊತ್ತಾಗಿ, ಅವನನ್ನು ಬಿಜ್ಜಳಮಹಾರಾಜನು ಕರೆಸಲು "ಮಱವೆಯೆಡೆಗಱುಹು, ಮದನಿದ್ರೆಯೆಡೆಗೆಚ್ಚರಿಕೆ, "ಬೆಱತಿರ್ದ ಕುಱಪನೆಚ್ಚಗಸು" ಬರುವಂತೆ ಬಂದು ಕರೆಸಿದ ಕಾರಣವನ್ನು ತಿಳಿದು ಕಲ್ಲುಗುಗ್ಗರಿಯ ಮೆದ್ದರೆ ಕಲ್ಲು ಹೋಗದೆ ಮಾಣ್ಬುದೇ?" 'ಕೋಡುನರವ ಸ್ತ್ರಕಟ ಮೂಡಲಿ, ವಡಬನುರಿಬಾಡಲಿ ಕಲ್ಪತರು ಬೇಡಲಿ, ಸುರಧೇನು ಕಾಡಲಿ, ಶಿವಭಕ್ತರಾಡಿ ತಪ್ಪರು, ಪರಧನಕ್ಕೆ ಮುಂದ್ಯಾನರು' ಎಂದು ಶಿವಭಕ್ತರ ಸತ್ಯಸಂಧತೆಯನ್ನು ಬಿತ್ತರಿಸಿದನು. ಬಿಜ್ಜಳನು ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪಪಟ್ಟು ಸಿದ್ಧರಸನೇ ಮೊದಲಾದವರನ್ನು ಕರೆಸಿದನು. ಚಂದ್ರನು ಮುಂದಕ್ಕಡಿ

ಯಿಟ್ಟನು. ಜನಪನ ಅಜ್ಞಾನಾಂಧಕಾರ ಅಡಗಿತು, ' ಮಂಗಳಪುರದೊಳಗನು ಪಮಾನಂದವಾರಾಶಿ ಭೋರ್ಗರೆಯಿತು' (೨೨).

ಕುಹಕಿಗಳ ಮಾತುಗಳಿಗೆ ಕಿವಿಗೊಡುವುದನ್ನು ಬಿಜ್ಜಳನು ಮತ್ತೂ ಬಿಡಲೇ ಇಲ್ಲ. ಅವರ ಬೇಳುವೆಯಮಾತುಗಳಿಗೆ ಮರುಳಾಗಿ "ಶ್ವೇತಂಗೆ ಯಮಧರ್ಮ ಮುನಿದಂತೆ" "ತೃಣವು ತಾನನಲಂಗೆ ಮುನಿವಂತೆ" ಬಾಚರಸರ ಮೇಲೆ ಮುನಿದು ಮತ್ತೆ ಲೆಕ್ಕವನ್ನು ವಿಚಾರಿಸುವುದಕ್ಕೆಂದು ಅವರನ್ನು ಕರೆಸಿದನು. 'ಪಾಪಂಗಳೆಡೆಗೆ ಪುಣ್ಯ ಬರುವಂತೆ, ಕೋಪದೆಡೆಗೆ ಶಾಂತಿಬರುವಂತೆ', ಸೊಡ್ಡಳ ಬಾಚಿದೇವನು ಆಸ್ಥಾನಕ್ಕೆ ಬಂದನು. ಬಿಜ್ಜಳನು ಬಾಚಿರಾಜನ ಶಿರಚ್ಛೇದನ ಮಾಡಬೇಕೆಂದು ಆಜ್ಞೆಮಾಡುವನು. ಕೊಲೆಪಾತಕರು ಬಾಚಿರಾಜನನ್ನು ಕೊಲ್ಲುವಷ್ಟರಲ್ಲಿಯೇ ಶ್ಮಶಾನದಲ್ಲಿದ್ದ ಮುಂಡಗಳೆಲ್ಲಾ ಬಾಚರಸರ ಪಂಚಾಕ್ಷರೀ ಮಂತ್ರಪ್ರಭಾವದಿಂದ ಮೇಲಕ್ಕೆದ್ದು ಕೊಲೆಪಾತಕರನ್ನೂ ರಾಜಭಟರನ್ನೂ ಕೊಂಡೆಯರನ್ನೂ ಕೊಲ್ಲಹತ್ತಿದುವು. ರಾಜಭಟರು ಅರಮನೆಯೆಡೆಗೆ ಓಡಲು ಅವರನ್ನು ಹಿಂಬಾಲಿಸಿಕೊಂಡು ಮುಂಡಗಳೂ ಬಂದುವು. ಬಿಜ್ಜಳನಿಗೆ ಈ ಘಟನೆ ತಿಳಿಯಿತು. ಬಸವೇಶನು ಬಂದು ಬಿಜ್ಜಳನನ್ನೂ ಕೊಂಡೆಯರನ್ನೂ ರಾಜಭಟರನ್ನೂ ಬದುಕಿಸಿದನು (೨೩).

ಕ್ರೀಭಾವಗಳ ಮೂರ್ತಿಸ್ವರೂಪರಾದ ಬಿಜ್ಜಳಬಸವೇಶ್ವರರು ವೈಹಾಳಿಯಿಂದ ಹಿಂತಿರುಗಿ ಬರುತ್ತಿರುವಾಗ ಕಬ್ಬಲಿತಿಯೊಬ್ಬಳು ಸುರೆಯ ಗಡಿಗೆಗೆ ಭಸ್ಮವನ್ನು ಪೂಸಿ ಅದನ್ನು ಹೊತ್ತುಕೊಂಡು ಬರುತ್ತಿರುವ ಸಂಗತಿಯನ್ನು ಬಿಜ್ಜಳನು ಕೊಂಡೆಯರಿಂದ ತಿಳಿದು ಬಸವೇಶನನ್ನು ಕುರಿತು ಭಸ್ಮವು ಸರ್ವವನ್ನೂ ಶುದ್ಧೀಕರಿಸುತ್ತದೆಯೆಂದು ಹೇಳುವೆಯಲ್ಲಾ, ಆ ಭಸ್ಮವನ್ನು ಬಳಿದಿರುವ ಗಡಿಗೆಯೊಳಗೆ ಅಮೃತವೇ ಇದೆಯೇ ಎಂದು ಕೇಳುವನು. ಬಸವರಾಜನು ಆ ಗಡಿಗೆಯಲ್ಲಿದ್ದ ಸುರೆಯನ್ನು ಗೋಕ್ಷೀರವನ್ನಾಗಿ ಮಾಡುವನು (೨೪). ಇನ್ನೊಂದು ದಿನ ಬ್ರಾಹ್ಮಣರಿಗೂ ಬಸವೇಶ್ವರನಿಗೂ ವಾದವಿವಾದವಾಗಿ ಸುರೆಯನ್ನು ಅಮೃತವನ್ನಾಗಿಮಾಡಿದನು (೨೫).

ಅಗ್ಗವಣಿಶೀಲದ ವೋಗವಾಡದ ಕೇಶಿರಾಜಯ್ಯಗಳಿಗಾಗಿ ಅಗ್ಗವಣಿಯನ್ನು ತರುತ್ತಿದ್ದ ಸೇವಕಿಯೊಬ್ಬಳನ್ನು ರಾಯನೊಲುಮೆಯ ಹೆಗ್ಗಡಿತಿ ಕಂಡು ಅವಳು ಹೊತ್ತಿರುವುದನ್ನು ನೋಡಬೇಕೆಂಬ ಕುತೂಹಲದಿಂದ "ಏನದನೋಳ್ಪೆ ತಾಯೆನುತ್ತೊತ್ತಿಬರಲು" ಬಸವರಸರ ಸೇವಕಿಯು, ಭವಿ ಮುಟ್ಟಿದರೆ ಅಗ್ಗವಣಿಗೆ ಮೈಲಿಗೆಯು ಆವರಿಸುವುದೆಂದು "ಅತ್ತ ಸಾರ್ಮುಟ್ಟದಿರು ಮುಟ್ಟದಿರೆ"ನುತ್ತ ದೂರ ಸರಿಯಲು ಆ ಹೆಗ್ಗಡಿತಿಯು "ಬಾಯಹವಣಿನ ತುತ್ತ ಕೊಳ್ಳೆಲಗೆ," ನಾವು ಅರಸಿನ ಪರಿವಾರದವರು ಎಂದು ಮುಂತಾಗಿ ಹೇಳಿಕೊಳ್ಳುವಳು. ಮಾತಿಗೆ ಮಾತು ಬೆಳೆದು ಹೆಗ್ಗಡತಿಯು ಅಳುವನ್ನು ನಟಿಸುತ್ತ ದೊರೆಯೆಡೆಗೆ ಹೋಗಿ ಒಂದಕ್ಕೆ ಒಂಬತ್ತುಸೇರಿಸಿ ಆ ಸೇವಕಿಯ ಮೇಲೆ ದೂರು ಹೇಳಿದಳು. ಅರಸನು ಕೋಪಗೊಂಡು ಹೂಂಕರಿಸುತ್ತ ಶಿವಭಕ್ತೆ ಸೇವಕಿಯನ್ನು ಕರೆಸಿದನು. ಬಸವಣ್ಣನು

ಬಿಜ್ಜಳನನ್ನು ಕುರಿತು" ಸಿರಿಯ ತೊತ್ತೊ ದೆದೊಡರಸೊದೆಯುಬಕುದೆ"? ಎನ್ನುತ್ತ ಅವನಿಗೆ ಬುದ್ಧಿವಾದ ಹೇಳುವನು. ಬಸವ ಬಿಜ್ಜಳರಿಗೆ ವಾದ ನಡೆಯುತ್ತಿರಲು ರಾಜಭಟರು "ನೀರಡಕಿ"ಯನ್ನು ಎಳೆತಂದರು. ಬಿಜ್ಜಳನು ಆಕೆಯನ್ನು ಕುರಿತು "ಒಲೆಯ ಮುಂದೊಱಗಿ ಮಾಡದ ಮೇಲಿಹ ಸ್ವಪ್ನವೇಕೆಲಗೆ "? ನಮ್ಮನ್ನೂ ನಮ್ಮ ಊಳಿಗದವರನ್ನೂ ಜರೆದುದೇಕೆಂದು ಬೆದರಿಸುವನು. ಎಲ್ಲರಗೂ ಶೀಲವು ನೆತ್ತಿಗೇರಿದೆಯಲ್ಲವೆ? ಎನ್ನುವನು. ಬಸವಣ್ಣನನ್ನು ಕುರಿತು ನಿಮ್ಮ ಆಚಾರ ನೈಷ್ಠೆಗಳಂತೆ ನಿಮ್ಮ ಅಗ್ಗವಣಿಯೂ ಘಟ್ಟಿಯೇ ಎಂದು ಪ್ರಶ್ನಿಸುವನು. ಬಸವೇಶನು ಹಾದು ಎನ್ನಲು ಬಿಜ್ಜಳರಾಜನ ಆಜ್ಞಾಧಾರಕನಾದ ದಂಡಧರನೊಬ್ಬನು "ಅವಡುಗಚ್ಚಿ" "ಹೂಂಕೃತಿಗೈದು" ಆಕೆಯು ಹೊತ್ತಿದ್ದ ಕೊಡವನ್ನು ದಂಡದಿಂದ ಹೊಯ್ಯಲು ಗಡಿಗೆ ಒಡೆದರೂ ಒಳಗಿದ್ದ ಅರ್ಘ್ಯಮಣಿಯು ವಜ್ರದಂತೆಯೇ "ಕೊಡನಾಕೃತಿ"ಯಲ್ಲಿದ್ದಿತು. "ನಿಂದಾರಾಗ ನಾಸ್ತಿಕದ ಪರ್ವತಕೆ ಪ್ರಳಯ ಬಾಯ್ದೆಱೆಯಿತು," "ಭವಿಕುಲಾದ್ರಿಗೆ ಬೇಗೆ ಪರ್ವಿತ್ತು" (೨೬).

ಶ್ರೀಧರನೆಂಬ ಮೀಮಾಂಸಕಾಚಾರ್ಯನು ಒಂದು ದಿನ ತನ್ನಪರಿವಾರದೊಂದಿಗೆ ರಾಜ ಸಭೆಗೆ ಬಂದನು. ರಾಜನು ಇದಿರೆದ್ದು ನಮಸ್ಕರಿಸಿ ಅವನನ್ನು ಕರೆತಂದು ಅವನಿಗಾಗಿ ಹಾಕಿದ್ದ ಆಸನದ ಮೇಲೆ ಕುಳ್ಳಿರಿಸಿದನು. ಬಸವೇಶನೊಬ್ಬನು ಮಾತ್ರ ಗದ್ದುಗೆಯಿಂದ ಇಳಿಯಲಿಲ್ಲ; ಮೀಮಾಂಸಕಾಚಾರ್ಯನಿಗೆ ಬಗ್ಗಲಿಲ್ಲ. ಶ್ರೀಧರಾಚಾರ್ಯನಿಗೆ ಅವನೇ ಬಸವೇಶ್ವರನೆಂಬುದು ಗೊತ್ತಾಯಿತು. ಬಸವೇಶನನ್ನೂ ಅವನ ಮತವನ್ನೂ ಖಂಡಿಸುತ್ತ ತನ್ನ ಪಾಂಡಿತ್ಯವನ್ನು ಪ್ರದರ್ಶಿಸುತ್ತ ಮನಬಂದಂತೆ ಹಳಿಯುತ್ತಿದ್ದರೂ ಬಸವೇಶ್ವರನು ಮೌನದಿಂದದ್ದನು, "ನಾರಮೇಯುಗಳ ಗರ್ಜನೆಗೆ ದಿವ್ಯನಾಗಾರಿ ಲೆಕ್ಕಿಪುದೆ?" ಶ್ರೀಧರಾಚಾರ್ಯನಿಗೆ ಮತ್ತೂ ಕಿನಿಸು ಕಯ್ಗಣ್ಮಿತು. ಬಿಜ್ಜಳ ಮಹಾರಾಜನನ್ನು ಕುರಿತು "ಭೃತ್ಯಾಪರಾಧಸ್ವಾಮಿಯದು" ಎಂದನು. ಬಿಜ್ಜಳನೂ ಬಸವಣ್ಣನನ್ನು ಕೆಣಕಿದನು. ಬಸವೇಶ್ವರನು ಶಿವನಿಂದಕರೊಡನೆ ನಾವು ಸಂಭಾಷಣೆ ಮಾಡುವುದಿಲ್ಲ, ನಮ್ಮ ಅವನ ನಡುವೆ ತೃಣವೊಂದನ್ನು ಹಾಕಿದರೆ ಆ ತೃಣವೆಂಬ ಪುರುಷನಿಗೆ "ನಿಂದಾನಿವಾರೋತ್ತರಂಗೊಡುವೆನೆನಲು" ಅಲ್ಲಿ ನೆರೆದವರಲ್ಲಿದ್ದ "ಗ್ರಾಮಣಿ"ಯೊಬ್ಬನು "ಬಸವಂ ಹಸಿದ "ಎಂದು ಹಾಸ್ಯಮಾಡಿದನು. ಸಭಿಕರಲ್ಲಿ ಇನ್ನು ಕೆಲವರು ಕುಹಕಿಗಳು "ತೃಣರಜ್ಜು ಪುರುಷನಂ ಮಾಡಿ" ಅವನ ಬಾಯಿಂದಲೇ ವಾದಿಗೆ ಉತ್ತರವನ್ನು ಕೊಡಿಸು, ನೀನೇನು ಸಾಮಾನ್ಯನೇ ಎಂದು ಕಟಕಿಯಾಡಿದರು. ಅವರ ಅಭೀಷ್ಟವನ್ನೂ ಬಸವಣ್ಣನು ನೆರವೇರಿಸಿವನು. ತೃಣ ಪುರುಷ ಮುಖದಿಂದಲೇ ವಾದ ನಡೆಯಿತು. ಆ ತೃಣಪುರುಷನು ವೇದ, ಆಗಮ, ಉಪನಿಷತ್ತು, ಪುರಾಣಗಳ ಪ್ರಾಮಾಣ್ಯದಿಂದ ಮೀಮಾಂಸಕಾಚಾರ್ಯನನ್ನು ಬೆರಗುಗೊಳಿಸಿಲು ಅವನ ತಲೆ "ಭೂಕಾಂತೆಯ ಉದರವನ್ನು ಬಗೆದು ಹೊಗುತ್ತಿತ್ತು". ಕಟ್ಟಾಣಕದ ಕಟ್ಟೆ ಒಡೆಯಿತು, ತರ್ಕಾಗಮದ ಗುಟ್ಟು ಗೂಢಗೆಟ್ಟಿತು. ಮೀಮಾಂಸಕಾಚಾರ್ಯನು ಶರಣು ಹೊಕ್ಕು ಮನ್ನಿಸಬೇಕೆಂದು

ಬೇಡಿಕೊಂಡನು. ಪೂರ್ವಮೀಮಾಂಸ ಸಂಪಾದನೆಯ ಭ್ರಾಂತಿಯನ್ನು ಬಿಡಿಸಿ ಉತ್ತರ ಮೀಮಾಂಸವನ್ನು ರಜ್ಜು ಪುರುಷನು ಉಪದೇಶಿಸಿದನು. "ಜಯು ಜಯುರವದ ಕಡಲ ನಡುವಣ ಹಡಗಿನ ನಂಗಲು ತೆಗೆದಂತೆ ಶಿವಗಣಂಗಳ ಪರುಷೆ" ರಜ್ಜು ಪುರುಷನೊಂದಿಗೆ ಮಂತ್ರಿ ಮಂದಿರಕ್ಕೆ ತೆರಳಿತು (೨೭).

ಗಗನದಲ್ಲಿರುವ ತಾರೆಗಳೂ ಕಡಲ ತೆರೆಗಳೂ ಗಣನಾತೀತ, ಅಂತೆಯೇ ಬಸವೇಶ್ವರನ ದಾಸೋಹದ ಪರಿ. ಒಂದು ದಿನ ಬಸವೇಶ್ವರನು, ಅಕುಲಜ ನಾಗಿದ್ದರೂ ಮಹಾಶಿವಾನುಭಾವಿಯಾಗಿದ್ದ ಶಿವನಾಗಮಯ್ಯನ ಕರುಣ ಪ್ರಸಾದ ಸ್ವೀಕರಿಸುತ್ತಿರುವುದನ್ನು, ಆಗದ ಪಿಸುಣರು ಕೆಲವರು ಕಂಡು ಅರಸನ ಬಳಿಗೆ ಹೋಗಿ ಬಸವಣ್ಣನು ಹೊಲೆಯನನ್ನು ಕೂಡಿಕೊಂಡು ಉಂಡು ಕುಲಹದಿನೆಂಟನ್ನೂ ಕಲಸಿ ಬಿಟ್ಟನು, ಕ್ಷತ್ರಿಯರನ್ವಯಕೆ ನಗೆಗೇಡೆ ಎಂದು ದೊರೆಯಲ್ಲಿ ಹೇಳಿಕೊಂಡರು. ದೊರೆಯು ಕರೆಸಿ ಕೇಳುವಲ್ಲಿ ಬಸವೇಶ್ವರನು ಶೈವರ ಮಹತ್ವವನ್ನು ವಿವರಿಸಿಹೇಳಿ ಶಿವನಾಗಮಯ್ಯನ ಕೈಬೆರಳುಗಳಿಂದ ಹಾಲು ಕರೆದು ತೋರಿಸಿದನು (೨೮).

ಬಸವಭಾನುವಿಗೆ ನೆರವಾಗುವುದಕ್ಕಾಗಿ ಭೂತಲದಲ್ಲಿ ಅವತರಿಸಬೇಕಾ ಗಿದ್ದ ಏಳುನೂರೆಪ್ಪತ್ತು ಅಮರಗಣಗಳಲ್ಲಿ ರಾಯಸದ ಮಂಚಣ್ಣನೂ ಒಬ್ಬನು. ಅವನ ಮಾತಾಪಿತೃಗಳು ವೈಷ್ಣವರಾಗಿದ್ದುದರಿಂದ ವೈಷ್ಣವ ಧರ್ಮಾ ನುಸಾರ ವಾಗಿಯೇ ಅವನಿಗೆ ಚೌಲೋಪನಯನಾದಿ ಕರ್ಮಗಳನ್ನು ನೆರವೇರಿಸಿದ್ದರು. ಆದರೆ ಕಾರಣಿಕನಾದುದರಿಂದ "ಶಿವಫಲಪ್ರದಾಯದ ಹೊಲಕ್ಕೆ ಮುಳು ಬೇಲಿ ಗೆತ್ತಂತೆ ವೈಷ್ಣವ ರೂಪ ವಸಿಸಿಪ್ಪನು." ನೋಡುವುದಕ್ಕೆ ವೈಷ್ಣವನಂತಿದ್ದರೂ ಅವನು, ವಿಷ್ಣುವೇ ಮೊದಲಾದ ದೇವತೆಗಳೂ ಮೋಕ್ಷಾರ್ಥವಾಗಿ ಶಿವನನ್ನೇ ಪೂಜೆ ಮಾಡಿರುವರೆಂದು ವೇದಾಗಮಾದಿಗಳಿಂದ ತಿಳಿದು ಪರಮಶಿವಭಕ್ತಿಯನ್ನೇ ಆಚರಿಸುತ್ತಿದ್ದನು. ಪ್ರತಿ ರಾತ್ರಿಯೂ ತನ್ನ "ಗೋಪ್ಯತರದಂತರಗೃಹದಲ್ಲಿ" ತನ್ನ ಪತ್ನಿಯೊಡನೆ ಶಿವಪೂಜಾಮಗ್ನನಾಗುತ್ತಿದ್ದನು.

ಹೀಗಿರುವಲ್ಲಿ ಒಂದು ನಟ್ಟಿರುಳು ನೆರೆಮನೆಯ ವಿಪ್ರನೊಬ್ಬನು ಆ ಗೋಪ್ಯ ಗೃಹದ ಗವಾಕ್ಷದಿಂದ ಧೂಪ ಧೂಮವು ಹೊರಹೊಮ್ಮುತ್ತಿರುವುದನ್ನು ಕಂಡು ಗವಾಕ್ಷದೆಡೆಗೆ ಹೋಗಿ ಮಂಚರಸನೂ ಅವನ ಪತ್ನಿಯೂ ಶಿವಪೂಜಾ ನಿರತರಾಗಿರುವುದನ್ನು ಕಂಡು ಆ ಸಂಗತಿಯನ್ನು ಬಸವ ದಂಡಾಧೀಶನಿಗೆ ಅರು ಹಿದನು. ಈ ಸೋಜಿಗದ ಸಂಗತಿ ಸೊಡ್ಡಳಬಾಚರಾಜ, ಮಧುವರಸ, ಜಗದೇವಯ್ಯ ಇವರಿಗೂ ಗೊತ್ತಾಯಿತು. ಅವರೆಲ್ಲರೂ ಮಂಚಣ್ಣನ ಮನೆಗೈದಿ ಕದದೆಗೆಸುವಷ್ಟರಲ್ಲಿಯೇ "ಗೋಪ್ಯವಗುಪ್ತವಾಯ್ತು ವ್ರತ ದ್ರೋಹವೆಂದು" ಸತಿಪತಿಗಳಿಬ್ಬರೂ ಶಿವೈಕ್ಯವಾದರು. ಮನೆಯ ಬಾಗಿಲು ಮಾತ್ರ ತೆರೆಯಲಿಲ್ಲ. ಇತ್ತ ಬಿಜ್ಜಳನ ಒಡ್ಡೋಲಗದಲ್ಲಿ ಅದೇ ಗುಜುಗುಂಪಲು. ಕೊಂಡೆಯರು, ಬಸವೇಶ್ವರಾದಿಗಳು ಮಂಚರಸರ ಮನೆಗೆ ದಾಳಿಯಿಟ್ಟಿರುವರೆಂದು ಹೇಳಿದರು. ಬಿಜ್ಜಳನು "ಹಾವಮೆಟ್ಟಿದವನಂತೆ", "ಹಣೆಗೋಲುಗೊಂಡವನಂತೆ",

"ಕಾದಕಾವಲಿಯ ಮೇಲೆ ಕೈಯಿಟ್ಟವನಂತೆ" ಬೆಚ್ಚುತ್ತ ಬೆದರುತ್ತ ನಡೆದ ಸಂಗತಿಯೇನೆಂದು ಕೇಳಿದನು. ಚಾರರಿಂದ ಎಲ್ಲವೂ ಗೊತ್ತಾಗುವುದು. ಮಂಚಣ್ಣನ ಆಲಯಕ್ಕೆ ಹೋಗಿ ಮತ್ತೆ ಬಸವಾದಿಗಳನ್ನು "ಉರಿವ ಉಕ್ಕುಗಳ ಬೊಟ್ಟನಿಟ್ಟಂತೆ" ಕೆಂಗಣ್ಣಿನಿಂದ ನೋಡುತ್ತ ನೀವು ಇಲ್ಲಿಗೆ ಬಂದ ಕಾರಣವೇನೆಂದು ಪ್ರಶ್ನಿಸಿದನು. ಬಸವರಸರು "ನಿಷ್ಕಾರಣವು ಬಂದುದಿಲ್ಲವನೀಶ," ಮಂಚರಸರು ಸದಾಚಾರ ಸಜ್ಜನ ಶುದ್ಧಲಿಂಗಾರ್ಚಕರು. ಅವರ ಸದ್ಗತಿಪಥಕ್ಕೆ ನಮಸ್ಕಾರಮಾಡಲು ಬಂದೆವು ಎನ್ನಲು ರಾಜನ ಕೋಪಕ್ಕೆ ಎಲ್ಲೆಯಿಲ್ಲದಂತಾಯಿತು.

ಒಳಗಡೆ ಮಂಚರಸನ ಮನೆಯಲ್ಲಿ ನಡೆದಿರುವುದನ್ನು ತಿಳಿಯುವುದಕ್ಕಾಗಿ ಮನೆಯ ಕದದೆಗೆಸಿ ನೋಡಲು ಎಲ್ಲರೂ "ಬೆಡಗಿನ ಬೆಳೆಯ ಕೇಣಿಗೊಂಡ"ರು. ಮೈಯ್ಯಲ್ಲಿ ಭಸಿತ ರುದ್ರಾಕ್ಷಿಗಳನ್ನೂ ಕಯ್ಯಲ್ಲಿ ಅಕ್ಷಮಾಲೆಯನ್ನೂ ಅಂಗೈಯಲ್ಲಿ ಲಿಂಗವನ್ನೂ ಧರಿಸಿದ್ದ ಆ ಸತಿಪತಿಗಳಿಬ್ಬರೂ ಅಸುವ ನೀಗಿದ್ದರು. ಇಷ್ಟೆಲ್ಲಾ ಬಸವರಾಜನ ಹಂಚಿಕೆಯೆಂದೇ ಅರಸನು ದೂರಿದನು. ಬಸವರಾಜನು ಅವರಿಬ್ಬರಿಗೂ ಭಸಿತವನ್ನಿಟ್ಟ ಕೂಡಲೇ ಅವನ ಪರುಷ ಪ್ರಭಾವದಿಂದ ಸತಿಪತಿಗಳಿಬ್ಬರ ಭಿತ್ತಿಗಳಿಗೂ ಮಗುಳೆ ಜೀವಕಳೆ ತುಂಬಿತು. ಶಿವನು ಮೆಚ್ಚಿ ಪ್ರತ್ಯಕ್ಷನಾಗಿ ಅವರನ್ನು ಕೈಲಾಸಕ್ಕೆ ಕೊಂಡೊಯ್ದನು (೨೯).

ಒಂದು ದಿನ ಬಿಜ್ಜಳನು ಮಂತ್ರಿ ಪರಿವಾರನ್ನೊಡಗೊಂಡು ಶಬರ ಪಡೆಯೊಂದಿಗೆ ಘೋರಾರಣ್ಯಕ್ಕೆ ಮೃಗಯಾವಿಹಾರಕ್ಕೆಂದು ಹೋಗಿರಲು ಇವರ ಆರ್ಭಟಕ್ಕೆ ಕಾನನಕ್ಕೆ ಕಾನನವೇ ಗೋಳಿಟ್ಟಿತು. ಕಾಡು ಮೃಗಗಳೆಲ್ಲ ಚದುರಿ ದಿಕ್ಕು ದಿಕ್ಕಿಗೆ ಓಡಿದುವು. ಈದ ಹುಲಿಯೊಂದು ಗರ್ಜಿಸುತ್ತ ತನ್ನ ಗವಿಯಿಂದ ಹೊರಬಿದ್ದಿತು. ಅಲ್ಲಿಗೂ ಕಪಟಿಗಳು ಕೆಲವರು ಜಂಗಮಲಾಂಛನಧಾರಿಗಳಾಗಿ ಬಂದು "ಬಸವಾ ಪುಲಿವಾಲನೇಮುವೆಮಗೆ" ಎನ್ನಲು ಬಸವೇಶ್ವರನು ಹುಲಿಯಿದ್ದೆಡೆಗೆ ಹೋಗಿ ತನ್ನ ದೃಷ್ಟಿ ಮಾತ್ರದಿಂದಲೇ ಆ ಹುಲಿಯನ್ನು ಮಚ್ಚುಗೆ ಮಾಡಿಕೊಂಡು ಹಾಲನ್ನು ಕರೆದು ಜಂಗಮರಿಗೆರೆದನು (೩೦).

ಗಣಪರ್ವದ ದಿನ ನಾಡಿನ ಶಿವಶರಣರೆಲ್ಲ ಕಲ್ಯಾಣದಲ್ಲಿ ಸೇರಿದ್ದರು. ವಾದ್ಯಗಳು ಮೊಳಗುತ್ತಿರಲು ನಗರದ ಬೀದಿಗಳಲ್ಲಿ ಕುಣಿಯುತ್ತ ಶಿವಭಜನೆ ಮಾಡುತ್ತ ಆನಂದಾಮೃತ ಶರಧಿಯಲ್ಲಿ ಎಲ್ಲರೂ ಈಜಾಡುತ್ತಿರಲು ಅದನ್ನು ನೋಡಿದ ಬಿಜ್ಜಳನಿಗೆ ಕಣ್ಬೇನೆ ಬಂದಿತು. ಅಂತಹ ಸಮಯವನ್ನೇ ಕಾಯುತ್ತಿದ್ದ ಕೊಂಡೆಯರು ಉರಿಯುವ ಬೆಂಕಿಗೆ ಘೃತವನ್ನೆರೆದರು. ಸಂಗ ಕೊಟ್ಟನು, ಸಂಗ ಕೊಂಬನು ಎಂಬ ಪೊಳ್ಳು ನುಡಿಗಳನ್ನು ಆಡುತ್ತ ಅರಮನೆಯ ಭಂಡಾರದ ಧನವನ್ನೆಲ್ಲಾ ಗೊರವರಿಗಾಗಿ ದುರ್ವಿನಿಯೋಗ ಮಾಡುತ್ತಿರುವನು ಎಂದು ಬಿಜ್ಜಳನಿಗೆ ಚಾಡಿ ಹೇಳಿದರು. ಬಿಜ್ಜಳನು ಪಿಸುಣರ ಬೇಳುವೆಯ ಬೆಳ್ನುಡಿಗಳಿಗೆ ಬೆರಗಾಗಿ ಬಸವೇಶ್ವರನನ್ನು ಕರೆಸಿ ಜಂಗಮರ ಸಂಗವನ್ನು ತ್ಯಜಿಸು, ಇಲ್ಲದಿದ್ದರೆ ಮಂತ್ರಿಪದವಿಯನ್ನು ತ್ಯಜಿಸು ಎಂದು ಬಿರುನುಡಿದನು. ಬಸವರಸನು "ಉರಿ

ಬರಲಿ, ಸಿರಿ ಬರಲಿ ಬೇಕು ಬೇಡೆನ್ನೆನು" ಎನ್ನುತ್ತ ಮುದ್ರೆಯನ್ನು ಕೊಟ್ಟು ಹೊರಹೊರಟನು. ಅರಸನು ಅವರ ವಸ್ತುವಾಹನ ಧನಕನಕ ವಸ್ತ್ರಾದಿಗಳನ್ನು ವಶಪಡಿಸಿಕೊಂಡು ಬಸವರಸನನ್ನು ಹೊರದೂಡಿದನು, ತಾನಾಗಿ ಬಂದ ರಾಜ್ಯ ಲಕ್ಷ್ಮಿಯನ್ನು "ಗತಿಯುನವಗತಿನೂಂಕುವಂತೆ," "ಭಾಗ್ಯವನಭಾಗ್ಯತೆ ತಗುಳುವಂತೆ". ಬಸವೇಶನನ್ನು ಗಂಗಾದೇವಿ, ನೀಲಾಂಬಿಕೆ, ಅಕ್ಕನಾಗಮ್ಮ, ಶಿವಸ್ವಾಮಿ, ಚೆನ್ನಬಸವೇಶ್ವರ, ಬಾಲಸಂಗಯ್ಯ ಇವರೂ ಹಿಂಬಾಲಿಸಿದರು.

ಒಂದೆರಡು ಯೋಜನ ನಡೆದಮೇಲೆ ಘೋರ ಕಾನನ ಸಿಕ್ಕಿತು. ಸಾಕ್ಷಾತ್ ಶಿವನೋ ಎಂಬಂತೆ ಒಬ್ಬ ಜಂಗಮಮೂರ್ತಿ ಬಂದನು, "ಸುಯಿಧಾನಭಾಂಡ ತಂಡುಲಪದಾರ್ಥದ ಸಾಂಗಸೈಧಾನ ಮೇಳಗಂಟಣಿಯು ಹಳಿ ಒಳಿಡುಗೋವೊಂಡು ಸಹಿತ". ಬಸವರಸನ ಚಿಂತಾಜನಕ ಸ್ಥಿತಿಯನ್ನು ಕಂಡು ಮಲ್ಮಲಮರುಗಿ ಕೊರಗಿದನು. ಬಸವೇಶಾದಿಗಳನ್ನು ಅಲ್ಲಿಯೇ ಹಳ್ಳದ ತಡಿಯಲ್ಲಿದ್ದ ಮತಿಘಟ್ಟದ ಪಾಳಿಗೆ ಕರೆತಂದು ಬಿಟ್ಟು ಭಾಂಡದಲ್ಲಿ ನೀರುತಂದು ಎಲ್ಲರ ಆಸರನ್ನೂ ಅಡಗಿಸಿದನು. ಅಷ್ಟರಲ್ಲಿಯೇ ಹಾಲಸರ್ವೇಶನೆಂಬ ಜಂಗಮನೊಬ್ಬನು ಬಸವೇಶ್ವರನನ್ನು ಹುಡುಕಿಕೊಂಡು ಬಂದನು. ಸರಿ, "ಹೊಸ ಹಾಲನೇಮವೆಮ್ಮಯ ಲಿಂಗದಾಳಿಯದಸುಸುರ್ದು ಮಾಡುವುದೇನು" ಎಂದು ಉಸುರ್ಗರೆಯುವನು. ಅವು ಕರುವನ್ನು ಅರಸಿಕೊಂಡು ಬಂದಂತೆ ದಾಸೋಹಿ ಬಸವಣ್ಣನನ್ನು ಹುಡುಕಿಕೊಂಡು ಬಂದಿದ್ದ ಹಾಲ ಸರ್ವೇಶನಿಗೆ ಹಾಲನೆರೆದು ತೃಪ್ತಿಪಡಿಸಲೋಸುಗ ಬಸವಣ್ಣನು ಅಲ್ಲಿಯೇ ಇದ್ದ ಬರಡು ಹಸುವಿನ ಮೈದಡಹಲು ಹಸ್ತ ಪರುಷ ದೃಷ್ಟಿಪರುಷ ಭಾವಪರುಷಾದಿಗಳ ಪ್ರಭಾವದಿಂದ ಬರಡಾಕಳಿನ ಕೆಚ್ಚಲು ಹಾಲುತುಂಬಿ ತೊರೆಯಿತು. ಆಗ ಹಾಲನ್ನು ಕರೆದು ಹಾಲಸರ್ವೇಶನಿಗೆ ಸಮರ್ಪಿಸಿ ಕೃತಕೃತ್ಯನಾದನು. ಧರ್ಮವೀರ ಬಸವೇಶ್ವರನನ್ನು ಹೊರದೂಡಿದ ಮಹಾಪಾಪಿ ಬಿಜ್ಜಳನ ಮೋರೆಯನ್ನು ಇನ್ನು ನೋಡಬಾರದೆಂದು ಸೂರ್ಯನು ಪಡುಗಡಲ ಸೇರಿದನು.

ಇರುಳು, ನಿದ್ರೆಗೈಯ್ಯುತ್ತಿರುವಾಗ ಒಬ್ಬ ಜಂಗಮ ಮೂರ್ತಿಯು ಕುಮಾರ ಸಂಗಯ್ಯನಿಗೂ ಬಸವೇಶ್ವರನಿಗೂ ಸ್ವಪ್ನದಲ್ಲಿ ಕಾಣಿಸಿಕೊಂಡು ಅನತಿದೂರದಲ್ಲಿರುವ ಒಂದು ಹುತ್ತದಲ್ಲಿ ಅನರ್ಘ್ಯರತ್ನವೊಂದಿದೆಯೆಂದೂ ಅದರ ದೆಸೆಯಿಂದ ನಿಮಗೆ ಜಂಗಮಸೇವೆ ಮಾಡಲು ಧನಸಂಪತ್ತು ದೊರೆಯುವುದೆಂದೂ ತಿಳಿಸಿದನು. ಬೆಳಕು ಹರೆದೊಡನೆ ಬಾಲಸಂಗಯ್ಯನು ಮಿಂದು ಮಡಿಯುಟ್ಟು ಶಿವಯೋಗಿಗಳಿಗೆ ನಮಿಸಿ ಆ ಹುತ್ತದೆಡೆಗೆ ತನ್ನ ತಂದೆಯೇ ಮೊದಲಾದವರೊಡನೆ ಹೋಗಿ ಉಜ್ವಲ ಕಾಂತಿಯುಳ್ಳ ಅಮೂಲ್ಯ ಪದಕವನ್ನು ತೆಗೆದು ತಂದೆ ಬಸವೇಶ್ವರರ ವಶಕ್ಕೆ ಕೊಡಲು ಬಸವೇಶ್ವರನು ಆ ಪದಕವನ್ನು ಕಲ್ಯಾಣನಗರದ ಸಿದ್ಧಿಗಶೆಟ್ಟಿಯ ಹತ್ತಿರಕ್ಕೆ ಕಳಿಸಿದನು. ಆ ಶೆಟ್ಟಿಯು ಇವರಿಗೆ ಅಪರಿಮಿತ ದ್ರವ್ಯವನ್ನು ಕೊಟ್ಟನು. ಬಸವೇಶನು ಆ ದ್ರವ್ಯದ ಸಹಾಯದಿಂದ ಮತಿಘಟ್ಟದ ಪಾಳಿನಲ್ಲಿಯೂ ಜಂಗಮ ಸಂತರ್ಪಣೆ ಮಾಡಿದನು. ಈ ಸುದ್ದಿ ಬಿಜ್ಜಳನ ಕಿವಿಗೆ

ಮುಟ್ಟಿತು. ಶೆಟ್ಟಿಯಲ್ಲಿದ್ದ ಪದಕದ ಪೆಟ್ಟಿಗೆಯನ್ನು ತರಿಸಿ ಬಸವೇಶ್ವರನನ್ನು ಕರೆಸಿ ಬಸವೇಶ್ವರನಮೇಲೆ ಅರಮನೆಯಿಂದ ರತ್ನವನ್ನು ಕದ್ದ ಕಳ್ಳನೆಂಬ ದೂರು ಹೊರಿಸಿದನು. ನಿನ್ನದಾದರೆ ತೆಗೆದುಕೊ ಎಂದು ಪೆಟ್ಟಿಗೆಯನ್ನು ಬಿಜ್ಜಳ ಮಹಾರಾಜನಿಗೆ ಕೊಡಲು ಬಿಜ್ಜಳನು "ತಾ ಪ್ರೌಢಿಯೆಮ್ಮೊಳೇಕೆನುತೆಳೆದು ಮುದ್ರೆಯನೊಡೆದು" ಪೆಟ್ಟಿಗೆ ಮುಖದೆಗೆದೊಡನೆಯೇ ಅದರೊಳಗೆ ಅಮೂಲ್ಯ ರತ್ನವಿರಲಿಲ್ಲ, "ಹಾಲಾಹಲವನ್ನೈಮುಖದಿನುಗುಳುತುರು ಜಿಹ್ವೆಜಾಳಗಳ ಝಳ ಪಿಸುತಲುರಿಗಂಗಳಿಂ ನೋಡಿ" ಕಿಡಿಯನ್ನೇ ಸೂಸುತ್ತ ವಿದ್ಯುತ್ಪ್ರಭೆಯಂತಿರುವ ಅಂಗಕಾಂತಿಯನ್ನೂ ಪಸರಿಸುತ್ತ ಉಗ್ರಸಿಂಗಕಾಳೋರಗನು ಭೋರ್ಗರೆಯು ತ್ತಿರಲು "ಗದ್ದುಗೆಯಿಂದ ಬಿದ್ದನವನಿಗೆ ನೃಪಾಲ." ಆ ಉಗ್ರ ಸರ್ಪನ ವಿಷದ ಗಾಳಿ ತಾಕಿದವರಂತೆ ಸಭಿಕರು ಗಡಗಡ ನಡಗುತ್ತಿರಲು ಬಿಜ್ಜಳನು ಬಸವಣ್ಣನ ಹಿಂಗಡೆಗೆ ಹೋಗಿ ಬಸವರಾಜ, ಹಾವ ಹೇಳಿಗೆಯ ಹೊಗಿಸು, ಇದ ನನ್ನ ತಪ್ಪಲ್ಲ, ಕೊಂಡೆಯರ ಬೇಳುವೆಯ ಮಾತಿಗೆ ಕಿವಿಗೊಟ್ಟು ಇಂತಾದೆ ಎಂದು ಹಲುಬಿದನು. ಫಟಸರ್ಪವು ಪುನಃ ಪದಕವಾಯಿತು. ಬಸವನು ಆ ದಿವ್ಯವಾದ ಪದಕ ಮಂಜೂಷವನ್ನು ಮುದ್ರಿಸಿ ಸಿದ್ಧಿಶೆಟ್ಟಿಗೆ ಕೊಟ್ಟು ಹೊರಡಲನುವಾಗುತ್ತಿರುವಲ್ಲಿ ಬಿಜ್ಜಳೇಶ್ವರನು ಪುನಃ ಮಂತ್ರಿಪದವಿಯನ್ನು ಸ್ವೀಕರಿಸಬೇಕೆಂದು ಕಾಲಿಗೆ ಬಿದ್ದು ಬೇಡಿಕೊಂಡು ಮುದ್ರೆಯುಂಗುರವನ್ನು ಮರಳಿ ಕೊಟ್ಟನು.

ಅರಣ್ಯ ವಾಸಕ್ಕೆ ಕಳಿಸಿದ ಬಿನ್ನಣಿಗರ ಎದೆಯಮೇಲೆ ಅಡಿಯಿಡುವಂತೆ ಸತಿಸುತರೊಂದಿಗೆ ಗಣಂಗಳಬಳಗದ ಮಧ್ಯೆ ಸಮಸ್ತ ವಾದ್ಯಗಳು ವೊಳಗುತ್ತಿರಲು ಉನ್ನತ ವೈಭವದಿಂದ ತನ್ನ ಗೃಹವೊಕ್ಕು ಎಂದಿನಂತೆ ಗುರುಲಿಂಗಜಂಗಮ ಪೂಜೆ ಯಲ್ಲಿ ನಿರತನಾಗಿದ್ದನು (೩೧).

ಕೊಡುಗೈ ದೊರೆಯಾಗಿದ್ದ "ತನಗಿಲ್ಲದೀವ" ಬಸವೇಶ್ವರನ ಬಳಿಗೆ ಒಂದು ದಿನ ತಾಪಸೇಂದ್ರನೊಬ್ಬನು ಬಂದು ಚಂದ್ರಧರನಲ್ಲಿಗೆ ಓಡಿಯಾಡಿ ನಮ್ಮ ಕಾಲು ನೊಂದುವು. ನೀನೇರಿದ್ದ ದಿವ್ಯ ಅಶ್ವವನ್ನು ದಾನವಾಗಿ ಕೊಡಬೇಕೆಂದು ಕೇಳಿದನು. ಮರುಮಾತಾಡದೆ ಬಸವೇಶನು ಆ ಅಶ್ವವನ್ನು ಜಂಗಮಮೂರ್ತಿ ಗಳಿಗೆ ಕೊಡಲು ಕೂಡಲೇ ಅವರು ಕುದುರೆಯೇರಿ ಮಾಯವಾದರು. ಇದನ್ನು ನೋಡಿದವರ ಆಶ್ಚರ್ಯಕ್ಕೆ ಪಾರವಿಲ್ಲದಾಯಿತು. ಕೊಂಡೆಯರಿಗೆ ಹಾಲು ಕುಡಿದಂತಾಯಿತು ಬಿಜ್ಜಳನಲ್ಲಿಗೆ ಬಂದು ನಡೆದ ಸಂಗತಿಯನ್ನು ಅರುಹಿದರು. ಅರಸನ ಕೋಪಕ್ಕೆ ಮೇರೆಯಿಲ್ಲವಾಯಿತು. ಅಟ್ಟಿರಿ ಬೆರಗುಗಳನ್ನು ಕರಗಿ ಎರಕ ಹೊಯ್ದ ಗೊಂಬೆಯಾದನು ಬಿಜ್ಜಳನು. ಕಣ್ಣು ಕೆಂಡವಾದುವು. ದಂಡ ನಾಯಕ ಬಸವನನ್ನು ಕರೆಸಿ ಜಾತ್ಯತ್ವವನ್ನು, "ಚಾಲೋಕ್ಯರನ್ವಯದ ರತ್ನಖಚಿತ ನೀಲವಜ್ರದ ಕನಕಕೀಲಣದ ಹಲ್ಲಣವ" ತಾ ಎಂದು ಕೇಳಿದನು. ಭೂಪತಿಯು ರಾಜ ಭಟರನ್ನು ನೋಡಿಕೊಂಡು ಬರಲು ಕಳಿಸಲು ಅವರು ದಿವ್ಯಾಶ್ವವು ಹಲ್ಲಣ ದೊಂದಿಗೆ ಇದ್ದೆಡೆಯಲ್ಲಿಯೇ ಇದ್ದುದನ್ನು ಕಂಡವರೇ ಬಂದು ಅರಸನಿಗೆ ಅರಿಕೆ ಮಾಡಿದರು. ಅರಸನು ಮರುಮಾತಾಡಬೆ "ಕುಜನ ಭಜನೆಗೆ ವೃಥಾ

ಖಾತಿಯಂ ಕೈವಿಡಿದ ಭ್ರಾಂತರು'' ನಾವು ಎನ್ನುತ್ತ ಬಸವೇಶ್ವರನಿಗೆ ನಮಿಸುತ್ತ ಅವನನ್ನು ಬೀಳ್ಕೊಟ್ಟನು (೩೨).

ಗುರುಲಿಂಗಜಂಗಮ ಭಕ್ತನೂ ನೇಮದನಿಸ್ಸೀಮನೂ ಸದಾಚಾರಧೀರನೂ ಶಿವತತ್ವ ವಿಚಾರಸತ್ವನೂ ಆದ ಬಸವೇಶ್ವರನು ಎಂದಿನಂತೆ ಸಮಸ್ತ ಶಿವಶರಣ ವೃಂದಕ್ಕೆ ನಿಶ್ಚಲಭಕ್ತಿಯಿಂದ ದಾಸೋಹವನ್ನು ಮಾಡಿಕೊಂಡು ಭಕ್ತಿಯೇ ಮೂರ್ತಿವೆತ್ತಂತೆ ಅತ್ಯಾನಂದದಿಂದ ಮೆರೆಯುತ್ತಿರಲು "ರಾಜಿಬೋವನೆನಿಪ್ಪ'' ತಂಡಾಯಿಲನ ಚಾರರು ಶಿವಭಕ್ತರೆಡೆಗೆ ಬಂದು ಪ್ರಸಾದವನ್ನು ಬೇಡಲು ಆ ಶಿವಶರಣರು ಲಿಂಗಾಂಗಿಗಳಲ್ಲದವರಿಗೆ ಪ್ರಸಾದವು ಸಲ್ಲದೆಂದು ಹೇಳಿ ಪ್ರಸಾದವನ್ನೆರೆಯದಿರಲು ಆ ಸೇವಕರು ತಮ್ಮೊಡೆಯನಲ್ಲಿ ಬಂದು ದೂರು ಹೇಳಿಕೊಂಡರು. ಸಕಲಬೋವಿಗಳೂ ನೆರೆದು ಯಮದೂತರಂತೆ ಭೂರಮಣನ ಆಸ್ಥಾನವನ್ನು ಮುತ್ತಿದರು. ಆದಿಯಿಂದಲೂ ಭಕ್ತರಂಗಣದ ರಜರೇಣುಗಳನ್ನು ಪರಿಹರಿಸುತ್ತಿದ್ದ ಚಂಡೇಶಕಿಂಕರರಾದ ನಮಗೆ ಇಂದು ಮಹೇಶ್ವರರು ಪ್ರಸಾದವನ್ನು ಕೊಡಲೊಲ್ಲರು ಎಂದು ಹೇಳಿಕೊಂಡರು. ಬಿಜ್ಜಳನು ಚೆನ್ನಬಸವೇಶ್ವರಾದಿಗಳನ್ನು ಕರೆಯಿಸಿ ಕಾರಣವನ್ನು ವಿಚಾರಿಸಲು ಅವರು 'ಪ್ರೇತಭೂಮಿಯೊಳಿಜ್ಯಾಕರ್ಮವೆ?' 'ಸ್ವಪಚಗುಪವೀತವೆ?' 'ಕಿಲ್ಬಿಷದ'ಕುಂಡದೊಳು ಪುಣ್ಯಸಂಜಾತನಿಗೆ ಜಲಕ್ರೀಡೆಯೆ' ? 'ಬಿನುಗುಭೂತಭೇತಾಳರಿಗೆ ನೊಸಲಕಣ್ಣೆ ?' ಎಂದು ಹೇಳಿ ಭವಿಗಳಿಗೆ ಲಿಂಗಪ್ರಸಾದ ಸಲ್ಲದು ಎಂದು ಭರ್ತ್ಸನೆಮಾಡಿದರು. ಶಿವಪ್ರಸಾದವನ್ನು ಕೊಡದಿದ್ದರೆ ". ಶಿವಗುಪಾರವಂ ಮಾಡಲೀಸೆವು'' 'ವೃಥಾ ಹೋರಿದಡದಕೆ ತಕ್ಕ ಹರುಗೊಂಬೆವು' ಎಂದು ಗರ್ಜಿಸಲು ಬಸವೇಶ್ವರನು ಬಿಜ್ಜಳನನ್ನು ಕುರಿತು "ಪಿಂತಮೃತ ಮಥನದೊಳು ಶೇಷ ಸೂಸಿದ ವಿಷವದಂತಕಾರಿಯು ಗಳದೊಳದೆ ಉಭಯವಾದಿಗಳದಂ ತೀರ್ಚಿತಿಲ್ಲ'' ಆ ಪ್ರಸಾದವನ್ನು ಯಾರುಬೇಕಾದರೂ ಸ್ವೀಕರಿಸಬಹುದು ಎಂದನು. ರಾಜನಿಗೂ ಕೊಂಡೆಯರಿಗೂ ಅಪಿತಾನಂದ; ತೆರೆಣಿಯ ಹುಳು ತನ್ನ ನೂಲಿನಿಂದ ತನ್ನನ್ನೇ ಬಂಧಿಸಿಕೊಂಡಂತಾಯಿತೆಂದು ಒಳಗೊಳಗೇ ಹಿಗ್ಗಿದರು. ವಿಷಕುಂಡ ಸಿದ್ಧವಾಯಿತು. ಆ ಹಾಲಹಲ ವಿಷವು ಭುಗಿಭುಗಿಲನುರಿಯುತ್ತ ಮುಗಿಲಗಡರುವ ಅನಲನಂತೆ ಗುಳುಗುಳಿಸಿ ನೊರೆತೆರೆಯುಕ್ಕಿ ಮೊರೆಯುತ್ತಿತ್ತು ; ಆದರ ಗಾಳಿಸೋಕಿದರೆ ಸಾಕು, ಜೀವ ಕಳಚಿ ಬೀಳುತ್ತಿತ್ತು, ಕೈಕಾಲುಗಳು ಒಡಲೊಡಳಗುವುವು, "ನೋಡೆ ಕಣು ಕರಗಿ ಎವೆ ಸೀವುವು,'' ನಾಲಗೆಯ ನರ ಸತ್ತು ಮೀಸೆ ಕವುರೇಳುವುವು ! ಆ ವಿಷವನ್ನು ನೋಡಿ ರಾಜನೂ ಸಭಿಕರೂ ದಿಙ್ಮೂಢರಾದರು.

ಪ್ರಸಾದಸ್ವೀಕಾರಕ್ಕಾಗಿ ಬೋವರಿಗೂ ಆಹ್ವಾನ ದೊರೆಯಿತು. ಆದರೆ ಅವರು ಆ ಮಾರಿಯನ್ನು ಮನೆಗೆ ಕರೆಯಲು ಇಷ್ಟಪಡಲಿಲ್ಲ, ಕೊಂಡೆಯರ ಮಾತಿನಲ್ಲಿ ಹೇಳ ಬೇಕೆಂದರೆ "ಕಿತ್ತುಕೊಂಡವ ಕುತ್ತಿಕೊಳಬೇಕೆನಿಪ ಗಾದೆ ಸತ್ಯವಾಯಿತು.'' ಬಸವೇಶ್ವರನು ತನ್ನ ಭಾವಪರುಷ ಪ್ರಭಾವದಿಂದ ಆ ಕಾಳಕೂಟದ ಪೂರ್ವಾಶ್ರಯವನ್ನು ಕಳೆದು ಹೊಂಬಟ್ಟಲಿನಲ್ಲಿ ಆ "ವಿಷ"ವನ್ನು ಮಹೇಶ್ವರ

ರಿಗೆಲ್ಲಾ ಹಂಚಿದನು ; "ನಂಬಿದಡೆ ಪ್ರಸಾದ ನಂಬದಿರ್ದಡೆ ವಿಷವು" ಎಂದು ಆ ಗರಳವನ್ನು ಲಿಂಗಕವಧಾರಿಸಿ ಆರೋಗಿಸಲು ಉಳಿದ ಲಿಂಗಾಂಗಿಗಳೆಲ್ಲರೂ ದೇವರಿಗೆ ನಿವೇದಿಸಿ ಅಮೃತವನ್ನು ಸೇವಿಸುವಂತೆ ಆ 'ವಿಷವನ್ನು' ಸೇವಿಸಿದರು. ತೃಣಭಾರಕ್ಕೆ ಗಿರಿತಗ್ಗುವುದೆ? (೩೬).

ಅಷ್ಟೊಂದು ದೃಷ್ಟಗಳನ್ನು ತೋರಿ, ಧರ್ಮಬೋಧೆ ಮಾಡಿ ವೇದಾಗಮಗಳ ಆಧಾರದಿಂದ ನಿಜವಾದ ಸತ್ಯ ಧರ್ಮದ ತಿರುಳನ್ನು ತಿಳಿಸಿದರೂ ಕ್ರೀಸ್ವರೂಪನಾದ ಬಿಜ್ಜಳನಿಗೆ ಅರಿವು ಮರಳಲಿಲ್ಲ. ಮತ್ತೂ ಕೊಂಡೆಯರ ಮಾತುಗಳಿಗೆ ಮರುಳಾದನು. ಕಲ್ಯಾಣ ಪುರದ ಬೀದಿಗಳಲ್ಲಿ ಅಶ್ವಾರೂಢರಾಗಿ ಬರುತ್ತಿರುವಾಗ ಚಿಕ್ಕಮಕ್ಕಳು ಶಿವ ಪ್ರಸಾದವನ್ನು ಮಹಾ ಪ್ರಸಾದಿ ಬಸವರಸನಿಗೆ ನೀಡಿದರು. ಬಸವೇಶನು ಅದನ್ನು ಇಸಿದುಕೊಂಡು ತನ್ನ "ಹೃದಯಸನ್ನಿಭ ಜೋಕ್ಕಿಲೊಳು ಸ್ವಾಯತಿಸಿ" ಕೊಂಡನು. ಅರಸನಿಗೆ ಮುನಿಸೇರಿತು. ಮುಂದೆ ಸಿಕ್ಕ ಅಂಗಡಿಯೊಂದಕ್ಕೆ "ತುರಗಮಂ ನೂಂಕಿ" ಶಲ್ಲೆಹಗಟ್ಟಿಗೆಯಿಂದ ನಾಲ್ಕೆರಡೊಡೆಯ ತಿವಿದು ಹರಪ್ರಸಾದವಿದೆ ಕೊಳ್ ಎನಲು ಬಸವರಸನು ಆ ವಡೆಗಳನ್ನು ಸ್ವೀಕರಿಸಿದನು. ಮತ್ತೆರಡನ್ನು ಸರಳು ಗೋಲಿನಿಂದ ಇರಿದು ತೆಗೆದು ಬಸವೇಶನಿಗೆ ಕೊಡ ಹೋಗಲು ಬಸವೇಶ್ವರನು ಅವುಗಳನ್ನು ಸ್ವೀಕರಿಸಲಿಲ್ಲ. ಆ ಮಗುವು ಕೊಟ್ಟ ಶಿವಪ್ರಸಾದವನ್ನು ಬಿಚ್ಚಿಬಿಚ್ಚಿ ಅದರಲ್ಲಿ ಅಮೃತರಸವು ತುಂಬಿತುಳುಕಾಡುತ್ತಿದ್ದುದನ್ನೂ ಭವಿಯು ಕೊಟ್ಟ ಭಕ್ಷ್ಯದಲ್ಲಿ ಕ್ರಿಮಿಕೀಟಗಳು ತುಂಬಿರುವುದನ್ನೂ ತೋರಿಸಿದನು. ಭವಿಪಾಕದಲ್ಲಿ ಕ್ರಿಮಿ ಕಿಕ್ಕಿರಿದಿರುವುದನ್ನು ಕಂಡು ಬಿಜ್ಜಳನ ತನು ಕಂಠಣಿಸಿತು. ಶಲ್ಲೆಹ ಮುಖದಲ್ಲಿದ್ದ ಕ್ರಿಮಿಗಳು ಕುಪ್ಪಳಿಸುತ್ತಿರಲು "ನೃಪಜಿಹ್ವೆ ಸರ್ಪ ಗರುಡಂಗಂಡುದು".

ಮತ್ತೊಂದು ದಿನ "ಕ್ರೀಭಾವ ಸಂಪಾದನೆಯ ಚೇಷ್ಟಾ ಪ್ರವೃತ್ತಿ"ಯಿಂದ ಬಿಜ್ಜಳನು "ಸತ್ಯದೊಳು ಮಿಥ್ಯೆ ಹೊಡೆದಾಡುವಂತೆ" ಬಸವೇಶನ ಮುಖಭಂಗ ಮಾಡಲು ಮತ್ತೊಂದು ದುರಾಲೋಚನೆಯನ್ನು ಬಗೆದನು. ಎಂದಿನಂತೆ ಅಕ್ಕ ನಾಗಾಂಬೆಯು ಆಸ್ಥಾನಕ್ಕೆ ಬರಲು ಆಕೆಯನ್ನು ಹೊಗಳಿ ಹೊಗಳಿ "ನೀಲಲೋಚನೆಯ ಬಸವರಸಗಿತ್ತೆ ವಾಗ್ಯಾತ ಮೈದುನ ಹಿರಿಯಳಾಗಿ ನೀನತ್ತಿಗೆ" ಎಂದು ಜೆಳುನುಡಿಗಳನ್ನಾಡುತ್ತ, ಒಡವೆವಸ್ತ್ರಗಳನ್ನು ತರಿಸಿ ಅಕ್ಕ ನಾಗಾಂಬಿಕೆಗೆ ಒಪ್ಪಿಸಿ "ಶೃಂಗಾರಲಂಕಾರಾಧಿ ದೇವತೆಯನಲು ರೂಪಿಸಿ" "ಎಲೆಯಕ್ಕ ನೀನಕ್ಕ ನಮ್ಮರಸಿಯರ್ಗಂತಾಗಿ ನಿನ್ನ ವಿಭವಕ್ಕೆ ಮೆಯ್ಯಾನುವರ ಕರೆಸಿ ತೋರ್ಪೆವು" ಎನಲು ನಾಗಲಾಂಬಿಕೆಯು ಅಂತಃಪುರವನ್ನು ಪ್ರವೇಶಿಸಿದಳು. ಆಲಸ್ಯವಾಗಿದ್ದುದರಿಂದ ಹಾಗೆಯೇ ಹಂಸಪರ್ಯಂಕದ ಮೇಲೆ ಮಲಗಿ ಶಿವಭಕ್ತಿ ಕಣ್ಮುಚ್ಚುವಂತ ಕಣ್ಮುಚ್ಚಿದಳು.

ಬಿಜ್ಜಳನು ತನ್ನ ಅಚ್ಚುಮೆಚ್ಚಿನ ಮಂತ್ರಿಗಳನ್ನು ಕರೆಸಿ ತಾನು ಮಾಡಿರುವ ಉಪಾಯವನ್ನು ತಿಳಿಸಿದನು. ಬಸವೇಶ್ವರನು ಒಡ್ಡೋಲಗಕ್ಕೆ ಬಂದೊಡನೆಯೇ "ಶಿವಸ್ವಾಮಿ ಸಂಗ ಶಾಂ ಸಂತೃಪ್ತಿ ಶಬ್ದ ಪ್ರಸಾದ ಪ್ರತ್ಯಕ್ಷ ಕಳೆ ಕಾಂತಿ ರತ್ನವ

ನೊಂದ ಕರುಣಿಸಿದ ನಿಮಗೆ'' ಎನ್ನುತ್ತ ಬಸವರಾಜನನ್ನೂ ಒಳಕ್ಕೆ ಕಳುಹಿಸಿದನು. ಒಳಗೆ "ಪರ್ಯಂಕದೊಳು ಪೆರವು ಸುಖದಿ ಮಲಗಿಹ ವನಿತೆಯಿರೆ'' ಕಂಡು ಮಗುವಾಗಿ ಅಕ್ಕನಾಗಾಂಬಿಕೆಯ "ಸ್ತನ ಚೂಚಕವ ವದನದೊಳ್ಧರಿಸಮೃತ ಪ್ರಸಾದಾಹಾರಂಗೊಳುತಿರಲ್ಕೆ'' ನಾಗಲಾಂಬಿಕೆ ಎಚ್ಚತ್ತು "ಅನುಪಮೋಪಮ ಬಾಲ ಶಿವನಿಗೆ ಕೈದೊಟ್ಟಿಲಿಕ್ಕಿ ಅಪ್ಪಿ ಮೊಲೆಯೂಡುತ್ತಿರಲು "ಇತ್ತ ಬಿಜ್ಜಳನ ಮನ ನಾಸ್ತಿಕದ ನಗೆಗೊಡಲು ಕುತ್ತಿರಿವುತ್ತಿರಲು'' ಕುಮಂತ್ರಿಗಳೊಡಗೂಡಿ ಪರಿವಾರ ಪುರಜನ ಇವರನ್ನು ಕೂಡಿಕೊಂಡು ಬಂದು ಇಣಿಕಿ ನೋಡುತ್ತಾನೆ. ಅಕ್ಕ ನಾಗಮ್ಮನು ಬಸವಶಿಶುವನ್ನು ಎದೆಯ ತೊಟ್ಟಿಲಲ್ಲಿಟ್ಟು ಅಮೃತಪಾನ ಮಾಡಿಸುತ್ತಿದ್ದಾಳೆ. "ಪಾತಕದ ಪರಮ ಸೀಮೆಯ ಶಿಲಾಶಾಸನಕ್ಷರ'' ವಾದ ಬಿಜ್ಜಳನ ಮುಖವು ಮೊಗ್ಗಿ ಕಂದಿತು. ಬಸವೇಶ್ವರನ ಬಾಲ ಕ್ರೀಡೆಯ ನಾವೀನ್ಯವನ್ನು ಕಂಡು ಮಾನಿನಿಯರೂ ಸಹ ಅರಸಿನ ಕುಮಂತ್ರಕ್ಕೆ ನಕ್ಕು ಹಾಸ್ಯಗೈದರು. ಬಸವವಲ್ಲಭನನ್ನು ಮೊದಲಿನಂತೆ ಸ್ವಸ್ವರೂಪಿಯನ್ನಾಗಿ ಮಾಡಿರೆಂದು ರಾಣೀವಾಸದವರೆಲ್ಲರೂ ಅಕ್ಕ ನಾಗಮ್ಮನನ್ನು ಪ್ರಾರ್ಥಿಸಿದರು. ಬಸವೇಶನು ಬಾಲಯೋಗಿತ್ವವನ್ನು ಬಿಟ್ಟು ಸ್ವಸ್ವರೂಪವನ್ನು ಹೊಂದಿ ಮೆರೆಯಲು ಬಿಜ್ಜಳಾದಿಗಳು ಅತ್ಯಂತಭಕ್ತಿಯಿಂದ ಅಕ್ಕತಮ್ಮರಿಗೆ ವಂದಿಸಿ ಅವರನ್ನು ಬೀಳ್ಕೊಟ್ಟರು (೩೪).

ಕಾರಿಯ ಹಬ್ಬದದಿನ ಕಲ್ಯಾಣನಗರದ ಜನರಿಗೆ ಎಲ್ಲೂ ಇಲ್ಲದ ಆನಂದ. ಎಲ್ಲರೂ ತಮ್ಮ ತಮ್ಮ ಹೋರಿಗಳನ್ನು ಅಲಂಕರಿಸಿ ಅಗಸೆಯ ಬಾಗಿಲಿಗೆ ಹೊಡೆ ತಂದಿದ್ದರು. ಎಲ್ಲರ ಹೋರಿಗಳೂ ಅವುಗಳಿಗಾಗಿಯೇ ಶೃಂಗರಿಸಿದ್ದ ಬಯಲಿಗೆ ಬಂದು ನಿಂತುವು. ಎತ್ತುಗಳೆಲ್ಲವನ್ನೂ ಹುರಿದುಂಬಿಸಿ ಕೇಕೆ ಹಾಕಿ ಬಾಲವನ್ನು ಒಡೆಮುರಿದು ಓಡಿಸಲು ಬಿಜ್ಜಳನ ಹೋರಿಯೊಂದು ಮಿಂಚಿನ ವೇಗದಿಂದ ಓಡಿ "ಕರುಗಲ್ಲ ಹಬ್ಬ ಗೆದ್ದುಗ್ರವಾಗಲ್ಕಂಡು,'' ಮಣ್ಣಿನಿಂದ ಎತ್ತನ್ನು ಮಾಡಿ ಆದಕ್ಕೆ ತನ್ನ ಶಕ್ತಿಮೀರಿ ಶೃಂಗಾರಮಾಡಿ ತನ್ನ ಕೈಯಲ್ಲಿ ಹಿಡಿದುಕೊಂಡು ಓರಗೆಯ ಮಕ್ಕಳೊಡನೆ ಬಂದಿದ್ದ 'ಊರಮೂಲಿಗ' "ಸಿದ್ಧಿಸೆಟ್ಟಿಯ ಸುತ''ನು ತನ್ನ ಮಣ್ಣೆತ್ತು ಓಡಲಿಲ್ಲವಲ್ಲ ಎಂದು ಒಳಗೊಳಗೆ ಕೊರಗುತ್ತಿರಲು ಕೊಂಡೆಯರೂ ಅದೇ ಸಮಯದಲ್ಲಿ ಅಯ್ಯೋ ಬಸವನ ಎತ್ತು ಓಡಲೇ ಇಲ್ಲವೆಂದು ಅಣಕವಾಡಿದರು. ಆ ಮಗುವಿನ ದುಗುಡಕ್ಕೆ ಮೇರೆಯಿಲ್ಲವಾಯಿತು. ಆಗ ಬಸವೇಶ್ವರನು "ಆದಿಪರಶಿವನ ಹೊತ್ತು ಬಹ ವೃಷಭ ಗೆಲ್ಲಸೋಡಳುವ ವರ ಶಿಶುವ ಹಸುಳೆನಲ್ಬಹುದೆ, ನಿತ್ಯಂಗೆ ತುತ್ತಾದವನ ಸೂಕ್ಷ್ಮನೆನಬಹುದ'' ಎನುತ್ತ ಆ ಹಸುಳೆಯೆಡೆಗೆ ಒಂದು ದಿವ್ಯದೃಷ್ಟಿಯಿಂದ ಆ ಮಣ್ಣೆತ್ತನ್ನು ನೋಡಿ "ಕರಪರುಷನಂಗೈಯುಲು''. ಆ ಎತ್ತು "ಠಣಕರಿಸುತೆಯ್ದೆ ಬ್ರಹ್ಮಾಂಡ ಕದರಿತು.'' "ರಥವ ನಿಱಿದೆತ್ತಿ'' ಕರಿಘಟೆಗಳನ್ನು ಅಪ್ಪಳಿಸಿತು, ವಾಜಿಗಳನ್ನು ಚದುರಿಸಿತು. ಬಿಜ್ಜಳನು ಬೆದರಿ ಬಸವೇಶ್ವರನ ಪಾದಕ್ಕೆ ಬಿದ್ದು "ಶಿಡಿಲು ಹೊಡೆಯಲ್ಕಿಡಿದ ಕೊಡೆಯೆನ್ನ ಕಾಯ್ವುದೆ''? ನಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಳ್ಳಲು ಬಸವೇಶ್ವ

ರನು ಮಣ್ಣಿತ್ತನ್ನು ಪುನಃ ನೆಲಕ್ಕಿಳಿಸಿದನು. ಕುಹಕರಿಗೆ ಆಗಲೂ ಸಮಾಧಾನವಾಗಲಿಲ್ಲ. ನಿಜವಾದ ಎತ್ತಿನಂತೆ ಮೇವುನೀರನ್ನು ಸವಿದರೆ "ನಿಮ್ಮ ನಿಷ್ಠೆ ನಿಜವಹುದು" ಎಂದರು. ಬಸವೇಶನು ಆ ಕ್ಷಣದಲ್ಲಿಯೇ ಮೇವು ಮುರವನ್ನು ತಿನ್ನಿಸಿದನು. ಸಭೆಯೆಲ್ಲಾ ಮಹಾಪುರುಷ ಬಸವೇಶ್ವರನ ಪವಾಡವನ್ನು ಕಂಡು ಬೆಕ್ಕಸ ಬೆರಗಾದರು (೩೫). ಹೀಗೆಯೇ ಇನ್ನೊಂದು ದಿನ ಸುಟ್ಟಿದ್ದ ಸುಣ್ಣವನ್ನು ಪಾಯಸವನ್ನಾಗಿಮಾಡಿ ಮಂಗಳಪುರದ ಪ್ರಜೆಗಳಿಗೆ ಉಣಿಸಿ ತಣಿಸಿದನು (೩೬).

ಮಾಳವದೇಶದಿಂದ ಬಂದಿದ್ದ ರಾಜಠಕ್ಕುರನೆಂಬ, ಕಣ್ಣು ಕೈಕಾಲು ಮೂಗು ಕಿವಿ ಇಲ್ಲದ ಹೊಗಳುಭಟ್ಟನಿಗೆ ಕುಮಂತ್ರಿಗಳೂ ಬಿಜ್ಜಳರಾಜನೂ ಸೇರಿ ಜಂಗಮಮೂರ್ತಿಯ ಉಡಿಗೆ ತೊಡಿಗೆಗಳನ್ನು ಹಾಕಿ ಭೂರುದ್ರನನ್ನಾಗಿ ಮಾಡಿ ಒಂದು ಮೂಲೆಯಲ್ಲಿ ನಿಲ್ಲಿಸಿದರು. ಬಸವೇಶ್ವರನು ಬಂದೊಡನೆಯೇ ಆ ಹೆಳವನಿಗೆ ನಮಿಸಲು ಅವನ ಅಂಗಹೀನತ್ವವು ಮಾಯವಾಯಿತು. ಬಸವೇಶ್ವರನು ಆ ಮಾಳವದೇಶದ ಮೋಟನಿಗೆ ಲಿಂಗಾಂಗ ಕಳೆಯನ್ನು ತುಂಬಿ ಆದಿಭಟ್ಟಯ್ಯನವರೆಂದು ನೂತನವಾದ ಹೆಸರಿಟ್ಟು ಅವನನ್ನು ತನ್ನ ಜೊತೆಯಲ್ಲಿಯೇ ಅರಮನೆಗೆ ಕೊಂಡೊಯ್ದನು (೩೭).

ಒಂದು ದಿನ ರವಿಕುಲತಿಲಕನೂ ರಸಿಕನೂ ಆದ ಬಿಜ್ಜಳನು ತನ್ನ ಆಪ್ತೇಷ್ಟರನ್ನು ಕೂಡಿಕೊಂಡು ಅತಿಶಯ ವೈಭವದೊಡನೆ ಕಲೆಯುಬಲೆಯಾಗಿದ್ದ ನಾಟ್ಯಮಂದಿರವನ್ನು ಪ್ರವೇಶಿಸಿದನು. ಸಂಗೀತವನ್ನು ಕೇಳಿ ಆನಂದಪಟ್ಟವನು ತನ್ನ ಅಂತಃಪುರದ ಕನ್ನಿಕೆಯರಿಗೆ ಶಿವನಾಟಕವನ್ನು ಅಭಿನಯಿಸಲು ಆಜ್ಞೆಯಿತ್ತನು. ಅವರು ಭಿಕ್ಷಾಟನ ಲೀಲೆಯನ್ನು ಅಭಿನಯಿಸಿದರು. ಕೊಂಡೆಯ ಮಂಚಣ್ಣನಿಗೆ ಮತ್ತೊಂದು ಅವಕಾಶ ಸಿಕ್ಕಿತು, ಬಸವೇಶ್ವರನ ಮಹಿಮೆಯನ್ನು ಒರೆದು ನೋಡುವುದಕ್ಕೆ. ರಾಜನನ್ನು ಕುರಿತು ಸ್ವಾಮಿ, ಈಗ ನಾವು ನೋಡತಕ್ಕ ನಾಟಕದಲ್ಲಿ ಸ್ತ್ರೀಯರೆಲ್ಲರೂ ಶಿವರೂಪವನ್ನೇ ಧರಿಸಿಬಿಡಬೇಕು, ಬಸವೇಶನು ಬಂದು ನೋಡಿ ನಮಸ್ಕರಿಸುತ್ತಾನೆ, ಆಗ ಅವನ ಭಕ್ತಿಯ ಬೆಲೆಯು ಕವಡೆಗೂ ಕಡೆಯಾಗುವುದು ಎಂದನು. ಬಿಜ್ಜಳನೂ ಅವನ ಮಾತಿಗೆ ಒಪ್ಪಿಗೆ ಇತ್ತನು. ಬಸವೇಶ್ವರನನ್ನೂ ಆ ಗಳಿಗೆಯಲ್ಲಿಯೇ ಬರಮಾಡಿಕೊಂಡನು; ಕತ್ತಲೆಯು ಸೂರ್ಯನನ್ನು ಕರೆಸಿಕೊಳ್ಳುವಹಾಗೆ, ಸರ್ಪನು ಗರುಡನನ್ನು ಕರೆಸಿಕೊಳ್ಳುವಹಾಗೆ. ಶಿವಲಾಂಛನ ಧಾರಿಗಳಾದ ಅಂಗನೆಯರು ರಂಗದ ಮೇಲೆ ಬಂದೊಡನೆಯೇ ಭಕ್ತಿಭಾಂಡಾರಿಯಾದ ಬಸವೇಶ್ವರನು ಎದ್ದು ಅವರಿಗೆ ನಮಸ್ಕರಿಸಿದನು. ಕೊಂಡೆಯರು ಗಹಗಹಿಸಿ ನಗುತ್ತ ಬಸವೇಶ್ವರನಿಗೆ ನಿಜ ಸಂಗತಿಯನ್ನು ಅರುಹಿದರು. ಆದರೆ ವೇಷಧಾರಿಗಳಾಗಿದ್ದ ಸ್ತ್ರೀಯರೆಲ್ಲರೂ ಬಸವೇಶ್ವರನು ಪ್ರಣಾಮಗೈದ ಕೂಡಲೆ ನಿಜ ಜಂಗಮರಾಗಿದ್ದರು. ಆ ಜಂಗಮರೊಡಗೂಡಿ ಬಸವಣ್ಣನು ತನ್ನ ಅರಮನೆಗೆ ಹೋದನು (೩೮). ಇನ್ನೊಂದುದಿನ ಕುಹಕಿಗಳು ಮರದ ಗೊಂಬೆಗೆ ಕಾವಿಯನ್ನುಡಿಸಿ ಬಸವೇಶ್ವರನು

ಬರುವ ದಾರಿಯಲ್ಲಿಟ್ಟಿರಲು ಬಸವೇಶ್ವರನು ಆ ಕಾಷ್ಠತಾಪಸಿಯನ್ನು ತನ್ನ ಪರುಷ ಪ್ರಭಾವದಿಂದ ನಿಜ ಜಂಗಮವ ಮಾಡಿದನು (೪೯).

ದೂಷಕ ಕುಲಾರ್ಣವವಡಬನೂ, ಶರಣಪದಪಂಕಜಭ್ರಮರನೂ ಆದ ಮಡಿವಾಳ ಮಾಚಯ್ಯನು ಶಿವಶರಣರ ದಿವ್ಯವಸ್ತ್ರಗಳನ್ನು ತನ್ನ ಹರುಷ ಪ್ರವಾಹದಲ್ಲಿ ತೊಳೆದು ಆತ್ಮದುಬ್ಬೆಯಲ್ಲಿ ಸ್ತುತ್ಯಪ್ಪಮದ ಸಮಿಧೆಯನಿರಿಸಿ "ಜ್ಞಾನಾಗ್ನಿಯ ಪ್ರಭಾವಿಸಿ" ಆ ವಸ್ತ್ರಗಳನ್ನು ಮೋಳಿಗೆ ಕಟ್ಟಿಕೊಂಡು "ಗಂಗೆಯೊಳು ಹರುಷದಿಂ ತೊಳೆದು ಶಿವರಸದ ಗಂಜಿಯನಿಕ್ಕಿ ಘಳಿಗೆಯಂ ಮಾಡಿ" ಎಡಗೈಯಲ್ಲಿ ಘಂಟೆಯನ್ನೂ ಬಲಗೈಯಲ್ಲಿ ಅಲಗನ್ನೂ ಹಿಡಿದು "ಸಂಧಿಸದಿರಿದಿರಾಗದಿರಿರೊ ಜಡ ಭವಿಗಳಿರ ಕೊಂದಪೆನು ಸಾಖಿ ಕೊಂಡಡೆ ದೋಷವಿಲ್ಲೆಂದು" ಸಾರುತ್ತ ಗಣಂಗಳ ಮನಗೈದಿ ಮಡಿವಸ್ತ್ರಗಳನ್ನು ಸಮರ್ಪಿಸುತ್ತಿದ್ದನು. ಹೀಗಿರುತ್ತಿರಲು ಒಂದು ದಿನ ಒಬ್ಬ ವಿಪ್ರನು ಮಡಿವಾಳ ಮಾಚಯ್ಯನ ದಾರಿಗೆ ಅಡ್ಡಬರಲು ಮಾಚಯ್ಯನು ಆ ವಿಪ್ರನನ್ನು ಇರಿದು ಗಗನಕ್ಕೆಚಿಮ್ಮಿದನು. ವಿಪ್ರರು ದೊರೆಯೆಡೆಗೆ ಹೋಗಿ ಗೋಳಿಟ್ಟರು. ಮಂಚಣ್ಣನು ವಾಡಿಕೆಯಂತೆ ಒಂದಕ್ಕೆ ಒಂಬತ್ತು ಸೇರಿಸಿ ಹೇಳಿ ಬಿಜ್ಜಳನನ್ನು ಕೋಪಾವಿಷ್ಟನನ್ನಾಗಿ ಮಾಡಿದನು. ಮಡಿವಾಳನನ್ನು ಹಿಡಿತರುವುದಕ್ಕೆ ರಾಜಭಟರನ್ನು ಅಟ್ಟಿದರು. ಮಡಿವಾಳನು ತನ್ನ ಮಡಿಯ ಮೋಳಿಗೆಯನ್ನು ಗಗನದಲ್ಲಿಯೇ ನಿಲಿಸಿ "ದಕ್ಷನ ತಲೆಯ ವೀರೇಶ ಕೆಡಹಿ ದಿವಿಜರ ತಲೆಯ ಹೊಡೆಚೆಂಡ ನಾಡಿದೊಲು" ರಾಜ ಭಟರನ್ನೆಲ್ಲಾ ಕುಟ್ಟಿ ಕೆಡಹಿದನು. ನುಸುಳಿಕೊಂಡು ಓಡಿಬಂದ ಸೇವಕರು ತಮ್ಮ ದುಸ್ಥಿತಿಯನ್ನು ಬಿಜ್ಜಳನಿಗೆ ತಿಳಿಸಿದರು. ರಾಜನ ಅಜ್ಞೆಯಂತೆ ಮದದಾನೆಯೊಂದನ್ನು ಮಡಿವಾಳ ಮಾಚಯ್ಯನ ಮೇಲೆ ಬಿಟ್ಟರು. ಮಾಚಯ್ಯನು ಆ ಆನೆಯನ್ನು ಭರದಿಂದ ತಿವಿದು ಒದೆದು ಸೊಂಡಿಲನ್ನು ಹಿಡಿದು ಧರೆಗೆ ಅಪ್ಪಳಿಸಿ ಕೆಡಹಿದನು. ಆಗ ಕ್ರೂರರೂಪನಾದ ಬಿಜ್ಜಳನಿಗೆ ಎಚ್ಚರವಾಯಿತು. ಬಸವೇಶ್ವರನಲ್ಲಿ ಮೊರೆಯಿಟ್ಟನು. ಬಸವರಾಜನ ಪ್ರಾರ್ಥನೆಯಂತೆ ಮಡಿವಾಳನು ಆ ಪಟ್ಟದಾನೆಯನ್ನೂ ಮಡಿದು ಬಿದ್ದಿದ್ದ ರಾಜಭಟರದನ್ನೂ ಬದುಕಿಸಿ ತನ್ನ ಖಡ್ಗಕ್ಕೆ ಮೀಸಲಾಗಿದ್ದ ವಿಪ್ರನಿಗೆ ಮುಕ್ತಿಯನ್ನು ಕರುಣಿಸಿದನು (೫೦).

ಕಲ್ಯಾಣವೆಂಬ ಶಿವಪುರದಲ್ಲಿ ಕ್ರೀರೂಪ ಭಾವರೂಪಗಳೆರಡೂ ಒಂದೇ ಕಡೆಯಲ್ಲಿ ಅರಸು ಮಂತ್ರಿಗಳಾಗಿ ಮೆರೆಯುತ್ತಿರಲು ಒಂದು ದಿನ ಪುರಾಣಿಕರು, ಕಪಿಕಟಕವು ನಗತತಿಯನ್ನೇ ಎತ್ತಿತಂದು ಸೇತುವೆಯನ್ನು ಕಟ್ಟಿತೆಂದು ಹೇಳಲು ಬಿಜ್ಜಳನಿಗೆ ಬಹಳ ವಿಸ್ಮಯವಾಗಿ ಆ ಕಥೆಯನ್ನೇ ಮತ್ತೆ ಮತ್ತೆ ಅತ್ಯಂತ ಆದರದಿಂದಲೂ ಭಕ್ತಿಯಿಂದಲೂ ಕೇಳುತ್ತಿದ್ದನು. ಬಸವೇಶ್ವರನು ಅರಸನನ್ನು ಕುರಿತು "ಭಾಳಲೋಚನನೊಲಿದರಿಂಗರಿದೆ" ಎನಲು ಕುಹಕಿಗಳು ನಿನಗೆ ಭಾಳನೇತ್ರನು ಒಲಿದಿರುವುದು ಸತ್ಯವಾದರೆ ನಮಗೆ ದೃಷ್ಟಾಂತವನ್ನು ತೋರಿಸಬೇಕೆಂದು ಹೇಳುವರು. ಅದಕ್ಕೆ ಬಸವನು "ಹಪ್ಪಳಿಸಿ ಹೇಡಾದಿ ಹಿಮ್ಮೆಟ್ಟಿದನೆ? ಮನದ ದರ್ಪಗುಂದಿದನೆ"? ತನ್ನ ಮಹಾತ್ಮೆಯನ್ನು ಹಡಪಿಗನಲ್ಲಿ ಅನುಗೊಳಿಸಿದನು. ಆ ಹಡಪಿಗನು ಅಲ್ಲಿಯೇ ಎದುರಿಗಿದ್ದ

ಪರ್ವತವನ್ನು ಉಗುರುಮೊನೆಯಿಂದಲೇ ಕಿತ್ತುಕೊಂಡು ಬಂದು ಬಿಜ್ಜಳನ ಎದುರಿಗೆ ಇಟ್ಟನು. ಬಿಜ್ಜಳನು ಬಸವೇಶ್ವರನಿಗೆ ವಿನಮಿಸಿ ಸಕಲ ವಸ್ತ್ರಾಭರಣ ಗಳನ್ನಿತ್ತು ಆನೆಯಮೇಲೆ ಕುಳ್ಳರಿಸಿ ವಾದ್ಯ ಘೋಷಾದಿ ಸಕಲ ಮರ್ಯಾದೆ ಗಳೊಡನೆ ಅವನನ್ನು ಕಳುಹಿಸಿಕೊಟ್ಟನು (೪೧).

ಒಂದು ದಿನ ಬಿಜ್ಜಳೋರ್ವೀಪಾಲನು ಯಾವುದೋ ರಾಜಕಾರ್ಯ ನಿಮಿತ್ತವಾಗಿ ಬಸವೇಶ್ವರನನ್ನು ಕರೆಸಲು ಅವನು ಶಿವಪೂಜಾರತನಾಗಿರುವ ನೆಂದೂ ಆ ಸಮಯದಲ್ಲಿ ಭವಿಗಳನ್ನು ನೋಡುವುದಿಲ್ಲವೆಂದೂ ಸೇವಕರು ಅರಿಕೆ ಮಾಡಿಕೊಂಡರು. ಆಗ ಬಿಜ್ಜಳನು ಹತ್ತಿಯು ಬೆಂಕಿಯೊಡನೆ ಸರಸವಾಡುವಂತೆ 'ಪಾವು ಗರುಡನೊಳು ಕದನಕೆಳಸುವವೊಲು' ಸತ್ತಿಗೆ ಕಾಯಕದವನೊಬ್ಬನಿಗೆ ಜಂಗಮ ವೇಷವನ್ನು ಹಾಕಿ ಬಸವೇಶ್ವರನ ಶಿವಪೂಜಾ ಮಂದಿರದೊಳಗೆ ನುಗ್ಗಿ ಅವನನ್ನು ತ್ವರೆಯಿಂದ ಕರೆದು ತಾ ಎಂದು ಅಪ್ಪಣೆಯಿತ್ತು ಕಳಿಸಿದನು. ಸತ್ತಿಗೆ ಯವನು ಬಸವೇಶ್ವರನ ಶಿವಪೂಜಾಮಂದಿರಕ್ಕೆ ನುಗ್ಗಿ ಬಸವೇಶ್ವರನನ್ನು ಕಂಡವನೆ ಮಿಳ್ಮಿಳನೆ ನೋಡುತ್ತ ನಿಂತು ಬಿಟ್ಟನು. ಬಸವೇಶನು ಅವನನ್ನು ಕರೆ ದೊಯ್ದು ಷೋಡಶೋಪಚಾರಮಾಡಿ ತೃಪ್ತಿಪಡಿಸಿ ಆತನ ಪ್ರಸಾದವನ್ನು ಸ್ವೀಕರಿಸಿ ಅತ್ಯಾನಂದದಿಂದ ಹಿಗ್ಗುತ್ತಿದ್ದನು. ಸತ್ತಿಗೆಯವನು ನಿಜವಾದ ಜಂಗಮನೇ ಆದನು. ಬಿಜ್ಜಳನು ಇದನ್ನು ಕಂಡು ಅತ್ಯಂತ ಆಶ್ಚರ್ಯಪಟ್ಟು ಬಸವೇಶ್ವರನಿಗೂ ಸತ್ತಿಗೆ ದೇವಯ್ಯನಿಗೂ ನಮಿಸಿ ಅವರನ್ನು ಬೀಳ್ಕೊಟ್ಟನು. (೪೨). ಒಂದು ದಿನ ಶಿವಭಕ್ತರು ನಂದಿಯಪ್ರತಿಮೆಯನ್ನು ಪೂಜಿಸಿ ಆ ದೇವರಿಗೆ 'ಎಂಭತ್ತು ಸಾಹಸ್ರ ಖಂಡುಗ ಕಡಲೆಯನ್ನು ನಿವೇದಿಸುತ್ತಿರುವು ದನ್ನು ರಾಜನು ಕಂಡನು. ಆ 'ಕಾಣ'ದ ರಾಶಿಗೆ ಕುದುರೆಗಳನ್ನು ಬಿಟ್ಟು ತಿನ್ನಿಸಿ ರೆಂದು ಆಜ್ಞಾಪಿಸಿದನು. ಅಷ್ಟರಲ್ಲಿ ಬಸವಣ್ಣನು ಬಂದು 'ಹೆತ್ತ ತಾಯನ್ನು ಮಾರಿ ತೊತ್ತಕೊಳ್ಳುವರೆ? ಮುತ್ತಯ್ಯನ ಮುಕ್ಕುಡಿಗೆ ಒತ್ತೆಯಿಡುವರೆ? ಕಲ್ಪವೃಕ್ಷ ವನ್ನು ಕಿತ್ತೆಸೆದು ದತೂರವನ್ನು ಬೆಳೆಯುವರೆ? ಎನ್ನುತ್ತ ದೊರೆಗೆ ಧರ್ಮೋಪ ದೇಶ ಮಾಡುತ್ತಿರಲು ಬಿಜ್ಜಳನೂ ಕೊಂಡೆಯರೂ ಕಲ್ಲನಂದಿ ಎಲ್ಲಿಯಾದರೂ ಕಾಣವನ್ನು ಮೇಯುವುದೇ ಎಂದು ಹಾಸ್ಯಮಾಡಲು ಬಸವೇಶ್ವರರು ಅಲ್ಲಿ ಗುಡ್ಡ ದಂತೆ ಬಿದ್ದಿದ್ದ ಕಡಲೆಯ ರಾಶಿಯನ್ನೆಲ್ಲಾ ಕಲ್ಲನಂದಿಗೆ ಮೇಯಿಸಿದನು (೪೩)

ಬಿಜ್ಜಳ ಮಹೀಶನು ವರ್ಷಾಕಾಲದಲ್ಲಿ ಒಂದು ದಿನ ಒಡ್ಡೋಲಗದಲ್ಲಿ ಇರುತ್ತಿರಲು, ಪಾಪದ ಮಧ್ಯೆ ಪುಣ್ಯದ ಬೆಳೆ ಹೊಳೆಹೊಳೆಯುತ್ತಿರುವಂತೆ ದುರ್ಮಂ ತ್ರಿಗಳ ಮಧ್ಯೆ ಬಸವೇಶ್ವರನು ಶೋಭಿಸುತ್ತಿದ್ದನು. ಕಾರ್ಗಾಲವಾದುದರಿಂದ ಮೇಘ ಘುಡುಘುಡಿಸಿ ಘೂರ್ಮಿಸುತ್ತ ಕಲ್ಯಾಣ ಪಟ್ಟಣವನ್ನೇ ನಡುಗಿಸುತ್ತಿತ್ತು. ಬರಸಿಡಿಲೊಂದು ಕಡೆಗಾಲದ ಅಗ್ನಿಯಂತೆ ಥಳಥಳಿಸುತ್ತ ಬಂದು ಬಿಜ್ಜಳನಿಗೆ ಬಡಿದುಬಿಟ್ಟಿತು. ಆ ಕೂಡಲೇ ಬಸವೇಶ್ವರನು ನೃಪಾಲನಂ 'ಹೊಡೆದ ಬರಸಿಡಿಲ ಕಿಡಿಯಿಂ ಪಿಡಿವೆಳೆದು ಹಾಯ್ಕಿ'ದನು. ಸಭೆಯೆಲ್ಲ' ವಿಸ್ಮಯದೊಳೊಡಗೂಡುತಲ್ಲ ತನತನಗೆ ಸೈವೆರಗಾಗಿ ಧರೆಗೊರಗಿತು' ಬಸವೇಶ್ವರನು ಪಂಚಾಕ್ಷರೀ ಮಂತ್ರ

ವನ್ನು ಪರಿಸುತ್ತ ಧರೆಗೊರಗಿದವರಿಗೆಲ್ಲಾ ಭಸ್ಮವನ್ನು ತಳಿಯಲು ಎಲ್ಲರೂ ಮೇಲಕ್ಕೆದ್ದು ಬಸವೇಶನಿಗೆ ನಮಸ್ಕರಿಸಿ ಅವನನ್ನು ಹಾಡಿ ಹರಸುತ್ತ ತಮ್ಮ ತಮ್ಮ ಗೃಹಗಳಿಗೆ ತೆರಳಿದರು (೪೪).

ನಿನ್ನ ಅಂಗದಲ್ಲಿ ಲಿಂಗವನ್ನೂ ಲಿಂಗದಲ್ಲಿ ಅಂಗವನ್ನೂ ಪ್ರತ್ಯಕ್ಷವಾಗಿ ತೋರಿಸಿ ಕೊಟ್ಟರೆ ಆಗ ನೀನು ನಿಜವಾದ 'ಲಿಂಗಸಂಗಿ' ಎಂದು ಬಿಜ್ಜಳನು ನುಡಿಯಲು ಬಸವೇಶ್ವರನು ತನ್ನ ಎರಡು ಕೈಗಳಿಂದಲೂ ತನ್ನ ಅಂಗವನ್ನು ಬಗೆದು ತೋರಲು ಆ ದಿವ್ಯಾಂಗದಲ್ಲಿ ಘನ ಮಹಾಲಿಂಗವು ತೊಳತೊಳಗಿ ಬೆಳಗುತ್ತಿತ್ತು. ಮತ್ತೆ ಆ ಲಿಂಗದಲ್ಲಿ ತನ್ನ ಅಂಗವು ಅಡಗಿರುವುದನ್ನೂ ತೋರಿಸಿದನು. 'ಕೊಂಡೆಯರ ಮುಖರಸವಳಿತುದು' (೪೫).

ಅತ್ಯಂತ ಲಾವಣ್ಯವತಿಯೂ ಲಲಿತ ಕಲೆಗಳಲ್ಲಿ ನಿಪುಣಳೂ ರಂಭೆ, ಊರ್ವಶಿ, ತಿಲೋತ್ತಮೆಯರ 'ಚತುರತೆ ಸುಕಳೆಗಳಂ ಕೇಣಿವಿಡಿದಂತೊಪ್ಪುವ, 'ಇತರರ್ಗಂ ಬೆರಸಿ ಬೆರಸದೆಯೊಲಿಸಿಕೊಳ್ವ ಜಾಣತೆಯಿಂದಲೆಸೆವ' ಪ್ರೌಢ ಪ್ರತಾಪ ಮಾಯಾದೇವಿಯು ಎಂದಿನಂತೆ ಆಸ್ಥಾನಕ್ಕೆ ಬಂದಿದ್ದು ಪುರಾಣಿಕರ ಬಾಯಿಂದ ಶಿವಭಕ್ತಿಮಾಹಾತ್ಮ್ಯವನ್ನೂ ಭವಿಯು ಕೀಳುತನವನ್ನೂ ಭಕ್ತನ ಮೇಲ್ಮೆಯನ್ನೂ ಅರಿತು, ತನ್ನ ಸ್ಥಿತಿಯನ್ನು ಕಂಡು ತನಗೇ ಮರುಕ ಹುಟ್ಟಿ, ಮನೆಗೆ ಬಂದ ಸುಖಿ ಜಂಗಮನು ಏನನ್ನು ಕೊಟ್ಟರೂ ಅದನ್ನೇ ಲಿಂಗವೆಂದು ಭಾವಿಸಿ ಸದ್ಭಕ್ತಿಯಿಂದ ಪೂಜೆಗಯ್ಯಬೇಕೆಂದು ನಿರ್ಧರಿಸಿದಳು. ಸುಖಿಜಂಗಮ ಮಿಂಡನಾಗಯ್ಯನೆಂಬುವನು ಮಾಯಾದೇವಿಗೆ ಉಸಿರು ಬರುವಂತೆ ಅವಳ ಮನೆಗೆ ಬಂದನು. ಆಕೆಯ ಆದರೋಪಚಾರಗಳಿಗೆ ಮಾರುಹೋಗಿ ಕಾಮಾತುರಾಪೇಕ್ಷೆಯಿಂದ ತನ್ನ ಕೈಯಲ್ಲಿದ್ದ ನಿಂಬೆಯ ಹಣ್ಣನ್ನು ಆಕೆಗೆ ಕೊಟ್ಟನು. ಅದಕ್ಕೆ ಪ್ರತಿಯಾಗಿ ಮಾಯಾದೇವಿಯು ಆ ದೇಶಿಕೋತ್ತಂಸನಿಗೆ ಒಲಿಯಲಿಲ್ಲ. ಕಾಮಹರಸ್ವರೂಪರಾದ ನಿಮ್ಮ ಕರುಣ ಪ್ರಸಾದ ದೊರೆತಮೇಲೆ ನನಗಿನ್ನೆಲ್ಲಿಯ ಕಾಮವಿಕಾರ ಎಂದಳು. ಮಿಂಡ ನಾಗಯ್ಯನು ಅವಳ ನಿಸ್ಸೀಮ ಭಕ್ತಿಗೆ ಮೆಚ್ಚಿ ತಲೆದೂಗಿ ಆಕೆಗೆ ಆಶೀರ್ವದಿಸಿ ತನ್ನ ಮನೆಗೆ ತೆರಳಿದನು. ಮಾಯಾದೇವಿ ಆಸ್ಥಾನವನ್ನು ಮರೆತಳು. ಹಗಲಿರುಳೂ ಲಿಂಗಧ್ಯಾನದಲ್ಲಿ ನಿರತಳಾದಳು.

ಕೊಂಡೆಯರು ಈ ಸುದ್ದಿಯನ್ನು ಬಿಜ್ಜಳನಿಗೆ ಚುಚ್ಚುವುದನ್ನು ಮರೆಯಲಿಲ್ಲ. ಬಸವೇಶ್ವರನು ಬಿಜ್ಜಳನಿಗೆ, ಸೂಳೆ ಕಮಲಾಯಿ ಮುಂತಾದವರ ಕಥೆಯನ್ನು ಹೇಳಿ ಎಂತಹ ಪಾಪ ಕಾರ್ಯವನ್ನು ಮಾಡಿದವರಾದರೂ ಲಿಂಗ ಪೂಜೆಮಾಡಿ ಪರಿಶುದ್ಧಾತ್ಮರಾಗುವರೆಂದು ಹೇಳಿದರೂ ಅವನು ಕೇಳಲಿಲ್ಲ. ಆಕೆಯ ಬಳಿಯಲ್ಲಿರುವುದು ಜಂಬೀರ ಫಲವಲ್ಲದೆ ಲಿಂಗವಲ್ಲವೆಂದು ಆಕ್ಷೇಪಿಸಿದನು. ಕಮಲಾಯಿಯು ದೊರೆಯ ಬಳಿಗೆ ಬಂದು ತನ್ನ ವಸ್ತ್ರದಲ್ಲಿ ಬಂಧಿಸಿಟ್ಟಿದ್ದುದನ್ನು ಹೊರಗೆ ತೆಗೆಯಲು ಅಲ್ಲಿ ನಿಂಬೆಯ ಹಣ್ಣಿರಲಿಲ್ಲ, ಥಳಥಳಿಸುವ ಲಿಂಗವಿತ್ತು. ಅಂದಿನಿಂದ ಆಕೆಗೆ ನಿಂಬ್ಯಕ್ಕನೆಂದು ಹೆಸರಾಯಿತು (೪೬).

ಮಿಂಡಮಲ್ಲಿನಾಥಯ್ಯನೆಂಬ ಜಂಗಮನೊಬ್ಬನು ಒಂದು ದಿನ ಅರಮನೆಯನ್ನು ಪ್ರವೇಶಿಸಿ ಅಲ್ಲಿನ ವೈಭವವನ್ನು ನೋಡುತ್ತ ಮುಂದುವರಿದಿರಲು ಅಲ್ಲಿದ್ದ ರಾಜಕನ್ಯೆಯೊಬ್ಬಳು ಈ ವಿಟಜಂಗಮನಿಗೆ ಮನಸೋತು ಇವನನ್ನು ತನ್ನ ಗೃಹಕ್ಕೆ ಕರೆದೊಯ್ಯುವಳು. ಸೂರ್ಯನು ಈ ಅಕಾರ್ಯವನ್ನು ನೋಡಲಾರೆನೆಂದು ಮರೆಯಾದನು. "ಇವರ್ಗೆ ಪಾತಕ ಪರ್ಬಿದೊಲು ತಮಂ ಪಸರಿಸುತಿರೆ" ಬಿಜ್ಜಳನು ರಾಣೀವಾಸಕ್ಕೆ ಬಂದು ಅವರಿಬ್ಬರನ್ನೂ ಕಂಡು "ಕೈಯಲಗನುಗಿದು ಝಳಪಿಸಲು, ನಿಟ್ಟಿಸುತೇಳುವಯ್ಯ"ನನ್ನೂ ಆ ರಾಣಿಯನ್ನೂ ಇರಿದು ಕೆಡಹಿದನು. ಅರಸನು ಕೊಂಡೆಯರ ಸೂಚನೆಯ ಪ್ರಕಾರ ಬಸವೇಶ್ವರನನ್ನು ಕರೆಸಿದನು. ಬಸವಣ್ಣನು ಬಂದು, ಶಿವಯೋಗಿಯನ್ನು ಕೊಂದುದು ಮಹಾಪರಾಧವೆಂದೂ ಅದಕ್ಕೆ ಸರಿಯಾದ ಪ್ರಾಯಶ್ಚಿತ್ತವಾಗಬೇಕೆಂದೂ ಬಿಜ್ಜಳನಿಗೆ ಹೇಳಿ ಆ ಜಂಗಮಯ್ಯನ ಪಾದಕ್ಕೆ ಬಿದ್ದ ಕೂಡಲೇ ಅವನು ನಿದ್ರೆಯಿಂದೆದ್ದವನಂತೆ ಮೇಲಕ್ಕೆದ್ದನು. ಆ ಮಹೇಶ್ವರನ ಪಾದದ "ಅಡಿವಣ್ಣ" ತೆಗೆದುಕೊಂಡು ಆ ರಾಣಿಯು ಹಣೆಗೆ ತಳೆಯಲು ಆಕೆಯ ಹರಣದೊಂದಿಗೆ ಸೇರಿಕೊಂಡಿದ್ದ ಲೋಹಿತಾಂಬರೆಯೆಂಬ ಯಕ್ಷಕನ್ನೆಯೂ ಆ ರಾಜಕನ್ನೆಯಲ್ಲಿಯೇ ಸೇರಿಕೊಂಡಳು. "ತಾಪಸನ ರುಧಿರ ವೀಂಟಿದ ಶಸ್ತ್ರದೋಷಕ್ಕೆ" ಮೂವತ್ತಾರು ಸಾವಿರ ಜಂಗಮರಿಗೆ "ಕಂಥೆ ಕಾಷಾಂಬರ"ಗಳಿತ್ತರೆ ಪಾಪವು ಪರಿಹಾರವಾಗುವುದೆಂದು ಬಿಜ್ಜಳನಿಗೆ ತಿಳಿಸುವನು. ಅದಕ್ಕೆ ಬಿಜ್ಜಳನು ನೀವೇ ಸಕಲ ಸನ್ನಾಹವನ್ನೂ ಮಾಡಿ ತಾಪಸೇಶ್ವರರನ್ನು ಮೂರ್ತಿಗೊಳಿಸಿ ನನ್ನನ್ನು ಕರೆಸಬೇಕೆಂದು ಪ್ರಾರ್ಥಿಸಿದನು. (೪೭).

ಸಚ್ಚಿದಾನಂದ ಸ್ವರೂಪನೂ ನಾದಬಿಂದುಕಳಾತೀತನೂ ಆದ ಪರವಸ್ತುವು "ನಿರ್ದೇಹದೇಹಿಕದಿ" ಪ್ರಸನ್ನನಾಗಿ ಬಂದು ತನ್ನ "ದಾಸೋಹಕ್ರೀವರ್ಮ"ವನ್ನು ಅವಗ್ರಹಿಸಿ ಸೋಹಾಮೃತವನ್ನು ಊಡಿಸಿ ಶೂನ್ಯಸಿಂಹಾಸನವನ್ನು ಅಲಂಕರಿಸಲೆಂದು ಬಸವಣ್ಣನು ಶೂನ್ಯಸಿಂಹಾಸನವನ್ನು ನಿರ್ಮಿಸಿದನು. ತೇಜಃಪುಂಜವಾದ ಆ ದಿವ್ಯಸಿಂಹಾಸನವು ಭಾವಶೂನ್ಯರ ಕಣ್ಣಿಗೆ ಭ್ರಮೆಯನ್ನುಂಟುಮಾಡುತ್ತಿತ್ತು. "ಮುಸುಕುತೆಗೆದಾವನೋಡಲ್ಕೆಕಣ್ಗೆ"ಅಹಿಯಂತೆ, ವ್ಯಾಘ್ರದಂತೆ, ಹೊಸಹೊಗರ ಕೊರಲಗಿನಂತೆ ಕಾಣುತ್ತಿತ್ತು. "ಉರಿಯುಕ್ಕುವಟ್ಟುಗಳ ಪ್ರಳಯದವದಾವ ಮಗುಳ್ದೊಲು ಕದಳಿಕೈಗೈದೊಲಿಹುದಮಳತರ ಶೂನ್ಯಸಿಂಹಾಸನ." ಗಣಂಗಳೆಲ್ಲರೂ ನೆರೆದರು. ಬಿಜ್ಜಳನು ರಾಜವೈಭವದಿಂದ ಮೆರೆಯುತ್ತ ಬಂದು ಗಣಕುಲಕ್ಕೆ ಕಾಣಿಕೆ ಕೊಟ್ಟು ವಂದಿಸಿದನು. ಒಳಗಡೆ ಲಿಂಗಪ್ರಸಾದಕ್ಕೆ ತುಡುಕಿದ ಮಂಜರವೊಂದನ್ನು ಕುಳಿತಿದ್ದೆಡೆಯಿಂದಲೇ ಕೈಸನ್ನೆಯಿಂದ ಓಡಿಸಿದುದನ್ನು ಕಂಡು ಬಿಜ್ಜಳನೂ ಅವನ ಸಂಗಡಿಗರೂ ಬೆರಗಾದರು. "ಜಂಗಮದ ಪದಪರುಷ ಪಾದರಸದ" ಕುಂಡದ ಮಹಿಮೆಯನ್ನು ಕಂಡ ಬಿಜ್ಜಳನು ಸೋಜಿಗಗೊಂಡನು. ಆಗ ಬಸವೇಶ್ವರನ ಮಹಿಮೆ ಕ್ರೀರೂಪನಾದ ಬಿಜ್ಜಳನಿಗೆ ಮನವರಿಕೆಯಾಯಿತು. "ಅಪರಿಮಿತ ದೃಷ್ಟಗಳ ಘಟ್ಟಿಗೊಳಿಸಿದ" ನಿಷ್ಠೆಯ ನಿಜಗಲಿತ "ಈ ಬಸವೇಶ್ವರನು ಕಾರಣಪುರುಷನಿರಬೇಕೆಂದು ಕ್ರೀರೂಪನಾದ ಬಿಜ್ಜಳನಿಗೆ ಅರಿವಾಯಿತು.

ಅಲ್ಲಿಯ ಸನ್ನಿವೇಶ ಪ್ರಭಾವದಿಂದ ಅವನಿಗೆ ಜಾತಿಸ್ಮರತ್ವವುಂಟಾಗಲು ತಾನು ಮಾಡಿದ ಪಾಪಕೃತ್ಯಗಳನ್ನು ನೆನೆಸಿಕೊಂಡು ನಾಚಿ ಬಸವೇಶ್ವರನ ಪಾದಕ್ಕೆ ಬಿದ್ದು ಇನ್ನು ಮಹಾತ್ಮರಾದ ತಾವು ಆಸ್ಥಾನಕ್ಕೆ ಬರಬಾರದೆಂದೂ ಮಂತ್ರಿಮುದ್ರೆಯನ್ನು ಚೆನ್ನಬಸವಣ್ಣನವರಿಗೆ ಕೊಡಬೇಕೆಂದೂ ಬೇಡಿಕೊಂಡನು. ಅವನ ಅನುಚರರಾಗಿದ್ದ ಕೊಂಡೆಯರೂ ಬಸವೇಶ್ವರನಿಗೆ ಸಾಷ್ಟಾಂಗ ನಮಸ್ಕಾರಮಾಡಿ ಶಾಪವಿಮುಕ್ತರಾದರು. ದಿವ್ಯಸಿಂಹಾಸನಕ್ಕೆ ಅಡ್ಡಬಿದ್ದು ಆದಿಗಣನಾಥನಿಂದ ಬೀಳ್ಕೊಂಡು ಬಿಜ್ಜಳನು ತನ್ನ ಅರಮನೆಗೆ ತೆರಳಿದನು. ಅಂದಿನಿಂದ ಬಸವೇಶ್ವರನು ಹರಪೂಜೆ ಗುರುಸೇವೆಯಲ್ಲಿಯೇ ನಿರತನಾಗಿದ್ದನು (೪೮).

ಬಸವ ಚರಿತ್ರೆಯ ಗ್ರಂಥಗಳಲ್ಲಿರುವ ಕಥಾವ್ಯತ್ಯಾಸ.

ಬಸವಣ್ಣನ ಜೀವನವನ್ನೇ ವಸ್ತುವಾಗಿಟ್ಟುಕೊಂಡು ಅನೇಕ ಕವಿಗಳು ಕಾವ್ಯರಚನೆ ಮಾಡಿದ್ದಾರೆ. ಅವರೆಲ್ಲರಲ್ಲಿ ಬಹುಶಃ ಮೊದಲಿಗನಾದ ಹರಿಹರ ಕವಿಯು ಭಕ್ತಿಭಾಂಡಾರಿ ಬಸವಣ್ಣನ ಜೀವನಚರಿತ್ರೆಯನ್ನು ರಗಳೆಯ ಶೈಲಿಯಲ್ಲಿ ಹೃದಯಂಗಮವಾಗಿ ರಚಿಸಿದ್ದಾನೆ. ಪಾಲ್ಕುರಿಕೆಯ ಸೋಮನಾಥ, ಭೀಮಕವಿ, ಮತ್ತು ಸಂಸ್ಕೃತ ಪುರಾಣಿಕರು ದ್ವಿತೀಯ ಶಂಭುವಿನ ಅವತಾರವಾದ ಬಸವೇಶ್ವರನನ್ನು ಹಾಡಿ ಹೊಗಳಿ ಅತಿಮಾನುಷವ್ಯಕ್ತಿಯನ್ನಾಗಿ ಮಾಡಿದ್ದಾರೆ. ಸಿಂಗಿರಾಜನಾದರೋ ಅರುವತ್ತುನಾಲ್ಕು ಪವಾಡಗಳನ್ನು 'ಮೇದಿನಿಪ ಪರಸಮಯದಾಚಾರ್ಯರಹುದೆನಲು' ಮೆರೆದು ಜಗವನ್ನು ಬೆರಗುಗೊಳಿಸಿದ 'ಪವಾಡಪುರುಷ' ಬಸವಣ್ಣನ 'ಅಮಲ ಚಾರಿತ್ರ'ವನ್ನು ನಿರೂಪಿಸುತ್ತಾನೆ. ಬಸವಣ್ಣನ ಹುಟ್ಟು ಬೆಳವಣಿಗೆ ಅವನ ಭಕ್ತಿಜ್ಞಾನಗಳ ವಿಕಾಸ, ಅವನ ಪ್ರಭಾವಕ್ಕೊಳಪಟ್ಟು ಉದ್ಧಾರವಾದವರು, ಅವನ ಮೇಲೆ ತಮ್ಮ ದಿವ್ಯಪ್ರಭಾವವನ್ನು ಚೆಲ್ಲಿರುವ ಮಹಾನುಭಾವರು—ಈ ವಿಷಯಗಳನ್ನೆಲ್ಲ ಲಕ್ಷ್ಯದಲ್ಲಿಟ್ಟುಕೊಂಡು, ಬಸವಣ್ಣನನ್ನು ಕುರಿತ ಗ್ರಂಥಗಳನ್ನು ನೋಡಹೋದವರು ಬಹುಮಟ್ಟಿಗೆ ನಿರಾಶರಾಗುತ್ತಾರೆ. ಹರಿಹರನಾಗಲಿ ಪಾಲ್ಕುರಿಕೆ ಸೋಮೇಶ್ವರನಾಗಲಿ ಸಿಂಗಿರಾಜನಾಗಲಿ ಬಸವಣ್ಣನನ್ನು ಕಂಡರಿತವರಲ್ಲ, ಅವನ ಸಮಕಾಲೀನರೂ ಅಲ್ಲ. ಬಾಯಿಂದ ಬಾಯಿಗೆ ಬಣ್ಣವೇರುತ್ತ ಅಥವಾ ಬಣ್ಣಗುಂದುತ್ತ ಬಂದ ಸಂಗತಿಗಳೇ ಇವರೆಲ್ಲರ, ಮುಖ್ಯವಾಗಿ ಹರಿಹರ ಸೋಮನಾಥರ ಕೃತಿಗಳಿಗೂ, ವಸ್ತು. ಆದುದರಿಂದ ಇಂತಹ ಪುರಾಣಗಳಲ್ಲಿ ಪರಸ್ಪರ ಹೊಂದಿಕೆಯಿರುವುದು ಅಷ್ಟಾಗಿ ಕಂಡುಬರುವುದಿಲ್ಲ.

ಬಸವಪುರಾಣಕಾರರನ್ನು[1] ಮೂರು ಗುಂಪುಗಳಾಗಿ ವಿಂಗಡಿಸಬಹುದು. ಪಾಲ್ಕುರಿಕೆ ಸೋಮನಾಥ, ಭೀಮಕವಿ ಕಂಚಿಯ ಶಂಕರಾರಾಧ್ಯ, 'ವ್ಯಾಸ',

---

[1] ಲಕ್ಕಣ್ಣದಂಡೇಶನಿಂದ (ಕ್ರಿ. ಶ. ೧೪೫೦) ಈಚೆಗೆ ಬಂದ ಕವಿಗಳ ಕೃತಿಗಳನ್ನು ಇಲ್ಲಿ ಅಷ್ಟು ಗಮನಿಸಿಲ್ಲ.

ಇಷ್ಟು ಜನ ಒಂದು ಸಂಪ್ರದಾಯಕ್ಕೆ ಸೇರಿದವರು, ಒಬ್ಬನು ಹೇಳುವುದಕ್ಕೂ ಇನ್ನೊಬ್ಬ ಹೇಳುವುದಕ್ಕೂ ಅಷ್ಟೇನೂ ವ್ಯತ್ಯಾಸವಿಲ್ಲ. ಲಕ್ಕಣ್ಣದಂಡೇಶ ಮತ್ತು ಸಿಂಗಿರಾಜ ಇವರವೇ ಒಂದು ದಾರಿ. ಹರಿಹರ ಒಬ್ಬೊಂಟಿಗ. ಈ ಮೂರು ಸಂಪ್ರದಾಯದವರ ಉಕ್ತಿಗಳಲ್ಲಿ ಒಂದಕ್ಕೊಂದಕ್ಕೆ ಇರುವ ಬಹು ಮುಖ್ಯ ವ್ಯತ್ಯಾಸಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ.

ಜನನಕಾರಣ—ಕೈಲಾಸದಲ್ಲಿ ವೃಷಭಮುಖನೆಂಬ ಗಣೇಶನು ಅನೃತವನ್ನಾಡಿದುದರಿಂದ ಶಿವನಿಂದ ಶಪಿಸಲ್ಪಟ್ಟು ಧರೆಗಿಳಿದು ಬಸವಣ್ಣನಾಗಿ ಹುಟ್ಟಿದನೆಂದು ಹರಿಹರನ ಹೇಳಿಕೆ. ಭೀಮಕವಿಯೇ ಮುಂತಾದವರು ಹೇಳುವುದು: ಮರ್ತ್ಯಲೋಕದಲ್ಲಿ ಶೈವಮತವು ಖಿಲವಾಗುತ್ತಿದೆ ಎಂದು ನಾರದನು ಪರಶಿವನಿಗೆ ಬಿನ್ನಯಿಸಲು ಶಂಕರನು ನಂದಿನಾಥನನ್ನು ಕರೆದು ಮರ್ತ್ಯಲೋಕಕ್ಕೆ ಹೋಗಿ ವೀರಶೈವ ಮತವನ್ನು ಉದ್ಧರಿಸೆಂದು ವಿಜ್ಞಾಪಿಸಿದನು. ಸಿಂಗಿರಾಜನು ಹೇಳಿರುವುದೇ ಒಂದು ರೀತಿ ಇದೆ. ಸಿಂಗಿರಾಜಪುರಾಣದ ಆದಿಯ ನಾಲ್ಕು ಸಂಧಿಗಳಲ್ಲಿ ಬಸವಣ್ಣನ ಅವತಾರಕ್ಕೆ ಕಾರಣವೂ ಅವನು ಅವತರಿಸುವುದಕ್ಕೆ ಮೊದಲು ನಡೆದ ಘಟನೆಗಳೂ ವರ್ಣಿಸಲ್ಪಟ್ಟಿವೆ. ಶಿವನ ಸಭೆಯಲ್ಲಿ ಶಕ್ತಿಯ ಕಲೆಯಾದ ಕ್ರಿಯೆಗೂ ಶಿವನ ಕಲೆಯಾದ ಭಾವಕ್ಕೂ ಘರ್ಷಣೆಯಾಗುವುದು. ಶಿವನ ಅಪ್ಪಣೆಯಂತೆ ಕ್ರಿಯೆಯು ಅನಿಮಿಷರನ್ನೂ ಭಾವವು ವೃಷಭನನ್ನೂ ಸೇರುವುವು. ಕ್ರಿಯೆಯು ತಮ್ಮಲ್ಲಿ ಸೇರಿಕೊಂಡಿದ್ದರಿಂದ ದೇವತೆಗಳು ಅರಿವುದಪ್ಪಿ ವೃಷಭನನ್ನು ಪೀಡಿಸಿದರು. ವೃಷಭನು ನನ್ನನ್ನು ಕೇಳುವವರೇ ಇಲ್ಲವಲ್ಲಾ ಎಂದು ನೊಂದುಕೊಂಡು ಭೂಲೋಕಕ್ಕೆ ಬರುವನು. ಶಿವನ ಕ್ರೋಧಾಗ್ನಿಗೆ ತುತ್ತಾದ ಅನಿಮಿಷನು ವಸುದೀಪ್ಯನೆಂಬ ನಾಮದಿಂದ ಧರೆಯಲ್ಲಿ ಜನಿಸಿ ನಂದೀಶ್ವರನೆಡೆಗೆ ಬಂದು ಅವನಿಂದ ಅವನ ಇಷ್ಟಲಿಂಗವನ್ನು ಪಡೆಯುವನು. ನಂದೀಶ್ವರನು ಮರಳಿ ಕೈಲಾಸಕ್ಕೆ ಬಂದಾಗ ಇಷ್ಟಲಿಂಗಧಾರಿಯಾಗಿರಲಿಲ್ಲವಾದುದರಿಂದ ದ್ವಾರಪಾಲಕರು ಅವನನ್ನು ಅವಮಾನಿಸಲು ಕೊನೆಗೆ ಶಿವನೇ ಬಂದು ಭೂಲೋಕಕ್ಕೆ ಹೋಗಿ ಲಿಂಗಶೂನ್ಯನೆಂಬ ನಿಂದೆಯನ್ನು ಹೋಗಲಾಡಿಸಿಕೊಂಡು ಬಾ ಎಂದು ಅವನಿಗೆ ಅಪ್ಪಣೆಯಿತ್ತು ಹರಸಿ ಅಭಯಪ್ರದಾನ ಮಾಡಿ ಕಳುಹಿಸುವನು. ಬಸವ ಶಿಶುವು ತಾಯಿಯ ಗರ್ಭದಲ್ಲಿಯೇ ಮೂರು ವರುಷ ಇತ್ತೆಂದು ಭೀಮಕವಿ ಹೇಳುತ್ತಾನೆ, ಇನ್ನುಳಿದವರು ಹೀಗೆ ಹೇಳಿಲ್ಲ. ಬಸವನ ಜನನಕಾರಣ, ಜನನ ಇವುಗಳನ್ನು ಹೇಳುವಾಗ ಲಕ್ಕಣ್ಣದಂಡೇಶನು ಭೀಮಕವಿಯನ್ನೇ ಅನುಸರಿಸಿದ್ದಾನೆ.

ಲಿಂಗಧಾರಣೆ—ಬಸವನು ಹುಟ್ಟಿದೊಡನೆಯೇ ಕಪ್ಪಡಿಯ ಸಂಗಮೇಶ್ವರನು ಚರಲಿಂಗ ರೂಪದಿಂದ ಬಂದು ಅವನಿಗೆ ಲಿಂಗಧಾರಣೆ ಮಾಡಿ ಬಸವ ಎಂದು ಹೆಸರಿಟ್ಟು ಮಾಯವಾದನು ಎಂದು ಬಸವಪುರಾಣದಲ್ಲಿ ಹೇಳಿದೆ. ಬಸವರಾಜದೇವರ ರಗಳೆಯಲ್ಲಿ ಬಸವೇಶ್ವರನು ಹುಟ್ಟಿದೊಡನೆಯೇ ಅವನ ಮಾತಾಪಿತೃಗಳು ಶಿವಲೋಕವನ್ನು ಸೇರಿದರೆಂದು ಹೇಳಿದೆಯಲ್ಲದೆ ಅಲ್ಲಿ ಲಿಂಗ

ಧಾರಣೆಯ ಪ್ರಸ್ತಾಪವೇ ಇಲ್ಲ. ಸಿಂಗಿರಾಜನು ಹೇಳುವುದು : ಜಾತವೇದಯ್ಯ ಗಳೆಂಬ ಮುನಿಗಳು ಸಂಗಮದಿಂದ ಬಾಗೇವಾಡಿಗೆ ಬಂದಿದ್ದರು, ಬಸವನ ಜನನದ ವಾರ್ತೆಯನ್ನು ಕೇಳಿ ಮಾದರಸನ ಮನೆಗೆ ಬಂದು "ಇಷ್ಟಾಕೃತಾರ್ಥ ಒಂದೊಲಿ ದಿತ್ತೆವಾಗಿ ತನ್ನಿಷ್ಟಲಿಂಗವುದಕ್ಕು", "ಈ ಲಿಂಗಮಂ ಸಿಂಹವಿಷ್ಟರದೊಳಿಟ್ಟರ್ಚಿಸಿರಿ" ಲಿಂಗಾರ್ಪಿತವಲ್ಲದುದು ಏನನ್ನೂ ಮಗುವಿಗೆ ಊಡಿಸಬೇಡಿರಿ ಎಂದು ಹೇಳಿ ಹೊರಟುಹೋದರು. ಶಿವತತ್ವ ಚಿಂತಾಮಣಿಯಲ್ಲಿ ಲಿಂಗಧಾರಣೆ ಮಾಡುವನು ‹‹ ಗಿರಿಜಾತೆ ಸಹಿತಂ ಚಂದ್ರಶೇಖರ."

ಕಪ್ಪಡಿಗೆ ಪ್ರಯಾಣ—ಬಾಗೇವಾಡಿಯ ಬ್ರಾಹ್ಮಣರು, ಬಸವನು ತಮ್ಮ ಬಾಲಕನೊಬ್ಬನನ್ನು ಬಾವಿಯಲ್ಲಿ ನೂಕಿ ಕೊಂದನೆಂದು ದೂರುತ್ತ ಅವನನ್ನು ಶಪಿಸುತ್ತ ‹ ಇರಿ, ತಿವಿ ' ಎಂದು ಅರುಚುತ್ತ ಬರಲು ಬಸವೇಶನು ಮನಗೆ ಬಂದು ಕೋಣೆಯೊಳಗಿದ್ದ ಲಿಂಗವನ್ನು ತೆಗೆದುಕೊಂಡು ಸಂಗಮಕ್ಕೆ ಹೋದನೆಂದು ಸಿಂಗಿರಾಜಪುರಾಣದಲ್ಲಿ ಹೇಳಿದೆ. ಹರಿಹರನ ಪ್ರಕಾರ ಬಸವನು ಹುಟ್ಟಿದೊಡನೆಯೇ ಅವನ ತಾಯಿತಂದೆಗಳನ್ನು ಕಳೆದುಕೊಂಡನು ‹‹ ಶಿವಭಕ್ತಿ ಮುತ್ತಂತಿರ್ದ ಮುತ್ತಬ್ಬೆಯ " ಬಳಿ ಬೆಳೆದು ಹದಿನಾರು ತುಂಬಿದಮೇಲೆ ‹‹ ಶಿವಭಕ್ತಿಯೂ ಕರ್ಮವೂ ಒಂದಾಗಿರದು " ಎಂದು ಬಗೆದು ‹‹ ಕರ್ಮಲತೆ "ಯಂತಿದ್ದ ಜನಿವಾರ ವನ್ನು ಹರಿದೆಸೆದು ಬಂಧುಬಳಗದವರನ್ನು ತೊರೆದು ಕಪ್ಪಡಿಗೆ ಹೋಗುತ್ತಾನೆ. ಭೀಮಕವಿಯ ಬಸವೇಶ್ವರನು ಎಂಟು ವರುಷದವನಿದ್ದಾಗಲೇ ಉಪನಯನವನ್ನು ತಿರಸ್ಕರಿಸಿ ಬಾಂಧವರಿಗೆ ಹೊರತಾಗಿ ಅಕ್ಕನಾಗಾಂಬೆಯೊಡನೆ ಸಂಗಮಕ್ಷೇತ್ರಕ್ಕೆ ಹೋದನು ಉಪನಯನ ನಡೆಯುವ ಸಂದರ್ಭದಲ್ಲಿ ನಡೆದ ಸಂಗತಿಗಳನ್ನು ಸಿಂಗಿರಾಜನು ಬೇರೆ ರೀತಿಯಲ್ಲಿ ಹೇಳಿದ್ದಾನೆ. ಇಲ್ಲಿ ಅವನು ಹರಿಹರ ಹೇಳಿರುವುದನ್ನೇ ಒಪ್ಪಿರುವಂತೆ ತೋರುತ್ತದೆ. ಏಕೆಂದರೆ ಭೀಮಕವಿ ಮತ್ತು ಲಕ್ಕಣ್ಣ ದಂಡೇಶರು ಉಪನಯನಕ್ಕೂ ಅವಕಾಶ ಕೊಡವುದಿಲ್ಲ. ಸಿಂಗಿರಾಜನ ಬಸವಣ್ಣ ಉಪನಯನ ಮಾಡುವವರೆಗೂ ಸುಮ್ಮನಿದ್ದು "ಬಾಲದೊಡಿಗೆಯು ತೊಡಿಸುವಂತಿದೊಂದುತ್ಸಾಹ ಲೀಲೆ" ಎಂದು ತಿಳಿದುಕೊಂಡಿದ್ದೆ, ಈ ಕರ್ಮಲತೆ ಬೇಡ ಎನ್ನುತ್ತ ಜನಿವಾರವನ್ನು ಹರಿಯಲನುಗೈಯಲು ಗುರುಹಿರಿಯರೆಲ್ಲರು ತಡೆದು ‹‹ ಪರಮಕಾರಣಿಕ, ನಮಗೆ ನೀ ತಾತ " ಎಂದು ಹೊಗಳಿ, ತಂದೆತಾಯಿಗಳು ಮಮತೆಯಿಂದ ಹಾಕಿಸಿದ ಜನಿವಾರವನ್ನು ಕಿತ್ತೆಸೆಯುವುದು ಸರಿಯಲ್ಲ ‹‹ ತಾನೆ ಬೀತು ಬಿನ್ನಣವಳಿದು ಹೋದಾಗಲೆ ಹೋಗಲೆನಲು ‹‹ ಆಗಲಿರಲೆಂದನು." ಬಸವನು ದ್ವಿಜರ ಉಪಟಳವನ್ನು ತಾಳಲಾರದೆ ಸಂಗಮಕ್ಕೆ ಬಂದು ಜಾತವೇದಯ್ಯಗಳ ನೆಳಲನ್ನು ಸೇರುವವರೆಗೂ ಜನ್ನಿವರವನ್ನು ಕಿತ್ತೆಸೆದಿರಲಿಲ್ಲವೆಂದು ತೋರುತ್ತದೆ.

ಮದುವೆ—ಸಿಂಗಿರಾಜನ ಹೇಳಿಕೆಯಂತೆ, ಬಸವೇಶ್ವರನು ಕಪ್ಪಡಿಗೆ ಬಂದು ಅಲ್ಲಿ ಹರಪೂಜೆ ಗುರುಸೇವೆಗಳಲ್ಲಿ ನಿರತನಾಗಿ ತನ್ನ ಮಹಿಮಾತಿಶಯ ಗಳಿಂದ ಲೋಕಕ್ಕೆ ಬೆಳಕಾದನು. ಇವನ ವಿಷಯವನ್ನು ಕಲ್ಯಾಣಪುರದಲ್ಲಿ

ಮಂತ್ರಿಯಾಗಿದ್ದ ಬಲದೇವಮಂತ್ರಿಯು ಕೇಳಿ ಹರ್ಷಿತನಾಗಿ "ಅವತ ತಾಯ್ನುಮಗೆ ಮಾತಾಮಹರ ದೆಸೆಯ ವಳಿಯಿಂದ ತಂಗಿಯಹಳು" ಆದುದರಿಂದ ನನ್ನ ಮಗ ಳನ್ನು ಅವನಿಗೆ ಕೊಟ್ಟು ಕೃತಾರ್ಥನಾಗುವೆನೆಂದು ಸಂಕಲ್ಪಿಸುವನು. ಬಸವೇಶ್ವರ ನಿಗೆ ಓಲೆ ಹೋಗುವುದು. ಬಸವೇಶ್ವರನ ಆಗಮನ. ಮದುವೆ ನೆರವೇರುವುದು. ಅಕ್ಕನಾಗಾಂಬೆಯೂ ಬಸವೇಶ್ವರನೂ ಅವನ ಪತ್ನಿ ಗಂಗಾಂಬೆಯೂ ಬಲದೇವನ ಮನೆಯಲ್ಲಿಯೇ ನಿಲ್ಲುವರು. ಭೀಮ ಕವಿಯು, ಬಸವೇಶ್ವರನು ಉಪನಯನನಿ ರಸನ ಮಾಡಿ ಸಹೋದರಿಯೊಂದಿಗೆ ಹೊರಟು ಶಿವಭಕ್ತನೊಬ್ಬನ ಮನೆಯಲ್ಲಿ ಇದ್ದನೆಂದೂ ಉಪನಯನ ಮಹೋತ್ಸವಕ್ಕೆ ಬಂದಿದ್ದ ಮಾದಲಾಂಬಿಕೆಯ ಅಣ್ಣ ಬಲದೇವನು ಬಸವೇಶನ ಬುದ್ಧಿಸಾಮರ್ಥ್ಯಗಳಿಗೆ ಮೆಚ್ಚಿ ಅವನನ್ನು ತನ್ನ ಊರಿಗೆ ಕರೆದೊಯ್ದು ಮದುವೆ ಮಾಡಿದನೆಂದೂ ಆಮೇಲೆ ಬಸವೇಶ್ವರನು ಸಂಗ ಮೇಶ್ವರ ಕ್ಷೇತ್ರಕ್ಕೆ ಹೋದನೆಂದೂ ಹೇಳಿದ್ದಾನೆ.

ಬಸವರಾಜದೇವರ ರಗಳೆಯಲ್ಲಿ—ಸಿದ್ಧದಂಡಾಧಿಪನ ಮರಣಾನಂತರ ಬಸವಣ್ಣನು "ಕನಕಭಂಡಾರಾಜ್ಞೆಯಂ ದಂಡನಾಥ ಸಮಗ್ರ ಪ್ರಭುವೃತ್ತಿಯಂ" ಪಡೆದು ಸತ್ಕುಲ ಸಾದೃಶ್ಯ ಸುಶೀಲೆಯರಪ್ಪ ಗಂಗಾದೇವಿ ಮಾಯಿದೇವಿಯ ರೊಡತಣ ವಿವಾಹ ಸಂಪದದಿಂ ಸಂತಸುಖಮಿರ್ದನೆಂದು ಮಾತ್ರಹೇಳಿದೆ. ಇವರು ಯಾರಮಕ್ಕಳೆಂಬುದು 'ರಗಳೆ' ಯಿಂದ ಗೊತ್ತಾಗುವುದಿಲ್ಲ. ಬಸವೇಶ್ವರನಿಗೆ ಮಾಯಾದೇವಿ ಎಂಬ ಇನ್ನೊಬ್ಬ ಪತ್ನಿ ಇದ್ದಳೆಂದು ಭೀಮ ಕವಿ, ಪಾಲ್ಕುರಿಕೆ ಸೋಮೇಶ್ವರಪುರಾಣವನ್ನು ರಚಿಸಿರುವ ಸಿದ್ದಲಿಂಗ ಶಿವಯೋಗಿ ಮುಂತಾದವರೂ ಹೇಳುತ್ತಾರೆ. ಬಸವೇಶ್ವರನು ಬಿಜ್ಜಳನ ತಂಗಿ ನೀಲಾಂಬಿಕೆ ಯನ್ನೂ ಬಲದೇವನ ಮಗಳು ಗಂಗಾಂಬೆಯನ್ನೂ ಮದುವೆಯಾದನೆಂದು ಲಕ್ಕಣ್ಣದಂಡೇಶನ ಹೇಳಿಕೆ. ನೀಲಾಂಬಿಕೆಯು ಸಿದ್ದರಸನ ಮಗಳೆಂದು ಸಿಂಗಿರಾಜನೂ ವೀರಶೈವಾಮೃತ ಪುರಾಣವನ್ನು ರಚಿಸಿರುವ ಗುಬ್ಬಿಯ ಮಲ್ಲಣಾರ್ಯನೂ ಹೇಳಿದ್ದಾರೆ. ನೀಲಾಂಬಿಕೆಗೆ ಆಕೆಯ ಮದುವೆಗಿಂತ ಮುಂಚೆ ಮಾಯಿದೇವಿ ಎಂಬ ಇನ್ನೊಂದು ಹೆಸರಿದ್ದಿರಬಹುದು.

ಯಾವ ಬಿಜ್ಜಳನಲ್ಲಿ?—ಬಸವಣ್ಣನವರು ತರಿಕಾಡು ಮಂಗಳವೇಡೆಯಲ್ಲಿ ಸಿಂದಬಿಜ್ಜರಸನ ಆಸ್ಥಾನದಲ್ಲಿದ್ದಿರಬೇಕೆಂದು ಡಾಕ್ಟರ್ ಎಸ್. ಶ್ರೀಕಂಠ ಶಾಸ್ತ್ರಿಗಳ ಅಭಿಪ್ರಾಯ.[1] ಚಾಲುಕ್ಯ ಬಿಜ್ಜಳನೇ ಕಲಚೂರಿ ಬಿಜ್ಜಳನು, ಸಿಂದ ಬಿಜ್ಜರಸನಿಂದ ಭಿನ್ನನು; ಈ ಚಾಲುಕ್ಯ ಬಿಜ್ಜಳ (ಕಲಚೂರಿ ಬಿಜ್ಜಳ)ನ ಆಸ್ಥಾನ ದಲ್ಲಿಯೇ ಬಸವೇಶ್ವರನು ಇದ್ದುದು ಎಂಬುದು ಇನ್ನೊಂದು ಅಭಿಪ್ರಾಯ[2] ಸಿಂಗಿರಾಜಪುರಾಣದಲ್ಲಿಯೇ "... ಕಲ್ಯಾಣಪುರವೆನಿಪುದಾಪುರದ ರಾಜಸಿಂಹಾ ಸನಗಳ। ವಳಿಯ ಪಾರಂಪರೆಯ ಚಾಳೋಕ್ಯ ಕಳಸೂರ್ಯ । ಕುಲತಿಲಕಬಲ್ಲಹಗೆ ಸಿಂಹಕೇಶದ್ರವಿಡ। ರಿಳಿದು ಬಿಜ್ಜಳಕರ್ನದೇವರೆನಿಸಿವರೊಳಗ್ರಜ ಪಟ್ಟವಡೆ

---

[1] ಸಾಹಿತ್ಯ ಪರಿಷತ್ ಪತ್ರಿಕೆ, ಅಕ್ಟೋಬರ್ ಡಿಸೆಂಬರ್ ೧೯೩೮, ಶಿವಾನುಭವ ೧೪-೧. [2] ಸಾಹಿತ್ಯಸಮಿತಿಪತ್ರಿಕೆ ೩-೨.

ದಿರಲ್ಕೆ''[1] ಎಂದು ಹೇಳಿರುವುದರಿಂದಲೂ ಬಿಜ್ಜಳನನ್ನು 'ಕಳಸೂರ್ಯವಂಶೇಶ[2]' ಎಂದು ಕರೆದಿರುವುದರಿಂದಲೂ ಬಸವಣ್ಣನಿಗೆ ಸಂಬಂಧಪಟ್ಟ ಬಿಜ್ಜಳನು ಕಲಚೂರಿ ಬಿಜ್ಜಳನೇ ಇರಬೇಕು. ಸಿಂದರಸ ಬಿಜ್ಜಳನಿಗೆ ಕರ್ಣದೇವನೆಂಬ ತಮ್ಮನಾಗಲಿ ಮೊಮ್ಮನಾಗಲಿ ಇದ್ದಂತೆ ಕಾಣುವುದಿಲ್ಲ. ತರಿಕಾಡುನಾಡು ಮಂಗಳವೇಡೆಯಲ್ಲಿ ಬಸವಣ್ಣನ ಅನುಬಂಧಿಗಳಾದ ಶಿವಶರಣರಿದ್ದರೆಂಬುದಕ್ಕೆ ಅಲ್ಲಿ ಯಾವ ಕುರುಹುಗಳೂ ಇಲ್ಲ. ಕಲ್ಯಾಣದಲ್ಲಿಯಾದರೆ ಬಸವಣ್ಣನ ಅರಮನೆ, ಅಕ್ಕಮಹಾದೇವಿಯ ಅರಮನೆ, ಕಿನ್ನರಿ ಬೊಮ್ಮಯ್ಯನ ವಾಸಸ್ಥಾನ--ಇವೆಲ್ಲಾ ಇದ್ದುದರ ಬಗೆಗೆ ಹಲವು ಕುರುಹುಗಳನ್ನು ಇಂದು ಕಾಣಬಹುದು. ಶ್ರೀ ಪಿ. ಜಿ. ಹಳಕಟ್ಟಿಯವರೂ ಮತ್ತು ಶ್ರೀ ಗೋವಿಂದಪೈ ಅವರೂ ಬಸವಣ್ಣನವರು ಕಲ್ಯಾಣದಲ್ಲಿ ಕಲಚೂರಿ ಬಿಜ್ಜಳನ ಆಸ್ಥಾನದಲ್ಲಿಯೇ ಇದ್ದರೆಂದು ಅಭಿಪ್ರಾಯ ಪಡುತ್ತಾರೆ.[3]

ಮಂತ್ರಿಪಟ್ಟ--ಬಸವನು ಸಂಗಮೇಶ್ವರನಿಂದ ಆಜ್ಞಪ್ತನಾಗಿ ಮಂಗಳವಾಡಕ್ಕೆ ಬಂದು ಸಿದ್ಧರಸಮಂತ್ರಿಯ ಕಣ್ಣಿಗೆ ಬಿದ್ದು ಅವನ ಕೃಪೆಗೆ ಪಾತ್ರನಾಗಿ ಬಿಜ್ಜಳನಲ್ಲಿ ಕರಣಿಕನಾಗಿ ಸೇರಿಕೊಂಡನು; ಸಿದ್ಧರಸನು ಶಿವೈಕ್ಯನಾದಮೇಲೆ ಅವನ ಸಾಕುಮಗನಂತಿದ್ದ ಬಸವಣ್ಣನು ಮಂತ್ರಿಪಟ್ಟವನ್ನು ಸ್ವೀಕರಿಸಿದನೆಂದು ಹರಿಹರಕವಿಯು ತಿಳಿಸುತ್ತಾನೆ. ಅವನ 'ರಗಳೆ'ಯಲ್ಲಿ ಓಲೆಯ ಪ್ರಸ್ತಾಪವೇ ಇಲ್ಲ. ಬಲದೇವನು ಬಸವೇಶ ಗಂಗಾಂಬೆಯರ ವಿವಾಹವಾದ ಕೆಲವು ದಿನಗಳ ಮೇಲೆ ಗತಿಸಿದನು, ಆಮೇಲೆ ಬಿಜ್ಜಳನು ಬಸವೇಶ್ವರನನ್ನು ಸಂಗಮೇಶ್ವರದಿಂದ ಕರೆಸಿ ಮಂತ್ರಿತ್ವವನ್ನು ಕೊಟ್ಟನು ಎಂದು ಬಸವಪುರಾಣದಲ್ಲಿ ಹೇಳಿದೆ. 'ಓಲೆಯ ಪವಾಡ' ನಡೆಯುವುದು ಅವನು ಮಂತ್ರಿಯಾದಮೇಲೆ. ಸಿಂಗಿರಾಜನ ಬಸವೇಶನು ಸಂಗಮೇಶ್ವರದಿಂದ ಬಂದು ಬಲದೇವನ ಮಗಳನ್ನು ಮದುವೆಯಾದವನು ಮಾವನ ಮನೆಯಲ್ಲಿಯೇ ತಳವೂರುತ್ತಾನೆ. ಸೊಡ್ಡಳ ಬಾಚಿರಾಜನ ಕರಣಶಾಲೆಯಲ್ಲಿ ಗಣಕನಾಗಿರುತ್ತಾನೆ. ದೇವಲೋಕದಿಂದ ಬಿದ್ದ ಓಲೆಯೊಂದನ್ನು ಓದಿ ಬಿಜ್ಜಳನನ್ನು ಮೆಚ್ಚಿಸಿ ಮಂತ್ರಿಪದವಿಯನ್ನು ಪಡೆಯುವನು. ಬಸವೇಶನು ಮದುವೆಯಾದಮೇಲೆ ಬಲದೇವನೂ ಸಿದ್ಧರಸನೂ ಜೀವಿಸಿಯೇ ಇರುತ್ತಾರಲ್ಲದೆ ತಾವೂ ಮಂತ್ರಿಗಳ ಕೆಲಸವನ್ನು ನಿರ್ವಹಿಸುತ್ತಲೇ ಇರುತ್ತಾರೆ, ಅದುವೆ ಬಸವೇಶ್ವರನು ಮಂತ್ರಿಪಟ್ಟವನ್ನು ಸ್ವೀಕರಿಸಿದ ಮೇಲೆ.

ಸಿಂಗಿರಾಜನೂ ಹರಿಹರನೂ ಹೇಳುವಂತೆ ಬಸವೇಶನು ಮದುವೆಯಾದವನು ಮಂತ್ರಿಯಾಗುವವರೆಗೆ ಕಲ್ಯಾಣದಲ್ಲಿಯೇ ಇರುತ್ತಾನೆ; ಸಂಗಮ ಕ್ಷೇತ್ರಕ್ಕೆ ಹೋಗುವುದಿಲ್ಲ. ಭೀಮಕವಿ ಹೇಳುವುದು, ಬಸವೇಶ್ವರನು ಮದುವೆಯಾದಮೇಲೆ ಅಕ್ಕ ಹೆಂಡತಿ ಇವರನ್ನು ಒಡಗೊಂಡು ಸಂಗಮೇಶ್ವರಕ್ಕೆ ಹೋದನೆಂದು; ಮದುವೆಗಿಂತ ಮೊದಲು ಕಪ್ಪಡಿಗೆ ಹೋಗಿದ್ದಂತೆ ಹೇಳಿರುವುದಿಲ್ಲ.

---

[1] ಸಿಂ. ಪು. ಸಂ. ೫-೫. [2] ಅದೇ ೧೪-೧೪. [3] ಶಿವಾನುಭವ ಸಂ. ೧೩ ಮತ್ತು ೧೪.

ಅಕ್ಕನಾಗಮ್ಮ, ಶಿವಸ್ವಾಮಿ—ಹರಿಹರನು ಅಕ್ಕನಾಗಮ್ಮ, ಚೆನ್ನಬಸವಣ್ಣ ಇವರ ಹೆಸರನ್ನೇ ಎತ್ತಿಲ್ಲ. ಭೀಮಕವಿ ಚೆನ್ನಬಸವಣ್ಣನ ಜನನವನ್ನೂ ಶಿವಾನುಭವ ಮಂಟಪದಲ್ಲಿ ಅವನ ಪಾತ್ರವನ್ನೂ ತಿಳಿಸಿದ್ದಾನೆ. ಆದರೆ ಅವನು ಜನಿಸಿದಾಗ ನಾಗಲಾಂಬೆಯು ಇನ್ನೂ ಕನ್ಯೆಯೇ ಆಗಿದ್ದಳೆಂದಾಗಲಿ ನಾಗಾಂಬೆಯ ವಿವಾಹವಾಗಿತ್ತೆಂದಾಗಲಿ ಹೇಳಿಲ್ಲ. ಸಿಂಗಿರಾಜನೋ ನಾಗಲಾಂಬೆಯ ಪತಿ ಶಿವಸ್ವಾಮಿ ಎಂದು ಹೇಳಿರುವನು. ಬಸವಣ್ಣನು ಮಂತ್ರಿಯಾದಮೇಲೂ ಅನೇಕ ದಿನಗಳು ಶಿವಸ್ವಾಮಿ, ಅಕ್ಕನಾಗಮ್ಮ, ಚೆನ್ನಬಸವಣ್ಣರು ಅವನ ಅನುಚರರಾಗಿದ್ದು ಹಲವು ಕಾರ್ಯಗಳಲ್ಲಿ ಅವನಿಗೆ ನೆರವಾಗುತ್ತಿದ್ದರು ಎಂದು ಸಿಂಗಿರಾಜಪುರಾಣದಿಂದ ತಿಳಿಯಬರುತ್ತದೆ. ನಾಗಲಾಂಬಿಕೆಯು ಕಕ್ಕಯ್ಯನ ಪ್ರಸಾದವನ್ನು ಸೇವಿಸಿ ಚನ್ನಬಸವಣ್ಣನವರನ್ನು ಪಡೆದಳೆಂದು ಕೆಲವು ಗ್ರಂಥಗಳಲ್ಲಿ ಹೇಳಿದ್ದರೆ[1] ಬಸವಣ್ಣನವರು ಕೊಟ್ಟ ಕರುಣಪ್ರಸಾದವನ್ನು ಸೇವಿಸಿ, ಎಂದು ಇನ್ನು ಕೆಲವು ಗ್ರಂಥಗಳಲ್ಲಿ ಹೇಳಿದೆ[2]. ರಾಘವಾಂಕನೆಂದು ಹೇಳುವ 'ದೇವಾಂಗ ದಾಸಿಮಯ್ಯಪುರಾಣ' ಎಂಬ ಸಾಂಗತ್ಯ ಗ್ರಂಥದಲ್ಲಿ ಮಾತ್ರ ಕವಿಯು ಸಿಂಗಿರಾಜನಂತೆಯೇ ಹೇಳುತ್ತಾನೆ.

ಅನಿಮಿಷ—ಹರಿಹರನಾಗಲಿ ಭೀಮಕವಿಯಾಗಲಿ ನಂದೀಶ್ವರನು ಅನಿಮಿಷನಿಗೆ ಲಿಂಗವಿತ್ತನೆಂಬ ಸಂಗತಿಯನ್ನು ಹೇಳಿಲ್ಲ. ಬಸವಣ್ಣನ ಮತ್ತು ಇನ್ನಿತರರ ವಚನಗಳಲ್ಲಿ ಅನಿಮಿಷನಿಗೆ ನಂದಿಯು ಲಿಂಗವಿತ್ತು ಲಿಂಗಬಾಹಿರನಾಗಿ ಪ್ರಮಥರಿಗೆ ಹೊರಗಾಗಿ ಶಿವನಿಂದಲೂ ಶಿವಶರಣರಿಂದಲೂ ತಿರಸ್ಕರಿಸಲ್ಪಟ್ಟು ಮತ್ತೆ ಇಳೆಯಲ್ಲಿ ಉದಯಿಸಬೇಕಾಯಿತೆಂದೂ ಹಾಗೆ ಉದಯಿಸಿದವನೇ ಬಸವಣ್ಣನೆಂದೂ ಉಕ್ತವಾಗಿದೆ—

ಆದಿಯಲಿಂಗವ ತೋರಿದ ಅನಿಮಿಷನ ಕಂಡೆನಯ್ಯಾ ಇಂದು. ಕೃತಯುಗದ ಸ್ಕಂದನೆಂಬ ಗಣೇಶ್ವರನ ಕಂಡೆನಯ್ಯಾ ಇಂದು. ತ್ರೇತಾಯುಗದ ನೀಲಲೋಹಿತನೆಂಬ ಗಣೇಶ್ವರನ ಕಂಡೆನಯ್ಯಾ ಇಂದು. ದ್ವಾಪರಯುಗದ ವೃಷಭನೆಂಬ ಗಣೇಶ್ವರನ ಕಂಡೆನಯ್ಯಾ ಇಂದು. ಕಲಿಯುಗದ ಜಂಗಮದಲ್ಲಿ ಅನಿಮಿಷ ಬಸವನೆಂಬ ಗಣೇಶ್ವರನ ಕಂಡೆನಯ್ಯಾ ಇಂದು. ಎನ್ನ ಕಂಡವರನೂ ನಿನ್ನ ಕಂಡವರನೂ ಇಂದು ಕಂಡೆನು ಕಾಣಾ ಗುಹೇಶ್ವರಾ—ಶೂನ್ಯ ಸಂಪಾದನೆ O.R.I. A 105 ಪ ೧೭೮; ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯ ಸಂಪಾದನೆ, ಪ ೬೪.

ಅನಿಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ. ಆ ಲಿಂಗ ನನಗೆ ಸೇರಿತ್ತಾಗಿ ಬಸವಣ್ಣನ ಸಾಂಪ್ರದಾಯದ ಕಂದ ನೋಡಾ ನೀನು. ಭಕ್ತಿ ದಳದುಳದಿಂದ

---

[1] ಪ್ರೌಢರಾಯನ ಕಾವ್ಯ ಸಂ. ೧೯; ಶೂನ್ಯ ಸಂಪಾದನೆ O.R.I. A105 ಪು. ೫೦; ಗುರುರಾಜಚಾರಿತ್ರ ಸಂ. ೮.

[2] ಪ್ರಭುಲಿಂಗಲೀಲೆ, ಗತಿ ೯ ಪ ೨೩; ಚೆನ್ನಬಸವಪುರಾಣದಲ್ಲಿ ಶಿವನೇ ನಾಗಲಾಂಬಿಕೆಯ ಕನಸಿನಲ್ಲಿ ಒಂದು ಪ್ರಸಾದಕೊಟ್ಟಂತೆ ಹೇಳಿದೆ (೪ನೆಯ ಸಂಧಿ).

ಚೆನ್ನಸಂಗಮನಾಥನೆಂಬ ಲಿಂಗವನನುಗ್ರಹಿಸಿಕೊಂಡೆನಾಗಿ ಬಸವಣ್ಣನ ಸಾಂಪ್ರದಾಯದ ಕಂದ ನೋಡಾ ನಾನು ಇಂತಿಬ್ಬರಿಗೆಯೂ ಒಂದು ಕುಲಸ್ಥಲವಾದ ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣನ ಮಹ ಮನೆಯ ಪ್ರಸಾದ ಇಬ್ಬರಿಗೂ ಒಂದೆ ಕಣಾ ಪ್ರಭುವೆ--O.R.I. A. 105 ಪ. ೯೬.

ಅನಾದಿಗಣನಾಥನ ಶಿಷ್ಯನು ಆದಿ ಗಣನಾಥನು. ಆದಿಗಣನಾಥನ ಶಿಷ್ಯನು ಅಧ್ಯಾತ್ಮ ಗಣನಾಥನು . . . . ವ್ಯೋಮಸಿದ್ಧಗಣನಾಥನ ಶಿಷ್ಯನು ಬಸವನೆಂಬ ಗಣನಾಥನು. ಬಸವನೆಂಬ ಗಣನಾಥನ ಶಿಷ್ಯನು ಅನಿಮಿಷನೆಂಬ ಗಣನಾಥನು. ಅನಿಮಿಷನೆಂಬ ಗಣನಾಥನ ಶಿಷ್ಯನು ಅಲ್ಲಮಪ್ರಭುವೆಂಬ ಗಣನಾಥನು. ಇಂತು ಅನಾದಿವಿಡಿದು ಬಂದ ಅನುಪಮಲಿಂಗವು ಗುಹೇಶ್ವರನೆಂಬ ಹೆಸರನೊಳಕೊಂಡು ಎನ್ನ ಕರಸ್ಥಲಕ್ಕೆ ಸಾಧ್ಯವಾಯಿತ್ತು ಕಾಣಾ ಸಿದ್ಧರಾಮಯ್ಯ--ಗೂಳೂರು ಸಿದ್ಧವೀರನ 'ಶೂನ್ಯ ಸಂಪಾದನೆ' ಪು ೬ಲ; ಗುಮ್ಮಳಾಪುರದ ಸಿದ್ಧಲಿಂಗನ 'ಶೂನ್ಯ ಸಂಪಾದನೆ' ಪ ೨೪೯.

ಈ ಮೂರು ವಚನಗಳಲ್ಲಿ ಅನಿಮಿಷ ಬಸವಣ್ಣರ ಸಂಬಂಧದ ವಿಷಯ ಗೊತ್ತಾಗುತ್ತದೆ. ಕೆಂಚ ವೀರಣ್ಣೊಡೆಯರೇ ಮೊದಲಾದವರು ಸಂಗ್ರಹಿಸಿರುವ ಶೂನ್ಯ ಸಂಪಾದನೆಯಲ್ಲಿ "ಕೇಳೈ ನಂದೀಶ್ವರಾ ನೀನಂದು ವೃಷಭನಾಗಿಪ್ಪಲ್ಲಿ ಅನಿಮಿಷಂಗೆ ನಿನ್ನ ಪ್ರಾಣಲಿಂಗವ ಅನುಗ್ರಹವಂ ಮಾಡಲು ಅದು ನಿಮಿತ್ತಂ ಮಹಾಕಾಳನೂ ನಾರದನೂ ವೀರಗಣಂಗಳೂ ಏಳುನೂರ ಎಪ್ಪತ್ತು ಅಮರ ಗಣಂಗಳು ಮುಖ್ಯವಾದ ಪ್ರಮಥರೆಲ್ಲರನೂ ಮರ್ತ್ಯಕ್ಕೆ ಕಳುಹುವೆವೆಂದಿರಿಸಿಕೊಂಡಿದ್ದೆವದ ಬಲ್ಲೆಯಾ" ಎಂದು ಕೇಳಿದಂತೆ ಉಕ್ತವಾಗಿದೆ. ಸಿಂಗಿರಾಜನು ಹೇಳಿರುವ ಅನಿಮಿಷ ನಂದೀಶ್ವರರ ಕಥೆ ಚನ್ನಬಸವಪುರಾಣ (೫೭ನೆಯ ಸಂಧಿ) ದಲ್ಲಿ ಸಂಗ್ರಹಿಸಲ್ಪಟ್ಟಿದೆ. ಈ ಇಬ್ಬರು ಕವಿಗಳೂ ಹೇಳುವಂತೆ ಅನಿಮಿಷನು ಪಟ್ಟದ ಕಲ್ಲಿನ ಚಾಳುಕ್ಯವಂಶದ ತ್ರೈಲೋಕ್ಯ ಚೂಡಾಮಣೀಶ ಮತ್ತು ಮಹಲಕ್ಷ್ಮೀ ಇವರ ಮಗನು. ವಸುದೀಪ್ಯ ಇವನ ಮೊದಲ ಹೆಸರು. ನಂದೀಶ್ವರನಿಂದ ಪ್ರಾಣಲಿಂಗವನ್ನು ಪಡೆದು ಆ ಜ್ಯೋತಿರ್ಲಿಂಗವನ್ನು ಅನಿಮಿಷನಾಗಿ ನೋಡುತ್ತ ತಲ್ಲೀನನಾಗಿದ್ದುದರಿಂದ ಅವನಿಗೆ ಅನಿಮಿಷ, ಎಂದು ಹೆಸರಾಯಿತು. ಈ ಕಥೆಗೆ ಆಕರವಾವುದೆಂಬುದು ಗೊತ್ತಾಗುವುದಿಲ್ಲ. ಸಿಂಗಿರಾಜನು,

ಅನ್ಯಕಥನಾಗಮದೊಳನಿಮಿಷೇಂದ್ರತ್ವ ಪ
ಟ್ಟಾನ್ವಯದ ಖಾಂಡವನವಂ ಪೊಕ್ಕು ಒಡಾಡಿ
ತನ್ನಿಷ್ಟಸಿದ್ಧರಸಮಂ ಕೊಡುವ ಇಕ್ಷುವಾಟಿಯ ವೃಷಭ ತುಳಿದು
ಕೆಡಿಸಿ |
ಮನ್ನಿಸದೆ ರಕ್ಕಸರ ಧಿಕ್ಕರಿಸಿ ವೃಷಭನಿಂ
ತನ್ನಾಯುಮಂ ನೆಗಳ್ದನಂದೀಶಗಱುಪೆ ಶಿವ
ನಿನ್ನಪಟಳಕ್ಕಂಜುವೆವು ವೃಷಭ ಎನೆ ಮುಳಿದು ಪೋದನೆಂದು
ಸುರ್ವುದಲ್ಲ ‖ ೨–೪೦.

ಎಂದಿದ್ದಾನೆ. ಈ 'ಅನ್ಯಕಥನಾಗಮ' ಯಾವುದೆಂಬುದು ಗೊತ್ತಾಗಿಲ್ಲ. ಅನಿಮಿಷಯ್ಯನು ಯಾರು ಎಂಬುದನ್ನು ಖಚಿತವಾಗಿ ನಿರ್ಧರಿಸಲಾಗುವುದಿಲ್ಲ. ಈ ಕಥೆಗೆ ಸಿಂಗಿರಾಜನಿಗಿಂತ ಹಿಂದಿನಿಂದ ಒಂದು ಪರಂಪರೆ ಇದೆ ಎಂದು ತೋರುತ್ತದೆ. ಅನಿಮಿಷ ಎಂಬ ಹೆಸರಿನ ಮಹಾನುಭಾವರು ಎಷ್ಟು ಜನರಿದ್ದಾರೋ. ಈ ಅನಿಮಿಷನೇ ನಾಥ ಸಂಪ್ರದಾಯದ ಮತ್ಸ್ಯೇಂದ್ರನಾಥ ಎಂದು ಕೆಲವರು ಊಹಿಸುತ್ತಾರೆ. ಈ ಊಹೆ ಆಧಾರ ರಹಿತವಾದುದು. ಮತ್ಸ್ಯೇಂದ್ರನನ್ನು ಮತ್ಸೇಂದ್ರನೆಂದು ಕರೆಯದೆ ಅವನಿಗೆ ಅನಿಮಿಷ ಎಂಬ ಇನ್ನೊಂದು ಹೆಸರಿಟ್ಟು ಕರೆಯುವ ಅಗತ್ಯವಾದರೂ ಏನು ?

ಬಿಜ್ಜಳನ ಕೊಲೆ---ಹರಿಹರ ರಾಘವಾಂಕರು ಬಿಜ್ಜಳನ ಕೊಲೆಯ ಬಗೆಗೆ ಒಂದೋ ಎರಡೋ ಮಾತುಗಳನ್ನು ಹೇಳಿದ್ದಾರೆ, ಅಷ್ಟೆ. ಬಸವಣ್ಣನು "ಶಿವದ್ರೋಹವಂಗೈದ ಬಿಜ್ಜಳನ ಕೊಲಿಸುತುಂ"[1] ಕಪ್ಪಡಿಯ ಸಂಗಮೇಶ್ವರಲಿಂಗದಲ್ಲಿ ಐಕ್ಯವಾದನೆಂದು ಹರಿಹರನು ಹೇಳಿದ್ದಾನೆ. ಅವನ 'ಲಿಂಗಾರ್ಚನೆಯರಗಳೆ' ಯಲ್ಲಿ ಮಾತ್ರ ಜಗದೇವ ಮೊಲ್ಲೆ ಬೊಮ್ಮಯ್ಯಗಳನ್ನು ಸ್ತುತಿಸಿದ್ದಾನೆ. ರಾಘವಾಂಕನು "ಭೂಪ ಬಿಜ್ಜಣನಳಿದ ವೀರಜಗದೇವನಿಂ ಸಿದ್ಧ ಸಂಕೇತದಂತೆ[2]" ಎಂದು ಮಾತ್ರ ತಿಳಿಸಿರುವನು. ಕುಮಾರ ಪದ್ಮರಸನ ಸಾನಂದ ಚರಿತ್ರೆಯಲ್ಲಿ ಮೊಲ್ಲೆ ಬೊಮ್ಮಯ್ಯರ ಹೆಸರು ಹೇಳಿದೆಯಲ್ಲದೆ "ಬಿಜ್ಜಳ ಮಹಾದೂಷನ ಘನತನುವಂ ಕೊಂದು ದೆಸೆ ಬಲಿಗೆಯ್ದು ಹಂತವನಂದು ಧರೆಯೊಳು ಮೆಱೆದು ವೀರದೆ ಸಂದ ಜಗದೇವಣ್ಣನಾ ಹರನೋಲಗದೊಳೆಸೆದಂ"[3] ಎಂದಿದೆ. ಹರಳಯ್ಯ ಮಧುವಯ್ಯಗಳ ಪ್ರಸಂಗವಾಗಲಿ ಜಗದೇವೋಪಾಖ್ಯಾನವಾಗಲಿ ಮೇಲೆ ಹೇಳಿರುವ ಯಾವ ಕವಿಯ ಗ್ರಂಥದಲ್ಲೂ ಇಲ್ಲ.

ಸಿಂಗಿರಾಜನ ಹೇಳಿಕೆಯಂತೆ—ಬಿಜ್ಜಳನಿಗೆ ಬಸವಣ್ಣನು ಮಹಾತ್ಮನೆಂದು ಅರಿವಾಗುವುದು ; ಅಂತಹ ಮಹಾಜ್ಞಾನಿಯು ರಾಜನ ಆಸ್ಥಾನಕ್ಕೆ ಎಡೆತಾಗುವುದು ಉಚಿತವಲ್ಲ ಎನಿಸುವುದು. ಆದುದರಿಂದ ಅವನು ಬಸವಣ್ಣನಿಗೆ ಅಡ್ಡಬಿದ್ದು, ತಮ್ಮಂತಹ ಮಹಾನುಭಾವರು ನಮ್ಮ ಆಸ್ಥಾನಕ್ಕೆ ಓಡಾಡುತ್ತಿರುವುದು ಯುಕ್ತವಲ್ಲ, ಚೆನ್ನಬಸವಣ್ಣನವರಿಗೆ ಮಂತ್ರಿಮುದ್ರೆಯನ್ನು ಕೊಟ್ಟು ತಮ್ಮ ಮಠಕ್ಕೆ ದಯಮಾಡಿಸುವುದು ; ತಮ್ಮ ಗುರುಲಿಂಗ ಜಂಗಮ ಸೇವೆಗೆ ಬೇಕಾಗುವ ಸಕಲ ಸಾಮಗ್ರಿಗಳನ್ನೂ ತಮ್ಮ ಮಠಕ್ಕೆ ಕಳುಹಿಸುತ್ತೇವೆ ಎಂದು ಹೇಳಿಕೊಂಡನು. ಕೊಂಡೆಯರೂ ಅವರ ಸ್ವಾಮಿಯಂತೆಯೇ ಬಸವಣ್ಣನಿಗೆ ಶಿರಬಾಗಿ ಮಣಿದು ಶಾಪವಿಮುಕ್ತರಾದರು. ಚೆನ್ನಬಸವಣ್ಣನು ಮಂತ್ರಿಪದವನ್ನು ಸ್ವೀಕರಿಸಿದುದರಿಂದ ಅವನಿಗೆ ಚಿಕ್ಕದಣ್ಣಾಯಕನೆಂದು ಹೆಸರಾಯಿತು. ಸಿಂಗಿರಾಜಪುರಾಣದಲ್ಲಿ ಬಿಜ್ಜಳನ ಕೊಲೆ, ಹರಳಯ್ಯನ ಮಧುವಯ್ಯಗಳ ಸಂಗತಿ,

---

[1] ಬಸವರಾಜ ದೇವರ ರಗಳೆ, ೧೩ನೇ ಸ್ಥಳ (ಎರಡನೆಯ ಮುದ್ರಣ) [2] ಸಿದ್ಧರಾಮ ಪುರಾಣ ೮-೫೫. [3] ಸಾನಂದ ಚರಿತ್ರೆ ೯-೫.

ಜಗದೇವೋಪಾಖ್ಯಾನ ಇವು ಇಲ್ಲವೇ ಇಲ್ಲ. ಆದರೆ ಬಿಜ್ಜಳ ಕರ್ನಿದೇವರಾಗಿ ಹುಟ್ಟಲಿರುವ ಸಿಂಹಕೇಶ ದ್ರವಿಡರಿಗೆ ಶಿವನು "ಹಗೆತಪ್ಪ ಸಾಧಿಸಿ ಭಕ್ತರೊಳು ಭಕ್ತರಿಂದಲಳಿವಪ್ಪುದು ನಿಮಗೆ" ಎಂದು ಅಭಯವಿತ್ತಂತೆ ಅದೇ ಗ್ರಂಥದಲ್ಲಿ ಹೇಳಿದೆ (೫-೪). ಭೀಮಕವಿಯು ಬಸವಪುರಾಣದಲ್ಲಿ ಮಾತ್ರ ಜಂಗಮ ದ್ರೋಹಮಾಡಿದ ಜಗದೇವನು ಬಸವಣ್ಣನ ಅಪ್ಪಣೆಯಂತೆ ಶಿವದ್ರೋಹಿ ಬಿಜ್ಜಳನನ್ನು ಕೊಲ್ಲುವನು ಎಂದು ನಿರೂಪಿಸಿದೆ. ಬಿಜ್ಜಳನ ಕೊಲೆಯೇನೋ ನಡೆದಿರಬೇಕು. ಆ ಕೊಲೆಗೆ ಬಸವಣ್ಣನು ಎಷ್ಟರಮಟ್ಟಿಗೆ ಹೊಣೆ ಎಂಬು ದನ್ನು ಖಚಿತವಾಗಿ ಹೇಳಲಾಗದು.

ಕೃತಿ ವಿಚಾರ

ದಿನ ದಿನವೂ ನಾವು ಕಾಣುತ್ತಿರುವ, ನಿಸರ್ಗ ನಿಯಮಕ್ಕೆ ಹೊರತಾದ, ಸಾಮಾನ್ಯ ಮಾನವನಿಂದ ಸಾಧ್ಯವಾಗದ ಘಟನೆಗಳು ಅಘಟಿತ ಘಟಕರೂ ಅಖಂಡ ಮಹಿಮರೂ ಆದ ಧರ್ಮವೀರರಿಂದ ನಡೆದಿರುವುದುಂಟು. ಇಂತಹ 'ಅದ್ಭುತ' ಅಥವಾ 'ದೃಷ್ಟ' ಗಳಿಗೆ ವೀರಶೈವರು ಪವಾಡಗಳು ಎಂದು ಕರೆದಿರು ತ್ತಾರೆ. ಮಧ್ಯಮ ಕಾಲದ ಕರ್ಣಾಟಕದಲ್ಲಿ ಸಮಾಜದಲ್ಲಿ ಅತ್ಯದ್ಭುತ ಕ್ರಾಂತಿಯ ನ್ನೆಸಗಿ ಇಡೀ ಕನ್ನಡ ನಾಡಿಗೇ ಕೀರ್ತಿ ತಂದಿರುವ ಬಸವಣ್ಣನು ಪವಾಡ ಗಳನ್ನೂ ಮೆರೆದಿದ್ದಾನೆ. ಅವನ ದಿವ್ಯ ಭವ್ಯ ಜೀವನದ ಹತ್ತು ಮುಖ ಗಳಲ್ಲಿ ಇದು ಒಂದು ಮುಖ ಮಾತ್ರ. ಈ ಪವಾಡಗಳನ್ನೇ ಮುಂದುಮಾಡಿ ಕೊಂಡು ಬಸವಣ್ಣನ ಚರಿತ್ರೆಯನ್ನು ಪುರಾಣರೂಪದಲ್ಲಿ ರಚಿಸಿರುವವರಲ್ಲಿ ಸಿಂಗಿ ರಾಜನೇ ಮೊದಲನೆಯವನೆಂದು ಸದ್ಯಕ್ಕೆ ಹೇಳಬಹುದು. ಈ ಕವಿಗೆ ಇವನಿ ಗಿಂತ ಹಿಂದೆ ಇದ್ದ ವೀರಶೈವ ಸಾಹಿತ್ಯದಿಂದ ವಿಪುಲವಾದ ಸಾಮಗ್ರಿ ದೊರೆ ಯಿತು. ಈ ಸಾಮಗ್ರಿಯನ್ನು ಬಳಸಿಕೊಂಡು 'ಅಮಲ ಬಸವ ಚಾರಿತ್ರ' ವನ್ನು ರಚಿಸಿದ್ದಾನೆ. ಹರಿಹರ ಮಹಾ ಕವಿಯ 'ಬಸವರಾಜ ದೇವರ ರಗಳೆ' ಭೀಮ ಕವಿಯ 'ಬಸವಪುರಾಣ' ಮತ್ತು ಲಕ್ಕಣ್ಣದಂಡೇಶನ 'ಶಿವತತ್ವ ಚಿಂತಾ ಮಣಿ' ಇವು ಮೂರೂ ಸಿಂಗಿರಾಜಪುರಾಣಕ್ಕೆ ಆಧಾರ ಗ್ರಂಥಗಳಾಗಿರಬೇಕೆಂದು ತೋರುತ್ತದೆ.[1]

ಸಂಗಮೇಶ್ವರನು ಪಿಟಜಂಗಮ ವೇಷದಲ್ಲಿ ಬಂದು 'ಹೆಂಗೂಸ'ನ್ನು ಬೇಡಿದ ಕಥೆ, ಉಳ್ಳಿಯ ಪ್ರಸಂಗ--ಇವೆರಡನ್ನು ಬಿಟ್ಟು, ಬಸವರಾಜದೇವರ ರಗಳೆಯ ಎಲ್ಲ ಕಥೆಗಳೂ ಸಿಂಗಿರಾಜಪುರಾಣದಲ್ಲಿ ವರ್ಣಿತವಾಗಿವೆ. ಅವು ಗಳಲ್ಲಿ ಮುಖ್ಯವಾಗಿ ಎರಡು ಕಥೆಗಳನ್ನು ಮಾತ್ರ ಇಲ್ಲಿ ಉದಾಹರಿಸಬಹುದು.

---

[1] ಸಂಸ್ಕೃತ ಬಸವಪುರಾಣಗಳು ಪಾಲ್ಕುರಿಕೆ ಸೋಮನಾಥನ ತೆಲುಗು ಬಸವ ಪುರಾಣವನ್ನೊ ಭೀಮಕವಿಯ ಬಸವಪುರಾಣವನ್ನೊ ಅನುಸರಿಸಿದುವಾದುದರಿಂದ ಅವನ್ನು ನಾವು ಇಲ್ಲಿ ಲಕ್ಷಿಸಬೇಕಾಗಿಲ್ಲ.

(i) ಕೇದಗೆಯ ಹೂವಿನ ಪವಾಡ:—ಬಿಜ್ಜಳನು ಒಡ್ಡೋಲಗದಲ್ಲಿ ಶೋಭಿಸುತ್ತಿರಲು ಮಾಲೆಗಾರನೊಬ್ಬನು ಕೇದಗೆಯ ತೆನೆಯೊಂದನ್ನು ಅವನಿಗೆ ಒಪ್ಪಿಸಲು ಅದರಲ್ಲಿ ಒಂದು ಎಸಳನ್ನು ಬಿಡಿಸಿ ಬಿಜ್ಜಳನು ಬಸವಣ್ಣನಿಗೆ ಕೊಟ್ಟನು. ಆ ಎಸಳನ್ನು ಬಸವಣ್ಣನು ತನ್ನ ಇಷ್ಟಲಿಂಗಕ್ಕೆ ಸಮರ್ಪಿಸಲು ಅದನ್ನು ಕಂಡ ಪರವಾದಿಗಳು ಬಸವಣ್ಣನ ಈ ಆಚರಣೆ ಆಗಮವಿರುದ್ಧವೆಂದು ವಾದಿಸಿದರು. ಬಸವಣ್ಣನು ಕೇದಗೆಯ ಹೂವು ಶಿವಪೂಜೆಗೆ ಏಕೆ ಅನರ್ಹವೆಂದು ಪ್ರಶ್ನಿಸಿ ಕಲ್ಯಾಣಪುರದ ಎಲ್ಲ ಸ್ಥಾವರ ಲಿಂಗಗಳ ಶಿರಸ್ಸಿನ ಮೇಲೆಯೂ ಗಣಕುಲದ ಪ್ರಾಣಲಿಂಗ ಮಸ್ತಕದ ಮೇಲೆಯೂ ಕೇತಕೀ ಎಸಳನ್ನು ತೋರಿಸಿದನು.—ಇದು ಹರಿಹರನ ಕಥೆ; ಬಸವಪುರಾಣದಲ್ಲಿ ಇಲ್ಲ. ಲಕ್ಕಣ್ಣದಂಡೇಶನು ಈ ಸಂಗತಿಯನ್ನು ಒಂದೇ ಒಂದು ಪದ್ಯದಲ್ಲಿ ಹೇಳಿ ಮುಂದುವರಿದಿದ್ದಾನೆ. ಸಿಂಗಿರಾಜನು ಇದಕ್ಕೆ ಇಡೀ ಒಂದು ಸಂಧಿಯನ್ನೆ ವಿನಿಯೋಗಿಸಿದ್ದಾನೆ. ಹರಿಹರನ ಕಥಾಸರಣಿಯೇ ಇಲ್ಲಿಯೂ ಕಂಡುಬರುತ್ತದೆ. (ii) ಜಂಗಮಪ್ರಾಣಿತ್ವದ ಪವಾಡ:—ಬಸವಣ್ಣನು 'ಚಿದ್ರೂಪಕಂ ಶಿವನನರ್ಚಿಪ' ಉದ್ಯೋಗದಲ್ಲಿರಲು, ಅಂದರೆ ಶಿವಯೋಗ ನಿದ್ರಾಮುದ್ರಿತನಾಗಿರಲು, ದೇಶಾಂತರದಿಂದ ಶರಣರು ಬಂದು ಬಸವಣ್ಣನ ಸಮಯವೇನೆಂದು ಬಾಗಿಲು ಕಾಯುವವರನ್ನು ಕೇಳುತ್ತಾರೆ. ಕಾವಲವರು 'ಸಂದನಿದ್ರೆಯೊಳಿರ್ದನ್' ಎಂದು ಬಿನ್ನಯಿಸುವರು. ಶರಣರು ಹಿಂದಿರುಗಿ ಹೋಗುತ್ತಾರೆ. ಬಸವಣ್ಣನ ಪ್ರಾಣವೂ ಅವರನ್ನೇ ಹಿಂಬಾಲಿಸುವುದು. ಬಸವರಾಜನ ಸತಿ ಬಂದು "ಹೊತ್ತು ಹೋಯಿತ್ತೇಳಿರೇ ಶಿವಾರ್ಚನೆಗೆ" ಎಂದು ತೊಡೆವೊಯ್ದು ಎಬ್ಬಿಸಲು ಪ್ರಯತ್ನಪಟ್ಟಾಗ ಬಸವಣ್ಣನ ಶರೀರ ಅಲುಗಲಿಲ್ಲ. ಪತಿಯು ಸಂಗನೊಳಿಗೆ ಸಂದನು ಎಂದರಿತು ಗುಡಿಗಟ್ಟುತ್ತಾಳೆ ಆ ಭಕ್ತೆ. ಆ ಶಿವಶರಣರು ಮರಳಿದಾಗ ಇವನ ಪ್ರಾಣವೂ ಮರುಕಳಿಸುವುದು. ಸಿಂಗಿರಾಜನು ಇದೇ ಕಥೆಯನ್ನೇ 'ಚಾಚು' ತಪ್ಪದೆ ಅನುಕರಿಸಿದ್ದಾನೆ. ಶಿವತತ್ವ ಚಿಂತಾಮಣಿಯಲ್ಲಿ ಈ ಕಥೆ ವಿಸ್ತಾರವಾಗಿ ನಿರೂಪಿಸಲ್ಪಟ್ಟಿಲ್ಲ. ಭೀಮಕವಿಯೂ ಈ ಕಥೆಯನ್ನು ಹೇಳಿರುವನಾದರೂ ಸಿಂಗಿರಾಜನ ಕಥಾಸರಣಿ 'ಹರಿಹರ'ನನ್ನೇ ಹೆಚ್ಚುಹೋಲುತ್ತದೆ. 'ಬಸವರಾಜ ದೇವರ ರಗಳೆ'ಯ ಬಸವಣ್ಣನು ವೃಷಭ ಮುಖದಿಂದ ಲಿಂಗವನ್ನು ಪಡೆದ ಸನ್ನಿವೇಶವನ್ನೂ ಸಿಂಗಿರಾಜಪುರಾಣದ ಅನಿಮಿಷನು ನಂದಿಕೇಶ್ವರನಿಂದ ಲಿಂಗ ಪಡೆದ ಸನ್ನಿವೇಶದೊಂದಿಗೆ ಹೋಲಿಸಿ ನೋಡಬಹುದು.

ಇದರಂತೆಯೇ ಸಿಂಗಿರಾಜನು ಬಸವಪುರಾಣದಿಂದಲೂ ಉಪಕೃತನಾಗಿರುವನೆಂಬುದಕ್ಕೆ ಹಲವು ಆಧಾರಗಳನ್ನು ಕೊಡಬಹುದು. ಎಳೆಯ ಕರುವನ್ನು ಕರೆದು ಜಂಗಮನಿಗೆ ಹಾಲನ್ನರ್ಪಿಸಿದ, ಕಣಗಿಲೆ ಹೂವನ್ನು ಸಂಪಗೆಯಾಗಿ ಮಾಡಿದ, ಚಿತ್ರದ ಹಲಸಿನ ಹಣ್ಣನ್ನು ನಿಜವಾದ ಹಲಸಿನ ಫಲವನ್ನಾಗಿ ಮಾಡಿದ ಪವಾಡಗಳೆಲ್ಲ ಬಸವಪುರಾಣದಲ್ಲಿ ಬಂದಿರುವ ಕ್ರಮದಲ್ಲಿಯೇ ಸಿಂಗಿರಾಜಪುರಾಣದಲ್ಲಿಯೂ ಬಂದಿವೆ. ಬಸವಪುರಾಣದಲ್ಲಿ—ಶಿವನು ಜಂಗಮವೇಷದಿಂದ ಬಂದು

ಬಸವಣ್ಣನನ್ನು ನೊಸಲ ಕಣ್ಣ ಕೋಡು ಎಂದು ಬೇಡುತ್ತಾನೆ. ಬಸವಣ್ಣನು ಒಂದು ಕನ್ನಡಿಯನ್ನು ತರಿಸಿ ಆ ಜಂಗಮನ ಮುಖಕ್ಕೆ ಹಿಡಿದು "ಮೂರು ಕಣ್ಣಿವೆ ನಿನಗೆ" ಎನ್ನುವನು. ಆಗ ಜಂಗಮವೇಷಧಾರಿಯಾಗಿದ್ದ ಶಿವನು 'ಕನ್ನಡಿಯೊಳಗೆ ಭಾಳಾಕ್ಷಮಂ ಕಂಡು ಮೋರೆಯಂ ಬಾಗಿಸುತ್ತ' 'ಬಸವನ ದೂರಿಗೊಳಗಾದೆನೆ' ಎಂದು ಕೊರಗಿ ನಾಚಿ ತಲೆಮರಸಿಕೊಂಡು ದೂರದೂರ ಸರಿದು ಹೋಗುತ್ತಾನೆ. ಬಸವಣ್ಣನು ಇದನ್ನು ಕಂಡು 'ಓಡದಿರು ಓಡದಿರು, ನಿಲ್ಲು ಕೂಡಲ ಸಂಗ' ಎಂದು ಅಂಗಲಾಚಿ ಬೇಡುತ್ತ ಅವನ ಹಿಂದೆಯೇ ಓಡುತ್ತಾನೆ; 'ಹಿಂದೆ ಸಂದ ಭಕ್ತರಂತೆ' ನಾನು ಏನನ್ನೂ ಬೇಡುವುದಿಲ್ಲ, ನಿಲ್ಲು ಎಂದು ಭರವಸೆ ನೀಡುತ್ತಾನೆ. ಸಿಂಗಿರಾಜನಲ್ಲಿ ಈ ಕಥೆ ಪ್ರಾರಂಭವಾಗುವುದು ಬಸವಪುರಾಣದಂತೆಯೆ. ಭೀಮಕವಿ "ಓಡದಿರೋಡದಿರು ನಿನ್ನ ಬೇಡುವವ ನಾನಲ್ಲ ಶಿವನೆ, ನೋಡುವೆ ಕಣ್ಣ ತುಂಬ! ಆಡಿಪಾಡಿ ನಲಿದಾಡುವೆ! ಬೇಡೆನ್ನ ಕೂಡೆ ಮಾತನಾಡಲಾಗದೆ? ಎಲೆ ಕೂಡಲ ಸಂಗಮ ದೇವ, ನೀನಾಡಿಸುವ ಬೊಂಬೆ ನಾನು," ಈ ವಚನ ಭಾಗವನ್ನು ಭಾಮಿನೀ ಷಟ್ಪದಿಗೆ ಹೊಂದಿಸಿ ಕೊಂಡಿದ್ದಾನೆ. ಸಿಂಗಿರಾಜನು ಈ ವಚನವನ್ನೂ "ಹಿಂದೆ ಸಂದ ಭಕ್ತರಂತಾ ನೊಂದೊಂದ ಬೇಡಿ ಕಾಡುವನಲ್ಲ . . . ." ಈ ವಚನವನ್ನೂ ಉದ್ಧರಿಸಿದ್ದಾನೆ. ಭೀಮಕವಿ ಈ ಸಂದರ್ಭದಲ್ಲಿ ಶಿವನ ಸೇವೆ ಮಾಡುತ್ತಿರುವ ಅನೇಕ ಶಿವಶರಣ ರನ್ನೂ ಅವರು ಮಾಡುತ್ತಿರುವ ಸೇವೆಯನ್ನೂ ಕುರಿತು ಹೇಳಿ ಕಥೆಯನ್ನು ಅನಾವಶ್ಯಕವಾಗಿ ಲಂಬಿಸಿದ್ದಾನೆ. ಸಿಂಗಿರಾಜನು ಈ ಭಾಗವನ್ನು ಬಿಟ್ಟು ಉಳಿದ ಭಾಗವನ್ನು ಸ್ವಲ್ಪಮಟ್ಟಿಗೆ ವಿಸ್ತರಿಸಿ ಬರೆದಿರುವನು.

ಲಕ್ಕಣ್ಣದಂಡೇಶನ 'ಶಿವತತ್ವ ಚಿಂತಾಮಣಿ' ಯನ್ನೇ ಸಿಂಗಿರಾಜನು ಹೆಚ್ಚಾಗಿ ಅನುಸರಿಸಿದ್ದಾನೆಂಬುದನ್ನು ಹಿಂದೆಯೇ ನಿರೂಪಿಸಿದೆ. ಆದರೆ ಬಸವೇಶನ ಜನನ, ಬೆಳವಣಿಗೆ ಉಪನಯನಸಿರಸನ ಈ ವಿಷಯದಲ್ಲಿ ಅವನ ದಾರಿಯೇ ಬೇರೆ ಇವನ ದಾರಿಯೇ ಬೇರೆ. ಬವಸಣ್ಣನ ಮಹಿಮೆಯನ್ನು ಹೊರ ಸೂಸುವ ಮತ್ತು ಅವನ ಜೀವನ ಚರಿತ್ರೆಗೆ ನೇರವಾಗಿ ಸಂಬಂಧಪಟ್ಟಿರುವ ಕಥೆ ಗಳನ್ನು ಮಾತ್ರ ಸಿಂಗಿರಾಜನು ಆರಿಸಿಕೊಂಡಿದ್ದಾನೆ. ಪ್ರಭುದೇವರ ಆರೋಗಣೆ ಕಥೆಗೆ ನೇರವಾಗಿ ಸಂಬಂಧಿಸಿದುದಲ್ಲವೆಂದು ಇವನ ಭಾವನೆ. ಆದುದರಿಂದ ಆ ಸನ್ನಿವೇಶವನ್ನು ಪುರಾಣದ ಕೊನೆಯಭಾಗಕ್ಕೆ ಇಟ್ಟುಕೊಂಡು ಶೂನ್ಯಸಿಂಹಾ ಸನ ನಿರ್ಮಾಣವನ್ನೂ ಪ್ರಭುದೇವರ ಆಗಮನವನ್ನೂ ಸ್ವಲ್ಪಮಟ್ಟಿಗೆ ಸೂಚಿಸಿ ಅಷ್ಟಕ್ಕೇ ಬಿಟ್ಟಿರುತ್ತಾನೆ. ಕೇತಕೀ ಹೂವೆ ಹಾವಾಗಿ ಕಡಿದು ಬಿಜ್ಜಳನು ಮಡಿದು ಬೀಳಲು ಅವನನ್ನು ಬದುಕಿಸಿದ ಕಥೆ ಶಿವತತ್ವ ಚಿಂತಾಮಣಿಯಲ್ಲಿ ನಿರೂಪಿತ ವಾಗಿದ್ದರೂ, ಈ ಕಥೆ ಬಸವಣ್ಣನ ಮಹಿಮಾತಿಶಯಗಳನ್ನು ತೋರಿಸುವುದಕ್ಕೆ ಸಹಾಯಕವಾಗಿದ್ದರೂ ಇದನ್ನು ಸಿಂಗಿರಾಜನು ಕೈಬಿಟ್ಟಿರುತ್ತಾನೆ.

ಹೀಗೆ ಈ ಕವಿ ತನಗಿಂತ ಹಿಂದೆ ಇದ್ದ ಕೃತಿಗಳಿಂದ ವಿಷಯ ಸಂಗ್ರಹಣೆ ಮಾಡಿರುತ್ತಾನೆ. ತನಗೆ ಬೇಡವಾದ ಭಾಗವನ್ನು ಕೈಬಿಟ್ಟು, ಉಚಿತವೆಂದು

ಕಂಡುಬಂದ ಭಾಗಗಳನ್ನು ವಿಸ್ತರಿಸಿಯೋ ಸಂಗ್ರಹಿಸಿಯೋ, ತನ್ನ ಕೃತಿಯಲ್ಲಿ ಸೇರಿಸಿದ್ದಾನೆ. ಸಿಂಗಿರಾಜನು ಪವಾಡಕಥೆಗಳನ್ನು ತನ್ನ ಉದ್ದೇಶಕ್ಕನುಗುಣ ವಾಗಿ ಯಾವ ಯಾವ ರೀತಿಯಲ್ಲಿ ಮಾರ್ಪಾಡು ಮಾಡಿರುವನೆಂಬುದಕ್ಕೆ ಈ ಮುಂದೆ ಕೆಲವು ಉದಾಹರಣೆಗಳನ್ನು ಕೊಟ್ಟಿದೆ :—

ಹರಿಹರನ 'ಬಸವರಾಜದೇವರ ರಗಳೆ'ಯ ಬಸವೇಶ್ವರನು ತನ್ನ ಮಡದಿಯ ಕಿವಿಯನ್ನು ಅಲಂಕರಿಸಿದ್ದ ಓಲೆಯನ್ನು ತೆಗೆದು ಭಕ್ತನಿಗಿತ್ತ ಸಂದರ್ಭ--

> ‘ ಅರಸಿಗಂಗಾದೇವಿ ನಿಳೆಯದೊಳು ಸುಳಿವುತಿರೆ
> ವರಮುತ್ತಿನೋಲೆಗಳು ತೀವಿ ಹೊಳೆವುತ್ತಮಿರೆ ’

ಲೆಂಕರಸನೆಂಬ ಭಕ್ತನು ಕಂಡು ಆ ಓಲೆಯನ್ನು ಸರಸರನೆ ತೆಗೆಯುತ್ತಿರಲು ಗಂಗಾದೇವಿಯು ‘ ಹಾಲೆಸೊಪ್ಪಾಗುತ್ತಿದ್ದರೂ ’ ಬಾಯಿಬಿಡದೆ ಸುಮ್ಮನಿರುವಳು. ಇದನ್ನು ನೋಡಿದ ಭಕ್ತರೆಲ್ಲ “ ಬಗೆಬೆಚ್ಚಿ” ಬೆರಗಾಗಿ ನೋಡುತ್ತಿದ್ದಾರೆ. ಅದನ್ನು ಹೇಗೋ ಕಂಡ ಭಕ್ತಿಭಾಂಡಾರಿ ಬಸವಣ್ಣನು---

> “ .... ಎಲೆಲೆ ಸಂಗನ ಕರಂ ನೊಂದುದೇ
> ಬೆಸಸುವಲ್ಲಿಂ ಮನ್ನವೇ ಕೊಡದೆ ನಿಲ್ವುದೇ
> ....
> ಒಡೆಯರೊಡವೆಯನೆಳಸೆ ಕೊಡದಿಪ್ಪುದುಂ ನಯವೆ ”

ಎಂದು ಬಯ್ದು ಮುತ್ತಿನೋಲೆಯನ್ನು ಪತ್ನಿಯ ಕಿವಿಯಿಂದ ತೆಗೆದು ಆ ಶಿವಭಕ್ತ ನಿಗೆ ಒಪ್ಪಿಸಿದನು—ಇದು ಹರಿಹರನ ಬಸವರಾಜದೇವರ ರಗಳೆಯ ಕಥೆ. ಭೀಮಕವಿ ಈ ಪ್ರಸಂಗವನ್ನು ಒಂದು ಚುಟಿಕಿಯಲ್ಲಿ ಹಾರಿಸಿದ್ದಾನೆ: “ ಒಬ್ಬಯ್ಯನು ಬಸವಸಚಿವೋತ್ತಮನ ಪೊರೆಗೈದಿ ” ಆತನ ತರುಣಿಯ ಕಿವಿಯ ಹೊನ್ನೋಲೆಯನ್ನು “ ಒತ್ತೆ ಬೇಡಲು ” ಬಸವಣ್ಣನು ಆ ಓಲೆಯನ್ನು ಹೆಂಡತಿ ಯಿಂದಲೇ ತೆಗೆಸಿಕೊಂಡು ಆ ಶಿವಭಕ್ತನಿಗೆ ಕೊಡುತ್ತಾನೆ. ಹರಿಹರನು ಕೆಲವೇ ಮಾತುಗಳಲ್ಲಿ ಈ ಸನ್ನಿವೇಶವನ್ನು ಚಿತ್ರಿಸಿದ್ದರೂ ‘ ಬಸವಣ್ಣನಿಗೆ ಜಂಗಮದಲ್ಲಿ ಅಸದೃಶವಾದ ಭಕ್ತಿ ಇದ್ದಿತೆಂಬುದನ್ನು ತೋರಿಸಿದ್ದಾನೆ. “ ಎಲೆಲೆ ಸಂಗನ ಕರಂ ನೊಂದುದೇ ”—ಈ ಒಂದೇ ಮಾತಿನಲ್ಲಿ ಬಸವಭಕ್ತಿಯ ಆಳವೆಷ್ಟೆಂಬುದನ್ನು ತಿಳಿಸಿದ್ದಾನೆ. ಲಕ್ಕಣ್ಣದಂಡೇಶನ ಶಿವತತ್ವಚಿಂತಾಮಣಿಯಲ್ಲಿ ಈ ಸಂದರ್ಭದ ವರ್ಣನೆ ಒಂದೇ ಒಂದು ಪದ್ಯದಲ್ಲಿ ಅಡಕವಾಗಿದೆ: ಲಲಿತಾಂಗಿ ಎಂಬ ವೇಶ್ಯೆ ತನಗೆ ಮರುಳಾಗಿದ್ದ ಪಿಂಡಜಂಗಮನಿಗೆ ಅನುರಾಗ ತಲೆಗೇರಿದ ಸಮಯವನ್ನು ನೋಡಿಕೊಂಡಿದ್ದು “ ನೀಲಲೋಚನೆಯ ನವರತ್ನಖಚಿತದ ಕರ್ಣಪತ್ರಂಗಳ ಸೆಳೆದುತಂದರೆ ನೀನು ವೀರ ” ಎನಲು ಆ ಪಿಂಡಜಂಗಮನು “ನಲಿದು ಗಳಗಳನೆ ಪೋಗಿ ” ಆ ಓಲೆಗಳಿಗೆ ಕೈಹಾಕುವನು. ಅದನ್ನು ಕಂಡು ಮುಳಿದ ಕುಲವಧು ವನ್ನು ಬಸವಣ್ಣನು ಜರಿದು ಓಲೆಯನ್ನು ಸುಲಿದುಕೊಂಡು ಜಂಗಮನಿಗೆ ಅರ್ಪಿಸು ತ್ತಾನೆ. ಸಿಂಗಿರಾಜನು ಈ ಘಟನೆಯ ಸುತ್ತ ಒಂದು ಚೆಲುವಾದ ಕಥೆಯನ್ನು

ಹೇಳಿದಿದ್ದಾನೆ. ಮದನಾರಿಯೇ ತಸ್ಕರಲಾಂಛನಧಾರಿಯಾಗಿ ಬಂದನೋ ಎಂಬಂತೆ ಕಳ್ಳನೊಬ್ಬನು ಅರಮನೆಯನ್ನು ಹೊಕ್ಕು ಅಡಗಿಕೊಂಡಿದ್ದು ಅರ್ಧರಾತ್ರಿಯಲ್ಲಿ 'ಸದ್ಭಾವಪಥ'ನಾದ ಬಸವಣ್ಣನ ಮಂಚದ ಬಳಿಗೆ ಸಾರುವನು. ಉಪಾಯದಿಂದ ಹಗುರವಾಗಿ ನೀಲಾಂಬಿಕೆಯ ಒಡವೆಗಳನ್ನೆಲ್ಲ ಸುಲಿದಮೇಲೆ 'ನೀಲಮುತ್ತಿನ ವಜ್ರರತ್ನ ಕೇವಣದ ಹೊನ್ನೋಲೆಯನ್ನು ತೆಗೆಯಲು ಕೈಹಾಕಲು ನೀಲಾಂಬಿಕೆ "ಹೋ ಹಾಲೆ ಹರಿಯಿತು" ಎಂದು ಕೂಗಿಕೊಳ್ಳುವಳು. ಇದನ್ನು ಕೇಳಿದ ಬಸವಣ್ಣನು,

"ಒಡನಿರ್ದ ಸತಿಯೆಂದು ನೆಚ್ಚಿರ್ದೆನಯ್ಯ ಕೈವಿಡಿದ ಸಜ್ಜನೆ ಎಂದು ನಂಬಿರ್ದೆನಯ್ಯ, ಅಯ್ಯೋ ನಮ್ಮಯ್ಯನ ಕೈ ನೊಂದಿತು ತೆಗೆದುಕೊಡಾ ಎಲೆ ಚಂಡಾಲಗಿತ್ತಿ, ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ ಕೂಡಲ ಸಂಗಮದೇವ ನಲ್ಲದೆ ಆರು ಇಲ್ಲ"

ಎಂದು ಪತ್ನಿಯನ್ನು ಬಯ್ಯುತ್ತಾನೆ. ತಾನೇ ಆ ಓಲೆಯನ್ನು ಸತಿಯ ಕಿವಿಯಿಂದ ಬಿಡಿಸಿ ಆ ಕಳ್ಳನಿಗೆ ಕೊಡುತ್ತಾನೆ. ಆದರೆ ಹೊರಕ್ಕೆ ಬರುವ ದಾರಿ ಸಿಕ್ಕದೆ ಕಳ್ಳನು ತಡವರಿಸುತ್ತಿರಲು "ಬೆಳಗು ಬಳ್ಳಿವಟಿಯಿತು". ಸೇವಕರು ಇವನನ್ನು ಹಿಡಿದು ಶಿಕ್ಷೆಗೀಡುಮಾಡಬೇಕೆಂದಿರಲು ಅವರ ಆ ಅಬ್ಬರವನ್ನು ಕೇಳಿದ ಬಸವಣ್ಣನು ಎದ್ದು "ಅಯ್ಯನಯ್ಯನು ಕಾಣಿರೇ" ಎಂದು ಕೈಮುಗಿಯಲು ಕಳ್ಳನು ನಿಜವಾದ ಜಂಗಮನೇ ಆಗುತ್ತಾನೆ. ಇದು ಸಿಂಗಿರಾಜ ಪುರಾಣದ ಕಥೆ. ಇವನಿಗಿಂತ ಹಿಂದಿನ ಕಾವ್ಯಗಳಲ್ಲಿ ನಿಜವಾದ ಜಂಗಮನೇ ಹೊನ್ನೋಲೆಗೆ ಆಸೆಪಡುತ್ತಾನೆ; ಸಿಂಗಿರಾಜಪುರಾಣದಲ್ಲಿ ಹೇಳಿರುವಂತೆ ಈ ಘಟನೆ ನಡೆಯುವುದು ಸರಿರಾತ್ರಿಯಲ್ಲಿ. ಜಂಗಮವೇಷಧಾರಿ ಕಳ್ಳನು ಆ ಹೊನ್ನೋಲೆಗಳಿಗೆ ಕಯ್ಯಿಕ್ಕುತ್ತಾನೆ. ಕೊನೆಗೆ ಬಸವಣ್ಣನ ಭಾವಪುರುಷ ಪ್ರಭಾವದಿಂದ ನಿಜವಾದ ಜಂಗಮನೇ ಆಗುತ್ತಾನೆ. ಹರಿಹರನು ಕಂಡಿರುವುದು ಪರಮಭಕ್ತ ಬಸವಣ್ಣನನ್ನು, ಸಿಂಗಿರಾಜನು ಕಂಡಿರುವುದು ಪರಮಭಕ್ತ ಪವಾಡ ಪುರುಷ ಬಸವಣ್ಣನನ್ನು. ಸಿಂಗಿರಾಜನ ಬಸವಣ್ಣ ಜಾಗ್ರತ್ ಸ್ವಪ್ನ, ಸುಷುಪ್ತಿ ಮೂರು ಅವಸ್ಥೆಗಳಲ್ಲಿಯೂ, ತಾನು ಮತ್ತು ತನ್ನದು ಎಲ್ಲವೂ ಶಿವನಿಗೆ ಮತ್ತು ಶಿವನವರಿಗೆ ಮುಡಿಪು ಎಂಬುದನ್ನು ಅರಿತಿದ್ದನೆಂಬುದು ಗೊತ್ತಾಗುತ್ತದೆ. ಕವಿ ಈ ಭಾಗವನ್ನು ಉಚಿತರೀತಿಯಲ್ಲಿ ಬೆಳೆಸಿದ್ದಾನೆ, ಬಸವಣ್ಣನ ವ್ಯಕ್ತಿತ್ವ. ಮಹತ್ವ, ಸರ್ವಸಮರ್ಪಣಾಭಾವವನ್ನು ಪ್ರಕಾಶಪಡಿಸಿದ್ದಾನೆ. ಪವಾಡಕಥೆಗಳು ಹುಟ್ಟುವ ಬಗೆಯನ್ನು ವಿವರಿಸುವುದಕ್ಕೆ ಈ ಸನ್ನಿವೇಶ ಅತ್ಯುತ್ತಮ ಉದಾಹರಣೆಯಾಗಿದೆ.

ಹರೀಶ್ವರನು ಬಸವಣ್ಣನ ನಿಸ್ಸೀಮ ಭಕ್ತಿಯನ್ನೂ, ಆ ಭಕ್ತಿ ಎಷ್ಟರಮಟ್ಟಿಗೆ ಪರಿಪಕ್ವಗೊಂಡು ಬಸವಣ್ಣನು ಈಶನ 'ಮಿಸಲಪ್ಪಭಕ್ತ'ನೂ ಸರ್ವಜೀವ ದಯಾಪಾರಿಯೂ ಆಗಿದ್ದನೆಂಬುದನ್ನೂ ತೋರಿಸಲು ಒಂದು ರಸಮಯ ಸನ್ನಿವೇಶ ವನ್ನು ಕಟ್ಟಿದ್ದಾನೆ. 'ಕಾವ' 'ಈವ' 'ತುಂಬಿ ತುಳುಕದ' ಸಂಗನಬಸವನು

ಮಾಹೇಶ್ವರರ ಸೇವೆಯಲ್ಲಿ ನಿರತನಾಗಿ ತಾನೆ ಇಲ್ಲವಾಗಿರುತ್ತಾನೆ. ಅದೇ ಸಮಯದಲ್ಲಿಯೇ ಗೋಪಾಲಕನೊಬ್ಬನು ಬಂದು ಬಸವಣ್ಣನಿಗೆ ಶರಣುಮಾಡಿ

"ಇಂದು ಭಕ್ತರವೇಷದಿಂದ ಕಳ್ಳರ್ ಬಂದು
ಕೀಲಾರವಮಂ ಕೊಂಡು ಹೋದರಿಂದೆಲೆ ದೇವ,
ಮೇಲಪ್ಪ ಗೋಕುಲವನ್ನೈದೆ ಕೊಂಡರು ದೇವ"

ಎಂದು ನಿವೇದಿಸುತ್ತಾನೆ. ಆಗ ಬಸವಣ್ಣ 'ಮರುಳುಗೋವಳಾ ಭಕ್ತರೇ ಕಳ್ಳರೇ'? ಎಂದು ಪ್ರಶ್ನಿಸುತ್ತಾನೆ. ಗೋಪಾಲಕರಿಗೆ ಕಂಡದ್ದು ಭಕ್ತವೇಷದ ಕಳ್ಳರು; ಬಸವಣ್ಣನಿಗೆ ಕಾಣುವುದು ಕಳ್ಳರವೇಷದ ಭಕ್ತರು. ತಮ್ಮೊಡವೆಯನ್ನು ತಾವು ಕೊಂಡೊಯ್ದರೆ ನಿನಗೇನು? ಶಿವವೇಷವೂ ಕಳವೂ ಒಂದೇ ಎಡೆ ಇರುವುದು ಎಲ್ಲಿಯಾದರೂ ಸಾಧ್ಯವೆ? ಶಿವಭಕ್ತರಲ್ಲದೆ ಇನ್ನಾರಿಗಾದರೂ ಹಸುಗಳನ್ನು ಕೊಂಡೊಯ್ಯುವ ಎದೆ ಬಂದೀತೆ? ಎಂದು ಬಯ್ದು,

ಸಂಗನೇ ಕೊಂಬವಂ ಸಂಗನೇ ಕೊಡುವವಂ
ಸಂಗನೇ ಉಂಬವಂ ಸಂಗನೇ ಉಡುವವಂ

ಎಂದು ಮುಂತಾಗಿ ಗೀತೆಗಳನ್ನು ಹಾಡುವನು. 'ತಾಯಿ ಹಸುಗಳು ಉಮ್ಮಳಿಸಲಾಗದು, ಮಕ್ಕಳುಗಳೂ ಅವ್ವೆಗಳೂ ನೋಯಲಾಗದು. ಕರುಗಳನ್ನು ಬಿಡಿರೆ' ಎಂದು ಹೇಳುತ್ತಾನೆ. ಬಸವಣ್ಣನಿಗೆ ಜೀವಜಾತಗಳಲ್ಲಿ ಎಷ್ಟು ಅನುಕಂಪೆ ಇತ್ತು ಎಂಬುದು ಈ ಒಂದು ಸನ್ನಿವೇಶದಿಂದಲೇ ಗೊತ್ತಾಗುತ್ತದೆ. 'ಬಿಡಿರೆ, 'ಕರುಗಳಂ ಬಿಡಿರೆ' ಎಂಬ ಮಾತನ್ನು ಹರಿಹರನ ಬಸವಣ್ಣನು ಎಷ್ಟು ಸಾರಿ ಹೇಳುತ್ತಾನೆ! ಆ ಹೇಳಿಕೆಯಲ್ಲಿ ಎಷ್ಟೊಂದು ಕಾತರತೆ! ಈ ಸನ್ನಿವೇಶದಿಂದ ಬಸವಣ್ಣನ ದಯಾಪರತ್ವವೂ ಅಚಲವಾದ ಗಾಢವಾದ ಭಕ್ತಿಯೂ ಹೊರಪಡುತ್ತದೆ.

ಹರಿಹರನು ಹೇಳುವ ಕಥೆ ಇಲ್ಲಿಗೆ ಮುಗಿಯುತ್ತದೆ. ಸಿಂಗಿರಾಜನು ಈ ಕಥೆಗೆ ಕಳಸವಿಡುತ್ತಾನೆ; ಬಸವಣ್ಣನ ವ್ಯಕ್ತಿತ್ವಕ್ಕೆ ಇನ್ನೊಂದು ಬಣ್ಣವನ್ನು ಸೇರಿಸುತ್ತಾನೆ. ಇವನು ಹೇಳುವಂತೆ ತುರುಗಳನ್ನು ಅಟ್ಟಿಕೊಂಡು ಹೋಗುವವರು ಕಳ್ಳರು, ಭಕ್ತ ವೇಷದ ಕಳ್ಳರಲ್ಲ. ಸುದ್ದಿಯನ್ನು ಕೇಳಿದ ಬಸವಣ್ಣ 'ವಿಶ್ವವೆಲ್ಲವು ವಿಶ್ವತೋಮುಖನ ಮುಖ, ಅವಿಶ್ವಾಸವೇಕೆ? ಜಗತ್ ಪ್ರೇರಕನ ನಿಜ ಸ್ವಭಾವಕ್ಕೆ ನಿರ್ವಿರೋಧಿಪನೆ ಕಳ್ಳನು' ಎಂದು ಬೋಧಿಸಿ ಕರುಗಳನ್ನು ತುರುಗೂಡಲು ಕಳುಹಿಸುತ್ತಾನೆ ಆಕಳು ಕಳ್ಳರು, ಕರುಗಳನ್ನು ಓಡಿಸಿಕೊಂಡು ಬರುತ್ತಿದ್ದ ಗೋಪಾಲಕರನ್ನು ನೋಡಿದೊಡನೆ ಅವರಲ್ಲಿ ಸುಜ್ಞಾನೋದಯವಾಗುವುದು. ಕೊನೆಗೆ ತಾವು ಮಾಡಿದ ಅಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ಬಸವಣ್ಣನಲ್ಲಿಗೆ ಬಂದು ಕ್ಷಮಾಭಿಕ್ಷೆ ಬೇಡಿ ಅವನ ಬಳಿಯಲ್ಲಿಯೇ 'ವಿಶ್ವಾಸದಂಗರಕ್ಷಕ'ರಾಗಿ ನಿಲ್ಲುತ್ತಾರೆ. "ಆಕಳು ಕಳ್ಳರು ಕೊಂಡರೆನಬೇಡೆಲವೊ, ಸಂಗಕೊಂಡನೆಂಬೊ . . ." ಈ ವಚನವನ್ನು ಸಿಂಗಿರಾಜನು ನಡುವೆ ಸೇರಿಸಿರುವುದರಿಂದ ಕಥೆಗೆ ವಾಸ್ತವಿಕತೆ ಬಂದಿದೆ. 'ಹರಿಹರ' ನಲ್ಲಿ ಕಾಣುವ ಭೂತದಯೆಗೆ ಇಲ್ಲಿ

ಗೌಣಸ್ಥಾನ. ಮಹಾನುಭಾವಿ ಬಸವಣ್ಣನಿಗೆ ವಿಶ್ವವೆಲ್ಲವೂ ವಿಶ್ವತೋಮುಖನ ಮುಖವಾಗಿ ಕಾಣುತ್ತಿತ್ತು ಎಂಬುದನ್ನು ಬಹು ಚೆನ್ನಾಗಿ ವ್ಯಕ್ತಪಡಿಸುತ್ತದೆ ಈ ಭಾಗ. ಕವಿಯ ಮುಖ್ಯ ಉದ್ದೇಶ ಇದು. ಕಳ್ಳರು ಒಳ್ಳೆಯುವರಾದ ಸಂಗತಿ 'ರಗಳೆ' ಯಲ್ಲಿಲ್ಲ. 'ಬಸವ' ಎಂಬ ಮೂರು ಅಕ್ಷರಗಳೆ ಆ ಕಳ್ಳರನ್ನು ಸನ್ಮಾರ್ಗಕ್ಕೆ ತಿರುಗಿಸಿದುವು ಎಂದು ಸಿಂಗಿರಾಜ ಪುರಾಣದಲ್ಲಿ ಹೇಳಿದೆ. ಕಥೆಯನ್ನು ಹೀಗೆ ಬೆಳೆಸಿರುವುದು ಸಿಂಗಿರಾಜನಿಗೆ ಖಂಡಿತವಾಗಿಯೂ ಮೆಚ್ಚುಗೆಯನ್ನು ತರುತ್ತದೆಯಲ್ಲದೆ ಬಸವಣ್ಣನ ಹಿರಿಯತನವನ್ನು ಎತ್ತಿ ತೋರಿಸುತ್ತದೆ. ಅವನ ಭಕ್ತಿ ಶ್ರದ್ಧೆ ಎಷ್ಟು ಅಚಲ ಎಂಬುದನ್ನು ಸೂಚಿಸುತ್ತದೆ.

ಸುರೆಯು ಹರವಿಯ ಪವಾಡದ ಸಂದರ್ಭ ಬಂದಾಗ ಮಾತ್ರ ಸಿಂಗಿರಾಜನು ಔಚಿತ್ಯದ ಎಲ್ಲೆಯನ್ನು ಮೀರಿರುತ್ತಾನೆ. ಶಿವತತ್ವ ಚಿಂತಾಮಣಿಯಲ್ಲಿ ಈ ಸಂದರ್ಭ ಒಂದೇ ಪದ್ಯದಲ್ಲಿ ಹೇಳಲ್ಪಟ್ಟಿದೆ. ಸುರೆಯ ಹರವಿಗೆ ಭಸ್ಮ ಬಳಿದಿರುವುದನ್ನು ಕಂಡ ಬಿಜ್ಜಳನು 'ಬಸವರಸರೇ ನಿಮ್ಮ ಭಸಿತವಿಲ್ಲಿರಲು ತಕ್ಕುದೇ' ಎಂದು ಬಸವಣ್ಣನ್ನು ಕೇಳುತ್ತಾನೆ. ಬಸವಣ್ಣನು 'ಸುರೆಯೆತ್ತ ಭಸ್ಮವೆತ್ತ? ಭಸ್ಮ ಧರಿಸಿರುವ ಆ ಕುಂಭದೊಳಗಿರುವುದು ಅಮೃತವಲ್ಲದೆ ಸುರೆಯಲ್ಲ' ಎಂದು ಹೇಳಿ ಸುರೆಯನ್ನು ಅಮೃತ ಮಾಡುತ್ತಾನೆ. ಸಿಂಗಿರಾಜನು ಇಷ್ಟನ್ನೆ ಹೇಳಿ ನಿಲ್ಲಿಸುವುದಿಲ್ಲ. ಅದು ಹಾಲು ಎಂಬುದನ್ನು ಸರ್ವರೂ ಕಣ್ಣಾರೆ ನೋಡಲಿ ಎಂದು ಆ ಕ್ಷೀರಕ್ಕೆ ಹೆಪ್ಪೆರೆದು ಮೊಸರುಮಾಡಿ ತೋರಿಸಿದಂತೆಯೂ ಮೊಸರು ಕಡೆದು ಬೆಣ್ಣೆಯನ್ನು ಮಾಡಿ ಆ ತುಪ್ಪದಿಂದ ನರುಗಂಪನ್ನು ಹೊರಡಿಸಿದನೆಂದೂ ಹೇಳುತ್ತಾನೆ. ವೈಪರೀತ್ಯವೆಂದರೆ ಇದು.

ಹಿಂದೆ ಹೇಳಿದ ಕಥೆಗಳನ್ನೆ ನೇರ್ಪಡಿಸಿ ಚೆಲುವು ಮಾಡಿರುವುದಕ್ಕೆ ಒಂದು ನಿದರ್ಶನ ಕೊಡಬಹುದು. ಪಾತ್ರದವಳೊಬ್ಬಳು ಬಿಜ್ಜಳನ ಆಸ್ಥಾನದಲ್ಲಿ ನರ್ತನ ಮಾಡುತ್ತ 'ಕಳಾಸಂಗೊಡುವ ಸಮಯದಲ್ಲಿ' ಆಕೆಯ ಕಲೆಗೆ ಮೆಚ್ಚಿದ ಜಂಗಮನು ಆ ನರ್ತಕಿಗೆ ಜಂಬೀರ ಫಲದಿಂದ ಹೊಡೆಯುತ್ತಾನೆ. ಇದನ್ನು ಕಂಡು ಅಸಹ್ಯಪಟ್ಟುಕೊಂಡ ರಾಜನು ಆಕ್ಷೇಪಿಸಲು ಬಸವೇಶ್ವರನು 'ಲಿಂಗವಂ ಗುರು ಮೆಚ್ಚಿಕೊಟ್ಟ' ಎಂದು ಹೇಳಿ ರಾಜನನ್ನು ಸಮಾಧಾನಗೊಳಿಸುತ್ತಾನೆ. ಜಂಗಮನ ಈ ವರ್ತನೆ ರಾಜ ಸಭೆಯಲ್ಲಿರುವವನಿಗೆ ತಕ್ಕುದಲ್ಲ. ಅಂತಹ ಕೀಳು ಜಂಗಮನ ಅಶ್ಲೀಲವನ್ನು ಮುಚ್ಚುವುದು ಬಸವಣ್ಣನಂತಹ ದೊಡ್ಡವರಿಗೂ ತಕ್ಕುದಲ್ಲ. ಸಿಂಗಿರಾಜನು 'ಶಿವತತ್ವ ಚಿಂತಾಮಣಿ'ಯ ಇದೇ ಘಟನೆಯನ್ನು ತೆಗೆದುಕೊಂಡು ಇದಕ್ಕೆ ಬೇರೊಂದು ತಿರುವು ಕೊಟ್ಟಿರುತ್ತಾನೆ. ಮಾಯಾದೇವಿ ಎಂಬ ವೇಶ್ಯೆ ಒಂದು ದಿನ ಶಿವ ಪುರಾಣವನ್ನು ಕೇಳಿ ವೈರಾಗ್ಯತಾಳಿ ಗುರುವು ಮನೆಗೆ ಪಾದವಿಟ್ಟು ಪ್ರಸಾದವೆಂದು ಏನು ಕೊಡುವರೋ ಅದನ್ನೇ ಲಿಂಗವೆಂದು ಭಾವಿಸಿ ಆರಾಧಿಸುವೆನೆಂದು ನಿಶ್ಚಯಿಸುತ್ತಾಳೆ. ಮಿಂಡನಾಗಯ್ಯನೆಂಬ ವಿಟನು ಬಂದು ಈ ವಾರಾಂಗನೆಯ ರೂಪ ವಿಲಾಸಗಳಿಗೆ ಮರುಳಾಗಿ ನಿಂಬೆಯ ಹಣ್ಣಿನಿಂದ ಹೊಡೆಯುತ್ತಾನೆ. ಆ ಸ್ತ್ರೀ ನಿಂಬೆಯ ಹಣ್ಣನ್ನೆ ಲಿಂಗವೆಂದು ಸ್ವೀಕರಿಸು

ವಳು. ಈ ಸಂಗತಿಯು'' 'ದುರುಳಾತ್ಮರ' ಮೂಲಕ ದೊರೆಯ ಕಿವಿಗೂ ಮುಟ್ಟು ತ್ತದೆ. ಆ ವೇಶ್ಯೆಯನ್ನು ಕರೆಸಿ ನೋಡಿದಾಗ ಆಕೆಯ ಬಳಿ ಜಂಬೀರ ಫಲದ ಬದಲು ಶಿವಲಿಂಗವಿರುತ್ತದೆ, ಆಕೆಯ ಭಕ್ತಿಯ ಪ್ರಭಾವದಿಂದ, ಬಸವಣ್ಣನ ಭಾವ ವರುಷ ಪ್ರಭಾವದಿಂದ. ಇಲ್ಲಿ ಕವಿ ಮಾಡಿರುವ ಬದಲಾವಣೆ ಭಕ್ತಿಯ ಮಹತ್ವ ವನ್ನು ಸಾರಲು ನೆರವಾಗಿದೆ, ಅಸಭ್ಯತೆಗಿಲ್ಲಿ ಎಡೆ ಇಲ್ಲ.

ಒಬ್ಬ ಮಹಾ ಪುರುಷ ಮೆರೆದ ಪವಾಡವನ್ನು ಅವನ ತರುವಾಯ ಬಂದ ಮಹಾಪುರುಷನೂ ಮೆರೆದನೆಂದು ಹೇಳುವುದು ಪುರಾಣಕಾರರ ಲಕ್ಷಣವೆಂದು ತೋರುತ್ತದೆ. ಹರಿಯುವ ನದಿಯನ್ನು ಯೆಹೋದ್ಯ ಪ್ರವಾದಿ ಮೋಸೆಸ್ ನಿಲ್ಲಿಸಿದನು ; ಶ್ರೀ ಕೃಷ್ಣ ಇನ್ನೂ ಎರಡು ಗಳಿಗೆಯ ಕೂಸಾಗಿದ್ದಾ ಗಲೇ ಈ ಪವಾಡವನ್ನು ಮೆರೆದನು ; ಬಸವಣ್ಣನೂ ಕೃಷ್ಣಾನದಿಯ ಪ್ರವಾಹವನ್ನು ತಡೆದನು. ಹನುಮಂತನು ಪರ್ವತವನ್ನೆತ್ತಿದುದು ಅಚ್ಚರಿಯಲ್ಲವೆಂಬುದನ್ನು ಸಾಧಿಸುವುದಕ್ಕಾಗಿ ಶಿವಭಕ್ತನಾದ ಸಾಮಾನ್ಯ ಹಡಪಿಗನು ಬೆರಳು ತುದಿ ಯಿಂದಲೇ ಬೆಟ್ಟವನ್ನೆತ್ತಿ ತಂದ. ದ್ರೌಪದೀ ವಸ್ತ್ರಾಪಹರಣದಂತೆಯೇ ಗಂಗಾಂಬಿಕಾ ವಸ್ತ್ರಾಪಹರಣವೂ ನಡೆಯಿತು. ಬೇರೊಂದು ಪಂಥದವರು ಅವರ ಮತಸ್ಥಾಪಕರು ತೋರಿಸಿದರೆಂದು ಹೇಳುವ ಪವಾಡಗಳನ್ನು ನಮ್ಮ ಪಂಥದವರೂ ಮೆರೆದಿದ್ದಾರೆ, ನಮ್ಮವರೂ ಅಷ್ಟೇ ಮಹಾನು ಭಾವಿಗಳೂ, ಮಹಿಮಾಶಾಲಿಗಳೂ ಆಗಿರುವರೆಂಬುದನ್ನು ತೋರಿಸುವುದಕ್ಕೆ ಪುರಾಣಕಾರರು ಆ ಪಂಥಕ್ಕೆ ಸೇರಿದ ಪವಾಡ ಪುರುಷರು ತೋರಿಸಿದ ಅಮಾನುಷ ಕೃತ್ಯಗಳನ್ನು ತಮ್ಮ ಗ್ರಂಥಗಳ ನಾಯಕರ ತಲೆಗೂ ಗಂಟು ಹಾಕಿದ್ದಾರೆ. ಅಷ್ಟೇ ಅಲ್ಲ, ಅದೇ ಪಂಥದ ಪ್ರಾಚೀನರು ನಡೆಸಿದ ಪವಾಡಗಳನ್ನೂ ಇವರು ತಮ್ಮ ಕೃತಿಗಳ ನಾಯಕರಿಗೂ ಗಂಟು ಹಾಕಿರುವುದು ಕಂಡುಬರುತ್ತದೆ. ಒಂದು ಸಾರಿ ಸಿದ್ಧರಾಮನು ಕಾರ್ಗಾಲದ ಸಿಡಿಲನ್ನು ಕತ್ತಿಯಿಂದ ತಿವಿದು ಹಿಡಿದು ಮತ್ತೆ ಶಿವನ ಅಪ್ಪಣೆಯ ಮೇರೆಗೆ ಆ ಸಿಡಿಲನ್ನು ಬಿಟ್ಟು ಕಳೆದು ಕತ್ತಿಯನ್ನು ಭಂಡಾರಿಸಿದನು. ಈ ಕಥೆ ರಾಘವಾಂಕನ ಸಿದ್ಧ ರಾಮ ಚಾರಿತ್ರದಲ್ಲಿ ಬಂದಿದೆ. ಇದೇ ಪವಾಡ ಕಥೆ ಸಿಂಗಿರಾಜ ಪುರಾಣದಲ್ಲಿ ಬೇರೊಂದು ಸ್ವರೂಪ ತಳೆದು ಕಾಣಿಸಿಕೊಳ್ಳುತ್ತದೆ. ಬಿಜ್ಜಳನು ಒಡ್ಡೋಲಗ ದಲ್ಲಿದ್ದಾಗ ಭಯಂಕರ ಸಿಡಿಲೊಂದು ಬಂದು ಅವನ ಮೇಲೆ ಎರಗುವುದು. ಬಸವೇಶ್ವರನು ಅದನ್ನು ಎಳೆದು ಹಿಡಿದು ಹಾಕಿ ರಾಜನನ್ನು ಮಹಾ ಕಂಟಕ ದಿಂದ ಪಾರು ಮಾಡಿದನು. ಇದರಂತೆಯೇ ಕಬ್ಬಿಲರು ಶಿವ ಪ್ರಸಾದವನ್ನು ಬೇಡಿದ ಪ್ರಸಂಗವೂ ಸಿದ್ಧರಾಮ ಚಾರಿತ್ರದಿಂದ ಸಿಂಗಿರಾಜನ 'ಅಮಲಬಸವ ಚಾರಿತ್ರ'ಕ್ಕೆ ಅಡಿಯಿಟ್ಟಿದೆ. ಕೊಂಡಗೂಳಿ ಕೇಶಿರಾಜನು ಮೆರೆದ ಮುದ್ರೆ ಉಂಗುರದ ಪವಾಡವೂ ಸಿಂಗಿರಾಜನ ಬಸವಣ್ಣನಲ್ಲಿ ಆರೋಪಿತವಾಗಿದೆ.

ಸಿಂಗಿರಾಜನು ಪವಾಡ ಕಥೆಗಳನ್ನು ಹೆಣೆಯುವಲ್ಲಿ ಅಲ್ಲಲ್ಲಿ ಎಡಹಿದ್ದರೂ ತಕ್ಕಮಟ್ಟಿನ ಜಾಣ್ಮೆಯನ್ನು ತೋರಿಸಿದ್ದಾನೆಂದು ಹೇಳಬಹುದು. ಬಸವಣ್ಣನ

ಜೀವದಯೆ, ದಾಸೋಹ ಭಾವ, ಗುರುಲಿಂಗಜಂಗಮ ಪ್ರೇಮ, ಅವನ ನಿಸ್ಸೀಮ ಶಿವ ಭಕ್ತಿ ಇವನ್ನೆಲ್ಲಾ ಕುರಿತಿರುವ ರಸಪೂರ್ಣ ಸನ್ನಿವೇಶಗಳು ಹರಿಹರನಿಂದ ಈಚೆಗೆ ಬಂದ ಪುರಾಣಕಾರರ ಕಯ್ಯಲ್ಲಿ ಸಿಲುಕಿ ಪವಾಡಕಥೆಗಳಾಗಿ ಪರಿಣಮಿಸಿವೆ, ಅನೇಕ ಕಡೆ. ಬಹುಶಃ ಬಸವಪುರಾಣದ ಹೊತ್ತಿಗೆ ಬಸವೇಶ್ವರನ ಜೀವನ ಚರಿತ್ರೆಗೆ ಸಂಬಂಧಪಟ್ಟಂತೆ ಇದ್ದ ಎಲ್ಲ ರಸಪೂರ್ಣ ಸನ್ನಿವೇಶಗಳೂ 'ಪವಾಡ' ಕ್ಕೆ ಸಾಮಗ್ರಿಯನ್ನು ಒದಗಿಸಿಕೊಟ್ಟಿವೆ. ಜನತೆಯಲ್ಲಿಯೂ ಇಂತಹ ಕಥೆಗಳು ಹರಡಿಕೊಂಡಿರಬೇಕೆಂದು ಊಹಿಸುವುದಕ್ಕೆ 'ಹರಿಹರನ ಬಸವರಾಜ ದೇವರ ರಗಳೆ'ಯಲ್ಲಿ ವರ್ಣಿತವಾಗಿರುವ ಪವಾಡಕಥೆಗಳೇ ಸಾಕ್ಷಿಯಾಗಿವೆ. ಅಂತೂ ಸಿಂಗಿರಾಜನು ಪವಾಡ ಕಥೆಗಳ ಮೂಲಕ ಬಸವಣ್ಣನ ಮಹಿಮೆ ಹಿರಿಮೆಗಳನ್ನು ತೋರಿಸಿ ಕೊಡಲು ಪ್ರಯತ್ನಪಟ್ಟು ಬಹುಮಟ್ಟಿಗೆ ಯಶಸ್ವಿಯಾಗಿದ್ದಾನೆ.

ಸಿಂಗಿರಾಜನ ಬಸವಣ್ಣ.

ಹನ್ನೆರಡನೆಯ ಶತಮಾನದಲ್ಲಿ ಮತ್ತು ಅಲ್ಲಿಂದೀಚೆಗೆ ಹುಟ್ಟಿರುವ ವಿಪುಲ ವಚನ ರಾಶಿಯಿಂದಲೂ ಅರ್ಜುನವಾಡ, ಚೌಡದಾನಪುರ, ಮಣಿಗವಳ್ಳಿ ಮುಂತಾದ ಕಡೆ ದೊರೆತಿರುವ ಶಾಸನಗಳಿಂದಲೂ ವೀರಶೈವ ಪುರಾಣಗಳಿಂದಲೂ ಬಸವಣ್ಣನು ಕನ್ನಡ ಸಮಾಜದ ಹಲವು ಕ್ಷೇತ್ರಗಳಲ್ಲಿ ಉಜ್ವಲ ಕ್ರಾಂತಿ ಯನ್ನುಂಟುಮಾಡಿ ಇಡೀ ಕನ್ನಡ ನಾಡನ್ನೇ ಉದ್ಧರಿಸಿದ ಐತಿಹಾಸಿಕ ಮಹಾ ಪುರುಷನೆಂಬುದು ಗೊತ್ತಾಗುತ್ತದೆ.

ಬಸವೇಶ್ವರನು ವರ್ಣಭೇದ ನೀತಿಯನ್ನು ಧೈರ್ಯವಾಗಿ ಪ್ರತಿಭಟಿಸಿ "ಹಾರುವ ಮೊದಲಾಗಿ ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲರನ್ನೂ ಒಂದೇ ಎಂಬೆ" ಎಂದು ಸಾರಿದನು, ಮನುಧರ್ಮಶಾಸ್ತ್ರವೇ ವೇದವೆಂದು ಜನರು ಭಾವಿಸಿದ್ದ ಆ ಕಾಲದಲ್ಲಿ, ಎಂಟು ನೂರು ವರುಷಗಳ ಹಿಂದೆ, ಜನಸಾಮಾನ್ಯದ ಅವಜ್ಞತೆಯ ಫಲವಾಗಿ ಸಮಾಜದಲ್ಲಿ ಬೇರೂರಿ ಹೆಮ್ಮರವಾಗಿ ಬೆಳೆದು ಮರ ಸಾಗಿದ್ದ ಅಂಧಾಚಾರಗಳು, ಕುರುಡು ನಂಬಿಗೆಗಳು ಮಾರಿ ಮಸಣಿ, ಚವುಡಿ ಭೂತಗಳ ಪೂಜೆ—ಇವುಗಳನ್ನೆಲ್ಲ ಬೇರು ಸಹಿತ ನಾಶಮಾಡಲು ಪ್ರಯತ್ನಿಸಿದನು. ಸಂಪ್ರದಾಯದಿಂದ, ಕೆಲಮಟ್ಟಿಗೆ ಪುರುಷನ ಸ್ವಾರ್ಥದಿಂದ, ಪಂಡಿತರ ಶಾಸ್ತ್ರ ದಿಂದ ಸಾಮಾಜಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ನೆಲೆ ಪಡೆಯದೆ ಮೂಲೆಯ ಮುಡಿಪಾಗಿದ್ದ ಹೆಣ್ಣಿಗೆ ಕಣ್ಣು ಕೈ ಮೈ ಬಂದುದು ಬಸವಭಾನುವು ಉದಯ ವಾದಾಗ. 'ಕಾಯಕವೆ ಕೈಲಾಸದ ವಿಲಾಸ' ವೆಂದು ಬೋಧಿಸಿ ಶಿವಭಕ್ತರಾದ ವರು, ಅವರು ಜಂಗಮರಾಗಿದ್ದರೇನು, ಭಕ್ತರಾಗಿದ್ದರೇನು, ಕಾಯಕವನ್ನು ಮಾಡಿಯೇ ದುಡಿಯಬೇಕೆಂದು ಒತ್ತಿಹೇಳಿ ಅದರಂತೆ ತಾನೂ ಆಚರಿಸಿ ಎಲ್ಲರಿಗೂ ಮಾರ್ಗದರ್ಶಕನಾದವನು ಇವನು; ಕಾಯಕಗಳಲ್ಲಿ ಮೇಲು ಕೀಳು ಎಂದು ಭೇದಮಾಡಿದವರನ್ನು ಬಿರುನುಡಿಗಳಿಂದ ಅಲ್ಲಗಳೆದು ಯಾರ ಕುಲವನ್ನಾಗಲಿ

ಅವರ ಕಾಯಕದ ಮೇಲೆ ನಿರ್ಧರಿಸುವುದು ವೀರಶೈವ ಧರ್ಮಕ್ಕೆ ವಿರುದ್ಧ ಎಂದು ಸಾರಿ ಸಮಾಜದ ಆರ್ಥಿಕ ಭದ್ರತೆಗೆ ತಳಪಾಯ ಹಾಕಿದವನು ಇವನು ; ಆಗಮ ವಿರಲಿ ಪುರಾಣವಿರಲಿ ಮತ್ತೊಂದಿರಲಿ, ಅಲ್ಲಿ ಹೇಳಿರುವ ಆಧ್ಯಾತ್ಮಿಕ ತತ್ವಗಳನ್ನು ಮೊದಲು ನಿಮ್ಮ ವಿವೇಕದ, ನಿಮ್ಮ ಅನುಭವದ ತಕ್ಕಡಿಯಲ್ಲಿ ತೂಗಿ ನೋಡಿ ಸರಿಕಂಡುದನ್ನು ಒಪ್ಪಿ ಸಲ್ಲದುದನ್ನು ಧೈರ್ಯವಾಗಿ ಖಂಡಿಸಿರಿ ಎಂದು ಬೋಧಿಸಿ ಜನತೆಗೆ ವಿಚಾರ ಸ್ವಾತಂತ್ರ್ಯವಿತ್ತವನು ಇವನು ; ಸಮಾಜ ಪುರುಷನ ಕಣ್ಣ ಪೊರೆಯನ್ನು ತೆಗೆದೊಗೆದು ಅದಕ್ಕೊಂದು ಹೊಸ ದೃಷ್ಟಿಯನ್ನು ಕೊಟ್ಟ ಸಮಾಜ ಸುಧಾರಕ ; ಕನ್ನಡ ಸಾಹಿತ್ಯ ದೇವಿಯನ್ನು ಅಂಗಾಲಿನಿಂದ ನಡುನೆತ್ತಿಯವರೆಗೆ ಮೆಯ್ಯುಂಡ ಬಂದಳಿಕೆಯನ್ನು ಕತ್ತರಿಸಿ ಆ ನುಡಿವೆಣ್ಣಿಗೆ ಒಂದು ಹೊಸ ಉಸಿರನ್ನು, ಹೊಸ ಕಸುವನ್ನು ಕೊಟ್ಟ ಕನ್ನಡ ಕುಲದೀಪ ; ಎಲ್ಲಕ್ಕೂ ಮಿಗಿಲಾಗಿ ಕೀಳುಮೇಲೆನ್ನದೆ, ಹೆಣ್ಣು ಗಂಡು ಎಂದು ಭೇದವೆಣಿಸದೆ, ಹಿರಿಯ ಕಿರಿಯ ಬಡವ ಬಲ್ಲಿದ ಎನ್ನದೆ ಕನ್ನಡನಾಡಿನ ಎಲ್ಲ ಮಕ್ಕಳಿಗೂ ಶಿವಭಕ್ತಿಯ ಅಮೃತವನ್ನು ಉಣಬಡಿಸಿದ ಮಹಾದಾಸೋಹಿ. ನಮ್ಮ ನಾಡಿನ ಜನಮನದ ಮೈಲಿಗೆಯನ್ನು ತೊಳೆದು ಇಡೀ ಜನತೆಯನ್ನೇ ಹಿಡಿದೆತ್ತಿದ ಮಹಾವೀರ ಬಸವಣ್ಣ. ಕನ್ನಡ ದೇಶ ಇಂತಹ ಮಹಾವಿಭೂತಿಯನ್ನು ಪಡೆದಿರುವುದು ಬಹುಶಃ ಇದೊಂದೇ ಸಲ.

ಇಂತಹ ದಿವ್ಯಪುರುಷನ ಸಾಹಸ ಚರಿತ್ರೆಯನ್ನು ಕೃತಿಮಾಡಿ ಸಿಂಗಿರಾಜನೂ ಇತರ ವೀರಶೈವ ಕವಿಗಳಂತೆ ತನ್ನ ಭಕ್ತಿಯ ಕಾಣಿಕೆಯನ್ನು ಸಲ್ಲಿಸಿದ್ದಾನೆ. ಇವನ ದೃಷ್ಟಿಯಲ್ಲಿ ಬಸವೇಶ್ವರನು ಪರಶಿವನ ಸಾಕಾರಸ್ವರೂಪ. ಈ 'ಬಸವಭಕ್ತಿ' ಕಾವ್ಯದಲ್ಲಿ ಹೇಗೆ ಕಾಣಿಸಿಕೊಂಡಿದೆಯೆಂಬುದನ್ನು ತೋರಿಸುವುದಕ್ಕೆ ನಿದರ್ಶನಗಳಿಗಾಗಿ ಹುಡುಕಾಡುವುದೇ ಅನಾವಶ್ಯಕ. ಬಸವೇಶ್ವರನು ಭೂಲೋಕಕ್ಕೆ ಬರಲು ಕಾರಣವನ್ನು ಹೇಳುವಾಗ '' ಕುಚಿತ ಕೋಟಿತೆಯ ಕುಂದು ನಿಂದೆ ಮೋಟಿಸಿ ಜನನವ್ಯೈಕಾರವಂತೊಡರ್ಚುವುದು '' ಧರ್ಮ ದ್ರೋಹವೆಂದೆ ಸಿಂಗಿರಾಜನ ನಂಬಿಕೆ. ಅವನು ಭೂಲೋಕದಲ್ಲಿದ್ದರೇನು, ಕೈಲಾಸದಲ್ಲಿದ್ದರೇನು, 'ಸಾಕ್ಷಾತ್' ಶಿವನ ಪ್ರತಿಬಿಂಬ'ವೆ ; 'ಭವಪಾವ ಕೊಲುವನ' ಮೇಲೆ ವಿಷವು ಸಿಡಿದಿದ್ದರೆ ವಿಷವನ್ನೆ ತೊಡೆದುಕೊಂಡಿರುವನೆನ್ನುವುದು ಸರಿಯೆ ? 'ಬಸವ ಮರ್ತ್ಯನೆ ? ಬಸವನರನೆ ? ಎಂದು ಮುಂತಾಗಿ ಸಿಂಗಿರಾಜನ ಕೇಳಿಕೆ. 'ಭೂರುದ್ರ'ನೂ 'ಮಾನವಮಹಾದೇವ'ನೂ 'ಪರಬ್ರಹ್ಮಪಂಚಾಸ್ಯನೂ' 'ಆದಿ ಬ್ರಹ್ಮಚಾರ್ಯ'ನೂ ಆದ ಬಸವೇಶನ ಗರ್ಭಾವತರಣ ಎಲ್ಲರಂತಲ್ಲ, ಮಾದಲಾಂಬಿಕೆಯು ನಂದಿವ್ರತವನ್ನು ಆಚರಿಸುತ್ತ 'ಪುತ್ರಾರ್ಥಭಿಕ್ಷಕ್ಕೆ ಬಾಯಿ ತೆರೆಯಲೊಳಹೊಕ್ಕನಾ ಚರವೃಷಭ ಸ್ಥಿರವೃಷಭನೊಳಗಿರ್ದು ಕೂರ್ತು'. ಬಸವನಿಗೆ 'ಬಾಲ್ಯತೆ'ಯನ್ನೂ ಶಶಿಧರನಿಗೆ 'ವೃದ್ಧತೆ'ಯನ್ನೂ ಹೇಳುವುದು ಈ ಕವಿಗೆ ಸೇರದು. ಕೈಲಾಸನಾಥನ ಅಪ್ಪಣೆಯಂತೆ ಮರ್ತ್ಯಲೋಕದ ಮಹಿಮೆ ವನ್ನು ಪೂರೈಸುವುದಕ್ಕೆ ಬಂದಿರುವ 'ಆದಿವೃಷಭ'ನೇ ಬಸವಣ್ಣ. ಆದುದರಿಂದ

ಇವನು ಎಂತಹ ಪವಾಡವನ್ನಾದರೂ ಮೆರೆಯಲು ಶಕ್ತ ; ಕವಿಯ ದೃಷ್ಟಿಯಲ್ಲಿ ಅದು ಅತಿಶಯವೂ ಅಲ್ಲ, ಅಸಂಭವವೂ ಅಲ್ಲ.

ಅರುವತ್ತು ನಾಲ್ಕು ಪವಾಡಗಳನ್ನು ವರ್ಣಿಸುವುದು ನನ್ನ ಉದ್ದೇಶವೆಂದು ಕವಿ ತನ್ನ ಕಾವ್ಯದ ಮೊದಲಲ್ಲಿಯೇ ವಾಚಕರಿಗೆ ಸೂಚಿಸಿರುವನಲ್ಲದೆ ಪ್ರತಿಸಂಧಿಯ ಕೊನೆಯಲ್ಲಿಯೂ ಡಂಗುರ ಹೊಯ್ದಂತೆ ಮತ್ತೆ ಮತ್ತೆ ಈ ವಿಷಯವನ್ನು ನೆನೆಪಿಸುತ್ತಾನೆ. ಬಸವಣ್ಣನನ್ನು ಪವಾಡ ಪುರುಷನೆಂದು ಭಾವಿಸಿಕೊಂಡಿದ್ದರೂ ಪವಾಡಗಳನ್ನು, ಜೀವನದ ವಾಸ್ತವಿಕ ಚಿತ್ರಗಳೊಂದಿಗೆ ಹೆಣೆದು ಸಾಮಾನ್ಯ ಮಾನವರಂತೆಯೇ ಬಸವಣ್ಣನೂ ತನಗೆ ಬಂದೊದಗಿದ ಕಷ್ಟ ಪರಂಪರೆಗಳನ್ನು ಎದುರಿಸಬೇಕಾಯಿತೆಂಬುದನ್ನು ಸೂಚಿಸಲು ಮರೆತಿಲ್ಲ. ಅಗ್ರಹಾರದವರ ದುರಾಗ್ರಹಕ್ಕೆ ಪಾತ್ರನಾದ ಬಸವಣ್ಣ, ಪದಚ್ಯುತನಾಗಿ 'ಮತಿಘಟ್ಟವೆಂಬ ಪಾಳಿಗೆ' ಹೋಗಿ ಅಲ್ಲಿ ದಾಸೋಹ ನಡೆಸಿದ ಬಸವಣ್ಣ, ಈ ಎರಡು ಚಿತ್ರಗಳು ಈ ಮಾತಿಗೆ ಒಳ್ಳೆಯ ನಿದರ್ಶನಗಳೆಂದು ಹೇಳಬಹುದು. ಪವಾಡಕಥೆಗಳಾದರೂ ಅವುಗಳಲ್ಲಿ ಬಸವಣ್ಣನ ಅಸಾಧಾರಣ ವ್ಯಕ್ತಿತ್ವ, ಗುರುಲಿಂಗಜಂಗಮ ಪ್ರೇಮ, ಜೀವಕೋಟಿಯಲ್ಲಿ ಅವನ ಅನುಕಂಪೆ ಮುಂತಾದ ಹಿರಿಯ ಗುಣಗಳು ಸೇರಿ ಪವಾಡಗಳಿಗೆ ಪುಷ್ಟಿಕೊಟ್ಟು ಜೀವಕಳೆ ತುಂಬಿರುತ್ತವೆ.

ಬಸವಣ್ಣನು ಇನ್ನೂ ಬಾಲಕನಾಗಿದ್ದಾಗಲೇ ಅವನಲ್ಲಿ ಶಿವನ ಕಳೆ ಅಂಕುರಿಸಿದ್ದಿತೆಂಬುದಕ್ಕೆ 'ಶಿವಲಿಂಗಸಾಕ್ಷಿ'ಯ ಪವಾಡವನ್ನು ಸೇರಿಸಿದ್ದಾನೆ. ಶಿವನೇ ಯಾರಿಂದಲೂ ಓದಲಾಗದ ಲಿಪಿಯೊಂದನ್ನು ಕಲ್ಪಿಸಿ ಅದು ಬಂದು ಬಿಜ್ಜಳನ ಆಸ್ಥಾನದಲ್ಲಿ ಬೀಳುವಂತೆ ಮಾಡಿ ರಾಜಾಸ್ಥಾನದಲ್ಲಿದ್ದ ವಿದ್ವಾಂಸರು, ಬಹುಲಿಪಿಜ್ಞರು ಯಾರಿಂದಲೂ ಅದನ್ನು ಓದಿ ವಿವರಿಸಿ ಹೇಳಲು ಆಗದಿದ್ದಾಗ ಕರಣಿಕ ಬಸವಣ್ಣನ ಅಂತರಂಗದಲ್ಲಿ ಬಂದು ನಿಂತು ಆ ಲಿಪಿಯನ್ನು ಓದುವಂತೆ ಪ್ರಚೋದಿಸಿದಂತೆ ಕವಿ ಹೇಳಿದ್ದಾನೆ ; ಬಸವಣ್ಣನು 'ಈಶನ ಮೀಸಲಪ್ಪ ಭಕ್ತ', ಎಂಬುದನ್ನು ಆ ಮೂಲಕ ಸೂಚಿಸಿದ್ದಾನೆ. ಹೀಗೆಯೇ ಇನ್ನುಳಿದ ಪವಾಡಗಳೂ ಬಸವಣ್ಣನ ವ್ಯಕ್ತಿತ್ವ ವರ್ಚಸ್ಸುಗಳನ್ನು ಓದುಗರ ಗಮನಕ್ಕೆ ತರಬಲ್ಲುವು: ಅವನನ್ನು ಮೋಸಗೊಳಿಸಬೇಕೆಂದು ಬಂದ ಕಳ್ಳರು, ಕುಹಕಿಗಳು, ಅವನೊಡನೆ ವಾದಿಸಿ ಸೋಲಿಸಿ ಅವನ ತೇಜೋವಧೆ ಮಾಡಲು ಬಂದ ಪರವಾದಿಗಳು ಅವನಲ್ಲಿದ್ದ ಒಂದು ಅನಿರ್ವಚನೀಯವಾದ ದಿವ್ಯಶಕ್ತಿಯ ಸ್ವಭಾವದಿಂದ ಪರಮ ಶಿವಭಕ್ತರಾಗಿ ಅವನ ಬಳಿಯೇ ನೆಲಸಿಬಿಡುತ್ತಿದ್ದರು. ಬಯ್ಯುತ್ತ ಬಂದ ಬಾಯಿ ಭಜಿಸತೊಡಗುತ್ತಿದ್ದಿತು; ಹೊಡೆಯಲೆಂದು ಎತ್ತಿದ ಕೈಗಳು ಮುಗಿಯುತ್ತಿದ್ದುವು. ದಯಾವೀರ ಬಸವೇಶ್ವರನು ತನ್ನನ್ನು ಕೆಡಿಸಬೇಕೆಂದು ಕೊಲ್ಲಬೇಕೆಂದು ಬಂದ ಅಜ್ಞರಿಗಾಗಿ ಮಮ್ಮಲ ಮರುಗಿ ಅವರನ್ನು ಕ್ಷಮಿಸಿ ಒಳ್ಳೆಯ ಮಾತುಗಳಿಂದಲೇ ಧರ್ಮಮಾರ್ಗಕ್ಕೆ ತಿರುಗಿಸುತ್ತಿದ್ದನು. 'ಕ್ರಿಯಾರೂಪ' ನಾದ ಬಿಜ್ಜಳನನ್ನೂ ಅವನ ಸಂಗಡಿಗರನ್ನೂ 'ಭಾವರೂಪ'ನಾದ ಈ ಬಸವೇಶ್ವರನು ಕ್ಷಮಿಸಿ ಶಾಪ ವಿಮುಕ್ತರನ್ನಾಗಿ ಮಾಡಿರುವುದು ಇವನ ಔದಾರ್ಯಕ್ಕೆ ಕಲಶಪ್ರಾಯವಾಗಿದೆ.

ಸಿಂಗಿರಾಜನಿಗೇನೋ ಬಸವಣ್ಣನಲ್ಲಿ ನಿಸ್ಸೀಮ ಭಕ್ತಿಯಿದೆ. ಆದರೆ 'ಭವಿ'ಗಳ ಮೇಲೆ ಅಷ್ಟೇ ದ್ವೇಷ ಮಾತ್ಸರ್ಯಗಳೂ ಇವೆ. ಬಸವೇಶ್ವರನನ್ನು ಹೊಗಳುವೆಡೆಯಲ್ಲಿಯೂ ಪರವಾದಿಗಳನ್ನು ತೆಗಳುವಾಗಲೂ ಸಿಂಗಿರಾಜನ ಕವಿತಾ ಶಕ್ತಿ ಮಿಂಚುತ್ತದೆ. ಆದರೆ ಕವಿಯು ಬಸವಣ್ಣನನ್ನು ಮಹಾದೇವನ ಮಟ್ಟಕ್ಕೆ ಏರಿಸುವ ಅವಸರದಲ್ಲಿ ಬಿಜ್ಜಳನಿಗೆ ಬಹಳ ಅನ್ಯಾಯ ಮಾಡಿರುವಂತಿದೆ, ಕಾವ್ಯ ದೃಷ್ಟಿಯಿಂದ. 'ಕಲಚೂರ್ಯ ಚಕ್ರವರ್ತಿ'ಯೂ 'ಅರಿರಾಜ ಗಿರಿವಜ್ರ'ನೂ 'ಪರನಾರೀ ಸಹೋದರ'ನೂ ಆದ ಬಿಜ್ಜಳ ಮಹಾರಾಜನ ಚಿತ್ರವು ಸ್ಫುಟವಾಗಿ ಮೂಡಿ ಜೀವ ತುಂಬಿಕೊಂಡಿದ್ದಿದ್ದರೆ ಬಸವಣ್ಣನ ಚಿತ್ರ ಬಹು ಚೆನ್ನಾಗಿ ಕಳೆಗಟ್ಟುತ್ತಿದ್ದಿತು. ಸಿಂಗಿರಾಜನ ಲಕ್ಷ್ಯ ಈ ಕಡೆಗೆ ಹರಿದಿಲ್ಲ. ಇದು ಸ್ವಾಭಾವಿಕವೂ ಅಹುದು. ಏಕೆಂದರೆ ಹೀಗೆ ಮಾಡುವುದರಿಂದ ಇವನ ಪ್ರತಿಜ್ಞೆಗೆ ಭಂಗ ಬಂದಂತಾಗುತ್ತದೆ.

ಕಾವ್ಯವಿಮರ್ಶೆ

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ
ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ತಾ
ನನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ
ನೆನೆ ಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಪಂಪೆಯಾಳ್ದನಂ

ಎಂದು ಹೇಳಿ ಹರಿಹರನು ಲೌಕಿಕರ ಮೇಲೆ ಕಾವ್ಯರಚನೆ ಮಾಡಿರುವವರನ್ನು ನೋಡಿ ಮೂಗು ಮುರಿಯುತ್ತಾನೆ. "ಸತ್ತವರ ಕಥೆಯಲ್ಲ, ಜನನದ ಕುತ್ತದಲಿ ಕುದಿಕುದಿದು ಕರ್ಮದ ಕತ್ತಲೆಗೆ ಸಿಲುಕುವರ ಸೀಮೆಯ ಹೊಲಬು ತಾನಲ್ಲ," ಸತ್ಯಶರಣರು ಮಾತ್ರ ಈ ಪ್ರಭುಲಿಂಗಲೀಲೆಯನ್ನು ಓದಬೇಕೆಂದು ಚಾಮರಸನು ಘೋಷಿಸಿದ್ದಾನೆ. ಇದೇ ಸಂಪ್ರದಾಯದ ಸಿಂಗಿರಾಜನು "ಅಷ್ಟಾದಶಸ್ಥಲದ ವಾಕ್ಯವಿಸ್ತರವರ್ಣನೆಯ ಪಿರಿದು ಮಾಳ್ಪಕೃತಿಯಲ್ಲಪಿದು ಹರಪುರಾಣೋಕ್ತಿ ಶರಣರ ಮಹಾಸ್ತೋತ್ರಸಂಗ್ರಹ ಎಂದು ಎಚ್ಚರಿಸಿದ್ದಾನೆ. "ಕುವರರ ಕುಜಂತ್ರ ಪುರಬಿನುಗುದೈವದ ಕಥೆಗಳವಿಚಾರ ಕೀರ್ತನೆಗೆ ಕೀಳ್ಗಳೆಯದೆ ಒಳುಮತಿಯ ನವಶಬ್ದಮಾಲೆ"ಯನ್ನು ಶಿವಶರಣರಿಗೆ ಸಮರ್ಪಿಸಿದ್ದಾನೆ. 'ವರಕವೀಶ್ವರರು 'ಶಿವಪದ ಮಹೇಶ್ವರರು' 'ಏಕಲಿಂಗ ನಿಷ್ಠಾಪರರು' 'ಸದಮಳರು' 'ಸಾಹಿತ್ಯ ಶರಣನಿಚಯ', 'ವ್ರತಾಧೀಶರು' ಇವರೆಲ್ಲರ ಆಶೀರ್ವಾದವನ್ನು ಬೇಡುತ್ತಾನೆ. ಇವನು ಈ ಕೃತಿಯನ್ನು ರಚಿಸಿರುವುದು ಮುಖ್ಯವಾಗಿ ಧರ್ಮಪ್ರಸಾರ ದೃಷ್ಟಿಯಿಂದ; ಇದನ್ನು ಭಕ್ತಿಯಿಂದ ಓದಿದವರು ಪಾವನರಾಗಲೆಂಬುದು ಇವನ ಹರಕೆ. ಆದರೆ ಆಧ್ಯಾತ್ಮವೂ ಕಾವ್ಯಕ್ಕೆ ವಸ್ತುವಾಗಬಹುದಲ್ಲ. "ನಿಮ್ಮ ಪದದ ಬಲ ವಿಡಿದು ತೊಡಗಿದೆನೀ ಮಹಾಕೃತಿಯ, ಮುದದಿ ನವರಸಭರಿತವಾಗಿ ನಡೆಸುವೊಲೆನ್ನ ಮತಿಗೆ ಮಂಗಳವೀವುದು" ಎಂದು ಶರಣರನ್ನು ಬೇಡಿಕೊಂಡಿರುವುದರಿಂದ ಕೃತಿಯು ಸ್ವಾರಸ್ಯವಾಗಿರಬೇಕೆಂಬುದೂ ಇವನ ಆಶಯವಾಗಿದೆ.

ಕಾವ್ಯರಚನೆಗೆ ಹೊಸ ವಸ್ತುವನ್ನೂ ಹೊಸ ದಾರಿಯನ್ನೂ 'ನವಶಬ್ದ ಮಾಲೆ'ಯನ್ನೂ ಇತರ ವೀರಶೈವ ಕವಿಗಳು ಬಳಸಿಕೊಂಡಿರುವಂತೆ ಇವನೂ ಬಳಸಿಕೊಂಡಿದ್ದಾನೆ, ಇದೇನೂ ಆಶ್ಚರ್ಯವಲ್ಲ. ಆದರೆ ಸಾಮಾನ್ಯವಾಗಿ ಇನ್ನಿತರ ವೀರಶೈವ ಕವಿಗಳು ಮಾಡಿರುವಂತೆ ಶಿವನನ್ನೂ ಶಿವಗಣಗಳನ್ನೂ ಸ್ತುತಿಸುವುದಕ್ಕಾಗಿಯೇ ನೂರಾರು ಪದ್ಯಗಳನ್ನು ಮುಡುಪಾಗಿ ಇಟ್ಟಿರುವುದಿಲ್ಲ. ಅಷ್ಟೇ ಅಲ್ಲ, ತನಗಿಂತ ಹಿಂದೆ ಇದ್ದ ವೀರಶೈವ ಕವಿಗಳನ್ನಾದರೂ ನೆನೆಸಿರುವುದಿಲ್ಲ. ತನ್ನ ಮತ್ತು ತನ್ನ ಗುರುವಿನ ವಿಷಯದಲ್ಲಿ ವಿಸ್ತಾರವಾಗಿ ಹೇಳಿಕೊಂಡಿಲ್ಲ. ತನ್ನ ಇಷ್ಟದೇವತೆಯನ್ನೂ, ಗುರುವನ್ನೂ ಎರಡೆರಡು ಪದ್ಯಗಳಲ್ಲಿಯೇ ಸ್ತುತಿಸಿ ಮುಗಿಸಿ, ತನ್ನ ವಿಷಯವನ್ನೂ ತನ್ನ ಕಾವ್ಯದ ಉದ್ದೇಶ ಮಹತ್ವಗಳನ್ನು ನಾಲ್ಕಾರು ಪದ್ಯಗಳಲ್ಲಿ ಹೇಳಿಕೊಂಡು ಕಾವ್ಯಾರಂಭ ಮಾಡಿದ್ದಾನೆ. ಆದಿಯ ನಾಲ್ಕು ಸಂಧಿಗಳಲ್ಲಿ ಕೈಲಾಸದ ವರ್ಣನೆ, ಬಸವೇಶ್ವರನ ಪೂರ್ವವೃತ್ತಾಂತ, ಅನಿಮಿಷಯ್ಯಗಳ ಕಥೆ ಹೇಳಲ್ಪಟ್ಟಿವೆ. ಇನ್ನುಳಿದ ನಲವತ್ತು ನಾಲ್ಕು ಸಂಧಿಗಳಲ್ಲಿ ಬಸವೇಶ್ವರನ ಅರವತ್ತುನಾಲ್ಕು ಪವಾಡಗಳು ಹೃದಯಂಗಮವಾಗಿ ತಕ್ಕಮಟ್ಟಿಗೆ ವಿಸ್ತಾರವಾಗಿಯೇ ವರ್ಣಿತವಾಗಿವೆ. ' ಲಿಂಗದೇಹಾವಯವ ನಿರ್ದೇಹದೇಹಿಕದಿ ಬಂದು '' '' ದಾಸೋಹಕ್ರೀವರ್ಮವ ನವಗ್ರಹಿಸಿ '' '' ಸೋಹಾಮೃತವ ನೂಡಿದ '' ಪ್ರಭುದೇವರ ಸಂಗತಿಯನ್ನು ಸಹ ಅನಾವಶ್ಯಕವಾಗಿ ಬೆಳೆಸಿಲ್ಲ. ಶಿವನ ಮತ್ತು ಶಿವಗಣಗಳ ಮೇಲ್ಮೆ, ಅಷ್ಟಾವರಣಗಳ ಮಹಿಮೆ, ವೀರಶೈವ ವೇದಾಂತ ಮುಂತಾದುವುಗಳ ನಿರೂಪಣೆ ಅಲ್ಲಲ್ಲಿ ಕಾಣಿಸಿಕೊಂಡರೂ ಅಲ್ಲಿಯೂ ಕವಿಯ ಮುಖ್ಯ ಉದ್ದೇಶ ಬಸವೇಶ್ವರನ ಮಹಿಮಾತಿಶಯಗಳನ್ನು ತೋರಿಸಿಕೊಡುವುದೇ ಆಗಿರುತ್ತದೆ. ಕಥಾನಾಯಕನಾದ ಬಸವಣ್ಣನ ಚರಿತ್ರೆಯನ್ನೂ ಮುಖ್ಯವಾಗಿ ಅವನು ಮೆರೆದ ಪವಾಡಗಳನ್ನೂ ಚಿತ್ರಿಸುವುದೇ ಕವಿಯ ಉದ್ದೇಶ. ಈ ಉದ್ದೇಶಕ್ಕೆ ಎಲ್ಲಿಯೂ ಭಂಗ ಬಂದಂತಿಲ್ಲ. ಇದೇ ದೃಷ್ಟಿಯಿಂದ ಬಸವಪುರಾಣ ಚನ್ನಬಸವ ಪುರಾಣಗಳನ್ನು ನೋಡಿದಾಗ ಸಿಂಗಿರಾಜನನ್ನು ನಾವು ಖಂಡಿತವಾಗಿಯೂ ಮೆಚ್ಚುತ್ತೇವೆ.

ಕಾವ್ಯದ ಬಹುಭಾಗ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಕವಿ ಅನೇಕ ಕಡೆ ಬಸವಣ್ಣನ ವಚನಗಳನ್ನೆ ವಾರ್ಧಕ ಷಟ್ಪದಿಯ ಪಡಿಯಚ್ಚಿನಲ್ಲಿ ಎರಕಹೊಯ್ದಿದ್ದಾನೆ. ಅಲ್ಲಲ್ಲಿ ವಚನಗಳ ಕುಂದಣವನ್ನೂ ಇಟ್ಟು ಕಾವ್ಯಕ್ಕೆ ಮೆರುಗು ತಂದಿದ್ದಾನೆ. ವೇದಾಗಮೋಪನಿಷತ್ತುಗಳಿಂದ ಶ್ಲೋಕಗಳನ್ನೂ ವಾಕ್ಯಗಳನ್ನೂ ಉಲ್ಲೇಖಿಸಿ ತನ್ನ ಪಾಂಡಿತ್ಯವನ್ನೂ ತೋರಿಸಿದ್ದಾನೆ. ಆದರೆ ಇವನು ಬಳಸಿಕೊಂಡಿರುವುದು ಹೆಚ್ಚಾಗಿ ಜನಸಾಮಾನ್ಯದ ಭಾಷೆ ಭಾಷೆಗಳನ್ನು; ಶ್ಲೇಷ ವಿರೋಧಾಭಾಸಾದಿ ಕ್ಲಿಷ್ಟಾಲಂಕಾರಗಳಿಗೂ ತಲೆಬೇನೆ ತರುವಂತಹ ವರ್ಣನೆಗಳಿಗೂ ಇಲ್ಲಿ ಎಡೆಯಿಲ್ಲ. ಜನತೆಯಲ್ಲಿ ರೂಢವಾಗಿರುವ ಉಪಮಾ ರೂಪಕಾದಿ ಅಲಂಕಾರಗಳೂ ನಾಡುನುಡಿಗಳೂ ಬಂದಿರುವುದು ಕಾವ್ಯಕ್ಕೆ ಭೂಷಣವಾಗಿ ಓದುಗರಿಗೆ ಆನಂದದಾಯಕವಾಗಿದೆ. ಇಂತಹ ಭಾಷೆಗಳೇ ಈ ಕೃತಿಗೆ ಸಹಜ

ಸೌಂದರ್ಯವನ್ನಿತ್ತಿರುವುದು. ಇದಕ್ಕೆ ನಾಲ್ಕಾರು ಉದಾಹರಣೆಗಳನ್ನು ಮಾತ್ರ ಇಲ್ಲಿ ಕೊಡಬಹುದು.—ಶಿವಸಭೆಯಲ್ಲಿದ್ದ ಅಮರರ ಮುಖಗಳು ಬಾಡಿದುದು "ಜಲಜಂನಿಕರ ಶುಭ್ರಾಂಶುವಿಂಗೆ ತಲೆವಾಗುವೋಲ್". ಇನ್ನೊಂದು ಸಂದರ್ಭ : ನಂದಿನೋಂಪಿಯ ಪ್ರಭಾವದಿಂದ ಮದುವಳಿಗೆಯೊಬ್ಬಳು, ಆಗಲೇ ಚಿತೆಯನ್ನೇರಿದ್ದ ತನ್ನ ಪತಿಯನ್ನು ಬದುಕಿಸಿಕೊಳ್ಳುತ್ತಾಳೆ. ಅಷ್ಟು ಹೊತ್ತಿಗೆ ರಾತ್ರಿ ಕಳೆದು ಬೆಳಕು ಹರಿಯುವುದು, "ಪುರಜನ ಪರಿಜನ ಬಂಧುಬಾಂಧವರ ಶೋಕ ಕಾನನಕ್ಕೆ ಕಾಳ್ಗಿಚ್ಚು ಪರಿದಂತೆ". ಬಾಲಬಸವನನ್ನು ತೊಟ್ಟಿಲಿಗೆ ಹಾಕಿದ್ದು "ಸತ್ಯಮಂ ನಿತ್ಯಪೀಠದೊಳಿರಿಸುವಂತೆ," "ಪರತತ್ವಮಂ ಪ್ರಣವವಾಸಿಗೆಯ ಮೇಲಿಡುವಂತೆ." "ಆಕಾಶದಿಂದತ್ತ ಕೈನೀಡುವಂಗೇಣಿಯೇಕೆ," 'ಪುಣ್ಯಮೃಗಮಂ ಬೇಡರಟ್ಟುವಂತಟ್ಟಿ' "ಪರರ ಬಾಯಲುಂಬುವನ ಬಸಿಱು ತುಂಬುವುದೆ?" "ದುರ್ಜನರೆನಿಪ್ಪೋಡುವಿಡಿಯೆ ಕೈಮಸಿಯಾಗದಿಹುದೆ?" "ಉಕ್ಕುವೆಣ್ಣೆಯೊಳುದಕವಂ ತಳೆದಂತೆ, ಇಂತಹ ಅನೇಕ ಮಾತುಗಳು ಕವಿ ಒಳ್ಳೆಯ ಲೋಕಾನುಭವವುಳ್ಳವನಾಗಿದ್ದನೆಂಬುದಕ್ಕೆ ಸಾಕ್ಷಿ. ಕೋಪಾವಿಷ್ಟ ಬಿಜ್ಜಳನು "ಹಲ್ಲುದಿನುತಂ ತಲೆಯನಲ್ಲಾಡಿ ಮೀಸೆಯ ತಿರುಹು" ತ್ತಿದ್ದನಂತೆ; "ಉರಿಯ ಬಟ್ಟುಗಳ ತಂದ್ಯೈದೆ ಕಂಗಳೊಳಗಚ್ಚೊತ್ತಿದಂ ತೋರೆಗಣ್ಣಿಕ್ಕಿ ಬಸವಣ್ಣನಂ" ನೋಡಿದನಂತೆ. ವೈಷ್ಣವರಲ್ಲಿ ಹುಟ್ಟಿ ಬೆಳೆದು ವೈಷ್ಣವ ಆಚಾರ ನಿಯಮಗಳನ್ನು ಪಾಲಿಸಿಕೊಂಡು ಬರುವವನಂತೆ ಕಾಣುತ್ತಿದ್ದರೂ ಗೋಪ್ಯವಾಗಿ ಶಿವಪೂಜೆ ಮಾಡುತ್ತಿದ್ದವನ ಬಾಹ್ಯ ಆಚಾರಗಳು "ಆದಿಶಿವಫಲಪ್ರದಾಯದ ಹೊಲಕ್ಕೆ ಮುಳುಬೇಲಿಗೆಸ್ತಂತೆ" ಇದ್ದುವು. ಬಶವಣ್ಣನನ್ನು ಅಕ್ಕನಾಗಮ್ಮನಿರುವೆಡೆಗೆ ಕರೆದೊಯ್ದು, ಶಿವಪ್ರಸಾದವಿದು ಸ್ವೀಕರಿಸು ಎಂದು ಹೇಳಿ ಅಕ್ಕನಾಗಮ್ಮನನ್ನು ತೋರಿಸಿದ ಬಿಜ್ಜಳನು "ಪಾತಕದ ಪರಮ ಸೀಮೆಯ ಶಿಲಾಶಾಸನಕ್ಷರ". ಸೂರ್ಯೋದಯವಾಗದೆ ಐವತ್ತಾರು ಜಾವವಾಯಿತೆಂಬ ಸುದ್ದಿಯನ್ನು ಕೇಳಿದ ಬಿಜ್ಜಳನು "ಕಲುಗೆಂಡ ಕವಡೆಯ ರಾಸಿ" ಯಂತೆ ತಲ್ಲಣಿಸಿದನು. ಭವಿಮುಟ್ಟಿದ ವಡೆಯನ್ನು ಬಸವಣ್ಣನು ಬಿಚ್ಚಿ ತೋರಿಸಿದಾಗ ಅದರಲ್ಲಿ ಬರೀ ಹುಳುಗಳೇ ಪಿತಿಗುಡುತ್ತಿರುವುದನ್ನು ನೋಡಿದಾಗ "ನೃಪಜಿಹ್ವೆ ಸರ್ಪಗರುಡಂಗಂಡುದು" ಎಂದು ಕವಿ ಹೇಳಿರುವುದು ಭೀಭತ್ಸರಸೋತ್ಪಾದಕವಾಗಿದೆ. ಬಸವೇಶ್ವರನನ್ನು ಕಚ್ಚಿದ ಸರ್ಪವು "ತೊಟ್ಟು ಬಿಟ್ಟಂತೆ ಬಾಯ್ಬಿಟ್ಟು" ವ್ಯತಪಟ್ಟಿತಂತೆ—ಹೀಗೆ ಅನೇಕ ಕಡೆ ಇಂತಹ ಅಣಿಮುತ್ತುಗಳು ಸನ್ನಿವೇಶಕ್ಕನ್ನುಗುಣವಾಗಿ ಬಂದು ಕಾವ್ಯಕ್ಕೆ ಕಳೆಗೊಟ್ಟಿವೆ.

ತನಗಿಂತ ಹಿಂದಿನ ಕವಿಗಳಲ್ಲಿ ದೊರೆಯದಿರುವ ಒಂದೆರಡು ಸನ್ನಿವೇಶಗಳನ್ನು ಇವನು ಹೇಗೆ ಚಿತ್ರಿಸಿರುವನೆಂಬುದನ್ನು ನೋಡಿದರೆ ಇವನ ಕವಿತಾಶಕ್ತಿಯ ಸ್ವಲ್ಪಮಟ್ಟಿನ ಪರಿಚಯವಾಗುತ್ತದೆ. ಬಸವಣ್ಣನು ತಂದೆತಾಯಿಗಳನ್ನು ತೊರೆದ ಸಂದರ್ಭವನ್ನೂ ಅಲ್ಲಿಂದ ಮಂತ್ರಿಪದವಿಯನ್ನು ಪಡೆದವರೆಗೆ ನಡೆದ ಘಟನೆಗಳನ್ನೂ ಸಿಂಗಿರಾಜನೊಬ್ಬನಲ್ಲದೆ ಬಹುಶಃ ಯಾವ ಕೃತಿಕಾರನೂ

ವಿಶದಪಡಿಸಿಲ್ಲ. ಲಕ್ಕಣ್ಣ ದಂಡೇಶನು ಮಾತ್ರ ಅಗ್ರಹಾರದ ಭೂಸುರರು ಬಸವೇಶನಮೇಲೆ ಬ್ರಾಹ್ಮಣ ಬಾಲಕನನ್ನು ಕೊಂದನೆಂಬ ದೂರು ಹೊರಿಸಿ, ಬಸವಣ್ಣನನ್ನು ಅಟ್ಟಿಕೊಂಡು ಬರುತ್ತಾರೆಂದೂ ಬಸವಣ್ಣನು ಕೂಡಲ ಸಂಗಮಕ್ಕೆ ಬಂದು ಸಂಗಮೇಶ್ವರನ ಮರೆಹೊಕ್ಕನೆಂದೂ ಶಿವಲಿಂಗ ಕೃಪೆಯಿಂದ ವಿಪ್ರರ ಪಿಡುಗಿನಿಂದ ಪಾರಾಗಿ ಅಲ್ಲಿಯೇ ನೆಲಸಿದನೆಂದೂ ಹೇಳಿರುತ್ತಾನೆ; ಸಂಗಮ ಕ್ಷೇತ್ರದಲ್ಲಿದ್ದ ಬಸವಣ್ಣನ ಎದೆವೊಲದಲ್ಲಿ ಭಕ್ತಿವಲ್ಲರಿಯು ಕುಡಿವರಿದು ಬೆಳೆದಮೇಲೆ ಇವನ ಕೀರ್ತಿಯ ಬಳ್ಳಿ ಕಲ್ಯಾಣದವರೆಗೂ ಹಬ್ಬಿ ಮಂತ್ರಿ ಬಲದೇವನಿಂದ ಇವನಿಗೆ ಕರೆ ಬರುವುದೆಂದೂ, ಬಲದೇವ ಮಂತ್ರಿಯ ಮಗಳು ಗಂಗಾಂಬೆಯ ಕೈಹಿಡಿದ ಕೆಲವು ದಿನಗಳ ಮೇಲೆ 'ಶಿವಲೋಕದ ಓಲೆಯನ್ನು ಓದಿ ತನ್ನ ಪ್ರತಿಭೆ ಸಾಮರ್ಥ್ಯಗಳನ್ನು ತೋರಿಸಿದ ಮೇಲೆ ಮಂತ್ರಿಪದವಿಯನ್ನು ಪಡೆದನೆಂದೂ ಸಂಕ್ಷೇಪವಾಗಿ ಹೇಳಿರುತ್ತಾನೆ.

ಶಿವತತ್ವಚಿಂತಾಮಣಿಯ ಈ ಕಥೆಯೇ ಇವನಿಗೆ ಮಾರ್ಗದರ್ಶಕವಾಗಿದೆ. ಆದರೆ ಕವಿ ಇಲ್ಲಿ ತೋರಿಸಿರುವ ಕೌಶಲ್ಯ ಪ್ರಶಂಸಾರ್ಹವಾದುದು. ಉಪನಯನ ಶಿವಭಕ್ತರಿಗೇಕೆ? ಸುಮನನಗೆ ಮನುಜರುಪದೇಶವೇ ? ಆಕಾಶದಿಂದತ್ತ ಕೈನೀಡುವಂಗೇಣಿಯೇಕೆ ? ಕರ್ಮಮಾರ್ಗ ಭಕ್ತಿಪಥದವರಿಗೆ 'ಓಕರಿಕೆ ಎಂದು ಮುಂತಾಗಿ ಕಟಕಿಯಾಡಿ ಈ "ಕರ್ಮಾಂಧಕಾರವಾರಿಧಿ ವಡಬ" ನು ಉಪನಯನ ಪದ್ಧತಿಯನ್ನು ಅಲ್ಲಗಳೆದು ಸಾಂಪ್ರದಾಯ ಸಮಾಜವನ್ನು ಕೆರಳಿಸಿದನು. ಯಾವುದಾದರೊಂದು ನೆಪದಿಂದ ಈ ಹುಡುಗನನ್ನು ಹಣ್ಣು ಮಾಡಬೇಕೆಂದು ಕಾದುಕೊಂಡಿದ್ದ ಆ ವಿಪ್ರರಿಗೆ ಒಂದು ನೆಪ ಸಿಕ್ಕಿತು. ಊರ ಹುಡುಗರೆಲ್ಲ ಸೇರಿ ಬಾವಿಯೊಂದರ ಬಳಿ ಆಟವಾಡುತ್ತಿದ್ದಾಗ ಬ್ರಾಹ್ಮಣ ಬಾಲಕನೊಬ್ಬನು ಹೇಗೋ ಏನೋ ಬಾವಿಯಲ್ಲಿ ಬಿದ್ದು ಮೃತಪಟ್ಟನು. ವಿಪ್ರರು ಇವನೇ ಆ ಬಾಲಕನನ್ನು ಬಾವಿಯಲ್ಲಿ ನೂಕಿ ಕೊಂದನೆಂದು ದೂರುತ್ತ ಬಂದು, ಇವನ ಮನೆಯವರಿಗೆಲ್ಲ ಬಹಿಷ್ಕಾರ ಹಾಕಿದ ಸೂಚನೆಯೆಂದು ಕಾಣುತ್ತದೆ. ಮನೆಯಮುಂದೆ "ಗೋಶೃಂಗ" ವನ್ನು ನಡಿಸಿ, "ಹಿಡಿಕಟ್ಟು ತಿವಿ ತಿನ್ನುತೆಗೆ ಹೊಯ್ನೂಕು," "ಇಡುಗಿಚ್ಚನಿಡು," "ಶೂಲಕ್ಕೆತೆಗೆ," 'ನಡುನೀರೊಳದ್ದು," ಎಂದು ಘುಡು ಘುಡಿಸುತ್ತ ಯಮಕಿಂಕರರ ಗರುಡಿಯಂತೆ ಇವನ ಮೇಲೆ ಏರಿ ಬರುತ್ತಾರೆ. ಇವನನ್ನು ರಕ್ಷಿಸುವರು ಯಾರೂ ಇಲ್ಲ. ಯಾರ ಮರೆಯನ್ನೂ ಹೊಗುವಂತಿಲ್ಲ ಈ "ಕುಲಕಂಟಕ'. ಹೆತ್ತ ತಾಯಿತಂದೆಗಳೂ ಏನೆಂದರೋ. ಅವರಿಗೂ 'ಬೆಬ್ಬಳ ಗೊಳುತುಸುರ್ದು' ಹಿತ್ತಿಲಬಾಗಿಲಿಂದ ಹೊರಬಿದ್ದು ಕಪ್ಪಡಿಯ ದಾರಿಹಿಡಿದು ಓಡುತ್ತಾನೆ, ಅನಾಥರಕ್ಷಕ ಸಂಗಮನಾಥನ ಬೆನ್ನು ಬೀಳಲು. ಆಗಲೂ ವಿರೋಧಿಗಳು "ಮಾಣಿಗಳ್ಪಿರಿಯರು" ಬೆನ್ನಟ್ಟುವರು ;

> ಹೊಟ್ಟೆಯಂ ಸೀಳಿ ಹಲ್ಲಂ ತುಂಬು ಎಳೆಹೂಟೆ
> ಗಟ್ಟು ತಿದಿಯಂ ಬಿಡಿಸು ಅಡೆಗಿಕ್ಕಿ ಕಡಿಯೆದೆಯ
> ನಿಟ್ಟಿಯಿಂದಿಡು ನಡುವ ನಿತ್ತುಂಡ ಮಾಡೆಚ್ಚು ಕೆಡಹು ಸಮಭಾಗವಾಗಿ

ಎಂದು ಮುಂತಾಗಿ ಅಬ್ಬರಿಸುತ್ತ 'ಪುಣ್ಯಮೃಗವನ್ನು ಬೇಡರಟ್ಟುವಂತೆ' ಅಟ್ಟಿಕೊಂಡು ಬರುವರು. ಸಿಂಗಿರಾಜನು ಇಲ್ಲಿ ಕೊಟ್ಟಿರುವ ಹೋಲಿಕೆ ಎಷ್ಟು ಉಚಿತವಾಗಿದೆ! ಬಸವಣ್ಣನು ಎಂತಹ ಸಂಕಟಕ್ಕೊಳಗಾಗಿದ್ದಿರಬೇಕೆಂದು ಈ ಸಂದರ್ಭದಲ್ಲಿ ಕೊಟ್ಟಿರುವ ಎರಡು ಪದ್ಯಗಳಿಂದಲೇ ಸುವ್ಯಕ್ತವಾಗುತ್ತದೆ. ಇವನ ಕರುಣಾಜನಕ ಸ್ಥಿತಿಯನ್ನು ಕಂಡು ಮರುಗಿ ಕೃಷ್ಣವೇಣೀನದಿ ಬಟ್ಟೆಗೊಡುತ್ತಾಳೆ. ಬಸವಣ್ಣನು ಓಡೋಡಿಹೋಗಿ ಜಾತವೇದಿ ಮುನಿಗಳ ಮರೆಬಿದ್ದನು. ಅವರ ಕಣ್ಣಿಗೆ ಬೀಳುವ, ಮುಂದೆ ಮಹಾಧರ್ಮವೀರನಾಗಲಿರುವ, ಬಸವಣ್ಣ ಹೇಗೆ ಕಾಣುತ್ತಾನೆಂಬುದನ್ನು ನೋಡಿ:

ಹೊಯ್ವಳ್ಳೆ ಸುಯ್ವ ಸುಯಿ ಬೆಮರ್ದಂಗ ತಳ್ಳಂಕ
ಗೆಯ್ವ ಹೃದಯಾಕಂಪಿಸುವ ಕರ ಚರಣ ಬೆದಱು
ತವ್ವಳಿಪ ನೋಟ ವಂಜುವಪ್ರಾಣ ಬಱತ ಬಸುಱಿರತಧರದತಿ
ಬಳಲ್ವನ ।

ಆ 'ಶೈವಸಾಮ್ರಾಜ್ಯಸ್ಥ'ನು ಕಂಡು 'ನೀನಾರಾತ' ವಿಭೀಷಣ ಭೀತ? ಇಲ್ಲಿಗೇಂ ಬಂದೆ? ಎಂದು ಪ್ರಶ್ನಿಸಲು ಬಸವಣ್ಣ ಕೊಡುವ ಉತ್ತರ ಕರುಳು ಕೊರೆಯುತ್ತದೆ. "ದೈವಿಕ ತೊಡರ್ಚಲೆಮ್ಮಾರಾಧ್ಯರಡಿವಱಿಯುನಱಸುತ್ತ ಬಂದೆನು" ಎನ್ನುವನು.

ಜಾತವೇದಿ ಮುನಿ—'ಎಲ್ಲಿಹರು ನಿಮ್ಮಾಳ್ದರ್'?
ಬಸವಣ್ಣ—ಇಲ್ಲಿ.
ಜಾ—ಇಲ್ಲಾರು? ಸೊಲ್ಲಿಸು.
ಬ—ಜಾತವೇದಯ್ಯಂಗಳ್.
ಜಾ—ಅವರಿಗೆಲ್ಲಾದೆ ಶಿಶು?
ಬ—ಬಾಗವಾಡಿಯ ಮಂಡಿಗೆಯ ಮಾದಿಮರಸರೆಂಬರಲ್ಲಿ ಜನಿಸುಪದೇಶ
ವಡೆದೆ, ಬಾಲ್ಯದೊಳ್.
ಜಾ—ಬಲ್ಲೆವೈ, ನೀನೆಮ್ಮ ಶಿಶು, ಹೊಲ್ಲೆಹಂ ಹೊದ್ದಿತೆಮಗೆ.

ಎನ್ನುತ್ತ ಅವನನ್ನು ಅಪ್ಪಿಕೊಳ್ಳುವರು. ಬಸವಣ್ಣ ತನ್ನ ಎದುರಿಗೆ ನಿಂತಿರುವವರೇ ಜಾತವೇದಯ್ಯಗಳೆಂಬುದನ್ನು ಅರಿಯ; ಆದರೆ ಉಪದೇಶಗೊಟ್ಟ ಗುರುವಿನ ಹೆಸರನ್ನೂ ಉಪದೇಶವನ್ನೂ ಮರೆಯ. ತಾನು ನಾಲ್ಕೇ ಗಳಿಗೆಯ ಕೂಸಾಗಿದ್ದಾಗಲೇ ಪಡೆದ ಉಪದೇಶವನ್ನೂ ಉಪದೇಶವಿತ್ತ ಗುರುವನ್ನೂ ಮರೆತಿರಲಿಲ್ಲವೆಂಬ ಸಂಗತಿಯನ್ನು ಕವಿ ಸೂಚಿಸಿ ಈ ವ್ಯಕ್ತಿ 'ಆದಿಬ್ರಹ್ಮಾಚಾರ್ಯ' ಎಂಬುದನ್ನು ವಾಚಕರ ಊಹೆಗೇ ಬಿಟ್ಟಿದ್ದಾನೆ.

ಅಲ್ಲಿಗೂ ಬಂದು ದಾಳಿಯಿಟ್ಟ ವಿಪ್ರವೃಂದವನ್ನೂ ಸುಮ್ಮನಿರಿಸಿ 'ಧರ್ಮಗಾಣಿಸಿ' ಇವನನ್ನು ಒಯ್ಯಿರಿ 'ಬಱಿದೊಯ್ಯೆಸುಖವಿಲ್ಲ' ಎನ್ನುವರು. ದೊಡ್ಡ ಸಭೆ ನೆರೆಯುವುದು. ಬಸವಣ್ಣನು ನಡೆದ ಸಂಗತಿಯನ್ನು ಹೇಳಿ 'ಬಱಿದಂತಿಂತು

ವೈಮನಸ್ಯದೊಳೆನ್ನ ಮೇಲೆ' ದೂರು ಹೊರಿಸಿ ನನ್ನನ್ನು ಚಿತ್ರಹಿಂಸೆಗೆ ಗುರಿಮಾಡುವರೆಂದು ಅಂಜಿ ಬಂದಿರುವೆನು, ಇನ್ನುಮೇಲೆ ಶಿವ ಬಲ್ಲನು, ಎನ್ನುತ್ತಾನೆ. ಇವನ ನುಡಿಗಳಲ್ಲಿ ಮೋಸವಿರುವಂತೆ ಕಾಣುವುದಿಲ್ಲವೆಂದ ಜಾತವೇದಯ್ಯಗಳಿಗೆ "ಎಮ್ಮವನ ಕೊಂದವನ ತೋಱಲಿ ಇಲ್ಲದೊಡೆ ಶಿವ ಬಲ್ಲನೆಂಬುದಂ ತಾಂ ಬಲ್ಲಡೆ ಇಂದುಮೌಳಿಯ ನುಡಿಸದಿರದನಲಾ? ಬಱುವಾತನೆಂದು ತನ್ನಯ ತಪ್ಪನೆಲ್ಲ ಕೈದೊಡೆದು ಹೋಹಂದಂದೊಳು ಹೋಹುದೆ'' ಎಂದು ವಿಪ್ರವೃಂದ ಮಾರ್ನುಡಿಯುವುದು. ಕೊನೆಗೆ ಶಿವನ ಕರುಣದ ಕಂದ ಬಸವಣ್ಣನು ಶಿವಲಿಂಗವನ್ನು ಪ್ರಾರ್ಥಿಸಿ ಅವನಿಂದ ಸಾಕ್ಷಿ ನುಡಿಸುತ್ತಾನೆ. ಹೊಡೆಯುವುದಕ್ಕೆ ಬಂದಿದ್ದ ವಿಪ್ರರ ಬಳಗ ಹಿಂತಿರುಗುತ್ತದೆ. ಬಸವಣ್ಣನು ಮಾತ್ರ ಅಲ್ಲಿಯೇ ನಿಲ್ಲುವನು. ಕಪಿಲ ಷಷ್ಠಿಯ ದಿನ ಸಂಗಮೇಶ್ವರನನ್ನು ಪೂಜೆಮಾಡಿ ಕೋಟಿಯಜ್ಞದ ಫಲ ಪಡೆಯಬೇಕೆಂದು ಹವಣಿಸಿದ್ದ ಆಗಮಿಕರ ಆಗಮೋಕ್ತ ಪೂಜೆಯನ್ನು ಪರಿಹರಿಸಿ ತನ್ನದೇ ಆದ ರೀತಿಯಲ್ಲಿ ಶಿವನನ್ನು ಆರಾಧಿಸುತ್ತಿದ್ದಾಗ ಆ ಆಗಮಿಕರ ಕ್ರೋಧಕ್ಕೆ ತುತ್ತಾಗುವನು. ಮತ್ತೂ ಸಂಗಮೇಶ್ವರನೆ ತನಗೆ ಸವನ ಪೂಜಿಸಿರುತ' ಎಂದು ಹೇಳಿ ಅವನನ್ನು ರಕ್ಷಿಸುತ್ತಾನೆ. ಇಷ್ಟುಹೊತ್ತಿಗಾಗಲೇ ಬಸವಣ್ಣನ ಕೀರ್ತಿಚಂದ್ರಿಕೆ ಕಲ್ಯಾಣ ಪಟ್ಟಣದವರೆಗೂ ಹರಡುವುದು. ಬಲದೇವ ಮಂತ್ರಿ ಇವನನ್ನು ಕರೆದೊಯ್ದು ಸತ್ಕರಿಸಿ 'ಸುತೆಯ ಸುಕೃತಕ್ಕೊಪ್ಪಿಸುವೊಲು' ಗಂಗಾಂಬಿಕೆಯನ್ನು ಬಸವೇಶ್ವರನಿಗೆ ಧಾರೆಯೆರೆಯುವನು. ಬಸವಣ್ಣನು ಬಿಜ್ಜಳನ ಆಸ್ಥಾನದಲ್ಲಿ ಕರಣಿಕನಾಗಿರುತ್ತಾನೆ. ಆದರೆ ಇವನ ಭಕ್ತಿವಿಕಾಸವಾಗಿರುವಷ್ಟು, ಚರಲಿಂಗಸೇವೆಯ ಬಯಕೆ ಹಿರಿದಾದಷ್ಟು ಧನಸಂಪತ್ತು ಬೆಳೆದಿರುವುದಿಲ್ಲ. ಮತ್ತೆ ಈಶ್ವರನೇ ಓಲೆಯೊಂದನ್ನು ಕಲ್ಪಿಸಿ ಆ ಓಲೆಯು ಬಿಜ್ಜಳನ ಓಲಗದಲ್ಲಿ ಬೀಳುವಂತೆ ಮಾಡುವನಲ್ಲದೆ ಆ ಓಲೆಯನ್ನು ಓದಿ ಬಿಜ್ಜಳನ ಪ್ರೀತಿ ವಿಶ್ವಾಸಗಳನ್ನು ಗಳಿಸುವುದೆಂದು ಬಸವಣ್ಣನನ್ನು ಎಚ್ಚರಿಸುವನು. ಬಸವಣ್ಣನು ಆ ಲಿಪಿಯನ್ನು ಓದಿ ಬಿಜ್ಜಳನ ಮೆಚ್ಚುಗೆಗೆ ಪಾತ್ರನಾಗಿ ಮಂತ್ರಿ ಪದವಿಯನ್ನು ಪಡೆಯುವನು.

ಈ ಭಾಗವನ್ನು ಓದಿದರೆ ಕಥೆಯಲ್ಲಿ ಸ್ವಾಭಾವಿಕತೆ ಇರುವುದು ಕಂಡುಬರುತ್ತದೆ. ತಾಯಿತಂದೆಗಳನ್ನು ಅಗಲಿ ಹೋದುದಕ್ಕೆ ಕವಿ ಕೊಡುವ ಕಾರಣ ಸಮರ್ಪಕವೂ ಸಂಭವನೀಯವೂ ಆಗಿದೆ. ಭೀಮ ಕವಿ ಹರಿಹರರಲ್ಲಿ ಈ ಭಾಗ ಸ್ಫುಟವಾಗಿ ಮೂಡಿಲ್ಲ ಮಾತ್ರವಲ್ಲ, ಅನೇಕ ಸಂಶಯಗಳಿಗೂ ಎಡೆಗೊಡುತ್ತದೆ. ಉಪನಯನವನ್ನು ತಿರಸ್ಕರಿಸಿದ ಎಂಟು ವರ್ಷದ ಬಾಲಕನಿಗೆ ಮದುವೆಯೇ ಆಗಿಬಿಡುತ್ತದೆ, ಬಸವಪುರಾಣದಲ್ಲಿ. ಬಸವರಾಜದೇವರ ರಗಳೆಯಲ್ಲಿ ಉಪನಯನದ ಸುದ್ದಿಯೋನೋ ಬಂದಿಲ್ಲ ಆದರೆ ಬಸವಣ್ಣನು ಸಂಗಮ ಕ್ಷೇತ್ರಕ್ಕೆ ಬರುವ ಯೋಗ ಹೇಗೆ ಒದಗಿತೆಂಬುದು ಗೊತ್ತಾಗುವುದಿಲ್ಲ. 'ಭೀಮಕವಿ'ಯಲ್ಲಿ ಮಾವನ ಮಂತ್ರಿತ್ವ ಅಳಿಯನಿಗೆ ದೊರೆಯುತ್ತದೆ, ತಂದೆಯ ಆಸ್ತಿ

ಮಗನಿಗೆ ದೊರೆತಂತೆ; 'ಹರಿಹರ' ನಲ್ಲಿ ಸಾಕಿದ ತಂದೆಯ ಪದವಿ ಸಾಕು ಮಗನಿಗೆ ಲಭಿಸುವುದು. ಸಿಂಗಿರಾಜನಲ್ಲಾದರೋ 'ಓಲೆಯ ಪವಾಡ' ನಡೆದಮೇಲೆ. ಬಸವಣ್ಣನ ಜೀವನದ ಈ ಭಾಗವನ್ನು ನಿಸ್ಸಂದಿಗ್ಧವಾಗಿ ವಿವರವಾಗಿ ಕೊಟ್ಟು ಸಿಂಗಿರಾಜನು ಕನ್ನಡಿಗರಿಗೆ ದೊಡ್ಡ ಉಪಕಾರ ಮಾಡಿದ್ದಾನೆ. ಪವಾಡಗಳ ಕಥೆಯನ್ನೇ ಹೇಳಬೇಕೆಂದು ಹೊರಟ ಸಿಂಗಿರಾಜಪುರಾಣದಲ್ಲಿ ಚರಿತ್ರೆಗೆ ಸಂಬಂಧಪಟ್ಟ ಈ ಅಮೂಲ್ಯವಾದ ವಿಷಯ ದೊರಕಿರುವುದು ಕೇವಲ ಪ್ರಾಸಂಗಿಕವಾಗಿ. ಈ ಭಾಗದಲ್ಲಿಯೂ ಸಿಂಗಿರಾಜನ ಆಶಯ, ಭಗವಂತನು ಬಸವಣ್ಣನನ್ನು ಗಳಿಗೆ ಗಳಿಗೆಗೂ ಕೈಹಿಡಿದು ನಡೆಸಿದ್ದಾನೆ, ಅವನ ಪ್ರೀತಿಯ ಪುತ್ರ ಬಸವಣ್ಣ ಎಂಬುದನ್ನು ತೋರಿಸುವುದೇ ಆಗಿರುತ್ತದೆ. ಸಿಂಗಿರಾಜನಲ್ಲಿ ಮಾತ್ರ ದೊರೆಯುವ ಇಂತಹವೇ ಇನ್ನು ಕೆಲವು ಸನ್ನಿವೇಶಗಳನ್ನು ಇಲ್ಲಿ ನಿರ್ದೇಶಿಸಬಹುದು. ಶಿವಪ್ರಸಾದವನ್ನು ಸ್ವೀಕರಿಸು ಎಂದು ಹೇಳುತ್ತಾ ಬಿಜ್ಜಳನು ಮಂಟಪದ 'ಒಳಗಣೋವರಿಯಲ್ಲಿದ್ದ' ಅಕ್ಕನಾಗಮ್ಮನನ್ನು ತೋರಿಸಲು ಬಸವಣ್ಣನು ಬಾಲಯೋಗಿಯಾಗಿ ಅಕ್ಕನ ಮೊಲೆಯುಂಡುದೂ ಎಚ್ಚತ್ತು ನೋಡಿದ ಅಕ್ಕನು 'ಬಸವಣ್ಣನ ಬೆಸಲಾದ ಬಾಣಂತಿ' ನಾನು ಎಂದು ಮುಂತಾಗಿ ಜೋಗುಳಪಾಡುತ್ತ ಬಸವ ಶಿಶುವನ್ನು ತನ್ನ ಎದೆಯ ತೊಟ್ಟಿಲೊಳಗಿಟ್ಟು ತೂಗಿದ ಪ್ರಸಂಗವೂ ಓದುಗರನ್ನು ಭಾವ ಪರವಶರನ್ನಾಗಿ ಮಾಡುತ್ತದೆ. ಮೊಗವಾಡದ ಕೇಶಿರಾಜನಿಗೆ ಅಗ್ಘವಣಿ ತರುತ್ತಿದ್ದವಳಿಗೂ ಅರಮನೆಯ ಅವ್ವೆಯೊಬ್ಬಳಿಗೂ ನಡೆದ ಸಂವಾದ ಆ ವರ್ಗದ ಜನದ ಸಾಮಾನ್ಯ ಮನೋವೃತ್ತಿಯನ್ನು ಎತ್ತಿ ತೋರಿಸುತ್ತದೆ. ಬಿಜ್ಜಳನಿಗೆ ಬಂದೆರಗಿದ ಸಿಡಿಲನ್ನು ಬಸವೇಶನು ಹಿಡಿದು ತನ್ನ ಕಯ್ಯಲ್ಲಿಯೇ ಅಡಗಿಸಿಕೊಂಡ ಸಂದರ್ಭವನ್ನು ಹೇಳುವಾಗ ಆ ಭಯಂಕರ ಸಿಡಿಲಿನ ವರ್ಣನೆ, ಅದನ್ನು ಕಂಡು ಬೆದರಿದ ಸಭಿಕರ ವರ್ಣನೆ ವಾಚಕರನ್ನು ಬೆರಗುಗೊಳಿಸುತ್ತದೆ. 'ವಿಷಪ್ರಸಾದ' ವರ್ಣನೆಯನ್ನು ಓದುವಾಗ ಮೈ ಜುಮ್ಮೆನ್ನುವುದು. ಭಕ್ತಿರಸವೇ ಇಲ್ಲಿ ಪ್ರಧಾನವಾಗಿದ್ದರೂ ಇನ್ನುಳಿದ ರಸಗಳೂ ಉಚಿತವಾದೆಡೆಗಳಲ್ಲಿ ಬಂದು ಪ್ರಧಾನ ರಸಕ್ಕೆ ಪುಷ್ಟಿಕೊಟ್ಟಿರುತ್ತವೆ. ಸಿಂಗಿರಾಜನು ಚಿತ್ರಿಸಿರುವ ಈ ಸನ್ನಿವೇಶಗಳೂ, ಇಂತಹುವೇ ಇನ್ನೂ ಕೆಲವೂ ಇವನಲ್ಲಿರುವ ದೋಷಗಳನ್ನು ಖಂಡಿತವಾಗಿಯೂ ಮರೆಸಬಲ್ಲುವು.

ಸಿಂಗಿರಾಜನು ವ್ಯಾಕರಣನಿಯಮಗಳಿಗೆ ಗಮನ ಕೊಟ್ಟಂತೆ ಕಾಣುವುದಿಲ್ಲ. ಇವನು ಬಳಸಿರುವ ಗ್ರಾಮ್ಯಪದಗಳು, ವಿಲಕ್ಷಣರೂಪಗಳು, ವಿಸಂಧಿ ಪ್ರಯೋಗಗಳು ಸಂಧಿದೋಷಗಳು ಇವರ ಒಂದು ದೊಡ್ಡ ಪಟ್ಟಿಯನ್ನೆ ಮಾಡಬಹುದು. ವೇದಾಂತ ತತ್ವಗಳನ್ನು ಪ್ರತಿಪಾದಿಸುವಾಗಲೂ ನಲವತ್ತೆಂಟನೆಯ ಸಂಧಿಯ ಶಿವಶರಣರ ಬಳಗವನ್ನು ವರ್ಣಿಸುವಾಗಲೂ ಪ್ರತಿಸಂಧಿಯ ಆದಿಯಲ್ಲಿ ಬರ ಸ್ತುತಿಪದ್ಯಗಳಲ್ಲಿಯೂ ಸಂಸ್ಕೃತ ಪದಗಳನ್ನು ಮಿತಿಮೀರಿ ಬಳಸಿದ್ದಾನೆ ತದ್ಭವ ಪದಗಳೂ ಅಚ್ಚಗನ್ನಡ ಮಾತುಗಳೂ ಹೆಚ್ಚಾಗಿ ಕಣ್ಣಿಗೆ ಬಿ ವಾದರೂ ಭಾಷೆಯಲ್ಲಿ ಬಿಗುವಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಕಡೆ ಛಂದೋಭಂಗವೂ ಅನೇಕ ಕಡೆ ಲಯಭಂಗವೂ ಆಗಿರುವುದಕ್ಕೆ ಉದಾಹರಣೆಗಳುಂಟು

ಒಟ್ಟಿನಲ್ಲಿ ಇತಿಹಾಸದೃಷ್ಟಿಯಿಂದಲೂ ಸಾಹಿತ್ಯದೃಷ್ಟಿಯಿಂದಲೂ ಉತ್ತಮ ವರ್ಗಕ್ಕೆ ಸೇರಿದ ವೀರಶೈವ ಪುರಾಣಗಳಲ್ಲಿ ಇದೊಂದೆಂದು ಹೇಳಬಹುದು.

ಪಾಠ ಶೋಧನೆ

ಈ ಗ್ರಂಥವನ್ನು ಏಳು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿದೆ.

'ಕ'—ಓಲೆಯ ಪ್ರತಿ, ನಮ್ಮ ಲೈಬ್ರರಿಯಲ್ಲಿದ್ದುದು. ಈ ಪ್ರತಿಯು "ಶುಕ್ಲ ಸಂವತ್ಸರದ ಮಾರ್ಗಶಿರ ಕೃಷ್ಣಪಕ್ಷ ೧೧, ಸೌಮ್ಯವಾರ" ಬಸವಪೌರಾಣಿಕನು ಬರೆದು ಮುಗಿಸಿದ್ದು. ಇದೊಂದು ಪ್ರತಿಯಲ್ಲಿ ಮಾತ್ರ ಱ ಕಾರವು ಬಳಸಲ್ಪಟ್ಟಿದೆ.

'ಖ'—ಇದೂ ನಮ್ಮ ಲೈಬ್ರರಿಯ ಕಾಗದದ ಪ್ರತಿ. ಓದುವವರಿಗೆ ಅರ್ಥವಾಗಲೆಂಬ ಸದುದ್ದೇಶದಿಂದ ಪ್ರತಿ ಮಾಡಿದವರು ಮೂಲ ಪ್ರತಿಯಿಂದ ಎತ್ತಿ ಬರೆಯುವಾಗ ಅಲ್ಲಲ್ಲಿ ತಿದ್ದುಪಾಟು ಮಾಡಿರುವಂತೆ ತೋರುತ್ತದೆ.

'ಗ'—ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯವರು ದಯೆಯಿಟ್ಟು ಕಳುಹಿಸಿಕೊಟ್ಟ ಹಸುರು ಕಾಗದದ ಪ್ರತಿ. "ಶ್ರೀಮನ್ನೃಪಶಾಲಿವಾಹನ ಶಕೆ ೧೭೯೩ನೆಯ ಪ್ರಜೋತ್ಪತ್ಯನಾಮ ಸಂವತ್ಸರದ ಶ್ರಾವಣಶುದ್ಧ ಷಷ್ಠಿ ಆದಿತ್ಯ ವಾರ" ಹಿರೇ ಹಡಗಲಿ ಹುಚ್ಚಪ್ಪನು ಬರೆದು ಮುಗಿಸಿದ್ದು.

'ಘ'—ಬ್ಯಾಡಗಿ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳವರು ಕೊಟ್ಟುದು. ೧೭೯೫ನೇ ಶ್ರೀಮುಖ ಸಂವತ್ಸರ ಕಾರ್ತೀಕ ಕೃಷ್ಣಪಕ್ಷ ದ್ವಾದಶಿ ಭಾನುವಾರ ಬರೆದು ಮುಗಿಸಿದ್ದು.

'ಚ'—ಇದು ಮೈಸೂರು ನಾಗಲಿಂಗಸ್ವಾಮಿ ಮಠದ ಬ್ರಹ್ಮಶ್ರೀ ಶಿಲ್ಪಿ ಸಿದ್ಧಲಿಂಗಸ್ವಾಮಿಗಳು ಕೊಟ್ಟ ಅಸಮಗ್ರ ಪ್ರತಿ. ಈ ಪ್ರತಿಯನ್ನು ಅವಶ್ಯವಿದ್ದೆಡೆ ಉಪಯೋಗಿಸಿಕೊಂಡಿರುತ್ತೆ. ". . . . ಶಾಲಿವಾಹನ ಶಕ ವರ್ಷಂಗಳು ೧೭೮೬ನೆಯ ಸಂದ ವರ್ತಮಾನವಾದ ರುಧಿರೋದ್ಗಾರಿ ಸಂವತ್ಸರದ ಶ್ರಾವಣ ಶುದ್ಧ ಹದಿನೈದು ಶುಕ್ರವಾರ" ಮುಗಿದಿರುವುದು.

'ಜ'—ಶಿವಮೊಗ್ಗೆಯ ಕುಂಸಿ ತಾಲ್ಲೂಕು ಹಾರನಹಳ್ಳಿಯ ಸಂತೇಬೆನ್ನೂರು ಮುದ್ದುವೀರಪ್ಪನವರು ಕೊಟ್ಟುದು, ಅಸಮಗ್ರ. ಗ್ರಂಥ ಸಂಪಾದನೆಯ ಕೆಲಸ ಪೂರೈಸಿದಮೇಲೆ ಕರಡು ತಿದ್ದುವ ಸಮಯದಲ್ಲಿ ದೊರಕಿದ್ದು. ಇದರ ಸಹಾಯವನ್ನೂ ಅವಶ್ಯಕವಿದ್ದೆಡೆ ಪಡೆದಿದೆ.

'ಛ'—ಲೈಬ್ರರಿಯ ಪ್ರತಿನಿಧಿಗಳು ಪ್ರಾಚೀನ ಗ್ರಂಥಾನ್ವೇಷಣಕ್ಕಾಗಿ ಷಿಕಾರಿಪುರ ತಾಲ್ಲೂಕಿಗೆ ಹೋಗಿದ್ದಾಗ ಷಿಕಾರಿಪುರದ ತಾಲ್ಲೂಕು ಕಡೆನಂದಿಹಳ್ಳಿಯಲ್ಲಿರುವ ಅಮ್ಮೆ ಕೊಪ್ಪದ ಬಸವಣ್ಣಪ್ಪನವರು ಕೊಟ್ಟ ಪ್ರತಿ.

'ಗ' ಮತ್ತು 'ಛ'ಗಳು ಒಂದನ್ನೊಂದು ಹೋಲುತ್ತವೆ; 'ಖ' ಮತ್ತು 'ಟ' ಪ್ರತಿಗಳು ಒಂದನ್ನೊಂದು ಹೆಚ್ಚಾಗಿ ಹೋಲುವುವು. ಆದರೂ ಈ ನಾಲ್ಕು ಪ್ರತಿಗಳನ್ನೂ ಒಂದು ಗುಂಪಿಗೆ ಸೇರಿಸಬಹುದು. 'ಕ,' 'ಘ' ಮತ್ತು 'ಜ' ಗಳು ಬೇರೆ ಬೇರೆಯ ಮೂಲ ಪ್ರತಿಗಳಿಂದ ಹುಟ್ಟಿದುವೆಂದು ಧಾರಾಳವಾಗಿ ಹೇಳಬಹುದು. ಯಾವ ಪ್ರತಿಯೂ ಸಂಪೂರ್ಣ ಶುದ್ಧವಾಗಿರಲಿಲ್ಲವಾದುದರಿಂದ ಯಾವ ಒಂದು ಪ್ರತಿಯನ್ನೂ ಮೂಲವಾಗಿ ಇಟ್ಟುಕೊಂಡಿಲ್ಲ.

ಸಿಂಗಿರಾಜನ ಭಾಷೆಯನ್ನು ತಿದ್ದ ಹೊರಟರೆ ಅನೇಕ ಕಡೆ ಛಂದಸ್ಸಿನ ನಿಯಮಗಳನ್ನು ಮುರಿಯಲೇಬೇಕಾಗುತ್ತದೆ. ಕೆಲವು ಪದ್ಯಗಳ ಅನ್ವಯವೇ ಸರಿಯಾಗಿ ಆಗುವುದಿಲ್ಲ. ಅವನ್ನೂ ಇದ್ದಂತೆಯೇ ಕೊಟ್ಟಿದೆ. "ಮಾಡುವುದು" "ಹೋಗುವುದು" ಮುಂತಾದ ಕಡೆ "ಉದು"ಗೆ ಬದಲಾಗಿ ಎಲ್ಲೆಡೆಯಲ್ಲಿಯೂ "ಅದು" ಪ್ರತ್ಯಯವೇ ಉಪಯೋಗಿಸಲ್ಪಟ್ಟಿದೆ. "ಎಂಬೋದು", "ಕುಳ್ಳಿರಿಸು", "ಭೂಧಿಪ", "ಸಂಗಟ", "ಬಳಗವಂದಿಗ", "ಉಪಾಸ", "ಯಜಮಾನ ಮಂತ್ರ್ಯಣ್ಯ", "ಸೊಪ್ಪೆದೆ", "ನಿಂದಿರಿಸಿ", "ಹೊರಹೊಂಡು", "ರಂಗವಾಲೆ" ಮುಂತಾದ ಗ್ರಾಮ್ಯ ರೂಪಗಳೂ "...ನೆನಿಸಿದಮಲ ಬಸವಚಾರಿತ್ರ", "ಚಕ್ರಿಶಕ್ರಜ", "ಮೂರ್ತಿಟ್ಟು", "ಏಳ್ತರುತಜಾಂಡಕುಲ", ಕಾಂತ್ಯಗ್ನಿ (ಕಾಂತಿ+ಅಗ್ನಿ) "ಕ್ಷುತ್ತೃಷ್ಣೆ", "ವಿಕರ್ಮಿಗಳಿರೇಕಮೇವಾರುದ್ರನದ್ವಿತೀಯಂ" (ವಿಕರ್ಮಿಗಳಿರೇ+ಏಕಮೇವಾ) "ಅತ್ಯಚ್ಚರಿ", "ನೋಡೆಮ" (ನೋಡಿ+ಎಮ), "ನೋಡೆಥೋಚಿತ", "ನಾವಿದೆಲ್ಲರೋಪಾದಿ' (ನಾವು+ಇದ+ಎಲ್ಲರೋಪಾದಿ), "ಈ ಜನಾಜನ" (ಈಜನ+ಆಜನ), "ಒಂದಿನೆಲವಱೆ (ಒಂದಿನ+ನೆಲವಱೆ) "ಲಕ್ಷ್ಮ್ಯೈಲಿದು", "ಎಳಗಱುಳಿದಿದೆನೇಕಭಾವದಾರೂಢ"(ಎಳಗಱ+ಉಳಿದಿದೆ+ಎನೆ+ಏಕಭಾವದಿ+ಆರೂಢ)ಮುಂತಾದ ವಿಲಕ್ಷಣ ಪ್ರಯೋಗಗಳೂ ಯಥೇಚ್ಛವಾಗಿ ದೊರೆಯುತ್ತವೆ. ಇನ್ನುಳಿದ ಷಟ್ಪದೀಕಾವ್ಯಗಳಲ್ಲಿರುವಂತೆ ಯಕಾರಾಗಮ ಬರಬೇಕಾಗಿರುವ ಕಡೆ ವಕಾರಾಗಮ ಬಂದಿದೆ.

ಹಿಂದೆ ಪ್ರತಿಗಳಿಗೆ ಕೊಟ್ಟಿರುವ ಸಂಕೇತಗಳನ್ನೇ, ಪಾಠಾಂತರಗಳನ್ನು ಕೊಡುವಾಗಲೂಕೊಟ್ಟಿದೆ. ಕೊನೆಯ ಸಂಧಿಗಳಲ್ಲಿ ಪಾಠಾಂತರಗಳೇ ದೊರೆಯುವುದಿಲ್ಲ. (ಸ.ಪ್ರ.) ಎಂಬುದು ಸರ್ವಪ್ರತಿಗಳ ಪಾಠ. ಕಂಸ ಚಿಹ್ನೆಯೊಳಗಿನದು ನಾವೇ ಊಹಿಸಿ ಸೇರಿಸಿದ್ದು. ಪ್ರಕ್ಷಿಪ್ತವಿರಬಹುದಾದ ಪದ್ಯಗಳನ್ನು ಅನುಬಂಧದಲ್ಲಿ ಕೊಟ್ಟಿದೆ. ಶುದ್ಧವಾದ ಮಾತೃಕೆಗಳು ದೊರೆಯದುದರಿಂದ ಗ್ರಂಥಪಾಠವನ್ನು ಇದಕ್ಕಿಂತ ಹೆಚ್ಚಿಗೆ ಉತ್ತಮಗೊಳಿಸಲಾಗಲಿಲ್ಲ.

ಎಚ್. ದೇವೀರಪ್ಪ.

ಶುದ್ಧಾಶುದ್ಧ

ಪುಟ	ಪಂಕ್ತಿ	ಅಶುದ್ಧ	ಶುದ್ಧ
XV	೨೪	೧೩೯೯	೧೩೬೯
೧	೩	ಚರಿತ್ರೆ	ಚಾರಿತ್ರ
೨	೨೪	ವಿಜ್ಛೇದನ	ವಿಚ್ಛೇದನ
೩	೧೫	ವೃಪ	ವೃಷ
೨೪	೨೨	‖ ೯ ‖	‖ ೧೧ ‖
೩೨	೧೯	ದಿಜ್ಞೆಚಯುವ	ಧಿಂಗ್ನಿಚಯುವ
೪೪	೧೩	ವಡೆದತಿವ್ರೋಲ'	ವಡೆದ ವ್ರೋಲ'
೪೯	೧೪	ಉಪಚಾರು	ಉಪಚಾರ
೧೨೯	೨೯	‖ ೧ ‖	‖ ೨ ‖
೧೩೦	೫	‖ ೨ ‖	‖ ೩ ‖
,,	೧೫	‖ ೩ ‖	‖ ೪ ‖
೧೬೩	೧೩	ನೋಡುವೆನುತ	ನೋಡುವೆವೆನುತ
೧೬೭	೨೭	ಚೊದ್ಯ	ಚೋದ್ಯ
೧೭೪	೯	ಸೇಸೆ	ಸೇವೆ
೧೭೯	೭	ದಮುವು	ದಮುಮುಮುವು
೧೮೧	೨೮	ಹೋಗುವೆ	ಹೊಗುವೆ
೧೮೬	೧೮	ಣಾರತೆ	ಣಾರತ
೧೮೮	೫	ದೋಱುದನು ಜಗಕೆ	ದೋಱಿದನು ಜಗಕ್ಕೆ
೧೯೧	೧೬	ಯೆನುತ	ಯೆನುತ್ತ
,,	೧೮	ಶ್ವಾನಾ	ಶ್ವಾನ
೨೧೬	೨೪	ದೋಳೇ	ದೊಳೇ
೨೨೧	೨೩	ವಡರ್ಗಲ್ಸರ್ವ	ವಡಗಲ್ಸರ್ವ
೨೩೪	೩	ಸ್ನಾನಂ	ಸ್ನಾನೇ
೨೬೧	೨೧	ದೇಹಿಕಂ	ದೇಹಕಂ
೨೭೨	೨	ಪಡಿ	ಪತಿ
,,	೧೭	ಕಾರಕ್ಕೆಯಿ	ಕಾರಕ್ಕೆಯ
,,	೧೯	ಭಾದ	ಭಾವ
೨೭೫	೫	ಹಿರಯ	ಹಿರಿಯ
೨೭೬	೨	ಳ್ಪವಿ	ಳ್ಸವಿ
೨೭೮	೧೧	ರಾಗಿ	ವಾಗಿ
೨೭೯	೪	ಬಲು	ಬಲಂ
,,	೧೦	ದೊಟ್ಟವವಂ	ದೊಟ್ಟವನಂ
,,	,,	ಕೊಂಡೆಯ್ದ	ಕೊಂಡೊಯ್ದು
,,	೧೯	ಮೆತ್ತ	ವೆನುತ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೨೮೦	೫	ಗತೆ	ಗತಿ
,,	೧೧	ವಱೆದೀ	ವಱಿದೀ
,,	೧೨	ಹೊರಿ	ಹೊಱಿ
,,	೧೬	ವನರಿ	ವನಱಿ
,,	೨೪	ದೋರಿಸಿ	ದೋಱಿಸಿ
,,	೨೫	ವಕ್ಕದರಿಂದ	ವಕ್ಕದಱಿಂದ
೨೮೧	೧೧	ಗೊಟ್ಟಿನ್ನ	ಗೊಟ್ಟೆನ್ನ
,,	೨೪	ಮಾಡಿದೆನೆ	ಮಾಡಿದೆನೆನೆ
೨೮೨	೨೨	ನಾದ್ಯೆಂದ	ನಾದಿಂದ
,,	೨೪	ಕ ್ಮರೆ	ಕಣ್ಮಱೆ
,,	,,	ಹರಿದಾ	ಹಱಿದಾ
೨೮೩	೧೮	ಬಸುರೊಳು	ಬಸುಱೊಳು
೨೮೫	೧೬	ದೇಳಿಗೆಯೆಂ	ದೇಳಿಗಿದೆಂ
೨೮೬	೩	ಹತ್ಯ	ಹತ್ಯಾ
೨೮೭	೧೩	ಹರಿಗೊಯ್ದು	ಹಱಿಗೊಯ್ದು
೨೮೭	೧೦	ಹರಿಯೆ	ಹಱಿಯೆ
,,	೨೯	ನಮತೆ	ನಮತೇ
,,	೨೨	ಆ ಮುಖ	ಆ ಮಖ
೨೮೮	೨೩	ಗೆಟ್ಟುರೆ	ಗೆಟ್ಟುಱೆ
೨೯೧	೧೯	ಧರುಣಿ	ಧಾರುಣಿ
೨೯೩	೨೩	ಗೆಸರಿಕ್ಕುವ	ಗಿಸರಿಕ್ಕುವ
೨೯೪	೧೫	ದುರೆ	ದುಱೆ
೨೯೫	೧	ಇಪ್ಪತ್ತೊಂಭ	ಇಪ್ಪತ್ತೊಂಬ
,,	೧೮	ನೊಡೆ	ನೊಡ
೨೯೬	೧೮	ಕಾಯೆ	ಕಾಯು
,,	೨೦	ವೇದದೀಕ್ಷೆ	ವೇಧಾದೀಕ್ಷೆ
,,	೨೬	ತುಣಸಿವಣಿ	ತುಳಸಿಮಣಿ
,,	೨೮	ಳೆಬಿ	ಳೆರ
೨೯೭	೧೮	ವೇದಾ	ವೇಧಾ
,,	೨೨	ಧಿಂದಲೆಮ್ಮಾ	ನಿಂಧನಂ ಆ
,,	೨೯	ವೇದಾ	ವೇಧಾ
೨೯೮	೧೮	ನ್ಮೀಲತಾ	ನ್ಮೀಲಿತಾ
,,	೨೮	ಘಟಿಕೆ	ಘುಟಿಕೆ
೨೯೯	೭	ಸುಕ	ಸುಖ
,,	೨೮	ಕ್ಕೆದ್ದು	ಕ್ಕೆ
,,	,,	ಲಿಂಗಾವಧಾನಿತಾಂ	ಲಿಂಗವಧಾನಿತಂ
೩೦೦	೨೦	ಬಾಧಮನ ಮುದವೆ	ಬಾದುಮನ ಮದುವೆ
,,	೨೭	ನೆರಯೆನಲ್ಬ	ನೆಲೆಯೆನಲ್ಬ
೩೦೧	೨೪	ತಸ್ತಿಗ	ತಸ್ತಿಗರೊ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೩೦೨	೧೫	ವಂ	ಮಂ
೩೦೩	೬	ಮಂಚೋರ	ಪಂಚೊರೆ
,,	೨೫	ಪ್ರಾಣಾನ್ವಿಗಳನು	ಪ್ರಾಣಾನ್ವಿತರನು
೩೦೪	೫	ವಸುದೇಶ್ವರ	ವಸುಧೇಶ್ವರ
,,	೮	ತೀರ್ಚು	ತೀರ್ಚ
೩೦೬	೧೪	‖೧‖	‖೪‖
೩೦೭	೯	‖೨‖	‖೫‖
,,	೧೮	ದೇಶಗೊ	ದೇಸಕೊ
೩೦೮	೫	‖೩‖	‖೬‖
,,	೮	‖೪‖	‖೭‖
೩೧೨	೪	ಮರುದಿನ	ಮಱುದಿನ
೩೧೨	೧೧	ಎಂಭತ್ತು	ಎಂಬತ್ತು
೩೧೩	೧೧	ಅರಸಿನಂತ	ಅರಸಿನಂತೆ
೩೧೭	೧೩	ಸರಸಿಯಿದ	ಸರಸಿಗಿದ
೩೧೮	೧೮	ನೀತ	ನೀತನ್ನ
೩೨೪	೨೫	ಕರೆದ್ಯೆಯ	ಕಱೆದ್ಯೆಯ
,,	೨೭	ಕೊರಡು	ಕೊಱಡು
,,	,,	ಬರಡು	ಬಱಡು
೩೨೭	೨೫	ಕೊಯ್ವಲಗಿ	ಕೊಯ್ವಲಗಿ
೩೨೮	೨೨	ದೆರಹು	ದೆಱಹು
೩೨೯	೬	ಹೊಂಗೊಂಡು	ಹೊಂಗೊಟ್ಟು
೩೩೦	೧೯	ಹಗರಣ	ಹರಗಣ
,,	೨೯	ಗೀತಸ್ಥ	ಗೀತಸ್ಥ
೩೩೨	೨	ಚಾರ್ವಾಕ ನೃಪ	ಚಾರರ ಕಳುಪೆ
೩೩೩	೧೦	ಕಿಡಿಗೆದರಿ	ಕಿಡಿಗೆದಱಿ
೩೩೫	೫	ನೀರ	ನೀಱ
೩೩೭	೧೪	ಕಾಲುಕೊಡು	ಕಾಲು ಕೊಡು
,,	೨೫	ವ ಗೋಡೆಯೊಳಿಕ್ಕದೆ	ವೆ ಗೊಡವೇಳೆ ತನ್ನ
೩೩೯	೨೯	ಝ	ಜ
೩೪೦	೮	ಬಡುತರೆ—	ಬಡುತಲೆ
೩೪೪	೧೪	ಸಹಸ್ರ ಸಂಖ್ಯಾ	ಸಾಹಸ್ರ ಸಂಖ್ಯೆ
೩೪೭	೨೨	ಕೊ	ಕೂ
,,	,,	ಕಾಲರುದ್ರ	ಕಾಲಾಗ್ನಿ ರುದ್ರ
೩೪೮	೨೩	ಕಿತು	ಕಿತ್ತು
೩೫೪	೩	ಕೊಂಡೆ ವೈಶ್ಯಂಗಡಿಯ	ಕೊಂಡೆ ವೈಸ್ಯಂಗಡಿಯು
೩೫೬	೯	ಸ್ತೊಮ	ಸ್ತೋಮ
೩೫೭	೧೦	ಲೇಸೇನುತ್ತೆ	ಲೇಸೆನುತ್ತೆ
,,	೧೩	ನಿಷ್ಠಾ	ನಿಷ್ಠಾ
,,	೨೮	ಬಸವಣ್ಣ	ಬಸವಣ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೩೫೮	೧೭	ಮಂಜಿರಿ	ಮಂಜರಿ
೩೬೪	೩	ಘ್ವ	ಗ್ವ
,,	೨೫	ನಿಷ್ಠೆ	ನಿಷ್ಠೆಯೊ
೩೬೬	೧೨	ಮೃತಿಕೆಯ	ಮೃತ್ತಿಕೆಯ
,,	೨೨	ರೆದ್ದುಗ	ರೆದ್ದುಗ್ರ
೩೬೭	೨	ಹೊಡೆಯಲ್ಪಡಿ	ಹೊಡೆಯಲ್ಪಡಿದ
,,	೧೯	ನೊಂಪಿ	ನೋಂಪಿ
೩೬೯	೨೨	ನೋಳ್ಬ	ನೋಳ್ಪ
೩೭೦	೭	ಎಂಥತ್ತೆಂಟು	ಎಂಬತ್ತೆಂಟು
೩೭೮	೧೮	ಸಾಸದ್ವೀ ರ	ಸಾರಸದ್ವೀರ
೩೮೦	೨೪	ಪಿತೆದಿಂಪು	ಪಿತದಿಂಪು
೩೮೨	೨೬	ಕಂಥೆ	ಕಂಥೆ
೩೮೩	೧೯	ಯಹರೆಯಂ	ಯಹರೆಯಂ
,,	೨೧	' ಮಾಡಿ ತಲಾ '	ಮಾಡಿತಲ್ಲಾ
,,	೩೧	ಪಶುದಾರು	ಪಶು ದಾರು
೩೮೬	೧೧	ನೆನಲದೆಂತು	ನೆನಲದೆಂತೊ
೩೮೭	೩	ಕೆಲರ್ಗೆ	ಕೆಲರ್ಗೆ
,,	೧೦	ಕಿಂಕಿರ	ಕಿಂಕರ
೩೮೮	೩	ಲಾಂಥಸೆಸಹ	ಲಾಂಥನಸಹ
,,	೫	ಶುಶ್ರೃಷಕರೊಲು	ಶುಶ್ರೂಷಕರೊಲು
೩೯೨	೧೩	ನಿಕ್ಕೈಹೊಲ್ದ	ನಿಕ್ಕೈಹೊಯ್ದು
,,	೨೦	ತುಫ್ವಡಿಸುತಾ	ತುಗ್ವಡಿಸುತಾ
೩೯೩	೨೮	ಸಿದ್ಧರಸಾಂಕ	ಸಿದ್ಧರಸಾಂಕ
೩೯೮	೧೧	ರುಫ್ವಡಿಪ	ರುಗ್ವಡಿಪ
೩೯೯	೧೦	ವೈಡೂರ್ಯ	ವೈಢೂರ್ಯ
೪೦೦	೮	ಧೃಢ	ದೃಢ
,,	೨೩	ಘುಳುಘುಳಿಸಿ	ಘುಳುಘುಳಿಸಿ
೪೦೬	೧೩	ಕೊಂದುಕೂಡರಸು	ಕೊಂದುಗೂಡರಸು
,,	೧೬	ಜಾಗು	ಚಾಗು
,,	,,	ಭಟ್ಪ	ಭಟ್ಟ
೪೦೭	೬	ಮಾಧಾಂತ	ಮಾಂಧಾತ
,,	೧೯	ಗೇನಱುದು	ಗೇನರಿದು
೪೦೮	೪	ಗಱದೇನೆನ:ತ್ತ	ಗರಿದೇನೆನುತ್ತ
೪೨೧	೧೭	ಶಿವೌವಾಚ	ಶಿವೋವಾಚ
೪೨೭	೨೮	ಬೆಳೆಗು	ಬೆಳಗು
೪೨೭	೬	ಕೆದರಿದ	ಕೆದಱಿದ
೪೨೮	೫	ನಾಗೆಯ್ಯಂಗ	ನಾಗಯ್ಯಂಗೆ
,,	೨೭	ಕುಡಿವಱುದು	ಕುಡಿವರಿದು
೪೨೯	೭	ಲಿಂಗವಂದೆ	ಲಿಂಗವೆಂದೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೪೪೪	೮	ಮಾಹೇಶ್ವರು	ಮಾಹೇಶ್ವರರು
೪೪೭	೯	ಕೊಂಡೆಯ್ವು	ಕೊಂಡೊಯ್ವು
,,	೧೬	ವಿಡದು	ವಿಡಿದು
೪೫೪	೧೮	ಕ್ರೀಚೇಷ್ಠಿತ	ಕ್ರೀಚೇಷ್ಟಿತ
,,	೨೨	ಮಳಿಸು	ಮುಳಿಸು
೪೫೭	೨೨	ಬಸಿತ	ಭಸಿ¬
೪೫೮	೮	ಡುಜುಪುಳಿಂದ	ಡುಜು ಪುಳಿಂದ
೪೬೨	೧೯	ಕೈಗೊಂಡು	ಕ್ರ್ತೈಗೊಂಡು
೪೭೦	೨೬	ಸಂಚುಲ	ಸಂಚು
೪೭೬	೧೨	ಳಿರ್ವರಿ	ಳಿವರೀ
೪೭೭	೯	ಬಿಟ್ಟೆದ್ದೆ	ಬಿಟ್ಟದ್ದೆ

ಶ್ರೀ

ಸಿಂಗಿರಾಜ ಪುರಾಣ

(ಅಮಲಬಸವ ಚರಿತ್ರೆ)

ಒಂದನೆಯ ಸಂಧಿ

ಸೂಚನೆ—

ಶ್ರೀ ಷಡ್ಗುಣೈಶ್ವರ್ಯಸಂಪನ್ನ ಬಸವ ಗುರು
ವೇಷಮಂ ಧರಿಸಿ ಮರ್ತ್ಯಾದಿ ಭಕ್ತರುಗಳನುಱೆ
ಘೋಷಿಸಿದ ಕಾರಣವ ಕೃತಿಮಾಳ್ಪೆ ಸದ್ಭಕ್ತಜನರಱುವ ಮಾಳ್ಕೆಯಿಂದ ।

ಶ್ರೀಮದಮರೇಂದ್ರಾರ್ಚಿತಂ ಪರಾತ್ಪರ[1]ಮ[1] ನಿ
ಸ್ಸೀಮನದ್ವಯನತುಳನನಘ ನಿಗಮಾಗಮ
ಸ್ತೋಮಸಂಸ್ತುತ್ಯಗೋಚರ ನಿರಾಲಂಬ ನಿಶ್ಚಿಂತ ನಿಜ ನಿತ್ಯಮೂರ್ತಿ ।
ಪ್ರೇಮ[2]ದಿ[2]ಜನಾರ್ದನಜ ಮನುಮುನಿ[3]ಪ ಯ[3]ಕ್ಷಖಚ
ರಾಮರ[4]ಮಹೇ[4]ಶ್ವರರ್ಗಖಿಳ ಸಂಪದವಿತ್ತ
ಸ್ವಾಮಿ ಕಾಶೀಪುರಾಧಿಪ ವಿಶ್ವಪತಿ ಕೂರ್ತು ನೆಲಸೆನ್ನ ಹೃದಯದೊಳಗೆ ॥೧॥

ನೀಲಲೋಹಿತ ಕಾಲಕಾಲಾಂತಕಂ ಕಂಜ
ಬಾಲಕಂಧರ ವಾಯುಭುಗ್ಭರಣ ಭುಜಗಭು
ಕ್ಪಾಲಜನಕಂ ಜಗತ್ತ್ರಯರಕ್ಷಕಂ ಕುಕ್ಷಿ ದಕ್ಷಶಿಕ್ಷಿತ ನಕ್ಷಯ ।
ಜ್ವಾಲಿ ಜೈವಾತೃಕ ಪತಂಗಾಕ್ಷಿ ತ್ರಿಪುರನಿ
ರ್ಮೂಲ ವಿದ್ಯುನ್ಮಾಲಿಮಯತಾರಕಾದ್ಯುಮಾ
ಲೋಲ ಕಾಶೀಪುರಾಧಿಪ ವಿಶ್ವಪತಿ ಕೂರ್ತು ಸಲಹು ಸಜ್ಜನಜನರನು ॥೨॥

ವಿಜಯವಿಪುಳೋನ್ನತವಿರಾಜಿತರಿ[5]ಗರ್ವಮದ
ಗಜವಿದಳ ಮ[5]ತ್ತಸಂತಮಭಾನು ಭಾಸ್ಕರ
ದ್ವಿಜಭಗ್ನ ವಸುಸಪ್ತರಸನಘಾತನ ಪೃಥುಲಮುಖವಾರ್ಧಿವಡಬಾನಲ ।

---

[1] ನು (?). [2] ದಿಂ (ಕ). [3] ಯ (ಘ). [4] ಮುನೀ (ಕ.ಖ.ಗ.ಘ.ಛ)
[5] ವರ್ಗಮದಗಜಮದೋನ್ಮ (ಕ.ಖ.ಗ.ಘ.ಛ).

*ಭಜಕಜನವಾರಾಶಿವರ್ಧನೋನ್ನತಚಂದ್ರ
ಸುಜನರಕ್ಷಕ ಕುಜನಶಿಕ್ಷಕಂ ದಕ್ಷಶಿರ
ಕುಜಪರಶುಘಾತ [1]ಘೋರೇಶ ವೀರೇಶ ಮತ್ಕೃತಿಗೆ ಕೊಡು ನಿರ್ವಿಘ್ನವಂ[1] ॥೩॥

†ವರಪುರಾಣಾಗಮ ವ್ಯಾಕರಣ ಛಂದಸ್ಸು
ಸುರುಚಿರಾಮ್ನಾಯ ಜ್ಯೋತಿಷ ಜ್ಞಾನದರುಶನಾ
ವರಣ [2]ಸಾ[2]ಲಂಕಾರಶಾಸ್ತ್ರ ಘನತರ್ಕ ಪರತತ್ವಾರ್ಥ ಶಿವಯೋಗದ ।
ಕರು ಬೊಮ್ಮಸಾಕಾರ ಪಂಚಾಕ್ಷರೀಮಂತ್ರ
ದೊರೆ ಮಹತ್ವಡೆದ ಸದ್ಗುರುಮೂರ್ತಿ ದೇಮಿದೇ
ವರ ಸತ್ಕೃಪಾತ್ಮಭವ ಸಿಂಗಿರಾಜಾಂಕ ನೆಗಳ್ದೀ ಕೃತಿ ಕೃತಾರ್ಥತೆಯೊಳು ॥೪॥

ಶರಧಿಯಂ ಪುರವ ನೃಪರಂ ನೃಪರ ತನುಜರಂ
ವರಮಂತ್ರಿಗಳ ಗಮನ ದ್ಯೂತ ಸಂಗ್ರಾಮಮಂ
ವಿರಹ ಪರಿಣಯ ಸುರತ ರವಿಶಶಿಗಳುದಯಾಸ್ತಮಯ [3]ಬೇಂಟೆ[3] ಶೈಲ ವನವ ।
ಪರಿವಿಡಿಯ[4]ಲಷ್ಟಾದಶಸ್ಥಲದ ವಾಕ್ಯ[4]ವಿ
ಸ್ತರವರ್ಣನೆಯ ಪಿರಿದುಮಾಳ್ಪ ಕೃತಿಯಲ್ಲವಿದು
ಹರಪುರಾಣೋಕ್ತ ಶರಣರ ಮಹಾಸೌತ್ತ್ಯಸಂಗ್ರಹ ರ[5]ತ್ನ[5]ಕೋಶವೆನಿಪ ॥೫॥

ಕವಿತೆಯಂ ಕಡಲಗೂಡ್ಯಡವಿಗೂಡ್ಯದ್ರಿಗಳ
ಗವಿಗೂಡಿ ಬೇಟೆಬೆಡಗುಗಳ ನಾಯ್ಗಳ ಬೆನ್ನ
ಭವ[6]ಬಡಿಸಿ[6] [7]ಜೂಜುಗಾಳೆಗಸ್ತ್ರೀವ್ಯಸನಕಿಕ್ಕಿ[7] ಮ[8]ಧು[8]ಕ್ರೀಡೆಯೊಳ್ಮ[9]ಗ್ನ[9]ಸಿ ।
ಕುವರರ ಕುಜಂತ್ರ ಪುರ ಬಿನುಗುದೈವದ ಕಥೆಗ
ಳವಿಚಾರ ಕೀರ್ತನೆ[10]ಗೆ[10] ಕೀಳ್ಗಳೆ[11]ಯದೊ[11]ಳುಮತಿಯ
ನವಶಬ್ದಮಾಲೆಯಂ ಬಸವ[12]ನುತಿ[12]ಸಾರಶರಣರ್ಗಾಂ ಸಮರ್ಪಿಸುವೆನು ॥೬॥

---

* ಭಜನಿಜಾವರಣವಾರಾಶಿರಕ್ಷಿತ ಹಿಮಾಂ । ಶಜನದೂಷಕಧೂಮ ಧ್ವಜದಕ್ಷಕಾನನೋ । . . . ಮತ್ಕೃತಿವಿಘ್ನವಿಚ್ಛೇದನ ॥ (ಜ).

† ವರಪುರಾಣಾಗಮಾಮ್ನಾಯ ಛಂದೋಕ್ತ ವ್ಯಾ । ಕರಣ ಪಾಂಡಿತ್ಯ ಜ್ಯೋತಿಜ್ಞಾನ ದರುಶನಾ । ವರಣಕಾವ್ಯಪ್ರೌಢಲಂಕಾರ ತರ್ಕ . . . . . ಶ್ರೀಗುರುಸ್ವಾಮಿದೇಮದೇವರಸರಕೃಪಾತ್ಮಭವ . . . ॥ (ಜ).

[1] ಘೋರೆವೀರೇಶ ಮತ್ಕೃತಿಗೆ ವಿಘ್ನವಿಚ್ಛೇದನ (ಖ.ಕ). [2] ವಿಮ (ಕ.ಖ.ಗ.ಛ). [3] ಕ್ರೀಡೆ (ಜ). [4] ಕಾವ್ಯಾಂಗಪದಿನೆಂಟುಸ್ಥಲದವಿ (ಜ). [5] ಕ್ಷ (ಕ.ಖ.ಗ.ಘ.ಛ). [6] ಬಟ್ಟು (ಘ). [7] ಜಿನಿಂಸತಿಬೆಸನನಿಕ್ಕಿ (ಕ.ಖ.ಗ.ಛ.ಘ). [8] ದ್ಯ (ಕ.ಖ.ಗ.ಛ.ಘ). [9] ಗ್ಗಿ (ಜ). [10] ಯ (ಕ.ಖ.ಘ.ಛ). [11] ದು ಒ (ಕ.ಖ.ಗ.ಛ.ಘ). [12] ನುನ್ನತಿ (ಖ), ಮತಿ (ಗ).

ಸದುಗುಣಪುರಾತನರು ವರಕವೀಶ್ವರರು ಶಿವ
ಪದಮಹೇಶ್ವರರೇಕಲಿಂಗನಿಷ್ಠಾಪರರು
ಸದಮಳರು ಸಾಹಿತ್ಯಶರಣ[1]ನಿಚ[1]ಯ ವ್ರತಾಧೀಶ[2]ರೆಲ್ಲರು ಲಾಲಿಸಿ[2] ।
ತೊದಲುನುಡಿಯಚುಯೆನೇತಚುೊಳೊಂದನಾ ನಿಮ್ಮ
ಪದದ ಬಲವಿಡಿದು ತೊಡಗಿದೆನೀ ಮಹಾಕೃತಿಯ
ಮುದದಿ ನವರಸಭರಿತವಾಗಿ ನಡೆಸುವೊಲೆನ್ನ ಮತಿಗೆ ಮಂಗಳವೀವುದು ॥೭॥

*ಬಲ್ಲೆ ನಾನಾಛಂದಲಕ್ಷಣಾಗಮಕಳೆಗ
ಳಲ್ಲ ಸಾಹಿತ್ಯದಲ್ಲೆಂಬ ವಚನಾರಂಭ
ಭುಲ್ಲವಣೆಯಾತ್ಮಸ್ತುತಿ [3]ಪರನಿಂದೆ ಬಹಳವಿಧದಿಂದ ಜನಮೋಹನಕ್ಕೆ[3] ।
ಹಲ್ಲುಬಾಯಾಯುಉ ಹಲವೆಣಿಕೆ ಭೂಷಣಬೋಧೆ
ಹೊಳ್ಳು[4]ವಾತುಗಳನೀ ಕೃತಿಮಹಾಸುಫಲದೊಳು
ಬೆಳ್ಳುಚೆಯಬೆಳಸೆನಾಂ ಸರ್ವಜ್ಞಸಭೆ ಚಿತ್ತವಿಪುದು ಮತ್ಕಾವ್ಯದೊಳುಪ[4] ॥೮॥

ಆವುದಂತಸ್ಥವೀ ಕೃತಿಮೂಲವೃತ್ತಾಂತ
ಸಾವಯವೆನಲು ಭರ್ಗನೆರಡನೆಯ ಮೂರ್ತಿ ವೃಷ
ಭಾವತಾರನು ಬಸವನಾಮದಿಂ ಜನಿಸಿ ಸದ್ಭಕ್ತಿಪಥ ತೋಱಿ ಜಗವ ।
ಪಾವನವ ಮಾಡಿ ಪರವೆರಸಿದ ಮಹಾರಹ
ಸ್ಯಾವಳಿಯ ಗಣಕುಲಕೆ ನಂದಿಮುಹಕಾಳರು
ದ್ರಾವರೇಣ್ಯನೊಡರ್ಚಿದೋಜೆ ಕಲ್ಪಿತರಸಾಯನಸಿದ್ಧಿ ಶರಣರ್ಗಿದು ॥೯॥

ಈ ಕಥಾಗರ್ಭಕಲ್ಪಿತವೆಂತೆನಲು ಬೊಮ್ಮ
ದಾಕರ್ಷಣ[5]ಂ[5] ಪ್ರಣವವಾ ಪ್ರಣವ[6]ಪ್ರಾ[6]ಪ್ತಿಯು ವಿ
ವೇಕ ಪಂಚಾಕ್ಷ[7]ರಾ[7] ಪಂಚಾಕ್ಷರಿಯ ಮಹೋನ್ನತಿ ವೇದವಾ ವೇದದ ।
[8]ಸಾ[8]ಕಾರ ಸ್ಮೃತಿಯಾ ಸ್ಮೃತೀತಿಹಾಸೋಪನಿಷ
ದ್ವಾಕ್ಯತಾತ್ಪರ್ಯ ಶಾಸ್ತ್ರಾಗಮಪುರಾಣ[9]ಂಗ[9]
ಳೇಕಾರ್ಥವಾದವಾದ್ಯರ ವಚನಸಿದ್ಧಿಸಾರೋದ್ಧಾರಶಾಸನವಿದು ॥೧೦॥

---

* ಬಲ್ಲೆನೆಲ್ಲಾಗಮವ ಛಂದಲಕ್ಷಣಕಳೆಗ । ಳಲ್ಲಿ ಸಾಹಿತ್ಯರೆಂದೆನಿಪ ವಚನಾರಂಭ। ಭುಲ್ಲವಣೆಯಾತ್ಮಸ್ತುತಿಪರನಿಂದೆಯಂ ಮಾಡಿ ಬಹುದೋಷದಿಂಜನನಕೆ ॥ ಹಲ್ಲು ಬಾಯಾಱು ಹಲವೆಣಿಕೆಭೂಷಣಬೋಧೆ ಹೊಳ್ಳುಗಳೆವತಿ ಹೋರಟೆಯ ಮಹಾಸುಫಲದೊಳು । ಬೆಳ್ಳುಜಯ ಬೆಳಗೆ ನಾಂ ಸರ್ವಜ್ಞಸಭೆ ಚಿತ್ತವಿಪುದು ಮತ್ಕಾವ್ಯದೊಲವ ॥ (ಗ.ಕ.ಛ.ಖ).

[1] ಸಂಕುಲ (ಜ). [2] ರುನ್ನತ ವೇಶರು (ಜ). [3] ಅನ್ಯನಿಂದೆಯಶಬ್ದಮಂಜರಿಯ ರಂಜನಕ್ಕೆ (ಜ). [4] ಮಾತೆಂಬಬೆಳ್ರುಚಿಯಕಸವಲ್ಲ ಸಲ್ಲಲಿತಕೃತಿಮಹಾಸುಫಲದೊಳು ಸರ್ವಜ್ಞಚಿತ್ತರೊಲಿದಾಲಿಸುವುದು (ಕ.ಖ), ...ಬೆಳ್ಳುಬೆಯ ಬೆಳಸೆನಾಂ . . . (ಗ), ಬೆಳ್ಳುಜಯುಬೆಳಗೆನಾಂ (ಛ). [5] ವೆ (ಜ). [6] ವ್ಯಾ (ಜ). [7] ರಿಯು (ಜ). [8] ಸ್ವೀ (ಕ.ಖ.ಗ.ಜ). [9] ಕೇ (ಜ).

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪ[1]ದಿ[1]ಗಳಿಂ ಸಿಂಗಿರಾಜಾಂಕನೆನಲದೆಂತೊ ॥೧೧॥

ಜಲಧಿಜಲಯೂಥದಿಂ ಭಂಗ ಭಂಗವ್ರಜದಿ
ಬಳಲಹರಿ ಲಹರೀವಿತಾನದಿಂದಾವರ್ತ
ಕುಳದಿನಾವರ್ತದಿಂ ಫೇನ ಫೇನಪ್ರಕರದಿಂ ಬುದ್ಬುದಂ ಬುದ್ಬುದಾ ।
ವಳಿಯಿಂದ ಘೋಷ ಘೋಷಸ್ಸಮಾಜದಿಗಮ್ಯ
ಘುಳುಘುಳುಧ್ವಾನನಿಕರಂಗಳಿಂ ಪ್ರಕಟಿಸುತ
ಬೆಳೆವುತಂ[2]ಪೃಷತ[2] ಕಂಪಿಸುತ ಘೂರ್ಮಿಸುತ ಭೀಕರದಿ ವನನಿಧಿ
ಮೆಱೆದುದು ॥೧೨॥

ನಕ್ರದಿಂದವಹಾರದಿಂ ಕಮಠದಿಂ ಕದುಳಿ
ಚಕ್ರದಿಂ ತಿಮಿ ತಿಮಿಂಗಿಲ ಪ್ರೋಷ್ಠದಿಂ ಕುಳಿರ
ವಕ್ರದಿಂ ಮದ್ಗುರವಮಕರದಿಂ ಕರಿಮಕರದಿಂ ಜಳೂಕದಿ ಪುಷ್ಕರ ।
ಚಕ್ರನಿಚಯದಿ ಶಾಲಿಹೋತ್ರಕುಲದಿಂ ದ್ವಿರದ
ಚಕ್ರವಾಳದಿ ಕರಭದಿಂ ಕದಂಬಕ ಜೀವ
ವಿಕ್ರಮದಿ ಮನುಜಸಂಚಯದಿ ಪೆಂಪೊಗೆದು ವಾರಾಶಿ ಕಣ್ಗೆಸೆದಿರ್ದುದು ॥೧೩॥

ಕಂಬು ಶಂಬೂಕ ಮೌಕ್ತಿಕ ಶುಕ್ತಿಕಾಸ್ಫೋಟ
ಡಂಬರ ಕಪರ್ದ ರತ್ನಪ್ರಕರ ಸೈಕತ ಕ
ದಂಬದಿಂ ಪಳುಕಿನಿಂ ಕಲಧೌತಶೈವಾಲ [3]ಗ್ರಾಹದಿಂ ಬಹುಲವಾದ[3] ।
[4]ಅಂಬುವಿಂ[4]ದಂಬುಧಿಪ್ರವಾಹ ಕಲ್ಲೋಲಮಥ
ನಂಬೆರಸು ಡಿಂಡಿರೋತ್ಕಟ ಗಂಡಶೈಲಾಗ್ರ
ಜಂಬಾಲ ಮಸಗೆ ಮೇಘಾಕಂಪದೊಲ್ಜಲೋಚ್ಛ್ವಾಸನಿಸ್ವನ ಮೆಱೆದುದು ॥೧೪॥

ಪವಳ ಪಂಕಜ ಲತಾಪತ್ರ ಕದಳೀ ತಮಾ
ಲವಶೋಕ ಬರ್ಬರಂ ಪಲಸು ಚಂದನ ಯೂ[5]ಥ[5]
ಧವಳಾಂಗ ಕಕುಭ ಕಂದರ್ಪ ಕಾಮುರ್ಕ ಚೂತ ದಾಡಿಮಂ ಶೋಭೆವೆತ್ತ ।

---

[1] ದ (ಜ). [2] ವೃಷತ (ಘ), ನಲದಿಂ (ಕ), ನಲವಿನಿಂ (ಖ). [3] ವಾಲದಿಂಗ್ರಾವಂನಿಕು (ಗ.ಖ). [4] ರುಂಬದಿಂ (ಗ.ಖ). [5] ಥಿ (ಘ).

ನವಪೂಗ ಗ್ರಂಥಿಫಲ ತ್ರಿದಶ[1]ತರು ದ್ರಾಕ್ಷಂ ಕು[1]
ರವಕ ಖರ್ಜೂರ ಚಂಪಕ ಲವಂಗಂ ಲುಂಗ
ನಿವಹದಿಂ ಕೂಲದೇಶಂಗಳಿಂ ವೇಳಾವನಂಗಳಿಂದಬ್ಧಿ ಮೆಱೆಯೆ ॥೧೫॥

ಅರ್ಣವತರಂಗಭಂಗಿಯೊಳ್[2]ಗ[2]ರ್ಘ್ಯಂಗಳಂ
ಪೂರ್ಣೇಂದುವಿಂಗೀಯಲೆಂದು ಬೆಳೆಯಿತೊ ತ
ತ್ಸೂನುವನ[3]ಹಿ[3] ಗ್ರಹಿಸ[4] ಲಟ್ಟಿದಾಳೆನೆ ಫೇನ[4] ಮುಟ್ಟುವವು ಶಶಿಬಿಂಬವ ।
ಏನೆಂಬೆನಬ್ಜನೈಶ್ವರ್ಯಮಂ ಈಕ್ಷಿಪನು
ಮಾನದಿಂದಬ್ಧಿಪಲವಕ್ಷಿಯಂ ತಾಳ್ದನೋ
ತಾನೆನಲ್ಕಮಲಮೀನ್ಗಳು ಮಿಳಿರ್ದು ಹೊಳೆದವಾ ವಾರಿಧಿತರಂಗದೊಳಗೆ ॥೧೬॥

ಆ ವನಧಿ ಪರಿವೇಷ್ಟಿಸಿಹ ಭೂಮಿಮಧ್ಯದೊ
ಳ್ಭಾವಿಸಲ್ಮೆಱೆವ ಮೇರುವಿ[5]ನಗ್ರದಲಿ ರಜತ[5]
ಗ್ರಾವ ರಂಜಿಪುದು ಮಂಗಳದಮಯವೆನೆ ಶೋಭಿಸುತ್ತಿಹುದದೆಂತೆಂದೆನೆ ।
ಏವೇಳ್ವೆ ಕರ್ಮಸಾಕ್ಷಿಯ ಮರೀಚಿಯ ದಳದ
ಗಾವಳಿಯೊ ರೋಹಿಣೀವಲ್ಲಭನು ವಾಹನವ
ದೂವಳಿಸುತನುವಿಲ್ಲದುರುಳ್ದನೆನೆ ಥಕಥಕಿತಮಾನದಿಂ ಥಳಥಳಿಸುತ ॥೧೭॥

ಎಸೆಯುವ ನಗೇಂದ್ರದಗ್ರದಲಿ ಶಿವನೋಲಗದ
ವಸಥಕ್ಕೆ ಪಾದಶಿಲೆ ಪರುಷ ಪಳುಕಿನಭಿತ್ತಿ
ಮಿಸುನಿ [6]ವೈಸಿಕ[6]ಕೆ ವಜ್ರದ ಕಂಭ ಮಾಣಿಕದ ಗಡಗು ಬೋದಿಗೆ ಪವಳದ ।
ಮಿಸುಪ ತೊಲೆ ನೀಲದ ಕಪೋತವಡಸಿದ ಕಂಟು
ಲಸಿತ ಮರಕತಮಧ್ಯವಟ್ಟಿಗೆಯ ಕಲಧೌತ
ವಿಸರದೊಳು ಜಂತೆ ಶಶಿಸೂರ್ಯಕಾಂತದ ಭದ್ರರತ್ನಕಲಶಂಗಳೆಸೆಯೆ ॥೧೮॥

ವಿಪುಳಮಣಿಮಯಮಹಾಮಂಟಪದ ಮಧ್ಯದ
ಲ್ಲಪುನರ್ಭವಾದಿಪರಶಕ್ತ್ಯಖಿಳ ಸಿದ್ಧಿಗಳ
ನಿಪುಣ ನಿಜಸಾಕಾರ ಸತ್ಕಲಾಲಾಪಸಾರೋದ್ಧಾರ ರೂಪುವಡೆದ ।
ಉಪಯೋಗ ಯೋಗಪ್ರಭಾ[7]ಪ್ರಕಟ[7] ಪ್ರಜ್ವಲಿತ
ಪ್ರಪದಪ್ರಸನ್ನಸಿಂಹಾಸನವು ವೇದಾಂತ
ದುಪಮೆಗುಪಮಾತೀತವೆನಲಾವ ಪೊಗಳ್ವ ದಿವ್ಯಜ್ಞಾನದೀಪಕವನು ॥೧೯॥

---

[1] ಶತರುದ್ರಾಕ್ಷಕು (ಕ.ಖ). [2] ನ (ಕ.ಖ.ಗ.ಘ.ಛ). [3] ವ (ಕ.ಗ.ಖ.ಘ.ಛ). [4] ಲಟ್ಟಿದಳೆನಲ್ಫೇನ (ಕ.ಖ), ಲಟ್ಟಾದಳೆನೆ (ಗ), ಲಟ್ಟಿದೊಳ್ಳೆನೆಫೇನ (ಜ) [5] ನಗ್ರದಿಂ ರಜತ (ಗ.ಕ.ಖ), ನಗ್ರದಲಿ ರಾಜಿತ (ಘ), ನುತ್ತರದಿ ರಜತ (ಜ). [6] ಬೈಸುಕಿ (ಜ). [7] ಪಟಲ (ಖ.ಛ).

ಆ ದಿವ್ಯ ಸಿಂಹವಿಷ್ಟರದಗ್ರದಲಿ ಬ್ರಹ್ಮ
ವಾದ ನಿಲುಕದ ಪರಬ್ರಹ್ಮ ಪ್ರಣಮಸ್ವರೂ
ಪಾದ ನಿಷ್ಕಳತತ್ವ ಕಳೆದೋಱು ಶ್ರೀಮನ್ಮಹಾದೇವ ಮೂರ್ತಿವಡೆದ ।
ಭೇದಪಂಚಾಸ್ಯ ದಶಬಾಹು ತ್ರಿಣೇತ್ರ ದ್ವಿ
ಪಾದ ಛಂದೋಋಷಿಗಳಧಿದೈವ ಸ್ವರಬಿಂದು
ವೇದಬೀಜಾಕ್ಷರೀ ವರ್ಣಾಧಿಕ ತತ್ವಸಂಯುತ ಸದಾಶಿವನೆಸೆದನು ॥೨೦॥

ಮಂಡಿತಕಪಿಲಜಟಾಮೌಳಿ ತುಱುಗಿದ ವಿಮಲ
ಖಂಡೇಂದುದೀರ್ಘಿಕಾಶೇಖರ ವಿರಾಜಿಪಹಿ
ಕುಂಡಲದ ಮಿಱುಪನೇತ್ರತ್ರಯದ ತೊಳಪ ಗಂಡಸ್ಥಲಾಧರದ ತರಣಿ ।
ಮಂಡಲಪ್ರ[1]ಭಾ[1]ದಶನ ದರಹಸಿತವದನ ಪ್ರ
ಚಂಡಗರಳಗ್ರೀವ ದಶಭುಜೋರುಸ್ಥಲದ
ಕುಂಡ[2]ಲೀ[2]ಹಾರದ್ವಿಪಾಜಿನವಸನದಖಿಲಪದದೀಶಮೂರ್ತಿಯೊಲಿದು ॥೨೧॥

ಲೀಲೆಯಿಂದಾ ಭದ್ರಸಿಂಹವಿಷ್ಟರದಿನೊ
ಡ್ಡೋಲಗಂಗೊಟ್ಟು ಕುಳ್ಳಿರ್ದು ಪರಶಕ್ತಿಯ ಸ
ಮೇಳದಿಂ ಸ್ಕಂದ ನಂದೀಶ್ವರ ಗಣಾಧೀಶ ವೀರಭದ್ರ ಪ್ರಮುಖರ ।
ಸಾಲುಸಂಗಡದ ರುದ್ರಾ[3]ಳಿ[3]ಗಳ ತ್ರೈಜಗ
ತ್ಪಾಲಸಂಖ್ಯಾತಪುರಾತನಮಾಹೇಶ
ಜಾಲ ಸಾನಂದಾದಿ ಸಾವಿರಾಪ್ಯರೊಗ್ಗಿನಿಂ ಬಳಸಿರ್ದುದುಮೆವರನನು ॥೨೨॥

ಶೂಲಿ[4]ಸ್ರಷ್ಟ[4]ನು ಭದ್ರ ಶಂಭುರೀಶಾನನು ಕ
ಪಾಲಿ ಸರ್ವಜ್ಞ ಭೀಮೋಗ್ರನು ಕಪರ್ದಿ ತಾ
ನೀಲ ರುದ್ರೇಕಾದಶ ಪ್ರಮುಖರಿವರು ಶತರುದ್ರರಿಂ [5]ಸಹಿತ[5] ಗಂಗ ।
ವಾಳುಕ ಸಮಾನರುದ್ರ [6]ಭೃ[6]ಂಗಿ ಪ್ರಮಥಾದ್ಯ
ರೊಳಗಸಂಖ್ಯಾತ ಸಾಲೋಕ್ಯ ಸಾಯುಜ್ಯರ ಸ
ಮೇಳದಿ ಮಹತ್ವಡೆದ ಮಹಿಮಾವಲಂಬರೊಪ್ಪಿರ್ದರೀಶನ ಸಭೆಯೊಳು ॥೨೩॥

ಘೋಷಿಸುವ ವೇದಮುಪ್ಪುಡಿಪ ವೇದಾಂತ ಸಂ
ಭಾಷಿಸುವ ಶಾಸ್ತ್ರ ಸತ್ಕಥಿತ ಪೌರಾಣ ವಿ
ಶ್ವಾಸಿಸುವ ಮಂತ್ರ ಧ್ಯಾನಿಸುವ ಗಾಯತ್ರಿ ವಂದಿಸುವ ಸಂಧ್ಯಾದೇವತೆ ।

---

[1] ಶಾ (ಕ.ಖ.ಗ.ಘ). [2] ಲಾ (ಕ.ಖ.ಘ). [3] ಧಿ (ಕ.ಖ.ಜ.ಥ). [4] ಶ್ರೇಷ್ಠ (ಕ.ಜ). [5] ಸಹಸ್ರ (ಜ). [6] ಭೃ (ಕ.ಖ.ಗ).

ವಾಸಿವಾಕ್ಯದ ತರ್ಕ ಸತ್ಪಥವ ಸಾಱುವ ವಿ
ಶೇಷಾಗಮಾದಿ ನಿಜವಱಿವ ದರ್ಶನಯೋಗ
ವೀಶನಮಹತ್ವತೆಯ ಕೀರ್ತಿಸುವ ಚಂಡಕೀರ್ತಿಗಳ ಕಳಕಳವೆಸೆದುದು ॥೨೪॥

ಗರುಡ ಗಂಧರ್ವರಪ್ಸರರೆಕ್ಷ ಸಿದ್ಧ ಕಿ
ನ್ನರ ಮಯೂರೋರಗ ಪಿಶಾಚ ಗುಹ್ಯಕರು ಕಿಂ
ಪುರುಷ ವಿದ್ಯಾಧರರು ಖಚರರೆಕ್ಷಾಧೀಶರೊಗ್ಗಿನೊಯ್ಯಾರವಿಡಿದು ।
ಉರುಚಂಡನಸಿತಾಂಗ ಕ್ರೋಧನುನ್ಮತ್ತ ಭೀ
ಕರ ಕಾಲದಂಡ ಭೀಷಣ ನಾಗರೆಂದಷ್ಟ
ತರಭೈರವರ್ಸಮೇತಸುರರಿಪು ಉಮೆವರನ ವಾಮಾಂಕದೊಳ್ಮೆಱೆದನು ॥೨೫॥

ಪರಮಹಂಸರು ಹಂಸಯೋಗಿಗಳು ಬೊಮ್ಮದಾ
ಚರಣೆಯಾತ್ಮಜ್ಞಾನಶಾಂತಿಬೋಧಕರೆತೀ
ಶ್ವರವ್ರತಪರಾಯಣವಿಶಿಷ್ಟಕರ್ಮಣ್ಯಕಾರಣಶ್ರೌತಿಯರ್ಶುಟಿಗಳು ।
ವರಬ್ರಾಹ್ಮಿ ವಾರಾಹಿ ಕೌಮಾರಿಯರ್ಮಹೇ
ಶ್ವರಿಯು ಮಾಹೇಂದ್ರಿ ಚಾಮುಂಡಿ ವೈಷ್ಣವಿಯರೆಂ
ಬುರುಸಪ್ತಮಾತೃಕ ಸಪರಿವಾರಸಹ ಬ್ರಹ್ಮಬಲದೋಲಗದೊಳೆಸೆದ[1]ನು[1] ॥೨೬॥

ಭೃಗು ದಕ್ಷ ಕಪಿಲತ್ರಿಯಾಂಗಿರಸ ಕಶ್ಯಪನು
ನೆಗಳ್ದ ಮರೀಚಿ ನಾರದನು ಪೌಲಸ್ತ್ಯರಿವ
ರುಗಳು ನವಬ್ರಹ್ಮರಿವರೊತ್ತಿನಲಗಸ್ತ್ಯ ವಾಸಿಷ್ಠ ಭಾರದ್ವಾಜರು ।
ಮಿಗೆ ಗೌತಮಾಂಕ ಕಶ್ಯಪನು ವಿಶ್ವಾಮಿತ್ರ
ಸೊಗಯಿಸುವ ಕೌಂಡಿಲ್ಯ ಸಪ್ತಋಷಿಯರ್ಕಳಿಂ
ತಗಣಿತಮಹಾಮಹಿಮರೋಳಿಯಿಂದೊಪ್ಪಿರ್ದರಭವನೊಡ್ಡೋಲಗದೊಳು ॥೨೭॥

ವ್ಯಾಸ ಪುರುಹೂತ ಕೌಶಿಕ ಜಹ್ನು ಜಮದಗ್ನಿ
ಯಾಸುರಿ ಮತಂಗ ಶೌಂಡಿಲ್ಯ ಸನಕ ಸಹೂತಿ
ಮಾಶ ಶುಕ ಕಣ್ವ ಶತಮನ್ಯು ಮುದ್ಗಲ ವಾಲ್ಮಕಿ ಗಾರ್ಗ್ಯ ಕುತ್ಸ ವತ್ಸ ।
ಕೌಶಲ ಮೃಕಂಡು ಸಾಂಖ್ಯನು ಋಷ್ಯಶೃಂಗ ದೂ
ರ್ವಾಸೋಪಮನ್ಯು ದೇವಲ ಸನಂದನಋಷಿಯ
ಶೇಷವಿರ್ದತ್ತು ವಿಶ್ವಾಧಿಕಮಹಾಋಷಿಯ ಬಳಸಿದೊಡ್ಡೋಲಗದಲಿ ॥೨೮॥

---

[1] ರು (ಖ.ಕ).

ಪರಮಸ್ವಯಂಭುವ ಸ್ವಾರೋಚಿಯುತ್ತಮಂ
ತರದಿ ತಾಮಸ[1]ರೈವತಂ ಚಕ್ಷು[1]ಸಾದಿಗಳ
ಪರಿವಿಡಿಯ ವೈವಸ್ವತಂ ಸೂರ್ಯನಗ್ನಿ ಬ್ರಹ್ಮಂ ದಕ್ಷಜಾತರಿವರ ।
ತಱುವಾಯ ಶಾತಾತಪಃ ಪರಾಶರ ಗಾಲ
ವರ ಚತುರ್ದಶಮನುಗಳಪ್ರತಿಮ ಮುಕ್ತಿಗೋ
ಚರಪುರುಷರಾರ್ಯರೀಶ್ವರನುಭಯವಳಯದೊಳ್ಬಳಸಿ ಮೆಱೆವುತ್ತಿರ್ದರ ॥೨೮॥

ಆದಿಯಾದಿತ್ಯ ಸವಿತಂ ಸೂರಿಯಂ ಪೂಷ
ಮೇದಿನಿಸುಮಿತ್ರನು [2]ತಮೋಘ್ನಂ ಹಿಮಘ್ನ[2]ರುಣ
ನಾದನದಱಿಂ ಭಾನುಮಾರ್ತಾಂಡನುಂ ಪ್ರಭಾಕರ ದಿವಾಕರದ್ವಾದಶ ।
ಆದಿತ್ಯರಿಂತು ಬಳಿಕಾದಿತ್ಯ ಶಶಿ ವಕ್ರ
[3]ಭೇದಿ ಸದ್ಬುಧ ಗುರುವು ಕಾವ್ಯ ಭಾನುಜ ರಾಹು[3]
[4]ವೇದಸಂ[4] ಭವ ನವಗ್ರಹಗಣಂಗಳು ಶಿವನ ಬಲದೋಲಗದೊಳೆಸೆದರು ॥

ಧರ ಧ್ರುವನು ಸೋಮನಾಪನು ನಳಂ ನೀಳನಂ
ತರದಿ ಪ್ರತ್ಯೂಷ ಪ್ರಭಾವರ್ಗಳೆನಿಪಷ್ಟ
ವರ[5]ವಸುವೆರಸಿಯನಂತನು ಕುಳಿಕ ಪದ್ಮ ತಕ್ಷಕ ನುಂಕ ಕರ್ಕೋಟಕ[5] ।
ಉರುಮಹಾಪದ್ಮ ವಾಸುಕಿಯೆನಿಪ್ಪೆಂಟು ಕುಲ
ದುರಗೇಂದ್ರರಿವರಿಂದ್ರನಗ್ನಿಯಮನಿಋತಿಗಳು
ವರುಣ ವಾಯು ಕುಬೇರರೀಶಪ್ರಮು[6]ಖರಷ್ಟ[6]ಪಾಲರೊಗ್ಗಿನೊಳಿರ್ದರು ॥೩೦॥

ನಿತ್ಯವರ್ಣಿನಿ ನಿರಾಲಂಬಿ ಕಾಳಿಂದಿ ಹರಿ
ಚಿತ್ರಸಂಹಾರಿ ಪೂಷಣಿ ವೀರಮುಷ್ಟಿ ಶಶಿ
ಚಿತ್ರಿಣಿ ಸುಶಂಕರಿ ವರಾಹಿ ವರ್ಣಿನಿ ವ್ಯಾಘ್ರವಾಹಿನಿ ಮಕರಿ ಭೀಷಣಿ ।
ಸತ್ಯಲೋಚನೆ ಘೋರಿ ಘೋಳಂಗಿ ಕುಂಠಣಿ ಸು
ಚಿತ್ರವಾಣಿಯು ಸಹೋದರಿ ಕುಶಲಿ ಕಾಮುಕಿ ನಿ
ಪಾತ್ರಿಣಿ ಪವಿತ್ರಿಣಿ ಕಪಾಲಿ ಪೋಷಕಿ ಗಹಕಿ ರಮಣಿ ರೂಪಾಕ್ಷಿ ರುದ್ರಿ ॥೩೧॥

ನೀಲವರ್ಣಿನಿ ನಿಶಾಚರಿ ಭೂತವಾಹಿನಿ ವಿ
ಶಾಲ ವೇತಾಳಿ ಬ್ರಹ್ಮಾಣಿ ಗೋಚರಿ ಕ್ರೌಂಚಿ
ನೀಲಕಂಠಿ ಕಿರೀಟಿ ಕಂಟಕಿ ತ್ರಿಪುರಿ ದಿವಾಕರಿ ಚಕ್ರಧಾರಿ ಕುಹಕಿ ।

---

[1] ಶ್ರೈವತಂ ಇಕ್ಷು (ಫ). ರೈವತನ್ನಿಕ್ಷು (ಕ.ಖ.ಗ.ಛ). [2] ತಮಘ್ನಂ ಹಿಮೋಘ (ಕ.ಖ.ಗ.ಛ.ಫ). [3] ಸಾದರಬುಧ ಗುರುಜಶನ್ಯೈಶ್ವತರಾಹು (ಫ). [4] ಮೇದಿನೀ (?) [5] ವಸುಸಹಿತನಂತಂಕು ಳಿತಪದ್ಮ ತಕ್ಷಕಂಕಕರ್ಕೋಟ ಶಂಖಪಾಳ (ಫ). [6] ಖಕಾಷ್ಟ (ಗ) ಖರೋಕ (ಫ.ಜ), ಖಾಷ್ಟ (ಕ. ಛ).

ಕಾಳಿಂದಿ ಸೀಮಕೋದಂಡಿ ಕುಂಡಲಿ ದಂಡಿ
ಸಾಳಂಗಿ ಚಕ್ರಗ್ರಾಹಿಣಿ ದೀರ್ಘದೇಹಿ ರಂ
ಭಾಳಂಕರಿಯು ಭೌಮಿ ಕೋಕಿಲೆ ಭವಾನೇತ್ರೆ ಶಾಮಾಂಗಿ ಗಜಮೋಹಿನಿ ॥೩೩॥

ಮುಂಡವಾಹಿನಿ ಶೂನ್ಯಕಾಯೆ ವಾಮಾಂಗಿ ಜಯೆ
ಪಿಂ[1]ಡಿಕೆ[1] ವಿಚಾರೆ ಭೂತಾಂಗಿ ಜಾನಕಿ ಭೇದಿ
ಗಂಡಕಿ ಕುಸುಮಗಂಧಿ ಭೂಷಣಿ ಗುಣಾಕಾರಿ ಗಾರುಡಿ ವಿಮುಕ್ತಕೇಶಿ ।
ದಂಡಧರಿ ನಿರ್ವಾಣಿ ನೀಲಲೋಚನೆ ಕೀರ್ತಿ
ಚಂಡೆ ಚಕ್ಷುಷೆ ಗೋತ್ರಪಾಣಿ ಕುಂಜರಿ ಪೂರ್ವ
ದಂಡಿ ಚೌರಂಗಿ ಬೋಧಕಿ ಪ್ರೇತವಾಹಿನಿ ಮಹೇಶ್ವರೂರ್ವಸಿ ಮೇನಕಿ ॥೩೪॥

ಶಾಮಿ ಸರ್ವಜ್ಞೆ ಕುಂಡಲಿ ಪ್ರತಿಜಣಾದ್ರಿ ಕರಿ
ಸೋಮಶೇಖರಿ ಧರ್ಮಿ ಗೀರ್ವಾಣಿ ಸಿದ್ಧಾಂಗಿ
ವಾಮಕರಿ ಜಲದಾಂಕಿ ನರವಾಹಿನಿಯು ಜಾತವೇದಿ ಚಿತ್ರಿನಿ ಕಂಧಿನಿ ।
ಕೋಮಲಕುಮಾರಿ ಮೋದಕಿ ವರ್ಣೆ ಪ್ರತ್ಯಾಂಗಿ
ವಾಮಕಂದರ್ಪಿಯರ್ವಿವಿಧ ವಿನಿಯೋಗದಾ
ಸ್ತೋಮದ ತಿಲೋತ್ತಮೆಯರೆನಿಪ ದೇವಾಂಗನೆಯರಿರ್ದರೀಶನ ಸಭೆಯೊಳು
[॥೩೫॥

ಅತಿಶಯದ ಶಬ್ದಸಾಹತದೋರ್ಪ ಮುರುಜ ಸಂ
ಶ್ರುತಿಗೊಡುವ ಕಹಳೆಯಾಳಾಪಿಸುವ ರಾಗರಸ
ಗತಿ[2]ಗ[2]ಚಿವ ತಾಳದುಪ್ಪುಡಿಪ ಮೇಳವಣೆ ಒಡ್ಡೈಪ ಮೋಹನ ನೃತ್ಯಕೆ ।
ನುತಶುದ್ಧಶೃಂಗಾರ ವೀರ ಕರುಣಂ ಭಯಾ
ದ್ಭುತಹಾಸ್ಯ ಭೀಭತ್ಸರೌದ್ರ ಶಾಂತಂಗಳಿಂ
ತತ ವಿತತ ಘನ ಸುಷಿರ [3]ತ[3]ತ್ಕಳಾಂಗದಿ ಭೃಂಗಿನಾಥ ರಂಗದೊಳೊಪ್ಪಿರೆ ॥೩೬॥

ಲಾಲಿಸುತಲಖಿಳ ಸುಖಸಂಪದುತ್ತರ ಪರಮು
ಲೀಲೆಯಿಂ[4][ದಿರಲು[4]] ಮಾವರನು ದಿವಿಜಾಳಿಗಳ
ಪಾಲಿಸುತಿರಲ್ಕೆಯಂತಾಸಮಯದೊಳು ಬಸವರಾಜ ಭೂವಳಯದಲ್ಲಿ ।
ಫಾಳಾಕ್ಷನಪರಾವತಾರ ತಾಂ ಸದ್ಗತಿಸ
ಮೇಳಗಳ ಭಕ್ತರ್ಗೆ ತೋರಿ ಬಂದಾ ಶಿವನ
ಓಲಗದ ಮುಂದೆ ಪುಷ್ಪಕವನಿಳಿದಾಕಥಾವೃತ್ತಾಂತಮಂ ಪೇಳ್ವೆನು ॥೩೭॥

---

[1] ಪಿಂಡಕೆ (ಗ), ಪಿಂಡತೆ (ಕ.ಖ.ಘ). [2] ಕ. (ಗ). [3] ಸ. (ಜ). [4] ದೆಶೆ ಉ (ಜ.ಛ), ದಿಶೆ ಉ (ಕ.ಖ.ಘ).

ರಾಜಶೇಖರವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತಿವಿ
ರಾಜಿತಕಥಾಮೃತಾರ್ಣವದೊಳಿದು ಶಿವನ ವಿ
ಭ್ರಾಜಿತೋಲಗದ ವಿಸ್ತರವರ್ಣನಾಸಂಧಿ ಶಿವಮಸ್ತು ಸಿದ್ಧಿರಸ್ತು ॥೩೮॥

ಎರಡನೆಯ ಸಂಧಿ

ಸೂಚನೆ—

ಕ್ಷಿತಿಯೊಳವತರಿಸಿ ಭಕ್ತಿಪ್ರಭಾಪಟಲಸದು
ಗತಿಯ ಸರ್ವರ್ಗರುಪಿ ಬಸವೇಶ ಜ್ಞಾನದು
ನ್ನತಪುಷ್ಪಕದಿ ಬಂದ ಪೂರ್ವವೃತ್ತಾಂತಮಂ ನಂದಿ ಪ್ರಮಥರ್ಗೊರೆದನು ।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಇಂತೀಶನೋಲಗದಮೃತವಾರ್ಧಿಲಹರಿಚ
ಕ್ರಂ ತುಳುಕೆ ಚಕ್ರಿಶಕ್ರಜಮುಖ್ಯನೇಕ ಪದ
ಸಂತತಿ ಮಹಾಪ್ರಮಥ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯರು ।
ಮಂತಣಂಗೊಂಡು ಪರಮಪ್ರಭಾವ[1]ದ[1] ರಸದ
ತಿಂತಿಣಿಯೊಳೋಲಾಡುತಿರಲು ಬಸವೇಶ ಸ್ವ
ತಂತ್ರಸುಜ್ಞಾನಪುಷ್ಪಕದಿ ಬಂದಾ ಸಭಾದ್ವಾರಾಂತರದೊಳಿಳಿಯಲು ॥೨॥

ಅದು ದಿವ್ಯಜ್ಞಾನಪ್ರಜ್ವಲಿತದೀಪಾಕಾರ
ವದು ಪರಬ್ರಹ್ಮರೂಪಾಕಾರದಾಕಾರ
ವದು ನಿರ್ಮ[2]ಲ[2]ದನಿತ್ಯಪದಪುಂಜರಂಜಿತ[3]ಕುಲಾಂತ[3]ಕಲಶಾಕಾರ[4]ವು[4] ।
ಅದು ಚಿನ್ಮಹದ್ಘನಸ್ವಯಂಪ್ರಕಾಶಿತಭಾವ
ದುದಯ ಜ್ಯೋತಿರ್ವರ್ಣರೂಪಕನಿರಾಕಾರ
ದೊದವಿನ ನಿಜದ ನಿರಂಜನಸುಪುಷ್ಪಕದೊಳಾ ನಿರ್ದೇಹಮೂರ್ತಿಯಿರಲು ॥೩॥

ಕಂಡು ಕಣ್ಮನಕಗೋಚರವಾಗಿರಲು ದ್ವಾರ
ದಂಡನಾಯಕರು ವಿಸ್ಮಿತದ ಘನತರವಿದೇಂ
ಕಂಡುದಿಲ್ಲಾವ ಮಹಿಮಾವಲಂಬರೊಳಾದ್ಯ[5]ನಾದ್ಯಂತರ[5]ಂತರದೊಳು ।

---

[1] ದಿ (ಖ.ಘ), ದಿಂ (ಕ). [2] ಯ (ಘ). [3] ಕಲಾಂತ್ಯ (ಕ.ಖ.ಗ.ಥ), [4] ದ (ಕ. ಖ. ಥ. ಗ). [5] ನೋ ಅಂತರಂ (ಘ).

ಖಂಡಿತಕಳಾಂಗಪುಷ್ಪಕವ ಶಿವಗಣವರರು
ಕೊಂಡುಬಹರಂತಲ್ಲವಿದು ಕ್ರಿಯಾದ್ವೈತದು
ದ್ದಂಡತರಪರಿಪೂರ್ಣಭಾವವಂ ತತ್ವಜ್ಞ ನಂದೀಶ ಬಲ್ಲನೆನುತ ॥೪॥

ಪರಿದು ದ್ವಾರಾಧಿಪರು ನಂದೀಶರುದ್ರಗಾ
ಪರಿಪೇಳಲೈತಂದು ಬಸವೇಶನೆಂದಱುದು
ಹರುಷದಿಂ ಕೇಳ್ದನೆಂತಾಯ್ತು ಶುದ್ಧತ್ವ ನಿನಗೆನಲು ತನ್ನಯ ಹೃದಯವ ।
ಪಗಮಪ್ರಜ್ವಲಿತ ಪ್ರಭಾ ಪ್ರಭಾವಿಸಲೆರಡು
ಕರದಿಂ ಬಗಿದು ತೋಱಲಮೃತಲಿಂಗದೊಳಖಿಳ
ವರಮಹೇಶ್ವರ ರುದ್ರ ಪ್ರಮಥರಾದ್ಯ[1]ರ[1]ಭುವನಭವನವಿದೆಯಿದೆಯೆನುತ್ತ ॥೫॥

ಜ್ಯೋತಿರ್ಜ್ವಲನಮೂರ್ತಿ ಲಿಂಗವಾದಿಯಹಸ್ತ
ಕೋತುಬಂದಾದಿಸಹನಾದಿಯಂ ಕೈವಿಡಿದ
ತೀತನ ಕರಸ್ಥಲಕ್ಕೈದುತೀತಂಸಹ ಮಹಾತೀತನಂಗಬೊಕ್ಕು ।
ಆ ತನುವೆರಸಿ ಸದಾಶಿವನ ಕೈ[2]ಗೈದಿ ವಿ[2]
[3]ಖ್ಯಾತ[3] ನಂದೀಶ್ವರ ಮಹೇಶ ರುದ್ರರ ಮಹಾ
[4]ಚೇತನಂ[4]ಗೊಂಡು ವೃಷಭನಿಮಿಷರ ಪ್ರಭೆಯ ಪ್ರಭುಲಿಂಗಮುಖತೆಗೆದು ತೋಱೆ॥

ಉತ್ಪತ್ತಿ ಸ್ಥಿತಿ ಲಯಂ ಕಾಲ ಮೂಲಾಶಕ್ತಿ
ತತಿ ವೇದಶಾಸ್ತ್ರ ಪ್ರಣವಾದ್ಯನಾದ್ಯವ್ಯಕ್ತ
ಗತಿ ಪರಾತ್ಪರಮೋಕ್ಷಪದಪದ್ಧತಿಗಳು ಯುಗಸಂಖ್ಯೆಗಳೊಳಾದಂಮಹಾ ।
ಶತಶತಂಗಳು ಶತಮುಖಂ ಹರಿಯಜಾದ್ಯಖಿಲ
ಕ್ರತುಪುರುಷರಿಂಗಾದ ಪ್ರಳಯಭೈರವಮೂರ್ತಿ
ಹತಿಸಿದ ಮಹಾನಾಟಕಪ್ರಕರ ಬ್ರಹ್ಮಾಂಡಕೋಟಿ ತೋಱುತ್ತಿರ್ದವು ॥೭॥

ಪ್ರಥಮಪ್ರಮಥರ ಪುರಾತನರ ಸಮ್ಯಕ್ತ್ವ[5][ರಾ][5]
ಸತತಂ ಗಣೇಶ್ವರರ ಭಕ್ತಮಾಹೇಶ್ವರೋ
ರ್ಜಿತಪ್ರಸಾದಿಗಳ ಲಿಂಗಪ್ರಾಣಿಗಳ ಶರಣರೈಕ್ಯರಾದಿಯ ಮಾರ್ಗದ ।
ಪಥಪದ್ಧತಿಗಳ ಪದದಾ ಪದಂಗಳ ಮೋಕ್ಷ
ಮತರ ಮಾಯಾರಹಿತರಂಗಸ್ಥಲಂಗಳ
ಪ್ರತಿಮರಭವನೊಳು ಬೆರಸಿದ ಪುರಾಣೋಕ್ತಿ ವಿಸ್ತರಿಸಿ ತೋಱುತ್ತಿರ್ದವು ॥೮॥

---

[1] ರು (ಘ.ಖ.ಥ). [2] ಗೈದಮಾ (ಘ). [3] ಹಾತ್ಮ (ಘ). [4] ತ್ಮೇಶನಂ (ಘ). [5] ರಂ (ಕ.ಗ.ಘ.ಜ), ರ (ಖ).

ಆಧಾರನಾದಿಜನನಾದಿಗೆ ಶಿಲಾದಜಂ
[1]ಅದುದಂ ಸ್ಕಂದ[1]ತಾ ನೀಲಲೋಹಿತ ಕಾಲ
ನಾದುದ ಮನೋಹರಂ ವೃಷಭ ಬಸವಾಖ್ಯನಾದಂ ಸಪ್ತಜನನಂಗಳ ।
ವೇದಿಸಱುವತ್ತುನಾಲ್ಕುಂ ಪವಾಡಂಗಳನು
ಮೇದಿನಿಪ[2]ಪರ[2]ಸಮಯದಾಚಾರ್ಯರಹುದೆನಲು
ಮೂದಲಿಸಿ ಮೆಱೆದ ಪರಿ ಪರಿವಿಡಿದು ಮುಕ್ತಿಪುರವೀಥಿಯಂತೆಸೆದಿರ್ದುದು ॥೯॥

ಪಂಚಾಕ್ಷರಂ ಪಂಚವಕ್ತ್ರ ಪಂಚಾವರಣ
ಪಂಚಭೌತಿಕ ಪಂಚಬಾಣರಹಿತೋನ್ನತಂ
ಪಂಚವಿಂಶತಿತತ್ವ ಲಿಂಗಧಾರಣೆ ಭೂತಿ ರುದ್ರಾಕ್ಷಿ ಗುರುಮಹಾತ್ಮೆ ।
ಸಂಚಯವಿಶೇಷಶಿವಶಾಸನಾದ್ಯಂತವಿವ
ರಂ ಚಕ್ರ ಬಸವೇಶ್ವರನ ಹೃದಯದೊಳ್ತೋಱಿ
ಲುಂ ಚಪಳನಂದೀಶಗದು ಬಸವಪೌರಾಣಪದ್ಧತಿಗೆ [3]ಪದ[3]ವಾದುದು ॥೧೦॥

ಇಂತುತೋರ್ಪ ಬಸವಹೃದಯಶಿವಶಾಸನವ
ನಂತಸ್ಥಮಂ ನಂದಿರುದ್ರ ಪ್ರತಿಬರೆದುಪೇ
ಳ್ವಂತೆ ಗ್ರಹಿಸಿದ ಜ್ಞಾನಮುಖದಿಂದೆ ಪ್ರಮಥರ್ಗೆ ಕಾರಣಿಕ ಕಾರಣವನು ।
ಸಂತತಂ ಪೇಳ್ವೆನೆಂಬುತ್ಸಹದಿ ಪರಮಹರು
ಷಂತುಳಕೆ ಪರಶಿವನಮೂರ್ತಿ [4]ಎ[4]ಂದಱಿದು ಪದ
ಕ್ರಾಂತನಾಗಾನಂದಕರ[5]ಪುಷ್ಕ[5]ರಾಂಜಳಿತನಾಗಿ ಸನ್ಮೂ[6][ರ್ತಿ][6]ತ್ವದಿ ॥೧೧॥

ನಿಗಮನಿಲುಕದ ನಿಯತನೀತಿನಿರ್ಮಲ[7]ನೆ ತ್ರೈ[7]
ಜಗವಂದ್ಯನಾದ್ಯಮರರಾದ ಪರಮೇಷ್ಠಿ ಹರಿ
ಯುಗಣಿತ[8]ವ್ಯೂಹ[8] ಗೋಗೋಪ ರು[9]ದ್ರಾ[9] ಮಹಾರುದ್ರ ಮತ್ರ್ಯಾಣೇಶ ತ್ರಾ ।
ಹಿ ಗುರು ಸದ್ಗುರು ಕೃಪಾಗುರುವೆ ಚಿನ್ಮಯಗುರುವೆ
ಸಗುಣನಿರ್ಗುಣಕುಭಯಕತಿಶಯಾತ್ಮಕನಾದ
ಭಗುತಿವತ್ಸಲ ಶರ್ವ ಸರ್ವಜ್ಞ ಜಯತು[10]ಜಯ ಜಯಯೆಂದ[10] ನಂದೀಶನು ॥೧೨॥

ಮೃಡಮೂರ್ತಿಯಹ ಬಸವನಮೃತಮೂರ್ತಿಯ ಪೊಗಳ್ವ
ನುಡಿಯಪ್ರಕಾಶಪೀಯೂಷಧಾರಾವರುಷ
ವೆಡೆಗಲಸಿತಾ ಸಭಾಂತರವನಭವನಸೂತ್ರವಿಡಿದು ಪರಿವೇಷ್ಟಿಸಲ್ಕೆ ।

---

[1] ಅದುದಂದಿಂದ (ಘ). [2] ಅತಿ (ಘ). [3] ಮುಖ (ಕ.ಖ.ಗ.ಥ.ಘ).
[4] ಬ (ಕ.ಖ.ಗ.ಥ.ಘ). [5] ಪುಷ್ಪಕ (ಕ). [6] ತ್ರ್ಯ (ಸ.ಪ್ರ). [7] ನೇತ್ರ (ಘ).
[8] ವ್ಯೋಮ (ಕ. ಖ). [9] ದ್ರಂ (ಗ. ಘ. ಥ). [10] ಬಸವೇಶೆಂದ (ಜ).

ನಡೆತಂದು ನಿಂದು ಶಿತಿಕಂಠ ತನ್ನಯ ಹೃದಯ
ದೆಡೆಯ ಬಸವಂಗಿತ್ತು ಸಿಂಹಾಸನಕ್ಕೆ ಬರ
ಲೊಡನೆ ನಂದೀಶ ಕೈವಾರಿಸುತ್ತೇಳ್ತರಲು ಪ್ರಮಥನಾಯಕರೆಂದರು ॥೧೩॥

ನಂದೀಶನೆಂದಿನಂತಲ್ಲನೇಕಂ ಪದರ
ತಂದೆಮ್ಮಮುಂದಿಟ್ಟು ಗಣಪದಂಗಳ ಕೊಡಿಸಿ
ವಂದ್ಯರಂ ಮಾಡಿ ಗಣಕುಲದೊಳವರಂ ಬೆರಸಿ ಪರಮಹರುಷದಿ ಪಾಲಿಪ ।
ಹಿಂದಣಪ್ರಕೃತಿ [1]ವಿಕೃತಿಯಾಗಿದೇ[1]ನೊಂದು ನವ
ಛಂದಮುಮನಭವಮಾಡಿದೊಡೆ ನೀ ಮಾಳ್ಪುದ
ಲ್ಲೆಂದೆಲ್ಲ ದ್ವಾರಾಧಿಪರ್ತಡೆಯದಿಹರೆ ನೀನಧಿಕನಂಜುವೆವೆಂದರು ॥೧೪॥

ಸಿಂಧುಸಿಂಧುವಿನೊಳೊಂದುವೊಡೆ ಹುಲುಗಟ್ಟೆಯದ
ಬಂಧಿಸಲ್ಬಹುದೆ ಘನಸಾರ ವೈಶ್ವಾನರನೊ
ಳಂದವಳಿಸುವೊಲು ಜಲರಾಶಿಯೊಳ್ಬಿದ್ದ ಕರಕಂಗಳಂ ಕರತಳದೊಳು
ತಂದುತೋಱದರೊಳರೆ ದರ್ಪಣದೊಳಿಹ ಬಿಂಬ
ಸುಂದರನ ಬೇಱೆಮೂರ್ತಿಟ್ಟು ಭೇದಿಸಿ ತಡೆವ
[2]ಛ[2]ಂದವಾವುದು ಶಿವನೊಳಾತನೊಳು ಭಾವಬೇಱಲ್ಲೆಂದ ನಂದೀಶನು ॥೧೫॥

ಎಂದೊಡಿಂತಪ್ಪ ಸಾಮರ್ಥ್ಯಮಹಿಮನದಾವ
ನೆಂದಡಾತಂ ಮುನ್ನತಾನಾವ ಪದವಿಗಂ
ಬಂದ ಪದವಾವುದೆನೆ ಚಿತ್ತೈಸಿ ಪ್ರಮಥನಾಯಕರು ಪೂರ್ವಂತಸ್ಥವ ।
ನೆಂದು ಶಿವಶಾಸನದ ಸಂಗತಿಯ ಬಸವಪ್ರ
ಬಂಧನಾನಾಮಾರ್ಗಹೃದಯಸುಜ್ಞಾನಮಕ
ರಂದ ಸೂಸಲ್ಕಂದಿರುದ್ರಂ ಕಥಾರ್ಣವವ ಮಥಿಸಲುದ್ಯೋಗಿಸಿದನು ॥೧೬॥

ಇದಕ್ಕೆ ಪ್ರಭುಸಂಪಾದನೆಯಲ್ಲಿ ದೃಷ್ಟಪ್ರತ್ಯಯವಾಕ್ಯಮುಖದಿಂದಾದ ಬಸವಮಹಾತ್ಮೆಯ ಕಥಾಗರ್ಭಸೂಚನೆಯ ವಚನಂಗಳು :

ವಚನ—

ನಿರಾಳನಿರ್ಮಾಯನಾಗಿ, ಆಕಾರನಿರಾಕಾರವಿಲ್ಲದಂದು, ಸಾಕ್ಷಾತ್ಸಭೆಯಿಲ್ಲದಂದು, ಆಧಾರದೊಳಗಣ ವಿಭೂತಿಯಂ ತೆಗೆದು ಧರೆಯ ನೆಲೆಗೊಳಿಸಿ ಪಂಚಾಶತ ಕೋಟಿಭೂಮಂಡಲವನ್ನು ಸುತ್ತುಹರಿಸಿದ ಸಪ್ತಸಾಗರಂಗಳ, ಎಂಭತ್ತಾಱು ಕೋಟಿಯು ತೊಂಬತ್ತಾಱು ಲಕ್ಷತಾಳು ಭುವನಕ್ಕೆ ಅಱುವತ್ತಾಱು ಕೋಟಿ

---

[1] ಯಂತೆಲ್ಲವೇ (ಪ.), ವಿಕೃತವಾಗಿದೇ (ಜ). [2] ವಂ (ಜ).

ಯೋಜನದುದಯದಲ್ಲಿ ವರಖೇಚರಭೂಚರದಲ್ಲಿ ನಿಲಿಸಿದನೀರೇಳುಭುವನಂಗಳ, ತಾರತಮಂಧವುಂಟೆಂದಡೆ ಬೆಳಗಿ ತೋಱದ ಹನ್ನೆರಡು ಜ್ಯೋತಿಯು, ಯೋಜನ ಭೋಜನದಲ್ಲಿ ಹುಟ್ಟಿದ ಭಾಜನವಾದ ಬೊಬ್ಬುಳಿಯಾದ, ಜಗದ ಜಂಗುಳಿಯ ಕಾವ ಗೋವ ತಾನಾಗಿ ಚತುರಾಶೀತಿಲಕ್ಷಯೋನಿಮುಖಜೀವರಾಶಿಗಳಿಗೆ ರಾಶಿವಾಳುಕ ತಾನಾಗಿ, ಸಕಲ ಅಳಿವು ಉಳಿವಿನೊಳಗೆ ಒಬ್ಬನೇ ಉಳಿದಿರ್ದು, ನೋಡಿ ಕಂಡು ನಿಂದ ಪೂರ್ವಾಚಾರಿ ಗುಹೇಶ್ವರನ ಶರಣ ಸಂಗನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂಬೆ. ॥೧॥

ಇದಕ್ಕೆ ಪ್ರತ್ಯಯದ ವಚನ—

ಅಯ್ಯ, ನೀನು ನಿರಾಕಾರನಾಗಿದ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆನಯ್ಯ. ನೀನು ಏಕಪಾದದಲ್ಲಿ ಅಂಗುಷ್ಠಾಗ್ರವನೂಱ ನಾಟ್ಯವನಾಡುವಲ್ಲಿ ನಾನು ಆಧಾರವೆಂಬ ವಾಹನವಾಗಿರ್ದೆನಯ್ಯ. ನೀನು ತ್ರಿಪುರಸಂಹಾರ ಮಾಡುವಲ್ಲಿ ನಾನು ವೃಷಭನೆಂಬ ವಾಹನವಾಗಿರ್ದೆನಯ್ಯ. ನೀನು ಜಂಗಮವಾಗಿ ಭುವನಕ್ಕೆ ಬಂದೊಡೆ ನಾನು ಭಕ್ತನೆಂಬ ವಾಹನವಾಗಿರ್ದೆನಯ್ಯ. ಇಂತೀ ನಾಲ್ಕು ಭವ ನಿನಗಾದವು. ಎನ್ನ ನೀನೆಂತಱಿಯೆ ಕೂಡಲಸಂಗಮದೇವ ? ॥೨॥

ಪ್ರತಿ ವಚನ—

ಅಯ್ಯಾ, ಎತ್ತಿದ ಮಾಣಿಕ್ಯದ ಮಣಿಮಕುಟದ ಮೇಲಣ ಪಡೆಕೋಟಿ, ಶಿವನಿರ್ಪ ನೆಲೆಯನಱಿಯರು. ಅಯ್ಯ, ಇಕ್ಕಿದ ಕರೋಟಿಯ ಮಾಲೆಯೊಳಗಿರ್ಪ ರುದ್ರಕೋಟಿಗಳು ಶಿವನಿರ್ಪನೆಲೆಯನಱಿಯರು. ಅಯ್ಯ, ಇಕ್ಕಿದ ರುಂಡಮಾಲೆಯೊಳಗಿರ್ಪ ರುಂಡಧಾರಿಗಳು ಕೋಟಿ, ಶಿವನಿರ್ಪನೆಲೆಯನಱಿಯರು. ಅಯ್ಯಾ, ಗಂಗೆ, ಗೌರಿ, ಭೃಂಗಿ, ಮೊದಲಾಗಿ ಶಿವನಿರ್ಪ ನೆಲೆಯನಱಿಯರು. ಅಯ್ಯಾ, ಉಟ್ಟ ಗಜಚರ್ಮದೊಳಗಿರ್ಪ ಋಷಿಗಳು ಕೋಟಿ, ಶಿವನಿರ್ಪ ನೆಲೆಯನಱಿಯರು. ಅಯ್ಯಾ, ಖಟ್ವಾಂಗದೊಳಗಿರ್ಪ ಮನುಮುನಿಗಳು ಶಿವನಿರ್ಪ ನೆಲೆಯನಱಿಯರು. ಗುಹೇಶ್ವರನೇ, ನಿಮ್ಮ ಶರಣ ಸಂಗನಬಸವಣ್ಣನೆ ಬಲ್ಲ. ॥೩॥

ಇದಕ್ಕೆ ಪ್ರತ್ಯಯದ ವಚನ—

ಅಯ್ಯಾ, ನೀನು ಕರುಣಿಸಿದ ಏಳುಭವಾಂತರದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ ನಿಮ್ಮಾಣೆ ; ನಿಮ್ಮ ಪ್ರಮಥರಾಣೆ. ನಿಮ್ಮ ಪಾದೋದಕಪ್ರಸಾದಕ್ಕಲ್ಲದೆ ಬಾಯದೆಱೆಯೆನಯ್ಯ ! ಅಯ್ಯಾ, ಪ್ರಥಮಭವಾಂತರದಲ್ಲಿ ಶಿಲಾದನಮಗ ನಂದಿಕೇಶ್ವರನೆಂದು ಹೆಸರಿಟ್ಟು ನಿಮ್ಮ ಆನಂದದಲ್ಲೆನ್ನನಿರಿಸಿಕೊಂಡಿದ್ದಿರಿ. ಅಯ್ಯಾ, ಎರಡನೆಯ ಭವಾಂತರದಲ್ಲಿ ಸ್ಕಂದನೆಂಬ ಗಣೇಶ್ವರನೆಂದು ಹೆಸರಿಟ್ಟುಕರೆದು ನಿಮ್ಮ ಕಾರುಣ್ಯ[1]ವ[1] ಮಾಡಿ ಯೆನ್ನನಿರಿಸಿಕೊಂಡಿದ್ದಿರಿ. ಅಯ್ಯಾ, ಮೂಱನೆಯ

[1] ನ (ಪು.ಕ.ಖ).

ಭವಾಂತರದಲ್ಲಿ ನೀಲಲೋಹಿತನೆಂಬ ಗಣೇಶ್ವರನೆಂದು ಹೆಸರಿಟ್ಟು ನಿಮ್ಮ ಲೀಲಾ ವಿನೋದದಲ್ಲೆನ್ನನಿರಿಸಿಕೊಂಡಿದ್ದಿರಯ್ಯ. ಅಯ್ಯಾ, ನಾಲ್ಕನೆಯ ಭವಾಂತರದಲ್ಲಿ ಕಾಲನೆಂಬ ಗಣೇಶ್ವರನೆಂದು ಹೆಸರಿಟ್ಟು ಇರಿಸಿಕೊಂಡಿದ್ದಿರಿ. ಅಯ್ಯಾ, ಐದನೆಯ ಭವಾಂತರದಲ್ಲಿ ಮನೋಹರನೆಂಬ ಗಣೇಶ್ವರನೆಂದು ಹೆಸರಿಟ್ಟು ನಿಮ್ಮ ಮನಃ ಪ್ರೇರಕನಾಗಿ ಎನ್ನನಿರಿಸಿಕೊಂಡಿದ್ದಿರಯ್ಯ. ಅಯ್ಯಾ, ಆಱನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನೆಂದು ಹೆಸರಿಟ್ಟು ನಿಮಗೆ ವಾಹನವ ಮಾಡಿ ಎನ್ನನಿರಿಸಿ ಕೊಂಡಿದ್ದಿರಿ. ಅಯ್ಯಾ, ಏಳನೆಯ ಭವಾಂತರದಲ್ಲಿ ಬಸವನೆಂಬ ಗಣೇಶ್ವರನೆಂದು ಹೆಸರಿಟ್ಟು ನಿಮ್ಮ ಒಕ್ಕುಮಿಕ್ಕುದಕ್ಕೆ ಎನ್ನ ಯೋಗ್ಯನಮಾಡಿ ಎನ್ನನಿರಿಸಿಕೊಂಡಿದ್ದಿರಿ. ಇದುಕಾರಣ ಮಹಾದಾನಿ ಕೂಡಲಸಂಗಮದೇವ, ನೀವು ಕರುಣಿಸಿದ ಭವಾಂತರ ದಲ್ಲಿ ನಾನು ಬರುತ್ತಿರ್ದೆನಯ್ಯ. ॥೫॥

ಇದಕ್ಕೆ ಪ್ರತಿವಚನ.—

ಆದಿಯಾಧಾರವಂಮಾಡಿ ಅಜಕೋಟಿಬ್ರಹ್ಮಾಂಡಗಳಂ ಮಾಡಿ ಯುಗ ಜುಗಾದಿಗಳಂಮಾಡಿ ಹರಲೀಲೆಯಾಡುವಲ್ಲಿ, ಹರಿವಿರಿಂಚಿಗಳ ಸುರಾಸುರರ ಶಿರ ಮಾಲೆಗಳನಿಕ್ಕಿ ಕುಣಿದಾಡುವಲ್ಲಿ, ಪಾದ ರಸಾತಳಕ್ಕಿಳಿದು ಭುವನಜಲಮಯ ವಾದಲ್ಲಿ ಹಸ್ತಮಕುಟತಾಗಿ ಸಕಲಲೋಕಂಗಳು ನಿರವಯವಾದಲ್ಲಿ, ನಿಜಬೆಳಗಿ ನೊಳಗೆ ಒಮ್ಮೆ 'ಸೋಹಂ' ಎನಲು ವಿಚಾರದಿಂದ ಘನಮನವಾದಂದು ವೃಷ ಭಾವತಾರವಾದಂದು, ಗುಹೇಶ್ವರಾ, ನೀನೇ ಲಂಗ, ಸಂಗನಬಸವಣ್ಣನೇ ಭಕ್ತನು. [॥೫॥

ಪ್ರತಿವಚನ.—

ಕಾಳಿಂಗನ ಕಂಕಣದಿಂದ ಮುನ್ನ, ತ್ರಿಪುರಸಂಹಾರದಿಂದ ಮುನ್ನ, ಉಮಾ ಕಲ್ಯಾಣದಿಂದ ಮುನ್ನ, ಹರಿವಿರಿಂಚಿಗಳಿಲ್ಲದ ಮುನ್ನ , ಆಳು ನಾನು ; ಆಳ್ದ ನೀನು ಕೂಡಲಸಂಗಮದೇವ. ॥೬॥

ಪ್ರತಿವಚನ.—

ಆದಿಯಾಧಾರವಿಲ್ಲದಂದು ಹಮ್ಮುಬಿಮ್ಮುಗಳಿಲ್ಲದಂದು, ಸುರಾಳನಿರಾಳವಿಲ್ಲ ದಂದು, ಸಚರಾಚರವೆಲ್ಲಾ ರಚನೆಗೆ ಬಾರದಂದು, ಗುಹೇಶ್ವರಾ, ನೀನೇ ಲಂಗ ಸಂಗನಬಸವಣ್ಣನೇ ಭಕ್ತನು ॥೭॥

ಚೆನ್ನಬಸವೇಶ್ವರನ ಸಾಕ್ಷಿಯ ವಚನ.—

ಕೃತಯುಗದಲ್ಲಿ ದೇವರು ದೇವಾಸುರನ ಕೊಲ್ಲುವಲ್ಲಿ ಪ್ರಮಥನೆಂಬ ಗಣೇ ಶ್ವರ ತಾನಾಗಿರ್ದ. ಗಜಾಸುರ ಚರ್ಮವ ಬಿಚ್ಚಿ ಅಜಾರಿಸಿ ಹೊಱುವಲ್ಲಿ ಉಗ್ರ ನೆಂಬ ಗಣೇಶ್ವರ ತಾನಾಗಿರ್ದ. ಅಸುರರ ಶಿರವ ಕೊರಳಲ್ಲಿ, ಉರದಲ್ಲಿ ಶೃಂಗಾ

ರವ ಮಾಡಿಕೊಂಡು ಜಗಕ್ಕೆ ಜೂಬಾಗಿರ್ಪಲ್ಲಿ ಶಂಕೆಯಿಲ್ಲದ ನಿಶ್ಶಂಕನೆಂಬ ಗಣೇಶ್ವರ ತಾನಾಗಿರ್ದ. ನರರು ಸುರರು ಹರಿವಿರಿಂಚಾದಿಗಳು ಮೊದಲಾಗಿ ಕರ್ಮದ ಕಡಲಲ್ಲಿ ಹೊಗುತಿಪ್ಪಲ್ಲಿ ಪರಿಹರಿಸಿದ ಪರಮನೆಂಬ ಗಣೇಶ್ವರ ತಾನಾಗಿರ್ದ. ತ್ರೇತಾಯುಗದಲ್ಲಿ ತೆತ್ತಿಗನಾಗಿರುತೆ ಬಿನ್ನವಿಸುತಿಪ್ಪಲ್ಲಿ ಶಿವಂಗೆ ಕಾಲಾಗ್ನಿರುದ್ರನೆಂಬ ಗಣೇಶ್ವರ ತಾನಾಗಿರ್ದ. ಜಲಪ್ರಳಯದಲ್ಲಿ ಜಗನ್ನಾಥನಾಗಿಪ್ಪಲ್ಲಿ ಜರಾಮರಣರಹಿತ ಶರಣ ತಾನಾಗಿರ್ದ. ಧರೆಗೆ ಶೂನ್ಯಶರಣತಾನೊಬ್ಬನೇಯೆಂದಡೆ ಒಂದನಂತವ ಹುಟ್ಟಿಸುವೆನೆಂದು ಗೂಳಿತಾನಾಗಿರ್ದ. ಹೋರಿಯಾಗಿದ್ದಲ್ಲಿ ಹೋರಿಯಾಡಿಸಿದನಯ್ಯಾ[1]. ಸುರರ ದೈತ್ಯಾಳಿಗಳ[1] ತೊತ್ತಳದುಳಿದು ಒಕ್ಕಲಿಕ್ಕಿಯೆ ಕೊಂದು ಮಿಕ್ಕ ಗಣೇಶ್ವರನೆಂದೆನಿಸಿ, ಉರಿಗಣ್ಣನೇ ತೆಱೆದೊಡೆ ಈರೇಳು ಲೋಕಗಳು ಉರಿದಾವೆಂದು ಜಗವ ಹಿಂದಿಕ್ಕಿಕೊಂಡು ವಂದ್ಯನೆಂಬ ಗಣೇಶ್ವರ ತಾನಾಗಿರ್ದ. ಸಿಂಸಾಸುರನ ಕೊಲ್ಲುವಲ್ಲಿ ವಂಧಾಸುರನೆಂಬ ಗಣೇಶ್ವರ ತಾನಾಗಿರ್ದ. ತಾಳಾಸುರನ ಕೊಲ್ಲುವಲ್ಲಿ ಪೊಡವಿಬ್ರಹ್ಮಾಂಡ ತಾಳವ [2]ಗೂ[2]ಡುವಲ್ಲಿ ತಾಳಮೇಳಗಣೇಶ್ವರತಾನಾಗಿರ್ದ. ಜಾಳಂಧರನ ಕೊಲ್ಲುವಲ್ಲಿ ಜಾಣರಿಗೆ ಜಾಣ ವಿಚಿತ್ರನೆಂಬ ಗಣೇಶ್ವರತಾನಾಗಿರ್ದ. ಪೀತಾಸುರನ ಕೊಲ್ಲುವಲ್ಲಿ ಝುತಪನೆಂಬ ಗಣೇಶ್ವರ ತಾನಾಗಿರ್ದ. ಉಮೆಯು ದಕ್ಷಯಾಗವ ಕೆಡಿಸುವಲ್ಲಿ ವೀರಭದ್ರನೆಂಬ ಗಣೇಶ್ವರ ತಾನಾಗಿರ್ದ. ನರಸಿಂಹನ ಶಿರಛ್ಛೇದವಮಾಡುವಲ್ಲಿ ಶರಭನೆಂಬ ಗಣೇಶ್ವರ ತಾನಾಗಿರ್ದ. ತ್ರಿಪುರಸಂಹಾರದಲ್ಲಿ ಸ್ಕಂದನೆಂಬ ಗಣೇಶ್ವರ ತಾನಾಗಿರ್ದ. ಉಮೆಯ ಕಲ್ಯಾಣದಲ್ಲಿ ಕಾಲನೆಂಬ ಗಣೇಶ್ವರ ತಾನಾಗಿರ್ದ. ಬ್ರಹ್ಮಕಪಾಲವಿಷ್ಣುಕಂಕಾಳಶಿರಗಳ ಮುಱಿದು ಕೊಂಡಾಡುವಲ್ಲಿ ನೀಲಕಂಠನೆಂಬ ಗಣೇಶ್ವರ ತಾನಾಗಿರ್ದ. ದ್ವಾಪರದಲ್ಲಿ ಪ್ರಾಣಲಿಂಗಸಂಯೋಗದಲ್ಲಿ ವೃಷಭನೆಂಬ ಗಣೇಶ್ವರ ತಾನಾಗಿರ್ದ. ಇಂತು ನಾಲ್ಕು ಯುಗ ಹದಿನೆಂಟು ಜುಗ ಲಿಂಗದ ಬಳಿವಳಿಯಲ್ಲಿ ಬರುತಿಪ್ಪಲ್ಲಿ ನಂದಿನಾಥನೆಂಬ ಗಣೇಶ್ವರ ತಾನಾಗಿರ್ದ. ಜಂಗಮ ಪ್ರಸಾದದ ಪೂರ್ವಾಶ್ರಯವನೆ ಕಳೆದು ಈ ಕಲಿಯುಗದಲ್ಲಿ ಲಿಂಗದ ಆದಿಸ್ಥಲವನಱಿದ ಕೂಡಲಚೆನ್ನಸಂಗಯ್ಯನ ಮಹಾಮನೆಯಲ್ಲಿ ಮಂಗಳಾಚಾರಿ ಬಸವಣ್ಣನೊಬ್ಬನೇ. ||೮||

ದಾಯೆಂದಡೆ ನಡೆದು ಹೋ ಯೆಂದಡೆ ನಿಲ್ಲನೆ? ಜಗವ ಹೊರೆಯಲೆಂದು ಆತನ ಸಾಹಸವ ಬೆಸಗೊಂಬಡೆ ಈಶ್ವರನ ತಾಳುವನಯ್ಯ. ಆವರಿಸಿದಡಲ್ಲಾಡಿದಡೆ ಕೈಲಾಸವು ಅಲ್ಲಾಡದೆ? ಗಂಡುಗೆದಱಿ ಈಡಾಡಿದರೆ ಅಂಡಜಬ್ರಹ್ಮಾಂಡಂಗಳು ನಿಲುವವೆ? ಕೆಲೆದು ಕೆದಱಿ ಅಟ್ಟಿದೊಡೆ [3]ಮೊಱೆಯೆಂಬರಲ್ಲದೆ ಇದಿರಾನುವರುಂಟೆ?[3] ಅಯ್ಯ, ನೀನು ಬಿಟ್ಟು ಬೀದಿವಱಿದೋಡೆ ಅಟ್ಟಿ ಹಿಡಿವ ಗಂಡು[4]ಗರ[4] ನಾಕಾಣೆನಯ್ಯ. ಸೃಷ್ಟಿಗೀಶ್ವರನಲ್ಲದೆ ಮತ್ತಾರೂ ಇಲ್ಲ. ಗಂಭೀರವೆಂದಡೆ

[1] ಸುರಾಸುರರ (ಘ). [2] ಗೊ (ಕ.ಘ.ಖ). [3] ಕೆಚ್ಚೋಡಿತಂದುಮುಱಿಹೊಕ್ಕು (ಖ). [4] ಸರ (ಕ.ಖ.ಗ).

ಇಂಬುಗೊಳ್ಳವೆ ಕೊಳ[1]ಗು[1]? ಶಂಭುವೇಱುವ ವಾಹನವೆಂದೊಡೆ ಬೆನ್ನು ಬೆಂಕಟ್ಟಾ ಗದೆ? ಈರೇಳು ಭುವನಕ್ಕೆ ನಮ್ಮ ಕೂಡಲಸಂಗಮದೇವನಲ್ಲಿ ತೆತ್ತೀಸಾದಿಗಳಿಗು ಬ್ಬಸವಯ್ಯ ಎಮ್ಮ ಬಸವರಾಜನು. ॥ ೯ ॥

ಅಂದು ದುಂದುಮಾಕಾಲ ಕೃತಯುಗದಲ್ಲಿ ಓಂಕಾರಸತ್ಯ[2]ರೂಪ[2] ದೇವಾಂಗ ನೆಂಬ ಭಕ್ತ, ಸ್ಥೂಲಕಾಯನೆಂಬ ಜಂಗಮ, ಅಂದಿಗೆ ಪ್ರಥಮ ಮೂಲಸ್ಥಾನ [3]ಕೇತಾರೇಶ್ವರ[3]. ತ್ರೇತಾಯುಗದಲ್ಲಿ ಘಂಟಾಕರ್ಣನೆಂಬ ಭಕ್ತನ ಮಾಡುವಲ್ಲಿ ಶೂನ್ಯಕಾಯನೆಂಬ ಜಂಗಮ, ಅಂದಿಗೆ ಪ್ರಥಮ ಮೂಲಸ್ಥಾನ ರಾಮೇಶ್ವರ. ದ್ವಾಪರದಲ್ಲಿ ವೃಷಭನೆಂಬ ಭಕ್ತನ ಮಾಡುವಲ್ಲಿ ಅನಿಮಿಷನೆಂಬ ಜಂಗಮ. ಅಂದಿಗೆ ಪ್ರಥಮ ಮೂಲಸ್ಥಾನ ಸೌರಾಷ್ಟ್ರ. ಕಲಿಯುಗದಲ್ಲಿ ಬಸವನೆಂಬ ಭಕ್ತನ ಮಾಡುವಲ್ಲಿ ಪ್ರಭುವೆಂಬ ಜಂಗಮ, ಅಂದಿಗೆ ಪ್ರಥಮ ಮೂಲಸ್ಥಾನ ಶ್ರೀಶೈಲ. ಇಂತೀ ನಾಲ್ಕು ಯುಗಕ್ಕೆ ನಾಲ್ಕು ಜಂಗಮಸ್ಥಲ, ನಾಲ್ಕು ಯುಗಕ್ಕೆ ನಾಲ್ಕು ಲಿಂಗಸ್ಥಲ. ಅಂದು ಬಯಲಮೂರ್ತಿಯಾದನೊಬ್ಬ ಶರಣ. ಆ ಶರಣನ ಹೂಂಕಾರದಲ್ಲಿ ಹುಟ್ಟಿದ ಬ್ರಹ್ಮ, ಆ ಶರಣನ ದಿವ್ಯಬುದ್ಧಿಯಿಂದ ಹುಟ್ಟಿದಾತ ವಿಷ್ಣು, ಆ ಶರಣನ ಕ್ರೋಧ ದಿಂದ ಹುಟ್ಟಿದಾತ ರುದ್ರ, ಇಂತೀ ಮೂವರ ಪೀಠಕವಂತಿರಲಿ. ಇದುಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಮೂಱು ಲೋಕವೆಲ್ಲಾ ಸಂಗನ ಬಸವಣ್ಣಂಗೆ ನಮೋ ನಮೋ ಎನುತಿರ್ದಿತು. ॥ ೧೦ ॥

ರಾಗ : ಗುಂಡಕ್ರಿಯೆ

ಅಂದಾದನಂದು ಅಂದಾದನಂದು ಬಸವನಂದಾದನಂದು ॥ ಪ ॥

ನಾಲ್ಕು ಯುಗವಾಗದಂದು ಉಮೆಯ ಕಲ್ಯಾಣವಿಲ್ಲದಂದು
ಮೇರುಮಂದಿರವಿಲ್ಲದಂದು ಹಸಿವುತೃಷೆಯುದಕವಿಲ್ಲದಂದು ॥ ೧ ॥

ಅಸುರಾದಿಗಳು ನೆರೆದು ಧರೆಯ ಮಂಥಣ ಮಾಡದಂದು
ಮೇರುಗಿರಿ ಕಡೆಗೋಲಾಗದಂದು ವಾಸುಗೆ ತೆಗೆ ನೇಣಾಗದಂದು ॥ ೨ ॥

ಭೂಮಂಡಲವು ಉರಿಯಾಗಿ ಅಸುರರು ನೆ[4]ಲೆ[4]ಗೊಳ್ಳದೋಡಿ
ಧೃತಿಗೆಡಿಸಲಿಕ್ಕಾ ವಿಷವು ಹೊಱವಡದಂದು ॥ ೩ ॥

ಬಂದು ಸುರರು ಬಿನ್ನೈಸಿ ನಿಂದು ಪ್ರಸಾದವ ಬೇಡೆ
ಇಂತೆಂದ ನುಡಿಗೆ ಒಳಗಾಗಿ ವಿಷವು ಸಾಧ್ಯವಾಗದಂದು ॥ ೪ ॥

ಪ್ರಸಾದ ಬಂದರೆ ಒಳಕೊಂಡು ವಿಷವಡಗಿ ಉಳಿದಂದು
ಪ್ರಸಾದಿಸ್ಥಲವಱಿಯ[5]ದಂ[5]ದು ಪರವು ಸಾಧ್ಯವಾಗದಂದು ॥ ೫ ॥

---

[1] ನು (ಫು). [2] ರೂಪ ಸದಾಕಾರಜಂಗಮ (ಸ.ಪ್ರ). [3] ರಾಮೇಶ್ವರ (ಸ.ಪ್ರ). [4] ರೆ (ಕ.ಗ). [5] ಲಂ (ಕ.ಗೆ.ಫು).

ಒಂದೆಂದೊಡೆ ಸಂದೆಂದು ಎರಡೆಂಬುದು ತಾನಾಗಿಲ್ಲ
ಒಂದೆರಡಱ ಸಂದಳಿದಳಿಯದೆ ಉಳಿದಂದು ‖ ೬ ‖

ಆದಿಪ್ರಸಾದಿಯೊ ಅನಾದಿಪ್ರಸಾದಿಯೊ
ಕೂಡಲ ಚೆನ್ನಸಂಗಯ್ಯನಲ್ಲಿ ತಾನೆ ಪ್ರಸಾದಿಯೊ ‖ ೭ ‖

ಇಂತೀ ದೃಷ್ಟಪ್ರತ್ಯಯ ಸಾಕ್ಷಿ ವಚನಾರ್ಥನನುಸುರ್ವ ನಂದೀಶ್ವರಪ್ರಸನ್ನ ಮುಖಪದದೊಳೀಕ್ರಮವು.

ಪ್ರಣವಕ್ಕೆ ಪರಶಕ್ತಿ ಶಾಂ[1]ತಿ[1] ನಾದಕ್ಕೆಬಿಂ
ದಣಿಯಾಗೆ ನಿಷ್ಕಲಂ ತತ್ವಘನವಾ ಘನವ
ನೆಣಿಸಲಱಿಯವು ವೇದ ವಾದಿ[2]ನವು ಶಾಸ್ತ್ರಾಧ್ಯಯನ ಪೂಜೆ ಭೇದಿಸದ[2] ದ್ಯು ।
ಮಣಿಯಪ್ರಭಾಕೋಟಿತೇಜವಾಙ್ಮನತೀತ
ಗಣಿತ ನಿರ್ಮಲ ನಿರಾಮಯನ ಮೂರ್ತಿಯು ನಾಲ್ಕು
ಗಣವರರ ಮಾಡಿದುದಱಿಂ ಸದಾಶಿವನೀಶ್ವರಮಹೇಶ್ವರಾದಿಗಳನು ‖ ೧೭ ‖

ಆ ಪರಶಿವನೆ ನಾದಬಿಂದು ತಾನಾಯಿತ್ತು
ರೂಪು ಲಿಂಗಾಕಾರವಾಯ್ತಾ ಮಹಾಲಿಂಗ
ವೇ ಪರಿಯೆನ[3]ಲ್ಕದಕ್ಕ[3]ವಯವಂ ಕರಚರಣವಿಲ್ಲದವ್ಯಕ್ತತತ್ವ ।
ಸೋಪನಾನಂದನವ್ಯಯನಖಂಡಿತ ಪೂರ್ಣ
ವ್ಯಾಪರಂ ಗೋಳ[4]ಕಾ[4]ಕಾರ ನಿಶ್ಚಿಂತಮನ
ತಾಪ ರಹಿತಾದ್ಯಂತ ಪಂಚಪ್ರಕಾರವಾಗಿಹವು ಸಂಜ್ಞಾಭೇದವು ‖ ೧೮ ‖

ಅದು ಪೆರಂ ಗೂಢ ಲಿಂಗಂ ಕ್ಷೇತ್ರನಾದಿಯೆಂ
ಬುದು ಭೇದವೈದವೆಂತೆನೆ [5]ದೇವಜಗ[5]ಪೃಥ್ವಿ
ಯಿದಕಾದಿ ಪಂಚವಿಂಶತಿತತ್ವವಾತ್ಮ ತ್ರಿಮೂರ್ತಿ ಮಾಹೇಶತತ್ವ ।
ಪದದೀಶತತ್ವಂ ಸದಾಶಿವ[6]ತತ್ವ[6]ಕ್ಕೆಲ್ಲ
ಪದದೂರ್ಧ್ವತತ್ವ ತಾನಾಗಿ ಪರನಾಮ ತನ
ಗೊದ[7]ವಿ[7]ತ್ತು ಬ್ರಹ್ಮಾಂಡಕೋಟಿಸಚರಾಚರವು ವಟವೃಕ್ಷಬೀಜದಂತೆ ‖ ೧೯ ‖

ಅಡಗಿಹವನೇಕ ಮೂರ್ತ್ಯರ್ತ್ವ ತಾ ಮೂರ್ತ್ಯಲ್ಲ
ದೊಡೆ ನಾಮ ಗೂಢಂ ಶರೀರತ್ವ ತತ್ವವಂ
ಪಡೆದಿಂತು ತನ್ನೊಳುತ್ಪ[8][ನ್ನ][8]ಬಿಂಬಪ್ರತತಿಗಳ್ಗೆ ಶಿವಶಕ್ತ್ಯವಯವ ।

---

[1] ತ (ಘ). [2] ಶಾಸ್ತ್ರಧ್ಯಾನ ಪೂಜೆ ಭೇದಿಸದಿಹ (ಕ.ಖ.ಗ.ಛ ಘ.ಚ) [3] ಲ್ಕೆತಕ್ಕ (ಖ), ಲ್ಕೆದಕ್ಕ (ಕ.ಗ). [4] ದಾ (ಖ). [5] ದೇವಾಜನ (ಘ). [6] ತ್ವ (ಕ.ಖ.ಗ). [7] ಗಿ (ಘ). [8] ತ್ಯ (ಸ.ಪ್ರ).

ನಡಸಿ ಸ್ತ್ರೀಲಿಂಗ ಪುಲ್ಲಿಂಗಂ ನಪುಂಸಕಂ
ಮೃಡಮುದ್ರೆಯೊತ್ತಿ ಪ್ರವ[1]ರ್ತನಾನಾಮು ತ[1]
ನ್ನೊಡೆಯೊಳುದಿಸಿಯು ಲಯಂ ತನ್ನೊಳಾಯಿತ್ತಾಗಿ ಲಿಂಗತತ್ವವದೆನಿಸಿತು ‖೨೦‖

ತನ್ನೊಳುದಿಸಿದ ಮಾಯೆಯಾ ಮಾಯೆಯಿಂ ಮೋಹ
ವಂ ನೆಱಪಿ ಮೋಹದಿಂದ ಪ್ರಪಂಚಂಗ[2]ಳ
ನ್ನನ್ಯಕ್ಕೆ[2]ಮಾಡಿ ತಾನಲ್ಲಿಲ್ಲದಿಹುದಾಗಿ ಕ್ಷೇತ್ರಜ್ಞನೆಂದೆನಿಸಿತು।
ಮುನ್ನೆಂಬುದಕ್ಕೆ ಯುಗಲೋಕದೇವಂ ಭೂತ
ವರ್ನಕ್ಕೆ ತಾನಾದಿಯಾಗಿ ನೋಡಿಂತು ಲಿಂ
ಗೋನ್ನತಂ ಪಂಚಪ್ರಕಾರ ಪ್ರಥಮಾಕ್ಷರದ ಬಿಂದುವೆತ್ತಾತ್ತ ತಾನೆ ‖ ೨೧ ‖

ಆದುದಾ ಬಿಂದುವಿಂ ಮುಂದೆ ಪಂಚಾಕ್ಷರದ
ಭೇದ ಸದ್ಯೋಜಾತ ವಾಮದೇ[3]ವೀಶಾನ[3]
ವ[4]ಾ[4]ದಿತತ್ಪುರುಷಘೋರಂ ರಜತ ಕಲಧೌತ ಸ್ಫಟಿಕ ಶುಭ್ರಂ ತೀಕ್ಷಣ।
ವೇದಿಸಿದವೈದುಮುಖವರ್ಣ ದಶಬಾಹು ದ್ವಿ
ಪಾದ ತ್ರಿಣೇತ್ರ ಛಂದೋಋಷಿಗಳಧಿದೈವ
ತಾದಿ ನಿಗಮ ಪ್ರಕೃತಿಪುರುಷದಿಚ್ಛಾಶಕ್ತಿಯುತ ಸದಾಶಿವಮೂರ್ತಿಯು ‖ ೨೨ ‖

ಅಲ್ಲಿ ಧರೆ ಜಲ ವ್ಯೋಮ [5]ಮ[5]ರುತ ರವಿ ರೋಹಿಣೀ
ವಲ್ಲಭ ಧನಂಜಯಾತ್ಮಾದ್ಯಷ್ಟತನುವಿನೊ[6]ಳ
ಗೆ[6]ಲ್ಲಯುಂ ಸರ್ವಗತನಾಗಿ ಜ್ಞಾನಾದಿಗಳಿಗಾಧಾರರೂಪನಾಗಿ।
ಸಲ್ಲೀಲೆಯಿಂ ಸದಾಶಿವನಿಂ ಜಗತ್ರಯುದೊ
ಳೆಲ್ಲ ಪರಿಪೂರ್ಣ ತಾನಾಗಿ ತನ್ಮೂರ್ತಿಯಂ
ಬಲ್ಲರಿ[7]ಲ್ಲೇ[7]ಕಶಿರ ಕರಚರಣದ್ವಯದ್ವಯದಿನೊಗೆದುದೀಶ್ವರತತ್ವವು ‖ ‖ ೨೩ ‖

ಖರಕಿರಣಕೋಟಿಪ್ರಭಾಡಾಳದಿಂ ಸಹಸ್ರ
ಶಿರ ಸಹಸ್ರಂಬಾಹು ಸಹಸ್ರಪದ ಸಹಸ್ರಾಕ್ಷಿ
ವೆರಸಿ ರಂಜಿಪುದು ಮಾಹೇಶತತ್ವಾ ತತ್ವದುದರದಿಂ ರುದ್ರನೊಗೆದ ।
ನಿರುತ ಪರಶಿವನ ಪನ್ನೊಂದಱಿಂ ಪರಶಕ್ತಿ
ಪರಶಕ್ತಿಯೇಕಾದಶಾಂಶದಲಿ ನಾದವಾ
[8]ಪರಿಯ ನಾದದಿ[8] ಸದಾಶಿವನಾದ ಶಿವನ ಪನ್ನೊಂದಱಿಂದೀಶನೊಗೆದ‖ ‖ ೨೪ ‖

---

[1] ರ್ತಕತನ್ನ (ಘ). [2] ಳಂ ತನ್ಯಕ್ಕಿ (ಘ). [3] ವೇಶಾನಾ (ಘ). [4] ರಂಜನಿತ (ಖ). [5] ಮಾ. (ಖ.ಕ). [6] ಳುಎ (ಘ). [7] ವೇ (ಗ). [8] ಪರಿನಾದದಿಂ (ಗ.ಛ), ಪರಿಯುನಾದದಿಂ (ಕ).

ಈಶನೇಕಾದಶಾಂಶದಲಿ ಪುಟ್ಟಿದನು ಮಾ
ಹೇಶ ಮಾಹೇಶನೇಕಾದಶಾಂಶದಿ ರುದ್ರ
ಗಾಸಮಸ್ತಂ ಪರಶಿವಾದ್ಯೂರ್ಧ್ವತತ್ವನಾಮಂ ಮೂರ್ತಿವರ್ತಿಸುವವು।
ಪಾಶರಹಿತನತೀತನಪ್ರತಿಮನನಘ ನಿ
ರ್ದೋಷಿ ನಿರ್ಮಲ ನಿರಾಕಾರ ನಿರ್ಭಯದಿ ಮಾ
ಹೇಶತತ್ವಪ್ರಭಾಪಟಲಘಟಕಾಯ ಬಸವೇಶ ತಾನೀತನೆಂದ ‖ ೨೫ ‖

ಘಟಪ್ರವೇಶದಿ ತೋರ್ಪ ಸೂರ್ಯನಂತಭ್ರಕದ
[1]ಪಟ[1]ದಿ ತೋಱುವ ವರ್ಣಭೇದದದಂತಂಘ್ರಿಪೋ
ತ್ಕಟಫಲಪ್ರಕರರು[2]ಚಿನಿವಹ ಬೆರೆಯಿಸಲು ಜಲ[2]ಬೇಱೆಲ್ಲತತ್ವಂಗಳ।
ಪಟಲ ಪರಶಿವಶಕ್ತಿ ಬಸ[3]ವೇಶ[3]ಮೂರ್ತಿಗಳ
ನಟನಾಟಕದ ಸೂತ್ರಧಾರಿ ತ್ರಿಜಗನ್ಮೂರ್ತಿ
ನಿಟಿಲಾಮೃತಾಕ್ಷನಪ್ರತಿಮ ಕೂಡಿಹ ಕೂಟದಾದಿಯುನನಾದ್ಯಱಿಯ[4]ವೃ[4]‖ ‖ ೨೬ ‖

ಭೂತದೇಹಿಕನಲ್ಲದಿಹ ಭೂತನಾಥ ತಾ
ನಾತ ಜನನಂಮರಣವಿಲ್ಲದಿಹ ಜನಿತ ತಾ
ನಾತ ನಿಜನಾಮವಿಲ್ಲದ ನಾಮನಾತ ಘನಸೀಮೆಯಿಲ್ಲದ ಸೀಮನು।
ಖ್ಯಾತಿಯಿಲ್ಲದ ಖ್ಯಾತ ಕುಲವಿಲ್ಲದಾ ಕುಲಜ
ಭೀತಿಯಿಲ್ಲದ ಭೀತ ರೂಪಿಲ್ಲದಿಹ ರೂಪ
ನಾತನಾನಂದಮಯ ಶೂನ್ಯವಿಲ್ಲದ ಶೂನ್ಯ ಪ್ರಳಯವಿಲ್ಲದಪ್ರತಿಮನು ‖ ೨೭ ‖

ಯಂತ್ರವಾಹಕ ತಾನು ತನ್ನಮುಖದೊಳು ತ್ರಿಜಗ
ಮಂತ್ರವಿಹುದಾಗಿ ನಾನಾಜೀವರಾಶಿಗಳ
ತಂತ್ರಕ್ಕೆ ತ್ರೈಮೂರ್ತಿಗಳನಧಿಪರೆನಿಸಲಂತವರೊಳುತುಪತಿ ಸ್ಥಿತಿ ಲಯ।
ಮಂತ್ರಗಳ ಮೀಱು ವಿಕೃತದಿ ನಡೆವ ದುಷ್ಟ ಸ್ವ
ತಂತ್ರಗರ್ವಾರ್ಣವವ ಕದಡಿ ಲೋಕೋದ್ಧ[5]ಟೀ[5]
[6]ಯ[6]ಂತ್ರದೊಳ್ಕಾರಣಗಣೇಶಕುಲವಾದಾ ಮಹೇಶ ತಾನೀತನೆಂದ ‖ ೨೮ ‖

ಸತತ ಹರಿಯಜರ ಸಂಕ್ರಂದನರ ನಿರ್ಜರೋ
ರ್ಜಿತ ರವೀಶ್ವರರ ವಿಧುರಾಜರಂ ಯಕ್ಷೋಗ್ರ
ಮತರ ನಾನಾದೇವನಿಕರಮಂ ನಿಲಲೀಯದಡಿಗಡಿಗೆ ಜಡಿದು ಪ್ರಾಣ।

[1] ಮದರುಚಿನಿವಹಪಟದಿ (ಕ), ಮಠ (ಖ ಗ.ಥ.ಘ). [2] ಚಿನಿವಹಬೆರೆಯಿಸಿಜಲವು (ಘ), ರುಚಿ ಭಿನ್ನಬೆರೆಯಿಸಲು (ಕ.ಗ). [3] ವನಾ (ಘ). [4] ಲು (ಖ.ಕ). [5] ಟಿಕ (ಕ.ಖ.ಗ). [6] ಮ (ಕ.ಖ.ಗ.ಆ)

ಹತಿಮಾಡುತಿರ್ಪ ದೇವಾಸುರನ ಗರ್ವದು
ನ್ನತವ ಮುಱಿದಭಯವಿತ್ತಖಿಳಲೋಕಂಗಳಂ
ಕೃತಯುಮನೆನಿಪ್ಪಾ ಗಣೇಶಾವತಾರದಿಂ ಕಾಯ್ದಾತನೀತನೆಂದ ॥೧೯

ಅಗ್ಗದಮರರ ದೇವನಾಮದಿಂದೆಸೆವಾ ಸ
ಮಗ್ರದಿಂ ಕದಳಿಕುಲವಾಗಿರಲ್ಮೀಱಿದ ಮ
ಹೋಗ್ರ ಮತ್ತೇಭದಾಕಾರ ತಾನಾಗಿ ಮುಱಿದೊಟ್ಟುವ ಗಜಾಸುರನನು
[1] ನೆಗ್ಗಲೊರಸುತೆ ಚರ್ಮವಂ[1]ಬರವ ಮಾಡಿ ಹೊದೆ
ದುಗ್ರನೆಂದೆನಿಪಂ ಗಣೇಶನಾಮವ [2]ನಿಗಮ[2]
ಉಗ್ಘಡಿಸೆ ಕಾರುಣ್ಯಮೂರುತಿವರೇಣ್ಯನಾಗಿರ್ದಾತನೀತನೆಂದ ॥೨೦॥

ಶುಕ್ರಶಿಷ್ಯರ ಚಕ್ರನಿಕರಕಿಂದ್ರ ಬ್ರಹ್ಮ
ಚಕ್ರಿ ಮೊದಲಾಗಿ ತ್ರಿದಶರ್ ನಡೆದು ಯುದ್ಧಸಂ
ವಿಕ್ರಮದಿ ಹೊಯ್ದಾಡಿ ಕೆಡದ ದೈತ್ಯರ ಶೀರ್ಷಲೋಕಾದಿಲೋಕಂಗಳ ।
ವಕ್ರದಿಂದಾಗ್ರಹಿಸುತೇಳ್ತರುತಜಾಂಡಕುಲ
ಕಾ[3]ಕ್ರಮಿ[3]ಸುತಿಹ ಶಿರಂಗಳ ಮಾಲೆಯಂ ಧರಿಸಿ
ಶಕ್ರಾಧಿಪರ ಶಂಕೆಗಳೆದ ಶಂಕರನೆಂದೆನಿಪ್ಪಾ ಗಣೇಶನೀತಂ ॥೨೧॥

ಹರಿಯಜರ ಸುರರ ಕಿನ್ನರರ ಖೇಚರರ ಪಂ
ಕರುಹಮಿತ್ರರ ಕರ್ಮನಿರ್ಮಲವ ಮಾಡಿ ತಾ
ಪರಮಸುಖ[4]ಪದವಿತ್ತು[4] ಪರಮನೆಂದೆನಿಪಾ ಗಣೇಶನಾಮದಿ ಮೆಱೆದನು ।
ಧರೆಯಂಬರಂ ಸೋಮ ಸೂರ್ಯಾದಿಗಳು ಲೋಕ
ವಿರಚಿಸದ ಮುನ್ನ ಕಾಳಾಂಧಕಾರದೊಳು ಘನ
ವೆರಸಿ ಪರಮಂ [5]ಬೆರ[5]ಸಿ ಕಾಲಾಗ್ನಿರುದ್ರನೆಂದೆನಿಸಿದ ಗಣೇಶನೀತಂ ॥೨೨॥

ನರರು ಸುರರಸುರರಜ ಹರಿ ರುದ್ರರಿಂಗೆ ಯುಗ
ಚರದಿ ಪರಮಾಯುಷ್ಯ ತೀರಲ್ಕಲಪ್ರಳಯ
ಬರಲುಂಟು ತನಗಿಲ್ಲವಾಗಿ ಜರೆ ಮರಣ[6]ರಹಿತಾ ಗಣೇಶ್ವರ[6]ನಾದನು
ಗಿರಿಜಾವಿವಾಹದೊಳು ನೀಲಲೋಹಿತಗಣೇ
ಶ್ವರ ತ್ರಿಪುರಸಂಹಾರದಲಿ ಸ್ಕಂದ ಕಮಲಜೋ
ದರ ಶತಾನಂದ ಕಂಕಾಳಶಿರಧರನಾಗಿ ನೀಲಕಂಠನುಮೆನಿಸಿದ ॥೨೩॥

---

[1] ನೆಗ್ಗಲೊರಸಿಯಚಿತ್ರಾಧ್ವರಮನಂ (ಕ), ನುಗ್ಗಿಯಚಿತ್ರಾಧ್ವರಮನಂ (ಖ). [2] ನಿಮಗೆ (ಛ.ಗ.ಕ.ಖ). [3] ಗ್ರಹಿ (ಕ.ಗ.ಛ). [4] ಮಂ ಕೊಟ್ಟು (ಕ.ಖ.ಗ.ಛ.ಚ). [5] ಗ್ರಹಿ (ಜ). [6] ರಾಹಿತ್ಯಗಣವರ (ಕ.ಗ).

ಕಾಲನು ಮನೋಹರನು ನಂದಿಕೇಶ್ವರನಕ್ಷ
ಮಾಲಿ ಮನ್ಮಥವೈರಿ ಮಾಯಾವಿರುದ್ಧನು ಕ
ಪಾಲಿ ಕಂಪಿತನು ತ್ರಿಯಂಬಕನು ವಾಮರುದ್ರನು ಮಹಾರುದ್ರೇಶನು।
ಶೂಲಿ ಧೂರ್ಜಟಿಯನಿಮಿಷನು ವೃಷಭ ಸೋಮ ಕರ
ಪಾಲಂ ವಿರೂಪಾಕ್ಷ ವಿಶ್ವತೋಮುಖ ಭೀಷ್ಮ।
ಭೀಳನಾದನು ಬಹಳಕಾಯ ತಾನೆನಿಪಾ ಗಣೇಶಾವತಾರನಹನು ‖೩೪‖

ಆವುದಾವುದನುಪಮಿಸಲ್ಬಹುದಮೃತವನಧಿ
ಪಾವನತರಂಗಗಳ ಬಸವೇಶ್ವರನ ಗಣೇ
ಶಾವತಾರಗಳನಭಿವರ್ಣಿಸಲು ಲೆಕ್ಕಿಸಲು ನಿಗಮಂಗಳಱಿಯಲಳವೆ।
ದೇವ ದಾನವ ಮಾನವರ್ಗತೀತನ ಘನವ
ನಾವ ಸ್ತುತಿಸಲು ಬಲ್ಲ[1]ನಿ[1]ಲ್ಲದಂತಿರಲೆಥಾ
ಭಾವಮಂ ಬಿನ್ನಹಂ ಮಾಳ್ಪೆನೊಲಿದಾಲಿಪುದೆನುತ್ತ ನಂದೀಶನೆಂದಂ ‖೩೫‖

ಆತನೀವಱಿಯದವನಲ್ಲದೆಂತೆನೆಯುಗ್ರ
ವಾತ[2]ಶಂಕೆಯಶಂಕೆ[2]ಯಂ [3]ತಿರುಗಿ[3]ದಲ್ಲಿ ಜಲ
ಯೂಥದಿಂದಖಿಳಲೋಕಂಗಳಳಿದಿರಲು ತಾನಾಕಾಶಬೆಳಗುವೆತ್ತು।
ಭೂತಚೈತನ್ಯವಿಲ್ಲದೆ ಗೋಯೆನಿಸಿ ನಿಲ
ಲ್ಕಾತುರದಿ[4]ಸೃಷ್ಟ್ಯರ್ಥ[4]ಕಾರಣಂ ತಾ ಗೋಪ
ಜಾತನಾದನು ಧರ್ಮವೃಷಭನಾಮದಿ ಬಯಲನೇ ಮಾಡಲಾಯ್ತು ಜಗವು ‖೩೬‖

ಕಮಲಜ ಮುಖದಿ ಲಲಾಟದಿ ಮಹೇಶ್ವರಶೃಂಗ
ಸುಮನಸ ಸಹಸ್ರಾಕ್ಷಧೋಕ್ಷಜಾದಿ ದ್ವಿ[5]ಜ
ಕ್ರ[5]ಮದಿಂ ಮರುದ್ಗಣಾಧಿಪರು ಜಿಹ್ವಾಗ್ರದೊಳು ಪ್ರಣಮನಿಗಮಪ್ರಕರವು।
ದ್ಯುಮಣಿಪ್ರಸೂತೀಕ್ಷಣದಿ ಶ್ರವಣದಿಂದಶ್ವಿ
ನ್ಯಮರಕುಲ ಕಕುಭದೊಳ್ನಕ್ಷತ್ರಗ್ರಹಸರ್ವ
ನಮಜಗಚ್ಛೃಷ್ಟಿಯ ವ್ರತಾಚಾರ್ಯರೆಕ್ಷರೊಗೆದರು ರೋಮಕೂಪಂಗಳಿಂ ‖೩೭‖

ಅಂಡದೊಳ್ಬ್ರಹ್ಮಾಂಡಕೋಟಿಗಳು ಜಠರೋರ್ಧ್ವ
ಮಂಡಲಂ ಪೃಥ್ವ್ಯಷ್ಟಕುಲಗ್ರಾವ ತನುವಾಲ
ದಂಡದಿಂದಾದಿ[6]ಯು[6]ಸರಾಮಲಿಂಗದಿ ಸಪ್ತಸಾಗರನದೀವ್ರಜಗಳು।

---

[1] ನ (ಕ.ಖ.ಗ.ಚ.ಛ). [2] ಸಂಖೆಯಶಂಖೆ (ಧ.ಫ.), ಶಂಖೆಯಗಂಖೆ (ಕ.ಗ).
[3] ತೀರಿ (ಫ). [4] ಶ್ರೇಷ್ಠಾರ್ಥ (ಕ.ಖ). ಶೃಷ್ಟ್ಯಾರ್ಥ(ಗ). [5] ಜಾಗ್ರ(ಫ), ಕ್ರಮದಿಂ (ಖ).
[6] ಯು (ಗ.ಕ.ಖ).

ಗಂಡಸ್ಥಲದಿ ಗಣ ಸ್ಕಂದದಿಂ ಸ್ಕಂದಸುರ
ತಂಡಂ ಖುರಾಗ್ರದಿಂ ಕಾಕೋದರನು ಭೂತ
[1]ಮಂ[1]ಡಲೋದ್ಭವಕಾಶ್ರ[2]ಯಂ ಆದ[2] ಗೋಪನೆಂದೆನಿಸಿದ ವೃಷಭರಾಜನು ॥೩೮॥

ಪ್ರಣವಾದಿ ಶಬ್ದೋಪಧೃತಿಕಕುಭ ತ್ರಿದಿವ ದ್ಯು
ಮಣಿ ದೃ[3]ಷ್ಟಿ[3]ಧೇನು ಕಾಶ್ಯಪಿವ[4]ನಾನೀಕ[4]ಗೋ
ಗಣಮೆನಿಸಿ ಜ್ಞಾನಮುಖದಿಂದ ನಿಸ್ಸೃತರು ನಿಲಲಖಿಳವುತ್ಪನ್ನಜೀವ।
ತಣಿವಿಡಿದು ತಾ ಗೋಪನೆನಿಸಿರ್ದ ವೃಷಭಸಂ
[5]ಗ[5]ಣಿಸಿ ಸಂಭ್ರಮವೆರಸಿ ಠಣಕರಿಸುತುಗ್ರದಿಂ
ತ್ರಿಣಯನೊಡ್ಡೋಲಗಕೆ ಬಂದ ವೃತ್ತಾಂತಮಂ ಪ್ರಮಥರೊಲಿದವಧರಿಪುದು ॥೩೯॥

ಅನ್ಯಕಥನಾಗಮದೊಳನಿಮಿಷೇಂದ್ರತ್ವಪ
ಟ್ಟಾನ್ವಯದ ಖಾಂಡವನವಂ ಪೊಕ್ಕು ಓಡಾಡಿ
ತನ್ನಿಷ್ಟ ಸಿದ್ಧರಸಮಂ ಕೊಡುವ ಇಕ್ಷುವಾಟಿಯ ವೃಷಭ ತುಳಿದು ಕೆಡಿಸಿ।
[6]ಮನ್ನಿಸದೆ ರಕ್ಷಕರ[6]ಧಿಕ್ಕರಿಸಿ ವೃಷಭನಿಂ
ತನ್ನಾಯಮಂ ನೆಗಳ್ದನೆಂದೀಶಗಱುಪೆ ಶಿವ
ನಿನ್ನುಪಟಳಕ್ಕಂಜುವೆವು ವೃಷಭ ಎನೆ ಮುಳಿದುಪೋದನೆಂದುಸುರ್ವುದಲ್ಲ ॥೪೦॥

ಈ ಸಂದರ್ಭಕ್ಕೆ ಕ್ರಿಯಾಸಂಪಾದನೆಯ ಸೂಚಿತವಚನ—

ಕರ್ಮವೆಂಬ ಅಂಕದೊಳು ತೊಡರಿದೆ. ಬಿನ್ನಪವನವದಾರು ನಿಮ್ಮಾಳನ ಭಾಷೆಯ. ಕಡೆಗಳಕೆ ನೂಕುವೆ, ಕೆಡಹುವೆ. ಅಂಕವನು ನಡುವೆ ಪಸರಿಸಿದಡೆ ನಿಮ್ಮಾಳಾನಲ್ಲ. ಕರೆದರೆ ಓ ಎನಿ[7]ಸಿದ[7]ಡೆ ನಿಮ್ಮಾಳಾನಲ್ಲ. ಶಿವನೆಂಬ ದಂಡೆಯನೊಡ್ಡಿ ಗಣಮೇಳಾಪವೆಂಬ ಅಲಗಿನಲಱುವೆ ಕೂಡಲಸಂಗಮದೇವಾ ॥೬॥

ವೇದಾಂತ ಸಿದ್ಧಾಂತ ತರ್ಕತಂತ್ರಾದಿಗಳು
ವಾದಿಸುವ ತೆಱದೊಳೊಂದಿನ ಕ್ರಿಯಾಭಾವಪ್ರತಿ
ವಾದ ಮುಖಗೈದುಭಯಪ್ರಕೃತಿಗಳು ಬಂದಭವನಿದಿರ[8]ನಿಂದೊಂದೊಂದನು[8] ।
ಮೂದಲಿಸುತಿರೆ ಸದಾಶಿವ ನಗುತ ಧರ್ಮಾಸ
ನಾಧಿಪತಿ ವೃಷಭನೈದನೆ ಕೇಳೆನಲು ಭಾವ।
ವಾ ದಿವ್ಯಮುಖಕೈದಿತೇಕಾರ್ಥ[9]ಭ್ರಮಿಗೆ ಕ್ರೀ[9]ಸುರರ್ಗಳ ಮುಖಕ್ಕೈದಿತು ॥೪೧॥

---

[1] ಖಂ (ಕ ಗ.ಖ). [2] ಯವಾದ (ಕ.ಖ.ಗ), ಯದಾದ (ಘ). [3] ಷ್ಟಿಯಂ (ಘ). [4] ನಾಗಿ (ಘ). [5] ದ (ಖ). [6] ಬೆನ್ನೀಯದವರ್ಗಳಂ (ಕ.ಖ.ಗ). [7] ಸದಿರ್ದ (ಕ.ಖ.ಗ.ಘ.ಘ.ಚ). [8] ನಿಂದಿಂತೆಂದವು (ಖ). [9] ಧರ್ಮಕ್ರಿಯೆ (ಖ).

ಒಂದಂಗವೆರಡಾದ ತೆಱದಿ ಕ್ರಿಯಭಾವಂಗ
ಳೊಂದೊಂದನಾಶ್ರೈಸಿಯಾ ಮುಖದಿ ಚೇಷ್ಟಾತ್ಮಕ
ಳಾಂದೋಳದಿಂದಿರುತ್ತಿದ್ದುದೀ ಕ್ರಿಯೆ ಕೃತಕಬುದ್ಧಿ[1]ಮೊಳೆತ[1]ಮರೇಂದ್ರರ।
ಗೊಂದಣದೊಳನಿಮಿಷನೆನಿಪ ಕ್ರತುಪುರುಷನ ಕೈ
ಯಿಂದ ವೃಷಭೇಶ್ವರನ ವಾಲಾಗ್ರದೊಂಗಲೊಳ
ಗೊಂದು ಘನವಜ್ರರೋಮವ ಪಿಡಿದಲುಗೆ ಬಾಲಗೊಡಹೆ ಮಥನಂ ಮಸಗಿತು*॥

ಸನ್ನುತಶಿವನ ಸಮ್ಮುಖದೊಳಿಹ ವೃಷಭ ವಾಲ
ಮನ್ನಭಕ್ಕೆತ್ತಿ ಪೊಯ್ಯಲ್ಕಿಂದ್ರನಗ್ನಿ ಯಮ
ಬಿನ್ನಣದ ನಿರುತಿ ವರುಣಂ ವಾಯು ಧನದೇಶನಾದಿ ನಿರ್ಜರರ ಮುಖವು।
ಖಿನ್ನವಾಗಲ್ಮತ್ತೆ ಸೆಳೆಸೆಳೆವುತೆಳೆಯೆ ಜಲ
ಜಂನಿಕರ ಶುಭ್ರಾಂಶುವಿಂಗೆ ತಲೆವಾಗುವೋ
ಲ್ಬನ್ನಬಟ್ಟಮರರತಿರೋಷದಿಂ ಶಾಕ್ವರಂಗೆಂದರದನೇನೆಂಬೆನು ॥ ೪೩ ॥

ಇಂಗಡಲ ಮಗಳಮಗನಂ ಗಗನಪ[2]ಟ[2]ವಾಳ್ವ
ನಂಗಮಂ ತಿಳಿಯಲ[3]ರಿ[3]ದಿಂತು ಖೇಚರ ಭೂಚ
ರಂಗಳೊಳು ಕರಿ ತುರಗ ರಥರಾಜಿ ವಾಹನಗಳಿಲ್ಲದವೋಲೊಂದೆತ್ತನು।
ಸಿಂಗರಿಸಿ ತಂದು ನಿಲಿಸಲ್ಸುರೇಶ್ವರರ ಮುಖ
ಭಂಗಮಂ ಮಾಡು[4]ತಿದೆಯಿ[4]ಲ್ಲದೊಡದೇಂ ಕಾರ್ಯ
ಭಂಗುರಮೆ ಎನುತ ಗುಜುಗುಜುಗೊಳ್ವ ನಿರ್ಜರರ ನುಡಿಗೇಳಿ ವೃಷಭೇಶನು ॥೪೪॥

ನಿಂದು ಶಿವ ಸರ್ವಗತನಿವರೊಳಿದ್ದೀ ನುಡಿಯ
ನೆಂದೆನಿಸದಿಹನೆ ಈ ಶಕ್ರಗಿಕ್ರರ್ಕರುಗ
ಳಂದಮಂ ನೋಳ್ಪೆನೆನುತುರುಗುಪ್ತದಿಂ ತಿರುಗಿದಂ ಖತಿಯೊಳಂತಾ ಸಭಾ।
ಮಂದಿರವನುಳಿದು ಬ್ರಹ್ಮೇಂದ್ರಾದಿಲೋಕಗಳ
ಹಿಂದುಗಳೆವುತ ರಜತರುಕ್ಮಾಚಲಂಗಳಂ
ಸಂದ ಕೀಲಕ ನಗಾಂತರದೊಳೊಂದಮೃತಶೀಕರಗಂಡಶೈಲಾಗ್ರದಿ ॥ ೪೫ ॥

ನಿಂದು ನಾಲ್ದೆಸೆಯ[5]ನುಗ್ರದಿನೀಕ್ಷಿಸಲ್ದಿಶಾ[5]
ಬಂಧವಮಾ[6]ದುದ[6]ದೆಂತು ಕಾಲಚಕ್ರವು ವಕ್ರ।
ದಿಂದೆಸಗಿತಬ್ಜಸಖರಾಜರ ರಥಂ ಕೀಲಿಸಿದವು ಸುರಸುರರಾಜರ॥

---

[1]ಯೊಳಗ (ಖ, ಕ). *"ಘ" ಪ್ರತಿ ಹೊರತು ಇನ್ನುಳಿದ ಮಾತೃಕೆಗಳಲ್ಲಿ ೪೨–೪೩ನೇ ಪದ್ಯಗಳ ಮಧ್ಯೆ ಏಳು ಪದ್ಯಗಳು ಹೆಚ್ಚಾಗಿವೆ. ಇವು ಪ್ರಕ್ಷಿಪ್ತವೆಂದು ಕಾಣುತ್ತದೆ. ಆದ್ದರಿಂದ ಅವನ್ನು ಅನುಬಂಧದಲ್ಲಿ ಕೊಟ್ಟಿದೆ. ಈ ೪೩ನೇ ಪದ್ಯ 'ಖ' 'ಗ' 'ಛ' ಪ್ರತಿಗಳಲ್ಲಿ ಇಲ್ಲ. [2] ಪಿ (ಕ. ಖ.ಜ.ಗ). [3] ರಿಯ (ಘ.ಜ). [4] ತಿಂತೆಲ್ಲರುಂ ನೋಡದೇಂ (ಜ). [5] ನೀಕ್ಷಿಸಲುಗ್ರದಿಂಶ್ವಾಸ (ಖ). [6]ದು (ಘ).

ವೃಂ[1]ದಾರಕರ[1] ಸಿದ್ಧರಸ ಬಱೆತು ಕಲ್ಪತರು
ಕುಂದುವೊತ್ತುದು ಪರುಷಚಿಂತಾಮಣ್ಯಾದಿಗಳೊ
ಳೊಂದುಗುಣವಿಲ್ಲ ಶುಚಿಯಾದಿಯಾದಮರನಾರಿಯರ ಸೋರ್ಮುಡಿ ಮುಸುಳ್ದವು॥

ಹರಿಯ ಸೊಬಗಜನ ಜಾಣ್ ಶಕ್ರನುನ್ನತಿಯಬ್ಜ
ವರನ ಕಾಂತ್ಯಗ್ನಿಯ ಸುತೇಜ ಶಶಿಯುರುಶಾಂತಿ
ಯುರವಣಿಗಳಲ್ಲಲ್ಲಿ[2]ನಿ[2]ಲ್ಲದಾದವು ಹವ್ಯಕವ್ಯವಾಗಮನಿಗಮದ।
ಪರಿಪ್ರಪಂಚಂಗ[3]ಳಾದವು[3] ಧರಾತಳದೊಳುಱೆ
ಹರಿವ ಜಲ ಸುರಿವ ಮೇಘಂ ಕಱೆವ ಪಶು ಫಲಂ
ಬಱಿತವು ವೃಷಭನುಗ್ರಕಿಂಚಿದಾ[4]ಕ್ಷೇಪ[4] ಚಿಂ[5]ತಾ[5]ನಿರೀಕ್ಷೇಕ್ಷಣದೊಳು ॥ ೪೭ ॥

ಇರೆ ವೃಷಭನಾ ಶೈಲಶೃಂಗದಲ್ಲಿತ್ತಲುಮೆ
ವರನು ಮಱುದಿವಸದೋಲಗದೊಳತಿ ವಿಪರೀತ
ವಿರಚಿ[6]ತ[6]ದೇಂ ಪೂರ್ವಪ್ರಳಯಮಂ ಸೂಚನೆಯ ಸೂಚಿಸುವ ದೂತ[7]ನವೊಲು[7]॥
ಹರಿ ರಜಂಗುಂದಿದ ಶಶಾಂಕ [8]ಕಾಂತಿಯ[8]ನುಳಿದ।
ಸುರರ ಮೊಗದಾಯುಷ್ಯಮಿಲ್ಲ ಶಕ್ರನ ಪದಂ।
ಪರಿಹರಿಸಿತಜಶಾರ್ಙಗಳ ಪ್ರಭಾಪ್ರಕಟವಿಲ್ಲೆನುತ ಪ್ರಬುಧಾಚಾರ್ಯನು ॥ ೪೮ ॥

ಮತಿಗುಂದಿ ಭೀತಾತುರದಿ ಭಯಂಬೊಯ್ದು ಮುಂ
ಗತಿತಪ್ಪಿ ಮಱೆ[9]ದುದೋ[9] ಕಾಲಚಕ್ರಗಳ ಪ
ದ್ಧತಿಯು ಪ್ರಮಾಣಗಳನಱಿದುದಿಲ್ಲೋ ಎನಲ್ತಮ್ತಮ್ಮ ದೇಹಂಗಳ।
ಸ್ಥಿತಿವೇಳೆ ಪ್ರಚ್ಛನ್ನದಿಂದಲೋರ್ರೋರ್ವರು
ನ್ನತಿಗುಂದಿರಲ್ಕಂಡದಂ ಹರಿಯೊಳಾ ಬೃಹ
ಸ್ಪತಿಯೆನಲುಮಾಧವಂಗಾ ಹದನನಾತ ಬಿನ್ನಪ ಮಾಡೆ ಶಿವನೆಂದನು ॥ ೪೯ ॥

ಲೋಕವೆರಡೇಳಱೊಳಗಾವ ನೆಗಳ್ದತಿ ಬಳದ
ಭೀಕರವ ನೀಕರಿಪೆನೆನುತಲಿಂತೆಂದ [10]ವ್ಯತಿ[10]
ರೇಕ ವೊಂ[11]ದಾದಡೇ[11] ಸಾಕದಂತಿರಲಿ ಶುದ್ಧಾತ್ಮ ವ್ರತಾಧೀಶರ।
ಏಕನಿಷ್ಠಾಗಮಾಚಲಜ್ಞಾನ ಸತ್ಯಪರ
ಮಾಕರ ಪವಿತ್ರವೈರಾಗ್ಯಸದ್ಭಕ್ತಿಯುತ ‖೫೦[12]‖
ರಾ ಕಡೆಯ ನಿಂದೆಯಿಂದಾದೊಡದ ಕಳೆ[12]ಯಲರಿದೆಂದು ಮಗುಳಿಂತೆಂದನು

---

[1] ದಾಕರ (ಫ), ದಕರಹ (ಕ.ಥ.ಗ). [2] ಗಿ (ಕ). [3] ಳೊಕವು (ಗ). [4] ಪೇಕ್ಷೆ (ಕ.ಖ ಗ.ಫ). [5] ತನೆ (ಫ). [6] ದ (ಕ.ಖ). [7] ನಂತೆ (ಫ). [8] ಶಾಂತತೆಯ (ಫ). [9] ದನಾ (ಕ.ಗ.ಥ.ಖ). [10] ನ (ಫ). [11] ದೊಂದಾಡಲೇ (ಕ.ಫ), ದೊಂದದಡೆ (ಗ). [12] ವಡರಿದ್ದೈಯೆನಲು ಂಡವರ್ಗಳು (ಕ.ಗ.ಖ.ಥ).

ಸಾಕಾರ ನಿರವಯವನಾಕಾರಮಾಡಿ ಹೃ[1]
ತ್ಕೋಕನದ [1]ಭಾವಸದನದೊಳು ಮದ್ರೂಪಮನ
ನೇಕಮೂರ್ತಿಯನೇಕಮೂರ್ತಿಯಂ ಮಾಳ್ಪರಂತಾಗವರ ನಿಂದೆ [2]ಘನವು[2]।
ನಾಕಾಧಿಪ[3]ರ ಮರ್ತ್ಯರೋರಗ ಖಚರ ಚರಾ[3]
ನೀಕದೊಳಗಿಂದಿನೋಲಗದೊಳಾರಿಲ್ಲಱಿಯ
ಬೇಕವರೊಳಾಗದಿರದೀ ಕಥನವೆಂದು ಶಿವ ವನಜಾಕ್ಷಗೆನಲಾಕ್ಷಣ ॥ ೫೧ ॥

ಯಕ್ಷರ ಸಭೆಯೊಳುರಗರೋಲಗದಿ ಸುಮನಸಾ
ಧ್ಯಕ್ಷವೀಧಿಯೊಳು ವಿಧು ಹಂಸ ಮರುದನಲಪ್ರ
ದಕ್ಷಿಣದಿ ನಾನಾವಿಧಪ್ರಮಥಪದ್ಧತಿಯೊಳಬ್ಜಜರ ಸಂತತಿಯೊಳು ।
ಋಕ್ಷಯೂಥದಿ ಕಿನ್ನರಪ್ರಕರದೊ[4]ಳ್ಭುಜಗ
ಭ[4]ಕ್ಷರ ಸಮೂಹದೊಳು ಸಿದ್ಧಕುಲದೊಳ್ಖಚರ
ದಕ್ಷಿಣೋತ್ತರ[5]ಪ್ರತೀಚ್ಯಾಶಾ[5]ಧಿಪರೊಳು ಶಾಶ್ವತದೇವತಿಂತಿಣಿಯೊಳು ॥೫೨॥

ಪೊಕ್ಕುದಧಿತಲ್ಪನಾ ಸಭೆಯೊಳಂದವರನ
ತ್ಯಕ್ಕಱಿಂದೀಕ್ಷಿಸುತಿರಲ್ವೃಷಭನಲ್ಲಿಲ್ಲ
ದಿಕ್ಕೆ ವಿಭ್ರಮವಿಡಿದಿದಹುದೆನುತ್ತಾಹದನ ವಳಜಾಧಿಪರ ಕೇಳಲು ॥
ಸೊ[6]ಕ್ಕಿಂದ[6] ಗೀರ್ವಾಣಸಚಿವರ ಮದೋನ್ಮತ್ತ
ದಿಕ್ಕರಿಗಳಂ ಸೀಳ್ವೆನೆನುತ ನಿನ್ನಿರುಳೋಲ
ಗಕ್ಕೆ ಶಿವ ಬೀಳ್ಕೊಡದ ಮುನ್ನ ವೃಷಭಂ ತೆರಳ್ದನೆತ್ತಣದೊ ನಾವಱಿಯೆವು॥೫೩॥

ಎಂದು ವಳಜೇಶ್ವರರೆನಲ್ಪದ್ಮನಾಭ ದೇ
ವೇಂದ್ರಾದಿಗ[7]ಳ[7]ಕನಲ್ದು ನಿಮ್ಮಯ ಮದೋನ್ಮತ್ತ
ದಿಂದ ವೃಷಭನನದೇನೆಂದಿರೋ ಎನಲು ವೃದ್ಧಶ್ರವಸನಿಂತೆಂದನು ।
ಇಂದಿರಾವರ ಚಿತ್ತವಿಸು ಸಭಾಮಧ್ಯದೊ
ಳ್ನಿಂದು ವಾಲಾಗ್ರದಿಂದೊಗೆದಡಱಿಯದೆ ಸುರರ್ಗ
ಳೆಂದರೊಂದೇ ಮಾತನ್ನೈಸಲ್ಲದಪಶಬ್ದ ಬಂದುದಿಲ್ಲೆನಲೆಂದನು ॥೫೪॥

ನಾಕಲೋಕವು ಪರಿಧಿ ವಾರಿದ ವರೂಥ ಗಜ ।
ನೀಕವೈರಾವತಾದ್ಯಶ್ವವುಚ್ಚೈಶ್ರವಾ ।
ನೇಕಸುರಪರಿವಾರ ಪುರವದಮರಾವತಿಯು ರಾಣಿ ಶಚಿ ನಿಜತನಯನು ॥

---

[1] ದಾಗ್ರದಿಂಭಾವಸದನದಿ ಬಹಳ (ಕ.ಗ.ಖ.ಥ). [2] ವೂತ್ತು (ಕ.ಥ.ಗ).
[3] ಮರ್ತ್ಯರೋರಗಖಚರಚರ (ಕ.ಗ.ಖ). [4] ಳು ಜಗಧ್ಯ (ಘ), ಳ್ಭುಜಗಧ್ಯ (ಕ).
[5] ದಿಶಾಧಾಷಾ (ಕ.ಖ.ಗ.ಘ.ಚ.ಥ) [6] ಕ್ಕಿರ್ದ (ಕ.ಖ.ಘ). [7] ಳು (ಕ.ಖ).

ಪಾಕಶಾಸನಿ ಕಲ್ಪತರು ಕಾಮಧೇನುವೆ ಪ
ಯಾಕರಂ ಸಿದ್ಧರಸ ಪರುಷ ಚಿಂತಾಮಣಿಯು
ನೇಕ ಪದ ನಿನಗುಂಟಬೆಂದು ಮುಂದಱಿಯೆ ಕೇಳ್ಕೇಡಹುದು ನಿಂದೆಯಿಂದ ॥೫೫॥

ಎಂದು ಪೇವೇಂದ್ರಂಗುಪೇಂದ್ರನುಪದೇಶಗೊಡು
ವಂದಮಂ ನಾರದಮುನೀಂದ್ರ ಕೇಳ್ದುತ್ಸಹದಿ
ಬಂದಭವನಿದಿರಿನೊಳು ನಿಂದೆಥಾಕಥನವಿರಲೊಂದಕೊಂಭತ್ತ ನೆನೆದು ।
ಸಂದಿಕ್ಕಿ ಸಹಸ್ರಮುಖನಾಗಿ ನಾನಾಶಬ್ದ
ದಿಂದಂದು ಸುರರಾಜರೆಡೆಗತಿ ಮಹಾ[1]ಖತಿ[1]ಯು
ಚಂದ್ರಧರ ಕೆರಳ್ದ್ಬೊಲತಿ ವಿಸ್ತರಿಸಿ ಪೇಳ್ದನು ವಿರುದ್ಧವಿದ್ಯಾ[2]ರತ್ನ[2]ನು ॥೫೬॥

ರಾಜಶೇಖರವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ [3]ಶಿವಾಗಮದೊಳಿ[3]ದು ನಂದಿಕೇಶವಿ
ಭ್ರಾಜಿತಾನ್ವಯ ವೃ[4]ಷಮ[4]ಹಾತ್ಮೆ ಸು[5]ರ[5]ಸಂಪಾದನೆಯ [6]ಪೂರ್ವಸಂಧಿಪೂರ್ಣ[6] ॥

---

[1] ಬಲೆ (ಷ). [2] ಚಿತ್ರ (ಷ). [3] ಪವಾಡದೊಳಗಿ (ಷ). [4] ಷಧಮಾ (ಷ.ಜ).
[5] ರರ (ಷ). [6] ಪೂರ್ವಸಂಧಿ (ಷ).

ಮೂರನೆಯ ಸಂಧಿ

ಸೂಚನೆ—

ವಾಸವಸುರೌಘಮಂ ಗೆಲ್ದು ಭೂಕಾಂತೆಯ ವಿ ।
ಲಾಸಮಂ ವಿಸ್ತರಿಸಲೆಳ್ತರುತ ದಕ್ಷಿಣಪ್ರ ।
ದೇಶ ಭಾರತವರುಷದೊಳಗೇಕಚಕ್ರಪುರಪ್ರಾಂತ್ಯಕೈತಂದ ವೃಷಭ ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಅವಧರಿಸಿ ಪ್ರಮಥರೊಂದಿನಮನಿಮಿಷಾದೀಂದ್ರ
ನಿವಹ ನಿಂದಿಸೆ ವೃಷಭ ಪೋದ ವೃತ್ತಾಂತಮಂ
ಶಿವನೊಳುಸುರಿದನು ನಾರದಮಹಾಮುನಿಯದಕ್ಕಭವ ಕನಲ್ದನು ಶಕ್ರನ ।
ಪವಿಯ ಸೆಳೆದೈಶ್ವರ್ಯಮಂ ತೆಗೆವೆ ಯೋನಿಗಾ
ತ್ರವಿವೇಕವೆಮ್ಮೊಳೇಕಾ ಬಲನಮುಚಿಗಳೇ
ಹವಣಱಿಯೆ ವೃಷಭನೊಳ್ಸರಸವೇಕಾತನಾರೆಂದಿಹೆ ಯೆನುತ್ತೆಂದನು ॥೨॥

ಆವೆಡೆಗೆ ನೀ ಕಳುಹಿದಾಯೆಡೆಗೆ ಪೋಗಿ ವೃಷ
ಭಾವತಾರನ ಕರೆದು ತಾರದೊಡೆ ಬಳಿಕ ನೀ
ಸಾವೆಯೆನಲಾಕಂಪಗೊಳುತುತ್ತರಂಗೊಡಲ್ಕಂಜಿ ಕೈಕೊಂಡು ಪೋಗಿ ।
ದೇವನಿಕರವ ನೆರಹಿಕೊಂಡು ವೃಷಭೇಶನಿಹು
ದಾವಲೋಕವದಾದಡಂ ಪೋಪೆನೆನುತ ತೆರ
ಳ್ದಾ ವಜ್ರಧರನೊಡನೆ ನಡೆದ ಬಲಬಹಳತೆಯನೇನನಭಿವರ್ಣಿಸುವೆನು ॥೩॥

ಹೊಡೆದರಳುಕದ ಇಱಿದಡೋಸರಿಸ[1]ದಿಹ ರಣದಿ[1]
ಕೆಡೆಯದರಿಭಟರಿಗೋಡದ ಶಸ್ತ್ರ[2]ನಿಕರಕೆ[2]ಡೆ
ಗೊಡದ [3]ದೃಢ[3]ವಜ್ರಕಾಯದ ಬಹಳಕರತಳದಿ ಪುಷ್ಕರ ಭವಾಂಡಂಗಳ ।

---

[1] ದಾಹವದಿ (ಗ.ಷ). [2] ವ್ರಾತಕೆ (ಷ). [3] ದೃಥ (ಕ.ಖ).

ನೊಡೆದು ದಿಗ್ಗಜದ ದಾಡೆಯ ಕೀಳ್ವ ವಿಷ್ಣುಪದ
ಪೊಡವಿಯಂ ತಾಳ[1]ಗೂಡು[1]ವ ದಿವಿಜನಾಯಕರ
ಪಡೆ ನೆರೆದುದಮೃತದೇಹದ ಗಂಡುಗಲಿಗಳಂತಗಣಿತವದೊಂದೆಡೆಯಲಿ ॥೪॥

ಝಡಿದು ಜಲಜಾಂಡಗಳನೊಡೆದು ಘರ್ಜಿಸುವ ಘನ
ಸಿಡಿಲಸಿಂಧದ ಚಂಚಲಪ್ರಕರದಾಯುಧದ
ಘುಡುಘುಡಿಪ ಮೇಘನಿಸ್ವನ ಧ್ವನಿಗೊಡುವ ಸಪ್ತ[2]ಸಾಗರಂಗಳನೆಲ್ಲವ[2] ।
ಕುಡಿದು ವಡಬನ ನುಂಗಿ ವ್ಯೋಮದೊ[3]ಳ್ಮಗುಳ್ದುಗುಳ್ದು[3]
[4]ಬಿಡು[4]ವ ಜೀಮೂತಾದಿವಾಹನರ ವಿಸರ ಬಂ
ದೊಡೆಯ ಶಕ್ರನ ಕಾಣುತಿರ್ದುದೇವೇಳ್ವೆ ನುತವಿದ್ಯಾಧರಸ್ತೋಮವು ॥೫॥

ವಾಯುತುಷಿತರು ಮಹಾರಾಜಿಕರು ಭಾಸ್ವರೆತಿ
ರಾಯರು ಪಿಶಾಚ ಗುಹ್ಯಕರಶ್ವಮುಖ ಸಿದ್ಧ
ನಾಯಕರ್ಗಂಧರ್ವರೆಕ್ಷರುರಗಪ್ಸರಾಧಿಪರುಗ್ರಭೂತವ್ರಜ ।
ಕಾಯನಿಷ್ಕಾಯದ ನಿರೂಪರೂಪದ ದೇವ
ನಾಯಕರ್ತಮ್ಮತ್ತಮ್ಮ ವಾಹನಗಳೇಱಿಯುಱ
ಳಾಯುಧಂಗಳ ಕೊಂಡು ಪರಿವಿಡಿದು ವಜ್ರಧರನೊಡನೆ ಪೊಱವಂಟರಂದು ॥೬॥

ಈ ಪರಿಯೊಳತಿರಥ ಮಹಾರಥರ ಸಂತತಿಯೊ
ಳಾ[5]ಪವಿಧ[5]ರೈರಾವತಾರೂಢನಾಗಿ ತೆರ
ಳ್ದಾ ಪರಶಿವನ ಮೂರ್ತಿ ವೃಷಭನಿದ್ದೆಡೆಯ ವಿದ್ಯಾಧರ[6]ನ ಮುಖದಿನಱಿದಾ[6] ।
[7]ಕ್ಷೇಪಿ[7]ಸುತ ತನ್ಮದೋನ್ಮತ್ತದಿಂ[8]ದೆಂದ ಕರೆ[8]
ದೇಪರಿಯೊಳಾದಡಂ ಬರಿಸುವೆನು ಬಾರದೊಡೆ
ಗೋಪನಂ ಹಿಡಿದುತಹೆ ನಡೆ ನಡೆಯೆನಲ್ನಡೆವ ಸುರಪಡೆಯ ಪದಹತಿಯೊಳು ॥೭॥

ಅಗಿದವೇಳ್ಭುವನ ಕೂರ್ಮನ ಬೆನ್ನೊಡೆದು ಕವಚ
ವುಗಿದನಂತನಫಣಾರತ್ನ ಕಳ[9]ಚು[9]ದುರೆ ಪೆಡೆ
ಸುಗಿದುಬಿದ್ದುವು ದಿಗಿಭವದುರೆ ನಗತತಿಗಳಿಬ್ಬಗೆಯಾದವಂಬುಧಿಗಳು ।
ಮಿಗೆ ಕದಡಿ ಕರ್ದಮಂ ಮಸಗಿದವು ಪಾದರೇ
ಣುಗೆ ಪ್ರಲಯಶಿಖಿಯಂದು ಸಮವರ್ತಿ ಗೂಳೆಯಂ
ದೆಗೆದ ಬಹಳಾಕಂಪಕಂಬರಮದೊಡೆದು ಘೀಳಿಡುವೊಲದ್ಭುತವಾದುದು ॥೮॥

---

[1] ಗುಟ್ಟು (ಘ). [2] ವಾತಾಳದಂಬುಧಿಗಳ (ಘ). [3] ಳಗುಳ್ಬುಹೊಡೆ (ಘ).
[4] ಹೊಡೆ (ಘ). [5] ವಿವಿಧ (ಗ). [6] ರು ಅಂದಲ್ಲಿಗಾ (ಗ), ರು ಅಱುದಲ್ಲಿಗಾ (ಕ.ಖ.).
ರು ಅಱುತಲ್ಲಿಗಾ (ಖ.ಥ). [7] ಪೇಕ್ಷಿ (ಘ). [8] ದೆನ್ನೊಳಿದ (ಕ). [9] ಚ (ಘ). ಲ್ಬ (ಜ).

ಏನನಭಿವರ್ಣಿಸಲ್ಬಹುದು ಶಕ್ರನ ಬಲವ
ನೂನಪದದರಸನಂತಾ ಬಹಳ ದಳದಧಿಕ
ಸೇನಾಧಿಪರ್ವೆರಸಿ ಬಂದು ವೃಷಭೇಶನಿಹ ಗಿರಿಯ ಪರಿವೇಷ್ಟಿಸಲ್ಕೆ ।
ಆ ನಂದಿ ಕಂಡು ಕಡೆಗಣ್ಣಿಂದ ನೋಡಲ್ವಿ
ಮಾನರೂಢರು ಮುಂದೆ ಬಂದು ನಿಂದಿಂತೆಂದ
ರೇನು ಕಾರಣ ವೃಷಭ ಕೈಲಾಸವನ್ನುಳಿದು ಬಂದೆನುತ್ತೆಂದು ಮಗುಳ್ದು ॥೯॥

ಎಂದರೇಳೇಳು ಸಾಕತಿಪ್ರಬುದ್ಧತ್ವ ನಿನ
ಗೊಂದುವದು ಪೆಸರು ದಶದಿಕ್ಕಿನೊಳಗೆಂಬ ನುಡಿ
ಇಂದುಧರನುಂಟುಮಾಡಿದ ಬಳಿಕ್ಕೇನು ಕೊಂಡಾಡಿದಡೆ ಕೊಬಿದು ಕುಣಿವು ।
ದೆಂದು ನಾಣ್ನುಡಿಯದಱ ಪರಿ ನಿಮಗೆ ಸಂಭ್ರಮಿಸಿ
ತಿಂದ್ರ ತಾನೇ ಬಂದು ಕರೆದನೆಂಬುವ ತೇಜ
ದಿಂದ ಬಾರೆದ್ದುನಡೆ ವೃಷಭ ಶಿವ ಮರುಳಾತನೆಂದಂತೆ ಕುಣಿಯಬೇಡ ॥೧೦॥

ಕುಂದೆಮ್ಮದತಿತೇಜ ನಿನ್ನದಿನ್ನೇಳು ನಡೆ
ಯೆಂದಡುತ್ತರಗೊಟ್ಟ ನೀವು ನಿರ್ಜರರ್ನಿಮಗೆ
ಕುಂದುಂಟೆ ಕಟಕಿಯನ್ನಾಡಲೇಕರಸುತನಕಂಜೋಡಿ ಬರೆ ಬೆ[1]ನ್ನಲ[1] ।
ಬಂದು ಗುಡುಗಾಡಿಸುವೊಡಂಜುವೆವು ಶಕ್ರನೊಳ
ಗೆಂದುವುಂ ಜಗಳಮ[2]ಕ್ಕುವದೆ ಹಿರಿ[2]ದೈಶ್ವರ್ಯ
ದಿಂದೆ ಬಾಳ್ವರೊಳೆಮಗೆ ಮಾಱುತ್ತರವೆ ಪಲವನೆಂದರೇಂ ಬಾರೆನೆಂದ ॥೧೧॥

ಎನೆ ಪುರಂದರ ಕನಲ್ದೆಲೆಲೆ ವೃಷಭೇಶ ನಿನ
ಗೆನಗೆ ಮನಮುನಿಸೇನು ಮಿಥ್ಯವೇಕೆಮ್ಮರಸು
ತನದಿಂದ ನಿನಗೊದಗಿದುಪಸರ್ಗವೇನು ಮುನಿದಿರ್ದ ವೊಗ[3]ದೊಳ್ಪೇನೆನೆ[3] ।
ತ್ರಿಣಯನೊಡ್ಡೋಲಗದೊಳೆಂದುತ್ತರವೆ ನಿನ್ನ
ಮನದೊಳಿದ್ದಂತೆಮ್ಮ ಮಗುಳ್ದು ಕೇಳ್ವುದು ಮಾರ್ಗ
ವೆನಿಸುವುದೆ ನಡೆ ನಿನಗೆ ಬಾರೆ ನಿಂದಕರೊಳೊಂದಿನವಾಗದೆಂದೆನಲ್ಕೆ ॥೧೨॥

ಈಶ[4]ಂಗೆ ಅಂಜಿನಾವ್ಕ[4]ರೆಯುಬಂದರೆ ಹಿರಿದು
ದ್ವೇಷಮಂ ತಾಳ್ದಡಿದಕಾರು ತೇಕುವರು ವ್ಯ
ತ್ಯಾಸಮಂ ನುಡಿದು ಮಾಡುವ ಬಲಾಢ್ಯತ್ವಮಂ ನೋಡುವೆವು ಬಳಿಕೆನುತಲಿ ।

---

[1] ನ್ನಿ (ಛ.ಕ.ಖ). [2] ಪುದೆಬಾಹ (ಫ). [3] ದೊಳ್ಪೇಳಿನೆ (ಗ.ಖ). [4] ಗಂಜಾ ಪುಶನ್ನಕ (ಫ.ಕ.ಗ). ಗಂಜಾಪುತನಕ (ಛ).

ಆಶಾಧಿಪರ್ಕಳಿದರಖಿಳ ಸುರಪಡೆ ವಜ್ರ
ಪಾಶಗಳನಿಕ್ಕಿ ಬೊಬ್ಬಿಟ್ಟಬ್ಬರಿಸುತ ವೃಷ
ಭೇಶನಂ ಪಿಡಿದೆಳೆವ ಕೋಳಾಹಳಕ್ಕೆ ಬ್ರಹ್ಮಾಂಡ ಘೀಳಿಡುತಿರ್ದವು ॥೧೩॥

ಪಿಡಿವರ್ಕೆಲರು ಬೊಬ್ಬೆ[1]ಗೊಡು[1]ವರ್ಕೆಲರು ಪಾಶ
ದೊಡಿವರ್ಕೆಲರು ಲಗ್ಗೆಗೊಡುವರ್ಕೆಲರು ಬೆನ್ನ
ಬಡಿವರ್ಕೆಲರು ಶೃಂಗವಿಡಿವರ್ಕೆಲರು ಬಾಲ ಪಿಡಿದು ಮುಱಿವರ್ಕೆಲಬರು ।
ನುಡಿವರ್ಕೆಲರು ನೂಂಕುವರ್ಕೆಲರು ಚಪ್ಪರಿಸಿ
ಝಡಿವರ್ಕೆಲರು ಜಱಿದು ಝುಂಕಿಪರ್ಕೆಲರು ಸುರ
ಪಡೆಯುದಗಣಿತ ಕವಿದು [2]ಹುರಿಗಟ್ಟುತಡಹಾಯ್ದು ಹಿರಿದುಬ್ಬುತಬ್ಬರಿಸುತ[2] ॥೧೪॥

ಪಾಶಗಳ ಹೂಡಿ ಬರಸೆಳದಡಲ್ಲಿಂ ಮಿಡುಕ
ದೋಸರಿಸದಳುಕದಿರಲದ ಕಂಡು ಶಕ್ರನು ಗ
ಜೇಶ[3]ನಂ[3]ಕಟ್ಟಿ ತಮತಮಗಡರ್ದು ಕರತಳಗಳಿಂದ ಲಗುಡಂಗಳಿಂದ ।
ಓಸರಿಸ[4]ದುಪ್ಪಡಿಸುತಾರ್ದೊ[4]ಡಂತದಕೆ ವೃಷ
ಭೇಶ ಘರ್ಜಿಸುತೊಮ್ಮೆ ಹೂಂಕಾರಗೊಡಲಿಕಾ
ಕಾಶವೊಡೆದಂತೆ ಘುಡುಘುಡಿಸಲಮುಮುಮು ಕುಬುಕುಬುಬೆಂದು ಬೊಬ್ಬಿಱಿ
[ದುದು ॥೧೫॥

ಕೋಡ ಝಾಡಿಸುತ್ತಜಾಂಡಂಗಳಂ ತಿಪ್ಪೆಯಂ
ತೀಡಿಱಿದು ಮಸೆಮಸೆದು ಮುಂಪದಖುರಾಗ್ರದಿಂ
ನೀಡಿ ಹೇಮಾಚಲವ ಕೆರೆದೊದೆದೊದೆದು ತಳಪಟಂ ಮಾಡಿ ದಿಜ್ನೆಚಯವ ।
ನೋಡೆ ಕಂಗ[5]ಳು ಕಿಡಿಯಕುಡಿ ಸಿಡಿಲ[5]ಸೆಕ್ಕೆಗಳ
ಬೀಡೆನಲ್ಕರ್ನವೊಗಗೆಯ್ದು ವಾಲಾಗ್ರಮಂ
ಗಾಢದಿಂದೆತ್ತಿ ಕೆಂಗ[6]ಲ[6]ಸಿ ಕೆಲೆಕೆಲೆದು ಮಲೆವುತ ನಿಂದನವಗಡಿಸುತೆ ॥೧೬॥

ಎದ್ದೊಡದ್ದಿದವು ಭುವನಾದಿಗಳು ಮೇಲಡ್ಡ
ಬಿದ್ದ ಬ್ರಹ್ಮಾಂಡಂಗಳಡರಿ ಪಾಱಿದವು ಏ
ಱಿದ್ದ ಸುರಕಟಕ ಝಾಡಿಸಲೊಡನೆ ಪದತಳಕೆ ಬಿದ್ದು ಹೊರಳುತ್ತಿರ್ದುದು ।
ವೃದ್ಧಶ್ರವಾದಿಗಳು ನಾಸಾಪುಟೋಚ್ಛ್ವಾಸ
ಕದ್ದುದ್ದೈರಾವತವ ಶೃಂಗದಿಂದಿಱಿದೆತ್ತ
ಲಿದ್ದುದೀಶ್ವರಗಜಾಸುರನ ತಿವಿದೆತ್ತಿದ ಮಹೋಗ್ರತ್ರಿಶೂಲದಂತೆ ॥೧೭॥

---

[1] ಗುಟ್ಟು (ಘ). [2] ಹುಡಿಗಟ್ಟಿಹರೆಹೊಯ್ದು ಹರಿ ಹುಬ್ಬು ತಬ್ಬರಿಸುತ (ಘ), ಹರೆಹೊಯ್ದು ಹಿರಿದುಬ್ಬುತಬ್ಬರಿಸುತ (ಗ.ಕ). [3] ಗಂ (ಥ). [4] ದುಪ್ಪಡಿಸುತಾವೆರ್ (ಕ.ಥ.ಗ.), ರಿಸುತಾರ್ದ (ಘ),ದಪ್ಪಳಿಸುತಾರ್ದು (ಜ) [5] ಳನ ಕುಡಿಶಿಡಿಲುಗಳ (ಘ), ಳುಕಿಡಿಕಿಡಿಯುಸಿಡಿಲ (ಕ.ಖ.ಗ). [6] ಏ (ಘ).

ಇದೆ ಗಜವ ತಿವಿದುದಾ ಎಂದಬ್ಬರಿಸಿ ಭೇರಿ
ಮೊದಲಾದ ಸಮರವಾದ್ಯಪ್ರತತಿಗಳ ಹೊ[1]ಯ್ಸು
ತೊ[1]ದವಿತೊಂದೆಸೆಯೊಳಮೃತಾಂಗದಪ್ರತಿಮಸುರಸುಭಟನಾಯಕರು ನೆರೆದು।
ಮುದದಿ ಮೂದಲಿಸುತೆತ್ತೆತ್ತಿಂದ್ರಗಜವೆತ್ತ
ಒದೆ ನೂಕು ಪೊಯ್ವುಜ್ರಪಾಶದಿಂದಿಟ್ಟು ಹಿಡಿ
ಗುದಿಗಾಲ್ಗಳಂಕಟ್ಟಿ ಗೋತಮಂ ತೆಗೆ ತೆಕ್ಕದೊಡೆ ಕುತ್ತಿ ಕೆಡಹೆನುತ್ತ ॥೧೮॥

ಹರಿದಾ[2]ರಿ[2] ಬೊಬ್ಬೆಗೊಟ್ಟಬ್ಬರಿಸುತಮರ್ದು ಬಲು
ಕರಿರಥಾಶ್ವಮಂ ಪದಾತಿ[3]ಯನೊ[3]ಡ್ಡನೊಡ್ಡಖಿಳ
ಪರಿವಾರ ಖೋಯೆಂದು ಕವಿದೇಱಿ ಕಯ್ದೋಱುತುರವಣಿಸುತಟ್ಟಿ ಮುಟ್ಟಿ।
ತರುಗಳಿಂದಿಡುತೆ ಪೆರ್ಗಿರಿಗಳಂ ಕಿತ್ತೆತ್ತಿ
ಶಿರದ ಮೇಲಿಡುತ ವಿದ್ಯಾಧರರು ಗಗನದಿಂ
ದುರುಳಚುತ ವಜ್ರದಿಂದೊಗೆವುತಂತಾ ವಜ್ರಕಾಯರಿರೆ ಕಂಡು ವೃಷಭ ॥೧೯॥

ಝುಡಿದಡಬುಧಿಗಳೇಳು ನಡುಗೆ ಧಿಕ್ಕರಿಸಿ ನಡೆ
ದಡಿಗಡಿಗೆ ಕೊಡನೆಗೆದು ಕುಡಿನಿಮಿರ್ದು ಬ್ರಹ್ಮಾಂಡ
ಕಡರ್ದೊಡಿಬ್ಬಗಿಯಾ[4]ಗಿ ಕೊಡಕೊಡದು[4] ಪಾಱೆ ಜಲಪ್ರಳಯವಾಗಲು ಸುರರ್ಗಳ।
ಪಡೆ ಕಡಲೊಳದ್ದಿ ಜೀಮೂತಾದಿಗಳ್ನೀರ
ಕುಡಿಕುಡಿದು ಮುಗ್ಗಿತೇ [5]ವೊಗಳ್ವೆನಂತಃಕರಣ[5]
ದೊಡೆಯ ತಾಂ ಮುಂಪದವ ಕೀಳಲುರುಳಿದುವಖಿಳ ಲೋಕಾದಿಲೋಕಂಗಳು॥

ಜರೆಮರಣರಹಿತರಮೃತಾಂಗಿಗಳು ಪರಶಿವಂ
ಬರೆದ ಲಿಪಿ ಲುಪ್ತವಪ್ಪನ್ನಬರ ದೇಹಗೊಂ
ಡಿರಬೇಕೆನುತ್ತ ಕರುಣಾವಲೋಕನದಿ ವೃಷಭೇಶನೊಲದೀಕ್ಷಿಸುತ್ತ।
ಪರಿಹರಿ[6]ಸಲಾ[6] ಮಹಾಪ್ರಳಯ ಬಳಿಕಾ ವಜ್ರ
ಧರಸಹಿತ ಸುರಕಟಕ ಭಂಗದಿಂ ತಿರುಗಮರ
ಪುರಕೈದುಧಿತ್ತ ಭೂಕಾಂತೆ ಜಗದಾಸ[7]ಱಕ್ಕಳಲ[7] ಬಾಯ್ಬಿಡುತಿರ್ದಳು ॥೨೧॥

ಆ ವೃಷಭನುಗ್ರವಡಬಾನಲನು ಪೊಡವಿಯೊಳ
ಗಾವರಿಸಿ ಗಿರಿ ತರು ಫಲಾದಿ ಖಗಮೃಗಮನುಜ
ಜೀವ ಪಶು ಮುಖ್ಯಸ್ಥಾವರಜಂಗಮಾದಿ ವಿಪಿನಾಂತರದೊಳಡರ್ದು ತೊಡರ್ದು।

---

[1] ಯ್ಸಿ ಒ (ಕ.ಖ), ಯ್ಸಿತೋ (ಗ). [2] ಲಿ (ಜ). [3] ಯೊಳೊ (ಜ). [4] ಗಿಕೆಡ ಕೆಡದು (ಕ), ಗಿಕೊಡನೊಡದು (ಗ.ಫ), ಗುತೊಪನೊಡರ್ದು (ಜ). [5] ವೊಗಳ್ವೆನಂತಾ ಕರಣ (ಕ), ಪೂಗಳ್ವೆನಂತಾಕರುಣ (ಗ). [6] ಸಿತಾ (ಫ). [7] ಗಳಲ್ಲಿ (ಕ.ಗ.ಫ.ಥ).

ಓವದೊಱಲಿಸುತಱಿಸುತಂ ಕೊಲುತ ಧೃತಿಗೆಡಿಸು
ತಾವಗಂ ಕೆಡಪುತ್ತ ಕೆಡಿಸುತೊಣಗಿಸಿ ಸುಡುತ
ತೀವಿರಲ್ಕಾ್ಷಮುಮುಖವದಕಳುಕಿ ಭೂದೇವಿ ಸೈರಿಸದೆಯಿಂತೆಂದಳು ॥೨೨॥

ನೀರಜಭವಂಗಱುಪುವೆಂ ನೀರಜೋದರಗೆ
ದೂಱುವೆಂ ಪರಶಿವಂಗೊಱಲಿ ಮೊಱೆಯಿಟ್ಟಿದಕೆ
ಪಾರುಪತ್ಯವ ಮಾಳ್ಪೆನೆನುತೆದ್ದು ಕೈಲಾಸಶೈಲದಿಙ್ಮುಖದಿ ಬರುತ।
ಮೇರುವಿನ ಪ್ರಾಂತ್ಯಕೈತರಲಾ ಸಮೀಪದೊಳು
ಚಾರುತರ ವರಮುನಿವರೇಣ್ಯ ಪುಣ್ಯದ ಪುಂಜ
ವೀರಶೈವಾಗ್ರ[1]ಣಿಯು ದೇವಲಮಹಾಮುನೀಶಾ[1] ಶ್ರಮವಿರಲ್ಕಂಡಳು ॥೨೩॥

ಕ್ಷಾಮದುಗ್ರಕ್ಕೋಡಿ ಬಂದು ಮನ್ಮಥ[2]ಮಾತೆ[2]
[3]ಯಾ ಮಹಾಲಕ್ಷ್ಮಿಯಂ ಕೊಂಡು ಬಂದಲ್ಲಿಟ್ಟು[3]
ಸೋಮನಂ ಸಸಿಗೊಳಿಸಿ ಮಱೆಗೊಳಲು ವೃಕ್ಷಸಹ ವೃಕ್ಷೇಶನಾಗಿ ತನ್ನ।
ಜಾಮಾತನಂ ರಕ್ಷಿಸಲ್ಕೆಂದು ವನವಾದ
ನೋ ಮಹಾ[4]ದಿವ್ಯ[4]ದಾರೂಢಯೋಗಿಗಳು ಸು
ತ್ರಾಮನಂದನವನವನಾಹ್ವಾನಿಸಿದರೊ ಯೆನುತಾ ವನವನೊಳಪೊಕ್ಕಳು ॥೨೪॥

ತಳಿರತಂಪೆಳಲತೆಯ ಸೊಂಪು ನಾನಾಸುಮಾ
ವಳಿಯ ಸೌರಭ್ಯ ಫಲಪಕ್ವರಸ ಸುಜಲಸಂ
ಕುಳವ ಮಂದಾನಿಲಂ ಬೀಱುತಿರೆ ತೋಱುತಿರೆ ವನವನದೊಳಾಡುತಿರ್ಪ।
ಕಳಹಂಸಗಳ ರವಂ ಕೋಕಿಲಗಳಬ್ಬರಂ
ಗಿಳಿಗಳುಲುಹಳಿಕುಲದ ಝೇಂಕಾರ ನರ್ತಿಸುವ
ಕಳಕಂಠವಳಿ ಹರ್ಷಿಸುವ ಚಕ್ರವಾಕವಿರೆ ಕಂಡಿದತಿಹೊಸತೆಂದಳಂ ॥೨೫॥

ಶರಭ ಭೇರುಂಡ [5]ಕುಂಜರನು ಕಂಠೀರವಂ[5]
ಹರಿಣ ವ್ಯಾಘ್ರಾದಿಗಳು ತಮ್ಮೊಳೊಂದೊಂದುಗೂ
ಡಿರೆ ವ್ಯಾಳ ತಾರ್ಕ್ಷ್ಯ ಶಿಖಿ ಬಭ್ರುಗಳು ಜನ್ಮವೈರದ ವಿರುದ್ಧಗಳಿಲ್ಲದೆ।
ಪರಮಮಿತ್ರತೆಯ ಪ್ರವರ್ತನಕ್ಕಿಳೆಯಿಳಾಂ
ತರದೊಳಿದು ಚೋದ್ಯವೆನುತೆಳ್ತರಲು ಆ ವನಾಂ
ತರದೊಳು ಮಹಾಮುನೀಶ್ವರರ ಶಿಷ್ಯಪ್ರಶಿಷ್ಯರುಗಳಲ್ಲಲ್ಲಿ ಕೂಡಿ ॥೨೬॥

---

[1] ಗಣ್ಯಂ ದೇವಲಮಹಾಮುನೀಶಾ (ಘ) . . . ಋಷಿಯ ಆ (ಕ.ಖ.ಗ). [2] ನೆನ್ನ (ಗ.ಥ.ಖ.ಕ). [3] ತನ್ನ ನಾಮಲಕ್ಷ್ಮಿಯಕೊಂಡು ಬಂದಿಲ್ಲಿ ಸ್ಥಳವಿಟ್ಟು (ಕ.ಖ. ಜ.ಗ.ಥ). [4] ಜ್ಞಾನ (ಘ). [5] ಶಾರ್ದೂಲಕುಂಜರಯಕ್ಷ (ಕ. ಖ. ಗ. ಜ. ಥ.)

ಪೂಗೊಯ್ವ ಪಕ್ವಫಲಗಳ ತಿಱಿವ ದೂರ್ವೆಗಳ
ನಾಗುಮಾಡುವ ಕಂದಮೂಲಂಗಳಂ ಕೀಳ್ವ
ರಾಗದಿಂ ಪಲ್ಲವಾಂಕುರಗಳಂ ತಿಱಿವ ಸತ್ಪರ್ಣಂಗಳಂ ಬಿಡಿಸುವ।
ಅಗಮದಿ [1]ಸಮಿಥೆ[1]ಗಳ ಮುಱಿವ ನಿಜಕರ್ಮದು
ದ್ಯೋಗವಲ್ಕಲದೊಳೆವನುಷ್ಠಾನಗೈವ ಸಂ
ಧ್ಯಾಗಮಾರ್ಚನೆಗೆ ಜಲಮಂ ಕಮಂಡಲದೀವುತಿಹ ಛಾತ್ರಮುನಿಗಳಿರಲು ॥೨೭॥

ಕಾಣುತ್ತ ಕರಕಮಲ ಸಂಪುಟಂಗೈದು ಭೂ
ರಾಣಿ ಬೆಸಗೊಂಡಳವರ್ಗಳನಿದಾರಾಶ್ರಮದ
ಶಾಣವೆನಲುಪಮನ್ಯಗಸ್ತ್ಯ ಗೌತಮ ಭೃಗು ವಸಿಷ್ಠರೊಳಗೀತಂಗೆಣೆ ।
ಕಾಣೆವಾಗಮನಿಗಮನಿಲುಕದಿಹ ಸತ್ಯಗೀ
ರ್ವಾಣೇಶ ದೇವಲಋಷೀಶನಾಶ್ರಮ ಜಗ
ತ್ಪ್ರಾಣವಿದಗಣ್ಯಪುಣ್ಯೋದಯದ ನೆಲೆಯನಿಜಶಾಂತಿಯಾಗರವಿದಕ್ಕೆ ॥೨೮॥

ಎಡರುಗ್ರವಾತಾಧಿಕೋಷ್ಣವತಿವ[2]ಳೆ[2]ಸೀತ
ಜಡರೋಗ ಮೃತ್ಯುವಪಜಯ ಕ್ಷಾಮ ಡಾಮರವು
ಱಿಡುಕಲಮ್ಮವು ಸರೋವರ ಬಱಿಯ[3]ವೀ[3]ವನಂಫಲ ಪಕ್ವವಿಲ್ಲದಿರ[4]ವು[4] ।
ಱಿಡು[5]ಕ[5]ವನ್ಯೋನ್ಯಕುಲ ಜಾತಿವೈರದ [6]ಭಾವ[6]
ತೊಡೆದು ಸಕಲಪ್ರಾಣಿ ಸುಖ[7]ವಹವ[7]ಹರ್ನಿಶಂ
ಕೈಡಮೂರ್ತಿ ಶೈವಸಾಮ್ರಾಜ್ಯ ದೇವಲಮುನಿಯ ಶಾಂತಿ[8]ಯ[8]ನೆ
ಕೇಳ್ದಲ್ಲಗೆ ॥೨೯॥

ನೀಲಾಚಲದ ನಿ[9]ಜಂ[9] ಕರಿಗಟ್ಟಿದಹನಿಂದ್ರ
ನೀಲದಿಂ ಖಂ[10]ಡಿ[10]ಸಿದ ಚಿತ್ರಾಂಗಿಯೋ ಮೇಘ
ಜಾಲಮಂ ವಿಶ್ವಸೃಟ್ ಕರುವಿಟ್ಟ ಮೂಳ್ಕೆಯಿಂ ವಿಧಿವಿಹಿತ ನೀಲರುದ್ರ ।
ನೀಲಾಪ್ರಕೃತಿ [11]ತಾನೆ ಶಕ್ತ್ಯೈಯೊ[11] ಕೃಷ್ಣನ ವಿ
ಶಾಲ[12]ಕಾಂತಿಯಬೆಳಗೊ[12] ಆದಿನಾರಾಯಣಿಯ
ಲೋಲುವೆಯ ಮೂರ್ತಿಯೆನೆ ಭೂದೇವಿ ಮುನಿವರನ ಪರ್ಣಶಾಲೆಗೆ
ಸಾರ್ದಳು ॥೩೦॥

---

[1] ಸಮಿದೆ (ಗ), ಸೌದೆ (ಕ.ಖ.ಫ.ಛ). [2] ಳಿ (ಕ.ಖ). [3] ದೀ (ಕ). [4] ಲು
.ಗ). [5] ಕು (ಕ.ಫ). [6] ಮಿಥ್ಯ (ಗ.ಛ.ಕ). [7] ಮಿಹಾದ (ಫ). [8] ಯೆ (ಕ).
ಲಂ (ಫ). [10] ಡ್ರಿ (ಫ). [11] ತಾನೆಶಕ್ತ್ಯೈಕೃತಾ (ಗ), ಪ್ರವೇಶಿಸಿಶಕ್ತಿ (ಜ),
ನೆಶಕ್ತ್ಯೈಕ್ಶೊ (ಕ). [12] ಕಾಂಚಿಯಕಾಂತೆ (ಖ), ಕಾಂತಿಯಕಾಂತೆ (ಜ.ಗ.
ಚ.ಛ).

ವೇದಘೋಷದ ಪುರಾಣದ ಶಾಸ್ತ್ರಸುಪ್ರಸಂ
ಗಾದಿ ವಾದಾಗಮಸ್ತೋತ್ರದುಗ್ಘಡಣೆಗಳ
ನಾದದಾಳಾಪ ಗಾಯತ್ರಿಯೊಂದೋಳುಪನಿಷದ್ವಾಕ್ಯ ಶಿವಮಂತ್ರದ ।
ಬೋಧೆಯೌಪಾಸನ ಕ್ರಿಯಾಗ್ನಿಹೋತ್ರಗಳ ಕ
ರ್ಮಾದಿಗಳ [1]ಱಳ ಕುಳಕ್ಷಳ[1] ಲಕ್ಷಣಗ್ರಂಥ
ದೋದು ಜ್ಯೋತಿ[2]ರ್ಭಾ[2]ಷ್ಯ ಸತ್ಕಥಕ ತಾಪಸೇಂದ್ರರ ರಭಸ[3]ಮೆಸೆದುದಲ್ಲಿ[3]॥

ಜಡೆಮುಷ್ಟಿವಿಡಿವ ಭಸಿತವನಾಗಮಸ್ನಾನ
ದೆಡೆಗಳೊ[4]ಳ್ತೊಳೆವ[4] ಸೋಂಕಿಡುವ ರುದ್ರಾಕ್ಷಿಗಳ
ತೊಡುವ ಯಜ್ಞೋಪವೀತಗಳನಳವಡಿಪ ಕೃಷ್ಣಾಜಿನಂಗಳನಾಸನಂ ।
ಗೊಡುವ ಶೋಷಣ ದಹನ ಪ್ಲಾವನ ನ್ಯಾಸವಂ
ಗಡ[5]ದೋಱುವ[5] ಕ್ಷಮಾಲೆಗಳ ಜಾನಕ್ಕೆ ಕೈ
ಗೊಡುವ ಸ್ವಸ್ಥಿರಶಿವಾರ್ಚನೆಗೈವುತಿಹ ತಾಪಸವ್ಯೂಹಮಧ್ಯದಲ್ಲಿ ॥೩೨॥

ಸಕಲಸಿದ್ಧಿಗಳಸಾಕಾರ ತಪದಾಕಾರ
ಮುಖದಿ ಮೂರ್ತಿಸಿತೊ ನಿಷ್ಕಳತತ್ವಬ್ರಹ್ಮಸಾ
ಕ್ಷಿಕವಾ[6]ದುದೋ ಮಂಗಳಾಂಗವೊತ್ತುದೋ ಶಾಂತಿ ಪ್ರತ್ಯಕ್ಷ ಲಕ್ಷಣಿಸಿತೊ ।
[7]ಪ್ರಕಟಪುಣ್ಯೋದಯದ ಸತ್ಯಾಗ್ರಗಣ್ಯಜಡ[7]
ಯುಕುತಿ ನಿಲುಕದ ನಿಜಸ್ವಯಂಭು ಸಮ್ಯಜ್ಞಾನ
ಮುಕುರ ದೇವಲಮುನಿಪ್ರಭೋನ್ನತಿಯ ಕಾಣುತ್ತ ಭೂಕಾಂತೆ ಕೈಮುಗಿದಳು ॥

ಇಳೆಯಿಂಗಿತವನು ಪರಮಜ್ಞಾನದೃಷ್ಟಿಯಿಂ
ತಿಳಿದು ಪ್ರತ್ಯುತ್ಥಾನಪ್ರಾಪ್ತಿಯಿಂ ಮುನಿ ಕರಾಂ
ಜುಳಿತನಾಗುತ್ತಿದಿರ್ವಂದರ್ಘ್ಯ ಪಾದ್ಯ ವಿಷ್ಟರವಿತ್ತಡಾ ಶಕ್ತಿಯು ।
ಅಳ[8]ಲುತುಸ್ಸೆ[8]ನುತ ಮೂರ್ತಿಸಲನನ್ವಿತವಿದೇ
ನಳವಟ್ಟು [9]ದಕ್ಕಾಸಱೇನು[9] ಸಚರಾಚರಂ
ಗಳ ಭಾರವೆಲ್ಲ ತೃಣ ನಿನಗಾವುದರಿದೇನು ಬರವೆನಲ್ಕಿಂತೆಂದಳು ॥೩೪॥

---

[1] ಕಳಕುಳಕ್ಷರು (ಕ). [2] ಷಭಾ (ಫ). [3] ಮಿಂತೆಸೆದುದು (ಖ.ಕ). [4] ತಾಳ್ದ (ಕ.ಗ). [5] ಣದೋರ್ವ (ಕ.ಖ.ಗ.ಫ.ಛ). [6] ದಸತ್ಯಾಗ್ರಗಣ್ಯ ಸರ್ವತೋಪುಣ್ಯ ಜಡಜಭವಾಂಡಗಳ್ಗೆ (ಫ). [7] ಮುಕುತಿಮೂಲಿಗರೆನಿಸಿ ಮುದವಪೆದುಸರ್ವತ (ಫ). [8] ಲುಕುಃಪೆ (ಕ.ಖ.ಛ.ಗ). [9] ದಾ ಉಸುರದೇನು (ಕ.ಖ.ಗ.ಛ).

ಭಾರಬೇಱಿಲ್ಲ ಸಮ್ಯಜ್ಞಾನ ಶಿವನಸಾ
ಕಾರ ಮುನಿವರರಾಜ ಕೇಳ್ವ್ಯಕವ್ಯೋಪ
ಭಾರವಳಿದವು ಸತ್ಕ್ರಿಯಾಕರ್ಮ[1]ನದಿ[1]ದೇವಮಾತೃಕೆಗಳಱಿತು ಬಱಿತು ।
ಕ್ರೂರಕ್ಷಾಮವಡರ್ದು ಸಚರಾಚರದ ಜೀವ
[2]ಗೋರಿಗೊಳುತಳಲುತಳವು[2]ಪಸರ್ಗಕಾಱಿದೆ ತ್ರಿ
ಕಾರಣಾತ್ಮಂಗಱುಪಬಂದೆ [3]ಹದನೇನೆಂಬ ಭೂದೇವಿಗಾ ಮುನಿಪನು[3] ॥೩೫॥

ಮಾನಸಪರಬ್ರಹ್ಮದಾಚರಣೆಯವಲೋಕ
ಜ್ಞಾನ ಶುದ್ಧಾತ್ಮತೆಯೊಳವತರಿ[4]ಸೆಥಾರ್ಥ[4]ಮಂ
ತಾನಱಿದು ಕಾರುಣ್ಯಚಿತ್ತದಿಂ ಮಾದೇವಮೂರ್ತಿ ಮುನಿ ಕರುಣದಿಂದ ।
ಆನನವನೀಕ್ಷಿಸಿ ಕಮಂಡಲಾಂಬುವನು ಸನು
ಮಾನದಿಂ ತೆಗೆದು ಶಾಂತೋದಕಂದಳೆದು ಭೂ
ಮಾನಿನಿಯ ಬಳಲನಾಱಿಸುತಭಯವಚನದಿಂ ಭೂದೇವಿಗಿಂತೆಂದನು ॥೩೬॥

ಆದಿರುದ್ರನ ಲೀಲೆ ನಂದಿಕೇಶ್ವರರೂಪ
ವಾದುದದು ಕೃತಯುಗದಿ ದೇವಾಂಗನೆಂಬ ಗಣ
ವಾದುದದು ತಾನೆ ತ್ರೇತೆಯೊಳು ಘಂಟಾಕರ್ಣನಾದುದದು ದ್ವಾಪರದೊಳು ।
ಭೇದಿಸಲು ಧರ್ಮಸ್ವರೂಪ ವೃಷಭವತಾರ
ವಾದುದಾತನೊಳೀಶನೋಲಗದಿ ಸುರರು ಸಂ
ಪಾದಿಸಲು ಮುಳಿದ ಮುನಿಸಿಂದಖಿಳಲೋಕೋಪಹತಿಯಾದವಾ ವೃಷಭನು ॥೩೭॥

ಸತ್ವ ರಜ ತಮದೇವತೆಗಳ ಶಾಪಾನುಗ್ರ
[5]ಹ[5]ತ್ವಾದಿ ದೇವ ಸಾರೋದ್ಧಾರಪೂರ್ವಪ್ರ
ಭುತ್ವವಱುವಡೆ ಮಹಾಪ್ರಳಯಪ್ರವರ್ತನಕೆ ಲೋಕಾದಿಲೋಕವಳಿದು ।
ಪೃಥ್ವಿ ಕೇಳ್ಧರ್ಮಮಂ ಕರ್ಮವಟ್ಟಲ್ಕೆ ಪರ
ತತ್ವದೆಡೆಗದಱ ಗೋಚರದೊಳಾ ಧರ್ಮಗೋ
ಪತ್ವವಡೆಯಲು ವಾಹ[6]ನಂಗೈ[6]ದು ಕರ್ಮವಂ ಶಿವ ತುಳಿಸಿದಾ ವೃಷಭನಿಂ ॥೩೮॥

ವಾಸವಾದಿಗ[7]ಳನಾತಂ ಕನಲುತಂ[7]ಧರ್ಮ
ವೇಷಮುಳಿದಮೃತಶೀಕರಶೈಲಮಧ್ಯಪ್ರ
ದೇಶದಲ್ಲಿಹನಾತನಂ ನೀನು[8]ಪ್ರಾ[8]ರ್ಥನಂಗೈದು ಭೂತಳ[9]ಕೆ ತರಲು[9] ।

---

[1] ನಿಧಿ (ಘ). [2] ಘೋರಗೊಳುತಲ ಅಳಿವ (ಕ.ಖ.ಗ.ಘ.ಧ). [3] ನೀಹದಕೆ ಗತಿಯೇನೆಂಬ ಭೂದೇವಿಗೆ (ಘ.ಜ). [4] ಸಿದರ್ಥ (ಕ.ಖ.ಗ). [5] ಸ (ಜ). [6] ಕಂಗಂ (ಕ.ಖ.ಘ). [7] ಳನೆವಕಲ ಪ್ರವೇಶಕೆ (ಘ). [8] ಪರಿಪ್ರಾ (ಗ.ಖ). [9] ಕ್ಕೆ (ಗ.ಖ).

ತಾ ಸಕಲ ಶಾಂತಿಯಹುದೆಂದು ಮುನಿರಾಜನುಪ
ದೇಶಿಸಲು ಕೈಕೊಂಡವನಿಕಾಂತೆ ತೆರಳ್ದು ವೃಷ
ಭೇಶನಿಹ ತಾಣಕ್ಕೈತಂದು ಕಾಣುತ್ತ ಸಾಷ್ಟಾಂಗಪ್ರಣತೆಯಾದಳು ‖೩೯‖

ಅಂಗಪ್ರದಕ್ಷಿಣಂಗೈದು ಮನಸಿಜಶರಗ
ಳಂಗಳದಿ ಬಿದ್ದಂತೆ ಜಗಜಂತು ದೀಪ್ತಿಯ ಪ
ತಂಗವಾದುದು ಕಿಂಚಿದು[1]ಗ್ರೇ[1]ಕ್ಷಣಕೆ ಸಾಕು ಸ್ವಾಮಿ ಶಾಂತತೆಯೊಳಿನ್ನು।
ಕಂಗಳದೆಱೆವುದಮಳ ಧರ್ಮಾರ್ಥಕಾಮಮೋ
ಕ್ಷಂಗಳ ಚತುಷ್ಪದವನಡಗಿ[2]ಕುಳಿತಿಹ[2] ಪಾಯು
ಅಂಗನೆಯೊಳೇಕೆ ಕರುಣಿಪುದೆಂದು ದೈನ್ಯಭಾವದಿ ಭಜಿಪ ಭೂದೇವಿಗೆ ‖ ೪೦ ‖

ಪಶುಪಾಶರಹಿತ ಪಾವನಮೂರ್ತಿ ಭೂದೇವಿ
ಗೊಸೆದಾಮೃತಾವಲೋಕನದಿ ಧರ್ಮತ್ವಪದ
ವಿಷಯದೊಂದಂಘ್ರಿಯಂ ಅಭಯವೀಯಲ್ಕೀಡೆ ಕೃತಕೃತ್ಯೆಯಾಗಿಯಂತಾ।
ವಸುಧೆ ಪೆದವಿಡಿದು ಶಿರದೊಳು ಧರಿಸಿ ಮುನಿ ಪೇಳ್ದ
ವೃಷಭಾಂಕಮಾಲೆಯಂ ಪ್ರಾರ್ಥಿಸುತ್ತಾಹ್ವಾನ
ವಶ[3]ವರ್ತಿ[3]ಮಾಡಿ ಮರ್ತ್ಯಕ್ಕಿಳಿದು ತಂದಳು ಮಹಾತತ್ವಕಲ್ಪಕುಜವ ‖ ೪೧ ‖

ಪಶುಪಾಶಮಂ ಸಡ[4]ಲ[4]ದಂತೆ ಭವಬಂಧನದ
ಬೆಸುಗೆ ಕಳೆದಂತೆ ಕರ್ಮದ ಕೀಲ್ಮುಱಿದು ಧರ್ಮ
ಮಸಗಿದಂತಾಯ್ತು ವೃಷಭೇಶ್ವರನು ಮರ್ತ್ಯಕ್ಕೆ ಬರೆ ಸಕಲಪ್ರಾಣಿಗಳಿಗೆ।
ಪಸರಿಸಿತು [5]ಪರಮೋತ್ಸವ[5] ಖಿಲ[6]ಲೋಕಂಗಳು[6]
[7]ಬ್ಬಸ[7]ವಡಗಿ ಹವ್ಯಕವ್ಯಾದಿ[8] ಸುಫಲ ಸುವೃಷ್ಟಿ
ಎಸಗಿತಾ ಮುಹುರ್ತಕ್ಕೆ ಮೂಲನಕ್ಷತ್ರ ಜೇಷ್ಠಾದಿ ಪಕ್ಷಾಂತ್ಯದ ತಿಥಿ ‖ ೪೨ ‖

ಪೆಸರಾಯ್ತು ಕಾರ್ಯೋದಲ ಪೂರ್ವಕಾರಣಕಥನ
ವಿಷಯಕ್ಕಿದಾದಿಮೂಲಪ್ರೋಕ್ತಸಿರಿಕರುವ
ವಸುಧೆ ನೆಗಳ್ದಳು ಜಗದ್ರಕ್ಷಣಾರ್ಥಂ ಬೀಜಕೋಶವತ್ಸ್ಯುತ್ಸವದೊಳು।
ವೃಷಭೇಶ್ವರನು ಮುಂದೆ ಬರಲು ಮುಂಗುಡಿಗಟ್ಟು
ತೊಸಗೆವಱೆಗಳೊಳದಿರ್ಗೊಳುತ ಸಚರಾಚರದೊ
ಳೆಸೆವ ಗ್ರಾಮಾದಿಗಳೊಳೆಲ್ಲ ತೋರಣ ಶಿಲಾಸ್ತಂಭ ಕರಿಗಟ್ಟಿತಂದು ‖ ೪೩ ‖

---

[1] ದ್ಧ್ರೇ (ಘ). [2] ಕೊಳ್ಳಿಹ್ಯ (ಗ.ಥ.ಕ), ಕೊಳ್ಳಿವು (ಖ), [3] ವೃತ್ತಿ (ಕ.ಗ). [4] ಲ್ಚಿ (ಜ). [5] ಉತ್ಸಹಂ (ಕ.ಖ.ಗ.ಘ.ಥ). [6] ಲೋಕಾದಿಗಳು (ಜ). [7] ಪಸಿ (ಜ). [8] ದಿಗುಸು (ಘ).

ಆದುದು ಜಗಚ್ಛ್ರರಿಗೆ ಕರುವೆಥಾಕಥನಂ ವಿ
ಭೇದವೃಷಭನ ಪ್ರಾರ್ಥನೆಯ ಪರ್ವಕರುದೋರ
ಣಾದಿಮಂಗಳದೊಳವತರಿಸುತರ್ಚನೆಯ ಪೂಜಾದ್ಯರ್ಘ್ಯಗಳನು ಕೊಳುತ।
ಆ ಧರಣಿಗತಿತುಷ್ಟನಾಗಿ ಶಾಂತಿಯೊಳು ಪ್ರ
ತ್ಯಾದರಮೃತೇಕ್ಷಣದೊಳಖಿಳ ದಿಗ್ವಳಯಗಳ
ಭೇದಿಸಿ ವೃಷಭ ದಕ್ಷಿಣಾಭಿಮುಖನಾಗಿ ಬಹ ಕಾರಣಾರ್ಥವ ಪೇಳ್ವೆನು ॥ ೪೪ ॥

ಈ ಲಲಿತ ಭೂಭಾಗದೊಳಗೆ ಮೂಕೋಟಿಋಷಿ
ಜಾಲದಾಶ್ರಮವ ಕಳೆದಖಿಳ ನಿಶಿತಾದ್ರಿಗಳ
ಮೇಲೆ ಯಡಿಗಳನಿಡುತ ಸಾರಿಖಂಡಮನುಳಿದು ಹೇಮಕೂಟಾದ್ರಿಗಡದುರ್ಗ।
ಲೀಲೆಯಿಂದಿಳಿದು ಪುರುಷಾವರುಷದೊಳ್ಬಳಸಿ
ಪ್ರಾಲೆಯಾದ್ರಿಯನೇಱ ತದ್ದಕ್ಷಿಣದೊಳಿಹ ವಿ
ಶಾಲ ಭಾರತಖಂಡಕಿಳಿದು ವೃಷಭೇಶ ಬಹ ಶಾಂತಿಸಾರದ ಸುರಸಕೆ ॥ ೪೫ ॥

ಎಸೆವ ಭಾ[1]ರತಿಯು ಧವಳಿಯು ಸು[1]ಬಾರಾಕೋಟಿ
[2]ಎಸೆವ[2] ವೈಶ್ವಾನದಿಯು ಸಿಂಧು ಗಂಡಕಿಗಳಿಂ
ದೊಸರ್ವಪುಷ್ಕರೆ ಶಂಖಧಾರೆ ಸರಸ್ವತಿ ಯಮುನೆ ವೇಣಿಪ್ರಯಾಗೆ [3]ಗಯೆಯು[3]
[4]ದಶಸಹಸ್ರಿಯು[4] ನೀಲಕಂಠಿಯು ಮಹಾನದಿಯು
ಕುಶೆ ಭವದಿ ನರ್ಮದೆ ವರಾದಿ ವೇದಾಂಗಿಯುಂ
ವಿಷಮಬಾಣಾಂಕಿ ವೇಣಿಯು [5]ಪೂರ್ಣ[5]ನದಿಯು ಗೋದಾವರಿಗಳೊಸೆದು
ಪರಿಯೆ ॥ ॥೪೬ ॥

ವೃಷಭನಾ ನದಿನದಂಗಳೊಳಾಡಿ ಬರುತ ಬಂ
ದೆಶವಡೆದ ಕೃಷ್ಣವೇಣಿಯ ಮಲಪ್ರಹರಿಗಳ
ದೆಶೆಯೊಳಾನಂದದಿಂದಿರುತಿರುತ ತದ್ದಕ್ಷಿಣಾಪ್ರಾಂತಕಾಣದಲ್ಲಿ।
ಪೆಸರೇಕಚಕ್ರ ದ್ವಿಚಕ್ರ ಪುರ ಪಗರಟಗೆ
ಪೆಸರು ಯುಗಭೇದ ಬಲಿಗ್ರಾಮವೆಂಬಾಪುರದ
ಪೆಸರಿಸಿದ ಪೊಳಲೊಳಾಡುತ್ತ ಸುಖಮಿರಲಿತ್ತಲಿಂದ್ರಾದ್ಯಮರಸಮೂಹ ॥ ೪೭ ॥

---

[1] ಭಾಗೀರಥಿಯುಧವಳಿ (ಜ). [2] ಪೆಸರ (ಛ). [3] ಗಯುಗವು (ಗ.ಛ.ಖ).
[4] ಎಸೆವಹಸ್ತಿಯು (ಖ.ಕ). [5] ರ್ವ (ಕ).

ರಾಜಶೇಖರವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಪ ಪವಾಡದಱುವತ್ತು ನಾಲ್ಕಱೊಳು ವಿ
ಭ್ರಾಜಿತದೊಳಮರರಂ ಗೆಲದು ಭೂಲೋಕಕ್ಕೆ ಬಂದ ಕಾರಣದ ಸಂಧಿ ॥ ೪೮ ॥

———

ನಾಲ್ಕನೆಯ ಸಂಧಿ

ಸೂಚನೆ—

ಸ್ವಾಗತನಿಮಿಷಗೆ ತನ್ನಯ ಪ್ರಾಣಲಿಂಗಸಂ
ಯೋಗವಂ ಮಾಡಿ ಕೈಲಾಸಕ್ಕೆ ಬರೆ ಶಿವನ
ಬಾಗಿಲು ತನಗೆ ಬಾರಿಸಲು ವೃಷಭ ಬಸವಾಂಕನಹ ಜನ್ಮಸೂಚಕವಿದು ।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥ ೧ ॥

ಶ್ರೀಶಿವನ ಸಾಕಾರಬ್ರಹ್ಮಸಂಜೀವನದ
ಶೇಷಪ್ರಮಥರ್ಕಳವಧರಿಪುದಂದೆಮ್ಮ ವೃಷ
ಭೇಶನಿಂ ಭಂಗವೆತ್ತಮರರಮರಾವತಿಯ ಪುರವ ದುಗುಡದಿ ಪೊಕ್ಕರು ।
ವಾಸವನು ಲಜ್ಜಾತಿಭಾ[1]ರ[1]ಮುಸುಕಿನೊಳು ನಿಜ
ವಾಸಪ್ರವೇಶಗೈದತಿಕ್ಲೇಶದಂಡ[2]ಲೆಯ[2]
[3]ಘಾಸಿ[3]ಗಾಜಿದೆ ಮಂತ್ರಭ[4]ವ[4]ನಭಾಜನನಾಗುತಾಪ್ತ[5]ರಾ[5]ಳಾಪದಂದು ॥ ೨ ॥

ಕರೆಸಿದ ಪುರೋಹಿತರನಾಪ್ತಮಂತ್ರಿಗಳ ತ
ನ್ನೊರೆದೊರೆವಿಶೇಷಮನುಗಳನನಿಮಿಷಾದಿಗಳ
ನೆರಹಿದ[6]ಕು[6]ಪಾಯವೇನೆನುತ ಚಿಂತಿಸಿ[7]ಸುರಪ ಸುರಗುರುಗಳಂ[7] ಕೇಳಲು ।
ಗುರುಲಘುತ್ವವನಱಿ[8]ಯ[8] ದೇವಾಂಗಗಣವರಗೆ
ಉರುಶೂನ್ಯಕಾಯ ಘಂಟಾಕರ್ಣನಾದರ್ಗೆ
ಗುರು ಮಹಾಕಾಯ ಕರುಣಿಸಿದೊಡಹುದೆಂದು ಸುರಗುರುರಾಯ ಸೂಚಿಸಿ
ದೊಡೆ ॥ ೩ ॥

---

[1] ಗ (ಜ). [2] ಯಹ (ಕ). [3] ನಾಸ್ತಿ (ಕ). [4] ಜ (ಕ.ಖ.ಗ.ಘ). [5] ಕ (ಖ).
[6] ರು (ಘ). [7] ಸುರಗುರುಗಳಾದ್ಯರಂ (ಘ). [8] ದು (ಜ).

ಪುರುಹೂತನಾ ಮಹಾಕಾಯನ ಪದಾಂಬುಜವ
ಪರಮಭಕ್ತಿಯೊಳು ನೆನೆದಾಹ್ವಾನಿಸಲು ಬಂದ
ದುರುತರದ ಸಿಂಹಾಸ[1]ನಾ[1]ರ್ಘ್ಯ ಪಾದ್ಯವನಿತ್ತು ತನ್ನ ಪರಿಭವಕಥನವ।
ವಿರಚಿಸಲು ನಸುನಗುತ ಮಗುಳೆಮಗುಳಾದರಿಸಿ
ಪರಮಾರ್ಥ ಪಾವನೀಕೃತನೊರೆದನಂದು ತ್ರೈ
ಪುರವಿಜಯದಲಿ ಸದಾಶಿವನೇತ್ರ ಸೂತ್ರಧಾರಕ ವೃಷಭಮಾಹಾತ್ಮ್ಯೆಯ ॥ ೪ ॥

ಧರೆ ಸ್ಯಂದನಂ ತರಣಿ ಶಶಿ ಗಾಲಿ ಸಾರಥಿಯೆ
ಪರಮೇಷ್ಠಿ ದಿಗುದಂತಿಯಾಧಾರವಾ ಮೇರು
ಗಿರಿಬಿಲ್ಲು ಬಾಣ ಬಾಣಾರಿ ನಾರಿಯೆ ಶೇಷ ಶೇಷಪರಿವಾರ ನಿನ್ನ।
ಸುರಕಟಕ ನೀ ನಾಯಕನು ತಿಳಿದು ನೋಡು ಶಂ
ಕರ ರಥಾರೂಢನಾದಂದು ರಥಪಾತಾಳ
ಪರಿಯಂತರಿಳಿಯಲೆತ್ತಿದ ಮಹಾವೃಷಭನೊಳು ತೋಟಿಯಂ ತೊಡಕಲಹುದೆ ॥ ೫ ॥

ಎನಲಱಿಯೆನಜ್ಞಾನದಿಂ ತೊಡಕುವಡೆದೆನಿದ
ಕನುಮಾನವೇನೆಂದು ಕರುಣಿಸೆನಲಾವನಿಂ
ಕೊನರಿತೀ ಕಥನವೆನಲಾದ್ಯಂತಮುಮನಿಂದ್ರನುಸುರ್ದನು ಮಹಾಕಾಯಗೆ॥
ಅನಿಮಿಷೇಂದ್ರನ ದೆಸೆಯೊಳಾದು[2]ದವನೀ[2]ತನೆಂ
ದೆನಲು ತನ್ನಯ ಕರಾಂಬುಜವನಾತನ ಶಿರದಿ
ವಿನಯದಿಂದಿಳುಹಿ ಮರ್ಮವನನುಗ್ರಹಿಸಿದನಮರಜೀವಸಂಜೀವನು ॥ ೬ ॥

ಶತಯಾಗಫಲವೊಂದು ಪಶುರೋಮವಂ ಕೀಳೆ
ಹುತವಹುದು ಸಾಕ್ಷಾತ್ಪಶುಪ ಮೇಲೆ ಮೂಲೋಕ
ಪತಿಯ ವಾಹನ ಸಹಜಸರ್ವಾಂಗಲಿಂಗ ಬ್ರಹ್ಮದ ಬಹಳಭಾರಕಂಗೆ।
ಕೃತಕರ್ಮ ಸತ್ವಸಾಹಸ[3]ಗೊಳ್ಳುವ[3]ಮರಸಂ
ತತಿಯ ಕೇಡಿಂಗೆ ಕಾರಣವಾದೆಯೆಂದು ಪರ
ಹಿತಚರಿತನಾ ಮಹಾಕಾಯನಾಕ್ಷೇಪೋಪದೇಶವಿತ್ತನಿಮಿಷಂಗೆ ॥ ೭ ॥

ದೇವತಾದ್ರೋಹ ಬ್ರಹ್ಮದ ಬಳಲ ಮಾಹೇಶ್ವ
ರಾವಿದರ ನೋವನಾಚಾರದಳಲಂ ಪ್ರಾಣ
ಗಾವಗುರುನಿಂದೆಯ[4]ನ[5]ಮರ್ತ್ಯರಳಿವನು ಕೇಳಲಾಗದಂತದಕೋಸುಗ।

---

[1] ನ (ಖ.ಫ.ಥ). [2] ದನೀ (ಫ), ದುಯೀ (ಕ.ಗ.ಖ.ಥ), ದಿವನೀ (ಜ).
[3] ಕೊಳ್ಳದ (ಫ). [4] ನು (ಕ.ಖ.ಗ.ಖ).

ಸಾವಧಾನಿಸು ಗೌಪ್ಯತರ ವೃಷಭಗಮ್ಯತಸಂ
ಜೀವಿನೀವ ಪ್ರಾಣಲಿಂಗವುಂಟದ ಭಕ್ತಿ
ಭಾವದಿಂದುಪದೇಶವಡೆದಡಹುದಾತಂಗೆ ಬರವು ಕೈಲಾಸಕೆನಲು ॥ ೮ ॥

ಕೈಕೊಂಡು ಸ್ವರ್ಗಾದಿಭೋಗಗಳ ತ್ರಿದಶರ್ಗೆ
ಕೈಗೈದು ಕೊಟ್ಟು ಕಾರಣತನುರ್ವಳಕೆಯಿಂ
[1]ವೈಥೊ[1]ಕ್ತದಿಂದಾತ ಪೀತಾಂಬರಂ ಕೃತೋತ್ಪತ್ತಿ ಸ್ಥಿತಿ ರಂಗಸ್ಥಲಕೆ।
ಮೈಕೊಟ್ಟು ಮೇರುವಿಂದಿಳೆಗಿಳಿದು ಹಿಮವಂತ
ಶೈಲದಿಂ ದಕ್ಷಿಣದ ಭಾರತಾವನಿಯಲ್ಲಿ
ಹೈಮವತಿ[2]ಯಾಣ್ಮನ[2]ರ್ಚಕರುದರದೊಳ್ಜನಿತವಾಯ್ತು ನಿಮಿಷಂಗಲ್ಲಿಗೆ ॥ ೯ ॥

ಲೋಕೋಕ್ತದಾಣವಂ ಕರ್ಮಮಾಯಾಮಲವ
ನೇಕವಂ ಪರಿಹರಿಸಲೆಂದು ಮೋಕ್ಷಾಂಗನೆಯು
ಸಾಕಾರದಮೃತಾಂಗಿಯಾಗಿ ಚರಿಸಿದಳೊ ಎನಲೆಸವಡೆದ ಮಲಪ್ರಹರಿಯ।
ಸೋಕಿದಾಕ್ಷಣ ತಟಾಕದಿ ಪುಣ್ಯ ಪಾವನತೆ
ಯಾಕಾರವಾಯಿತೆನೆ ಯಾ ರಾಜಧಾನಿಯ ಪ್ರ
ಭಾ[3]ಕರವನೇ[3]ನೆಂಬೆ ನೃಪಕುಲಾನ್ವಯಪಟ್ಟವಡೆದ ಪಟ್ಟದಕಲ್ಲಲಿ ॥ ೧೦ ॥

ನಂದನಂದರ್ಕಳೊಂಭತ್ತು ಪೀಳಿಗೆಯಾಳ್ದು
ಹಿಂದೆಗುಪ್ತರ್ಗುಪ್ತರೆಂಬರಸುಗಳು ಹತ್ತ
ಱಿಂದ ಮೋರೆಯಮೋರೆಯರ್ಗಳಿಪ್ಪತ್ತೊಂದು ಸಿಂಹಾಸನಂಗಳಿಂದ।
ಬಂದುದಿಪ್ಪತ್ತೇಳು ಕಾದಂಬನಾಮ ರಾ
ಜೇಂದ್ರರಲ್ಲಿಂ ಬಳಿಕ ಚಾಳೋಕ್ಯಚಕ್ರೇಶ
ವೃಂದವಿಪ್ಪಂತ್ತೆಂಟು ಪಟ್ಟವಡೆದಾಪಟ್ಟಕಲ್ಲೆನಿಪ ಪುರವರದಲ ॥ ೧೧ ॥

ಆ ನರೇಂದ್ರಾದಿ ವಂಶಾವಳಿಯ ಚಾಳೋಕ್ಯ
ಭೂನಾಥರೊಳಗೊರ್ವ ಧನ[4]ವರೆತವಾಣಿಜ ನಿ[4]
ಧಾನವೊಡಗೂಡಿ ರಾಜ್ಯಸ್ಥನಾಗಿಹನು ಶೈವಾಗಮಶಿರೋರತ್ನನು।
ತಾನು ತ್ರೈಲೋಕ್ಯಚೂಡೇಶಾಂಕ ತನ್ನ ನಿಜ
ಮಾನಿನಿ ಮಹಾಲೇಖೆಯೆಂದವರ್ಗಳುಭಯಾಭಿ
ಧಾನವವರುದರದಿಂದುದಯಿಸಿದ [5]ವಸುದೀಪ್ಯನಾಮದಿಂದನಿಮಿಷೇಂದ್ರ[5] ॥ ೧೨ ॥

---

[1] ವೈದಿಕೋ (ಗ. ಕ. ಖ). [2] ಯೊಳ್ಮವಾ (ಕ. ಖ. ಗ. ಘ. ಛ.) [3] ಕಾರವೇ (ಘ).
[4] ಪತಿಯಾಗಿ ವಾಣಿನಿಜ (ಘ). [5] ವಸುವೆನಿಪಹೆಸರೊಳೆಸೆವನುಮಿಷೇಂದ್ರ (ಘ).
ವಸುದೀಪ್ಯವೆಸರೊಳೆಸೆದನನುಮಿಷೇಂದ್ರ (ಜ).

ಶಾತಕುಂಭಕ್ಕೆ ವರ್ಣಂ ಪುಟ್ಟಿದಂತೆ ಜಲ
ಜಾತಮಿತ್ರಗೆ ವಿಭಾವಸು ಪುಟ್ಟಿದೊಲ್ಸುಧಾ
ಸೂತಿಯೊಳು ಶಾಂ[1]ತದ[1]ಗಭಸ್ತಿ ಪುಟ್ಟಿದ ಮಾ[2]ಳ್ಕೆ[2]ಸ್ವರ್ಗವಾಸಾಧಿಪತಿಗೆ।
ಭೂತಿ ಪುಟ್ಟಿದ ಮಾರ್ಗ ರತ್ನಕ್ಕೆ ದೀಪ್ತಿ[3]ಪೊಗೆ[3]
ದಾ ತೆಱಂ ಮೌಕ್ತಿಕಕೆ ಮೌಳಿ ಪುಟ್ಟಿದೊಲು ವಿ
ಖ್ಯಾತಮಹಿಮಂ ತ್ರೈಜಗಚ್ಚೂಡನೃಪಗೆ ಸಂಭವಿಸಿದನು ಮಾರ್ಗಯುತನು
॥ ೧೩ ॥

*ಕಂಸಮರ್ದನನುರದ ಮಣಿಯ ರಕ್ಷಿಪೊಲು ಸಾ
ರಾಂಶಮಾಚಾರಂ ಸುಗೋತ್ರ ಪಾಲಿಪ ತೆಱಂ
ಹಂಸ ತ್ರಿವಿಷ್ಟಪಾದ್ಯಖಿಲಜಂತುಗಳನುಱೆ ಪಾಲಿಸುವ ಮಾಳ್ಕೆಯಿಂ।
ತಾಂ ಸುಷಮವಂ ಸುಧಾಸೂತಿಪಾಲಿಪೊಲಗ್ನಿ
ಯುಂ ಸುತನನಾನಮುಚಿ ಮರ್ದನಂ ಪಾರಿಜಾ
ತಂ ಸರಾಗತೆವಡೆದತಿಪ್ರೇಲವರು ಸುಕುಮಾರನನ್ನು ಸಂರಕ್ಷಿಸುತಿರೆ
॥ ೧೪ ॥

ಭಕ್ತಿ ರ[4]ಜ[4]ಮಂ ಜ್ಞಾನಮೂಸೆಯೊಳಗಾ[5]ಚಾರ
ಸೂ[5]ಕ್ತಿಗಳೆನಿಪ ತಿದಿಗಳಿಂದೊತ್ತಿ ಸನ್ಮಾರ್ಗ
ಯುಕ್ತಿಯೆಂಬಗ್ನಿಯಿಂ ಕರಗಿಸಾ ರಸಮಂ ಮಹೇಶನಾಮದ ಬ್ರಹ್ಮ[6]ನು[6]।
ಮುಕ್ತಿವಲ್ಲಭನ ಕುರುವಿಟ್ಟೆಱೆದ[7]ವೊಲು ಪರಾ[7]
ಶಕ್ತಿಯುತವಾದ ಶೈವಾಗಮಸದಾಚಾರ
ಯುಕ್ತಮುದ್ಭ[8]ವಿಸ[8]ವರ್ಗಧಿಕ ಸಂಪದವಿಶೇಷೋನ್ನತಿಯನೇಂ ಪೊಗಳ್ವೆನು
॥ ೧೫ ॥

ವಾಣಿ ವಹಿಯಂ ಬರೆವಳಮರೇಶ ಲೆಕ್ಕವಂ
ಕಾಣಿಸುವ ವರಲಕ್ಷ್ಮಿ ಭಂಡಾರದಾಧಿಕ್ಯ
[9]ತಾಣವೇಳ್ವಳು[9] ಕಿನ್ನರೇಶ ಪ್ರಧಾನ ಪೃಷದಶ್ವಚ[10]ರನ[10]ಚಲವೆನಿಪ।

---

[1] ತಂ (ಫ). [2] ಳ್ಪೆ (ಫ), ರ್ಗ (ಥ). [3] ವಡೆ (ಕ.ಖ.ಗ.ಫ.ಥ).
* ಕಂಸಕುಲಮಾಚಾರನಿಕರವೋಚನಪದ್ಮಿ। ಸಂಸುವಕ್ಷಸ್ಥಳೋಮಣಿರಕ್ಷಿತಾಕ್ರಮಂ। ಹಂ ಸ ತ್ರಿ ವಿ ಷ್ಟ ಪಾದ್ಯಖಿಳಜಂತುವಪಾಲಿಪೊಲುಚಂದ್ರಸುಷಮಂಕಳೆ॥ ತಂಸ ಭಾರ್ಯಂ ಬೃಹದ್ಭಾನುನೂನುವನೊಲಿದು। ತನಂ ಸಲಹುಪ್ರೊಲುನಮುಚಿಮರ್ದನಂ। ಪಾರಿಜಾತಂ ಸೂಪವಿತ್ರಕೃತದಂತೆ ಅತಿಪ್ರೇಮದಿಂದವರೊಲದು ರಕ್ಷಿಸುತಿರೆ (ಕ. ಖ. ಗ. ಥ)
[4] ಸ (ಕ. ಗ. ಖ. ಚ. ಫ. ಜ). [5] ಚರಿಸಿಶ (ಕ. ಖ. ಗ. ಥ). [6] ದ (ಫ). [7] ತ್ರರದಿಪರ (ಕ. ಖ. ಗ. ಥ). [8] ವಕ (ಕ. ಖ. ಗ. ಥ). [9] ಕಾಣಲೇಳ್ವಳು (ಕ), ಕಾಣವೇಳ್ವಳು (ಗ), ಕಾಳಲೇವಳು (ಥ), ಕಾಣಲೀವಳು (ಖ). ಆಣಲೇವ (ಜ). [10] ನನ (ಫ), ರವ (ಗ).

ಕ್ಷೋಣಿ ವಿಶ್ವಾ[1]ಸಿಯಾಗಿಹಳ್ ವ್ಯೋಮದೊಳಗೆ[1] ಬ
ಲ್ಲಾಣಿಕಾಱನು ಧನಂಜಯ ಜಯಕ್ಕೀಶಾನ್ಯ
ಹೂಣಿಗನೆನಲ್ಕದುಕಾತ್ರ್ಯತನ ಗೃಹಾಂತರದಿ ನಡೆವರ್ನುಡಿವರುನ್ನತ ॥ ೧೬ ॥

ಆವ ದ್ವೀಪಗಳಾವರತ್ನಾಕರಂಗಳ
ಲ್ಲಾವಾವ ವಸ್ತು ವಿಸ್ತರಿಪಲ್ಲಿ ದೇಶದೇ
ಶಾವಳಿಗಳಲ್ಲಿ ಖಂಡಿತಖಂಡಿತಂಗಳಿಂದೆಸೆವ ಪೃಥ್ವೀಶರಲ್ಲಿ।
ಆವ ಕ್ಷೇತ್ರಾವ ತೀರ್ಥಾವ ಪುರವಾವ ಗ್ರಾ
ಮಾವೆಡೆಯೊಳಧಿಕವ್ಯವಹಾರಮಾರ್ಗಂಗಳಿಂ
ತೀವಿಹುದು ರಾಜವ್ಯವಹಾರಧನವಿಲ್ಲದೆಡೆಯಿಲ್ಲ ಭೂಚಕ್ರದೊಳಗೆ ॥ ೧೭ ॥

ಆತನೈಶ್ವರ್ಯಕಾರ್ಸರಿ ವುಳದ ಭೂಪರೊಳ
ಗೇತಱತಿಶಯ ಕರಿ ತುರಗ ರಥ ಪದಾತಿ[2]ಯಾ[2]
ಚಾತುರಂಗದಿ ಹೋಗಿ ಪರನೃಪರ ಗೆಲಿದು ತುಱುಸೆಱೆದುರ್ಗಗೊಂಡು ಬಾಳ್ವ।
ಆ ತೆಱದೊಳ್[3]ಲ್ಲ[3] ಭೃತ್ರಾವಳಿಯ[4] ಸಂಖ್ಯೆಸಂ
ಕೇ[4]ತವಱಿಯದೆ ಸರಸ್ವತಿಯ ಮೇಲೆತ್ತಿ ನಡೆ
ದಾತನ ವಿಭಾಡಿಸಲ್ಲುಳ್ಳನರ್ಘ್ಯವ ಮಾಱುಗೊಂಬ ವಾಣಿಜರಾಜನು ॥ ೧೮ ॥

ತನಯಂಗೆ ಬಾಲ್ಯೋಪಜಾತಕರ್ಮಂಗಳೆನಿ
ತನಿ[5]ತೆಲ್ಲ[5] ಸತ್ಕರಿಸಿ ತತ್ಕಾ[6]ಲಕಾಲೋಚಿ[6]
ತನುವಱಿದು ಕುಲವಿದ್ಯೆ ರಾಜೋಪರಚನೆಯಭ್ಯಾಸವಕ್ಷರಲಕ್ಷಣ।
ವಿನುತ ವಿನಿಯೋಗಾಗಮಾದಿಗಳನಱುಪಿ ಯೋ
ಗ್ಯನಮಾಡಿ ಸದ್ಗತಿ ಶಿವಜ್ಞಾನ ದೀಕ್ಷೆವಂ
ತನುಮೆನಿಸಿ ಸರ್ವಸಂಪದಕೊಡೆತನಂಗೊಡಲು ಆತವೊಂದಾನೊಂದಿನ ॥ ೧೯ ॥

ತಾ ಸುಮಾನದೊಳೋಲಗಂಗೊಟ್ಟು ಕುಳಿ[7]ತಿರ
ಲ್ಕಾ[7]ಸಮಯದೊಳು ಚರರು ವ್ಯವಹಾರಮಾರ್ಗಪ್ರ
ದೇಶಲಾಭೋನ್ನತದ ವಾರ್ತೆಗೊಂಡುತ್ಸಹದ ಗುಡಿವಿಡಿದು ಬಂದುನಿಂದು।
ಲೇಸ ಸೂಚಿಸಿ ರಾಜತೇಜಿಗ[8]ಳಿಳಿದವ[8]ತಿವಿ
ಶೇಷದೊಂದಶ್ವ ಕ್ರತುಜ[9]ವನೆಂಬುದವಱೊಳವ[9]
ನೀಶ ಬಂದಿಹುದೆನಲು ಕೇಳ್ದದಿಗೊರ್ಂಡು ತಂದರ್ಚಿಸಿದರೊಳಗೆ ಕಟ್ಟಿ ॥ ೨೦ ॥

---

[1] ಸಿ ವಿಶ್ವಾಸಹೇವದೊಳು (ಜ). [2] ಗಾ (ಫ). [3] ಲ್ಲಿ (ಖ.ಕ.ಗ.) [4] ಶಂಖೆ ಸಂಖ್ಯಾ (ಫ). [5] ತೊಳವಸಕ್ಕಿ (ಕ.ಗ.ಥ.ಖ). [6] ಲೋಚಿ (ಗ.ಖ). [7] ತಿಪರ್ಾ (ಫ). [8] ಳೊಳಿದು ಅ (ಕ.ಖ.ಗ.ಫ.ಥ). [9] ನ್ನನೆಂಬುದಱೊಳವ (ಕ.ಖ.ಗ.ಫ.ಥ).

ತಾ ಸಲಹುತಿರುತಿರ್ದು ಕೆಲಕಾಲದಿಂ ಮೇಲೆ
ದೇಶಪ್ರವರ್ತನದನರ್ಘ್ಯವಸ್ತುವ್ರಾತ
ಶೇಷಮಂ ಕೂಡಿಕ್ಕಿ ಕೂಡಿ ತಾಂ ಪೋಗಿ ಕಳು[1]ಹುವ ಭರೋತ್ಸಹವ[1]ಬಯಸಿ।
ದೇಶಕೋಶಗಳನೀಕ್ಷಿಪ ಭರದಿ ಪೊಱಮಟ್ಟು
ಆಸುರದ ದಳವಾಡಸಹಿತ ನಾಲ್ಕೆಂಟು ಪಯ
ಣಾಸವಿಮಾಪಂಗಳೆದು ಬಂದೊಂದು ಬಹಳತರದಾಟವಿಯೊಳಡಸಿಬಿಟ್ಟು ॥ ೨೧ ॥

ಆ ವನಾಂತರದಂತರವ ಗಿರಿಸ್ಥಲತರುಫ
ಲಾವಳಿಯ ಜಲತೃಣಾದಿಗಳ ನೋಳ್ಪಳ್ತಿಯಿಂ
ಭಾವಿಸುತ ಪರಿವಾರಸಹಿತ ತಾ ಸಲಹಿದಾಕ್ರತುಜ[2]ವವೆನಿಪ್ಪ[2]ಶ್ವವ।
ತಾ ವಿಶೇಷದಿ ಬೋಳಯಿಸಿ ಬಿಗಿದು ಬೆಂಗೆವಾ
ಯ್ದೇವುತೊಯ್ಯಾರಿಸುತ ಪೋಗೆ ಪೋಗಲ್ಕೆ ಶಬ
ರಾವಳಿ ಕವಿದು ಬೇಂಟೆಯಾಡುತ್ತ ಬರೆ ತುರಗ ಬೆಚ್ಚಿ ವಿಗಡಿಸುತೂಳಿತು ॥ ೨೨ ॥

ಅದು ಪೂರ್ವದಲ್ಲಿಯಾಯನಿಮಿಷೇಂದ್ರನು ಯಾಗ
ವಿಧಿಗಿಕ್ಕಿದಶ್ವ ತಾ ತನ್ನೊಡನೆ ಜನಿಸಿಯಾ
ಕುದುರೆಯಾಯ್ತವನಱಿಯದಡರಲ್ಕೆ ಕೊಂಡೊಯ್ದು ಹೊಲಬುದಪ್ಪಿಸಿ ಹೋಗುತ।
ಉದಯಾಸ್ತಮಾನವೆನ್ನದೆ ಪಾಯ್ದು ಗಿರಿಗಹ್ವ
ರದೊಳು ಕೊಂಡೋಡುತ್ತ ಬಂದುದು ಬಕಾಸುರನ
ಸದನ ಪರ್ವತಪೂ[3]ರ್ವ[3]ತಾಣಕ್ಕೈ[4]ದುತ್ತ[4] ದೂಪಿಸಿತರಸ ಕಡುಬಳಲಿದ ॥ ೨೩ ॥

ದೂಪಿಸಿದ ಕುದುರೆಯಂ ಮ್ಮೆದೊಳೆದು ಪುಳಿನಂಕ
ಳಾಪಜಲ[5]ದೋರೊಂ[5]ದು ವೃಕ್ಷಮೂಲದಿ ತೊಡರ್ಚಿ
ತಾಪಿಸುತ ಬಳಲ್ದು ಕಣ್ಮುಚ್ಚಿದ್ದು ನೋಡೆ ದೈವಿಕತುರಗ ಮಾಯವಾಗೆ।
ಹಾ ಪುಣ್ಯವೇ ಗಾಳಿಗಿಟ್ಟ ಸೊಡರಂತಶ್ವ
ಲೋಪವಾಯ್ತೇಂ ಬಯಲು ನುಂಗಿತೋ ಇದು ಶಿವನಿ
ರೂಪವೆಂದೆನುತ ವಸುಧೇಶ ಬೆಱಗಿನ ಬೆಳೆಯ ಕೇಣಿಗೊಂಡಂತಾಗುತ ॥ ೨೪ ॥

ತಾಪರೀಕ್ಷಿಸುತೆಲ್ಲಿಯುಂ ದೆಸೆಯ ಕಾಣದಿನಿ
ತಾಪತ್ತಿಗೊಳಗಾದೆನಕಟೆಂಬ ಮನಸಿನನು
ತಾಪದೊಳ್ಕ್ಷುತ್ತೃಷ್ಣೆಗಳ್ ಮೊಳೆದು ಸರ್ವಾಂಗದೊಳ್ಬೇಗೆವರಿಯಲೊಡನೆ।

---

[1] ಹಿಸಿ ಬಹೋತ್ಸವ (ಘ). [2] ನ್ನವೆನಿಪ (ಕ. ಖ. ಗ ಘ. ಛ.) [3] ರ್ಣ (ಘ).
[4] ತಂದು (ಕ). [5] ದೊಳಗೊಂ (ಖ), ದೊಳೊಂ (ಗ.ಛ).

ಏಪರಿಯೊ ಜಲತೃಷಾಭ್ರಮೆ ಲಿಂಗದರ್ಶನಾ
ಳಾಪಗೂಡದು ಮಹಾರಣ್ಯ ಹೊಲಬಱಿಯೆ ಪ್ರಾ
ಣಾಪಹರವಾಗುತಿದೆ ಪಾಳ್ಬೀಳುಗ್ರಾಮದೊರೆಯುವೆ ಸ್ಥಾವರಂಗಳಿರವೆ ‖ ೨೫ ‖

ಎಂದು ಬಾಯಾಱುತೇಳುತ ಬೀಳುತಂ ಪ್ರಾಣ
ಸಂದೇಹವಾಗುತ್ತ ಲಿಂಗಾಭಿಲಾಷೆಯಾ
[1]ಸಿಂ[1]ದಱಸುತಳವಳಿವುತತಿಧಾತುಗುಂದಿ ಹಂಬಲಿಸುತ್ತ ಬರುತಿರಲ್ಕೆ ।
ಮುಂದೊಂದು ತಾಣದೊಳನಾದಿವೃಷಭೇಶನಾ
ನಂದದಿಂ ಹುಲುಜಲಾಹರಗೊಂಡು ಕಾರುಣ್ಯ
ಸಿಂಧು ಗೋಮುಖದಾಸನದೊಳಿರಲು ಕಂಡನಾ ವಸುದೀಪ್ಯರಾಜೇಂದ್ರನು
‖ ೨೬ ‖

ಕಾಣುತ್ತ[2] ಗಳಗಳನೆ[2] ಬಂದು ವೃಷಭೇಶನಿಹ
[3]ತಾ[3]ಣಿದೇನಿಲ್ಲ ಗೋಪುರವೊ ಮೇಣ್ಗ್ರಾಮವಿಹ
ತಾಣವೊ ತೀರ್ಥಕ್ಷೇತ್ರಸ್ಥಲವೊ ಎನುತಾಸೆವಟ್ಟು ಪಲವೆಣಿಕೆಗೊಳುತ ।
ಪ್ರಾಣವಂ [4]ಕೈ[4]ವಿಡಿದು ಪಶು ಲಿಂಗಮುದ್ರೆಯಂ
ಕಾಣಿಸಾದಡೆ ನಿತ್ಯನೇಮ ಲಿಂಗವಗಹನ
[5]ದಾಣತಿ[5]ವಡೆವೆನೆನುತ ಬಂದೀಕ್ಷಿಸಲ್ಮುದ್ರೆಯಿಲ್ಲದೆ ನಿರಾಸೆಯಾಗೆ ‖ ೨೭ ‖

[6]ಕಾಡೆತ್ತಿದ[6] ಕಟಕಟೆನುತ್ತಳಲಿಬಳಲಿ ಮುಖ
ಬಾಡಿ ಬಾಯ್ಬತ್ತಿ ನಾಲಗೆಯೊಣಗಿ ತುಟಿಯಾಱಿ
ಕೂಡೆ ಸುಯಿಸುಯಿದು ಸಂತಾಪ ತಾಪಿಸಿ ದಾಹವಾವರಿಸಿ [7]ಬಸವಳಿವುತ[7] ।
ಕೋಡಿ ಕೊಂಕುತ ಡೆಂಢಣಿಸಿ ತೃಷೆವಿಷಶರೀರ
ಗೂಡಡಸಿ ಹಲುಬಿ ಹಂಬಲಿಸಿ ಕಳವಳ ಕವಲ್ತು
ಪೀಡಿಸುತ ಮಱುಕನುಡಿಯುಡುಗುತಿನ್ನೆಲ್ಲಿಯದು ಲಿಂಗವೆನುತುಃಫೆನುತ್ತ ‖ ೨೮ ‖

ಜಠರಾಗ್ನಿ ಗಾತ್ರದಾಮೂಲಾಗ್ರಗ್ರಸ್ತತೆಯ
ನಟಿಸಿ ತೃಷೆವಿಷವಾವರಿಸಿ ಪಶುವ ವ್ಯಾಘ್ರಸಂ
ಕಟಿಸುವಂತಾತ್ಮಸಂಚಲ ಕ್ಷಣಾತ್ಕ್ಷೀಣ ನಿತ್ರಾಣಿ ಕಾತರಿಸುತೊಂದು ।
ವಿಟಪಿಯಡಿಯೊಳು ವೃಷಭನಿದಿರಿನೊಳು ಬಿದ್ದು ಹೊರ
ಳ್ದಟವಟಿಸಿ ಶಿವಲಿಂಗವಿಲ್ಲವಿನ್ನೇತಕೀ
ಘಟದಾಸೆಯೆನಲದಂ ಕೇಳ್ದ ಕಾರುಣ್ಯಕಲ್ಪಾಂತಧರ್ಮಸ್ವರೂಪ ‖ ೨೯ ‖

---

[1] ಗೆಂ (ಕ.ಖ.ಗ.ಘ.ಛ). [2] ಸರಸರನೆ (ಖ). [3] ಜಾ (ಜ). [4] ಗ್ಯೆ (ಘ. ಛ). [5] ತಾಣತೆ (ಕ. ಖ.ಗ.ಘ). [6] ನೋಡುತಲಿ ಅ (ಕ.ಖ.ಗ.ಘ). [7] ಬಳಲಳವಳಿವುತ (ಕ), ಬಳವಳಿವುತ (ಗ.ಛ).

ನಿಟ್ಟಿಸಿದ ರಾಜಕುವರಂ ನಿರ್ಮಳಾಂಗ ನೀ
ನಟ್ಟಡವಿಯೊಳಗೊಬ್ಬನೇ ಬಂದು ಬಳಲ್ದೆನ್ನ
ಕಟ್ಟಿದಿರೊಳಳಲುತ್ತ ಲಿಂಗವ್ಯಸನಭ್ರಾಂತಿ [1]ತಾನಿಂತಿದೇ[1] ನಿಮಿತ್ತಂ।
ಹುಟ್ಟಿತೋ ಯೆಂದು ಕರುಣದೊಳಿದಾರೇಂ ಬಂದೆ
ಕಟ್ಟಾಸಱೇನೆನಲು ಕೇಳಿ ನೀನಿದಕೆ ಕಡೆ
ಕಟ್ಟವಾಳ್ಪಂಗವೇನುಂಟಯ್ಯ ತಂದೆ ನೀನೇವೆನ್ನ ಕಲ್ಪಿತವಿಧಿ ॥ ೨೦ ॥

ಹುಟ್ಟಿತ್ತು ಮುಂ ವಾಡಿತ್ತೈಸೆಯಾಂ ಶಿವಭಕ್ತ
ಪಟ್ಟಗಲ್ಲರಸು ವಾಣಿಜನರನ ಸುತ ಘಣಿಗೆ
ಕಟ್ಟಿದಂತಿತ್ತು ವಿಧಿ ಲಿಂಗದರ್ಶನನೇಮವ್ರತವಡೆಯಲಿಂತಾಂ ವೃಥಾ।
ಕೆಟ್ಟೆನೆನೆ ಪಕ್ಷೀಕರಿಸಿಕೊಂಡು ಕರುಣವಳ
[2]ವ[2]ಟ್ಟು ಸಂಜೀವನಮೃತಾಂಗದಾತ್ಮಜ್ಯೋತಿ
ನಿಷ್ಠೆಯ ನಿಧಾನ ಜಿಹ್ವಾಗ್ರದೊಳು ಲಿಂಗಮಂ ನಿಲಿಸಿ ನೀಡಿದ ವೃಷಭನು ॥ ೨೧ ॥

ಆ ಲಿಂಗದಮೃತಕಳೆ ವಸುದೀಪ್ಯನಂಗವುಮ
ನಾಲಿಂಗಿಸಲು ಚಕೋರಂ ಕೈರ[3]ವಾ[3]ಬ್ಜಪ್ರ
ಭಾಳಂಕುರಿತವಾದೊಲೆದ್ದಮಲಕರಕಮಲಸಂಪುಟಂಗೈದು ನಿಂದು।
ನಾ ಲಿಂಗಪ್ರಾಣಿ ದರುಶನವಾಯ್ತು ನೀನು ಕರು
ಣಾಳೆನ್ನ ರಕ್ಷಿಪಡೆ ಸ್ಪರ್ಶನಂ ವಾಳ್ಪಂತೆ
ಪಾಲಿಸೆಂದೆರಡು ಕೈಯಾನಲ್ಕೆ ಲಿಂಗಮಂ ಕೊಟ್ಟ ಭಕ್ತಿ[4]ಭ್ರಮೆ[4]ಯೊಳು ॥ ೨೨ ॥

ಆತಂಗೆ ಜಾತಿಸ್ಮರತ್ವವಾಯ್ತಾ ಪ್ರಭಾ
[5]ವ್ರಾತ ಉರವಣಿಸಿ[5] ಲಿಂಗಪ್ರಾಣಿಯಾಗಿ ಬಿಡ
ದೋತು ನಿಮಿಷಾರ್ಧಂಪಿಯೋಗವಿಲ್ಲದೆ ನಿರೀಕ್ಷಿಸಲನಿಮಿಷಾಂಕನಾಗಿ।
ಭೂತಳದೊಳಿರೆ ಸಮಾಧಿಯೊಳು ಬಳಿವಂದು ಬಳಿ
ಕಾತನಾಪ್ತರುಗಳೀ ಯಂಗವಱಿದಲ್ಲಿಯೆ ಶಿ
ಲಾತಳಂಗೊಳಿಸಿ ಸೂಕ್ಷ್ಮಾಲಯಂಗಟ್ಟಿ ಮಣ್ಮುಚ್ಚಲಿತ್ತಿರುತಿರ್ದುದು ॥ ೨೩ ॥

ಅಂತರ್ಧನವನನ್ಯಕ್ಷೇತ್ರದೊಳು ನಿಕ್ಷೇಪಿ
ಸಂತತದಱ ಹೊಲಬುದಪ್ಪಿರ್ದ ಭಾವದ ಸೂತ್ರ
ದೆಂತ್ರವೆಡೆಯಱಿಯ[6]ದಾರ್ತ[6]ದೊಳು ಚೂಡಾಮಣಿಯನಱಿಸಿ ಬಪ್ಪಾತ್ಮರೂಪ।

---

[1] ವಿಭ್ರಾಂತಿದೇ (ಕ.ಖ.ಗ.ಘ ಛ). [2] ಹು (ಘ). [3] ಮ (ಘ). [4] ಪ್ರಭೆ (ಕ.ಖ). [5] ಭಾತಿ ಉರವಣಿಸಿ (ಕ.ಖ.ಗ.ಘ.ಛ), ವ್ರಾತ ಭಾಸಣಿಸಿ (ಜ). [6] ದರ್ಪ (ಕ.ಖ.ಗ.ಘ.ಛ).

ದಂತು ಲಿಂಗಪ್ರಾಣಿ ಬಸವ ಬರೆ ಶಿವಕೂರ್ತ
ದಂ ತಿಳಿದು ಕೊಳ್ಳದಂಜನಸಿದ್ಧಿ ಜಂಗಮವು
ಖಾಂತರವೆನಲು ವೃಷಭ ಬಸವನಹ ತಾತ್ಪರ್ಯಕೊಗೆದ ಕಥನಾರ್ಥವಚನ ॥೩೪॥

ಚೆನ್ನಬಸವದೇವರ ಸಂಪಾದನೆಯ ವಚನ*—

ಅಂಜದಿರಂಜದಿರು ಹಿಂದೊಮ್ಮೆ ಭವದ ಬಟ್ಟೆಯ ಹೋದೆನೆಂದು, ಅಂದೊಮ್ಮೆ ಅನಿಮಿಷಂಗೆ ಲಿಂಗ[1]ವಿತ್ತುದೊಂದು ಅ[1]ಭವನ ಬಾಗಿಲಂ ಬಾರಿಸಿತ್ತು. ಅಂಜನೆ ಜಲಗರಹೇಮರಸವ ಅಂಜಿ ಕುಡಿದೊಡೆ ಉದರದೊಳಗಿದ್ದು ಸಿಂಗಾರವಮಾಡನೆ ಕಪಿ? ಸಿಂಗಾರವ ಮಾಡಿ ಜನಿಸಿದವಯ್ಯ. ಅಳಿವುದೇ ಶಿವಪಿಂಡವು? ಮಱೆವುದೇ ಶಿವಜ್ಞಾನವು? ಹಿಂದೆ ಏಳುನೂಱುವರುಷ ಮಂಡೋದರಿಯ ಉದರದಲ್ಲಿರ್ದು ಜನಿಸನೆ ಇಂದ್ರಜಿತು? ನೀ ಹೊಟ್ಟೆಗೆ ವಿಭೂತಿಯ ಪಟ್ಟವ ಕಟ್ಟಿದಂದು ಆಯ್ತೆನ ಗನುಗ್ರಹ. ಅಂಜದಿರು ಅಂಜದಿರು ಕೂಡಲಚೆನ್ನಸಂಗಯ್ಯ ನಿಮ್ಮತೊತ್ತಿನ ತೊತ್ತು ನಾನು. ‖ ೧ ‖

ಶಾಂತಿಯ ಮಾಡಹೋದರೆ ಬೇತಾಳಮೂಡಿದಂತಾಯ್ತು. ಉಪಚಾರುಬದ್ಧಿ ಯಂಡಲೆದು ಶೀತಳದಾಪ್ಯಾಯನವಾದಡೆ ತೋಱಿದೆನಯ್ಯ. ಪರಹಿತಾರ್ಥವಾಗಿ ಪ್ರಾಣಲಿಂಗವ ಕೊಟ್ಟು ಹೋಗಿ ಈಶನ ಮನೆಯ ಹೊಕ್ಕಡೆ ಇರಿಸಿದನೆ ಲಿಂಗವ? ಮಹೇಶ್ವರತನವ ನೋಡಿರೆ! ಅರಸೆಂದು ತಾನೆ ಸ್ವತಂತ್ರನು. ಅಳಲಿ ಬಳಲಿ ಹಾಡಿ ಹಂಬಲಿಸಿ ಅನಂತವಸ್ಥೆಯಿಂದೆ ಲಕ್ಕದ ಮೇಲೆ ತೊಂಭತ್ತಾಱು ಸಾವಿರಗೀತವನು ಆಚಾರವಿಚಾರದಲ್ಲಿ ವಿಚಾರಿಸಿ ವಿಚಿತ್ರನಾ[2]ಭಿ[2]ಯಾಕಾರವ ಕೊಟ್ಟು ಕಳುಹಿದರಯ್ಯ. ಗುಹೇಶ್ವರನ ಶರಣ ತೋಱಿದನಯ್ಯ ನಮ್ಮ ಕೂಡಲ ಸಂಗನೆಂಬ ಲಿಂಗವನು ॥೨॥

ಕೊಂಡಡಗಿದನೊಬ್ಬ, ಕೊಟ್ಟಱಿಸಿದನೊಬ್ಬ, ಈರೇಳುಭುವನದೊಳಗೆ ವೃಷಭ ನು ವಿಸ್ಮಯಂಗೊಂಡನಯ್ಯ ಶಶಿಧರನು ಭೂಮಿಯ ಜಲಗುಗರ್ಚಿ ಹೇಮವನಱಿಸು ವಂತೆ ಅಱಿಸುತಿಪ್ಪೆನಯ್ಯ ಜಂಗಮದೊಳಗೆ ಲಿಂಗವನು. ಏಕೋನೈಷ್ಠೆಯ ಭಕ್ತಿಯ ಕಂಡೆ ಕೊಂಡೊಯ್ವನಯ್ಯ ಶಿವನು. ಜಪ ತಪ ಸಮಾಧಿಯೊಳಗೆ ಅನಿಮಿಷನಡಗಿ ದೊಡೆ ಲಿಂಗಾಂಗಿ ಬಾರನೆ? ಪ್ರಭುದೇವರು ಅಸಂಖ್ಯಾತರಿಗೆ ಮಾಡಿದ ಸೈಧಾನ ವನು ಗುಹೇಶ್ವರಶರಣನಾರೋಗಿಸಿಕೊಟ್ಟಡೆ ಕೂಡಲಚೆನ್ನಸಂಗಯ್ಯಲಿಂಗವೆಂದಱಿ ದನಯ್ಯ ಸಂಗನಬಸವಣ್ಣ. ‖ ೩ ‖

ಆ ಮಹಾವೃಷಭಗಾಗಳೆ ತಮಂಧಾಹುತಿಯ
ಹೋಮ ಬೆಳೆಯಿತ್ತು ಭ್ರಮೆ ಬಹಿಷ್ಕೃತಿಯನಳವಡಿಸಿ
ಈ ಮಹೀತಳದಿ [3]ಶಾಕ್ವರ[3]ರೂಪವಿರ್ದಂತರಾತ್ಮ ಮೂರ್ತ್ಯತ್ವವಿಡಿದು।

[1] ತ್ತೆನೆಂದೇ ಭ (ಜ). * ಮೊದಲ ಎರಡು ವಚನಗಳು 'ಜ' ಪ್ರತಿಯಲ್ಲಿಲ್ಲ.
[2] ತ್ರಿ (ಫ). [3] ಶಾಶ್ವತ (ಖ.ಫ).

ಸೋಮಶೇಖರನ ಕರುಣದ ಕಳಾಪ್ರಕೃತಿ ತಾ
ನೇಮಮಂ ಕೈಕೊಂಡು ಬಂದೊಂದು ಬುದ್ಧಿಯುಪ
ಸಾಮದಿಂದೆನ್ನ ಲಿಂಗವನೊಯ್ದನೆನುತ ಕೈಲಾಸಕ್ಕೈತಂದ ವೃಷಭ ॥ ೩೫ ॥

ಬಂದು ಬಾಗಿಲೊಳಿರಲಿಕೀತನಿಹ ದುಶ್ಚೇಷ್ಟೆ
ಯಂದಮಂ ಕಂಡು ಶಿವದ್ವಾರಪಾಲಕರಮಲ
ದ್ವಂದ್ವಮ[1]ಹ[1] ಕಾಳ ರುದ್ರಪ್ರಭವ ಬೆಸಗೊಂಡಡೆಂದನಾ ವೃಷಭಾಂಕನು।
ಬಂದುಕಾರಣ ಮರ್ತ್ಯಕಾಂ ಪೋಗಿರಲ್ಕೆ ಬಾ
ಲೇಂದುಧರ ನಾ ಬಾರದುದ ನೋಡಿ ತಾನೆ ಬೇ
ಱೊಂದು ರೂಪಾಗಿ ಬಂದೆನ್ನಲಿಂಗವ ಕೊಂಡುಬರಲು ಬಳಿವಂದೆನೆನಲು ॥ ೩೬ ॥

ಲಿಂಗಬಾಹ್ಯನ ನೋಡದವನು ಮುಖದಿರುಹಿ ತ
ಮ್ಮಂಗರಕ್ಷಕ ಚಾರರೆಕ್ಷ ಸಂತತಿಯೊಳಗೆ
ಸಿಂಗಕೇಶ ದ್ರವಿಡರೆನುತಿರ್ಪರಿಗೆ ನೇಮಿಸಲ್ಕವರು ಮೇಲಱಿಯದೆ।
ಭಂಗಿಸಿ ನುಡಿದು ಝಡಿದು ಪಿಡಿದು ನೂಂಕುತ್ತ ಹೆಱ
ಹಿಂಗು ಹಿಂಗದೊಡೆ ಗದೆಯಿಂದೊಗೆವೆವೆನುತಲ
ತ್ಯಂಗವಿಸಿ ಧಿಕ್ಕರಿ[2]ಸುತಿರೆ ನಿಲಿಸಿ ಮಹಕಾಳರುದ್ರ ಸೆಳೆಗೋಲುವೊಯ್ದು[2] ॥೩೭॥

ಅಂಗಹೀನರು ಗುರುದ್ರೋಹಿಗಳು ಶಿವಮಂತ್ರ
ಭಂಗಿತರು ನಿಂದಕ ದುರಾತ್ಮ ದೂಷಕರು ಭವಿ
ಸಂಗಿಗಳು ಭವಭಾರಿಗಳು ಭೂತಿರುದ್ರಾಕ್ಷಿಲಿಂಗಧಾರಣವಿಲ್ಲದ।
ಲಿಂಗಿಗಳಭವಭವನ ಪೊಗಸಲ್ಲ ನೀಂ ಪ್ರಾಣ
ಲಿಂಗಮಂ ನೀಗಿದ ಮಹಾಪಾತಕನು ಬಾಗಿ
ಲಿಂಗೆ ಬಾರದಿರೆಂದು ಛಪ್ಪರಿಸಿ ಜಱೆದು ವೃಷಭನ ಝುಂಕಿಸುತ್ತೆ ನಿಲಿಸಿ ॥ ೩೮ ॥

ದೇವದೇವನೆ ಕೊಂಡನೆಂಬಭಿಪ್ರಾಯವಿದ
ನಾವಱಿಯೆವತ್ತ ಸಾರೆಂದು ನಿಂದಟ್ಟಿಸುತ
ಹೇವರಿಸಿ ನೂಂಕು ನೂಂಕೆಂದು ನೂಂಕಿಸಿಕೊಂಬವಸ್ಥೆ ಬಂದತಿದುಃಖಕೆ।
ಏವೆ ಶಿವಧೋ ಯೆಂದು ವೃಷಭನಾರ್ಭಟಿಸೆ ಶಿವ
ಕೇವಲಜ್ಞಾನದಿಂದಱಿದು ಬಿಜಯಂಗೈದು
ಏವುದೈ ನಿಮಗೆ ಸಂವಾದ ವೃಷಭಂಗೇಕೆ ಲಿಂಗ ತಾ ಲಿಂಗವೆನಲು ॥ ೩೯ ॥

---

[1] ಹಾ (ಸ. ಪ್ರ.). [2] ಸಲ್ನಿಲಿಸಿ ವೃಷಭನಂ ಜಱಿದು ಝುಂಕಿಸುತನಿಲಿಸಿ (ಜ).

ಒಡೆಮುತ್ತು ಬೆಸುಗೆ ಕಿಡಿ ಹೊಡೆದ ಹೊಸವಸ್ತ್ರಮೃತ
ಗೊಡದೊಳೆಱಗಿದ ನಂಜು [1]ಅಂಧ[1]ಮಾಣಿಕ ರೂಪು
ವಡೆದ ಮೂಗಿಲ್ಲದುತ್ತಮಕಾಂ[2]ತೆ[2] ತಪಸಿನೊಳು ನಿಂ[3]ದೆವೊತ್ತ[3]ಧಿಕಮುನಿಪ।
ಹಿಡಿವಡೆದ ವೀರ ನಂದಿದ ದೀಪ್ತಿ ವಿಷಗಱೆವ
ಕಡುಚೆಲುವ ಪಶುವಿನೊಲು ಪ್ರಾಣಲಿಂಗದ ಸಂಗ
ಗೆಡಿಸಿದ ಮಹಾದ್ರೋಹವಿರಲಧಿಕನೆಂತಾದ[4]ನಂ[4]ತಾತ ನಮಗೇಕೆನೆ ॥ ೪೦॥

ಸಿದ್ಧರಸ ಹುಳಿವುದೇ ಕಾಮಧೇನುಗೆ ಕಳಿಕೆ
ಹೊದ್ದುವುದೆ ಕಲ್ಪವೃಕ್ಷದೊಳು ಕಪಟದ ಫಲಪ್ರ
ಬುದ್ಧತವೆ ಗಂಗಾಂಬುವಿಗೆ ಕಿಲ್ಬಿಷವೆ ಬೃಹದ್ಭಾನುವಂತ್ಯಜರಮನೆಯ।
ಲಿರ್ದಡಕ್ಕುಲಜನೆ ಸುಪರ್ಣಗಹಿವಿಷಭಯಮೆ
ಶುದ್ಧಪಂಚಾಕ್ಷರಿಗೆ ಭೂತಸೋಂಕೇ ಲಿಂಗ
ವಿರ್ದುವಿಲ್ಲೆಂಬರೇ ವೃಷಭಸರ್ವಾಂಗಸಲ್ಲಿಂಗನೆಂದಭವ ನುಡಿಯೆ ॥ ೪೧ ॥

ಆತನಧಿಕತೆ ನಿಮ್ಮಡಿಗಳೊಲುಮೆ ಎಮಗದೇಂ
ಬಾತೆ ಮುದ್ರಾಭಂಗ ವೇಶಿಯ ಪತಿವ್ರತಾ
ನೀತಿ ರಾಜದ್ರೋಹ ಒಡೆದೋಡು ಬೆಸುಗೆವಿಡಿವುದೆ ಲಿಂಗಬಾಹಿರರನು।
ಈ ತೆಱದೊಳೊಳಗೆ ಪೊಗಲೀಯೆವೆನೆ ಶಿವನವರ
ಮಾತಿಂಗೆ ಮಗುಳುತ್ತರವ ಕಾಣದಹುದೆನು
ತ್ತಾತನಂ ಕರೆದು ನೀನಿಳೆಯೊಳವತರಿಸಿ ನಿಂದೆಯ ನೀಗಿ ಬಾ ಹೋಗೆನೆ ॥ ೪೨ ॥

ಶಾಂತಿ ಮಾಡಲ್ಕೆ ಪ್ರಳಯಾಂತ ಮೂಡಿತು ತಂದೆ
ಭೂತೇಶ ಭಕ್ತದೇಹಿಕದೇವನಾಗಿ ಬಾ
ಳ್ವಾತ ನೀನೆಂದಾಂ ಹಿತಾರ್ಥಮಂ ಮಾಡಲುಪಕಾರಕಪಕಾರಮಾಯ್ತು।
ಮಾತೆ ರಕ್ಕಸಿಯಾದ ಬಳಿಕ ಮಕ್ಕಳು ಬದುಕ
ಲೇತೆಱನದುಂಟು ನೀವೇ [5]ನಿಷ್ಕೃಪೆಯೊಳು[5]ದು
ರ್ನೀತನಂ ಮಾಡಿ ಮರ್ತ್ಯಕ್ಕೆ ಹೋಗೆಂ[6]ದಿ[6]ರಿನ್ನೇತಱ ವಿಚಾರವೆನಲು ॥೪೩॥

ಗಾಳಿಯಂ ರೇಣುವಿಡಿವುದೆ [7]ರಸಂ[7]ರಸನೆವಿಡಿ
ದಾಳಿಗೊಂಬುದೆ ಜಲಜ[8]ಕೇ[8]ಂಜಲಂ ಸೋಂಕೆ ಕ
ಣ್ಣಾಲಿಗದು ಕಜ್ಜಳಂ ಕಪಟವೇ ನೀರ ಮೇಲಿಡೆ ಬೇಗೆ ನಿಜವೆ ವಜ್ರ।

[1] ಅಂದು (ಪು). [2] ತಿ (ಕ.ಖ.ಗ.ಪು.ಧ). [3] ದ್ಯವತ್ಯ (ಕ.ಖ.ಗ.ಪು.ಧ). [4] ಡಂ (ಧ). [5] ನಿಷ್ಕೃಪೆಯೊಳಂ. (ಕ), ದುಃಕೃತಿಯೊಳಂ (ಜ). [6] ದ (ಪು) [7] ರಸನಂ (ಪು). [8] ಕ್ಕೆಂ (ಕ).

ಜ್ವಾಲೆಯಂ ಕಲ್ಲು ಕಚ್ಚುವುದೆ ಮಂತ್ರಗಳ ಭೇ
ತಾಳ ನುಂಗುವುದೆ ಗರುಡಂಗೆ ಗ್ರಹಣವೆ ಪುಷ್ಪ
ಮಾ[1]ಲೆಪ್ರಯಾಸಂಗೆ[1] ಬಂಧನವೆ ವೃಷಭ ಭವಭಯವುುಂಟೆ ನಿನಗಾನಿರೆ ‖೪೪‖

ಏಕೆ ನಿ[2]ರ್ವೇದನೆ[2] ನಿರರ್ಥ ಕಲ್ಪಾಂತರವ
ನೇಕರೊಳು ನೀವಱಿಯದುದೆ ಒಲಿದರನು ದೇವ
ಲೋಕಕ್ಕೆ ತಂದು ಫಲಗೊಂಬೆವಲ್ಲೈಸೆ ಮರ್ತ್ಯದೊಳಿರಿಸಿಯುಪದೇಶಿಸಿ।
ನೀ ಕರುಣದಿಂದನಿಮಿಷಂಗೆ ಲಿಂಗವ ಗಹನ
ಸ್ವೀಕಾರದಿಂ ಕೃತಾರ್ಥನ ಮಾಡಿ ಕೈಲಾಸ
ಕೇಕೆ ತಾರದೆ ಬಂದೆ ಯಾ ಫಲವನೇಕ ಫಲದಲ್ಲಿಗೊ[3]ಯ್ಯದೆ[3] ಮಾಣ್ಬುದೆ ‖೪೫‖

ಫಲವೀವವಸ್ತುವನು ಪರಹಿತಾರ್ಥಕೆ ಕೊಟ್ಟ
ಫಲವದಗಣಿತಕಣಾ ಮರ್ತ್ಯದೊಳು ನೀನಿರ್ದ
ನೆಲೆಯೆ ಕೈಲಾಸವಹುದೀ ಪ್ರಮಥರೀರುದ್ರಲೋಕಸಹಿತಾನೆ ಬಹೆನು।
ಅಲಸದಂತೀಗಲೇಳ್ನೂಱಿಪ್ಪತಮರಗಣ
ಕುಲಸಹಿತ ಪೋಗೆನುತ್ತಭಯಕರಕಮಲವನು
[4]ತಲೆಯ[4]ಮೇಲಿಟ್ಟು ನಿನ್ನಯ ನಯನ ಮನ ವಚನ ಕರ ಚರಣ ಪರುಷವು ನಡೆ
‖೪೬‖

ಎಂದು ಬೀೞ್ಕೊಡಲಾದಡಾ ಮಹಾಘನಲಿಂಗ
ಬಂದೆನ್ನ ಕೈಸಾರ್ಪುಪಾಯವೇನೀ ಭವದ
ಬಂಧನಿವೃತ್ತಿಯೆಂತಹುದದ ನಿರೂಪಿಸೆನೆ ನಿರ್ದೇಹನೊರ್ವ ಬಂದು।
ನಿಂದುದೇ ಕುಱಿಹಾತನೇ ನಾನು ನಿನ್ನಿಂದ
[5]ಹಿಂದ್ಫೋದ[5] ತಾರಕಬ್ರಹ್ಮರೂಪದ ಲಿಂಗ
ಬಂದಪುದು ಬಳಿಕವೀ ಲೋಕವಾ ಲೋಕೋಪದೇಶಪಾವನಪತಿಯಹೆ ‖೪೭‖

ಹಿಂದೆ ಲೀಲಾಪ್ರಕೃತಿಯಿಂ ಗಣೇಶವತಾರ
ಬಂದಡಾಂ ನೀನೆಯಾಗಿರೆನೆ ಏಕೀ ವೃಥಾ
ಸಂದೇಹಭವಗೆ ಭವವುುಂಟೆ ನೀನಾನೆಂಬ ಮಱೆಯಲಿಹ ಮಾತಿದೇಕೆ।
ಒಂದೊಂದನೆಣಿಸುತಿಹೆ ಜಗವ ಪಾವನ ಮಾಡ
ಲೆಂದಿದೊಂದವತಾರ ಲಿಂಗಜಂಗಮಭಕ್ತಿ
ಕಂದೆಱಿವೆ ಮಾಡಬೇಕೆಮಗತಿಹಿತವನಾದಡೆಲೆ ವೃಷಭನೆಂದು ಕಳುಹೆ ‖೪೮‖

---

[1] ಲ್ಯಾಪ್ರಿಯಾಸಂಗೆ (ಕ. ಗ. ಛ). [2] ರ್ವ್ಯಾಧನೆ (ಕ. ಛ. ಖ. ಗ). [3] ಯ್ದುವದ (ಕ. ಖ. ಗ. ಘ. ಛ). [4] ಶಿರದ (ಕ. ಖ. ಗ. ಘ. ಛ). [5] ಸೆಂದೊದ (ಜ), ಹಿಂದ್ಫೋಹ (ಕ. ಖ. ಗ. ಘ. ಛ).

ಕೈಗೊಂಡು ಮರ್ತ್ಯಕ್ಕೆ ಬಂದನೆಂತೆನಲಿದಂ
ಶೈವಾಗಮಗ್ರಾಹಕರು ಅವಧರಿಸಿ[1]ರಿಮಾ[1]
[2]ದೇವ[2]ಸ್ವರೂಪಂಗೆ ಕುಚಿತ ಕೊಱತೆಯ ಕುಂದು ನಿಂದೆವೊರಿಸಲ್ಕೆ ಜನನ।
ವೈಕಾರವಂ ತೊಡರ್ಚಿದ ತೊಡಕಿದೇನೆಂಬ
ಕೇವಲಜ್ಞಾನರವಧರಿಸಿ ಧ್ಯಾನ[3]ದ ಚಿತ್ತ[3]
ವೈ[4]ದಿ[4]ಕದವುಱೆಯೊಳಿರೆ ನಿಗಮಿಯೇ ಶಿವನ ಲೀಲಾರೂಪು ಜನಿತಜಡನೆ ॥೪೯॥

ಕುಂದುವೊತ್ತುದು ಬ್ರಹ್ಮನಗ್ರಶಿರವೆನೆ ಬೊಮ್ಮ
ಕುಂದುವೊತ್ತುದೆಯಾ ಕಪಾಲವಂ ಧೂರ್ಜಟಿಯ
ದೊಂದುಲೀಲೆಗೆ ಪಿಡಿಯೆ ಬ್ರಹ್ಮೇತಿಯಾಯ್ತೆಂಬರಾ ಬ್ರಹ್ಮರಾಱುಕೋಟಿ॥
ಂದ[5]ಲೊ[5]ಂದಿನವಿಷ್ಣುವಿಂಗೆ ಯಾವಿಷ್ಣುವಂ
ಕೊಂದ ಭಿಕ್ಷಾಟನದಿಯಾ ಕೊಂದಪಾಪಗಳೆ
ವಂದವಂತೇಗೈದುದದು ಭವಾಂತರದೊದವೆ ಬಲ್ಲಿದಗೆ ಬಟ್ಟೆ ಸುಸರ ॥೫೦॥

ಉರಿಲಿಂಗವಾದ ಹರಿಹರನಾದ ತ್ರಿಪುರಸಂ
ಹರನಾದ ಮತ್ಸ್ಯಕೂರ್ಮೋಪಹರ ನರಸಿಂಹ
ರಕವಚಧರನಾದನಿಭರಾಜದಿತಿಸುತಾಜಿನಮಹಾಂಬರನಾದನು॥
ಸ್ಮರಮಥನನಾದ ಧರ್ಮಾರಿಯಾದನು ವನೇ
ಚರನಾದ ಗಿರಿಜೇಶನಾದನೆಂದೊಂದೊಂದು
ಪರಿಭವಪ್ರವರ್ತನೆಯ ಖಂಡಿತಾಖಂಡಿತನು ಬರೆ ಭವಾಂತರಬಾಧೆಯೆ ॥೫೧॥

ಕಾರಣಾರ್ಥಮದಲ್ಲ ಕಥೆಯೊಳುಂ ಸತ್ತಕಱು
ರಾರನೇ ಭೋಗರಸನರಮನೆಗೆ ಚೆನ್ನನೊಳ
ಾರ ಕೇಳೊಡನುಂಡ ಕಣ್ಣಪ್ಪ ಕಕ್ಕೈಯ ತೆಲುಗಜೊಮ್ಮಯ್ಯ ಮಾಳ್ಪ॥
ಕ್ರೂರಕರ್ಮಕ್ಕೆ ಗುಱಿಯಾದ ಬಾಣನ ಬಾಗಿ
ರಾರೈಕೆಯವನಾದ ತಾನೆ ನಂಬ್ಯಣ್ಣ[6]ಗೆ[6]ವಿ
ಕಾರಕುಂಟಣಿಯಾದನಪರಾವತಾರನವತಾರಭೇದಗಳೀ ಪರಿ ॥೫೨॥

ಅಂತರಂತರದೊಳೀಶನ ಮಹಾನಾಟಕಾ
ತ್ಯಂತರದ ಕಥನಕಾರಣಪ್ರಕೃತಿವೇ[7]ಳೆ[7] ಕ
ಪ್ಪಾಂತರಗಳೈದ[8]ವೇಕ[8]ತ್ಯತಿಷ್ಠದ್ದಶಾಂಗುಲದ ಪರಿಮಿತನೆನುತಿಹ।

---

[1] ರಿಮ (ಗ. ಥ), ರಿಮೂ (ಫ), ರೀಮಹಾ (ಕ. ಖ, ಜ). [2] ದ್ವೈತ (ಕ. ಖ), ತ್ರೈವ (ಫ). [3] ವ ಚಿತ್ರ (ಗ.ಥ), ದ ಚಿತ್ರ (ಕ), ವ ಚಿತ್ತ (ಫ). [4] ಸಿ (ಖ). [5] ನೊಂ (ಫ), ಪೊ (ಜ). [6] ಗ (ಫ). [7] ಳ (ಕ.ಖ). [8] ವ್ಯಾಪಕ (ಕ.ಥ.ಜ).

ರೆಂತಖಂಡಿತ ಕಳಾಕಲ್ಪೋಪಮೂರ್ತಿ ಭೇ
ದಾಂತರಂಗಳು ಪುಸಿಯೆ ವೃಷಭೇಶ್ವರನ ಮಹ
ತ್ತಾಂತರಕ್ಕವಯುವಂ ಜನಿಸುವಂತವನಿಯೊಳು ಜನನ ಸಂಗಮನಾಥನು ॥೫೩॥

ಹಿಂದನಾದಿಯೊಳಾದಿಯಿಂದತ್ತಲಾಧಾರ
ನೆಂದು ನಿಜನಾಮು ಕಾರಣದಿ ಶೈಲಾ[1]ದಿಯಾ[1]
ನಂದನನು ನಂದಿಕೇಶ್ವರ ಗಣಾಧಿಕ್ಯನಿಂ ಬಂದುದು ಗಣೇಶ ಕುಲವು।
ಸ್ಕಂದ ಗಣವರ ನೀಲಲೋಹಿತ ಗಣಪ್ರಮುಖ
ನಿಂದಿತ್ತ ಕಾಲಗಣನಾಯಕ ಮನೋಹರಗ
ಣೇಂದ್ರವೃಷಭಪ್ರಭವ ಬಸವನಾಮದಿ ಜನಿಪಸೂಚನೋದ್ಯೋಗಾದಿಯು ॥೫೪॥

ರಜನೀಕರಗೆ ದಿವಾಕರಗೆ ರಾ[2]ಹ್ವಡ್ಡೈಸಿ[2]
[3]ಯು[3]ಜಕಲ್ಪವಿಹುದೆ ಹತ್ತೈದುಗಳಿಗೆಗೆ ತೊಲಗೆ
ನಿಜರೂಪಳಿದು ಕಳಾಹೀನರಹರೇ ಇಕ್ಷುಚಯುವಕಡಿದಡಸಿಯಂತ್ರ।
ಧ್ವಜಸೂತ್ರದಿಂ ಹಿಂಡಿ ಹಿಳಿದು ರಸಗೊಂಡಗ್ನಿ
ಗಜಪುಟಂಗೊಟ್ಟಟ್ಟು ಸುಟ್ಟೊರಸಿ ಮೆಟ್ಟಿದೊಡೆ
ರಜತರಂಜಿತದಮೃತ ತವರಾಜವಹೊಲೀತನುತ್ಪತ್ತಿಸ್ಥಿತ್ಯಂತವು ॥೫೫॥

ದೇವತಾಯಾತ್ರಾರ್ಥ ಸತ್ಪಥದಿ ಪೋಪಲ್ಲಿ
ಸಾವಧಾನಂಗೂಡದೊಂದೆರಡೆಡೆಯೊಳೆಡಹು
ತಾವಗಂ ಗ್ರಾಮಗ್ರಾಮಾಂತರದೊಳೆಡೆಗೈದು ಪೋಗುವಾತನ ಸುಕೃತಕೆ ।
ಭಾವಿಸಲ್ಕವು ವಕ್ರವಹವೆ ಫಲಹೋಗಿ ಬಱಿ
ಧಾವತುಳಿವುದೆ ಭಕ್ತಿಪಥಕಡ್ಡಬಿದ್ದ ಭವ
ಪಾವ ಕೊಲುವನ ಮೇಲೆ ವಿಷ ಸಿಡಿಯೆ ತೊಡೆದುಕೊಂಡಪನೆನಲು ಕೊಱತೆಯೇನು॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತೋನ್ನತ ವೃಷಭ ಬಸವಾವತಾರಮಂ ಗ್ರಹಿಪ ಸೂಚನೆಯ ಸಂಧಿ ॥೫೭॥

---

[1] ದೇಯ (ಖ). [2] ಹುಗ್ರಸ್ತ (ಘ). [3] ವ (ಘ).

ಐದನೆಯ ಸಂಧಿ

ಸೂಚನೆ—

ಇಂಗಳೇಶ್ವರಬಾಗೆವಾಡಿಯೊಳು ಮಾದಿಮುರ !
ಸಂಗೆ ಜನಿಸಗ್ರಾರದುಪಟಳಕೆ ಕಪ್ಪಡಿಯ
ಸಂಗಮಕೆ ಬಂದು ಲಿಂಗವನೊಲಿಸಿ ಜಂಗಮದ ವಿಶ್ವಾಸವಡೆದ ಬಸವ ।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಕ್ಷೋಣಿಗೆ ವೃಷಭನೇಳುನೂಱಪ್ಪತ್ತಮರಗಣ
ಶ್ರೇಣಿಸಹ ಬೆಸವಡೆದು ತಚ್ಛಿವಪದಕ್ಕೆಱಗೆ
ಜಾಣಿನಿಂದಭಯಕರಕಮಲವಂ ನಿನ್ನಶಿರಕರಿಸಿದಾಪರಿ ನಿನ್ನನು ।
ಮಾಣದೆ ಮಹಾಭಕ್ತರೆಲ್ಲ ಪೂಜಿಸಲಿ ಎಂ
ದಾಣತಿಗೊಡುವತೆಱದಿ ಅಭಯವಿತ್ತೀತನ ಪ್ರ
ಯಾಣಮಂ ಮಾಡಿಸಾ ಸಿಂ[1]ಗ[1]ಕೇಶದ್ರವಿಡದ್ವಾರಧ್ಯಕ್ಷರನು ಕರೆದು ॥೨॥

ನಿಮಗೊಂದುಭವಮುಂಟೆನಲ್ಕದೇಕೆನೆ ವೃಷಭ
ಗಮನವಾದನು ಮರ್ತ್ಯಕಾದೊಡೆಮಗೇನೆಂದ
ಡಮೃತಕಾ[2]ಮ್ರ[2]ವನೆಱೆದು ದಧಿಮಂಗಳವ ಮಾಡಿದವರ್ಗಳೀ ಮಥಿಸಿ ಮಥಿಸಿ ।
ವಿಮಲನವನೀತ ತೆಗೆದದ ಸಾಂಗಜೀವನೀ
ಯಮು ನಿಬದ್ಧಿಸಬೇಹುದೆನಲ್ಕೇಂ ಮ[3]ಹಾ[3]ಸ್ವಾಮಿ
ಸಮಯಕಲ್ಲದರ ಕಳೆ[4]ವಡೆ[4]ಯವರ ಬಳಿಯ ತಪ್ಪಾವುದೆನಲಭವ ಮುಗುಳ್ದು ॥೩॥

ತಪ್ಪಲ್ಲವೇ ಅಲ್ಲದೇ[5]ಕಲ್ಲದೇಂ[5] ಕೊಱತೆ
ಯಿಪ್ಪುದಂ ನಿರವಿಸೆನೆ [6] ಅಲ್ಲದರಿಗಡ್ಡಗೋ[6]
ಲಪ್ಪುದಲ್ಲದೆ ಗದೆಯು ನೆಗಹಿ ವೃಷಭೇಶನಂ ಧಿಕ್ಕರಿಸಿದುದಕೆ ನಿಮಗೆ ।

---

[1] ಹ (ಜ.ಖ.ಕ.) [2] ಮ್ಯ (ಕ.ಖ). [3] ಹತ್ಸ್ವ (ಗ), ಹತಾಸ್ವ (ಕ). [4] ವರೆ (ಖ), ದಡೆ (ಘ). [5] ಕಲ್ಲಿಯೇಂ (ಖ), ಕಲ್ಲಿದೇಂ (ಕ). [6] ಅಲ್ಲದಾರಿಗಡ್ಡಗೋ (ಕ), ಇಲ್ಲಿ ನೀವಡ್ಡಗೋ (ಖ).

ತಪ್ಪದು ಜನನ ಹೋಗಿರೆನೆ ಕಿಚ್ಚ ಮೆಟ್ಟಿದಂ
ತುಃಪ್ಪೆನುತ್ತದಕೆ ನಿಷ್ಕೃತಿ ಹೇಗೆನಲ್ಕೆ ಹಗೆ
ತಪ್ಪಸಾಧಿಸಿ ಭಕ್ತರೊಳು ಭಕ್ತರಿಂದಲಳಿವಪ್ಪುದು ನಿಮಗೆ ನಡೆಯೆನೆ ॥೪॥

ಇಳೆಗಿಳಿದರಿಳೆಗೆ ತೊಡವೆನಿಪ ಭಾರತಖಂಡ
ಸ್ಥಳವಿಡಿದನಾದಿಮಂಗಳದೇವತೆಯ ನೆಲೆಯ
ಒಳುವೆ[1]ಸರು[1]ಕಲ್ಯಾಣಪುರವೆನಿಪುದಾಪುರದ ರಾಜಸಿಂಹಾಸನಗಳ।
ವಳಿಯ ಪಾರಂಪರೆಯ ಚಾಳೋಕ್ಯ[2]ಕ[2]ಳಸೂರ್ಯ
ಕುಲತಿಲಕ ಬಲ್ಲಹಗೆ ಸಿಂಹಕೇಶ ದ್ರವಿಡ
ರಿಳಿದು ಬಿಜ್ಜಳ ಕ[3]ರ್ನ[3]ದೇವರೆನಿಸವರೊಳಗ್ರಜ ಪಟ್ಟವಡೆದಿರಲ್ಕೆ ॥೫॥

ಇತ್ತಲಾ ವೃಷಭ ಗಣಕುಲಸಹಿತ ರಜತಾದ್ರಿ
ಮಸ್ತಕಮನಿಳಿದು ಹೇಮಾಚ[4]ಲೇಳಾ[4]ವೃತಮು
ನುತ್ತರಿಸಿ ಸಾರಿಖಾಂಡಮನುಳಿದು ಪುರುವರುಷಮಂ ಕಳೆದು ಹಿಮಶೈಲದ।
ವಿಸ್ತರಮ ದಾಂಟಿ ಭಾರತಸೀಮೆಯೊಗುತಾ ಸ
ಮಸ್ತರಂ ಕರೆದು ನೀವ್ನಿಮ್ಮ ಜನನಸ್ಥಳಸು
[5]ವೃತ್ತಿಗೆಯ್ದನಲಿಕೋರೋರ್ವ ರೊಂದೆಡೆಯೊಳುದಿಸಿದಡದೆಂತೊಗ್ಗಹೆವೆನೆ[5] ॥೬॥

ಚೇರಮ[6]ನತುಳ[6]ತಂತ್ರವಖುವತ್ತುಸಾವಿರ [7]ಸ[7]
ವಾ[8]ರರಾ[8]ತೇಜಿಗಳು ಮಳೆಯರಾಜೇಂದ್ರನಾ
ಳ್ವೂರು ನವಲಕ್ಷ ಶಿರಿಯಾಳ[9]ನೇಳ್ನೆರೆ[9] ಸಾಮವೇದಿಗಳು ಮೂವತಾಱು।
ಕಾರಣಪುರಂಗಳಂ ಕೈಲಾಸಕೊಯ್ದರವ
ರಾರಾ[10]ರ[10]ದೊಂದೆಡೆಯ ಜನಿಸಿದರದೇತಕೆ ವಿ
ಚಾರ ನಡೆಗೊಳ್ಳಿ ಶಿವನ ಪ್ರಭಾಪಟವಱೆಯ ಹಾಹೆಗಳೆನುತ್ತೆಲ್ಲರ ॥೭॥

ಕಳುಹಲವರವರ್ಗಳೊಂದೊಂದು ಕಾರಣತನು
ವರ್ಗಳಕೆಯಿಂದಲ್ಲಲ್ಲಿ ಉದ್ಭವಿಸಿ ತಮತಮ್ಮ
ಬೆಳವಿಗೆಯ ಕಾಯಕಂಗಳ ಕಥನವಿಡಿದು ಕಲ್ಯಾಣಪುರಕೈತರಲ್ಕೆ।
ಇಳೆಯೊಳುತ್ತಮ ಕ್ಷೇತ್ರ ತೀರ್ಥ ಶಿವಪುರ ಪುಣ್ಯ
ಸ್ಥಲ ಸ್ಥಾವರಂ ಜಂಗಮಾದಿ ಸತ್ಪುರುಷಸಂ
ಕುಳವಳಕೆಯೊಳಗದೃಶ್ಯಾಂಗನಾಗಾಡುತ್ತ ಹತ್ತೆಂಟುವರುಷಗಳೆದು ॥೮॥

---

[1] ಸೆದು (ಕ.ಖ). [2] ಗ (ಕ.ಖ.ಗ.ಘ.ಛ). [3] ರ್ನಿ (ಘ). [4] ಲ ಇ (ಖ.ಜ), ಳೀಳಾ (ಛ). [5] ವೃತ್ತಿಗ್ನೆಯುವದೆನಲು ಓರೋರ್ವರೊಂದೆಡೆಯೊಳುದಿಯಂತೊಗ್ಗಾದರು (ಕ.ಖ.ಗ.ಛ.ಘ). [6] ನತಳ (ಕ.ಗ.ಛ), ನೆರೆ (ಜ). [7] ಶಿ (ಕ.ಖ.ಗ.ಘ.ಛ). [8] ರಾರ (ಕ.ಖ.ಗ.ಘ.ಛ). [9] ನೇಳ್ಕೇರೆ (ಗ.ಘ.ಛ), ನಾಳ್ನರೆ (ಕ), ನಾಳುವುದು (ಖ). [10] ದ (ಕ.ಖ.ಗ).

ಎಲ್ಲಿ [1]ಕಳೆದುದನ[1]ಲ್ಲಿಯಱಿಸಬೇಕೆಂಬ ಬಗೆ
ಗಲ್ಲಲ್ಲಿಗಾರ್ತದಿಂದಾಚರಿಸಿ ತಾ ಪೂರ್ವ
ದಲ್ಲಿರ್ದ ಭೂ[2]ವ[2]ನಕ್ಕಾಗಿ ತಿರುಗಾವೃಷಭ ಬಂದ ಕರ್ನಾಟಭಾಷಾ।
ವಲ್ಲಭನೆನಿಪ್ಪಜಾಣನು ವಾಣಿ ಕೇಳ್ವಸಾ
ಕಲ್ಯಮಂಟಪವೊ ಚಾತುರ್ಮುಖನ ಚದುರಿಗೆದೆ
ದಲ್ಲಣವೆನಿಪ್ಪುದೆರಡ್ಶೈನೂಱುವರುಷದ ಮಹಾಗ್ರಾರಶಿರಮಣಿಯೆನೆ ॥೯॥

ಪೆಸರಿಳೆಯೊಳಿಂಗಳೇಶ್ವರ ಬಾಗೆವಾಡಿಯೆನ
ಲೆಸೆದಿಪ್ಪ ಮೂಲಸ್ಥಲಿಂಗಭವನಕ್ಕೆಯಾ
ವೃಷಭ ಬಹ ಮುಹುರ್ತಕ್ಕೆ ಮುಂ[3]ಗು[3]ಡಿಯು ಕಟ್ಟಿದಂತೆಸೆದು[4]ದು[4]ಶನಿಪ್ರದೋಷ ।
ವಿಷಯಕೆ ಮಹಾಪೂಜೆ ಗೀತ ವಾದ್ಯ ಸುನೃತ್ಯ
ಪ್ರಸರ ಪರುಠವಿಸಿದವು ಸಕಲ ವೈದಿಕ ಶೈವ
ವಿ[5]ಸರ[5] ಸ[6]ತ್ಸಂ[6]ಗಂ ಶುಚಿರ್ಭೂತನೂತನ ಸುವಿಧಿವಿಧಾನ ಸುಮಾರ್ಗದಿ ॥೧೦॥

ಬಹರ ನುತಿಸುವರ ಭಜಿಸುವರ ಭಯಭಕ್ತಿಯಿಂ
ದಿಹರ ಪಾಡುವರಾಡುವಪ್ರ್ರದಕ್ಷಿಣವಿನುತ
[7]ಸುಹೃದ ಜಪ[7] ತಪ ನಿತ್ಯಕರ್ಮ[8]ನಿಯತನುಷ್ಠಾನ ಸಂಧ್ಯಾ[8] ಪರಾಯಣರನು।
ಸಹಜತದ್ಯೋಗಕಲ್ಪಂಗಳೊಳು ವೃಷಭಾಂಡ
ನಿಹಿತ ತತ್ಪರುಶನದಿ ಶೃಂಗಮಧ್ಯದಿ ಸೂತ್ರ
ಗ್ರಹಣಾವಲೋಕನದಿ ಲಿಂಗವ ನಿರೀಕ್ಷಿಸುವರಂಗಕ್ಕೆ ತುಷ್ಟಿವಡುತ ॥೧೧॥

ಇರಲಾ ಮಹಾಗ್ರಾರದಗ್ರಭೂಸುರಶ್ರೇಷ್ಠ
ಪರಮಸಾಂಖ್ಯಾಯನಸುಗೋತ್ರ ಸತ್ಕುಲಪ್ರಸೂ
ತರೊಳಧಿಕಕರ್ಮ ಷಟ್ಕರ್ಮ ಶಾಪಾನುಗ್ರಹಸಮರ್ಥ ತನ್ನ ಪೆಸರು।
ವರಮಂಡಿಗೆಯ ಮಾದಿಮರಸನಾತನ ರಾಣಿ
ಪರಮ [9]ಪತಿವ್ರತೆಯರಾರಾಧ್ಯದೇವತೆ[9] ಸತ್ಯ
ಕೊರೆದೊರಾಕೆಯ ನಾಮ ಮಾದಲಾಂಬಿಕೆಯಾಕೆ ಬಂದಳಾ ಶಿವಭವನಕೆ ॥೧೨॥

ತತ್ವಪಟಲದಪಟದಿ [10]ಚಿತ್ರಿ[10]ಸಿದ ಪರಬೊಮ್ಮ
ದುತ್ತಮಕಳಾಗರ್ಭಕವಯವಂ ಜನಿಸೆ ಅನಿ
ಮಿತ್ತಮೇಂ ಬಂದುದೋ ಮೇಣ್ಸದಾಶಿವನುತ್ತಮಾಂಗದುತ್ತಮ ಕಾಂತಿಯು।

---

[1] ಕೆಟ್ಟುದನ (ಫ). [2] ವ (ಕ.ಖ.ಗ), ಮಾ (ಫ.ಥ). [3] ಗ (ಕ). [4] ದ (ಖ). [5] ಷಯ (ಗ). [6] ತ್ಯಂ (ಕ.ಖ), ತ್ಸಾಂ (ಜ). [7] ಸಹಜನರ (ಕ. ಖ. ಗ. ಫ). [8] ವಂದಿತ ಅನುಷ್ಠಾನದಿ (ಕ.ಥ.ಖ.ಗ.ಫ) [9] ಪತಿವ್ರತೆಯರಾಧಿದೇವತೆ ಸತ್ಯ (ಕ.ಖ.ಗ.ಫ.ಥ), ಪಾತಿವ್ರತಾರಾಧ್ಯಶಾಕ್ತಿಯ (ಜ). [10] ದೇರಿ (ಫ).

ಸತ್ಯಲೋಕ[1]ದಿ[1]ನವನಿಗಿಳುಹಿದನು ಬಸವನು
ತ್ಪತ್ಯಕಾರಣವ ಕರುವಿಟ್ಟಿಳೆಗೆ ಕಳೆಯ ತೀ
ವಿತ್ತ ಕಳುಹಲು ಪೂರ್ವಸೂಚನೆಗೆ ಪುಣ್ಯೋದಯುದರೆ ಬಪ್ಪೊಲ್ಬಂದಳು ‖೧೩‖

ಸಹಜ ಮುನ್ನಾ ಲಲನೆ ಸರ್ವತ್ರಸಾರಸಂ
ಗ್ರಹವಿಧಿವಿಧಾನದೊಳು ಪುತ್ರಾರ್ಥಕಾರಣಂ
ಬಹುನೋಂಪಿ ಕಥೆಗೇಳಿ ಮನಮುಟ್ಟದವ ಬಿಟ್ಟು ವೃಷಭನೋಂಪಿಯ ನೋನುತ।
ಇಹಳಾಗಿ ಸದ್ಭಕ್ತಿ ಪ್ರೇಮ ಬಲಿದಲ್ಲಿ ಸ
ನ್ನಿಹಿತತ್ವ ಶುದ್ಧಾತ್ಮೆ ಶುದ್ಧನೀರೆಱೆದುಕೊಂ
ಡಿಹ ದಿನಾ ದಿನವಾಗಲಾಗಮವಿಹಿತಕಾಮ್ಯಕಲ್ಪ ಕ್ರಮದಿಂ ವೃಷಭಗೆ ‖೧೪‖

ಪೊಂಗೋಡು ಪೊಂಗೊಳಗು ಪೊಂಗೆಜ್ಜೆ ಘಂಟೆಗಳು
ಪೊಂಗಲಶ ಪೊನ್ನಬಾಸಿಗ ತಂದು ವೃಷಭನಂ
ಸಿಂಗರಿಸಿ ಮಾಲೆಗಳನಿಕ್ಕಿ ಕಾಮ್ಯಾರ್ಥದಿಂ ಕಲ್ಪದೊಯ್ಯಾರದಿಂದ।
ಅಂಗನೆಭ್ಯರ್ಚಿಸಿ ಪ್ರದಕ್ಷಿಣದಿ ಸಾಷ್ಟಾಂಗ
ದಂಘ್ರಿಯಂ ಪಿಡಿದು ಪುತ್ರಾರ್ಥಸಂಕಲ್ಪಪು
ಷ್ಪಂಗಳಿತ್ತಂಡವಿಡಿದಾ ಲಿಂಗಮಂ ಶೃಂಗಮಧ್ಯದಿಂ ನೋಡಿ ಮತ್ತೆ ‖೧೫‖

ಹಿಂಗಿ ಹೋಗದೆ ವೃಷಭ ಭಕ್ತಿಯಿಂ ಪಾದತೀ
ರ್ಥಂಗೊಳುತ ಮಗುಳ್ದು ವೃಷಭನ ನೋಂಪಿಗಥೆಯ ಪೂ
ರ್ವಂಗಳಂ ಮನಮುಚ್ಚಿ ಪುತಪ್ರಾರ್ಥಕಾರಣ ಪುನಃಪುನಾದರಣೆಯಿಂದ।
ಅಂಗ[2]ನ್ಯಾರ್ತದಿಕಲ್ಪವಂ[2] ತೆಗೆಸಿ ಕೇಳ[3]ಲೆಂ[3]
ದಂಗೈಯೊಳಕ್ಷತೆಯನವಧರಿಸಿಯಾ ವೃಷಭ
ನಂಗವನ್ನಾತ್ಮದೊಳು ಸ್ಮರಿಸಿ ಧ್ಯಾನಸ್ಥದಿಂ ಕೇಳ್ದ ಕಥೆಯಾವುದೆನಲು ‖೧೬‖

ಸ್ಕಾಂದೋಕ್ತವಿದು ಉತ್ತರಾಶೆಯೊಳಗಿಹುದು ಪ್ರ
ತ್ಯೇಂದ್ರಪುರವೆಂಬುದುಂಟಾ ಪುರುವನಾಳ್ವ ರಾ
ಜೇಂದ್ರನು ಮಹಂತಚಕ್ರೇಶನಾತಂಗೊಬ್ಬ ಪುತ್ರನಾ ಪುತ್ರನ ವಿಧಿ।
ಸಂದಣಿಸಿ ಸರ್ಪದಷ್ಟದೊಳಳಿದನಾ ಕಾಲ
ಕೊಂದೆರಡು ದಿನ ಮುಂದೆ ವೈವಾಹ[4]ಮೂರ್ತ[4]ವೆನೆ
ಬಂದುದು ಪ್ರಮಾದವೆಂದಳಲುತ್ತ ದುಃಖದಿಂ ಪುತ್ರಶೋಕವನು ನೃಪನು ‖೧೭‖

---

[1] ವ (ಕ. ಖ. ಗ. ಘ. ಛ). [2] ನಾಧಿಕಲ್ಪಂ (ಖ. ಛ.), ನಾತ್ಯದಿಕಲ್ಪಂ (ಘ).
[3] ಲ್ಯೈ (ಘ). [4] ಮೂಹೂರ್ತ (ಘ), ಮುಹುರ್ತ (ಕ.ಘ).

ಉತ್ತರಿಸಲಾಱದಾ ಶವಕೆ ವೈವಾಹ ಪ್ರ
ವರ್ತಿಸುವೆವೆಂದಳಲಿ ಕನ್ನಿಕೆಯು [1]ಕರೆ[1]ಸಲವ
ರೊತ್ತೈಸಿ ನೂಂಕಿದೊಡೆ ಬೇಱೊಂದಕಾದಡಂ ಸಾವಿರದಸಂಖ್ಯಧನವ ।
ಇತ್ತೊಡಂಬಡಿಸಿ ತಹುದೆನೆ ವಿಚಾರಿಸಲಕಟ
ಸತ್ತವನಿಗಾರು ಕೊಡ[2]ರು[2]ಸುರಿಕ್ಕಿದಡೆ ಬಱಿಯ
[3]ವಸ್ಥೆಯಿದುಯೆಂದು[3] ಪುಷ್ಪಕವೆತ್ತಿ ಭೋರ್ಗರೆದು ಬರುತಿರಲ್ಕಿದಿರೊ
ರೊಳೊರ್ವಂ ॥ ೧೮ ॥

ಅತ್ಯಂತವೃದ್ಧ ವಿಪ್ರೋತ್ತಮನು ಊರೂರ
ಸುತ್ತಿ ಧಾನ್ಯವಬೇಡಿ ಬಡತನದೊಳಾಳಿ ಮುಳು
ಗುತ್ತಲೇಳೆಂಟು ವರುಷದ ಮಗಳ ಕೈವಿಡಿದು ಬರುತೆಥಾರ್ಥವನು ಕೇಳಿ ।
ಇತ್ತಪೆನು ಕನ್ನಿಕೆಯ ವೈವಾಹಸಾಧನನಿ
ಮಿತ್ತ ಕೂಡಿದ ಧನ[4]ವ[4]ಮೇಲೆ ಸಾವಿರಹೊನ್ನ
ನಿತ್ತಿರಾದೊಡೆ ಮಗಳಿಗಗ್ನಿಪ್ರವೇಶವಿಲ್ಲದೊಡೊಡಂಬಟ್ಟೆನೆನಲು ॥ ೧೯ ॥

ಬೇಡಿತಂ ಕೊಟ್ಟು ಕನ್ನಿಕೆಯ ಪಡೆದಾ ಶವದ
ಕೂಡೆ ವೈವಾಹಗೈದೊಡನೆ ಪುಷ್ಪಕದೊಳಾ
ರೂಢತೆಯ ಮಾಡ್ಯವರು ರುದ್ರಭೂಮಿಯೊಳಿಳುಹಿ ಇಂಧನವಿಧಾನಗೈವ ।
ಈಡೊಡ್ಡಣೆಯ ಸಮಯದೊಳು ಪ್ರಳಯಕಲ್ಪಾಂತ
ಜೋಡಣೆಯ ಮೇಘವೇಳಱ ಶೃಂಖಲಂಗಡಿದ
ಪಾಡಿನಿಂ ಧಾರಾಧರಾವರ್ತ ಕೈಗೊಂಡು ಸುರಿದುದದನೇನೆಂಬೆನು ॥ ೨೦ ॥

ಓಡಿಹೋಯಿತ್ತು ಕಂಗಾಣದೆ ಕೆಲರು ಹಳ್ಳ
ಗೂಡಿಹೋಯಿತ್ತಾ ವಿಮಾನವೆಣನಂ ಬಾಲೆ
ಗಾಢದಿಂ ತಕ್ಕೈಸಿ ಕೊಂಡುಳಿದು ಮಧ್ಯರಾತ್ರಿಯೊಳು ಮಳೆ ಸ್ವಲ್ಪವಾಗೆ ।
ನೋಡಿದಳು ಕಂದೆಱೆದು ಪೊಸಮಿಥುನಗಳು ಮಾತ
ನಾಡೆ ನಾಟಕೆಯೆಂಬ ಭಾವ[5]ವಂ[5]ದಾ ಮುಗ್ಧೆ
[6]ಕೂಡೆ[6] ಕೊಂಕೃತಿಭೀತಿಯಾವರಿಸಿರಲ್ಮನದ ಮುಂದೆ ಸುಕೃತಂ
ಸುಳಿದುದು ॥ ೨೧ ॥

ಇಂದೆನಗೆ ವೃಷಭನರ್ಚನೆಯ ದಿನ ಉಪವಾಸ
ಬಂದಪೆನಿದೇಕಿದೊಂದೆಡೆ ವಿಘ್ನವೆನುತ ಭೀ
ತಾಂಧಕಾರಮನುಡುಗಿ ಮನ್ಮನೋರಥದಿ ಸುಕೃತವ ಶೂನ್ಯಕೊತ್ತಿಡುವರೆ ।

---

[1] ನಱ (ಜ). [2] ದು (ಕ.ಖ.ಗ.ಥ). [3] ವಸ್ಥೇವೆನೆಂದು (ಜ). [4] ದ (ಕ.ಖ.ಗ.ಘ.ಥ). [5] ದಿ (ಕ.ಖ.ಗ). [6] ಕೂಡಿ (ಖ), ನೋಡೆ (ಘ).

ಎಂದೇಳಡಿಯಹೋಗಿ ಸಪ್ತಮುಷ್ಟಿಯ ಮೃತ್ತಿ
ಕಿಂದ ವೃಷಭಾಕೃತಿಯ ಮಾಡಿಯಾ ಮಾಡದೊಳ
ಗೊಂದೆಡೆಯೊಳಿರಿಸಿಯಾ ಪುಷ್ಪಕದ ಪುಷ್ಪಫಲವಸ್ತುಗಳ ತಂದೇಱಿಸಿ ‖ ೨೨ ‖

ತಂದೆ ಕೈಕೊಳ್ಳೆಂದು ವೃಷಭಾಂಕಮಾಲೆಯ ಪ್ರ
ಬಂಧಜಪಗೈದು ಪ್ರದಕ್ಷಿಣೆ ಸಲಕ್ಷಣದಿ
ವಂದಿಸಾ ಬಾಲೆ ಮತ್ಪುರುಷಂಗೆ ದೀರ್ಘಾಯು ಶ್ರೀಯುಮಂ ಕರುಣಿಸೆಂಬ ।
ಮುಂದಱಿಯುದಬಲೆಯ ಮಹಾಭಕ್ತಿಮುಗ್ಧತೆಗೆ
ನಂದಿಕೇಶ್ವರ ವರಬ್ರೂಹಿಯಾದನದೆಂತು
ಸಂದೇಹವಿಲ್ಲದಾ ವೃಷಭನಿರ್ಮಾಲ್ಯಮಾಲೆಯ ಪತಿಯ ಕೊರಳೊಳಿಕ್ಕೆ ‖ ೨೩ ‖

ವಿಷ ನಿವಾರಿಸಿತು ವಿಧಿ ವಿಹಿತಗೆಟ್ಟಿತು ಕಾಲ
ವಶವಳಿಯಿತಪಮೃತ್ಯುವಡಿಗದ್ದಿ ಕಲ್ಪನೆಯ
ಹೆಸರಳಿದು ಹೋದಂಗವಱಿದಾತ್ಮನಾತನಂಗದೊಳು ಪರಿಪೂರ್ಣನಾದ ।
ಶ್ವಾ[1]ಸ[1]ನತತ್ತ್ವಸ್ಥಾನ ಸ್ಥಾಪ್ಯವಡೆಯಲ್ಕೆದ್ದು
ದಶದಿಕ್ಕನೀಕ್ಷಿಸಾ ಮಾಡಮಂ ಸಮಿಧೆಯಂ
ಮಸಣಮಂ ರಾತ್ರಿಯಂ [2]ಮಾರಿವಳೆ[2]ಯಂತಲ್ಲಿ ಸರ್ವಸಾಧನವ ಕಂಡು ‖ ೨೪ ‖

ಅಸಮಾನವಿದು ಕಲ್ಪನೆಯ ಕಡೆಯು ಪಾವೆನ್ನ
ಮಸಗಿ [3]ಪೋದಂಗವೇ[3]ನೀ ಬಾಲಕನ್ನೆ ಯೀ
ವೃಷಭಾರ್ಚನೇನೆಂದು ವಿಸ್ಮಯಂ ಬಡುತೆ ಬೆಸಗೊಂಡನಂತಾ ಕಾಂತೆಯ ।
ಉಸುರ್ದಳಾಂ ಸತಿ ನೀನು ಪತಿಯೆಂದು ನಿಮ್ಮವರು
ಹೊಸ ವಿಮಾನದೊಳು ಮಾಡಿದರು ಮದುವೆಯ ನಾನು
ವೃಷಭಾರ್ಚನೆಯ ಮಾಡಿ ನಿರ್ಮಾಲ್ಯಮಾಲೆಯಿಕ್ಕಿದೆ ನಿನಗೆ ಪರಸೆಂದೆನೆ ‖೨೫‖

ಈ ಲಲನೆಯೆನ್ನ ಭಾಗ್ಯಾಧಿದೇವತೆ ಪ್ರಾಣ
ಪಾಲನಾಸಿದ್ಧರಸ ಜೀವ[4]ದಾನ[4]ದ ಪುಣ್ಯ
ಶೀಲೆಯೆಂದುಭಯಕರವೆತ್ತುತ್ತಾ ವೃಷಭ ಪದಕೆಱಗಿ ಪುನರಪಿ ನೋಡಲು ।
ಏಳುನೆಲೆಯದ ಮಾಡ ಮಣಿಮಾಡವಾಗಿ ರ
ತ್ನಾಳಿಯ ಮಹಾದೀಧಿತಿಯ ದೀಪ್ತಿ ಬೆಳಗಲು ನಿ
ವಾಳಿ ಶವದೊಡಿಗೆ ಶಾಶ್ವತ ಸರ್ವಮಂಗಳಾಭರಣಂಗಳಾದವವರ್ಗೆ ‖೨೬‖

---

[1] ಶ (ಕ. ಖ. ಥ. ಫ). [2] ಮಾರೆಮಳೆ (ಫ). [3] ಮರಣಂದಂದೆ (ಕ. ಖ. ಗ. ಥ. ಫ). [4] ನೀಯ (ಜ).

ಉತ್ತಮಸ್ವರೂಪ ಲಾವಣ್ಯ ಸೌಭಾಗ್ಯ ಸಂ
ಪತ್ತಿನಿರವಿವರುಮಾಮಾಹೇಶ್ವರರು ನಲ್ಮೆ
ವೆತ್ತು ರುದ್ರಸ್ಥಲದೊಳುಗ್ರಮಂಟಪವೆತ್ತಡದರ್ದು ಭೂಚರರು ನಿಲುತ ।
ಉತ್ತುಂಗ ಸಿಂಹವಿಷ್ಟರದಿ [1]ವೊ[1]ಪ್ಪಿದರೆಂಬ
[2]ಭಿತ್ತಿಯಿಂ[2] ಮಣಿಭದ್ರದೊಳ್ಸ್ವರ್ಣಪೀಠದಿ ಸು
ವಿಸ್ತರದಿ ನಿಲಲವರ್ಗೆ[3]ಳವರ್ಗೆ[3] ಮಳೆವೆ [4]ಳೆ[4]ಗೆ ಮಱುಕಳಿಸಿತ್ತು [5]ತವೆ ದುಃಖವು[5] ॥

ತಾಯಿತಂದಿದ್ದೆಸೆಯ ಬಂಧುಬಳಗವು ಭಂಟ
ದಾಯಾದ್ಯರಿಷ್ಟಶಿಷ್ಟರು ಹೊ[6]ದ್ದಿ[6]ಹೊ[7]ರೆ[7]ದರ್ಸ
ಹಾಯಿಗಳು ಸರ್ವಜನ ಮಱುಗಿ ಮೊಱೆಯಿಡುತ ಪೆಣನೇನಾಯಿತೆಂದಳಲುತ ।
ಖಾಯೆಂದು ಖೋಯೆಂದು ಕೋಲಾಹಲದಿ ಒಱಲಿ
ಹಾಯೆಂದು ಹೋಯೆಂದು ಉಸ್ಸೆನುತ್ತುಃಪ್ಪೆಂದು
ವಾಯೆಂದು ಉಸುರೆಂದು ಕಾಳುಮೇಳೆಂದು ಬಾಯ್ಬಿಡುತಳುವ ಲಗ್ಗೆ ಮಸಗೆ ॥

ನೆರೆದು ರಾಯನ ಸಕಲ ಪರಿವಾರ ಪುರಜನಂ
ವೆರಸಿ [8]ಪೊಱಮಡೆ[8] ಶೋಕಕಾನನಕೆ ಕಾಳ್ಗಿಚ್ಚು
ಪರಿದಂತೆ [9]ಪೂರ್ವಾಶೆ[9]ಯರುಣಪ್ರಭಾಜಾಲ ಮೇಳೈಸಿತಾ ವೇಳೆಗೆ ।
ಉರಗ ಕಚ್ಚಿದ ಕುವರ ಮತ್ಕುಲಜನಾ ವುರಗ
ಮರಳೆನ್ನ ಪಿಡಿವುದೆಂದಂಜಸ್ತಮಿಸಿಯಾಗ
ಪರಿಹರಾರ್ಥ ಪ್ರಭೋನ್ನತಿಗೆ ಪ್ರಭೆದೋ[10]ಱ[10]ವರಿಗಱುಹುವಂತರ್ಕನೊಗೆದ॥೨೯॥

ಪರಿದುಚರರೀಕ್ಷಿಸುತ್ಸವದ ಗುಡಿವಿಡಿದಿದಿ
ರ್ವರುತ ಮಂಗಳಘೋಷಮಂ ಸೂಸುತುರವಣಿಸಿ
ಪರಿಣಾಮವಾರ್ತೆಯಂ ಪಸರಿಸುತಲಾ ಭೂಮಿರಮಣನೆಡೆಗಡಸಿ ಬಂದು ।
ಹರುಷಮಂ [11]ಪ[11]ರುಷಮಂ ಪರಮಮಂಗಳಮಯುದ
ಸುರಸವೇ ಕೈಸಾರ್ಚುವಂತೆಯಾ ಕುವರನಿಹ
ಚರಿತಮನುಸುರ್ದು ತೋಱಿದರು ಮಣಿಮಯಮಹಾಭದ್ರಭಾಗ್ಯೋನ್ನತಿಯನು॥

ಏನಿದೇನಾಶ್ಚರ್ಯವೆನುತ ಪುಳಕಿಸೆ ಹರುಷ
ಪಾನೀಯ ಹೃತ್ಸರಸಿಯಂ ಮೀಱಿ ನೃಪಕುಲನಿ
ಧಾನ ತೇಜಿಯನೋಜೆಯಿಂದೊತ್ತಿ ಪಾಯ್ದೌಂಕಿ ಬಂದನಾಕ್ಷಣವಲ್ಲಿಗೆ ।

---

[1] ನೊ (ಕ.ಖ). [2] ಭೀತಿಯಿಂ (ಕ.ಗ), ಭಿತ್ತಿಯಂ (ಜ). [3] ಳಿಗೆ (ಕ.ಖ.ಛ). [4] ಳೆ (ಕ.ಘ). [5] ಮಗುಳ್ದುದುಃಖ (ಕ.ಖ.ಗ.ಘ.ಛ). [6] ಹೊಂದಿ (ಖ). [7] ರ (ಜ). [8] ಮೊಱೆಯಿಡೆ (ಕ.ಖ.ಗ), ಮೊರಯಿಡೆ (ಘ). [9] ಪೂರ್ವದಿಶೆ (ಘ.ಛ). [10] ರ್ಕ್ರೆ (ಗ). [11] ಪು (ಗ. ಛ).

ಮಾನಿತಮ[1]ಹೋ[1]ಜ್ವಳವಿಶೇಷಮಂ ಬೀಱುತಿಹ
ಮಾನಿನಿಯನಾಕುವರನಂ ಕಾಣುತುರವಣಿಸಿ
ಪ್ರಾಣಬಂದಂತೆ ಹರ್ಮ್ಯವನು ಹಱಿದೇಱಿ ಹಾಯೆಂದು ಹಾಯ್ದಪ್ಪಿಕೊಂಡು ‖

ಆವಿಧಾನವನೆಲ್ಲವಂ ಕೇಳಿ ಸತ್ಪ್ರೇಮ
ಸಾವಧಾನದೊಳೆರಡು ತೊಡೆಯ ಮೇಲಿತ್ತಂಡ
ದೇವತೆಗಳಂ ಮೂರ್ತಿಗೊಳಿಸಿದಂತಿರಲಾ ಸಮಸ್ತ ಜನನೆರವಿ ಬಂದು ।
ಓವುವವರೋವಿ ಕೊಂಡಾಡುವರು ಕೊಂಡಾಡಿ
ಭಾವಿಪರು ಭಾವಿಸೀಕ್ಷಿಪರೀಕ್ಷಿಸುತ್ತಲೀ
ಪಾವನತೆಯಾರ್ಗುಂಟೆನುತ್ತಲೀಕ್ಷಿಸುತ ವಂದಿಸುವರಾನಂದಿಸುವರು ‖೩೨‖

ಮಸಗಿದವು ಮಂಗಳಮಹಾವಾದ್ಯ ತೂರ್ಯಂಗ
ಳೆಸಗಿದವು ಗುಡಿತೋರಣಂಗಳೆಲ್ಲೆಡೆಯಲ್ಲಿ
ಪಸರಿಸಿದವಖಿಳಸೌಭಾಗ್ಯ ಕನ್ನಡಿ ಕಲಶ ಛತ್ರ ಚಾಮರ ಸೀಗುರಿ ।
ಮುಸುಕಿದುವು ಗಗನಮಂ ಕರಿ ತುರಗ ರಥರಾಜಿ
ಪ್ರಸರವೊಡ್ಡೈಸಿದವು ಕೀರ್ತ್ಯಂಗನೆಯರು ಎ
ಣ್ದೆಸೆಗೆ ಹರಿದಾಡಿದರು ಹರುಷಾಬ್ಧಿ [2]ಪರಿಗವಿತು[2] ಪರಿವೇಷ್ಟಿಸಿತ್ತು ಪುರವ ‖೩೩‖

ಉನ್ನತದ ಉತ್ಸಾಹ ಹರುಷ ಸಂತೋಷದ ಮ
ಹೋನ್ನತಿಯನೇಂ ಪೊಗಳ್ವೆ ರಾಜಕನ್ನೆಯರು[3]ಮಾ[3]
ಕನ್ನೆಯಂ ಎತ್ತಿಕೊಂಡೆನ್ನಕ್ಕ ಯೆನ್ನವ್ವ ಯೆನ್ನತಾಯೆನ್ನಭಾಗ್ಯ ।
ಉನ್ನತ ಮಹಾಲಕ್ಷ್ಮಿಯೆನುತಲಾಭರಣಸಂ
ಪನ್ನೆಯಂ ಮಾಡೆಕ್ಷಕರ್ದಮವನುಭಯಾಂಗ
ಕನ್ವಯಿಸುತಾರತಿಗಳೆತ್ತಿ ಮುತ್ತಿನ ಸೇಸೆಗಳ ತುಂಬುತಿ[4]ರ್ದರೆ[4]ಲ್ಲ ‖೩೪‖

ಆ ಕುಮಾರಗೆ ಪಟ್ಟಗಟ್ಟಿ ವೃಷಭೇಂದ್ರನೆಂ
ದಾ ಕುಮಾರಂಗೆ ಪೊಸ ನಾಮಗೊಟ್ಟಾ ಸೊಸೆಯು
ಮಾಕಾಂತೆಯೆಂದಲ್ಲುಪೇಂದ್ರಪುರವೆನಿಪ ಘನಪಟ್ಟಣವನಾಗ ರಚಿಸಿ ।
ಲೋಕೋಕ್ತವಾಗ್ಯವರು ರಾಜ್ಯಗೈವುತ ಪುತ್ರ
ನೀಕಪೌತ್ರಾದಿವರ್ಧನರಾಗಿ ಸುಖಮಿರ್ದ
ರೀಕಥಾರ್ಥಮಿದೆನಲ್ಕಾ ವೃಷಭನೋಂಪಿಯ ಫಲವ ಮಾದಲಾಂಬೆ ಕೇಳಿ ‖

---

[1] ನೋ (ಕ. ಗ. ಖ). [2] ಪರಿಗಲಿತು (ಕ. ಖ. ಗ. ಪ. ಛ.), ಪಡಿಗವಿತ (ಜ).
[3] ಆ (ಕ. ಖ. ಗ. ಛ). [4] ರ್ದಡೆ (ಕ. ಖ. ಗ. ಪ. ಛ).

ಪರಮವಿಶ್ವಾಸ ಪ್ರಾಣಪ್ರತಿಷ್ಠಿತವಾಗಿ
ಕರದೊಳಿದ್ದಕ್ಷತೆಯ ವೃಷಭೇಶ್ವರನ ಪದಕೆ
ಹರುಷದಿಂದೇಱಿಸರ್ಘ್ಯವ ಕೊಟ್ಟು ನಾಮಾಮೃತಂಗಳಿಂ ಹೃತ್ಸರಸಿಯ ।
ಭರಿತಮಂ ಮಾಡಿ ವೃಷಭನ ಧ್ಯಾನ ಧಾರಣದಿ
ಸ್ಥಿರಚಿತ್ತೆಯಾಗಿ ಪುತ್ರಾರ್ಥ ಭಿಕ್ಷಕೆ ಬಾಯಿ
ತೆಱೆಯಲೊಳಹೊಕ್ಕನಾ ಚರವೃಷಭ ಸ್ಥಿರವೃಷಭನೊಳಗಿರ್ದು ಭಕ್ತಿ ಕೂರ್ತು॥

ವಾಗದ್ವೈತ ಕ್ರಿಯಾದ್ವೈತಂಗಳುಭಯ ಸಂ
ಯೋಗತನು ಶುದ್ಧತನುವಿನೊಳು ತಾನೆಱಕವಾ
ಯ್ತಾಗಿ ತನುಗುಣನಾಸ್ತಿ ಪಿಂಡಜಾಂಡಜವುಳಿದು ಬಿಂ[1]ದಿ[1]ನಾಕಾಶದಂತೆ ।
ಆಗಳಾ ಗರ್ಭಸದನದೊಳು ಸೂಚಿತಚಿಹ್ನ
ತೂಗಾಡತೊಡಗಿತ್ತು ಷಡುದಳದ ಪದ್ಮಸ
ದ್ಯೋಗಸ್ಥದೀಪ್ತಿ ಹೃದಯವ ತೊಳಗಿಬೆಳಗಲ್ಕೆ ಪುಳಕ ಪುಳಕಿಸುತಿರ್ದವು ॥೩೭॥

ಅವನಿಯೊಳಗಿದ್ದೊಲುಮೆಯಿಂದವತರಿಪ ಸ್ವಯಂ
ಭುವಿಗಾರು ಪಿತನಖಿಳಗೋಜಾತಗಳು ಋತುವಿ
ಗವು ಕುಸುಮವತಿಯಾಗಿ ಫಲಪ್ರ[2]ಬ[2]ದ್ಧಿತವ[3]ವ[3]ಕದಾವಾವ ಪುರುಷಸೋಂಕು ।
ಭವಪಂಜರಕ್ಕೆ ಕಾರಣತನುಗಳೆರಕವಾ
ದವಸರದೊಳಾ ಗರ್ಭ ಕರಿಗೊಂಡು ಬೆಳೆವುದ
ಕ್ಕವಿತಥಮದಿಲ್ಲ ಲೋಕೋಕ್ತವೈದಿಕ ಮಾರ್ಗಮಾರ್ಗಿಗಳ ಮನವೆಸನಕೆ ॥೩೮॥

ಆಯಿತ್ತಭೀಷ್ಟೆಯೆಂಬಂತೆ ವೃಷಭನ ಪದಕೆ
ಥಾಯುಕ್ತದಿಂದೆಱಗಿ ಸ್ವಗೃಹಕ್ಕೆ ಮಾದಾಂಬೆ
ತಾಯಿ ಬಿಜಯಂಗೈದಳಖಿಳ ಭಕ್ತರಭಾಗ್ಯಸಾರಸಂಗ್ರಹಗ್ರಾಹಿಣಿ ।
ಆಯುವನ್ನವಯವ[4]ಕಳಂಕರಿಸಿದಹಗೆ[4] ಪರ
ಕಾಯ ಪ್ರವೇಶಸಿದ್ಧನ ಸಿದ್ಧಿಯೋಗ ಪ್ರ
ದಾಯ ಪ್ರತಿಷ್ಠನಿಗೆ ಗರ್ಭಗೃಹ[5]ಶು[5]ದ್ಧಿ ಮಾಳ್ಪೊಲು ಶುದ್ಧೆಯಾಗಿರಲ್ಕೆ ॥೩೯॥

ಸಾರಸಿಯನೀರು ಸರಸೀರುಹ ಮೃಣಾಳವಂ
ಸೇರಿ ಜೀವಿಸಿದ[6]ಡೇ[6]ಂಜಲಗ್ರಾಹಿಯೇ ಬಿಂದು
ಕಾರಣಾರ್ಥದ ಗೋಪ್ಯಕಾನಂದ ವಿಷಯವು ಪ್ರಜಾಪತಿಯೆ ದೈವವದಱ ।

---

[1] ದ್ವಿ (ಜ). [2] ಬು (ಜ). [3] ನ (ಕ.ಖ.ಥ.ಗ.ಫ). [4] ವಳಂಕುರಿಸಿದಂತೆ (ಗ.ಫ.ಖ), ವಳಂಕುರಿಸಿದಾಂಗೆ (ಕ.ಥ). [5] ಸಿ (ಕ.ಖ.ಗ.ಥ.ಫ). [6] ಡಂ (ಜ).

ಚಾರಿತ್ರ ರೇತಶ್ರೋಣಿತಕಲಲ ಪ್ರಾಣಕಾ
ಧಾರವಾಗಾ ದಿನವೆ ನಿಜಪುರುಷಯೋಗಗಂ
ಭೀರೆಗಾಗಲ್ಕಾಯ್ತು ಗರ್ಭದೀಪ್ತಿಗೆ ವರ್ತಿ ತೈಲ ಸೂತ್ರಾಂತರದೊಲು ॥೪೦॥

ಪಾತನಾಂಯಂತ್ರಸ್ಥ ವಾದಪಾರದವೂರ್ಧ್ವ
ರೇತಗ್ರಾಹಕದಂತೆ ಷಡ್ದಳಾಗ್ರದ ನಾಭಿ
ಜಾತರಜ್ಜುಗೆಭಾಷೆ ಬಳಿ[1]ವಿಡಿ[1]ದು ಕಲಲೆರಕವಾಗಿ ಪಿಂಡಾಂಡವಿಡಿದು ।
ಭೂತಮಾಯಾಮಯಪ್ರಪಂಚಪಂಜರಕಾತ್ಮ
ಮಾತರಿಶ್ವಸ್ಥ ಬದ್ಧಿತ ತನೂದ್ಭವಕೆ ತ
ನ್ಮಾತೆಯುದರದೊಳು ಗರ್ಭೀಕರಿಸೆ ಗರ್ಭಚಿಹ್ನಂ ಚಿತ್ರಮಾರ್ಗವಿಡಿದು ॥೪೧॥

ದಿನದಿನಕೆ ಮಾಸಮಾಸಾಂತರಕೆ ಲೋಕೋಕ್ತ
ದನುಬಂಧದಂಗಳವಿ ರೀತಿ ಧಾತುಕ್ರಮಗ
ಳನುಕರಿಸಿ ಉತ್ಸವೋತ್ಸವ ಸತ್ಕ್ರಿಯುಪಚಾರ ಕರ್ಮಷೋಡಶದೊಳಾ[2]ಡಿ[2] ।
ವಿನುತ ಗರ್ಭಾಧಾನ ಪುಂಸವನ ಸೀಮಂತ
ವನು ಕಾಲಕಾಲಂಗಳಿಂದೆಸಗುತಧಿಕತೆ ಸು
ಜನಮನೋರಥದಂತೆ ಸಂಪೂರ್ಣಗರ್ಭಗಾಂಭೀರ್ಯವಂ ತಳೆದಳವಳು ॥೪೨॥

ನೀರಸದಿನುಸುರ್ವ ಗರ್ಭಾಂಗನೆಯ ವರ್ಣನಾ
ಸಾರ ನಿಲುಕದ ಕವಿತೆಯೆಂದಿದ ನಿರಾಕರಿಸ
ದಾರೈವುದಮೃತವಿರೆ ಕುಂಭಮಂ ರವಿಯಿರೆ ತಮವ ಭುವನನಿಧಿಯಿರಲ್ಕೆ ।
ತೀರಮ ಸುಗಂಧವಿರೆ ಮೃಗಮದಸ್ಥಾನವಿ
[3]ಸ್ತಾರವು ದು[3]ಕೂಲವಿರೆ ಕಾರ್ಪಾಸಕಾಷ್ಠಮಾ
ಚಾರವಿರೆ ಋಷಿಮೂಲಮಂ ಬಸವಮಹಿಮೆಯಿರೆ ಪೊಗಳಲೇಂ ಗರ್ಭಜಡವ ॥೪೩॥

ಈ ಕೃತಿಯೊಳೆಡೆವೊಕ್ಕ ಬಾಹ್ಯವರ್ಣನಕಥಾ
ನೀಕ[4]ಸಂಕೇತ[4]ವೇಕೆನೆ ಲಿಂಗ ಜಂಗಮ
ಶ್ಲೋಕಬಸವೇಶನ ಮಹತ್ವಸಾರೋದ್ಧಾರವಾರಿಧಿಯ ವರ್ಣನೆಯೊಳು ।
ಭೇಕನಾಧಿಕ್ಯವರ್ಣನ ವಿಶೇಷಣವೆ [5]ಸ
ದ್ವಾಕ್ಯದ ಮಹಾತಿಶಯವಿರಲ[5]ಯಾ ಭಕ್ತಿ ಪ್ರ
ಭಾಕರನು ಗರ್ಭದೊಳಗಿರ್ದು ನವಮಾಸ ತೀರಲ್ಸಮ್ಯಜ್ಞಾನವಾಗಿ ॥೪೪॥

---

[1] ಳಿ (ಕ.ಗ.ಧ). [2] ದಿ (ಗ. ಛ. ಖ), ದಿಯ (ಕ). [3] ಸ್ತಾರಮಾಧು (ಕ), ಸ್ತಾರಮಾದು (ಘ). [4] ಸಂಖ್ಯಾ (ಘ). [5] ಶಸ್ವಾಖ್ಯವಲ್ಲಾಗದಂತಿಕ್ಕೆ (ಜ).

ಮುನ್ನ ತಾನಾರೆಂಬುದಂ ಜನ್ಮಜನ್ಮಂಗ
ಳನ್ವಯುವ ನೀಗಲಿಹ ಸ್ಥಿತಿಗತಿಯ ತನಗೆ ಮೇ
ಲಿನ್ನು ಬಹ ಸುಕೃತ ದುಷ್ಕೃತ ಭೋಗ ಭುಕ್ತಿಗಳ ಜನನಿಯ ಜಠರಜಾಡ್ಯದ।
ಬನ್ನಮಂ ಪಿಂಡದುತ್ಪತ್ತ್ಯಹೇಯುದಬದ್ಧ
ಬಿನ್ನಣವ ಶುಕ್ಲಶೋಣಿತ ಯೋಗ ಕಲಲದಿಂ
ಪುನ್ನಪುಂಸಕಲಿಂಗ ಸ್ತ್ರೀಲಿಂಗ ಭೇದದಿಂದಹ ಮಾಯುಮಥನಮತದಿ ॥೪೫॥

ಒಬ್ಬುಳಾಗ್ಯದು ಮೂದಿನಕ್ಕೆ ಬೊಬ್ಬುಳಿಯೆನಿಸಿ
ಗರ್ಭಮಾಂಸದ ಪೇಶಿಯೆನಿಪುದಾಯೇಳ್ದಿನಕೆ
ನಿರ್ಬಹಂಗೊಳ್ಳುದೆರಡೇಳ್ದಿನಕೆ ರಕ್ತರಂಜಿತ ಬದ್ಧಘಟ್ಟಿಯೆನಿಸಿ ।
ಉಬ್ಬೊಂದು ಮೊಳೆವುದಿಪ್ಪತ್ತೈದಿನಕ್ಕದಱ
ಕಬ್ಬುಗೆಯೊಳೈದು ಮೊನೆದೋರ್ಪುದೊಮ್ಮಾಸಕ್ಕ
ದುರ್ಬಿನಿಂದಿಮ್ಮಾಸಕಖಿಳ ಮುಖ್ಯಾಂಗ ಮೂಡುವುವು ಮೂದಿಂಗಳೊಳಗೆ ॥೪೬॥

ಅಂಗಸಂಧಿಗಳಹವು ಗತಿಮಾಸವಾಗೆ ಪ್ರ
ತ್ಯಂಗುಳಿಗಳಿಷುಮಾಸಕವಯುವಱುದಿಂಗಳಿ
ಲಿಂಗ ನಖ ದಂತ ವಿಂದ್ರಿಯ ವಿರಳವದ್ರಿಮಾಸಕ್ಕೆ ಗುದ ಗುಹ್ಯಸಹಿತ ।
ಸಂಗಡಿಸಿ ಸಂಪೂರ್ಣಕಾಯವೆಣ್ಮಾಸಾಂತ
ದಂಗಳಿಂಗಾಗೆಂತ್ರಸೂತ್ರದೊಲು ಜನನಿಭು
ಕ್ತಂಗಳ ಸುರಸನಾಭಿನಾಳವರ್ಧಿಸಿ ಶೋಭೆವೆತ್ತ ಶಿಶು ನವಮಾಸಕೆ ॥೪೭॥

ಕಾಲತ್ರಯಂಗಳಂ ತಿಳಿದು ಸಮ್ಯಜ್ಞಾನ
ಶೀಲದಿಂ ತನಗೆ ಸುಖ ದುಃಖ ಜಾಗ್ರತ್ಸ್ವಪ್ನ
ಲೀಲೆ ಜನನಂ ಮರಣ [1]ಚೌರಾಶಿ[1]ಯೋನಿವಳಯದ ವಳಕೆ ತಿಳಿದು ಭವದ ।
ಜಾಲೆಯುಂಡಲೆಯಱುದು ಇನ್ನು ಸಂಸಾರವಲೆ
ಮೇಳಿನೆನುತಾಗರ್ಭನಾರಕಕೆ ಸೆಡೆದಗಿದು
ಕಾಲಪೊಱಮಡಲೆಂದು ತಿರುಗಿ ತಲೆ ಕೆಳಗಾಗಲಾ ವಿಷ್ಣುಮಾಯೆ ಕವಿದು ॥೪೮॥

ಪಾಳುಮಾಡುವ[2]ದಱಿತಗಿಱಿತಮುಂ[2] ಮಗುಳೆ ಬಹು
ಜಾಲೆಗೆಡಹುವುದೆಂಬ ಬಗೆ ಗಾಣದಿಹ ಜಗದ
ಮೂಳತೆಯ ಕಂಡು ಬಸವಾಂಕ ನಸುನಗುತ ಬಸುರ್ಬಾದಣವ ಬಗಿದನೆಂತೊ ।

[1] ಚತುರಾಶೀತಿ (ಕ.ಖ.ಗ.ಘ.ಪ.) [2] ದುರಿತಮುಂ (ಪ), ದಸಿತಗಿರಿತಮಂ (ಖ).

ಶೂಲಿಯುಪರಾವತಾರನು ವಿಷ್ಣು ಮಾಯಾಂಧ
ನೂಲ ತೊಡಕಂ ಪಱಿಯೊದೆಯಲೆಂದು ಪದವೆರಡ
ಮೇಳೈಸಿದಂತೆ ಜನನಿಯ ಜಠರದಿಂ ನೀಡಿದನು ಬಸವ ಪದದ್ವಯವನು ॥೪೯॥

ಅಡಿದಾವರೆಯೊಳತಳ ಪ್ರಪದದೊಳು ವಿತಳ ಕಿಱಿ
ದೊಡೆಯಲಿ ಸುತಳ ಮಹಾತಳ ಜಾನುವಿನಲಿ ಪೆ
ರ್ದೊಡೆಯಲಿ ತಳಾತಳಂ ಗುಹ್ಯದಿ ರಸಾತಳಂ ಕಟಿಯಲ್ಲಿ ಪಾತಾಳವು ।
ನಡುನಾಭಿಯಲಿ ಭೂರ್ಭುವಂ ಹೃದಯದಲಿ ಉರುವಿ
ನೆಡೆಯ ಸ್ವರ್ಲೋಕ ಮಹರ್ಲೋಕ ಗಳದಲಿ ಕದಪಿ
ನೊಡನೆ ಜನ ತಪಲೋಕ ಭಾಳದೊಳು ಸತ್ಯ ಲೋಕಗಳಂಗದೊಡನೊಗೆದವು ।

ಶರಣನಂಗದೊಳಿಂದು ಹದಿನಾಲ್ಕು ಲೋಕ ಪ್ರ
ಸರ ಸರಂಗೊಳಿಸಿ ಸಾರ್ಚಿಹ ಬೆಡಂಗಖಿಳ ಸಂ
ಚರ ಭುವನ ಭವನಾದಿ ದೇವತೆಗಳೊಡನೊಗೆವವೆಂಬಾದಿ ಶ್ರುತಿ ಮತಗಳ ।
ಗರುಡಿಯಾಚಾರ್ಯ ಸಾಕ್ಷಾಚ್ಛಿವನ ಪ್ರತಿಬಿಂಬ
ದೊರೆಯು ಕಡಯಾಣಿ ಭಕ್ತಿಯಕೇಣಿ ವಾಣಿಯಂ
ತರ ದೀಪ್ತಿ ಭವದುರ್ಗ ಬಳಕೆಗಳೆದವತರಿಸಿದನು ಬಾಲ ಭಾಳನೇತ್ರ ॥೫೧॥

ಉದಯಿಸಲ್ಕುತ್ಸಾಹ ಸಕಲ ಮಂಗಳ ಮಹಾ
ಭ್ಯುದಯ [1]ಮಂಗಳ[1] ತೂರ್ಯತ್ರಯಮುಣ್ಮೆ ಸದ್ವಿಪ್ರ
ಮಧುರಮಂತ್ರಾಕ್ಷತೆಯ ಮಯದೊಸಗೆ ಮಸಗೆ ಮುಹುರ್ತದ ಜಾತಕರ್ಮವೆಸಗೆ ।
ಒದಗಿದ ಮಹೋನ್ನತಾ ವೇಷದಿಂ ಪುತ್ರಸಂ
ಪದದ ಗುಡಿ ತೋರಣ ಸುಶೋಭನಕ್ಷತೆ [2]ಕ್ರಿಯಾ[2]
ವಿಧಿ ವಿಧಾನದ ಭೂರಿತು[3]ಷ್ಟ[3]ಷ್ಟ ಶಿಷ್ಟವರ್ಗಭೀಷ್ಟಾಬ್ಧಿ ಮಥನವೆನಿಸಿ ॥೫೨॥

[4]ಪು[4]ತ್ರೋದಯದ ಕಿರಣಲಹರಿ ಹೃದಯಾಬ್ಜಮಂ
[5]ಚಿ[5]ತ್ರಿಸಲು ಮನಮನೋರಥನಾಗಿ ಮಾದಿರಾ
ಜೋತ್ತಮ ನಿರೀಕ್ಷಣೆಗೆ ಬರೆ ಬಾಲಚೇಷ್ಟೆಕಣ್ಬಾಯ್ದ[6]ಗೆ[6]ಯದಳದಿರಲ್ಕೆ ।
ಚಿತ್ತವ್ಯಾಕುಲವಾದುದುಭಯಪಕ್ಷದ ಹರುಷ
ವೃತ್ತಿ ಬಿನ್ನಣವಳಿದುದಾ ಶಿಶು ಶಿವಾಗಮ[7]ದ[7]
[8]ಭಿತ್ತಿ[8] ವಿಡಿದಿಹುದಱಿಯದವರೆಂತ್ರ ತಂತ್ರಾದಿದ್ಯೈವ ಪ್ರಾರ್ಥನೆಗಳೆಸಗೆ ॥೫೩॥

---

[1] ದೇಳ್ಗಿಯ (ಜ). [2] ಕ್ರೀಯ (ಫ). [3] ಷ್ಟಿ (ಜ), ಷ್ಟೆ (ಕ.ಖ). [4] ಮಿ (ಫ).
[5] ಮಿ (ಕ.ಗ.ಥ.ಫ). [6] ರೆ (ಖ). [7] ರ (ಗ.ಥ). [8] ಭೀತಿ (ಕ).

ಮೋಣ[1]ಚೇಣ[1]ದಿವಜ್ರಮುದ್ರೆಗಡಿವುದೆ ಯೆಂಬ
ಕೇಣದಿಳಿಯದೆ ಹಲವೆಣಿಕೆ ಗೊಳುತಿರಲು ಕೃಷ್ಣ
ವೇಣಿ ಸಂಗಮದಿಂದಲಾ ದಿನ ಪುರಕ್ಕೊಬ್ಬ ತಾಪಸಾಚಾರ್ಯ ಬಂದು ।
ಸ್ಥಾಣುಭುವನದೊಳಿದ್ದವರ ಶುಭೋದಯ ಗೇಳ್ದು
ದೇನಾನು ಪೂರ್ವ ಪರಿಚಯಕೊಲುಮೆಯಿಂ ಪಂಚ
ಬಾಣಾರಿ ಪಂಚಗಣಸಹಿತವರ್ಗಳಾಲಯಕೆ ಬಿಜಯಗೈ [2]ದಾಕ್ಷಣದೊಳು[2] ॥೫೪॥

ನಿಡುಜಡೆಯ ಕರ್ಣಕುಂಡಲದ ರುದ್ರಾಕ್ಷಿಗಳ
ತೊಡಿಗೆಯ ಭಸಿತ ವಿಲೇಪನ[3]ದಿಂದಲತಿಶೋಭೆ[3]
ವಡೆದ್ಯೋಗವಟ್ಟೆಯಾಧಾರದಾಜ್ಞಾದಂಡ ಕಟಿಬದ್ಧ ಕೌಪೀನದ ।
ಪಿಡಿದಕ್ಷಮಾಲೆ ಧ್ಯಾನದ ಧಾರ[4]ಣಂ[4]ಚಿತ್ತ
ಮೃಡಮೂರ್ತಿ ಜಾತವೇದಿಗಳೆಂಬ ಮುನಿರಾಯ
ನಡೆತರಲ್ಕಿವರರ್ಘ್ಯ ಪಾದ್ಯ ವಿಷ್ಟರವಿತ್ತು ಸತ್ಕರಿಸೆ ಪರಕೆಗೊಟ್ಟು ॥ ೫೫ ॥

ಕ್ಷೇಮ ಕುಶಲವ ಶಿಶುವಿನತ್ಯೋನ್ನತಂಗೇಳೆ
ಪ್ರೇಮಸಾಧಾರಣದಿ ಬಾಲಶೀಲವನವರ್ಗೆ
ತಾಮಸದ ತವಕದಿಂ ಪೇ[5]ಳ್ದು[5] ಪಿರಿಯರ್ನಿರೀಕ್ಷಿಸಿಯೆನುತ್ತೊ[6]ಳಯಿ[6]ಕೊಯ್ದು ।
ಆ ಮಗುವ ತೋಱಲವರೋನ್ನಮಶಿವಾಯೆನುತ
ಶ್ರೀಮದಣಿಮಾದಿಗಳ ಸಿದ್ಧಿ ತ್ರಿಪುಂಡ್ರ ವಿಡ
ಲಾ ಮಹಾತ್ಮಕನು ಕಣ್ದೆಱೆದು ಕಂಡನು ಕರ್ಮ ನಿರ್ಮೂಲ ನಿಜಗುರುವನು ॥

ನಿಮ್ಮನಱಿಯದನಱಿತ ಕಾಳ್ಬಯಲ ಪರಬೊಮ್ಮ
ಕರ್ಮ ವಾದಗಳು ಕಾಳ್ವಿಭವಾಂತರದ ಕುಲ
ಪೆರ್ಮೆಗಳು ಕಾಳ್ಕಪಟವೆಸನ ವ್ಯಾಪ್ತಿಯ ಡಂಭ ಶುಂಭ ಯೋಗಂ ಕಾಳ್ಗಳು ।
ತಮ್ಮ ತಾವ್ದೈವವೆಂದರ್ಚಿಪರ್ಕಾಳ್ಕಾಳು
ಧರ್ಮಸೂಕ್ಷ್ಮವ ಶಿವಜ್ಞಾನ ಹೀನರು ಭಕ್ತಿ
ವರ್ಮವಱಿಯದ ನರರ್ಕ್ಕಾಳ್ಕಾಳೆನಿಪ್ಪೊಲಾ ಬಾಲ ಬಾಯ್ದೆಱೆದೊಱಲುತ ॥ ೫೭ ॥

ಜನ್ಮಜನ್ಮಾಂತರದ ಪಾಶಗಳ ಹಱಿಯೊದೆವ
ಸನ್ಮತವದಿಂತೆಂದು ತೋಱುವೊಲು ಪದಯುಗವ
ಮನ್ಮನೋರಥ ರತಿಸುತುಭಯಕರಕಮಲಮುಷ್ಟಿತಮುದ್ರೆ ಬೀಸರಿಸದೆ ।

---

[1] ಧಾನ (ಕ.ಖ.ಗ.ಘ.ಥ), ಜೇಣ (ಜ). [2] ದನಾಕ್ಷಣದೊಳು (ಕ,ಖ), ದನಾಕ್ಷಣ (ಜ). [3] ದೆಜ್ಞಸೂತ್ರದೆಶ (ಗ.ಥ.ಖ). [4] ಣದ (ಖ). [5] ಳೆ (ಕ.ಖ.ಗ.ಘ.) [6] ಳಿಯ (ಕ.ಗ.ಥ).

ಸನ್ಮತದಿ ಶಿವಗೆ ನೀಡುವೊಲು ನಿಪುಣಿಸುತ ಶಿಶು
ಉಮ್ಮಯದಿ ನಲಿಯುಲಾ ಪಿತಮಾತೆಯರ್ಕಂಡು
ತಮ್ಮ ಮನಮುಟ್ಟಿಯಾ ಮುನಿಪದಕ್ಕೆಱಗಿಯಾ ಬಾಲನಂ ಪದಕೆ ಸಾರ್ಚೆ ॥ ೫೮ ॥

ಪರಮಗುರು ನೀವು ಈ ಶಿಶು ನಿಮ್ಮಶಿಶುವಿದಱ
ಭರಭಾರನಿಮ್ಮದೆನಲವರ್ತಥಾಸ್ತೆನುತ ಶ್ರೀ
ಚರಣಜಲದಳೆದು ಧ್ಯಾನ ಜ್ಞಾನದೃಷ್ಟಿಯಿಂದಾತ ಜನಿಸಿದ ಮುಹುರ್ತವ ।
ನೊರೆದ[1]ಶ್ರ್ವಚಿರ್ವಾಸ[1] ಶುದ್ಧಚತುರ್ದಶಿಯ ಹಿಮ
ಕರವಾರ ಹಿಮಕರಾದ್ರ್ರಸ್ಥ ಶಿವಯೋಗಗೂ
ಡಿರೆ ಜನಿಸಿದಾತ ಶಿವಯೋಗಿಯಹನಾಗೀತ ಶುದ್ಧಶಿವಯೋಗಿಯಹನು ॥ ೫೯ ॥

ಎಂದೊರೆದು ಮುನಿ ಕರುಣದಿಂದ ಕಂದನ ವರ್ಮ
ದಂದಗಂಡಱುಪಲಹುದದು ಮುನ್ನ ತಾ ವೃಷಭ
ನಿಂದೊಗೆದ ಪಿಂಡವೆನಲಾ ಪೆಸರಿಡುವುದೆನೆ ಹಸಾದವಾತಂ ಸುಖಮಿಹ ।
ಛಂದವೇಂ ನಿರವಿಸೆನೆ ಇದೆ ಭಸಿತವಿಡುವುದಾ
ವೊಂದು ಲಿಂಗವನೀತಗಿತ್ತಪೆವೆನುತ್ತಿತ್ತು
ವಂದಿಪಂದವ ಜಾತವೇದಿಪೂರ್ವಾಚಾರ್ಯಸಾಂಪ್ರದಾಯಕರೊರೆದರು ॥ ೬೦ ॥

ಇ[2]ಷ್ಟಾಕೃತಾ[2]ರ್ಥ ಬಂದೊಲಿದಿತ್ತೆವಾಗಿ ತ
ನ್ನಿಷ್ಟಲಿಂಗಮದಕ್ಕು ಈ ಲಿಂಗಮಂ ಸಿಂಹ
ವಿಷ್ಟರದೊಳಿಟ್ಟರ್ಚಿಸರ್ಘ್ಯಪಾದ್ಯಾಚಮನಜಲಕ್ರಮಮದಲ್ಲದುದನು ।
ಮುಟ್ಟಿಸದಿರೇನುವನನರ್ಪಿತವನೇನೊಂದು
ಕೊಟ್ಟು ಕೆಡಿಸದಿರೆನುತ್ತಾಜ್ಞಾಪಿಸುಪದೇಶ
ಗೊಟ್ಟು ಪೋಗಲ್ಕೆಥೋಕ್ತದಲಿ ಶಿಶುರಕ್ಷಣಂ ಗೈವುತ್ತದಿನದಿನ[3]ಗಳ[3] ॥ ೬೧ ॥

ಉಚಿತೋಚಿತವ ಕರ್ಮಧರ್ಮಗಳನುತ್ಸಾಹ
ರಚನೆಗಳ ಲೌಕಿಕೋಕ್ತದಿ ನಡೆಸುತೀರಾಱು
ಶುಚಿ ದಿನಕೆ ವೃದ್ಧಿಸೂತಕಗಳೆದು ತಮ್ಮಿಷ್ಟ ವಿಪ್ರ ಸಂತರ್ಪಣಾರ್ಥ ।
ರಚಿತ ನಾನಾ ಪದಾರ್ಥಗಳ ಶುಭಶೋಭನ
ಪ್ರಚಯ ದ್ರವ್ಯಗಳ ಪರುಠವಿಸಿ ಶಿವಯೋಗವಿ
ಪ್ರಚಲಮಂಗಳದ ಮಂಟಪವೆನಲ್ತೊಟ್ಟಿಲಂ ಕಟ್ಟಿ ಸುಮುಹೂರ್ತದಲ್ಲಿ ॥ ೬೨ ॥

---

[1] ನಾಶ್ವಿಜಮಾಸ (ಕ.ಖ.ಗ.ಘ.ಛ). [2] ಷ್ಟಕೃತ್ಯ (ಛ,ಘ). [3] ದೊಳು (ಖ).

ಸತ್ಯಮಂ ನಿತ್ಯಪೀಠದೊಳಿರಿಸುವಂತೆ ಪರ
ತತ್ವಮಂ ಪ್ರಣಮವಾಸಿಗೆಯ ಮೇಲಿಡುವಂತೆ
ಅತ್ಯತಿಷ್ಠದ್ದಶಾಂಗುಲನ ಮಂತ್ರದಿ ಮಡಗುವಂತೆ ಸಮ್ಯಜ್ಞಾನವ ।
ಚಿತ್ತವೃತ್ತಿಗೆ ಸಾರ್ಚುವಂತೆ ಹಂಸನ ಬ್ರಹ್ಮ
ಭಿತ್ತಿಗೇಱಿಸುವಂತೆ ಶಿವಯೋಗ ವಾತ್ಸಲ್ಯ ಸಂ
ಪತ್ಕರದ ತೊಟ್ಟಿಲೊಳು ತೀವಿದರು ಮುಕ್ತಿವಧುವಿಧದಾ ಸುವಾಸಿನಿಯರು ‖ ೬೩ ‖

ಧರೆಗೆ ಸರಿಯೇ ಘನಂ ಸುರರ್ಗೆ ಸರಿಯೇ ಘನಂ
ಸುರಪರ್ಗೆ ಸರಿಯೆ ಘನ ವಾದಡೇಂ ಚಂದ್ರಭಾ
ಸ್ಕರರ್ಗೆ ಸರಿಯೇ ಘನಂ ಚತುರ್ಮುಖಗೆ ಸರಿಯೆ ಘನ ಹರಿಗೆ ಸರಿಯೇ ಘನಘನ ।
ಹರಗೆ ಸರಿ[1]ಯಾ ಪೆ[1]ಸರಿಮಿಗಿಲೆನಲ್ಬಹುದೆಂದು
ಪರಮ ಘನತೆಯ ವೇದವಾದಗಳ್ತೂಗುವ
ಸ್ಫುರಿಯಿಂದ ದಾಲೆಯತೂರ್ಗಿದರು ಘನಕೆಘನ ಮಹಿಮ ಬಾಲನ
ತೊಟ್ಟಿಲ ‖ ೬೪ ‖

ಚಲಿಪ ಪದದಿಂದನಿಲನಗ್ರದಾಧಾರದಲಿ
ಶಿಲೆಗೊಂಡು ಬಾಲನಾದಂ ಪೊಣ್ಮಿ ಪ್ರಾಣವಾ
ರ್ವ್ಯಲಗೂಡಿ ಹೃದಯಕರ್ನಿಕೆಗಡರ್ದು ಹಂಸನೆಂದೆನಿಪಷ್ಟದಳಭೇದವ।
ಗಳಸಿ ಮಧ್ಯಸ್ಥಾನಕ್ಕೈದಿ ಸ್ವಸ್ಥಿರಭಾವ
ಕಳವಟ್ಟು ಮೋಕ್ಷಕ್ಕೈದುವ ಹಂಸಪವನನೀ
ಲಲನೆಯರ ಗಳದಳದಿ ನಿಂದು ರಾಗಿಸುವಂತೆ ಯೋಗಜೋಗುಳವೆಸೆದವು ‖ ೬೫ ‖

ಮಾತೆಪಿತೃಗಳು [2]ಋಷೀ ನಾಮಕರಣವ[2] ಪೇಳ್ದ
ದೀತನೇ[3] ನಂದೀಶ ನೀಲಲೋಹಿತ ಕಂದ
ನೀತ ಕಾಲನು ಮನೋಹರ ವೃಷಭನೆಂಬಾದಿ ಗಣನಾಮ ಕುಲಗಳ ಜಗ ।
ನ್ಮಾತೆ ಪಿತೃಗಳ್ಬಲ್ಲರೀ ನಾಮಗಳನೆಲ್ಲ
ವಾ ತಳೆದಿಹುದು ಬಸವನಾಮನಿರ್ವಚನವೆಂ
ಬೋತಂತರಾತ್ಮನಱಪಿದೊಲುಸುರ್ದರವರು ವೃಷಭನ ನಾಮ
ಬಸವನೆಂದು ‖ ೬೬ ‖

ಶಶಿಮುಖಿಯರೆಲ್ಲ ಸರಗೊಳಿಸಿ ಬಸವನ ನಾಮ
ರಸರಸಾಯನವ ಜಿಹ್ವೆಗೆ ತರಲು ಪರತರದ
ಸರಸಿರುಹಾಸನನರಸಿ ವಾಗ್ವಿಲಾಸದಿ ಸಿದ್ಧಪೀಠಸ್ಥೆಯಾದಂತಿರೆ ।

---

[1] ಹ್ನೈ (ಜ). [2] ನಾಮಕರಣ ಕಾರಣ (ಕ.ಗ.ಥ.ಜ.ಖ). [3] ಡೀತಗೆನೆ (ಜ).

ಬಸವ ಜೋ ಬಸವಣ್ಣ ಜೋ ಬಸವಲಿಂಗ ಜೋ
ಬಸವೇಶ ಜೋ ಬಸವರಾಜ ಜೋ ಬಸವರಸ
ಬಸವಾಂಕ ಜೋ ಬಸವ ಪ್ರಭುವೆ ಜೋ ಜೋ ಯೆಂಬ ಜೋಗುಳಾಮೃ
ತಗಱೆದುದು ‖ ೬೭ ‖

ಭಕ್ತಾಂಗನಂಗವೇ ಭೂಮಿ ಮಾಹೇಶ್ವರ ಸು
ತತ್ವವೇ ಕ್ಷೇತ್ರ ಪ್ರಸಾದಸ್ಥಲವೆ ಸ್ಥಲದ
[1]ವೃ[1]ತ್ತಿಕೆ ಶಿಲಾಬದ್ಧ ಪ್ರಾಣಪರವೆರಸಿಹ ಪ್ರಬದ್ಧಾಂಗವೇ ಪೀಠವು ।
ಸತ್ಯಶರಣರ ಪ್ರಭಾವದೊಳು ಬೆರಸಿಹ ಬಸವ
ನುತ್ತುಂಗನಾಮಲಿಂಗಪ್ರತಿಷ್ಠಾಯ್ತೆಂದು
ಪೃಥ್ವಿಯು ಮಹಾಭಕ್ತರಿಗೆ ಮುಕ್ತಿವಧುದೋಱುವ್ವೊಲ್ಪಾಡಿದರು ಬಸವನ ‖ ೬೮ ‖

ಬದ್ಧಿತಾಣವ [2]ಕರ್ಮ[2] ಮಾಯಾ[3]ಮಲದ ಬಲೆ[3]ಯು
ನೊದ್ದು ಕಳೆವುದದೊಂದು ಸಕಲ ನಿಷ್ಕಳ ತತ್ವ
ಸಿದ್ಧಿ ಕಾರಣವೊಂದು ವರಮುಕ್ತಿ ಸಾಧಿತ ಪ್ರಬದ್ಧಿತಾಕ್ಷರಮದೊಂದು ।
ಶುದ್ಧ ಸಿದ್ಧ ಪ್ರಸಾದಿಸ್ಥಲದ ಶಾಸನದೊ
ಳುದ್ಧರಿಸಿದವು ಬಸವನಾಮಾಕ್ಷರತ್ರಯವ
ಮುದ್ರಾಂಕಮಾಲೆಯನನಾದಿ ಶಕ್ತಿಯರೊತ್ತುವೊಲು ಪಾಡಿದರು ಬಸವನ ‖ ೬೯ ‖

ನಾಮಕರಣಮದಾಯ್ತು ಶಿವನಭಕ್ತಿಸ್ಥಲಕೆ
ಸೀಮೆಯ ಶಿಲಾಸ್ತಂಭ [4]ನಡಿ[4]ಸಿತ್ತು ದಾಸೋಹ
ಹೇಮಾಚಲ ಪ್ರತಿಷ್ಠಿಸಿತು ತಮಗಿರಲು ಸುಖಗಾಣೆವೆಂದುಳಿದ ಕರ್ಮ ।
ಸ್ತೋಮ ತಮ್ಮತಮ್ಮಿಷ್ಟ ದೈವಗಳಿಗೂಳಿಗವ
ನಾಮ ನಿಜವಱಿಯದ[5]ಱಿಜೊ[5]ದರಿ ಹುಯ್ಯಲುಗೊಡುವ
ನಾಮದೊಲು ಚರ್ಮಬದ್ಧಿತ ಬದ್ದರಂ ಕೊಂಬು ಕಹಳಾರವಗಳೆಸೆದವು ‖ ೭೦ ‖

ಪರವೆ ಶಿರ ಬ್ರಹ್ಮವೆ ಲಲಾಟ ಜ್ಞಾನವೆ ನಯನ
ವರಮುಕ್ತಿ ನಾಸಿಕ ಮಹಾಮಂತ್ರಗಳೆ ಕರ್ಣ
ಪರಮತತ್ವವೆ ವಕ್ತ್ರನಾದವೇ ಗಳ ವೇದವೇ ಭುಜಗಳಮಳ[6]ಧ್ಯಾ[6]ನ ।
ಸ್ಥಿರ ಹೃದಯವಭಯವೇ ಕರವಾಗಮವೆ ಕುಕ್ಷಿ
ನಿರುತ ಪಾವನ ಜಾನು ಕ್ರಮಜಂಘೆ ಗತಿಯೆ ಪದ
ದಿರವಿಂತು ಬಸವಾಕ್ಷರದ ಶಬ್ದಮೂರ್ತಿ ವಿಸ್ತರದ ಮಾಹೇಶತತ್ವ ‖ ೭೧ ‖

---

[1] ವೃ (ಕ.ಗ.ಛ). [2] ಕಾರ್ಮ (ಘ), ಕಾರ್ಮ (ಕ.ಛ.ಗ). [3] ಮಲವೆಬಲಿ (ಕ).
[4] ನದಿ (ಘ). [5] ರಜೊ (ಖ), ರಜೋ (ಕ). [6] ಜ್ಞಾ (ಜ).

ಬಸವಂಗೆ ಬಾಲ್ಯತೆಯ ಶಶಿಧರಗೆ ವೃದ್ಧತೆಯ
ನುಸುರ್ವರುಸುರಲಿ ಲೋಕದುಕ್ತಿಯೊಳು ನಾವದಱಿ
ದೆಸೆಯ ಬರಲಂಜುವೆವು ಗುರುವ ನರಭಾವ ಲಿಂಗವ ಶಿಲಾಭಾವಕಿಕ್ಕಿ ।
ಸಸಿನೆ[1]ವೊ[1]ಟ್ಟೆಯ ಹೊರೆದರೊಳರೆ ಮೂಲೋಕಕ್ಕೆ
ವಸಿಸಿರ್ಪ ಘನತೆಯಂ ಕುಂಭದೊಳಗಿಂಬಿಡುವ
ಬೆಸನವೇ ಬಸವವೆಸರೆಳೆಕಲ್ಪತರು [2]ಹೊ[2]ಳಕುವೊಲು ದಿನದಿನಾಂತರಕ್ಕೆ ॥ ೭೨ ॥

ದಳ ನಾಲ್ಕು ಆಱು ದಳ ದ್ವಾದಶಗಳೀರೆಂಟು
ದಳ ದ್ವಿ[3]ತಿಯದ[3]ಗ್ರದಲಿ ಸಹಸ್ರಶಾಖೆಗಳಿಂದ
ನಳನಳಿಸಿ ಯೋಗಮೂಲಾಧಾರದೈವತೆರಡಕ್ಷರ ಮ[4]ಹಾತ್ಮೆ ತಳಿತು[4] ।
ಕಳೆಯು ಹೊಸ ಕುಸುಮಿತಂದೋಱಿ ಮೋಕ್ಷದ ಫಲಂ
ದಳೆದು ಪರವಶಮಪ್ಪ ಕಲ್ಪದಮೃತದ ಫಲದ
ಬೆಳಸಿನೊಳ್ಪೀ ಬಾಲಲೀಲೆ ನಿದ್ರಾಯೋಗಸಿದ್ಧಪ್ರಬುದ್ಧನೇಳ್ಗೆ ॥ ೭೩ ॥

ಜಾತವೇದಿ ಪ್ರಭುಗಳುಪದೇಶಿಸಿದ ಪರಿಯೊ
ಳೀತಂಗೆ ಲಿಂಗದರ್ಶನ ಸ್ಪರ್ಶನಂ ಪಾದ
ಪೂತೋದಕಂ ಸ್ನಾನ ಪಾನ ಪಾಲ್ಬೆಣ್ಣೆ ಶರ್ಕರೆಯೌಷಧಾದಿದ್ರವ್ಯ ।
ವ್ರಾತಗಳನಾ ಲಿಂಗಮುಖದೊಳಲ್ಲದೆ ಜಗ
ನ್ಮಾತೆ ಮಾದಾಂಬಿ[5]ಕೆಯುದೊ[5]ಂದನಾ ಶಿಶುವಿಗೆ ಸು
ನೀತೆ ಮುಟ್ಟಿಸದೆ ಮಾರ್ಗಾಚಾರಮಾತೆಯಾದಂತೆ ರಕ್ಷಿಸುತಿರಲ್ಕೆ ॥ ೭೪ ॥

ಕಾಮ ಕ್ರೋಧಂ ಲೋಭ ಮೋಹ ಮದ ಮತ್ಸರದ
ಸೀಮೆಯಾರಂಗರಹಿತನ ಯೋಗ[6]ಭಿ[6]ಕ್ಷಕ್ಕೆ
ಸೋಮಪಾನವನಂಬಿಕಾಯೋಗಿಣಿಯರೊಲಿದು ನೀಡುವಂತಱುದಿಂಗಳು ।
ಆಮಹಾತ್ಮ[7]ನಿ[7]ಗಾಗಲನ್ನಪ್ರಶವೋತ್ಸವದ
ಕಾಮಿತಕೆ ಕಲ್ಪಾಮೃತಾನ್ನವನು ಮಾದಾಂಬೆ
ಕಾಮಾರಿಗರ್ಪಿಸಿದ ಸಿದ್ಧವೆಂದೊರೆದಾಗಮದೊಳೂಡಿದಳು ಬಸವಗೆ ॥ ೭೫ ॥

[8]ಗಡುಗಂದಿ[8]ತನದ ಸ್ನೇಹದ ಮೋಹದತಿಹಿತದ
ನುಡಿಗಡಣ ನೋಟ ಮಧುರೋಚಿತ ಸುರಸಭಾವ
ಒಡಗೂಡಿದೊ[9]ಳು[9]ರುಚಿಯ ಮುದ್ದುಮಂಡಿತದಖಂಡಿತ ಕರುಣಭರಣ ಬಾಲ ।

---

[1] ಹೊ (ಖ). [2] ಹ (ಘ). [3] ತೀಯ (ಕ. ಖ. ಗ. ಘ). [4] ಹತ್ವದಳೆದು (ಕ.ಖ.ಗ.ಥ.ಘ). [5] ಕೇನೊಂ (ಘ. ಗ). [6] ಭ (ಕ.ಖ.ಗ.ಘ.ಥ). [7] ಕಂ (ಕ), ಕ (ಗ). [8] ಕಡುಗಂಡಿ (ಜ). [9] ಲು (ಖ).

ದೊಡಿಗೆ ಉಡಿಗೆಗಳ ಲಾಲಿತಪಾಲಿತಂಗಳು
ಘ್ಮಡದುನ್ನತೋತ್ಸಹದ ಜನನಿ ಜನಕರ ಸೌಖ್ಯ
ದೆಡೆ ಸಸಿಯ ಸಸಿಯೇಳ್ಗೆಯಿಂ ಕಳಾರಾಶಿವರ್ಧಿಸುತ ದಶಮಾಸಗಳೆಯೆ ‖ ೭೬ ‖

ರುದ್ರಸಂಖ್ಯೆಯ ಮಾಸದೊಳಗೆ ಚೌಲವನು ಭೂ
ರುದ್ರಂಗುಪಕ್ರಮಿಸಿದರು ಪ[1]ರಮಜ್ಞಾನಸಾ[1]
ಮುದ್ರಂಗೆ [2]ಕುತ್ಸಿ[2]ತೇಂದ್ರಿಯ ಕೇಶಪಾಶವ ನಿವೃತ್ತಿಸುವ ನಿಜಪದದೊಲು ।
ಭದ್ರೋತ್ತಮಾಂಗನಂ ಮಾಡಿಸಲು [3]ಕರ್ಮಪದ[3]
ಕದ್ರುಜ ಸುಪರ್ಣ ಪರತಂತ್ರೆಜ್ಞಮುಖ ವೀರ
ಭದ್ರಂ ಬೆಳಗುತಿರ್ದನದ್ವೈತ ನಿತ್ಯಕರ್ಮಾರಣ್ಯ ದಾವಾನಲ ‖ ೭೭ ‖

ನಡೆಗಲಿತ ನುಡಿಗಲಿತನೆಡೆಯಾಡ ಕಲಿತನೆಂ
ಬೆಡೆವಾ[4]ತಿ[4]ನಂತಲ್ಲ ಮುಂದೆ ದೃಷ್ಟಾಂತಗಳ
ನೊಡನೆ ತೋಱುವೆನೆಂಬ ಮಾಳ್ಕೆಯಿಂದಡಿಯಿಡಲ್ಕಲಿತ ಸತ್ಪಥಪಥಿಕನು ।
ಒಡನಾಡ ಕಲಿತ ಭಕ್ತರೊಳು ಜಂಗಮಲಿಂಗ
ದಡಿಗೆಱಗ ಕಲಿತನಾಚಾರ ನೀತಿಯ ನಿಜದ
ನುಡಿಗಲಿವನುಳಿದವಂ ಕಲಿವೆನೇ ಯೆಂಬೊಲೊಳನುಡಿಗಳೆಡೆಯಾಡ ಕಲಿತ‖ ೭೮ ‖

ಆಡುವಡೆ ಹಾಡುವಡೆ ನೋಡುವಡೆ ಕೂರ್ತುಮಾ
ತಾಡುವಡೆ ಶಿವನ ಶಿವನವರ [5]ಲೀಲೆಯದಲ್ಲ[5]
[6]ದೋಡುವಾತೊಂದಿ[6]ಲ್ಲದಿರಲವರು ಮುದ್ದಿನಿಂ ಮುದ್ದಾಡುತಾಡುತ ನಗೆ ।
ಮೂಡಿ ಹುಟ್ಟುತ್ತ ಶೀಲವನೆಂತು ತಂದೆ ನೀಂ
ಜೋಡಿಸಿದೆ ಜಾತವೇದಿಗಳಱಿದು ಉಪದೇಶ
ಮಾಡಿ ಲಿಂಗವ ತೋಱಿದೊಡೆಯದೇ ಮಂಗಳಂ ಎನಲಱಿ[7]ದ[7]ನಾದಿ
ಕುಲವ ‖ ೭೯ ‖

ಗುರುಸ್ಮರಣೆ ಲಿಂಗನಾಮಸ್ಮರಣೆ ಮಂತ್ರದು
ಚ್ಚರಣಾದ್ಯರಾಚರಣೆ ಭಸಿತಾಂಗ ಲೇಪ ವಿ
ಸ್ತರಣೆಯ್ಯೊ[8]ಯ್ಯಾ[8]ಲಾಪಕಾದಿ ಭೂತಿ[9]ಕ[9] ಶುಚಿರ್ಭೂತ ಪ್ರಭೂತ ಕರಣ ।
ನಿರುಪಾಧಿಕನು ನಿಜತೆ ಕರಿಗೊಂಡು ದಿನದಿನಾಂ
ತರಕೆ ನಡೆನುಡಿ ಭಾವಚೈತನ್ಯ ಗುಣತೆಶಂ
ಕರನ ಕೈಯಡಕದಭಯದೊ[10]ಲಭ[10]ಯಮೂರ್ತಿ ಲೋಕಾಚಾರ್ಯನುಱೆ
ಬಳೆಯಲು ‖ ೮೦ ‖

---

[1] ರಾಗಮಜ್ಞಾನಸ್ಥಾನಸ (ಕ) [2] ಕಣ್ಮ (ಕ.ಖ). [3] ಕರ್ಮಾಂಧ (ಕ ಖ.ಗ. ಘ.ಥ). [4] ತ (ಕ.ಖ). [5] ದಲೀ ಲೆಯದಲ್ಲ (ಕ). [6] ನೋಡುವಾತಂದಿ (ಕ). [7] ದೆ (ಕ.ಗ.ಘ.ಥ.) [8] ಯ್ಯಾ (ಕ). [9] ಯ (ಖ). [10] ಲುದ (ಕ).

ಗರ್ಭಾಷ್ಟಕಕ್ಕೆ ಮಾತಾಪಿತೃಗಳುಪನಯನ
ನಿರ್ಭರದ ನಿಜನೀತಿ ಕರ್ಮಧರ್ಮದ ವರ್ಮ
ಸರ್ಬಸಾಧನ ದ್ರವ್ಯಧಾತುರೀತಿಗಳಂ ಪ್ರಯತ್ನಪರುಶವವ ಮಾಡಿ ।
ಉರ್ಬರೆಯ ಗೀರ್ವಾಣರೆಜನಾದಿನಿಯತರಂ
[1]ಸದ್ಬೃಂದ ಬೃಹ[1]ಸ್ಪತಿಗಳಂ ವಿಶಿಷ್ಟರ ಬರಿಸಿ
ಅರ್ಭಕಂಗಮೃತಕರ ಬಲಮುಹೂರ್ತವ ನೋಡೆಥೋಚಿತಸುಸಾಂಗದಲ್ಲಿ ॥೮೧॥

ಹೋಮನೇಮಧಿಕಾರ[2]ವವಭೃಥಾಂತ್ಯದಿ[2] ಗೋತ್ರ
ನಾಮ ಸ್ವಶಾಖಾಭಿಧಾನ ಸಂಕಲ್ಪದಿ ನಿ
ಯಾಮಿಸಿ ಶುಚಿಭೂರ್ತವಟ್ಟು ಕಟಿಗೆ ಮುಂಜಿಗಟ್ಟೆಜ್ಞಸೂತ್ರವಿಕ್ಕಿ ।
ಸೀಮೆಯ ಶಿಖಾಬದ್ಧ ಕೌಪು ಕಷ್ಣಾಜಿನವ
ಹೇಮಪಾತ್ರೆಯ ಕೊಟ್ಟು ಪಾಲಾಶದಂಡಿತ್ತು
ಧೂಮಧ್ವಜಕ್ಕೆಱಗುಪಾಧ್ಯರಿಗೆ ವಂದಿಸೆನಲಾ ಮಹಾತ್ಮಕನೆಂದನು ॥ ೮೨ ॥

ಬಾಲದೊಡಿಗೆಯ ತೊಡಿಸುವಂತಿದೊಂದುತ್ಸಾಹ
ಲೀಲೆ[3]ಯೆಂ[3]ದಿರೆ ಬೇಱಿದೊಂದಾಗಮದ ಕಡೆಯ
ಮೂಲೆವೊಗಿಸುವೊಡೆಮಗನನ್ವಿತಂ ಪೂರ್ವದಾಚಾರ್ಯ[4]ರೆಮಗಾಚಾರ್ಯರು[4] ।
ಮೇಲೆಮೇಲಾಗಮಾಚಾರಗುರುದೈವವಲೆ
ಬೀಳುವವರಾವಲ್ಲವಿವೆ ಮುಂಜಿ[5]ಗಿಂಜಿಗಳ
ಗೀಳೆನುತಲವ[5] ಹಱಿಯುಲನುಗ್ಗೈಯುಲವರು ಹೋ ಹೋ ಎನುತ್ತಿಂತೆಂದರು ॥೮೩॥

ಕರ್ಮಷೋಡಶನಿಯತ ಕರ್ಮಷಟ್ಕಂ ಯೋಗ
ನಿರ್ಮಿತಾಷ್ಟಕ ಕುಲಾಧಿ[6]ಕ್ಯದಾಚಾ[6]ರೆಜ್ಞ
ಕರ್ಮಾಗ್ನಿಮುಖದ ದ್ವಿಜಕರ್ಮಕ್ಕಿದಾದಿಯಿದನತಿಗಳೆದವೆಂತು ನೀನು ।
ಕರ್ಮಧರ್ಮಕ್ಕುಭಯಕುಲ[7]ಪ್ರಸೂತತ್ವಕ್ಕೆ[7]
[8]ಬ್ರಹ್ಮ[8]ಯೋಗದ ಬಳಕೆಗರ್ಹನಹೆ ಯೆನೆ ಕೇಳ್ವಿ
ಕರ್ಮಿಗಳಿರೇಕಮೇವಾರುದ್ರನದ್ವಿತೀಯೆಂಬ ಶ್ರುತಿಮತದ[9]ನುವ[9]ನು ॥ ೮೪ ॥

ಹೊಲಬುಗೆಡಿಸುವಡೊಡಂಬಡಬಹುದೆ ಶ್ರುತಿಮತದ
ನೆಲೆಯುಱಿಯದಂಧ ಪಾರಂಪರೆಯ ಜಾತ್ಯಂಧ
ವಳಿಯೊಳೊಬ್ಬಮಳಾಕ್ಷನುದಿಸಿ ದರ್ಪಣಗಂಡು ಕಣ್ಮುಚ್ಚುವನೆ ಜಗದೊಳು ।

---

[1] ಸದ್ಬ್ರಹ್ಮದಿವ (ಖ. ಕ). [2] ಶ್ರುತ್ಯಾಂತದಿಂ (ಕ.ಖ.ಗ.ಘ.ಛ.) [3] ಯೊಂ (ಘ).
[4] ರೇನಿದನಱಿಯುರೆ (ಘ), ರೇನಿದನಱಿವರೆ (ಕ. ಛ. ಗ). [5] ಗುಂಜೇವುದೆನುತಂ (ಜ).
[6] ಕೈಥಾಚಾ (ಕ.ಖ.ಗ.ಘ.ಛ.) [7] ಸೂತಕಕೆ ಬ್ರಹ್ಮ (ಕ. ಖ. ಗ. ಛ. ಘ.) [8] ಕರ್ಮ (ಕ. ಘ. ಗ ಛ. ಖ.). [9] ವರ (ಗ. ಘ).

ಎಲೆಯು ಬಣ್ಣಿಪರೆ ಬೇರಿರಲುಳಿದ ಕರ್ಮಗಳ
ತಲೆಯು ಮೇಲಿಹ ಬ್ರಹ್ಮ ಕಾಲ್ಗೆಱಗುವುದೆ ಊರ್ಧ್ವ
ಜ್ವಲನಾಕ್ಷ ಪದ ಪದ್ಮ ಭ್ರಮರ ಬಂ[1]ಡುಂಬುದೇ ಕಲ್ಮಷ[1] ಕನಕ ಕುಸುಮದ ‖೮೫‖

ಸುಮನಸ[2]ಗೆಮನುಜರು[2]ಪದೇಶವೇ ಮಂತ್ರಕ್ಕೆ
ಭ್ರಮಿತೋಪದೇಶವೆ ಜ್ಞಾನಕಜ್ಞಾನಾಂಧ
ತಮಸಿನುಪದೇಶವೇ ಶಿವಪದಾರ್ಚಕರಿಗೀ ಕರ್ಮಕಪಟುಪದೇಶವೆ।
ಎಮಗೆ ನಿಷ್ಕಾರಣೀ ಬಾಹ್ಯೋಪತಂತುಗಳ
ಶಮನವೇಕಿದಕೊಳ್ಳನೇಕ ವಿಂತಪ್ಪವೆ
ಮ್ಮುಮೆವರ ಪದಾಬ್ಜವಿಡಿ[3]ದಿಹವು ತ್ರಿಜಗದೆಂತ್ರತಂತ್ರದ್ವೈವಾಂತರಮೆನೆ[3] ‖ ೮೬ ‖

ಆಕಾಶದಿಂದತ್ತ ಕೈನೀಡುವಂಗೇಣಿ
ಯೇಕಿವೇಂ ಬಾಲ ಭಾಷೆಗಳೆ ಪ್ರಹ್ಲಾದನಂ
ದೇ ಕಥನದಿಂ ಜನಿಸಿ ತಜ್ಜನಕನಱಿದುದಿಲ್ಲೆಂತಂತಿರೀತಗೆಶಿವ।
ಸೋಕು ಸುಖಮಿರಲಿ ಮಾತಾಪಿತರ್ಗೆ ಬ್ರಾಹ್ಮಣ್ಯ
ಲೋಕಾಪವಾದ [4]ಹೊಱದಂತಿಂತು ಮಾಡೆ ತಾಂ
ನೂಂಕಿದವ ನೂಂಕಲೆಂದೆನುತ ವೈದಿಕ ಸಭಾಪೂಜ್ಯರೋಜೆಯ ಪೇಳುತ[4] ‖ ೮೭ ‖

ಏಕಿದದ್ವೈತವೆನಲದ್ವೈತಶಿವನವರ್ಗೆ
ಬೇಕಾದುದೆನಲಾದೊಡೇಂ ಕರ್ಮಕಾಕೆಯೆನೆ
ಲೋಕೋಕ್ತವಹುದು ಭಕ್ತಿಜ್ಞಾನ ಪ[5]ಥ[5]ದವ[6]ರ್ಗ[6]ದೋಕರಿಕೆಯಾಗಿ ವೃಥಾ‖
ಪಾಕಪರಿಪಕ್ವವೆನೆ ವೇದಮಂತ್ರಾಗಮವ
ನೀಕರಿಪರೇ ಮಗನೆ ಯೆನೆ ಮಾತ [7]ಬೆ[7]ಳುಮಾಲೆ
ಏಕತ್ಯತಿಷ್ಠದ್ದಶಾಂಗುಲನ ಸೋಂಕಱಿಯದಾಗಮಾಮ್ನಾಯಮುಂಟೆ ‖ ೮೮ ‖

ಎಂದು ಛಂದೋಋಷಿಯ ದೇವತಾಕ್ಷರಬೀಜ
ಬಿಂದು ಸ್ವರ [8]ಶಾಖೆ[8] ವರ್ಣಸ್ವರೂಪಾಗ್ರಮುಖ
ದಿಂದ್ರಿಯ ಸ್ವಭಾವಭೂತ ಪ್ರಪಂಚಪ್ರವರಧ್ಯಾನ ಧಾರಣ ಸಮಾ[9]ಧಿ[9]।

---

[1] ದುಂಬದೆ (ಪು). ಡುಂಬದೆ (ಧ. ಗ) ಡುಮ್ಮದೆ (ಕ). [2] ಗರ್ಮನದು (ಜ). [3] ಯುಪುತ್ರಿಜಗದಾದ್ಯಂತದ್ವೈವಾಂತರವೇಕೇಳೆನೆ (ಖ). [4] ವರದಂತಿಂತು ತಮ್ಮ ತಾ। ನೂಕಿದಂತರನೂಕಲಂದು .... ಲೆದ್ದರೆ (ಜ). [5] ದ (ಕ. ಗ. ಖ.). [6] ರ್ಗೆ (ಧ. ಕ. ಪು), ರ್ಗಿ (ಖ). [7] ಬೇ (ಕ). [8] ಸಾಂಖ್ಯ (ಜ). [9] ನ (ಗ.ಕ.ಜ.ಪು).

ಸಂಧಿ ಸಾಹಿತ್ಯ ಚಿತ್ರವಧಾನವಾದ್ಯಮೃತ
ಬಂಧ ಪದ ಪಾಳೆಂತವರ್ಗಖುಚಿಯರ್ಧಖುಚಿ
ಸೌಂದರಾಮ್ನಾಯ[1]ಮೂರ್ತಿ[1]ವನೆತ್ತಿ ತೋಱಿದನನಾದಿಬ್ರಹ್ಮಾಚಾರ್ಯನು ‖೮೯‖

ಈತನೇನಾನೊಂದು ಕಥನದಿಂದುದಿಸಿದ ಸ
ನಾತನಾದ್ಯರಿಗಾದ್ಯನೈಸಲೇ ಯೆಂದವರು
ಸ್ವಾತಂತ್ರ ನೀನು ನಿನಗುಪತಂತ್ರವಿಲ್ಲ ಕೇಳ್ಪರಮಕಾರಣಿಕ ನಮಗೆ ।
ನೀ ತಾತ ನಿನಗೆ ನಿಜವಲ್ಲದವನೊಲ್ಲದವ
ನೇತೆಱದೊಳಿವನೀಗ ಪರಿಹರಿಸದಿರು ತಾನೆ
ಬೀತು ಬಿನ್ನಣವಳಿದು ಹೋದಾಗಲೇ ಹೋಗಲೆನಲಾ[2]ಗಲಿ[2]ರಲೆಂದನು ‖ ೯೦ ‖

ಕರ್ಮಾಂಧಕಾರವಾರಿಧಿವಡಬ ಶಿವಯೋಗ
ಧರ್ಮಾಬ್ಧಿಚಂದ್ರ ತಾನುಳಿದ ದರ್ಶನದೈವ
ನಿರ್ಮಿತವ ನೀಕರಿಸುತೊಡನೋದುವವರೊಡನೆ ಅನವರತ ವ್ಯಾಜಿಸುತಿರೆ ।
ಮರ್ಮಬಲಿದೊಡನಾಡಿಗಳೊಳಿರಲ್ಕೆಲದಿನಕೆ
ನಿಮ್ಮ ಬಸವಂ ಸಹಿತ ಬಾಗೀರಥೀನಾಮ
ಸಮ್ಮಂಧ ದೇವತಾಕೂಪವೊಂದಿರೆ ಬಂದು ಜಲಕ್ರೀಡೆಯಾಡುತಿರಲು ‖ ೯೧ ‖

ಓರೋರ್ವರೋರ್ವರಂಮೇಲೆ ಬಿದ್ದಲ್ಲಿ ಪೆ
ಬ್ಬಾರವನ ಮಗನೋರ್ವತೀರಲನುಸಂಧಾನ
ಕಾರಣದಿ ಬಾಯಾರಿ ಬಸವನೇ ಕೊಂದನವಿಧಾಯೆಂದು ಮೊಱೆಯಿಡಲ್ಕೆ ।
ಊ[3]ರೆ[3] ಮೊಱೆಯಿಟ್ಟವಂ ಧೂರ್ತ ಬ್ರಹ್ಮೇತಿಕವಿ
ಚಾರಿಯೆಂದವದಿಡುತ ಕವಿದು ಭೋ ಎಂದು ದ್ವಿಜ
ಭಾರಿಗಳಗುರ್ಬಿನಿಂದೊಱಲಿ ನಡಿಸ್ಯವದಿರಾಲಯಮುಖದಿ ಗೋಶೃಂಗವ ‖ ೯೨ ‖

ಹಿಡಿ ಕಟ್ಟು ತಿವಿ [4]ತಿನ್ನು[4] ತೆಗೆ ಕೊಲ್ಲು ಹೊಯ್ನೂಕು
ಕೆಡ[5]ಹಿಕೊಳ್ಳಿಱು[5] ತುತ್ತು ತಱಿ ಕೊರಳ ಕೊಱೆ ತಲೆಯ
ಹೊಡೆ ಹೂಟೆಗಟ್ಟು [6]ಹುಡಿಹುಡಿಗುಟ್ಟು[6] ಕಡಿ ಖಂಡ[7]ಕೊ[7]ಯ್ಕೊಚ್ಚು ಪೋಳು ಸೀಳು ।
ನಿಡುಗಿಚ್ಚನಿಡು ಸು[8]ಡೊ[8]ಡಕಾಸು ಶೂಲಕ್ಕೆತೆಗೆ
ನಡು ನೀರೊ[9]ಳ[9]ದ್ದೊದದು ತೀರ್ಚೆನುತ ನೆರೆದ ಸಭೆ
ಘುಡುಘುಡಿಸಿ ಕಟ್ಟಾಸುರಂಗುಟ್ಟುತಿರ್ದುದೆಮಕಿಂಕರರ ಗರುಡಿಯಂತೆ ‖ ೯೩ ‖

---

[1] ವರ್ತಿ (ಘ) ವರ್ತಿಯ (ಖ). [2] ಸರಿ (ಖ), ದಡಿ. (ಜ). [3] ರ್ಗ (ಕ), ರು (ಗ.ಛ.ಜ.ಘ). [4] ಬೆನ್ನ (ಕ.ಖ.ಗ.ಘ.ಛ). [5] ಹುಕೋಳಿ (ಘ). [6] ಹೂಂ ಹುಡಿ ಗಟ್ಟು (ಜ). [7] ಗೆ (ಘ). [8] ದೊ (ಗ). [9] ಳೊ (ಕ.ಖ.ಗ.ಘ.ಛ).

ಹಿಂದುಮುಂದೆಡಬಲದಿ ಕವಿದು ಖೋಯೆನುತೊಬ್ಬ
ರೊಂದೊಂದನನ್ವಿತದಿ [1]ಕಾಳ್ಗಿಡದು ನುಡಿದು[1] ಬಹು
ನಿಂದೆ ದುರ್ವಾಕ್ಯ ದುಸ್ತರದಿನರವರಿಸದುರವಣಿಸಟ್ಟಿ ಮುಟ್ಟಲೋಡಿ॥
ಬಂದೊಳಗ ಪೊಕ್ಕು ತನ್ನಯ ಲಿಂಗಮಂ ಕೊಂಡು
ತಂದೆತಾಯ್ಗಳಿಗೆ ಬೆ[2]ಬ್ಬ[2]ಳಗೊಳುತುಸುರ್ದು ಬೇ
ಖೊಂದುಬಾಗಿಲಗ[3]ಳೆ[3]ದು ಕಪ್ಪಡಿಯ ಸಂಗಮದ ದೆಸೆಗೆ ಸೈವಟಿದ ಬಸವ ॥೯೪॥

ಹೊಟ್ಟೆಯಂ ಸೀಳಿ ಹುಲ್ಲಂ ತುಂಬು ಎಳೆಹೂಟೆ ।
ಗಟ್ಟು ತಿದಿಯಂ ಬಿಡಿಸು [4]ಅ[4]ಡೆಗಿಕ್ಕಿ ಕಡಿಯೆದೆಯ
ನಿಟ್ಟಿಯಿಂದಿಡು ನಡುವನಿತ್ತುಂಡ ಮಾಡೆಚ್ಚು ಕೆಡಹು ಸಮಭಾಗವಾಗಿ।
ಕಟ್ಟಿ ಹೂಳೆನುತಲಾ ಮಾಣಿಗಳ್ಪಿರಿಯರಾ
ಬಟ್ಟೆಗೊಂಡೈದಿದರು ಪುಣ್ಯಮೃಗಮಂ ಬೇಡ
ರಟ್ಟುವಂತಟ್ಟಿ ಬರಲೋಡುತ್ತ ನೋಡುತ್ತ ಬಂದು ಕೃಷ್ಣೆಯ ಹೊಕ್ಕಡೆ ॥ ೯೫ ॥

ಬಟ್ಟೆಗೊಟ್ಟಳು ಗಂಗೆ ಮುನ್ನರುದ್ರನ ಜಡೆಯ
ವಟ್ಟೆಯೊಳಗೇಳು ಗಂಗೆಗಳು ಭಸ್ಮೀಭೂತ
ವಟ್ಟರುಗ್ರತೆಯಿಂದಲೀತ ಭೂರುದ್ರ ಹಿಮೆಟ್ಟದಡೆ ಹಿಂದಣವರ ।
ಬಟ್ಟೆತನಗಹುದೆಂಬ ಬಗೆಯೊಳಿಬ್ಬಗಿಯಾಗಿ
ತಟ್ಟು ಮುಟ್ಟಿಲ್ಲದಾತನ ಪಾರವೈದಿಸ
ಲ್ಕಟ್ಟಿ ಬಂದರ್ಕಂಡರಾ ತಡಿಗಡರ್ವನಂ ಮುಟ್ಟಿಯುಮುರುಳ್ತಂಡವು ॥ ೯೬ ॥

ಹೋದ[5]ನೇ[5] ಹೋದ[6]ನೈದನೆಯ್ದೈದನೇ[6] ಗಂಗೆ
ಯಾ ದಡಕ್ಕಾಗಳೈದಿದನು ಚೋದ್ಯಂ ಇಲ್ಲಿ
ಭೇದಿಪಡೆ ಯಾನಪಾತ್ರಂ ಡೋಣಿ ತೆಪ್ಪ ವೊಂದೇ[7]ನೇ[7]ನುಪಾಯವಿಲ್ಲ ।
ಹೋದ ಪರಿಯೆಂತೀಜುವಡೆ ಬಹಳಜಲ ಬಾಲ
ಸಾಧನೆಯ ಬಗೆಗೊಳ್ಳದಿವ ಮೇಲೆ ಬ್ರಹ್ಮೇತಿ
ಬಾಧಕಿಯ ಗಂಗೆ ನುಂಗದೆ ಬಿಡಳುಯೆನುತ ದುರ್ಬೋಧಕರು
ಭ್ರಮೆಗೊಳುತಲಿ ॥ ೯೭ ॥

ಹಲವು ಹಱುಗೋಲ ಮೇಳೈಸಾ ಪ್ರವಂತಿಯಂ
ಗೆಲುತಿರಲ್ಕತ್ತ ಮುಂದಾಂಟಿರ್ದ ಬಸವನಾ
ಮಲಪ್ರಹರಿಯಂ ಕೃಷ್ಣೆ ಕೂಡಿರ್ದ ಕಪ್ಪಡಿಯ ಸಂಗಮೇಶ್ವರಲಿಂಗದ ।

---

[1] ಕಾಳ್ಕಟ್ಟುಗಟ್ಟಿ (ಜ), ಕಾಲ್ಗಿಡದುನುಡಿದು (ಕ.ಖ.ಗ.ಪ). [2] ಬ್ಬಿ (ಪ).
[3] ಳಿ (ಜ). [4] ತೊ (ಜ). [5] ನಾ (ಜ) [6] ನವನೈದನೈದನೆ (ಜ). [7] ನಾ (ಜ).

ನಿಳಯ ವೊಗಲಲ್ಲಿ ಭಕ್ತಿ ಜ್ಞಾನ ವೈರಾಗ್ಯ
ಸ್ಥಲದ ತವರೆನಿಪಾದಿಗುರು ಜಾತವೇದಿಗಳು
ಕೆಲ ತಾಪಸರ್ಸಹಿತಿರಲ್ಕಂಡು ಕೈಮುಗಿವುತೆಱಗಿದನು ಶ್ರೀಪಾದಕೆ ॥ ೯೮ ॥

ಹೊಯ್ವಳ್ಗೆ ಸುಯ್ವ ಸುಯಿ ಬೆಮರ್ದಂಗ ತಳ್ಕಂಕ
ಗೆಯ್ವುಹೃದಯಾಕಂಪಿಸುವ ಕರ ಚರಣ ಬೆದಱು
ತವ್ವಳಿಪನೋಟವಂಜುವ ಪ್ರಾಣ ಬಱಿತ ಬಸುರಱತಧರದತಿ ಬಳಲ್ವನ ।
ಶೈವಸಾಮ್ರಾಜ್ಯಸ್ಥ ಕಂಡು ನೀನಾರಾತ ।
ನೈ ವಿಶೇಷಣಭೀತನಿಲ್ಲಿಗೇಂ ಬಂದೆಯೆನೆ
ದೈವಿಕ ತೊಡರ್ಚಲೆಮ್ಮಾರಾಧ್ಯರಡಿ[1]ವಱೆ[1]ಯನಱಸುತ್ತ ಬಂದೆನೆನಲು ॥ ೯೯ ॥

ಎಲ್ಲಿಹರು ನಿಮ್ಮಾಳ್ದರೆನಲಿಲ್ಲಿ ಇಲ್ಲಾರು
ಸೊಲ್ಲಿಸೆನೆ ಜಾತವೇದಯ್ಯಂಗಳೆನಲವರಿ
ಗೆಲ್ಲಾದೆ ಶಿಶುವೆನಲ್ಬಾಗವಾಡಿಯ ಮಂಡಿಗೆಯ ಮಾದಿಮರಸರೆಂಬ ।
ರಲ್ಲಿ ಜನಿಸುಪದೇಶವಡೆದೆ ಬಾಲ್ಯದೊಳೆನಲು
ಬಲ್ಲೆವೈ ನೀನೆಮ್ಮ ಶಿಶುವಹುದೆನುತಲಪ್ಪಿ
ಹೊಲ್ಲೆಹಂ ಹೊದ್ದಿತೆ[2]ಮಗೆ[2]ನುತ ಮೈದಡಹಿ ಭಾಳದೊಳು[3]ಶ್ರೀಭ[3]ಸಿತವಿಟ್ಟು ॥೧೦೦॥

ಕೇಳುತಿಹ ಸಮಯದೊಳು ಬಂದುದಾಗಳೆ ವಿಪ್ರ
ದಾಳಿ ಖೋ ಖೋ ಯೆನುತ ಮೊಱೆಯಿಡುತ ಬ್ರಹ್ಮೇತಿ
ದೇಳುತ್ತ ಮಱುಗುತ್ತಲೊಱಲುತ್ತಲಱಸುತ್ತೈತಂದರಾ ಶಿವಭವನಕೆ ।
ಭಾಳಾಕ್ಷನಪರಾವತಾರನಱಿದಾ ಬಾಲ
ಭಾಳನೇತ್ರನ ಬಸವನಂ ಮಱೆಹೊಗಿಸಿಕೊಂಡು
ಕೋಳಾಹಳವಿದೇನೆನುತ್ತಲಾಕುಳಗೊಂಡು ತಱುಬಿ ಬೆಸಗೊಂಡನವರ ॥ ೧೦೧ ॥

ಏಕಿದಾರೇನು ಶಿವಕ್ಷೇತ್ರವಾರ್ಮೊಱೆಯಾರು
ಸಾಕು [4]ಸಾಕುಸುರಿಯನೆ[4] ಬ್ರಹ್ಮೇತಿಕಾರನು ಪಿ
ನಾಕಿ ಭವನವ ಪೊಕ್ಕ ಪಿಡಿದೊಯ್ವೆವೆನೆ ಬಾರನೇಕೆನಲು ಮುನ್ನ ಶ್ವೇತ ।
ನೇಕಾದ ಪಾಪಗಳ ಮಾಡಿ ಶಿವನಿಳಯ ಹೊಗೆ
ನೀಕರಿಸಿ ಕಾಲನೆಳೆದಳಿದನಱಿಯಿರೆ ಚಂದ್ರ
ಶೇಖರನ ಮಱೆಯೊಕ್ಕವನ ಧರ್ಮಗಾಣಿಸೊ[5]ಯ್ಬ[5]ಱಿದೊಯ್ಯೆ
ಸುಖಮಿಲ್ಲೆನೆ ॥ ೧೦೨ ॥

---

[1] ದಾವರೆ (ಕ.ಖ.ಗ.ಘ.ಛ). [2] ಲೆಮಗನೆ (ಜ). [3] ಭ (ಜ). [4] ಸಸಿನುಸುರಿ
ಯೆನೆ (ಜ). [5] ಯ್ವ (ಕ.ಖ).

ನೆರಹಿದರು ಸ್ಮಾರ್ತರಂ ಧರ್ಮಸೂಕ್ಷ್ಮಾಪರರ
ಪಿರಿಯರ್ಗಂ ಪ್ರಭುಗಳಂ ವಿಭುಗಳಂ ಪರಮಾರ್ಥ
ಚರಿತರ[1]ಗ್ರಾಹಾರದಶಕ್ಲೋಶ[1] ವರಸಮಯ ಸಂಕೇತ ಸರ್ವಜನರ ।
ಪರದೇಶ ದೇಶಾಂತರರದ ಕಪ್ಪಡೆಯರು ಪ
ನ್ನೆರಡು ಸಾಹಸ್ರ ಸಹಿತಾ ಸಂಗಮೇಶ್ವರನ
ಪರಿವೇಷ್ಟಿಸಾತನಂ ಕರೆಸಿಮೆನೆ ಕರೆಯಲ್ಕೆ ಬಂದು ನಿಂದಂ ಬಸವನು ॥ ೧೦೩ ॥

ಎಂತಾದುದೀ ಬ್ರಹ್ಮಹತ್ಯ ನಿನಗೆನಲಿದಱ
ಚಿಂತೆಯುವ ನಾನಲ್ಲ ಒಡನಾಡಿಗಳು ಜಲಾ
ಭ್ಯಂತರದೊಳೋರ್ವರೋರ್ವರ ಮೇಲೆ ಬೀಳಲವನಳಿದಾಗಘಾತದತಟಾ ।
ದಂತರದೊಳಿರ್ದನ್ಯೆಸವರೊಳಾನಿಲ್ಲ ಬಱಿ
ದಂತಿಂತು ವೈಮನಸ್ಯದೊಳೆನ್ನ[2]ಮೇ[2]ಲೆನ
ಲ್ಕಂತೆಲ್ಲ ಖೋ ಯೆನಲ್ಕಂಜಿ ಬಂದಂತರವಿದಿನ್ನು ಶಿವ ಬಲ್ಲನೆನಲು ॥ ೧೦೪ ॥

ಬಾಲಕನ ನುಡಿಯೊಳೇಂ ಬಹು ಬಳಕೆಯಿಲ್ಲದಱ
ಮೂಲವೆಂತಱಿಯಬಹುದೆಂದು ಪ್ರತಿವಾದಿಗಳ
ಕೇಳಲವರಿಂತೆಂದರಹುದಹುದು ಬಳಿಕೇನು ಬ್ರಹ್ಮೇತಿಭ್ರಮಿತ[3]ಮಾತ[3] ।
ಪಾಲಿಪರ್ನಿಮ್ಮಿಮಗೆ ಪಾಪ ಹೊದ್ದಿದೊಡೆ ಸಾ
ಕೇಳೆನೆ ನಿರೋಧವೇಕಾತನುಳ್ಳುದ ಪೇಳಿ
ಮೇಲೆ ಶಿವಬಲ್ಲನೆಂದತಿಭಾರ ಹೊಱಿಸಲ್ಕೆ ಹೊಱಿಸಬಹುದೇ ದ್ರೋಹವ ॥ ೧೦೫ ॥

ಎಂದಡವರಿಂತೆಂದರೀತನೀ ಕೊಲೆ ಹೊಲೆಯ
ಕುಂದ ಹೊಱಬೇಕೆಂಬಭೀಷ್ಟೆಯಿಲ್ಲೆಮ್ಮವನ
ಕೊಂದವನ ತೋಱಲಿಲ್ಲದೊಡೆ ಶಿವಬಲ್ಲನೆಂದೆಂಬುದಂ ತಾಂ ಬಲ್ಲಡೆ ।
ಇಂದು ಮೌಳಿಯ ನುಡಿಸ[4]ದಿರ[4]ನಲಾ ಬ[5]ಱುವಾ[5]ತ
ನೆಂದು ತನ್ನಯ ತಪ್ಪನೆಲ್ಲ ಕೈದೊಡೆದು ಹೋ
ಹಂದದೊಳು ಹೋಹುದೇ ಎನಲು ಸಭೆ ನಗುತ ಲಿಂಗವ
ನುಡಿಸಲಾರಳವೆನೆ ॥ ೧೦೬ ॥

ನುಡಿಸದೊಡೆ ನೂಂಕಿ ನೂಂಕದೊಡೆ ಶಿಷ್ಯನ ಪಾಪ
ಕೊಡೆಯರಲ್ಲಾ ಜಾತವೇದಿಗಳೆನಲ್ಬಸವ
ನಡಹಾಯ್ದನೊಡೆಯರ್ಗೆ ಭಾರವೇಕಾನಿರಲು ಸತ್ಯಕ್ಕೆ ನಿತ್ಯ ನಿಜವ ।

---

[1] ಗ್ರಾಹಿತರ ದೇಶಕೋಶರ (ಜ), ಶ್ಲೋಕರ (?) [2] ಮೇನ (ಕ.ಖ.ಗ.ಪ.ಧ). [3] ನತನು (ಜ). [4] ಲದ (ಜಿ). [5] ಱುಮಾ (ಕ.ಪ.ಗ.ಖ.ಧ).

ನುಡಿಯದಿಹನೇ ಯೆನಲ್ಕಿದನೊಲ್ಲದವರಾವೆ
ನುಡಿಸಿಯಾ ನುಡಿಸಿದಡೆ[1]ಯೆಡೆ[1]ಪಾಪಕೆನ್ನ[2]ನೀವ್[2]
ಗುಡಿಗಾಡಿಸದೆ ಬಿಡುವಿರಾ ಎನಲ್ಬಿಡುವೆವೆನೆ ನುಡಿಸುವೆನೆನುತ್ತ
ನಿಲಲು ॥ ೧೦೭ ॥

ದೇವತಾಲಯವ ಶೋಧಿಸಿ ಜೀವಜಾಲಂಗ
ಳಾವುದೊಂದಿಲ್ಲದೊಲು ಪೊಱಮಡಿಸಿ ದ್ವಾರದ್ವಾ
ರಾವಳಿಯ ಮುದ್ರೆ ಬಿಯ್ಯಗದೊಡರ್ಚಿ ಲಿಂಗವಂ ಮೂದಲಿಸಿ ತೋಱಿನ್ನೆನೆ ।
ಆವುದಱಿಯದ ಬಾಲನೆಂತು ನುಡಿಸುವನೊ ಬ್ರ
ಹ್ಮಾ ವಿಷ್ಣು ಜಿಷ್ಣುಗಳ ಬಗೆಯ ಬಗೆಯದ ಘನವಿ
ದಾವನಳವೈಯಲಾ ಸಿಕ್ಕಿದನು ಶಿಶು[3]ವೇಳೆಗಳಿಹವೆ[3]ನುತಿರ್ದುದು ಸಭೆ ॥ ೧೦೮ ॥

ಮಂಗಳಮ ನುಡಿಸುಹಕೆ ಘನತೆಯಂ ಕರೆಯೆ ಗಗ
ನಾಂಗಣಕೆ ಕೈನೀಡುವಂತುಭಯಕರವೆತ್ತಿ
ಲಿಂಗದ ಮಹಾತ್ಮೆ ಕೈಯಡಕವಾದೊಲು ಕರಕಮಲವ ಸಂಪುಟಗೈಯ್ಯುತ ।
ಸಂಗಶರಣಾಗು ಶರಣಾಗಿವರ್ಗಳುಪಟಳಿಸು
ವಂಗಕಾನೊಳಗಲ್ಲ ನೀ ಬಲ್ಲೆಯೆನುತ ಸಾ
ಷ್ಟಾಂಗವೆಱಗಲ್ಕೊಳಗೆ [4]ಓ[4]ಂಕಾರ ಬ್ರಹ್ಮನಾದಂ ಪೊಣ್ಮಿತೇಂ ಪೊಗಳ್ವೆನು ॥೧೦೯॥

ಜಯತು ಜಯ ಶರಣಾಗತಮಳರಕ್ಷಾಮಣಿಯೆ
ಜಯತುಜಯ ಭವ ವಚನದೋಱೆನಲ್ಕಾನಾದ
ನಿಯತ ಲಿಂಗದೊಳಿರ್ದು ನಿಜವೇಳಿತಾ ಬ್ರಹ್ಮಹತ್ಯದೋಷಿತ ತಮ್ಮಲೆ ।
ಐದನೆ ಜನಾರ್ದನ ಪ್ರಭುಗಳ ಮಗಂ ಕೃಷ್ಣ
ನೈದೆ ಬಂದನ [5]ಬಿರ್ದ್ದ[5]ಡವ ಸತ್ತ ಬಸವನು ವಿ
ಜಯವಿಜಯವಿಜಯನೆಂದೆನುತ್ತಿರ್ದುದಾ ಲಿಂಗ ವಚನ ಜಗವಱಿಯಲಂದ
॥೧೧೦॥

ಶಿವಪುರಂ ಪೊಕ್ಕ ಯಮದೂತರಂ ಬೆನ್ನಟ್ಟಿ
ಶಿವಗಣಂಗಳು ಹೊಯ್ದು ನೂಂಕುವಂತಾ [6]ಪಾಪ[6]
ದವಿಚಾರಿಗಳ ಹುತ್ತು ಹೊ[7]ಳೆ[7]ಹೊಗಿಸಿ ನೂಂಕಿತಾ ಧರ್ಮ ಶಿವಭಕ್ತರ ಸಭಾ ।
ಶಿವ ಶಿವ ಮಹಾದೇವ ಆಹಾಹಮೋಹೋಹೊ
ರವನವೀನಮ್ಮಮ್ಮ ಭಾಪು ಭಾಪೆಮ್ಮಯ್ಯ
ಸವಣಿಲ್ಲ ಪ್ರತಿಯಿಲ್ಲ ವಹುದಹುದೆನಿಪ್ಪ ಬೆಱಗಾವರಿಸಿತಖಿಲಜನವ ॥೧೧೧॥

---

[1] ಯಾ (ಖ.ಛ.ಗ). [2] ನಂ (ಕ.ಖ.ಗ.ಘ). [3] ವಾರಿಗಳವಯೆ (ಕ.ಖ.ಗ.ಛ.ಘ).
[4] ಹೂಂ (ಗ.ಘ.). [5] ಬಿದ್ದ (ಖ), ಬಿರ್ದ (ಘ.ಛ.). [6] ಕಪಟ (ಖ), ಪಂಥ (ಜ).
[7] ಳ (ಕ.ಖ).

ಏನೆಂಬ ದೆಂತೆಂಬದಾರೆಂಬೆವಂತಿಂತ
ದೇನೆಂದು ಸರಿಯಿಡುವಡುಪಮೆಗುಪಮಾತೀತ
ನೇನೊಂದು ಕಾರಣಂ ಶಿವನ ತನುವೋ ತಾನೆ ಶಿವನೊ ಶಿವಶಿವನೆ ಬಲ್ಲ ।
ಮಾನವರ್ನಾವೇನ ಬಲ್ಲೆವೀ ಘನತೆಯ ನಿ
ಧಾನಿಸಲ್ಕೆನುತಖಿಲಸಭೆ ಸಭಾಪತಿಗಳೆ
ಲ್ಲಾನಂದಿಸುತ್ತ ಪುಳಕಾಂಕುರೋತ್ಸಾಹ ತವಕಕ್ಕೆ ತರಹರಿಸದೆಲ್ಲ ॥೧೧೨॥

ಎತ್ತುವರ್ಕೆಲರು ಪದವೊತ್ತುವರ್ಕೆಲರು ಹಾ
ಯ್ದೆತ್ತಿತಕ್ಕೈಸಿ ಮುಂಡಾಡುವರ್ಕೆಲಕೆಲರು
ಮುತ್ತಿ ಮುಖನೋಡಿ ಮುಯ್ಯಾನುವರ್ಕೆಲರು ಮೂರ್ತಿಯ ಕೀರ್ತಿಪರ್ಕೆಲಬರು ।
ಹತ್ತೆ ಕೆಲರೊತ್ತಿನಲಿ ಕೆಲರಿದಿರಿನೊಳು ಕೆಲಬ
ರಿತ್ತರದಿ ನೂಕುನುಗ್ಗಾಗಿ ಕಾಣುತ್ತ ಕೈ
ವೊತ್ತು ಜಯಬಸವಣ್ಣ ನೀನು ಗುರು ಲಿಂಗವೆನುತುಘೆ ಚಾಂಗುಭಲವೆನುತಿರೆ ॥

ಅನಾದವಂ ನಾದ ಕೊಂಡೊಯ್ದು ಪರಬೊಮ್ಮ
ದಾ ನಾದಮೂರ್ತಿಗೊಪ್ಪಿಸುವಂತೆ ಭೇರಿ ನಿ
[1]ಸ್ಸಾಳ[1] ಪೊಣ್ಮಿದವು ಮಂಗಳತೂರ್ಯ ಮಸಗಿದವು ದೆನೆದೆಸೆಗೆ ಉಸುರುವಂತೆ ।
ಏನಪೇಳುವೆನು ಗುಡಿತೋರಣದ ಭಕ್ತಜನ
ದಾನಂದದಾನಂದ ಬಸವ ಕೂಡಲಸಂಗ
ತಾನೊಂದು ಶಿವಸಮಯಡಂಗುರಂ ಬೊ[2]ಯ್ದು ಪೂರ್ವಾಚಾರ್ಯನೀತನೆಂದು[2]॥

ಸಂಗಮೇಶ್ವರನ ಶರಣಾದ್ಯಪಟ್ಟಂಗಟ್ಟಿ
ಜಂಗಮಮಹಾಭಕ್ತರೆತ್ತಿ ಕೊಂಡಾಡುತ್ತ
ಮಂಗಳದ ಮಂದರಾಚಲವ ಪ್ರತಿಷ್ಠಿಸುವೊಲಾ ಜಾತವೇದಯ್ಯನ ।
ಲಿಂಗಾರ್ಚನಾಮಂಟಪಕ್ಕೆ ಬಿಜಯಂಗೈಸಿ
ಲಿಂಗಬೆಸನದೊಳು ಸುಖಮಿರುತ ತದ್ಗುರುಪ್ರಸಾ
ದಾಂಗಪ್ರದೀಪನಿರೆ ಮಹಿಮೆಗೇಳ್ದವರ ಮಾತಾಪಿತರ್ಬಂದು ನಿಂದು ॥೧೧೫॥

ಪಾತಕರ ಗೆಲಿದೆ ಪ್ರಪಂಚ ನೀನಲ್ಲಯೆ
ಮ್ಮಾತನೆಂದಡೆ ಪಾಪ ನೀ ದೈವವಗ್ರಾರ
ದಾತಗಳು ನಮ್ಮ ನಿಂದೆಯೊಳೊಂದಿಸದ ತೆಱದಿ ರಕ್ಷಿಸಿದೆ [3]ಸ[3]ತ್ತುಪುತ್ರನ ।

---

[1] ಸ್ವಾನ (ಗ. ಛ). [2] ಯ್ದುವೀತನೆ ಪೂರ್ವಚಾರ್ಯನೆಂದು (ಜ). [3] ತ (ಗ.ಛ).

ತಕಟಿಸುವರಿಂತು ಧರ್ಮಾರ್ಥ ಮೋಕ್ಷಕ್ಕೆ
ೀತನಾದಾಗಳೇ ಎಮ್ಮ ಕುಲಕೋಟಿಗಳು
ಪ್ರೀತರಾದರು ಬಿಜಯಗೈಯಬೇಕೆಂದು ಸಾಷ್ಟಾಂಗಪ್ರಣತರಾದರು ॥೧೧೬॥

ತ್ಕಾಲೋಚಿತವಚನ—

ಒಡೆಯರು ಬಂದರೆ ಗುಡಿತೋರಣವ ಕಟ್ಟಿ, ನಂಟರು ಬಂದರೆ ಸಮಯವಿಲ್ಲ ನ್ನಿ. ಅಂದೇಕೆ ಬಾರರು ನೀರಿಗೆ ನೇಣಿಗೆ ಹೊಱಗಾದಂದು, ಸಮಯಾಚಾರ ಗ್ಗೊಳಗಾದಂದು? ಪರುಷಮುಟ್ಟಿದ ಕಬ್ಬಿಣ ಹೊನ್ನಾಯಿತ್ತು ಬಳಿಕ ಬಂಧು ಳುಂಟೆ ಕೂಡಲಸಂಗಮದೇವ. ॥ ೧ ॥

ಏತಕಾಮಾತಿನ್ನು ನೋಡಿ ಸುಖಮಿಹುದು ಪರ
ಮಾರ್ಥ ಕಾವ್ಯಾರ್ಥ[1]ಕಾಗ[1]ದು ಸಹಜ ಮೇಲೆ ದು
ರ್ಗತದಘೋರಕಾಂ ಬಹುದಿಲ್ಲ ಬಂದಡೇಂ ನಿಮಗೆ ಸುಖವಿಲ್ಲವಿದಱ।
ಭ್ರಾಂತ ಬಿಡಿಯೆಂದು ಬೀಳ್ಕೊಡಲವರು ಸಂಸಾರ
ಭ್ರಾಂತಳಿಯದಳಿಯ ಶಿವ[2]ದೇವ ಮಗಳ್ನಾಗಾ[2]ಯ
ನಾತಂಗೆ ಸೇವೆಗೋಸುಗಮಿತ್ತು ತಕ್ಕುದಂ ಕೊಟ್ಟು ಬಂದರು ಯಿತ್ತಲು ॥೧೧೭॥

ಗುರುಭಕ್ತಿ ಲಿಂಗಭಕ್ತಿಯೊಳು ತದ್ಗತಭಾವ
ರಿತನಾಗಿರುತಿರುತ ಮನಮೋಹಿತದೊಳೆನಗೆ
ರುಣಿಸಿದ ಸಂಗನಾರೋಗಿಸಲ್ಬೇಕೆಂದು ಬಾಲಲೀಲೆಯ ಭಕ್ತಿಯಿಂ।
ರವಳಿಗೆಯಮೃತಾನ್ನಮನೊಯ್ದು ಮುಂದಿರಿಸೆ
ರಿನಿರೀಕ್ಷಣವಲ್ಲದೆಯೆ ಕಿಂಚಿದರೆಯಾಗ
ರಲೇವೆ ಲಿಂಗ ಮುಖವಱಿಯೆನೆಂದದ ಮಸ್ತಕದ ಮೇಲೆ ಒಟ್ಟೆ ಶಿವನು ॥೧೧೮॥

ಕರುಣದಿಂ ನಸುನಗುತ[3]ಲೇಂ ಮಱೆ[3]ಯ ತೋಱಿತಾ
ರಲಿಂಗರೂಪಿನಿಂ ನಿಂದಿದೇನೈ ಬಸವ
ರುವಿಸಿದೆ ಲಿಂಗಮಸ್ತಕದಲ್ಲುಪಾರವನಿದಾವಾಗಮದ ಮತವೆನೆ ।
ರಮನಾರೋಗಿಸಲ್ಕಿಟ್ಟ ಸಯಿಧಾನವಿನಿ
ರೆಯಾಗದಿರಲು ಮುಖ ದಪ್ಪಿತೆಂದೀ ಮುಖದಿ
ರಿಸಿದೆನೆನಲ್ಕಿದರ್ಪಿತ ಮುಖಾರೋಗಣೆಯ ಮುಖ ಬೇಱೆ ಕೇಳ್ಪೇಳ್ವೆನು ॥೧೧೯॥

---

[1] ಕಬ್ಬ (ಜ). [2] ಸ್ವಾಮಿಮಗಳ್ನಾಗಲೆ (ಜ). [3] ಲೆವೆಮರೆ (ಘ), ಲೆಮ್ಮರೆ ಗ), ಲೆಮ್ಮಮರೆ (ಛ), ಲೇಂ ಮೋಱೆ (ಕ).

ಎಮ್ಮ ನೋ[1]ಡೀ[1] ಪರಿಯ ಲಿಂಗಾಂಗ ಮುಖವಾಗಿ
ಸಮ್ಯಕ್ಥಿವ ಜ್ಞಾನ ದರುಶನದ ಮುಖವೆ ಮುಖ
ವೆಮ್ಮವೆಂಬಾಗಳೈಮುಖ[2]ಕ್ಕೈ[2]ದು ಗಣಮುಖದಿ ನಿನ್ನ ಮನೆಗೈದಿರದೊಡೆ ।
ವರ್ಮಜ್ಞರಾವಲ್ಲ ನಿನಗದೇ ದೃಷ್ಟ ಹೋ
ಗೆಮ್ಮಯ್ಯ ಯೆಂದು ತಲ್ಲಿಂಗದೊಳು ಲೀಯವಹ
ಸಮ್ಮಂಧವಂ ಕಂಡು ಶಿವಶಿವಾ ಯೆನುತ ಕಣ್ಮುಚ್ಚಿ ಕೊಳಲೊಳಗಡಗಲು ॥೧೨೦॥

ಲಿಂಗಜಂಗಮು ಜಂಗಮವೆ ಲಿಂಗಮೆಂಬುದಂ
[3]ಸಂ[3]ಗ ಕರುಣಿಸಿದ ದೃಷ್ಟಾಂತಗಾಣಲು ಬಸವ
ಲಿಂಗ ನಿಜಗೃಹಕ್ಕೈದಿ ನೋಡಿ ಕಾಣದೆ ತಿರುಗುವನಿತರೊಳ್ಕಣ್ಣ ಮುಂದೆ ।
ಪಿಂಗಳಜಟಾಜೂಟ ವಿಮಲಭಸ್ಮೋದ್ಧೂಳ
ನಾಂಗ ರುದ್ರಾಕ್ಷಮಾಲಾಭರಣ ಸರ್ವಾಂಗ
ಲಿಂಗಮಯ ರೂಪುಗೊಂಡೈದು ಮಂಗಳಮೂರ್ತಿ ಜಂಗಮವಿರಲ್ಕಂಡನು॥೧೨೧॥

ದೃಷ್ಟಕ್ಕೆ ನಿಷ್ಠೆಗಾಣಿಕೆ ಯಿದೆಂಬಂತೆ ಮನ
ಮುಟ್ಟಿ ಸಾಷ್ಟಾಂಗ ಪ್ರಣತನಾಗಿಯಾನಂದ
ದಷ್ಟಮದದೊಳಗೆ ನಂಬುಗೆಯನಿಂಬಿ[4]ಟ್ಟ[4] ನವನಿಧಿಗಿದು ನಿಧಾನವಾಯ್ತು ॥
ಕಟ್ಟೆಗಟ್ಟಿತ್ತು ವಿಶ್ವಾಸ ಜಂಗಮಭಕ್ತಿ
ಪಟ್ಟಗಟ್ಟಿತ್ತು ತನುಮನಧನಂ ಮುಂಗುಡಿಯ
ಕಟ್ಟಿತ್ತು ಬಳಿಕದೇಂ ಪೊಗಳ್ವೆನವಗರ್ಾತ ಮಾಳ್ಪಧಿಕದಾಸೋಹದೊಳ್ಪ ॥೧೨೨॥

ಇಂತು ಗುರುಲಿಂಗಜಂಗಮ ಭಕ್ತಿವಿಶ್ವಾಸ
ಚಿಂತಾಮಣಿಯ ಪರೀಕ್ಷೆಯ ಪರೀಕ್ಷಿಪಡುಮಾ
ಕಾಂತನೇ ಬಲ್ಲನೆಂದೊರೆದ ನಂದೀಶ ಪ್ರಮಥರ್ಗೆಥಾರ್ಥವನು ಶರಣ ।
ಸಂತತಿ ಸುಚಿತ್ತದಿಂದವಧರಿಸಿ ಬಸವ[5]ನ
ಭ್ಯಂತರಂಗದ ಪರಂಜ್ಯೋತಿಯಾತನ ಮಹಿಮೆ
ಯಂತರವ ಪೊಗಳ್ವೊಡಾನೆನಿತರವನಾದೊಡಂ ಸೂಚಿತಕಥೋಚಿತವಿದು ॥೧೨೩॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದ ಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಮಹಾಕೃತಿಯೊಳಿದು ಬಸವರಾಜವಿ
ಭ್ರಾಜಿತ ಜನನ ಸಂಧಿ ಸರ್ವಮಂಗಳಸಿದ್ಧಿ ಶಿವಮಸ್ತು ಸಿದ್ಧಿರಸ್ತು ॥೧೨೪॥

---

[1] ಡಿದು (ಜ). [2] ವೈ (ಜ). [3] ಕಾಂ (ಥ.ಗ). [4] ಟ್ಟು (ಕ.ಖ.ಗ.ಘ.ಥ).
[5] ಭಕ್ತ್ಯ (ಜ)

ಆರನೆಯ ಸಂಧಿ

ಂಚನೆ—

ಗುರು ಲಿಂಗ ಜಂಗಮ ಪ್ರಸಾದ ಪಾದೋದಕದ
ಪರಮ ವಿಶ್ವಾಸವಾರಿಧಿಚಂದ್ರ ಕಲ್ಯಾಣ
ಪುರದೊಳುದಯಂಗೈದು ಕರಣಶಾಲೆಯೊಳಗೆಳೆಗಿರಣದೋಱಿದ ಬಸವಪ |

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ೀಮ ನಂದೀಶ ಪ್ರಮಥರ್ಗಮಲವಚನರಚ
ಮಹಾವಸ್ತು ವಿಸ್ತೀರ್ಣವಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ |
ಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ಮಾಮೃತಾಕೃತಿಯ ವಿಶ್ವೇಶನಮಲಪದ
ಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ||೧||

ಗಣನಿವಹನಿಶ್ಚಯಂಗೇಳಿ ನಿಮ್ಮಯ ಬಸವ
ಣಿಕೆಯನದೇನೆಂಬೆ ಸಂಗನಂಗದ ಪಂಚ
ಬಂದಡೆಱಗೆದ್ದು ನೋಡೆ ಸದ್ಭಾವನಿಷ್ಠೆಯ ನಿಜನಿಧಾನಕಂತಾ |
ಪದವೆ ಗುರುಪದಾ ಮಧ್ಯಾಂಗವೇ ಲಿಂಗ
ಮುಖವೆ ಲಿಂಗಮುಖ ಜಂಗಮಸ್ಥಲದಿ ಮೂ
ಣಿತೊಂದು ಮನ ಮುಕ್ತಿಕಾಯವಿಂತಿದಱ ಪಾದೋದಕವೆ ಪರವೆನುತ್ತ ||೨||

ಶುದ್ಧವಿದು ಸಿದ್ಧವಿದು ಶಿವಭಕ್ತಿಸೀಮೆಗೆ ಪ್ರ
ರ್ಥಫಲವೆಂದು ಪಾವನ[1]ಕೆ[1] ಪದವಿಡುವಂತೆ
ವ್ರತಚರಲಿಂಗದಂಘ್ರಿವಿಡಿದಭ್ಯರ್ಚಿಸಗ್ರಾಮೃತಭಿಷೇಕವ |
ನಯಸಾಂಗದಿಂ ಮಾಡಿ ತೀರ್ಥಾಂಬುವಂ
ದ್ಧಾತ್ಮಸರಸಿಗೆ ಸಲಕ್ಷಣಿಸಿ ಮೂರ್ಧ್ನಿನಯ
ೕದ್ಧಾರಗೈದು ಭವಬದ್ಧಾಕ್ಷರಂ ದೊಡೆವೊಲಡಿಯ ಭಾಳದೊಳಮರ್ಚುತ
||೩||

ಭಾವ ಬ್ರಹ್ಮಾವರಣಕಧಿದೈವವಿದೆಯೆಂಬ
ವಧಾನದ ಪೃಥ್ವಿಪೀಠದೊಳು ಚರಲಿಂಗ
ವನಪದವ ಹೃದಯದೊಳಹೊಱಗೆ ಸ್ಥಲವಿಟ್ಟು ನಂಬುಗೆಯನಿಂಬುಗೈದು |

---

1 ತೆ (ಜ).

ಕೇವಲಜ್ಞಾನ ಮನ[1]ಮಠ[1] ವೊಗಿಸುವಂತವರ
ದೇವತಾರ್ಚನೆಯು [2]ಭವನ[2]ಕ್ಕೆ ಬಿಜಯಂಗೈಸಿ
ತಾ ವಿಶೇಷಣ ಕ್ರಿಯಾಮಾರ್ಗಾರ್ಚನೆಯನು ಸನ್ಮಾರ್ಗಿಗಳೊಳಱಿವೊಲವರ್ಗೆ ॥೪॥

ಜಲ ಸುಗಂಧಾಕ್ಷತೆ ಸುಕುಸುಮ ಧೂಪಂ ದೀಪ
ವಳಿ ಸುನೈವೇದ್ಯ ತಾಂಬೂಲಾದಿ ನವ್ಯಮಂ
ಗಳದ್ರವ್ಯದಾಸೋಹ ಕಾರಣಾರ್ಥ [3]ಸಮಗ್ರಸಿದ್ಧಸಾಧನ ದ್ರವ್ಯವ[3] ।
ಅಳವಡಿಸಿ ಆನಂದ ಕಳೆ ವಿಜೃಂಭಿಸಿ ಲಿಂಗ
ದೊಳು ಮುಖರು ತನ್ಮುಖಾರ್ಪಿತ ಭೋಕ್ತೃ ತೃಪ್ತಿಫಲ
ಬೆಳವಿಗೆಯಶೇಷ ಪ್ರಸಿದ್ಧ ಪ್ರಸಾದಮಂ ಪಡೆದ ಪರಮಾರ್ಥ ಸಿದ್ಧ ॥೫॥

ಜಲಕೆಜಲಸ್ನಾನವಾಕಾಶವಾಕಾಶಮಂ
[4]ಕುಲವಿ[4]ಡುಹ ವೇದಕ್ಕೆ ವೇದವೋದಿಸುಹ ಶಿವ
ಕಳೆಗೆ ಕಳೆ[5]ವೆತ್ತುತಿಹ[5] ಮಂತ್ರಕ್ಕೆ ಮಂತ್ರೋಪದೇಶಮಾಳ್ಪ[6]ಱಿತದಂ[6]ತೆ ।
ಸ್ಥಲವಿಡುವರಳವೆ ಬಸವನ ಭಕ್ತಿ[7]ವಾರಿಧಿಯ[7]
ನಳೆಯಬಲ್ಲವೆ ಕವಿಗಳುಪಮಾನಮಾನಂಗ
ಳೆಗರಂಗಣದಲ್ಲಿ ಹರಿದಾಡಿ [8]ಕರಿಯಬಾ[8]ಳೆಂಬೊಲೆನುತವಧರಿಪುದು ॥೬॥

ದಾಸೋಹಕವಯವಂ ಮೂಡಿತೆನಲಿನ್ನೇಂ ವಿ
ಶೇಷಮುಂಟಾದಡಂ ಬಸವಭಕ್ತಿಯ ಬೀಜ
ಕೋಶವಾ ಬೀಜವಂ ಸುಕ್ಷೇತ್ರವಾಱುಸ್ಥಲದೊಳು ಬಿತ್ತಿ ಬೆಳೆದ ಬೆಳೆಯ ।
ಬೀಸರಂ ಬೊಗದಾ ಸದಾಚಾರಸಂಪನ್ನ
ರಾಶಿಯಂ ಗುರುಲಿಂಗ ಜಂಗಮಕೆ ಹಸುಗೆಗೊ
ಟ್ಟೀಶಭಕ್ತರ ಕರುಣ[9]ಕಾರಣದಿ[9] ಬರೆವೆ ವಿಶ್ವಾಸಾದಿ ಕುಲಸ್ಥಲವನು ॥೭॥

ಮಱವೆಯಂ ಮಱೆದನಱಿತವ ಖಂಡಿತಕ್ಕಿಕ್ಕ
ತೆಱಹಿಲ್ಲ ಲಿಂಗಜಂಗಮಭಾವವೀತಂಗೆ
ಕರಿಗೊಂಡಿತೆಂದಾತನಂ ನೀತಿ ಖ್ಯಾತಿ ಹರವರಿದು ಹರಶರಣಕುಲವ ।
ನಱಿಸಿ ನಂಬಿಸಿ ನಂಬಿ ನಚ್ಚಿ ಮಚ್ಚಿಸಿ ಭಕ್ತಿ
ಮೆಱವೆಯ ಪತಾಕೆಯಗ್ಗದ ವೃಷಭ ತಾನೆ ಯೀ
ತೆಱನಾದ ಬನ್ನೆಂದು ಕರೆದು ಕೈವೀಸುತಿಹ ಖ್ಯಾತಿಯಾತುರಕೂಟಕೆ ॥೮॥

---

[1] ಮಂ (ಕ.ಖ.ಘ.ಗ.ಥ). [2] ಗಾರ (ಜ). [3] ಸುಮಾರ್ಗಕ್ರಿಯಸಿದ್ಧಸಾಧನಗಳ (ಜ). [4] ತುಂಬಿ (ಕ.ಖ). [5] ವೇಳ್ವ (ಕ.ಖ.ಗ.ಘ). [6] ನಱಿಯುವಂ (ಘ), ನಱಿತವಂ (ಕ.ಖ.ಗ.ಥ). [7] ಭಾರತಿಯ (ಕ.ಖ.ಗ.ಥ). [8] ಕರೆಯೆಬ್ಬ್ಯಾ (ಕ). [9] ಶಾಲೆಯಲಿ (ಜ).

ಗುರುಹಿರಿಯರಾಚಾರಯುತರು ಸಮ್ಯಜ್ಞಾನ
ನಿರತಶೀಲಾಗಮ ಮಹಾವ್ರತ ಪರಾಯಣರು
ಚರಲಿಂಗ ಮುಖವಿಡಿದು ಬರತೊಡಗಿತಿರತೊಡಗಿತರ್ಚಿಸಿಕೊಳಲ್ತೊಡಗಿತು ।
ಬೆರ[1]ಸಿರ[1]ಲ್ತೊಡಗಿತನುಭವ ತೊಡಗಿತಾದ್ಯರಾ
ಚರಿತ ವೇಳಲ್ತೊಡಗಿತಖಿಳ ಶಿವಪೌರಾಣ
ಶರಧಿ ಮಥಿಸಲ್ತೊಡಗಿತಾನಂದಭಕ್ತಿರಸ ಸರಿವಳೆಗಱೆಯತೊಡಗಿತು ॥೯॥

ದಾಸೋಹ ದೇಹಗೊ[2]ಳಿ[2] ಸೋಹದಾಪ್ಯಾನ ಚರ
ವೇಷ ಮುಖವಿಡಿದು ಬರುತಿರಲಿಕುತ್ಸಾಹವಿ
ಶ್ವಾಸದಿಂ ಮಾಡುತಾಡುತ ಪಾಡುತಾಗಣಸಮೇಳಾನುಭಾವದಿಂದ ।
ತಾ ಸಮಸ್ತಾಗಮ ಸದಾಚಾರದೊಳಹೊಱಗ
ಲೇಸಾಗಿ ತಿಳಿದಾರನೆಡೆಗೈದು ಕೈಲಾಸ
ವಾಸಿ[3]ಯೊ[3]ಡಗೂಡುವಂಗಸ್ಥಲದೊಳಡಿಯಿಡುತ ಸಂಗನಬಸವನಿರಲ್ಕೆ ॥೧೦॥

ರವಿಯಸ್ತದೊಳು ಚಂದ್ರರೋಹಿಣಿಯರುದಯಗ
ಳ್ಯವಸರಂ[4]ದು ಸುಧಾಮುಹೂರ್ತತೆ[4] ವ್ಯತೀಪಾತ
ಹವಣಿಸಾ ದಿನ ಭಾದ್ರಪದ ಬಹುಳ ಷಷ್ಠಿ ಮಂಗಳವಾರ ಗೂಡಲ್ಕದು ।
ಭುವನಪಾವನ ಕಪಿಲಷಷ್ಠಿಯಂತದು ಬರಲು
ಶಿವದರ್ಶನಾಗಮಾರ್ಚನಕಾರಣಾರ್ಥಕ್ಕೆ
ವಿವಿಧ ಜನಜಾತ್ರೆ ಜಗಜಂಬೂಕವೆನೆ ನೆರೆದುದಾ ಸಂಗಮೇಶ್ವರದಲಿ ॥೧೧॥

ಆ ತಿಥಿಯ ಫಲ ವರ್ಣಿಸಲು ಶ್ರುತಿ ಸ್ಮೃತಿ ನಿಲುಕ
ವಾ ತಿಥಿಯಲಭವನರ್ಚನೆಗೈದ ಫಲವದು ನ
ಭೂತೋನಭವಿಷ್ಯತೆನಿಪಾರ್ಥಾಗಮಕ್ಕೆ ನೀಲೋತ್ಪಲ ಸಹಸ್ರಾದಿಯ ।
ಕ್ಷೇತ್ರಜ್ಞರಹ ವಿಪ್ರಸಂದೋಹ ತರಿಸವ ಪು
ನೀತಘೃತದೊಳಗದ್ದಿ ತಿಲದೊಳ್ಪೊರಳ್ಚಿಯಾ
ಭೂತನಾಥಂಗಿಂಡೆಗಟ್ಟಿ ಬಳಿಕಾ ಮಹಾಪೂಜೆಗೋಕಲ್ಪೋಕ್ತದಿ ॥೧೨॥

ಕಪಿಲವರ್ಣದ ಪಶುಗೆ ಹೊಂಗೋಡು [5]ಕೊಳಗುಗಳ[5]
ನುಪಕ್ರಮಿಸಿ ರೌಪ್ಯಷ[6]ಟ್ಫ[6]ಲದಿ ಕೊಳಗುಗಳನಿಂ
ತುಪಯೋ[7]ಗಿಸ್ಯಾ[7] ಪದಾರ್ಚನೆಗೈದು ಶಿವಸನ್ನಿಧಿಯೊಳು ಪ್ರತಿಗ್ರಹಪ್ರಾಪ್ತಿಗೆ ।

---

[1] ಸೆನ (ಕ.ಖ). [2] ಳಿ (ಕ.ಖ). [3] ಯಂವೊ (ಘ). [4] ದಪ್ಪದಾಮುಹೂರ್ತಕ್ಕೆ (ಜ). [5] ಗೋಹಳೆಯ (ಜ). [6] ಟ್ಸಥ (ಜ). [7] ಗೀಶ (ಛ).

ನೃಪ ಗೃಹಸ್ಥರ್ಕಳೀವುದು ಇತ್ತಡಾ ದೇವ
ಕಪಿಲೆಯೊಂದೊಂದು ರೋಮಕೆ ಕೋಟಿಯಜ್ಞಫಲ
ವಪಮೃತ್ಯುಹರವೆನಿಪ್ಪಾಗವಾರ್ಥದೊಳು ಮಾಡುತ್ತ ಮಾಡಿಸುತಿರಲ್ಕೆ ॥೧೩॥

ಎಂದಿನಂದದಿ ಬಸವರಾಜ ವನಕುಸುಮಗಳ
ತಂದಂದು ತನ್ಮಹಾಪೂಜೆಯಂ ಪರಿಹರಿಸಿ
ಚಂದ್ರಮೌಳಿಯ ಮಕುಟಕಳವಡಿಸುತಿರಲು ಕಂಡೆಂದುದಾ ವಿಪ್ರಾವಳಿ ।
ಒಂದೊಂದು ನೀಲೋತ್ಪಲದ ಕುಸುಮ ಪೊಕ್ಕೋಟಿ
ಮಂದರಾಚಲದಾನಗೊಟ್ಟ ಫಲವೀವ ಪೂ
ಜಿಂದಲ್ಲದಿಲ್ಲದಂ ಕೆಡಿಸಿ ಸೆದೆ ಸೊಪ್ಪೊಟ್ಟುವಜ್ಞಾನಿ ವಿಪ್ರನಿವನ ॥೧೪॥

ಕೊಂದುಹಾಯ್ಕೆಳೆ ನೂಂಕಿದಾರು ಯಿವನೆಲ್ಲಿಯವ
ಮುಂದಱಿಯ ಮೂರ್ಖ [1]ತಿಷ್ಠನ್ಮೂರ್ತಿತನು[1] ಶಿವನ
ಮಂದಿರವ ಹೊಗುವ ಮಹಪೂಜೆಗೆಡಿಸುಹನೆನುತ್ತುದ್ರೇಕಿಸುತ್ತ ಕೆಲರು ।
ಮುಂದಲೆಗೆ ಹಾಯ್ದು ಕೈವಿಡಿದು ಹೊಱಯಿಂಕೆಳೆದು
ತಂದು ಪಾತಕನಿವಂ ಪಾತಕನೆನುತ್ತೊಬ್ಬ
ರೊಂದೊಂದ ಹೊಯ್‌ಹೊಯ್ದು ಹೊರಳುತಿರೆ ಬಲ್ಲ ಭಕ್ತರ್ಪಿರಿಯರೈದೆ ಬಂದು ॥೧೫॥

ಮಂದಿಯಂ ಕಲಕಲವ ಮಾಣಿಸವದಿರ [2]ನೋ[2]ಡಿ
ಮುಂದಱಿಯಿರೆಲವೊ ಬಸವಣ್ಣ ಕಾಣಿರೊ ಈತ
ಹಿಂದೊಮ್ಮೆ ಶಿವನ ನುಡಿಸಿದನೆನಲ್ಕಾದೊಡೆಮಗೇನು ಫಲ [3]ಹುದುವಾ[3]ಳ್ಕೆಯೆ ।
ಇಂದೆಮ್ಮ ಸುಕೃತವಂ ಕಿಡಿಸಿದನದಂ ಶಿವಗೆ
ಬಂದುದಂ ಮಾಡಿಕೊಡಲನಿತು ನಿಷ್ಠಿದ್ದ[4]ರೇನೀ[4]
ವೆಂದಡೇನಹುದೆಂದು ಮಗುಳ್ದು ಖೋ ಯೆನುತ ಮಧ್ಯಸ್ಥರೊಳು ಕದನ ಗೊಳಲು ॥೧೬॥

ನೆರವಿ ನೆರೆಯಿತ್ತು ಕಾಹುರ ಮಸಗಿತೆಮದೂತ
ಹರಗಣಂಗಳ ಸಮರದಂತತ್ತಲಿತ್ತ ಬಸ
ವರಸನನ್ನವರೆಳೆಯೆ ಯಿವರು ಸೆಳಕೊಳ್ಳುತಿಹ ಸಮಯದೊಳು ಶಿವಲಿಂಗದ ।
ಶಿರದೊಳೊಗೆಯಿತು ಬ್ರಹ್ಮನಾದವದು ಬಹ್ಮಾಂಡ
ಪರಿಯಂತವೇದಿಸೆಲವೆಲವೊ ಬಸವನ ಪೂಜೆ
ನಿರುತನೀವ್ಮಾಡಿದ ಫಲಕ್ಕೆ ಫಲವೀವ ವರುಷದ ಪೂಜೆಯೆನಗೆನುತಿರೆ ॥೧೭॥

---

1 ವಿಷ್ಟನ್ಮೂರ್ತಿತನು (ಕ.ಖ.ಗ.ಘ). 2 ನೂಕಿ (ಜ). 3 ಹುದುಮಾ (ಕ), ವದುಮಾ (ಖ). ವಹುದುವಾ (ಧ). 4 ನಿಷ್ಠಾಪರಂನೀ (ಜ). ನಿಷ್ಠಿದ್ದರೆನೀ (ಧ).

ಕೈವಿಟ್ಟು ಕದನವಿಟ್ಟಾಲಿಸುತಿರಲ್ಕೆ ರವಿ
ಕೈವಲ್ಯ ಬ್ರಹ್ಮಮಗುಳ್ದಾ ಪರಿಯೆ ಸಾಱುತಿದೆ
ದೈವಸ್ವರೂಪನೀತನೆ ಯೆನುತಲಾ ಬ್ರಹ್ಮರಾಜಸಭೆ ಜಯವೆನುತ್ತ ।
ಬೈಯ್ವ ಬಾಯ್ಭಜಿಸುತ್ತ ಪೊಯ್ವ ಕೈ ಮುಗಿವುತ್ತ
ಮೈ[1]ಯಿಕ್ಕ[1] ಸಾಷ್ಟಾಂಗವೆಱಗುತ್ತ ವೈದಿಕಕೆ
ಶೈವ ಮೇಲೆಂಬ ಶ್ರುತಿಮತದಂತೆ ಬ್ರಹ್ಮ[2]ರಥವಂ[2] ಮಾಡಿದರು ಬಸವನ ॥೧೮॥

ಉತ್ಸಹದ ಗಾಲಿ ಪರಮೋತ್ಸಹವೆ ಯದಕಚ್ಚು
ನಿಚ್ಚಯಮೆ ಮೇಲುಮುಟ್ಟಱಿತ ವಿಶ್ವಂ ಕರ್ಮ
ಸಚ್ಚರಿತ ಸೂತ ಧರ್ಮಂ ಧನುರ್ದಂಡ ಸದುಗುಣ ಬಾಣನುತಿತತಿಗಳು ।
ಮೆಚ್ಚಲಗು ಗರಿ ಪುಳಕ ಪರಿವಾರವಾನಂದ
ಪೆಚ್ಚುಗೆ ಮನೋರಥಂ ಕೈಗೈದು ಬಸವ ನೆಗ
ಳ್ದಚ್ಚರಿಯನಾರೂಢ ಮಾಡಿ ರಿಪು ಸಂಶಯನಿವೃತ್ತಿಗೈದೆತ್ತಿಕೊಂಡು ॥೧೯॥

ಆಡುತ್ತ ಹಾಡುತ್ತ ಹೊಗಳುತ್ತ ಬಸವನಂ
ನೋಡುತ್ತ ಕುಣಿವುತ್ತ ಮಣಿವುತ್ತ ಬೆಱಗಿನೊಳು
ಮೂಡಿ ಮುಳುಗುತ್ತ ಗುಡಿತೋರಣಂಗಟ್ಟಿ ಮಂಗಳವಾದ್ಯಮುಸಕದಿಂದ ।
ನಾಡುಬೀಡಖಿಳಜನಜಯವೆನುತಲೀತನೇ
ಕೂಡಲಿಯ ಸಂಗನೀ ಜಾತ್ರೆಯ ಕೃತಾರ್ಥರಂ
ಮಾಡಲೀ ರೂಪಿಂದ ನೆಗಳ್ದನೆಮ್ಮಯ ಜನ್ಮಸಫಲವೆನುತಂತೆಲ್ಲರು ॥೨೦॥

ಸಂಗನೆ ಬಸವ ಬಸವನೇ ಸಂಗನೆಂದು ಎರ
ಡಂಗದಿಂ ಬಂದಿಲ್ಲಿ ಕೃಷ್ಣಾಮಲಪ್ರಹರಿ
ಸಂಗವಾದಂತೆ ಸಂಗಂ ಬಸವ ಸಂಗಂ ಸುಸಂಗವಾಯ್ತೆನುತಲಂತಾ ।
ಲಿಂಗಪ್ರದಕ್ಷಿಣದಿ ಯೀ ಜಾತ್ರೆಯೊಳಗೆ ನಡೆ
ಲಿಂಗವಂ ಮೆಱೆಸುವೆವೆನುತ್ತ ಕೊಂಡಾಡುತ್ತ
ಅಂಗಣಕೆ ತಂದು ಸುರತರುವ ಭೂಸುರರು ನೆಲಕಿಳುಹುವಂತಿಳುಹಲಂದು ॥೨೧॥

ಆನಂದವಂಕುರಿಸಲುತ್ಸಾಹವೆಲೆಯಿಕ್ಕಿ
ಜ್ಞಾನಕವಲಾತ್ತಚಾರ [3]ದಳಿರೇ[3]ಱಿ ಪುಳಕ ಸನು
ಮಾ[4]ನಮುಗುಳೇಱಿ[4] ಪ್ರಭಾಮಂಜರಿಸಿ ಸುಮನವರಳ್ದು ಹೂಮಿಡಿಗಳ[5]ಡಸಿ[5] ।

---

[1] ವಿಟ್ಟು (ಕ), ಯಿಟ್ಟು (ಧ.ಫ.ಗ). [2] ರತನಂ (ಕ.ಖ.ಗ.ಘ). [3] ದಳವೇ (ಜ). [4] ನು ಮುಗುಳೊತ್ತಿ (ಗ.ಧ.ಫ). [5] ರಿ (ಕ.ಖ.ಗ).

ಸ್ವಾನುಭಾವಿಕ ಬಲಿದು ಫಲವಾಗಿ ಭಕ್ತಹೃ
ದ್ಧ್ಯಾನಮಧ್ಯಸ್ಥಳದಿ ನೆಲೆಗೊಂಡು ಬಸವನೆಂ
ಬಾ ನಾಮಕಲ್ಪತರುವಮೃತಫಲವಿಡಿದುದಂತಾ ಶರಣಸುರಕುಲಕ್ಕೆ ॥೨೨॥

ಇತ್ತಲಾ ಜಾತ್ರೆ ತದ್ದೇಶದೇಶಕ್ಕೆ ಹರ
ಯಿತ್ತು ಘೋ ಬಸವಯೆನುತೆಲ್ಲೆಡೆಯೊಳಾತನ ಮ
ಹತ್ವತೆಯ ಪ್ರಸರಿಸುತ ಹೋದುದಂತವರೊಳಗೆ ಬಿಜ್ಜಳನರೇಂದ್ರನಾಳ್ವ ।
ಪೃಥ್ವಿಗೆ ತವರ್ಮನೆಯೆನಿಪ್ಪ ಕಲ್ಯಾಣಪುರ
ದುತ್ತಮಪರುಷಪಟ್ಟಣಂಬೊಕ್ಕು ಬಸವ ನೆಗ
ಳ್ದತ್ಯಚ್ಚರಿಯನು ಬಲದೇವದಂಡಾಧಿಪನ ಮನೆಯೋಲಗದೊಳುಸುರ್ದರು ॥೨೩॥

ಬಾಗೆವಾಡಿಯೊಳು ಮಂಡಗೆ ಮಾದರಸಗೆ ಶಿವ
ಯೋಗಿ ಯೊಬ್ಬಂ ಜನಿಸಲಗ್ರಾರದವರ ಪ್ರ
ಯೋಗದೊಳಗಿಕ್ಕಲದ ಸಂಗಮೇಶನ ಕೈಯೊಳಲ್ಲೆನಿಸಿ ಮತ್ತೆ ಶಿವನ ।
ಮೇಗುಪಾರವನೀಡೆ ಲಿಂಗ ಮುಖದೋಱಿದ ಗ
ಡೀಗ ಜಗವಱಿಯಲು ಮಹಾಪೂಜೆ ಗ[1]ದನ[1]ದೊಳು
ನಾಗಕುಂಡಲನನಿಂತೊಡನೆ ನುಡಿಸಿದ ಬಸವನೆಂದು ವಿವರಿಸಿ ಪೇಳ್ದರು ॥೨೪॥

ಬಲದೇವ ದಣ್ಣಾಯಕನು ಪೂರ್ವಪರವನಿಂ
ತೊಲಿದು ಕೇಳ್ದಾತಗಲ್ಲಿಂದ ಕೈಮುಗಿದು ಶಿವ
ನೊಲಿದನೇ ಶಿವಶಿವನಮಶ್ಶಿವಾಯೆನುತ ಮಗುಳ್ದಾದರಿಸುತೊಳಹೊಱಗನು ।
ತಿಳಿದವರ ತಾಯ್ನುಮಗೆ ಮಾತಾಮಹರ ದೆಶೆಯ
ವಳಿಯಿಂದ ತಂಗಿಯಹಳಾ ಮಹಾತ್ಮಕನ [2]ಶಿಶ್ರು[2]
ಗೆಲಸಕೆನ್ನಾತ್ಮಜೆಯ ಕೊಡುವೇಂ ಕೃತಾರ್ಥೆಯಹಳೆನುತಲಾ ಮಗಳ ಕರೆಸಿ ॥೨೫॥

ತೊಡೆಯ ಮೇಲಿರಿಸಿಕೊಂಡುತ್ಸಹ ವಿಭೂತಿಯಂ
ಪಿಡಿದು ಬಸವನ ರಾಣಿಯೆಂದು ಪಟ್ಟಂಗಟ್ಟಿ
ದೃಢಭಕ್ತನೋಲೆಮಾನಿಸರ ಪರುಠವಿಸಿ ಕಳುಹಲು ಸಂಗಮಕ್ಕೆ ಬಂದು ।
ಮೃಡಮೂರ್ತಿ ಜಾತವೇದಯ್ಯಗಳಿಗೋಲೆಯಂ
ಕೊಡಲವರು ನೋಡಿ ಪರಿಣಮಿಸಿ ಬಸವಣ್ಣಂಗೆ
ಕೊಡಲೋದಿ ನೋಡಿದೆಂತಹುದು ನಿಮ್ಮಯ ಪದವ ಬಿಡಿಸುವೆಡೆ ವಿಘ್ನವಿದೆನೆ ॥೨೬॥

---

[1] ಡಣ (ಕ:ಖ). [2] ಶಿಶ್ಯ (ಘ).

ಅಂತದಲ್ಲಲ್ಲ ಕಾಮ್ಯಾರ್ಥಕಾರಣದ ಬಹು
ಚಿಂತೆಯಿಂದಾದುದೇ ಸಂಗಮೇಶ್ವರನೆಯುವ
ರಂತರಂಗದೊಳಿರ್ದು ನಿರವಿಸಿದನೀ ನಿರೂಪಣವ[1]ನುಲ್ಲಂಘ್ಯವೇಕೆ[1] ।
ಭ್ರಾಂತು ಬೇಡೆಮ್ಮಾಣೆ ಲಿಂಗಜಂಗಮದೊಳಾ
ವೆಂತಿಹುದ ನೀ ಬಲ್ಲೆ ದಾಸೋಹಕಿದು ಮುಂದ
ಣಂತಸ್ಥಸೂಚಿತವೆನುತ್ತಲಾಜ್ಞಾಪಿಸೆ ನಿರುತ್ತರ ಹಸಾದವೆನುತ ॥೨೭॥

ಯದ್ಭಾವ ತದ್ಭವತಿ ಉರಿ ಬರಲಿ ಸಿರಿ ಬರಲಿ
ಕದುಬೇಕು ಬೇಡೆನ್ನೆ ನರರ ಬೇಡೆನು ನಿಮ್ಮ
ಪದದಾಣೆ ಲಂಘ್ಯವ[2]ಲ್ಲೆನುತವಂ ಹೊಡೆ[2] ಮುಂದಣ ಪ್ರತಿಜ್ಞಾಪದಕಿದು ।
ಮೊದಲೆನುತ್ತಿರ್ದ್ದು ಚರಣಕ್ಕೆಱಗಿ ಬೀಳ್ಕೊಂಡು
ಮದನಾರಿಸಂಗಂಗೆ [3]ನಿಂ[3]ದು ಬಿನ್ನಹಮಾಡಿ
ಸದ್ಭಾವ ಸ್ವಸ್ಥಾನಕ್ಕೈದಲುದ್ಯೋಗಿಸುವೊಲುದ್ಯೋಗಿಸಿದ ಪಯಣಕೆ ॥೨೮॥

ಬಂದೋಲೆಯರ್ಥದಿಂ ತಂದ ಚರರಾ ವಾಕ್ಯ
ದಿಂದಲಾ ಬಲದೇವಮಂತ್ರೀಶ್ವರನ ಭಕ್ತಿ
ಯಂದದೊಳಹೊಱಗನಾಚಾರನಿಱುಗೆಯನಾದಿಕುಲವನವರಲ್ಲಾಡುತ ।
ಒಂದೊಂದನೊಂದೊಂದರಂಗದಿಂದಱಿದು ಸರಿ
ಬಂದುದಂ ಕಂಡವರ ಸತ್ಕರಿಸಿಯಾನಂದ
ಸಿಂಧುಶಶಿ ತೆರಳ್ದ ಕಾರಣಸ್ಥಲಕೆ ಸತ್ಪಥಿಕ ಶಿವನಾದಿಸತ್ಪುರಕ್ಕೆ ॥೨೯॥

ಪರಮಕಲ್ಯಾಣ ಕಲ್ಯಾಣಕ್ಕೆ ನಡೆಗೊಂಡು
ದುರುತರದ ಮುಕ್ತಿಮೂಲಸ್ಥಾನಕ್ಕೈದುವಂ
ತಿರೆ ಲಿಂಗ ಜಂಗಮದ ಪ್ರಾ[4]ಣಿನಾಗಾಯುತ[4]ತ್ರಾಣನನು ವರ್ಮಸ್ಥಲಕೆ ।
ಬರಮಾಡುವೀ ಬೆಡಂಗಿನ ಮಱೆಯ ಬಳಿವಿಡಿದು
ಬರುತಿರ್ದನೇಮದೊಡೆಯರುವೆರಸಿ ಮುಂದೆ ನಾ
ಲ್ಕೆರಡು ಪಯಣಮದೆನಲು ಚರರು ಬಂದಸುರ್ದರಾ ಬಲದೇವಮಂತ್ರೀಶಗೆ॥೩೦॥

ಬರವಿಂತು ನೆರವಿಂತು ಗುರುಕರುಣವಿಂತಾತ
ನಿರವಿಂತು ಚಾರಿತ್ರವಿಂತು ಜಂಗಮಭಕ್ತಿ
ಭರವಿಂತು ಭಾವವಿಂತೊಳವಿಂತು ಹರೆಯವಿಂತಾಚಾರದೇಳ್ಗೆಯಿಂತು ।

---

[1] ವಲಂಘ್ಯಮದೇತಕೆ (ಜ). [2] ಲ್ಲೇನುವಂಹಾರೆ (ಕ.ಖ.ಗ.ಘ.ಛ), [3] ಬಂ (ಜ). [4] ಣನಾಗಾಯು (ಕ).

ಗರುವಾಯಿಕಿಂತು ಗಾಂಭೀರವಿಂತಭವನೊಳು
ಬೆರಸಿರುವುದಿಂತು ಗಣಮೇಳವಿಂತೆಂದು ವಿ
ಸ್ತರಿಸಿ ಲೋಕೋಕ್ತ ಪ್ರಪಂಚುಗಳನಳಿದಳಿಯುನಿಜಭಾವದೊಳುವೆಳೆಯೊಳು ॥೩೧॥

ಬಂದಿತ್ತು ಭಕ್ತಿಯುನ್ನತಕಾಮಧೇನು ಯಿ
ನ್ನೊಂದೆರಡು ಪಯಣದಲಿ ಮುಕ್ತಿ ಮೂರುತಿಗೊಂಬ
[1]ದೆ[1]ಂದದುತ್ಸಹದಿಂದೆ ಸಕಲಸಾಧನ ವಿವಾಹೋನ್ನತ ಸುಸಾಧನಗಳ ।
ನಂದವಡಿಸಖಿಳ ಮಿತ್ರೋತ್ತಮ ಸದಾಚಾರ
ವಂದ್ಯರಾದುಭಯಶಾಖೆಯ ಸರ್ವಪುಣ್ಯಜನ
ವೃಂದಮಂ ಕರೆಸಿ ಮಂಗಳಕೆ ಮಂಗಳಮಂಟಪವ ನೊಡರ್ಚೆ ಸಂಭ್ರಮದೊಳು ॥೩೨॥

ಗಂಗಾಧರನ ಜಟಾಜೂಟದಿಂದಿಳಿದ ಭಾ
ಗ್ಯಾಂಗನೆಯು ಭಾಗೀರಥೀನಾಮವೆಸೆವಮಲ
ಗಂಗಾಂಬಿಕೆಗೆ ಸಕಲಮಂಗಳಾಭರಣಾದಿ ಪೂಜ್ಯತೆಯನೋಜೆಯಿಂದ ।
ಸಿಂಗರಿಸಿ ಮದನಗೆ ಮಹೇಂದ್ರಜಾಲವನೊಡ್ಡಿ
ದಂಗದ[2]ಸುವಾಸಿನಿಯರುಗಳು[2] ಯೀ ಮದುವಳಿಗೆ
ಸಂಗನಬಸವನರಸಿ ಯೆಂದಕ್ಷತೆಯನಿಕ್ಕಿ ಪಾಡಿದರದೇಂ ಪೊಗಳ್ವೆನು ॥೩೩॥

ಸಾಱಿ ಶೋಭನಗಱೆದು ಗಿರಿಜೆಯೆಡೆಗೈದಿ ಯೀ
ನೀಱೆಗೈ[3]ರ[3]ತೆಯ ಕೊಂಡೀಗ ಬಾರೆಂದು ದನಿ
ದೋಱುವ ಮಹಾಭಾಗ್ಯದೇವತೆಯ ರಾಗರಸ ಭೂದೇವಕನ್ನೆಯರ್ಗೆ ।
ಮಾಱುಹೋಯಿತೊ ಎಂಬ ಬಗೆಗೆ ದಂಪತಿ ವೆಸರ
ಬೀಱುತ್ತ ಸ್ವರವೆತ್ತಿ ಪಾಡಿಪರಸುತ್ತ ನೆಯ್
ಯೋಱಿಸಿ ಪತಿವ್ರತಾಪಟ್ಟಗಟ್ಟುತ್ತ ಮದುವಳಿಗೆ ಪೆಸರಿಡುತಿರಲ್ಕೆ ॥೩೪॥

ಭಾಗ್ಯಲಕ್ಷ್ಮಿಯ ಭಾಗ್ಯದುನ್ನತೋನ್ನತದೋಲೆ
ಯಾಗಿಯಾ ಬಂದುದೀ ಹೊಱವಳಲಗೆಂದು ಸನು
ರಾಗದಿಂ ಪೇಳಲಾ ಬಲದೇವ ದಂಡಾಧಿನಾಥನಿದಿರ್ವರಲೆದ್ದೊಡೆ ।
ಪೋಗು ಸಾ ನಡೆ ಯೆಂಬ ರಭಸ ಬಾಹತ್ತರನಿ
ಯೋಗ ಪರಿಜನಪ್ರಾಪ್ತ ನಿಜವಾಹನಾರೂಢ
ರಾಗೊಡನೆ ಸಂದಣಿಪ ಗೊಂದಣದೊಳೈತಂದರಂದು ಬಸವೇಶನಡೆಗೆ ॥೩೫॥

---

[1] ರೆ (ಫ) [2] ಸೋವಾಸಿನಿಯರ (ಗ ಕ). [3] ದ (ಜ).

ಕಾಣುತ್ತ ಕರಕಮಲಮಂ ಮುಗಿದು ದಂಡಿಗೆಯ
ತಾನಿಳಿದು ಬರೆ ಬಸವ ನಿದಿರೇಳೆಯಪ್ಪಿಕೊಂ
ಡಾನನವನೀಕ್ಷಿಸುತ್ಸಹದಿ ಭಾಗ್ಯವ ಬಾಚಿಕೊಂಬಂತಿರೆತ್ತಿಕೊಂಡು ।
ಮಾನಿತ ಮಹೋಜ್ವಲನನಾ ದಂಡಿಗೆಯೊಳಿರಿಸಿ
ಭೂನುತಪ್ರಧಾನರತ್ನಂಗೊಂಡು ಬಂದು ಶಿವ
ಜ್ಞಾನಿ ಸೊಡ್ಡಳಬಾಚಿರಾಜನರಮನೆಯ ನೆರೆ ತಾ ಬಿಡಾರಂಗೊಟ್ಟನು ॥೩೬॥

ಕಾಲೋಚಿತದ ಸಕಲಮಂಗಳದ್ರವ್ಯಂಗ
ಳಾಲೋಚನೆಗೆ ಬೇಹುದೆಲ್ಲವಂ ತರಿಸಿ ಗೃಹ
ಪಾಲನೆಂದೊರ್ವ ಪ್ರಬುದ್ಧನಂ ಸೇವಿಸಲ್ತಕ್ಕವರನಳ್ಕರಿಂದ ।
ಮೇಳೈಸಿಕೊಟ್ಟು ಮುಂದೊಂದೆರಡು ದಿನದಿಂದ
ಮೇಲೆ ವೈವಾಹಸುಮುಹೂರ್ತ ನಿಶ್ಚಯಗೊಂಡು
ಲೀಲಾಪ್ರಲೋಲನೆಗಳ್ದುತ್ಸವೋತ್ಸಹದ ಸಂಭ್ರಮವನದನೇವೊಗಳ್ವೆನು ॥೩೭॥

ಉಪಚರ್ಯದೇಳ್ಗೆ ವೇಳುವಡ[1]ದೇನರಿದಾತ[1]
ನೃಪತಿ ಮಂಗಳವೇಳ್ವಡಾತ ಮಂಗಳಪುರಾ
ಧಿಪನೆನಲ್ಕುಪವರ್ಣನಮದೇನು ಮುಗಿಲ ಮುಟ್ಟಿ[2]ತ್ತಗಲವೆ[2]ನಿತೆಂಬೊಲು ।
ವಿಪುಳಸಂಪದವಿಡಂಬದ ವಿಲಾಸೋತ್ಕರದಿ
ನುಪಯೋಗಿಸಿದ ಗುಡಿಗಡಣದೋರಣದ ವಿಭವ
[3]ಸ[3]ಪರಿಜನಸಂಭ್ರಮದ ಸರ್ವಶೋಭನದ ತಾಯ್ಮನೆಯ ತವರ್ಮನೆಯದೆನಿಸಿ ॥೩೮॥

ಮಿಗಿಲೆನಿಪ ವಸ್ತುವಿಸ್ತರವಿಲಾಸೋನ್ನತದ
ಬಗೆಯ ಬಳಿವಿಡಿದು ಮದನನ ಮಂತ್ರದೇವತೆಯ
ರಗಲಕ್ಕೆ ಪ್ರತಿದೋಱುವಂತೆ ಹೊಂಗಲಶ ಕನ್ನಡಿ[4]ಯ ಬಾ[4]ಲೆಯರೆಸೆದರು ।
ನೆಗಳ್ದ ವೈಭವದ ವಾರಾಶಿ ಮೇರೆಯ ಮೀಱಿ
ನಗದೊಳುಣ್ಮುವ ತೆಱದಿ ಮಂಗಳೋತ್ಸಹವಾದ್ಯ
ನೆಗಳ್ದವೀಶನ ನಿಬ್ಬಣಂಗಱವ ವಟ್ಟೆಯಂ ನಿಜಘೋಷ ಘೋಷಿಸುವೊಲು ॥೩೯॥

ಅಲ್ಲಿ ಧರ್ಮವನಿಲ್ಲಿ ಧರ್ಮಾನುಕೂಲತೆಯ
ನಿಲ್ಲಿ [5]ಸತ್ಯವ[5]ನಲ್ಲಿ ಸತ್ಯಾಧಿದೇವತೆಯ
ನಲ್ಲಿ ತಥ್ಯವನಿಲ್ಲಿ ಸತ್ಕಳಾಪೂರತೆಯನಲ್ಲಿ ಖ್ಯಾತನ ಖ್ಯಾತಿಯ ।

---

[1] ರಿಯದೇನಾತ (ಜ). [2] ತ್ತುರಗೆಲನೆನಿ (ಜ). [3] ದ (ಜ). [4] ಗಳಬ (ಜ).
[5] ನಿತ್ಯವ (ಜ).

ನಿಲ್ಲಲ್ಲಿ ಶರಣಶಾಂತನನಿಲ್ಲಿ [1]ಶಾಂತತೆಯು[1]
ನಲ್ಲಿ ಪಾವನಕಿಲ್ಲಿ ಗಂಗೆಯಂ ಸಿಂಗರಿಪ
ರಲ್ಲಲ್ಲಿಯಾದಿ ಶಕ್ತಿಯುರುಮಾ[2]ಮಾಹೇಶ್ವರರನು ಸಿಂಗರಿಪ ತೆಱದಿ[2] ॥ ೪೦ ॥

ಮೂಲೋಕದುರುಮುಕ್ತಿಮುಖಕೆ ತ್ರಿಪುಟಿಯನು ಸ
ಮ್ಮೇಳದೊಳು ಪಟ್ಟವೇಱಿಸುವಂತೆ ನವರತ್ನ
ಜಾಲಪ್ರಭಾಬಾಸಿಗಂಗಟ್ಟಿ ಬಸವಂಗೆ ಶುಭಸಿಂಗರಂಗೊಳಿಸಿಯಾ ।
ಬಾಲೆಗುಭಯಾರ್ಥವೊಱಿಸುವೊಲಮಲ್ದೊಂಡಿಲಂ
ಲೀಲೆಯಿಂದಮರ್ಚಿ ಸೌಭಾಗ್ಯದೇಳ್ಗೆಯ ಕರ್ಣ
ಪಾಲಿಕಾದ್ಯಖಿಳಾಭರಣದೊಡಿಸಿ ಮಿಥುನ ಮಿತ್ರೋತ್ಕರದೆಶೋನ್ನತಕ್ಕೆ ॥೪೧॥

ಶುಭದುದಯುದಮೃತಕರ ಕಿರಣದೋಱಿಲ್ಕುಕ್ಕಿ
ವಿಭವದ ಸಮುದ್ರ ಪೆಚ್ಚಿದಿರ್ಚುವಂತಿದಿರ್ಗೊಳುವ
ರಭಸಮನರುಂಧತಾದರಿಸೆಕ್ಷಕನ್ಯೆಯರ ಹಸ್ತದಿಂದೀಕನ್ನೆಗೆ ।
ಸೊಬಗಿನ ಸುವಸ್ತುಫಲಗಳ ಹಲವ ಪತಿಗೆ ತೋ
ಱುಭಯಾರ್ಥಕಾರಣವ ಕೈಗೂ[3]ಡ ಬಂ[3] ದೊಲೆಸೆ
ವಬಲೆಯರ ಹೊಂಗಲಶ [4]ಕನ್ನಡ್ಯಾ[4]ರತಿವಸ್ತು ಕರವಿಡಿದುವೊಯ್ಯಾರಿಸಿ ॥ ೪೨ ॥

ಗಂಧರ್ವೆಯರ ಗಮಕಮಂ ದೇವಗನ್ನಿಕೆಯ
ರಂದಮನರುಂಧತಿಯ ಸೊಬಗ ರತಿದೇವಿಯಾ
ನಂದಮ ಶಚಿಯ ಸಗಾನಮ ಶಾರದೆಯ ವಿಲಾಸಮ ಲಕ್ಷ್ಮಿಯಚಲವಿಭವ ।
ಚಂದ್ರನರಸಿಯ ಕಳೋನ್ನತೆಯ ಗಂಗೆಯ ಭಾಗ್ಯ
ಸೌಂದ[5]ರಾಂಗಿ[5]ಗಳ ರೂಪಿಟ್ಟು ರುದ್ರಾಣಿ ಯುವ
[6]ಸುಂದರಿಯು[6] ರುದ್ರನನಿದಿರ್ಗೊಳಲು ಕಳುಪಿದೊಲು ಕಾಂತಾಕದಂಬವೆಸೆಯೆ॥

ಸರಸಿಜನ ಕೂರ್ಮನಂ ಮದನಗಣೆ ಕದಳಿ ಕರಿ
ಶಿರ ಸಿಂಹಮಧ್ಯ ಕೋಕಂ ಲತಾ ಕಂಬು ಬಿಂ
ಬುರು ಚಂಪಕೋತ್ಪಲ ತಮಾಲ ಮಕರಾನೀಕಮನ್ನಲ್ಲಿಗಲ್ಲಿಗೆಣಿಸಿ ।
ಚರಿತಭಾವಂ ಭಜನೆ ಕೆಳೆ ವಿಲಾಸಗಳ ವಿ
ಸ್ತರಿಸ[7]ಲೇ[7]ಕಿನ್ನು ವೈ[8]ದಂಬಗದೆ[8]ಯೆಲ್ಲಾಗಿ
ಶರಣರವಧರಿಪುದಂಗಜನ ಮಂಗಳಸೂಱೆಗಾರ್ತಿಯರಿದಿರ್ವಂದರು ॥ ೪೪ ॥

---

[1] ಶಾಂತಿಕವ (ಕ.ಗ.ಫ.ಥ). [2] ಮಹೇಶ್ವರರನು ಸಿಂಗರಂಗಯ್ಯಲು (ಜ). [3] ಡು (ಕ), ಡಿ (ಖ). [4] ರನ್ನದಾ (ಕ). [5] ರಾದಿ (ಥ.ಗ.ಫ). [6] ಸುಂಧರೆಯು (ಥ.ಫ). [7] ಬೇ (ಕ.ಖ.ಗ.ಫ.ಥ). [8] ಡಂಬಗಥೆ (ಗ.ಥ), ದಂಬುಗದೆ (ಫ), ಡಂಬ ಗದೆ (ಕ.ಖ).

ಆರತಿಯರಾರತಿಯನೆತ್ತುತಾರತಿಯರ
ತ್ಯಾರತ[1]ದಿ[1] ಶುದ್ಧ ಧವಳವ ಪಾಡುತೆಲ್ಲ ಶರ
ಣಾರತಾರತಿಯೆನುತ ಪರಮಾರತನ ಮಂಗಳದ ಮನೋರಥ ಮುತ್ತಲು ।
ಭೇರಿಯ ನಿನಾದಾದಿ ವಾದ್ಯ ಪಂಚಮಶಬ್ದ
ಘೋರನೆಸೆದವು ಸಕಲಪುರ ಪರಿಜನಂ ರಾಜ
ಭಾರಿಗಳು ಕರಿ ತುರಗ ವಿವಿಧ ಬಿನ್ನಣ ಛತ್ರ ಚಾಮರಗಳೊತ್ತಿ ಕವಿದು ॥ ೪೫ ॥

ರಾಜೋಪಚರಿಯ ಶುಭದೋಪಚರಿಯಪ್ರಮುಖ
ರಾಜಿಯು ಸುರಾಜಿತಕ್ಕೊಳಗಾದ ಶಿವಸಮಯ
ರಾಜನನು ಕೊಂಡು ಬರಲಾ ರಾಜಕನ್ನೆಯ ವಿವಾಹ ಮಂಟಪಕೆ ತಂದು ।
ಈಜನಾಜನ ಸಂಭ್ರಮದೊಳು ವೈವಾಹಕ
ಲ್ಯೋಜಿತ ಸುಮುಹುರ್ತದೊಳು ಉಮೆಯನೀಶಂಗೆ ಗಿರಿ
ರಾಜಧಾರೆಯನೆಱೆದೊಳೆಱೆದು ದಂಪತಿ ಸೇಸೆದುಂಬಿ ಶಿವಭಕ್ತಿಗೂಡಿ ॥ ೪೬ ॥

ಮಿಥುನಮಿತ್ರತೆಗೆ ಜಂಗಮಲಿಂಗಮುಖಸಿದ್ಧ
ಮೃತಪ್ರಸಾದವನು ಪತಿ ಪತಿಕರಿಸಿ ಕೈವಿಡಿದು
ಸತಿಗೆ [2]ಪಥ[2]ಪರೀಕ್ಷೆಗೊಡುವೋಲ್ಕೊಡಲ್ಕೈವ[3]ಶ[3]ಕ್ತಿಸಂಧಿ ಲೇಪನಮದಾಗೆ ।
ಅತಿಶಯೋನ್ನತವೈಭವದಿ ಚತುರ್ಥಿಯ ಮಾಡಿ
ಕೃತಕೃತ್ಯನಾದೆನೆಂದಡಿಗೆಱಗಿ ಬಲದೇವ
ಸುತೆಯಸುಕೃತಕ್ಕೊಪ್ಪಿಸುವೊಲು ಬಸವಂಗೊಪ್ಪಿಸುತ ಕಳುಹಿದನು ಗೃಹಕ್ಕೆ ॥೪೭॥

ಬಳುವಳಿಯ ವಸ್ತುವಾಹನವನೊಪ್ಪಿಸಿ ಮಗಳ
ನಳಿಯನಗ್ರಜೆಗೆಱಗಿಸುಭಯೋಪಚಾರದಿಂ
ಬಳಿಕವರನಲ್ಲೊಂದೆರಡು ಕಾಲವಿಪ್ಪಂತೆ ಬೇಡಿಕೊಂಡಿಸಿದ[4]ರಿರೆ[4] ।
ಬಲದೇವ ಮದುವೆಯಂ ಮಾಡಿ ಕೆಲ[5]ವಾನ್ದಿನ[5]
ಕ್ಕಳಿದಡಾ ಪದವ ಬಸವಂಗಿತ್ತರೆಂಬ [6]ಕೃ[6]ತಿ
ವಳಕೆಯುಂಟಂತಲ್ಲವಿದು ಚನ್ನಬಸವೇಶನಮಲವಚನೋಚಿತೋಕ್ತಿ ॥ ೪೮ ॥

ಕಾರಣಿಕತಾ ಮುನ್ನ ಕರಣಂಗಳಾಶ್ರಯವ
ಸಾರಿದನೆನಿಪ್ಪ ವಚನಾರ್ಥದೇಳ್ಗೆಯ ಶಬ್ದ
ಸಾ[7]ರಹೃತ್ಸ[7]ರಸಿರುಹ ಕುಟ್ಮಲವಿಕಾಶ ರವಿಚಕ್ರಾಕೃತೀ ಕೃತಿನುತಿ।

[1] ವ (ಕ.ಖ). [2] ಪತಿ (ಜ). [3] ಭ (ಕ). [4] ರಿಗೆ (ಫ), ಡಿರೆ (ಜ).
[5] ವಾಳ್ದಿನ (ಕ.ಖ.ಗ.ಫ), ವಾಳಿದಿನ (ಫ). [6] ಶ್ರು (ಜ). [7] ರ್ಮಹತ್ಸ (ಕ.ಖ).

ಸೇರುವೆಯ ಕುಣಿಕೆಯಾ ಬಲದೇವ ಬಸವನಾ
ಚಾರದಾಸೋಹಕ್ಕೆ ತಕ್ಕುದಿತ್ತಿರಿಸಲಿರು
ತಾ ರೂಢಿಯೊಡೆದು ಶರಣಪ್ರಸಂಗದೊಳು ಸಂಗನಬಸವನಿರುತಿರಲ್ಕೆ ‖ ೪೯ ‖

ಆದಿನಂದೀಶಂಗೆ [1]ಶಿವ ಸೇವೆಯಂ[1] ಕೂರ್ತು
ಆದಿ ಸಿದ್ಧದೊಳು ಮದುವೆಯ ಮಾಡಲಿವರೊಳು ವಿ
ಭೇದವಿಲ್ಲದೆ ಭಕ್ತ ಭಕ್ತಿಯೆಂದವು[2]ಳ್ವ[2]ಚನ ವಶಿಸಿದೊಲು ಸೋಹದಾಸೋ।
ಹಾದಿ ಒಡಗೂಡಿದಂತಿವರು ಚರಲಿಂಗ ಸಿರಿ
ಪಾದ ಸೇವಕರಾಗಿರಲು ಕಂಡು ಶಿವಜ್ಞಾನ
ವೇದ್ಯ ಸೊಡ್ಡಳಬಾಚಿದೇವ ಮನವೆರಸಿರುತಲನುಭವದೊಳೊಂದು ದಿವಸ ‖ ೫೦ ‖

ತಟ್ಟುಮುಟ್ಟಿಲ್ಲದ ಸದಾಚಾರ ಸಂಪದದ
ಕಟ್ಟಾಣಿ ನೀ ನಿನ್ನ ಮನವಚನ ಶಿವಪದವ
ಮುಟ್ಟಿಹುದು ಕಾಯಕಮದೊಂದಿಲ್ಲ ಸ್ವಾರ್ಜಿತಂ ಶುದ್ಧ ಪಿತೃಧನ ಮಧ್ಯಮ।
ಕಷ್ಟವನ್ಯಾರ್ಜಿತದಿ ಕಷ್ಟ ಸ್ತ್ರೀಸಂಬಂಧ
ಮುಟ್ಟಿ ಬಹ ಧನವಧಮವೆಂದು ಲೋಕೋತ್ತಮರು
ಮುಟ್ಟರಂತಾಗಿ ಕಾಯಕವೆ ಕೈಲಾಸದ ವಿಲಾಸವಂತಿದು ನಿಮಿತ್ತ ‖ ೫೧ ‖

ಶ್ರೀಕರಣವೆಮ್ಮದಾ ಕರಣಶಾಲೆಯ ಹೊಕ್ಕು
ನೀ ಕಲುವೆಯಂ ಬರೆವುತಿರಲಿರ[3]ಲು[3] ಬಲಿದತಿವಿ
ವೇಕವಹುದದಱ ದೆಶೆಯಿಂದರಸು ಮನ್ನಿಸುವನಧಿಕಧನವಾರ್ಜಿ[4]ತ[4]ಹುದು।
ಬೇಕಾದ ಪರಿಯ ದಾಸೋಹಕಾಶ್ರಯವಹುದು
ಸ್ವೀಕರಿಸೆಥೋಕ್ತಮಂ ಇದನೆಂದು ಬಸವೇಶ
ನಾ ಕರುಣಕಾರಣಪುರುಷ ಕರಣಶಾಲೆಪ್ಪೊಗಿಸಿದ ಶಿವನಿರೂಪರೂಪ ‖ ೫೨ ‖

ಬರೆವ ಬಾಜಿಸುವನೋಜಿಸುವ ಸಮ್ಯಜ್ಞಾನ
ಚರಿತಗೇನರಿದಾ ವಿಧಾನದೊಳು ತದ್ಗತಾಂ
ತರನಾಗಿ ಕರಣಕಾಯಕದ ಕೈವಿಡಿದು ಬಂದುದನು ತಾನಂದಂದಿಗೆ।
ಚರಲಿಂಗಕರ್ಪಿಸುತ್ತಿರೆ ಮುನ್ನ ತನ್ನೊಡನೆ
ಹರ ಕಳುಹಿದೇಳುನೂಱಪ್ಪತ್ತು ದೇವಗಣ
ಚರಿಸಿ ಬೆರಸಲ್ತೊಡಗಿ[5]ತೇನಾ[5]ನು ವ್ಯಾಪ್ತಿಯ ವಿಡಂಬದಂಬರವಱಯೊಳು ‖ ೫೩ ‖

---

[1] ಸೇಸೆಯಂ ಶಿವ (ಜ). [2] ಲವ (ಗ.ಖ). [3] ಲಿ (ಕ.ಖ.ಗ.ಘ.ಥ). [4] ತಿ (ಘ), ತವ (ಕ.ಖ.ಗ). [5] ತೆನ್ನ (ಕ.ಖ).

ಆ ಗಣಸಮೇಳೋತ್ಸವಕ್ಕೆ ತನುಘನತೆಯುಂ
ಟಾ ಗಣಸುಮೇಳಸುಮನಕ್ಕೆ ಸಮಧನ ನೆರೆಯ
ದಾಗಣೇಶ್ವರಭಾವಿಸ[1]ಲ್ಭಾ[1]ವ ಶಿವಲಿಂಗ ಭಾವದೊಳಗೆರಕವಾಗೆ।
ಶ್ರೀಗಳನು ಕಲ್ಪಿಸಲು ಕಲ್ಪಾಂತನಿ[2]ಧಿಯತಿಶ[2]
ಯೋಗದೇವತೆ ನಿಂದು ನಿಜವೇಳಿ ನಿರ್ಬಂಧ
ಸಾಗರವ ದಾಂಟಿಸೀ ಶರಣಯೋಗಕ್ಕೆ ಸಲಿಸೆನೆ ಲಿಪಿಯ ಕಲ್ಪಿಸಿದನು ॥ ೫೪ ॥

ಕಲ್ಯಾಣಪುರದೊಳೆಸೆದಿಪ್ಪ ಬಿಜ್ಜಳಕ್ಷೋಣಿ
ವಲ್ಲಭನ ಸಭೆಯೊಳಿದ ಹಾಯ್ಕೆಂದು ಯಕ್ಷಸಾ
ಕಲ್ಯನೊಬ್ಬನ ಕರೆದು ಲಿಖಿತಮಂ ಕೊಟ್ಟೀಶನಟ್ಟಲದ ಕೊಂಡು ಬಂದು।
ಅಲ್ಲಿಹಾಯ್ಕಿದನೆಂದು ನಂದೀಶ ಪ್ರಮಥರೊಳು
ಸೊಲ್ಲಿಸಿದ ಕಾರಣಾರ್ಥದ ಕಥಾಕುಣಿಕೆಯಿದು
ಸಲ್ಲೀಲೆಯಿಂ ಸದಾಚಾರಸಂಪನ್ನ ಸದ್ಭಕ್ತರೊಲಿದಾಲಿಸುವುದು ॥ ೫೫ ॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿತ ಕಥಾಮೃತಾರ್ಣವದೊಳಿದು ಬಸವವಿ
ಭ್ರಾಜಿತಾಗಮಸಿದ್ಧಿ ಕಲ್ಯಾಣಪುರಕೆ ಕೈವಲ್ಯಕಳೆ ಸಾರ್ದ ಸಂಧಿ ॥೫೬॥

———

[1] ದ್ಭಾ (ಕ.ಖ.ಗ.ಘ.ಛ). [2] ರಿಯತಿಶ (ಜ).

ಏಳನೆಯ ಸಂಧಿ

ಸೂಚನೆ—

ಈಶನಟ್ಟಿದ ಕಾರಣದ ಲಿಪಿಯ ಚಪ್ಪನ್ನ
ಭಾಷೆಯವರಱಿಯದಿರಲದ ನೋಡುತೋದಿ ಭೂ
ಮಿಾಶಂಗೆ ತಿಳುಪಿ ಭಂಡಾರದಧ್ಯಕ್ಷಮಂ ಪಡೆದ ಸಂಗನಬಸವನು ।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಪ್ರಮಥರವಧರಿಸಿ ಕಲ್ಯಾಣದರಸಿನ ಪದವ
ಹಿಮವಂತ ಸೇತುಮಧ್ಯದ ರಾಜರೆನಿಪವ
ರ್ಗಮತಮಗೆ ಕಪ್ಪಕಾಣಿಕೆ[1]ದೆತ್ತು[1] ಕೈಸೆರೆಗಳೆತ್ತೋಲಗಿಸುವ ಭೂಮಿ ।
ರಮಣರಗಣಿತಮಕುಟವರ್ಧನರು ಜಯ ಜೀಯ
ನಮೊ ಯೆನುತ ಕೈಯೆತ್ತಿ ಪೊಡಮಡಲು ಸಿಂಹಾಸ
ನಮನಡರ್ದೊಪ್ಪಿ ಕುಳ್ಳಿರ್ದನೋಲಗಗೊಟ್ಟು ಬಿಜ್ಜಳಮಹೀಪಾಲನು ॥೨॥

ಪದದೊಳಿಂದ್ರನ ಪಳಿವ ತೇಜಕಗ್ನಿಯ ಜಱಿವ
ಮದದೊಳೆಮನಂ ನಗುವ ಬಲ್ಪಿನೊಳು ನೈಋತಿಯ
ಬೆದರಿಸುವ ಗಾಂಭೀರಕಬ್ಧಿಪನ ತಗ್ಗಿಸುವ ಬೇಗಕನಿಲನ ಸೋಲಿಪ ।
[2][ನಿಧಿಯು][2]ನ್ನತಕ್ಕೆ ಧನದನ ನಾಸ್ತಿಕಂಗೈವ
ಸದುಭಕುತಿಗೀಶನೊಳು ಹೊಳಕೆಯೆಂಬಂತಿರ
ಲ್ಕಧಿಕ ಬಲವಂತರೊಪ್ಪಿದರು ಬಿಜ್ಜಳಮಹೀಪಾಲನೊಡ್ಡೋಲಗದೊಳು ॥೩॥

ಮಕುಟವರ್ಧನರೆಂಟು ಸಾಪಿರಮವರೊಳಡಸಿ
ಸಕಲರಾಜರ ರಾಜಪುತ್ರ ಸಚಿವರ ಮಾ[3]ನ್ಯ[3]
ಪ್ರಕರ ಬಾಹತ್ತರ ನಿಯೋಗ ದಂಡಾಧೀಶರಖಿಳ ಭಾಷಾಯುಕ್ತರ ।

[1] ಜೀತು (ಛ.ಫ.ಥ), ಬೀತು (ಕ.ಖ.ಗ). [2] ವಿಧಿತೋ (ಸ.ಪ್ರ). [3] ತ್ಯ (ಜ.ಖ.ಗ).

ನಿಕರ ಚೌಷಷ್ಠಿ ನಾನಾಕಳಾನ್ವಿತ ಪರೀ
ಕ್ಷಕರ ನಡುವೊಡ್ಡೋಲಗದೊಳೊಪ್ಪಿರಲ್ಕಾಕ
ಸ್ಮಿಕದ ಲಿಖಿತಂಬರದಿ ಭರದಿ ಬಿದ್ದಿತು ನೃಪನ ಯೆಸೆವ ಸಿಂಹಾಸನದೊಳು ।

ಆ ಲಿಖಿತವಂ ತೆಗೆದು ಚೋದ್ಯವೆಂದೆನುತ ಭೂ
ಲೋಲ ಮೂಗಿಂಗೆ ಕೈಯಿಟ್ಟು ತಾ ನೋಡೆ ಕಣು
ಕೀಲಿಸುವೊಲಾಗಲತಿ ಭೀತಿಯಿಂ ಸಚಿವ[1]⌈ವರರ್ಗ್ಗಿ⌉[1]ತ್ತರವರದನು ನೋಡೆ ।
ಅಲಿ ಸಿಡಿವಂತಹುದು ತುಟಿಮಿಡುಕ ತೆಱಹಿಲ್ಲ
ನಾಲಿಗೆಗೆ ಬಿಯ್ಯಗಂ ಹೂಡಿದಂತಹುದದಱ
ಮೂಲ ಲಿಪಿಭಾಷೆ ತಿಳಿಯದೆ ಬಳಲಿ ಬಲ್ಲವರ್ಗ್ಗಳೆಲ್ಲರಂ ಕರೆಸಿ ತೋಱೆ ॥೫॥

ಗಣಕರಂ ಹಳಿದು ಲಿಖಿತರ ಮೀಱಿ ಮುಹೂರ್ತಕರ
ಡೊಣದು ವಿದ್ವಾಂಸರಂ ವಿಧಿಗೊಳಿಸುತಾಗಮಿಕ
ರೆಣಿಕೆಗೊಳ್ಳದೆ ಕವಿಗಮಕಿವಾದಿವಾಗ್ಮಿಗಳ ಭ್ರಮೆಗೊಳಿಸಿ ಬಲ್ಲವರನು ।
ತೃಣಮಾಡಿ ಸಾಮರ್ಥ್ಯ ಸಟೆಯೆನಿಸಿ ತಾರ್ಕಿಕರ
ನಣೆದು ಗಣಿತಜ್ಞರಂ ಗುಣಗೆಡಿಸಿ ಲಿಪಿಯ ಲ
ಕ್ಷಣದಕ್ಷರಂ ದಿಳಿಯದೆಲ್ಲರಂ ಅಲ್ಲೆನಿಸಿ [2]ಓಡಾ[2]ಡಿತೇಂ ಪೊಗಳ್ವೆನು ॥೬॥

ಲಾಳ ಗುಜ್ಜರ ಡಿಳ್ಳಿ ವಾಳ ಕಾಶ್ಮೀರ ಬಂ
ಗಾಳ [3]ಮಱಂಗುಲ[3] ಗೌಳ ಕನ್ನೋಜ ಘೋಟ ನೇ
ಪಾಳ ಕೊಂಕಣ ತುರುಕನಾರ್ಯನಾಹಿರನಂಗವಂಗ [4]ಜೋನ್ಯಯ[4] ಜಿನ್ನನೂ ।
ಚೋಳಿಯ ಮಹಾಘೋಟ ತುಳವ ಸಿಂಹಳನು ಮಲೆ
ಯಾಳನೊಡ್ಡಿಯ ತೆಲುಗ ಕರ್ಪರ ಕಳಿಂಗ [5]ಮಲು[5]
ತಾಳ ಸಂಸ್ಕೃತ ಪ್ರಾಕೃತಾದ್ಯುಳಿದ ಚಪ್ಪನ್ನಭಾಷೆಯುಕ್ತರಿಗಱಿಹಲು ॥೭॥

ಗಗನಲಿಪಿ ಧೂಮಲಿಪಿ ಜಲಲಿಪಿ ಪಿಶಾಚಲಿಪಿ
ಖಗಲಿಪಿ ಕದಂಬಲಿಪಿ ಕಲ್ಪಲಿಪಿ ಕಾಕಲಿಪಿ
ನಿಗಮಲಿಪಿ ನೀಲಲಿಪಿ ಚಕ್ರಲಿಪಿ ಲೆಖ್ಖಲಿಪಿ ಬಿಂದುಲಿಪಿ ದರ್ಪಣಲಿಪಿ ।
ಭೃಗುಲಿಪಿ ಪ್ರಬಂಧಲಿಪಿ ಶಸ್ತ್ರಲಿಪಿ ಚಿತ್ರಲಿಪಿ
ವಿಗತಲಿಪಿ ರಣಲಿಪಿ ಶಿಲಾಲಿಪಿ ಶಿರೋ[6]ರ್ಲಿಪಾ
ದ[6]ಗಣಿತ ಮಹಾಲಿಪಿಗಳೊಳಗಱಿದು ತಿಳಿಯದಳಲುತಲಿರ್ದು ಬಳಲಿ ಮತ್ತೆ ॥೮॥

---

[1] ರರಿಗಿ (ಸ.ಪ್ರ). [2] ಸಿರೋಡಾ (ಜ), ಸರೋಡಾ (ಘ), ಸಲೋಲಾ (ಘ).
[3] ಮಂಗಳ (ಕ.ಖ.ಗ.ಘ.ಥ). [4] ಜೊನೆಗ (ಜ). [5] ಮುಖ (ಜ). [6] ಲಿಪಿಯುಳ
(ಕ.ಖ.ಘ.ಥ.ಗ).

ಬಾಜಿಪ ಭ್ರಮೆಗೊಳುವರೆಮಗೆ ತನಗೆಂದು ನುಡಿ
[1]ಯೋಜನೆಯಪೇಳ್ವರತ್ರಿಧಾತ್ರ ಕಲ್ಪಿ[1]ತ ಲಿಪಿಸ
ಮಾಜ ಸಂಕೇತಂಗೆ ಪ್ರೌಢಿಯನುಲೋಮಮಂ ವಿಲೋಮ ಜಾಣ್ಜಾ[2]ಣ[2]ಱಿತದ
ರಾಜಸೇವ್ಯರ ಹಲವು ಭಾಷೆಗಳ ಯುಕುತಿಸಂ
ವಾಜದಿಂ ತಿಳಿದು ತಿಳಿವಿಲ್ಲದೆಲ್ಲಂ ಬಯಲ್ಗೆ
ಗಾಜಬಾಜೆನುತೊರ್ಬರೊಂದೊಂದ ನಾಡೆ ಕಂಡವನೀಶನಿಂತೆಂದನು ॥೯॥

ಹಲವನಾಡೆ [3]ಹುದಿಲ್ಲ[3] ಕಾರ್ಯ ಹೋ ಹೋ ಸಾಕು
ಗಲಭೆಯೇಕೀ ಲಿಪಿಯನೋದಿ ತಿಳುಪಿದಡೆಮ್ಮ
ಬಲಕೆ ರಾಜ್ಯಕ್ಕೆ ರಣಭಂಡಾರವೆಲ್ಲವಕ್ಕಧಿಕತ್ವದೊಡೆತನಕ್ಕೆ ।
ಸಲುಗೆವೇಳ್ದಂಡಾಧಿನಾಥಪದಮಂ ಕೊಟ್ಟು
ಸಲಹುವೆ ನೆನಲ್ಸಾಧ್ಯವಲ್ಲೆಮಗೆ ಸಾಧಿಸೀ
ಫಲವ ಪಡೆಯಲು ಬಲ್ಲ[4]ಗಲ್ಲದೀ[4] ಲಿಖಿತ ದೈವಿಕಮಾರ್ಗತಿಳಿಯದೆನಲು ॥೧೦॥

ಸಂಗಮದೊಳಿರ್ದು ಕಾರಣದಿಂದೆ ಬಂದು ಕರ
ಣಂಗಳಾಶ್ರಯದಲ್ಲಿ ಬರೆವುತಿಹ ಬಸವೇಶ್ವ
ರಂಗೆ ಭಾವದೊಳಿರ್ದು ಶರಣನಾಕಾರದಿಂದೆಂದುದಶರೀರವಾಕ್ಕು ।
ಲಿಂಗಜಂಗಮದಿರವ ನೀನಱಿದು ಮಾಳ್ಪ ಲೇ
ಸಿಂಗೆ ತಕ್ಕಧಿಕ ಫಲಬೇಕೆಂದು ಲಿಖಿತಮಂ
ಸಂಗಮೇಶ್ವರಲೀಲೆಯಿಂದಟ್ಟಿದೋಲೆಯಿದು ಸಾಧ್ಯ ನಿನಗೋದೆಂದೆನೆ ॥೧೧॥

ಭಾವಮಂ ಬಾಸಣಿಸಿತಶರೀರವಾಕ್ತನುವ
ನಾವರಿಸಿ ಗದ್ಗದಂ ರೋಮಾಂಚಪುಳಕಪ್ರ
ಭಾವ ಪಸರಿಸಿದುತ್ಸಹದಿ ಶಿವನಸೋಂಕು ತನ್ಮನತೀವಲಂತಾತನು ।
ದೇವಗಣರೂಪ ತಾನಾಗಿಯಾ ಲಿಖಿತದನು
ಭಾವಜೀವಾತ್ಮಂತರಾತ್ಮಪರಮಾತ್ಮ ತ್ರಿಷು
ಭಾವದೊಳಗೆಱಗಿತ್ತು ಬೆಱಗು ಬೆಳಗಾದಂತಿರಲು ಬಸವರಾಜನೆಂದ ॥೧೨॥

ಇದುಸಂಗಮೇಶ್ವರನಿರೂಪವಲ್ಲದೆ ಮಾಣ
ದದಱ ದೆಸೆಯಿಂ ಸೂಕ್ತಸೂಕ್ತವಾಗಲಿ ಲಿಪಿಯ
ಕದುಬುವೆನೆನುತ್ತ ತನ್ನೊಡನೆ ಬರೆವವರೊಳೊಯ್ಯನೆ ಪ್ರಸಂಗಂದೆಗೆದನು ।

---

[1] ಯೋಜಿವೇಳ್ಪರತ್ರಿಧಾಕ್ತತಕಲ್ಪಿ (ಗ), ಯೋಜಿವೇಳ್ವರರಿಧಾತ್ರಕಕಲ್ಪಿ (ಕ), ಯೋಜಿಯೋಳ್ಪರ ... . (ಛ). [2] ತ (ಜ). [3] ಡೆಹುದ್ದಿಲ್ಲ (ಗ), ಡೇನಹು ದಿಲ್ಲ (ಘ). [4] ನೀ (ಘ).

ಒದವಿದಾಕಸ್ಮಿಕದ ಲಿಪಿಯೋದದೆಲ್ಲ ಬರಿ
[1]ಯೊದೆದು[1]ಕೊಳುತಿದೆ ನಾ[2]ವಿದೆಲ್ಲರೋಪಾದಿ ನೋ[2]
ಡಿದಡೆ ತಪ್ಪಿಲ್ಲಲೇ ಯೆನಲಟ್ಟಹಾಸದಿಂ ನಗುತ ನಾಸ್ತಿಕರೆಂದರು ||೧೩||

ತಾಗಡೀ ಲಿಪಿಯ ನೋದೀ ರಾಯನಂ ತಲೆಯ
ದೂಗಿಪತಿಬಳನಿದೆಲ್ಲಿರ್ದಪನೊ ನಾವಱಿಯೆ
ವೀಗಣಕನೀಸುದಿನದಾವ ಮೊಱದಿಂಧ ಮುಟ್ಟಿರ್ದನೋ ಮೈದೋಱದೆ |
ಆಗಲದಕೇನು ಕುಂದೆಮ್ಮೊಳಾರೊಬ್ಬನಱಿ
ದಾಗಳಾವೆಲ್ಲಱಿದೆವೆಂದು ಹಾಸ್ಯದೊಳು ಶಿರ
ದೂಗುತೊಡನಾಡಿಗಳು ಕೈಹೊಯ್ದು ಗುರ್ಬಿನಿಂ ನಗುತ ಮಗುಳ್ದಿಂತೆಂದರು ||೧೪||

ಅಸಮಾನವೀ ಜಗಕ್ಕೆಲ್ಲೆಮ್ಮ ಕರಣದವ
ರುಸುರಲಮ್ಮರು ದೇವಲಿಪಿ ನರರ್ಗ[3]ಬ್ಬದೆಂ[3]
ತೆಸಗುವೈ ನೀನಿದಕ್ಕನುಮಾನಮೇನು ನೀ ಹಸುಳೆ ಮುಂದಱಿಯೆ ಮೇಲೆ|
ಕಿಸು[4]ಗು[4]ಳಂಗಲಸದಿರು ಈ ಸಭೆಯೊಳೆಲ್ಲೆಮ್ಮ
ನಸಬಳರಮಾಡಿ ಮಾನಾಭಿಮಾನಂಗೊಂಡು
ನುಸುಳ ಬಂದೆಯ ಸಾಕು ತರುವಲಿತನಕ್ಕೆ ತಕ್ಕುದ ನೆನದೆ ಸಾರೆಂದರು ||೧೫||

ಬಸವ ಬಸವರಸ ಈ ರಾಜಸಭೆಯೊಳಗಾರು
ಮಿಸುಕಲಮ್ಮರು ಕೇಳು ಖೂಳ ಕಾಳ್ಮಾತು ಮರು
ಳಿಸಗಿತೇ ನಿನಗೆ ಭಯವಿಲ್ಲಲಾ ಬಯಲ ಬಾಯ್ಕುಡುಕತನಕೊಂದೊಂದನು |
ಪಸರಿಸದಿರರಸುವಾನಿಸರು ಕೇಳಿದಡೆ ಕೊಂ
ಡೆಸಗುವರು ರಾಜಂಗೆ ರಾಜನಿದಿರೊಳ್ಬಳಿಕ
ಸಸಿನ ಬಾರದು ಶಠಕರೆಂದೆಮ್ಮ ಕರಣಶಾಲೆಯನೆ ನೆರೆಕಾಕೆಂಬರು ||೧೬||

ವಾಸಿಗಂಕವ ಕಾದ ಪೋಗಿ ಕಳನೇಱಿ ಮುಂ
ತಾಸಱವನಱಿಯದವ ಸಾವಿಗಂಕದ[5]ಗುದವ[5]
ಮೂಸಿದಂತಹುದು ಬಳಿಕೇನು ಆ ಲಿಪಿಯೆಮ್ಮ ನೊಸಲ ಲಿಪಿಯಂ ತೊಡೆವುದು|
ನೀಸರಿದು ಪೋ ಪೊ ಸಾಕೈ ನಿನ್ನ ಬಲ್ಲತನ
ಲೇಸಲ್ಲವೆಮಗುಸುರದಿರು ಯೆಂದಡೆಂದ ಬಱಿ
ಕ್ಲೇಶ ಹಲವೆಣಿಕೆ ನಿಮಗೇಕೆ ಪುದುವಾಳ್ಕೆಯೇ ಯೆನುತ ಮಗುಳಿಂತೆಂದನು ||೧೭||

---

[1] ಯೋದೆಂದು (ಖ). ದೊದೆದು (ಜ). [2] ನಾವೆಲ್ಲರೋಪಾದಿ (ಖ), ನಾವಿದೆಲ್ಲ ಕೋಪಾಗಿದಿನೋ (ಫ). [3] ಬ್ಬವಂ (ಕ.ಖ.ಗ.ಘ.ತ), ರ್ವದೆಂ (ಜ). [4] ಗ (ಫ). [5] ಗುವದವ (ಗ).

ನಾಡನಾಡಲದೇಕೆ ನಗಲೇಕೆ ನಿಮ್ಮೊ[1]ಳದ[1]
ಕೂಡಿಕೊಳಲೇಕೆ ನಾಸ್ತಿಕವೇಕೆಯಾ ಲಿಪಿಯ
ಗೂಢಗೆಡಿಸುವೆನಲ್ಲ[2]ದೆ [ಯೆ]ಬಿಡೆನು ಯೆಂಬ ಸಂಪಾದನೆಯು ಎಡೆವಾತನು[2] |
ನೋಡಿ ಕೊಂಡಾಗಳಾ ಕೆಲ ವಿಪ[3]ರಿಗಳು[3] ನೃಪನ
ಕೂಡೆಥಾಕಥನಮಂ ಪೇಳೆ ಕರೆಕರೆದಾವ
ನಾಡಿದವನಱಿವೆವೆನೆ ಚರರು ಹಱಿತಂದು ಬಸವೇಶನಿದಿರೊಳಗೆ ನಿಂದು ||೧೮||

ರೂಢೀಶ ನಿಮ್ಮ ಬರವೇಳ್ದನೆನೆ ಎದ್ದು ನಿಲೆ
ನೋಡಿ ಬೆಱಗಾಯ್ತು ಸಭೆ ಏನಿವನ ಮರುಳುಮಾ
ತಾಡಿಸಿತೊ ಮೇಣ್ಬಲ್ಲನೋ ದೇವತಾಕರುಣವೋ ಕಾಕುವಗರಣವನು |
ಆಡುವನೊ ಯೆನುತೆಲ್ಲರಲ್ಲಲ್ಲಿ ನಿಂದು ಮಾ
ತಾಡುತಿರಲಾ ಸಭಾಶರಧಿಮಥನಕ್ಕೆ ಶಿವ
ನಾಡಿಸುವ ಮಂದರದೊಲ್ಯೆತಂದ ಬಸವರಸ ಬಿಜ್ಜಳನ ಸಮ್ಮುಖಕ್ಕೆ ||೧೯||

ನೊಸಲತ್ರಿಪುಂಡ್ರ ರುದ್ರಾಕ್ಷಿ ಮಸುಳಿಸಿದಂಗ
ವಸನ ನಡುಗಟ್ಟಿಗಮರ್ಚಿದ ಕಂಠ ಬಡವನಂ
ತೆಸೆವಂಗ ಹುರುಳಿಲ್ಲ ಹರೆಯವಿಲ್ಲರಿದಿದೇನೆಂಬಂತೆ ಭೂಪನಿದಿರ |
ಅಸಮಾಕ್ಷನಪರಾವತಾರ ಬಸವಣ್ಣ ನಿಲ
ಲೆಸುಗುಕೊಳ್ಳೀ ಲಿಪಿಯನೆನುತ ಸಚಿವರು ನಗುತ
ವಸುಧಾಧಿಪನ ಮೊಗಂ ನೋಡಿ ನೀಡಲು ಸೆಳೆದುಕೊಂಡು ಮಂಡೆಯೊಳಾಂತನು
||೨೦||

ಚಂದ್ರಿಕೆ ಸಮೇತವಾಗಿಹ ಚಂದ್ರಗೊಲಿದು ತಾ
ನೆಂದುಮಾವರಧರಿಸಿದೋಲ್ಧರಿಸಿ ಲಿಪಿಗೆ ಶರ
ಣೆಂದು ತೆಗೆತೆಗೆದೀಕ್ಷಿಸುವ ಲಕ್ಷಣಾಕ್ಷಿಗಳು ಗ್ರಹಿಸುವದನಱಿದೆಲ್ಲರು |
ಸಂದಣಿಸಿ ಸಭೆ ಕವಿದು ದಾಸ್ಥಾನ ಗಜಭಜಿಸಿ
ನಿಂದುದೋರ್ರೋರ್ವರ್ರೋರ್ವರ ನೂಂಕುತಿದು ಚೋದ್ಯ
ವೆಂದು ವಿದ್ಯಾಧಿಪರು ಅಖಿಲಭಾಷಾಯುತರಶೇಷ ಬಹುಕಾರಣಿಕರು ||೨೧||

ಹಸುಳ ಮುಂದಱಿಯ ಮೇಲಲೀ ಚಾವಡಿಗೆ ತಾನು
ಹೊಸಬನೀ ಲಿಪಿ ಲೋಕದೊಳು ಬಲ್ಲರೆಲ್ಲರಂ
ಗಸಣಿಗೊಳಿಸಿತ್ತಿದನ[4]ದೆಂತು[4] ತುಡುಕಿದನೊ ತುಟಿಮಿಡುಕುತಿದೆ ನೋಡೆಂದರು |

---

[1] ಳೊಡ (ಜ). [2] ದೊಡೆಮಾಣ್ಬನೆಂಬ ಸಂಪಾದನೆಗಳೆಡೆವಾತನು (ಜ).
[3] ರಗಳ (ಕ.ಖ). [4] ನೆಂದು (ಘ).

ವಸುಧೀಶನಂ ನೋಡುತೀತನಂ ನೋಡುತಿರ
ಲುಸುರದೊಳಗೊಳಗೆ ಗುಪ್ತದಿ ನೋಡಿಕೊಂಡದಱ
ವಿಷಯವೆಲ್ಲಱಿದು ಕೊರಳೆತ್ತಿ ಭೂನಾಥನಂ ನೋಡಿ ಬಸವರಸ ನುಡಿದ ॥೨೨॥

ವಿಷಮದೋಲಿದು ವಿರಾಜಿತ ರಾಜಶೇಖರನ
ವಿಷಯದಿನೊಗೆದುದಿದಱ ವೃತ್ತಾಂತಮಂ ದಿಟಂ
ಬೆಸಗೊಂಬೆಯಾದಡಿದಱಂತಸ್ಥವೆಲ್ಲವಂ ತಿಳಿವೆಯಾದೊಡೆ ಪೇಳ್ವೆನು ।
ವಸುಧೆಗಚ್ಚರಿ ನಿನ್ನ ಪರಮ ಸಂಪದಲಕ್ಷ್ಮಿ
ಗೆಸಕವಿದು ಬಿಜ್ಜಳನರೇಂದ್ರಯೆನೆ ಹಾರವಿಸಿ
ಬಸವ ನಮ್ಮಯ್ಯ ಪೇಳೆಂತೆನಲ್ಕೋಲೆಯನೊಡರ್ಚೋದಲುಜ್ಜುಗಿಸಿದ ॥೨೩॥

ಸ್ವಸ್ತಿ ಶ್ರೀಮನ್ಮಹಾದೇವಾಧಿದೇವಸಂ
ಸ್ತುತ್ಯ ಸಂಗಮನಾಥನನುಮತಂ ಇದು ಮಿಕ್ಕಿ
ನ ಸ್ಥಿತಿಯದೇಶ ಗಾ[1]ಥೆ[1]ಯಕನ್ಯವಾದ ಸಿದ್ಧಾಂತ ಬದ್ಧಾಂತವಲ್ಲ ।
ವಸ್ತುವಱುವತ್ತಾಱು ಕೋಟಿಯಂ ತೋಱುವ ಸು
ವಸ್ತುವಂಜನ ದೇವಲಿಪಿ ನಿನ್ನ ಭಾಗ್ಯದ ಸ
ಮಸ್ತ ಸಾರೋದ್ಧಾರ ಶಾಸನವಿದೆಂದು ಬಸವೇಶನೋದಿದನೋಲೆಯ ॥೨೪॥

ಭಾಪುರೆಮ್ಮಯ್ಯ ಕಿಱಿದೆನಬಹುದೆ ಪರುಷಮಂ
ಭಾಪುಯೆಮ್ಮಯ್ಯ ಬಾಯಿತ್ತ ಬಾಯೆಂದಪ್ಪಿ
ಭೂಪ ಸಿಂಹಾಸನದ ಬಲದ ಭಾಗದೊಳಿಂಬುಗೊಟ್ಟು ಕುಳ್ಳಿರಿಸಿಕೊಂಡು ।
[2]ಕೂ[2]ಪ ಸಚಿವರೊಳೆಂದ ನೋಡಿರೈ ಈ ಹಿರಿಯ
ಪಾಪಿಗಳೊಳಾರುವಱಿಯದ ಲಿಪಿಯನೋದಿದ ಮ
ಹಾ[3]ಪ[3]ರುಷ ಕಿಱಿದೆಯೆನೆ ನೆರವಿ ತಲೆಗುತ್ತಿ ನೆಲನಂ ಬರೆದುದೇಂ ಪೊಗಳ್ವೆನು
॥೨೫॥

[4]ಇಟ್ಟಿ[4]ಮುಱಿಯಿತ್ತು ತಾರ್ಕಿಕರೊಡಲ ಶೂಲದಿಂ
ದಿಟ್ಟಂತೆಯಾ ಪ್ರಭಾಕರರ್ಗಳಿದೆ ಚಾರ್ವಾಕ
ನೆಟ್ಟನುರಿಗುತ್ತಿದಂತಾರುಹತ ಬೌದ್ಧ ಬ[5]ರು[5]ಬೋಧಕರ ಬದಿಯುಲಲಗ ।
ಹೆಟ್ಟಿದಂತಾಯ್ತು ನಾನಾಭಾಷೆ ದೇಶಿಕರ
ಕ[6]ಟ್ಟೂ[6]ರಿಸಿತು ಸಿದ್ಧರದ್ವೈತ ಸಮಯಿಗಳ
ಮೆಟ್ಟಿ ಸೀಳಿತು ನಿಮ್ಮ ಬಸವಣ್ಣನೋದು ವಾದಿಗಳ ಮುಂಬಲ್ಗಳೆದುದು ॥೨೬॥

---

[1] ದೆ (ಫ.ಗ). [2] ಭೂ (ಕ.ಖ.ಗ.ಫ.ಛ). [3] ಪು (ಛ.ಗ.ಕ.ಖ). [4] ಈಟಿ (ಫ). [5] ರಿ (ಜ). [6] ಟ್ಟಾ (ಫ.ಛ.ಜ).

ಕರಣಿಕರ ವಿದ್ವಾಂಸರಂ ಸಚಿವರಂ[1]ಶಿಷ್ಟ[1]
ಧರಣೀಶರಂ ನಿಯೋಗಿಗಳನವಧಾನಿಗಳ
ಪರಮಪುರುಷರ ಋಷೀಶ್ವರರ ವೇದಾಂತಿಗಳ ಜ್ಯೋತಿಷಜ್ಞಾನಯುತರ ।
ನೆರೆದ ನಾಸ್ತಿಕರ ನಾನಾಶಾಸ್ತ್ರಪ್ರೌಢರೆಂ
ದೊರೆ[2]ದಾ[2]ರಿಯರ ಮಹಾಬಲ್ಲತನವೆಲ್ಲವಂ
ಜಱಿದುದೆಮ್ಮಯ ಬಸವನೋದು ದೂಷಕಕುಲವ ಹುಱಿದು ಹುಡಿಗೈದೂದಿತು ॥೨೭॥

ಹಾರೈಸಿ ಬಿಜ್ಜಳನರೇಂದ್ರ ಸಾಮದ ಭೇದ
ದಾರೈಕೆಯಿಂದ ವಿಶ್ವಾಸ ನೆರೆಯ[3]ದೆ[3] ಮೆಲ್ಲ
ನೋರೆಗೊತ್ತಲೆ ಬಸವರಾಜ ಲೇಸೈ ನಿನ್ನನೀಸುದಿನ ನಾವಱಿಯೆವು ।
ಬಾರಿಸಿದೆ ಲಿಪಿಯ ನೊಲಿದಂತಿದಂ ನಾನಲ್ಲ
ದಾರುವಱಿಯರು ಎಂಬುಪಾಯವಿಲ್ಲೆಲೆ ದಿಟದ
ಕಾರಣವ ನಾನಱಿಯಲೆಂತಹುದು ನಿಶ್ಚಯಂ ಪೇಳು ಯೆನ್ನಾಣೆಂದೆನೆ ॥೨೮॥

ಬಸಿರ ಕಿಚ್ಚಿಗೆ ಬಣಬೆಯಂ ಸುಡುವನಂತೆ ತಾ
ಮಸಿಗರಱಿಯರ್ಭೂಪ ನಿನ್ನ ಮಹದೈಶ್ವರ್ಯ
ವಸುಮತಿಯಱಿಯೆ ಪೆರ್ಚಲೆಂದು ಶಶಿಶೇಖರಾಜ್ಞಾನುಸಾರದಿ ಬಂದುದು ।
ಕುಶಲತೆಯು ನಿನಗೆ ಸಂತಸದೆಸಕ ಮುಂದೆನ
ಲ್ಬಸವೇಶನೆಡೆಗೆ ಬಂದಸಮಾನ ಲಿಪಿಯು ವಾ
ಚಿಸಿದ ತೆಱ ತದ್ರವ್ಯಮಿಹ ತಾಣಮಂ ತೋಱಿಪಾಲಿಸೆನಲರ್ತಿಯಿಂದ* ॥೨೯॥

ಚಾಳುಕ್ಯಚಕ್ರೇಶನಿದು ನಿಜದ ನಿಱುಗೆಯೆಂ
ದೇಳಲೊಡೆ ಮುಂಕೊಂಡು ಮುಂ ಧನವ ಬೈತಿಟ್ಟ
ಮೂಲಿಗನೊಲಮ್ಮಮ್ಮ ನಡೆದು ನಿಕ್ಷೇಪದೆಡೆಗೈದಿ ಹರಶರಣೆನುತ್ತ ।
ಭಾಳಲೋಚನ ಶರಣು ಭರ್ಗಶರಣುಗ್ರ ತ್ರಿ
ಶೂಲಿ ಶರಣಂಬಿಕಾಪತಿ ಶರಣು ದುರಿತರಿಪು
ನೀಲಕಂಠನೆ ಸಂಗಮೇಶ ಶರಣೆಂದು ನಿಧಿಯಂ ಮೆಟ್ಟಿ ನಿಂದಿರ್ದನು ॥೩೦॥

---

[1] ಶೇಷ (ಕ.ಖ.ಗ.ಘ.ಛ). [2] ದುಹಿ (ಖ). [3] ದ (ಖ.ಕ).

* ಬಸಿರಕಿಚ್ಚಿಗೆ ಬಣಬೆಯಂ ಸುಡುವನಂ ಕೀವಿ
ಗೋಸುಗದೇವಾಲಯುವನಳಿವನಂ ನಂಬುಗೆಯ
ನೆಸಗಿ ಕೊರಳಂ ಕೊಯ್ವನಂ ತಲೆಯ ಕೊಟ್ಟರ್ಥವಡವನಂ ವಾಸಿ ಕೂರ್ತು।
ವಸುಧೆಯಂ ತೊಱವನಂ ಬೆಟ್ಟಗೆಡಹಿಲಿಯ ಹಿಡಿ
ದೆಸೆವ ದೇವನಂ ಗೆಲ್ಲವೆನೆ ತನ್ನ ಮೂಗು ತಾ
ನೊಸದರಿದುಕೊಂಬನಂತಲ್ಲಕೇಳ್ಗೊ ನಾಥನಿಜದೋರ್ಪ ನಿಂದಿರೆನಲು ॥
ಮೇಲಿನ ಪದ್ಯದ ಬದಲು ಈ ಪದ್ಯ 'ಜ' ದಲ್ಲಿದೆ.

ಇದೆಯಿಲ್ಲಿ [1]ದಾತ[1] ಮಾತಾ[2]ವಯ[2]ಸ್ತಂಭವಾ
ಯಿದೆಯಿಲ್ಲಿ ಇಂದಿರಾನಂದಲಾವಣ್ಯರಸ
ಮಿದೆಯಿಲ್ಲಿ ಸಂಕ್ರಂದನನ ಲೋಕವಾರೂಢ ಭೋಗ ಭಾಗ್ಯಾಗಂತುಕ।
ಇದೆಯಿಲ್ಲಿ ಧನದನಾಪತ್ಕೋಶ ನಿತ್ಯನಿಧಿ
ಇದೆಯಿಲ್ಲಿ ಸಕಲಸಂಪತ್ಕರನಿಧಾನಫಲ
ಇದೆಯಿಲ್ಲಿ ಭೂಪ [3]ತೆಗೆಸೈ ತೆಗೆಸು[3] ಲಿಪಿಯಾರ್ಥದರ್ಥದೋಱುವೆನೆಂದೆನೆ ॥೩೧॥

ಹಾರೆಕಾಱರು ಸಲಿಕೆಕಾಱ ಗುದ್ದಲಿಕಾಱ
ಗೋರಿಕಾಱರ್ಕವಿದು ಬಂದು ತನ್ಮುಖದಿ ಹೊಡೆ
ದಾರಿಯಗೆಯಲ್ಕೊಂದು ತೆಱದ ಭೈರವ ಭೂತ ಭೇತಾಳ ಪ್ರಳಯಗ್ರಹ ।
ತೋಱುತವದಿರ ಕಣ್ಗೆ ಉರಗ ವ್ಯಾಘ್ರತಿ[4]ಚಂಡ[4]
ಘೋರ ಭಯ ಹೊಯ್ದು ಬೊಬ್ಬಿಡುತೋಡಲೇನದಱ
ಕಾರ್ಯ ಭಿಕ್ಷವನೊಲ್ಲೆನಾಯ ತೆಗೆಯೆಂಬೊಲಾಯ್ತಾವುದಿದ ಕುಪಮಾನವು ॥೩೨॥

ಎನಲು ಪಂಚಾಕ್ಷರಿಯ ಜಪಿಸುತನಿತಗಲದೊಳು
ಘನತ್ರಿಪುಂಡ್ರಂದಳೆವುತೆನ್ನನೀಕ್ಷಿಸುತಗೆಯಿ
ರೆನುತಭಯವಿತ್ತಲ್ಲರಂ ಬರಿಸಿ ತಾ ನಿಂದು [5]ಬ[5]ಳಸಗೆಸಲೊಡನೆ ಮುಗುಳೆ ।
ಕನಕ ಕಣ್ದೆಱೆದುದೀತನ ಭಕ್ತಿಯುನ್ನತಿಯ
ದಿನಕರ ದೆಸೆಯ ಬೆಳಗುವಂತೆ ರಾಯನ ಭಾಗ್ಯ
ವನಿತೆಯಂ ಭೂಕಾಂತೆ ಪಡೆದಳೆನೆ ನಿಧಿನಿಧಾನಂ ರೂಪು ನಿಜದೋಱಿತು ॥೩೩॥

ರಾಜನುತ್ಸಹದಿಂದೆ ರಾಜಿಸುತಖಿಲ ಸಭಾ
ರಾಜರಾಹಾ ವಿರಾಜಿತ ಮೌಳಿ ದೂಗಿದರು
ಮೂಜಗದೊಳಿಲ್ಲದಚ್ಚರಿಯೆಂದು ವಿದ್ಯಾಧಿರಾಜ ಪ್ರಮುಖರೆಲ್ಲರು ।
ರಾಜನಂ ರಾಜರಾಜಾಧೀಶನಂ ಬಸವ
ರಾಜನಂಗವ ರಾಜಶೇಖರನೆ ಬಲ್ಲನೆಂ
ದಾ ಜನಂ ಕೈಯೆತ್ತಿ ಪೊಡವಡುತ್ತಿರ್ದರಸ್ತ್ರತಿಮನಪ್ರತಿಮನೆಂದು ॥೩೪॥

[6]ವಿಷ[6]ಮಾಕ್ಷ ಶರಣು ಶರಣೆನುತಲಂತಾ ನಿಧಿಯ
ಹೊಸ ಹೊನ್ನರಾ[7]ಶಿದುದುಕೊಪ್ಪಿ[7]ಡಿಯ ತೆಗೆದು ಭೂ
[8]ವಸದಂಗೆ[8] ಕಾಣಿಕೆಯನಿತ್ತೊತ್ತಿದೆಯರಸ ಲಿಪಿಯೊಳಾಂ ಮುನ್ನ ನಿನಗೆ ।

---

[1] ಧರಾ (ಕ.ಖ). [2] ಯನ (ಜ). [3] ತೆಗೆಸಗೆಸು (ಕ.ಖ). [4] ಛಂದ (ಘ).
[5] ಬೆ (ಕ.ಖ). [6] ಅಸ (ಘ). [7] ಶಿಯೆರಡು ಕೊಪ್ಪ (ಕ.ಖ), ದುಡಿಕೊಪ್ಪಿ (ಜ).
[8] ವಸುಧೆಗೆ (ಕ.ಖ).

ಎಸಗಿದಱುವತ್ತಾಱು ಕೋಟಿಧನವಿದೆ ಕೂರ್ತು
ಶಶಿಧರಂ ಕರುಣಿಸಿದನೆನಲು ಭಂಡಾರಕ್ಕೆ
ಶಿಶು ಬಾಲೆಯರ್ಪುರಜನಂ ಪರಿಜನಾದಿ ನೆರೆಯಡಕಿತಚ್ಚರಿವಡುತಲಿ ॥೩೫॥

ಅರಸನುತ್ಸಹದಿಂದೆ ಗುಡಿತೋರಣಂಗಟ್ಟಿ
[1]ಸಿರಿ[1] ಹೋಗಿಯೆಂದು ಚತುರಂಗಚಾರರಿಗಱುಪಿ
ಬರ ಹೇಳಿ ವಾರನಾರಿಯರ ವಾದ್ಯಪ್ರತತಿಗಳ ಚಿತ್ರಸೌರಂಭದ ।
ಸಿರಿಸಿಂಗರಂಗಳಂಗೀಕರಿಪ ಗರುವಾಯ
ಪರಿಯ ಪಸರಿಸುತಿದಿರ್ವರಹೇಳು ನಮ್ಮ ಬಸ
ವರಸನನಿದಿರ್ಗೊಂಬೆವೆಂದು ಬೆಸಸಲು ಹಱಿದು ಚರರು ಪುರವೀಧಿಗಳೊಳು ॥೩೬॥

ಕಲಶದೋರಣ ಕಂಚುದೋರಣಂ ಕನ್ನಡಿ ಸು
ವಿಳಸದೋರಣ ಚಿತ್ರಪತ್ರದೋರಣ ಕುಸುಮ
ದಳದೋರಣಂ ಮಕರದೋರಣಂ ಮಣಿದೋರಣಂ ಪಸುರ್ದೋರಣಗಳು ।
ಹೊಳೆವ ಹೊಂದೋರಣ ಪ್ರಬಂಧದೋರಣ ಮೆಱೆವ
ಪಳುಕುದೋರಣ ಪಚ್ಚದೋರಣೋರಣಗೊಂಡ
ಫಲದೋರಣಾದಿ ತೋರಣಗಟ್ಟಿದವು ರಾಜವೀಧಿವೀಧಿಗಳೊಳ್ಳೈದೆ ॥೩೭॥

ಗಡಣಗಡಣದಿ ಕಲಶಕನ್ನಡಿಗಳಂಬರ
ಕ್ಕಡಿವ ಗುಡಿತೋರಣಂಗಳ ಛತ್ರಚಾಮರದಿ
ನಡೆಚಪ್ಪರದಿ ಚಲಾಚಲದೋಱುತಿಸ ವಿಳಾಸಿನಿಯರ ವಿಚಿತ್ರತರದ ।
ಸಡಗರದ ಸಕಲನಾರಿಯರ ಸಿಂಗರದಂಗ
ದೊಡನೆ ಸೌರಂಭತೂರ್ಯತ್ರಯಾಡಂಬರೆಶ
ವಡೆದು ಕಲ್ಯಾಣ ಕಲ್ಯಾಣದೊಳಗಲ್ಲದಿಲ್ಲೆನೆ ಮಂಗಳಂ ಮಸಗಿತು ॥೩೮॥

ಆವ ಕಡೆ ನೋಳ್ಪಡೊಡ್ಡೈಸಿ ಬಹ ಪುರಜನಗ
ಳಾವಕಡೆ ನೋಳ್ಪಡೊಡ್ಡೈಸಿ ಬಹ ನಾರಿಯರ
ದಾವಕಡೆ ನೋಳ್ಪಡೊಡ್ಡೈಸಿ ಬಹ ಪರಿವಾರ ಪಲ ತೆಱದ ವಾದ್ಯಂಗಳ ।
ಆವಕಡೆ ನೋಳ್ಪಡೊಡ್ಡೈಸಿ ಬಹ ತೇಜಿಗಳ
ಆವಕಡೆ ನೋಳ್ಪಡೊಡ್ಡೈಸಿ ಬಹ ರಥವಾಜಿ
ಆವಕಡೆ ನೋಳ್ಪಡೊಡ್ಡೈಸಿ ಬಹ ಗಜಘಟಾಳಿಗಳೆಲ್ಲ ಸಿಂಗರವೊಳು ॥೩೯॥

---

[1] ಕರೆ (ಕ.ಖ.ಗ.ಘ).

ಸಾಲುಬೆಳುಗೊಡೆಗಳೊಪ್ಪುವ ಪ[1]ಳಿ[1]ಯ ಪಲ್ಲವದ
ವೀಲಿದಳೆಯೆಸೆವ ಮಣಿಮಯ ಖಚಿತ ಮುತ್ತಿನೆಸೆ
ವೋಳಿ ಚೌಕಗಳ ನಡೆಗುಡಿಗಳಂ ನಡೆಚಪ್ಪರಗಳ ನಡೆದೋರಣಗಳ ।
[2]ಜಾಳಿಸಿದ[2] ಚಿತ್ರಖಂಡಣಿಗಳ ಪತಾಕೆಗಳ
ಮೇಳವದ ಛತ್ರ ಚಾಮರ ಸೀಗುರಿಗಳ ಸುವಿ
ಶಾಲಗಜ [3]ಡಕ್ಕೆ[3]ಯಂಗಳ ಸಕಲ ಸಿರಿಯ ಸಂತೋಷದಾಡಂಬರದೊಳು ॥೪೦॥

ರಾಯವಾಡಿಯದೆಲ್ಲ ಮಂಗಲಂ [4]ಚಿತ್ರಾ[4]ಭಿ
ಪ್ರಾಯದಿನಿದಿರ್ವಂದಡುತ್ಸಹದಿ [5]ಚಾಳೋಕ್ಯ[5]
ರಾಯ ಬಸವರಸಂಗೆ ಸರ್ವ ವಸ್ತ್ರಾಭರಣ ಭೂಷಣಂಗೈಸಿ ಭದ್ರ ।
ಕಾಯನೆನಿಪುತ್ತಮದ ಪಟ್ಟದಾನೆಯನೇಱಿ
ಸ್ವಾಯತಂಗೊಳಿಸಿ ತೂರ್ಯತ್ರಯಂಗಳ ಸಂಪ್ರ
ದಾಯಮೇಳೈಸಿ ಭೋರೆಂದೆಸೆವ ದುಂದುಭಿಧ್ವಾನ ಮೊಳಗಿತ್ತು ಕೂಡೆ ॥೪೧॥

ಭೇರಿ ಮೊಳಗಿದವು ನಿಸ್ಸಾಳ ಸೂಳೈಸಿದವು
ಭೋರನೆಸೆದವು ರಾಯಗಿಡಿಬಿಡಿಗಳಬ್ಬರಿಸು
ತಾರಿಹೊಯ್ದವು ವೀರಣಂಗಳುಣ್ಮಿದವು ಪೆರ್ಗಱಡೆ ಬೊಂಬುಳಿ ಮರ್ದಳೆ ।
ವೀರಡೌಡೆಗಳು ಸಾಱಿದವು ಚಂಬಕಶಬ್ದ
ದೋಱಿದವು ಕೊಂಬು ಕಹಳೆಗಳು ಹೆಗ್ಗಾಳೆಗಳು
ಚೀಱಿದವು ನಾಗಸರ ಚೆನ್ನಚಿತ್ರಂಗಳಂ ಬೀಱಿದವೊಸಗೆವಱೆಗಳು ॥೪೨॥

ಮುತ್ತಿನ ಚವುಕ ಛತ್ರಿ ವಲ್ಲವದ ಜಲ್ಲರಿಗ
ಳೆತ್ತಿದವು ಚಮರ ಚಾಮರ ಚಡಾಳಿಸಿ ಗಜವ
ಮುತ್ತಿದವು ರಾಜಸಿಂಧುಗಳು ಗುಡಿ ತೋರಣ ಸಮಸ್ತಮಂಗಳದುನ್ನತಿ ।
ಸುತ್ತ ಸಂದಣಿಸಿದವು ವಿಜಯಲಕ್ಷ್ಮಿಯ ಭವನ
ದತ್ತ ಬಿಜಯಂಗೈಸುವೊಲ್ಬಸವರಸನೇಱಿ
ದುತ್ತಮಗಜಂ ಗಮಕದಿಂ ಗಜಾಡಂಬರಾಡಂಬರದ ನಡುವೆಸೆವುತ ॥೪೩॥

ನಡೆದುದೆಮ್ಮಯ ಬಸವನುನ್ನತೋನ್ನತವೊತ್ತು
ನಡೆದುದೆಮ್ಮಯ ಬಸವನಖಿಲಸಂಪದವೊತ್ತು
ನಡೆದುದೆಮ್ಮಯ ಬಸವನೆಸೆವ ಭಕ್ತಿಯ ಕೀರ್ತಿಮೂರ್ತ್ಯಮೃತಕಲಶವೊತ್ತು ।

---

[1] ಳಿ (ಜ). [2] ಜೋಳಿಸಿದ (ಖ,ಗ). [3] ಘಟೆ (ಗ). [4] ಚಿತ್ತ (ಜ). [5] ಚೋಳಾಕ್ಯ (ಜ).

ನಡೆದುದಾಗಮುದಾಗುವೊತ್ತು ಮಹಿಮಾನದಿಂ
ನಡೆದು ಬಂದದು ರಾಜಬೀದಿಯೊಳು ಮೆಱೆವುತೆ
ನ್ನೊಡೆಯ ಬಸವೇಶನೇಱಿದ ಗಜಂ ರಜತನಗವೊತ್ತ ದಶಮುಖನಂತಿರೆ ॥೪೪॥

ಸ್ವಸ್ತ್ಯಸ್ತುತೇ ಉಭಯಲೋಕಗುರು ನಿನ್ನಮನ
ಚಿತ್ತ ಪರುಷಂ ಭಾವ ಪರುಷ ಪದ ಪರುಷ ನೋ
ಡಿತ್ತು ಪರುಷಂ ನುಡಿಯಿತೆಲ್ಲ ಪರುಷಂ ಕಾಯ ಪರುಷ ಕೈ ಪರುಷವೆಂದು।
ಮಸ್ತಕದೊಳಿಡುತೆರಡು ಕೈಯ ಪೊಡಮಡು[1]ತಂ[1] ಸ
ಮಸ್ತಯಾಚಕನಿವಹ ಕೀರ್ತಿ [2]ಪಕ್ಕಾಗೆ[2] ಪರ
ಸುತ್ತಲುತ್ತಮರು ಕೈವಾರಿಸಲ್ಬಸವನೆಸೆವಾ ಪರಿಯನೇಂ ಪೊಗಳ್ವೆನು ॥೪೫॥

ಮಂಗಳಂವೊಳೆತು ಮಂಗಳ ಬೆಳೆದುದಖಿಳಶುಭ
ಮಂಗಳಂ ಕವಲ್ತು ಮಂಗಳ ತಳಿತು ಮಂಗಳಂ
ಕಂಗೊಳಿಸಿ ಪೂತು ಕಾತುಂ ದೋರೆವಣ್ಣ ಮಂಗಳಮಹಾಸಿರಿಯ ಸವಿಯ।
ಮಂಗಳಜನಂಗಳೆಲ್ಲಾಸ್ವಾದಿಸಾನಂದ
ಮಂಗಳರಸಾವೇಶರಾಗಿ ಮಂಗಳಹಾಡಿ
ಮಂಗಳಂ ಹೂಡಿ ಮಂಗಳ[3]ವಾಡಿಯೆನಿಪಪುರ[3] ಕಲ್ಯಾಣನಾಮವಾಯ್ತು ॥೪೬॥

ಆಪುರದೊಳೆಲ್ಲ ಮೆಱೆಸುತ್ತ ತನ್ನರಮನೆಗೆ
ಭೂಪ ಬಿಜಯಂಗೆಯ್ಸಿಕೊಂಡು ಬಂದುನ್ನತಾ
ಳಾಪ ಪ್ರಧಾನ ಪಟ್ಟಂಗಟ್ಟಿದನು ರಾಷ್ಟ್ರ ಪುರಕೆ ಭಂಡಾರಕೆಲ್ಲ।
ಈ ಪುರೋಹಿತರಿಗೀ ಸಚಿವ ಕರಣಕ್ಕೆಲ್ಲ
ನೀ ಪರಮಪಾಲಕಾಗ್ರಣಿಯೆಂದು ವೊರೆದು ಮ
ದ್ರೂಪ ದಂಡಾಧೀಶ ಬಸವರಸರೆಂದೊಸಗೆವಱೆಗಳಂ ಮೊಳಗಿಸಿದನು ॥೪೭॥

ರಾಜೋಪಚಾರ ರಚನಾಳಾಪಕೇನುಳ್ಳ
ತೇಜಸಂಪದ[4]ವಿ[4]ತ್ತು ಬಹಳಪ್ರಯತ್ನದಿ ವಿ
ರಾಜಿಪುನ್ನತದ ಒಂದರಮನೆಯ ಕೊಟ್ಟು ತಾ ಗೃಹಪ್ರವೇಶಂಗೆಯಿಸಲು ।
ಮೂಜಗಂ ಮೋಹನಂಗೊಳಲು ಮಂಗಳಕುಳಸ
ಮಾಜಗಳ ಕೈಗೊಳಿಸಿ ಕಳುಪೆ ಪುರದೊಳು ಬಸವ
ರಾಜರಾಜಿತನು ಬಂದರಮನೆಯ ಹೊಕ್ಕು ಸಂಗಮನಾಥ ಶರಣೆನುತಲಿ ॥ ೪೮ ॥

---

[1] ವರ (ಜ). [2] ಪಕ್ಕರಿಗ (ಜ). [3] ವಾದಿಳೆಯೆನಿಪ (ಜ). [4] ಫ್ರೀ (ಕ.ಖ.ಗ.ಘ.ಛ).

ಒಡನೆ ಬಂದಖಿಳ ಜನಕಾ ಜನಪನರಮನೆಯ
ನಡುವೆ ಬಾಹತ್ತರದ ವಿನಿಯೋಗ ಮಾನ್ಯ ಮಂ
ಗಡಕೆ ಮಂಗಳ ಯಾಚಕರ್ಗುಚಿತ ಸತ್ಕಾರದುತ್ಸವೋತ್ಸವದೊಸಗೆಯು ।
ಉಡುಗೊಱೆಗಳಿತ್ತು ಹೊನ್ನಿತ್ತು ಮನ್ನಣೆ ಪೂಜೆ
ನಡೆವ ಮಹಿಮಾನವೆಂತಂತವರ್ಗೆ ಸಂತೋಷ
ಪಡಿಸಿ ಬೀಳ್ಕೊಟ್ಟು ರಾಜಪ್ರಮುಖ ಭಂಡಾರಿ ಬಸವನೆಸೆದಂ ಧರೆಯೊಳು ॥೪೯॥

ಸುಖಸಂಕಥಾಶರಧಿ ಬಸವಶಶಿ ಯಶವಡೆದ
ಸಕಲ ಶಿವಭಕ್ತಿಯಾರೂಢನಿಧಿ ಯಶವಡೆದ
ನಕಳಂಕನಪ್ರತಿಮನಮರತರು ಯಶವಡೆದ ಶರಣಕುಲಸರಸಿಜಸಖ ।
ಮುಕುರನೆಶವಡೆದ ಮೂಜಗವಱಿಯಲೀ ಪರಿ ಯೆ
ಸಕವಾಯ್ತು ಬಳಿಕಲಂತಾ ಪುರದೊಳುಳ್ಳ ಶಿವ
ಭಕ್ತರೆಲ್ಲರ ಕರೆಸಿ ಮನವೊಸೆದು ನಾನಿಮ್ಮ ಶಿಶುವಱಿವುದೆನುತೆಂದನು ॥೫೦॥

ನಿಮ್ಮವನು ನಾನು ನೀವೊಲಿದು ಪಾಲಿಪುದೆನ್ನ
ನಿಮ್ಮದಾಸರ ದಾಸನೆಂದೆನಗೆ ನೀವೆಲ್ಲ
ನಿಮ್ಮೊಕ್ಕುದಂ ಇಕ್ಕಿ ರಕ್ಷಿಸುವುದೆಂದು ಮೆಯ್ಯಿಕ್ಕಲಾ ಶರಣರೊಲಿದು ।
ಮರ್ಮಜ್ಞನೀತ ಮುನ್ನಾವ ಗಣವರನೊ ಶಿವ
ನಿರ್ಮಿತವಿದಾವಱಿಯೆವೈಸಲೇ ಸಾಮರ್ಥ್ಯ
ನಮ್ಮ ಸಮಯದೊಳೊರ್ವನುದಿಸಿದನೆನುತ್ತೆತ್ತಿಕೊಂಡು ಪೊಗಳುತ್ತೆಲ್ಲರು ॥೫೧॥

ಆಗಣಸಮೇಳದೊಳು ಸುಖಮಿರುತೆ ರಾಜವಿನಿ
ಯೋಗದೊಳು ಮೈದೋಱಿರಲ್ಕೆ ವಿಶ್ವಾಸ ಸ್ವಯ
ಮಾಗಿ ಮನಬೇಱಿಲ್ಲದಿರಬೇಕೆನುತ್ತರಸು ನೆನೆದನೊಂದನುಬಂಧವ ।
ಆಗ ತಾತನ ಪಿಂತೆ ಸಂಗೀತಚೂಡಾಮ
[1]ಣ್ಯಾಗಳಾ[1] ಬಲ್ಲಹನೊಳೆಮ್ಮ ತಾಯ್ಸಹಗಮನ
ವಾಗಲಾ ದಿನಕೆಮ್ಮ ತಮ್ಮ ಕರ್ನಹ[2]ದೇವ[2] ಬಾಲನಾಗಿರಲಾತನ ॥೫೨॥

ಲೀಲೆಯಿಂ ಮೊಲೆಯೂಡಿ ಸಲಹಿದಳು ಮಂತ್ರಿಕುಲ
ಪಾಲ ಸಿದ್ಧರಸದಣ್ಣಾಯಕರರಸಿ ಪುಣ್ಯ
ಶೀಲದೇವತೆ ಪದ್ಮಗಂಧಿಯಾಕೆಯ ಉದರದಲಿ ಬಳಿಕ ಜನಿಸಿದಾಕೆ ।
ನೀಲಲೋಚನೆ ಯೆಮಗೆ ತಂಗಿಯುಹಳಾಕೆಯನು
ನೀಲಲೋಚನ ಬಸವಗೀವೆನೆನುತುತ್ಸಾಹ
ದಾಳಾಪದಲಿ ಪಟ್ಟವಧುವೆಂದು ಮದುವೆಯಂ ಮಾಡಿದಂ ನೃಪ ಬಸವಗೆ ॥೫೩॥

---

[1] ಣಿಗಳ (ಕ), ಣೀಗಳಾ (ಖ). [2] ರಾಯ (ಜ).

ಈ ಪರಿಯೊಳನುಬಂಧ ಸಂಸ್ಕಾರ ಕ್ರೀ ಭಾವ
ರೂಪಿನಿಂ ಲೌಕಿಕಂ ಪರಮಾರ್ಥವೆರಡರಾ
ಲಾಪವಿರುಳ್ಪಗಲಂತೆ ಸಂಗಡಿಸಿ [1]'ಬರತಲಂತವರ್ಗಂತೆ' ಮೈದೋಱುತ ।
ಭೂಪನೈಶ್ವರ್ಯದೇವತೆಯಾಗಿ ಸುಖಸಂಕ
ಥಾಪರಮಹರುಷದಿಂ ಬಸವ ಭಕ್ತ್ಯೋನ್ನತ ಪ್ರ
ದೀಪ ಪ್ರಭಾವ ದೋಱುತ್ತಿರ್ದನೆಂದು ನಂದೀಶ ಪ್ರಮಥಗೊರೆದನು ॥೫೪॥

ಇಂತಿದು ಸದಾ[2]ಶಿವನ[2]ಮೂರ್ತಿ ತತ್ವಾರ್ಥಪದ
ದಂತುಕ ಬಸವರಾಜಚರಿತೆಯೊಳು ಕ್ರೀಭಾವ
ದಂತರಪ್ರತಿಷ್ಠಿತಾಚಾರ್ಯ ನಂದೀಶವರವಾಕ್ಯಪ್ರಸನ್ನಶಬ್ದ ।
ಮಂತ್ರಸಿದ್ಧನು ಕವಿಕಮಲನಾಭ ಕವಿಯ ಮ
ನ್ವಂತರದ ಗೌತಮನು ಸಿಂಗಿರಾಜಾಂಕನು ಮ
ಹಂತರಿಗೊರೆದ ಕಥೆಯೊಳಿದು ಪ್ರಥಮಕರ್ಮಸ್ಥಳಾಧ್ಯಾಯುಪಖ್ಯಾಯನ ॥೫೫॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆಸಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಲಪಿಯ ಸಂಧಿಯು ಸಮಾಪ್ತ ಶಿವಭಕ್ತಿರಸ್ತು ॥೫೬॥

---

[1] ಬರೆಲಂತವಕ್ಕಂತೆ (ಜ). [2] ಚಾರ (ಬ).

ಎಂಟನೆಯ ಸಂಧಿ

ಸೂಚನೆ—

ಭಾವವೇ ಭಕ್ತಿಸ್ವರೂಪಾದ ಭರ್ಗನಪ
ರಾವತಾರದ ಬಸವರಾಜನುನ್ನತ ನಿಜಸ್ವ
ಭಾವನಿಷ್ಠೆಯ ವಚನದ ಪ್ರತಿಜ್ಞೋತ್ತರೋದಯ ದೋರ್ಪೆನಾಲಿಸುವುದು ।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲ ವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ನಾದಶೂನ್ಯ ನಿರಾಳ ನಿರ್ಮಾಯನೋಂಕಾರ
ನಾದಿಗಣನಾಥನಾಸುರಬಯಲ್ಮೂರ್ತಿ ಜ್ಞಾ
ನೋದಯ ವಿಚಿತ್ರ ತಾಳಸಮೇಳ ಸಂಜನನ ಮರಣ ರಹಿತಂ ವಂದ್ಯನುಃ ।
ಪಾದಸಹಸ್ರೋರ್ಧ್ವಮುಖ ನೀಲಲೋಚನನು ಸ
ದ್ಯೋ[1]ದಿ[1]ರೂಪಕ ಶರಣ ಸಚ್ಚಿದಾನಂದನಿ
ತ್ಯೋದಯಂ ಪರಿಪೂರ್ಣಭಾವಮೂರ್ತ್ಯಾದ ಭೂರುದ್ರ ಬಸವೇಶ ಶರಣು ॥೨॥

ಮಂ[2]ದ[2]ರನುಪಮ ಪರಮನುಗ್ರ ಶರ್ವಂ ಶೂಲಿ
ಸೌಂದರ ವಿರೂಪಾಕ್ಷ ವೀರಭದ್ರನು ನೀಲ
ಕಂಧರನು ಕಾಲಾಗ್ನಿರುದ್ರನಾಧಾರ ಕೃತಯುಗಧರ್ಮದ್ವಿತಿಯಶಂಭು ।
ಬಿಂದು ದೇವಾಂಗ ಘಂಟಾಕರ್ಣ ಶಂಕರನು
ನಂದಿಕಾಲನು ಮನೋಹರ ನೀಲಲೋಹಿತನು
ಕಂದ ವೃಷಭಾಂಕನಾದಾದಿ ಶ್ರೀರುದ್ರಗಣನಾಥ ಬಸವೇಶ ಜಯತು ॥೩॥

ಸಾದರದೊಳಾಲಿಪುದು ಭಕ್ತಿಭಾಗ್ಯೋನ್ನತ ಪ್ರ
ಭೋದಯವ ಪ್ರಮಥರಂದಾದಿಯಲಿ ಭಾವಕ್ರೀ
ವಾದಪಾರಂಪರೆಯೊಳಾ ಭಾವ ಪ್ರಕೃತಿಲೀಲಾವಿಲಾಸೋನ್ನತಿಯನು ।

---

[1] ವಿ (ಕ.ಖ.) [2] ದಿ. (ಸ.ಪ್ರ).

ಭೇದಾವಿಭೇದದ ಗಣೇಶಾವತಾರಂಗ
ಳಾದ ವೃಷಭೇಶ ಬಸವಾಖ್ಯದಿಂ ಜನಿಸಿ ಕ
ರ್ಮಾಧಿಕಾರಂಗಳೆದು ಭಕ್ತಿಯ ಕುಳಸ್ಥಳದೊಳಂಗೀಕರಿಸಿದಂಗವು ॥೪॥

ಸ್ವಾನುಭವ ಹರಮಂತ್ರಮೂಲಬೀಜಾಕ್ಷರವ
ನಾ ನಿಯತಭಕ್ತಿಸ್ಥಳದಿ ಬಿತ್ತಿ ಜ್ಞಾನಾಂಕು
[1]ರಾ[1]ನಂದಿಸಾಚಾರ ದಳವೇಱಿ ಗುರುವಿಟಪಿ ವಿಸ್ತರಿಸಿ ತಳಿರಲಿಂಗ ।
ಧ್ಯಾನ ಮುಗಳ್ಮೊಗ್ಗೆ ಜಂಗಮಪ್ರಸೂನ ಪ್ರಸಾ
ದಾನಿಯತಶಾಳಿ [2]ಮಿಡಿವಾನ[2] ಕಿಂಕಿಲಪ್ರತಿ
ಜ್ಞಾನೂನವಚನಫಲಭರದಿನೆಸೆದುದು ಬಸವನಾಮಶಿವಕಲ್ಪಭೂಜ ॥೫॥

ಗುರುಲಿಂಗವಾಚಾರಲಿಂಗ ಜಂಗಮಲಿಂಗ
ವರಪ್ರಸಾದಸುಲಿಂಗ ಮಹಲಿಂಗ ಶಿವಲಿಂಗ
ಪರಿಯಂಗ ಭಕ್ತ ಮಾಹೇಶ ಪ್ರಸಾದಿ ಪ್ರಾಣಸುಲಿಂಗಿ ಶರಣೈಕ್ಯರ ।
ತರತರದ ಷಟ್ತ್ರಿಂಶತಿಸ್ಥಲಜ್ಞರು ಬನ್ನಿ
ಸುರುಚಿರ ಸುದಾಸೋಹಫಲವೀವೆನೆಂದೆಂಬ
ಪರಿಯೊಳು ಪ್ರತಿಜ್ಞೋತ್ತರಮೃತವಾಚಾಸಿದ್ಧರಸವಚನವೊರೆದ ಬಸವ ॥೬॥

ವರದೀಕ್ಷೆ ಶಿಕ್ಷೆ ಸುಸ್ವಾನುಭವ ಸ್ವಯಚರಂ
ಪರ ಶುದ್ಧ ಸಿದ್ಧ ಪ್ರಸಿದ್ಧವಾಚಾರ ನಿಯ
ತರು ಗಣಾಚಾರಿಷ್ಟಲಿಂಗ ಪ್ರಾಣಸುಲಿಂಗ ತೃಪ್ತಿಲಿಂಗಂ ಪಿಂಡಜ ।
ನಿರುತವಂಡಜವು ಬಿಂದ್ವಾಕಾಶವೆಂಬ ಘನ
ತರದ ಹದಿನೆಂಟು ಕುಲಸ್ಥಲಕೆ ಮೂಲಿಗನಾದ
ಪರಮಾನುಭಾವಿ ಬಸವೇಶನಿವರಂಗಸ್ಥಳಂಗಳೆನಿಸೆಸೆವುತಿರ್ಪ ॥೭॥

ಗುರು ಲಿಂಗ ಜಂಗಮದ ಭಕ್ತಿ ಇಹಲೋಕವಿ
ಸ್ತರವೀರ ಪರಲೋಕವೀರ ಲಿಂಗದವೀರ
ವರಪದಾರ್ಥ ಪ್ರಸಾದಾಪ್ಯಾನ ಸಮತಿ ಪ್ರಸಾದಿಯಾಚಾರಪ್ರಾಣಿ ।
ಚರಿತಲಿಂಗಪ್ರಾಣಿ ಜಂಗಮಪ್ರಾಣಿಷ್ಟ
ತರಲಿಂಗಪ್ರಾಣಿ ಲಿಂಗಂ ತೃಪ್ತಿಲಿಂಗಾರ್ಚ
ನುರುಕಾಯಲಿಂಗೈಕ್ಯ ಜೀವಲಿಂಗೈಕ್ಯಸದ್ಭಾವ ಲಿಂಗೈಕ್ಯನಾಗಿ ॥೮॥

---

[1] ನಂ (ಕ.ಖ). [2] ಮಿತಿವಾನ (ಛ), ಮಿಡಿದಾ (ಕ.ಖ).

ಕಿಂಕರತೆಯಿಂ ಭಕ್ತಿ ಮನಪರುಷ ನಿಷ್ಠೆಯಿಂ
ಸೋಂಕಿನ ಮಹೇಶತೆಯ ಬುದ್ಧಿಪರುಷಂ ಪ್ರಸಾ
ದಾಂಕಿತದ ಕರಣ ಕೈಪರುಷ ಯಚ್ಚರಿನ ಲಿಂಗಪ್ರಾಣಿಯಂಗ ಪರುಷ ।
ಶಂಕರನೊಳಂ ಬೆಚ್ಚು ಬೇಱಿಲ್ಲದಿಹ ಶರಣ
ನಂಕುರಿತ ನುಡಿಪರುಷ ವಾಚಾರದನುಭಾವ
ವಂಕುರಿ[1]ಸೆ ಹಂ[1]ಕಾರವಡಗಿದೈಕ್ಯನ ನೋಟಪರುಷ ಶ್ರೀಸಿದ್ಧಬಸವ ॥೯॥

ತತ್ಕಾಲೋಚಿತವಚನ—

ನಿಮ್ಮ ಪ್ರಸಾದವ ಮುಟ್ಟಿ ಕರ್ಮ ಹರಿಯಿತ್ತು, ನಿಮ್ಮ ಪ್ರಸಾದವನುಂಡು ಭವಗೆಟ್ಟೆನಯ್ಯ, ಮನ ಪರುಷ, ದೃಷ್ಟಿಪರುಷ, ಭಾವಪರುಷ, ನಡೆಪರುಷ, ನುಡಿ ಪರುಷವಾಯ್ತು ; ಲಿಂಗಗಣಂಗಳಕೂಡಲಸಂಗ, ನಿಮ್ಮ ಶರಣರ ಅನುಭಾವದಿಂದೆ ನಾನು ಸುಖಿಯಾದೆ. ॥೧॥

ಪುನರಪಿ ವಚನ—

ಬ್ರಹ್ಮನಿಗೆ ಹಸ್ತಪರುಷ, ವಿಷ್ಣುವಿಗೆ ನಯನಪರುಷ, ರುದ್ರಂಗೆ ವಾಕ್ಯಪರುಷ ಕೂಡಲಸಂಗನ ಶರಣರಿಗೆ ಪಾದ ಪರುಷ. ॥೨॥

ಶ್ಲೋಕ॥ ಯಸ್ಯ ಚಿಂತಾಮಣಿಶ್ಚಿಂ[2]ತಾ [3]ಯ[3]ಸ್ಯ ಕಲ್ಪತರುಃ ಕರಃ ।
ಕಾಮಧೇನು ರ್ಮ[4]ನೋಯಸ್ಯ ತಸ್ಮಿನ್ ವೈ ಪರುಷಃ[4] ಸ್ಥಿತಃ ॥

ಎಂಬ ಕಾರಣಲಿಂಗ ಜಂಗಮದ ದಾಸೋಹ
ದಂಬುಧಿಯ ನಿಜ ಭಾವದಂಗವೇಳಲು ಕದ್ರು
ಸಂಭವೇಂದ್ರಗೆ ನಿಲುಕದಾದೊಡಂ ಗಿರಿಶಿಖರಕಡರ್ವ ಪಿಪಿಲೀಕದಂತೆ ।
ಅಂಬಕತ್ರಯನಲವ [5]ಮಾ[5]ತ್ರಾತ್ಮ ಸೂತ್ರದೊಳ
ಗಿಂಬಿಡುವನಂತೆ ಬಸವೇಶ್ವರನ ಪ್ರತಿಜ್ಞಾಸ್ವ
ಯಂಭು ವಚನಾನುಕೂಲತೆ ರಸಪ್ರಸಾದವಂ ರಸನೆಗಿತ್ತೊರೆವೆನು ॥೧೦॥

ನುಡಿಯಿತ್ತೆ ಸಿದ್ಧ ನಡೆಯಿತ್ತೆ ಸತ್ಪಥ ಪುಣ್ಯ
ಪಡೆದೊಡವೆಯೆಲ್ಲ ಸತ್ಕ್ರಿಯೆಗೆ ಸಲುವೊಲು ಬಸವ
ನೊಡಲು ಒಡವ್ಯಭಿಮಾನ ಲಿಂಗಜಂಗಮದ ದಾಸೋಹಕ್ಕೆ ಮಿಸಲೆಂಬ ।

---

[1] ಸೆಹೂಂ (ಕ.ಖ.ಗ.ಜ.ಛ). ಸ್ಯಹಂ (ಘ). [2] ಣಿಃ ಚಿಂ (ಸ.ಪ್ರ). [3] ತ (ಸ.ಪ್ರ). [4] ನಸ್ತಸ್ಯ ಪುರುಷಸ್ತಸ್ಯಯಃ (ಸ.ಪ್ರ). [5] ಮಂ (ಖ).

ದೃಢಭಾವ ಬಲಿದು ನಿಶ್ಚಯದಿ ನಿರ್ಮಳಚಿತ್ತ
ವಡೆದು ಮನಮುಟ್ಟಿದ ಪ್ರತಿಜ್ಞಾ[1]ಸು[1]ವಚನಾರ್ಥ
ಮೃಡನಮುಖವರೆದೆ[2]ಗೆ[2]ಸಿದಧಿಕಭಾಷೆಯ ಶಬ್ದಶೀಲ ಸಿರಿವಂತನ ನುಡಿ ||೧೧||

ವಚನ—

ಕುಲದೈವ ಮನೆದೈವವೆನಗೆ ನಿಮ್ಮವರಯ್ಯ. ತನು ಮಿಸಲು ಮನ ಮಿಸಲು ನಯನ ಮಿಸಲು ದೇವ, ಕೂಡಲಸಂಗಮದೇವ, ನಿಮ್ಮ ಶರಣರಿಗೆನ್ನ ||೩||

ಶ್ರೋತ್ರಸೂತಕ ವೈರಿ ಗುರುವಚನ ನೇತ್ರದು
ಸ್ಸೂತಕ ವಿರೋಧಿ ಶರಣನ ನಿರೀಕ್ಷಣೆ ಕಾಯ
ಸೂತಕಾರಾತಿ ಚರಪದಸ್ಪರ್ಶನಂ ವಕ್ತ್ರಸೂತಕರಿಪು ಪ್ರಸಾದ ।
ಜಾತಿಸೂತಕ ಶತ್ರು ಭಕ್ತಾನುಭಾವ ದು
ರ್ನೀತ ಮನಸೂತಕದ್ವೇಷಿ ಲಿಂಗಜ್ಞಾನ
ಜ್ಞಾತೃಜ್ಞೇಯದೊಳು ನಾನಾ ಸೂತಕಂಗಳೆದ ಸೋಹಿ ದಾಸೋಹಿ ಬಸವ ||೧೨||

ವಚನ—

ಕಿವಿಯ ಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ, ಕಂಗಳ ಸೂತಕ ಹೋಯಿತ್ತು ಸದ್ಭಕ್ತರ ಕಂಡೆನಾಗಿ, ಕಾಯದ ಸೂತಕ ಹೋಯಿತ್ತು ನಿಮ್ಮ ಚರಣವ ಮುಟ್ಟಿದೆನಾಗಿ, ಬಾಯ ಸೂತಕ ಹೋಯಿತ್ತು ನಿಮ್ಮೊಕ್ಕುದ ಕೊಂಡೆನಾಗಿ, ನಾನಾ ಸೂತಕ ಹೋಯಿತ್ತು ನಿಮ್ಮ ಶರಣರ ಅನುಭಾವಿಯಾಗಿ, ಕೂಡಲಸಂಗಮದೇವ; ಎನ್ನಯ ಮನದ ಸೂತಕ ಹೋಯಿತ್ತು ನೀವಲ್ಲದನ್ಯರಿಲ್ಲೆಂದಱಿದೆನಾಗಿ. ||೪||

ಜಂಗಮ ನಿರೀಕ್ಷೆಗೈ[3]ಹವೆ[3] ನೇತ್ರದಾಹಾರ
ಜಂಗಮ ಸುವಾರ್ತೆಗೇ[4]ಳುಹ[4] ಶ್ರೋತ್ರದಾಹಾರ
ಜಂಗಮವ ವಾಸಿಸುಹವೇ ಘ್ರಾಣದಾಹಾರ ಜಂಗಮದ ಸುಖರುಚಿಯನು ।
ಹಿಂಗದಾಸ್ವಾದಿಸುಹವೇ ಜಿಹ್ವೆಯಾಹಾರ
ಜಂಗಮದ ಹೊದಿಕೆಯೆನ್ನಯ ಕವಚದಾಹಾರ
ಜಂಗಮಪ್ರಸಾದವೇ ಪ್ರಾಣವೆಂಬತಿಭಾಷೆ ಬಸವನಿಂದ್ರಿಯವರ್ಗಕೆ ||೧೩||

ವಚನ—

ನಯನದಾಹಾರ ಜಂಗಮವನೋಡಿಸುವೆ, ಶ್ರೋತ್ರದಾಹಾರ ಜಂಗಮವ ಕೇಳಿಸುವೆ, ಘ್ರಾಣದಾಹಾರ ಜಂಗಮವ ವಾಸಿಸುವೆ, ಜಿಹ್ವೆಯಾಹಾರ ಜಂಗಮವ

---

[1] ನು (ಖ). [2] ಸ (ಜ.ಫ). [3] ವುದೇ (ಕ.ಖ.ಗ.ಘ.ಛ). [4] ಳ್ವುದೆ (ಕ.ಖ.ಗ.ಘ.ಛ).

ರುಚಿಸುವೆ, ಕವಚದಾಹರ ಜಂಗಮವ ಹೊದಿಸುವೆ, ಅಧಿಕಪ್ರೇಮಪರಿಣಾಮಿಗಳ ಮಾಡುವೆ ಸಕಲಪದಾರ್ಥಗಳ ನೀಡುವೆ ಕೂಡಲಸಂಗಮದೇವ, ನಿಮ್ಮ ಶರಣರಿಗೆ. ||೫||

ನ್ಯಾಯವನ್ಯಾಯ ಕುಲಕುಲ ಸಮರ್ಥಸಮರ್ಥ
ಕಾಯಾಂಗಹೀನ [1]ನಿಸ್ಸೀಮಚರಿತನನಭಿ[1]
ಪ್ರಾಯ ಪ್ರಯೋಜ ದುರ್ನೀತರೆಂದೆನ್ನೆ ಲಿಂಗಾಂಗಿಗಳೆ ಸಂಗನೆಂದು ।
ಆಯು ಲಿಂಗ[2]ವು[2]ಭಾಷೆ ಜಂಗಮವೆನಿಪ ಭಾಷೆ
ಕಾಯವಂಚನೆ ಜೀವವಂಚನಿಲ್ಲದ ಭಾಷೆ
ಮಾಯಾಮಥನಕಾಲಕರ್ಮಭಯಭಂಗಹೊದ್ದದ ಭಾಷೆ ಬಸವಭಾಷೆ ||೧೪||

ಒಡಲಾಸೆ ಮಡದಿಮಕ್ಕಳಿಗೆಂದು ಕುದಿದು ಧನ
ವಡೆದಡೆನ್ನಯ ಮನಕೆ ಮನಸಾಕ್ಷಿಯೆನಲು ಭವಿ
ಪೊಡವೀಶ ಬಿಜ್ಜಳನ ಗದ್ದುಗೆಯ ಕೆಳಗೆ ಕುಳಿತೋಲೈಪುದೆಂತೆಂದೊಡೆ ।
ಕೊಡುವೆನುತ್ತರಗೊಡಲ್ಕಮ್ಮೆನಂತ್ಯಜರ ಗೃಹ
ಕೆಡೆಯಾಡಿ ಕೈಕೂಲಿಗೈದಾದಡಂ ಲಿಂಗ
ದೊಡಲು ಜಂಗಮಕಲ್ಲದೆನಗೆನಲು ತಲೆದಂಡವೆಂಬುದು ಬಸವಪ್ರತಿಜ್ಞೆ ||೧೫||

ವಚನ—

ಹೊತ್ತಾರೆಯೆದ್ದು ಕಣ್ಣಹೊಸೆವುತ್ತ ಎನ್ನೊಡಲಿಂಗೆ ಒಡವೆಗೆ ಮಡದಿ ಮಕ್ಕಳಿಗೆಂದು ಕುದಿದೆನಾದೊಡೆ ಎನ್ನಮನಕ್ಕೆ ಮನವೇ ಸಾಕ್ಷಿ, ಭವಿಬಿಜ್ಜಳನ ಗದ್ದುಗೆಯಕೆಳಗೆ ಕುಳಿತು ಓಲೈಸುವೆನೆಂದು ನುಡಿವರು

" ಅಶನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ ।
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ ॥ "

ಎಂಬ ಕೃತಿಯ ಬಸವಣ್ಣನೋದುವನು, ಎಂಬವರಿಗೆ ಕೊಡುವೆನುತ್ತರವ, ಕೊಡಲಮ್ಮೆನು, ಹೊಲೆಹೊಲೆಯರಮನೆಯಲ್ಲಿ ಹೊಕ್ಕು ಸಲೆ ಕೈಕೂಲಿಯ ಮಾಡಿಯಾದಡೆಯು ನಿಮ್ಮನಿಲವಿಂಗೆ ಕುದಿವೆನಲ್ಲದೆ ಎನ್ನ ಒಡಲವಸರಕ್ಕೆ ಕುದಿದೆನಾದೊಡೆ ತಲೆದಂಡ ಕೂಡಲಸಂಗಮದೇವ. ||೬||

ಆರಂಭವಂ ಮಾಳ್ಪೆ ಗುರುಪೂಜೆಗೆಂದು ವ್ಯವ
ಹಾರಮಂ ಮಾಳ್ಪೆ ಲಿಂಗಾರ್ಚನನಿಮಿತ್ತ ನಾ
ನಾರನಾದಡೆ ಓಲಗಿಪೆ ಲಿಂಗಜಂಗಮದ ದಾಸೋಹ ಕೂರ್ತು [3]ಹಲವು[3] ।

[1] ನಿಮ್ಮಚ್ಚರಿತನನ್ನ (ಜ). [2] ಡ (ಥ). [3] ಸಲಹು (ಕ.ಗ.ಥ.ಖ).

ಚಾರಿತ್ರ ಕರ್ಮವೇ[1]ನವರವರ[1] ಮುಖದಿಂದೆ
ಸಾರಿದರ್ಥವ ಶಿವನ ಸೊಮ್ಮು ಸಂಬಂಧಕಾ
ನಾರಾಧಿಸುವೆನಲ್ಲದನ್ಯಕ್ಕೆ ಹೊಗೆಸೆನೆಂಬಾಣೆ ಬಸವನ ವಚನವು ॥೧೬॥

ವಚನ—

* ನಾನು ಆರಂಭವ ಮಾಡುವೆ ಗುರುಪೂಜೆಗೆಂದು ; ನಾನು ವ್ಯವಹಾರವ ಮಾಡುವೆ ಲಿಂಗಾರ್ಚನೆಗೆಂದು. ನಾನು ಸೇವೆಯ ಮಾಡುವೆ ಜಂಗಮದಾಸೋಹಕ್ಕೆಂದು ; ನಾನಾವ ಕರ್ಮ ಮಾಡಿದಡೆಯೂ ಕರ್ಮಫಲಭೋಗವ ನೀನೆ ಕೊಡುವನೆಂಬುದ ನಾನುಬಲ್ಲೆ. ನೀ ಕೊಟ್ಟ ದ್ರವ್ಯವನು ನಿಮಗಲ್ಲದೆ ಮತ್ತೊಂದು ಕ್ರಿಯ್ಯೆ ಮಾಡೆನು. ನಿಮ್ಮ ಸೊಮ್ಮಿಗೆ ಸಲಿಸುವೆನು ನಿಮ್ಮಾಣೆ ಕೂಡಲಸಂಗಮದೇವ. ॥೭॥

ಭಾಷೆದೂಷಣ ಭಕ್ತನೆನೆ ಭವಿಯ ಬೆರಸುವ ಮ
ಹೇಶನೆನೆ ಪರಧನ ಪರಾಂಗನೆಯುರಳಿಪ ವಿ
ಶ್ವಾಸಿ ಪ್ರಸಾದಿಯೆನಲಪಮೃತ್ಯು ರೋಗ ಭಯ ಪ್ರಾಣಲಿಂಗೆನೆ ಪ್ರಾಣವು ।
ಆ ಶಿವನೊ[2]ಳ[2]ಸ್ಥಿರತ್ವತೆ ಶರಣನೆನಲಿಂದ್ರಿ
ಯಾಸಕ್ತಗೈಕ್ಯನೆನೆ ಜರೆ ಮರಣರಹಿತಂಗ
ದಾಸೆ ವ್ರತಗಳನುಳಿದ ಶಿವಕಿಂಕರರ ದಾಸ ಭೃತ್ಯವ್ರತ ಬಸವ ಶೀಲ ॥೧೭॥

ವಚನ—

*ಭಕ್ತನೆಂತೆಂಬೆ ಭವಿಯ ಸಂಗ ಬಿಡದನ್ನಕ್ಕರ, ಮಹೇಶ್ವರನೆಂತೆಂಬೆ ಪರಸ್ತ್ರೀ ಪರಾರ್ಥ ಬಿಡದನ್ನಕ್ಕರ. ಪ್ರಸಾದಿಯೆಂತೆಂಬೆ ಆದಿವ್ಯಾಧಿ ನಷ್ಟವಾಗದನ್ನಕ್ಕರ? ಪ್ರಾಣಲಿಂಗಿಯೆಂತೆಂಬೆ ಪ್ರಾಣಲಿಂಗದಲ್ಲಿ ಸ್ವಸ್ಥಿರವಾಗದನ್ನಕ್ಕರ? ಶರಣನೆಂತೆಂಬೆ ಪಂಚೇಂದ್ರಿಯ ನಷ್ಟವಾಗದನ್ನಕ್ಕರ? ಐಕ್ಯನೆಂತೆಂಬೆ ಜನನ ಮರಣರಹಿತವಾಗದನ್ನಕ್ಕರ? ಇವೆಲ್ಲ ಒಂದೊಂದು ಭಾಷೆ ಮೋಸವ್ರತನೇಮಂಗಳ ನಾನಱಿಯೆ, ಅಘಟಿತಾಘಟಿತ ವರ್ತಮಾನವ ನಾನಱಿಯೆ. ನಿಮ್ಮ ಶರಣರ ತೊತ್ತು ಭೃತ್ಯಾಚಾರವ ಮಾಡುವೆ ಕೂಡಲಸಂಗಮದೇವ. ॥೮॥

ತನುಮನಧನಂಗಳೆಂಬವು ಭಕ್ತಿರತಿಯ ರೂ
ಪಿನ ವಿಳಾಸವು ಶಿವನ ಕಾಮಿತದ ಕಾಮಸಂ
ಗನುಬಂಧನಂತಾಗಿ ಸತಿಶರಣ ನಾನುಪತಿ ಲಿಂಗ ಜಂಗಮಮೂರುತಿ ।
ತನುವಿಡಿದು ತನುವಬೇಡದಡೆ ಕಂದಿದೆನಯ್ಯ
ಮನವಿಡಿದು ಮನವಬೇಡದಡೆ ಕುಂದಿದೆ ಕಾಡಿ
ಧನವ ಬೇಡದಡೆ ಬಡವಾದೆನೆಂಬಾಶ್ಚರ್ಯವಚನವಾಕ್ಸಿದ್ಧ ಬಸವ ॥೧೮॥

---

[1] ನೇನವರ (ಜ). * ಈ ವಚನಗಳು 'ಜ' ಪ್ರತಿಯಲ್ಲಿಲ್ಲ. [2] ಳಂ (ಬ.ಕ).

ವಚನ--

* ಕಂದಿದೆನಯ್ಯ ನಾನು ನೋಡುವರಿಲ್ಲದೆ, ಕುಂದಿದೆನಯ್ಯ ನಾನು ನುಡಿಸುವರಿಲ್ಲದೆ, ಬಡವಾದೆನಯ್ಯ ನಾನು ತನುಮನಧನವ ಬೇಡುವರಿಲ್ಲದೆ. ಕಾಡುವ ಬೇಡುವ ಶರಣರ ತಂದು ಕಾಡಿಸು ಬೇಡಿಸು ಕೂಡಲಸಂಗಮದೇವ. ॥೯॥

ಆಳವಾಡಿದಡೆ ಅಳಲಿಸುತ ಬಳಲಿಸಿದೊಡಂ
ಮೇಳವಾಡಿದಡೆ ಬೆಚ್ಚಿಸಿ ಬೆದಱುದೋಱಿದಡೆ
ಬೋಳೈಸುತೊಳ ಹೊಱಗನೊತ್ತಿ ನೋಡಿದಡೆ ಮುಯ್ಯಾನುತ ಹೊಳೆದು ಹೋದಡೆ।
ಬೇಳು ಮಾಡಿದಡೆ ಬೆಂಬತ್ತಿದಡೆ ಭರ್ಗನಿ
ರ್ಮ್ಮಾಳಿನ ಮನಂ ನಾಣ್ಚಿದಡೆ ಚಿತ್ತಭೀತಿಯಂ
ತಾಳಿದಡೆ ಭಾವ ಭ್ರಮಿಸಿದಡೆ ನಿರ್ಮ್ಮಾಣಿಯೆಂಬ ಪ್ರತಿಜ್ಞೆ ಬಸವಗೆ ॥೧೯॥

ವಚನ—

* ಬೆದಱಿಸುವ ಬೆಚ್ಚಿಸುವ ಮುಯ್ಯಾನುವ ಮೇಳವಾಡುವ ಆಳಿಗೊಳಿಸುವ ಅಳಲಿ ನುಡಿಸುವ ಬಳಲಿಸುವನೊತ್ತಿನೋಡುವ ಒಳಹೊಱಗೆ ಹೊಳೆದು ಹೋಹ ಕೇಳದೆಬಹ ಬೇಳುಮಾಡುವನಾಳವಾಡುವ ಹೊಳೆದು ಹೋಹ ನಾ ಯಿದಕ್ಕಂಜೆ ಕೂಡಲಸಂಗಮದೇವ. ॥೧೦॥

ಒಟ್ಟಿರ್ದ ಧನವ [1]ನೆಲ[1]ದಂತೆ ಮಾಡಿದೊಡೆ ನಾ
ಮುಟ್ಟುವ ವಧುವ[2] ಮುಂದೆ ಕೂಡಿ ಕಾಡಿದೊಡೆನಗೆ
ಹುಟ್ಟಿದ ಶಿಶುಪ್ರಕರವಂ [3]ತುಂಡಿಸೆಂಡಲೆವುತಿರಲು[3] ಮೇ[4]ಣ್[4]ನ್ನಂಗವ ।
ಇಟ್ಟಿಯಿಂದಿಡಲಿ ದಿಗುಬಲಿಗೊಡಲಿ ಶೂಲದಿಂ
ಹೆಟ್ಟುತಿರೆ ಲಿಂಗಜಂಗಮದ ದಾಸೋಹಮಂ
ಬಿಟ್ಟಡೆ ಪ್ರಸಾದಕ್ಕೆ ತಪ್ಪಿದೊಡೆ ಕೊಯ್ಯೂಗನೆಂಬುದು ಬಸವಪ್ರತಿಜ್ಞೆ ॥೨೦॥

ವಚನ—

ಅರ್ಥವನನರ್ಥವ ಮಾಡಿ [5]ಕೋಳಾಹಳಂ[5]ಗೆಯ್ಯುತ್ತಿರಲಿ ಹುಟ್ಟಿದ ಮಕ್ಕಳ ಕಡಿದು [6]ಖಂಡವ ಮಾ[6]ಡುತ್ತಿರಲಿ ಮುಟ್ಟುವ ಸ್ತ್ರೀಯಳ ಮುಂದೆ ಅಭಿಮಾನಂಗೊಳುತಿರಲಿ, ಇಂತೀ ತ್ರಿವಿಧವು ಹೊಱಗಣವು; ಮತ್ತೆನ್ನಂಗದ ಮೇಲೆಬರಲಿ ಹಿಡಿದು ಖಂಡವ ಕೊಯ್ಯುತ್ತಿರಲಿ ಇಕ್ಕುವ ಶೂಲಪ್ರಾಪ್ತಿಯಾಗಲಿ, ಇತ್ತೊಂದೆಶೆಯತ್ತೊಂದೆಶೆಯಾಗುತ್ತಿರಲಿ, ಮತ್ತೆ ಲಿಂಗಜಂಗಮದ ಆರಾಧನೆಯ ಮಾಡುವೆ

---

* ಈ ವಚನ 'ಜ' ಪ್ರತಿಯಲ್ಲಿಲ್ಲ. [1] ನೆಲ್ಲ (ಘ), ನೊಲಿ (ಜ.ಗ). [2] ಮುಟ್ಟುವಾವಧುವ (ಖ.ಗ). [3] ತುಂಡಿಸೆಂದುಲಿವುತಿರಲು (ಕ). [4] ಲೆ (ಘ). [5] ಕಳುಹು (ಘ.ಗ). [6] ತುಂಡನೆಮಾ (ಗ.ಘ).

ಪ್ರಸಾದಕ್ಕೆ ತಪ್ಪೆ ಇಂತಪ್ಪ ಭಾಷೆ ಕಿಂಚಿತು ಹುಸಿಯಾದೊಡೆ ನೀನಂದೆ ಮೂಗ ಕೊಯ್ಯಿ ಕೂಡಲಸಂಗಮದೇವ. ॥೧೧॥

ಆನೆ ಮೊದಲಿರುಹೆ ಕಡೆ ಯೆಂಭತ್ತು ನಾಲ್ಕು ಲ
ಕ್ಷ್ಯೋನಿ ಮುಖದೊಳಗದೇನಾನೊಂದು ಮುಖದಿ ಶಿವ
ನೀ ನೊಲಿದುದನು ಬಂದು ಬೇಡು ಬೇಡದೊಡೆಮ್ಮ ಪ್ರಮಥರ್ಕಳಾಣೆ ನಿನಗೆ।
ಆನೆಕುದುರೆಯನು ಭಂಡಾರವಸ್ತ್ರಾಭರಣ
ನಾನಾಪದಾರ್ಥಗಳ ಬಯಸಿ ಬಹ ಚರಲಿಂಗ
ದಾನನವ ಕಾಣದಾಂ ಬಡವಾದೆನೆಂಬ ಪ್ರತಿಜ್ಞೆ ಬಸವನೊಳಸೆದುದು ॥೨೧॥

ವಚನ—

ಎಂಭತ್ತು ನಾಲ್ಕು ಲಕ್ಷದೊಳಗೊಂದು ಮುಖವಾಗಿ ಕಾಡಿ ನೋಡೆನ್ನನು ಬೇಡಿ ನೋಡೆನ್ನನು ಬೇಡದಿರ್ದೊಡೆ ಅಯ್ಯ, ನಿನಗೆಪ್ರಮಥರಾಣೆ. ನೀನು ಆವ ಮುಖದಲ್ಲಿ ಬಂದು ಬೇಡಿದಡೀವೆ ಕೂಡಲಸಂಗಮದೇವ. ॥೧೨॥

ವಚನ—

ಆನೆಭಂಡಾರ ಲಾಯದ ಕುದುರೆಯ ಬೇಡುವರಿಲ್ಲದೆ ಬಡವಾದೆನಯ್ಯ, ಬೇಡುವುದೇನು ದೇವ? ಮುನ್ನ ಬೇಡಿದೆ ಸಿಂಧುಬಲ್ಲಾಳನ ವಧವನು. ಇನ್ನು ಬೇಡದೊಡೆ ನಿಗಳವನಿಕ್ಕುವೆ. ಬೇಡಿದ ಶರಣರಿಗೆ ನೀಡದಿರ್ದಡೆ ತಲೆದಂಡ ಕೂಡಲಸಂಗಮದೇವ. ॥೧೩॥

ತನು ಮನ ಧನಂ ನಿಮ್ಮದಾ ನಿಮ್ಮದಾಸನಾ
ನಿನಿತರೊಳು ಸಂಚು ವಂಚನೆಯುಳ್ಳಡಾ ನಿನ್ನ
ಮನಕೆ ಬಾರದ ತೊತ್ತು ಕಡಿ ಕಯ್ಯ ಹೊಡೆ ಬಾಯ ತು[1]ಡಿ[1]ತಿಂದ ಜಿಹ್ವೆಗೀಳು ।
ಎನಿತು ಜಂಗಮಲಿಂಗಬಂದಡಾ ದಾಸೋಹ
ವನಿತಕಲಸಿದೊಡೆ ಓಸರಿಸಿದಡೆ ಹಲುದೋಱ
ಮನಸಿಜಾತಂಕ ಮೂಗ ಕೊಯ್ದು ಹಾ[2]ಕೆ[2]ಂದುದಾ ಬಸವನ [3]ಪ್ರತಿಜ್ಞೋತ್ತರ[3] ॥೨೨॥

ವಚನ—

*ನೀನು ಇಕ್ಕಿದ ಬೀಯದಲ್ಲಿ ವಂಚನೆಯುಳ್ಳಡೆ ಸಂಗ, ನಿನ್ನ ತೊತ್ತುಗೆಲಸಕ್ಕೆ ದೂರವಯ್ಯ ಕಡಿವಂದದೆ ಕಯ್ಯಹಿಡಿದು ಬಡಿದು ಗಲ್ಲವ ನುಲಿವುದಯ್ಯ. ತುಡುಗುಣಿ ಸ್ವಭಾವವೆನ್ನಲ್ಲಿಲ್ಲಯ್ಯ. ಜಂಗಮವು ಮನೆಗೆ ಬಂದಡೆ ಓಸರಿಸಿದೆನಾದಡೆ ಹಿಡಿದು ಮೂಗ ಕೊಯ್ಯೂಡಲಸಂಗಮದೇವ. ॥೧೪॥

---

[1] ಡು (ಥ). [2] ಯ್ಯುವದೆಂ (ಗ.ಫ.ಥ). [3] ಪ್ರತಿಜ್ಞೆ (ಗ.ಥ.ಫ). * ಈ ವಚನ 'ಜ' ದಲ್ಲಿಲ್ಲ.

ಸರ್ಪಭೂಷಣದೇವ ಭಕ್ತದೇಹದೊಳಡಗಿ
ಬಪ್ಪ ಭಕ್ತರೊಳು ಬಹನಾಗಿ ಮಂಚದ ಮೇಲೆ
ಇಪ್ಪನಾಚಾರಿಗಾ ಜಂಗಮುಸಮಕ್ಷದೊಳು ವಾಹನಿದಿರಾಸನದೊಳು ।
ಇಪ್ಪಂಗೆ ಧಿಟ್ಟತನದಿಂದ[1]ಲವದಿರಲಿ[1] ಬೆರೆ
ದಿರ್ಪಂಗೆ ಶೂಲ ಕಾದಿಟ್ಟಿ[2]ಗೆ ಕುಬಂಧನದ[2]
ಪ್ರಾಪ್ಯ[3] ಭವಬಾಧೆಯುಂಟಾಗೊಲ್ಲೆನೆಂಬುದಾ ಬಸವಭಾಷಾಡಂಗುರ ॥೨೩॥

ವಚನ—

ಭಕ್ತದೇಹಿಕದೇವನಪ್ಪ ಸದುಭಕ್ತರ ಬಳಿಯಲ್ಲಿ ಅಳ್ದನು ಬರಲು ಆಳು ಮಂಚದಮೇಲೆ ಇಪ್ಪುದು ಗುಣವೆ ಹೇಳಾ ಕೂಡಲಸಂಗಮದೇವಾ, ಜಂಗಮವು ಮನೆಗೆ ಬಂದಾರೆಂದು ನಾನು ಮಂಚವನೇಱದ ಭಾಷೆ. ॥೧೫॥

ಪುನರಪಿವಚನ—

ಜಂಗಮದ ಸನ್ನಿಧಿಯಲ್ಲಿ ವಾಹನವನೇಱಲಮ್ಮೆ, ಏಱದೊಡೆ ಭವಹಿಂಗದು ಏನುಕಾರಣ? ಮುಂದೆ ಶೂಲವನೇಱುವ ಪ್ರಾಪ್ತಿಯುಂಟಾದ ಕಾರಣ. ಜಂಗಮವು ಬರಲಾಸನದೊಳಿರಲಮ್ಮೆ ಇದ್ದರೆ ಭವ ಹಿಂಗದು ಅದೇನುಕಾರಣ? ಮುಂದೆ ಕಾದಿಟ್ಟಿಗೆಯ ಮೇಲೆ ಕುಳ್ಳಿರುವ ಪ್ರಾಪ್ತಿಯುಂಟಾದ ಕಾರಣ. ಇಂತೀ ಬಾಧೆ ಭವಂಗಳಿಗೆ ಅಂಜುವೆನಯ್ಯ ನಿಮ್ಮವರ ಸುಳುಹು ನೀವೆಂದು ಭಾವಿಸಿ ತೊತ್ತು ಭೃತ್ಯನಾಗಿರಿಸಯ್ಯ ಕೂಡಲಸಂಗಮದೇವ. ॥೧೬॥

ಸಾಕ್ಷಿಗ್ರಂಥ—

* ಭಸಾಙ್ಮಗಮಾಗತಂ ದೃಷ್ಟ್ವಾ ಆಸನಂ ಚ ಪರಿತ್ಯಜೇತ್ ।
ದದ್ಯಾಚ್ಚೇತರಥಾ ತಸ್ಯ ಪೂರ್ವಧರ್ಮೋ ವಿನಶ್ಯತಿ ॥

ಭೂರುಹಕೆ ಮೂಲವಕ್ತ್ರಂತಂತೆ ಲಿಂಗವಿ
ಸ್ತಾರಕಾ ಜಂಗಮವೆ ವಕ್ತ್ರವಂತಾಗ್ಯವರ್ಗ
ಳಾರೇನ [4]ನಿಶ್ಚೈತ್ರಸಿತೀವ[4] ಪ್ರತಿಜ್ಞಾರ್ಥ ಪ್ರಾಣಾಭಿಮಾನಂಗಳೆಲ್ಲ ।
ಕಾರಣಾತ್ಮರ್ಗಂಜದಿತ್ತವರ ನಚ್ಚುಮ
ಚ್ಚೇಱ ಸಲೆಮಾಱೋಗಿ ನಿಶ್ಚಯದ ಭಾವ ಸಂ
ಪೂರತೆಯೊಳಭವಗಾಕಂಪದೋಱುವ ಭಕ್ತಿ ಬಲ್ಮೆ ಬಸವನೊಳೆಸೆದುದು ॥೨೪॥

---

[1] ಳುಕದಿರದೆ (ಜ). [2] ಯಬಂಧನಂ (ಜ). [3] ತಪ್ಪದೀ (ಜ). [4] ನಿಶ್ಚೈತ್ರಸಿ ೦ವ (ಖ.ಗ).

* ಭಸ್ಮಾಂಗೀಯಾಗತೋದೃಷ್ಟ್ವಾ ಆಸನೇನಪರಿತ್ಯಜೇತ
ದತ್ವಾಪಿತರಶೋಧರ್ಮಂ ಸರ್ವಧರ್ಮವಿನಶ್ಯತಿ (ಸ.ಪ್ರ)

ವಚನ—

ನೆಚ್ಚಿದೆನೆಂದಡೆ ಮೆಚ್ಚಿದೆನೆಂದಡೆ ಸಲೆಮಾಱುವೋದೆನೆಂದಡೆ ತನುಮನ ಧನವನೊಡ್ಡಿ ಅಲ್ಲಾಡಿಸುವ, ಇವೆಲ್ಲವಕ್ಕಂಜದಿರ್ದವರ ಕಂಡಡೆ ಭಕ್ತಿಕಂಪಿತ ಕೂಡಲಸಂಗಮದೇವ, ‖೧೭‖

ಲಿಂಗವಿರಹಿತ ಭುಂಜಿತಂಗಳವು ನರಪಿಸಿತ
[1]ಲಿಂಗನರ್ಪಿತವನ್ನ ಹೀನ[1]ಸಲಿಲ ವಿಣ್ಮೂತ್ರ ಶಿವ
ಲಿಂಗವಿರಹಿತ ದಂತಧಾವನಂಗಳು ಸಾರಮೇಯಾಸ್ಥಿ ಸಮವು [2]ಮಱೆದು[2]।
ನುಂಗಿದುಗುಳ್ಕಿಲ್ಬಿಷ ಹಸಿವು ತೃಷೆ ವ್ಯಸನ ಕೂರ್ತು
ಲಿಂಗಾರ್ಪಿತಂಗೆಯ್ಯದನ್ಯಕೆಱಗಿದೊಡೆ ವ್ರತ
ಭಂಗ ತಲೆದಂಡವೆಂಬಾ ಪ್ರತಿಜ್ಞೋತ್ತರ ಪ್ರತಿಷ್ಠಿತಾಚಾರ್ಯ ಬಸವ ‖೨೫‖

ವಚನ—

*ಲಿಂಗಮುಖದಿಂದಬಂದ ಪ್ರಸಾದವಲ್ಲದೆ ಕೊಂಡಡೆ ಮಕ್ಕಳಡಗು ನರಮಾಂಸವಯ್ಯ, ಲಿಂಗಾರ್ಪಿತವಲ್ಲದ ಉದಕವ ಕೊಂಡಡೆ ಸುರೆ ಮೂತ್ರ. ನಿಮ್ಮ ಗಣಾಚಾರಕ್ಕೆ ಸಲೆ ಲಿಂಗಾರ್ಪಿತವಲ್ಲದೆ ಹುಲ್ಲುಕಡ್ಡಿಯ ಇಱಿದೆನಾದಡೆ ನಾಯ ಎಲುವು ಬದ್ಧಮಲಕ್ಕೆ ಬಾಯಿ ತೆಗೆದಂತೆ ; ನಿಮಗೆತ್ತಿದ ಕರದಲ್ಲಿ ಮತ್ತೊಂದಕ್ಕೆ ಕೈಯಾಂತಡೆ ಅನ್ಯಕ್ಕೆ ತಲೆವಾಗಿದಡೆ ವ್ರತಭಂಗ. ಅಳವಱಿಯದೆ ನುಡಿದೆನು, ನುಡಿದ ನುಡಿಯ ಕಡೆಮುಟ್ಟ ಸಲಿಸುವೆನಯ್ಯ, ಸಲಿಸದಿರ್ದಡೆ ತಲೆದಂಡ ಕೂಡಲ ಸಂಗಮದೇವ. ‖೧೮‖

ಸುರದೀರ್ಘಿಕೆಯ ಕಂಡುಕೊನವೆರಳ್ಗಳಿಂ ತುಡುಕಿ
ಶಿರದೊಳಾನುವನಂತೆ ಬಸವರಾಜನ ಶಬ್ದ
ಶರಧಿಯೊಳಗೊಂದೆರಡು ವಚನಸೂಚಕದೋಱಬಹುದಲ್ಲದಾ ಮಹಿಮನು।
ಒರೆದ ಲಕ್ಕದಮೇಲೆ ತೊಂಭತಾಱು ಸಹಸ್ರ
ವರವಚನಪರಮಾರ್ಥದಾಪ್ತಭಂಡಾರ ಕವಿ
ಸರಣಿಯ ಪದಾರ್ಥದೊಳಗೆಂತಡಕವಹುದಾನೆ ಮಾನದೊಳು ಹೊಕ್ಕಿಪ್ಪುದೆ ‖೨೬‖

ನಾರಿ ಸಿಂಗರಿಸಿರಲು ಕೂಟದಾತುರ ವಿಟಗೆ
ಮಾರಾಂಕ ವೊಡ್ಡಿತೆನೆ ಗೆಲುವಿನಾತುರ ಭಟಗೆ
ಕಾರಣಿಕನೇನಾನದೊಬ್ಬ ನಾ ಭಕ್ತನೆಂದುತ್ಸಹದಿ ಮೈದೋಱಲು।

---

[1] ಲಿಂಗಾರ್ಪಿತಂಹೀನ (ಖ.ಘ) [2] ಮರೆದು (ಖ). * ಈ ವಚನ 'ಜ' ಪ್ರತಿಯಲ್ಲಿಲ್ಲ.

ಗೋರಿಗೋಳಿಪಾತುರ ಪುರಾರಿಗಂತಾಗಿ ಬಸ
ವಾರಿಯನ ಸುಪ್ರಜ್ಞೋತ್ತರಕುಪಾಯವನ
ಪಾರಮಹಿಮನು ನೆನೆದು ಬಹುಮುಖ [1]ವ್ರತೋ[1]ತ್ತಮರೊಳಡಗಿ ಬರಲನುಗೈದನು ॥೨೭॥

ಬಹಳಭಕ್ತ್ಯಮೃತಾರ್ಣವತರಂಗಾವಳಿಯ
ಬಹಿರಂಗವರ್ಣನೆಗೆ ತರಬಹುದೆ ಶ್ರೀಶಿವನ
ಬಹುರೂಪಿಗಾತ ಬಹುಮುಖಮಂತ್ರಸಿದ್ಧನ ಪ್ರತಿಜ್ಞೋತ್ತರೋತ್ತರವನು।
ಗ್ರಹಿ[2]ಸಿ[2] ಲೆಕ್ಕಿಸಬಹುದೆ ನಿಮ್ಮಾತನಾರೂಢ
ಸಹಜಸಾಮರ್ಥ್ಯವನು ಯೆನುತ ನಂದೀಶನು
ತ್ಸಹದಿ ಪ್ರಮಥರ್ಗೊರೆದೊಲೊರೆದೆ ಬಸವೇಶನ ಪ್ರತಿಜ್ಞಾಸುವಚನಾರ್ಥವ ॥೨೮॥

ಇಂತಿದು ಸದಾಚಾರದೊಳಗೆ ಬೆಳಗುವ ಜ್ಯೋತಿ
ಕಾಂತಿಯ ಪ್ರತಿಜ್ಞಾಪವಾಡವಿದನಾಲಿಪ ಮ
ಹಾಂತರ್ಗೆ ಭವಭಯಪಮೃತ್ಯು ದುರ್ಭಿಕ್ಷ ಬಂಧನ ರೋಗ ರಾಜಬಾಧೆ।
ಚಿಂತೆ ವ್ಯಾಪ್ರುಹಿ ಚೋರ ದಾರಿದ್ರ ಕೃತ್ರಿಮ ಕು
ಜಂತ್ರ ನರಕಾದಿ ನಾನಾಭಯವನೋಡಿಸುವ
ಮಂತ್ರ ಬಸವಾಕ್ಷರತ್ರಯ ನಂಬಿ ನೀಡಿದೆನು ಕೈಯ ಶಿವನಾಣೆಸಹಿತ ॥೨೯॥

* ಬಾ ಯೆಂಬವರ್ಣ ಭವಬಂಧನಕ್ಷಯಕರಂ
ಸಾ ಯೆಂಬ ವರ್ಣ ಸರ್ವಜ್ಞಾನಸಾಧನಂ
ವಾ ಯೆಂಬ ವರ್ಣ ನಿರವಯದ ಘನಸುಖಸಿದ್ಧಿಯಂತಾಗೆ ತ್ರೈಕರಣದಿ।
ಸ್ವಾಯಂತಂಗೊಳಿಸುತ್ತೆ ಮಿಗೆ ಸರ್ವಮಂತ್ರಮಾ
ತಾಯೆಂದು ನಿಶ್ಚಯಿಸಿ ಜಪಿಪನವನಾವನಿ
ದಾರ್ಯದಿಂ ಮುಕ್ತಿಪದಮಂ ಸೂರೆಗೊಂಬನೆಂಬುದು ಬಸವಮಂತ್ರಜಗಕೆ ॥೩೦॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಬಸವನ ಪ್ರತಿಜ್ಞೋತ್ತರ ಪವಾಡಸಂಧಿ ॥೩೧॥

---

[1] ಪ್ರಮಥೋ (ಕ.ಖ). [2] ಸ (ಕ.ಖ). * ಈ ಪದ್ಯ ‘ ಜ ’ ದಲ್ಲಿಲ್ಲ.

ಒಂಬತ್ತನೆಯ ಸಂಧಿ

ಸೂಚನೆ—

ದಂಡನಾಯಕನಮಳಭಕ್ತಿ ಪಾವನಲೋಕ
ಚಂಡಕರ ಶಿವಶೀಲದೊಲುಮೆಯ ಪವಾಡಗಳ
ಭಂಡಾರಿ ಬಸವಣ್ಣ ಮೆಱೆದನಾ ಲೋಕವೀ ಲೋಕೋಪದೇಶವಾಗಿ।

ಶ್ರೀಮದಖಿಳಾಗಮಾರ್ಣವ ಮಥನಗೈದುನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತು ವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸ ಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಶ್ರುತಿಪುರಾಣಾಗಮ ರಹಸ್ಯಾದ್ಯರೊಳು ವಚೋ
ಮೃತಸಿದ್ಧಶಾಸನ ಧ್ವಜವೆತ್ತುವಲ್ಲೆನ್ನ
ಸ್ತುತಿಯನರ್ಥಕಪರೋಚಿತವಕಾರಕ ಶಿಥಿಲಪದವನುಚಿತವಪೂರಕ।
ಕಥೆಗುಣಿಕೆಯಱಿಯದೇನಾನೊಂದು [1]ಸಂದಿಕ್ಕು
ತೆತಸ್ಥಿತಂ ಗಱೆವ[1]ಕಾಳ್ಹೀನೋಕ್ತಿ ದೇವಕವಿ
ಶತಪತ್ರನಾಭ ಸಿಂಹನ ಬಗೆಯ ಹೊಗುವವೆಂತಪಶಬ್ದಕೀಳ್ಮೃಗಗಳು ॥೨॥

ಆದಿಯ ಪುರಾತನ ಪುರಾತನರ್ಕೇಳ್ಬ್ರಹ್ಮ
ವಾದ ನಿಲುಕದ ನಿಲುಕಡೆಯ ಪರಬ್ರಹ್ಮದ ಕ
ಳೋದಯದ ಚಿದ್ಘನಘನಾಚ್ಯು[2]ತೋತ್ಕರದ ಗಾಂಭೀರ[2] ನಿಜಕಲ್ಪಲತೆಯ।
ಮಾಧುರ್ಯ [3]ಫಳವ[3] ಶಿವ ಶಿವ ಭಕ್ತಿವೆಸರಿಟ್ಟು
ಮೇದಿನಿಗೆ ಕೊಟ್ಟಂತಿರಿಪ್ಪ ಬಸವನ ಭಕ್ತಿ
ವಾದದ ಪವಾಡಪ್ರಬಂಧದಾನಂದ [4]ಭಾಸ್ವದ್ವಿ[4]ಲಾಸಂದೋರ್ಪೆನು ॥೩॥

ಕಾರಣಾತ್ಮ ಜ್ಯೋತಿ ಕಲ್ಪಿತ ಲಿಪಿಯ ಗೆಲ್ದು
ವೀರಬಿಜ್ಜಳನ ವಿವಿಧೈಶ್ವರ್ಯಕಖಿಳಭರ
ಭಾರಭಂಡಾರದೊಡೆತನವಡೆದು ಸುಖಮಿರ್ಪ ಬಸವಭಕ್ತಿಯ ಭಾಗ್ಯದ।

---

[1] ಸಂದಿಕ್ಕುದೇಸ್ಥಿತಂಗರೆವ (ಖ). [2] ಘನಚ್ಯುತೋತ್ತರದಗಾಂಭೀರ್ಯ (ಗ.ಖ).
[3] ಪಲ್ಲವ (ಘ). [4] ಭಾಷಾವಿ (ಗ. ಘ).

ಮೇರು ಪಟ್ಟಕ್ಕೊಯ್ಯೆಗ್ಯವಾಗಲಾ ನಗತಟದಿ
ಚಾರುತರ ಮೂರ್ಕೋಟಿ ಋಷಿಯರಾಶ್ರೈಪೊಲು ಸು
ಚಾರಿತ್ರಶೀಲ ಶಿವಲೀಲಾಪ್ರಕೃತಿಪುರುಷರೈತರಲ್ಲೊಡಗಿತಲ್ಲಿ ‖೪‖

ಸ್ವಾತಂತ್ರಶೀಲವ ಶಿವಜ್ಞಾನರೂಪುವಿಡಿ
ದೋತು ತನ್ಮುಖ ಶತಸಹಸ್ರಮುಖದಿಂ ಭಕ್ತಿ
ಭೂತಳಕ್ಕೈದುವೊಲು ಬರೆ ಬಸವರಾಜ ದ್ವಿಜರಾಜಮುಖಮಂಡಲಕ್ಕೆ ।
ಏತೆಱದೊಳಿನಿತು ಚರಲಿಂಗರೂಪಿಂ ಬ[1]ಹ[1]ಪು
ನೀತರ್ಗಳಾಗಮವ್ರತಾಚಾರ ಶೀಲದ ವಿ
ಭೂತಿಯ ವಿಲಾಸಕಿಚ್ಛೈಸಿ ತನ್ನಿಶ್ಚಯಂ ಸಲಿಸುವೊಲು ಸಲಿಸುತಿರಲು ‖೫‖

ಕಾಶೀನಿವಾಸದೊಳು ನಿತ್ಯಲಿಂಗಾರ್ಚನ ವಿ
ಶೇಷತರ ನೇಮಕ್ಕೆ ಬೆರಳ್ಗಳ ಸಮರ್ಪಿಸಲು
ದಾಸಗಳು ಪ್ರತಿವಾದಿಸಲ್ಕೆ ಕೇಶವನ ಪ್ರತಿಮೆಯು ಕರೆದು ವಿಶ್ವೇಶಗೆ ।
ತಾಶರಣ್ಬೊಗಿಸಿದಾ ಶಿವಲೆಂಕಮಂಚರಸ
ರೀ ಶಿವಾಗಮಶಿದ್ಧ ಬಸವಣ್ಣನಾಚಾರ
ವಾ ಸುಧಾರಸಕರ್ಣಪೂರ್ಣವಾಗೊಲುಮೆಯಿಂ ಬಂದ ಕಲ್ಯಾಣಪುರಕೆ ‖೬‖

ಬಸವಗಣ ಸಿಂಹಾಸನದ ಭಕ್ತಿಸಿರಿವನಿತೆ
ಯೊಸಗೆ ತನುವಂ ತಳೆಯಲವರ ಸನ್ಮಾರ್ಗಕೀ
ವಿಷಯಮುಖ ಮುಕ್ತಿಮುಖವಾಗಿ ಮುಯ್ಯಾನುತ್ತೆ ಬಂದ ಪುಣ್ಯದ ಪುಂಜಕೆ ।
ಸುಸಮಸಾಹಿತ್ಯ ಶರಣ್ಬೊಕ್ಕಾದರಿಸಿ ಲಿಂಗ
ಬೆಸನಕೇಂ ಬೇಹುದಂ ತಂದೀವುದಕ್ಕೆ ಶಿ
ಶ್ರೂಷಕರ ಕೊಟ್ಟವರ್ಗೆ[2]ಸೆವ[2] ಸುಯಿಧಾನವಂ [3]ಮಾಡಿಸೆ[3]ಮನೋಹರದೊಳು
‖೭‖

ಲಿಂಗಾಂಘ್ರಿಪೂಜನೆಯನಂಗೀಕರಿಸಲುಭಯ
ಲಿಂಗಿಗಳು ಲಿಂಗ ಜಂಗಮವು ಗಣಸಮೂಹದಿ ಸು
ಸಂಗದಿಂ ಕುಳ್ಳಿ[1]ದೀ[4]ತನ ಭಕ್ತಿ ನಿಜವಱಿಯಲಾ ಲೆಂಕಮಂಚರಸನು ।
ಲಿಂಗಮುಖವಾಗಿ ನುಡಿದಂ ಮೂಗುಳಂ ಮುತ್ತು
ರಂಗವಾಲೆಗೆ ಬೇಕೆಮಗೆ ನೇಮವೆನೆ ನಗುತ
ಸಂಗನಬಸವನೆದ್ದು ಬಿಳಿಯ ಜೋಳದ ರಾಶಿಯಿರೆ ಕಂಡು ಕೊಳಗುಗೊಂಡು ‖೮‖

---

[1] ಹು (ಕ.ಖ.ಗ.ಘ.ಛ). [2] ಯೆಸೆವ (ಘ). [3] ಮಾಡಿಸಿ (ಘ.ಛ). [4] ರೀ (ಘ).

ಆಳೆದು ಮೂಗುಳಜೋಳಮಂ ವೊಟ್ಟೆಗಟ್ಟಿ ತಂ
ದಿಳುಹೆ ಕೋಮಳ ಕಳಾಢಾಳ ಕಳಕಳಿಸುತು
ಜ್ವಲಕಾಂತಿ ಕಣ್ಗೆಸೆವ ವಿಮಲಮೌಕ್ತಿಕವಾದವಮಲ ಭಾವಿ[1]ತ[1] ಬಸವನ।
ಇಳೆಯೊಳಿಂದ್ರಾದ್ಯರೊಳು ದೇವತಾಂತರಭಕ್ತಿ
ಬಳಕೆಯೊಳದಾರು ಸರಿ[2]ಯೆನಲಮ್ಮೆ[2] ನಿಮ್ಮಾತ
[3]ಸು[3]ಳುಹಿನೊಳಗೀ ಕ್ರಮವದೆಂದು ನಂದೀಶನಾನಂದದಿಂದೊರೆದಡೊರೆದೆ ॥೯॥

ಮತ್ತೊಬ್ಬ ಮಹಿಮಾವಲಂಬಶೀಲದ ಶಿರಿ ಮ
ಹತ್ತತೆಯ ಮಂತ್ರಮೂರುತಿ ಸಿದ್ಧಶಿವಯೋಗಿ
ಯುತ್ತರಾಪಥದಿಂದ ಬಂದನುತ್ತುಂಗಸಂಗಮನೆನಿಪ ಪೆಸರಾತಗೆ।
ನಿತ್ಯನೇಮದ ನಿಜವ ಪೇಳದೆ ಶಿವಾರ್ಚನೆನಿ
ಮಿತ್ತಗಳನೆಲ್ಲವಂ ಮಾಡಿ ಬೋನವ ಹಿಡಿವ
ಹೊತ್ತಿನವಸರದ ಮೇಲೀಗಳಿಂತೀದ ಗೋಪಯವಾಗದಾಗದೆನಲು ॥೧೦॥

ಮಧ್ಯಾಹ್ನದಲಿ ಮನೆಯೊಳಿಲ್ಲ ಗೋವುಗಳು ಗೋ
ವಿದ್ದಡೀ ಕ್ಷಣವೀದವಿಲ್ಲವಿಲ್ಲೆಂದಡಿವ
ರೆದ್ದು ಹೋದಡೆ ಹೋಹುದೊಡನೆ ಭಕ್ತಿಯ ಭಾಗ್ಯವೆಂದೊಂದು ಕಱು ಕಟ್ಟಿರೆ।
ಸದ್ವಿನಯದಿಂ ಸಂಗ ಶರಣೆನುತ ನಿಜಭಾವ
ಸಿದ್ಧಿ[4]ಯಿಂದೈದಿ[4] ಮೈದಡಹಿ ಸದ್ಯೋಗರ್ಭ
ವರ್ಧನಂಗೈದು ಪ್ರಸವಿಸಲು ಪಾಲ್ಗಱೆದೆಱೆದ ಶಿವಶೀಲವ್ರತಿಗೆ ಬಸವ ॥೧೧॥

ಇಂತು ಶಿವಶೀಲರ್ಕಳಿಚ್ಛೈಸಿತಂ ಕೊಡುವ
ನಂತೆ ಬಸವಣ್ಣನದನಲ್ಲಾಡಿ ನೋಳ್ಪೆನೆಂ
ದಂತಕಾಂತಕ ಬಪ್ಪೊಲೊಬ್ಬ ಶಾಪಾನುಗ್ರಹ ಸಮರ್ಥನೆನಿಪ ನಿಯತ।
ಮಂತಣಂ ಕಾಳೇಶ್ವರದೊಳಿಪ್ಪ ತನ್ನ ಪೆಸ
[5]ರಿಂತು[5] ಕಂತೆಯ ಕಾಳಿಮಯ್ಯನೆನಲೊಪ್ಪುತ ಮ
ಹಂತ ಮಾಯಾದೂರ ಲಿಂಗವ್ಯಾಪಕನನ್ಯವಿಷಯನಿಶ್ಶಬ್ದ ಮೌನಿ ॥೧೨॥

ಪರಮಕಲ್ಯಾಣ ಕಲ್ಯಾಣದೊಳಗಿಹ ಬಸವ
ಪರಮಪಾವನರೂಪನಧಿಕಭಕ್ತಿಯ ಭಾಗ್ಯ
ಸಿರಿವಂತನಂತವರ ನೋಳ್ಪೆನೆನುತಂ ಬಂದನಿಂದುಧರ ಬಪ್ಪಂತಿರೆ।

---

[1] ಕಾ (ಖ.ಕ), ತಾ (ಫ). [2] ಯೆಂಬೆನೇ (ಕ.ಖ.ಗ.ಘ.ಛ). [3] ನೇ (ಜ), ನು (ಗ.ಘ.ಛ). [4] ಯಕ್ಕೆಂದು (ಗ.ಘ). [5] ರಂತೆ (ಜ).

ಗುರುಪದಸ್ಥನ ಕಾಣುತೆಱಗಿ ಮಾರ್ಗಾಚಾರ
ವೆರಸಿ ಸತ್ಕರಿಸಿ ಮಧ್ಯಾಹ್ನಕಾಲಕೆ ಸಕಲ
ಪಿರಿಯರೊಗ್ಗಿನಲಿ ಲಿಂಗಾರ್ಚನ ವಿಧಾನಕ್ಕೆ ಕುಳ್ಳಿದುದಱಿಂದ ಮೇಲೆ ‖೧೩‖

ಮೌನವಂ ಬಿಟ್ಟು ಸನ್ಮಾನಲಿಂಗಪ್ರೇಮ
ದಾನಂದವಾಗ್ವಳಕೆಯೊಳು ನಿತ್ಯನೇಮಕ್ಕ
ನೂನಸಾವಿರ ಸಂಪಗೆಯ ಪುಷ್ಪ ಬೇಕಿಲ್ಲದಿದ್ದಡೆ ಸಮಾಧಿಯೆನಲು।
ಏನ ಮಾಡುವೆನಕಾಲದೊಳುಂಟೆಯೆಂಬ ಕಾ
ಳ್ಪೀನೋಕ್ತಿಗಳ ಬಗೆದನೇ ವೇಳೆಯಲ್ಲವದ
ಕೇನೆಂದು ಸಾಧಾರಣದ ವಚನಗೊಟ್ಟನೇ ಮನ ವಚನ ಕಾಯಕದಲಿ ‖೧೪‖

ಮನಪರುಷದಿಂದಂಗಪರುಷವಂಗಸ್ಥಲದ
ಅನುಬಂಧದಿಂ ರೂಪು ರಸ ಗಂಧ ಶಬ್ದ ಪರು
ಷನ ಪರುಷವಂತಾಗಿ ಭಾವಪರುಷಂ ಪರುಷಕರ ಪರುಷಕಲ್ಪಭೂಜ।
ಕೊನರಾಗಿ ಕುಸುಮಿತವದಾಯ್ತು ಕರಶಾಖೆಯಿಂ
ಬನು[1]ವಿ[1]ಂದ ಹೊಂಗಣಗಿಲೆಯ ಸುಮಕೆ ಸಂಪಗೆಯ
ಘನಗಂಧ ರೂಪು[2]ರೂ[2]ಪಿಸಿ ಸಾವಿರವ ಕೊಟ್ಟ ಸಂಕಲ್ಪಸಿದ್ಧ ಬಸವ ‖೧೫‖

ಧೃಢವ್ರತಾಗಮಶೀಲರೊಲಿದಂತೆ ನುಡಿದುದಂ
ಕೊಡುವ ಗಡ ಬಸವನೆಂಬುನ್ನತವ ನೋಡಲ್ಕೆ
ಮೃಡ ತಾನೆ ಬ[3]ರವಡೆದ[3]ನೆನಲು ದಕ್ಷಿಣದಿಶಾಭಾಗದಿಂದೋರ್ವ ಶರಣ।
ನಡೆತಂದು ಲಿಂಗಾರ್ಚನೆಯ ಸಮಯದಲ್ಲಿ ಬಂ
ದೊಡೆಯರ್ಗೆ ಕಾಲೋಚಿತಾಗಮದಿ ಸತ್ಕರಿಸು
ತೊಡನೆ ಯೆಡೆಮಾಡಿ ಕುಳ್ಳಿರಿಸೆಲ್ಲರೊಳು ಬೋನವಿಡಿಯೆ ತಾನಿಂತೆಂದನು ‖೧೬‖

ಎಮ್ಮ ಶಿವಲಿಂಗತಾಳಿಂತಲ್ಲ ಬಸವೇಶ
ನಿಮ್ಮನಾಯಸಗೊಳಿಸಬಾರದೀ ವೇಳೆಗದು
ಬೊಮ್ಮಂಗಸಾಧ್ಯ ದೊರಕುವುದಕಾಲಂ ಮೇಲೆ ಕಾಲತಾನಾದೊಡಿಲ್ಲ।
ದಿಮ್ಮನಳವಡದು ಈ ಭೂಮಿಯಲ [4]ಸಕೃತೆನಲು[4]
ಬಿಮ್ಮಳಿದು ನಿರವಿಸೆನೆ ಬಕ್ಕೆವಲಸಿನ ಪಣ್ಣ
ದೆಮ್ಮಲಿಂಗಾಭೀಷ್ಟ ನಿಯತವೆನಲೇನೆಂಬೆ ತತ್ಕ್ಷಣೋಚಿತ ಮಹಿಮನು ‖೧೭‖

---

[1] ಹಿಂ (ಕ.ಖ). [2] ರೋ (ಕ.ಖ). [3] ರವಡದ (ಖ.ಕ). [4] ಸದಳವೆನಲು (ಖ), ಸಕೃತೆಯೆನಲು (ಕ).

ಭಾವಪರುಷದ ಹಸ್ತದಿಂದವರ ಕರೆದಿವರೊ
ಳಾವುದುಂ ಕೊಱತಿಲ್ಲ ಲಿಂಗಜಂಗಮುವಂಗ
ಪಾವನವ ನೋಡೆನಲು ಸರ್ವಾಂಗಲಿಂಗಮುದ್ರಾಬದ್ಧರಾಗಿದ್ದರು ॥೨೯॥

ಅರುಹತನೆದೆಯ ಮೇಲಾದಯ್ಯಲಿಂಗಮುಂ
ತೋಱಿದಂತಾ ಮೇಣಮುದ್ರೆಯ ಜಿನನ [1]ಹೋಳಿ[1]
ಕಾರಣಾತ್ಮಜ್ಯೋತಿ[2]ರ್ಲಿ[2]ಂಗಗಳು ಥಳಥಳಿಸಿ ಹೊಳೆದವಂತವರು ಶುದ್ಧ ।
ಚಾರಿತ್ರದಾಚಾರ್ಯರಾಗಿರ್ದರಿಳೆಯಱಿಯೆ
ಮೇರುವಂ ಸಾರಿರ್ದ ಕಾಕ ಹೊಂಬಣ್ಣವಹು
ದಾರೈವುದೆಂದಸಂಖ್ಯಾತರ್ಗೆ ಬಸವ ಪ್ರತಿದೋಱ ಮೆಱೆದಾಗಮವಿದು ॥೩೦॥

ಸನ್ನಿಹಿತ ಶರಣರ್ಗಳಕ್ಕರಿಂ ಕೇಳಿ ಪೂ
ರ್ವನ್ವಯಿತದಾಚಾರ್ಯನಾಚಾರಭಾಷಾಪ್ರ
ಸನ್ನಹಿತೆ[3]ಯಂಸನಾಗರವದಾಗರವಾ[3]ಗಿನಾಗಮುಫಲೋದಯುವನು ।
ಮುನ್ನಮೃತಮಥನದಲಿ ದೇವತಾದ್ಯರ ಗರಳ
ಬೆನ್ನಟ್ಟಿ ಹರಧರಿಸೆ ರುದ್ರಪಶುಪತಿ ಕೇಳ್ದ
ದಂ ನಿವಾರಿಸಲದುಗ್ರಾಗ್ನಿಮುಖ ಕಾಳೋರಗತ್ವವಡೆದೈತಂದೊಲು ॥೩೧॥

ಕಾಳಕೂಟವ[4]ನೂಡಿ[4] ಸರ್ಪೋಪಜೀವಿಗಳ
ಕಾಳಗಕೆ ಕಱುಗೈದ ಸಿಂಗಿಕಾಳೋರಗನು
ಹೇಳಿಗೆಯನುಚ್ಚೋಡಿ ಬಂದು ಬಸವರಸರರಮನೆಯ ಪ್ರೋಕ್ಕಜ್ಞಾತದಿ ।
ಏಳುದಿನವಿದ್ದುದಾ ದಿನ ಪಗಲ್ನಿದ್ರೆಮುಖ
ದಾಳಾಪಕೇಕಾಂತಗೃಹದಿ ನೆಲವಾಸಿನೊಳು
ನೀಲಲೋಹಿತನು ಮುಸುಕಿಟ್ಟು ಮಲಗಿರಲಿಕಾ ಕಾಳೋರಗಂ ತುಡುಕತು ॥೩೨॥

ಅಂಬರವ ಬಗೆದಂ[5]ಕೆದೋಱು[5]ವುಡುಪತಿಯಂತಿ
ರಂಬರದ ಹೊಱಗೆ ತೋಱುವ ಪದಾಂಗುಷ್ಠರುಚಿ
ತುಂಬಿ ಪೂರ್ಣಿಮದತ್ರಿತನಯನ ಕಳಾಪಾತ್ರೆ ಕಣ್ದೆಱೆದವ್ರೋಲು ಪದನಖ ।
ಬಿಂಬಿಸುವ ಪೆರ್ಬೆ[6]ರಳ ರಾಹುರಾವುರಿಮುಖದಿ[6]
ಜೃಂಭಣದಿ ಪಿಡಿದು ನಂಜಿನ ದಾಡೆಗಳೊಳೌಕಿ
ತುಂಬಿಕ್ಕಿ ರುಧಿರಪಾನವ ಮಾಡುತಿರಲಾಗಲೆದ್ದು ಬಸವರಸ ಕಂಡು ॥೩೩॥

---

[1] ಹೊರಳ್ಚಿ (ಕ.ಖ). [2] ಲಿಂ (ಜ). [3] ಶಾಂತಿಯಸನಾಗದಾಗರದಾ (ಜ).
[4] ನುಂಡ (ಕ.ಖ.ಗ ಘ.ಛ). [5] ಕೆದೋಱೊ (ಕ), ತೆ ಮಱೆವ (ಖ). [6] ಳಗರಾಹುರಾ
ಪುರಿಮುಖದಿ (ಕ.ಖ), ರಳರಾಹುರಾಹುರಿಮುಖವಿ (ಜ).

ಹೋ ಹೋ ಮಹಾದ್ರೋಹವಾಯ್ತು ಶಿವ ಶಿವ ಶಿವಗೆ
ದೇಹ ಮುಖ್ಯಾಭರಣವಂ ಕಾಲು ತಾಗಿತೆಂ
ಬೂಹೆಯಲ್ಲದೆ ಸಹಜಭಾವದೊಳು ಮುಟ್ಟಿ ಶರಣೆಂದುತ್ತಮಾಂಗದೋಱಿ।
ಗ್ರಾಹಕಂ ಗ್ರಹಿಸುತ ಸ್ಥಾನವಂ ಬಿಡು ಪಾಪ
ದೇಹಿಯಂ ಮಾಡದಿರೆನುತ್ತ ಪದದೆಗೆಯಲಹಿ
ಗಾಹಾರ ತಲೆಗೇಱಿ ದೀಪದಾಹಾರಕ್ಕೆ ಬಂದಳಿದ ಪುಳುವಿನಂತೆ ॥ ೩೪ ॥

ಚರಣದೆಗೆಯಲು ತೊಟ್ಟುಬಿಟ್ಟಂತೆ ಬಾಯ್ಬಿಟ್ಟು
ಹರಣಗಳೆಯಿತ್ತು ವಿಷಪಾತಕನು ವಿಷಧರನ
ಚರಣವಂ ಕಚ್ಚಿದೊಲು ಸ್ವಾಮಿದ್ರೋಹ[1]ಕೆ[1] ಸ್ವಾಮಿಪತಿಕರಣೆಪ[2]ತಿ[2]ಯಾದೊಲು।
ಮರಣವಡೆದಿಹ ಪಾವ ಹೊಱಯಿಕ್ಕೆ ತೆಗೆವಂಗ
ಪರಿಚಾರಕರ ನಿರಾಕರಿಸಿ ಭೂತೇಶನಾ
ಭರಣಕ್ಕೆ ಮರಣವೆಂತಹುದೆಂದು ಪ್ರಾಣವಂ ಪಡೆದು ಪಾಲಿಸಿದ ಬಸವ ॥ ೩೫ ॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದ ಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು [3]ಭಕ್ತಿವಾದದ ಪವಾಡಗಳಮೆಱೆದ[3]ಸಂಧಿ ॥ ೩೬ ॥

---

[1] ಗೆ (ಜ). [2] ಗೆ (ಜ). [3] ಏಕಲಿಂಗನಿಷ್ಠಾಪವಾಡಗಳ (ಪ), ಬಸವನಪ್ರತಿ ಜ್ಞೋತ್ತರಪವಾಡ (ಗ).

ಹನ್ನೊಂದನೆಯ ಸಂಧಿ

ಸೂಚನೆ—

ಅಂಗಜಂಗಮಪ್ರಾಣವೆಂಬ ಭಾಷೆಯ ಭಾವ
ಮಂಗಳದ ಮಂತ್ರಾಧಿದೇವತೆಯ ಮುಸುಕುದೆಗೆ
ದಂ ಗಣೇಶ್ವರರ್ಗಳಾನಂದವರ್ಮದ ಧರ್ಮದ್ವೈವ ಬಸವ ‖

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೇಂತೊ ‖ ೧ ‖

ಪ್ರಾಣಲಿಂ[1]ಗಿ[1]ಸ್ಥಲದ ಶಬ್ದನಿರ್ವಚನಪ್ರ
ಮಾಣಮಂ ಚಿತ್ತೈಸಿ ಪರಮಾರ್ಥದರ್ಶನಿ
ರ್ವಾಣ ವಾಣೀಶರಾತ್ಮಾದ್ಯಷ್ಟತನುತತ್ವ ಪ್ರಾಣಾಶ್ರಮಸ್ಥ[2]ವಾ[2]ಗ ।
ಪ್ರಾಣಲಿಂಗಿತವಖಿಲಪ್ರಾಣಪವನಂಗಾತ್ಮ
ನಾಣತಿಯ ವ್ಯವಹರಣೆಯಾಗಿಪ್ಪುದಾಗ್ಯದಱ
ಕೇಣವಾಯು ಪ್ರಾಣಿಪದವಲ್ಲದದು ಲಿಂಗಸಂಗಪ್ರಾಣಾಂಗ[3]ವಲ್ಲ[3] ‖ ೨ ‖

ಎಂಬಕಾರಣ ಲಿಂಗದಂಗ ಜಂಗವ-ಮುಖವ
ನಿಂಬುಗೊಂಡಿಹುದಾಗಿ ಲಿಂಗಜಂಗಮಪ್ರಾಣ
ಸಂಬಂಧಶಿವಶಕ್ತಿ ಶಿವನಂತೆ ಬೇರು ಬೇಱಿಲ್ಲ ದೇಹದ ಭಾವದ ।
ಕೊಂಬ ಕೊಡುವಂಗವಂದಬುಜನಾಳದ ಸೂತ್ರ
ದಂಬುವಿನ ತೆಱ ಲಿಂಗಜಂಗಮದ ಪ್ರಾಣತ್ವ
ಸಂಭವಿತ ಬಸವಗಿದು ಬಸವನಿರ್ಮಿತ ತತ್ವದರ್ಶದೇಳ್ಗೆಯೊಳಭವನು ‖ ೩ ‖

ನೋಡಲ್ಕೈತಂದಂತಿರೊರ್ವ ಶರಣನು ಕಳಾ
ರೂಢ ತಾಂ ಬಂದು ಬಾಗಿಲೊಳು ನಿಂದೊಳಗೇನ
ಮಾಡುವನು ಬಸವಣ್ಣನೆನೆ ದ್ವಾರಪಾಲಕರ್ಮೇಲಱಿಯದುತ್ತರವನು ।

---

[1] ಗ (ಗ). [2] ನಾ (ಕ.ಖ.ಪು.ಢ). [3] ವೆ (ಕ.ಖ).

[1]ನೀ[1]ಡಿದರನವಸರವವೇಳೆ ನಿದ್ರೋಪದ್ರ
ಮಾಡದುಪ್ಪವಡವಾಗಲ್ಬನ್ನಿಮೆನಲಾಹ
ಪಾಡಿಲ್ಲ ಜಂಗಮಪ್ರಾಣಿ[2]ಯಂ ನುತಿ[2]ಸು ಲೇಸೆನುತ ನಸುನಗುತ ಪೋಗೆ ‖ ೪ ‖

ಮುಂದೆ ಮುಂದಡ್ಡಬಿದ್ದೊಂದು ಚಿದ್ರೂಪಕಳೆ
ವಂದಿಸುತ ಶರಣಾರ್ತಿಯೆನುತಲಶರೀರಾನು
ಬಂಧದಿಂದವರ ಪದವಿಡಿದು ಬಸವನ ಪ್ರಾಣವವರನೊಡಗೊಂಡು ಪೋಗೆ ।
ಎಂದಿನಂತುಪ್ಪವಡವಹ ವೇಳೆಯವಸರಕೆ
ಬಂದು ಪರಿಚಾರಕರ್ಕಳ್ಸನ್ನೆಗೆಯ್ಯೆ ಶ್ಲಾ
ಘ್ಯಂದಂದುವಿಲ್ಲದಿರೆ ನಿಜರಾಣಿಯಂ ನಿದ್ರೆದಿಳುಪೆಂದು ಕಳುಹೆ ಪೋಗಿ ‖ ೫ ‖

ಚರಣವಿಡಿದಲ್ಲಾಡೆ ನಿರ್ಜೀವ ಕಳೆದೋರೆ
ಕರಣವಂ ಕೈದುಡುಕಿ ತಡವುತಂ ತದ್ದೇಹ
ಸ್ವರಪರಮಪ್ರಾಣಪ್ರವರ್ತನಮನಾರೈವುತಂ ಮುಗಂದೆಗದು ನೋಡೆ ।
ಹರಣಹಾರಿತ ಕಂಡು ಹರ ಹರ ನಮಃ ಶಿವಾ
ಯುರುತರ ಪರಮಪದವ ಕಂ[3]ಡ[3]ನೇ ಯೆನುತ ಶ್ರೀ
ವರಮುಕ್ತಿಕಾಂತೆಯುತ್ಸವಕೆ ನಿಚ್ಚಣಿಕೆಗೊಟ್ಟಂತೆ ಕಟ್ಟಿದಳು ಗುಡಿಯ ‖ ೬ ‖

ಪರಕೆ ಪರವಾಗಲಿಹ ಪರಿಚರಿಯಗೈವಂತೆ
ಪರಮಪ್ರತಿಷ್ಠಿತಾರಾಧ್ಯದೇವತೆ ಭಕ್ತಿ
ಸಿರಿಯು ಸಿಂಗರಗಳೆಸಗುತ್ತಿರಲು ವಿಸ್ಮಯಂಗೊಳುತಖಿಳ ಶರಣಜನರು ।
ಹರಿತರುತಿರಲ್ಬನ್ನಬಸವೇಶ ಬಂದು ಗುರು
ಚರಣವಂ ಕಂಡೆಬಿಗಿ ಕಾರಣವಿದೊಂದಾಗ
ದಿರದೆನುತ ಹೊಲಬಿಗಂ ಹೊಲಬಱಿಯಲೊಳವಿಚಾರಂಗೊಳುತ ಬಾಗಿಲವರ ‖ ೭ ‖

ಬರಿಸಿ ಬೆಸಗೊಂಡನೊಡೆಯರ್ಪವಡಿಸಿದ ಬಳಿಕ
ಲುರವಣಿಸಿ ಹೊಕ್ಕರಾರ್ಪೊಱಮಟ್ಟರಾರು ಹೊಸ
ಬರದಾರು ಬಂದರೆನಲಾವುದೊಂದಿಲ್ಲ ಒಬ್ಬಯ್ಯ ಬಂದೊಡೆಯರಿಪ್ಪ ।
ಪರಿಗೇಳೆ ಪವಡಿಸ್ಯೆದರೆಯೆನಲ್ಕಣಕದಿಂ
ಚರಲಿಂಗಪ್ರಾಣಿಯಹುದಹುದೆನುತ ಹೋದರೆನೆ
ನಿರುತವಿದು ನಿಯತಪದವೆನುತ ಮೃತಸಂಜೀವಿನಿಯನರಸುವೋಲೈಯನ ‖ ೮ ‖

---

[1] ನು (ಕ.ಖ). [2] ಯನುಲೇ (ಘ.ಘ), ಯೆನುತ (ಕ.ಖ.ಗ).
[3] ಡೆ (ಕ.ಖ.ಗ.ಘ.ಧ).

ಅಱಸುತಿರಲದಿರಾಗಿ ಬರುತಿರ್ದ ತನಗೆ ಬಿಡ
ದೆಱಗುತಿಹ ಶರಣಸಂಬಂಧ ಸೋಂಕಿನ ಸೋಹೆ
ನಿಱುಗೆಯ ನಿಜ[1]ವನಿಧಾನಿಸಬಂದವರ್ಮ[1]ದಂತಱುಹಿ ಬಿನ್ನಹ ಮಾಡಲು।
ಬೆಱಗಿನಲ[2]ಗಿ[2]ಂದಱಿವನೆಚ್ಚಂತೆ ಬೆಚ್ಚಿ ಹ[3]ರ[3]
ವಱ[4]ಯ[4]ದುತ್ತರವೆಸಗಿತಪರಾಧವೆಂದಯ್ಯ
ಮಱುಗುತ್ತೆ ಬಸವ ಬಸವಾ ಯೆನುತ ಬರುತಿರಲು ಶರಣು ಶರಣೆನುತಿರ್ದನು॥೯॥

ಜೀವಪರ[5]ಮಾತ್ಮ[5]ರಾತ್ಮತ್ರಯಂತ್ರದ ಸೂತ್ರ
ಭಾವಿತಸುಷುಪ್ತಿ ಪ್ರತ್ಯಕ್ಷವಾದಂತೆ ಯಾ
ದೇವತಾಂಶಿಕತ್ರಾಣಿ ಬರೆ ವೃಷಭಚರಲಿಂಗನಾಗಾ ಯುತತ್ರಾಣನು।
ಆವ ಸಂಧಾನಚಂಚಚ್ಚಮತ್ಕೃತಿ ಸೋಂಕ
ದಾವ ವಹಿಲತೆಯ ತಲ್ಲಣಜಂಗಮಪ್ರಾಣಿ
ಸಾವಧಾನಿತ ಬಸವಲಿಂಗಮಂಗಳಮೂರ್ತಿಕೀರ್ತಿ ಕಣ್ದೆಱೆದೊಲಾಯ್ತು ॥ ೧೦॥

ಆದರಿಸಿ ಮತ್ತೊಂದು ಮಹಿಮಾಂತರಂಗಪ್ರ
ಭೇದಮಂ ಶಂಭುವಿಗೆ ಸಾಂಬಲೋಕದೊಳಂತ
ನಾದಿಯಂತಃಪುರವದಕ್ಕೆ ನಿತ್ಯಾದಾಯಮುಖಕೆ ನಿತ್ಯರು ಸಲುತಿರೆ।
ಆದುದಿಲ್ಲಾದಾಯವೆಂದಭವಗೊಂದಿನಾ
ಪ್ತಾದಿಗಣವರರು ಬಿನ್ನೈಸೆ ಕಲ್ಯಾಣದೊ
ಳ್ಮೆದಗೇತಯ್ಯನೆಂಬಯ್ಯ[6]ನೈದನೆ[6] ತಂದು ಸಲಿಸಿ ನಿತ್ಯತ್ವಕೆನಲು ॥ ೧೧ ॥

ಶ್ರೀಸದಾಶಿವ ನಿರೂಪಣನಿರೂಪಿತ ಬ್ರಹ್ಮ
ಕೋಶವಾಗಲು ತೆಗೆದು ಹಂಸಹಂಸಾರೂಢ
ದೀಶತ್ವದೀಶಪದ ಪದಕೆ ಪರ್ಬಿತ್ತೈಕ್ಯಕೇತನ ಪ್ರಭಾತ್ಮಜ್ಯೋತಿ।
ಪಾಶ ಪಱಿಯಿತನಱಿದು ಭ[7]ಕ್ತಿ[7]ವೈಭವದ ವಿ
ಶ್ವಾಸಕಾಯವ ಕಾಸ್ಯಪಿಯ[8]ಭರ್ಗ[8]ಗಾರ ಪ್ರ
ವೇಶಪ್ರತಿಷ್ಠಿತಾಗಮವಿಧಾನಕ್ಕೆ ನಿಜಪುರಗಣೇಶ್ವರರು ನೆರೆದು ॥ ೧೨ ॥

ಪೃಥ್ವಿಯ ಮಹನ್ಮಹಾಗಣಸಭಾ[9]ಪ[9]ರ್ವಸಂ
ಪತ್ತಿನೊಳು ವೀರ ಬಲಮೇರು ದೂಷಕಮದೋ
ನ್ಮತ್ತಗಜಸಿಂಹ ಮಡಿವಳದೇವ ಸಿಂಹಾಸನಕ್ಕೇಕೆ ಬಾರನೆಂದು।

---

[1] ವಧಾನಿಸಂಬಂಧವರ್ಮ (ಖ). [2] ಏ (ಖ). [3] ರಿ (ಖ). [4] ದು (ಜ).
[5] ಮಾತ್ಮಂತ (ಕ), ಮಂತ (ಜ). [6] ನವನಂ (ಖ). [7] ಕ್ತ (ಖ). [8] ಗರ್ಭ (ಖ.ಜ).
[9] ಸ (ಜ).

ಉತ್ತಯ್ಯಸಿರೆ ಕಳುಹಿ ಕರೆಸಲಾರಾರ್ಬಂದ
ರೆತ್ತಣವಿಚಾರವೆನೆ ಕೇತಿದೇವನು ದೇವ
ರತ್ತನಡೆದೊಡೆಬಸವರಾಜ ಮೊದಲಾದಗಣಮುಖ ಮೂರ್ತಿಗೊಂಡುದೆನಲು ॥೧೩॥

ಇನ್ನು ನುಡಿಯದಿರಾವು ಕೇಳೆವಾ ಮಾತ ಬಸ
ವಣ್ಣನೆಂಬವ ಶಿವದ್ರೋಹ್ಯವನ ಮಸ ಮುಖದ
ಕ[1]ಣ್ಣದಱ[1] ಲಿಂಗ[2]ತಲ್ಪಕ[2]ನಿರಲ್ಬಾರೆವೆನಲಾತ ಬಂದಂದುದನ್ನೆ।
ಬಿನ್ನಪಂ ಮಾಡೆ ಸಭೆ ವಿಸ್ಮಯಂಗೊಳಲಾತ
ಚೆನ್ನಬಸವನ ಮೊಗಂ ನೋಡೆ ಪರ್ಮಸ್ಥಲದ
ಸನ್ನೆಯ ನಿರೀಕ್ಷಿಸಲ್ಮನದ ಮೈಲಿಗೆಗಳೆದ ಮಡಿವಳಗೆ ಶರಣೆನುತಲಿ ॥ ೧೪ ॥

ಎನ್ನಯ್ಯನುನ್ನತವಚನದಲಗು ಮಱಹೆಂಬ
ಕನ್ನಗಳ್ಳನನಿಱುದುದಾಹ ಯೆನುತಲ್ಲಿಯೆ
ಸನ್ನಿಹಿತಕಾರಣಾತ್ಮನ ಕೈಯ ಪ್ರಾಣಗೊಟ್ಟಟ್ಟಿಯಾ ಮುಕ್ತನೊಳಗೆ।
ಭಿನ್ನವಿಲ್ಲದೆ ಬೆರೆಸು ಯೆನುತೆ ಕಣ್ಮುಚ್ಚೆ ಬಸ
ವಣ್ಣನ ಹರಣ ಹಱದು ಕೂಡಿತವರೊಳಗಿತ್ತ
ಉನ್ನತನಿಕಾಯನಿ[3]ಪ್ರಾಣಿ[3]ತಪವನಪಂಜರಂ ಪರ್ಮ ಧರ್ಮವಾಗೆ ॥ ೧೫ ॥

ಪರೀಕ್ಷಾನಿರೀಕ್ಷಣದ ಭ್ರಾಂತಳಿದು ಸರ್ವಗಣ
ಚರಲಿಂಗ ಚಂಚಲಿತರಾಗಿ ಭಕ್ತಿಯ ಭಾಗ್ಯ
ಸಿರಿಯ ಸೂಱೆಯ ಕಳೆದ ಪರ್ಮ ಕರ್ಮವ ಕಳುಹಿ ಮಡಿವಳನೆ ದಾಸೋಹದ।
ಕರುಹ ಕರಗಿಸಿದ ಕಲ್ಯಾಣಕೈಲಾಸವೆಂ
ಬುರುತರದ ಗರುಡಿಯಂ ಸುಟ್ಟನಿನ್ನಾತಂಗೆ
ಬರುವ ಪರಿಣಾಮವೇ ಯೆನುತಲಾಕ್ಷೇಪಮುಖದೊಳು ಚರರ ಕಳುಪೆಹೋಗಿ॥೧೬॥

ಕರ್ಮವಾಕ್ಯಸ್ತ್ರವಂ ಕೊಟ್ಟರಿದನೊಯ್ದು ಶಿವ
ಧರ್ಮಸಭೆಗಾಂ ತೋಱೆ ಬಸವೇಶ ಕೇಳುತ್ತ
ಲೆಮ್ಮಯ್ಯ ಮಡಿವಾಳ ಶರಣು ಶರಣೆನುತ ಸಂದನು ಶಿವಪದಕ್ಕೆಂದಡೆ।
ಡಿಮ್ಮನೆದ್ದನು ಬಾಪು ಬಾಪು ಜಂಗಮಪ್ರಾಣಿ
ಪೆರ್ಮೆಯಿಂ ಪೆರ್ಚೆಳಸನೊಪ್ಪಿಸಿದನೇ ಯೆನುತ
ಬಿಮ್ಮನೆ ಬಿಗುಹ ಬಿಟ್ಟು ಬೀದಿವಱವುತ್ತು ಗ್ರಗಣನಾಥನೈತಂದನು ॥ ೧೭ ॥

---

[1] ಣ್ಣದಱ (ಖ), ಣ್ಣರದ (ಜ) (ಗ.ಖ.ಘ). [2] ತಲ್ಪಿಕ (ಕ.ಖ). [3] ಷ್ಕಾರಣಿ (ಕ.ಖ), ಷ್ಪಣಿತ (ಗ), ಷ್ಪ್ರಾಣಿತ (ಥ).

ಬಂದು ಗಣಮುಖಕೆಱಗಲವರು ನಿಷ್ಠುರಗೂಡಿ
ಬಂದ ವಾಕ್ಯಗಳೆತ್ತಿ ಲಿಂಗತಲ್ಪಕ ಬಸವ
ನೆಂದನುಡಿ ಸಿದ್ಧಿಸಿತು ನೋಡೆಂದು ತೋಱಲಾತನ ಪಾದವಿಡಿದುಕೊಂಡು।
ಹಿಂದುಳಿಯದೆಂತು ಬೇಗೈದಿದೆಮ್ಮಯ್ಯಾದಿ
ನಂದಿಕೇಶ್ವರಜಂಗಮಪ್ರಾಣ ಜೀವಿಪ್ರ
ಬಂಧಿತದಯಾಪರನೆನುತ್ತಲುತ್ತರಸಾಧಕತ್ವ ತತ್ವಾಂತರಮುಖ ॥ ೧೮ ॥

ಎದ್ದು ಸದ್ಯೋಜಾತ ವಾಮತತ್ಪುರುಷೇಶ
ನದ್ವೈತಮುಖವಘೋರದೊಳಡಗಿದಾ ವೀರ
ಭದ್ರಾಪರಾವತಾರನುದಾರಧೀರ ಮಡಿವಳಮಾಚಿದೇವಯ್ಯನ।
ಸಿದ್ಧಸಾನ್ನಿಧ್ಯಕಂಕಣಗಟ್ಟಿ ವೀರರವಿ
ಶುದ್ಧ್ಯಲಗುಗೊಂಡು ಮಂಗಳಮನೋರಥದ ಪ್ರ
ಬದ್ಧ[1]ರಂ[1]ಬೊಯ್ಸುತಭವಾಲಯಾಗ್ರದಿ ವೀರಘಂಟೆ ಜಯಘಂಟೆ ಹೊಯ್ದು ॥ ೧೯ ॥

ಸೋಹದಾಸೋಹದುಭಯದ ಕುಳಸ್ಥಳದ ನಿ
ರ್ದೇಹಿಗಳ ದೇಹವಿರಲಸುವ[2]ನೈಕ್ಯ[2]ಕ್ಕೊಯ್ದ
ಬಾಹಿರನ ಬಾಹಿರಂಗಳೆವುದೆಂದಾ ದೇವಗಣ[3]ಕೆ ಡಂಗುರ[3] ಹೊಯ್ಯಲು।
ಸ್ನೇಹಿತದ ಭಕ್ತಿರಸವಾಕ್ಯ ಶಂಕರನ ಹೃ
ದ್ಗೇಹವೊಕ್ಕಾಂದೋಳಿಸಲ್ಕೆಯಾಹಾ ಭಾವ
ಸಾಹಸಿಗ ಯೆನುತ ಶಿವ ನಡುಗಿಪೊಲು ಶಿರದೂಗಿವರನಿತ್ಯಸಿರಿಯ ಕರೆದು ॥೨೦॥

ಬಂದಿತ್ತು ಬಳಿವಿಡಿದು ಕೇಶಿದೇವನಕೂಡ
ದೊಂದುಭಯವದಱ ಬಳಿಹುಯ್ಯಲೆಮ್ಮನು ನಿಮ್ಮ
ಮಂದಿರಕೆ ಹೊಱಗಿಕ್ಕುತಿದೆಯವರ ನವರೂರ್ಗೆ ಕಳುಹಿ ಮತ್ತೊಂದುಪಾಯ।
ದಿಂದೆ ನೋಡುವೆ ಯೆನುತೆ ದಿವ್ಯದೀಪ್ತಿಗಳನ
ಲ್ಲಿಂ[4]ದ[4]ಲ್ಲಿಗಿಳುಹಲಾ ಡಂಗುರದ ಧ್ವನಿಯ ವಾ
[5]ನಾದ[5]ಮುಗಿಯದ ಮುನ್ನ ಪ್ರಾಣಪ್ರವೇಶವಾಗಿದ್ದರು ಶಿವಾದ್ವೈತರು ॥ ೨೧ ॥

ಆವುದುಪಮಾವುದನು[6]ಮನ[6]ಗೋಚರವಿಚಾರ
ವಾವ ಬಗೆ ಬಣ್ಣವಿಡಬಲ್ಲೆವೀ ಭಕ್ತಿಭಾ
ವಾಪಿಡಂಬದವಳಂಬವನಖಿಳಶರಣಜನದಾನಂದಸಿಂಧುಸಿರಿಯ।

---

1 ರವಂ (ಕ). 2 ನೇತ (ಕ). 3 ಡಂಗುರಂ (ಕ). 4 ಓ (ಖ). 5 ನಂದೆ (ಖ), ನಂದ (ಗ), ನವ (ಗ) 6 ಮನೊ (ಕ), ಮಾನ (ಪ. ಜ).

ದೇವಲೋಕವ ಮರ್ತ್ಯಲೋಕಕಿಳುಹಿದ ಬಸವ
ದೇವನುನ್ನತಭಾವಮೂರ್ತಿ ಮಡಿವಳಮಾಚಿ
ದೇವನೇ ದೇವನೆಂದೆಲ್ಲ ಶರಣರು ಶರಣಸಾಹಿತ್ಯಕನುವಾದರು ॥ ೨೨ ॥

ವಚನ —

ಎನ್ನಂಗದ ಮೇಲಿದ್ದ ಲಿಂಗವ ದಿಟ ಮಾಡಲರಿಯೆನು, ಜಂಗಮವೆ ಲಿಂಗ ವೆಂಬ ಮಾತೆನಗೆ ಕಷ್ಟ ಕಲಹ ಕಡುಗೋಪಿ ನಾನಯ್ಯ, ದುರ್ಮುಖ ದುರಾಚಾರಿ ನಾನೆನಗೆ ಕರುಣಿಸು ಕೂಡಲಸಂಗಮದೇವ. ॥ ೧ ॥

ಪುನರಪಿವಚನ—

ಓದಿಸುವಣ್ಣಗಳಂತೆ ಮಾತಾಡಕಲಿಸಿದರಲ್ಲದೆ ಮನ ಮಾತಾಡ ಕಲಿಸಲಿಲ್ಲ ವಯ್ಯ, ಧನಕ್ಕೆ ಮುನಿವರಲ್ಲದೆ ಎನ್ನ ಮನಕೆ ಮುನಿವರಿಲ್ಲಯ್ಯ, ಧನಕ್ಕೆ ಮುನಿವ ರಿಗೆ ಮುನಿದು ಎನ್ನ ಮನಕ್ಕೆ ಮುನಿದ ಕೂಡಲಸಂಗಮದೇವ ಮಡಿವಳ ಮಾಚಯ್ಯನು.

ಪ್ರಮಥೋತ್ತಮಪ್ರಮುಖರಿನ್ನೊಂದು ವರಸಿದ್ಧ
ಸಮುದಿತೋದಯ ಸದಾಚಾರದೊಳ್ಪಿನ ಶಿವಾ
ಗಮದ ಗಾಂಭೀರ ಗಮಕದಗಣ್ಯಪುಣ್ಯೋದಯಂ ಪೇಳ್ವೆ ಕೇಳ್ವುದೊಲಿದು।
ಸಮಭಾವವೆಂದು ದರುಶನ ಪರುಶನಗಳೆರಡು
ಉಮೆಯರಸ ನೋಲಗದೊಳುಘ್ಘಡಿಸೆ ದೇಹಗೊಂ
ಡೆಮಗೆ ತೋರುವಂದಭವನಿಳೆಗೆ ನೂಂಕಲ್ಕೆಯೀ ಬ್ರಹ್ಮವೆರಡ್ಪಥವಿಡಿದೊಲು ॥೨೩॥

ಸ್ಥಾವರಕೆ ಸಿಂಹಾಸನಕ್ಕೆಯಿಗ ತನಗೊಂದು
ದೇವರಂ ಸಾಹಿತ್ಯವಾಗೆ ನೇಮದ ಬೊಮ್ಮ
ದೇವನೆಂಬಯ್ಯನನುಮತಶರಣಸತಿ ಲಿಂಗ ಪತಿ ತಾನು ಭಕ್ತನೆಂಬ।
ಭಾವದಿಂ ಶಿವಭಕ್ತರಂಗ ಲಿಂಗಂಗಳಿಗೆ
ತಾವಿ ನಮಿಸುವ ಮಹಾಪುರುಷ ಮಾನವಮಹಾ
ದೇವನಾ ಬಸವನಾಲಯಕೆ ಬಿಜಯಂಗೈದಿರಲ್ಕಲ್ಲಿಗೊಬ್ಬಯ್ಯನು ॥ ೨೪ ॥

ಮಾನಿತಮಹೋಜ್ವಲ ಮಹಾವ್ರತಾಗಮನಿಯತ
ಸ್ವಾನುಭಾವಿತಶೀಲ ಶಿವಲಿಂಗಪ್ರಾಣಿ ಸುಯಿ
ದಾನಿತವಸರಕಾಲದೊಳು ನೇಮಸೀಮರ ನಿರೀಕ್ಷಿತನುರುಹಗಳೆಂದು।
ಹೀನಗಳೆದವರನೊಲ್ಲದ ಪರುಷನದ ತತ್ವ
ತಾನು ತಾನೆನಿಪ ನಿಸ್ಸೀಮ ಬೊಮ್ಮಣ್ಣನೆನಿ
ಪಾನಾಮದಾಚಾರ ಕಾಮಧೇನ್ವೈತಂದುದಾ ಬಸವರಾಜಗೃಹಕೆ ॥೨೫॥

ಬಂದ ಪಿರಿಯರ್ಗೆ ವಂದನೆಮಾಡಿ ಭಕ್ತಿಯಾ
ನಂದದೊಳ್ಪಿನ ಕಳಾಲಂಕೃತಂಗೈದು ಗಣ
ವೃಂದಸಮಯೋಚಿತವಸರಕಾಲದೊಳು ಶಿವಾರ್ಚಿತ ಸುಚರಿತಾಗಮಗಳ।
ನಂದವಡಿಸವರವರ ಸ್ಥಾನಂಗಳೊಯ್ಯಾರ
ದಿಂದ ಪರುಠವಿಸುತಿಬ್ಬರು ಬೊಮ್ಮಿದೇವಗಳಿ
ಗೊಂದೆಡೆಯ ಬಸವರಾಜನ ಬಲದ ವೆಶೆಯಲಾಸನಗೊಡಲ್ಕುಳ್ಳಿರಲ್ಕೆ ॥೨೬॥

ಆಗಮವಿಧಾನಕಾಲೋಚಿತದ ಶಿವಲಿಂಗ
ಭೋಗಪೂಜಾದ್ರವ್ಯಗಳನೆಲ್ಲರಂತಿರೆ ಪ್ರ
ಯೋಗಿಸಿದರಾ ನೇಮಹಸ್ತಗಾತಂ ಮುಂದುಗೊಂಡು ಜಪಗೈವುತಿರಲು।
ಈಗಣೇಶ್ವರ ತನ್ನ ಲಿಂಗಪೂಜನೆಗೆಯ್ದು
ಯೋಗಾವಲೋಕನ ಧ್ಯಾನಮುದ್ರೆಯೊಳಿರಲಿ
ಕಾಗಿನವಸರದಲಾ ನೇಮಾಂಗನಿವರ ಲಿಂಗಕ್ಕೆ ಪುಷ್ಪಂಗೊಡುತಿರೆ ॥೨೭॥

ಕಂಡಿದೇನೆನಲಾತ ವೃತ್ತಾಂತವೇಳ[1]ಲಿ
ತ್ತುಂಡಾದು[1]ದಾ ವ್ರತಸ್ಥನ ಭಾವ ಮುಟ್ಟಿಪದ
ಪಿಂಡ ಸೋಂಕಿತ್ತಹೋ ಶಿವಶಿವಾಯೆನುತ ಕರಸ್ಥಲದ ಕೈಮುಟ್ಟಿ ಹೃದಯ।
ಮಂಡಲದೊಳಪ್ಪುಗೈದಾ ಲಿಂಗಜೀವಕಳೆ
ಗೊಂ[2]ಡ[2]ಗ್ರಮುಖದೆಗೆದು ಪ್ರಾಣಪರತರದ ಬ್ರ
ಹ್ಮಾಂಡವಟ್ಟೆಯನಡರೆ ಭಿತ್ತಿ ನೆಮ್ಮುಗೆಯ ಚಿತ್ರದೊಲಿರ್ದುದಯ್ಯನಂಗ ॥೨೮॥

ನೇಮಸಂಪೂರ್ಣವೆನಗಾಗದಿಲ್ಲಂ ಮುನ್ನ
ನೇಮನಿತ್ಯದ ಪಥಕೆ ಪದವಿಡಲ್ಕಾನು ನಿ
ರ್ನೇಮನಾಮಿಕಹೊತ್ತದೆಂತಿಹೆನೆನುತ್ತ ಸದ್ಭಾವನೇಮಪದಾಬ್ಜವ।
ನೇಮಸ್ಥಹಿಡಿದೊಡನೆ ಪರಮಪದಕ್ಕೈದಿರ
ಲ್ಕಾ ಮಹತ್ತತೆಗಂಡು ಬಸವಚರಲಿಂಗ ಸ
ತ್ಪ್ರೇಮದಿಂದೊಡ[3]ನೊಕ್ಕಲೋದ ಭಕ್ತಿಸ್ಥಲಕದಾವಸ್ಥಲನಿಱುಗೆಗೊಡುವೆ[3] ॥೨೯॥

ಕಂಗಳ ಕಳೆಯೊಡಗಿಹಪ್ರಕೃತಿಯಂತಿರಾ
ಜಂಗಮದ ಜೀವ ಜೀವನವಿಡಿದ ವಾರಿಜದ
ಹಾಂಗೆ ಜ್ಞಾನಜ್ಞೇಯಜ್ಞಾತೃಸೂತ್ರದೊಲುಭಯಬ್ರಹ್ಮದೊಲು ಬಸವಪ್ರಾಣ।

---

[1] ಲ್ಕಿಂತುಟಾದು (ಕ.ಖ), ಲಿಕೆ ತುಂಡಾದು (ಘ). [2] ಡು (ಗ.ಖ.) [3] ನೊಗ ರ್ತ್ಪ್ರೇದಭಕ್ತಿಸ್ಥಲಕದಾವಸ್ಥಲನಿಱುಗೆಗೊಡುವೆ (ಖ).

ಸಂಗವಾಗೇಕೀಕರಿಸಿ ಪರಂಜ್ಯೋತಿ ಶಿವ
ಲಿಂಗದೊಳಗೆಱಕವಹ ಸಮಯದೊಳಗಿತ್ತ ವೀ
ರಂ ಗಣೇಶ್ವರನೈಕ್ಯಸ್ಥಲಮೂರ್ತಿ ನಿರ್ದೇಹಿ ಭಕ್ತಿಯುಕ್ತರಸಾಧಕ ‖೩೦‖

ವೀರಬಂಕಣ್ಣನಲಗಂ ಕಿತ್ತು ನಿಜಹೃದಯ
ವಾರಿಜದ ಚಿನ್ಮೂರ್ತಿ ಲಿಂಗಕ್ಕೆ ನಿಶ್ಚಯದ
ಕಾರಣದ ಕಣ್ದೆಱೆದು ಝಳಪಿಸುತಲಾರ್ದೆತ್ತಿ ಕುತ್ತಿ ಕೊಳಲಾ ಸುರಗಿಯ।
ತಾರಕಬ್ರಹ್ಮ ತಲ್ಲಣಿಸುತ್ತ [1]ಸಿ[1]ಡಿದು ತ್ರಿ
ಕಾರಣಾತ್ಮಜ್ಯೋತಿ ಪುರುಷರೊಳಹೊಗಲು ಶರ
ಣಾರತಿಯ ಬೀಱುತ್ತ ಕೈವಿಡಿದು ಪದಕೆಱಗುತಿರ್ದರಾ ಬಸವಾದ್ಯರು ‖೩೧‖

ವ್ರತವಿರುದ್ಧದೊಳಿಂತು ಬಡ ತಟ್ಟುಮುಟ್ಟಿನನು
ಮತಕೆ ಸ್ವಾಯತಲಿಂಗಪ್ರಾಣವಾಗಿಹ ಮಹಾ
ವ್ರತಿಕರತಿನೇಮವ್ರತಿಕರ ಕಳೆದು ಅವಧಾನಲಿಂಗಾಂಗವ್ರತಶೀಲರ।
ಸ್ಥಿತಿದಿಳುಹಿ ಬೆರೆಸಿ ನಡೆವಾಚಾರ್ಯಪೂರ್ವಸಂ
ತತಿಪರಂಪರೆಯಿಂದ ಲಿಂಗಾಂಗಸಂಬಂಧ
ವ್ರತವೃಕ್ಷಮೂಲಮಂತ್ರಧಿದೈವಬಸವತ್ರಯಾಕ್ಷರಂ ಮೂಜಗಕ್ಕೆ ‖೩೨‖

ಶಿವಶಾಸನಪ್ರಶಸ್ತತೆಯ ಕೇಳ್ಕಾರಣರೊಂ
ದವತಾರಭೇದವಂ ಪೇಳ್ವೆ ಸಾಕ್ಷಾಚ್ಛಿವಾ
ಧವನಂತರಂಗವಂಗಸ್ಥಳದೊಳವತರಿಸಿ ಕಲಿಕಾಲತಂತ್ರ ತನ್ನ।
ಅವರ್ಗಳಂ ಹೊದ್ದದೆಂಬುದ ತೋರ್ಪ ದೃಷ್ಟಾಂತ
ರವೆ ಮೂರ್ತಿವತ್ತಾದ ವಾಕ್ಯೆಯಿಂದೇಕಾಂತ
ಶಿವರಾಮತಂದೆಗಳೆನಿಪ್ಪ ಮಾಹೇಶ್ವರ ಮಹಾತತ್ವಮಹಿಮಾಸ್ಪದ ‖೩೩‖

ಅವನಿಯೊಳಗಬ್ಬಲೂರಾಖ್ಯದೊಳು ಲೋಕಜಿನ
ಭವನಗಳನೊಡೆದು ಲಿಂಗಪ್ರತಿಷ್ಠೆಯ ಮಾಡಿ
ಭವಿಭವಾಂತರಕರ್ಮ ನಿರ್ಮೂಲಗೈದು ಲಿಂಗಾರ್ಚನಾಯತನೇಮಕೆ।
ಅವರಿವರೊಳಲ್ಪವಯವಂಗಳರ್ಪಿಸಿ ಪಡೆವೊ
ಲವರ ಮತವಲ್ಲ ಮುಖ್ಯೋತ್ತಮಾಂಗಮನಿತ್ತ
ವಸರದೊಳರಿದಿತ್ತು ಪಡೆವ ಪರಬ್ರಹ್ಮಬ್ರಹ್ಮಾದಿಗಳ ನಗಲುದಿಸಿತು ‖೩೪‖

[1] ಪಿ (ಕ.ಖ.ಗ.ಘ.ಛ).

ಎಂಬ ಕಾರಣ ಶಿವನೊಳಾಪ್ತಾತ್ಮದಾಳಾಪ
ನಂಬುಗೆಯ ನಿಜತತ್ವದೇಕಾಂತವಾಡಿ ನಿ
ತ್ಯಂ ಬರುತ ಮಾಹೇಶ್ವರರ್ಗೆಥಾ ಕಥನ ಪೇಳುತ್ತಿರಲಿಕೊಂದು ದಿವಸ।
ಅಂಬಕತ್ರಯನೊಳಗಣೋಲಗದ ವಾರ್ತಾವಿ
ಡಂಬವೇಳುತ್ತಿರಲಿಳೆಯ ಭಕ್ತರೆಲ್ಲ ಬೆಸ
ಗೊಂಬರ್ಬಸವ ಸರ್ವಗತನಿಲ್ಲಿಹವೊಲಲ್ಲಿಹನೆ ಯೆನಲ್ಕವರೆಂದರು ॥೩೫॥

ಇಲ್ಲದಿರನಾಳಿಗೇಕಾಂತದೋಲಗಭವನ
ದಲ್ಲಿ ನೋಡಿದ್ದುದಂ ಪೇಳ್ವೆನೆಂದಂತೆ ಶಿವ
ನಲ್ಲಿಗೈದೇಕಾಂತವಾಡಿ ನಾಲ್ದೆಶೆಯಾಪ್ತಗಣವರರ ಮುಖನೋಡುತ।
ಅಲ್ಲಲ್ಲಿಗೆಲ್ಲರೊಳಗಱಿಸಿ ಪರಿಕಿಸಲುಮಾ
ವಲ್ಲಭನಿದೇನರ್ಥವೆನಲು ಪೃಥ್ವಿಯ ಭಕ್ತ
ರಿಲ್ಲಿ ಬಸವಣ್ಣನಹನಿಲ್ಲೊ ಯೆಂದಱಿದು ಬರವೇಳಲಱಿವಾರ್ಥವೆನಲು ॥೩೬॥

ರಸೆ [1]ಕೃಶ[1]ಕೃಶಾನ ಸ್ವಶನಾಂತರಾಳಿಕವೈದು
ವಿಷಯಾಂಗದಂಗಮಂ ನೇತ್ರಜೋತೆಂತಂತಿ
ರೆಸೆದಿಪ್ಪ ಭಕ್ತಿಹೃನ್ಮಂದಿರದೊಳಿಂತೆನುತ್ತಂತಕಾಂತಕನು ತನ್ನ।
ಸುಷಮಶೋಭಾಂತರಂಗಸ್ಥಲವ ಬಗಿಗೆಯ್ಯೆ
ವೃಷಭಾಂಕಮೂರ್ತಿ ಬಸವನ ದಿವ್ಯತನು ಕಂಗ
ಳೊಸಗೆಯಭ್ಯಂತರದ ಬೆಸುಗೆ ಕೂಡಿತ್ತದೆಂತಂತೆಯಾ ಮಹಿಮನೊಳಗೆ ॥೩೭॥

ಎಂದಿನಂತಾ ರಾಮಿತಂದೆಗಳು ಶಿವಭಕ
ವೃಂದದೊಳು ಸುಖಸಂಕಥಾಸಂಪದಂದೋಱ
ಲಂದದೊಳು ಕೇಳ್ದರಾ ಮಾಹೇಶ್ವರರು ಮುಗುಳ್ದು ಬಸವೇಶನ ಪ್ರಸಂಗವ।
ಸಂದೇಹವಿಲ್ಲ ಪರತತ್ವ ಮೂರ್ತಿಗಳೊಳಗೆ
ಸಂದಿಲ್ಲದಿಹನೆನಲದೆಂತಲ್ಲಿ ಕಾಯುವಿ
ಪ್ಪಂದವೆನಲಲ್ಲಭವ ತೋಱಿದಂತವರು ಹೃನ್ಮಂದಿರವ ಬಗಿದು ತೋಱೆ ॥೩೮॥

ಸಚ್ಚಿದಾನಂದ ಸಾಕ್ಷಾತ್ಸನಾತನಕಳಾ
ನಿಶ್ಚಯಸ್ಥಾನ ಸದ್ಭಕ್ತಿಯುಕ್ತಿಪ್ರಭಾ
ವಚ್ಚಿನ್ಮಯಾಂಗಮುಖವೃಷಭ ಬಸವ ಸ್ಫೂರ್ತಿಮೂರ್ತಿ ಶಿವಸಾಯುಜ್ಯದ।

[1] ಕುಶ (ಜ).

ಸಚ್ಚರಿತಕ್ಕೆಯಡಕವಾಗಿದೆಂಬೊಲು ಭಕ್ತಿ
ವಚ್ಚಳನು ಭಕ್ತರ್ಗೆ ಕೈಮುಗಿಯೆ ಕಂಡು ಕಣು
ಮುಚ್ಚಿ ಮೂರ್ಛಿತರಾಗುತಾ ಶರಣಸಂಕುಲಂ ಶರಣ್ಬೊಕ್ಕು ಸೈಗೆಡೆದರು ॥೩೯॥

ಪ್ರತ್ಯಕ್ಷಕೇಕೆ ಪ್ರಮಾಣವೆಂದೆಲ್ಲ ಕೈ
ಎತ್ತುತೇಕಾಂತದಯ್ಯಗಳ ಭಾವವೆ ಬಸವ
ನುತ್ತುಂಗಲೋಕವೆನುತುತ್ಸವೋತ್ಸವಮೂರ್ತಿ ಕೀರ್ತಿಮುಖದೆಗೆದೊಲಂತಾ।
ಪೃಥ್ವಿಯ ಮಹಾಭಕ್ತರಾನಂದಸರ್ವಗತ
ತತ್ವಸ್ಥಲದಮೇಲೆ ತಾ ಕಳಾಪ್ರಾಣಲಿಂ
ಗಸ್ಥಲಕದಾನಂದನಂದಿಯೆಂದಾ ನಂದಿನಾಥ ಪ್ರಮಥರ್ಗೊರೆದನು ॥೪೦॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಪ್ರಾಣಲಿಂಗನಿಷ್ಠಾಪವಾಡಗಳ ಸಂಧಿ ॥೪೧॥

ಹನ್ನೆರಡನೆಯ ಸಂಧಿ

ಸೂಚನೆ:

ಕಿನ್ನರಯ್ಯಗಳ ವರವಾಕ್ಯಪರುಷವ ಪಡೆದು
ಪನ್ನಗಾಧರನವರ್ಗೆ ರಾಜಧನವಂ ಕೊಡ
ಲ್ಕನ್ಯಾಯುವೆಂದ[1]ರಸು[1] ಪಿಡಿಯೆ ಭಂಡಾರವಮಂ ತುಂಬಿ ತೋಱಿದಬಸವನು॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತು ವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥ ೧ ॥

ಮದನ ವೈರಿಯ ಮಹಿಮೆಯೆಂಬಮೃತಮಥನದೊಳು
ಉದಯಸಿದ ಸದ್ಗತಿಕಳಾರತ್ನಗಳನೆಲ್ಲ
ಸದಮಲಾಂಗದ ಮಂಗಳಾಂಗಿ ಸಿಂಗರಿಸಿಳೆಗೆ ಪರಮವೈಭವದೋಱಲು ।
ಉದಯಿಸಿದಳೆಂಬಂತೆ ಮೆಱೆವ ಕಲ್ಯಾಣಪುರ
ನಿಧಿಯೊಳು ನಿಧಾನವಾಗಿರಲೆಂದುಭಯ ಕಳಾ
ಭ್ಯುದಯವನಥವ ರೂಪಿಸಿದ ಮಾಳ್ಕೆಯಿಂದಿಪ್ಪನಲ್ಲಿ ಕಿನ್ನರದೇವನು ॥ ೨ ॥

ಆದಿಯು ಮಹತ್ತತೆಯು ಪರುಷಕ್ಕೆ ಸಿದ್ಧರಸ
ವಾದಮಂ ಕೂಡಿಸಜ್ಜನ ಶುದ್ಧಭಕ್ತಿಯ ಸು
ನಾದಮಂ ತುಂಬಿ ಜ್ಞಾನೋದಯುದ ತೇಜವನ್ನೋಜೆಗೊಳಿಸೊಪ್ಪವಿಟ್ಟು ।
ಸಾದರರದ ಶುಚಿಭೂರ್ತ ದೇಹದೇಹಿಯ ಮಾ[2]ಡೆ[2]
ಮಾದೇವ [3]ನಿಷ್ಕಳಾಂಗಗೆ[3] ನಿಷ್ಕಳಬ್ರಹ್ಮ
ಸಾಧನ[4]ವೆಸಗೊರ್[4]ಟ್ಟಿಳೆಗೆ ಕಳುಹಿದೊಳ್ಪಿನಿಂದಿರ್ಪ ಕಿನ್ನರಬ್ರಹ್ಮನು ॥ ೩ ॥

ಶುದ್ಧಸಾತ್ವೀಕ ಸಜ್ಜನಸದಾಚಾರ ನಿಜ
ಸಿದ್ಧಾಂತವೆಂತೊರೆದೊಡೊರೆದೊಡೊಗೆದೊಡೆ ನಿಗುಚಿ
ಇದ್ದಡಂ ಕಾಸಿ ಕರಗಿಸಿದೊಡಾವಂದದಿಂ ಛಿದ್ರಿಸಿದೊಡೇನು ತನ್ನ ।

---

[1] ರೆ (ಖ. ಗ). [2] ಡ್ಯ (ಛ.ಗ.). [3] ನಿಷ್ಕಳಂಗಂಗೆ (ಖ.ಗ.) [4] ವೆಸಂಗೊ (ಜ.)

ಸಧೃತಿಸಲ್ಲಕ್ಷಣಾದಿಗಳ ಬಿಡದಿಹ ಸ್ವರ್ಣ
ವಿದ್ಯೆಯ ವಿಧಾನವಿಡಿದಾ ವಿಧದಿ ತಿಳುಪುವ ಜ
ಗದ್ಗುರು ಸ್ವಕಾಯಕದ ಕೈವಱೆಯೊಳುಪದೇಶಕಲ್ಪದ್ರುಮ ಪೊಲಿರ್ಪನು ॥ ೪ ॥

ಹೊಂಗಾಯಕವ ಕೈಗೆ ಮಱೆಯೊಡ್ಡಿ ತ್ರಿಪುರಾಂತ
ಕಂಗೆ ಕಂದೆಱವಾ[1]ಗಿ[1] ಚರಲಿಂಗಭಕ್ತಿ ಮನ
ಸಿಂಗೆ ತನುವಾಗಿಯಾ ಪುರದರಸುಗೆಲಸಕರುಹತೆವಡೆದಿರಲ್ಕೆ ನೃಪನು।
ಮಂಗಳಾಭರಣಕ್ಕೆ ಹತ್ತುಸಾವಿರತೂಕ
[2]ಭಂಗಾರವಮಂ[2] ಕೊಟ್ಟು ಭಂಡಾರಿ ವಶಕೀ[3]ಯೆ[3]
ಸಂಗನಬಸವ ಮಾಡಿಸುತ್ತಿರಲು ಸಂಗನೇ ಜಂಗಮಾಕಾರವಾಗಿ ॥ ೫ ॥

ಬಂದಂತೆ ಬಂದೊರ್ವ ತಾಪಸಂ ಪರಕೆಗೊಡ
ಲೊಂದು ತೂಕವ ಕಿನ್ನರಯ್ಯ ಕಡಿದಿತ್ತರದ
ತಂದು ಮತ್ತೊಂದು ಜಂಗಮಕೆ ತೋಱಲ್ಕಾತ ಬಂದು ತಾಂ ಪರಸಲೊಡನೆ।
ಒಂದು ತೂಕದ ಚಿನ್ನವಂ ಕೊಡಲಿಕವರ್ಗಳವ
ರಂದವಂ ಕೆಲರ್ಗೆ ಕೆಲರ್ಪೇಳೆ ಬಂದನಿತಕಾ
ನಂದದಿಂ ಕೊಡೆ ಕಂಡು ಬಸವಣ್ಣನೊ[4]ಳಗೊಳಗೆ ಬರೆದ[4]ನಾ ಹೋದರ್ಥವ ॥ ೬ ॥

ಅರ್ಥಕರ್ಥಂಬೋದುದನಿತಕಾ ಕೆಲಸವು ನಿ
ಬದ್ಧಿಸೊಪ್ಪಿಸಲೊರೆದು ತೂಗಿಸಲು ಸರಿಗೆ ಸರಿ
ಯಿದ್ದ[5]ಂತು[5] ಗದ್ಯಾಣತೂಕವಧಿಕಂದೋಱೆ ಕಂಡು ಸಂಗಬಸವನು।
ಎದ್ದು ಸಾಷ್ಟಾಂಗಪ್ರಣತನಾಗೆ ಶರಣರಿಂ
ತುದ್ದಂಡಿಸುತ್ಸಾಹ ಬೆಸನದಿಂದೆಱಗುವದ
ಬದ್ಧವೆನುತಪ್ಪಿಕೊಂಡೇನಚ್ಚರೆಂಬ ಕಿನ್ನರ ಬೊಮ್ಮಿದೇವಗೆಂದ ॥ ೭ ॥

ಹತ್ತುಸಾವಿರತೂಕ ಚಿನ್ನವಂ ನೃಪಗೆಲಸ
ಕಿತ್ತರದಱೊಳು ಲಿಂಗಜಂಗಮಕೆ ನೀವು ಕಡಿ
ದಿತ್ತುದೈಸಾಸಿರಂ ಬರೆದು ನೋಡಿದೆ ತೀರ್ಚಿದಾಭರಣಗಳನು ಮೇಲೆ।
ಎತ್ತಿನೋಡಿದಡೊಂದು ಗದ್ಯಾಣವಧಿಕವಾ
ಗುತ್ತಮೋತ್ತಮವಾಗಿ ದಾಸೋಹದೇಳ್ಗೆಯ ಸು
ಚಿತ್ತದ ಸುಸಂಗ ಸಂಗಮನಾಥನೆಂದು ಶರಣೆಂದೆನೆನಲವರೆಂದರು ॥ ೮ ॥

---

[1] ಗೆ (ಕ). [2] ಭಂಗಾರಕೊಟ್ಟು (ಖ). [3] ಯಲಾ (ಖ. ಘ.) [4] ಳಗೆಬರೆವರದ (ಖ).
[5] ತ್ತು (ಖ.).

ನಿತ್ಯಂಗೆ ದಿನಸಮೆಯಲಾಯುಷ್ಯವರೆಯಹುದೆ
ಬತ್ತುವುದೆ ಒಱತೆ ದೀಪ್ತಿಯೊಳು ಕೆಲದೀಪ್ತಿಗಳ
ಪತ್ತಿಸಿದೊಡೇಂ ಸೂರ್ಯಕಿರಣವೆಲ್ಲೆಡೆಯೊಳಿರೆ ವೆಚ್ಚವಹವೇ ಕಳೆಗಳು।
ಚಿತ್ತಲಿಂ[1]ಗಂ ಚಿತ್ತ[1] ಕಾಯಕದ ಕೈಯಿಂದ
ಲಿತ್ತ ಮನ ಪರುಷ ಸ್ವಯವಾಗಿ ಕೈಪರುಷ ಶ್ರುತಿ
ಯುತ್ತರಹಿರಣ್ಯರೂಪಂ ಹಿರಣ್ಯಂಬಾಹು ಶಿವನೆಂಬುದಪ್ರಮಾಣೆ ‖ ೯ ‖

ಅತ್ಯತಿಷ್ಟದ್ದಶಾಂಗುಲನ ಶರಣರ್ಗೆ ಕೊಡ
ಲತ್ಯಧಿಕವಹುದಲ್ಲದರೆಯಹುದೆ ನಂಬಿಗೆಯು
ಉತ್ತಮನಿಧಾನರೂಪಕನ ಪರಭಿತ್ತಿಯೊಳು ಬರೆಯಲೇಂ ಭಾರಕಳುಕಿ।
ಭಿತ್ತಿ ಬಿರಿವುದೆ ಪರಮವಿಶ್ವಾಸಬಿನ್ನಣದ
ಚಿತ್ರವೆಂತೆನಲೊಡಂಬಟ್ಟಿದೆನಗುಪದೇಶ
ವಿತ್ತಿರೆನುತಂ ಬಸವರಾಜ ನಿಜನಂಬುಗೆಯ ವಾಕ್ಪರುಷವಡೆದು ಪೋಗೆ ‖ ೧೦ ‖

ಲಕ್ಷ ಹತ್ತೆಂಟಱಿಂ ಪೆಟ್ಟಿಗೆಯ ರಾಜಗೃಹ
ಲೆಕ್ಕಕ್ಕೆ ತೆಗಿಸಿ ವೆಚ್ಚಿಸುತ ಕಿನ್ನರತಂದೆ
ಯಕ್ಷಯದ ವಚನವಿಶ್ವಾಸಕ್ಕೆ ವಿಶ್ವೇಶ್ವರನ ವಿಶ್ವತೋಮುಖರ್ಗೆ।
ತಕ್ಕುದಂ ಕೊಡ[2]ತೊಡಗೆ[2] ಕರಣಾಗ್ರಗಣ್ಯರದ
ನಕ್ಕರಿಂ ಬರೆದುಪೇಕ್ಷಿತ ರಾಜದ್ರೋಹವೆಂ
ದಿಕ್ಕದರು ಖತಿಯನರಸಂಗೆಯರಸದಕೆ ಕಾಹುರವನಧಿ ವಡಬನಾದಂ ‖ ೧೧ ‖

ಕರಣಕಾಹೇಱುಗ್ರವ್ಯಸನ ವ್ಯಾಪ್ತಿಸಿ ಕೋಪ
ದುರವಣೆಯೊಳುಬ್ಬಿ ಕರೆಕರೆ ಯೆನಲ್ಕಾಹುರದಿ
ಚರರು ಚಾವಡಿಯೊಳಿಹ ಮಂತ್ರಿಯ ಮಹಾತೇಜವಂ ನೋಡದುದ್ದಂಡಿಸಿ।
ಅರಸನಾಕ್ಷೇಪದೋಜೆಯ ರೂಪು ತಾನೆಯಾ
ತುರಿಸಿದೊಲ್ಕರೆಯಲೆದ್ದೈತರಲು ಕಾಣುತಲೆ
ವರಮವಿಶ್ವಾಸಿ ಬಾ ಯೆಂದು ಮಿಥ್ಯಾವಚೋದ್ರೇಕೋಪಹಾಸ್ಯದಿಂದ ‖ ೧೨ ‖

ಉಭಯಪಾರ್ಶ್ವದ ಶಿಷ್ಟರಂ ವಿಶಿಷ್ಟರ ನೋಡು
ತಭಿಮುಖಂಗೆಯ್ವುತಾಹಾ ನೋಡಿರೀತನೀ
ಯಬಲಪ್ರಾಯದೊಳಿಂತು ಪರಿಯನಾಡಪೆ ಪರಮ ವಿಶ್ವಾಸಿಯಾಗದಿಹನೆ।

---

[1] ಗವಮುಟ್ಟ (ಜ). [2] ಕೊಡಲು (ಖ), ರಾಗ (ಕ).

ತ್ರಿಭುವ[1]ನದೊಳಿಂತಿಲ್ಲವಿಂ[1]ತಪ್ಪ ಭಂಡಾರ
ವಿಭುವೆಮಗೆ ದೊರಕಿದನೆನುತ್ತ ಕಟಕಿಯೊಳಗೆಲೆ
ವಿಭುವೇನ ಮಾಡಿದೆನ್ನಾಣೆ ಪೇಳರಮನೆಯ ಧನಭೀ[2]ತಿ[2] ಬೀತುದಿಲ್ಲ ॥ ೧೩ ॥

ಸರಿಗೆ ಸರಿಯಂ ಸರಿದು ಹರಭಕ್ತರೆಂದು ಕೆಲ
ಬರಿಗೆ ಸೂಱೆಯ [3]ಕೊಡಲಿ ಕೇನ್ನಿ[3]ನಗೆ ಭಂಡಾರ
ದರಸುತನ ಕೊಟ್ಟೆವೆ[4]ನ[4]ಲೆತ್ತಣ ವಿಚಾರ ವೆಂತರಮನೆಯ ಧನೆವ ನಾವು।
ಚರಲಿಂಗಕಿತ್ತೇವೇ ಯೆನೆ ದೃಷ್ಟವಂ ಕಂಡು
ಬರೆದವರು ಜಾಹಿರರೆ ವಂಚಕಗೆ ವಾಗ್ಬಲುಮೆ
ನಿರುತ ಕುಲವಿದ್ಯವಿದು ಸಾಕುಸ್ತೈತಿರುಯೆನುತ್ತವರಕರೆದರಸು ಕೇಳ್ದು ॥ ೧೪ ॥

ಪಲವು ಬಳಕೆಯ ಹಳಸುವಾತೇಕೆ ಸಾಕು ತೆಗೆ
ಬಲಿಮುಖನ ಕೊರಳ್ಗೆ ಮಾಣಿಕದ ಮಾಲೆಯನಿಕ್ಕ
ದ[5]ಲೆ[5]ಮರುಳ್ಗಳಾವಾತ[6]ನಿಂ[6] ಹೊಲ್ಲೆ[7]ಹಿಲ್ಲೀತ[7]ನಾರ್ಗೇನ ಕೊಡದಿರ್ದಡೆ।
ಉಳುಹಿದನು ಬಳಿಕೇನು ವೆಚ್ಚಮುಖಭಂಡಾರ
ಬಳಕೆಯೊಳೊಡಂಬಡಿಸಿ ತೋಱಲಿದಕೊಡಬಡದೆ
ಹುಳಕಳವನಿಕ್ಕಿದರೆ ಕಡಿದುಳಿದುದಕ್ಕೆ ದೃಷ್ಟಂದೋಱಲಲ್ಲದೆ ವೃಥಾ ॥ ೧೫ ॥

ಬಳಲಿಸಿದನಾದೊಡಾ ಫಲಪರೀಕ್ಷೆಯನುಣ್ಣ
ದುಳಿವಾತನಂ ಕಾಣ್ಬೆವೆನುತರಸು ತಗಹಿಕ್ಕೆ
ಕೆಲಬಲದ ಮಂತ್ರಿಗಳು ಮೆಚ್ಚೆ ವೆಚ್ಚಂಗಳೆದು ಜಂಗಮಕೆ ಕೊಟ್ಟ ಧನವ ।
ನೆಲೆಗಾಣಿಸಲು ಮೂವತಾಱು ಸಾಸಿರಸಹಿತ
ನಿಲವಿಕ್ಕಿ ದೃಷ್ಟಮಂ ತೋಱೆನುತ ಮುಂದೆ ತಂ
ದಿಳುಹಿದರು ಪೆಟ್ಟಿಗೆಯ ಕಟ್ಟುಗ್ರದರಸಿನಾಜ್ಞಾಧರಾ ದಂಡಧರರು ॥ ೧೬ ॥

ನಡುಗುತಿರ್ದುದು ಸಭೆ ಸಹಾಯಿಗಳು ಸದ್ಭಕ್ತ
ರೊಡಲೊಳುರಿ[8]ವಾ[8]ಯ್ದುಂತೆಯಾರಾಧನೆಗಳ ಕೊಂ
ಡೊಡೆಯರೊಗ್ಗೊಡೆದು ಧರ್ಮಿಗಳ ನಿ[9]ರ್ಮಳ[9]ಗೆಟ್ಟು ಸುಜನರ ಸುಚಾರಿತ್ರರ ।
ಶಿಡಿಲು ಸೋಂಕಿದ ಮಾಳ್ಕೆಯಿಂ ಮಹಾದೇವ ಯೆಂ
ತೊಡಬಡಿಸುವನೊ ಹೋದ ಧನ ಬಂದು ಪೆಟ್ಟಿಗೆಯ [॥ ೧೭ ॥
ನೊಡೆದೊಳಗೆ ಹೋಗುವುದೆ ಭಕ್ತಿಭಾಗ್ಯೋನ್ನತಿಯ ನಡೆಗೆಡೆಹುಗುಳಿಯಿದಾಯ್ತು

---

[1] ವನೇಶರಗಿಲ್ಲದೆಂ (ಜ). [2] ತು (ಕ). [3] ಗೊಡಲ್ಕೇಂನಿನಗೆ (ಖ.ಗ). [4] ನೆನ (ಖ). [5] ರೆ (ಕ. ಖ). [6] ನಂ (ಕ.ಖ.ಗ.ಘ.ಛ). [7] ಯಿಲ್ಲತಾ (ಗ), ಯಿಲ್ಲೀತ (ಕ.ಖ). [8] ವೊ (ಖ). [9] ರ್ಣಯ (ಜ);

ಎಂದು ಬಾಯ್ವಿಡುತಿರ್ಪ ಸುಜನಜನವದನಾರ
ವಿಂದಗವಿಯುದಯಾದ್ರಿ[1]ಗೈದವೋಲ್ಪೆಟ್ಟಿ[1]ಗೆಯ
ಮುಂದೆ ನಿಂದುದು ಕಿನ್ನರಯ್ಯಗಳ ವಾಕ್ಪರುಷವಿಶ್ವಾಸ ಮುಖದೆಗೆದೊಲು ।
ಇಂದುಮೌಳಿಯ ಚರಣದೃಢವಿಡಿದು ಕರವೆರಡ
ಱಿಂದೆ ಪೆಟ್ಟಿಗೆಯ ಮುಖದೆಗೆದು ಜಾಳಿಗೆಯ ಬಾಯ್
ಬಂಧನದ ಮುದ್ರೆಗಳಚುತ್ತೆ ತಾಪೂರ್ವಸಂಕಲ್ಪವೆನುತಂ ಸುರಿದನು ॥ ೧೮ ॥

ನಿಷ್ಠೆಯ ನಿಧಾನನಿಧಿ ನಂಬುಗೆಯ ರಾಜಗುರು
ಪಟ್ಟವರ್ಧನ ನಿಜದ ನಿರ್ದೇಶದೇಶಪ್ರ
ತಿಷ್ಠಿತಾಚಾರ್ಯ ಗುರು ಲಿಂಗ ಜಂಗಮಭಕ್ತಿಸೃಷ್ಟಿ ತಾನಾದಿಸ್ರಷ್ಟ ।
ದೃಷ್ಟಾಂತಗಳ ದಿವ್ಯಮಂತ್ರಮನಪರುಷವಳ
ವಟ್ಟಿಹ ವಿಚಿತ್ರಭಾವದ ವೀರವಾರಿಧಿ ಯ
ಥೇಷ್ಟಪಾವನರೂಪ ಕನಕರಾಶಿಯ ಕಲ್ಪಿಸಿದನು ಭೂರಮಣನಿದಿರ ॥ ೧೯ ॥

ಅರಸನಧ್ಯಕ್ಷಮುಖನಾಗಿ ತಾ ನೋಡಲೊಂ
ದರೆವೀಸ ಕುಂದದಿರೆ ಬೆಱಗಿನಂತರಭೂತ
ಶಿರಕೆಱಗಿದಂತೆ ತಲೆವಾಗಿ ವಾಗ್ವಳಕೆಗಳರಸ[2]ನೆ[2]ರಸವಱತು ಕೋಪ ।
ಧರೆಗೆಡೆದು ನಿಷ್ಠೂರನೀತಿ ನೀರಂ ಕೂಡಿ
ಉರವಣಿಸುತ[3]ಣಿವಱಿದ ಗ[3]ಣಕಸೊಣಕಿಗಳಾಟ
ನರಕಕಿಳಿದವು ರಾಜನುಗ್ರನಿಗ್ರಹಕಳಾಭಂಗವಾಯ್ತೇನೆಂಬೆನು ॥ ೨೦ ॥

ಬೆಬ್ಬಳಂ ಬೆಬ್ಬಳವ ನೀಕ್ಷಿಸಲ್ಪ[4]ಟ್ಟಂತಿ[4]
ರೊಬ್ಬರೊಬ್ಬರ ಮೊಗಂ ನೋಳ್ಪರಸಮಾತ್ಯರ್ಗೆ
[5]ನಿರ್ಬುದ್ಧಿ[5]ಸೈವೆಱಗಿ [6]ನೆ[6]ರಕೋಪದೇಶ ನಿಜತನುವನಾವರಿಸಿದಂತೆ ।
ಗರ್ಭಗಾಂಭೀರ ಗೂಢಂ ಗೂ[7]ಢ[7]ಗೆಟ್ಟು ಕಾ
ಳ್ಗಬ್ಬಗಳ ಬರೆದ ಗಾವಿಲರ ಕಱುನಾಲಗೆಗೆ
ನಿರ್ಬಹಂ ಮಾಳ್ಪೆನೆನುತಾಕ್ಷೇಪಿಸುತ್ತ ನೃಪ ನಿರ್ಭರನಿರೀಕ್ಷೆಗೈಯೆ ॥ ೨೧ ॥

ತಪ್ಪನೊಪ್ಪಿಸಿದವದಿರಿಂ ಹೊಲ್ಲೆಯೇನರಸ
ದರ್ಪಣವದೊಂದ ಪಲಬರ್ನೋಡಲವರವರ್ಗೆ
ಳೊಪ್ಪದೋಱುವ ಬಗೆಯೊಳಿರ್ದುದವರೇವರೆಮ್ಮಯ ಭೋಗಜೀವಿತಕ್ಕೆ ।

---

[1] ಗೈದುಪೊಲುಪೆಟ್ಟಿ (ಖ.ಗ). [2] ನ (ಖ). [3] ವಣಿವರಗಳ (ಜ). [4] ಟ್ಟುತೀ (ಘ.ಗ). [5] ನಿರ್ಬೆದ್ದ (ಜ). [6] ನ (ಕ.ಖ), ವೆ (ಜ). [7] ಡು (ಕ.ಖ.ಗ.ಘ), (ಕ.ಖ).

ತಪ್ಪದಿಂತೊಂದು ಸಾವಿರ ಹೊನ್ನ ವ್ಯಾಸಕೆ ಸ
ಮರ್ಪಿಸುವಿರಾ ಧನಮ ಕಾಯಕದ ಕೈಯಿಂದ
ಲೊಪ್ಪಿಸೀಯಲ್ಕೆಹಗೆ ಮನವಹಗೆ ಶಿವ ಕೊಡುವನವರ ಭಾವದೊಳಗಿದ್ದು ‖ ೨೨ ‖

ನದಿಮುಖಂ ಸಾಗರ[1]ವ[1]ಮುಟ್ಟಿ ವೊದಲಿಂದ ಬ
ಪ್ಪುದಕದೊಳಗಣ ಬಳಕೆಸಾಗರದ ಮನೆಯದ
ಲ್ಲದೆ ಶಿವನನಯನದಿಂದುದಿಸಿ ಜಗಪಾವನಂಗೈದು ಮಿಕ್ಕಬ್ಧಿಸಿರಿಗೆ ।
ಒದಗುವ್ವೊಲು ಶಿವನವರ್ಗೀವ ಧನ ಶಿವನದೆಂ
ಬುದನಱಿದುಕೊಳ್ಳದಱ ಫಲದಿಂದ ಭಂಡಾರ
ನಿಧಿ ಪೆರ್ಚುಗೆಹುದೆಂದು ಬಸವ ಬಿಜ್ಜಳಭೂಮಿಪಾಲಗುಪದೇಶಿಸಲ್ಕೆ ‖ ೨೩ ‖

ನಿಶ್ಚಯಕೆ ನಿಶ್ಚಯಂ ಬೇಱೊಂದದೇಕೆ ನಿಜ
ದಚ್ಚುಕಕೆ ಮಚ್ಚರವೆ ನೀ ನಿಧಾನವ ತೋಱಿ
ದಚ್ಚರಿತನೆಮ್ಮಧನಕಿಚ್ಛೈಸುವಾ ನೀತಿ ಬಾತೆಗೆಟ್ಟಂತೆ ನಾವು ।
ಕುಚ್ಛಿತರ ಮಾತಿಂಗೆ ಕುಂದುವ್ವೊತ್ತವು ಮಂತ್ರಿ
ದುಶ್ಚವನ ನಿನ್ನ ಮನ ಖತಿಯ ಬಿಡು ಯೆಂದು ತ್ರಿ
[2]ಪುಚ್ಚ[2]ನಂಬುಗೆಗೆ ಕೈಯಾಂತು ಕೈಮುಗಿದ ಬಿಜ್ಜಳಮಹೀಪಾಲನಂದು ‖ ೨೪ ‖

ಕಿನ್ನರನ ವರವಾಕ್ಯನಂಬುಗೆಗೆ ಬಸವೇಶ
ಕಿನ್ನರೇಶ್ವರನಾದ ಜಗವಱಿಯಲೆಂಬ ಪ್ರಣ
ತೋನ್ನತಿಯ ವಾಕ್ಸಿದ್ಧಿ ಸಿದ್ಧಿವೇಳುವ್ವೊಲು ಪರಧನದೂರನೆಂದು ಪೊಗಳ್ವ ।
ಚಿಹ್ನಮಂ ಧವಳಶಂಖವನನರ್ಘ್ಯಾಭರಣ
ದುನ್ನತ ದುಕೂಲಂಗಳೆತ್ತಿತ್ತಿ ಕೊಂಡಾ ಜ
ಗನ್ನುತಗೆ ರಾಜ ಜಯಜಯ ಯೆನಲು ಜಯಜಯಾ ಯೆನುತಿರ್ದುದೆಲ್ಲೆಡೆಯೊಳು
‖ ೨೫ ‖

ರಾಜನುನ್ನತಸಿರಿಯ ತೇಜಾಧಿದೈವಕೆ ಸ
ರೋಜಪೂಜೆಯನೊಡರ್ಚುವಂತೆ ಕೈಮುಗಿಯಲು ಮ
ನೋಜಹರನಪರಾವತಾರ ವಾಚಾಸಿದ್ಧಗಣ್ಯಪುಣ್ಯೋದಯನಿಧಿ ।
ಮೂಜಗದ ಮೂಲಮಂತ್ರವು ಪ್ರಣವಬೊಗುವಂತೆ
ಶೋಜಯಸ್ತಂಭ ಬಿಂ[3]ಬಂಗೈದ[3]ವೊಲು ಬಸವ
ರಾಜಭಕ್ತಿಯ ಋಷಿಯು ಛಂದಾದಿದೈವನಿಗಮದೊಲು ನಿಜನಿಗಮ[4]ವೊಗು[4]ತ
‖ ೨೬ ‖

---

[1] ಕೆ (ಗ). [2] ನಚ್ಚ (ಘ), ಪುತ್ಸ (ಜ). [3] ವೆಂಬಂಗೈದ (ಘ), ದಿಂಬಿಂಗೈದು (ಜ). [4] ವೋದು (ಜ).

ತನು ಮನ ಧನಂ ಲಿಂಗ ಜಂಗಮ ಪ್ರಸಾದದೊಳು
ತನಗೆ ತಾ ತಲ್ಲೀನವಾದ ಗುರುವೇ ಪರುಷ
ವೆನಲು ಶಿವಕೊಡನೆಂಬ ಭಾವಭ್ರಮೆಯಳಿದ ದೇಹಿಗೆ ಮನವೆ ಘನವೆನಿಪ್ಪ ।
ಅನುಪಮೋಚಿತದವಸ [1]ರಂ ಸುನೀತವನು[1] ಶಿವ
ನನುಭವಕೆ ಸೇರಿಸು[2]ತವಖಿಲ[2] ಭಕ್ತಾನಂದ
ವನರುಹ[3]ತರಣಿ ಬಸವ ಮಹಿಮೆಯಿಂತೆಂದು ನಂದೀಶ ಪ್ರಮಥರ್ಗೊರೆದನು[3]
॥ ೨೭ ॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಕಿನ್ನರಯ್ಯಗಳ ವರವಾಕ್ಯಪಡೆದ ಸಂಧಿ ॥ ೨೮ ॥

---

[1] ರದವಚನಗಳ (ಕ.ಖ.ಗ.ಘ.ಛ). [2] ತ್ತಿದ್ದ (ಕ.ಖ.ಗ.ಘ.ಛ). [3] ಸಖನಕಿರಣ ಕೀರ್ತಿಸಂಪ್ರಮಥ ರಂತವಧರಿಸಿ ಶರಣರೊಲಿದು (ಜ).

ಹದಿಮೂರನೆಯ ಸಂಧಿ

ಸೂಚನೆ—

ವರವಚೋಸಿದ್ಧಿ ಪರಮಾರ್ಥ ಪುಣ್ಯದ ಪುಂಜ
ಪರಿವಾರಜೀವಿತಕ್ಕೆಂದು ತೆಗೆದರ್ಥಮಂ
ಚರಲಿಂಗದಿಚ್ಛೆಗಿತ್ತರಸಿಂಗೆ ಪೆಟ್ಟಿಗೆಯ ತುಂಬಿ ತೋಱಿದ ಬಸವನು ।

ಶ್ರೀಮದಖಿಳಾಗಮಾರ್ಣವಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾ ಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥ ೧ ॥

ಸಾಂಬಲೋಕದ ಸನಾತನರಸಂಖ್ಯಾತರ್ ಕೃ
ಪಾಂಬುಧಿಯೊಳವತರಿಸಿ ಮರ್ತ್ಯಕ್ಕೆ ಕೈಲಾಸ
ತಾಂ ಬಯಸಿ ಬಂದುದೆನೆ ಕಲ್ಯಾಣಪುರವೊಪ್ಪುತಿರ್ಪುದಂತಾ ಪುರದೊಳು ।
ಗಂಭೀರಭಕ್ತಿ ಮುಕ್ತಾಂಗನಾಲಿಂಗಚ
ರ್ಮಾಂಬರವಱಿಯೊಳಡಗಿ ಚರಿಸುತೀ ಬ್ರಹ್ಮತ್ರಿ
ಯಂಬಕನ ಷಟ್ತ್ರಿಂಶ ತತ್ವದಗ್ರದ ಕಲಶ ವೃಷಭ ಬಸವಾಂಕನಿಹನು ॥ ೨ ॥

ಗುರು ಲಿಂಗ ಜಂಗಮ ಪ್ರಸಾದ ಪಾದೋದಕವೆ
ಸ್ಥಿರಪಂಚಭೂತವಾಗಿರ್ಪವವರಿಂದ್ರಿಯಂ
ಕರ ಚರಣ ಮನ ನಯನ ವಾಕ್ಪುರುಷವೆನಲುಳಿದ ಧಾತುವಾತಖಿಳಸೂಕ್ಷ್ಮ ।
ಪರಿವಾರಭೌತಿಕವು ತತ್ವನಿಜಸಾವಯದ
ನಿರವಯಾತ್ಮಕದ ಕರು ಕರಣಚೇತನವಿಡಿದ
ಪರಿಯೊಳಿಹ ಪರಮಪೂರ್ವಾಚಾರ್ಯ ಬಸವದಂಡಾಧೀಶನಮಲಚರಿತ ॥ ೩ ॥

[1]ಕರಕೆ ಕರ[1] ಸುಧೆಗೆ ಸುಧೆ ಕಲ್ಪತರುವಿಂಗೆ ತರು
ಪರಕೆ ಪರ ಪುಣ್ಯಕ್ಕೆ ಪುಣ್ಯ ಮುಕ್ತಿಗೆ ಮುಕ್ತಿ
ಪರುಷಕ್ಕೆ ಪರುಷ ಉಪ[2]ಮಾನಮಿವಕುಂಟು[2] ಬಸವನ ಭಕ್ತಿಗುಂಟೇ ಪ್ರತಿ ।

---

[1] ಖರಕೆ ಕರ. [2] ಉಪನಿಧಿಗಳಿಗೆ ನಿಧಿಗಳಿವಕುಂಟೆ (ಜ).

ನಿರುತವೆಂಭತ್ತಾಱುಲಕ್ಷ ರಾವುತರು ಪದ
ಚರರು ತೊಂಭತ್ತಾಱು ಕೋಟ್ಯುಳಿದ ವಿನಿಯೋಗ
ಕರಸುಜೀವಿತವ ಕೊಡಪೇಳಿತ್ತ ವಸ್ತುವಂ ಕಂಡರ್ತಿಗಾರನೊಬ್ಬ ॥ ೪ ॥

ಮಿಂಡಜಂಗಮು ಬಂದು ಬೇಡೆ ಬೇಡಿತವೀಯೆ
ಕಂಡು ಕೆಲರಾಪರಿಯೆ ತಮತಮಗೆ ವೇಶ್ಯಾಪ್ರ
ಚಂಡ ಲಾಂಛನಧಾರಿಗಳು ಕವಿಯಲವರವರಕೊಱತೆಯಾರ್ಥಕೆ ಕಡೆಯನು ।
ಕಂಡಿತ್ತ[1]ನಾ[1]ಭರಣ ವಸ್ತ್ರ ಪರಿಮಳದ್ರವ್ಯ
ತಂಡ ನಾನಾಭೋಗಕೊತ್ತೆಗವರಿಚ್ಛೈಸೆ
ಕೊಂಡು ಹೋಹನಿತರ್ಥ[2]ವೀಯೆ[2]ಬರಿಪೆಟ್ಟಿಗೆಗಳೊಟ್ಟಿರ[3]ಲ್ಕಂಡರಸ[3]ಗೆ ॥ ೫ ॥

ಕೊಂಡೆಯರು ಬಂದು ಹುಯ್ಯಲುಗೊಟ್ಟರೆಲೆ ನೃಪತಿ
ಭಂಡಾರಿ ಭಂಡಾರವೆಲ್ಲವಂ ಜಂಗಮಕೆ
ಕೊಂಡೊಯ್ಯಹೇಳಿ ಕೈವೀಸಿದೊಡೆ ತಮತಮಗೆ ತಕ್ಕದಂತೆಲ್ಲ ಕಟ್ಟಿ ।
ಕೊಂಡೊಯ್ದರಿವೆ ಹಾಳುಪೆಟ್ಟಿಗೆಗಳೆಂದು ಭೂ
ಮಂಡಲೇಶನ ಮುಂದೆ ತಂದೊಟ್ಟಿದೊಡೆ ಚೋದ್ಯ
ಗೊಂಡು ಬಸವೇಶ್ವರನ ಕರೆಸಿದೇನತಿರೇಕವಕಟಿಂತು ಮಾಳ್ಪ[4]ರೆಂದು[4] ॥ ೬ ॥

ನಿಷ್ಠುರನಿರೀಕ್ಷೆಗೊಳಲೆಡಬಲದ ಪರಿವಾರ
ಕ[5]ಟ್ಟೊ[5]ದರೆ ರಾಯರಾವುತರೆಮ್ಮ ಜೀವಿತಕೆ
ಕೊಟ್ಟೊಡವೆಗೆಡಿ[6]ಸಿದಾ ಕೊ[6]ಟ್ಟುಹೋಗಿಲ್ಲೆನುತಲ[7]ತ್ಯಾ[7]ಸುರಂಗೊಳಲ್ಕೆ ।
ಪೆಟ್ಟಿಗೆಗಳೆಲ್ಲವಂ ಸ್ಫೈತಿರಿಸಿ ತಾನು ಕೈ
ಮುಟ್ಟಿ ಬೀಯಗದೆಗದು ನಿನ್ನೊಡವೆಯರೆವೀಸ
ಕೆಟ್ಟುದಿಲ್ಲದೆ ನೋ[8]ಡುಯೆನುತೆ[8]ತೋಱಿದನದೇನೆಂಬೆನಾಶ್ಚರ್ಯತರವ ॥ ೭ ॥

ಅರವರಿಸಿದವರವರ ಹೆಸರ ಮುದ್ರೆಯ ಲಿಖಿತ
ವಿರಲವರ ಕ್ಲುಪ್ತಜಾಳಿಗೆಯುರಹುಗುರುಹುಗಳ
ಸರಿಬರಹವಪವರ್ತನಕ್ಕೆ ಸಾಮ್ಯದ ಸಲಕ್ಷಣಸಹಿತ ಪೆಟ್ಟಿಗೆಗಳು ।
ಪರಿಪೂರ್ಣವಾಗಿರಲು ಕಂಡೆಲ್ಲ ವಿಸ್ಮಯದ
ಕರುವಿಟ್ಟ ಮಾಳ್ಕೆಯೊಲು ಮಾನಭಂಗದ ಮಹಾ
ಬೆಱಗು ಬೀಸರುವೋಗದೊಳಗೆಱಗಿ ಮಗುಳುತ್ತರೋತ್ತರದ ನುಡಿಯುಡಗಲು ॥ ೮ ॥

---

[1] ವಾ (ಜ). [2] ವಿತ್ತು (ಖ.ಥ.ಗ), ವೀವ (ಜ). [3] ಲ್ಗುಡದರಸಿ (ಜ). [4] ರೇ ವೃಥಾ (ಕ.ಖ.ಗ.ಘ.ಥ). [5] ಟ್ಟಿ (ಜ). [6] ಸಿಲಾಕೊ (ಖ.ಗ.ಥ), ಸಲಾಕೊರ್ (ಜ). [7] ಟ್ಟಾ (ಜ). [8] ಡಿಯೆನುತೆತೋಱಿದನದೇನೆಂಬೆನಾಶ್ಚರ್ಯತರವ (ಖ.ಗ), ಡಿಯೆನುತ ತೆಗೆದೊಟ್ಟಿದಾಗದೆ ಪೊಗಳ್ವೆನಾಶ್ಚರ್ಯವ (ಜ).

ಪರತಂತ್ರಪ್ರಳಯಾಂಧಕಾರರವಿ ಪರವಾದಿ
ನಿರಯಪಂಚಾಕ್ಷರೀಮಂತ್ರ ಪರಧನದೂರ
ವರಹಸ್ತ ಪರಸಮಯಪರಿಧಿ ಧೂಳೀಪಟೋತ್ಪಾಟಸ್ಪರ್ಶನಪ್ರಚಂಡ।
ಧುರಧೀರ ದೂಷಕವನಾಗ್ನಿ ಕಂಟಕವಾರ್ಧಿ
ತರತರಂಗಾವರ್ತವಡಬನೆಂದಗ್ರಕ್ಕೆ
ಕರವೆತ್ತಿ ಕೀರ್ತ್ಯಂಗನೆಯ ಕರೆವೊಲು ಸುಕೀರ್ತಿಪಾತ್ರ ಬಸವನ ಕೀರ್ತಿಸೆ ॥ ೯ ॥

ರಾಯ ನಸುನಗುತಹುದು ಛಾಯಾಪುರುಷಮೂರ್ತಿ
ಯಾಯ ಉದ್ಧವನಗಲವಳೆದು ಯುದ್ಧವ ಮಾಳ್ಪ
ನ್ಯಾಯವಾಯ್ತೆಂದು ಕೊಂಡೆಯರ ಪರಿವಾರವಮಂ ಬಱಿಯ ಪೆಟ್ಟಿಗೆಗಳಂ ತಂದು।
ಹಾಯಿಕಿದವರ ಮುಖವ ನೋಡಿ ಭ್ರಮೆಯಿಂ ಪರರ
ಬಾಯಲುಂಬನ ಬಸಿಱು ತುಂಬುವುದೆ ಯೆಂಬಭಿ
ಪ್ರಾಯ ನೆಲೆಯಾಯ್ತಿದೇನತಿಕೌತುಕಂ ದೃಷ್ಟ ಭ್ರಷ್ಟಾದ ಪರಿಯೆಂತೆನೆ ॥ ೧೦ ॥

ನ್ಯಾಯಯುತರಲ್ಲಿ ಕೆಲವೈದಿಕೋತ್ತಮರುಗಳು
ಪ್ರಾಯಸಂಸೂಚನೆಯ[1]ನೆ[1]ತ್ತಿದರು ಭಾರತಾ
ಧ್ಯಾಯದಲಿ ರಾಜಸೂಯಾಧ್ವರಕೆ ಪಾಂಡುಜರು ನೆರಹಿದ ಸುವರ್ಣಚಯುವ।
ರಾಯ ಕೌರವನ ಸತ್ಯಕ್ಕೆ ವ್ಯಯಮಾಡೆ ಕರ
ಶ್ರೀಯಶಸ್ಸಿಂದ ಧನ ಪೆಚ್ಚದೇ ಯೀ ದಂಡ
ನಾಯಕನು ದೇವತಾಪುರುಷನಿಧಿ ಸೋಂಕಲಿಂತಾಗದಿಹುದೇ ನೃಪ ಯೆನೆ ॥೧೧॥

ಅಂತದಲ್ಲದೊಡಿಂತು ದೃಷ್ಟನಿರ್ದೃಷ್ಟವಿ
ಭ್ರಾಂತಿಯೆನುತಖಿಳ ಪರಿವಾರ ಕುಲರಾಜಸಾ
ವಂತರಂ ಕರೆಸವರವರ ಜೀವಿತಾಂತರವನವರವರಿಗೀಸಿ ಕೊಡಿಸಿ।
ಮಂತ್ರಬೀಸರು ಪೋಗದಾಧನದ ಸಲುಗೆಯ
ಭ್ಯಂತರವದಿಳಿದು ಕೌತುಕವ ಕಡೆಗಂಡು ಲ
ಕ್ಷಾಂತರತ್ನಾಭರಣದೊಡಿಗೆಗಳನಿತ್ತು ಬಸವರಸರಂ ನೃಪ ಕಳುಹಲು ॥ ೧೨ ॥

ಗೆದ್ದೆಂತು ಪೋದಪೆಯೆನುತ್ತೆ ಮರುಗಾಳಗ
ಕ್ಕೆದ್ದ ದಾಯಾದನಂತುನ್ನತದ ಗಜ ಹರುಷ
ವರ್ಧನತುರಗ ಮನೋರಥ ರಥ ಮಹೋತ್ಸಹ ಪದಾತಿಂತು ಚಾತುರಂಗ।
ಬದ್ಧರ ಬಹಳ ಕೀರ್ತಿ ಮಹಿಮೆಯ ಪತಾಕೆಗಳು
ಶುದ್ಧತೆಯ ಕೈದು ಸತ್ಯದ ಬಿರುದು ಅಷ್ಟಮಹ
ಸಿದ್ಧಿಮಂತ್ರಿಗಳ ಮಂಗಳ ನೃಪಂ ಮುತ್ತಿಪಿಡಿದಂಡಲೆದ ಬಸವಾಂಕನ ॥ ೧೩ ॥

---

[1] ಲೆ (ಜ).

ಎಸೆವ ಮಂಗಳದ ಮಾಲೆಯ ಮಧ್ಯದಲಿ ತೊಳಪ
ಪೆಸರುಗಳ ಮುತ್ತು ಮಾಣಿಕದಂತೆ ಸದ್ಭಕ್ತ
ವಿಸರದೊಗ್ಗಿನೊಳು ವಿಶ್ವಾಧಿಕನ ರೂಪ ಬಸವಾಂಕ ಮೆಱೆವುತ್ತ ತನ್ನ ।
[1]ವಸಥ[1]ವೊಕ್ಕನವ ತಲ್ಲಿಂಗಜಂಗಮದಂಘ್ರಿ
ಬೆಸನದೊಳು ಮೂರ್ತಿವತ್ತಾಗಿಹ ಮಹಾಮಹಿಮ
ನೆಸಕವಿಂತೆಂದು ನಂದೀಶ ಪ್ರಮಥಗೊರೆದೆಥಾರ್ಥವಿದು ಚಿತ್ತವಿಪುದು ॥ ೧೪ ॥

ರಾಜಶೇಖರ ವಿಶ್ವನಾಥ ಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜ ಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು [2]ಕೇನೆಜೀವಿತಕ್ಕೆಂದು ತೆಗೆದರ್ಥಮಂ ಚರಲಿಂಗಕಿತ್ತ
ಸಂಧಿ[2] ॥ ೧೫ ॥

---

[1] ಗೃಹ (ಖ). [2] ಧನವ ಪೆಟ್ಟಿಗೆಯತುಂಬಿ ತೋಱಿದಪವಾಡದಸಂಧಿ (ಗ).

ಹದಿನಾಲ್ಕನೆಯ ಸಂಧಿ

ಸೂಚನೆ—

ನಿಂದಕರ ನಿರ್ಧೂಮಮಮಂ ಮಾಡಿಯಜ್ಞಾನ
ದಂಧಕಾರದ ರಾಯನಮಲಸಿಂಹಾಸನಮ
ನಂದುರುಹಿತೋಱಿದನು ನಂದಿಯುಂಗುರದ ಪ್ರತಿವಾದದಿಂ ಬಸವಾಂಕನು।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲಡೆಂತೊ ॥ ೧ ॥

ಪರಬೊಮ್ಮದಂಶಿಕದ ಹಂಸರಘಟಿತಘಟಿತ
ವರಘಣ್ಯಸುಧೆಯ ಸೂಸುವ ಸುಧಾಕರನ ಸ
ಚ್ಚರಿತ ಪ್ರಮಥರ್ಪಾಲಿಸುವುದೆನ್ನಬಿನ್ನಪವ ಕಲ್ಯಾಣಪುರನಾಥನು ।
ಸುರುಚಿರ ಸುರತ್ನಮಣಿಮಯ ದಿವ್ಯ ಸಿಂಹವಿ
ಷ್ಟರದಗ್ರದಲಿ ಲಕ್ಷ್ಮಿ ಲಕ್ಷ[1]ವಂ[1] ತೋರ್ಪಖಿಳ
ಪರಿಜನಂವೆರಸಿಯಾ ರಾಜರಾಜೇಂದ್ರ ಸುಖಸಂಕಥಾಶರಧಿಯೊಳಿರೆ ॥ ೨ ॥

ನಡುನೀರೊಳೆದ್ದ ವಡಬನ ತೆಱದಿಯಾ ಸಭೆಯ
ನಡುವೆ ಕೊಂಡೆಯ ಮಂಚ ಹರಿಭಟ್ಟರೊಳಗಾದ
[2]ಉಡುಕುಳಿ[2]ಗಳಾ[3]ಢ್ಯ[3]ರೊಳಗಾದರಿರಲಾ ಸಮಯದಲ್ಲಿ ಭಂಡಾರಿ ದಂಡಾಧೀಶನು ।
ನಡೆತರುತಿರಲ್ಕಂಡು ಪಾತಕರು ಭೂವಸದ
ಗೆಡೆಗಿಚ್ಚನಿಕ್ಕಿದರು ಬ್ರಹ್ಮಕ್ಷತ್ರರು ನಿನಗೆ
ಪೊಡಮಡುವರೀತ ಪೊಡಮಡುವುಪಾಯ ಸ್ಥಿತಿಯನಱಿ[4]ದಿಹೆಯೆನ[4]ಲ್ಕೆಂತೆನೆ ॥ ೩ ॥

ಕುಟಿಲಕುಹಕಿಗಳೆಂದರೆಲೆ ರಾಜ ನಿಮಗೀತ
ದಿಟಕೆ ಪೊಡಮಡುವನೆಂದಿಹಿರಿ ಕಾಳದು ಬಯಲ
ಸಟೆ ತನ್ನಕೈಯೊಳೊಂದಟಮಟದ ನಂದಿಯುಂಗುರವೆಂದು ಮಾಡಿಕೊಂಡು ।

---

[1] ಣಂ (ಕ). [2] ಕದುಕಳಿ (ಕ), ಉಡುಕುಡಿ (ಖ). [3] ದ್ಯ (ಜ). [4] ಹಿರೆಯೆ ನಲೆಂ (ಜ).

ಕಟಕಿಯಿಂದದಕೆ ಪೊಡಮಟ್ಟರಸು ಭಕ್ತಿಯಂ
ನಟಿಯಿಸುವ ದೃಷ್ಟಮಂ ನೋಳ್ಪಡಾ ಮುದ್ರಿಕೆಯು
ಪಟದೆಗೆದು ಪೊಡಮಡನು ಪೊಡಮಟ್ಟನಾದಡಾವ ಪದಸ್ಥರೆಂದೆನುತಿರೆ ॥ ೪ ॥

ಎಂದಿನಂದದೊಳು ಬರುತಾವೃಷಭರಾಜೇಂದ್ರ
ನಂದಿಯುಂಗುರವ ತಿರುಹಭಿಮುಖದೊಳಿಟ್ಟು ಶರ
ಣೆಂದು ಕೈಮುಗಿವುತ್ತಲಿರೆ ರಾಯ ಕಂಡು ನಗುತಹದು ತಾರ್ಕಣ್ಯವು ಸರಿ।
ಬಂದುದೆನುತಂ ತನುವನಲ್ಲಾಡಿ ತಲೆದೂಗಿ
ಮಂದಸ್ಮಿತಂ ದೃಷ್ಟಿಯಿಂದ ಗಲ್ಲಕ್ಕೆ ಕೈ
ದಂದು [1]ಮಥನಕೆಮಥನಗೊಟ್ಟು ಮಂತ್ರಾಭ್ಯಂತರಂ ಸೋಂಕಿ[1]ಸೆಳೆವೊಲೆಂದ॥ ೫ ॥

ಹನಿಹುಲ್ಲನೀರ್ಬೀಳದೊಡೆ ತಾಮ್ರಪರ್ಣಿಯೊಳು
ಜನಿಯಿಸುವ ಮುತ್ತು [2]ಕೋ[2]ದ್ಯಹವೆ ಸುರಭೂರುಹಕೆ
ಜಿನುಗುವಳೆ ಬೀಳದೊಡೆ ನಿಷ್ಫಲಗಳಹವೆ ತೃಣಬೆರೆತಿರ್ದಡನಲನಾಜ್ಞೆ।
ಬಿನುಗಹುದೆ ಕೇಳ್ಸೂರ್ಯವಂಶೋದ್ಭವದಪೂರ್ವ
ಜನಪರಾವ್ಭೂನುತರಿಗೊಬ್ಬನೀಂ ಕೈಯೆತ್ತಿ
ವಿನಮಿಸದೊಡಾದ ಕುಂದೇನು ಕಪಟದ ಕವಚ ಕಾಯ್ದುವೇ ಬಾಣಹತಿಯ॥ ೬ ॥

ನಂದಿಯುಂಗುರದ ಮಱೆಯಿಂದೆ ಕೈಮುಗಿವೆಯದ
ಱಿಂದಲೇಂ ತೇಜ ನಿನಗೆಮುಗದೇಂ ಕೊಱತೆ ಪೇ
ಳೆಂದರಸು ಗದಿಗದಿದು ಕೇಳೆ ಕೆಲಬಲದ ದುರ್ಬೋಧಕರದಿಂತೆಂದರು।
ಇಂದಿನಿಂದಿತ್ತಲಾ ಮುದ್ರಿಕೆಯ ತೆಗೆದು ಶರ
ಣೆಂದಡೇನಿಲ್ಲಲ್ಲದೊಡೆ ಯೆಲ್ಲರೇಕೆ ಶರ
ಣೆಂದಪೆವು ನಮ್ಮಿಷ್ಟದೈವವಾಹನಮುದ್ರಿಕೆಯ ಮಾಡಿಸಲ್ಲದೆನುತ ॥ ೭ ॥

ನಿಂದಕರ ನಿವಹ ನೀ ಕರಿಸಿ ತನತನಗೆ ಮನ
ಬಂದಂತೆ ಬಾಷ್ಕಳಂಗೆಡೆದು ರಾಯಂಗೆ ಹಿತ
[3]ವೆಂ[3]ದಿಚ್ಛೆಗುತ್ಸವಂ ಬೋಗುತಿರೆ ಭೋಂಕನೆದ್ದನು ವೀರಭದ್ರನೆಜ್ಜ।
ಮಂದಿರಕೆ ಮಸಗಿದಂತನಲಕರನಗ್ನಿವಿಾ
ಳೆಂದುಸುರ್ವ ಶ್ರುತಿಯರ್ಥದೋರ್ಪ ವಿಶ್ವಾಧಿಕನ
ದ್ವಂದ್ವದವತಾರ ಬಸವಾಂಕ ನಿಂದನು ಕೈಯ ನಂದಿಯುಂಗುರವ ತೆಗೆದು ॥ ೮ ॥

---

[1] ಮನಮಥಕ್ಕೆ ಹತಗೊಟ್ಟು ಮಂತ್ರಮಾಲೆಯ ಭಂತರು ಸೊಕ್ಕಿ (ಜ). [2] ಕೇ (ಖ). [3] ವಂ (ಕ.ಖ).

ನಿಷ್ಠೆಯ ನಿಧಾನ ನಿಶ್ಚಯದ ನಿಧಿ ಭಕ್ತಿಯ ಸು
ಪಟ್ಟಮದಗಜಮಹಿಮೆಯಂಜನಾಸಿದ್ಧ ಶ್ರುತ
ದೃಷ್ಟವಾರಾಶಿ ಶೀಲದ ಶಿಲಾಸ್ತಂಭ ಸಿಲ್ಕಿದ ಬ್ರಹ್ಮ ಬಱುಬೋಧೆಯ।
ಬೆಟ್ಟಮಂ ಹಿಟ್ಟುಗುಟ್ಟುವ ವಜ್ರ ದೂಷಕಘ
ರಟ್ಟ ಪ್ರಳಯ ಪ್ರಕೃತಿ ನಿಲುಕದಚಲಿತಮೇರು
ದುಷ್ಟ ನಿಷ್ಠುರಮೇಘವಾತ ಕರುಣದಿ ನೃಪಗೆ ಕೊಟ್ಟನುತ್ತರವ ಬಸವ ॥ ೯ ॥

*ಅರಸೆಂಬ ತೇಜದಿಂದಾನು ಕೈಮುಗಿದಡದ
ಪರಿಣಮಿಸಲಱಿಯದೀ ದೂಷಕರ ನುಡಿಗೇಳ್ದು
ತ[1]ರಳ[1]ರಂದದಲಿ ನೀ ನುಡಿದೆ ನಾ ಶರಣೆಂದಡುರಿಯದೇ ನಿನ್ನ ದೇಹ।
ಕರುಣಮಂ ಮಾಡುವೆಂ ದೃಷ್ಟಮಂ ನೋಡುವೊಡೆ
ತೆರಳು ಗದ್ದುಗೆಯಿಂದ ಗದ್ದುಗೆಗೆ ಕೈಮುಗಿದೊ
ಡುರಿವುದೀ ಗದ್ದುಗೆ ಯೆನಲ್ಕುರುಹು ನೋಡುವೆನುತಲತ್ತ ತೊಲಗಿದ ನೃಪ॥೧೦॥

ಗುರುತಲ್ಪಕರ್ಗೆ ವ್ರತಸಾಧಾರಣರ್ಗೆ ಸಂ
ಗರಸ್ವಾಮಿದ್ರೋಹಿ ವಿಶ್ವಾಸಪಾತಕರಿಗಿಹ
ಪೂರವಿಲ್ಲದಾ[2]ಗು[2]ಪೇಕ್ಷಿಸಬಾರದರಸ ನೀನೇಳು ಗದ್ದುಗೆಗೆ ನಾನು।
ಶರಣೆಂದು ತೋರ್ಪೆನುಂಗುರದೆಗೆದೆನಿದೆಯೆಂದು
ಶಿರದೊಳಾಂತದ ಹಡಪಿಗನ ಕೈಯೊಳಿತ್ತಗ್ನಿ
ಕರನಪ್ರತಿಕರಕರವ ಮುಗಿದೊಡಾ ಗದ್ದುಗುರಿದೆದ್ದುದದನೇಂ ಪೊಗಳ್ವೆನು ॥೧೧॥

ಭುಗಿಭುಗಿಲೆನುತ್ತ ಮಣಿಮಯಖಚಿತ ವಿಷ್ಟರವ
ಬಗೆದು ಮಧ್ಯದೊಳಗ್ನಿ ಪಟ್ಟಗಟ್ಟಿಸಿಕೊಂಬ
ಬಗೆಯಿಂದಲುನ್ನತೋನ್ನತವಾಗಿ ತೊಳಗಿ ಬೆಳಗಡರಿತೋಲಗಶಾಲೆಗೆ।
ತೆಗೆದೋಡಿತೆಲ್ಲ ಸಭೆ ರಾಯನಲ್ಲಲ್ಲಿ ಮಱೆ
ಪೊಗುತ ಹೋ ಹೋ ನಂದಿಸೆನಲು ಘನವಾಗು[3]ತುರಿ[3]
ನೆಗೆಯೆ ಮುನ್ನಾಡಿದುತ್ತರಕೆ ತಲೆವಾಗಿ ದೆಸೆಗೆಟ್ಟು ಬಸವನ ನೋಡುತ ॥ ೧೨ ॥

ಆದಿವಂಶಾವಳಿಯೊಳಾದ ಗದ್ದುಗೆ ಬೂದಿ
ಯಾದುದಪಕೀರ್ತಿಯಪ್ಪಿತು ಕೊರಳನಪಜಯದ
ಭೇದ ಮುಂದಱಿಯಿತ್ತು [4]ಬೆದಕಿ[4] ಮೃತ್ಯುವ ಕರೆದವೋಲಾಯ್ತು ನಿರ್ದೈವರ।

---

*ಈ ಪದ್ಯ 'ಜ' ದಲ್ಲಿಲ್ಲ. [1] ರುಣ (ಗ). [2] ದು (ಕ.ಖ). [3] ತಿರೆ (ಕ.ಖ.ಗ.ಘ.ಛ).
[4] ಬೆದರಿ (ಖ.ಘ.ಗ), ಬೆಚ್ಚೇಱು (ಜ).

ಬೋಧೆ ಬಾಧೆಯು ಬ್ರಹ್ಮಗಂಡಿತೆಂದರಸನತಿ
ಖೇದಗೊಳುತಲೆಲೆ ಭಂಡಾರಿ ಹೀಗಹುದೆನುತ
[1]ಲಾದರಿಸ[1]ದಾವವಜ್ಞೆಯ ಮಾಡಿದೆವು ಶರಣು ಬೆಂದುದಿದ ಪರಿಹರಿಸೆನೆ ‖೧೩‖

[2]ಕಳೆ[2]ಸೂರ್ಯವಂಶೇಶ ನಿನಗೆ ಮನ ಬಾರದುದ
ಕಳದು ಶರಣೆನ್ನೆಂದಡೆಂ ದೈವ್ಯ ಮಾತಿನಿಂ
ತಿಳಿವಡಾವಲ್ಲವೇ ವೀರನಾರಾಯಣನ ನಮ್ಮ ಶಂಕರದಾಸನು।
ಮುಳಿದುರುಪಿದುದು ಸಿದ್ಧ ಭಿಕ್ಷಕ್ಕೆ ಬರಲು ಕು
ಕ್ಕುಳಕುದಿವ ಕೂಳಿಕ್ಕಲಾದ ಪರಿ ಭವಸುರಗಿ
ಯಲಿ ಬಳಲಿದುದನರಿದೊಡೇನಾಯ್ತು ಭಕ್ತಿ[3]ವೆರೆದಾ[3]ಲೀಲೆಯುಳ್ಳವರ್ಗೆನೆ ‖೧೪‖

ಶ್ರೀಮಹಾಭಾರತಂ ಮಡಿದ ಬಳಿಕಂದಶ್ವ
ತ್ಥಾಮ ಕಚ್ಚೆಯ ಕಟ್ಟಲೇನಹುದು ರಾಜಗೃಹ
ಧೂಮಕೇತುವಿಗೆ ಭಾಜನವಾದ ಬಳಿಕ ಬುದ್ಧಿಯ ಬದ್ಧವರಿಸಬೇಡ।
ಕ್ಷೇಮಮಂ ಮಾಳ್ಪುಪಾಯಂಗಂಡು ರಕ್ಷಿಸೆನ
ಲಾ ಮುದ್ರಿಕೆಯನಿಟ್ಟಭಯಕರದೊಳಗ್ನಿಗೆ ನಿ
ಯಾಮಿಸಲು ನಂದಿನ[4]ಂದಿಸಿತೆಂಬ[4]ನಂದದಿಂ ಶರಣೆನುತ ಭೂನಾಥನು ‖೧೫‖

ಎಸೆವುದಂ ಬಿಟ್ಟು ಹಣಿಗಿದನೆಂಬ ಗಾದೆಮ್ಮ
ದೆಸೆಗಾಯ್ತು ದುರ್ಜನರೆನಿಪ್ಪೋಡು ವಿಡಿಯೆ ಕೈ
[5]ಮ[5]ಸಿಯಾಗದಿಹುದೆಯೆಂದಳಲುತ್ತ ಮನದೊಳಿಂದಿಂದಿತ್ತ ನೀವು ನಮಗೆ।
ಬಸವರಸ ಕೈಮುಗಿಯಬೇಡಾವು ನಿಮಗೆಯಾ
ವೃಷಭಂಗೆ ಕೈಮುಗಿವೆವೆನುತೆ ಕಳುಪಲು ಶರಣ
ವಿಸರದೊಗ್ಗಿನೊಳು ಭಕ್ತಿಯ ರತಿಯು ಮಂಗಳದ ಮದನಮಂಟಪಕೈದಲು ‖೧೬‖

ಚಾರರುಘ್ಘಡಣೆಯಲಿ ಬಸವೇಶ ಬರುತಿರಲು
ಕೇರಿಕೇರಿಯೊಳು ಗುಡಿ ತೋರಣಗಳೆಸೆವುತಿರೆ
ನಾರಿಯರು ತಮತಮಗೆ ಆರ್ಥತಿಗಳನು ಯೆತ್ತಿ ಜಯಜಯ ಯೆನುತ್ತಲಿರಲು।
ಪೌರಜನವೆಲ್ಲ ಕೈಯೆತ್ತಿ ಪೊಡಮಡುತಲೀ
ಕಾರುಣ್ಯನಿಧಿ ಬಸವ ಯೆಂದು ಕೊಂಡಾಡುತ್ತ
ವೀರಪ್ರಮಥರು ಪರಸೆ ಶರಣಜನಸಹಿತ ತನ್ನರಮನೆಗೆ ಬಂದ ಬಸವ ‖ ೧೭ ‖

---

[1] ಲಾನರಿಯ (ಖ). [2] ಕೇಳಾ (ಕ.ಖ). [3] ವೈರದ (ಜ.ಪ). [4] ನಂದಿಸ ದಿಂದ (ಜ). [5] ನು (ಗ).

ನಂದಿಯುಪ್ಪರದ ಗುಡಿ ನಂದಿಯ ಜಯಸ್ತಂಭ
ನಂದಿಯ ಪೆಸರ್ನಂದಿಯಾಣೆ ನಂದಿಯ ಬಿರುದು
ನಂದಿಯರ್ಚನೆ ನಂದಿಯಾರಾಧನೆಗಳು ನಂದಿಯ ಮುದ್ರೆಯಾ ಪುರದೊಳು।
ನಂದಿಮಯ ನಂದಿಯ ಪವಾಡಪ್ರಸಂಗಮಯ
ನಂದಿಯೇ ಬಸವ ಬಸವನೆ ನಂದಿ ಯೆಂದಾದ
ನಂದೀಶ ಪ್ರಮಥರ್ಗೆರೆದ ನಂದಿನಾಥ ಮಾಡಲಿ ಮನೋರಥಸಿದ್ಧಿಯ ॥೧೮॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ನಂದಿಯುಂಗುರವ ಬಸವೇಶಮೆಱೆದ ಸಂಧಿ ॥೧೯॥

ಹದಿನೈದನೆಯ ಸಂಧಿ

ಸೂಚನೆ—

ದಧಿಪೂರಕುಂಭಮಂ ತರುತೊಬ್ಬ ತುಱುಗಾರ್ತಿ
ಪದವೆಡಹಿ ಬೀಳ್ವಾಗ ಬಸವನಾಮಸ್ಮರಣೆ
ಯೊದಗಿತಾ ವೇಳೆಯೊಳದಕ್ಕೆ ಯಾ ಕುಂಭವಂತರಗಗನಗಾಮಿಯಾಯ್ತು।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಬಲಸಹಿತಬಿಜ್ಜಳನರೇಂದ್ರ ಬಸವಾಂಕರ್ಗೆ
ಲೊಲಿದು ವೈಯಾಳಿಯೋಪವಸರದೊಳಲ್ಲೊಬ್ಬ
ಳೆಳೆಮಾಱುತಿಹ ತುಱುಬಿ ಯೆಡಹಿ ಬೀಳುತ ಬಸವ ಯೆನೆ ಕೇಳಿ ಕೈಯನಾಂತು।
ನಿಲಿಸಿದನು ಗಗನದಲ್ಲೆಂದೀ ಪವಾಡಮಂ
ಕೆಲರು ಪೇಳುವರದನುಚಿತ ನಂದಿಕೇಶ ಗಣ
ಕುಲಕೆ ಪೇಳ್ದ ಶಾಸ್ತ್ರಮಾರ್ಗವರ್ಣನೆಯ ಸದ್ಭಕ್ತರೊಲಿದಾಲಿಸುವುದು ॥೨॥

ಬಹಳ ಪ್ರತಾಪಪಾರಾವಾರವೀಚಿಪ್ರೋ
ಲ್ಲಹರಿಲಾಲಿತಗಣಾಧೀಶರ್ಕಳವಧರಿಸಿ
ಮಹಿರಾಜ ಬಿಜ್ಜಳನರೇಂದ್ರನೊಡ್ಡೋಲಗಂಗೊಟ್ಟನೊಂದಾನೊಂದಿನ।
ಅಹಿಭೂಷನಪರಾವತಾರ ಬ್ರಹ್ಮದ ಭಾಗ್ಯ
ಮಹಿಮಾವಲಂಬ ಜಂಗಮಲಿಂಗಪ್ರಾಣಸ
ನ್ನಿಹಿತ ಬಸವಾಂಕನೊಪ್ಪಿದನಲ್ಲಮಲಮಣಿಮಯದ ಭದ್ರವಿಷ್ಟರದೊಳು ॥೩॥

ಅಖಿಳಪ್ರಧಾನರೊಗ್ಗಿನೊಳು ಮಕುಟದ ಮಂಡ
ಲೀಕತಿಂತಿಣಿಯೊಳು ವಿರಾಜಿಸುವ ಸಾವಂತ
ಪ್ರಕರದಿಡುಕಿಱಿನೊಳೆಡೆವಿಡದೆ [1]ರಾಜಿತ[1] ರಾಯರಾವುತರ ಪರಿಪಂಕ್ತಿಯ।

---

[1] ರಾಜ (ಫ), ರಾಜರ (ಜ).

ಸುಕುಮಾರಪ್ರಮುಖರೊತ್ತೊತ್ತೆಯೊಯ್ಯಾರಕರ
ಣಿಕ ನಿಯೋಗಿಗಳ ಹಡಪದ [1]ಚಮರಛತ್ರಸ್ಯೈ[1]
ನಿಕದ ಸೇನಾಧ್ಯಕ್ಷನಾಯಕರ ಪಡೆವಳರ ಪರುಠವ ಮಹೋನ್ನತಿಯೊಳು ॥೪॥

ಪುಂಡರೀಕಾಕ್ಷನಂತಚಲಲಕ್ಷ್ಮೀಪಾಲ
ಚಂಡಕರನೊಲು ಜಗಚ್ಚಕ್ಷಮೃತರೋಚಿಯೊಲು
ಮಂಡಲೇಶ್ವರಕೌಶಿಕನೊಲಾ ವಿಶ್ವಾಮಿತ್ರದಿಗಧೀಶರೊಲು ಬುಧಜನ।
ತಂಡದಾಶಾಪಾಲನುಗ್ರನೊಲು ರಿಪುಮೂಲ
ಖಂಡಪರಶುವಿನಂತೆ ಶಿಷ್ಟರಕ್ಷಕ ದುಷ್ಟ
ದಂಡಧರನಿಂದ್ರಂ ನರೇಂದ್ರನಾತನ ಬಲದ ಭಾಗ್ಯ ಭಂಡಾರಿಬಸವ ॥೫॥

ಮೆಱೆವುತೋಲಗದೊಳಖಿಳಾವನೀವ್ಯಾಪ್ತಿವಿ
ಸ್ತರಕಾಯವಿತ್ತು ಮನವಚನಕಾಯಕಭಕ್ತಿ
ಎರಕಜಂಗಮಲಿಂಗದಾಸೋಹದತ್ತನಾಗಾಯುತತ್ರಾಣನಂತೆ।
ಇರವಿತ್ತ ಬರವತ್ತ ತನುವಿತ್ತ ಮನವಿತ್ತ
ಬೆರಸಿಹುದು ಸರ್ವಸುಯಿಧಾನ ಸಾಧನದಲ್ಲಿ
ತೆಱಹಿಲ್ಲದಿಹುದು ಬಸವೇಶಗೇಂ ಪೊಗಳ್ವೆನಂತಾ ದಿನದೊಳಾದಚ್ಚ[2]ರ[2] ॥೬॥

ಕೀಲಾರದಿಂ ಕೀರ [3]ದಧಿ[3]ತಕ್ರ ಘೃತವ ಗೋ
ಪಾಲನಾರಿಯರು [4]ಬಹು[4]ಭಾಂಡಂಗಳಂ ತೀವಿ
ಮೇಳೈಸಿ ಭೂರುದ್ರನವಸರಕದೆಂದಿನಂದದೊಳು ದಾಸೋಹ ಕ್ರಿಯೆಯ।
ವೇಳೆಗೈದುವ ಭರವಸದಿ ಬರುತ ನಗರಿಯ ವಿ
ಶಾಲದಂ[5]ಗಡಿ[5]ಗಳಡಸಿದ ಮಧ್ಯದಲ್ಲೊಬ್ಬ
ಬಾಲಕಿಯೆಡಹಿ ಮೊಸರಮಡಿಕೆವಾಯ್ದುಕ್ಕುತ್ತ ಬಸವಾಯೆನಲು ಮನದ ಕೊನೆಯ ॥೭॥

ಮೇಲಿದ್ದು ಜ್ಞಾನಾವಧಾನಕೆರವಾಂತು ಪಿಡಿ
ವೋಲೋಲಗದೊಳಿರ್ದು ರಾಜೋಪಚಾರಂಗ
ಳಾಳಾಪವುಳಿದು ಹೋ ಹೋ ಯೆನುತ್ತೆರಡು ಬಱಿಗೈಯಾಂತು ನೆಗಹಲಿತ್ತ।
ಬೀಳುತಿಹ ಕೊಡನಂತರದೊಳು ನಿಲೆ ಜನವೆಲ್ಲ
ಬೇಳುವೆಯೊಳಾಳಿ ಮಹದೇವ ಚೋದ್ಯಮಿದೆನಿ
ಪ್ಪಾಳಾಪ ಪುರದೊಳಾಂದೊಳಿಸೆದ್ದು ಭೂವರನ ಮುಟ್ಟಿತುಭಯಾರ್ಥವಳಕೆ ॥೮॥

---

1 ಚಶೌರಸೇವ್ಯಸೇ (ಕ.ಗ.ಘ.ಥ), ಚಾರರಸೇವ್ಯಸೇ (ಖ). 2 ರಿ (ಖ). 3 ತಕ್ರ ಗೆ). 4 ತರುತಬಹು (ಖ). 5 ಡಿಗೆ (ಖ.ಘ.ಗ).

ಅತ್ತಲಾ ಕೊಡಬೀಳುವವಸರಕೆ ಬಸವರಸ
ರಿತ್ತಲೋ ಹೋ ಯೆನುತ್ತೆರಡು ಕೈಯನು ಮೇಲ
ಕೆತ್ತಿದರಿದೇನೊ ಯೆಂಬುಭಯಾರ್ಥವಳಕೆಗಳ ರಚನೆ ರಾಜಿಸುತಿರಲ್ಕೆ।
ಪೃಥ್ವೀಶನದಱೊಳುವನಱಿವಾರ್ಥದಿಂದೆ ತುಱು
ಬಿತ್ತಿಯನು ಕರೆಯೆನಲು ಕರೆಯಲಾ ಮೊಸಗೋಡನ
ಹೊತ್ತು ಬಂದೋಲಗದ ಮುಂದೆ ನಿಲೆ ಬಾಲೆಯೆ ಯಥಾರ್ಥವೆಂತುಸಿರೆಂದೆನೆ ॥೯॥

ಕುಹಕವಂ ಕುಕ್ಕರಿಸಿ ಮತ್ಸರವ ಮದಗೆಡಿಸಿ
ಸಹಜವಂ ಸತ್ಕರಿಸಿ ಸಾತ್ವೀಕವಂಕುರಿಸಿ
ಮಹಿಮೆಗಳು ಮಂತ್ರದೇವತೆಯೆಮ್ಮ ಭಕ್ತೆ ಭಾಗ್ಯದ ಲಕ್ಷ್ಮಿಥಾರ್ಥೋಚಿತ।
ವಿಹಿತವಾಗ್ವನಿತೆ ವಚನಿಸಿದಳಾವ್ಕಿಲಾರ
ಮಹಿಳೆಯರು ಭೂರುದ್ರನವಸರಕಮೃತಪಡಿಯ
ತಹ ತವಕದಿಂ ಬರುತಲೆಡಹಿ ಬಸವಾ ಯೆಂದಡಂತರಿಸಿತೆನಲದಕ್ಕೆ ॥೧೦॥

ಧನಗಿತ್ತಿಯಾಧಕ್ಕಡಿ[1]ಗ[1]ತನವ ನೋಡು ನೋ
ಡನುಮಾನದನುಲೇಸು ಲೇಸೆಂದು ತಲೆದೂಗಿ ಕೌಟಿಲ್ಯ
ವನು ಮಾಡಿ ಕಣ್ಗಟ್ಟುವಳು ಬಾಯಕಟ್ಟದಿರಲೆಂಬ ರಾಜೋತ್ತರವನು।
ಮನುಕುಮಂತ್ರಿಗಳು ಹುರಿಗೂಡಿ ಕೆಲವುಪಮೆಗಳ
ನನುಕರಿಸುತೀ ಕುಂಭಯಿವಳು ಈ ಬಸವಯೆಂ
ಬೆನಿತು ದೂರದೆ ದೃಷ್ಟದೋಱೆಂಬ ಕಳಕಳದ ರಭಸಕಾ ಮುಗುದೆ ನಡುಗಿ ॥೧೧॥

ಭೃತ್ಯಾಪರಾಧ ಸ್ವಾಮಿಗೆ ದಂಡವೆಂಬ ನುಡಿ
ಯರ್ಥದಾಪತಿಗೆ ಯಿಾ ಪತಿಯ ಮುಖ ನೋಡೆ ಕಣು
ಗೆತ್ತಭಯಸೂಚನೆಯದೋಱೆ ಹಿಂದಕ್ಕೆ ಹತ್ತೆಂಟು ಮಾರಂತರವನು।
ಒತ್ತಿ ಹೋಗುರವಣಿಸಿ ಬರುತೆಡಹಿದಂತೆ ಕೊಡ
ಹೊತ್ತದಂ ಹಾಯ್ಕಿ ಬಸವಾಯೆಂದು ಘೋಷಿಸ
ಲ್ಕಿತ್ತ ಬಸವಾಂಕ ಕೈಯಾಂತೊಲಾನಲು ಕುಂಭ ಗಗನದೊಳು ಥಾಡಿಸಿತ್ತು ॥ ೧೨ ॥

ಹಸ್ತ ಮನ ಪರುಷವೆಂದಱಿಯದಾಕಸ್ಮಿಕವಿ
ದೆತ್ತಣದೊ ಗಗನಗಾಮಿಕವಿದ್ಯೆ ಬಿನ್ನಣದ
ಭಿತ್ತಿಯೋ ನಯನಬಂಧವೋ ಯಕ್ಷಿಣಾರಾಧನೆಯೊ ಭೂತಚಾಂಡಾಲಿಯ।

[1] ಯ (ಕ.ಗ)

[1]ರತ್ತ[1]ಣಿಂದಾದ ಬೆಱಗಲ್ಲ[2]ವೇ[2]ಯೆಂದು ನೋ
ಡುತ್ತ ಬಸವನ ಕರಾಂಬುಜ ವೂರ್ಧ್ವಗತಿಯೊಳಿರ
ಲಿತ್ತ ತಿರುಗುತ್ತಸ್ತ[3]ವೆಸ್ತ[3]ರ್ಗಳಂದಮೃತಹಸ್ತವ ನಿರೀಕ್ಷಿಸುತಿರೆ ॥ ೧೩ ॥

ಕೈಯಾಡಲಾಡುವುದು ಕೈಯಿ ನಿಲೆ ನಿಲುವುದಾ
ಕೈಕುಸಿಯೆ ಕುಸಿವುದಾ ಕೈಯೆತ್ತಲೇಳುವುದು
ಕೈಕರಣಛಾಯೆ ಬಸವಂಗೆ ಜಂಗಮಲಿಂಗ ದಾಸೋಹ ಕೈಯ ಮೇಲೆ।
ಅಯ್ಯಲಿದು ವಿಪರೀತವೆನುತೆಲ್ಲ ಗಲ್ಲಕ್ಕೆ
ಕಯ್ಯಾಂತು ಕಾರಣಂಗಾಣದಭಿಮುಖರಾಗಿ
ಕೈಮುಗಿದು ಜಯತೆಂದೆಥಾರ್ಥಂಗರಾಗಿರಲು ಮುಂದೆ ಕೌತುಕ ಕವಲ್ತುದು ॥ ೧೪ ॥

ಲಾವಕರ ಜೀವಮಣಿಯೆನಿಪ ಮಂಚರಸನಿ
ನ್ನಾವಿಭುಪಿಂಗೆಂದ ನಿಮ್ಮಯ ದಂಡನಾಯಕನ
ಸೇವಕಾಳಿಯೊಳಾಡಿದಂ ನಂಬದನ್ಯರಿಂದಱಿವುದೆನಲಾ ಸಮಯಕೆ।
ಜೀವನಘಟಂದಳೆದು ಬಪ್ಪ ನೃಪನರಮನೆಯ
ಗಾವಿಲತೆಯರ್ಗದಂ ಎಚ್ಚರಿಸೆ ಕುಚ್ಛಿತಂ
[4]ಮೂವ[4]ಡಿಸಲೆಡಹಿ ಕೊಡನಿಡುತ ಬಸವಾ ಯೆನಲು ಬಯಲುಗಳಸಗಳ ಧರಿಸೆ ॥ ೧೫ ॥

ಕೌತುಕಂ ಸಭೆಯ ಮುಸುಕಿರಲರಸಿಗೆಂದನವ
ನೀತಳದ ನಾರದನು ನಿಮ್ಮಮಾತ್ಯನ ನೋಟ
ವಾತಿರಲದಹುದರಿದೆ ಪರರ್ಗೆ ಪುರದೊಳಗಱಿವುದೆನಲರಸು ಚರರ ಕಳುಹೆ।
ಆತಗಳು ವೀಧಿಗಳ ಜನರೊಳಗದನ್ನಟಿಸೆ
[5]ಪೂತು[5]ದಾ ಮಹಿಮೆ ನಗರದೊಳು ಗಗನದವಲ್ಲಿ
ಕಾತವೊಲು ಮೆಱೆದೆಥಾರ್ಥವ ದೂತರುಸುರೆ ಜನಪತಿ ಬಸವನಂ ನುತಿಸಿದ ॥ ೧೬ ॥

ಸಾಕಾರನಾಗಿ ಸರ್ವರೊಳು ಗತನಾಗಿರ್ದ
ಲೋಕಬಾಹುವೆಯಣೋರಣಿಯಾನ್ಮಹತೊಮಹೀ
ಯಾಕಾರ ಕೊಂಡೆಯರ ಹಿಂಡಿಗೆದೆಗುಂಡುಗಳೊಲೆಸವ ಛಾಂಡಗಳ ತಗಹ।
ನೂಕೆನಲರಸನವರವರ ಹೊಱೆಯನವರವರ
ಸೋಂಕಲಾ ದಧಿಕುಂಭ ಉಳಿಯಲಾ ಸ್ಥಾನದೊಳು
ತೇಕಾಡೆ ಜಯರಭಸ ಜನಪ ಕೈಮುಗಿದಿರಲು ಚಿನ್ನಬಸವಾಂಕನುಸುರ್ದ ॥ ೧೭ ॥

---

[1]ಯ (ಖ). [2]ದೇ (ಖ), ಲೇ (ಗ.ಜ). [3]ವೆತ್ತ (ಖ). [4]ಮೂರ್ವ (ಖ.ಗ).
[5]ಪೊತ್ತು (ಕ.ಖ).

ಬಿದ್ದಹೂ ಬೀಳುಡಿಯ ನೊಡಗೆಡೆದ ಮಡಕೆಯೊಳ
ಗಿದ್ದ ಸಾಧನವಿಚ್ಛಯಿ[1]ಸ[1]ದನ್ನ ಪಾನಗಳ
ತದ್ದಿನ[2]ಬ[2]ಹಳಭೂರಿ ಅನ್ಯಥಾ ದೈವಸಂಕಲ್ಪಸಾನಿಂದಿತಗಳು।
ಹೊದ್ದಿಹವಭವನಿರೀಕ್ಷಣ ಭೋಜ್ಯ ದ್ರವ್ಯಗ[3]ಳ[3]
ಬದ್ಧವ[4]ವ[4] ಲಿಂಗಜಂಗಮಕೆ ನೈವೇದಿ[5]ಸಿದ[5]
ಬಿದ್ದನರಕದೊಳೆಂಬ ತಾತ್ಪರ್ಯಕಾ ಭಾಂಡ ಬೀಳದೊಲು ಕೈಯಾಂತುದೊ ॥ ೧೮ ॥

ರಹಸ್ಯಾಗಮುಪನಿಷದ್ವಾಕ್ಯಾರ್ಥದಿಂದಲಾ
ಮಹಿಪಾಲನೊಳಗಾದವರ್ಗೆ ಜಂಗಮಲಿಂಗ
ಮಹಿಮೆದಾಸೋಹದನ್ವರ್ಥವಱಿಪಿಸಿ ಕಥನಕಾರಣವ ತಿಳುಪಲವರು।
ಅಹುದಿದಾರ್ಗಳವಡುವುದಿಂತು ದೃಷ್ಟವ ತೋಱು
ತಿಹ ಸಮರ್ಥಿಕೆಯೆಂದು ಮನದೊಳಾಳಾಪಗೊಳು
ತಹಹಯೆಂದರಸನೋಲಗದಿಂದಲೆದ್ದು ಬಸವರಸರಂ ಕಳುಪಲೊಡನೆ ॥ ೧೯ ॥

ಲಿಂಗಾರ್ಥ ಜಂಗಮಾರ್ಥಕ್ಕೆ ಮೀಸಲ್ವಿಡಿದ
ಅಂಗಮನಧನಕೆ ಕೇಡಿಲ್ಲೆಂಬ ದೃಷ್ಟಾಂತ
ರಂಗಳಂ ತೋಱುವಂತಾ ಪೂರ್ಣದಧಿಕುಂಭಗಳಸ ಮುಂದೆಸೆದೊಪ್ಪುತ।
ಸಂಗ ಶರಣೆನುತ ಸದ್ವಾಕ್ಯದಿಂದುತ್ಸಹದ
ಮಂಗಳದ ಗುಡಿತೋರಣದ ವಾದ್ಯವರ್ಣನೆಯೊ
ಳಂಗಜವಿರೋಧಿಯಪರಾವತಾರನು ನಿಜಾಲಯವ್ಪೊಕ್ಕನೇಂವೊಗಳ್ವೆನು ॥ ೨೦ ॥

ಲಾಲಿಪುದು ಪ್ರಮಥರಿದು ನಿಮ್ಮ ಬಸವೇಶ್ವರನ
ಲೀಲೆ ಜಗದಾನಂದ ಭಕ್ತರ್ಗಳುತ್ಸಹದ
ಕೀಲಣಿಗೆ ದಾಸೋಹದಾದಿಮೂಲಸ್ತಂಭ ದಧಿಕುಂಭ ವರ್ಣನಮನು।
ಪೇಳುವಡನನ್ಯನಾಹತಚಿತ್ತ ಸ್ವಾತಂತ್ರ
ಶೀಲಾಧಿಪಮೂರ್ಣವತಾಱು ಸಾಹಸ್ರಸ
ಮ್ಮೇಳದಲಿ ನಿತ್ಯಲಿಂಗಾರ್ಚನಂಗೈವನೆಂದೊರೆದ ನಂದೀಶನಂದು ॥ ೨೧ ॥

ಬಸವನಾಮಸ್ಮರಣೆಗೆಯ್ವಂಗೆ ವಾಕ್ಪರುಷ
ಬಸವನ ನಿರೀಕ್ಷಿಪನ ನಯನ ಪರುಷಂ ಬಸವ
ಬಸವ ಯೆಂಬಾಳಾಪದವಧಾನ ಹಿಂಗದನ ಮನಪರುಷ ಭವಭಯಾರಿ।

---

[1] ಸಿ (ಜ). [2] ಮ (ಕ.ಖ.ಗ.ಘ.ಛ). [3] ಳು (ಕ.ಖ). [4] ವು (ಖ.ಖ). [5] ಸದೆ (ಕ.ಖ).

ಬಸವನ ಪದಾಂಬುಜವನರ್ಚಿಪನ ಕರಪರುಷ
ಬಸವ ಗತಿ ಯೆಂದು ನಡೆವನ ಪಾದವೇ ಪರುಷ
ಬಸವಾಕ್ಷರತ್ರಯಂ ದುರಿತೋಪಶಾಂತಿಯೆಂದಱಿದು ಬಸವನ ಭಜಿಪುದು ‖ ೨೨ ‖

ರಾಜಶೇಖರ ವಿಶ್ವನಾಥ ಪದಪಂಕೇಜ
ರಾಜಿತಾನಂದ ಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾ ಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು [1]ಭಕ್ತಿವಾದದ ಪವಾಡಗಳ ಮೆಱೆದ ಸಂಧಿ[1] ‖೨೩‖

---

[1] ದಧಿಕುಂಭಮಂ ಪಿಡಿದಸಂಧಿ (ಘ).

ಹದಿನಾರನೆಯ ಸಂಧಿ

ಸೂಚನೆ—

ಜಂಗಮಾರ್ಚನೆಯ ಕೆಡಿಸುವೆನೆಂದು ಭೂಪಲೆ
ಖ್ಖಂಗೊಳ್ಳಿ ದಿವದೊಳೆನುತಂ ನಿಲಿಸೆ ಪಡುವಲೆಂ
ಟುಂಘಳಿಗೆಯಂತರದಿ ತಡೆದ ರವಿರಥವ ಹನ್ನೊಂದುದಿನ ಬಸವಾಂಕನು ।

ಶ್ರೀಮದಖಿಳಾಗವಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನವ್ಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥ ೧ ॥

ಚಿತ್ತೈಸಿ ಪ್ರಮಥರೊಂದಿನ ಬಿಜ್ಜಳಕ್ಷೋಣಿ
ಪೋತ್ತಮನು[1] ಬೈಗಿ[1]ನೋಲಗ ಹರೆಯೆ ಬಳಿಕಂ ಸ
ಮಸ್ತವಿನಿಯೋಗಕ್ಕೆ ಬೀಳ್ಕೊಟ್ಟು ಹತ್ತೈದು ಮಂತ್ರಿಗಳು ಸಹಿತಮಿರ್ದು ।
ಎತ್ತಾನು ಸುದ್ದಿಗಳನಾಡುತ್ತ ಭಂಡಾರ
ದತ್ತಣ ಪ್ರಸಂಗಮಂ ತೆಗೆದು ಮಂಚಣ್ಣಂಗ
ಳತ್ತ ನೋಡಲ್ಕೆ ನಲಿದೆದ್ದು ಕೈಮುಗಿದು ಭೂಮಿಪನೊಳವನಿಂತೆಂದನು ॥ ೨ ॥

ಸೃಷ್ಟೀಶ ಕೇಳ್ದೊರ್ವರಾಜರ ಧನಂ ಕ್ಷೇತ್ರ
ಪಟ್ಟಣಕೆ ಸಕಲಪರಿವಾರ ವಿದ್ವಜ್ಜನಕೆ
ಭಟ್ಟರ್ಗೆ ವಿಪ್ರರ್ಗೆ ಸರ್ವಪುರುಷಾರ್ಥಕ್ಕೆ ಸಲುವುದಲ್ಲದೆ ದೇಶದ ।
ಕಷ್ಟಜಾತಿಯ ಹಲವ ನೆರಹಿ ಜಂಗಮವೆಂದು
ಕುಟ್ಟಿಕುದಿಸಿಕ್ಕಿ ರಾಜಾರ್ಥಮಂ ನೀಗಿ ಕುಲ
ಗೆಟ್ಟು ನಡೆವಧಿಕವಿಶ್ವಾಸಿ ಬಸವರಸರಿರೆ ಭಂಡಾರವೇಕೆ ನಿಮಗೆ ॥ ೩ ॥

ಎನಲದೆಮ್ಮೊಡವೆಯೇ ಎನೆ ಹುಸಿಯೆ ದೇವ ಪ್ರತಿ
ದಿನಕೆ ಮೂವತ್ತಾಱುಸಾವಿರ ಚರಕ್ಕಿಕ್ಕು
ತನವರತ ಬೇಡಿತ್ತನೀವ ವ್ರತವೆಲ್ಲವಕ್ಕನುಗೈವ ಧನವು ನಿಮ್ಮ ।

---

[1] ಬೆಳಗಿ (ಖ), ಬೇ (ಕ.ಗ.ಘ.ಛ).

ಮನೆಯುದೆಂದಿಕ್ಕುವೆನು ಮುಂಡಿಗೆಯುನೆನಲು ನಿಜ
ವೆನುತ ಭೂವರನೆಂದನಾದಡಾತನ ಲೆಕ್ಕ
ದನುವ ನಾಳಿನ ದಿನಂ ನೋಳ್ಪೆವೆನುತಂ ಮಂತ್ರಶಾಲೆಯಿಂದೆದ್ದನರಸ ॥ ೪ ॥

ಇರುಳಿನಾಲೋಚನೆಯೆನಿಪ್ಪ[1]ತಮ[1]ವಿಪಿನವಂ
ಉರುಪುವ ದವಾನಳನೊ ಯೆಂಬಂತೆ ರವಿಪೂರ್ವ
ಗಿರಿಯ ಶಿಖರಕೆ ರಥವ ನೂಕಿದನು ಬಸವೇಶನೆಸಕ ಮೊಳೆಯೆತ್ತುವಂತೆ ।
ಇರೆ ಸರ್ವಮಂಗಳಾಳಾಪವೆಲ್ಲೆಡೆಯಲ್ಲಿ
ವಿರಚಿಸಿತು ಬಳಿಕ ಭೂವರನೋಲಗಂಗೊಟ್ಟು
ಪರಿಜನಂ ಪುರಜನಂ ಮಂತ್ರಿಸಾವಂತವಿನಿಯೋಗಿಗಳ್ಸಹಿತೊಪ್ಪುವ ॥ ೫ ॥

ಆ ಸಭಾಂತರದೊಳರಿಸಮಯತಿಮಿರಾರ್ಕ ಶಿವ
ದೂಷಕಶರಧಿವಡಬ ತರ್ಕಕರ್ಕಶ ಭಕ್ತಿ
ಭಾಷಾತಿಶಯದುಷ್ಟರೆದೆಗಿಚ್ಚು ಕೊಂಡೆಯರ ಗಂಡ ದಂಡಾಧೀಶನು ।
ಆಸೆಯಾಮಿಷತಾಮಸಾದಿಗಳನೆಲ್ಲವ ವಿ
ನಾಶವಂ ಮಾಡಿದ ಮಹಾ ಮಹೇಶ್ವರನು ಬಂ
ದೋಸರಿಸದೋಲಗವ ಹೊಕ್ಕು ಕುಳ್ಳಿರ್ದ ಭೂಪನ ಬಲದ ಗದ್ದುಗೆಯೊಳು ॥ ೬ ॥

ಬಳಸಿ [2]ಕುಳ್ಳಿದ[2] ರಾಜಮಂತ್ರಿಗಳ ನಡುವೊಪ್ಪು
ವಿಳೆಯೊಡೆಯನಖಿಳರಾಜ್ಯಸ್ಥಿತಿಯ ಪರರಾಷ್ಟ್ರ
ದೊಳಗಣವರವರಿಂದೆ ತಿಳಿವಂತೆ ಕೇಳುತಿರಲೊಂದೆರಡು ಜಾವ ನಡೆಯೆ ।
ಬಳಿಕ ತನ್ನರಮನೆಯ ವಿನಿಯೋಗವಱಿವಂತೆ
ಬಳಕೆಯ ಕೆಲವು ಮಾತನಾಡುತ್ತ ಭಂಡಾರ
ಹಲಕಾಲ ತಿಳಿದುದಿಲ್ಲೆನುತ ಬಸವೇಶ್ವರನ ಮೊಗನೋಡುತಿಂತೆಂದನು ॥ ೭ ॥

ಮೇರುವಂ ಮಾರಿಕ್ಕುವನ ತೆಱದಿ ಜಲಧಿಗಳ
ನೀರನಳೆವನ ತೆಱದಿ ಗಗನಮಂ ಗಳೆಯಿಂದ
ಬಾರಿಪನ ತೆಱದಿ ರವಿಮಂಡಲವನಂಟಲೆಂದಾರೈದು ನಿಚ್ಚಣಿಕೆಯ ।
ಸೇರಿಪನ ತೆಱದಿ ನಕ್ಷತ್ರಮನ್ನೆಣಿಪೆನೆಂ
ಬೂರುಗನ ತೆಱದಿ ಬಸವೇಶನೇ ಶಿವನೆಂಬ
ಕಾರಣವನಱಿಯದನುಚಿತದಲ್ಲಿ ಲೆಕ್ಕವ ವಿಚಾರಿಸಿದ ಭೂನಾಥನು ॥ ೮ ॥

---

[1] ಮರ (ಖ), ತಮನ (ಕ). [2] ಕೊಳ್ಳಿದ (ಗ).

ಚಿನ್ನವೆನಿತಾಭರಣವೆನಿತು ವಾರಕವೆನಿತು
ಹೊನ್ನೆನಿತು ಹೊಱಗೆ ಬಹುದೆನಿತು ವೆಚ್ಚವುವೇನು
ಮುನ್ನಿದ್ದುದೇನೀಗಲೊದವಿತೇನರಿರಾಯರಿಂ ಬಂದ ಕಪ್ಪದಿಂದ ।
ಉನ್ನತವೆನಿಪ್ಪನರ್ಘ್ಯಂಗಳೇನೇನು ಮ
ತ್ತಿನ್ನುಳಿದ ವಸ್ತ್ರಭಂಡಾರವೊದಲಾಗೆಲ್ಲ
ವಂ ನಮಗೆ ತಿಳುಪಬೇಕಱಿದುದುಂಟೇ ಯೆನಲ್ಬಸವರಸನಿಂತೆಂದನು ॥ ೯ ॥

ಅಱಿಯದಿಲ್ಲರಸದೆಲ್ಲವ ಬಲ್ಲೆ ಮತ್ತೆಮಗೆ
ಹೊಱಗೆ ಕೆಲಸಮದೇನು ರಾಜಸೇಸೆಯ ಮಾ[1]ಡು
ತಱಿಯೆವೆ[1]ನಲಾರುಮೆಚ್ಚುವರು ಯೆನೆ ನೀತಿಯಹು[2]ದಿರ[2]ವಹುದು ಮನಸು ಬೇಱೆ।
ಕುಱುಹುಗೊಂಡಾಡಲೇಕಾವ್ನಿಮ್ಮ ಪರಿಯಹಿರಿ
[3]ದ[3]ಱಿಯದಿರೆವಿಲ್ಲಂದಲೆದ್ದ ಬಳಿಕಂ ಕಾರ್ಯ
ಹಱಿವಿಲ್ಲವಿದ್ದಿಂದಿನೊಳು ಪೇಳೆನುತ್ತಲಾಕ್ಷೇಪಿಸುತ ಭೂನಾಥನು ॥ ೧೦ ॥

ಅಱುವತ್ತು ಕರಣದವರಂ ಕರೆಸಿ ಲೆಕ್ಕಕ್ಕೆ
ಹಱುವ ಕೊಳ್ಳಿಂದಸ್ತಮಾನದಿಂದೊಳಗುಳಿದ
ಡುಱುವರೆಲ್ಲರ ಕಣ್ಣ ಕಳಚುವೆನೆನುತ್ತೆದ್ದ ಭೂಪತಿಯ ಕೋಪಶಿಖಿಗೆ ।
ಗುಱಿಯಾದೆವಕಟೊಂದು ಜಾವದೊಳು ಲೆಕ್ಕಕ್ಕೆ
ಹಱುವ ಮಾಡಿದರೊಳರೆ ಯೆಂಬ ಭೀತಿಗ್ರಹದ
ಬೆಱಗುವಡೆದಾಕಂಪಗೊಳಲಭಯವಿತ್ತಂಜಬೇಡೆನುತ ಬಸವೇಶನು ॥ ೧೧ ॥

ರವಿಮಂಡಲವನೀಕ್ಷಿಸಿನ್ನು ಮುಂದಕೆ ರಥವ
ನವುಕಬೇಡೊಂದು ಹೆಜ್ಜೆಯನೆನಲ್ಕಿಂದಲ್ಲಿ
ದಿವನಾಥ ನೋಡಿ ಜಾತಿಸ್ಮರತ್ವದೊಳಱಿದನೀತ ಘಂಟಾಕರ್ಣನು।
ಶಿವನೋಲಗಕೆ ಬರಲ್ಕಗಲು ತ್ರೇತೆಯೊಳೆನಗೆ
ಭವವೇಳರೊಳು ಕುಷ್ಠನಾಗೆಂದು ಶಾಪವಿ
ತ್ತವರು ತಾವಿವರೆನುತ್ತಂಜಿ ತಱುಬಿದ[4]ನು ನವಜಾವದಲಿ ರವಿ[4] ರಥವನು॥ ೧೨ ॥

ಬ್ರಹ್ಮಾಂಡ ಬಿರಿದು ಮುಂದಣ ದಾರಿಗೆಟ್ಟುದೋ
ವರ್ಮವಱಿದಬ್ಜನಿಯು ತಪವಿರ್ದು ತಱುಬಿದಳೊ
ಇಮ್ಮಡಿಸಿತೋ ಕ್ಷಣಕೆ ಕೋಟಿದೈತ್ಯರ ಕೆಡಪಿ [5]ನಡೆವ ಹಗೆ ಕಡೆ[5]ವಗಲೊಳು ।

---

[1] ದಲಱಿಯೆವೆಯೆ (ಖ). [2] ದಿದಱಿಇರ (ಖ.) [3] ಹಿರಿಯ (ಖ.). [4] ನುಪದ್ರ
ವಣದ ಜಾವದೊಳು (ಕ.ಖ.ಗ.ಧ). [5] ನಡವಹಗೆಕಡು (ಖ), ನಡೆವಹಗೆತಡ (ಘ).

ಒಮ್ಮುಖಕೆ ಸಾರ್ದಡಿಯುನಿಡಗೊಡದೆ ನೆಲಸಿದವೊ
ಲಮ್ಮಮ್ಮ ಜಗದ ಕಣ್ಮುಚ್ಚಲಹುದೇ ಯೆನ
ಲ್ಕರ್ಮಸಾಕ್ಷಿಯು ತೊಳಲಿ ಬಳಲ್ವ ಕಲ್ಪನೆ ನಿಂದುದೆಂಬಂತೆ ರಥ ನಿಂದುದು
॥ ೧೩ ॥

ಪರಮಹಂಸರು ಸತ್ಯಲೋಕಕೆಡೆಯಾಡಲೆಂ
ದರವಿಂದನಂದನನು ಲೋಕಗಳ ಸೃಜಿಸುತ್ತ
ಕೊರೆದ ಬಾದಣದಿಂದ ಪರಬೊಮ್ಮದಂಶಿಕವು ಕಾಣಲಾಯ್ತೋ ಮೋಕ್ಷದ।
ಸಿರಿವನಿತೆ ನೋಡುತಿಹ ಜ್ಞಾನದರ್ಪಣಬೆಳಗು
ಕರಿಗೊಂಡುದೋ ಬಸವರಾಜ ನಿಟ್ಟಿಸೆ ದೃಷ್ಟಿ
ಪರುಷದಿಂ ತನ್ನ ಪೂರ್ವದ ಶಾಪವಳಿಯದಿರದೆಂದು ರವಿ ನೆಲೆಗೊಂಡನು॥ ೧೪ ॥

ತಪನು ಗಗನದೊಳು ಜಪಮಾಳ್ಪಂತೆ ಯಿರೆ ಲೆಕ್ಕ
ವಿಪಿನವಂ ಖಂಡಿಸಲ್ಕೆಂದು ಖಂಡೇಂದುಧರ
ನಪರಮೂರುತಿ ಬಸವರಾಜ ರಾಜಾಧೀಶ ರಾಜರಾಜ ಪಿತಾಮಹ।
ಕಪಟಕುಲಮೂಲಕುದ್ದಾಲ ಸಾಕ್ಷಾದ್ಭಾಗ್ಯ
ನೃಪನ ಪುಣ್ಯದ ರೂಪು ಭಂಡಾರಿಯಾಯಿತೆಂ
ಬುಪಯೋಗ[1]ಧ[1]ರಿತ ಕಣು ಮನ ಹಸ್ತಪರುಷ ನಿಧಿಪುರುಷಗೇನರಿದು ಲೆಖ್ಖ
॥ ೧೫ ॥

ಸೋಮನ ಕುಲವ ಪಾವಕನ ಶುಚಿತ್ವವನು ಸು
ತ್ರಾಮನ ಪದವ ಸುರರ[2]ಕರಹ[2]ವಂ ಸ್ವರ್ನದಿಯ
ಸಾಮರ್ಥ್ಯವಂ ಶರಧಿಯಧಿಕಗಂಭೀರತೆಯ ಲಕ್ಷ್ಮಿಯಷ್ಟೈಶ್ವರ್ಯವ।
ಹೇಮಾದ್ರಿಯುನ್ನತಿಯ ಭಾರತಿಯ ಮತಿಯ ನಿ
ಸ್ಸೀಮದಂಡಾಧಿಪನ ಘನತೆಯೊಳ್ಕೊಳಿತೆಗಾ
ಣ್ಬಾ ಮಹಿಪನಬಿತಕ್ಕೆ ತಕ್ಕ ಕರಣಾಧಿಪರ್ಕ್ಯೆಕೊಂಡು ಮಾಳ್ಪ ಲೆಕ್ಖ ॥೧೬॥

[3]ಪರದಾರಗಮನ[3]ಮಾಳ್ಪಂಗೇಕೆ ಪುಣ್ಯದ ಕಥನ
ಕಾರಣವು ವೇಶ್ಯಾಪರಂಗೇಕೆ ಸತ್ಪಥವಿ
ಚಾರ ಹಿಂಸಾಪರಂಗೇತಕಾಚರಣೆ ವಂಚಕಗೇಕೆ ಧರ್ಮಶ್ರವಣ।
ಕ್ರೂರಮದ್ಯಪಿಗೇಕೆ ಶೀಲವಱಿಯದ ಪಿಶಿತ
ಹಾರಿಗೇತಕೆ ತಪ ದ್ಯೂತಗೇತಕೆ ಸತ್ಯ
ಕಾರಣವನಱಿಯದಿಹ ಕರ್ಮಬೆಸನದ ಗಣಕ[4]ತತಿ[4]ಗೇಕೆ ಸಭ್ಯತನವು ॥೧೭॥

---

[1] ದ (ಕ.ಖ.ಗ.ಥ), ವ (ಜ). [2] ಕರ್ಣವಂ (ಕ.ಖ.ಗ.ಘ). [3] ಪಾರದ್ವಾರವ (ಗ.ಘ.ಚ.ಜ). [4] ತನ (ಕ.ಖ).

ಆದಿ ಅಂತ್ಯವ ತಿಳಿಯದಾರಭ್ಯನೆಲೆಯೆನು
ತ್ತೋದಿಕೊಳುತೊಬ್ಬನಹುದೆನಲೊಬ್ಬನಲ್ಲೆನು
ತ್ತಾದಾಯವೆಲ್ಲವಂ ಹಿಡಿದದಕೆ ವೆಚ್ಚವಂ ಕಳೆವ ಕ್ರಮದಿಚ್ಛೆಯಱಿದು।
ಓದಿಸುತ ಕ್ರಯವಿಕ್ರಯದ ಸೊಪ್ಪುಟಿಪ್ಪಣದ
ಲಾದ ಹದನಂ ತೆಗೆದು ತಾವುಮು[1]ನ್ಕ[1]ಡಿದುಡಿದ
ಬಾಧಕದ ವಸ್ತುವಂ ಮರಳಿ ಮರಳಾದಾಯಕಿಕ್ಕಿ ಬರೆವರ್ಕೆಲಬರು ॥೧೮॥

ದ್ವೇಷದಿಂದೊಳನಿಯೋಗದಿ ಮಿಥ್ಯದಿಂ ಲಂಚ
ಹಾಸ್ಯದಿಂದಪವಾದದಿಂ ಮಥನದಿಂ ಕಾರ್ಯ
ದಾಸೆಯಿಂದನ್ಯವಿಷಯದಿ ಚೇಷ್ಟಿಕತ್ವದಿಂ ಪಕ್ಷ ಪರಪಕ್ಷಂಗಳ।
ವಾಸೆಯಿಂ ಕೊಂಡೆಯರ ದೆಸೆಯಿಂದ ಮನದ ವಿ
ಶ್ವಾಸದಿಂ ಕಪಟದಿಂದಾದಾಯ ಮಾಡಿ ಭೂ
ಮೀಶನ ಮನಕ್ಕೆ ಬಹೆವೆಂಬ ಬಾಹಿರರು ಬರೆವುತ್ತಿರ್ದರೊಂದೆಸೆಯಲಿ ॥೧೯॥

ಸಾರಸತ್ವದ ಶರಧಿ ಸಕಲಲೋಕಂಗಳ ವಿ
ಚಾರದ ವಿಲಾಸ ಜ್ಞಾನದ ಬೀಜಮದು ಹುಸಿಯ
ಬೇರಿಂಗೆ ಬಿಸಿನೀರು ಧರ್ಮದಾಗರ ಮೋಕ್ಷದಾಶ್ರಯವಿದೆಂದೆನಿಸುವ।
ಕಾರಣದ ಭೂತರೂಪಾಗಿ ಕರುಣಮದೆಂದು
ಧಾರುಣಿಗೆ ಪೆಸರು ವ[2]ಹಿ[2]ವಾರಣಾಸಿ[3]ಯುಮು[3]ಂಬ
ಸಾರಗ್ರಾಹಿಗಳಿದ್ದುದಿದ್ದಂತೆ ಬರೆವ ಲೆಕ್ಕದ ಸುಲಕ್ಷಣರೆಸೆವುತ ॥೨೦॥

ಇಂತು ನಾನಾಂಗದಿಂ ತಮತಮಗೆ ಲೆಕ್ಕವನ
ನಂತಕುಶಲತೆಯಿಂದ ಮಾಡುತ್ತ ದಿನದ ಕಡೆ
ಯಂತರವ ಕಾಣದಾ ಕರಣಂಗಳುಂಡುಂಡು ಬಂದು ಕುಳ್ಳಿತು ಬರೆವುತ।
ಎಂತಹುದೊ ಕಾರ್ಯದ್ಯೈವಿಕವಿದಲ್ಲದೆ ಮಾಣ
ದೆಂತುವುಂ ಬಸವರಸರಾ ದೆಸೆಯೊಳೀ ತೊಡಕಿ
ನಂತರಂ ತಿಳಿಯಲಹುದೆನುತ ಕೇಳಲ್ಕಮ್ಮದೆಲ್ಲ ಗುಜುಗುಜುಗೊಳುತಿರೆ ॥೨೧॥

ಅಂತಾ ಸಮಯಕರಮನೆಯ ಜೋಯಿಸರು ತಮ್ಮ
ಗ್ರಂಥಗಳ ನೋಡಿ ತಿಥಿ ಮೊದಲಾಗಿ ಪಂಚಾಂಗ
ದಂತರಂ ಪೇಳುತೆಂದರು ಕಾಲಚಕ್ರ ಕವಲಾಯ್ತೋ ಯುಗಾಂತರದೊಳು।
ಭ್ರಾಂತಿ ವಿಭ್ರಾಂತಿಗೊಂಡವು ತಿಳಿಯಲಱಿದು ಕಾ
ಲಾಂತರವದಱುನೂಱಱುವತ್ತು ಘುಳಿಗೆ ಪರಿ
ಯಂತರಮದಾಯ್ತು ರವಿಸ್ತಂಭನವೆನಲ್ಭೂಮಿಪಂಗಱುಹ ಹೋಗೆಂದರು ॥೨೨॥

---

[1] ನ (ಕ.ಚ). [2] ಹಿಗೆ (ಕ.ಚ). [3] ಯಿದೆಂ (ಜ).

ಎನೆ ಹಱಿದು ಬಂದರಸನವಸರವನಱಿದೋದಿ
ಗುಣಿಸಿಪೇಳುತ್ತಿರಲು ಗಳಿಯಾರದವರ ಕರೆ
ಸೆನಿತುಘಳಿಗೆಯದಾಯಿತೆನಲು ರವಿರಥನಿಂದುದಱನೂಱಷಷ್ಟಿಯಾಯ್ತು ।
ವಿನುತ ಹನ್ನೊಂದುದಿನಸಂಖ್ಯಾತವೆಂದೆನಲ್
ಮನುಜೇಂದ್ರನತಿಚಿಂತಿಸುತ್ತಿದು ಪ್ರಳಯವು ತಾ
ನೆನುತ ನೋಡೆದ್ದು ಬಂದೋಲಗಂಗೊಟ್ಟು ಬಲ್ಲವರೆಲ್ಲರಂ ಕರೆಸಿದ ॥೨೩॥

ಮನುಗಳಂ ಮುನಿಪುರುಷರ ವ್ರತಾಧಿಪರ ಕ
ರ್ಮನದೀತರ ಕಳಾವಿದರ ವಿಪ್ರರ [1]ವಿ[1]ದ್ವ
ಜ್ಜನರ ವೈದ್ಯರ ವೇದವಿತ್ತುಗಳ ವಿಬುಧರ ವಿಚಾರಶಾಸ್ತ್ರವಿಲಾಸರ।
ಅನುಮಿತ್ತರನು ಯೋಗಿಗಳನು ದರುಶನಗೂಢ
ರೆನಿಪ ವೈರಾಗ್ಯರನು ಸಿದ್ಧರದ್ವೈತಗಾ
ರ್ಗ್ಯನರ[2] ಬೆಸಗೊಂಡನೀ ರವಿರಥವು ನಡೆಯದಿಹ ಕಾರಣವ ಭೂನಾಥನು ॥೨೪॥

ಬಲ್ಲರೆಂದೆವ್ಮ ಕೇಳಲು ಸುಮ್ಮನಿಹುದು ಮತ
ವಲ್ಲೆನುತ್ತವರೊಳಾಢ್ಯರು ನುಡಿದರಿದಱ ದೆಸೆ
ಯೆ[3]ಲ್ಲವ[3]ಂ ನಾವು ಪರಿಹರಿಸುವೆವಿದೇನರಿದು ಸೂರ್ಯನೋಪಾಸನೆಯಲಿ।
ನಿಲ್ಲೆನಲ್ನಿಲುವ ನಡೆ ಯೆನೆ ನಡೆವ ಮಂತ್ರ ಹುಸಿ
ಯಲ್ಲ ಭೂಮೀಶ ಕೇಳ್ದ್ವಿಜಸಭಾಪೂಜೆಯಿಂ
ದೆಲ್ಲವಹುದೆನಲೇನ ಮಾಡಬೇಕೆನಲರ್ಥಜೀವರುಗಳಿಂತೆಂದರು ॥೨೫॥

ಭೂಮಿದಾನಂ ಕನ್ಯದಾನ ಗೋದಾನ ಸ್ವ
ರ್ಣಮಹಾದಾನಾದಿಗಳನು ಕೊಂಡಧಿಕತರ
ಹೋಮಮಂ ಮಾಡಿಸಲ್ಬೇಕೆಂದು ವಸ್ತುವಂ ಹಱದ ತೆಱನೊಳಗುವಱದು।
ಭೂಮೀಶಗೆನಲಾಕ್ಷಣಂ ಪೇಳಿತೆಲ್ಲವಂ
ಪ್ರೇಮದಿಂ ಮಾಡಿಸಿದನದಱ ದೆಸೆಯಿಂ ಗಗನ
ಧೂಮಹತವಾಯ್ತು ರವಿ ಮಿಡುಕಿತಿಲ್ಲೊಡವೆ ಹತವಾಯ್ತೆನುತ ಕೆಡೆನುಡಿದನು
॥೨೬॥

ಕಾಕುಭಜನೆಯೊಳಿಂಗದಿದಕುಪಾಯವ ಕಾಣ
ಬೇಕೆನುತ್ತಾತ್ಮಬುದ್ಧಿಯೆ ಸುಖಪದೆಂದೆಂಬ
ಲೋಕನೀತಿಯ ತಿಳಿದು ನೋಡಿ ಸಾಮದ ಭೇದದಳವಱದು ಬಸವರಸರ।

---

[1] ವಿದ್ಯಜನರವೇ (ಕ.ಖ.ಗ.ಘ.ಚ.ಛ). [2] ಗರ್ಗ್ಯರನು (ಕ.ಖ). [3] ಲ್ಲಯಂ (ಕ.ಖ.ಗ.ಘ.ಚ.ಛ).

ಆ ಕಡೆಯ ಲೆಕ್ಕವೇನಾಯ್ತೆಂದು ಕೇಳ್ವೊಲು ವಿ
ವೇಕದಿಂ ನುಡಿದು ಕರೆಸಲು ಸಿವುಡಿಸಹಿತ ಬರ
ಲೀ ಕಥನಮಂ ತೆಗೆದು ಪೇಳೆ ಮಾರ್ಮಾತುಗಳೊಳಱಿದು ನೃಪನಿಂತೆಂದನು ॥೨೭॥

ಯುಕ್ತಿ[1]ಯುತ[1] ನೀನು ಹಿಂದೊಮ್ಮೆ ದೈವಿಕಶಾಸ
ನೋಕ್ತಮಂ ತಿಳಿದೋದಿ ಉಳಿದ ಯುಕ್ತರನೆಲ್ಲ
ಭಕ್ತರಂ ಮಾಡಿದ ಮಹಾಪುರುಷ ಯೆನುತೆ ಮೆಲುನಗೆಯಿಂದೆ ಕೈಮುಗಿದು।
ನಕ್ತವಿಲ್ಲದೆ ದಿನಂ ನಡೆಯುತಿದೆ ಸೂರ್ಯನಚ
ಲೋಕ್ತವಿದ ತಿಳುಹಬೇಕೆನಲದಱ ಚಿಂತೆಮಗ
ನುಕ್ತ ಭಂಡಾರದೊಳಗಣ ಲೆಕ್ಕವಾರ್ತೆಗಳ ಕೇಳೆನಲ್ಕಱಿದು ನೃಪನು ॥೨೮॥

ಈಸು ಕಾಲದೊಳು ನಿಮಗೆಮಗದೇತಱ ಲೆಕ್ಕ
ವಾಸಿಯೇ ಮುಂದಣವರಂಜಬೇಕೆಂಬಾಭಿ
ಲಾಷೆಯಿಂದೆನಲು ಮನಸಿಂಗೆ ತರಲಹುದೆ ನೀವೆನುತ ಲೆಖ್ಖದ ಸಿವುಡಿಯ।
ಈಸಿಕೊಂಡದ ಹಱಿದು ಹಾಯ್ಕಿ ಕೈಮುಗಿಯೆ ಬಸ
ವೇಶನಿಂತೆಂದ ಕೊಂಡೆಯರ ಮಾತಂ ಕೇಳ್ದು
ದ್ವೇಷಮಂ ತಾಳ್ದು ಶಿವವೇಷಮಂ ಜಱಿವೆ ವಿಶ್ವಾಸಮಂ ಕೆಡಿಸಱಸುವೆ ॥೨೯॥

ಪರಧನವ [2]ವೆ[2]ಚ್ಚಿಸದ ಭಾಷೆ ಭಕ್ತರಿಗೆಂಬ
ಪರಿಯನಱಿಯದೆ ಶಿವನ ಶರಣರ್ಗೆ ಮಾಳ್ಪುದಕೆ
ನೆರೆದ ಹಾಸ್ಯರು ಪೇಳ್ವ ನುಡಿಗೆ ನೀ ಮಚ್ಚಿಕೊಂಡಾಡಲಿದ ನೋಡಲೆಂದು।
ನಿರುತ ರವಿ ನಿಂದಿರ್ಪನೆನೆ ಭೂಪ ತಲೆವಾಗೆ
ಪರಮ ಮಾಹೇಶನಿನಿತರ ಮೇಲೆ ಸಭೆಯು ಮೂ
ಗರಿವೆನೆನುತೊಬ್ಬಷ್ಟಕುಷ್ಟನಾಗಿಹ ವೇಷಧಾರಿಯನು ಕರೆದು ನಿಲಿಸಿ ॥೩೦॥

ವೇದದರ್ಥವ ಶಾಸ್ತ್ರದೋಜೆಗಳನುಳಿದ ಧ
ರ್ಮಾದಿಗಳ ಫಲವ ಮಂತ್ರದ ಸತ್ವವಂ ತಂತ್ರ
ವಾದದುನ್ನತವ ವಶ್ಯದ ವಿಲಾಸವ ಹೋಮನೇಮಂಗಳಭಿಮಾನವ।
ಮೊದಲಿಸಿ ಮೂಲಮಂ ಕಿತ್ತು ಸೂರ್ಯಗೆ ತೋರ್ಪ
ಭೇದದಿಂ ರವಿಮಂಡಲವ ಬರೆದದಱ ಮೇಲೆ
ಪಾದಮಂ ತೊಳೆದರ್ಕಗಿತ್ತರ್ಘ್ಯವನೆ ಚೆಲ್ಲೆ ರವಿರಥಂ ನಡೆಗೊಂಡುದು ॥೩೧॥

---

[1] ಹಿ (ಕ.ಚ). [2] ನೆ (ಪ.ಚ).

ವಾದಿಗಳನೊದೆದು ತರ್ಕಿಗಳನುಱೆ ಕೆಡಹಿ ಸಮ
ಯಾದಿಗಳನೊರಸಿ ಕೊಂಡೆಯರನಂಡಲೆದಖಿಳ
ಬೋಧಕರ ತುಳಿದು ದೂಷಕರ ನಾಶಂ ಮಾಡಿ ದ್ರೋಹಿಗಳ ಹಲ್ಲ ಕಳೆದು।
ಸಾಧಕರ ಸವರಿ ದುರ್ಜನರ ದೂರಂ ಮಾಡಿ
ಭೇದಕರುರವ ಬಗೆದು ವೈರಿಗಳೆದೆಯ ಮೆಟ್ಟಿ
ಹೋದುದಮಮ ಬಸವೇಶ್ವರನ ಬಿರುದಿನ ಪತಾಕೆ ಯೆನೆ ರವಿಯ ರಥವು ॥೩೨॥

ಬೆಱಗಾಗಿ ತಲೆದೂಗುತೆದ್ದು ಬಸವನ ಪದ
ಕ್ಕೆಱಗಿ ಬಿಜ್ಜಳನೃಪಂ ಕರಿಯ ತರಿಸಿದನೇಱಿ
ಮೆಱೆಸಬೇಕೆನುತೆ ಮುತ್ತಿನ ಛತ್ರಸಿಂದಸೀಗುರಿಗಳೆಲ್ಲಂ ಕೆದಱಿಸಿ।
ಬಿಱುದುಗಹಳೆಗಳೊದರೆ ನಿಸ್ಸಾಳಭೇ[1]ರಿಯ
ಬ್ಬಱಿ[1]ಗಳಂ ಸೂಳೈಸೆ ಕುಷ್ಟ[2]ರೋಗ[2]ದ ವೇಷ
ಕುಱುಹುಗೊಂಡನ ಬಸವನಡರಿಸಲು ತೊಳತೊಳಗುತಿರ್ದನಾ ಗಜದ ಮೇಲೆ ॥೩೩॥

ಶರಣರುನ್ನತಸಾತ್ವಿಕರ ಚರಿತವಖಿಳಸ
ತ್ಪುರುಷರಾನಂದ ಸತ್ಯರ ಲೀಲೆ ನಡೆಗಲಿತ
ಪರಿಯಲ್ಲಿ ಸನ್ಮಾರ್ಗದಡಿಯಿಡುವ ಗಜದ ಮುಂದುತ್ಸವದೊಳುಱೆ ಕುಣಿವುತ।
ಪರಮಮಾಹೇಶ್ವರನು ಬಸವೇಶ ಮೆಱೆದು ತ
ನ್ನರಮನೆಯ ಹೊಕ್ಕು ಜಂಗಮಲಿಂಗಪೂಜೆಯನು
ಹರುಷದಿಂ ಮಾಳ್ಪ ಮಹಿಮಂ ಮನುಜನಲ್ಲೆಂದು ನಂದಿ ಪ್ರಮಥರ್ಗೊರೆದನು ॥೩೪॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದ ಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಲೆಕ್ಕಗೇಳ್ದುದಕೆ ರವಿರಥಂ ನಿಂದ ಸಂಧಿ ॥೩೫॥

---

[1] ರಿಯಬ್ಬರ (ಕ.ಖ.ಗ.ಘ.ಚ). [2] ರೂಪ (ಕ ಖ.ಗ.ಘ.ಛ).

12*

ಹದಿನೇಳನೆಯ ಸಂಧಿ

ಸೂಚನೆ—

ಜನ್ಮಹೊನ್ಮೃಗಮುಖದಿ ಪುಣ್ಯವಡೆದೊಲು ಭಕ್ತ
ಕನ್ನವಿಕ್ಕಿದ ಠಾವ ಬಸವದಂಡಾಧೀಶ
ಹೊನ್ನಗೋಡೆಯ ಮಾಡಿಕೊಟ್ಟನವನೀಪಾಲಗವನೀತಳಾಗ್ರವಜ್ರಯೆ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲ ವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಶಫರಕೇತನಕಳೇವರಸಾನುಪವಿ ದಿವ್ಯ
ದುಪಮಾನ ಸಸ್ವರೂಪಕರೂಪಿತ ಪವಿತ್ರ
ದುಪನಿಷನ್ಮೂರ್ಧ್ನಿಪ್ರವರ್ತನದ ಪರಪರಾಚ್ಛಿವಶಿವೈಕ್ಯಪ್ರಕರವು।
ಕೃಪೆಯಿಂದೆ ಕೂರ್ತು ಕೇಳಾ ಪರಮಕಲ್ಯಾಣ
ಕುಪದೇಶಮುಖವೊಂದು ಗುಪ್ತಾಂಗವಿಡಿದಭವ
ನಪಹರಿಪನಿಂತು ದುರ್ವ್ಯಸನಿಗಳ ಮನಧನವನೆಂದೊರೆವ ಬ್ರಹ್ಮದಂತೆ ॥೨॥

ಬಹಿರಂಗಮಂ ಬಾದಣಗೊಳಿದು ಕರ್ಮಾದಿ
[1]ದುಹಿತರರ ದುರ್ಬಗೆಯ[1] ದೃಷ್ಟಿಗಟ್ಟೀ ಪರಿಯೊ
ಳಹಿರ್ಬುಧ್ನಕಾರಣಕರಣಗಳಿಂ ದುರ್ವ್ಯಸನರಭ್ಯಂತರಂತರ್ಧ[2]ನ[2]।
ಸುಹೃಜನರ ಹೃದಯಕ್ಕೆಸಾರ್ಚಿಪೊಲು ನಿರ್ದಯರ
ಗೃಹಗನ್ನವಿಕ್ಕಿ ತದ್ಧನವ ಶಿವಲಾಂಛನ
ಗ್ರಹಿತಾರ್ಥಗಳಿಗೆ ದಾಸೋಹಮುಖವಾಗಿ ಕನ್ನದ ಬ್ರಹ್ಮ ಬೊಮ್ಮವಿರಲು ॥೩॥

---

[1] ದುಹಿತರಾದುರ್ಭಯಂ (ಖ), ದುಹಿತರರದುರ್ಬಯಂ (ಕ.ಗ.ಘ.ಛ.ಭ), ದುಹಿತರರ ದುರ್ಬಗೆಯ (ಜ). [2] ನವ (ಜ).

ಆಯುಃಕರ್ಮಂ ವಿತ್ತವಿದ್ಯ[1]ಮೃತಿ[1]ಪಿಂಡಪ್ರ
ದಾ[2]ಯ[2]ಕಾರಣ ಕಾಯಕಾದಿ ಗುಣಜೀವನೋ
ಪಾಯಕಂತಲ್ಲದಂತರಕರ್ಮಗಳೆದು ನಿರ್ಮಲಭಾವದಲ್ಲಿ ಕೂರ್ತು।
ಮಾಯಾಮಲತ್ರಯಂಬೊಗ[3]ದನ್ಯ[3]ಹಿತಕ್ಕೆ ನಿಜ
ಕಾಯಾರ್ಪಣಂಗೈದು ಕಾಯಕದ ಸಂದಱಿಯೆ
ಶ್ರೀಯ ಮಾಳ್ಪನ್ನೋಜೆಯಿಪ್ಪಂತೆಯಾ ಶರಣನಿಪ್ಪನು ಗೃಹಾಂತರದೊಳು ‖೪‖

ಸಂಧ್ಯಾಸಮಯದೊಳು ಸದಾಚಾರಸಮುದಾಯ
ಬಂದು ಭವನದೊಳಾವರಿಸಲು ಮಾರ್ಗಾಚಾರ
ದಿಂದರ್ಘ್ಯಪಾದ್ಯವಿಷ್ಟರವಿತ್ತು ಸತ್ಕರೋಚಿತಸುಚಿತ್ತಾಂತರಂಗಾ।
ನಂದದಿಂದಾರಾಧಿಪೆಡೆಯ ಧನ ಕೆಲಬರ್ಗೆ
ಸಂದು ಕೆಲಬರ್ಗಿಲ್ಲದಿರೆ ಧರ್ಮಪತ್ನಿ ಸೌ
ಗ್ನಿಂದ ತಂದಿತ್ತಳಾ ತಸ್ಕರಾಂಗದ ತತ್ವಮುಖ್ಯಾಸ್ತ್ರಸಂಚಯಗಳ ‖೫‖

ಈಸಿಕೊಂಡುಳಿ[4]ಬಳಹ ಕೊಂಡು ಮಸಿಗಪ್ಪಡದಿ[4]
ಸೋಸುಗಟ್ಟಿಗೆ ಕನ್ನಗತ್ತಿ ಕೈವಲೆಯುಲಗು
ಮಾಸಿದುಡುಪಿನಹತ್ತಳವ ಹವಣಿಸುತ ಪರಮಪದದಂತೆ ಪದವಿಡುತ್ತ।
ಆಶಾನಿರೀಕ್ಷಣಂಗೈವುತರ್ಥಾಗಮನಿ
ವೇಶವಾಸಗಳ ಕಲ್ಪಿಸುತ ಬರುತಿರಲಾಗ
ನೇಸರಕಳಾಪ್ರಕೃತಿ ಕಣ್ಮುಚ್ಚಿ ಮುಚ್ಚದಂತಿರಲು ತನ್ನವಸರಕ್ಕೆ ‖೬‖

ನಿಲುಕಲಿಲ್ಲದೆ ನೋಡುತೋಸರಿಸುತೋಸರಿಸ
ದೊಳ[5]ಹೊಗುತಲ[5]ಗುವ ಠಾವುಠವಣಿಗಳನಾರೈವು
ತಳವ[6]ಳಿ[6]ಕೆಗಾಣದವಸರಕೆ ದಾಯಂದೋಱದಳಲುತ್ತ ಬರುತ[7]ಬರುತ[7]।
ಮಲಹರನ ಮಂತ್ರಮುಮನಾಹ್ವಾನಿಸಲ್ಕೆ ಶಿವ
ಕಳೆ ಸಂಘಟಂಗೈದ ಮಾಳ್ಕೆಯಿಂ ಬಸವರಸ
ರೊಳಗಣೋಲಗಕೆ ಹೋಹವಸರಕೆ ಬರುತಿರಲ್ಕಂಡು ಕಣುಸನ್ನೆಯಿಂದ ‖೭‖

ಲಿಂಗಜಂಗಮ ಬಂದರೆಮ್ಮ ಗೃಹಕೆಮಗೆಯೆ
ಮ್ಮಂಗದರ್ಚಿತಧನವಲ್ಲದದು ದಾಸೋಹ
ಕಂಗವಿಸದಾತ್ಮದವಸರಕರಮನೆಯ ಹೋಗುವೆ ಬಱಗೃಹದೊಳಳಲದಂತೆ।

---

[1] ದ್ಯುತಿ (ಕ.ಖ), ಧನ (ಜ). [2] ಯಕ (ಛ.ಚ), ಯು (ಜ) [3] ದೆನ್ನ (ಖ.ಗ.ಛ.ಝ.ಚ). [4] ತಳ್ಗ ಕೊಂಡುಮಸಿಗಪ್ಪಡದಿ (ಖ), ಬಹತ್ತಳ್ಗ ಕೋಡುಮಸಿಗಪ್ಪಡವಿ (ಕ), ಬಹಳ ಕೊಂಡು ಮಸಿಗಪ್ಪಡದಿ (ಝ). [5] ಬಹಳ ಕೋಚುಮತೆಗಪ್ಪಡದಿ (ಜ) ಪುಗವನುಗುವ (ಜ). [6] ಡಿ (ಜ). [7] ಬರುವ (ಕ).

ಹೊಂಗಳಿಹ ಮನೆಯು ತೋಱೆನಲು ಬಿಜಯಂಗೈಸಿ
ಸಂಗಡವೆನುತ್ತೊಯ್ದು ಸಂಜ್ಞೆಯಿಂ ತೋಱಿಲ್ಕೆ
ಬೆಂಗಡೆಗೆ [1]ಹೋಗೆಂದಡೀತರ್ಗಳಾರ್ಕೈಕೆಗೈದದ ಮೊದಲಸಂಜೆಯೊಳ್[1] ||೮||

ವಚನ—

ಕಳ ಹೋಹಡೆ ಕನ್ನದುಳಿಯ ಹಿಡಿವೆ, ಬಂದಿಯ ಹಿಡಿಯ ಹೋಹಡೆ ನಿನ್ನ ಮನದಿಂದ ಮುಂದುನಡೆವೆ, ಮನಭೀತಿಮನಶಂಕೆಗೊಂಡೊಡೆ ಆಣೆ ನಿಮ್ಮಾಣೆ, ನಿಮ್ಮನೊಲಿಸಿದ ಪುರಾತನರಾಣೆ. ಅಳ್ಬರ ನಡೆ ಸದಾಚಾರವೆನ್ನದಿರ್ದೊಡೆ [2]ಕಟ್ಟಾಳು[2] ಶಿಷ್ಟತನಕ್ಕೆ ಹೋಯ್ತು, [3]ಕಷ್ಟವ[3] ನೋಡಾ ಕೂಡಲಸಂಗಮದೇವ ||೧||

ಭಂಡಾರವನೆಯ ಬಾದಣಗೊಱೆದು ತನಗೆ ಕೈ
ಕೊಂಡನಿತು ಜಾಳಿಗೆಯನಳವಡಿಸಿ ಬೇಗ ಹೊಱ
ಹೊಂಡುವಯ್ಯನನೊಬ್ಬರಾಜಗೃಹರಕ್ಷಕಂ ಕಂಡು ಪಿಡಿಯಲ್ಕೆ ನೂಂಕಿ।
ದಿಂಡುವಾಯಲ್ಕವಂ ಅರ್ಭಟಿಸಲಲ್ಲಲ್ಲಿ
ಕಂಡವರ್ಕೈಕೊಂಡು ಪಿಡಿದಂಗಮು[4]ಖದಿ[4] ಭುಜ
ದಂಡಬಂಧನಗೈವುತಂಗಲಂಗವ ಕಂಡು ಕೈಗಾಯ್ದು ನಿಜಗಳ್ಳನ ||೯||

ದಂಡನಾಯಕನ ಮುಂದಕ್ಕೆತರೆ ಬಿಡಿಬಿಡಿರೊ
ಖಂಡೇಂದುಧರನಾತನೆನುತ ಕೈಮುಗಿದು ಸೆಳ
ಕೊಂಡ ಜಾಳಿಗೆ ಕನ್ನಗತ್ತಿ ಮೊದಲಾಗೆಲ್ಲವಂ ಮಗುಳ್ದು ಕೊಡಿಸಿ ಕಳುಹೆ।
ಕಂಡವರು ಕೈಹೊಯ್ದು ಆಹಾಹ ರಾಯಂಗೆ
ಭಂಡಾರಿ ಪರಮವಿಶ್ವಾಸಿ ದೊರಕಿದನೆಂದು
ಕೊಂಡಾಡುತಿಹ ಕಟಕಿಯೊಳಗಱಿದು ಮಂಚಿಭಟ್ಟರ ಮನೆಯ ಪರಿಚಾರರು ||೧೦||

ಉರವಣಿಸಿ ಹೋಗಿ ತಮ್ಮೊಡೆಯಗಱುಪಲ್ಕಾಹ
ಹರಕೆ ಕೈಗೂಡಿತೆಂದೆದ್ದು ನಿಲೆ ಕಂಡರಸು
ಭರವಸಮಿದೇನೆನಲು ನಗುತೆಂದ ನಂಜೂಡಿದಲಗನೊಡಲೊಳು ಮಡಗುವ।
ಪರಿಣತರು ನೀವೆಂದಡೇಕೆನಲು ನೀವು ನಿಮ್ಮ
ಸಿರಿಗೆ ಶೃಂಗಾರವಾಗಿರಿಸಿ[5]ದತಿ[5]ವಿಶ್ವಾಸಿ
ಹಿರಿಯ ಪ್ರಧಾನ ಭಂಡಾರವನೆಗಿಕ್ಕಿಸಿದ ಕನ್ನ ಕಣ್ದೆಱೆದುದೆನಲು ||೧೧||

---

[1] ಹೋಂಗೆಂಗರೀಕರ್ಗಳಾರ್ಕೈಕೆಗೈದವೊದಲಸಂಜೆಯೊಳಗೆ (ಕ.ಪು.ಚ), ಹೋಗಂಗರೀಕರ್ಗಳಾರ್ಕೈಕೆಗೈದಾವೊದಲಸಂಜೆಯೊಳ್ (ಖ), ಹೊಕ್ಕಂಗರೆಕರ್ಗಳಾರ್ಕೈಕೆಗೈಡದ ಮೊದಲು ಸಂಜೆಯೊಳಗೆ (ಜ). [2]ಕಟ್ಟಾಳಿಗ (ಕ.ಖ). [3]ರ (ಜ). [4]ಗಮುಖ್ಯ (ಚ.ಖ), ದಮ್ಮುಖದಿ (ಜ). [5] ದಂತೀ (ಕ).

ಠಕ್ಕುಹೊಡೆದಂತೆ ಬೆಱಗೇಱು ಕೋಪೋದ್ರೇಕ
ಮಿಕ್ಕದೇನೇನೆಂದು ಮಗುಳ್ದು ಮಗುಳ್ದಾದರಿಸಿ
ದೆಕ್ಕಸಕ್ಕವೊ ನಿಜವೊ ಕೇಳ್ವೆ ಕರೆ ಭಂಡಾರರಕ್ಷಕರನೆನುತಲಾಗ।
ಧಿಕ್ಕರಿಸಿ ದೆಸೆಯ ನೋಡಲ್ಕೆಯಾಜ್ಞಾಧರರು
ಮಿಕ್ಕು ಪಱದಟ್ಟಿಮುಟ್ಟೆಲೆ ರಾಜಸ್ವಾಮಿದ್ರೋ
ಹರ್ಕಳಿರ ಬನ್ನೆಂದು ನೂಂಕಿತಂದ[1]ರ್ತತ್ಕ್ಷಣಾಗಾರ ಕಾಹಿನವರ[1] ॥೧೨॥

ಕಾಣುತ್ತ ಕಂಗೋಪ ಮುಸುಕುದೆಗೆದೊಲು ಸಾವ
ಕೇಣಿಯಂ ಕೊಂಡಿರೆಮ್ಮರಮನೆಯ ಹೊಕ್ಕೆನ್ನ
ಪ್ರಾಣದೇವತೆ ಲಕ್ಷ್ಮಿಯಿಪ್ಪ ನೆಲೆವನೆಗನ್ನ ಹೋಹಾಗ ನೀವದಾವ।
ಕ್ಷೋಣಿಯನ್ನಾಳಹೋಗಿದ್ದಿ[2]ರೆನೆ ಜೀಯ[2] ನಾ
ವೇನ ಮಾಡು[3]ವೆವಂಗವೊಡವೆರಸಿ[3] ಕಳ್ಳನಂ
ಕಾಣಿಸಿ ಪಿಡಿದು ಕಟ್ಟಿತರೆ ಮಗುಳೆ ಕೊಟ್ಟು ಕಳುಪಿದ ದಂಡನಾಥನೆನಲು ॥೧೩॥

ಉಕ್ಕುವೆಣ್ಣೆಯೊಳುದ[4]ಕ [4]ತಳೆದಂತೆ ಭುಗಿಲೆನು
ತಕ್ಕಕ್ಕ ಲೇಸಾಯ್ತು ಕರೆ ಸ್ವಾಮಿದ್ರೋಹರ್ಗೆ
ಮುಖ್ಯನನೆನಲ್ಪರಿದು ಕರೆದರೊಳಚಾವಡಿಯಲಿರ್ದ ದಂಡಾಧೀಶನ।
ಲೆಕ್ಕಿಸದೆ ಬಹ ಬಹಳ ಧೀರರಕ್ಷಾಮಣಿಯ
ಚಕ್ರೇಶಕಾಣು[5]ತಿರ್ಕೆತ್ರೈ[5]ಹೊಯ್ದು ನಗು[6]ತಾಹ[6]
ರಕ್ಕಸಿಯ ಪೆರ್ಮಗಗೆ ಶಿಶುವನಿತ್ತಂತಾಯಿತೆನುತಲಾಕ್ಷೇಪಿಸುತ್ತ ॥೧೪॥

ಹಿತವ ಬಂದನು ಹಿರಿಯ ಮಂತ್ರೀಶ ಬಂದನೆ
ಮ್ಮತಿಶಯ ಮಹಾಲಕ್ಷ್ಮಿಯಂಗಪಾಲಕ ಬಂದ
ಸತಿಮತಂ ಹೊದ್ದ[7]ದ ಸಹಜ[7] ಪರಮವಿಶ್ವಾಸಿ ಭಂಡಾರಿ ಬಂದನೆಂದು।
ಉತುಕೋಟಿ [8]ಮಾತುಗಳನಾಡು[8]ತ್ತಿದೇನು ನಿ
ನ್ನತಿರೇಕ ಭಂಡಾರವನೆಯ ಕನ್ನವ ಕೊಱೆದ
ಪತಿತ ತಸ್ಕರನ [9]ಸತ್ಕ[9]ರಿಸಿ ಮಗುಳೆಮ್ಮರ್ಥವಿತ್ತು ಬಿಡುವರ್ಥವೇನ್ನೈ ॥೧೫॥

ಆವ ಪೃಥ್ವೀಶರಲ್ಲುಂಟು ಕಳ್ಳರ್ಗಳ್ಳ
ರಾವ[10]ರವ[10]ರಿಂಗೆ ಮ[11]ತ[11]ಗೊಟ್ಟು ರಾಜ್ಯಾರ್ಥಕ್ಕೆ
ತಾವೊಡೆಯರಾಗಿ ಹಿತಶತ್ರುವಾಗಪಹರಿಸಿಕೊಂಬ ಕಾರಣಪುರುಷರು।

---

1 ರುತಕ್ಕ್ರಣಾಗಾರಕಾಹಿನವರ (ಖ.ಗ), ರರ್ಥರಕ್ಷಣಾಗಾರಕಾಹಿನವರ (ಕ).
2 ರೇಯೆನೆಜೀಯ (ಖ). 3 ವೇಂಒಡವೆಲೆಸಹ (ಖ). 4 ಕವಂ (ಕ). 5 ತ್ತಕೈ (ಖ).
6 ತಹಹ (ಗ). 7 ಸಹಜಾ (ಖ), ಸಾಹಜ (ಘ). 8 ಪಾಕ್ಯಗಳನುಸುರು (ಜ).
9 ತಸ್ಕ (ಕ.ಖ.ಚ). 10 ಪ್ರದಾನರಲ್ಲುಂಟು .... ಡಾವರಿಗ (ಜ), ಪೃಥ್ವೀಶರಲ್ಲುಂಟು . . . . ರಾವರಾವ (ಖ.ಗ). 11 ನ (ಕ.ಖ.ಚ).

ನೀವೆಂಬುದಱಿಯಬಂದಿತ್ತು ಸಾಕಳ್ಳನವ
ನಾವನವನಂ ತಂದುಕೊಡು ಕೊಡದೆ ಮೂರ್ಖತೆಯು
ಹಾವಳಿಯು ಹಣ್ಣಿದಡೆ ಹದುಳವಲ್ಲಿದು ನಿನ್ನಸಾವಿಂಗೆ ಸಂಚಕಾರ ॥೧೬॥

ತಂದೊಪ್ಪಿಸೀಕ್ಷಣೆನುತರಸೆಡಸಿ ನಿಷ್ಠುರದ
ಸಂದಣಿಯೊಳಾಗ್ರಹಿಸುತಿಪ್ಪಗ್ರವಾಣಿಜೆಯು
ಮುಂದಣುತ್ತರದ ಮೂಗರಿವ ಕರವಾಳು ಕೈಸಾರ್ದೊಲುಸುರ್ದನು ಬಸವನು।
ಇಂದು ನಿನ್ನೈಶ್ವರ್ಯಲಕ್ಷ್ಮೊಲಿದು ಭಂಡಾರ
ಮಂದಿರವೊಗಲ್ಸಂಜೆಗ[2]ಡ ಸಾರ್ಚಿರಲು ತಿ[2]ರುಗು
ವಂದಗಂಡೊಳಹೊಗಿಸಲಭವ ನಿರ್ಮಿಸಿದ ಬಾದಣವಾಗಿಲದು ಕನ್ನವೆ ॥೧೭॥

ನಿನ್ನಸುಕೃತಸ್ವರೂಪಾಂಗವಿಡಿದಾ ಭಾಗ್ಯ
ಕನ್ನಿಕೆಯನೊಳಹೊಗಿಸಿ ಪೋಪನಂ ಕಳ್ಳನೆಂ
ದನ್ಯಾಯಿಗಳು ಪಿಡಿದು ತರೆ ಬಿಡಿಸಿ ಮತ್ತೆ ಪಿಡಿತರಲೆಂತು ನೃಪತಿಯೆನಲು।
ನಿನ್ನ ಮಾತಿಂಗರ್ಥವೇನು ಮುನ್ನಾದಿಯಲಿ
ಹೊನ್ನಮೃಗ ಹಱಿದ ಹಜ್ಜೆಯೊಳು ಲಕ್ಷ್ಮೊಳಹೊಕ್ಕ
ಕನ್ನವಾಗಿಲು ಕನಕವಾದಡೊಡಬಡುವೆನಲ್ಲದೊಡೆ ತಡೆಗಡಿಪೆನೆನುತ ॥೧೮॥

ಹಲ್ಲುಗಡಿಯುತ ತಲೆಯನಲ್ಲಾಡಿ ಮೀಸೆಗಡಿ
ದೆಲ್ಲರೊಳು ಸಾಱುತೆದ್ದತಿಕಠೋರದೊಳು ಭೂ
ವಲ್ಲಭನು ಬಂದು ಕನ್ನದ ಬಾಗಿಲಿಂಗೆ ಕೈದೀವಿಗೆಗಳನು ತರಿಸುತ।
ಎಲ್ಲಿ ತೋಱೈ ಮಾರಿಮುಖಮಂತ್ರಿ ಬಱಿದೆ ನೀ
ಗೊಲ್ಲ[3]ಸಗೊಳುವೆ ಬಯಲವಾಗ್ವ[3]ಶ್ಯಬಲುಮೆ ಧನ
ಹೊಳ್ಳಾದ ಬಟ್ಟೆಯಿದೆ ಕಳ್ಳವಾತುಗಳ ಕಡೆಗಾಣಿಸೆನುತಾಕ್ಷೇಪಿಸೆ ॥೧೯॥

ತಲ್ಲಣಿಸಿ ತಳವೆಳಗುಗೊಂಡಿದೆಲ್ಲಿಯ ಕ್ಲೇಶ
ಕಳ್ಳನಂ ಕೈವರ್ತಿಸಾನುಳಿವೆನೊಮ್ಮಿಗಾ
[4]ನುಳ್ಳಡೈ[4]ಸಲೆ ಭಕ್ತಿಯೆಂಬ ಕಟಕಿಗಳ ಕಣ್ಣೊಳು ಮಣ್ಣ ಹೊಯ್ವ ಶಿವನ।
ಪಲ್ಲಟ[5]ದ[5] ಪ್ರತಿಬಿಂಬ[6]ವಾಗಿ ಬಾಚಿಕೈ೯ಯ[6]
ಲಲ್ಲಿರ್ದ ಮಣ್ಢಿಗೆದಡಲ್ಲಿ ಚೆಲ್ಲುತ್ತಭವ
ಬಲ್ಲನೆನುತೇಱಿ ನೂಂಕುತ್ತಿರಲು ಕನಕವಾಯ್ತಾ ಮಣ್ಣದೇವೋಗಳ್ವೆನು ॥೨೦॥

---

[1] ಡ (ಜ). [2] ಡಲ್ತಿರ್ಚಿರಲ್ತ (ಜ). [3] ಸಂಗೊಳುವೇದಿಯಲವಾಗ್ವಸ್ಯ (ಕ), ಸಂಗೊಳುವೆದಿಯವಾಗ್ವಸ್ಯ (ಖ), ಸೆಯೊಳುವಬಯಲ ವಾಗ್ವಸ್ಯ (ಜ). [4] ನುಳ್ಳವ್ವ (ಜ). ದಿ(ಕ.ಚ). [6] ಬಾಗಿತಾಂಕೈಯಲ್ಲಿ (ಖ).

ಭಕ್ತಿಯ ಬಲುಹಿದೆಂಬೆನೋ ಮಹತ್ತ್ತೆಯ ಭಾ
ವೋಕ್ತವೆಂಬೆನೊ ಕರಪರುಷ ಕಣ್ಬರುಷದ ಪ್ರ
ಯುಕ್ತಿಯೆಂಬೆನೊ ಶರಣಸಾಮರ್ಥ್ಯವೆಂಬೆನೋ ದೇವತಾಕಳೆಯೆಂಬೆನೊ।
ಭಕ್ತಿಮುಕ್ತಿಯ ಫಲಪ್ರದಯೆಂಬೆನೋ ಸಮಯ
ಶಕ್ತಿದೇವತೆಯ ನಿಷ್ಠೆಯ ಘುಟ್ಟಿಯೆಂಬೆನೋ
ವ್ಯಕ್ತತೆಟಿದವ್ಯಕ್ತಲಿಂಗಬಸವನ ಮಹಿಮೆಯಂಗವನದೇನೆಂಬೆನು ॥೨೧॥

ಕನ್ನವಿಕ್ಕಿದ ಮಣ್ಣು ಕತ್ತಿ ಸೋಂಕಿದ ಠಾವು
ಚಿನ್ನಮಯವಾಯ್ತೇನನುಪಮಿಸುವೆನಂತದಱ
ಬಿನ್ನಣಂಗಂಡರಸುಮುಖಕೋಪತಾಪತಗ್ಗಿತ್ತು ಚೇ[1]ಷ್ಟಿತ[1]ರ ಸತ್ವ
ತಿಣ್ಣಗೆಟ್ಟಿತ್ತು ನಿಂದಕರ ನೀತಿಗೆ ಕೇಡು
ಕಣ್ಣಿಟ್ಟಿತೆಮ್ಮ ಬಸವೇಶ್ವರನ ಭಕ್ತಿಸಂ
ಪನ್ನತೆಯ ಶರಧಿಯೊಳಗದ್ದಿತ್ತು ಮತ್ಸರಿಪ ಮನುಜರ ಮನೋನುರಾಗ ॥೨೨॥

ಕೈದೀವಿಗೆಗಳ ಕಾಂತಿಯ ಭ್ರಾಂತಿಯೆಂದು [2]ಮೈ[2]
ಬೊಯ್ದರಸು ಹೊಮ್ಮಣ್ಣರಾಶಿಗಾಣುತಲೊತ್ತಿ
ಗೈದಿ ನೋಡಲು ಹೇಮಭೂವಿಯೊಳು ಜಾತರೂಪಂ ಜನನವಾದೊಲಿರಲು।
ಕೊಯ್ದು ಕನ್ನದ ಬಾಯ ನಿಲುಕಿ ನೋಡಲ್ಕದಂ
ತೈದೆ ಸ್ವರ್ಣದ ವರ್ಣ ಕಡೆಗಾಣಿಸಿರೆ ಕಂಡು
ಐದು ಗ್ರಹಸೋಂಕಿದೊಲು ಸುಮ್ಮನಾದನು ಚಕಿತಚಿತ್ತಭೂನಾಥನಂದು ॥೨೩॥

ಅಪಥವೆನೆ ನೋಡಲಿದು ಸುಪಥವಾಗಿದೆಯಿದಱ
ವಿಪರೀತಕ್ರಿಯೆ ಯಿದೇನೆಂದು ಸಂಶಯಚಿತ್ತ
ನುಪ[3]ನಿಧಿ[3]ಯ ನೋಡುತೆಲ್ಲರ ಮೊಗಂ ನೋಡುತಾ ಬಸವರಾಜನ ನೋಡಲು।
ಕುಪಿತದೇಹದ ಕುಲಾಚಲವೆ ನಿನ್ನಯ ಭಾಗ್ಯ
ದುಪದೇಶ[4]ಕರ್ತ[4] ಕನ್ನವನಿಕ್ಕಿ ಕೆಡಿಸಿದಂ
[5]ತ[5]ಪರಾಧವಜ್ಜೆಯಿದೆ ನೋಡುನೋಡಾ ಯೆಂದು ಮೊಗವೆತ್ತಿ ತೋಱ ಮತ್ತೆ ॥೨೪॥

ಕನ್ನಗತ್ತಿಯ ಘಾಯ ಸೋಂಕಿದನಿತಗಲದೊಳ್
ಮಣ್ಣು ಕಲು ಹೆಂಟೆ ಕೆಲಕೊತ್ತಿರ್ದ ರಜರೇಣು
ಸ್ವರ್ಣಮಯವಾಗಿ ತೋಱದೆ ನಿನ್ನಪುಣ್ಯದೇವತೆಯ ಸುಳುಹಿನ ಸೋಹೆನೆ।

---

1 ಷ್ಟಕ (ಜ). 2 ಭ್ರಮೆ (ಜ). 3 ಸ್ಥಿತಿ (ಖ), ಮನಿಧಿ (ಘ). 4 ತರ್ಕ (ಘ).
5 ತ್ಯ (ಗ.ಘ.ಛ).

ನನ್ನಿ ತಪ್ಪುವುದೆ ನಮಗೀ ಹೊಲಬು ಹೋಗದೆ
ಮ್ಮುನ್ನತಿಗೆವೊಡೆಯ ನೀ ತಪ್ಪುವಾ ಯೀ ಪರಿಯ
ಕನ್ನವಿಕ್ಕುವರೊಳರೆ ಬಂದು ಮಾಣದೆ ನಿಚ್ಚ ಕನ್ನವಿಕ್ಕುಳುಹಲೆನುತ ॥೨೫॥

ನಿಷ್ಠುರಂ ನೀರಕೂಡಾಕ್ಷೇಪವಡಿಗದ್ದಿ
ಕಷ್ಟಕಡೆಗಣಿಸಿ ಕಾಹುರ ಕಳಲ್ದುದ್ರೇಕ
ದೃಷ್ಟಿಗೆಟ್ಟುಗ್ರಗುಚ್ಚಾಟವಾಯ್ತಾ ಕ್ರಿಯಾವಾದಭಾವಕ್ಕೆ ತಲೆಯ।
ಚಟ್ಟಿಕ್ಕುವಂತರಸ ತಲೆಗುತ್ತಿ ಬಸವಂಗೆ
ನಿಷ್ಠೆಯ ನಿಧಾನರಾಶಿಗೆ ಕನ್ನವಾಗಿಲಿಗೆ
ಸಾಷ್ಟಾಂಗವೆಱಗಿ ತದ್ಧನವ ಪೆಟ್ಟಿಗೆಗಳಂ ತೀವಿ ಭಂಡಾರ ಹೊಗಿಸಿ ॥೨೬॥

ಉಚ್ಚಾಹದುಡುಗೊಱೆಯನಾದಿಬಸವನ ಭಕ್ತಿ
ನಿಶ್ಚಯಕ್ಕರ್ಪಿಸಿ ಸ್ವಭಾವಕ್ಕೆಯೆಱಗುವಂ
ತಚ್ಚರಿವಡುತ್ತೆಱಗಿ ನೃಪ ಕಳುಪೆ ಶರಣ[1]ಸಂತ್ರಾಣ[1] ತತ್ಪ್ರಾಣಭಕ್ತಿ ।
ವಚ್ಚಲ ನಿಜಾಲಯಕ್ಕೈದೆ ಮಾಹೇಶ್ವರಸ
ಮುಚ್ಚಯದೊಳಾನಂದಿಸುತ್ತೆಥಾಕಥನಮಂ
ಉಚ್ಚರಿಸಲಾಯ್ತೆನುತ್ತಪ್ಪಿಕೊಂಡೆತ್ತಿಕೊಂಡೆಲ್ಲ ನಲಿನಲಿದಾಡುತ ॥ ೨೭ ॥

ಆರತಿ[2]ಯೊಳಾ[2]ರತಿಯನೆತ್ತುತ್ತೆ ಶರಣುಶರ
ಣಾರ[3]ತಿದೊ[3]ಳೆಲ್ಲಕ್ಕೈಯೆತ್ತುತ್ತೆ ಕೆಲರೆಥಾ
ವಾರತೆಯನಾ ಕನ್ನದೈಯಗಳಿಗಱುಪಲವರತಿಕುರುಷದಿಂದ ತಾವು।
ಆರಾಧಿಸುತ್ತಿಹಯ್ಯಗಳು ಸಹಿ[4]ತುತ್ಸಹದಿ[4]
ಭೋರನ್ನೆತರಲುಭಯಗಣಸುಖಸಮೇಳಸಿರಿ
ನಾರಿಯ ಮುಖಕ್ಕೆ ತೋಱುವ ದರ್ಪಣದ ಪೊಲಿಹ ಬಸವನೊಲಿದಿಂತೆಂದನು॥೨೮॥

ಬೊಮ್ಮಿತಂದೆಗಳೆ ಪರಬೊಮ್ಮಸ್ವರೂಪನೀ
ವೆಮ್ಮಪತಿಕರಿಸಿನ್ನು ಭಕ್ತರಾಲಯಗಳಲಿ
ನಿಮ್ಮ ಕಾಯಕದ ಕ್ಕೆದೋಱೆ ಪರುಷದ ಫಲವ ಧರ್ಮಿಗಳಿಗಾಗಬೇಡ।
[5]ಧ[5]ರ್ಮಜ್ಞ ನಿಮ್ಮಶಸ್ತ್ರವು ಸೋಂಕಿದೆಡೆಗಿನ್ನು
ಸಮ್ಮಂಧಿಸುವದು ಧನ ಸತ್ಯವದು ದಾಸೋಹ
ಸೊಮ್ಮಾಗಬೇಕಾಗಿ ಭವಿಭವನ ಹೊಗದಿರೆಂದಾಜ್ಞಾಪಿಸಡಿಗೆಱಗಲು ॥ ೨೯ ॥

---

[1] ಸತಾಣ (ಕ.ಖ.), ಸಂತಾನ (ಜ). [2] ಯರಾ (ಖ). [3] ತಿಯೋ (ಕ.ಖ.ಗ. ಘ.ಘ.ಚ). [4] ತಲುತ್ಸಹದಿ (ಖ). [5] ವ (ಗ).

ಅಂದು [1]ಮೊದಲ[1]ವರು ಶಿವಭಕ್ತರಾಲಯಗಳಿಗೆ
ಬಂದು ಕನ್ನವನಿಕ್ಕಿ ಕಾಯಕದ ಕೈಗೆ ಕೈ
ಬಂದಂತೆ ದಾಸೋಹಕಾಶ್ರಯಸ್ಥಲವಾಗಿರುತ್ತಿಹರು ಬಸವರಾಜ।
ತಂದೆಯ ಚರಿತ್ರವಿಂತೆಂದು ಪ್ರಮಥರ್ಗಾದಿ
ನಂದಿಕೇಶ್ವರ ಪೇಳ್ದ ಕಥನವನು ಶಿವಶರಣ
ವೃಂದವೊಲಿದವಧರಿಸಿ ಭಕ್ತಿಮುಕ್ತಿಪ್ರದಾಯಕಫಲಶ್ರುತಿಗತಿಯನು ॥ ೩೦ ॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಕನ್ನವಿಟ್ಟ ಭಿತ್ತಿಯು ಕನಕ ಮಾಳ್ದಸಂಧಿ ॥೩೧॥

---

[1] ತೊಡಗ್ಯ (ಖ).

ಹದಿನೆಂಟನೆಯ ಸಂಧಿ

ಸೂಚನೆ—

ವೇದಶಾಸ್ತ್ರಾಗಮಪುರಾಣಸಿದ್ಧದೊಳು ಹೊಱ
ಗಾದ ಕೇತಕಿಯ ಶುದ್ಧವ ಮಾಡಿ ಲಿಂಗಕೆ ನಿ
ವೇದಿಸಿದ ಬಸವನುಂ ಪ್ರತಿವಾದನಿರಸನದಿ ನಿಜದೋಱಿದನು ಜಗಕೆ ।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತು ವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥ ೧ ॥

ಲಾಲಿಪುದು ಪ್ರಮಥರೊಂದಿನ ಬಿಜ್ಜಳಕ್ಷೋಣಿ
ಪಾಲನೊಡ್ಡೋಲಗಂಗೊಟ್ಟನಚಲಿತಲಕ್ಷ್ಮೀ
ಲೋಲನೈಶ್ವರ್ಯವಾರಿಧಿ ನಿಶಾಕರವೈರಿ ವಾರಣವಿದಾರಣ ರಣ ।
ಕಾಲಭೈರವನಖಿಲರಾಜಾಧಿರಾಜರಸ
ಮೇಲದಲಿ ಮಂತ್ರ್ಯಮಾತ್ಯರು ಸರ್ವವಿನಿಯೋಗ
ಜಾಲಸಹಿತೊಪ್ಪುತಿಹ ಸಮಯಕ್ಕದೊರ್ವ ಹೊಂಗೇದಿಗೆಯ ಹೂವೊಂದನು ॥೨॥

ಕಾಣಿಕೆಯನಿತ್ತಡದ ಕೈಕೊಂಡು ಬಿಜ್ಜಳ
ಕ್ಷೋಣಿಪ ಪರೀಕ್ಷಿಸುತ ಬಿಚ್ಚಲಾವೋದದ ಸು
ಕೇಣಿವೆತ್ತಮಲಗಂಧಿನಿಯಂತೆ ಸ್ವರ್ಣಸತ್ವರ್ಣ ಪರಿಮಳವಡೆದೊಲು ।
ಹೂಣಿಸುವ ಗಂಧಸೋಂಕಱಿದು ಪಿರಿಯರ್ದೇವ
ಶ್ರೇಣಿಗೀಯದೆ ಪೂಫಲವ ಭೋಗಿಸುವದಪ್ರ
ಮಾಣವೆನಿಪಾಗಮೋಕ್ತಮೃತವಚನಾಲಾಪಕೊಂದೆನಳದೆಗೆದು ಪಿಡಿದು ॥೩॥

ಇದು ಮಂಗಳದ ಮಹಾತ್ಮೆಯು ಪದಾರ್ಥದ ಗೂಢ
ಸುಧೆಯ ಸಾರೋದ್ಧಾರ ಕಾರಣದ ಕುಱುಹೋ ಮೇ
ಣಿದು ರತಿಯ ರಸನೋನ್ನತ ಕುಸುಮಗಲಶವಿಲ[1]ಸ[1]ವೋ ಮದನಮಾರ್ಗಣೆಗಳ ।

---

[1] ಗ (ಕ).

ಸದನವೋ ಸೌರಭ್ಯಪುಲ್ಲರಾಜೇಂದ್ರನೆನು
ತದಱೊಳಾಯ್ದುಗದೆಸಳನಾದಿಶೈಲಾದೆಯುನ
ವದನವ ನಿರೀಕ್ಷಿಸುತಲಿತ್ತಡದರನ್ವರ್ಥದರ್ಥಾಗಮುವ ಬಗೆಯುದೆ ॥೪॥

ದೇವತಾಂತರದೊಳುರಿಲಿಂಗೋದ್ಭವದಿ ಮಹಾ
ದೇವನಿಗೆ ಹೊಱಗಾದ ಕೇತಕೀಕುಸುಮವಂ
ಪಾವನವುದೆನಿಸದಱ ಪೂರ್ವಾಶ್ರಯಂಗಳೆದು ನೇತ್ರಘ್ರಾಣೇಂದ್ರಿಯಗಳ।
ಸಾವಧಾನಿತ ಸದೃಶಸೋಂಕು ಬೀಸರುವೋಗ
ದಾವಗಂ ಮನಲಿಂಗಲೀಯು ಸಂಯೋಗಸಂ
ಭಾವಿಸುತ ಶಿವಲಿಂಗಕರ್ಪಿಸುತ [1]ಲಿಂಗಕವಧಾರಿಸುವ[1]ನಾಶ್ಚರ್ಯವು ॥೫॥

ಅಂಗಲಿಂಗಕ್ಕಾವಧಾರಿಸಾ ಸಭೆಯೊಳಿಹ
ಲಿಂಗವಂತರ್ಗೆ [2]ತೋರ್ನೀವಾಳಿಸುತ[2] ಕರಯು
ಗಂಗಳಂ ಮುಗಿದು ಶಿರದೊಳು ಧರಿಸುತಿರೆ ಪುರೋಹಿತಮಂತ್ರಿಗಳು ಕಂಡರು।
[3]ಸಾಂಗಾಗಲೀ[3]ತನಱ[4]ವಾ[4]ಗಮುದೊಳಭವಂಗೆ
ಹಿಂಗಿ ಹೊಱಗಾಗಿ ಹೋಗಿರ್ದ ಕೇತಕಿಯನಿದ
ನಂಗಜಹರಂಗರ್ಪಿಪಾ ಪ್ರೌಢಿಯೇನೆಂದು ಗುಜುಗುಜುಗೊಳುತ್ತೆಂದರು ॥೬॥

ಮೃತ[5]ಭಸಿತನಂ[5] ಪಿಶಿತವನು ನರಕರೋಟಿಯೊಳು
ಕೃತಕರ್ಮಭೇದನದಿ ತೀವಿ ಕಾದಂಬರಿಯ
ಮ[6]ತದೆಸಱೆ[6]ಱೆದು ಹಸಿಯ ಮೂಳೆಯಿಂ ತೊಳಸಿ ಮಾದಿಗನ ಮನೆಯುವಳಡುತಿರೆ।
ಸತ್ಕುಲಜ ಹುಸಿಕನಾ ಸಮಯದೊಳು ಬರೆ ನಿರೀ
ಕ್ಷಿತವವನ ಕಾಲಧೂಳಿರಕಹೊಲ್ಲೆಂದು ಆ
ಸತಿ ಪಾದುಕೆಯಲಡಗ ಮುಚ್ಚಿದಳು ಗ[7]ಡ[7]ನೀತ ಹುಸಿಕ ತ್ರಿಜಗಕ್ಕಧಮನು ॥೭॥

ಹುಸಿಯ ದಿಟಮಾಡಲಾರಳವಲ್ಲ ದೇವತಾ
ವಿಷಯದೊಳು ಹುಸಿ ಹೊತ್ತ ಕೇತಕೀಕುಸುಮವಂ
ಶಶಿಧರಗೆ ಹೊಱಗೊಳಗನೆಂತು ಮಾಡರ್ಪಿಸಿದ ಮೂಢತೆಯ ಗೂಢಗೆಡಿಸಿ।
ಪಶುಪತಿಯ ಶರಣರೊಳಗಲ್ಲೆನಿಪೆವೀತನನು
ವಸುಧೆಯೊಳು ತಲೆ ಯೆತ್ತದಂತೆ ಶಾಸ್ತ್ರೋಕ್ತಿಯೊಳು
ಹಸಗೆಡಿಸಿ ಕಷ್ಟವಂ ಮಾಳ್ಪೆವೆನುತಾ ಪುರೋಹಿತಮಂತ್ರಿ[8]ದಲೆದೋಱಿತು[8] ॥೮॥

---

[1] ಸಂಗಕ್ಕಾವದಾರಿಸಿದ (ಗ). [2] ತೋರ್ರ್ಯಾವಾಗಿಸುತ (ಗ), ತೋಱ್ಯಾವಳಿಸುತ್ತ (ಕ). ತೋಱಿಸಿ ನಿವಾಳಿಸಿ (ಜ). [3] ಸಾಂಗಾಂಗಲೀ (ಖ), ಸಾಂಗಾಂಗಬೀ (ಗ), ಮಂಗಳವ (ಜ). [4] ದಾ (ಘ). [5] ಭಷಕನರ(ಜ). [6] ಧಿಸಿರದೆ (ಜ), ತದ್ಯೈಱೆ (ಚ.ಕ). [7] ಣ (ಘ). [8] ತಲೆದೂಗುತ (ಖ), ಹುರಿಗಟ್ಟಿತು (ಜ).

ಕಾಳಿಮಪ್ರಭು ಕೇಶವೋಪಾಧ್ಯ ಕೃಷ್ಣ ಗೋ
ಪಾಲಪೆದ್ದಿಗಳು ಹರಿಭಟ್ಟ ನಾರಾಯಣರು
ಆಲೋಚಿಸಿದರು ಮಂಚಣ್ಣಗಾತಂ ರಾಯನೊಳು ಸೂಚಿಸುತ ಚೇಷ್ಟಿಸೆ।
ಓಳಿಗೊಂಡೆದ್ದು ತನತನಗೆ ಗಜವಟ್ಟಪದ
ಪಾಳಿಕ್ರಮು[1]ವಗರ್ಾಭಿ[1]ಧಾನ ಛಂದೋಋಷಿಯು
ಮೂಲವೇದಾಂತಸಿದ್ಧಾಂತದೊಳು ಕೇತಕಿಯ ಹೂ ಶಿವಗೆ ಹೊಱಗೆನುತಿರೆ ॥೯॥

ಮತ್ತಾಗ[2]ಮೂಗ[2]ಮೋತ್ತರದಿಂದ ಸಕಲಶಾ
ಸ್ತ್ರೋತ್ತರದೊಳಾ ಋಷಿಯ ಪೌರುಷವದಂ ಪುರಾ
ಣಸ್ಥಲದಿ ನಾನಾವಿಧಾನಸಾಕ್ಷಿಕಶ್ರುತಿ ಸ್ಮೃತಿ ತರ್ಕ ತಾರ್ಕಣ್ಯೆಯು ।
ನೆತ್ತೆ ಶಬ್ದ[3]ದ[3]ಸಾರಕಾ ಸಭಾರಾಜರ್ಕ
ಳುತ್ತಮಾಂಗಂದೂಗುತಹುದಹುದು ಕೇತಕಿಯು
ಮೃತ್ಯುಂಜಯಂಗ್ಯೋಗ್ಯವಲ್ಲವೆಂತರ್ಪಿಸಿದ ಬಸವಾಂಕನೆನುತಿರ್ದರು ॥೧೦॥

ಉತ್ತರೋತ್ತರಕುತ್ತರಂಗೊಡುವನಾರ್ವೇದ
ವಿತ್ತುಗಳ ಕೂಡೆನುತ ಸಭೆ ಮೋಹಿಸಲ್ಕೆ ವಿ
ಪ್ರೋತ್ತಮರಗುರ್ವಿನಿಂ ಗರ್ವಿಸುತ ಹೂಂಕರಿಸಿ ಸಿಕ್ಕಿದಪನೀಗೆನುತಲಿ।
[4]ಮತ್ತೆ ಮತ್ತಲ[4]ಗಿಸುತ ರಾಜರಾಜೇಂದ್ರ ನಿ
ಮ್ಮುತ್ತಮ ಪ್ರಧಾನಂಗೆ ನಿಃಶಬ್ದಬ್ರಹ್ಮತಲೆ
ಗುತ್ತಿ[5]ಸಿತೇಕೊ[5] ನಿಷ್ಟೆಗಿಷ್ಟೆ[6]ಯಿಂ ಸಟೆಸರವಿಯುಳ್ಳಡೆ ವಿಚಾರಿಸಿಮೆನೆ[6] ॥೧೧॥

ಧರ್ಮಾದಿಧರ್ಮಗಳ ಪೇಳ್ವುಪನಿಷದ್ವಾಕ್ಯ
ಧರ್ಮವೋ ಪೌರಾಣಪಥದಪ್ಪಿತೋ ಶಾಸ್ತ್ರ
ಘರ್ಮ[7]ಗರ್ಭಸ್ರ[7]ವಿಸಿತೋ ಅಲಂಘ್ಯವೋ ಪಕ್ಷಪಾತವೋ ನಿಜನಿಯತವೋ!
ನಿರ್ಮೋಹವೋ ವೈಮನಸ್ಯವೋ ಶ್ರುತಿಕಥನ
ಧರ್ಮವವಮನ್ನಣೆಯೊ ಪತಿಕರಿಸದಿಹ ಮೌನ
ವರ್ಮವೆಲೆ ದಂಡಾಧಿಪತಿಯದೇನೆಂದುರ್ವಿಪಾಲ ಪ್ರತಿಪಾದಿಸಿದಡೆ ॥೧೨॥

*ವೇದ ವೇದಾಂತ ಸಿದ್ಧಾಂತ ಘನಶಾಸ್ತ್ರ ಸಂ
ಪಾದಿತೋನ್ನತ ಪುರಾಣಾಗಮಿತಿಹಾಸ ಮೊದ
ಲಾದ ವಿದ್ಯಾಭ್ಯಾಸಮಂ ಮಾಡಿ ಶಬ್ದಜ್ಞನಾದೊಡೇಂ ವೀರಶೈವ।

---

[1] ವಗಾರ್ಭಿ (ಕ.ಖ), ವಗರ್ಾವ (ಜ). [2] ಮಾಗ (ಗ.ಜ). [3] ವ (ಖ).
[4] ಮಸ್ತಕವನಲು (ಖ). [5] ಸಿತೆಕೋ (ಕ), ಸಿತುಕೊ (ಗ.ಥ ಜ.ಫ), ಸಿತೊ (ಖ).
[6] ಯನಿಜನಿರವಿಯುಳ್ಳಡದವಿಚಾರಿಸಿಕೇಳೆನೆ (ಖ). [7] ಗರ್ಭಾಂಶ (ಗ). * ಈ ಪದ್ಯ 'ಜ' ದಲ್ಲಿಲ್ಲ.

ಭೇದವಱಿಯದನೋದು ಗಿಳಿಯೋದಿನಂತೆ ಕೇಳ್
ಮೇದಿನಿಪ ಬಿಜ್ಜಳನುತಖಿಳಲೋಕಾರಾಧ್ಯ
ನಾದಿವರ್ಮಜ್ಞ ಸಾಕ್ಷಾತ್ಪರಬ್ರಹ್ಮಸ್ವರೂಪ ಬಸವಾಂಕನುಸುರ್ದ ॥೧೩॥

ಉರಿಲಿಂಗದೋದ್ಭವಮಹೋರ್ಧ್ವಗತಿಯನು ಕಾಣ್ಬ
ಭರದಿಂದೆ ಶ್ರೇಷ್ಠಖಗವಾಗಿ ಕೆಲ ಬ್ರಹ್ಮಾಂಡ
ಪರಿಭ್ರಮಂ ಬಡುತ ಪೋಪೆಡೆಯೊಳಿದಿರಾಗಿ ಬರುತಿರ್ಪ ಕೇದಗೆಯ ಕಂಡು।
ಪರದಂತರಾಂತವಂ ಕೇಳಲ್ಕಗೋಚರಾಂ
ತರವೆನಲ್ಕುಸ್ಸೆನುತಲಾ ಘನಾಗ್ರಮ ಮುಟ್ಟಿ
ತಿರುಗಿದೆ ನೆನಲ್ಕಿದುಂಟೇನೆಂದು ಬೋಧಿಸಿದ ಗೃಹಿಣಿಗೆಂತಾಯ್ತು ಸತ್ಯ ॥೧೪॥

ಕೇದಗೆಯ ಕುಸುಮ ಹುಸಿಯದು ಬ್ರಹ್ಮಬೋಧೆಪ್ರತಿ
ವಾದವೇತಕೆ ಶಿವನ ಮುಖದೊಳುದ್ಭವಮಾದ
ವೇದವಾ ವೇದವೀಶ್ವರಮ್ಯಗವ್ಯದಲಿ ನಾಯಾದವಾ ನಾಣ್ನುಡಿಯನು।
ಸಾಧಕರೊಲಂಧಪಾರಂಪರೆಯಲಿವರು ಕಲಿ
ತೋದಿದೊಡೆ ದಿಟ ಗಡಾ ಬ್ರಹ್ಮಹರಿಹರರೊಳೊ
ಗ್ಗಾದ ಗಡ ಹೂಂಕೊಂಡ ಕುಸುಮ ಶಿವಗೇಕೆ ಸಲ್ಲದು ನೃಪೋತ್ತಮ ಯೆನುತ॥

ಗ್ರಂಥ :—

ಆಘ್ರಾಯಾಘ್ರಾಯವಿಂದಂತಿ ವೇದಶ್ವಾನಾಶ್ಶನ್ಯೈಶ್ಶನ್ಯೈಃ ।
ಯತ್ಪದಾನಿ ಮಹಾಟವ್ಯಾಂ ತಂ ವಂದೇ ಶಬರೇಶ್ವರಂ ॥

ಏಮ್ಮ ದ್ವೈ[1]ವೇದ[1] ಪರಬೊಮ್ಮ ತಾನಾಗಿಹುದ
ಗಮ್ಯಗೋಚರ ಕೇಳ್ವಡೋದುವಡೆ ಗೋಪ್ಯ ಶಿವ
ಧರ್ಮ ಪಣ್ಯಾಂಗನೆಯ ಪಥವಲ್ಲ ಕಂಡಕಂಡವರೊಳು ಪ್ರವರ್ತಿಸುವೊಡೆ ।
ನಿರ್ಮಳಮಳಿನತತ್ವ[2]ಕು[2]ಂಟೆ ತರ್ಕಂ ಲಿಂಗ
ವರ್ಮವಱಿಯದರ ನುಡಿಗಡಣಸಂಭಾಷಣೆಯ
ಧರ್ಮವಹುದಾಗೆಮಗನುಕ್ತವಱ ನಿಜ ನಿಮ್ಮ ಮನಮೆಚ್ಚದೊಡೆ ಕೇಳ್ನೃಪ ॥ ೧೬ ॥

ಅಣಿಯರದಣೋರಣೀಯಾನ್ಮಹತೋ ಮಹೀ
ತೃಣಪರ್ವತಾದಿ ಲೋಕಾಲೋಕಭರಿತಗಿದ
ಋಣಿಕೆಯೊಂದುಂಟಾದಡಾ ವರ್ಮವಱಿಯದರ್ಪಿಸಿದ ಪೂ[3]ವೆಂತಾ[3]ಶಿವ ।

---

[1] ವವು (ಖ), ದಿದ (ಕ.ಚ). [2] ವು (ಕ.ಖ.ಗ.ಘ.ಛ.ಜ). [3] ವದಂತ್ಯಂ (ಖ).

ಗಣಕುಲದ ಪ್ರಾಣಾಂಗಲಿಂಗಮಸ್ತಕದಲ್ಲಿ
ಎನಿತುಳ್ಳ ಸ್ಥಾವರದ ಜಂಗಮದ ಮೌಳಿಯಲಿ
ಗಣನೆಗೊಂಡಿಪೆ ನೋಡಿಸೆಂದು ಬಸವಾಂಕ ಸುಮನ[1]ಸದಿ ಸುಮನವ ನಿಟ್ಟಿಸೆ[1]
॥ ೧೭ ॥

ಆ ಪುರದ ಸ್ಥಾವರಾದಿಗಳ ಪೂಜೆಗಳಲ್ಲಿ
ಆ ಪುರದ ಶೈವಸಿಂಹಾಸನದ ಪೂಜೆಯಲಿ
ಆ ಪುರದ ಶರಣಸದ್ಭಕ್ತಾಂಗಪ್ರಾಣಲಿಂಗಸ್ಥಲದ ಪೂಜೆಯಲ್ಲಿ ।
ಆ ಪುರದ ಸರ್ವಜಂಗಮದ ಮೌಳಿಗಳಲ್ಲಿ
ವ್ಯಾಪಿಸೆಲ್ಲೆಡೆಯೊಳಿಹ ಕೇತಕೀಕುಸುಮಪ್ರ
ತಾಪಮಯವಾದ ಪ್ರಭಾಪ್ರಭೋನ್ನತಿಯಂ ಪರೀಕ್ಷಿಸಾ ಭೂನಾಥನು ॥ ೧೮ ॥

ಆವ ಪರಿಯೆಂದಱಿಯಬಾರದಿವರನುಮಾನ
ವಾವುಪನಿಷದ್ಗಳಂ ಬಗೆಯದಿವರಾಗಮವಿ
ದಾವುದಾವುದ ನೋಡಲತ್ತತ್ತ ಮಿಾಱಿದ ಯಿದಾವ ನಂಬುಗೆಗೊಳ್ಳದು ।
ನಾವಿದೇನವರಿವರ ಮಾತಿಗೆ ವೃಥಾ ಭಾಯ
ಗಾವಲಿಯ ಬಲವಿಡಿದು ದೇವದುರ್ಗವ ಕೊಂಬ
ಗಾವಿಲತೆಯಿಂದಂತರಾತ್ಮನಾಳೋಚನೆಯನಾಳಾಪಿಸುತ ಮಹೀಶ ॥ ೧೯ ॥

ತರ್ಕವೇನಾಯ್ತಣ್ಣಗಳಿರೆನಲಿದುವಿದೆಲ್ಲ
ರೊಕ್ಕಲಿಕ್ಕಿದ ಜಿಹ್ವಶಾಸ್ತ್ರಂಗಳೀ ಚೋದ್ಯ
ವರ್ಕನುದಯಿಸೆ ತಮದ ಗಾವಳಿಯ ಗರುವಾಯ ಗರುಡ[2]ನಿದಿ[2]ರೇನಹಿಗಳು ।
ಅಕ್ಕ[3]ಜ[3]ದನುಡಿಯಡಗಿತೀಕ್ಷಣಂ ತಲೆಯ ಚ
ಟ್ಟಿಕ್ಕುವಂತಾಯಿತಾಹಾ ಬಲ್ಲತನ ಬೆಂದು
ದಕ್ಕಕ್ಕುಯೆಂದಾ ಪುರೋಹಿತರ ನೀಕರಿಸುತರಸು ದಂಡಾಧೀಶಗೆ ॥ ೨೦ ॥

ಸರಸಿರುಹಕುಸುಮಾಂಜಲಿಯನೆತ್ತುವಂತುಭಯ
ಕರಸಂಪುಟಂಗೈವುತಲಿ ಕುತೂಹಲಚಿತ್ತ
ಚರಿಸುತೊಂದೆಸಳು ಕೇದಗೆಯಿತ್ತಡೆಂತನೇಕಮದಾಯಿತೆಂದು ತಿಳಿ[4]ಪ[4] ।
ಪರಿಗೇಳಿಕೇಳಲಮ್ಮದೆ ಸೊಡ್ಡಳಂಬಾಚಿ
ಮರಸರಂ ಕೇಳೆ ಕೌತುಕವೇನು ಭಾರತಾ
ಪುರುಷರೊಂದಂಬುದೆಗೆದೆಸೆಯೆ ಮಂತ್ರಶರನಂತಮವಾಗಿ ಬೀಳ್ವವೆನಿಪ ॥ ೨೧ ॥

---

[1] ದಿಸುಮನವಮಂನಿಟ್ಟಿಸೆ (ಕ.ಚ ಖ). [2] ಗಿ (ಗ.ಫ). [3] ರ (ಫ). [4] ದ (ಕ.ಖ).

ಕಥೆಗಳನೊಡಂಬಡುವಿರಿದಕೇಕೆ ಚೋದ್ಯವೆಂ
ದುತ್ಕೋಚಿಸುತ್ತಿಹಿರಿ ಸಪ್ತಕೋಟ್ಯುಪಮಂತ್ರ
ತತಿಗೆ ಗುರು ಪಂಚಾಕ್ಷರೀಸಿದ್ಧರಿಂಗರಿದೆ ಪೂರ್ವದಲ್ಲೊಬ್ಬೊಬ್ಬರೇ ।
ಗತಿವಡೆದು ತಾವು ಸದ್ಗತಿಗೊಯ್ದರೆಮ್ಮ ಸಂ
ತತಿಯೊಳಗೆ ಸಿರಿಯಾಳನೋಹಿಲುದ್ಭಟಸಾಮ
ಶ್ರುತಿಮತಂ ಸಾನಂದರಂದು ಪುರ ದೇಶಕೋಶಗಳ ಕೈಲಾಸಾದ್ರಿಗೆ ॥ ೨೨ ॥

ಭೂಪ ಕೇಳೆಮ್ಮ ಭೋಗರಸನೊಬ್ಬನ ಬೆನ್ನ
ದ್ವೀಪದ್ವೀಪಾಂತರ[1]ದಿ ಲಿಂಗ ಉರು[1]ಳುತ ಬಂದ
ವಾ[2]ಘಣಾ[2]ಧರನವರಿಗೀ ಬಸವರಾಜ ಹೊಂಗೇದಿಗೆಯ ಹೂವೊಂದನು ।
ವ್ಯಾಪಿಸಿದನೆಂಬುದಾವದ್ಭುತವೆನುತ ತಿಳಿವ
ದೀಪಿಸಿದ ನೃಪಗೆ ಸೊಡ್ಡಳಬಾಚಿರಾಜನೆಂ
ದಾ ಪರಾತ್ಪರಮ ನಂದೀಶ ಪ್ರಮಥಗೊರೆದ ಪಥವ ಭಕ್ತರ್ಕೇಳ್ವುದು ॥ ೨೩ ॥

ಶರಣಸಾಮರ್ಥ್ಯವಂ ಕೇಳಿ ಶರಧಿಯ ವಿಮಳ
ತೆರೆಯುನಾರೆಣಿಪರೆಂದಾ ವೃಷೇಂದ್ರನ ನಿಜದ
ಸಿರಿಗಂಡು ತರಣಿನುತ್ತೆದ್ದನೋಲಗದಿಂದ ಬಳಿಕ ಬಸವಾಂಕನಿತ್ತ ।
ವರಮಹೇಶ್ವರರೊಗ್ಗಿನಿಂ ಸಕಲ ಸಂಭ್ರಮದ
ಪರಿ[3]ಚರಿಯದಾಂ[3]ದೋಳವಾದ್ಯ ಗುಡಿ ತೋರಣದ
ಲರಮನೆಗೆ ಬಂದನೇಂ ಬಣ್ಣಿಪೆನು ಕೇತಕೀವನವಸಂತ[4]ಕೆ[4] ಮದನನು ॥ ೨೪ ॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಕೇತಕೀಕುಸುಮವಂ ಬಸವ ಮೆಱೆದ ಸಂಧಿ॥೨೫॥

---

[1] ದಲಿಂಗಗಳುರು (ಖ). [2] ಪಗಾ (ಖ.ಥ), ಪರಾ (ಗ). [3] ಚಯದೊಳಾಂ (ಕ.ಚ) [4] ಕ (ಜ).

ಹತ್ತೊಂಬತ್ತನೆಯ ಸಂಧಿ

ಸೂಚನೆ—

ಕಾರುಕರು ಕಾಕುವಗರಣರು ಶಿವಶರಣರಾ
ಕಾರದಿಂ ಬರೆ ಶರಣೆನಲು ನೆರೆದು ನಿಂದಿಸಿದ
ಘೋರನರಕಿಗಳ ಭಂಗಿಸಿ ನಿಜತಪಸ್ವಿಗಳ ಮಾಡಿ ತೋಱಿದ ಬಸವನು ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನೆಲದೆಂತೊ ॥ ೧ ॥

ಪ್ರಮಥಪ್ರಮುಖರು ಚಿತ್ತೈಸಿ ಬಿಜ್ಜಳಮಹೀ
ರಮಣ ತಾನೊಂದು ದಿನ ಸುಖಸಂಕಥಾವಿನೋ
ದಮನಾಲಿಸುತ್ತಖಿಳಮಂತ್ರ್ಯಮಾತ್ಯರು ಶಿಷ್ಟ ಮಂಡಲೇಶ್ವರ ರಾಜರು ।
ಸಮಬಲರು ಸಾವಂತ ಸೇನಾಧಿಪರ್ವೆರಸಿ
ಕ್ರಮದಿನೊಡ್ಡೋಲಗಂಗೊಟ್ಟಿರಲು ಸದ್ಭಕ್ತಿ
ಯಮಲಚಾರಿತ್ರದಂಡಾಧೀಶ ಭಂಡಾರಿ ಬಸವರಸರೈತಂದರು ॥ ೨ ॥

ಯಮಲೋಕಕೆಮ್ಮ ಸಾನಂದಮುನಿ ಬಂದಂತೆ
ತಮಲೋಕಕಮಲಹರಿದಶ್ವನುದಯಿಸಿದಂತೆ
ಅಮರನದಿ ಜಗತೀತಳಕ್ಕೈದಿದಂತಖಿಳ ಭೂತವ್ರಾತಾಂತರಕ್ಕೆ ।
ವಿಮಲ ಶಿವಮಂತ್ರ ನಡೆದಂತಖಿಳರಜ್ಞಾನ
ತಿಮಿರಕ್ಕೆ ಜೊನ್ನಸಾರ್ದಂತೆ ಬಂದಾ ಭೂಮಿ
ರಮಣನ ಬಲದ ಗದ್ದುಗೆಯ ಮೇಲೆಸೆದ ದ್ವಿತೀಯನಲಾಕ್ಷ ಬಸವೇಶನು ॥ ೩ ॥

ಹರಲೆಂಕಮಂಚರಸರುಂ ಹಡಪದಪ್ಪರಸ
ಗುರುವು ಸೊಡ್ಡಳಬಾಚಿದೇವಯ್ಯನೆಮ್ಮ ಮಧು
ವರಸರುಂ ಜಗದೇವನಾಯಕರು ಛಲದಂಕಬಾಚಣ್ಣ ನಾಚಿರಾಜ ।

ನಿರುತಕೇಶವರಾಜ ಚೆನ್ನಬಸವರಸರುಂ
ವರಶಾಂತಕೋಲ ಚಾಡಣ್ಣ ದಸರಯ್ಯ ಬಸ
ವರಸರೊಗ್ಗಿನೊಳಾದನಾದ್ಯಮರಗಣರೂಪಕಾರಣಿಕರೊಪ್ಪಿರ್ದರು ॥ ೪ ॥

ಭೂತಂಗಳಂತೆ ವ್ಯಾಧಿಗಳಂತೆ ಜಾತಿವಗೆ
ಯೂಥಂಗಳಂತುಗ್ರಗ್ರಹದಂತ ಪಿತೃಪತಿಯ
ದೂತರುಗಳಂತೆ ತಸ್ಕರರಂತಪಸ್ಮಾರರಂತೆ ಭವತರಳರಂತೆ ।
ಪಾತಕಾಳಿಗಳಂತೆ ಬಕನಂತೆ ವಿಾನ್ಬುಲಿಗ
ಳಾ ತೆಱದಿ ಕಟುಕರಂತಲ್ಲಿ ಕೊಂಡೆಯರೆಲ್ಲ
ರಾತಿಹರು ಮಂಚಣ್ಣನೊಡನೆ ಮೂವತ್ತಾಱುಮಂದಿ ಬಂದೋಲಗದೊಳು ॥ ೫ ॥

*ಸೋಮಯಾಜಿಗಳು ಋತ್ವಿಜರು ಋಗ್ವೇದಿಗಳು
ದಾಮೋದರಂ ಪೆದ್ದಿಭಟ್ಟನಜಕುಂಡಲದ
ನೇಮಿ ರಾಘವ ಶಿಖಾಸೂತ್ರದಪ್ಪರಸನಣ್ಣಪ್ಪುಪಾಧ್ಯರ ವಲ್ಲಭ ।
ಸಾಮವೇದ್ಯಪ್ಪಣ್ಣ ಜಿನ್ನಪಂಡಿತ [1]ಪಿ[1]ರಿಯ
ಸೋಮುಪಾಧ್ಯರು ಚತುರ್ವೇದಿ ಕೃಷ್ಣರಸ ಕವಿ
ರಾಮನೆ[2]ಗ್ಗ[2]ದಸಂಗಿ ಭಟ್ಟರೊಳಗಾದ ಪೆರ್ಗೊಂಡೆಯ ಸಮೂಹದೊಳಗೆ ॥ ೬ ॥

*ಕೂಚಿಭಟ್ಟನು ಕಾಳಿಮರಸ ಕೇಶವ ದುಷ್ಟ
ನಾಚಿರಾಜನು ಖಚಪ ನೊಲಿವೆಗ್ಗಡಿಯ ಶ[3]ತೆ[3]ಯ
ಬಾಚರಸ ಹೆಮ್ಮಾಡಿ ಕರಿಯುಮಾಧವ ಚೋಳಿಮಾಂಕ ಹರಿಭಟ್ಟ ಕಲೆಯು ।
ಪೋಚ[4]ರಸ ಗೋಪಾಲಪೆದ್ದಿ ಮೇಳಿಯ[4]ಮೂರ್ಖ
ರಾಚರಸ ತಮ್ಮಿ[5]ಗನು[5] ಧೂರ್ತ ವಿಟ್ಟರಸ[6]ರಂ[6]
[7]ತಾ[7]ಚರಿ[8]ಪ[8] ಮಂಚಿಯೊಳಗಾದ ಮೂವತ್ತಾಱು ಕೊಂಡೆಯ ಸಮೂಹವೆಸೆಯೆ ॥ ೭ ॥

ಈ ಪರಿಯೊಳೋಲಗಂಗೊಟ್ಟು ಸುಖಸಂಕಥಾ
ಲಾಪದಿಂ ಸಮಯಸಂಕೇತಪ್ರಸಂಗಗಳ
ಭೂಪನಾಲಿಸುತಿರಲ್ಕತ್ತಲಾ ಪುರದೂರುವಗರಣಿಗರೆಲ್ಲ ನೆರೆದು ।
ಆ ಪಟ್ಟಣದ ಕೇರಿಗಳೊಳೆಲ್ಲ ಜಂಗಮದ
ರೂಪಿನಿಂದಾಡುತಿರಲದ ಕಂಡು ಮಂಚರಸ
ನಾಪತಿಗರಾತಗಱುಪಲ್ಕಾತ ಭೂಪಗೇಕಾಂತದಿಂ ಕಿವಿಯೊಳುಸುರ್ದ ॥ ೮ ॥

---

[1] ಪ (ಕ.ಚ). [2] ಜ್ಞ (ಗ.ಫ). [3] ಕಿ (ಖ), ರೆ (ಗ.ಕ.ಚ). [4] ರಸಗಳ ಪೆದ್ದಿ ಭಟ್ಟಮೇಳೀ (ಖ). [5] ಗಳು (ಕ.ಚ). [6] ರಿಂ (ಖ.ಗ). [7] ದಾ (ಖ). [8] ಯ (ಫ).
* ಈ ಪದ್ಯಗಳು 'ಜ' ದಲ್ಲಿಲ್ಲ.

ಆವಾವಜಾತವೆಲ್ಲರೆ ಜಂಗಮುವದೆಂದು
[1]ತಾವು ಕೀಳಾಗವದಿ[1]ರಡಿಗೆಱಗಿ ಕಾಲ್ದೊಳೆದು
ಸೇವಿಪ್ಪುದೆಲ್ಲರೆಂಜಲುದಿಂಬ ನಿಮ್ಮ ಪ್ರಧಾನನಱಿತವೆ ಹಗರಣ ।
ಭಾವೋಪಕ್ರಮರ ಹಗರಣಿಗರ ವಿನೋದಗಳ
ನೀವು ನೋಡಲ್ಕಾತನಿದಿರಿನೊಳು ನಟಿಸಿ ಸುಡ
ಲೀವಿಧದ ಭಕ್ತಿಯನೆನಿಪ್ಪುದಂ ತೋರ್ಪೆನೆಂದವನೆನಲ್ಕರಸೆಂದನು ॥ ೯ ॥

ಆದೊಡದಕೇನು ನಿನ್ಯೋಚನೆಗದೆಂತು ಬಹು
ದಾದೊಡಂ ನೆಗಳು ನಾವಱಿವ ದಿಟ[2]ಮುಟಸಟೆವಿ[2]
ನೋದಗಳನೆನಲು ಗುಪ್ತದಿ ಮಂಚಿಗನ ಜೊ[3]ತ್ತೆ[3]ಗಾಱರುಗಳೈದೆ ಬಂದು ।
ಬೀದಿವಗರಣವಾಡುತಿರೆ ನಿಮ್ಮ ಪಾ[4]ರ್ಥೀವ[4]
ರಾದಿತ್ಯ ಕರೆದನೆನುತವದಿರಿಗೆ ಸಟೆಯ ಸಂ
ಪಾದನೆಗಳಂ ಕೆಲವ ಕಲಿಸಲ್ಕೆ ಧೂ[5]ರ್ತರ್[5]ಗಳ ಮೂರ್ತಿ ಮೂವಡಿಸಿದಂತೆ ॥೧೦॥

ಪಾಷಾಣ ಕಾಯಿ ಕಸವೇನ ದೊರಕಿತ್ತ ನೆಱೆ
ಮಾಸಿದಱಿವೆಯೊಳು ಮುದುಡ್ಯದ ಲಿಂಗದಂತೆ ವ್ಯ
ತ್ಯಾಸದಿಂ ಕೊರಳೊಳುರದೊಳು ಮಂಡೆಯೊಳು ಕರಸ್ಥಲ ವಕ್ಷದಲ್ಲಿ ಕಟ್ಟಿ ।
ಕಾಷಾಂಬರವದೆಂದು ಕೆಂದೊಗಲನುಟ್ಟು ಮೈ
ಪೂಸಿ ಬೂದಿಗಳ ಜಡೆಯೆಂದು ನಾರ್ನಟ್ಟೆಗಳ
ವೇಷವೊತ್ತೇನಕೇನಕೆ ಬೊಂತೆಗಿಂತೆಗಳ ಕಂತೆಗಳೆನು[6]ತ್ತ ತೊಟ್ಟು[6] ॥ ೧೧ ॥

ಒಡೆದ ಸೋರೆಯ ಕಮಂಡಲುವಿಡಿದು ಹ[7]ಳೆ[7]ವೊಱನ
ಕೊಡೆವಿಡಿದು ಕೆಲರು ಭಾರಿಯ ಕರ್ಪರಗಳೆಂದು
ಹೆಡಗೆಗಳ ಹಿಡಿದೊಡೆದ ಮೊಗೆಗೆ ಸುಣ್ಣವ ತೊಡೆದು ಶಂಖಂಗಳೆಂದೂದುತ ।
ಇಡಿದೌಡಲದ ಕಾಯ ರುದ್ರಾಕ್ಷಿಯೆಂದು ಮೈ
ದೊಡಿಗೆಗಳ ತೊಟ್ಟು ಪುಲಿದೊವಲೆಂದು ಕುರಿದೊವಲ
ನುಡೆಯುಟ್ಟು ಪಾವುಗೆಗಳೆಂದು ಮಣಿಗಳ ಮೆಟ್ಟಿ ಕಾಕುಗೀತಗಳನೆಸಗಿ ॥ ೧೨ ॥

ಮುಱಿದ ಕೋಲಿಗೆ ಹಱಿದ ಕೋಱಿಯಂ ಕಟ್ಟಿ ಮೇ
ಲೊರುವೆಱಣಿಯಂ ನಿಲಿಸಿ ನಂದಿಯಾ ಕೋಲೆಂದು
ಮೆಱೆಸುತ ಸರವಿಗಿರವಿಗಳ ಕವಡಿಗಿವಡಿಗಳ ಕಟ್ಟಿ ಕುಣಿವುತ ಕೆಲಬರು ।

---

[1] ವೂರೊಳಾಗ್ಯವದಿ (ಕ.ಖ.ಗ.ಘ.ಚ.ಛ). [2] ಪುಟಸಟವಿ (ಕ.ಚ.ಘ), ಘಟಶಠವಿ (ಜ). [3] ತೇ (ಖ), ತ್ತ (ಗ). [4] ರ್ಥಿವಾ (ಕ), ರ್ಥಿವ (ಜ.ಕ). [5] ರ್ತ (ಕ.ಗ.ಘ.ಖ.ಚ). [6] ತ್ತಾಗಕಟ್ಟಿ (ಖ), ತ್ತಕೊಟ್ಟು (ಕ). [7] ರಿ (ಖ.ಗ.ಘ.ಜ).

ಹಱೆ ಹೊಯ್ವು[1]ತಚ್ಚಚ್ಚ[1] ಭಕ್ತಿವಾತುಗಳ ಕೆಲ
[2]ವುಱುಗುದೊಂ[2]ಡಗಳನಾಡುತ್ತ ನಾನಾಜಾತಿ
ಯಱಗುಲಿಗಳೋಲಗಕೆ ಬರುತ ಬಾಷ್ಕಳಗೆ[3]ಡುವ[3]ರದನಿನ್ನದೇನೆಂಬೆನು ‖ ೧೩ ‖

ಆ ಶಿವಾಗಮನಾದರೇಣ ಶಾಠ್ಯೇನ ಪರಿ
ಹಾಸೇನ ಎಂಬುದುಂಟಾಗ್ಯವದಿರಂ ತಂದು
ದಾ ಸಭಾಂತರಕದೇನಾನು ಪುಣ್ಯೋದಯದಿ ಕಾಕತಾಳನ್ಯಾಯದಿ ।
ವೇಷಹಮ್ಮಿಂದುಬ್ಬುತಾಡುತಾಡುತ ಭಕ್ತಿ
ಭಾಷೆಗಳನಣಕಿಸುತ್ತಾವು ಜಂಗಮಲಿಂಗ
ಓಸರಿಸಲಱಿದುತಱಿದುರೆ ದೂರಿ [4]ಕೊಲ್ವೆ[4]ವೆಂದಾಸುರದಿ ಕಾಲ್ಗೆಡವುತ ‖ ೧೪ ‖

ಬಂದು ಕ್ಕೈಯೆತ್ತುತಭಿನಮಿಸುತ ನಮಃಶಿವಾ
ಯೆಂದುಘೋ ಜಾಂಗುಭಲ ದೂರಪರ್ವತಪ್ರಾಂತ
ದಿಂದೀಗಳಿಳಿದು ಬಂದೆವು ನಿಮಗೆ ಲೇಸಾಗಲಿದೆ ವಿಭೂತಿಪ್ರಸಾದ।
ತಂದಿಹೆವು ಯೆನುತ ಸೊಪ್ಸೆದೆ ಬೂದಿಯಂ ಹಾಸ್ಯ
ದಿಂದೆ ಭಾ[5]ಷಾಂಗ[5]ಗಳ ನುಡಿದು ನೀಡಲ್ಕೆ ಘೊ
ಳ್ಳೆಂದು ಸಭೆ ನಗುತ ಶಿವಭಕ್ತಿ ಬಿಮ್ಮಂ ಹೊಳ್ಳುಗಳೆದು ಹುರುಳಿಲ್ಲೆಂದುದು ‖೧೫‖

ಮತ್ತೆಮತ್ತವದಿರುತ್ಕೃಷ್ಟಹಾಸ್ಯದಿ ಶಬ್ದ
ವೆತ್ತಿಭಕ್ತಿಕ್ರಿಯಾಂಗಗಳ ತೋಱುತ್ತ ಜಱಿ
ವುತ್ತಿರಲ್ಕವನೀಶ ನಸುನಗುತ ಪಾಂಗಿನಿಂದಾ ಧೂರ್ತಮಂಚಣ್ಣನ।
ಅತ್ತ ನೋಡಲ್ಕೆ ನಲಿದೆದ್ದು ಕಂಕುಳಭುಜದೊ
ಳೊತ್ತಿಕೊಳುತಾಯ್ತು ಕೊಳ್ಳಿದು ಬಸವನಾ ಭಕ್ತಿ
[6]ಯುತ್ತಮಿಕೆಗಪ[6]ಮೃತ್ಯು ಮೂಡಿತೆಂದಾಳಾಪಿಸುತ್ತಲತಿಹರುಷದಿಂದ ‖ ೧೬ ‖

ಅತ್ತಲವ ಹಗರಣಿಗರಿಗೆ ಸೂಚಿಸುತ್ತ ಕಣು
ಗೆತ್ತಿ ಬಸವರಸರಂ ತೋಱಿ ಸಮ್ಮುಖದಿ ನಿಲಿ
ಸುತ್ತುಪಾಯಂಗೊಟ್ಟು ತಾ ಸಭ್ಯನಂತೆ ಕ್ಕೈಮುಗಿದು ದಂಡಾಧೀಶ್ವರ।
ಚಿತ್ತೈಸಿದಿರೆ ನಿಮ್ಮ ಜಂಗಮಂ ಲಿಂಗಂಗ
ಳುತ್ತಮ ವಿಭೂತಿ ಪ್ರಸಾದನಿರ್ಮಳಭಕ್ತಿ
ಯುತ್ತರೋತ್ತರವಿದಹುದೇ ಪರೀಕ್ಷಕರು ನೀವ್ ಬಲ್ಲಿರಾವಱಿಯೆವೆನಲು ‖ ೧೭ ‖

---

[1] ತಾವಾ ಥೆ (ಜ). [2] ಉರುಗದಂ (ಜ). [3] ಡದ (ಜ). [4] ಕೊಳ್ವೆ (ಗ.ಜ).
[5] ಷಾನ್ನ (ಕ.ಖ.ಚ). [6] ಯುಕ್ತಿಗಪ (ಜ), ಯುಕ್ತಮಿರಲ (ಕ.ಖ.ಗ.ಚ).

ವಚನ—

ಅಡ್ಡತ್ರಿಪುಂಡ್ರ ಮಣಿಮಕುಟವೇಷದವರ ಕಂಡರೆ ನಂಬುವುದೆನ್ನ ಮನ, ನಚ್ಚುವುದೆನ್ನ ಮನ, ನಂಬುವುದೆನ್ನ ಮನ, ಸಂದೇಹವಿಲ್ಲದೆ. ನಿಮ್ಮ ನಂಬದವರ ಕಂಡರೆ ಹೊದ್ದೆ ಕೂಡಲಸಂಗಮದೇವ. ‖ ೧ ‖

ವಿಭೂತಿರುದ್ರಾಕ್ಷಿಯಿದ್ದವರ ಲಿಂಗವೆಂಬೆ ಇಲ್ಲದವರ ಭವಿಗಳೆಂಬೆ ಕೂಡಲ ಸಂಗಮದೇವ, ಸದ್ಭಕ್ತರ ನೀವೆಂಬೆನಯ್ಯ. ‖ ೨ ‖

ಬಲ್ಲೆ ನಿವರೆಮ್ಮ ಜಂಗಮಲಿಂಗವಹುದು ಹುಸಿ
ಯಲ್ಲ ಲಾಂಛನವುಳ್ಳುದೆಲ್ಲ ಸಂಗಮನಾಥ
ನಲ್ಲೆನ್ನಲಹುದೆಯೆನುತೆಮ್ಮಯ್ಯ ಗದ್ದುಗೆಯನಿಳಿದು ಸಾಷ್ಟಾಂಗವೆಱಗೆ।
ಎಲ್ಲ ನಿಂದಕರು ನಿಂದಿಸಿ ನಗಲು ಮಂಚಣ್ಣ
ಬುಲ್ಲವಿಸಿ ನೆಗೆನೆಗೆದು ತಾ ಹಾಸ್ಯದಿಂ ಭೂಮಿ
ವಲ್ಲಭಗೆ ಎಂದನಿಂದಱಿತಿರಾ ಜೀಯ ಪ್ರಧಾನನುತ್ತಮಭಕುತಿಯ ‖ ೧೮ ‖

ಮಣ್ಣು ಮಸಿಯಾಯ್ತು ಬ್ರಾಹ್ಮಣ್ಯ ಹೊಲೆಗಲಸಿತೀ
ಯಣ್ಣನಾಚರಣೆಯಿಂ ವೇದಶಾಸ್ತ್ರಗಳ ದೆಸೆ
ತಣ್ಣನಾಯ್ತಾಗಮಗಳಱಿತವ[1]ಱ[1]ಯಿತ್ತು ಮಹಿ[2]ಮನ ಮಹಿಮೆ[2]ಯೆಲ್ಲಱಿಯಲು।
ಹೆಣ್ಣಾಯ್ತು ರಾಜತೇಜ ಪ್ರಧಾನತ್ವಗ್ರ
ಗಣ್ಯತನ ಹುಡಿಯ ಹೊರಳಿತ್ತು ತಾ ಮೈಯಿಕ್ಕ
ಹಣ್ಣಿದನು ಬೆಸವಕ್ಕಳಿಂಗೆನುತ್ತರಸಿಗೆಂದವ ಬಸವಗಿಂತೆಂದನು ‖ ೧೯ ‖

ಗಾವಿಲರು ಬಡಗಿ ಚಮ್ಮಾರರಸಗರು ಬೋವ
ಭಾವಿ[3]ಸ್ಪ[3]ಡಕ್ಕಸಾಲೆಯರು ಕುಱುಬರು [4]ಕುಜಾ[4]
[5]ತಾವಳಿಗಳಂತ್ಯಜಾಂತ್ಯಜರೆನ್ನ[5] ದಿಂತೆಱಗಲಹುದೆ ಬಸವರಸರೆಯೆನೆ।
ನಾವು ಶಿವಶರಣರ್ಗೆ ಶರಣೆಂಬೆವೈಸುಳಿದ
ಗಾವಿಲರನಱಿಯೆವೆನೆ ಪರಮಾರ್ಥವೇ ನುಡಿಯಿ
ದೇವುದಿವದಿರದಾವ ಋಷಿಯರ್ಕಳೆನೆ ನಿನ್ನ ಋಷಿಯಧಿಕರೇ ಎನುತ್ತ ‖ ೨೦ ‖

ವ್ಯಾಸ ಸೂತೋದ್ಭವನು ಸಾಂಖ್ಯ ಶ್ವಪಚನು ಗಾರ್ಗ್ಯ
ವೇಸರಿಯ ಮಗನು ಕೌಂಡಿಲ್ಯ ನಾವಿದನು ದೂ
ರ್ವಾಸ ಪೊಚ್ಚಿಗ [6]ಸೂತ ಸಮಿತ[6] ಮಾತಂಗ ಮುನಿ ಮಾದಿಗಿತ್ತಿಯ ಪುತ್ರನು।

---

[1] ರಿ (ಕ.ಖ.ಫ.ಚ). [2] ಮಾನಮಱಿಪೆ (ಫ), ಮಾನಮಱಿ (ಗ). [3] ಸಿದ (ಕ.ಖ.ಗ.ಫ.ಚ). [4] ಕೂಡಿ (ಕ.ಖ.ಗ.ಫ.ಚ). [5] ವೆಲ್ಲಹಗರಣವನಾಡುತ್ತವರಿವರ್ಗೆಱಗ ಲಹುದೆ ಬಸವಯೆನಲು (ಕ.ಗ.ಫ.ಚ), ... ಬರಲವರಿಗೆಱಗುವರೆ ... (ಖ). [6] ಸನಕ ನವಿತ (ಜ), ಸೂತಸೌಮಿತ್ರ (ಕ.ಖ).

ಆಸುರದ ವಾಸಿಷ್ಟನೆಂಬ ವೇಶ್ಯೆಯ ಮಗನು
ಕಸ್ಯಪನು ಕಮ್ಮಾಱನಾಗಸ್ತ್ಯ ಕಬ್ಬಿಲನು
ಹೇಸಿರೇಕಿದಕೆ ಸಂಸ್ಕಾರ ಋಷಿಮೂಲವಿಂತಿದಕೇಕೆ ಮಾಱುತ್ತರ ॥ ೨೧ ॥

ಬೇಡಗುಲ ವಾಲ್ಮೀ[1]ಕಿ[1] ಪಾರಾಶ ಋಷಿಶೃಂಗ
ಕಾಡ ಹುಲ್ಲೆಯ ಮಗನು ಮಾಂಡವ್ಯಮುನಿಯೆಂಬ
ನೇಡಗಪ್ಪೆಯ ಮಗನು ಉಳಿದ ಮುನಿಜನನಗಳೆನಾಡಲೇಕವನಂತವು।
ಕೇಡುಗತನಂ ಬೇಡ ನಮ್ಮೊಡನೆ ನೀ ಹಲವ
ನಾಡಲಾಗದು ಮಂಚಿಮರಸರೇ ಶಿವನೊ[2]ಲವು[2]
ಗೊ[3]ಡಿ[3]ದಧಮಂ ಮುನೀಶ್ವರನೊಲುಮೆಯಿಲ್ಲದಿಹ ಮುನಿ ಕೀಳು ಮೇಲಱಿಯಲು
॥ ೨೨ ॥

ಸಾಕು ಸಭೆಯೊಳಗಾ[4]ಢ್ಯ[4]ತನವೇಕೆ[5]ನ[5]ಲು ಭಕ್ತ
ಯಾ ಕೆ[6]ಡೆಯ[6] ಕಥನವಾ[7]ರ್ನೀನಾರೆ[7]ನುತ್ತ ಮಗು
ಳ್ದಾ ಕೃಪಾಕರನು ಸದ್ಭಾವದಿಂ ಶರಣೆಂದು ನೋಡಲಾ ಹಗರಣಿಗರ।
ವ್ಯಾಕುಲಂ ನಿಂದು ಸಂಸಾರಭ್ರಮೆಗಳನೊದೆದು
ನೂಂಕಿದರು ಪಂಚಭೂತಾದಿ ಮದಗಳನೆಲ್ಲ
ನೀಕರಿಸಿದರು ನಿರಾಲಂಬನಿಱುಗೆಯ ನಿಜತಪಸ್ವಿಗಳು ತಾವಾದರು ॥ ೨೩ ॥

ನಿಂದಕರ ಧೂರ್ತಕದುರಾತ್ಮಕರನಜ್ಞಾನ
ದಂಧಕರ ಮೂಢರ ಮದೋನ್ಮತ್ತಮಾಯಾಪ್ರ
ಬಂಧಕರ ಕ್ರೂರರ ಕುಠಾರರ ಕೃತಘ್ನರನುಪೇಕ್ಷಿತರನಪದಸ್ಥರ।
[8]ಹೊ[8]ಂದಿದಪವಾದಕು[9]ಚಿ[9]ತರ ಕೃಪಣಹಿಂಸಕದು
ರಂಧಕಲ್ಮಷರ ಕಾಹುರರ ಬಾಹಿರಕಪಟ
ವೃಂದದಕ್ಕುಲಜದನ್ಯಾಯಿಗಳ ಸತ್ಕುಲಸುಹೃ[10]ತ್ತಪಸಿ[10]ಗಳ ಮಾಡಿದ ॥ ೨೪ ॥

ಆ ಜಡೆಗಳಾ ಕಂಥೆಯಾ ಲಿಂಗರುದ್ರಾಕ್ಷಿ
ಯಾ ಜ[11]ಪ ತಪಂ[11]ಭಸಿತವೆಲ್ಲ ತಾನಂತಾ ಮೃ
ಗಾಜಿನಂ ವೃಷಭಕೇತನ ಶಂಖ ಕಾಷಾಂಬರಾದಿ ಕೊಡೆ ಕರ್ಪರಗಳು।
ಮೂಜಗಂ ಮೋಹನಂಗೊಳಲು ನಿಶ್ಚಯ ಬಸವ
ರಾಜನ ನಿರೀಕ್ಷೆಯಿಂದಾಯ್ತು ಜಂಗಮಲಿಂಗ
ಪೂಜ್ಯತೆಯನೇನ ಬಣ್ಣಿಪೆನು ಸಾಕ್ಷಾಚ್ಛಿವನ ಸಾಕಾರ ರೂಪಾದುದು ॥ ೨೫ ॥

---

[1] ಕ (ಕ.ಖ.ಗ.ಘ). [2] ಲಗ (ಕ). [3] ಡ (ಖ). [4] ದ್ಯ (ಖ.ಗ). [5] ನಿ (ಜ).
[6] ಡಿದ (ಕ.ಖ). [7] ಗಿರ್ನಾರ್ಗೆ (ಕ), ಗಿರ್ನಾರ (ಖ). [8] ಒ (ಗ). [9] ಚ್ಚಿ (ಕ.ಗ).
[10] ತತಪಸಿ (ಜ), ತ್ತಪಸ್ವಿ (ಕ.ಥ.ಖ.ಚ). [11] ಸಾತಪ (ಕ.ಖ.ಘ), ಪಾತಷ (ಗ).

ದೃಷ್ಟಿಪರುಷದಿ ದೇಹಭ್ರಮೆ ಪ್ರಪಂಚ[1]ವು[1] ಲೋಭ
ದಷ್ಟಮದ ಸಪ್ತಧಾತೇಳು ವ್ಯಸನಂಗಳು
ತ್ಕೃಷ್ಟದರಿಷಡ್ವರ್ಗಕರ್ಮೇಂದ್ರಿಯಾದಿ ಕಿಲ್ಬಿಷವಿಷಯವೈದು ಮುಖದಿ।
ಹುಟ್ಟಿದಿಪ್ಪತ್ತೈದರಿಚ್ಛೆ ವೈ[2]ಶೀಕ[2]ರಣ
ದಟ್ಟುಳಿ ತ್ರಿಕರಣದಾಲಾಪ ವ್ಯಾಕುಲ ಕಪಟ
ಗೆಟ್ಟು ಬಳಿಕವರು ಶಿವಯೋಗದಾರೂಢದಿವ್ಯಜ್ಞಾನಯುತರಾದರು ॥ ೨೬ ॥

ಅಂಬರಕ್ಕೆಂಟನಿಲಗೀರೆಂಟು ಶೋಚಿಯ ವಿ
ಡಂಬ ಮೂವತ್ತೆರಡು ತದ್ವಿಗುಣಸಂಖ್ಯೆಯಾ
ಶಂಬರಕ್ಕಬ್ದಮೇಖಳೆಗೆ ನೂಱಿಪ್ಪತೆಂಟೆನಿಪ ದೇಹದ ವಿಕಾರ।
[3]ವಿಂಬುಗೆ[3]ಟ್ಟವು ಷಡಾಕ್ಷರದ ಸಾಮರ್ಥ್ಯವಾ
ರಿಂಬುಗೊಂಡವು ತನುವನವರು ಸುಜ್ಞಾನದ ಕ
ಳಾಂಬುಧಿಯ ಕನ್ನಿಕೆಯ ಕೈವಿಡಿದು ಸುಜ್ಞಾನಸಾರದಾಚಾರ್ಯರಾಗಿ ॥ ೨೭ ॥

ಪರಮಶಿವಯೋಗದಾಚರಣೆಯಿಂದುಪನಿಷ
ದ್ವರಪುರಾಣಾಗಮಾಗಮವೇದವೇದಾಂತ
ಶರಿರಗೊಂಡಂತೆ ಸದ್ವಾಕ್ಯಸಂತತಿಗಳಿಂದೊರೆದಮಲವರವಾಕ್ಯದ ।
ಪರಿವಿಡಿಯ ನವರಂಗಭ್ರಾಂತಿವಿಭ್ರಾಂತಿಗಳ
ಸುರುಚಿರಕಳಾವಿಲಾಸಕ್ಕೆಯಂತಾ ಭೂಮಿ
ವರನೋಲಗಂ ಭ್ರಮಾ ಭ್ರಮೆಹೊಯ್ದುದಗ್ನಿದುಡುಕ್ಯಹಿವಿಡಿದ ಕಪಿಗಳಂತೆ ॥೨೮॥

ಬೆಚ್ಚಿ ಬೆದಱಿಱಿದಱಿಯದಂತಿದೇನಿವದಿರೆ
ಲ್ಲಚ್ಚಕುಲಹೀನರಾವಱಿಯಲೆಮ್ಮವದಿರಿವ
ರುಚ್ಛೋಛ್ಯವಾಗಳೇ ತತ್ವಾರ್ಥತದ್ರೂಪಿನೊಳಹೊಱಗೆ ಪರಿಕಿಸುವಡೆ।
[4]ಅಚ್ಚ[4] ಮಾನಂಗಾಣಬಂದುದೆಂತೋ ಯೆನುತ
ಕರ್ಚಿಗೊಳುತಾರಿ ತಲೆಗುತ್ತೆ ಭೂಮೀಶನಾ
ನಿಶ್ಚಯಂಗಂಡು ಕೈಮುಗಿದು ಬಸವರಸರೇ ಬ[5]ಲ್ಲ[5]ರಿದನ್ನೆಸೆಂದೆನೆ ॥ ೨೯ ॥

ಗಂಧರ್ವಲೋಕದಿಂದಿಳಿದು ಶಿವಯೋಗಿಗಳು
ಬಂದರೋ ಮೇಣ್ಧಾತ್ರಿಯಿಂದೊಡೆದು ಬಂದು ರೂ
ಪಂದಳೆದ ಸ್ವಾಯಂಭುಗಳೊ ಚಿತ್ತು ದೇಹಗೊಂಡಾಕಸ್ಮಿಕಾಕರುಷಣ।

---

[1] ವ (ಖ.ಘ.ಛ.ಗ). [2] ಶಿಕಕ (ಖ). [3] ಮಿಂಚು (ಕ.ಖ). [4] ತತ್ಸ (ಜ).
[5] ಲ್ಲ (ಖ.ಜ).

ದಿಂದೊಗೆದುದೋ ಹಗರಣದ ಮಱೆಯ ಪರಬೊಮ್ಮ
ಬಂದುದೋ ಎನುತಲ್ಲಿ ಕೆಲರು ಕೆಲಬರಿದೇನು
ಪೇಂದ್ರಜಾಲವೊ ಎನಲ್ಸಭೆ ಕಣ್ಮನಕ್ಕೆ ಬೆಱ[1]ಗೇಱಿ[1]ತ್ತು ಸಿಡಿಲಂದದಿ ‖ ೩೦ ‖

ವಾದಿಗಳನುಡಿಯುಡುಗಿತಹಿತರೆದೆ ನಡನಡುಗಿ
ವೇದವೇದಾಂತಿಗಳ ಬಗೆ ಬ[2]ಳಿ[2]ದುದಾ ತರ್ಕ
ಸಾಧನೆ ಸಡಿಲ್ತು ವ್ಯಾಕರಣಿಗಳ ಶಬ್ದಸಂತಾನ ತಾನದು [3]ಅ[3]ಳಲಿತು ।
ಬೋಧೆ ಬೂದಿಯ ಕುಡಿತುಳಿದ ದರುಶನದ ಸಂ
ಪಾದನೆಯ ಶಠಕ ಕೊಂಡೆಯದಿಂಡೆಯರ ಕುಹಕ
ಬೀದಿಯರೆವೆಣನಾಯ್ತು ತಲೆಗುತ್ತಿ ನೆಲನ ಬಗೆ ಬಗೆದು ಹೊಗುವಂತಾದುದು ‖ ೩೧ ‖

ನಿಂದಕರ ಬಸುಱ ನಿಷ್ಠೆಯ ಕೈದುವಿಂ ಹೋಳಿ
ದಂದದಿಂದೆಳಲತೆಯು ಮೆಳೆವೊಕ್ಕ ದವದಾವ
ನಂದದಿಂ ದೂಷಕಕುಲಾರ್ಣವವಡಬ ಮೂಗು ಕೊಯ್ದು ಮೂದಲಿಸಿ[4]ಮತ್ತೆ[4] ।
ತಂದು ದರ್ಪಣದೋಱುವಂತೆ ರಾಯನ ಮುಂದೆ
ನಿಂದಿರಿಸಿಯೆಮ್ಮ ಜಂಗಮಲಿಂಗವಹುದೆ[5]ಯ[5]
ಲ್ಲೆಂದು ಪರಿಕಿಪ ಪ್ರೌಢರೊಳರೆ ಪರಿಕಿಪುದೆನಲು ಭೂಪನದಕಿಂತೆಂದನು ‖ ೩೨ ‖

ದಂಡಾಧಿಪಾ ನಿಮ್ಮ ಬಗೆ ಪಲವಱೊಳಗೊಂದ
ಕಂಡುದಿಲ್ಲದನಿದೆಂತಱಿವ[6]ರೈ[6] ಈ ನೆರೆದ
ಕೊಂಡೆಯರ ಮಾತಿನೊಳದೇನು ಹುರುಳುಂಟೆನುತ ಕಯ್ಯೆತ್ತಿ ಪೊಡಮಟ್ಟುಭೂ।
ಮಂಡಲೇಶ್ವರ ಗದ್ದುಗಿಂದೇಳೆ ಬಳಿಕವರ
ದಂಡಿಗೆಗಳೆ[7]ತ್ತ[7] ತೆರಳಲ್ಕೆ ಭಕ್ತಿಯ ಪ್ರಭಾ
ಚಂಡಕರಚಕ್ರ ಪ್ರತಿಬಿಂಬಿಸಲು ಸಕಲಶರಣರ್ಗೇಳುತುತ್ಸಹದೊಳು ‖ ೩೩ ‖

ಗುಡಿಗಟ್ಟಿ [8]ಬದ್ದರಂ ಮೊ[8]ಳಗೆ ಜಂಗಮ ಭಕ್ತ
ರೊಡನೊಡನುಘೋಯೆಂಬ ಗೀತವಾದ್ಯಂಗಳು
ಘುಡಿಪ ಮಂಗಳಪಾಠಕರ ಮಹಾಧ್ವಜಛತ್ರಚಾಮರ ಸಮಸ್ತಶುಭದ।
ಸಡಗರದಿನಿದಿರ್ಗೊಳಲಿಕಾ ಶರಣರಂ ಮುಂದೆ
ನಡೆಸುತ್ತ ನಿಜಗೃಹಕೆ ಬಂದಂತು ನಿಜವಾದ
ಒಡೆಯರ್ಗೆ ಪಾದಾರ್ಚನಾರ್ಚನಾರೋಗಣಾರಾಧನೆಗಳಿತ್ತವರನು ‖ ೩೪ ‖

---

[1] ಗೆಱಗಿ (ಜ). [2] ಗಿ (ಖ), ರಿ (ಜ). [3] ಕ (ಜ). [4] ದಂತೆ (ಕ.ಖ). [5] ಯಲಿ (ಕ), ಮತ್ತ (ಖ). [6] ರೇ (ಕ.ಖ.ಗ.ಚ.ಛ). [7] ತ್ತು (ಕ.ಗ.ಚ.ಛ). [8] ಬಂದರೆಮ್ಮೊ (ಖ).

ಪರಮಪಾವನಕೃತಾರ್ಥರ ಮಾಡಿ ಧರೆಯೆಲ್ಲ
ಬೆಱಗಾಗೆ ನಿಜಶಿವೈಕ್ಯರೊಳೆನಿಸಿ ಭಕ್ತಿಯಿಂ
ಪರವಿಲ್ಲೆನಿಸಿ ತೋಱಿ ಮೆಱೆದ ಬಸವೇಶ್ವರನ ಪರಿಯಿದುಪಮಾತೀತವ।
ನೊರೆಯಲೆನ್ನಳವೆ ನಿಮ್ಮಾತನಿರವಿಂತು ವಿ
ಸ್ತರಿಸಿಹುದು ಎಂದು ಪ್ರಮಥರ್ಗಾದಿನಂದಿಕೇ
ಶ್ವರ ಪೇಳ್ವ ತತ್ತ್ವಾರ್ಥದಸಕವಂ ಚಿತ್ತೈಸಿ ಶರಣರೊಲಿದೊಲುಮೆಯಿಂದ ॥೩೫॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಕಪಟವೇಷಮಂ ದಿಟಮಾಡಿ ಮೆಱೆದ ಸಂಧಿ॥೩೬॥

ಇಪ್ಪತ್ತನೆಯ ಸಂಧಿ

ಸೂಚನೆ—

ಶೂಲಿಯ ಪ್ರಸಾದವಿದೆಯೆಂದು ದೇವಲಕ ಹೂ
ಮಾಲೆಯಂ ತನ್ನ ಮುಡಿಯೊಳಗಿರಲು ತೆಗೆದು ಭೂ
ಲೋಲಗೀಯಲು ಕೂದಲಿರೆ ಜಱೆಯೆ ಕೇಶಾಂಕಲಿಂಗವ ಬಸವ ತೋಱಿದನು।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ‖ ೧ ‖

ಪರಮಪಾವನಗಣಾಧೀಶರಱುವತ್ತುಸಾ
ವಿರದ ಮಧ್ಯಸ್ಥಲದೊಳೊಪ್ಪುತಿಹ ನಂದಿಕೇ
ಶ್ವರನೊರೆದೊರೆಯ ಪೇಳ್ವೆ ಚಿತ್ತೈಸಿ ಸದುಭಕುತಿಯುಕ್ತರೊಲಿದೀ ಕಥನವ।
ಧರಣೀಶ ಬಿಜ್ಜಳನರೇಂದ್ರ ತಾನೊಂದು ದಿನ
ಪುರದುಪವನೋನ್ನತಿಯನಾದರಿಸಿ ಪರಿಮಳಂ
ಬೊರೆದ ನಾನಾಕುಸುಮಕುಲದಿ ಲೋಲಾಡಿ ಪೂರ್ವಪರಿಣತೆಯನೈದಿ ‖ ೨ ‖

ಉಭಯಪಕ್ಷದ ರಾಜಲಕ್ಷ್ಮಿಯ ವಿಲಾಸದತಿ
ವಿಭವವಿಸ್ತರದ ನಾನಾಪ್ರಯತ್ನದ ಪರು[1]ಠ[1]
ವಭಿಮತದ ವಿಜಯಾಂಗನೆಯ ಬಿನ್ನಣೋತ್ಕರ[2]ವೆನಿ[2]ಪ್ಪ ಮಹದೈಶ್ವರ್ಯವು ।
ನಭದಿಂದಿಳಿದುಮವನಿಯುಂ ಪೊಣ್ಮಿತೋ ಮೇಣು
ವಿಬುಧಸಾ[3]ಕ್ಷಿ[3]ಕವೊ ಎನೆ ಬಹಳಭಾಗ್ಯದ ಮಹಾ
ರಭಸದಲಿ ಮಗುಳ್ದು ಪುರವೊಗುತಿಪ್ಪ ರಾಜನ ವಿಡಂಬ[4]ನ[4]ವನೇಂವೊಗಳ್ವೆನು ‖೩‖

ವೊತ್ತದೊತ್ತೊತ್ತೆ ಯಿಡುಕುಱಿನ ಸಂದಣಿ ದುಱುಗಿ
ದುತ್ತಮಗಜಾಶ್ವ ರಥ ಪದಚರರ ಪರುಠವದ
ಸತ್ತಿಗೆಯ ಸಾಲ ಸಿಂಧದ ಛಡಾಳಿಪ [5]ಚಮರಜಾಲದೊಡನಾ ಮಣಿಮಯ[5] ।

---

[1] ಷ (ಪ.ಚ.ಖ). [2] ವ (ಕ.ಖ). [3] ತ್ವಿ (ಕ.ಖ). [4] ರ (ಖ). [5] ಚಮರಜಾಲ ವಣಿಯ (ಖ.ಗ), ಚಮರಚಾಮರದ ಚಾಳವಣಿಯ (ಜ).

ಮುತ್ತಿಗೆಯ ರಾಜರ್ಕಳೊಗ್ಗಿನಿಂ ಹಿಂದೆಮುಂ
ದಿತ್ತರದಿ ಬರೆ ಮಧ್ಯದಲ್ಲಿ ಮುತ್ತಿನ ಛತ್ರ
ವೆತ್ತಿ ರಾಜಿಸ ತುರಂಗಾರೂಢನಾಗಿ ಬಹ ಭೂಪತಿಯು ಬಲವಂಕದಿ ||೪||

ಅಂಧಕಾರದ ಕೂಡೆ ರವಿ ಪಾಪದೊಡನೆ ಪು
ಣ್ಯಂ ದುರಿತದೊಡನೆ ಧೂರ್ಜಟಿನಾಮ ಬಹಳಕೃತ
ನಿಂದೆಯೊಡನೊಡನೆ ನಿಜವಜ್ಞಾನದೊಡನೆ ಸುಜ್ಞಾನವಂದನೃತದೊಡನೆ |
ಒಂದಿ ನಡೆವಚಲಸೂನೃತದಂತೆ ಬಿಜ್ಜಳನ
ರೇಂದ್ರನೊಡನಮಲಭಕ್ತಿಯ ಭಾಗ್ಯಕಾರುಣ್ಯ
ಸಿಂಧು ಬಸವಾಂಕನುತ್ತಮದಶ್ವವೇಱ್ಯರಸನೊಡನೆ ಬರಬರಲು ಮುಂದೆ ||೫||

ಎಸೆವ ಕಲ್ಯಾಣಪುರದಾದಿಮೂಲಸ್ಥಾನ
ವೆಸೆದುದು ಮಹಾರಚನರಾಜಮಾರ್ಗದ ಬಲದ
ದೆಸೆಯೊಳುನ್ನತಕೇತಲೇಶಲಿಂಗದ ನಿಜದ ಭವನ ಕೈಲಾಸದೊಲಿರೆ |
ವಸುಧೀಶನಾ ಶಿವಾಲಯಸಮೀಪಕ್ಕೆ ಬರೆ
ಶಶಧರನ [1]ಶೇಖರನ[1] ಪೂಜಾವಿಧಿಯ ಪೂರ
ವಿಸಿ ಕವಾಟವನಿಕ್ಕಿ ತಮ್ಮಡಿ ಬರುತ ಕಂಡನವನಿಪನ ಕಟ್ಟಿದಿರೊಳು ||೬||

ಮಗುಳೆ ದೇವಾಲಯಕ್ಕೈದಿ ವಹಿಲದಲಿ ಬೀ
ಯಗದೆಗೆದು ಶಿವನ ಪ್ರಸಾದಮಾಲೆಯನು ತಹ
ಬಗೆಗೂಡದಾ ತಪೋಧನ ತಿರುಗಿ ಮುಸುಕಿಟ್ಟು ತನ್ನ ಜಡೆಮುಡಿಯ ಪೂವ |
ತೆಗೆದೆರಡು ಕೈಯೊಳಾಂತವಸರಕೆ ತವಕದಿಂ
ದಗಜಾಧಿಪನ ಪ್ರಸಾದವ [2]ಚಿತ್ತಯಿಸಿ[2] ಯೆನ
[3]ಲ್ಮೊಗನೋಡುತೀ[3]ಸಿಕೊಂಡರಸ ಭಾವಿಸಲು ನಿರ್ಮಾಲ್ಯದೊಳು ಕೇಶವಿರಲು ||೭||

ಕೂದಲೀಶನ ಪ್ರಸಾದದೊಳೆಂತು ಬಂದುದು ತ
ಪೋಧನ ಎನುತ್ತಲಾಕ್ಷೇಪಿಸುತಿವನ ಕರವ
ಛೇದಿಸೆನುತೆಲ್ಲರಿಗೆ ತೋ[4]ಱಿ[4] ಬಸವಣ್ಣನಂ ನೋಡಿ ನಾಸ್ತಿಕದಿ ನಗುತ |
ಬಾಧಕಿ ಶಿವದ್ರೋಹಿ ಗೊರವನನ್ಯಾಯವಿದ
ನಾದರಿ[5]ಸಿ[5] ಲಿಂಗಮಸ್ತಕದಲ್ಲಿ ಕೇಶವುಂ
ಟಾದಡದ ತೋಱಲಿಲ್ಲದೊಡಿವನ ಪ್ರಹರಿಸೆಂಬರಸಿಗೆ ಪ್ರಧಾನರತ್ನ ||೮||

---

[1] ಶಂಕರನ (ಕ.ಖ). [2] ಚಿತ್ತವಿಸಿ (ಖ). [3] ಲ್ಯಾಗನೋಡೀಸಿ (ಖ.ಚ).
[4] ರಿಸಿ (ಖ). [5] ಸು (ಜ).

ವಾಜಿಯಿಂದಿಳಿದಾ ತಪೋಧನನ ಕೈವಿಡಿದು
ರಾಜನಾಜ್ಞೆಯ ನಟಿಸುವಂತುಪಾಯದಿ ನೂಂಕು
ತೋಜಿಸಿದ[1]ನೊ[1]ಯ್ಯನೀ ಲಿಂಗಕ್ಕೆ ಕೇಶವುಂಟೇನೆಂದು ಮಗುಳ್ದಾತನ ।
ರಾಜನಿದಿರೊಳು ತಂದು ನಿಲಿಸಿ ತಲ್ಲಿಂಗಕೆ ಶಿ
ರೋಜವುಂಟೆನುತಿಹನೆನಲು ನೃಪ ಇದೇಂ ಬಸವ
ರಾಜ ಶ್ರುತದೃಷ್ಟಾನುಮಾನಕ್ಕೈದದವನ ವಚನರಚನೆಕಪಟಿವನನು ‖೯‖

ಮಾತನಾಡಿಸಿ ತಂದು ಮಗುಳ್ದವನ ನಿಲಿಸಿ ನೀ
ಮಾತನಾಡಿಪ ಮರುಳು ನೂಂಕು [2]ಈ ಅನ್ಯಾಯಿ[2]
ಗೇತಱ ವಿಚಾರ ಲಿಂಗಕ್ಕೆ ತಲೆನವಿರುಂಟೆ ಪಾಷಾಣಪಲ್ಲವಿಪುದೆ ।
ನೀತಿಬಾಹಿರನ ನುಡಿಗೇಳ್ವರೇನೀ ನಿಮ್ಮ
ಕೇತಲೇಶಗೆ ಕೂದಲುಂಟೆ ನಾವಿಂದು ಬಂ
ದಾತಗಳೆ ಸಟೆಯೇಕೆನುತ್ತೆ ದಂಡಾಧಿಪನೊಳರಸನಾಕ್ಷೇಪಿಸಿದನು ‖೧೦‖

ಕಾಮಧೇನುವ ಕಱೆವರಲ್ಲದದಱೊಳುಹನಱ
ಮಾಮಿಷಕೆ ಕೆಚ್ಚಲಂ ಸೀಳ್ವರೇ ಕಲ್ಪತರು
ಭೂಮಿಯೊಳು ಜನಿಸಲಾಶ್ರೈಪರಲ್ಲದೆ ಮೊದಲ್ಗಡಿದು ಫಲಗೊಯ್ವರೊಳರೆ ।
ಹೇಮವಳಕೆಗೆ ಲೋಹಪರುಷ[3]ಸ್ಪರ್ಶಂಗೈ[3]ಯ
ಲಾ ಮಹತ್ವವನೊಡೆದು ಕರಗಿಸೊಳುಹಱಸುವರೆ
ವ್ಯೋಮಕೇಶಗೆ ಕೇಶವುಂಟೆನಲು ನೋಳ್ಪರಲ್ಲದೆ ತಾಪಸನ ವಧಿಪರೆ ‖೧೧‖

ಭೂರುದ್ರ ಭೂಪೇಂದ್ರ[4]ಗು[4]ಪನಿಧಿಯ ಶಬ್ದಸಂ
ಚಾರೋಪದೇಶ[5]ವೀಯಲ್ಕಾಗಲ[5]ದಕೇನು
ವಾರಣಾಶಿಯೊ ಗಯೆಯೊ ಕೇತಾರವೋ ದೂರಪ್ರಾಂತವೋ ಹುಸಿನುಸುಳನು ।
ಪಾರಮೈದಿಪೆನೆನುತ ನೃಪತುರಗವಿಳಿದು ಶಿ[6]ವ[6]
ಗಾರ ಕೇಳ್ತಂದು ರಂಗಾಂಗಣದಿ ನಿಂದೊಳಗ
ನಾರಯ್ಯೆ ಪರಿಪರಿಯಲಿಂಡೆದಂಡೆಯ ಪೂಜೆ ರಾಜಿಸುತಿರಲ್ಕಂಡನು ‖೧೨‖

ರಂಜಿಸಿದ ರಜನೀಕರಾಂಶುಮಾಲೆಗಳಂತೆ
ಕಂಗೊಳಿಸಿ ಶುದ್ಧ ಶುಭ್ರತೆವಡೆದ ಪುಂಡರೀ
ಕಂಗಳಿಂ ಪೂಜೆವೆತ್ತಿಹ ಪುರಾರಿಯ ಕಾಣುತಾ ತಪೋಧನನ ಕರೆದು ।

---

[1] ನ (ಜ). [2] ನ್ಯೂಕನ್ಯಾಯ (ಜ). [3] ಸ್ಪರ್ಶನಗೈ (ಕ.ಖ.), ಪರುಷವಗೈ (ಜ).
[4] ರು (ಕ.ಖ.ಗ.ಘ.ಚ.ಛ). [5] ದುಪಮೆಗೆಯಾದಡ (ಜ). [6] ವಾ (ಕ.ಖ.ಗ.ಘ.ಚ.ಛ).

ಕಂಗೆಟ್ಟು ಕಾ[1]ಲ್ಗೆ[1]ಡದಡಹುದೆ ನೀನೀಗಳೀ
ಲಿಂಗಮಸ್ತಕದಲ್ಲಿ ಕೇಶಂಗಳುಂಟೆನಿ
ಪ್ಪಂಘವಣೆಯಳವೇನು ತೋಱುತೋಱೆನಿಪಂಕೆಝುಂಕೆಯವಸರಗಾಣುತ ॥೧೩॥

ಉರವಣಿಸಿ ಗುಪ್ತ ಹರಿಭಟ್ಟ ಕೊಂಡೆಯ ಮಂಚಿ
ಮರಸ ಹಾಸ್ಯದ ಬೊಮ್ಮ ಕುಹಕಿ [2]ನೇಮರಸಸಿಂ
ತರಿದಿನೊಳಗಱುದಾವಿ[2]ನೋದಿ ರಾಘವನೋಲೆವೆಗ್ಗಡಿಗಳೆನಿಪಱುವರು ।
ಹರಿತಂದು ರಾಯನುತ್ತರದ ಕಡೆವಾತುಗಳ
ಹುರಿಗೂಡಿ ತಾವು ಮೇಲಿಕ್ಕಿಕೊಂಡಂಜುತಿಹ
ಗೊರವನಂ ಪಿಡಿದು ನೂಂಕುತ ಒಳಯಿಕೊತ್ತಿಕೊಂಡೊಯ್ದುಖೋಖೋಯೆನು
[ತಿರೆ ॥೧೪॥

ಆಳಿಗೊಳುತೊಬ್ಬರೊಂದೊಂದಕೃತ್ಯದಿ ನುಡಿದು
[3]ಬೇ[3]ಳುವೊಡಲ್ಕೆ ಭ್ರಮೆವೊಯ್ದಾ ತಪೋಧನನು
ಮೇಲುತ್ತರಂಗಾಣದಿರಲು ಆ ಷಟ್ಕುಮಂತ್ರಿಗಳುಬ್ಬಿ ಗರ್ಜಿಸುತ್ತ ।
ಗೂಳಿಯೊಳ್ಮೊಱೆಯ ಗೊರವನೊಳು ಸತ್ಯವನು ಹಿ
ತ್ತಾಳೆಯೊಳೊರೆಯ ಕಾಣ್ಬರುಂಟೆಯೆಂದಾ ಭೂಮಿ
ಲೋಲನಿದಿರೊಳು ನಿಲಿಸಿ ಭ್ರಷ್ಟಿಕ್ಕಲರಸು ಬಸವರಸನನು ಮೂದಲಿಸಿದ ॥೧೫॥

ಹೊಳ್ಳಾಯ್ತು ನಿಮ್ಮ ನುಡಿಯಿನ್ನು ಹೊಳಕಳವುಳ್ಳ
ಡೆಳ್ಳೆನಿತು ನಟಿಸಿ ನಾಟ್ಯದೊಳು ನಮ್ಮಿಂದಲೇಂ
ಹೊಲ್ಲೆಯಿಲ್ಲೆಲೆ ಯೆಂಬ ರಾಜಂಗೆ ರಾಜಾರ್ಕ ಶಿಖಿನಯನ ಬಸವನುಸುರ್ದ ।
ಕೊಳ್ಳೆಗರ ಕಾಹುರರ ನುಡಿಗಂಜುವೆವು ಭೂಮಿ
ವಲ್ಲಭ ನಿರೀಕ್ಷಿಸೆಂದೆರಡು ಕೈವಿಡಿದು ಶಿವ
ನಲ್ಲಿಂಗೆ ಕೊಂಡೊಯ್ದು ತೋಱಿದನದೇಂವೊಗಳ್ವೆ ಪರುಷಪಂಚಮುವದನನು ॥೧೬॥

ನಡೆ ಪರುಷ ನುಡಿ ಪರುಷ ದೃಷ್ಟಿ ಪರುಷವು ಹಸ್ತ
ವಿಡೆ ಪರುಷ ಮನ ಪರುಷವಿಂತು ಪಂಚಮಪರುಷ
ವಡೆದಿ ಹೆಮ್ಮಯ ಬಸವದಂಡಾಧಿಪನು ಲಿಂಗಮಸ್ತಕಾಗ್ರವ ನೋಡುತ ।
ತುಡುಕಿದನು ಪೂಜಾಪ್ರಬಂಧಮಧ್ಯವ ಬಗೆದು
ಪೊಡವಿಪ[illegible] ನೋಡೆನುತ್ತೆರಡು ಕೈಯಿಂ[4]ತುಱುಬ
ಹಿ[4]ಡಿದೆತ್ತುವಂದದಿಂದೆತ್ತಿ ತೋಱಿದ ವ್ಯೋಮಕೇಶಗೆ ಮಹಾಕೇಶವ ॥೧೭॥

---

[1] ಳ್ಗೆ (ಜ). [2] ವ್ಯಾಮಯ್ಯಸಂತರಿದಿನೊಳಗಱುವಾವಿ (ಜ), ನೇಮರಸನಿಂತರಿದಿ ರಿನೊಳಗರಿದಾದ್ವಿ (ಕ.ಖ.ಗ). [3] ಬೋ (ಗ). [4] ದತುಱುಬ್ಬಿ (ಕ.ಗ.ಘ.ಚ.ಛ).

ಕೃತ್ರಿಮವಿದ[1]ಲ್ಲೆಲೇ[1] ಲಿಂಗಮಸ್ತಕದಲ್ಲಿ
ತೆತ್ತಿಸಿದ ಕೌಟಿಲ್ಯವ[2]ಲ್ಲೆಲೇ[2] ಬೇಳುವೆಯ
ಭಿತ್ತಿಯಲ್ಲೆಲೆ ನೋಡುನೋಡೆಂದು ಬಗೆಬಗೆದು ವಿಸ್ತರಿಸಿ ತೋಱಿ ಮತ್ತೆ ।
ಅತ್ತಿತ್ತ ಪೂಜೆಯಂ ಪರಿಹರಿಸಿ ನಿಜರೂಪು
ವೆತ್ತಿಹ ಸ್ವಯಂಭುವಿಗೆ ಪ್ರಾಪಂಚಿಕದ ಕೇಶ
ವೊತ್ತಿದ[3]ಲೆಲೆ[3]ೀ ಎಂದು [4]ಮಗುಳ್ದುಮಗುಳ್ದ[4]ರಸಂಗೆ ಬಿಚ್ಚಿಬೆಚ್ಚರ[5]ದಿ[5] ತೋಱಿ
॥೧೮॥

ಅಂಗಜಾರಿಯ ಕಪಾಲವನೊಡೆದು ಮೂಡಿದ ಬೆ
ಡಂಗ ಕಾಣುತ್ತ ಬಿಜ್ಜಳಕ್ಷೋಣಿಪಾಲನಿವ
ರಂಗವನಜಾದಿಗಳು ತಿಳಿವೊಡನುಪಮವುಳಿದರಳವೆ ಎನುತಾಶ್ಚರ್ಯದ ।
ಇಂಗಡಲೊಳದ್ದು ಗಂಭೀರತೆಱದರ[6]ಸಾಗ[6]
ಲಂಗುಣಸ್ನೇಹಮನದೊಳು ಕೌತುಕಂಬಡುತ
ಲಿಂಗಕೆಱಗಾ ದೇವಲಕಗೆ ಕೈಮುಗಿದು ಬಸವೇಶ್ವರನ ಕೊಂಡಾಡಿದ ॥೧೯॥

ವಾರಿಜದ ತಂತು ಬಂಧನಕೆ ಬಳಲ್ವುದೆ ಮತ್ತ
ವಾರಣವು ನುಲಿವಲೆಗೆ ಬೀಳ್ವುದೇನತ್ಯುಗ್ರ
ವೀರಪಂಚಾಸ್ಯ ರಜ[7]ನಿಕರಗಟ್ಟಿ[7]ಗೆ ಮರೀಚಿಕೆಯುದಕವೇಂ ನಿಲುವುದೆ ।
ನಾರಕದ ಘರ್ಜನೆಗೆ ಪಂಚಾಕ್ಷರೀಮಂತ್ರ
ತೇರೈಸುವುದೆ ನಾವು ನೆಗಳ್ದ ಶ್ರುತದೃಷ್ಟಗಳ
ನೀರಕ್ಕ[8]ರಂ[8] ಮಾಳ್ಪ ಮಹಿಮನೊಳು ಮತ್ಸರವೆ ಎನುತ ನೃಪ ಬೆಱಗಾದನು ॥

ಕರೆದೆಲ್ಲರಿಗೆ ತೋಱಿ ಮಂತ್ರಿದುರ್ಮಂತ್ರಿಗಳು
ಪರಿವಾರ ಪುರಜನಾದಿಗಳೆಲ್ಲ ಪರಿಕಿಸು
ತ್ತಿರಲಾ ನರೇಂದ್ರ ಪುಳಕಾಂಕುರೋತ್ಸಹದಿ ತಾಂ ಪೊಡಮಡುತ ಪೂರ್ವದಲ್ಲಿ ।
ಪರಮಾರ್ಥಕೇತಲೇಶನ ನಾಮವಿಂದು ಹೊಸ
ಪರಿಯಾಯ್ತು ಕೇಶಲೇಶ್ವರನೆಂದು ಗುಣನಾಮ
ಕರಣ ಪ್ರಭಾಡಂಗುರಂಬೊಯ್ಸುತರಮನೆಗೆ ತಿರುಗುತಾ ಬಸವಾಂಕಗೆ ॥೨೧॥

ಕರಸರೋರುಹಸಂಪುಟಂಗೈದು ನಿಜನಿಳಯ
ಕರಸು ತಿರುಗಿದನಿತ್ತ ಭಕ್ತಿಯ ಬಹಳಭಾಗ್ಯ
ಶರಣಾಗತಮಳರಕ್ಷಾಮಣಿಯೆನಿಪ್ಪ ಮಾನವಮಹಾದೇವನೆನಿಪ ।

---

[1] ಲ್ಲಲ್ಲ (ಖ). [2] ಲ್ಲಲ್ಲ (ಖ). [3] ಲ್ಲಲೆ (ಖ.ಗ.ಚ). [4] ಮಗುಳೆಮಗುಳ (ಖ).
[5] ಸಂಗೆ (ಕ). [6] ಸಾಂಗದಂ (ಜ), ಸಾಲಲಂ (ಗ). [7] ನಿಕರಗಟಗೆ (ಖ.ಫ).
[8] ನಂ (ಕ.ಗ).

ಹರನ ಮುಂದೆತ್ತುತುತ್ಸಹದ ತಾರ್ಕಿಕವಿಜಯ
ಸಿರಿಯ ಬಿರುದಿನ ಪತಾಕೆಗಳ ಬಹುವಾದ್ಯವಿ
ಸ್ತರದಿ ಮಾಹೇಶ್ವರರ್ಗುಡಿಗಟ್ಟಿ ಜಯಜಯಸ್ವನಶರಧಿ ಘೋಷಿಸಲ್ಕೆ ॥೨೨॥

ಹರುಷವಾರಿಧಿಗೆ ಮಂಗಳದ ತೆರೆ ಯುತ್ಸಹದ
ಪರಿವಾಹ ಉನ್ನತೋನ್ನತ ಬುದ್ಬುದದ ವಿಬುಧ
ನೊರೆ ನಿಜದ ಗಂಭೀರ ಜಯಘೋಷನರ್ಘ್ಯಂಗಳೇ ಎಸೆವ ಸದ್ಗತಿಗಳು ।
ಭರಿತವೇ ಭಕ್ತಿ ಪರತಂತ್ರವದರೋಟವಾ
ಗಿರಲೆಶಸ್ಸೆನಿಪ ಭೈತ್ರದೊಳು ನಿಮ್ಮಾತ ತ
ನ್ನರಮನೆಗೆ ಹೋದನೆಂದಾದಿವೃತ್ತಾಂತಮಂ ನಂದಿ ಪ್ರಮಥರ್ಗೊರೆದನು ॥೨೩॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಕೇ[1]ಶ[1]ಲೇಶಲಿಂಗವ ಬಸವ ಮೆಱೆದ ಸಂಧಿ ॥೨೪॥

---

[1] ತ (ಜ).

ಇಪ್ಪತ್ತೊಂದನೆಯ ಸಂಧಿ

ಸೂಚನೆ—

ವರಭಸಿತಲಸಿತ ಕೂಷ್ಮಾಂಡ ಶಿವದರುಶನ
ಕ್ಕೊರೆ[1]ವಂದೊಲ[1]ವೆ ಯಿವರೊಳೊಳವೆ ಲಿಂಗಂಗಳಿಂ
ಬರಸಿಂಗೆ ಪ್ರತ್ಯಕ್ಷಶಶಿಕಾಂತಲಿಂಗಮಂ ಮಾಡಿ ತೋಱಿದ ಬಸವನು ‖

ಶ್ರೀಮದಖಿಳಾಗಮಾರ್ಣವ ಮಥನಗೈದುನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾ ಮಹಾವಸ್ತು ವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ‖೧‖

ಆದರಿದರನ್ವಯವ ಕೇಳಿ ಪ್ರಮಥರ್ನೀವು
ಮೇದಿನಿಪ ಬಿಜ್ಜಳನರೇಂದ್ರನೊಂದಿನ ಸುಖವಿ
ನೋದದಿಂ ಸಕಲಸೇನಾಸಮೇತದಿ ಸರ್ವಸಂಭ್ರಮಾಡಂಬರದೊಳು ।
ಹೋದ ವೈಯಾಳಿಯ ನಿಜಸ್ಥಳಕೆ ರಾಜರಚ
ನಾದಿಗಳ ಮೆಱೆದು ಮಗುಳ್ದೆಸೆವ ಮಂಗಳಪುರವ
ರಾಧಿಪ ಪ್ರವೇಶಿಪ ವಿಲಾಸೋನ್ನತಿಯ ಸೊಬಗನೇನನಭಿವರ್ಣಿಸುವೆನು ‖೨‖

ತೇಜಿಗಳ [2]ತಟ್ಟನೊಡ[2]ಹಾಯ್ವ ಗಜಘಟೆಗಳ [3]ಸ
ಮಾಜ[3]ಗಳ ನೂಂಕುತೈದುವ ಮಹಾರಥರಥಿಕ
ರಾಜಿಗಳನಣೆದು ದಾಂಟುವ ಪದಾತಿಗಳನೊತ್ತೊಡಹಾಯ್ವ ದಂಡಿಗೆಗಳ ।
ರಾಜರಾಜರ ಮಂತ್ರಿಕುವರ ಸಚಿವರ ಶಿಷ್ಟ
ರಾಜಪ್ರಮುಖರ ತಿಂಥಿಣಿಯ ಸುಸಾವಂತಪ
ಭ್ರಾಜಿತಮಹಾಛತ್ರಚಾಮರಪತಾಕೆಗಳ ಸಂದಣಿಯ ಗೊಂದಣದೊಳು ‖೩‖

ಹೊಡೆವ ಭೇರಿಗಳ ನಿಸ್ಸಾಳ ತಮ್ಮಟೆ ಲಗ್ಗೆ
ಗೊಡುವ ಕರಡೆಗಳ ಕೈತಾಳ ಬೊಂಬುಳಿಗಳು
ಘುಡಿಪ ಮುರಜೆಗಳ ವೀರಣ[4]ವಾದ್ಯ ಕೊಂಬು ಚುಂಬಕ[4] ತಂಬ ನಾಗಸರದ ।

---

[1] ವಂದೊರಿ (ಘ). [2] ತಟನೊಡನೆ (ಖ). [3] ಸಾಮಜಂ (ಕ). [4] ಮ (ಕ).
[5] ವಾದಿಕಬುಬೊಬಕ (ಕ).

ಗಡಣ ಕಹಳೆಗಳ ಮಂಗಳಪಾಠಕರು ಹೊಗಳ್ವ
ನುಡಿಯು ಚಪ್ಪರಿಪ ಕಂಬಿಯು ಚರರ ಕಳಕಳದ
ನಡುವೆ ವಿಭ್ರಾಜಿತಗಜಾರೂಢನಾಗಿ ಬಹ ಬಿಜ್ಜಳನರೇಂದ್ರನೊಡನೆ ॥೪॥

ಎರಡನೆಯ ಮೃಡನ ಪ್ರತಿಬಿಂಬ ಲೋಕೋಕ್ತವಹ
ತರಣಿತಾರಾಗಣಂಗಳ ನಡುವೆ ಬಪ್ಪಂತೆ
ಪರಮಪಾವನತೆ ಮನುಜತೆವಡೆದೊಲಪ್ರತಿಮ ಬಸವದಂಡಾಧೀಶನು ।
ಧರಣಿಪನ ದಕ್ಷಿಣದಿಶಾವಳಯದಲಿ ಹರುಷ
ವೆರಸಿ ಸತ್ಕಥನಕಾರಣವಾರ್ತೆಗಳನು ಹರ
ಶರಣರೊಳು ಶಬ್ದಸಾಹಿತ್ಯಭಾವದಿ ಪುರಾತನಪೂರ್ವಸಂತತಿಗಳ ॥೫॥

ವಿರಚಿಸುತ್ತಾನಂದಭಾವಭವಶರಣರೊಳು
ವೆರಸಿ ಭಸ್ಮಾಂಗಿಗಳ ಲಿಂಗರೂಪೆನಿಪ ಬಸ
ವರಸರ ನುಡಿಯ ಕೇಳಿ ಮಂಚಣ್ಣನದಕೆ ತಕ್ಕುಪಮೆಯನುಪಕ್ರಮಿಸುತ ।
ಬರಬರಲು ಕಲ್ಯಾಣಪುರದೊಳರಮನೆಗಾಗಿ
ತಿರುಗಿದ ವಿಮಲಸೋಮವೀಧಿಯ ಮುಖಾಂತರದೊ
ಳಿರೆ ಸದನವೊಂದ[1]ಱಗ್ರ[1]ದಲಿ ಕೂಷ್ಮಾಂಡಂಗಳಿರೆ ಕಂಡು ಭೂವರಂಗೆ ॥೬॥

ಅಱುಪಿದನೆಥಾಪ್ರಸಂಗದ ನಿಱುಗೆ ನಿಜವಾಗಿ
ಕಱಿಗೊಂಡು ಕುಂಬಳದ ಕಾಯಿ ಭಸಿತಂದಳೆದು
ಮೆಱೆವುತಿವೆಯುವು ತಮ್ಮ ಜಂಗಮವೆ ಲಿಂಗವವಕಿಹವೆ ಯೆನುತಂ ಬಸವನ ।
ಅಱಿತದ ವಿಡಂಬವಿಲ್ಲಱಿಯಬಹುದೆನೆ ನೃಪಂ
ತೆಱನಱಿಯದೆಲೆ ಬಸವದಣ್ಣಾಯಕರೆ ನೋಡಿ
ಮೆಱೆವ ಭಸ್ಮಾಂಗಿಗಳೊಲಿವೆಯುವಕೆ ಲಿಂಗವೆಲ್ಲಿಹವು ನಿಮ್ಮಾಗಮದಲಿ ॥೭॥

ಎನುತಲ್ಲಿ ನಿಂದು ನಾಲ್ಕೆರಡು ಕೂಷ್ಮಾಂಡಗಳ
ಮನೆಯ ಮೇಲಿರೆ ತೆಗೆದು ತರಿಸಿ ತೋಱಲ್ಕೆ ಪಾ
ವನರೂಪ ಬಸವ ಕೈಕೊಂಡು ಲಿಂಗ[2]ಪ್ರಾಣಸಂಗವಿಲ್ಲದೊಡದೆಂತು[2] ।
ತನು ವಿಮಲಭಸಿತವಿಲಸಿತಗಾತ್ರವಹವೆನಲು
ಮನುಜೇಂದ್ರ ಗಹಗಹಿಸಿ ನಗುತ ಭ್ರಮೆಭಸಿತವಿ
ಟ್ಟನು ಮರುಳನೆಂಬುದಕೆ ದೃಷ್ಟವಿದು ಯೆನುತ ಕೈಹೊಯ್ದು ಕಾಹುರದಿ ಮತ್ತೆ ॥೮॥

---

[1] ಗಲ (ಕ.ಖ.ಚ). [2] ದೃಷ್ಟವಿದುಃಯೆನುತಕ್ಕೈಹೊಯ್ದು ನುಣಸಂಗವಲ್ಲದೊಡದೆಂತು ತನ್ನ (ಖ), ಪ್ರಾಪ್ಷವಿದುಃಯೆನುತ ಕ್ಕೈಹೊಯ್ಯುಣ ಸಂಗವಿಲ್ಲದೊಡದೆಂತು (ಕ.ಚ).

ಮನವುಕ್ಕಿ ನಗುತ ನಾಲ್ದೆಸೆಯ ನಿಟ್ಟಿಸಿ ಹಾಸ್ಯ
ವನು ಮಾಡೆ ಸರ್ವಜನವೆಲ್ಲರಸನೆಂಬಂತೆ
ತನತನಗೆ ಮರುಳಾಡಿ ಮಾಯಾಪ್ರಬಂಧಬಂಧನ[1]ಗೆಡದು[1]ಭಕ್ತಿಕುಳದ ।
ಅನುವನೆಂತಱಿಯಲಹುದೆಂತು ತೋರ್ಪನೊ ಲಿಂಗ
ವನು ಎನುತ್ತಿರಲು ಬಸವೇಶನಮೃತೇಕ್ಷಣದ
ಕೊನೆಯ ಮೊನೆಸೋಂಕಿನಿಂ ಲಿಂಗಂಗಳಾಗಲನುಗೆಯ್ದವಾ ಫಲಹೃದಯವು ॥೯॥

ಹಸ್ತ ಪರುಷವು ದೃಷ್ಟಿ ಪರುಷವಾತನ ಶಬ್ದ
ವಿಸ್ತರವೆ ಪರುಷವಾ ಘ್ರಾಣಶ್ರೋತ್ರಾದಿ ಮನ
ವಸ್ತುಸಕಲೇಂದ್ರಿಯವೆ ಪರುಷವೆಂದಱಿಯದಜ್ಞರುಗಳಂ ತಿಳುಪಲೆಂದು ।
ಸ್ವಸ್ಥಿರಶಿವೈಕ್ಯನಿಷ್ಠಾಪರನು ಕೂಷ್ಮಾಂಡ
ಮಸ್ತಕದೊಳೆರಡು ಕರಕಮಲಮೃತಸಂಪುಟ
ನ್ಯಸ್ತನಂಗೈದು ಸಂಗಮನಾಥ[2]ನಿಲ್ಲೈಲ್ಲ[2]ದಿಲ್ಲೆನುತ ಕೈಯೆತ್ತುತ ॥೧೦॥

ಭಸಿತಭೂಷಿತನಂಗದೊಳು ಲಿಂಗರುದ್ರಾಕ್ಷಿ
ಯೆಸೆಯೆ ಧರಿಸಿಹನಂಗದೊಳು ಲಿಂಗ ಗುರುಕರುಣ
ದೆಸಕವುಳ್ಳವನಂಗದೊಳು ಲಿಂಗ ಶಿವಮಂತ್ರಮುಖಮೂರ್ತಿತನೊಳು ಲಿಂಗ ।
ಮಿಸುಪ ಶಿವಲಿಂಗಧಾರಕನಂಗದೊಳು ಲಿಂಗ
ವೊಸೆದಿಪ್ಪುದಕ್ಕೆ ಸಂಶಯವೆ ಸಂಗಮನಾಥ
ಕುಸುಮಾಂಡದೊಳು ಭರಿತನೆಂಬ ನಿಜನಿಷ್ಠೆಯ ಪ್ರತಿಜ್ಞೆಯಂ ಬಸವೇಶನು ॥೧೧॥

ನುಡಿಯಬಹುದೀ ಭಸಿತಭೂಷಿತಾಂಗದೊಳು ಶಿವ
ನೆಡೆಗೊಂಡಿಹನು ಕಾಯೊಳೆಲ್ಲಿ[3]ಹು[3]ದು ಸಚೆತನಂ
ಬಿಡು ಬಯಲ್ಗೆ ಲಿಂಗವಿವಕೆಲ್ಲಿಹವು ತೋಱೆನುತ ಪೊಡವೀಶನಾಲ್ಕೆರಡನು ।
ಒಡೆಯ ಹಾಯ್ಕಿಸಲಿಂದುಬಿಂಬಂಗಳವನಿಯಿಂ
ಒಡೆದು ಮೂಡಿದ ಮಾಳ್ಕೆಯಿಂದ ತುಂಬಿದ ಬೀಜ
ಕಡುಚೆಲುವ ಚಂದ್ರಕಾಂತದ ಲಿಂಗವಾಗೆಲ್ಲ ತೊಳಗಿ ಬೆಳಗುತ್ತಿರ್ದವು ॥೧೨॥

ಅವನಿ ನೆಱೆ ಬೆಱಗಾಗಲಂಗೈಯೊಳಿಕ್ಕಿಕ್ಕಿ
ಭುವನಾಧಿಪತಿ ನೋಡು ನೋಡಿ[4]ದೆನ್ನಯ ದೃಷ್ಟ[4]
ವಿವಱೊಳು ಕಳಂಕವೇನುಂಟು ಪರಿಕಿಪ ಪರೀಕ್ಷಕರೊಳರೆ ತೋಱಿವರ್ಗಳ ।

---

[1] ಗೇಡು (ಕ.ಖ.ಗ.ಘ.ಚ.ಛ). [2] ನಿಲ್ಲಿಲ್ಲ (ಖ), ನಿಲ್ಲಲ್ಲ (ಗ). [3] ಯ (ಖ).
[4] ದೇಂಸಚೆಯಲ್ಲ (ಖ).

ಭವಭಾರವಂ ನಿವರ್ತಿಸುವ ಕಾರಣವಮೃತ
ಶಿವಲಿಂಗವೆಂಬ ಬಸವೇಶ್ವರನ ನಿಷ್ಠೆಯಂ
ಗವೆ ಭುವನವಱಿಯಲ್ಕೆ ತನ್ನುಭಯಪಾರ್ಶ್ವಸ್ಥಲದಲ್ಲಿ ಹಾಯ್ಕಖಿಲಜನಕೆ ॥೧೩॥

ವಿವರಿಸೊಂದೊಂದ ಬಸವೇಶ್ವರನ ಹಸ್ತದಿಂ
ದವೆ ಕೊಡಿಸಲಂತವರ್ವಿಮಲಶಿವಭಕುತಿಯಿಂ
ದವ ಧರಿಸಿಕೊಂಡಜ್ಞತೆಯನುಳಿದು ಸುಜ್ಞಾನಭರಿತಮಾರ್ಗಿಗಳಾಗಿರೆ ।
ಭುವನಾಧಿಪತಿ ಭಯಂಬೊಯ್ದು ಬಸವೇಶ್ವರನೆ
ಶಿವ ಶಿವನೆ ಬಸವನೆಂಬುಭಯಸ್ಥಲ[1]ವನಾದ[1]
ಹವಣಱಿವವನೆ ದೇವನೆಂದು ಕೈಮುಗಿವುತರಸಂತಃಪುರಂಬೊಕ್ಕನು ॥೧೪॥

ಬಳಿಕಿತ್ತ ಶರಣರುತ್ಸಹದಿ ಕೀರ್ತಿಪ ಹರುಷ
ದೆಳೆಲತೆ ದಿಗಂತದೊಳ್ಪಲ್ಲವಿಸಿ ಶಿವಭಕ್ತಿ
ಫಲಭರಿತ ಬಸವನಾಮದ ಕಲ್ಪಕುಜದಗ್ರದೆಡೆಗಡರ್ದು ತೊಡರ್ದು ಬಿಡದೆ ।
ಬೆಳೆಬೆಳೆದು ಭಾವಪ್ರಸೂನ ವಿಕಶಿತಮಾಗಿ
ಹೊಳೆವ ಸೌರಭ್ಯಮಕರಂದಮಂಟಪದೆಡೆಗೆ
ಸುಳಿದ ನಿಜನಿಷ್ಠೆಯಳಿಕುಳಸಮೇತದಿ ಸದಾಶಿವ ವಸಂತ[2]ನೊಲೆಸೆದನು[2] ॥೧೫॥

ಪರಮೋತ್ಸಹದ ಗುಡಿಯ ತೋರಣದ ಮಂಗಳದ
ಪರಿಚರಿಯ ನಾನಾಪ್ರಯತ್ನದುತ್ಸಹದಿ ತ
ನ್ನರಮನೆಗೆ ಬಂದು ಬಸವೇಶಸುಖಸಂಕಥಾಶರಣಸಂಕುಲಸಮೇತ ।
ಚರಲಿಂಗಪೂಜೆಯಂ ಮಾಡುತಿಹ ನಿರ್ಮಾತ
ನಿರವಿಂತು ಪ್ರಮಥರವಧರಿಸೆಂದು ನಂದಿಕೇ
ಶ್ವರನುಸುರ್ದ ಪರಿವಿಡಿಯ ಪರಮಶಿವಭಕ್ತರೊಲಿದಾಲಪುದು ಲೀಲೆಯಿಂದ॥೧೬॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದುವೆ ಕೂಷ್ಮಾಂಡ[3]ದೊಳು ಲಂಗ ತೋಱ್ಮೆಱೆದ
ಸಂಧಿ[3] ॥೧೭॥

---

[1] ನಾದನಂ (ಖ), ವನಾವ (ಜ). [2] ನೊಳೆಸೆದರು (ಗ.ಛ), ನೊಳೆಸಿದನು (ಕ.ಖ.ಘ.ಚ.ಛ). [3] ಲಂಗಪ್ರವರ್ತನದಸಂಧಿ (ಜ).

ಇಪ್ಪತ್ತೆರಡನೆಯ ಸಂಧಿ

ಸೂಚನೆ —

ದುರುಳಗೊಂಡೆಯರ ಬಿಙುನುಡಿಗೇಳ್ದು ನೃಪತಿ ಸಿ
ದ್ಧರಸರೊಳಗಾದರಂ ತೆಗೆದುದಯದಿಂ ಮುನ್ನ
ಹರುಗೊಳ್ಳಿ ವಿತ್ತವನೆನಲ್ಕೇಳುದಿನ ಬಸವ ತಡೆದ ಬಿದಿಗೆಯ ಚಂದ್ರನ ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾ ಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಲೋಕಸನ್ನುತಜಂಗಮಪ್ರೇಮಿ ಕಾರಣಿಕ
ಲೋಕಪಾವನ ವಿಶ್ವತೋಮುಖಂ ಕರುಣಾವ
ಲೋಕನಪರಮಪವಿತ್ರಾತ್ಮಕಂ ಸಚ್ಚಿದಾನಂದವೈಭವವಿಲಾಸ ।
ಲೋಕವಿರಹಿತಶರಣಜನಹೃದಯಪಂಕೇಜ
ಲೋಕಲೋಚನನಪ್ರತರ್ಕ್ಯನನುಪಮನಖಿಳ
ಲೋಕಗರ್ಭೀಕೃತೋನ್ನತ ನಿತ್ಯಪರಿಪೂರ್ಣ ಮೃಡಮೂರ್ತಿ ಬಸವ ಜಯತು ॥೨॥

ಕೃಪೆಯಿಂದ ಲಾಲಿಪುದು ಶರಣರ್ಕಳಾನೇನ
ನುಪಮಿಸುವೆ ಕಲ್ಯಾಣವೆನಿಪ ಕೈವಲ್ಯದೊಳ
ಗಪರಿಮಿತ ವರವೀರಶೈವಾಂಬುನಿಧಿವಿವರ್ಧನಸುಧಾಸೂತಿಯೆನಿಪ ।
ಅಪುನರ್ಭವಾಂಗ ಬಸವೇಶ ಲಿಂಗಾಂಗಿಗಳ
ವಿಪದಸಂಪದ ತನ್ನದಾಗಿ ದುರ್ಬೋಧೆಗಳ
ನಪಹರಿಸಿ ಮಹಿಮೆಗಳ ಬೀಱುತ್ತ ಶಿವಭಕ್ತಿಸಾಮ್ರಾಜ್ಯಮನ್ನಾಳುತ ॥೩॥

ಇರಲೊಂದು ದಿವಸ ದೇಶಾಧಿಪತಿ ಬಿಜ್ಜಳೇ
ಶ್ವರನಖಿಳವಿನಿಯೋಗ ಸಹ ಬೇಗಿನೋಲಗದೊ
ಳುರುತರದ ರತ್ನಸಿಂಹಾಸನಾಶೀನನಾಗಿರುತಿರಲ್ಕೆಣ್ದೆಸೆಯಲಿ ।

ಹರಿಸತಿಯ ಸೆಜೆತಂದವೋಲ್ಕಪ್ಪಗಾಣಿಕೆಗ
ಳುರವಣಿಸಿ ತರತರದಿ ಬರಲೀಕ್ಷಿಸುತ್ತಲತಿ
ಹರುಷದಿಂ[1]ತೆಗೆ ತೆಱಹು[1]ಮಾಡಿ ಭಂಡಾರಗೇಹವನೆನಲ್ಕಂಚರಸನು ‖೪‖

ಕರವ ಮುಗಿದೆಲೆ ಜೀಯ ಹೊಕ್ಕ ಮನೆ ಹಾಳು ಬಸ
ವರಸದಣ್ಣಾಯಕರ್ಬಾಚರಸರೊಗ್ಗಾಗಿ
ಪಿರಿಯತನವಂ ಬೀಱುತೆಯ್ದೆ ತವೊಡ್ಡನಾಡಿ ಭಕ್ತಗಳು ಸಹಿತ ನೆರೆದು।
ಪರಿಪರಿಯ ಹೊನ್ನಜಾಳಿಗೆಗಳಂ ಛಿದ್ರಗೆ
ಯ್ದರು ಕೋಶಗಾರಮಂ ಕಾಲದಲಿ ಚೆನ್ನಾಗಿ
ತೆಱಹುಮಾಡಿದರದಲ್ಲದೆ ಮತ್ತೆವರ್ತಿಸುವ ಸದ್ವರ್ತನೆಯ ಕೇಳ್ನೃಪ ‖೫‖

ಚಾರುಕುಲಗೋತ್ರ[2]ಮನ್ನೀಗಿ[2] ನಿಷ್ಪವರ್ಗೀಪ
ಚಾರಕ್ಕೆ ಪಕ್ಕಾಗಿಯಧಿಕಷಟ್ಕರ್ಮಗಳ
ನೀರುಗೂಡಿರುಳುಹಗಲೆಯ್ದೆ ಬೂದಿಗರುಂಡು ಮಿಕ್ಕುದನ್ನೊ[3]ಕ್ಕು[3]ದೆಂದು।
ಹಾರಿಕೊಂಡುಂಡು ಮನ ಬಂದಂತೆ ಉಬ್ಬುತ ವಿ
ಕಾರವರ್ತನೆಗೆ ನೆಲೆವನೆಯಾಗಿ ಬಾಳುವ ವಿ
ಕಾರಸಚಿವರ್ಗಳೆಲ್ಲಕ್ಕೊಡೆಯರಾಗಿರಲ್ಕೆಲ್ಲಿಯದು ಧನವು ನಿಮಗೆ ‖೬‖

ಹಸ್ತಕದ್ದಿದ ಕಟ್ಟುವಣೆಗೆ ದಿನವಹಿಗಂ ಪ್ರ
ಶಸ್ತಭಂಡಾರಬೊಕ್ಕಸ ಕಣಜ ಮೊದಲಹ ಸ
ಮಸ್ತಕ್ಕೆ ತಾವೊಡೆಯರಾಗುಪೇಕ್ಷಿತ ಭಕ್ಷಿತಪ್ರಜ್ಞತೆಯೊಳು ನಿಮ್ಮ।
ವಸ್ತುವೆಲ್ಲಂ ತಸ್ಕರಿಸಿ ವಹಿಗಳೊಳಗಸ್ತ
ವ್ಯಸ್ತದೈದಕ್ಷರವ ಬರೆವ ಲೆಕ್ಕದ ಸದೆಯ
ವಿಸ್ತರವನಾಗಳೆತ್ತಿದರು ತಮತಮಗೆ ಚಾಡಿಯ ವಹಿಯ ಚಾವಡಿ[4]ಯ[4]ರು ‖೭‖

ಜಾಳಿಗಿಂತಿ[5]ಷ್ಟೋಲಿಂ[5] ನಮಶ್ಶಿವಾಯುರ್ವಿಯೊ
ಳ್ಪೊಳಿದುರ್ದಿ[6]ಷ್ಟೋಲಿಂ[6] ನಮಶ್ಶಿವಾಯುನ್ನತಭ
ಟಾಳಿಗಿಕ್ಕುವ ಜೀವಿತ ವಿನಾಮವಾಭರಣವಾರಕ ನಮಶ್ಶಿವಾಯು।
ಓಳಿಗೊಂಡೈತಪ್ಪ ಕಪ್ಪಗಾಣಿಕೆ ರತ್ನ
ಜಾಲ ಭಂಡಾರ ಬೊಕ್ಕಸ ಕಣಜ ಕೀಲಾರ
ಪೇಳಲೇನಾದಾಯವೆಚ್ಚವೆಲ್ಲ ನಮಶ್ಶಿವಾಯಂಗಳಾದವೆನಲು ‖೮‖

---

[1] ತೆಗತೆಗಹು (ಖ). [2] ಮುಮನೀಗಿ (ಧ.ಗ). [3] ಕ್ಕ (ಕ.ಗ.ಘ.ಚ.ಧ).
[4] ಗ (ಘ). [5] ಷ್ಟುಂ (ಗ.ಖ.ಚ.ಧ). [6] ಷ್ಟು (ಕ).

ನೀಚತನದಿಂದರಸು ಕೆರಳ್ದೆಮ್ಮ ಧನವನು
ತ್ಕೋಚದಿಂ ತಸ್ಕರಿಸಿ ತಾವು ವಿಶ್ವಾಸಿಗಳೊ
ಳಾಚರಿಪುದೇನೆಕ್ಕಸಕ್ಕವೋ ಮಿಗೆ ಸರಸವೋ ಮೇ[1]ಣುದಾಯಾದ್ಯರೊ[1]।
ನಾಚದಂಜದೆ ಮಾತ ಚಾಚಿ ವಹಿಯೊಳ್ಧನವ
ಬಾಚಿಕೊಂಡಪಹರಿಸುತಿಹ ಬಸವರಾಜನಾ
ಳೋಚನೆಯೊಳೊಳಗಾದವರ್ಸಹಿತವಾತನಂ ಕರೆಸೆನಲ್ಪಿಸುಣರೆಂದರ್ ॥೯॥

ಭುವನೇಶ ಚಿತ್ತೈಸು ಮುನ್ನೊಮ್ಮೆ ಲೆಕ್ಕಕ್ಕೆ
ರವಿಯು ಬಲೆಯೊ[2]ಡ್ಡಿ ಲೆಕ್ಕ[2]ವ ಹಾಳುಮಾಡಿ [ಯೆ] ಬ
ಸವರಸರ ನೂರ್ಮಡಿಸಿದ ಕುಮಂತ್ರಿಗಳ್ಮೂಱುಮಂದಿಯಿಹರೆನುತಲಾಗ।
ವಿವರದಿಂ ಸಿದ್ಧರಸ ಮಧುವರಸ ಜಗದೇವ
ಸುವಿಚಾರಿ ಬಲದೇವ ಶಾಂತರಸರಂ ತೋಱಿ
ಲವನಿಪತಿ ನೋಡಿ ದುರ್ಭಾವ ಪಸರಿಸುತ ಸಹ್ಯೋಪಾಯದಿಂದ ನಗುತ ॥೧೦॥

ನೀವು ಶಿವಭಕ್ತರೆಂದೆಲ್ಲಕ್ಕೆ ನೆಱೆ ನಂಬಿ
ನಾವು ಮುಖ್ಯರ ಮಾಡಲರ್ಥಮಂ ಛಿದ್ರಗೈ
ದೋವಿ ಬಱಿಯ ನಮಃಶಿವಾಯಂ ನಮಃಶಿವಾಯಂಗಳಂ ವಹಿಗಳೊಳಗೆ।
ತೀವಿ [3]ದಿರೆನ[3]ಲ್ಕವರು ಲಿಖಿತಕರಣದ ಸೇನ
ಬೋವರೊಳಗಾದರಂ ಕರೆಸಿ ಕೇಳೆನೆ ನೃಪಂ
ಪಾವಕನೊಲುರಿದವರ [4]ತಗದು[4]ದಯದಿಂ ಮುನ್ನ ಧನಗೊಳ್ಳೆನುತ್ತ ಪೇಳೆ ॥೧೧॥

ಚಾಳುಕ್ಯರಾಯನಾಜ್ಞಾಧಾರರೆದ್ದು ಶಿವ
ನಾಳು ಸಿದ್ಧ[5]ರಸ[5]ಯ್ಯನಂ ಊರ್ಧ್ವಸೌಧಮದ
ಮೇಲೆ ಕುಳ್ಳಿರಿಸಿ ಜಗದೇವ ಮಧುವರಸರಂ ಬಲದೇವ ಶಾಂತಯ್ಯನ।
ಕೀಳುಮಾಳಿಗೆಯೊಗಿಸಿ ದುಷ್ಟಕಲ್ಮಷರುಗಳ
ಜಾಳಮಂ ಕಾಪುಗೊಳಿಸಲ್ಕೆಲ್ಲ ಮಂತ್ರಿಗಳು
ಗೋಳಿಡುತ್ತೀ ಸಜ್ಜನರ್ಗೀ ವಿಕಲ್ಪಮುಳಿದವರ ಪಾಡೇನೆನುತಿರೆ ॥೧೨॥

ವೇಳೆಯಾಳ್ಗಳು ಜನಪನಾಗ್ರಹಿಸಿ ಭಕ್ತರನ
ವೇಳೆಯೊಳ್ತಗದುದಂ ಬಸವೇಶಗಱುಪಲದ
ಕೇಳುತೋಹೋ ಶಿವ ಶಿವಾಯೆನುತ್ತುಭಯಕರಮಂ ಕರ್ಣಯುಗಕಮರ್ಚುತ।

---

[1] ಣ್ಧಾಯಾದ್ಯರು (ಕ.ಘ). [2] ಡ್ತಿಲ್ಯ (ಘ). [3] ಬರೆಯ (ಕ.ಖ). [4] ತೆಗೆದ (ಕ.ಖ). ರಾಮ (ಘ).

ಆಳುದರ ನಿಗ್ರಹದ ನುಡಿಗೇಳ್ದು ಸುಷ್ಮನಿರ
ಲಾಳುತನಕಿದು ಹಾನಿಯಹುದೆಂದೆನುತ್ತ ತಾ
ರಾಳಿಗಳ ಪತಿಯನಭವನಶರಣರಾಣಿಟ್ಟು ತಗದನಾ ಕ್ಷಣ ಬಸವನು ॥೧೩॥

ಕಮಲರಿಪು ತನ್ನ ಸುಜ್ಞಾನಾವಲೋಕನದೊ
ಳಮಮ ವಸುಧೆಯೊಳೆನ್ನನಾಜ್ಞೆಯಿಂ ನಿಲಿಸುವ ಮ
ಹಿಮನಾರೊ ಮತ್ತೆ ಮುನ್ನಿನ ತನ್ನಪತಿಗಾಗಿ ನಿಲಿಸಿದ ಪತಿವ್ರತೆಯುಳೊ।
ಭ್ರಮೆಗೊಳ್ವೊಲೆನ್ನ ಶಪಿಸಿದ ಗಣಪನೋ ಸುತೆಯು
ಮಮತೆಯಿಂ ನಿಲಿಸಿದಾ ದಕ್ಷನೋ ಅಲ್ಲಲ್ಲ
ಕುಮ[1]ತಿ[1]ಯಜ್ಞದೊಳೆನ್ನ ಶಿಕ್ಷಿಸಿದ ವೀರೇಶನೆಂದಱಿದು ನಿಂದನಬ್ಜ ॥೧೪॥

ಗಗನದೊಳ್ಚಂದ್ರನಂ ಬಸವೇಶ್ವರಂ [2]ತಗದ[2]
ಬಗೆಯಱಿಯದೆಲ್ಲ ಜೀವಿಗಳುಂಡು ನಿದ್ರಾಂಗ
ನೆಗೆ ಮೋಹಿಸಿರ್ದರೆಂತೆನೆ ಲಿಂಗಶರಣರ ಮಹಾತ್ಮೆಗಳನಱಿಯದೆ ನೃಪ।
ನೆಗಳಿದಜ್ಞಾನವೆಂದೆನಿಪ ಕಾಳೋರಗಂ
ತೆ[3]ಗ[3]ದು ಬಿಡದಡಸಿ ದೌಂಷ್ಟ್ರದೊಳ್ಕೈದೆ ಜೀವಮಂ
ಮಿಗೆ ಪೀರ್ದರ್ಪೋಲ್ಸೊರಗಿ ಮೈಮಱೆ[4]ದರೊಱಗಿ[4] ನಿ[5]ದ್ರಾಮುದ್ರಿತಾಂಗರಾಗಿ[5]
॥೧೫॥

ಇರುತಿರಲ್ಮೆಲ್ಲನೆಚ್ಚಱಿಕೆದೋಱಲ್ಕದಱೊ
ಳಿರದುದರಶಿಖಿ ಮೊಳೆಯಲುಂಡೊಡನೆ ಜಾಡ್ಯಮಂ
ಕುರಿಸಲೊಱಗುತ್ತೇಳುತಂ ಬೀಳುತಿಂತವಸ್ಥಾತ್ರಯಂಗಳೊಳಾಳುತ।
ತರಹರವುದಿಲ್ಲದೆಲ್ಲಾ ಜಗದ ಜಂತುಗಳ
ನಿರವಧಿಯನಸುಗಳಾ ಭೂತವಲೆಯೊಳ್ಸಿಕ್ಕಿ
ಹೊರಳು[6]ತಿರ್ದರ್ಸರ್[6]ವರ್ಜನರು ಸರ್ವಜ್ಞನಹ ಬಸವನ ಮಹಿಮೆಗಾಣದೆ ॥೧೬॥

ಈಪರಿಯ ಜೀವಿಗಳ್ಮಱವೆಯೊಳ್ಭ್ರಮಿಸುತಿರ
ಲಾಪುರದೋಳೇನೆಂಬೆನಖಿಳಶಿವಶರಣರೆ
ಲ್ಲಾ ಪರಮಹರುಷದೊಳ್ದಿವರಾತ್ರಿಗಳನಱಿಯದಪರಿಮಿತಲಿಂಗಾಂಗದ।
ಕೂಪರತಿಯೊಳ್ಸ್ವಾನುಭಾವಸಮ್ಯಗ್ಜ್ಞಾನ
ದೀಪ್ತಿಕೆಯೊಳಾನಂದಪೀಯೂಷವಾರಿಧಿಯೊ
ಳೀ ಪರವಶೀಭೂತರಾಗಿ ವಿಭ್ರಾಜಿಸುತ್ತಿಹ ಗಣಸಮೂಹದೊಳಗೆ ॥೧೭॥

---

[1] ತ (ಗ.ಪು.ಥ). [2] ತಡೆದ (ಖ). [3] ಗೆ (ಖ), ಗಿ (ಕ.ಗ.ಪು.ಚ.ಥ). [4] ದೊರಗಿ (ಖ). [5] ದ್ರಮುದ್ರಿತಾಂಗಾವರಸತಿ (ಖ). [6] ತ್ತಿರ್ದಪರ್ಪ (ಕ).

ಮಾಡುವರ್ಕೆಲರು ಗುರುಪೂಜೆಗಳನನಿಮಿಷದಿ
ನೋಡುವರ್ಕೆಲರು ಲಿಂಗಕೆ ಸರ್ವಭೋಗಗಳ
ನೂಡುವರ್ಕೆಲರು ಚರಲಿಂಗಪ್ರಸಾದವಂ ಕೊಂಡುಂಡು ದಣಿದು ದಣಿದು।
ಆಡುವರ್ಪಾಡುವರ್ನೋಡುವರ್ನುಡಿಸುವರ್
ಕೂಡುವರ್ಸರ್ವಗಣರುಗಳೆಲ್ಲ ಸುಖದೊಳ
ಕ್ಕಾಡುವರ್ತಮತಮಗಗಮ್ಯ ಬಸವೇಶ್ವರನ ಮಹಿಮಾಮೃತಾರ್ಣವದೊಳು ॥೧೮॥

ಈತೆಱದಿ ಪಗಲಿರುಳನಱಿಯದೆಡೆವಿಡದಸಂ
ಖ್ಯಾತರೊಗ್ಗಿಂ ಬಸವನಿರೆ ಗೃಹದೊಳಿತ್ತತ್ತ
ನೀತಿವಿದರಾ ಪುರದೊಳೆಚ್ಚತ್ತಿದೇನೆಲ್ಲರುಂಡುಂಡು ನಿದ್ರೆಗೈವ।
ಶೀತಕರನಿಂದಿರುವ [1]ನಸುರಾತ್ರಿ[1] ಮುಸುಕಿರುಹ
ವಾತಪಾಂಶುದಿಸದಿಹದಾರ್ತಿಳಿಯದೆಂದೆನುತ
ಧಾತ್ರಿಜನರುಗಳು ಯೋಚಿಸುತ ತಿಳಿಯದು ಇದಂ ಭೂತೇಶ ಬಲ್ಲನೆನುತ ॥೧೯॥

ತನತನಗೆ ವೇದವಿತ್ತುಗಳಱಿದು [2]ತಮ್ತಮ್ಮ[2]
ಮನೆಯ ನೆರೆಮನೆಯ ಮುಮ್ಮನೆಯುವರ್ಗಱುಪಲದ
ರನುವಱಿಯದೊರ್ವರೊರ್ವರಿಗೆ ಎಚ್ಚರಿಸಲಷ್ಟಾದಶ ಕುಲಪ್ರಜೆಗಳು।
ಮನದೊಳತಿಭೀತಿಯಾವರಿಸಿ ಜಜ್ಜಱಿದು ಕ
ಲ್ಪನೆಯ ಕಡೆದಿನವಾಗದಿರದಿದೆಂದಾ ಪುರದಿ
ಜನರಾಜಿ ಜನಪನಜ್ಞಾನಾಂಧಕಾರಪಾರಾಶಿಯೆನಲಳಲ ಮೊಱೆಯೆ ॥೨೦॥

ಆ ಸಮಯಕರಸು ತನ್ನೆಚ್ಚರಿನ ವೇಳೆಯೊಳ್
ಸೂಸೆ ಜಠರಾಗ್ನಿಯದಕುಂಡುಂಡು ನಿದ್ರೆ ಬರ
ಲಾಸಱದೆ ಮಲಗಿ ಮಲಗೆದ್ದೆದ್ದು ಬೇಸತ್ತು ಬೆಂದು ಬೆಳಗಾಗದೇಕೊ।
ಈಸು ಕಾಲದ ರಾತ್ರಿಯಂತಲ್ಲೆನುತ ರಾಣಿ
ವಾಸವೆಲ್ಲವ ಬರಿಸಿ ಚಿಂತಾಂಗನೆಗೆ ಸಿಲ್ಕಿ
ಐಸಕಾಪುರದೊಳೆಸೆವತಿಭಯಂಕರದ ನಿರ್ಘೋಷ ಮುಸುಕಿತು ಜಗವನು ॥೨೧॥

ಸಲೆ ನಿತ್ಯಕರ್ಮ ವ್ಯವಹಾರಸತ್ಕ್ರಿಯೆಮಾರ್ಗ
ವಳಿದು ಕೃತ್ಯಾಕೃತ್ಯ ನಿಂದು ನಿಡುನಿದ್ರೆ[3]ಯೋ[3]
ತ್ರಿಳಿವ[4]ಡಗಿ[4] ಪದಿನೆಂಟು ಕುಲವಾಱುದರುಶನಂಗಳ ಕಳೆಗಳಱಿತು ಬಳಿಕ।

---

[1] ನಡುರಾತ್ರಿ (ಖ). [2] ತಂತ್ರಮಂ (ಖ). [3] ಯೊಳು (ಖ). [4] ಡೆನಿ (ಕ).

ಕಳವಳೋಗ್ರದ ಬೆಡಗು ಹೊಡೆದೆಲ್ಲ ತಮತಮಗೆ
ಬಳಲುತಿದೆ ಇಂದು ಮುಂದಕೆ ನಡೆಯ ಹಿಂದಕ್ಕೆ
ಇಳಿ[1]ಯದಿಹ[1]ನೆನುತಾಢ್ಯರನ್ವಯದ ಜ್ಯೋತಿಷ್ಕರುಗಳು ಪಂಚಾಂಗದರ್ಗೆದು ‖ ೨೨ ‖

ಸ್ಥಳವಿಟ್ಟು ಗುಣಿಸಲ್ಕೆ ನಾನೂಱುಯಿಪ್ಪತ್ತು
ಘಳಿಗೆಯ್ಯೆವತ್ತಾಱು ಜಾವ ದಿನವೇಳಾಗು
ತಳಲುತುಘೆನುತ ಚಿಂತಾಂದೋಳದಿಂದೇಂ ವಿಕಲ್ಪವೋ ಕಾಲದಳಿವೊ ।
ನಳಿನಾರಿಗಿಳಿಯಲಳವಲ್ಲವೋ ತಿರುತಿರುಗಿ
ಬಳಲಿನಿಂದನೊ ರಾಹುವಡ್ಡೈಸಿತೋ ಮಾರ್ಗ
ವಳಿದುದೋ ತಿಳಿಯಲರಿದೆನುತಿರದೆ ನೃಪಗಱುಪಬೇಕೆನುತ್ತವನಿಸುರರು ‖ ೨೩ ‖

ನೆರೆದೆಲ್ಲ ತಮತಮಗೆ ಭೋರ್ಗರೆದು ನಡೆಗೊಂಡು
ಬರುತಿರ್ದರುರವಣಿಸಿ ಭೂವರನ ಚಿತ್ತದೊಳು
ಸ್ಥಿರಗೊಂಡು ಹೊಗುವ ಚಿಂತಾಗ್ನಿಯಿಂ ಪಟುವಾಳ್ದೊಲೆಸೆವ ಕೈದರ್ಭೆಸಹಿತ ।
ನಿರವಧಿಯಲವದಿಡುವ ಶಿವದಿಡುವ ರ[2]ವ[2]ಪೊಣ್ಮು
ತರಮನೆಗೆ ಬಂದು ಭೂಸುರರಬ್ಬರಿಪ್ಪವಾ
ಕ್ಷರಪೂರಿತಾಕರ್ಣನಾಗಿ ಭಯ ಬೆಂಕೊಳಲ್ಕೊಱಮುಟ್ಟು ರಾಜೇಂದ್ರನು ‖ ೨೪ ‖

ಒಳಚಾವಡಿಗೆ ಬರಿಸೆ ನಿಂದು ಮಂತ್ರದ ದರ್ಭೆ
ಗಳೊಳಕ್ಷತೆಯ ಪೂಸಿ ಮಿಗೆ ಪರಸಿ ಪಂಚಾಂಗ
ಗಳನೆತ್ತಿ ತಿಥಿ ವಾರವಿಲ್ಲದೆಳೆವೆಱನಿಂದ ದಿನಸಂಖೆಗಳ ಪೇಳಲು ।
ತಿಳಿದು ನೃಪ ಘಳಿಯಾರಿಗಳ ಕರೆಸಿ ಕೇಳಲ್ಕೆ
ನಳಿನಾರಿ ನಿಂದುದಂ ನಾನೂಱುಯಿಪ್ಪತ್ತು
ಘಳಿಗೆಯ್ಯೆವತ್ತಾಱುಜಾವ ದಿನವೇಳಾಯಿತೆನುತರಸು ಸುಯ್ದು ಕೇಳ್ದು ‖ ೨೫ ‖

ತಲ್ಲಣಿಸೆ ಕಲು[3]ಗಂಡ[3]ರಾಶಿಗವಡೆಯೊಲು ಮನ
ಝುಲ್ಲೆನುತ್ತಿದು ಮಹಾಪ್ರಳಯವೆಂದೆನುತ ಭೂ
ವಲ್ಲಭಂ ದಂಡೇಶ್ವರನ ದೆಶೆಯೊಳಾದುದಱಿಯದೆ ನೀವುಬಲ್ಲ[4]ರೆನುತ[4] ।
ಅಲ್ಲಿರ್ದ ವಿಪ್ರಕುಲಕೆಲ್ಲ ಕೈಮುಗಿದುದಯ
ವಿಲ್ಲದಿಹ ಬೆಡಗು ನಮಗೊಂದಿನಿತು ಕಾಣ್ಬಬಗೆ
ಯಿಲ್ಲ ಪೇಳುವಡೆ ರಾಜಿಕವಲ್ಲ ದೈವಿಕವಿದೆನಲೊಂದೆಸೆಯ ಕೆಲಬರು ‖ ೨೬ ‖

---

[1] ಹ (ಕ). [2] ದ (ಕ.ಖ). [3] ಗುಂಡು (ಕ.ಚ), ಗುಂಡ (ಘ). [4] ರೇನು (ಖ).

ಬಂಕದೆರೆ ಸಿದ್ಧಾಯ ಬಿಟ್ಟಿ ಕೊಟ್ಟಣವನುಪ
ಸುಂಕ ಮಲವದಿಕೆ ಸೊಲ್ಲಗೆ ಕವಣ ಕಡ್ಡಾಯ
ದಂಕೆ ತಳವರಿಕೆ ಕೋರಾಯ ಗುತ್ತಿಗೆ ಅಪುತ್ರಿಕೆ ದಂಡ ವುಂಡಿಗೆಗಳು ।
ಬಿಂಕದಿಂದೆಸೆವ ರಾಜಸವೆಂಬ ಮೇಘದಿಂ
ಭೋಂಕ[1]ನೆ[1]ಸುವರ್ಥದಸುವೃಷ್ಟ್ಯಱತು ರಾತ್ರಿಯ ಭ
ಯಂಕರದ ಮಂಜು ಸಚರಾಚರದ ಜೀವಜಾಲವ ಮುಸುಕಿತೇಂವಗಳ್ವೆನು ॥೨೭॥

ಚಿತ್ತೈಸು ಭೂರಮಣ ಒಂದೊಂದ ದಿವಸಕೇ
ಕೋತ್ತರಸಹಸ್ರಹೊನ್ನಾದಾಯ ಸುಂಕದಿಂ
ಮತ್ತೆ ನಾನಾದಿಕ್ಕಿನಿಂದ ಬಹ ನೆಱೆ ಬಱುಸುವರ್ಣಾರ್ಣವದ ತೆರೆಗಳು ।
ಬಿತ್ತಿ ಸಿದ್ರಾಮುದ್ರಿತದೊಳೆಲ್ಲ ಜನರಾಶಿ
ಮತ್ತರಾಗಿದೆ ವಿಪುಳತರ ವಿಕಲ್ಪವಿದೇಕೆ
[2]ಭೀತಿ[2]ಯೇನೆಂದಾ ದ್ವಿಜೋತ್ತಮಂ ಪೃಥ್ವೀಶನೊ[3]ಳ್ಪೇಳೆ[3] ತತ್ಸಮಯಕೆ ॥ ೨೮ ॥

ಮತ್ತೆ ಕಲಹಾಚಾರ್ಯ ಧೂರ್ತಕುಲತಿಲಕಂ ನೃ
ಪೋತ್ತಮಗೆ ಕೈಮುಗಿದು ತನ್ನವರ [4]ತಗಸಿದರೆ[4]
ನುತ್ತಲಾ ಬಸವದಂಡೇಶನಾ ಶಶಿ ನಡೆಯದಂತೆ ಮಂತ್ರಿಸಿದನೆನಲು ।
ಚಿತ್ತದೊಳ್ತಿಳಿದಹುದಿದಾ ದೆಸೆಯೆನುತ್ತ ತಾಂ
ಮತ್ತೆ ಯೋಗ್ಯರ ಕಳುಪಿ ಕರೆಸಲನುಪಮನನಘ
ನತ್ತು ಚಿತ್ತಾನಂದಪರಿಪೂರ್ಣ ಬಸವೇಶ ಬರುತಿರ್ದನೇವೊಗಳ್ವೆನ. ॥ ೨೯ ॥

ಮಱವೆಯೆಡೆಗಱುಹು ಮದನಿದ್ರೆಯೆಡೆಗೆಚ್ಚರಿಕೆ
ಬೆಱೆತಿರ್ದ ಕುಣಪನೆಡೆಗಸು ನಿರ್ಧನಿಕನೆಡೆಗೆ
ನೆಱೆಧನಂ ಭೂತನಿರ್ದೆಡೆಗೆ ಪಂಚಾಕ್ಷರೀವರಮೂರ್ತಿಮಂತ್ರಸಿದ್ಧ ।
ತೆಱಹಿಲ್ಲದಱುವಿನಲಗಂ ಚರ್ಮತರವಪುವಿ
ನೊಱೆಯೊಳಿಂಬಿಟ್ಟು ದಿವರಾತ್ರಿಯೆಂಬಾ ಬಲೆಯ
ಹಱಿಗೊಯ್ವೆನೆಂದು ಬಂದಾ ಸಭಾಂತರದಲ್ಲಿ ಬಸವೇಶಮೂರ್ತಗೊಳಲು ॥ ೩೦ ॥

ಮಿಗೆಬೆಂದು ನಿಂದಿದರೆಗೊಱಡ್ಗಳೆನೆ ಜೋತಿಷ್ಯ
ರುಗಳಿರಲ್ಸಡಿಲೆಱಗಿ ಬದುಕಿರ್ದ ಶಾಖಾಮೃ
ಗಗಳೆನಲ್ಪಿಸುಣರೊಳಗಾದ ಪರಿಜನ ಪುರಜನಗಳಿರಲ್ಕವರ ನಡುವೆ ।

---

[1] ನ (ಖ.ಥ). [2] ಬಿತ್ತಿ (ಗ.ಥ.ಘ). [3] ಳ್ಪೇಳ್ದ (ಖ.ಗ). [4] ತೆಗಸಿದರೆ (ಖ.ಗ).

ಮುಗಿಲುಮುಸುಕಿದ ಭಾಸ್ಕರನೊಲಿರ್ದನೃಪತಿ ಬಸ
ವಗಣೇಶನಂ ನೋಡಿದೇನಯ್ಯಭ ಗಣೇಶ
ತಗಹಿನೊಳಗಾದಂ ದಿನೇಶನುದಿಸಂ ವಾರತಿಥಿಗಳಿಲ್ಲೆನಲೆಂದನು ॥ ೭೧ ॥

ವಚನ—

ವಾರವೆಂದಱಿಯೆ, ದಿನವೆಂದಱಿಯೆ, ಏನೆಂದಱಿಯೆನಯ್ಯ, ಇರುಳೆಂದಱಿಯೆ, ಹಗಲೆಂದಱಿಯೆ. ಏನೆಂದಱಿಯೆನಯ್ಯ, ನಿಮ್ಮವ ಪೂಜಿಸಿ ಎನ್ನುವ ಮಱೆದೆ ಕೂಡಲ ಸಂಗಮದೇವ. ॥ ೧ ॥

[1]ಇನ್ನೇತಕನ್ಯನೆನಹರಸಿ[1]ಗುಳ್ಳರ್ಥಮಂ
ಚೆನ್ನಾಗಿ ಹೊಳ್ಳಿಸಿ ನಮಃಶಿವಾಯಗಳ ಬರೆ
ದುಂ ನಾಸ್ತಿಕಕ್ಕೆ ಗುರಿಯಾದವರ ಬಂಧನಂಗಳಚಲಱಿಯದೆ ಪಾಡುವ ।
ಬಿನ್ನಣಂ ಸಾಕದಂತಿರಲೆಂಬ ಖಳರ ಮೂ
ಗಂನಾ[2]ಗ[2]ಲೋಕಕಿಳುಪುವೊಲರಿದು ಮುಕುರಮಂ
ಸನ್ನಾಗರದಿ ತೋಱುವಂತೆ ಭಕ್ತರಭಾಗ್ಯನಿಧಿ ನುಡಿದನೇನೆಂಬೆನು ॥ ೩೨ ॥

ವಚನ—

ಉರಿವಕೊಳ್ಳಿಯ ಮಂಡೆಯ ಮೇಲಿಕ್ಕಿದರೆ ಉರಿವುದಲ್ಲದೆ ಮಾಣ್ಬುದೆ ಅಯ್ಯ, ಕಲ್ಲುಗುಗ್ಗರಿಯ ಮೆದ್ದರೆ ಹಲ್ಲುಹೋಹುದು ಮಾಣ್ಬುದೆ? ಕೂಡಲಸಂಗನ ಶರಣರ ಕೂಡೆ ಸರಸಬೇಡ, ಮರಣತಪ್ಪದು. ॥ ೨ ॥

ಕೋಡು ನರಮಸ್ತಕದಿ ಮೂಡಿದಡೆ ಸದನ ಮಾ
ತಾಡಿದಡೆ ವಡಬನುರಿ ಬಾಡಿದಡೆ ಗಿಡಗಳೆಡೆ
ಯಾಡಿದಡೆ ಕಲ್ಪತರು ಬೇಡಿದಡೆ ಮೇರುವಲ್ಲಾಡಿದಡೆ ನಭಕುಸುಮಮಂ ।
ಸೂಡಿದಡೆ ಸುರಧೇನು ಕಾಡಿದಡೆ ಪೊಡವಿಯು
ದ್ಘೋಡಿದಡೆ ರವಿ ಶಶಿಯು ಕೂಡಿದಡೆ ಶಿವಭಕ್ತ
ರಾಡಿ ತಪ್ಪರು ಪರಧನಕ್ಕೆ ಮುಯ್ಯಾನರೆಲೆ ಭೂಪ ಕೇಳೆಂದೆನುತ್ತ ॥ ೩೩ ॥

ಹರನಭಕ್ತರ ಮಹಾತ್ಮೆಯನಱಿಯದೀ ಲಾವ
ಕರಮಾತಗೇಳಿ ತಗಸಿದ ಭೂರಿದುರ್ಭಾವ
ದುರವಣೆಯು ನೋಡಲೆಂದಾ ಶೀತಕರನಿಂದನ್ಯೆಸೆನಲ್ಕಳುಕಿ ನೃಪನು ।

---

[1] ಇನ್ನೇತಕಾನೆನಹ ಅರ (ಖ). [2] ಕ (ಗ.ಘ).

ಕರವ ಮುಗಿದತ್ಯಾಪರಾಧೆನ್ನ[1]ಗುಣವ[1] ವಿ
ಸ್ಮರಿಸೆ ಪುರುಳಿಲ್ಲ ಸಲಹೆಂಬ ದೈನ್ಯಾಲಾಪ
ವೆರಸಿ ಸಿದ್ಧರಸಾದ್ಯರಂ ವಸುಮತೀಶ ಕರೆಸೆಂದು ನಿರವಿಸಲಾಕ್ಷಣ ॥ ೩೪ ॥

ಬಚ್ಚಿಟ್ಟ ನಿಧಿನಿಧಾನಂಗಳಂ ತೆಗೆವೊಲಾ
ನಿಚ್ಚಟರೆನಿಪ್ಪ ಸಿದ್ಧರಸರೊಗ್ಗಿನ ಶರಣ
ರಚ್ಚುಗವ ಬಿಡಿಸಿ ತರೆ ಕಾಣುತ್ತ ಬಸವ ತನ್ನಾಜ್ಞೆಯುಬ್ಬುನನೀಕ್ಷಿಸಿ ।
ಮೆಚ್ಚಿದೆವು ಶಶಿ[2]ಯೆ ನಡೆ ಯೆನಲ್ಲ[2]ಡೆದನೇನೆಂಬೆ
ನಚ್ಚರಿಯನವನೀಶನಜ್ಞಾನದಿಂ ನೆಗಳ್ದ
ತುಚ್ಛತ್ವಮಂ ನೋಡ[3]ಲಾಗವೆಂದಿ[3]ರದುಡುಪನಸ್ತಾಚಲಕ್ಕಿಳಿಯಲು ॥ ೩೫ ॥

ಆವನಳವೀ ಯುಕ್ತಿ ಆವನಳವೀ ಶಕ್ತಿ
ಆವನಳವೀ ಭಕ್ತಿ ಆವನಳವೀ [4]ನಿಷ್ಠೆ[4]
ಆವನಳವೀ ದೃಷ್ಟಿ ಆವನಳವೀ ಸೃಷ್ಟಿ ಆವನಳವೀ ಮಹಾತ್ಮೆ ।
ಆವನಳವೀ ಶಾಂತಿ ಪೆಂಪು ಸೊಂಪಿನ ಗು[5]ಣ್ಪೆ[5]
ದಾವನಳವೈಯ ಬಸವಯ್ಯ ಮಜ್ಜೀಯ[6]ನೆಂ[6]
ದಾ ವಸುಮತೀಶನೊಳಗಾದವರ್ಶರಣ್ಬೊಕ್ಕು ಜಯಜಯವೆನುತ್ತಿರ್ದರು ॥೩೬॥

ಕ್ರೀರೂಪುನೃಪ ಧನದ ಕಾರ್ಪಣ್ಯದಿಂದಲ
ತ್ಯಾರೋಪದಿಂದ ಲಿಂಗಾಂಗಿಗಳ ತಗಸೆ ಶಿವ
ನಾರೂಪ ಬಸವ ದಂಡೇಶನಾ ಚಾರುಪಕ್ಷಾನುಭವ ಭಾವೋಕ್ತದಿಂ ।
ತಾರಾಪತಿಯನೇಳುದಿನ ತಡೆದ ಚೋದ್ಯಮಂ
ಈರೇಳ್ಭುವನವ್ಮೈದೆ ಕಾಣಬೇಕೆಂದು ಜಗ
ದಾರಾಧ್ಯ ಪರಮಶಿವನೊಲ್ದು ಕಣ್ದೆಱೆದೊಲುದಯಾದ್ರಿಗಡರಿದ ದಿನಪನು ॥೩೭॥

ಜನಪನಜ್ಞಾನಾಂಧಕಾರವಡರ್ಗಲ್ಸರ್ವ
ಜನರ ಹೃತ್ಕಮಲಂಗಳರಳ್ದು ಮಂಗಳಪುರದೊ
ಳನುಪಮಾನಂದವಾರಾಶಿ ಭೋರ್ಗರೆ[7]ಯೆ ನುತಲ[7]ಪ್ರತಿಮಬಸವೇಶಗೆ ।
ವಿನುತಿಸುತ ನಮಿಸಿ ಸಿದ್ಧರಸಾದ್ಯರಿಂಗೆ ಶರ
ಣೆನುತ್ತ ಬೀಳ್ಕೊಡಲಾ ಮಹಾತ್ಮಕರ್ಸಹ ಬಸವ
ಘನಮಂಟಪಕ್ಕೈದಿ ಸುಖಮಿರ್ದನೆಂದು ನಂದೀಶ ಪ್ರಮಥಗೊರೆದನು ॥೩೮॥

---

[1] ವಗುಣ (ಕ). [2] ಯಡಿಯಿಡೆನೆನ (ಖ). [3] ಲಾಗಗನದಿಂದಿ (ಗ). [4] ನೈಷ್ಠೆ (ಗ). [5] ಣ್ಪ (ಕ.ಗ). [6] ಯೆಂ (ಘ.ಗ.ಥ). [7] ವೆನುತಲ (ಘ).

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರ [1][ದಿ][1] ಗಗನದಿಂದುವ [2][ತಗದು][2] ಬಸವೇಶ ಮೆಱೆದ ಸಂಧಿ
॥ ೩೯ ॥

---

[1] ದೊಳಿದು (ಗ.ಕ.ಚ.ಥ ಪ.ಖ). [2] ತೆಗದು (ಫ).

ಇಪ್ಪತ್ತ್ಮೂರನೆಯ ಸಂಧಿ

ಸೂಚನೆ—

ಕರಣಿಕಾಗ್ರಣ್ಯ ಸೊಡ್ಡಳಬಾಚರಾಜಯ್ಯ
ನಿರುತಿರಲ್ಮಂಚರಸ ದುರ್ಬೋಧೆಗಳ ಹೇಳಿ
ಅರಸು ಕಣ್ಗಳೆಯೆನಲು ಸುಡುಗಾಡೊಳಿಹ ಮುಂಡಗಳಿಗಸುವನಿತ್ತ ಬಸವ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತು ವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸ ಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನೆಲದೆಂತೊ ॥೧॥

ಭಕ್ತಿಯಿಂದೊಲಿದು ಕೇಳುವರ ಕರ್ಣಾಮೃತಂ
ಭಕ್ತಿಯಿಂ ಶರಣರಾನಂದಿಸುವ ಶಿವಮಂತ್ರ
ಭಕ್ತಿಯಿಂದವಧರಿಪುದೀಕೃತಿಯ ನೀವು ಸದ್ಭಕ್ತರು ಸುಚಿತ್ತದಿಂದ।
ಭಕ್ತಿಶೂನ್ಯರ್ಗರಿಯಬಾರದೀ ಮಹಿಮೆಯಿದ
ಭಕ್ತಿಯುಳ್ಳವರು ತಿದ್ದುವುದು ತಪ್ಪುಳ್ಳೊಡಂ
ಭಕ್ತಿವಂತರ್ಗಳತಿ ಮುದದಿಂದೆ ಚಿತ್ತೈಸಿ ಭಕ್ತಬಸವನ ಮಹಿಮೆಯ ॥೨॥

ಈಶನಂ ಧರಿಸಿರ್ಪ ಶರಣರೆಲ್ಲರ್ಕೇಳಿ
ಭಾಸುರದೊಳೊಪ್ಪುತಿಹ ಕಲ್ಯಾಣಪುರವಾಳ್ವ
ದೇಶಾಧಿಪತಿ ಬಿಜ್ಜಳೇಶ್ವರನ ಸಂಪದವನೇನನಭಿವರ್ಣಿಸುವೆನು।
ವಾಸದೈಶ್ವರ್ಯ ಹೊಸರತ್ನಪೀಠಾಗ್ರದಿ ವಿ
ಲಾಸದಿಂದೊಪ್ಪುತಿಹ ಸಮಯಕಾ ಮಂಚರಸ
ಭೂಸುರಕುಮಂತ್ರಿಗಳು ಸಹಿತ ಬಂದೋಲಗವ ಹೊಕ್ಕುಕುಹಕಾಚಾರ್ಯನು ॥೩॥

ಎಡಬಲದ ಮಕುಟವರ್ಧನರಾಜತಿಂಥಿಣಿಯ
ಬಿಡದೊಪ್ಪುತಿಹ ಮಂಡಲೀಕ ಮನ್ನೆಯನಿವಹ
ದೊಡನೆಸೆವ ದುರ್ಗಾಧಿಪರ ಕುಮಾರರ ಗಡಣದೊಳ್ಮೆರೆವ ಮಂತ್ರಿಗಳೊಳು।

ಸಡಗರದೊಳೋದುವಕ್ಕರಿಗ ಭಟ್ಟರ್ಕವಿಗ
ಳೊಡನೆ ಗಮಕಿಗಳ ವಾದಿಗಳ ವಾಗ್ಮಿಗಳ ವಂ
ಗಡದೊಳೋಲಗಗೊಟ್ಟು ಕುಳ್ಳಿರ್ದ ರವಿಕುಲದ ಚಾಳೋಕ್ಯ ಚಕ್ರೇಶನು ||೪||

ನಿಂದು ಕರಯುಗ್ಮಗಳ ಮುಗಿದು ಕಾಳಿಮ ನೃಪನೊ
ಳೆಂದ ಲೆಕ್ಕದ ಸ್ಥಿತಿಯ ಚಿತ್ತೈಸಿದಿರೆ ಜೀಯ
ಹಿಂದೊಮ್ಮೆ ರವಿಯಸ್ತಮಿಸದಂತೆ ಬೇಳುವೆಯ ಮಾಡಿದನು ಚಂದ್ರಮನನು।
ಮುಂದೇಳುದಿನ [1]ತಗದ[1]ನೆಂದು ಕೊಂಡೆಯರೆಲ್ಲ
ಸಂದಣಿಸಿ ನುಡಿದು ಸೊಡ್ಡಳಬಾಚರಸರ ದೆಸೆ
ಯಿಂದೆ ಧನಹಾಳಾಯಿತವನ ಕರೆಸಲ್ಕೆ ಚರರನುಕಳುಪೆ ಭೂಪ ಮುನಿದು ||೫||

ಶ್ವೇತಂಗೆ ಯಮಧರ್ಮ ಮುನಿದಂತೆ ನಿಷ್ಠುರದಿ
ಶೀತಾಂಶುಧರಗೆ ಮನ್ಮಥನು ತಾ ಮುನಿದಂತೆ
ಆತುರದಿ ತೃಣವು ತಾನನಲಂಗೆ ಮುನಿವಂತೆ ರವಿಗೆ ತಮಮುನಿವಂತಿರೆ।
ಭೂತಗಳು ಪಂಚಾಕ್ಷರಿಯೊಳು ತಾ ಮುನಿವಂತೆ
ಪಾತಕರ ನುಡಿಗೇಳುತರಸು ಕರೆಕರೆ ಎನಲು
ಭೂತೇಶನಂ ನೆನೆವುತಂ ಸೊಡ್ಡಳಂಬಾಚಿ ರಾಜಯ್ಯ ನಡೆತಂದನು ||೬||

ಪಾಪಂಗಳೆಡೆಗೆ ಪುಣ್ಯವು ತಾನು ಬಪ್ಪಂತೆ
ಕೋಪಂಗಳೆಡೆಗೆ ಶಾಂತಿಯುಮೂರ್ತಿ ಬಪ್ಪಂತೆ
ಕಾಪುರುಷಬಿಜ್ಜಳನ ಸಭೆಯೆಂಬ ಶರಧಿಗಾ ವಡಬಾಗ್ನಿ ಬಪ್ಪಂತಿರೆ।
ಈಪರಿಯಲೈತಂದು ನೃಪನ ಮನವನದಹನ
ರೂಪ ಸೊಡ್ಡಳಬಾಚಿರಾಜ ನಿಂದಿರಲಕಟ
ಭೂಪನುದ್ರೇಕನಿಷ್ಠುರದಿಂದ ಲೆಕ್ಕವನು ಕೆಡಿಸಿದವ ನೀನೆನುತಿರೆ ||೭||

ಧಿಕ್ಕರಿಸಿ ನುಡಿಯದಿರು ಶಿವಭಕ್ತರನು ನೀನು
ಮಕ್ಕಳಾಟಿಕೆಯ ನುಡಿ ನಿಮಗೇಕೆ ಪೊಡವೀಶ
ಲೆಕ್ಕವಂದೇ ಮುಗಿದುಹೋದುದನು ಎನ್ನಮೇಲಿಕ್ಕಿಕೊಂಬವಿಚಾರದ।
ಮರ್ಕಟವಿಕಾರಿ ಕೊಂಡೆಯರ ನುಡಿಗೇಳದಿರೆ
ನಲ್ಕರಸು ಕೋಪಿಸುತ ಬಿಱುನುಡಿಯ ನುಡಿದನಿವ
ಸೊಕ್ಕಿದನು ಕಣ್ಣಕಳೆ ಎಂದು ಬೆಸಸಲು ಮಂಚಿಮರಸನೊಡಗೊಂಡು ಪೋಗೆ ||೮||

---

[1] ತಡೆದ (ಖ).

ಪುರಜನಂ ಪರಿಜನಂ ನೆರೆದು ಚಿಂತಿಸುತೆಲ್ಲ
ಹರಗಣಂಗಳ್ಕೂಡಿ[1]ಶಿವಶಿವಾ ಎಂದೊಱಲಿ[1]
ಕರಣಿಕರ ನಿವಹಕ್ಕೆ ಬೆಱಗುಹೊಡೆದಂತೆಲ್ಲ ತನತನಗೆ ಬಾಯ್ಬಿಡುತಿರೆ।
ಪರಮಪ್ರಧಾನರೆಲ್ಲರು ನೋಡಿ ತಲೆವಾಗಿ
ದುರುಳಕೊಂಡೆಯರ ನುಡಿಗೇಳ್ದುದಿದು ವಿಪರೀತ
ಪರಮಶರಣನ ವಧಿಸಲೆಂದು ಕಳುಹಿದ ಪ್ರಳಯಕಾಲ ಇವಗೆಂದೆನುತಿರೆ ॥ ೯ ॥

ಮುಂದುಗಾಣದೆ ರಾಯ ಕಳುಹಿದನು ಇವರ ದೆಸೆ
ಯಿಂದೆ ಬ್ರಹ್ಮೇತಿ ಸಂಭವಿಸುತಿದೆ ಬಿಜ್ಜಳಗೆ
ಬಂದಿತ್ತು ಕೇಡು ದಣ್ಣಾಯಕರಿಗಱಪಲದ ಭಾವಜ್ಞ ಬಸವೇಶನು।
ನೊಂದು ಮನದಲಿ ನೋಡುತಿಹ ಸಮಯದ[2]ಲ್ಲ[2]ವರು
ತಂದು ಕುಳ್ಳಿರಿಸಲ್ಕೆ ಪಂಚಾಕ್ಷರಿಯನು ಮುದ
ದಿಂದೆ ನೆನೆದನು ರುದ್ರಭೂಮಿಯೊಳು ಸೊಡ್ಡಳಂ ಭೂರುದ್ರ ಬಸವೇಶನ ॥೧೦॥

ಮುನ್ನವೊಂದಿನ ಕನ್ನವಿಕ್ಕಿದವರನು ತಂದು
ಚಿ[3]ನ್ನಹಚ[3]ರಿತವಾಗಿ ಕಡಿಯೆಂದು ಕಳುಹಿದರೆ
ಚೆನ್ನಾಗಿ ಮೆಱೆಸುತ್ತ ತಂದವರ ದೂಹೆಗಾಡಿನೊಳು ತಲೆಗಳ ಹೊಡೆಯಲು।
ಸನ್ನುತಶಿವೈಕ್ಯ ಸೊಡ್ಡಳಬಾಚಿದೇವಯ್ಯ
ಪನ್ನಗಾಧರನ ನೆನೆವುತ ನೋಡೆ ಮುಂಡಗಳಿ
ಗುನ್ನತಿಕೆಯಿಂದೆ ಮಿಗೆ ಜೀವಗಳು ತುಂಬಿ ಬರಲೇಳಲಾ ಜನರೋಡಲು ॥೧೧॥

ಮುಂಡಗಳು ಎದ್ದು ಎಡಬಲದೆಕ್ಕಟಿಗರುಗಳ
[4]ಖಂಡೆಗಳ[4] ಸೆಳೆಕೊಂಡು ಚಾರಿವರಿವುತ ಕಡಿಯೆ
ಕೊಂಡೆಯರು ಕೆದಱಿಬಿದ್ದೋಡುತಿರೆ ಬೆಂಬತ್ತಿಬರೆ ಹೆದರಿಸುತ್ತ [5]ಕೆಲರು[5]।
ಮುಂಡವೆರಡಱ ದೆಸೆಗಳಿಂದ ಮೂವತ್ತಾಱು
ಮುಂಡಗಳು ನಿಂದು ಹೊಡೆದವು ಮತ್ತೆ ಕೆಲಕೆಲರ
ಮುಂಡಗಳು ಬಿದ್ದಿದ್ದುವವಕೆ ಕಡೆಮೊದಲಿಲ್ಲ ರಣಮಯವನೇನೆಂಬೆನು ॥ ೧೨ ॥

ಖಂಡೆಯದ ಘಾಯದಲಿ ಡೆಂಡೆಣಿಸಿ ಬೀಳುತಿರೆ
ಗಂಡುಗಲಿಗಳ ಹೊಡೆಯೆ ಖಂಡಗಳು ಕೆದಱುತಿರೆ
ತಂಡತಂಡದ ಹಿಂಡುಗಳ ಹೆಣದ ಬಣಬೆಗಳೊಳತಿಭಯಂಕರವಾಗಲು।

---

[1] ಶಿವಶಿವಾಯೆನುತ (ಗ.ಘ.ಕ.ಥ). [2] ಲ್ಲಿ (ಖ). [3] ನ್ನಚೋ (ಘ). [4] ಖಂಡೆಯವ (ಕ.ಗ.ಖ). [5] ಕೆಲರ (ಖ).

[1]ಕೊಂಡೆ[1]ಗಾರಪ್ಪರಸಗಳಿಗೆ ತಾ ಬಲುಘಾಯ
ಹಿಂಡುಗಲಕನು ತಿಪ್ಪರಸನ ಭುಜ ತುಂಡಿಸಿತು
ಕುಂಡಲದ ನೇಮಿ ರಾಘವನ ಬಾಯ್ ಹಱಿಯಿತ್ತು ಮಂಚರಸನೋಡಿಬರುತ
॥ ೧೩ ॥

ಹೊದಱಿಳ್ಳೆ ಹೊಯ್ಯುತುಬ್ಬಸಗೊಳುತ ಕಂಗೆಡುತ
ಕದುಬಿ ಹಿಂದಕೆ ತಿರುಗಿ ನೋಡುತ್ತ ಬೀಳುತ್ತ
ಹದನಕೊಡುತ[2]ಲೆ[2]ಬಾಯ್ಗೆ ನಾಲ್ದೆಸೆಯನೀಕ್ಷಿಸುತ ಬಿದ್ದ ಚಾವಡಿಯ ಮುಂದೆ।
ಒದೆದುಕೊಳುತಲಿ ಕಾಲುಗಳ [3]ಕಣ್ಣ[3]ದುರುದುರನೆ
ಹೊದಿಕೆಯಂ ಮಱೆದು ನಾಣ್ಗೆಟ್ಟು ಅದೆಯುದೆ ಎನಲು
ಬುಧಜನಂಗಳು ನೋಡಿ ಚಿಂತಿಸುತ್ತಿರೆ ರಾಯ ಮಂತ್ರವಾದಿಗಳ ನೋಡೆ ॥ ೧೪ ॥

ಗ್ರಹದ ಮಂತ್ರದ ಸಿಂಗರಸನ ನೋಡಲ್ಕೇಳೆ
ಬಹಳಮಂತ್ರದ ಬಲ್ಲರಸನು ತಾನೇಳುತಿರೆ
ಕುಹಕ[4]ಗು[4]ಮ್ಮಟ ಯಂತ್ರಗಳನು ನೀ ಮಾಡೆನುತ ಬಿಜ್ಜಳೇಶ್ವರ ಪೇಳಲು।
ವಹಿಲದಿಂದೆದ್ದು ರಕ್ಷೆ[5]ಗಳ[5] ಕರದೊಳು ಕಟ್ಟಿ
ಮಹಿಯೊಳುದ್ಭವವಾದ ಅಂಜನವ ತೆಗೆ[6]ದೆ[6]ಚ್ಚು
ತಿಹ ಸಮಯದಲ್ಲವನು ನಿದ್ರೆದಿಳಿದಂತೆದ್ದು ಭೂವರನೊಳಿಂತೆಂದನು ॥ ೧೫ ॥

ಚಿತ್ತೈಸಿದಿರೆ ಜೀಯ ಸೊಡ್ಡಳಂಬಾಚರಸ
ರತ್ತ ಸುಡುಗಾಡೊಳಿಹ ಮುಂಡವೆರಡನು ನೋಡೆ
ಮತ್ತೆ ಪುಟನೆಗೆದೆದ್ದು ಖಂಡೆಯವ ಸೆಳಕೊಂಡು ಕಾಳಿಮನ ಕೊಂದುಹಾಯ್ಕಿ।
ಸತ್ತುಹೋದನು ಕರಿಯಕೇಶವಂ ಪೋಚರಸ
ಮೃತ್ಯುವಿನ ಬಾಯಿಗೋಳಗಾದ ದಾಮೋದರನು
ಅತ್ಯಂತ ಕೊಲೆಯು ನಾನೇನೆಂಬೆ ಅದ್ಭುತವು ಲೋಕದೊಳಗತಿಚೋದ್ಯವು ॥ ೧೬ ॥

ಕೇಳು ನೃಪಗಜಸಿಂಹನೆಂಬ ಕಾಮನು ಬಿದ್ದ
ಕೋಳುವೋದನು ಅಂಕೆಕಾಱ ಸುರಗಿಯ ಬೊಮ್ಮ
ಆಳುತನದಲಿ ವ್ಯಾಘ್ರನೆಂಬ ಬಿರುದಿನಸೋಮ ಛಲದಂಕಮಲ್ಲ ಬಿದ್ದ।
ಗಾಳಿಗತಿವೇಗ ಕಾಲೊಳಗೆ ಶಿರಮನು ಬಿದ್ದ
ಸಾಳವನ ಬಿರುದುಳ್ಳ ರಣಭೈರವನು ಬಿದ್ದ
ಹೇಳುವರೆ ಮಿಾಸೆಮಱಿಗಂಡು ತೊಲಗದೆಕಂಭ ವಿರುಪ ಭೀಮರು ಬಿದ್ದರು ॥೧೭॥

---

[1] ತೊಂಡು (ಖ.ಗ). [2] ತಿ (ಕ.ಖ.ಗ.ಚ,ಛ). [3] ಕಂಕಣ (ಘ). [4] ಪ (ಕ).
[5] ಯನು (ಖ). [6] ದ್ದ (ಘ).

ಎಂದು ಮಂಚರಸ ಬಿನ್ನೈಸುತಿಹ ಸಮಯದೊಳು
ಬಂದು ಕೆಲಚರರುಗಳು ಕೈಮುಗಿವುತಲಿ ಪೇಳ್ವೆ
ವೆಂದು ಕಳವಳಿಸುತಿರೆ ರಾಯನೇನೇನೆಂದಡವರು ಮಗುಳಿಂತೆಂದರು।
ಹಿಂದೆ ಮೂವತ್ತಾರು ಮುಂಡಗಳು ಅಟ್ಟಿಬರೆ
ಮುಂದೆ ಬಂದವರು ಹೆಬ್ಬಾಗಿಲುಗಳನು ಇಕ್ಕೆ
ಇಂದು ಉಳಿಯಿತ್ತು ಪಟ್ಟಣವೆಂದು ಪೇಳುತಿರೆ ಬಸವೇಶನಂ ಕರೆಯೆನೆ ॥ ೧೮ ॥

ಚರಣುಗಳು ಹರಿತಂದು ನಿಂದು ಕರಗಳ ಮುಗಿದು
ಧರಣೀಶ ನಿಮ್ಮಬರವೇಳ್ದನೆನಲೆದ್ದು ತಾ
ಪುರಹರನು ಬಂದಂತೆ ಕಾಲಹರ ಬಂದಂತೆ ಸ್ಮರಹರನು ಪ್ರಳಯಹರನು।
ದುರಿತಹರ ಬಂದಂತೆ ವಿಷಧರನು ಬಂದಂತೆ
ವರವೀರಭದ್ರ ದಕ್ಷನ ಮುಖಕೆ ಬಂದಂತೆ
ಹರಮೂರ್ತಿವೀರಶೈವಾಗಮಾಚಾರ್ಯ ಬಸವೇಶ ತಾ ಬಂದು ನಿಲಲು ॥ ೧೯ ॥

ಬನ್ನಿದಣ್ನಾಯಕರೆನುತ್ತ ಬಿಜ್ಜಳರಾಯ
ತನ್ನ ಬಲಗದ್ದುಗೆಯಮೇಲೆ ಕುಳ್ಳಿರುತಿರ
ಲ್ಕುನ್ನತಾಲಾಪಚಿಂತಾಂದೋಳ ಮುಸುಕಿ ಸಭೆಯೆಲ್ಲ ಕಂಗೆಡುತಿರಲ್ಕೆ।
ಖಿನ್ನವಾಗರಸು ಬಸವೇಶ್ವರನ ಮೊಗ ನೋಡಿ
ಬಿನ್ನಪವ ಕೇಳೆಂದು ಕರಕಮಲಗಳ ಮುಗಿದು
ಎನ್ನ ಅವಗುಣವ ನೋಡಲ್ಕೇನು ಹುರುಳಿಲ್ಲ ಸಲಹು ದಂಡಾಧೀಶ್ವರ ॥ ೨೦ ॥

ಕೇಳಿದಿರೆ ನೀವು ನಾ ನೆಗಳ್ದ ಕೃತ್ರಿಮಗಳನು
ಕೀಳುಗೊಂಡೆಯರ ಮಾತಂಗೇಳಿ ಮರುಳಾದೆ
ಭಾಳಲೋಚನನ ಭಕ್ತನು ಸೊಡ್ಡಳಂಬಾಚಿರಾಜಯ್ಯಗಂ ಮುನಿದೆನು।
ಹೇಳುವಡೆ ಅತಿಭಯಂಕರವಾಗುತದೆ ಎಂಬ
ವೇಳೆಯೊಳು ಮುಂಡಗಳು ಬಂದ[1]ವನ[1] ಪುರವೆಲ್ಲ
ಗೋಳಿಟ್ಟುಬರೆ ಕಂಡು ನೃಪನ ಮನ ಕಳವಳಿಸಿ ಬಸವ ರಕ್ಷಿಸು ಎನುತಿರೆ ॥೨೧॥

ಅಂಜದಿರೆನುತ್ತ ಹಸ್ತವ ಮಸ್ತಕದೊಳಿಟ್ಟು
ಕುಂಜರಾಜಿನಧರನ ವರಮೂರ್ತಿ ಬಸವ ಭವ
ಭಂಜನನು ಬಸವ ನಿಜನಿತ್ಯಪರಿಪೂರ್ಣಾತ್ಮ ಕಂಜಭವಶಿರಕರಧರ।
ನಂಜುಗೊರಳನ ಸದ್ಮಶ ಬಸವ ಪ್ರಧಾನ ಮೃ
ತ್ಯುಂಜಯನ ನೆನವುತಲಿ ಬಿಜ್ಜಳೇಶ್ವರಗೆ ತಾ
ಸಂಜೀವನವ ಮಾಡಬೇಕೆಂದು ನಡೆತಂದ ಭಾಳಾಕ್ಷನವತಾರನು ॥ ೨೨ ॥

---

[1] ವನೆ (ಘ).

ನಡೆತಂದ ರಾಯ ರಾವುತರ ಗೊಂದಣದೊಳಗೆ
ಎಡಬಲದ ಎಕ್ಕಟಿಗರುಗಳ ಸಂದಣಿಯೊಳಗೆ
ಬಿಡದೆ ಇಱಿ ಕಡಿ ಎಂಬ ನಾಯಕರ ಬಲದೊಳಗೆ ಗಜತುರಗ ಮೋಹರದೊಳು।
ಒಡನೆ ಪಿಡಿದಿಹ ಸುರಗಿ ನಾರಾಚ ಪಿಂಡ್ವಾಳ
ದೊಡನೆ ಮುದ್ಗರ ಕೊಂತ ಖಡ್ಗ ತೋಮರ ಚಕ್ರ
ಜಡಿದು ನೂಂಕುವ ಸಬಳವಾ ಸಮೂಹದ ನಡುವೆ ಬಂದ ರವಿಕುಲತಿಲಕನು ॥೨೩॥

ಬಹ ಸಮಯದಲ್ಲಿತ್ತ ಬಾಗಿಲುಗಳಿಕ್ಕಿರಲು
ಕುಹಕಮಂಚರಸ ತಾ ರಾಯನೊಳಗಿಂತೆಂದ
ಅಹಹ ಕೈತಪ್ಪಾಗುತಿದೆ ನೀವು ಮುಂಚದಿರಿ [1]ಅಂಕಗಳ[1]ತೆಗೆಯಬೇಡ।
ಗಹಗಹಿಸಿ ನಗುತ ಬಸವೇಶ ರಾಯನ ಮುಂದೆ
ವಹಿಲದಿಂದೆಂದಂ ಕವಾಟಗಳ ತೆಗೆ ಎನಲು
ಮಹಿಪಾಲ ಬೇಡವೆಂದೆನುತ ಸಾಱಲು ಕದವ ತೆಗೆಸಿದನು ಭೂರುದ್ರನು ॥೨೪॥

ಧರಣೀಶ ಬಾರೆಂದು ಕರೆವುತಿರೆ ಮಂಚಣ್ಣ
ಕರವೆರಡು ಮುಗಿದು ನೀ ಹೋಗದಿರು ಸಾಱಿದೆನು
ಕೊರಳಗೊಯ್ವರ ಮಾತು ಕಾಣಬಾರದು ನಿಮಗೆ ಏನ ಮಾಡಿಹರೆಂಬುದ।
ಅಱಿಯಬಾರದು ತಂದೆ ನಾವೆಲ್ಲ ಕೆಟ್ಟೆವೆನೆ
ಪರಿವಾರವಂ ಕಳುಪು ಮುಂದಕಡಿಯಿಡಬೇಡ
ನೆರೆದ ಮಂತ್ರಿಗಳು ಹೇಳುತ್ತಿರಲು ರಾಯ ಬಸವೇಶ್ವರನ ಮೊಗನೋಡಲು ॥೨೫॥

ಕಷ್ಟಕೊಂಡೆಯರ ಮಾತಂ ಕೇಳಿ ನೃಪ ನೀನು
ಕೆಟ್ಟುಹೋಗದಿರೆನುತ ಕರುಣದಿಂ ಬಸವೇಶ
ಕೊಟ್ಟನಭಯವನು ಬಾಯೆನುತ ಕೈವಿಡಿದು ಬರೆ ಮುಂಡಗಳು ಬಿದ್ದು ನಮಿಸೆ।
ದುಷ್ಟದುರ್ಮಾರ್ಗಕುಹಕಗಳೆಂಬ ಕುಟಿಲಗಳ
ಮೆಟ್ಟಿನಿಂದಚಲಿತಮಹಾಮೂರ್ತಿ ದಂಡೇಶ
ನಿಟ್ಟಿಸುತ ಏಳೆನಲು ಮುಂಡಗಳು ಎದ್ದು ಕರಗಳ ಮುಗಿಯಲರಸು ಬೆದರೆ ॥೨೬॥

ನೋಡಿ ಬರಲಮ್ಮೆನಾನೀ ಭಯಂಕರದೊಳಗೆ
ಕೂಡಿಬರಲಮ್ಮೆ ಮುಂದಕೆ ನಿಮ್ಮ ಸಂಗಾತ
ಹೇಡಿಗೊಳುತಿದೆ ಮನವು ಬಸವದಂಡಾಧೀಶ ಮುಂಡಗಳ ಮುಂದೆ ಕಳುಹು।
ಓಡಿ ಕುಣಿದಾಡುತ್ತ ನಡೆವುತ್ತ ಖಡ್ಗವಂ
ನೀಡುತ್ತ ಜಡಿವುತ್ತ ಕಡಿವುತ್ತ ಕೆಡವುತ್ತ
ಜೋಡೊಡೆದುದಾಂಟುತ್ತ ಭರದಿಂದೆ ಸೊಡ್ಡಳಂ ಬಾಚರಸರೆಡೆಗೆ ಬರಲು ॥೨೭॥

---

[1] ಅಗಣಿಗಳ (ಕ.ಪ).

ಅರಸುದಣ್ನಾಯಕರ್ಸಹಿತ ಬರೆ ಮುಂದೆ ಬಿ
ದ್ದೊರಲುತಿರ್ದರ್ಕೆಲರು ಹೊರಳುತಿರ್ದರ್ಕೆಲರು
ನರಳುತಿರ್ದರ್ಕೆಲರು ಬಲುಘಾಯವಡೆದೆಲ್ಲ ಬದ್ದು ಸತ್ತರ್ಕೆಲಬರು ।
ಧರಣೀಶ ಬೆಚ್ಚಿ ಬೆದಱುತ ಮುಂಡಗಳ ಕಂಡು
ವರಮೂರ್ತಿ ಬಸವದಂಡಾಧಿಪಗೆ ಶರಣೆನಲು
ಕರುಣದಿಂ ನೃಪನ ತಂದೆಱಗಿಸಿದ ಸೊಡ್ಡಳಂಬಾಚರಸರಡಿಯ ಮೇಲೆ ॥೨೮॥

ಕೃಪೆಯಿಂದ ಮಸ್ತಕವ ಪಿಡಿದೆತ್ತಿ ನೋಡುತಿರೆ
ಕುಪಿತಕೊಂಡೆಯರೆಲ್ಲ ಹೊಡೆಗೆಡೆದು ಬಿದ್ದು ಸ
ರ್ವಾಪರಾಧಗಳ ನಾವು ಮಾಡಿದವರೆಂದೆನುತ ನಮಿಸಿ ಪ್ರಾಣವಕೊಡುಯೆನೆ।
ಕಪಟನಾಟಕಸೂತ್ರಧಾರಿ ಬಸವೇಶ್ವರನು
ನೃಪನ ಬಲ ಬಿದ್ದಿರಲು ಕಂಡು ಕರಪರುಷದಿಂ
ವಿಪರೀತಚರಿತಸೊಡ್ಡಳಬಾಚರಸರ ಪದವಿಡಿದು ಜಪಿಸುತ್ತ ನೋಡೆ ॥೨೯॥

ಬ್ರಹ್ಮಸೃಷ್ಟಿಗಳೆಂದು ನುಡಿವ ಮನುಜರ್ಕೇಳಿ
ಬ್ರಹ್ಮಲಿಪಿಗಳ ತೊಡೆದು ಬರೆವ ಸಾಕಾರ ಚಿ
ದ್ಬ್ರಹ್ಮನವತಾರ ಬಸವಾಂಕನೀ ಮುಂಡಗಳಿಗಸುವನೀಯಲ್ಕವದಿರು ।
ತಮ್ಮ ಶಿರಗಳನು ಹತ್ತಿಸಿಕೊಳುತ ಕೆಲರುಗಳ
ನಿಮ್ಮ ಶಿರವಿದೆ ಕೊಳ್ಳಿ ನಮ್ಮ ಶಿರಗಳ ತನ್ನಿ
ಸಮ್ಮಂಧಗಳ ಮಾಡಿಕೊಳ್ಳಿ ನೀವೆಂದೆನುತ ನಲಿದು ಏಳುತ್ತಲಿರಲು ॥೩೦॥

ಮುನ್ನಯೇಳಿಸಿದ ಮುಂಡಗಳೆರಡು ನಿಂತಿರಲು
ಬಿನ್ನಾಣಿ ಬಸವೇಶ ನೋಡೆ ತಲೆಗಳನವರು
ಭಿನ್ನವಿಲ್ಲದೆ ಹಿಂದುಮುಂದಾಗಿ ಹತ್ತಿಸುತ ನಡೆಗೊಳಲು ಕುಹಕಕುಲದ ।
ಕುನ್ನಿಕೊಂಡೆಯರ ಮಾತಂ ಕೇಳಿ ಕಡೆಗೆನೀ
ನಿನ್ನನೀ[1]ನ[1]ಱಿತು ಮರುಳಾಗದಿರು ನೃಪ ಎನುತ
ಚೆನ್ನಬಸವಾಂಕ ಪೇಳಲು ರಾಯ ಬಸವದಂಡಾಧಿಪನ ನುತಿಸುತೆಂದ ॥೩೧॥

ಹರಸಮಯ ಊರ್ಜಿತನೆ ಪರಸಮಯತಿಮಿರಾರ್ಕ
ದುರಿತಗಜಪಂಚಾಸ್ಯ ಅರಿಕುಲ[2]ಸುಗಿರಿ[2]ವಜ್ರ
ನರಸಿಂಹಹ[3]ತ[3]ಶರಭ ಹರಿನಯನಪೂಜಿತನೆ ವರಮೂರ್ತಿ ಬಸವೇಶ್ವರ ।
ಹಿರಿದಹ ಭವಂಗಳನು ಕೆಡಿಸಿದಪ್ರತಿಮನೇ
ಪರಮಪಾವನಮೂರ್ತಿಯೆನುತ ಕೀರ್ತಿಸುತರಸು
ತಿರುಗುತಿತ್ತಲು ಪುರಕೆ ಭಕ್ತವಾರಾಶಿವರ್ಧನಪೂರ್ಣಚಂದ್ರನೆನಲು ॥೩೨॥

---

[1] ವ (ಧ). [2] ಸುರಗಿರಿ (ಕ). [3] ರ (ಫ).

ಅಷ್ಟಮದಗಜಗಳನು ಮೆಟ್ಟಿಸೀಳಿದ ಮಹಿಮ
ದುಷ್ಟವಹ ಸಪ್ತವೆಸನಗಳೆಂಬ ಪಾಶಗಳ
ನಿಟ್ಟೊರಸಿದಪ್ರತಿಮ ಕಷ್ಟಷಡ್ವರ್ಗಗಳ ಹುಟ್ಟುಹೊಂದುಗಳಿಲ್ಲದ ।
ಬಟ್ಟೆಗಳೊಳಿರ್ದ ಪಂಚೇಂದ್ರಿ[1]ಯದ[1] ಕಾಹುರದ
ತೊಟ್ಟುಗಳ ಕಿತ್ತುತಾಯ್ಕಿದ ಮಹಾಪುರುಷಂಗೆ
ಸಾಷ್ಟಾಂಗವೆಱಗಿ ಬಿಜ್ಜಳರಾಯ ಪಟ್ಟಣವ ಶೃಂಗರಿಸಲೆಂದು ಕಳುಪೆ ॥೨೩॥

ಸಾಱಿದರು ಸೋಮಸೂರಿಯವೀಧಿಗಳೊಳೆಲ್ಲ
ಮಾರಾರಿಯಪರಾವತಾರ ಬರುತಹನೆಂದು
ಕೇರಿಕೇರಿಗಳಿತ್ತರದಲಿ ಗುಡಿತೋರಣವ ಕಟ್ಟಿಸಿದನುತ್ಸಹದೊಳು ।
ಬೇಱಿಪಚ್ಚೆಯ ತೋರಣಂ ಮಕರತೋರಣಂ
ತೋಱಿದವು ಚಿತ್ರಪತ್ರದ ಪಳುಕುತೋರಣಂ
ಮೀಱಿದವು ಗಗನಕ್ಕೆ ಮಱೆಗಟ್ಟಿ ಒಪ್ಪಿದವು ಪಲ್ಲವದ ಛತ್ರಂಗಳು ॥೨೪॥

ಅತ್ತಲಾ ಭೂಮೀಶ ಬಹ ಸಂಭ್ರಮದ ರಾಜ
ಮೊತ್ತವಿಡುಕುರಿನ ಸಂದಣಿಯ ಸಾವಂತರಿಂ
ಮತ್ತೆ ಪ್ರಧಾನರೊಗ್ಗಿನೊಳು ಮನ್ನೆಯನಿವಹದೊತ್ತಿನೆಡಬಲದಿಂದಲಿ ।
ಸುತ್ತಿ[2]ಯಿ[2]ತ್ತರದಿಂದ ಬಹ ಮಂಡಲೀಕರ್ಗ
ಳ್ಮತ್ತಿ ನೆಲೆಗೊಂಡು ಬಹ ಚತುರಂಗಬಲದ ಸಂ
ಪತ್ತಿನೊಳಗುಪ್ಪಡಿಪ ದಂಡಧರರುಗಳಖಿಳ ಕುಲದಿಂದ ಪುರವೊಕ್ಕನು ॥೨೫॥

ಪರಮಸಂತೋಷದಿಂ ಬುಧಜನಂಗಳ ಕೂಡಿ
ಹರುಷದಿಂ ಗೀತವಾದ್ಯಗಳು ನೃತ್ಯಗಳಿಂದ
ಬರತೊಡಗಿರ್ದೇನೆಂಬೆ ವಾರಾಶಿ ಮೇಲ್ವಱಿದ ಮಾಳ್ಕೆಯಿಂ ವೀರಭಟರ ।
ವರಸತಿಯರುಗಳುಳಿದೆವೆಂಬ ಸಂತೋಷದಿಂ
ಪುರದ ವಾರಾಂಗನೆಯರ.ಗಳಾರತಿಯನೆತ್ತಿ
ವರಮೂರ್ತಿ ಬಸವೇಶನಂ ನೋಡಿ ಕೀರ್ತಿಸುವ ವನಿತೆಯರ ಸಂದಣಿಯೊಳು॥

ಕೊಂಡೆಯರ ಗಂಡ ದಂಡಾಧೀಶ ಬರುತಹನೆ
ಹಿಂಡುದೂಷಕರ ಮಸ್ತಕಶೂಲ ಬರುತಹನೆ
ಲಂಡಪರವಾದಿಗಳ ಬಂಡು ಮಾಡಿದ ಪುರುಷಪರುಷ ಬರುತಹನೆ ಎಂದು ।
ಮುಂಡಗಳಿಗಸುವಿತ್ತನಖಿಳಪರಿಪೂರ್ಣನಹ
ಭಂಡಾರಿಬಸವಣ್ಣ ಬಂದನಿದೆ ಯಿದೆ ಎನುತ
ಕೊಂಡಾಡಿ ತಲೆದೂಗಿ ಸರ್ವಜನರುಗಳೆಲ್ಲ ಕೈಯೆತ್ತಿ ಪೊಡಮಡುತಿರೆ ॥೨೭॥

---

[1] ಗಳ (ಗ.ಕ.ಛ.ಚ). [2] ಲಿ (ಫ).

ಬಂದರಮನೆಯ ಹೊಕ್ಕು ರಾಯ ಬಸವೇಶಂಗೆ
ವಂದಿಸುತ ಸೊಡ್ಡಳಂ ಬಾಚರಸರಿಂಗೆ ಮುದ
ದಿಂದ ವಸ್ತ್ರಾಭರಣದುಡುಗೊಱೆಗಳಿತ್ತು ಕಳುಪಲ್ಕತ್ತ ಶರಣಕುಲದ ।
ಸಿಂಧು ತಿರುಗಿತ್ತು ಸದ್ಭಕ್ತಮಾಹೇಶ್ವರರ
ಸಂದೋಹದೊಳಗೆ ನಡೆತಂದು ಬಸವೇಶ್ವರನು
ಮಂದಿರವ ಪೊಕ್ಕನೆಂದಾದಿನಂದೀಶ ಮುದದಿಂದೆ ಪ್ರಮಥರ್ಗೊರೆದನು ॥೩೮॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು [1]ಮುಂಡಕಸುವಿತ್ತು ಬಾಚರಸ[1] ಮೆಱೆದ ಸಂಧಿ
॥ ೩೯ ॥

---

[1] ಭಕ್ತಿವಾದದಪವಾಡಗಳ (ಕ.ಖ.ಘ), ಮುಂಡಗಳಿಗಸುವಿತ್ತುಪವಾಡಗಳ (ಪ).

ಇಪ್ಪತ್ತನಾಲ್ಕನೆಯ ಸಂಧಿ

ಸೂಚನೆ—

ಪರಮಪಾವನ ಭಸಿತಮಂ ಧರಿಸಿಕೊಂಡಿರ್ಪ
ಸುರೆಯ ಹರವಿಯ ಕಂಡು ಕೊಂಡೆಯರು ಸೂಚಿಸ
ಲ್ಕರಸಿದು ಪವಿತ್ರವೇ ಎನಲು ಗೋಕ್ಷೀರಮಂ ಮಾಡಿ ತೋಱಿದ ಬಸವನು॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥ ೧ ॥

ಶ್ರೀಮಹಾಪ್ರಮಥಸಂದೋಹ ಚಿತ್ತೈಸಿ ಸ
ತ್ಪ್ರೇಮದಿಂ ನಿಮ್ಮಬಸವನ ಸುಚಾರಿತ್ರಮಂ
ಭೂಮಿಗದು ತಿಲಕವೆಂದೆನಿಸಿಪ್ಪ ಕಲ್ಯಾಣದಭಿರಾಮ ಬಿಜ್ಜಳಂಗೆ ।
ತಾ ಮಹಾಪರಮಪ್ರಧಾನನಾಗಿರುತಿರಲ್
ಕ್ಷೇಮದಿಂ ನಡುವೆ ನೆಗಳ್ದತಿಚಿತ್ರಕಥನಮಂ
ಸ್ವಾಮಿಗಳು ಲಾಲಿಸುವುದೆಂದು ನಂದೀಶ ಪ್ರಮಥರ್ಗೊರೆದ ಕಾರಣವಿದು॥ ೨ ॥

ಆದಿಯೊಳು ಶಿವನ ಸಭೆಯೊಳಗೆ ಕ್ರೀ ಭಾವಸಂ
ಪಾದಿಸಲು ಹರನವರ ಕರೆದು ಮರ್ತ್ಯದೊಳುದಿಸಿ
ಭೇದಾದಿಭೇದದಿಂ[1]ದಂತರಮ[1] ಹಂತರವನಲ್ಲಱಿವುದೆಂದೆನಲು ಬಂದು ।
ಈ ಧರಾತಳಕೆ ತವರೆನಿಪ ಕಲ್ಯಾಣಪುರ
ದಾದಿಚಾಳೋಕ್ಯ ಸಂತತಿಯ ಬಿಜ್ಜಳರಾಯ
ಮೇದಿನಿಯ ಪಾಲಿಸುತ್ತಿರ್ದನಾ ಕ್ರೀರೂಪನೃಪ ಪರಮಹರುಷದಿಂದ ॥ ೩ ॥

ಪಶುಪತಿಯ ಬೆಸನದಿಂದೈದೆ ಸಂತೋಷದಲಿ
ವಸುಮತಿಯೊಳಿಂಗಳೇಶ್ವರಬಾಗವಾಡಿಯೊಳು
ಎಸೆವ ಮಂಡಗೆಯ ಮಾದರಸಂಗೆ ಜನಿಸೊಂದುಕಾರಣದಿ ಕಲ್ಯಾಣದ।

---

[1] ತರಮ (ಗ.ಛ.ಖ.ಚ).

ಎಸೆವ ಬಿಜ್ಜಳನೃಪಗೆ ಭಾವ ಪ್ರಧಾನನಾ
ಗೆ[1]ಸಮಾನ[1]ಬಸವದಂಡಾಧೀಶ ನೆಂದಿಂತು
ಕುಶಲದಿಂ ಕ್ರೀಭಾವವರಸುಮಂತ್ರಿಗಳಾಗಿ ಸುಖಮಿರಲ್ಕೊಂದು ದಿವಸ ॥ ೪ ॥

ಪರಮಸಂತೋಷದಿಂದರಸು ಬಿಜ್ಜಳರಾಯ
ಹಿರಿಯ ದಣ್ಣಾಯಕರ್ಮಂತ್ರಿಗಳ್ಮನ್ನೆಯ
ರ್ಧರಣಿಪತಿಗಳ್ಸಕಲಮಂಡಲಿಕ ಸಾವಂತ ಮನ್ನೆಯರ ಪರಿವಾರವು।
ಕರಿಘ[2]ಟೆಗಳಂ[2]ತುರಗಸಂದೋಹ ರಥವು ಮೋ
ಹರಿಸಿ ಕಟ್ಟಿಗೆಕಾಱರುಘ್ಘಡಿಸೆ ಬಹುವಾದ್ಯ
ಮೊಱೆಯೆ ವೈ[3]ಯಾ[3]ಳಿಗೆಯ್ದೊಡನೆ ತಿರುಗಿದ ಸಿರಿಯ ಸಂಭ್ರಮಾಡಂಬರದೊಳು
॥ ೫ ॥

ಅರಸು ವೈಯಾಳಿಯಿಂ ಬರಲೊಂದು ತಾಣದೊಳು
ಹರನ ಭವನದ ಮುಂದೆ ಮೆಱೆವ ತಾವರೆಗೊಳದ
ಉರುತೀರದೊಳ್ಮೊಲ್ಲೆ ಮಲ್ಲಿಗೆಯು ಸೇವಂತಿ ಜಾದಿ ಸಂಪಗೆಯು ದವನ।
ಸುರುಚಿರದ ಸೌರಭ್ಯ ನವಪುಷ್ಪವಾಟಿಯೊಳು
ಪರಮಗುರುಲಿಂಗಜಂಗಮನಿವಹ ರುದ್ರಾಕ್ಷಿ
ಸರವನಳವಡಿಸಿ ಭಸಿತವನು ಸರ್ವಾಂಗದೊಳ್ಧರಿಸಿರಲು ಕಂಡು ನೃಪನು ॥ ೬ ॥

ನಸುನಗುತ ಬಸವದಂಡಾಧಿಪನ ಮೊಗನೋಡಿ
ವಸುಧೆಯೊಳ್ಭಸಿತಮಂ ಭಾಳದೊಳ್ಭುಜ ಕಂಠ
ಮಿಸುಪ ಬಾಹುಗಳ ಮಣಿಬಂಧ ಪೇರುರದಿ ಧರಿಸುವುದೆಂಬವಾಗಮಗಳು।
ಎಸೆವ ಸರ್ವಾಂಗದೊಳು ಧರಿಸುವುದಿದಾವ ಪರಿ
ಉಸುರ್ವುದಾಗಮ[4]ವುಳ್ಳಡೆ[4]ಂದರಸು ಕೇಳಲ್ಕೆ
ಬೆಸಸಿದನು ದಂಡನಾಯಕನು ತಾನೊಸೆದು ಶಿವಧರ್ಮೋತ್ತರಾಗಮವನು ॥ ೭ ॥

ಶಿವಧರ್ಮಾಗಮದಲ್ಲಿ—

ಶ್ಲೋ॥ ಭಸ್ಮಸ್ನಾನಂ ನದೀಸ್ನಾ [[5]ನಾದಸಂಖ್ಯೇಯಗುಣಾನ್ವಿತಂ[5]]
ತಸ್ಮಾ [[6]ದ್ವಾರುಣ ಮುತ್ಸೃಜ್ಯ ಸ್ನಾನ[6]] ಮಾಗ್ನೇಯಮಾಚರೇತ್
॥ ೧ ॥

---

[1] ಸೆವುತಿಹ (ಜ). [2] ಟಾವಳಿ (ಜ), ಟೆಗಳಿಂ (ಖ). [3] ಹಾ (ಜ). [4] ವಾವುದೆಂ (ಕ). [5] ನಂ ಸಂಖ್ಯಯಾ ಗುಣಮಾಧಿಕಂ (ಕ.ಗ.ಚ.ಛ.ಜ), ನಂಸಾಂಖ್ಯಯ ಗುಣಮಾಧಿಕಂ (ಖ). [6] ತ್ಕಾರಣಸರ್ವಾಂಗಂಸ್ನಾನ (ಖ), ತ್ಕಾರಣಮೃತ್ಯುಂಜಸ್ನಾನ (ಕ.ಗ.ಚ.ಛ.ಜ).

ಸರ್ವತೀರ್ಥೇಷು ಯತ್ಪುಣ್ಯಂ ಸರ್ವಯಜ್ಞೇಷು ಯತ್ಫಲಂ
[1]ತತ್ಫಲಂಕೋಟಿ[1]ಗುಣಿತಂ ಭಸ್ಮಸ್ನಾನಂ ನ ಸಂಶಯಃ ॥ ೨ ॥

ಭಸ್ಮಸ್ನಾನ ಪರೋಭೂತ್ವಾ ನ ಭೂತೋ ನ ಭವಿಷ್ಯತಿ
ಭಸ್ಮಾಂಗೀ ರೋಮಲಿಂಗೇಷು ಭಸ್ಮಸರ್ವಾರ್ಥಸಿದ್ಧಿಮತ್ ॥ ೩ ॥

* ಭಸ್ಮೋದ್ಧೂಳಿತಸರ್ವಾಂಗಂ ಆಪಾದಸ್ಥಲಮಸ್ತಕೇ
ರೋಮರೋಮ ಭವೇಲ್ಲಿಂಗಂ ಸ ಕಾ[2][ಯೋ][2]ಲಿಂಗಮುಚ್ಯತೇ ॥ ೪ ॥

ವಿದಿತಭಸ್ಮಾಂಗಿಗಳ ರೋಮಲಿಂಗಿಗಳೆಂದು
ಮುದದಿ ಶಿವಧರ್ಮೋತ್ತರವು ಪೇಳ್ವುದೈ ನೃಪತಿ
ಸದಮಲದ ಸರ್ವಾಂಗಲಿಂಗ ಚಿದ್ಭಸಿತ ಸೋಂಕಲ್ಸರ್ವಪಾ[3]ವನೆ[3]ಂಬ।
ಹದನರಾಯಂಗೆ ಪೇಳುತ್ತ ಬರುತಿರಲೈದೆ
ಒದವಿ ಪರಿವಾರ ರಥ ಪರಿಯೆ ಮದಗಜಗಳುಂ
ಕೆದಱುತ್ತ ಬೀದಿವರಿವುತ್ತಿರಲ್ತುರಗವೋಹರಗಳಿಂ ಕುಣಿವುತಿರಲು ॥ ೮ ॥

ಮುತ್ತಿಕವಿತಹ ಸುಭಟಮನ್ನೆಯರ ದಂಡಿಗೆಗ
ಳಿತ್ತರದಿ [4]ಚಾರು[4]ಚಾಮರಸಿಂಧು ಸೀಗುರಿಗ
ಳೆತ್ತಿದ ಪತಾಕೆಗಳ [5]ಝುಲ್ಲರಿಯು[5] ಠಕ್ಕೆಗಳ ಸಬಳಿಗರ ಸಂಭ್ರಮದೊ[6]ಳು[6]।
ಕೀರ್ತಿಸುವ ಭಟ್ಟರಕ್ಕರಿಗರೊತ್ತೊತ್ತೆಯಿಂ
ದುತ್ತಮದ ಪಟ್ಟಮದಗಜದ ಮಸ್ತಕದಲ್ಲಿ
ಮೂರ್ತಿಗೊಂಡಾ ರಾಜ ಮೌಕ್ತಿಕದ ಛತ್ರತಣ್ಣೆಳಲೊಳಾನಂದದಿಂದ ॥ ೯ ॥

ತಳಿತ ಬೆಳುಗೊಡೆಗಳೊಪ್ಪುವ [7]ಪಳಿಯ[7]ಪಲ್ಲವದ
ನೆಳಲೊಳಗೆ ಬಸವದಂಡಾಧೀಶ ತುರಗಮುಂ
ನಲಿದೇಱಿ ಬರುತ ರಾಜೋಪಚಾರಂಗಳಂ ನಡೆಸುತ್ತಲೆಂದಿನಂತೆ।
ನಲವಿಂದ ಬರುತಿರಲು [8]ಹೊಂ[8]ದಂಡಧರರುಲಿದು
ಘುಳುಘುಳಿಪ ಪರಿವಾರಮುಂ ಚಪ್ಪರಿಸೆ ರಾಯ
ದಳವು ಸಂಭ್ರಮದಿಂದ ನಡೆವ ಬಲಬಹಳತೆಗೆ ನೆಲನದಿರೆ ಭೋರ್ಗರೆಯುಲು ॥೧೦॥

---

[1] ಕೋಟಿಗುಣಾತಂತು (ಕ.ಗ,ಘ.ಥ). * ಇದು 'ಜ' ಪ್ರತಿಯಲ್ಲಿಲ್ಲ. [2] ಯು (ಕ.ಚ), ಯುಂ (ಗ.ಘ.ಥ.ಖ). [3] ಪವೆಂ (ಕ), ಪನೆಂ (ಘ), ವಿತ್ರವೆಂ (ಜ). [4] ಚವರ (ಜ), ಚೌರ (ಚ) ಚಾರ (ಗ.ಥ). [5] ಝುರಿಯ (ಖಚ.). [6] ಳಾಗ (ಖ). [7] ಪರಿಯ (ಖ), ಪಳೆಯ (ಗ.ಚ). [8] ಹೋ (ಕ.ಖ.ಗ.ಘ).

ಹೊಡೆವ ಭೇರಿಗಳ ರವವೆಸಗೆ ಬ್ರಹ್ಮಾಂಡಂಗ
ಳೊಡೆವಂತೆ ನಿಸ್ಸಾಳ ಸೂಳೈಸಿದವು ಲಗ್ಗ
[1]ಗೊಡುವ[1] ಚಂಬಕ ವಾದಿ ವೀರಣಂ ಡೌಡೆ ಹೆಗ್ಗರಡೆ ಬೊಂಬುಳಿ ಮದ್ದಳೆ।
ಹಿಡಿದು ಬಾರಿಸುವ ಜಯಘಂಟೆಗಳ ಹರುಷದಿಂ
ನುಡಿವ ಮುರುಜೆಗಳಾದಿಯಾದ ನಾನಾವಾದ್ಯ
ತುಡುಕಿದುವು ಮಂಗಳಮಹೋನ್ನತಿಯ ಬೀಱುತ್ತ ಪೊಡವಿಪನ ಬಲ ನಡೆದುದು ॥ ೧೧ ॥

ಕುದಿದು ಸ್ವರಗೈವ ಹೆಗ್ಗಾಳೆಗಳು ನಲಿನಲಿದು
ಪದುಳದಿಂ ಶಂಖಗಳ ದನಿ[2]ಯುಣ್ಮೆ[2] ಭೋರ್ಗರೆದು
ಮುದದಿ ಶೃಂಗಗಳ ರವವೆಸೆಯೆ ಸೂ[3]ಳ್ನು[3]ಡಿಗಳಲಿ ಕದುಬಿ ತುತ್ತುರಿಗಹಳೆಯು ।
ಹೆದರಿಸುವ ಚಿ[4]ನ್ನಗಹಳೆಯ ನಾದದಾಲಾಪ[4]
ದದ್ಭುತದ ರಾಗರಸಮಂ ನುಡಿವ ರಣವೌರಿ
ಯೊದವೆ ರಭಸದೊಳರಸು ಪುರವೊಗುವ ರಚನಾ [5]ವಿ[5]ಡಂಬರವನೇಂವೊಗಳ್ವೆನು ॥೧೨॥

ಸೃಷ್ಟೀಶ ಸಕಲತಳತಂತ್ರಸಹಿತುತ್ಸಹದಿ
ಪಟ್ಟಣದ ಬೀದಿಯೊಳು ಬರುತಿರಲ್ಕಲ್ಲೊಬ್ಬ
ಕಷ್ಟಕುಲ ಕಬ್ಬಿ[6]ಲ್[6]ತಿ ಸುರೆಯ ಹರವಿಗೆ ಬೂದಿಯಂ ಪೂಸಿ ಹೊತ್ತುಕೊಂಡು ।
ಇಟ್ಟಣಿಸಿದಂಗಡಿಯ ಬೀದಿಯೊಳ್ಪೋಗುತಿರೆ
ಜೇಷ್ಟಿಕೊಂಡೆಯ ಮಂಚಿ ರಾಘವಂ ತಮ್ಮಿಗಂ
ದುಷ್ಟಚೋಳಿಮನೋಲೆವೆಗ್ಗಡಿಗಳೆಂದೆಂಬ ಭ್ರಷ್ಟರೈವರು ಕಂಡರು ॥ ೧೩ ॥

ವಸುಧೀಶ ಚಿತ್ತೈಸು ಬಿನ್ನಪವನೆಂದು ಕರ
ವಿಸರುಹವನೆತ್ತಿ ಲಾವಕರು ದಂಡಾಧೀಶ
ನುಸುರಿದರ್ಥದ ತೆಱದಿ ಮದ್ಯಪಾನದ ಘಟಕ್ಕಂದೊಬ್ಬ ಕಬ್ಬಿ[7]ಲತ್ತಿ[7] ।
ಭಸಿತಮಂ ಪೂಸಿ ಹೊತ್ತೊಯ್ವುತಿರ್ದ[8]ಳೆಯೆ[8]ಂದು
ಪಿಸುಣರೊರೆಯಲು ರಾಯ ಮಂತ್ರಿಪನ ಮೊಗನೋಡಿ
ನಸುನಗುತಲಿದು ಶುದ್ಧವೇ ಯೆನಲು ಶುದ್ಧ ಶುದ್ಧಂ ಮಹಾಪಾವನವೆನೆ ॥ ೧೪ ॥

ತಥ್ಯವದು ಶುದ್ಧವರಭಸಿತ ಸೋಂಕಿರುತಿರಲು
ಮತ್ತೆ ಪಿಸುಣರ ಮಾತ ಕೇಳಲಾಗದು ನೃಪತಿ
ಉತ್ತಮದ ಗೋಕ್ಷೀರಕಲ್ಲದೀ ಭಸ್ಮಾಂಗ ಮತ್ತೊಂದಕಾಗದೆನಲು ।

---

[1] ವಡಿಯೆ (ಗ). [2] ಗೈವ (ಜ). [3] ಳ್ಮ (ಘ), ಳ್ಮ (ಖ.ಚ.ಛ.ಗ). [4] ನ್ನಗಳದನಿಯೊಳಾಂದೋಳಿಸು (ಜ). [5] ದಿ (ಖ.ಚ.ಕ). [6] ಲಿ (ಜ). [7] ಲಗಿತಿ (ಗ.ಛ), ಲಗಿತ್ತಿ (ಕ.ಖ.ಜ). [8] ಹಳೆಂ (ಖ.).

ಸತ್ಯವಚನವೊ [1]ಹೊತ್ತುಗಳೆವ ನುಡಿಯೋ[1] ಎಂದು
ಪೃಥ್ವೀಶ ಸಂಪಾದಿಸ[2]ಲ್ಕೆ ದಂ[2]ಡಾಧೀಶ
[3]ನೆತ್ತೊ[3]ರೆದನಪವಿತ್ರ ಭಸಿತದಿ ಪವಿತ್ರೆಂಬ ಜಾಬಾಲಸ್ಮೃತ್ಯರ್ಥವ ॥ ೧೫ ॥

ಜಾಬಾಲೋಪನಿಷತ್ತಿನಲ್ಲಿ—

ಅಪವಿತ್ರಂ ಪವಿತ್ರಂ ಸ್ಯಾತ್ತದ್ರೂಪಂ ಭಸ್ಮಮಿಶ್ರಿತಂ
ನಾನಾವಸ್ತು ಪ್ರಕಾರೇಣ ಭಸ್ಮ ಸರ್ವತ್ರ ಶುದ್ಧಿಮತ್ ॥ ೫ ॥

ಭೋಜನೇ ಚೋದಕೇ ಚೈವ[4][ಭಿನ್ನಾಂಗುಲಿ][4]ನಖಾನಿ ಚ
ಮತ್ಕುಣಂ ಮಕ್ಷುಕಶ್ಚೈವ ಕ್ರಿಮಿಕೇಶಾದಿಕಂ ತಥಾ ॥ ೬ ॥

ಅನ್ನಮುದಕಂ ಪಾಲ್ಮೊಸರ್ಘೃತಂ ತೈಲದೊಳು
ಭಿನ್ನ ನಖ ಕಚ ಕ್ರಿಮೀ ಪಿಪ್ಪಲಿಕ ಮಕ್ಷುರಗ
ಳಿನ್ನು ನಾನಾದ್ರವ್ಯಮಂ ಸೋಂಕೆ ತೆಗೆದು ಭಸ್ಮಂದಳೆಯೆ ಶುದ್ಧಮಹವು ।
ಅನ್ಯೋನ್ಯವಸ್ತುಗಳು ಶುದ್ಧವಹವೆಂದು ಮಾ
ಮುನ್ನತದ ಶ್ರುತಿಗಳಿಂತೈದೆ ಸಾಱುತ್ತಿಹವು
ನನ್ನಿಯಿದು ಭೂಮೀಶ ಕೇಳಿದೈ ಜಾಬಾಲದುಪನಿಷದ್ವಚನಾರ್ಥವ ॥ ೧೬ ॥

ಎನಲದೆಲ್ಲವ ಕೇಳಿ [5]ಗಹಗಹಿಸಿ ಭೂಪಗದು[5]
ಮನಕೆ ಬಾರದೆ ದುಷ್ಟಮಂತ್ರಿಗಳ ನೋಡುತಾ
ವನಿತೆ ಹೊತ್ತಿಹ ಸುರೆಯ ಹರವಿ ಸಹಿತವಳನೊಡಗೊಂಡು ಬನ್ನೆಂದು ಪೇಳೆ ।
ಜನಪ ತಳತಂತ್ರಸಹಿತೈದಿ ವಹಿಲದಲಿ ತಾ
ಘನತರದ ರತ್ನಸಿಂಹಾಸನದಿ ಮಂಡಿಸಲು
ವಿನಯವಿರಹಿತರವಳ ಸುರೆಯ ಹರವಿಯ ಸಹಿತ ನೃಪನಿದಿರಿನೊಳು ನಿಲಿಸಲು ॥ ೧೭ ॥

ಎಲೆ ದಂಡನಾಥ ಕಬ್ಬಿಲತಿ ಹೊತ್ತಿಹ ಸುರೆಯ
ನೆಲೆಯಱಿಯದಿಂತು ಗೋಕ್ಷೀರವೆಂದುಸುರುವರೆ
ಸಲೆಸಹಜವೋ ನಟೆಯೊ ಹಲವ ತೊಳಸಲ್ಬೇಡವೆಂದು ಭೂವರ ಕೇಳಲು ।
ಛಲವಲ್ಲ ಬಲುಹಲ್ಲವಮೃತದೊಳಗೆರಡುಂಟೆ
ಯೊಲಿದು ನೀ ನೋಡೆಂದು ಪೇಳೆ ಪಿಸುಣರ್ಸುರೆಯ
ತುಳುಕ್ಯವರು ಪೇಸುತ್ತ ಕೈಕೊಡಹಿಕೊಂಡರ[6]ವನಿದಿರಿನೊಳ್ಸ್ರ[6]ಷ್ಟಿಸಲ್ಕೆ ॥ ೧೮ ॥

---

[1] ಭಕ್ತಿಹೊಸನುಡಿಯೊಯೆಂದು (ಕ.ಖ.ಗ.ಘ). [2] ಲ್ಕೆಂದದಂ (ಖ). [3] ನಿಂತೊ (ಕ.ಚ.ಖ). [4] ಪಣ್ಯಾಂಗುಲ (ಕ.ಖ.ಗ.ಘ.ಚ.ಜ.ಛ). [5] ಧೂಪಗಹಾಗಹಿಸುತದು (ಜ). [6] ಸುದಿರಿನಲಭ್ರಷ್ಟಿಸಲ್ಕೆ (ಜ).

ನಡೆಪರುಷದಿಂದದಱ ಹೊರೆಗೈದಿ ಹರುಷದಿಂ
ದೊಡನೆ ಭಾವದ ಪರುಷದಿಂ ಪವಿತ್ರವ ಮಾಡಿ
ದೃಢನೋಟಪರುಷದಿಂ ಪೂರ್ವಾಶ್ರಯಂಗಳೆದು ಮೃಡನಾಪರಾವತಾರ ।
ಸಡಗರಿಸಿ ನುಡಿಪರುಷದಿಂದ ದಂಡಾಧೀಶ
ಪಿಡಿಯೆ ಕರಪರುಷದಿಂ ಕೆನೆಗಟ್ಟಲಮೃತವಂ
ಪೊಡವೀಶ ನೋಡುನೋಡೆಂದು ಬಸವಾಂಕ ಗೋಕ್ಷೀರಮಂ ಮಾಡಿ ಮೆಱೆದ
॥ ೧೯ ॥

ಹೆಪ್ಪನೆಱೆದಾ ಕ್ಷೀರಮಂ ಮೊಸರ ಮಾಡಿ ತಾ
ಕೂರ್ಪ ದಧಿಮಂಗಳವಮಾ[1]ಡಿ[1]ದನು ಹರುಷದಿಂ
ಬೇರ್ಪಡಿಸಿ ತಕ್ರಮಂ ನವನೀತಮಂ ತೆಗೆದು ತುಪ್ಪಮಂ ಕಾಸಿ ತೋಱೆ ।
ಒಪ್ಪುವ ಸುಗಂಧತೀಡಲ್ಕರಸು ಮೆಯ್ಯಿಕ್ಕಿ
[2]ಯಪ್ಪಿ[2]ವಾಸನೆಗೆ ಸಂತೋಷಿಸುತ ತಲೆದೂಗಿ
ಸರ್ಪಭೂಷಣ ಬಲ್ಲನೆನುತ ಕೈಮುಗಿದು ದಂಡಾಧಿಪನ ಕೇಳಲಂಜಿ ॥ ೨೦ ॥

ಧರಣೀಶನಚ್ಚರಿಯ ಬಿತ್ತಿ ಬೆಳೆದೊಲು ಮತ್ತೆ
ಶರಣ ಸೊಡ್ಡಳಬಾಚಿಮರಸರ ಮುಖವ ನೋಡಿ
ಪುರಜನಂ ಪರಿಜನವಿದೆಲ್ಲಱಿಯೆ ಕಬ್ಬಲಿತಿ ಹೊತ್ತು ಮಾಱುವ ಸುರೆಯನು ।
ಧರೆಯಱಿಯೆ ಗೋಕ್ಷೀರವಂ ಮಂತ್ರಿ ಮಾಡಿದಾ
ಪರಿಯೆಂತುಟೆಂದಡವನೀಶ ಕೇಳ್ಕೈ ಮುನ್ನ
ಹರರಹಸ್ಯದೊಳು ಮಿಗೆ ಪೇಳ್ದನಾದಿಯೊಳೊಬ್ಬ ಚಂಡಾಲನತಿಸುಕೃತವ ॥೨೧॥

ಅವನಶ್ವಹತ್ಯ ಗೋಹತ್ಯ ಬ್ರಹ್ಮೇತಿಕನು
ಶಿವಭಕ್ತರುಪಕರಣಮಂ ಕದ್ದುಕೊಂಡೋಡೆ
ತವಕದಿಂದೊಡನೆ ಬಿಡದೆದ್ದು ಹುಯ್ಯಲುಹತ್ತಿ ಹೋಗದಿರೆನುತ್ತಲವನ ।
ಕವಿದಟ್ಟಿವಂದು ಶ್ಮಶಾನಭೂಮಿಯೊಳಡಸಿ
ತವಿಸಿ ಕೆಡಹಲು ಪ್ರಾಣ ಹೋಗುತ್ತ ಬರುತಿರಲು
ಶವವ ಮಿಗೆ ತಿಂದೊಂದು ಕುಷ್ಠಶುನಕನು ಹೆಣನ ಸುಟ್ಟ ಬೂದಿಯೊಳಿರುತಿರೆ
॥ ೨೨ ॥

ಘುಡುಘುಡಿಸಿ ಮೇಘವಾತಂ ಬೆರಸಿ ಮಳೆ ಬರಲು
ಕೊಡಹಿಕೊಳುತಂ ಸಾರಮೇಯ ಪರಿ[3]ದೋಡು[3]ತ್ತ
ಕೆಡದವನ ನೊಸಲೊಳದು ಬೂದಿಗಾಲಿಂ ತುಳಿದು ಪೋಗಲ್ಕೆ ಪ್ರಾಣಪಿಡಲು ।

---

[1] ಡ್ಯೆ (ಜ). [2] ಸರ್ಪಿ (ಘ.ಜ), ಸಪ್ಪಿ (ಗ.ಥ). [3] ದೊತ್ತು (ಖ.ಕ).

ಹಿಡಿದು ಯಮಧೂತರೆಳೆವುತ್ತಿರಲ್ಕಾಗವರ
ಜಡಿದು ಶಿವದೂತರವನಂ ತಾವು ಸೆಳೆಕೊಂಡು
ದೃಢಭಸಿತಧರನೀತ ನಿಮಗೆ ಸಲ್ಲನೆನುತ್ತ ಪುಷ್ಪಕವನೇಱಿಸುತ್ತ ॥ ೨೩ ॥

ಮುತ್ತಿ ಪಿಗೆ ರುದ್ರಕನ್ನಿಕೆಯರಾರತಿಯೆತ್ತಿ
ಕೀರ್ತಿಸುತ್ತುಘೆ ಎನುತ ಕೈಲಾಸಪುರಕೊಯ್ದು
ಮೃತ್ಯುಂಜಯನ ಕಾಣಿಸಲ್ಕಿತ್ತ ಭಸ್ಮಧಾರಿಂಗೊಲಿದು ರುದ್ರತ್ವವ।
ಇತ್ತಲೀ ಬಸವದಂಡಾಧೀಶ ಪರಶಿವನ
ಮೂರ್ತಿಗೇನರಿದು ಪಂಚಮಪುರುಷ ಪರಬ್ರಹ್ಮ
ನಿತ್ಯಪದನೆಂದು ಸೊಡ್ಡಳಬಾಚಿರಾಜಂ ನೃಪೋತ್ತಮಂಗೊರೆಯೆ ಕೇಳ್ದು ॥ ೨೪ ॥

ಕರಸರೋೀರ.ಹಸಂಪುಟಂಗೈದು ಹರುಷದಿಂ
ಸುರುಚಿರದ ದಿವ್ಯವಸ್ತ್ರಾಭರಣ[1]ಮನ್ನಿ[1]ತ್ತು
ಪರಮಸಂತೋಷದಿಂ ಕೊಂಡಾಡಿ ದಂಡಾಧಿಪನ ಪರಿಯನುಚ್ಚರಿಸುತ ।
ದುರಿತಗಜಕಂಠೀರವನೆ ಎಂದು ಹೊಗಳುತ್ತ
ಪರವಾದಧೂಳಿತೋತ್ಪಾಟನೆಂದಡಿಗೆಱಗಿ
ಅರಸು ಬೀಳ್ಕೊಟ್ಟು ಗದ್ದುಗೆ[2]ಯೊಳಿಂಪೆ[2]ದ್ದು ಬಸವೇಶನಾನಂದದಿಂದ ॥ ೨೫ ॥

ಇತ್ತ ಶರಣರ್ವೆರಸಿ ತಿರುಗಿದನು ಹರುಷದಿಂ
ಭಕ್ತ ಮಾಹೇಶ ಪ್ರಸಾದಿಗಳ ಪ್ರಾಣಲಿಂ
ಗೋತ್ತಮರ ಲೀಲೆ ಶರಣರ ಜ್ಞಾನವೈಕ್ಯರಾನಂದವಡಿಯಿಡುವ ತೆಱದಿ ।
ಉತ್ತಮದ [3]ಭ[3]ಕ್ತಿಗೃಹಕ್ಕೈದಿ ಸಂತೋಷದಿಂ
ನಿತ್ಯ ಜಂಗಮ ಲಿಂಗ ಪೂಜೆಯಂ ಮಾಳ್ಪನೆಂ
ದತ್ತ ನಂದೀಶ ಪ್ರಮಥರ್ಗೊರೆದೆಥಾರ್ಥಮಂ ಚಿತ್ತೈಸಿ ಭಕ್ತರೊಲಿದು ॥ ೨೬ ॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು [4]ಸುರೆಯ ಗೋಕ್ಷೀರಮಂ ಮಾಡಿ[4] ಮೆಱೆದ ಸಂಧಿ ॥ ೨೭ ॥

———

[1] ಮುಮನಿ (ಕ.ಖ.ಗ.ಘ.ಚ.ಛ). [2] ಯಿಳಿದೆ (ಕ), ಯಿಂದಲೆ (ಖ).
[3] ಶ (ಕ.ಖ.ಗ.ಚ.ಛ). [4] ಭಕ್ತಿಯೊಳ್ಸುರೆಯಗೋಕ್ಷೀರದಿಂ (ಕ), ಸುರೆಯ ಸುಧೆಯ ಮಾಡಿ (ಘ), ಬಸವಸುರೆಯನಮೃತವಮಾಡಿ (ಜ), ಭಕ್ತಿವಾದದ ಪವಾಡಗಳ (ಖ.ಚ.)

ಇಪ್ಪತ್ತೈದನೆಯ ಸಂಧಿ

ಸೂಚನೆ—

ವಾರುಣಿಯ ಕುಂಭಮಂ ಹೊತ್ತೈತರಲ್ಕಂಡು
ಧಾರುಣಿಪ ಭಸಿತವೇತಕೆ ಸಿಂಧುಘಟಕೆನ
ಲ್ಕಾರಣಿಕ ಬಸವನಾ ಮಧುವ ದಿವ್ಯಾಮೃತವ ಮಾಡಿ ತೋಱುದ ನೃಪತಿಗೆ॥

ಶ್ರೀಮದಖಿಲಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಹರಿಯಂಬಕಾಬ್ಜ ಪೂಜಿತ ದಿವ್ಯಪಾದಾಬ್ಜ
ಹರಿಭುಕ್ಕಟಕವಾಗಿ ರಾಜಿಸುವ ದ್ವಿಕರಾಬ್ಜ
ಹರಿ ಹರಿಯು ಹರಿಸಖಾಕ್ಷತ್ರಯದಿ ಥಳಥಳಿಸಿ ಮಿಗೆ ರಂಜಿಪಾನನಾಬ್ಜ।
ಹರಿವೈರಿಯಾಜಿನಸುಶೋಭಿತ ಕಳೇವರಂ
ಹರಿಯಜಾಸ್ಥಿವಿಭೂಷ ಲಸಿತ ಗರಳಗ್ರೀವ
ಹರಿಸೂನುವಿಂಗೆ ಮಾರ್ಗಣವಿತ್ತ ಮೃಡನಾವತಾರ ಬಸವೇಶ ಶರಣು ॥೨॥

ಒಂದುದಿನ ಬಿಜ್ಜಳೋರ್ವೀಪಾಲನುತ್ಸಾಹ
ದಿಂದೆ ಬಸವೇಶಸಹಿತಖಿಳದಳವೃಂದದೊಳ್
ಸಂದಣಿಪ ಸರ್ವಸಂಭ್ರಮದ ಗೊಂದಣದಿ ಬಂದಾರಾಮದೊಳ್ಕ್ರೀಡಿಸೆ।
ಕುಂದದೈಶ್ವರ್ಯಾಂಬುನಿಧಿ ಮೇರೆದಪ್ಪಿತೆಂ
ಬಂದದಿಂ ತಿರುಗಿ ಸುವಿನೋದಪ್ರಸಂ[1]ಗಂಗ[1]
ಳಿಂದೆ ಪುರದೊಳ್ಮಂದಗತಿಯಿಂದ ನಲಿವುತ್ತೆ ಬರಬರಲ್ಕೊಂದೆಡೆಯೊಳು ॥೩॥

ನೆರೆದು ಕೆಲಬರ್ಘಟಾರ್ಚನೆಗೆಯ್ವುತಾರಿ ನಿ
ಬ್ಬರವಾದ್ಯ ಘೋಷದೊಳ್ಪಾದಪೀತ್ವದ ಲಹರಿ
ವೆರಸಿಯಾಸುರೆಗುಂಭ ಹೊತ್ತು ಮತ್ತತ್ವದಿಂದೈತರಲ್ಮಂಚರಸನು।

---

[1] ಗಗಳೊ (ಖ).

ಸುರೆಯಘಟದಾವರಣಭಸಿತಮಂ ಕಂಡುಬ್ಬಿ
ತುರವಣಿಸಿ ರಾಜಂಗೆ ತೋಱಿ ಚೇಷ್ಟಿಸಲದ
ಕ್ಕರಸು ನಸುನಗುತ ಕುಚ್ಛಿತವ ನೂರ್ಮುಡಿಸಿ ಬಸವರಸನಾನನವ ನೋಡಿ ॥೪॥

ಸುರೆಯ ಘಟವಂ ಬಸವರಾಜಂಗೆ ತೋಱಿಸುತ
ಪಿರಿದು ಕಟಕಿಗಳ ನಟಿಸುತ್ತೈದೆ ದುರ್ಭಾವ
ದುರವಣಿಯೊಳೊಂದೊಂ[1]ದ ನಡೆವು[1]ತ್ತನುಡಿವುತ್ತಲಾ ಕ್ರಿಯಾರೂಪನೃಪನು।
ಪರಮದಂಡಾಧಿಪನ ಮೂದಲಿಸುತಹಹ ನಿ
ಮ್ಮುರುಭಸಿತ ತನ್ಮಧುಘಟಾಗ್ರದಲಿಹಾಗಮದ
ಪರಿಯೆಂತೆನಲ್ಕೆ ಬಸವೇಶನದು ಮಧುಧಿವ್ಯ ದಿವ್ಯಪೀಯೂಷವೆನಲು ॥೫॥

ಸೋಮಯಾಜಿಗಳು ಮಲ್ಲಾನಜ್ರಿ ಋಗ್ವೇದ
ದಾಮೋದರಂ ಪೆದ್ದಿಭಟ್ಟನಜಕುಂಡಲದ
ನೇಮಿ ರಾಘವ ಶಿಖಾಸೂತ್ರದಪ್ಪರಸನಣ್ಣಪ್ಪುಪಾಧ್ಯರ ವಲ್ಲಭ।
ಸಾಮವೇದ್ಯಪ್ಪಣ್ಣ ಜಿನ್ನಪಂಡಿತ ಪಿರಿಯ
ಸೋಮುಪಾಧ್ಯರು ಚತುರ್ವೇದಿಗಳ್ಮುಂತಾದ
ಭೂಮಿಸುರರದನಮೃತವಲ್ಲೆನುತ್ತೆತ್ತಿದರು ಮಧುಮಂತ್ರಶಕ್ತಿಯವ ॥೬॥

ಸೋಮಕ್ಕೆ ಸುರೆಯಾ ಮಖಕ್ಕೆವಾರುಣಿ ವಷ[2]
ಡ್ಜ್ಯೋಮ[2]ಕ್ಕೆ ಪರಿಶ್ರುತಾಧ್ವರಕೆ ಮಾಧವವಾ ಸು
ಹೋಮಕ್ಕೆ ಸಿಂಧುವಾ ಜನ್ನಕ್ಕೆ ಮಧುಸಪ್ತತಂತುವಿಂಗಂಧೋತ್ತಮ।
ಆಮಹಾಕ್ರತುವಿಂಗೆ ಮಾರ್ಧ್ವೀಕ ಯಾಗಕ್ಕೆ
ರಾಮಕಾದಂಬರಿಗಳಿಂತು ನಾನಾಪರಿಯ
ನಾಮದಿಂದೆಸೆವ ಯಜ್ಞಾಧಿಕಾರಕೆ ಸಲುವ ವರಸುರೆಯ ಸುಧೆಯೆಂಬರೆ ॥೭॥

ಶತಮಹಾಯಜ್ಞಾಧಿಕಾರಕ್ಕೆ ಸಲುವ ಸುರೆ
ಸಿತಬೂದಿಗಮೃತವಹುದೇ ಸಟೆಯದಂತಿರ್ಕೆ
ಅತಿಭಕ್ತಿಹೊಲ್ಲವೆಂಬಜ್ಞರಂ ಬಸವೇಶನೀಕ್ಷಿಸುತ ನೀವು ನುಡಿವ।
ಮತವಲ್ಲವಧ್ವರಕ್ಕವು ಸಲ್ಲ[3]ವಾ[3]ಪರಿ
ಶ್ರುತವಸುರರಿಂಗೈಸೆ ಮಖಕರ್ಮವೆಂದೆಂಬು
ದತಿ ನೀಚತನವೆನಲು ವೇದಮತವೆಂತೆಂದಡವು ವೇಶಿಯಂಗವೆಂದ ॥೮॥

---

[1] ದುನಣಿಸು (ಘ), ದನಡಿವು (ಗ.ಚ.ಥ). [2] ಸುಷ್ಟೇವ (ಸ.ಪ). [3] ದಾ (ಘ).

ಸ್ಕಾಂದದಲ್ಲಿ—

ವೇದಶಾಸ್ತ್ರಪುರಾಣಾದ್ಯಾಃ ಸ್ಪಷ್ಟಾ ವೇಶ್ಯಾಂಗನಾ ಇವ
ಯಾ ಪುನಶ್ಶಾಂಕರೀ ವಿದ್ಯಾ ಗುಪ್ತಾ ಕುಲವಧೂರಿವ ॥೧॥

ಎಂದು [1]ಪೌರಾಣ[1]ದರ್ಪಣವ ತೋಱಿಲ್ಕಾಣ
ದಂಧಕರ ತೆಱದೊಳಲ್ಲೆನುತ ವೇದಪ್ರಮಾ
ಣಂದಖಿಳಕರ್ಮವಾ ಕರ್ಮದಿಂದೊಗೆದ ಜಗದೊಳ್ಚರಿಸುತಾ ವೇದವ।
ನಿಂದಿಪುದಿದಾವಱಿವು ಬೇಡ ನಿಮ್ಮಯ ಘನತೆ
ಕುಂದುವುದು ಮೇಲೆಯಾ ವೇದಸ್ವಯಂಭು ಕೇ
ಳೆಂದು ಬಿಡದುಲಿವ ದುರ್ಬೋಧಕರ ನೋಡಿ ಬಸವೇಶ ನಗುತಿಂತೆಂದನು ॥೯॥

ವೇದಸ್ವಯಂಭು ಎಂದೆಂಬುವರ್ಕೇಳಿಯಾ
ವೇದ ನಾಲ್ಕಭವನಂಗದೊಳುದಿಸಿ ಶಿವನ ಪ್ರ
ಸಾದ ಪಾದಾಂಬು ವರಭಸಿತ ರುದ್ರಾಕ್ಷಿಯಂ ತಾಳ್ದಿಸೆವ ಕರಯುಗ್ಮದಿ।
ಆದಿಶಿವಲಿಂಗಮಂ ಮುಟ್ಟೀ ಜಗಕ್ಕಧಿಕ
ವಾದ ಘನವೇದ್ಯವೆನ್ನೀ ಕೈಗಳೆಂದು ಋ
ಗ್ವೇದಸ್ವಹಸ್ತ[2]ಮಂ[2]ತಾನೋದಿ ಹೊಗಳಿದು[3]ದು[3] ಕೇಳಿ ಕರ್ಮಪ್ರಯುತರು॥೧೦॥

ಋಗ್ವೇದ—

ಅಯಂ ಮೇ ಹಸ್ತೋ ಭಗವಾನಯಂ ಮೇ ಭಗವತ್ತರಃ
ಅಯಂ ಮೇ ವಿಶ್ವಭೇಷಜೋಽಯಂ ಶಿವಾಭಿಮರ್ಶನಃ ॥೨॥

ಎನಗೆ ಶಿವನಂ ಸೋಂಕಿದಾ ಹಸ್ತವೇ ಜನನಿ
ಎನಗೆ ಲಿಂಗವನು ಮುಟ್ಟಿದ ಪಾಣಿಯೇ ಜನಕ
ಎನಗೆ ಷಡ್ಲಪನ ಪಿತನಂ ಸ್ಪರ್ಶನಂಗೈದ ಕರವೆ ಜೀವನವುದೆಂದು।
ಅನುದಾತ್ತುದಾತ್ತಾದಿ ಸುಸ್ವರಗಳಿಂ ಶಿವನ
ನನವರತ ಚಕಿತದಿಂ ನುತಿಪ ಮಿಕ್ಕಿನ ನುಡಿಯು
ಘನವನಱಿದಱಿದಱಿಯದಿಹ ಮರುಳ್ಗಳಿರ ಕೇಳೆನುತೊರೆದ ಋಗ್ವೇದವ ॥೧೧॥

ಅಯಂ ಮಾತಾ ಅಯಂ ಪಿತಾ ಅಯಂ ಜೀವಾತುರಾಗಮತ್
ಇದಂ ತವ ಪ್ರಸರ್ಪಣಂ ಸುಬಂಧವೇ ಹಿ ನೀರೀಹಿ ॥೩॥

---

[1] ಕಾರಣ (ಕ.ಖ.ಗ), ಕಾರಣದ (ಚ). [2] ಮುಂ (ಖ). [3] ವಿ (ಛ), ದ (ಕ.ಗ.ಖ.ಛ).

ಕಂತುಪಿ[1]ತ[1] ಜನ್ಮವಡೆದಾ ಫ[2]ಲದಿ[2] ಬಹುಯೋನಿ
ಯಂ ತೊಳಲಿ ಬಹ ಬಾಧೆಯಂ ನೀಗಿದದನು ಮಱೆ
ದಂತಕಾರಿಯ ಪೂಜೆಗೆಯ್ಯದ ಶಿವದ್ರೋಹ ಬೆಂಬತ್ತಿ ಜಡಕರ್ಮದ।
ತಂತು ಕವಿ[3]ಯಲ್ಮಟ್ಟಿಯಿಟ್ಟು[3] ದುರ್ದಾನಕ್ಕೆ
ನಿಂತು ಕಯ್ಯಾಂತು ಮಿಗೆ ತುತ್ತುಗದ್ಯಾಣಮುಮ
ನಂತು ಸೇವಿಸಿ ಭೂಸುರತ್ವವಳಿದಾ ಬ್ರಹ್ಮಹತ್ಯರ್ಕಳಾದಿರೆಂ[4]ತು[4] ॥೧೨॥

ವಾಯವೀಯಸಂಹಿತೆಯಲ್ಲಿ—

ಅನೇಕಜನ್ಮಸಾಹಸ್ರಕ್ರತುಪುಣ್ಯವಶೇನ ವಾ
ತತ್ರಾಪಿ ಜನ್ಮ ಬ್ರಾಹ್ಮಣ್ಯೇ ಲಭತೇ ಯಃ ಪುಮಾನ್‌ಭಿವಃ ॥೪॥

ಲಬ್ಧ್ವೈತದುತ್ತಮಂ ಜನ್ಮ ಬ್ರಾಹ್ಮಣ್ಯೇ ಯಸ್ತು ಮಾನವಃ
ನಾರ್ಚಯೇತ್ ಸ ಶಿವದ್ರೋಹೀ ಸ ಖಲು ಬ್ರಹ್ಮಹಾ ಭವೇತ್ ॥೫॥

ಎಂಬ ಪೌರಣಗಳನೋದಿ ಶುಕನಂತಾದಿ
ಅಂಬಕತ್ರಯನನರ್ಚಿಸದೆ ದುಷ್ಕರ್ಮಂಗ
ಳಂ ಬಲಿದು ಭೂತಬಲಿಗೊಟ್ಟು ಮತ್ತಾ ಶೇಷಮಂ ತಿಂದು ಕುಲಜರೆಂಬ ।
ಬೆಂಬಳಿಯ ಬಿಡದೆ ಶಿವನ ಪ್ರಸಾದಂಗೊಳ್ಳ
ದುಂಬುದೆಲ್ಲಂ ಪೆಣನ ಮಲನ ಸಮವಿದು ತಥ್ಯ
ವೆಂಬುದಂ ನಿಮ್ಮ ಮನವಱಿದಜ್ಞರಾದಿರೇಕೆಂದನಾ ಬಸವೇಶನು ॥೧೩॥

ಗಾರುಡಪುರಾಣದಲ್ಲಿ —

ಅಕೃತ್ವಾ ಭೋಜನಂ ಶಂಭೋರ್ಯೋ ಭುಂಕ್ತೇ ಪಾಪಕೃದ್ದ್ವಿಜಃ
ಕುಣಪಂ ಚ ಮಲಂ ಚೈವ ಸಮಶ್ನಾತಿ ದಿನೇ ದಿನೇ ॥೬॥

ಋಗ್ವೇದ—

* ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ
ಸಮೂಢಮಸ್ಯಪಾಂಸುರೇ ಸ್ವಧಾ ವಿಷ್ಣೋ ಹವ್ಯಂ ರಕ್ಷಸ್ವ ॥೭॥

ಯಜನಾದಿಷಟ್ಕರ್ಮ[5]ರೆಂ[5]ದ ಜಪಗಾಯತ್ರಿ
ಯ ಜಪವಂ ಜಪಿಸಿ ಶಿವನಂ ಮಱೆದು ಯಜ್ಞಕ್ಕೆ
[6]ಯಜವೆ[6]ಸೆವ ವತ್ಸರತ್ರಯದ ಶಾಲ್ಯಮದೆಂಬುದಱಿಯದಜಪಶುವ ಕೊಂದ।

---

[1] ತಹರಿ (ಖ.ಕ), ತಹರ (ಗ.ಚ) [2] ಲ (ಚ.ಛ). [3] ಯೆಂಬಮಟ್ಟಿಯಿಟ್ಟು (ಕ), ಯಲ್ಕಡಿಯನಿಟ್ಟು (ಖ). [4] ದು (ಜ), ದ (ಛ). * ಈ ಶ್ಲೋಕ 'ಗ' 'ಛ' ಗಳಲ್ಲಿ ಮಾತ್ರ ಇದೆ. [5] ಕಿಂ (ಕ.ಖ). [6] ಯಾಂಜರೆ (ಕ).

ವೃಜಿನವಶ್ರಾಂತಬೆಂಬತ್ತಿ ಬಿಡದಂಡಲೆವ
ನಿಜಕೆ ನಿಮ್ಮಧ್ವರದ ಅಧ್ವರೇ ಧರಿಸಿಕೊಂ
ಡಜಕುಂಡಲಮ ಸಾಕ್ಷಿಯೆನುತ ಮರ್ಮೋದ್ಘಾಟನಂಗೈವುತೊರೆದ ವಚನ ॥೧೪॥

ವಚನ—

ಮಾತುಮಾತಿಗೆ ನಿನ್ನಕೊಂದರಲ್ಲೊ ಹೋತೆ, ಅಳುಕಂಡ್ಯ, ಮತ್ತೆ ಅಳುಕಂಡೆಯಾ, ವೇದವ ಬಲ್ಲವರಿಗೊಮ್ಮೆ ಅಳುಕಂಡೆಯಾ, ಶಾಸ್ತ್ರವ ಬಲ್ಲವರಿಗೊಮ್ಮೆ ಅಳುಕಂಡೆಯಾ.

ಶ್ಲೋಕ—

ಅಜೋ ವಿಧಿರಜೋ ವಿಷ್ಣುರಜಶ್ಶಂಭುರಜಸ್ತಥಾ
ಅಜಸ್ತ್ರೀವರ್ಷಕೋ ವ್ರೀಹಿರಜೋ ರಾಮಪಿತಾಮಹಃ ॥೮॥

ನಿನ್ನ ಘನಕ್ಕೆ ತಕ್ಕುದ ಬಲ್ಲ ಕೂಡಲಸಂಗಮದೇವ. ॥೧॥

ಕಾಪಿಶಾಯನ ಭಾಂಡಗತವಿಮಲತೋಯದಂ
ತೇಪರೀಕ್ಷಿಸಿ ನೋಡಲಪವಿತ್ರವಾದುದೆಂ
ದಾ ಪರಿಯ ಕರ್ಮಾಂಧರಾದ ನಿಮ್ಮಾನನವನ್ನೈದೆ ವೇದದ ಕಳೆಗಳು।
ಲೋಪವಾಗಿಂತ್ಯೈದಿ ವಿಶ್ವಂಭರೆಯೊಳು ನಾ
ನಾಪರಿಯ ದೂಷ್ಯತ್ವವಡೆದುದಂ ಅಱಿಯದಿಹ
ಕಾಪಥರ್ನೀವು ಕೇಳೆಂದೆನುತ ಬಸವೇಶನೆತ್ತಿದನು ಸೌರೋಕ್ತವ ॥೧೫॥

ಸೌರಪುರಾಣದಲ್ಲಿ—

ತಯೋರ್ಮುಖಗತಾ ವೇದಾ ನಿಂದ್ಯಾಸ್ಸರ್ವಕರ್ಮಸು
ಸುರಾಭಾಂಡಗತಂ ತೋಯಂ ಯಥಾ ಭವತಿ ನಿಂದಿತಂ ॥೯॥

ಕೆಡಿಸದೇ ಭೂತಿ ಕಾಸ್ಯಪನ ಕಾರುಕಕುಲಮ
ನೋಡಿಸದೆ ಭಸಿತ ಮಾತಂಗನ ಮತಂಗತೆಯ
ತೊಡಸದೇ ಭಸ್ಮವಾ ಸಾಂಖ್ಯನ ಸ್ವಪಚಗುಲಮಂ ತ್ರಿಭುವನಂಗಳಱಿಯೆ।
ಬಿಡಿಸದೇ ಕ್ಷಾರ ಕೌಂಡಲ್ಯನಧಮದ ಕುಲಮ
ನಡೆಸದೇ ರಕ್ಷೆ ಸರ್ವರೊಳು ಶಿವಭಕ್ತಿಯಂ
ದೊಡೆಯ ಬಸವೇಶ್ವರಂ ಪಂಚನಾಮಗಳ ಘನತೆಯನೊರೆದ ಸ್ಕಾಂದದಲ್ಲಿ ॥೧೬॥

ಸ್ಕಾಂದದಲ್ಲಿ—

ಶ್ರೀಕರಂ ಚ ಪವಿತ್ರಂ ಚ ಹಾರಾದ್ಯಾಭರಣಾನಿ ಚ
ಲೋಕವಶ್ಯಕರಂ ಪುಣ್ಯಂ ಪಾಪನಾಶಂ ದಿನೇ ದಿನೇ ॥೧೦॥

---

[1] ರೆ (ಕ.ಚ).

ವಿಭೂತಿರ್ಭಸಿತಂ ಭಸ್ಮ ಕ್ಷಾರಂ ರಕ್ಷೇತಿ ಭಸ್ಮ [1]ತತ್[1]
ಭವಂತಿ ಪಂಚ ನಾಮಾನಿ ಹೇತುಭಿಃ ಪಂಚಭಿರ್ಭೃಶಂ ॥೧೧॥

ಗಾರುಡಪುರಾಣದಲ್ಲಿ—
ತ್ರಿಪುಂಡ್ರಂ ಬ್ರಾಹ್ಮಣೋ ವಿದ್ವಾನ್ಮನಸಾಪಿ ನ ಲಂಘಯೇತ್
ಶ್ರುತ್ಯಾ ವಿಧೀಯತೇ ಯಸ್ಮಾತ್ತತ್ತ್ಯಾಗೀ ಪತಿತೋ ಭವೇತ್ ॥೧೨॥

ಎನಲರಸು ನಗುತವನಿಸುರರ ಮೊಗ ನೋಡಲಾ
ಗಿನಿತುತ್ತರಂಗಾಣದೆ ತನತನಗೆ ತಾ
ಕ್ಷರ್ಣನ ಕಂಡ ದಂದಶೂಕಗಳಂತೆ ತಲೆವಾಗಲರಸಮಾತ್ಯನ ನೋಡುತ।
ಇನಿತೆಲ್ಲ ನಿಮ್ಮ ಸದ್ಭಕ್ತಿಪಕ್ಷದ ನುಡಿಗ
ಳನುಮತಗಳ್ಳೆಸೆಂಬ ನೃಪನ ದುಃರ್ಮನವಿಪಿನ
ಘನದವಾನಲ ಬಸವನೆತ್ತಿದಂ ಭೂತಿಸೋಂಕ್ಯಘಹರೆವ ತಛ್ರುತಿಯನು ॥೧೭॥

ವಿಷ್ಣುವಾಕ್ಯ—
ಖಾದನ್ಮಾಂಸಂ ಪಿಬನ್ಮದ್ಯಂ ಸ ಗಚ್ಛ[2]ನ್ನಂತ್ಯ[2] ಜಾತಿಭಿಃ ।
ಸದ್ಯೋಭೂತೇರ್ಧಾರಣೇನ ಸ ರುದ್ರೋ ನಾತ್ರ ಸಂಶಯಃ ॥೧೩॥

ಜಾಬಾಲೋಪನಿಷತ್ತಿನಲ್ಲಿ—
ಅಪವಿತ್ರಂ ಚ ರೂಪಂ ಸ್ಯಾತ್ ಪವಿತ್ರಂ ಭಸ್ಮಮಿಶ್ರಿತಂ
ನಾನಾವಸ್ತುಪ್ರಕಾರೇಣ ಭಸ್ಮ ಸರ್ವತ್ರ ಶುದ್ಧಿ[3][ಮತ್][3] ॥೧೪॥

ಎನೆ ನೃಪನಿವೆಲ್ಲ ಶ್ರುತ ದೃಷ್ಟವಲ್ಲೆನಲಿದ
ಕ್ಕನುಮಾನಿಸದಿರುಪದೃಷ್ಟವಿದೆ ನೋಡು ನೋ
ಡೆನುತಮೃತಕರದಯಾಮೃತಸಿಂಧು ಸಿಂಧುಘಟಮಂ ನೋಡಲಮೃತಾಕ್ಷಿಯ ।
ಮೊನೆ ಸೋಂಕಲಪವಿತ್ರವಳಿದ್ದೈದೆ ಭಾಂಡದೊ
ಳ್ಘನತರಾಮೃತವುಕ್ಕಿ ಹಱಿಯಲಾ ಪಾಲ್ದೊರೆಯ
ಜನಪನುಱೆ ಕಂಡುಬ್ಬಿ ನುತಿಸುತ್ತ ಕಂಡಿರೇ ಸುರಿಮಾರಿಕೊಂಡೆಯರಿರ ॥೧೮॥

ಎನುತ ಭೂಮೀಶನೆಡೆವಿಡದ್ದೈದೆ ವಿಸ್ಮಯದ
ಘನರಸಾವೇಶದಿಂ ತಲೆದೂಗುತಿಱ ಮಹಾ
ತ್ಮನ ಮಹಿಮೆಗಳನೆಣಿಸಲಳವೆ ಮುನ್ನತಿಬಳವಿಷವನಮೃತಮಂ ಮಾಡಿದ ।
ಜನವಱಿಯೆ ಚೂರ್ಣವಂ ಪರಮಾನ್ನಮಂ ಮಾಡಿ
ಮನೆಯ ಮೇಲಣ ಬೂದಿಗುಂಬಳದಿ ಲಿಂಗಂಗ
ಳನೆ ತೋರ್ದ ಬಸವೇಶ ಸುರೆಯನಮೃತವ ಮಾಳ್ಪುದರಿದಲ್ಲೆನುತ ಹೊಗಳುತ॥

[1] ಸಃ (ಸ.ಪ್ರ). [2] ನ್ಯಂತ್ಯ (ಕ.ಗ.ಘ.ಚ.ಥ). [3] ಮಾನ್ (ಸ.ಪ್ರ).

*ಕೊಂಡೆಯದ ಕೋಂಟೆ ಕುಹಕದ ತೆನೆಗಳೆಡೆಗೆಡೆಗೆ
ತೊಂಡಿನಟ್ಟಳೆ ಕುಚಿತ್ತದ ಕೊತ್ತಳಂ ಸಟೆಯ
ಹಿಂಡಿನಾಳ್ವೇರಿಯಟಮಟದ ಡೆಂಕಣಿ ಪೃಥುಲನಿಂದೆಯುಗಳಿಂದೊಪ್ಪುವ।
ಲೆಂಡುದುರ್ಮಾರ್ಗದುರ್ಗವ ಬಸವರಾಜೇಂದ್ರ
ಕೊಂಡು ಖಳನೆಂಬರಸ ಕೊಲಲವನ ಹೆಂಡತಿ ಸಲೆ
ಮುಂಡೆ ಮುಸುಕಿಕ್ಕಿ ಗೂಳೆಯ[1]ದೆಗೆದೊ[1]ಲಾ ದ್ವಿಜರ ಮುಖರಸಂ ನೆರೆಬಱಿತುದು ॥೨೦॥

ಕಂಡವರ್ನುತಿಸೆ ಕೊಂಡೆಯರು ವಂದಿಸಲು ಭೂ
ಮಂಡಲೇಶ್ವರನುಭಯಕರವೆತ್ತಿ ಬಸವಪ್ರ
ಚಂಡಗೆಱಗುತ್ತ ಬೀಳ್ಕೊಟ್ಟು ತನ್ನರಮನೆಗೆ ಪೋಗಲ್ಕೆ ಶಿವಶರಣರ।
ತಂಡಸಹಿತಾನಂದದೊಳ್ನಲಿವುತಂ ಬಸವ
ದಂಡನಾಥಂ ತನ್ನ ಗೃಹವೊಕ್ಕನೆಂದು ವೇ
ತಂಡ ಚರ್ಮಾಚ್ಛಾದನವತಾರದ ಪ್ರಮಥರಿಂಗೊರೆದ ನಂದೀಶನು ॥೨೧॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದ ಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಬಸವ ಸುರೆಯನಮೃತವ ಮಾಡಿ ಮೆಱೆದ ಸಂಧಿ ॥೨೨॥

---

* ೪೫ ನೇ ಸಂಧಿಯು ಏಳನೇ ಪದ್ಯವೂ ಇದೇ. [1] ಯಂದೆಗೆದವೊ (ಕ.ಗ.ಥ.)

ಇಪ್ಪತ್ತಾರನೆಯ ಸಂಧಿ

ಸೂಚನೆ—

ಮೊಕವಾಡದೊಡೆಯರಿಂಗೊಱತೆಯಗ್ಗಣಿಯ ತಹ
ಯುಕುತಿಯೊಡನಾ ರಾಯನರಮನೆಯ ಹೆಗ್ಗಡತಿ
ಲಕುಮಿಯೆಂಬವಳು ಕದನಂಗೊಳಲ್ಕಾ ಜಲವ ಘಟ್ಟಿಮಾಡಿದ ಬಸವನು ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರವರ್ತಿತಾಮಲವಚನರಚ
ನಾ ಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಆದಿಯಿಂದತ್ತತ್ತಲಾದ ಮಹಿಮೋತ್ತುಂಗ
ಭೇದ ಭೇದಿಸದಭೇದ್ಯತ್ವದ ಮಹಾಪ್ರಮಥ
ರಾದರಿಸಿ ನಿಮ್ಮ ನಿಜನೀತಿದೇವತೆ ಮೂರ್ತಿಮುಖ ತತ್ವರೂಪುವಡೆದು ।
ಮೇದಿನಿಯೊಳುದಿಸಿ ಸತ್ಪಥಕಾಶ್ರಯಸ್ಥಾನ
ವಾದೊಲಿಹ ಮಂಗಳಪುರಕೆ ಮೋಕ್ಷಸ್ತ್ರೀಯ
ಸಾಧಿತಂತಃಪುರವೆನಿಪ್ಪ ಬಸವೇಶ್ವರನ ಭಕ್ತಿಭಾಗ್ಯಗೃಹದೊಳು ॥೨॥

ಶೀಲಗಳನಲ್ಲದನ್ಯವನಱಿಯದಪ್ರತಿಮ
ಶೀಲ[1]ವಱುವತುನಾಲ್ಕ[1]ನಾಚರಿಪಸಂಖ್ಯಾತ
ಜಾಲದೊಳಗೊಱತೆಯಘ್ಘಣಿಯ ನೇಮದ ನಿತ್ಯತತ್ವಮುಖದಿಂ ಭವಿಗಳ ।
ಕೀಳುದೈವಗಳು ಕಾಣದೊಲೊಂದು ನಂದಿಯ ಪ್ರ
ಭಾಳಮೊಗವಾಡವಿಕ್ಕಿಹ ಕೇಶಿರಾಜನೆಂ
ಬಾಳುದ ಮಹಾವ್ರತಾಚಾರ್ಯನಿಹ ನಿಸ್ಸೀಮಸೀಮೆಯ ಶಿವೈಕ್ಯಸ್ಥಲನು ॥೩॥

* ಭವಿ[2]ಯಾ[2]ಳ್ವ ದೇಶ ಭವಿಯೂರು ಭವಿಕೇರಿಯೊ
ಳ್ಭವಿಯ ನೆರೆ ಭವಿ ನಡೆವ ದಾರಿ ಭವಿಗಡಣ ದು
ರ್ಭವಿಯರ್ಥ ಭವಿಪಾಕ ಭವಿರಸ ದ್ರವ್ಯ [3]ತದ್ಭ[3]ವಿಯಾಣೆ ಭವಿಯ ಬೆಳಸು ।

---

[1] ವೈವತ್ತ (ಕ.ಖ,ಚ), ವೈವೆತ್ತೆರಡ (ಗ.ಷ.ಫ). [2] ಮಾ (ಷ.ಥ.ಗ.ಕ.ಖ).
[3] ಶದ (ಕ.ಖ). * ಈ ಪದ್ಯ ‘ ಜ ’ ದಲ್ಲಿಲ್ಲ.

ಭವಿಸ್ಪರ್ಶನ ಧ್ಯಾನ [1]ವಿಕ್ಕೆ[1] ಕೊಳು ಕೊಡೆಪಕ್ಷ
ಭವಿತಟಾಕಾದಿ ಭವಿಕೂಪ ಪ್ರಪಾಂಬುಗ
ಳ್ಭವಿಮಿಶ್ರವಾಗಲ್ಕಘೋರಪಾತಕ ಭಕ್ತಗೆಂಬಾಗವೋಕ್ತರ್ಥದಿಂ ‖೪‖

ಆ ಮಹಾತತ್ವಸ್ವರೂಪನು ಶಿವಾರ್ಚನೆಯ
ನೇಮಮಂ ನಡೆಸಲ್ಕೆ ತಕ್ಕ ಶಿಶ್ರೂಷಕರ
ನೇಮಿಸಿ ಬಸವರಾಜ ನಡೆಸುತ್ತಿರಲ್ಕೊಂದಿನಂತಿರತಿಭಕ್ತೆಯೆಂಬ।
ಭಾಮಿನಿ ಸುರಕ್ಷಿತದೊಳೊಱತೆಯಗ್ಗಣಿಗೊಂಡ
ನಾಮಿಕಂ ಭವಿ[2]ಕು[2]ಲಂ ಮಿಥ್ಯದೃ[3]ಷ್ಟಿ[3]ಗಳೆಱಕ
ವಾ ಮಹೋನ್ನತಭಾಂಡಕೆಱಗದೂಲು ವಸ್ತ್ರದಿಂ ಬಾಸಣಿಸಿ ಬರುತಿರಲ್ಕೆ ‖೫‖

ರಾಯನೊಲುಮೆಯ ಹೆಗ್ಗಡತಿ ಲಕ್ಷ್ಮಿಯೆಂಬವಳು
ರಾಯವಾಡಿಯು ಮಂದೆ ಕಂಡದೇನದ ನೋಳ್ಪೆ
ತಾ ಎನುತೊತ್ತಿಬರಲತ್ತಸಾರ್ಮುಟ್ಟದಿರು ಮುಟ್ಟದಿರೆನುತ್ತತೊಲಗೆ।
ಬಾಯ ಹವಣಿನ ತುತ್ತ ಕೊಳ್ಳಲಗೆ ನಾ[4][ವಧಿಕ][4]
ರಾಯನರಮನೆಯವ[5]ರು[5] ನೀನಾವ ಕ್ಷತ್ರಿಯನ
ತಾಯಾವ ದೇವಕನ್ನಿಕೆ ಎನುತೊತ್ತಿ ಬಂದೊತ್ತಿನೊಳು ನಿಂದಿರಲ್ಕೆ ‖೬‖

ಅತ್ತಸಾರತ್ತಸಾರೆಲೆಲೆ ಭವಿ ಮುಟ್ಟದಿರು
ಮಿಥ್ಯವಚನಾಲಾಪಬೇಡ ಸ್ವಾಮಿಯೊಳು ತ
ದ್ಭೃತ್ಯರೆಂಬುದು ಕಾಣಬಂದುದರಸಾಗರಸನವ್ವೆಯಾಗ[6]ಕ್ಕ[6] ನೀನೆ।
ಮೃತ್ಯುಂಜಯನ ಭೋನಕಗ್ಗಣಿಯ ತಹ ಸಿಂಬ
ಕತ್ವ ಬಸವೇಶ್ವರನ ಭಕ್ತ್ಯಂಗನೆಯ ಮನೆಯ
ತೊತ್ತುತನ ಸಾಕೆಮಗೆ ನಿಮ್ಮೊಲೆಮಗೇಕೆ ಭವಿನಾಯಕೀನರಕಪಥವು ‖೭‖

ಲಿಂಗಜಂಗಮದ ನೇಮಕೆ ಸಲುವ ಪಾತಾಳ
ಗಂಗಾಂಬುವನು ಭವಿಗೆ ತೋಱುವೆನೆ ಸಾರುಸಾ
ರಂಗಜವಿರೋಧಿಯ ವಿರೋಧ[7]ವುಡುಗಾ[7] ಬಸವರಾಜನಾಣೆನ್ನ ನೀನು।
ತಂಗಿ ಮುಟ್ಟದಿರೆನಲ್ಕಹುದಹುದು ಮಂತ್ರಿಪನು
ಲಂಗಿಯಾಗುದ್ದಂಡನೈಸಲೇ ನಾ ಭೂಮಿ
ಪಂಗೆಹೇಳ್ವೆಧಮಸೂತಕವ ಪರಿಹರಿಸಿಕೊಳದಿಹೆನೆ ಎನುತವಳು ಹೋಗಿ ‖೮‖

---

[1] ವೀಕ್ಷೆ (.ಘಗ.ಥ). [2] ಫ (ಕ.ಖ). [3] ಷ್ಟ (ಕ). [4] ವತೀತ (ಥ), ಪತಿತ (ಜ), ವಿತಿತ (ಖ.ಚ.ಘ), ವಿಂತು (ಕ). [5] ರೆ (ಜ). [6] ಕ್ಕೆ (ಕ.ಖ), [7] ಊಡುಗು (ಚ), ಊಡದು (ಗ.ಥ.ಜ), ಊಡುವದು (ಕ).

ಪಟ್ಟಗದ್ದುಗೆಯ ಮೇಲಿಪ್ಪ ರಾಯನ ಕಂಡು
ತೊಟ್ಟನೆಡೆಗೆಡೆದೇಳದಳುತಿರಲ್ಕೇಂ ದುಃಖ
ಮುಟ್ಟಿತೇಳೇಳು ಪೇಳೆನ್ನಾಣೆಯೆಂಬ ರಾಜೋತ್ತರಕ್ಕೆದ್ದು ಕೋಪ।
ಹುಟ್ಟುವಂ[1]ತತಿ[1] ಖತಿಯನಿಕ್ಕಿದಳು [2]ಈ ಪಾಪಿ[2]
ಪಟ್ಟಣ[3]ವನಯ್ಯನವ[3]ರಿಗೆ ಕೊಟ್ಟು ನೀ[4]ನೊ[4]ಂದು
ಕಟ್ಟಕಡೆಯಲಿ ಮನೆಯ ಕಟ್ಟುವಂತಾಯ್ತವರ ನೀರಡಕಿದೊತ್ತಿನಿಂದ ॥೯॥

ಚಿತ್ತೈಸಿ ನೀರಮೊಟ್ಟೆಯ ಮಡಕೆಗಟ್ಟುವಳು
ಹೊತ್ತು ಬರುತಿರಲಱಿಯದಾನದಂ ಕೇಳಲ್ಕೆ
ಉತ್ತರಂಗೊಟ್ಟಳದನೆನಲಮ್ಮೆನ್ನೆಯಗಂಜಾ ದಾಸಿಯುದ್ದಂಡವ।
ಮಿಥ್ಯಾತ್ಮ ಪತಿತ ಪಾತಕ ರಾಯನರಮನೆಯ
ತೊತ್ತೆ ನೀನೆನ್ನ ಮುಟ್ಟದಿರೆಂದಳಾನು [5]ಖತಿ
ವೆ[5]ತ್ತೊಡೆಯನಂ ಕಂಡು ನಿಂದೆಗೇಳುಳಿವಳಲ್ಲೆನಲರಸು ಭುಗಿಲೆನುತ್ತ ॥೧೦॥

ಕಿಚ್ಚುಕಿಡಿಯಾಗಿ ಕೋಪದೊಳು ಹೂಂಕರಿಸವುಡು
ಗಚ್ಚುರಿಯ ಬಟ್ಟುಗಳತಂದ್ಯೆದೆ ಕಂಗಳೊಳ
ಗಚ್ಚೊತ್ತಿದಂತೋರೆಗಣ್ಣಿಕ್ಕಿ ಬಸವಣ್ಣನಂ ನೋಡುತವಳೊಳೆಂದ।
ನಿಶ್ಚಯ[6]ವೆಯ[6]ವಳೆಲ್ಲಿ ಪೋದಳೆನಲೆನಗಿಂತು
ಮಚ್ಚರಿಸಿ ನಡೆಗೊಂಡಳ್ಯೆಸೆನಲು ಹಿಡಿತನ್ನಿ
ಕೊಚ್ಚಿಸುವೆ ಕಿವಿಮೂಗನೆನುತಲಾಕ್ಷೇಪಿಸಲು ದೂತರೊಱಲುತ್ತ ಪರಿದು ॥೧೧॥

ತೊತ್ತೆ ಹೋಗದಿರೊಡೆಯನಂ ನೀಕರಿಸಿ ನುಡಿದು
ವ್ಯತ್ಯವಂ ಕರಕೊಂಡೆ ಬಾರೆಂದು ಸೆಱಗುವಿಡಿ
ವಸ್ಥಿತಿಯ ಕಂಡೆನ್ನ ಮುಟ್ಟದಿರಿ ಭವಿಗಳಿರ ಮುಟ್ಟಿದರೆ ನಿಮಗೆ ಬಸವಾ।
[7]ಮಾ[7]ತ್ಯಪದದಾಣೆನಲು ಮೀಱಿದಂತವರ್ಗಿರು ನ
ಗುತ್ತ ಪಿಡಿದಿರ್ದ ದಡಿಗಳಲಿ ನೂಂಕುತ್ತಲತಿ
ಭಕ್ತಿತಲೆಗೇಱಿತಿಂದಿಳಿಯಿತ್ತು ನಡೆಯೆಂದು ಕೊಂಡು ಬಪ್ಪನಿತಱೊಳಗೆ ॥೧೨॥

ಕೋಪ ತರಹರಗೂ[8]ಡ[8]ದತಿ ತವಕದುದ್ರೇಕ
ರೂಪು ನುಡಿವಂತೆಯಾ ಬಿಜ್ಜಳಮಹೀಪಾಲ
[9]ನೇಪರಿಯ[9] ದಂಡನಾಯಕ ನಿನ್ನವರ ತೊಂಡುತೊಳಸಾಟವೆನಲೆಂದನು।

---

[1] ತೇ (ಕ.ಖ.ಗ.ಪ.ಚ.ಛ). [2] ಪಾಪಿಯಾ (ಜ). [3] ವುಸಕಲವವ (ಕ.ಖ.ಗ.ಪ.ಚ.ಛ). [4] ವೋ (ಜ). [5] ತಲೆವೋ (ಜ). [6] ದಿಯ (ಖ), ಗಳ (ಜ), ಗೆಯ (ಗ.ಪ.ಛ). [7] ನಿ (ಜ). [8] ಡಿ (ಕ). [9] ನೇನೀಪರಿಯ (ಕ), ನೇಪರ್ಯ (ಜ).

ಭೂಪಕೇಳಗ್ನಿಗುರಿ ಉರಿಯಲ್ಲ ಸೂರಿಯನ
ತಾಪ ತನಗದು ತಾಪವಲ್ಲವಿತರರ್ಗೆಯನು
ತಾಪದೋಱ[1]ಲು ಕಳೆಗಳಿಂದಲಹಿ[1]ತಾಚಾರ ಕಳೆ ನಿಂದೆಯನುತಾಪಕೆ ‖೧೩‖

ಶಾಂತವಹವೇ ನಿಜಗುಣದ ನೀತಿಯಳಿ[2]ದಿ[2]ತರ
ರಾತುರಕೆ ತಕ್ಕಂತೆ ಕೇಳರಸ ತನಗೆ ಸೊಗ
ಸೇತೆಱದೊ[3]ಳಪ್ಪುದದಱಿಚ್ಛೆ[3] ವಿಡಿದಿರದೆ [4]ಕಿಚ್ಚಂ ಮಡಿಲ[4] ಕಟ್ಟೆ ಸುಖವೆ।
ಶ್ವೇತಮಾರ್ತಾಂಡಾದ್ಯರಂದು ಮುಟ್ಟದಿರೆನಲ್
ಪ್ರೇತೇಶ ಮುಟ್ಟೇನ ಕಂಡ ಸದ್ಭಕ್ತಿಸಂ
ಘಾತೆಯಿಾಗಿರ್ದ [5]ಶಿವೆ[5] ನುಡಿದ ನುಡಿಗೇಳದಾ ದಾಸಿ ನುಡಿಗೇತಕೆ ವೃಥಾ‖೧೪‖

[6]ಭಾಷೆ[6] ಬಹ ದಾರಿಯಲಿ ಮುಳ್ಳುಬಡಿದವರುಂಟೆ
ಔಷಧಕೆ ನಂಜೂಡಿಕೊಂ[7]ಡ[7]ರುಂಟೇನು ನಿಜ
[8]ವೌಷದವರಂದಂಡ[8]ಗೊಂಡು ಸುರೆಗುಡಿವ ಜೋಗಿಗೆ ದಾನಕೊಟ್ಟರುಂಟೇ।
ಸಂಸಾರಸುಖದೋಱಿ ಮಾತೃಗಮನವೆ ಪರವು
ಹಂಸಂಗೆ [9]ದಾಸಿ[9]ಯ ವಿವಾಹವೇ ರವಿರಶ್ಮಿ
ಕೌಶಿಕಗೆ ಕಾಣದಿರೆ ಕುಂದೇನು ಸಿರಿಯ ತೊತ್ತೊದೆದಡರಸೊದೆಯಬಹುದೆ ‖೧೫‖

ಈ ತಪ್ಪಿಗೀಯರಸು ಕವರದಿರನೆಂ[10]ಬು[10]ಪ
ಖ್ಯಾತಿವೊಱುವೊಡೆ ನಿಮ್ಮ ಸುಖ ನಿಮ್ಮಪುಣ್ಯಕ್ಕೆ
[11]ಕೇ[11]ತುವಾದವಳ ಮಾತಿಂಗೆ ಮರುಳಾಗದಿರು ಶಿವಪುರದೊ[12]ಲೀ[12]ಪುರದೊಳು ।
ಸ್ವಾತಂತ್ರಶೀಲದ ಶಿವಜ್ಞಾನಸಂಪದಪು
ನೀತರಗಣಿತ ಮಹಾವ್ರತಪರಾಯಣರಿಪ್ಪ
ಕ್ಷೇತ್ರವಿದನಾ[13]ಳ್ವದಾ[13]ರ್ಗುಂಟು ನಿನ್ನಯ ಸುಕೃತಮುಖಮೂರ್ತಿಗೊಂಡೊಲಲ್ಲಿ ‖೧೬‖

ಪರಮಶೀಲರು ತತ್ವಶೀಲರಾಗಮಶೀಲ
ರುರುಶೀಲರಾಚಾರಶೀಲರ್ಸಮಯಶೀಲ
ವರಶೀಲ ವಾಕ್ಶೀಲ ಮುಖಶೀಲರನ್ಯಭವಿಸಿಂದಾಪ್ರಹರಶೀಲರು।

---

1 ಲುಕಳೆಗಳಿಂದೆಲಹಿ (ಕ.ಚ.ಖ), ಲೈಕಳೆಯಳಿಯದಂ (ಜ). 2 ವಿ (ಕ.ಚ). 3 ಳಾಪ್ಪೊಳವರೆಚ್ಛೆ (ಜ), ಳೊಪ್ಪುವದಱಿಚ್ಛೆ (ಘ), ಳಪ್ಪುದದಱೀಲೆ (ಕ.ಚ), ಳಪ್ಪುದದ ರೀತಿ (ಖ). 4 ಚ್ಚಂಮಡಿಯ (ಘ), ಚ್ಚಂಮಡಿಯ (ಕ.ಚ.ಗ.ಥ), ಚ್ಚಂಮಡಲ (ಖ). 5 ವ (ಕ.ಖ.ಚ). 6 ಭೂಪ (ಖ). 7 ಬ (ಜ). 8 ವೌಷಧವರಂದಂಡ (ಕ.ಖ.ಗ.ಘ.ಚ.ಥ), ವಂಶದವರಂಥರಥರಂ (ಜ). 9 ದೋಷಿ (ಜ). 10 ಬ (ಜ). 11 ಹೇ (ಖ.ಚ). 12 ಳೀ (ಕ.ಖ.ಗ.ಘ.ಥ). 13 ಳ್ವರಾ (ಕ), ಳ್ವವಾ (ಗ.ಘ.ಥ.ಜ).

[1]ವರ[1]ಶೀಲಧನುಶೀಲರಂಗಶೀಲರ್ನಯನ
ಕರಶೀಲ ನಿತ್ಯಶೀಲರ್ಸತ್ಯ ಶೀಲರ
ಕ್ಷರಶೀಲ ಮಂತ್ರಶೀಲರ್ಮಹಾವ್ರತಶೀಲ ಧನಶೀಲ ಮನಶೀಲರು ॥ ೧೭ ॥

ಜಲಶೀಲ ನೆಲಶೀಲ ಜಪಶೀಲ ತಪಶೀಲ
ಛಲಶೀಲ ಚಾರಿತ್ರಶೀಲ ಭಾಷಾಶೀಲ
ಫಲಶೀಲ ವಂದ್ಯವಂದನಶೀಲ ಧ್ಯಾನ ಮೌನ ಸುಯೋಗಜ್ಞಾನಶೀಲ ।
ಸುಲಭ ಸುಬ್ರತ ಸಿ[2]ದ್ಧಿ[2] ತ್ಯಾಗಭೋಗಾಚಾರ್ಯ
ವಳಿಶೀಲ ದರ್ಮ[3]ವ[3]ರ್ಮೋತ್ಸಾಹ ವೀರಸಂ
ಕುಲಭಾವನಾಮನೇಮದ ಪ್ರಮುಖಸಂಖ್ಯಾತ ಶೀಲರಿಹ ಗಣಪುರದೊಳು ॥ ೧೮ ॥

ಆರಾರಮಾತಿಗಾರಾರ ಬೇರಿಂಗೆ ಬಿಸಿ
ನೀರಹೊಯ್ದಪೆ ಧರ್ಮದಾಕ್ಷಿಣ್ಯಗೆಟ್ಟು ಕ
ರ್ಮಾರಂಭದಾಂ[4]ಗಿ[4]ಂಗೆ ಮುಯ್ಯಾನುವರೆ ಕ್ಷತ್ರಿಯರ್ಕಳೆಂಬವಸರದೊಳು ।
ಚಾರರತಿಭಕ್ತೆಯಂ ತಂದರಸನಿದಿರಿನೊಳು
ನೀರಡಕಿ ಬಂದಳಿದೆ ಎಂದು ನಿಂದಿರಿಸಲವಿ
ಚಾರಮುಖತಾಪತಗ್ಗೀಕ್ಷಿಸುತ ಕೇಳ್ದನಂತಾ ಮಹಾವ್ರತಮಾತೆಯ ॥೧೯॥

ಒಲೆಯಮುಂದೊಱಗಿ ಮಾಡದ ಮೇಲಿಹ ಸ್ವಪ್ನ
ವಲೆಗೆಡದೊ[5]ಲೇ[5]ಕೆಲ[6]ಗೆ[6] ನೀನೆಮ್ಮ ಮಹಿಮೆವಳಿ
ದಿಳಿಕೆ[7]ಗಂ[7]ಡೆಮ್ಮವಳು ನಿನ್ನ ಮುಟ್ಟಲ್ಕೊಡ[8]ದೆ ಕೀಳ್ಗ[8]ಳೆದ ನೆಲೆಯೇನೆನೆ ।
ಕುಲಗಿಲದ ಕೊಱತೆಗಾಂ ಸಾರೆನ್ನೆ ಸದ್ಭಕ್ತಿ
ಛಲದ ನೆಲೆಯೊಱತೆಯಗಣ್ಣಿದಹಳ ಭವಿ ಮುಟ್ಟೆ
ಜಲಸೂತಕಂ ಲಿಂಗದ್ರೋಹವಹುದಾಗಿ ಮುಟ್ಟದಿರೆಂದೆ ನೃಪ ಎಂದಳು ॥೨೦॥

ಎಂದರೇನೇನು ಭವಿಭಕ್ತರೆಂದೆಂಬುಭಯ
ಸಂದೇನು ನೀರತ[9]ಡಿ[9]ಯೊಱತೆದೋಡಾ ನೀರ
ತಂ[10]ದಗ್ಘವ[10]ಣಿಯೆಂದು ನುಡಿವೊಲ್ಕೈಸಲೆ ನಿಮ್ಮ ಭಕ್ತಿವಾತುಗಳ [11]ಯು[11]ಕ್ತಿ ।
ಒಂದೆ ಪರಿ ಜನನ ಮರಣ ಸ್ಥಿತಿಸಮಸ್ತಕ್ಕಿ
[12]ದೊಂದಬುದ[12] ಮೂಡಿತ್ತು ನಡುವೀ ಮಹಾಮಂತ್ರಿ
ತಂದೆಯಾಗಮ ಬಲಿದು ಜಗವ ಬಾಹಿರಗಳೆವ ಶೀಲ ತಲೆಗೇಱುಲ್ಲ[13]ರು[13] ॥೨೧॥

---

[1] ಛರಿ (ಕ.ಖ), ಛಲ (ಗ.ಛ). [2] ದ್ಧ (ಜ). [3] ಧ (ಕ.ಖ). [4] ದಿ (ಕ.ಖ.ಚ).
[5] ಳೇ (ಕ.ಖ.ಗ.ಘ.ಚ.ಛ). [6] ಬ (ಜ). [7] ಗೊಂ (ಕ.ಖ.ಚ). [8] ದಕೀಲ್ಗ (ಕ.ಖ.ಚ).
[9] ಡೆ (ಕ.ಖ.ಗ.ಚ.ಛ). [10] ದದಗ್ಗ (ಖ), ದಗ್ಗ (ಕ.ಚ.ಗ.ಛ). [11] ಮು (ಘ.ಜ).
[12] ದೊಂದೆಂಬುದಂ (ಕ), ದೊಂದಬಧ (ಜ.ಘ). [13] ರ (ಕ.ಖ.ಗ.ಘ.ಚ.ಛ).

ಮುಂದುಗಾಣ[1]ರಿ[1] ತೊತ್ತು ಭೃತ್ಯರೊಳಗಾ[2]ದಖಿಳ[2]
ಮಂದಿ ಮನಬಂದಂತೆ ಹರಿದಾಡಿ ಹಲಬರನು
ಕುಂದುಕೊಱತೆಗಳಿಕ್ಕಿ ಕುಂದುಗಳೆವಭ್ಯಾಸಮುಖವಿತ್ತು ಮುಖವಾದುದೆ।
ಎಂದು ಬಸವೇಶ್ವರನ ನೋಡುತ್ತ ಬೆಳುನಗೆಯೊ
ಳೆಂದನಿವಳೊಱತೆಯಗ್ಗಣಿಯೆಂ[3]ಬವೆ[3]ಲ್ಲ ನೀ
ರಂದವೋ ಮೇಣ್ನಿಮ್ಮ ಭಕ್ತಿನೈಷ್ಠೆಯ ಘುಟ್ಟಿಯಂತೆ ಜಲಘುಟ್ಟಿಯೊ ಎನೆ ॥೨೨॥

ಭಕ್ತಿಗಟ್ಯಾಚಾರಘುಟ್ಟಿ ನೈಷ್ಠೆಯು ಘುಟ್ಟಿ
ಯುಕ್ತರಾಗಮಶೀಲ ನಿಜಘುಟ್ಟಿಯಂತೆ ಯಾ
ಮುಕ್ತಿದೇವತೆ ಹೊತ್ತ ಹೊಱೆ ಘುಟ್ಟಿಯಲ್ಲದೊಡೆ ಮುಟ್ಟದಿರು ಭವಿಯೆಂಬಳೆ।
ಮುಕ್ತಿಯಂ ಮೂದಲಿಸಿ ಗತಿಗೇಳಲುಂಟೆ ಶಶಿ
ನಕ್ತದೊಳು ಫಲ ನೆಲದೊಳಗ್ನಿ ಕಾಷ್ಟದೊಳು ಪಯ
ರಕ್ತಗ್ರಂಥಿಯೊಳು ನಳಿನಂ ಕೊಳನ ಕೆಸಱೊಳುದಿಸಿದಡವೇನವಱ ಪರಿಯೆ ॥೨೩॥

ಜ್ಞಾನೇಂದ್ರಿಯ[4]ದ[4]ಭೇದ ಭಕ್ತನಧಮೇಂದ್ರಿಯದ
ಸ್ಥಾನ ಭವಿವಿಣ್ಮೂತ್ರ ಪಥ[5]ಕ[5]ಲ್ಲದ[6]ದು[6] ಪರಮ
ಧ್ಯಾನಕ್ಕೆ ಸಲ್ಲ[7]ವಾ[7] ಪರಿಯಂಗವೊಂದಾದಡೇನು ಸರಿಯೆನಲುಬಹುದೆ।
ಕಾನನ ನಗರ ದಿವಾಕೀರ್ತಿ ಗೃಹ ಸುಕ್ಷೇತ್ರ
[8]ಥೋ[8]ನಿರಯಕೆಲ್ಲ ಭೂವ್ಯಾಂಗ[9]ದೊಂ[9]ದಾಗಿಹನು
ಮಾನವರಿ ಭವಿಭಕ್ತರಿರವಂತೆ ಯ[10]ಗ್ಘ[10]ಣಿಯ ಸುಯಿಧಾನ ಸೂಕ್ಷ್ಮತರವು ॥೨೪॥

ಹೀನ ಮೃಗ ಪಕ್ಷಿ ಕ್ರಿಮಿ ಕೀಟಕ ಕುಜಲಚರವಿ
ತಾನ ನಾನಾಜೀವಜಾಲಕೀ[11]ಳ್ಮ[11]ರವಳಕೆ
ಸ್ನಾನ ಪಾನ ಪವಿತ್ರ ಶೌಚ ಪಾತಕಸೂತಕಂ ಪಾದಸೋಂಕು ಚೇಷ್ಟ।
ನ್ಯೂನಾತಿರೇಕ ಕಿಲ್ಬಿಷ ಭವಿನಿರೀಕ್ಷಣದ
ಪಾನೀಯಗಳನುಳಿದು ಸದ್ವ್ರತಸದಾಚಾರ
ಜ್ಞಾನಭಾವಿತದೊಱತೆಯೊಳು ಜಲ ಸುಘುಟ್ಟಿಯಹುದಿದಕುಂಟೆ ಸಂಶಯ ನೃಪ॥೨೫॥

ನೀನಧಿಕ ನಿನ್ನಿಂದಲೀ ಸಭಾಂತರಕೀಳು
ಏನು ಕಾರಣ ಜನನಮರಣಸ್ಥಿತಿಯೆಲ್ಲ ಸರಿ
ಮಾನವಾಂಗಮುಮಹಿಮೆಯೊಂದಾದಡೇ[12]ನು ಸುಕೃತದ ತಪಕ್ಕಿದುವೆ[12] ದೃಷ್ಟ।

---

[1] ಸಿ (ಕ.ಖ.ಚ). [2] ಗಳಿದ (ಜ). [3] ಬುವೆ (ಗ.ಥ), ಬಯ (ಕ.ಖ.ಗ.ಘ.ಚ). [4] ರ (ಜ). [5] ವ (ಕ.ಖ.ಗ.ಘ.ಚ.ಥ). [6] ರು (ಜ). [7] ದಾ (ಜ). [8] ದಾ (ಜ). [9] ವೊಂ (ಜ). [10] ಗ್ಘವ (ಜ). [11] ಳ್ನ (ಜ). [12] ನವರಪೂರ್ವಸುಕೃತದುವೆ (ಖ) ನು ಸುಕೃತದುವೆ (ಕ.ಖ), ನುಸುಕೃತತಪ್ಪಕ್ಕಿದೆ (ಜ).

ಪಾನೀಯವೊಂದೆಂದು ನುಡಿಯದಿರು ಲಿಂಗಾವ
ಧಾನಿಗಳಿಗುಳಿದದೇಹಿಗಳೆಗೆಣೆ ಮಾಡದಿರು
ಕ್ಷೋಣೀಶ ದೃಷ್ಟಗಾಣ್ಬರ್ಥವುಳ್ಳಡೆ ನೋಡು ಶೀಲಾಮೃತಾಂತರವನು ॥ ೧೬ ॥

ಎಂದು ಭಾವಬ್ರಹ್ಮ ತತ್ವಾರ್ಥಮುಖವಾಯು
ಬಂಧಸೋಂಕಿನ ಸೂತ್ರವಿಡಿದೆಲೆ ನೃಪೇಂದ್ರ ನೋ
ಡೆಂ[1]ದೆನಲ್ಕೌತು[1]ಕವೆನುತ್ತ ನಾಸ್ತಿಕನಗೆಯ ನಟಿಸುತ್ತ ಕುಪಿತಚಿತ್ತ।
ಸಂದೇಹ ದೇಹಗೊಂಡಂತೆ ಬೆಸಗಂ ಬೀಱು
ತೆಂದನಂತಾದಡಹುದೀ ಭಕ್ತೆ ಹೊತ್ತಿಹ ಕ
ಬಂಧಘಟಮಂ ದಂಡಿಸೆನುತೊರ್ವ ಹೊಂದಂಡಧರಗೆ ನಿರವಿಸಲಿಕವನು ॥ ೧೭ ॥

ಪಿಡಿದ ಪೆರ್ದಂಡಮಂ ನೆಗಹಿ ಘಟಗರ್ಭ[2]ಮ
ನ್ನೊ[2]ಡೆವೆನೇ ಎಂದು ಮಗುಳ್ದಾದರಿಸುತವನು ತ
ನ್ನೊಡೆಯನಾನನವನೀಕ್ಷಿಸಲವುಡುಗಚ್ಚಿ ಹೂಂಕೃತಿಗೈವ ಶಬ್ದದೊ[3]ಳಗೆ[3]।
ಹೊಡೆದ ಶತಚೂರ್ಣವಾಗಲ್ಕೊಳಗೆ ಜಲ ವಜ್ರ
ಗೊಡನಾಕೃತಿಯೊಳಿರ್ದುದೇನೆಂಬೆ ಶಶಿಕಾಂತ
ಗಡಹ ಗಲಶವ ಮುಕ್ತಿವೊತ್ತು ಬಸವನ ಭಾವದೊಡನೆ ಜನಿಸಿದೊಲಿರ್ದುದು ॥ ೧೮ ॥

ಆವ ನಿಷ್ಠೆಯ ನಿಜವದಾವ ಭಕ್ತಿಯ ಬಲುಹ
ದಾವ ಭಾವದ ಭದ್ರವಾವ ಸತ್ಯದ ಸತ್ವ
ವಾವ ದೇವತೆಯ ವರವಾವ ಮಂತ್ರದ ಮಹಿಮೆಯಾವ ಘನಮನವಳಂಬ।
ಆವ ವಾಚಾಸಿದ್ಧಿ ಯಾವ ಗುರುಕರುಣ ಮೇ
ಣಾವ ಬ್ರಹ್ಮದ ಬಳಕೆ ಯಾವ ತತ್ವೋಚಿತವಿ
ದಾವುಪನಿಷದ್ಗಳಂತರದೀಪ್ತಿ ಸಿವ್ಯಾತ್ಮನಾಯತವಭವಗಸಾಧ್ಯ ॥ ೧೯ ॥

ಎಂದು ನಂದೀಶ ಕೀರ್ತಿಸುತಿರಲು ಭಕ್ತರಾ
ನಂದಿಸುತಿರಲ್ಕಿತ್ತಲತ್ತಲಾ ಪರಿಶರಣ
ಸಂದೋಹ ರಾಜಸಭೆ ಸರ್ವಜನವಿಸ್ಮಯದ ವಿಪಿನ ಹೊಕ್ಕಂತಿರಂತಾ।
ಕಂದೆಱೆದ ಸತ್ಕಳೆಯ ಕರುಗಡೆದ ಕಲಶಕ್ಕೆ
ಚಂದ್ರಿಕೆಯನುಣ್ಬಿಟ್ಟ ಮಾಳ್ಕೆಯಿಂ ಘ[4]ನೊಪಲಘ
ಟಂ[4]ದವಡಿಸಿದೊಲಿಹಗ್ರೋದಕದ ಘಟ್ಟಿನಿಟ್ಟಿಸಲಗೋಚರವಾಗಿರೆ ॥ ೨೦ ॥

---

[1] ದದುಃಕೌ (ಜ). [2] ಮಂವ (ಕ.ಖ.ಗ.ಘ.ಚ.ಛ). [3] ಡನೆ (ಜ). [4] ನಪಲಘಟಂ (ಜ), ನೊಪಲಪುಟಂ (ಕ.ಚ.ಗ.ಘ.ಛ), ನೊಫಲಪುಟಂ (ಕ).

ಸರ್ವಜನಮುಖಬೆಳಗ ಬೆಳಗಿತ್ತು ನೃಪನಯನ
ಗರ್ವಗಡಬಡಿಸಿತ್ತು ಭವಿಕುಲಾದ್ರಿಗೆ ಬೇಗೆ
ಪರ್ವಿತ್ತು ಶಬ್ದಸಂಪಾದನೆಯ ಜಿಹ್ವೆಗಹ್ವರಕೆ ನಿರ್ಘಾತವಾಯ್ತು ।
ನಿರ್ವಾರ್ತೆಯಾಯ್ತು ನಿಂದಾರಾಗ ನಾಸ್ತಿಕದ
ಪರ್ವತಕೆ ಪ್ರಳಯ ಬಾಯ್ದೆರೆಯಿತು ಮಹಾಶ್ಚರ್ಯ
ಉರ್ವಿಪನ [1]ಕಂಠವುಮನೊಡೆ[1]ಯಲಾ ಕಂಪಿಸುವೊಲಲ್ಲಾಡಿತರಸುಮುಖವು
॥ ೨೧ ॥

ಸ್ವರ್ಗಮರ್ತ್ಯದೊಳು ಭುವನಾದಿಮನುಮುನಿದೇವ
ತಾಗ್ರಗಣ್ಯರು ನೆಗಳ್ದ ಚೋದ್ಯಕಥನಾಗಮಸ
ಮಗ್ರದೊಳ್ಕೇಳ್ದರಿಯದಚ್ಚರಿಯ ಕಂಡು ಕಣ್ಮುಚ್ಚುತರಸಾಹ ಎನುತ ।
ಅಗ್ಘವಣಿದಹ ಈಕೆಯುಗ್ಗಳೆಯ ಭಕ್ತೆಯಹ
ಳುಗ್ರಶೀಲವಿದಹುದು ಅಗ್ರರಾರ್ನೀಚರಾ
ಹರ್ಗಗ್ಗಡತಿ ನೋಡೆನಲ್ಕವಳು ಸಾಷ್ಟಾಂಗವೆರಗಿದಳು ನಿಮ್ಮತಿಭಕ್ತೆಗೆ ॥೨೨॥

ಅರಸು ಮೊದಲಾದಖಿಳಜನವೆದ್ದು ಪರಿಕಿಸಲು
ಕರ[2]ಕದಿಂ[2] ಖಂಡಿಸಿದ ಚಿತ್ರಭಾಂಡದೊಲು ವಿ
ಸ್ತರಿಸಿ ನಿರ್ಮಲಜಲಂ ಘಟ್ಟಿಗೊಂಡಿರಲು ಬಸವರಸರೇ ನಿಮ್ಮಮನೆಯ ।
[3]ಸಿರಿಯಕ್ಕಗೇಂ ಶಿವಂ ಹಂಗಿಗನೊ[3] ಯೋಗಿಣಿಯ
ಶಿರವೊ ಎನೆ ಗುರು ಲಿಂಗ ಜಂಗಮದ ದಾಸೋಹ
ವರದೇವತೆಂದು ತಾನೆರಗೆರಗಿಸಿದನು ರಾಜಪ್ರಮುಖಸಭೆಯೆಲ್ಲರ ॥ ೨೩ ॥

ಅನುಪಮುಪಮಾತೀತನಂತರಂಗದ ಪರುಷ
ಚಿನ್ಮಯಚಿದಾನಂದನಾನಂದಮುಖರಸದ
ಮನುಜೇಂದ್ರ ನೋಡಿ ತಲೆವಾಗುವೊಲ್ತಲೆವಾಗಿ ಕೈಮುಗಿದು ಕಳುಪಲಾತ ।
ವನಬದ್ಧಗಳಸವೊತ್ತಾ ಭಕ್ತಿದೇವತೆಯ
ಮನೆಗೆ ಬಿಜಯಂಗೈಸಿಕೊಂಡು ಬಹ ಘನಮುಕ್ತಿ
ಇನಿಯ ಬಸವೇಶ್ವರನ ಇದಿರ್ಗೊಂಬ ಮಂಗಳಾಂಗನೆಯ ಮನದೊಸಗೆಯೆನಲು
॥ ೨೪ ॥

ಮಂಗಳಂ ಪುರವರ ವೀದಿಯೊಳು ಶರಣರ್ಸ
ನಂಗದಿ ಸದಾಚಾರ ಸಂಪದೋತ್ಕರದ ಕೀ
ರ್ತ್ಯಂಗನೆಯ ಸಿಂಗರಂಗೈದಂತೆ ಗುಡಿ ತೋರಣುತ್ಸಹ ಸುವಾದ್ಯಂಗಳ ।

---

[1] ಮಕುಟಮನ್ನೊಡೆ (ಜ). [2] ದಿಂದ (ಜ). [3] ಸಿರಿಯಕಗೆ ಶಿವಹಂಗಿಗನೊ ಸಿದ್ಧ (ಜ).

ಹೊಂಗಳಶ ಕನ್ನಡಿಗಳೊಗ್ಗಿನೊಳಗೀ ಕ್ರಮದಿ
ಲಿಂಗ ಜಂಗಮದ ಲೀಲಾವಿಲಾಸದ ಪ್ರಭಾ
ವಂಗಳಾಂದೋಳ ಶ್ರೀ ಜಯಬಸವನಂಗಮಂ ಬಾಸಣಿಸಿತೇಂವಣ್ಣಿಪೆ ‖ ೩೫ ‖

ದಿವ್ಯತೇಜೋನ್ನತಕಳಾಪ್ರಕೃತಿ ಪರಮಾರ್ಥ
ಭವ್ಯಭವನಕ್ಕೈದುವೊಲು ನಿಜನಿಕೇತನಕೆ
ನವ್ಯಶೀಲಾಗಮದ ಜೀವ[1]ವಂ ಜೀವನೀಯುವ[1] ಮಾಡಿಕೊಂಡು ಬರಲು ।
ಅವ್ಯಕ್ತ[2]ಮೊಗವೊಡದ ಕೇಶಿರಾಜಂ ಕಂಡು
ಉರ್ವುತ್ತ[2] ಬಂದೆನ್ನ ವ್ರತಕಿದು [3]ಧ್ಯಾನಕಿದು
ನಿರ್ವಹತೆಯಾಯಿತೆಂದೆನುತೊ[3]ಱತೆಯಗ್ಘಣಿಯ ಶೀಲವ ಶಿವಂಗೊಪ್ಪಿಸಿ ‖ ೩೬ ‖

ಬಸವಲಿಂಗದ [4]ಲಿ[4]ಂಗವೀತನ ನಿರೀಕ್ಷಣವೆ
ಕುಶಜೀವಪದವೆಂದು ತದ್ವ್ರತಂಗೊಂಡೈಯ
ಹೊಸ ಶೀಲವಿಡಿದನವರಡಿವಿಡಿದು ಬಯಲಪ್ಪ ಭಾಷೆವಿಗಾಸಲನೇಮವ ।
ಅಸಮಾಕ್ಷನಪರಾವತಾರದವತಾರಾದಿ
ಪಶುಪನ ಮಹಾತ್ಮೆಯಿಂತೆಂದು ನಂದೀಶನಂ
ದೊಸೆದು ಪ್ರಮಥರ್ಗೆರೆದೆಥಾರ್ಥವಿದ ಚಿತ್ತೈಸಿ ಶರಣರಾನಂದದಿಂದ ‖ ೩೭ ‖

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಜಲವ ಘಟ್ಟಿಯಂ ಮಾಡಿ ರಾಜಿಸಿದ ಸಂಧಿ ‖೩೮‖

---

[1] ನೀಯುವುಂಜೀವವಂ (ಕ). [2] ಮೊಗವಡೆದ ಕೇಶಿರಾಜಂಕಂಡು ಉರ್ವುತ್ತ (ಕ), ಮೊಕವಾಡದಂ ಕೇಶಿರಾಜಕಂಡು ಉತ್ತೆ (ಜ). [3] ದ್ಯಾಪನೆಯುನಿರ್ವಿತ್ತ ನಿಜರೂಪ ದೆಂದೊ (ಜ). [4] ಅಂ (ಕ).

ಇಪ್ಪತ್ತೇಳನೆಯ ಸಂಧಿ

ಸೂಚನೆ—

ಮೀಮಾಂಸಕಾಚಾರಿಯನತರ್ಕ್ಯತಂತ್ರ[1]ಮಂ[1]
ಭೂಮಿಪನ ಮುಂದೆ ತೃಣಪುರುಷವುಬದಿಂ ಖಂಡಿ
ಸಾ ಮದಾಂಧನ ತಿಳುಪಿ ಸದ್ಭಕ್ತಿಯುಕ್ತನಂ ಮಾಡಿದನು ಬಸವೇಶನು ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯು।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥ ೧ ॥

ಸಾಕಾರಶೈವಸಿದ್ಧಾಂತಸಂಪದಪುಣ್ಯ
ಶ್ಲೋಕಪ್ರಮಥಕೇಳಿ ಕಲ್ಯಾಣಪುರನಿಲಯ
ನಾಕವದನಾಳ್ವ ಬಿಜ್ಜಳನೃಪನ ಪರಮಪ್ರಧಾನ ಬಸವೇಶ ಚಂದ್ರ।
ಶೇಖರನ ನಿಷ್ಠಾವಿಶಿಷ್ಟಜಂಗಮಲಿಂಗ
ಕೋಕನದ್ವಿರೇಫ ಸ್ವಸಮಯಾಬ್ಧಿಯಬ್ಜ ಸುವಿ
ವೇಕಚಿಂತಾರತ್ನ ಪಂಚಮುಖಪರುಷ ಪ್ರತಿವಾದಪ್ರಳಯತಿಣೇತ್ರ ॥ ೨ ॥

ಸಾದರದೊಳೊಂದುದಿನವೆಂದಿನಂತೋಲಗದೊ
ಳಾ ಧರಾಧಿಪನ ಬಲಗದ್ದುಗೆಯ ಮೇಲೆ ಮೂ
ರ್ತ್ಯೋದಯಂಗೈದು ಸುಖಸಂಕಥಾಕಾರಣವಿರಾಜಿಸುತ ರಾಜಯೋಗ।
ಭೇದಾದಿಭೇದಗಳ ಪದಿನೆಂಟು ಮಂತ್ರಿಮುಖ
ದಾದ್ಯರಿಗೆ ತಿಳುಪುತ್ತಿರಲ್ಕುತ್ತರಾಶೆಯಿಂ
ಶ್ರೀಧರನೆನಿಪ್ಪೊಬ್ಬ ಮೀಮಾಂಸಕಾಚಾರ್ಯ ಬಂದನಾಡಂಬರದೊಳು ॥ ೩ ॥

ಹತ್ತೆಂಟು ಗಜದ ಮೇಲಖಿಳ ತರ್ಕಾಗಮದ
ಹೊತ್ತಿಗೆಗಳಂ ಹೇಱಿಕೊಂಡು ಕೆಲ ತಾರ್ಕಿಕರ
ಮೊತ್ತಸಹಿತಾ॰ಪುರದ ಹೊರವಳ[2]ಯಕ್ಕೈ[2]ತಂದು ಬಿಟ್ಟುಹೊಯಿಸಿದ ಭೇರಿಯ।

---

[1] ನುಂ (ಗ). [2] ಲಗ್ಗೈ (ಜ).

ಪೃಥುವಿಯಾಚಾರ್ಯ ದರುಶನನಿರಸನಬ್ರಹ್ಮ
ಕರ್ತೃರ್ಹಂ ತ್ರಿಜಗಾಧಿದೈವ ಹಮ್ಮೆಂಬ ಬಿರು
ದೆತ್ತಿ ಮೆಱೆಯಲ್ಕೆ ಮುಂದುಘ್ಘಡಿಪ [1]ಬಹ ಕಾಳದ ಕಹಳೆಗಳ ಕೂಗಿಡಿಸುತ ‖೪‖

ರಾಜ[2]ರ ಸ[2]ಭಾಯೋಗ್ಯ ಶಿಷ್ಯಮೀಮಾಂಸಕ ಸ
ಮಾಜದೊಳಗೊಬ್ಬರಿಬ್ಬರ ಕಳುಪಲವರ್ಗ[3]ಳಾ[3]
ರಾಜನ ಮನ ಪ್ರೇರಕತ್ವದ ಪ್ರಸಂಗಮಂ ಪಸರಿಸೊಳಹೊಯ್ದುಕೊಂಡು ।
ಮೂಜಗಾಚಾರ್ಯರರಸಾ ನಿಮ್ಮ ಸಂಪದವಿ
ರಾಜಕ್ಕೆ ಪರಕೆಗೊಡುವರ್ಥದಿಂ ಬಂದೈದ
ರಾ ಜಗನ್ನಾಥ ನೀನಿದಿರ್ಗೊಂಡು ಸಾಮರ್ಥ್ಯಪುರುಷಪರುಷವ ನೋಡೆನೆ ‖ ೫ ‖

ರಾಜಧರ್ಮೋಚಿತ ಮಹಾಪುರುಷ[4]ರೈ[4]ತಂದು
ಪೂಜೆಗೊಳುಹಂ ಪುಣ್ಯ ಕರಲೇಸೆನುತ್ತ ನೃಪ
ರಾಜಧಾನಿಯೊಳು ಗುಡಿತೋರಣಂಗಟ್ಟಿಸಿ ಮಹಾಮಂಗಳೋತ್ಸಹಗಳ ।
ನೋಜಿಸಿ ಸಮಸ್ತಪುರಜನ ಪರಿಜನಾದಿ ಗಜ
ವಾಜಿ ನರ್ತನ ವಾದ್ಯ ಛತ್ರ ಚಾಮರ ತತ್ರ
ಯೋಜನಾಂಗಕ್ಕರಸು ನಿರವಿಸಲದಿರ್ಗೊಂಡು ತಂದರಾ ತರ್ಕಾರ್ಕನ ‖ ೬ ‖

ತರ್ಕಮೀಮಾಂಸಕಾಚಾರಿಯಗೆ ಚಾಮರವ
ನಿಕ್ಕುವನ ಪೆಸರ್ಶೈವ ಹಡಪಿ ವೈಷ್ಣವ ಗದ್ದು
ಗಿಕ್ಕುವನ ಪೆಸರಾರುಹತ ಪಾದುಕೆಯ ಪಿಡಿವವನ ಪೆಸರ್ಬೌದ್ಧ ಮುಂದೆ ।
ಒಕ್ಕಲಿಕ್ಕುಘ್ಘಡಿಸುವನ ಪೆಸರ್ಚಾರ್ವಾಕ
ಮಿಕ್ಕ ಸಿದ್ಧಾಂತವಿದ್ಯಾದಿಗಳು ಪರಿಚಾರ
ಕರ್ಕಳೆಂದಾರ್ಭಡಿಪ ಗರ್ಭಗಹಳೆಗಳ [5]ಕೊಬ್ಬುಬ್ಬಿ[5] ಮೆಱೆವುತ್ತ ಬರಲು ‖ ೭ ‖

* ಅಷ್ಟಮದಗಜವಾದುದೆಂಬ ದಂತಿಯೊಳಿರ್ದ
ಸ್ರಷ್ಟಮುತ್ಕೃಷ್ಟ ಶೂನ್ಯವ ಬಲಿಯೆ ಮುನ್ನ ತಲೆ
ಮೊಟ್ಟಾದುದೆಂಬುದಂ ಮಱೆದು ಮೀಮಾಂಸಕಾಚಾರ್ಯ ಬಸವೇಶನಿದಿರ ।
ದುಷ್ಟ ಡೆಂಚೆಯುನಮರಿದೇಣ[6]ಯೊ[6]ಳಮೆಟ್ಟಿಗಡಿ
ಯಿಟ್ಟನೆಂತೆನಲೊಂದೆರಡು ಮೂಱು ನಾಲ್ಕೈದು
ದೃಷ್ಟಕಾಱೇಳು ನರಕಕ್ಕಿಳಿವ ಪರಿಯಿಂದಲಿಳಿದ ಕರಿಯಿಂದ ಧರೆಗೆ ‖ ೮ ‖

---

[1] ಬಾಹಕ್ಕ (ಜ). [2] ಸ್ಸ (ಘ.ಛ). [3] ಳು (ಕ.ಖ), ಳಲಿ (ಚ). [4] ನೈ (ಕ.ಖ).
[5] ಕೊಂಬುಬ್ಬಿ (ಗ.ಛ). * ಈ ಪದ್ಯ 'ಜ' ದಲ್ಲಿಲ್ಲ. [6] ಯೆ (ಗ).

ಅರಮನೆಯ ಬಾಗಿಲೊ[1]ಳುಹೊಕ್ಕು ಧರಣೀಶ[1]ನಿಹ
[2]ಪಿ[2]ರಿಯ ಚಾವಡಿಗೆ ಬರೆ ಕಾಣುತ್ತ ಭೂಮೀಶ
ಕರಕಮಲಮುಕುಳನಾಗುತ್ತೇಳಲಾ ಪರಿಯ ಸಕಲಪ್ರಧಾನಮಾತ್ಯ ।
ಪರಿಜನವಿದಿರ್ಚಿ ಬರೆ ಶೈವಸಿದ್ಧಾಂತಶಂ
ಕರನಂಕ ಬಸವದಂಡಾಧೀಶನೆಲ್ಲರಂ
ತಿರೆ ಗದ್ದುಗೆಯನಿಳಿಯದಿರೆ ಕಂಡು ಶ್ರೀಧರಮಹಾಚಾರ್ಯ ಹೂಂಕರಿಸುತ ॥೯॥

ಓರೆಗಣ್ಣಿಕ್ಕಿ ನೋಡುತ್ತ ಸಂಹಿತಭಾವ
ಚಾರಿವರಿವುತ್ತ ಬಂದರಸು ಸಿಂಹಾಸನವ
ಸಾರೆ ಪ್ರತಿವಾದಗಜಸಿಂಹವೆಂಬಾಸನವ ಛಾತ್ರರಿಕ್ಕಲು ಕುಳ್ಳಿ[3]ದ[3] ।
ನೀರೇಜಗರ್ಭನ ನಿರಾಕಾರಸಂಪ್ರದಾ
ಯಾರಾಧ್ಯನರಸಂಗೆ ಸ್ವಸ್ತಿ ವಚನೋಚಿತುಪ
ಚಾರಬ್ರಹ್ಮಜ್ಞಾನ ಮುಖದೋಜುತೊಯ್ಯನವ ಭೂವರನೊಳಿಂತೆಂದನು ॥ ೧೦ ॥

ಅಱುದರುಶನದರಸು ಬರೆ ಕುಳ್ಳಿದೇಳದಿಹ
ನಾರಿವಂ ಭಸ್ಮಧರ ಶೈವಪಾಷಂಡಿ ಎನ
ಲಾರೈದು [4]ವಚನಿಸ್ಯವ[4]ರೆಮ್ಮ ಭರಭಾರಕರು ಮೇಲೆ ಸಾಮರ್ಥ್ಯರು ಸದಾ ।
ಚಾರಿ ಬಸವೇಶರೆನಲಿಂತೀತನುತ್ಕೋಚಿ
ಮಿಱುದ ಶರಣನೆಂದು ಕೇಳಿಹೆವು ಕೆಲಭ್ರಷ್ಟ
ಗಾ[5]ರ[5]ಸಿದ್ಧಾಂತಗಳ ನಟಿಸುತಿಹನೀತನೇ [6]ಅಂ[6]ತಲಾ ಗರ್ವದವನು ॥ ೧೧ ॥

ಬೇರುಮೇಲಂ ಮಾಳ್ಪೆ ತನ್ನ ಸಾಮರ್ಥ್ಯಕ್ಕೆ
ಕೂರಲಗಲಾ ನೃಪತಿ ನಿಮ್ಮ ಮರುಳ್ಮಾಡುವ ವಿ
ಕಾರವಿದ್ಯೆಗಳೆನ್ನ ಮುಂದೆ ಸುಳಿಯಲ್ಕಱಿಯಬಹುದೆನುತಾ ಕ್ಷೇಪಿಸಿ ।
ಅಱುದರುಶ[7]ನದರಸು ತಾನೆನುತ್ತುಬ್ಬಿ ಮಿಗೆ[7]
ಮೂಱುನಾಲ್ಕೈದಾಱು ಬಾರೂರ ಹೊಯ್ದು ಮು
ತ್ತೋರಂತೆ ಕರೆಯತೊಡಗಿದ ಶೈವನಿರಸನದ ವಾಘೋರ್ಪೇಷಪೇರ್ಮಳೆಯನು ॥೧೨॥

ಯದ್ದೃಷ್ಟತನ್ನಷ್ಟರೂಪುಗೊಂಡಳಿವುದಾ
ವದ್ವೈತವದನೆ ಪರವೆಂಬ [8]ಕೇಳಿವನ ದ್ವೈ
ವೋದ್ಧತೆಯನೆಂತೆನಲ್ತ ಮತತ್ವದ್ವೈವ ಮೇಲಜ್ಞಾನ[8]ಹಂಕಾರದ ।

---

[1] ಳುಗಜವಿಳಿದುರಾಯ (ಜ). [2] ಪ (ಕ.ಖ.ಗ.ಘ.ಚ.ಥ). [3] ತು (ಜ). [4] ಶಚಿವನಿವ (ಚ), ಸಚಿವನಿವ (ಖ), ವಚನಿತೋತ್ಯವ (ಜ). [5] ರು (ಜ). [6] ಯಂ (ಕ.ಖ.ಗ.ಘ.ಚ.ಥ). [7] ನಕಿಕ್ಕಿದೆಡಗಾಲತೊಡರಲುಗೆ (ಜ). [8] ಕೆಲ ಸಿದ್ಧಾಂತಶ್ರದ್ಧೆಗಳ ತೆಗೆಯುತ್ತ ತಮತತ್ವದ್ವೈವವೆಂಬದ್ವೈತ (ಜ), ಕೇಳಿವನ ದ್ವೈಪ್ರೋದ್ಧತೆಯನೆಂತೆನಲ್ತ ಮತತ್ವದ್ವೈವಮೇ ಅಜ್ಞಾನ (ಕ.ಖ.ಚ).

ರುದ್ರ ಬಹುರೂಪುಜನ್ಮಸ್ಥನತಿಸಂಸಾರ
ಕೃದ್ಧಶಾಕ್ತನು ಪುತ್ರ ಮಿತ್ರನಿಜಪಕ್ಷಪ್ರ
ಬದ್ಧನೊಲುಮೆಯ ಭಕ್ತಿನಿಷ್ಠೆಯೆಂಬೀ [1]ಭ್ರಷ್ಟುಗಿಷ್ಟೇಂ ಎನು[1]ತ್ತೆಂದನು ॥೧೩॥

ಪಾಠೀನಧ್ವಜರಿಪುವೊ ನೀಲಕಂಧರನೊ ಭಿ
ಕ್ಷಾಟಣನೊ ಕಂಕಾಳನೋ ಕದಂಬಾ[2]ನನವಿ
ರಾಟ್ಪುರುಷನವ್ಯಕ್ತಶೂನ್ಯನೋ ಚಂಡಿಕಾಲೋಲನೋ ತ್ರೈಗುಣಾತ್ಮ।
ಕೂಟಸ್ಥನೋ ಗಜಾಜಿನಧರನೊ ತಾಂಡವನಿ
ಶಾಟನೋ ನಿರ್ಧರರ್ಧಾಂಗನೋ ಸ್ವಪಚನೊಡ
ನೂಟದನೊ ಪೇಳಿದರೊಳಾರ್ನಿನಗಹಂಕಾರಸಿದ್ಧಾಂತವೀವ ದೈವ ॥೧೪॥

ಎಂದುನಿಂದಾಕ್ಷೇಪವಾಗ್ವಿಡಂ[3]ಬಿಸಿವಾದ[3]
ಛಂದೋ[4]ತ್ಪ[4]ತಿ ಪ್ರಮಾಣಪ್ರಭೇದಾರ್ಥಾಂತ
ರಂ ದೂಷಣ ಪ್ರಮೆಯ ಪಕ್ಷ ಪರಪಕ್ಷ ಪ್ರತ್ಯೋತ್ತರ ಸುಸತ್ಯವಾದ।
ದ್ವಂದ್ವನಿರ್ವಾಣ ನಿರ್ಣಯ ಪ್ರಶ್ನೆ ಪ್ರತಿವಾದ
ಬಂಧ ನಿಗ್ರಹ ಉಪನ್ಯಾಸ ನಿಶ್ಚಯ ಸಮತೆ
ಬಂಧುರ ಸಭಾಪತ್ಯವಾದ ಲಕ್ಷಣಚತುರ್ವಿಂಶತಿವಿಧಾನವೆತ್ತೆ ॥೧೫॥

ತತ್ತರ್ಕಿಯಂ ಪರಿಸ್ಪಂದತನ[5]ತನ[5]ಗೇಳು
ತೆತ್ತಿದರು ಬಹುವಾದಶಾಸ್ತ್ರಶಾಖಾ[6]ರಂಡ[6]
ಪುತ್ರರ್ಕವಿದು ಭಟ್ಟ ಸುಪ್ರಭಾ[7]ಕರ[7] ಸುನೈಯಾಯಿಕಂ ವೈಶೇಷಿಕಂ।
ಕೃತ್ರಿಮದ ಜೈನ ಬುದ್ಧನಿಲಪಟತರ್ಕಶಾ
ಸ್ತ್ರೋತ್ತರದಿ ನೆಗಳ್ದ ಶಿವನಿಂದಾವಚನ ನರಕ
ದರ್ಥಸಾಧನಸಾರ ಗ್ರಂಥ ಗಳಹಂ ತೊಡಗಿತೆಮ್ಮಬಸವೇಶನಿದಿರ ॥೧೬॥

ಧಾತಂತ ಲಿಂಗ ಪದದರ್ಥಖಂಡನ ಛಂದ
ಜಾತಿ ಕ್ರೀ ಕಾರಕ ವಿಭಕ್ತುಕ್ತಿ ವ್ಯಾಕರಣ
ಸೂತ್ರಾಭಿದಾನಂ ಸಮಾಸುಪನ್ಯಾಸ ವಕ್ರತವಾದ ವರ್ಣಶಕ್ತಿ।
ಜ್ಞಾತ ಕಲ್ಪಿತ ನಿರಸನವಧಾನ ತರ್ಕ ಮುಖ
ವಾತು ಬಲ್ಮೆಗಳ ಷಡ್ಭಾಷಾಪ್ರಬಂಧಗಳೊ
ಳೆತ್ತಿಯೆ ಸಭಾತ್ರಯದ ವಾಗ್ಬಂಧನಂಗೈವುತಾಸ್ಥಾನಚತುರಾಸ್ಯರು ॥೧೭॥

---

[1] ಭ್ರಷ್ಟುಗಿಷ್ಟಂ ಎನು (ಗ.ಛ), ಭ್ರಷ್ಟಗಿಷ್ಟಂ ಎನು (ಘ.ಖ.ಚ), ಭಷ್ಟದಷ್ಟೇಕೆಮ (ಜ). [2] ಕಬಂದಾ (ಕ). [3] ಚಿಸಿದನವ (ಚ), ಚಿಸಿವಾದ (ಘ), ಚಿಸಿದ (ಕ.ಖ). [4] ತ್ಪ್ರ (ಖ). [5] ನತ (ಕ.ಖ.ಛ.ಚ). [6] ರಂದ (ಗ). [7] ಕಾ (ಗ.ಘ.ಚ).

ಕರ್ಮವರ್ತನವು ಸಂಸ್ಕಾರಲಕ್ಷಣ ಪ್ರಮಾ
ಣ್ಬ್ರಹ್ಮಚಾರಿ ಗೃಹಸ್ಥ ವಾನಪ್ರಸ್ಥತಿಬ್ರಹ್ಮ
ದ್ಬ್ರಾಹ್ಮಣ್ಯ [1]ಶೈವ ವೈಷ್ಣವ[1]ಕೇಶವಂ ಭಾಗವತ ಪಂಚರಾತ್ರಕರನು।
ವರ್ಮ[2]ವೆ[2]ತ್ತೊಳಹೊಯ್ದು[3]ಕೊಳುತ[3] ಸಾಂಖ್ಯನ ತತ್ವ
ಪೆರ್ಮೆಯ ಪ್ರಮಾಣ ಪ್ರತಿಕಾರ ಸರ್ವಾತ್ಮತೆಯ
ಸಮ್ಮಂಧ ಚತುರ್ವಿಧಂಕೆಯೊಳೌಂಕ ತಾರುಹತಸಮಯ ಸಮ್ಯ[4]ಗ್ದ್ರ[4]ಷ್ಟಿಯ ॥೧೮॥

ಸದ್ಧರ್ಮ ತತ್ವಾರ್ಥ ಪ್ರತಿಮಾ ಪ್ರಭೇದಾದಿ
ಸಿದ್ಧಿ ಪ್ರಮಾಣ ಸರ್ವಜ್ಞತ್ವ ಸಪ್ತವಿಧ
ಮುದ್ರಿತದ ಜೈನಸುಗತಾದಪ[5]ರಿ[5]ಮಿತಮಾದ್ಯ[6]ಮಿದಱ[6]ಸೂತ್ರಾಂತೀಕದ।
ಶುದ್ಧಸಾಧಕಪಯೋಗಾಚಾರ ವೈಭಾಷಿ
ಕ ದ್ವಿಹಾರಕ ಮೋಕ್ಷದೊಳಗಾದ ದಶವಿಧದ
ಬುದ್ಧ ಧರ್ಮದ ವರ್ಮಕ[7]ರ್ಮ[7]ವೆತ್ತೇಳಿಸುತ ಚಾರ್ವಾಕ ಚಾತುರ್ಯದ ॥೧೯॥

ವಿದ್ಯಾ ವಿನೋದ ವಿಜ್ಞಾನ ಕಳೆ ಕವಿತಾಪ್ರ
ವೃದ್ಧಿ ವಕ್ತೃತೆ ಗೀತ ವಾದ್ಯ ನೃತ್ಯ [8]ಸ್ವಭಾವ[8]
ನಿರ್ದೇಶ ಪಾತ್ರಪರಿಯಾಯ ಪ್ರಮೇಯಾ[9]ಭಿ[9]ನಯ ಜಯುಸಧರ್ಮಾರ್ಥದ।
ನಿರ್ಧಾರ ಕಾಮ ಮೋಕ್ಷಂ ಲೋಕವಾದ ಸ
ದ್ವಿದ್ಯಾವಿಚಾರ ಚಾರ್ವಾಕಾದಿ ಚತುರ್ವಿಂಶ
ತೋದ್ಧಾರ ವಾಗ್ವೈಸ್ಯದಿಂ ವಶಿಸಿಕೊಂಡನಾ ಸಭೆಯ ಕೀಳ್ಸಮಯಿಗಳನು ॥೨೦॥

ಇಂತು ನಾನಾಮುಖದೊಳಾ ಸಭೆಯ ಕೀಳ್ಸಮಯ
ಸಂತತಿಯ ಹರಹಿ ಸೂರಿಗಳ ವಾಗ್ಬಂಧದಿಂ
ದಂತರಾಳಿಕರಂತೆ ಝುಂಕ್ಯಾಗಮಾಚರಣೆ ತರ್ಕತಂತ್ರದೊಳೆಲ್ಲರ।
ಭ್ರಾಂತರಂ ಮಾಡಿ ಮೀಮಾಂಸಕಾಗಮ[10]ಸರ್ವ
ಮಂತ್ರ[10]ದೋಱ್ಯರಸುಮುಖ್ಯರನಾತ್ಮಬೋಧೆಯಿಂ
ದಂ ತಿಳುಹಿಕೊಂಡಾ[11]ಱು[11]ದರುಶನಿಕರೆಲ್ಲರೊಮ್ಮುಖಗೈವುತವದಿರೊಡನೆ ॥೨೧॥

ಅರುಣಾನುಜನ ತೋಟಿ ದುಡುಕುವಹಿಕುಲದಂತೆ
ಉರಿಯೊಡಲನುಚ್ಚಳಿಪ ಲಾಕ್ಷಾಶಲಾಕೆಯಂ
ತಿರೆ ಶಿವನ ಮಂತ್ರಮೂರ್ತಿಯ ಮೂದಲಿಸಿ ಬಪ್ಪ ಪಾತಕನರರ್ಗಳಂತೆ।

---

[1] ದಶ ವೈಷ್ಣ (ಕ.ಖ.ಚ), ದಶ ವೈಷ್ಣ (ಛ.), ದಶದ ವೈಷ್ಣವ (ಘ.ಜ), ದಾಶೈವ-ವಿಷ್ಣ (ಗ). [2] ಪ್ರೊ (ಘ). [3] ಕೇಳುತ್ತ (ಗ). [4] ಗ್ವ್ರ (ಘ.ಕ.ಖ.ಚ). [5] ರ (ಕ.ಗ.ಘ.ಚ ಛ). [6] ಮಿರೆ (ಕ.ಗ.ಘ.ಚ.ಛ). [7] ತರ್ಮ (ಘ). [8] ಕಾಲ (ಜ). [9] ದಿಭಿ (ಚ.ಗ.ಛ), ದಭಿ (ಕ.ಖ). [10] ನಿರ್ದಯಂತರಂ (ಕ), ನಿರ್ದಯಂತ (ಖ.ಚ), ನಿರ್ವಯಂತ (ಗ.ಛ). [11] ಕು (ಜ).

ಪರಮಾರ್ಥದೊಳು ಪರೀಕ್ಷೆಯ ಕೊಂಬ ಸಂಸಾರ
ನರಕಹೇತುಗಳು ಬಸವನ ಚರಿತೆ ಭಕ್ತಿರಸ
ಭರಿತಿಕ್ಷುವಾಟಿಯೊಕ್ಕ[1]ರೆ[1]ಕುರಿಗಳೊಣದಱಿಗ ತಱಿದು ರುಚಿನೋಡುವಂತೆ ॥೨೨॥

ಅಭ್ಯಾಸದಟಮಟದ ಶಬ್ದಸಾಧನಕವದಿ
ರುಬ್ಬುಬ್ಬಿ ಬಸವರಸ ಶೈವದೊಳು ನೀನಾವ
ಗರ್ಭದವ ನ್ಯಾಯಸ್ಥಲನೊ ವಿಶೇಷಸ್ಥಲನೊ ಪಾಶುಪತಕಾಳಾಮುಖ।
ಇಬ್ಬಗೆಯೊಳಾ[2]ಶ್ರೈ[2]ವಶಿವಧರ್ಮಿಕನೊ ಮೇಣು
ಗುರ್ಬಿನ ಮಹಾವ್ರತನೊ ಯುಕ್ತನೋ ಪೇಳಿದಱಿ
ಗರ್ಭಗಲಕುವೆನೆನುತಲಭಿಮುಖದೊಳಗಿದಗಿದು ನಿರ್ದೈವ ನಿಕುರುಂಬವು ॥೨೩॥

ಬಲ್ಲತನದತಿಬಲ್ಮೆಯಿಂ ಶಿವಾಗಮಶಿ[3]ಲ್ಕ[3]
ನಲ್ಲಲ್ಲಿಗೆತ್ತಿ ತೋಱುತ್ತ ಸ್ತುತಿನಿಂದೆಯಿಂ
ಹೊಳ್ಳಗಳೆವುತ್ತ ಸಿದ್ಧಾಂತಬದ್ಧಾಂತಗ[4]ಳು[4] ವಿದ್ಯಾವಿಚಿತ್ರವೆಂಬ।
ವಿಲ್ಲಿಕೊಳ್ಳಿವೆ ಕೋ ಬಸವಮಂತ್ರಿ ಎನುತಲಾ
ನಿರ್ಲಜ್ಜ ಶಠ ಕ್ಲೀಬ ನಿರ್ಘೃಣತಿಲೋಭಿವಾ
ಕ್ಛಲ್ಯಗರ್ವಿತವ್ಯಸನಿ ನಿಷ್ಠುರಾಷ್ಟಕಮೂರ್ತಿ ಮುಖದಿ ಮೊದಲಿಸುತಿರಲು ॥೨೪॥

ಸಾರಮೇಯುಗಳ ಗಳಘರ್ಜನೆಗೆ ಡಿವ್ಯನಾ
ಗಾರಿ ಲೆಕ್ಕಿಪುದೆ ಸಂವರ್ತ ಕ್ರೋಧಪ್ರತತಿ
ಕೀರಿಡಲು ವೇತಂಡ ಪ್ರತಿಪಾದಿಸುವುದೆ ಬಯಲುಗಪ್ರಯೋಜಕ ನಿಷೇಧ।
ನಾರಕಿ ವಿಮೂಢ ಶಾಪಾಂಧ ನಿರ್ದೈವ ಭವ
ಭಾರಿಗಳ ನಿಂದಾವಚನ ಸಂಗ ಪ್ರತಿವಾದ
ಘೋರಪಾತಕ ಭಕ್ತಗೆಂಬಾಗವೋಕ್ತದಭಿಮಾನನಿಧಿ ಮೌನದೊಳಿರೆ ॥೨೫॥

ಮೀಮಾಂಸಕಾದ್ಯನತ್ಯುದ್ರೇಕಿಸರಸುಮುಖ
ತಾಮರಸಮಂ ನೋಡಿ ನಗುತ ಮಂತ್ರಿಗೆ ಶೈವ
ತಾಮಸಂ ತಲೆಗೇಱಿತೋ ಬಧಿರ ಮೂಕನೋ ಬ್ರಹ್ಮರಾಕ್ಷಸನ ಸೋಂ[5]ಕು[5]।
ನೇಮಿಸಿತೊ ಭ್ರಮೆ ಬಳಸಿತೋ ಮೇಣು ದರುಶನದ
ಸೀಮೆ ಪ್ರಮಾಣಿಸಿತೊ ಶಬ್ದ ಖಂಡಿಸಿ ನಿಜವಿ
ರಾಮುಜಿಹ್ವೆಯ ತರ್ಕತಾರ್ಕಣೆಯ ಉಬ್ಬಸದ ನಿರ್ಬಹ ಬಸವಗಾದುದೊ ॥೨೬॥

---

[1] ರ (ಜ). [2] ಶ್ರೈ (ಜ). [3] ಲ್ಕಿ (ಘ.ಖ.ಚ). [4] ಳ (ಕ.ಖ.ಚ.ಜ). [5] ಕೊ (ಕ.ಖ.ಚ.ಜ), ಕೆ (ಘ).

ಎಂದುನಾನಾ ನಿಂದಿತಾಕ್ಷೇಪವಾಕ್ಯಗಳ
ಸಂಧಿಸುತ್ತೀ ಮೂರ್ಖ ಗದ್ದುಗಿಂದಿಳಿಯದಿಹ
ಚಂದವೇನೆಲೆ ನೃಪತಿ ಭೃತ್ಯಾ[1]ಪರಾಧ[1]ಸ್ವಾಮಿಯದಾಗಿ ನೀವಾತನ।
ಒಂದೆರಡು ಶಬ್ದಗಳ ನುಡಿಸಿ ತೋಱಿಲ್ಲದೊಡೆ
ನಿಂದು ಪೊಡಮಡಲೆಂಬ ನುಡಿಗೆಯಾ ಬಿಜ್ಜಳನ
ರೇಂದ್ರ ನಗುತೊಯ್ಯನಾ ಭಕ್ತಿರಸವಾರಿಧಿಯು ಮಥಿಸ ಮನದಂದೆಂದನು ॥೨೭॥

ಸುಮ್ಮನಿರೆ ಬ್ರಹ್ಮವಾದಿಗಳು ಬಗೆವರೆ ಮನದ
ಗುಮ್ಮನ ಗುಣಂದೋಱಿದಕ್ಕು ಪ್ರಮಥನವೊಳರೆ
ನಿರ್ಮಿಸಿದ ನಿರ್ವಾದಕಿಕ್ಕೆಂಬ ಕ್ರೀರೂಪನೃಪಗೆಂದ ಭಾವಜ್ಞನು।
ನಿಮ್ಮರಾಜಾಜ್ಞೆಯೊಳಗೀ ಸಭೆಯೊಳಿರ್ದು ಶಿವ
ಧರ್ಮದೇಳ್ಗೆಯ ನೆಗಳ್ದ ನಿಗಮಸಂಹಿತಮಾಗಿ
ಸುಮ್ಮನಿರದೇಗೈವೆವರಸ ಎನಲಂತದಱ ಮರ್ಮವೇನೆನಲೆಂದನು ॥೨೮॥

ಬೊಮ್ಮಬೋಧೆಗಳೆಂದು ಬೌದ್ಧಾದಿಗಳು ನೆರೆದು
ನಿರ್ಮಿಸಿದ ಗ್ರಂಥ ಹದಿನಾರುಲಕ್ಷವ ನಿರ್ವಿ
ಕರ್ಮ ಶಾಂಡಿಲ್ಯ ವೈಷ್ಣವ ಪಾಂಚರಾತ್ರಿಕರ ಬೆರಸಿದೀ ಮೀಮಾಂಸಕ।
ದುರ್ಮುಖದುರಾತ್ಮಕರ ಶಿವನ ನಿಂದಿಪ ಪಾಪ
ಕರ್ಮಿಗಳ ಕಾಣುತಾ ಕ್ಷಣ ಶಿರವರಿದು ರಸನ
ನಿರ್ಮೂಲಮಾಡಬೇಕಲ್ಲದೊಡೆ ನಿಜತನುವ ತ್ಯಜಿಪಾಗಮವ ಕೇಳ್ನೃಪ ॥ ೨೯ ॥

ಶ್ರುತಿ—

ಶ್ರುತ್ವಾ ನಿಂದಾಂ ಶಿವಸ್ಯಾಥ ತತ್ಕ್ಷಣಾ[2]ದ್ದೇಹಿಸಂತ್ಯಜೇತ್[2]।
ಸ್ವದೇಹಂ ವಾ ನಿಹತ್ಯಾಶು ರುದ್ರಲೋಕಂ ಸ ಗಚ್ಛತಿ ॥ ೧ ॥

ಯೋವಾಚೋತ್ಪಾಟಯೇಜ್ಜಿಹ್ವಾಂ ಶಿವನಿಂದಾರತಸ್ಯ ತು।
ತ್ರಿಸಪ್ತಕುಲಮುದ್ಧೃತ್ಯ ಶಿವಲೋಕಂ ಸ ಗಚ್ಛತಿ ॥ ೨ ॥

ಇದಕೆ ದೃಷ್ಟಾಂತವಾಡಿಯೊಳು ನವಬ್ರಹ್ಮರ್ಗೆ
ಮೊದಲೆನಿಪ ದಕ್ಷ ಶಿವನಿಂದೆಗೈದಧ್ವರಾ
ಭ್ಯುದಯವನೊಡ[3]ರ್ಚಲಿಂ[3]ದ್ರಾದ್ರ್ಯುಪೇಂದ್ರಾದ್ಯಖಿಲದೈವಮುನಿಮುಖ್ಯರ್ಗಳ।
ಮದದಿ ಮುಂಕೊಳಿಸಿ ಶಿವವಿರಹಿತಾಹುತಿಗೊಡುವ
ಹದದಲ್ಲಿ ವೀರೇಶಘೋರಮುಖದಿಂದುದಿಸಿ
ವಿದಿತ ವಿಕ್ರಮ ರೌದ್ರಕಾಲಾಗ್ನಿರುದ್ರಕೋಪಾಟೋಪದಿಂದ ಬಂದು ॥ ೩೦ ॥

---

[1] ಭಿಮಾನ (ಜ). [2] ದ್ದೇಹ ಸಂತ್ಯಜೇತ್ (ಸ.ಪ್ರ). [3] ರ್ಚವಿಂ (ಕ.ಖ).

ಹದಿನಾಱು ಋತ್ವಿಕ್ಕು ಹರಿಯುಬಡಿದಧಿದೈವ
ಬುಧರ ಬರಿಗೈದಗ್ನಿಯೊಳು ನಾಲಗೆಯು ಕಿತ್ತು
ಒದೆದು ಭಗನಂ ಕಣ್ಣನೊಡೆದು ಪೂಷನ ದಂತಪಂಕ್ತಿಗಳ ನುಗ್ಗುಗುಟ್ಟಿ।
ವಿಧುವ ಪಾದಾಂಗುಷ್ಠದಿಂದೊರಸಿ ಚತುರ್ಮುಖನ
ಸುದತಿಯೋಷ್ಠವ ನಾಸಿಕವನಿಳುಹಿ ದಿಗಧಿಪರ
ನದೆದು ಮಲೆತರ ಮಡುಹಿ ಹರಿಯ ಹರಿಸೆಚ್ಚು ದಕ್ಷನ ಶಿರವನರಿದುಹಾಯ್ಕಿ ॥೩೧॥

ಕಿಚ್ಚುಗೆದರೆಜ್ಞಶಾಲೆಯ ಸುಟ್ಟು ಬೂದಿಯೊಳು
ಬಚ್ಚಿಡುವ ಬ್ರಹ್ಮನಾರಾಯಣರ ತಲೆವಿಡಿದು
ಕೊಚ್ಚುತಿರೆ ಶಿವನು ಕೈವಿಡಿದು ಭಸ್ಮಾಂಗಿಗಳ ಬದುಕಿಸೆನೆ ಕಾಯ್ದುಬಿಟ್ಟು।
ನುಚ್ಚುದೈವಗಳ ತಡೆಗಡಿದು ಭೂತಂಗಳಿಗೆ
[1]ಹಚ್ಚಿ[1]ಹಾಯ್ಕುವ ವೀರಭದ್ರನಿದಿರಿನೊಳು ಹುಲು
ಗಚ್ಚಿ ಹುತ್ತೇಱಿ ಜಲಹೊಕ್ಕು ನೆಲೆಗೆಟ್ಟು ಛಲಬಿಟ್ಟು ಕೊಟ್ಟೋಡಿ ಪೋದ ॥ ೩೨ ॥

ಮುಕ್ಕುದೈವಗಳಂಧಪಾರಂಪರೆಯ ಬೋಧ
ಕರ್ಕಳಿವದಿರ್ಕಲರು ತನ್ಮುಖಕೆ ನೆರೆದಶನ
ಭುಕ್ಕುಮುನಿಗಳಿಗೆ ಶ್ರೌತ ಸ್ಮಾರ್ತವಾಚಾರ ವೇದ ರುದ್ರಾಕ್ಷಿ ಭೂತಿ।
ಮುಖ್ಯಶಿವಧರ್ಮನಿಂದಕರಾಗಿ ನರಕಕ್ಕೆ
ಪಕ್ಕ ಮಾಡುವ[2]ವು[2]ಟ್ಟಿ ಶಂಖ ಚಕ್ರಾಂಕಿಗಳ
ನಿಕ್ಕಧೋಗತಿಕರಾಗೆಂದು ಶಪಿಸಿದ ದಧೀಚಿಯ ಶಾಪದಗ್ಧರ್ಕಳ ॥ ೩೩ ॥

ಪಕ್ಷದರ್ಕಲರದೊಂದಂತಲ್ಲ ಮತ್ತೊಂದು
ಪಕ್ಷದಲ್ಲೀರಾಱು ವತ್ಸರದ ಬಱದಲ್ಲಿ
ರಕ್ಷಿಸಿದ ಗೌತಮನ ನಿಂದಿಸಿ ನುಸುಳ್ವ ಮುನಿಕುಲಕೆ ಋಷಿಯಾಕ್ಷೇಪಿಸಿ।
ಚಕ್ಷುತ್ರಯನ ಭಕ್ತಿ ಕೀರ್ತಿಮಾರ್ಗಂ ಧರ್ಮ
ಸುಕ್ಷೇತ್ರ ತೀರ್ಥವೊಳಗಾದವಕೆ ಹೊಱಗಾಗಿ
ಅಕ್ಷಯನರಕಬೊಗೆಂದಿತ್ತ ಶಾಪದ ಬೇಗೆಯೊಳಗೆ ಬೆಂದರೆಗೊಱಡ್ಡಗಳು ॥ ೩೪ ॥

ಸುರೆಮಾಂಸಗಳ ಮಾಱಿ ಮಾತಾಪಿತರ ಮಾಱಿ
ಗುರು ದೈವ ತೀರ್ಥ [3][ಸ][3]ತಿ ಭ್ರಾತ ಸುತರಂ ಮಾಱಿ
ತಿರಿದು ಕುಲಪಾರಂಪರೆಯೊಳಧೋಗತಿಕರಾಗೆಂತರಜ್ಞಾನವಾದ।

---

[1] ಹಂಚಿ (ಕ.ಚ.ಖ). [2] ಮು (ಗ). [3] ಗ (ಸ.ಪ್ರ).

ದರುಹ ಬೌದ್ಧಂ ಶಾಕ್ತ ಪಾಷಂಡ ಪಾಂಚರಾ
ತ್ರರ ವೈಷ್ಣವಾದಿ ಕಾಪಾಲಿ ಕಾಳಾಮುಖರ
ಬೆರಸಿ ಬಯಲುಗರಾಗಿ ಹೋದಾ ಕುತರ್ಕಿಗಳ ಮಕ್ಕಳಿವದಿರ್ಕೆಲಬರು ॥ ೩೫ ॥

ನೆರೆದು ನಿಂದಿಸುವ ಸ್ವಭಾವದೀತಗಳು ಮುನಿ
ವರನ ಶಾಪಾಂಧಪಾರಂಪರೆಯ ನರಕಿಗಳು
ಉರಗಂಗೆ ಭೂನಾಗ ಹೆಡೆದೋಱುವಂತೆ ಮುನ್ನೀಪುರದೊಳಭವನಿಂದೆ।
ವೆರಸಿದ ಪುರಾಣವೋದಲು ತೆಲುಗುಜೊಮ್ಮೈಯ
ನರಿದು ಹಾಯ್ಕನೆ ತಲೆಯ ಮತ್ತೊಬ್ಬ ನೀನಱಿಯೆ
ಹರ ಹರಿಭಜಕನೆನಲ್ಕೇಳಿ ತತ್ಕ್ಷಣವವನನಿಱಿಯಾನೇ ಕಕ್ಕಯ್ಯನು ॥ ೩೬ ॥

ಇಂತು ಮೆಱೆವಾಗವಾರ್ಧಕೆ ನಿಸ್ಮೃಸೇವೆಂಬ
ಭ್ರಾಂತಡ್ಡಬಿದ್ದುದೊಡಗಾಜಿನೊಳು ರತ್ನವನ
ದೆಂತು ಕೆತ್ತಿಸಹೇಳ್ವೆ ನೃಪತಿ ನಿರ್ದೈವನಿಂದಕರೊಡನೆ ಭಕ್ತಿಯುಕ್ತ।
ಮಂತ್ರಗಳ ಮಾತಾಡಬಹುದೆ ಶಿವನೇತಕೆಂ
ಬಂತ್ಯಜರ[1]ಕೂಡೆ[1] ನಡುವೆಡೆ ತೃಣವ ಹಾಯ್ಕೆಂಬ
ನಂತುಪನಿಷದ್ವಾಕ್ಯಮುನ್ನಿಂದ್ರಪವನಗೊಂದಣುವನೆತ್ತಿದ ಬಸವನು ॥ ೩೭ ॥

ಉಪನಿಷತ್ —

ತೇನ ವಿನಾ ತೃಣಾಗ್ರಮಪಿ ನ ಚಲತಿ

ಲೈಂಗ್ಯೇ —

ಯಕ್ಷಂ ದೃಷ್ಟ್ವಾ ಲಕ್ಷಣೈರ್ಹೀನ ಮಾಶಂ ದೃಪ್ತಾಸ್ಸೇಂದ್ರಾಸ್ತ್ರಿಮೇತದ್ವದೇತಿ ।
ಯಕ್ಷಂ ಗತ್ವಾ ನಿಶ್ಚಯಾತ್ಪಾವಕಾದ್ಯಾಃ ಶಕ್ತಿಕ್ಷೀಣಾಸ್ತೇ ಭವರ್ ಯತ್ನತೋಪಿ।
ದಗ್ಧುಂ ತೃಣಂ ವಾಪಿ ಸಮಕ್ಷಮಸ್ಯ ಯಕ್ಷಸ್ಯ ವಹ್ನಿರ್ನ ಶಶಾಕ ವಿಪ್ರಾಃ।
ವಾಯು ಸ್ತೃಣಂ ಚಾಲಯಿತುಂ ತಥಾನ್ಯೇ ಸ್ವಾನ್ ಸ್ವಾನ್ ಪ್ರಭಾವಾನ್ ಸಕಲಾಮರೇಂದ್ರಾಃ ॥ ೩ ॥

ಎಂಬಾಗಮ[2]ಶ್ರು[2]ತಿಗದೆಂತಂತೆ ಮೃಡನೇವ
ನೆಂಬ ಪಾತಕರ ನಡುವೆಡೆ ತೃಣವನಿಕ್ಕಿ ತೃಣ
ವೆಂಬ ಪುರುಷಂಗೆ ನಿಂದ್ಯಾನಿವಾರೋತ್ತರಂಗೊಡುವೆನೆನಲವರೊಳೊಬ್ಬ।
ಶುಂಭಗ್ರಾಮಣಿ ನಗುತ ಹುಲುವನೆಗೆ ಹಱಿದು ಕೈ
ದುಂಬಿ ಹುಲ್ಲಂ ಹಱಿದು ತಂದು ಬಸವಂ ಹಸಿದ
ನೆಂಬ ಹಾಸ್ಯರಸಾಬ್ಧಿಯೊಳು ಬಿದ್ದುದಾ ಸಭೆಯ ಸಾರ್ವಭೌಮಪ್ರಕರವು ॥೩೮॥

---

[1] ನುಡಿಗೆ (ಜ). [2] ಸ್ಮೃ (ಗ,ಥ).

ಅಣಕಕಗಿದಗಿದು ಬಹು ಹುಲುಸರವಿ ಹೊಸದೊಂದು
ತೃಣರಜ್ಜುಪುರುಷನಂ ಮಾಡಿ ಮುಂದಿರಿಸಿ ಕೆಲ
ವಣಿಯೆತ್ತಿ ನುಡಿನುಡಿದು ಹುಲುವಗುತನಂ ಮಾಡೆದಕ್ಕೆ ನಿನ್ನಂತಸ್ಥವ।
[1]ಗಣದೀಕ್ಷೆ ಶಿಕ್ಷೆಗೈದೆಮ್ಮ ಕೂಡದ ನುಡಿಸು
ವೆಣಿಕೆಯಿಲ್ಲದನೆ ನೀ ಮುನ್ನಕೆಲ ಲಟಪಟೆಯು
ಬಿನುಗು ದೃಷ್ಟಂದೋಱದಪರೆಂಬರಿದಕಿದೇ ದೃಷ್ಟದಿಬ್ಯೋತ್ತಾರವು ॥ ೩೯ ॥

ಎಂದು ಕೆಲರೆನಲನದಕ್ಕಾಚಾರ್ಯ ನ[2]ಲ[2]ಗಿಸು
ತ್ತೆಂದನಹುದಿದು ತನ್ನ ಸಾಮರ್ಥ್ಯ[3]ದಂ[3]ಬಾಹು
ಬಂಧನದ ರಜ್ಜುನು[4]ತ ತ[4]ಗ್ಗಿಸಿ ಬಸವನೆಂಬಾತ ತೃಣಗ್ರಾಹಿ ತೃಣವ।
ಮುಂದಿಟ್ಟುಕೊಂಡಿರದೆ ನಿನ್ನ ದೈವಾಂತರ ಪ್ರ
ಬಂಧಪ್ರಮಾಣ[5]ಕೀ[5] ಮೃಗ ಪಕ್ಷಿ ನರರೊಳಾ
ವಂದ ಸಿದ್ಧಾಂತಶಿರವೆತ್ತಿಸೀ ತೃಣಮುಖದಿನೆನೆ ವಚನಿಸಿದ ಬಸವನು ॥ ೪೦ ॥

ವಚನ—

ಈಶ್ವರಸದ್ಭಾವೇ ಕಿಂಪ್ರಮಾಣವೆಂಬಾ ಮೀಮಾಂಸಕನ
'ಓಂ ದ್ಯಾವಾಭೂಮೀಜನಯನ್ ದೇವ ಏಕಃ' ಎಂಬ ಸುರಗಿಯಲ್ಲಿಱುವೆ,
ವೈಶೇಷಿಕವೆಂಬ ಇಟ್ಟಿಗೆಯುಲ್ಲೊರಸುವೆ, ಕೂಡಲಸಂಗಯ್ಯ
ನೆಂಬ ಕನ್ನಡಿಯ ತೋಱುವೆ. ॥ ೧ ॥

ದೃಷ್ಟವಚನವನೆತ್ತಿ ಪಾಡುತ್ತ ಭಕ್ತಿರಸ
ನಿಷ್ಠಾಬ್ಧಿಚಂದ್ರ ಪರಸಮಯಪ್ರತಿವಾದಿಯ ಸು
ಪುಷ್ಟದೈವದ ಮೂಗನರಿ[6]ವ ಗತ್ತಿಗೆಯ[6] ಹೊಸಸಾಣೆವಿಡಿದಂತೆ ಹೊಳೆವ।
ದೃಷ್ಟಿಪಾತನಗೈಯ್ಯು[7]ತಣಕ[7]ಕ್ಕೆ ದೂಷಕರು
ಸೃಷ್ಟಿಸಿದ ತೃಣರೂಪನಂಗೀಕರಿಸಿ ಭಾವ
ದೃಷ್ಟನದ ತೆಗೆದೆತ್ತಿ ಗದ್ದುಗೆಯೊಳರ್ಧಾಸನಾಗ್ರದಿ ಪ್ರತಿಷ್ಠಿಸದಕೆ ॥ ೪೧ ॥

*ತೊಟ್ಟು ರುದ್ರಾಕ್ಷಿಗಳ ತೊಡಿಸಿ ತ್ರಿಪುಂಡ್ರಮ
ನ್ನಿಟ್ಟು ಮಂತ್ರಸ್ಫೂರ್ತಿ ಭಾವೋಪದೇಶಮಂ
ಕೊಟ್ಟಪ್ಪಿಕೊಂಡುಪಾಯದೊಳಷ್ಟತನುಮೂರ್ತಿಲಿಂಗಪರುಷನವ ಮಾಡಿ।

---

1 ಗು (ಕ.ಖ.ಗ.ಘ.ಚ.ಛ). 2 ಲು (ಖ). 3 ದಿಂ (ಕ.ಖ.ಗ.ಘ.ಚ.ಛ). 4 ತ್ತ (ಜ). 5 ಕಿಂ (ಕ.ಖ.ಗ.ಘ.ಚ.ಛ). 6 ದ ಸಾಣೆಯನು (ಕ.ಖ.ಗ.ಘ.ಚ.ಛ). 7 ತಾಣ (ಕ.ಖ.ಚ). * ಈ ಪದ್ಯ 'ಜ' ದಲ್ಲಿಲ್ಲ.

ಮುಟ್ಟಿಮುಟ್ಟವಯವಯವೆಲ್ಲಕ್ಕೆ ಕರಪರುಷ
ವಿಟ್ಟು ಪರಮಾರ್ಥಪ್ರತಿಷ್ಠೆಗೆ ಶಿವಾಂಗದಲಿ
ಪುಟ್ಟಿದಿಪ್ಪತ್ತೆಂಟು ದಿವ್ಯಾಗಮಗಳ ಕಲ್ಪಿಸಿದನದಱಿಂಗವಲ್ಲಿ ॥ ೪೨ ॥

ಪಾದದಲ್ಲುಚ್ಚರಿಸತೊಡಗಿತ್ತು ಕಾಮಿಕವು
ಪಾದದಂಗುಲಿಗಳಲಚಿಂತ್ಯಚಿಂತಾಗಮಗ
ಳೋದತೊಡಗಿದವು ಗುಲ್ಫದಲಿ ಯೋಗಜವೆನಿಪ್ಪಾಗಮ ನುತಿಸತೊಡಗಿತು।
ನಾದ ತೋಱಿತು ಜಂಘೆಯಲಿ ಕಾರಣಾಗಮವಿ
ವಾದ ತೊಡಗಿ[1]ತು[1]ಜಿತಾಗಮ ಜಾನುವಿನಲಿ ಪ್ರತಿ
ಪಾದಿಸತೊಡಗಿತೂರುವಿನೊಳು ದೀಪ್ತ್ಯಾಗಮಂ ಸೂಕ್ಷ್ಮಸೂಕ್ಷ್ಮಾಗಮಗಳು ॥೪೩॥

ನುತಿಸತೊಡಗಿದವು ಗುಹ್ಯದಲಿ ಸಹಸ್ರಾಂತ್ಯವೆಂ
ಬತಿಶಯಾಗಮ ಕಟಿಯಲುಘ್ಘಡಿಸತೊಡಗಿತ್ತು
ಸ್ತುತಿಸತೊಡಗಿತ್ತ ಪರಭಾಗದಲ್ಲಂಶುಮಾನಾಗಮಂ ನಾಭಿಯಲ್ಲಿ।
ಶ್ರುತಿಗೊಡಲೊಡಗಿತು ಪ್ರಭೇದಕುಕ್ಷಿಯೊಳು ಸಾ
ಱಿತು ವಿತ್ತೆ ವಿಜಯವೆನಿಪಾಗಮ ಹೃದಯದಲ್ಲಿ
ಮಥನದೋಱಿತ್ತು ವಿಶ್ವಾಸಿಕಾಗಮ ವಿಮಲತಂತ್ರ ಬಾಹುಗಳೊಳೊದರೆ ॥೪೪॥

ನಾಶಿಕದಿ ಚಂದ್ರಜ್ಞಾನಾಗಮಂ ವದನದೊಳು
ಘೋಷದೋಱಿತು ಬಿಂಬತಂತ್ರ [2]ಪ್ರೋದ್ಗೀತ[2] ಪ್ರ
ವೇಶಿಸಿತು ಜಿಹ್ವೆಯೊಳು [3]ಲ[3]ಲಿತತಂತ್ರಂ ಕಪೋಲದೊಳು ಕೀರ್ತಿಸತೊಡಗಿತು।
ಭಾಷಿಸಿತು ಸಿದ್ಧಾಂತಪರಮಾಗಮಂ ಹವಿ
ರ್ದೇಶದೊಳ್ಕಂಡಲದಿ ಶಾಂತಾಗಮಸ್ವರ ವಿ
ಶೇಷಿಸಿತು ಸರ್ವಾಂಗಮಂ ತಂತ್ರಮಸ್ತಕದಿಮಹಿಮೆದೋಱುತ್ತಿರ್ದವು ॥೪೫॥

ಉಪವೀತಸರ್ವೋಕ್ತ ಪಾರಮೇಶ್ವರಹಾರ
ವಿಪುಳ ಕಿರಣಾಗಮ ಸುರತ್ನ ಭೂಷಣ ಮೆಱೆವ
ವಪುವಿಂಗೆ ವಾತುಳಂ ವಸ್ತ್ರಶಿವಧರ್ಮಾನುಲೇಪನಂ ತಂತ್ರಕಾಯ।
ಅಪುನರ್ಭ[4]ವಾದಿ[4] ಶಿವಮಂತ್ರ ತನುಮೂರ್ತಿಗೊಂ
ಡುಪಮೆಯನುದಾಹರಿಸೆ ತೃಣಪುರುಷನಂಗದೊಳು
ವಿಪರೀತಮಹಿಮೆಗಳ ವಿಸ್ತರಿಸುತಿರ್ದವಿಪ್ಪತ್ತೆಂಟು ದಿವ್ಯಾಗ[5]ಮಂ[5] ॥೪೬॥

---

[1] ತ (ಕ.ಖ.ಚ). [2] ಪ್ರಾಲತವು (ಜ). [3] ಜ್ವ (ಕ.ಖ.ಗ.ಪ.ಚ.ಛ). [4] ವಾಂಗ (ಜ). [5] ಮ (ಜ.ಫ).

ತರಣಿಯಂಗವನೆಲ್ಲ ಕಿರಣವೇ [1]ವ್ಯಾ[1]ಪಿಸಿದ
ಪರಿಯಲಾ ತೃಣರಜ್ಜು ಪುರುಷ ರೂಪ[2]ಕ್ಕೆ[2] ಬಸ
ವರಸ ಭಾವಿಸಿದ ಹರವರಪ್ರಸಾದದ ಮಹಾಗಮದ ತೇಜೋಪುಂಜ[3]ವು[3]।
ಕರುವಾಗಿರಲ್ಕಂಡು ಪರವಾದಿಗಳ ತರ್ಕ
[4]ಶಿರ ಸಿ[4]ಡಿಯತೊಡಗಿತುತ್ಸಾಹಕುಚ್ಚಾಟವಾ
ಯ್ತುರವಣಿಯುರಕೆ ಶೂಲ ಕೀಲಿಸಿತು ಗರ್ವಗಂಭೀರಪೆರ್ಗಡಲಱಿತದು ॥೪೭॥

ತರ್ಕ ಮು[5]ಕ್ಕಾ[5]ದವಾಗಲೆ ಬಯಲ ಬ್ರಹ್ಮಂಗ
ಳುಕ್ಕುಡುಗಿತುಪಮೆಗಿಪಮೆಗಳ ವಿದ್ಯಾರಂಭ
ದೊಕ್ಕಲೋಡಿದವರಸುಮುಖದ ಚೇಷ್ಟಾಪ್ರವೃತ್ತ್ಯಗಳೆ ನಿವೃತ್ತ್ಯದದು।
ಚಿಕ್ಕಶೂಲದೊಳಿಕ್ಕಿದಂತೆ ಬೆಱಗಾದನಾ
[6]ಠಕ್ಕ[6] ಮೀಮಾಂಸಕಾಚಾರ್ಯ ದೂಷಕರ ಮನ
ದೊಕ್ಕಲೋಡಿತ್ತು ಬಸವೇಶ್ವರನ ಭಾವಸಿದ್ಧಾಂತಶಿಕ್ಷಾಡಂಗುರ ॥೪೮॥

ಮತ್ತೆ ಮೊಳಗಿತ್ತುಪಪುರಾಣ ಸಾಕ್ಷಾಚ್ಛೈವ
ಭಿತ್ತಿಯೊಳು ಸ್ಕಾಂದ ಕಾಶೀಕಾಂಡ ಶಿವಮಹಾ
ತ್ಮ್ಯೋತ್ತರಂ ಲೈಂಗ್ಯ ವಾಶಿಷ್ಟ ವರಹ ಸುಕಾರಣಂ ಕಾಳಿಕಾಖಂಡವು।
ತೈತ್ತಿರಜಗೀತಿ ಪಾರಾಶರಂ ಸಾಂಬವಾ
ದಿತ್ಯಪೌರಾಣ ಮನುಭಾರತಂ ವಾಯುವಿಯ
ಮತ್ತೆ ಸೂತನ ಗೀತೆ ಪದ್ಮ ಭೃಗುಬೋಧಾಯನೆಜ್ಞವೈಭವ ವಾಮನ ॥೪೯॥

[7]ಅತ್ರ ಭೂಷಣ ಮೆಱೆವ[7] ಮತ್ಸ್ಯಪೌರಾಣಂ ಸ
ನತ್ಕುಮಾರನ ಸಂಹಿತೆಯು ಬ್ರಹ್ಮನಾರದಿಯು
ಸತ್ಯಗೌತಮ ಯಮ ಜ್ಞಾನ ಜಾಬಾಲ ಶಾತಾತಪಾದಿಸ್ಮೃತಿಗಳ।
ಎತ್ತುತ್ತೆ ವಿಷ್ಣುಪೌರಾಣದೊಳಗಾದಖಿಳ
ಶ್ರುತ್ಯಾನುಮತದೊಳೀಶ್ವರನೆ ಘನಮುಳಿದಾದ
ಕೃತ್ರಿಮಸಮಯ ಬಯಲಬ್ರಹ್ಮಭ್ರಷ್ಟೆನುತಿರ್ದುದಾ ರಜ್ಜುಪುರುಷೋಕ್ತವು ॥೫೦॥

ಋಗ್ಯಜುಸ್ಸಾಮಥರ್ವಣಮುಖಗಳಿಂ ಹೊಗ
ಳ್ದುಘ್ಘಡಿಪ ಬ್ರಹ್ಮಬಿಂದುಪನಿಷದ್ಯುಪನಿಷ
ದ್ವರ್ಗ ಶ್ವೇತಾಶ್ವತರೊಪಾನಿಷಧಿ ಲಿಂಗಸೂಕ್ತಂ ಬಾಷ್ಕಳಂ ಸಂಹಿತೆ।

---

[1] ರೂ (ಜ). [2] ಕದ (ಜ). [3] ದ (ಜ). [4] ಶಿರವಿ (ಖ.ಚ), ಶೆರೆವಿ (ಕ).
[5] ತ್ಮ್ಯೋ (ಜ). [6] ರಕ್ಕಸ (ಕ.ಖ.ಗ.ಘ.ಚ.ಛ). [7] ಅಸ್ತ್ರಧೂಷಣಕೂರ್ಮ (ಜ).

ಭರ್ಗನೇ ದೈವವೆಂದೊದರ್ವ ಹಂಸುಪನಿಷ
ದ್ಯುಗ್ರನೇ ಘನವೆಂಬ ಕೈವಲ್ಯದುಪನಿಷ
ದ್ದಗ್ಗಳೆಯನಭವನೆಂಬಾದಿಶಿವಸಂಕಲ್ಪದುಪನಿಷದ್ವಚನೋಕ್ತವು ‖೫೧‖

ಋಗ್ವೇದದಲ್ಲಿ—

"ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ"
"ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ
ಶಿವ ಏಕೋ ಧ್ಯೇಯಃ ಶಿವಂಕರಸ್ಸರ್ವಮನ್ಯತ್ಪರಿತ್ಯಜೇತ್" ‖೪‖

ಯಜುರ್ವೇದದಲ್ಲಿ—

ಈಶಾನಸ್ಸರ್ವವಿದ್ಯಾನಾಮೀಶ್ವರಸ್ಸರ್ವಭೂತಾನಾಂ
ಬ್ರಹ್ಮಾಧಿಪತಿರ್ಬ್ರಹ್ಮಣೋಽಧಿಪತಿ ಬ್ರಹ್ಮಾ ಶಿವೋ ಮೇ ಅಸ್ತು ಸದಾ
ಶಿವೋಂ ‖೫‖

ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಳಂ
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನವೋ ನಮಃ‖ ‖೬‖

ಸಾಮವೇದದಲ್ಲಿ—

ಶೋಭ್ಯಾಯ ಪುರುಷಾಯ ಮಹಾಪುರುಷಾಯ
ಮಧ್ಯಮಪುರುಷಾಯೋತ್ತಮಪುರುಷಾಯ ಬ್ರಹ್ಮಚಾರಿಣೇ ನವೋ ನಮಃ
ನಮಶ್ಚಂದ್ರಲಲಾಟಾಯ ಕೃತ್ತಿವಾಸಸೇ ನವೋ ನಮಃ ‖೭‖

ಆದಿಮಧ್ಯಾಂತರಹಿತಂ ಚಿದಾನಂದಕ್ಷ
ರಾದ್ಯಂತರೂಪನಂತವ್ಯಕ್ತನಮೃತನಿ
ತ್ಯೋದಯ ಪರಾತ್ಪರಂ ವಿಶ್ವತೋಮುಖ ವಿಶ್ವತೋಬಾಹು ವಿಶ್ವ ವಿಶ್ವ।
ವೇದಿ ವಿಶ್ವತ್ರಾತು ವಿಶ್ವತಶ್ಚಕ್ಷು ಸ
ರ್ವಾಧಿಕ್ಯ ಶಂಭುವೊಬ್ಬನೆ ಸದಾಶಿವನೆಂಬ
ನಾದುಪನಿಷದ್ಗಳ ಸಲಕ್ಷಣಿಸಿ ತೋಱಿ [1]ಪರ[1]ವಾದಿಗಜಸಿಂಹಮುಖವು ‖೫೨‖

ಶ್ವೇತಾಶ್ವತರೋಪನಿಷತ್ತು—

ವಿಶ್ವತಶ್ಚಕ್ಷುರುತ ವಿಶ್ವತೋಮುಖೋ ವಿಶ್ವತೋಬಾಹುರುತ
ವಿಶ್ವತಃಪಾತ್‖ಸಂಬಾಹುಭ್ಯಾಂ ಧಮತಿಸಂ[2]ಪದಸ್ತ್ರೈ
ದ್ಯಾವಾ[2]ಭೂಮೀಜನಯರ್ನ್ ದೇವ ಏಕಃ ‖ ‖೮‖

---

[1] ಪ್ರತಿ (ಜ). [2] ಸಾವೃತ್ತೇದ್ಯಾವಾ (ಕ.ಗ.ಚ.ಥ), ಸಂಪ್ರವೃತ್ತೇದ್ಯಾವಾ (ಫ), ಸಂಪದತ್ಮ್ರೈದೇವಾ (ಜ), ಸಂಪವೃತ್ತೇದೇವಾ (ಖ).

ಕೈವಲ್ಯೋಪನಿಷತ್ತು—

ಅನಂತಮವ್ಯಕ್ತಮಚಿಂತ್ಯರೂಪಂ। ಶಿವಂ ಪ್ರಶಾಂತಮಮೃತಂ ಬ್ರಹ್ಮಯೋನಿಂ॥
ತದಾದಿಮಧ್ಯಾಂತವಿಹೀನಮೇಕಂ। ವಿಭುಂ ಚಿದಾನಂದಮರೂಪಮದ್ಭುತಂ॥
ಉಮಾಸಹಾಯಂ ಪರಮೇಶ್ವರಂ ಪ್ರಭುಂ। ತ್ರಿಲೋಚನಂ ನೀಲಕಂಠಂ ಪ್ರಶಾಂತಂ॥

ಶ್ರೀರುದ್ರ—

"ಅಕಾರಾದಿಕ್ಷಕಾರಾಂತ್ಯಾಕ್ಷರಾಣಾಂ ಪತಯೇ ನಮಃ"

ಎಂದನೇಕಾಗಮ ಪುರಾಣ ವೇದಪ್ರಮಾ
ಣಂದ ಮೂಲಸ್ತಂಭ ಶಂಭು[1]ವಿಂದ[1]ನ್ಯವಿ
ನ್ನೊಂದುಮುಂಟೆನಿಪ್ಪ ಪರವಾದಿ ವಾಗ್ಬ್ರಹ್ಮಪಂಕಾರದ್ವೈವಜ್ಞಕರ್ಗಳ।
ವೃಂದವತ್ತಲು ನೋಡಿ ಕರಧದಿಂ ಸಂಜ್ಞಿಸೀ
ಯುಂದದಿಂ ಕೆನ್ನೆವರ ಬಾಯ್ಗೊಯ್ವೆನೆಂದ್ರಜ್ಞ
[2]ವಂದೆಗ್ಯೆವಾ[2] ದಿವ್ಯ ದೇಹಿಯಾಕ್ಷೇಪೋಚಿತಕೆ ಬಸವನುಸುರ್ದ ವಚನ ॥೬೩॥

ವಚನ—

ನೀನಲ್ಲದನ್ಯದೈವವುಂಟೆಂಬನ ಬಾಯ ಕೆನ್ನೆವಾರ ನೀಳಿದಲ್ಲದೆ ಎನ್ನ ಮುನಿಸು ನಿಲ್ಲದಯ್ಯ, ಕೆನ್ನೆವಾರ ನೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯ, ಎನ್ನ ಬಿನ್ನಪವ ನವಧರಿಸು ಕೂಡಲಸಂಗಮದೇವ ॥೧॥

ಆ ವಚನರಚನಾಮೃತದ ಸೂತ್ರ ಸೋಂಕಿ ಮ
ತ್ತಾವರಿಸಿ ನಿಷ್ಕಳಾಂಗಕ್ಕೆ ನಿಷ್ಠಾಮಂತ್ರ
ದೇವತೆಯ ನಿಜತನುವಿನೊಳ್ತೀವಿ ತೃಣಪರ್ವತಾಕಾರರೂಪಾದೊಲು।
ಬಾಪಮೊಳ್ಪ್ರಮರಿಸಲ್ಕಿಹವಾದವನಕೆ ಪರ
ದಾವಾಗ್ನಿ ಪರಿಯುತ್ತಿದೇನೆಂಬೆ ಮತ್ತೆ ತೃಣ
ದೇವತಾರೂಪ ದುರ್ಬೋಧಕರ ಹೃದಯತಮದೀಪ್ತಿ ಬೋಧೆಯನೆಸಗಿತು ॥೬೪॥

ಕೋಳಿಗಳ್ಗೊಗೆ ರವಿಬೆಳಗು ಬೆಂಗುಡುವುದೆ ಶೃ
ಗಾಳಂಗಳಬ್ಬರಕೆ ಕೇಸರೋಸರಿಸುವುದೆ
[3]ಕಾಳ[3]ಪ್ಪವಂಗಂಗಳೇಡಿಸಲು ಸಾಕ್ಷಾತ್ಸ್ವರೂಪಳಿವುದೇನುಂದುರಾ।
ಜಾಳಂಗಳಗಿದಗಿದು ತೋಡಲೇನವನೊಡೆದು
ಹೋಳಹುದೆ ಧಷಕಂಗಳಗ್ರ ಕೂಗಲು ಸ್ವರ್ಗ
ಪಾಳಹುದೆ ಕಾಣದರ್[4]ಣುಗಣ[4]ಕ್ಕೆಳಿವುದೇ ಹರನ ಮಹಿಮೆಯ ಮಹಾದ್ರಿ ॥೬೫॥

---

[1] ಗಿಂತ (ಬ). [2] ನ್ಯಂದೆ ಗ್ಯೆದಾ (ಜ). ವಂಗೆ ಗ್ಯೆವಾ (ಗ.ಧ.ಪ). [3] ತಾ (ಕ.ಬ). [4] ಣಗಳ (ಗ.ಧ.ಜ.ಪ).

ವೇದನಾದಂಗಳಿಗಗೋಚರ ನ್ಯಸದ ಶಿವನಿರಲು
ನಾದರೂಪಿಯು ಅವ್ಯಯದ ಬಲ್ಲಿಂದ ಬಾ
ಮಹೋದರಾದಿ ಪರಮಶಿವನರಿವಿಗಿಸಿಹ ಅರ್ಥ್ಯತ ಬಂಧ ಅವ್ಯಯ ।
ದಿವ್ಯೋದಿ ಗ್ರಹಿಸಿದಿಹರು ದಹಿಸುವ ಪಠ್ಯಗೇ ಬರಿ
ರಾಧಾರ ಚಕ್ರ ಬರುವರಿಂದು ಕ್ರಮನ್ಯಾಸ
ನಾದಿಶ್ಯತಕ್ತ್ವರಹಿಮಾದಿಂದ [1]ಬಲು[2]ಬಹುಪ್ಪದಂಬದಿಂದ ಕ್ರದ್ಯ ।೪೯।

ಸಪ್ತದಶನಾಮರೂಪಕ್ಷರ್ದಶಾಣು ನಿಧಿ
ತಿಳಿದಲಿಗೆ ಪಾಠಕ್ಕೆ ತರ್ಕಬಂದಡೆಯು ಬರಿ
ರಿಸಿದೆಯುತ್ತ ದಯಮಿದೆಗಾಲುಕಿಸಿದಕ್ಕರನಗೆ ಅಮಿನಿದು ದಯ್ಯತ್ತ ಮಿಲಿ ।
ಉದುಗಿಸ್ಸು ಗರ್ಭ ನಡುಗಿಸ್ಸು ಗದ್ದುಗೆ ಮಿಡಿಗು
ಕೊಡೆಯುತಾತ್ಮನವನ ಕ್ರಮದ ದಿಹಿವ ರಹಿಸ
ದಡಿ ಬಹವನ ದತ್ತಸಿದ್ಧಪ್ರತಿಷ್ಠೆಪಿದ್ಯಯಮೋಹ ಪವನರ್ಜನ ।೫೦।

ಪಿತೃಪಾದಂಗಿ ಬದ್ಧತ್ವತ್ತ ಶಬ್ದಗಳ
ಚಿತ್ರಮಯ ಶಬ್ದ ನಾನಾಮ ಬುದ್ದಿಸಿದಿರಿದ
ಪಿತೃ ದಗೊರ್[3]ದೇವದಿ[4]ಮಹಿಮೆಯು ಮಂತ್ರ[5]ದೇವನುಸರ್ಗಿಸಿಸಿಬಂದ ।
ತತ್ತ್ವತನುವಿದಿ ರವಾಮೇಶದಿಂ ಬದವ ತಲೆ
ಸುತ್ತ ತಗೆದಿಕ್ಕ ಜಗಕ್ಕೆ ಮುಂದಿಗೊಯಿದೆ
ನ್ಯ[6]ತ್ಯತಿಷ್ಟದ್ದಶಾಂಗುಲದ ಪದಪದಿಕವ್ಯಳರಿತ್ತನುತ್ತಿಂದ ಪದ ।೫೧।

ವಚನ—

ದೇವಲಿಪಿಯಕ್ಕೆ ಪರ ಯೋಜಿಸಿಯಿಕಲ್ಲ, ಶಿವಮಂತ್ರಕ್ಕೆ ಪರ ಮೇಲ್ ಮಂತ್ರವಿಲ್ಲ, ಜಗತ್ಕರ್ತೃವೆ ಮುಂದಿಗೊಡೆತ್ತಿಕಿಲ್ಲ; ಶಿವನಂತಾಗುವನೃತ್ಯದೆ ದೈವವಿಲ್ಲ. ।೬।

ಸೂತ್ರಧಾರಕನ ಶಬ್ದ ಸ್ವರ್ಗ ಮಯ ತ್ರಯ
ಗಾತ್ರ[1]ನಿಷ್ಠೆ ವೇದನ ಬ್ರಹ್ಮಮಾತ್ರಾದಿ ಪ
ದಪತಷ್ಟ ತಿಗಳನಿತ್ತ ಪರ್ಬ್ರಹ್ಮಂದ[2]ದಿವ್ಯಂತ[3]ಸಂಪ್ರಾಪ್ತಿಯು ।
ಸೂತ್ರಗಳ ಸಾಜ ಶಿಕ್ಷ[4]ದರಹರಾಯಣ ತ
ಮ್ಯತ್ರಯತರ್ಕರ ತತ್ವಂದಿಸಿದ ತತ್ವಸ್ಥದ
ದಾನಿತೇತದ ತಮಂ [5]ತಗುದ್ವಂತ ತಾರ್ಕ್ಯ[6]ಮಿಳಿತತ್ವ[7]ದಯಂ
ಶೋಭಿಸುದ ।೫೨।

[1] ಕವ (ಪ). [2] ದಿ (ಕ.ಮ.ಪ). [3] ನೆಂದ (ಪ), ನಿಮ್ಮ ಅ (ಕ.ಗ.ಪ.ಪ.ಪ).
[4] ದೇಹ (ಪ). [5] ದ್ವಕ್ಕಂತ (ಪ). [6] ಮ. (ಕ.ಗ.ಪ). ಮ. (ಪ.ಪ).

ಸಾಕ್ಷಿ—

ಸರ್ವೇ ಬ್ರಹ್ಮ ವದಿಷ್ಯಂತಿ ಸಂಪ್ರಾಪ್ತೇ ತು ಕಲೌ ಯುಗೇ
ನಾನ್ಯತ್ತಿಷ್ಠತಿ ಮೈತ್ರೇಯ ಶಿಶ್ನೋದರಪರಾಯಣೇ ॥೮೦॥

ರೂಪುಶೂನ್ಯಕೆ ಭಾವಶೂನ್ಯವಾಗ್ಯದು ವ್ಯರ್ಥ
ರೂಪಾದುದಳಿವುದಾಗಂತದೆಂತುಂ ವ್ಯರ್ಥ
ರೂಪುಭಾವದ ಪೃಥಕ್ಕಳಿದು ಸ್ವರೂಪ ಭಾವಂಗಳೆರಡೊಂದುಗೂಡಿ।
ದಾ ಪರಮತತ್ವಶಿವ[1]ಶ[1]ಕ್ತಿಸಂಯುತ ಸರ್ವ
ವ್ಯಾಪಕಸದಾಶಿವನೆ ನಿತ್ಯವಸ್ತುಳಿದಾದ
ಕಾಪಥದ ದೈವಪಥವದು ವ್ಯರ್ಥವೆಂ[2]ದೆತ್ತಿ[2] ತೋಱಿದ ಮಹಾಗಮವನು ॥೬೦॥

ಆಗಮ—

ಅರೂಪೇ ಭಾವನಾ ನಾಸ್ತಿ ಯದ್ದೃಶ್ಯಂ ತದ್ವಿನಶ್ಯತಿ
ದೃಶ್ಯಾದೃಶ್ಯೇ ರೂಪತತ್ವೇ ತಥಾ ಶರ್ವಂ ಸದಾಭ್ಯಸೇತ್ ॥೧೧॥

ಹಂ ಬ್ರಹ್ಮಮೆಂದು ದೀರ್ಘಾಚರಣೆಯಿಂ ಬಯಲ
ನಂಬಿದ ಸನತ್ಕುಮಾರಂಗೊಂಟೆರೂಪಂದು
ಸಂಭವಿಸಿ ಶಾಪಹತನಾಗಿ ಕೆಲಕಲ್ಪಾಂತರಂದೊಳಲಿ ಬಳಿಕ ದ್ವಿತಿಯ ।
ಶಂಭುವಿನ ಪದವಿಡಿದು ಪರಮಪಂಚಾಕ್ಷರಿಪ
ದಂಬಡೆದು ಸುಖಿಯಾದನಂತಾಗಿ ಈ [3]ಶೂನ್ಯ
ಶುಂಭ[3]ದೈವದಶುದ್ಧವಿದ್ಯೆಗಳೆದಭವಶರಣೆಂ[4]ದಂತು[4] ಬದುಕದೆ ವ್ಯ[5]ಥಾ[5] ॥೬೧॥

ಶ್ರುತಿ—

ಪುರಾತನೇನ ಚೋಷ್ಟತ್ವಮುಭಯಂ ನಂದಿನಃ ಪ್ರಭೋಃ
ಪ್ರಸಾದಾದ್ಘನತಾಂ ಪ್ರಾಪ ಶಿವಮಭ್ಯರ್ಚ್ಯ ಶಂಕರಂ ॥೧೨॥

ಅಲ್ಲದುದನಹುದೆಂದು ಅಹುದನಲ್ಲೆಂದುಮಾ
ವಲ್ಲಭನ ಹಳಿದು ಹಳಿವೊತ್ತು ಹರಣಂಗಳೆವ
ಖುಲ್ಲದೈವಗಳ ಸಲೆ ಹೊಗಳ್ದಧೋಗತಿಗಿಳಿದು ಗುದವದನದೊಳುವಾದಿಪ।
ಜಳ್ಳುತರ್ಕಗ್ರಂಥಗಳ ನೆಗಳೆ ಭಾಗ್ಯ ಹೇ
ಸೊಲ್ಲದಗಲ್ದಿತ್ತ ಶಾಪಾಂಧ ಮೀಮಾಂಸಕ
ಳೆಲ್ಲ ಶುಂಭ [6]ಕ್ಲಿ[6]ಬ ಮಾಂಸ[7]ಹಾ[7]ರಿಕರೆಂಬ ಶ್ರುತಿಯೆ[8]ತ್ತಿ[8] ತತ್ವಮುಖವು ॥೬೨॥

---

[1] ಥ (ಕ.ಖ.ಗ.ಘ.ಚ.ಛ). [2] ಬಂತೆ (ಜ). [3] ಶಾನ್ಯಶಂಭು (ಗ.ಛ), ಶೂನ್ಯ ಶಂಭು (ಕ.ಖ.ಘ.ಚ). [4] ದು (ಕ.ಖ.ಗ.ಘ.ಚ.ಛ). [5] ಥಾಯ (ಕ.ಖ.ಗ.ಘ.ಚ.ಛ). [6] ಕ್ಷೀ (ಕ.ಖ.ಗ.ಚ.ಛ). [7] ಕಾ (ಕ.ಖ.ಗ.ಚ.ಛ). [8] ತ್ರಿತಾ (ಜ).

ವೃತ್ತ—

ಮೀಮಾಂಸಕಾನಾಮಶುಭಾಂಸಕಾನಾಂ
ಪರಸ್ಪರಂ [1]ಖಾದಿ[1]ತ ಮಾಂಸಕಾನಾಂ
ಸ್ತ್ರೀರತ್ನಸೌಂದರ್ಯ ವಿನಾಶಕಾನಾಂ
ವೃಥಾವಯೋ ಯಾತಿ ನಪುಂಸಕಾನಾಂ ॥೧೩॥

ಎಂಬವರ್ವೋತ್ತರಕ್ಕಳುಕಿ ಭೂಕಾಂತೆಯುದ
ರಂಬೊಗುವ ತೆಱದಧೋಕ್ಷಿತಿಮುಖಗಳಾಗಿ ತಾ
[2]ವೆ[2]ಂಬ ಬ್ರಹ್ಮವಧೋಗತಸ್ಥವಾದಂತೆ ತಲೆಗುತ್ತಾತ್ಮಭ್ರಮೆವರೆಗಳ ।
ಕುಂಭಿನಿಯ ಮೇಲೆ ಬರೆವುತ್ತಿರಲು ರಾಜನಿಕು
ರುಂಬವಚ್ಚರಿಗಚ್ಚನೊಡ್ಡುವಂತಿರೆ ತನು ವಿ
ಜೃಂಭಿಸುತ ಮಣಿಮಕುಟಮಥನದೊಡಗಿದವಿಂದ್ರರೋಹಣಾದ್ಯಾದ್ರಿಯಂತೆ
॥೭೩॥

ಕಟ್ಟಣಕ ಕಟ್ಟು ಒಡೆಯಿತ್ತು ತರ್ಕಾಗಮದ
ಗುಟ್ಟು ಗೂಢಂಗೆಟ್ಟುದುದ್ದಂಡಹಂಕಾರ
ಸುಟ್ಟ ಹೊಲನಾಯ್ತು ಮಥನಿಸುವ ಮನ ಪೇರ್ಗಾಳಿಗಿಟ್ಟ ಸೊಡರಂತಾದುದು ।
ಪಟ್ಟ ಪರಿಯಾಯ್ತು ಪ್ರತಿವಾದ ವಾದಿಸುವುಗ್ರ
ಭಟ್ಟರ ವಿಲಾಸವಿದ್ಯಾಪ್ರೌಢಿವಾಗ್ವರ್ಣ
ಧಿಟ್ಟದೀರ್ಘಾನನವಧೋಗತಿಯ ಪದವಿಡಿದುದೇನಚ್ಚರೆನುತಾ ಸಭೆ ॥೭೪॥

ವಿಸ್ಮಯದ ವಿದ್ಯಾಧಿದೇವತೆಯನಾಹ್ವಾನ
ವಶವರ್ತಿವಡೆದ ಮಾಮಾಮಹಾದೇವ ಇದು
ಹೊಸಬಗೆಯ ಹೊಲಬಿ[3]ಗನನೀಶ[3]ಕೇಶವ ವಿಶ್ವಶೃಢ್ಗಳ ಸೃಜಿಸಿಭೂಮಿಗೆ ।
ಬಸವ ಪೆಸರಿಟ್ಟಟ್ಟಿದರೊ ಮಹಾಶ್ಚರ್ಯ ದೇ
ಹಿಸಿದ ಪೇಹವೊ ದೇವ ಬಲ್ಲನೀ ಬೆಡಗ ತೃಣ
ಋಷಿಯ ರೂಪಿಸಿ ದಿವ್ಯಶಾಸ್ತ್ರವೋದಿಸಿದನೆಂತೆಂದು ನೃಪಸಭೆ ಭ್ರಮೆವಡೆ ॥೭೫॥

ತಂತ್ರಿವಾದ್ಯಾದಿಗಳ ಸೂತ್ರಧಾರಕಕಲ್ಪಿ
ಸಂತೆ ಪಗಲಂತೆ ನಾನಾಚಿತ್ರಚಿಹ್ನದೋ
ರ್ಪಂತೆ ಬಸವನ ಭಾವಸಾವಧಾನಿತ ಸೂತ್ರತೃಣರಜ್ಜುಪುರುಷಾಂಗವ ।
ತಂತ್ರಿಸಲು ದೇವತಾದೇಹಿಯಾದಂಗದೊಳ
ಗಂ ತಿಳಿಯದೆಲ್ಲ ಭ್ರಮೆವಡೆ ಚೆನ್ನಬಸವನವ
ರಂ ತಿಳುಪಲಾದಿ ಕಥನೋತ್ತರವನೆತ್ತಿ ತೋಱಿದ ಭೂವರಾದಿಗಳಿಗೆ ॥೭೬॥

---

[1] ಭಾದಿ (ಕ.ಖ.ಚ). [2] ನೆಂ (ಗ.ಛ). [3] ನಮಹೇಶ (ಕ.ಖ.ಗ.ಘ.ಚ.ಛ).

ಅತ್ರಿ [1]ಯರಸ್ಯ[1]ನುಸೂಯದೇವಿಯ ಪಡಿವ್ರತಾ
ವೃತ್ತಿಯಱಿಯಲ್ತ್ರಿದೇವತೆ ಬಂದು ಭೂತಬಲಿ
ಯೆತ್ತುವವಸರದೊಳತಿಥಿಗಳಾಗಿ ಸ್ವಸ್ತಿಗುಡಲರ್ಘ್ಯಪಾದ್ಯಾದಿಕರ್ಮ |
ಭೃತ್ಯೋಪಚಾರಪೂರ್ವಕದೊಳಾರೋಗಣೆನಿ
ಮಿತ್ತಗಳನಳವಡಿಸುತಿರಲವರ್ಗಳೆಂದರಲೆ
ಅತ್ರಿಮುನಿ ನಿನ್ನರಸಿ ನಗ್ನೆಯಾಗುಣಬಡಿಸಬೇಹುದೆಮಗೆಂಬೆನಲ್ಕೆ ||೬೭||

* ಮುನಿಮುಖಂ ಬಾಡಿ ತನ್ನರ್ಧಾಂಗಿಯಂತಸ್ಥ
ದನುಗಾಣದೊಯ್ಯನೀಕ್ಷಿಸಲು ಪತಿಗುಭಯಕರ
ವನು ಮುಗಿದನುಜ್ಞೆವಡೆದಾ[2]ಕ್ಯತೆಥಿಗಳ[2] ಮೇಲೆ ದಾಶುಹಸ್ತವನೊಸೆದಿಡೆ |
ಅನುಕರಿಸಿತವರ್ಗೆ ಬಾಲ್ಯತ್ವ ಬಳಿಕಾ ಮಹಾ
ವನಿತೆ ನಗ್ನಾಂಗದಿಂದಾ ತ್ರಿದೇವತೆಯರ್ಗ
ಳನುವಱಿದು ಭೋಜನಂ ಮಾಡಿಸಲ್ಮೆಚ್ಚಿ ಪ್ರಸನ್ನಪ್ರತ್ಯಕ್ಷದೋಱಿ ||೬೮||

* ಮಚ್ಚುಮಿಱಿತು ಬೇಡು ಬೇಹುದನೆನುತ ಭಕ್ತಿ
ವಚ್ಚಳೆ[3]ಯೆನ[3]ನಲ್ಮೊವರೆನ್ನುದರದೊಳ್ಜನಿಸಿ
ಅಚ್ಚುತಂ ದತ್ತಾತ್ರೆಯ.ಜವಿಧುಗಳಾಗುದಿಸೆ ರುದ್ರಯೋನಿಜಭಯುಕ್ಕೆ |
ಬೆಚ್ಚತ್ರಿ ಬ್ರಹ್ಮಯಜ್ಞಾಧಿಕಾರಕ್ಕೆಯಿ
ಭ್ಯರ್ಚಿಸುವ ದೂರ್ವೆಯಾಗ್ರದೊಳೊಗೆದ ದೂರ್ವಾಸ
ನಚ್ಚು ಬಸವನಭಕ್ತಿ ಭಾದಬ್ರಹ್ಮದೊಳೊಗೆದ ತೃಣವಾಸಪುರುಷತತ್ವ ||೬೯||

ಇಂತಿದೆಂದಾ ಸಭಾರಾಜರ್ಗೆ ಪ್ರತಿವಾದ
ಸಂತತಿಗೆ ಚೆನ್ನಬಸವೇಶಸಾಮ್ಯಂ ಪೋಱಿ
ಲಂತದಲ್ಲಿಹುದಲ್ಲಪೊಡದೆಂತು ಶಾಪಾನುಗ್ರಹಶಕ್ತಿ ಶಬ್ದಶಾಸ್ತ್ರ |
ನಂತಾದಿವ್ಯವೇದ ಸಾಕ್ಷಾತ್ಸ್ವರೂಪಾದು
ದಿಂತಿದೇ ಪರತತ್ವವೆಂದು ಮೀಮಾಂಸಾದ್ಯ
ರಂತರಾಳಿಕನೆದ್ದು ಶರಣ್ಬೊಕ್ಕುಸಾಷ್ಟಾಂಗ ಪ್ರಣುತನಾಗುತ್ತೆಂದನು ||೭೦||

ಮಂತ್ರದೊಳು ಮತ್ಸರಿಪ ಭೂತದಂತಾ ಬಸವ
ನಂತಸ್ಥವಱಿಯದ ಜ್ಞಾನಕೃತದಪರಾಧಿ
ಗೆಂತೆನಲ್ಕಾ ರಜ್ಜುಪುರುಷೋಪದೇಶಿ ಸುತ್ತುತ್ತರಕುಮೀಮಾಂಸದ |

---

[1] ಸತಿಯ (ಖ). * ಈ ಪದ್ಯಗಳು 'ಜ' ದಲ್ಲಿಲ್ಲ. [2] ಕೆಯತಿಥಿಯ (ಜ).
[3] ನೆನ (ಕ.ಖ.ಗ.ಘ.ಚ.ಥ).

ಭ್ರಾಂತಬಿಡು ಪೂರ್ವಮೀಮಾಂಸಸಂಪಾದನೆಯ
ಮಂತ್ರವಿದೆಕೊಳ್ಳೆಂದನುಗ್ರಹಿಸಿ ನೇಮಸ್ಥ
ರಂತಸ್ಥಲಂದೋಱಿ ಪ[1]ರಿ[1]ವಾದವಳಿದ ಗುರುವಿಂಗೆ ಗುರುವಾದ ಬಸವ ॥೨೧॥

ಲಕ್ಷಣ ಸೂತ್ರ—

ವಂಶೇ ಜ್ಞಾನೇ ಪದೇ ಸತ್ಯೇ ಶೌರ್ಯೇದಾನೇ ಬಲೇ ಜಯೇ।
ಸ್ವಸ್ಥಾನೇಷು ಗುಣೇಚೇತಿ ಗುರುತ್ವಂ ದಶಧಾ ಮತಂ॥

ಎಂಬಾಗಮೋಕ್ತದಶವಿಧದ ಗುರುಮಹಿಮೆಪ್ರ
ಲಂಬಕ್ಕೆ ಶತಸಹಸ್ರಸಂಖ್ಯಾತವಿಧ ಮಹಿಮೆ
ಇಂಬುಗೊಂಡಿಹ ಬಸವಗುರುಪದಕ್ಕಖಿಲಜನಗಳು ಜಯತೆನಲ್ಕೆ ನೃಪನು।
ತುಂಬಿದಾಸ್ಥಾನದೊಳು ಭಂಗಹೊತ್ತಾ ಕಾಳ್ವಿ
ಡಂಬನಂತಃಕರಿಸಿ ರಜ್ಜುಪುರುಷಗೆ ಮಂತ್ರಿ
ಜಂಭವೈರಿಂಗುಭಯಕರವೆತ್ತಿ ಬೀಳ್ಕೊಡ[2]ಲು ಸಿದ್ಧಾಂತ[2]ಶಿರಿಯಾಳ್ದನು ॥೨೨॥

ಮಂಗಳಮಹೋತ್ಸಹದ ಭಕ್ತರಾನಂದವಾ
ದ್ಯಂಗಳ ಸದಾಚಾರದೇಳ್ಗೆಯ ಮಹದ್ವಿಭವ
ಮುಂಗುಡಿಯ ತೋರಣದ ಜಯಜಯಸ್ವನದಮೃತವನಧಿವರ್ಧ್ಯದಭ್ರೈತ್ರದ।
ನಂಗಲಂದೆಗೆದಂತೆ ನಡೆಗೊಂಡುದಾ ಶಿವಗ
ಣಂಗಳೊಗ್ಗಿನೊಳು ಪರಮಾರ್ಥನೇಮದ ರಜ್ಜು
ಸಂಗಮಸಹಿತ ನಿಜನಿವಾಸಕ್ಕೈದಿದ ಬಸವಮಹಿಮೆಯನದೇಂಪೊಗಳ್ವೆನು ॥೨೩॥

ಎಂದು ಪ್ರಮಥರ್ಗೆ ನಂದೀಶ ನಲ್ಮೆಯೊಳು ಪೇ
ಳ್ದಂದಮಂ ತತ್ಪ್ರಸನ್ನಪ್ರಸಾದದೊಳು ಭೂ
ವಂದ್ಯಸಜ್ಜನಶುದ್ಧಸದ್ಭಕ್ತಿಯುಕ್ತರ್ಗೆ ಥಾಕಥನಕಲ್ಪದ್ರುಮ।
ಮುಂದಿಟ್ಟು ಸಿದ್ಧಿರಸಪ್ರಭೆಯೊಳೀಶಾಕೃತೀ
ಬಂಧವನೊಡರ್ಚಿದೆನಖಿಲಶಿವಾರ್ಚಕರು ಆ
ನಂದದಿಂದವಧರಿಸಿ ಬಸವನಾಮಾಮೃತಸುಸೇವಿತಕೃತಾರ್ಥರ್ಕಳು ॥೨೪॥

---

[1] ರ (ಜ). [2] ಲ್ಕಾ ಸಿದ್ಧ (ಖ).

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ತೃಣಪುರುಷಗಸುವಿತ್ತು ಮೀಮಾಂಸಕನ ಬಸವ ಗೆಲಿದ ಸಂಧಿ ॥೭೫॥

ಇಪ್ಪತ್ತೆಂಟನೆಯ ಸಂಧಿ

(ಪರಿವರ್ಧಿನೀ ಷಟ್ಪದಿ)

ಸೂಚನೆ—

ಸ್ವಯ ಚರ ಪರದೊಳಗಱಿದಿಹ ಮಹಿಮೋ
ದಯ ಸಂಗನಬಸವಣ್ಣನು ಹಿರಯ
ನ್ವಯುದ ಮಹೇಶನ ಕರವಿಡಿದಮೃತವ ಕರೆದನು ಜಗವಱಿಯೆ॥

ಪರಮಪರಾ[1]ಪ[1]ರ ಭರಿತಜ್ಞಾನೋ
ದರಧರಣೀಶ್ವರರೆನಿಪ ಪ್ರಮಥ
ಗೋರೆದಾ ನಂದೀಶ್ವರ ತದ್ವಾಕ್ಯಾರಂಭದಮೃತಫಲವ।
ಸುರುಚಿರ ಷೋಡಶಮಾತ್ರಾನಿಯಮದ
ಪರಿವರ್ಧಿನಿಷಟ್ಪದಿಗಳ ಮಂತ್ರೋ
ಚ್ಚರಣೆಯನಖಿಳಶಿವಾರ್ಚಕರವಧರಿಸರ್ಪಿಸುವೆನು ನಿಮಗೆ ॥೧॥

ಲಲಿತಪದಾರ್ಥಗಳರ್ಥವ ಚಿತ್ರಿಸಿ
ಜಲಜಭವಂ ಮಂಗಳ ಪೆಸರಿಟ್ಟಿದ
ನಿಳೆಗಿಳುಹಿದನೋ ಚಿನ್ಮಯನಿರ್ಮಿಸತೊಡಗಿದನೊಡರ್ಚಿದನೊ।
ಸಲೆ ಶಿವಸಾಯುಜ್ಯದ ಮಱಿಯೆಂದಿದ
ಕಲ್ಪಿಸಿ ಕಾಶ್ಯಪಿಗಿತ್ತನೊ ಎನೆ ಸ
ದ್ವಿಲಸತ್ಕೀರ್ತಿಯ ಮೂರ್ತಿನಿಸುವ ಕಲ್ಯಾಣಪುರಾಂತರದಿ ॥೨॥

ಸಿರಿಮುಕುತಿಯ ಸಿಂಗಾರದ ರತ್ನಾ
ಭರಣದ ದೀಧಿತಿಯೊಳಗಣ ಕಾಂತಿಯ
ತಿರುಳಿನ ಗರುವಾಯದ ಗವಸಣಿಗೆಯ ತೆಗೆದಂತೊಪ್ಪುತಿಹ।
ಚರಿತ[2]ದ[2] ಚಿತ್ತದ ನಿರ್ಮಲಭಕ್ತಿಯ
ಕರು ಕಾರುಣ್ಯದೊಳಿಳೆಯೊಳು ಜನಿಸಿದ
ಪರಿಯಂತಿಹ ಬಸವೇಶ್ವರ ಕಲ್ಯಾಣಕೆ ಕಂದೆಱವಾಗಿ ॥೩॥

---

[1] ದ (ಚ). [2] ರು (ಫ.ಕ).

ರವಿಯೊಳ್ರಂಜನೆಯುಂ ಸುಧೆಯೊಳ್ಸವಿ
ಸವಿಯೊಳು ರುಚಿಯುಂ ಚಂಚಲಚಪಲದೊ
ಳವಯುವಮಂ ಮಂತ್ರದ ದೃಷ್ಟಿಯ ಮೇಘದ ಘರ್ಜನೆಯ ಘನ।
ವಿವಿಧಾಳಾಪದ ಕಳೆಗಳ ಕುಶಲವ
ವಿವರಿಸಬಹುದೇ ಬಸವನ ಭಕ್ತಿಯ
ಪವಣಂತಂತಿಂತೆಂದುಂ ಸ್ಥಲವಿಡಬಹುದೇ ಅನುಪಮನ ॥೪॥

ವರಪುಣ್ಯೋದಯಚರಿತ ಪ್ರಪಂಚಾ
ಧ್ವರವೀರೇಶ್ವರ ಕುಲಮದಗಜಶಿರ
ಕರಪಂಚಾಸ್ಯನು ಜಂಗಮಲಿಂಗಾರ್ಚನರತಿ ರಾಜೇಂದ್ರ।
ನರಮನೆಯಲಿ ಮೂವತ್ತಾರ್ಲ[1]ಕ್ಷಾ[1]
ಸಿರ ಚರಲಿಂಗದ ನೇಮದೊಳವ
ಸರಕವರಿಚ್ಛೈಸಿದ ನಡೆಸುವೆನೆಂಬುದಕಱುಹಿನ ಉಪಮೆ ॥೫॥

ಶರಧಿಯ ತೆರೆಗಳ ಬಹಳವ ಲೆಖ್ಖಕೆ
ತರಬಹುದೇ ಗಗನದ ನಕ್ಷತ್ರವ
ಬೆರಳಿಟ್ಟೆಣಿಸಲುಬಹುದೇ ಬಸವನ ದಾಸೋಹದ ಘನವ।
ವಿರಚಿಸಬಹುದೇ ಅದು ಪುಣ್ಯದ ವಿ
ಸ್ತರವಹುದೆಂಬುದ ತೋಱುವ ದರ್ಪಣ
ದಿರತತ್ವಾರ್ಥಾಗಮಪರಿಪೂರ್ಣದಪಾರಮಹಾತ್ಮಕನು ॥೬॥

ಆಕಾಶದೊಳೊಸರೊಗುವ ಜಲಂಗಳ
ನೇಕಸ್ಥಲದೊಳಗೆಱಗ್ಯವು ನದಿನದ
ದಾಕಾರದಿತನ್ತನ್ಮುಖದಿಂ ಬಂದುದಧಿಯ ಹೊಗೆ ಕೆಲವ।
ನೀಕರಿಸಿದನೇ ನೀರಾಕರನೆಂ
ಬಾ ಕ್ರಮ ಕ್ರಮಯುತ ಬಸವನ ಭಕ್ತಿವಿ
ವೇಕಕುಲಾಶ್ರಯವಿಲ್ಲದೆ ಜಂಗಮಪೂಜೆಯ ಮಾಳ್ಪಲ್ಲಿ ॥೭॥

ಹಿರಿಯ ಮಹೇಶ್ವರ ಶಿವನಾಗಯ್ಯನ
ಬೆರಸಿರಲಾತನ ಕರುಣಪ್ರಸಾದವ
ಧರಿಪುದಶರಣೆಂಬುದನೊಳಭೇದಿಸಿ ನಿಂದಕರಱಿದಿದನು।
ಧರಣೀಶಂಗೊರೆದರು ನಿಮ್ಮುತ್ತಮ
ಪುರುಷಬಸವದಂಡೇಶನ ಭಕ್ತಿಯ
ಕರೆಯುವಕಂಡಿರೆ ಅಕುಲರ ಹೊಲಬಿಗೆ ತಂದುದದೆಂತೆನಲು ॥೮॥

---

[1] ಕ್ಷಸಾ (ಗ.ಘ.ಕ.ಥ).

ಸುಡಲದ ವಚನಕೆ ತಹರೇ ಪಾಪದ
ಕಡೆಯಾಣೆಯ ತಾಂ ಬ್ರಾಹ್ಮಣಭಕ್ತಿಯ
ಗೊಡವೆಯನನ್ವಿತವಂತಲ್ಲದೆ ಬಹುಕುಲಹೀನರ ಕೂಡೆ।
ನಡಹವೆ ತ[1]ಪ್ಪ[1]ದುಮ್ಮೈಯಿಕ್ಕೆಕ್ಕುಲ
ಗಡಣವ ಮಾಡುವರೆಂಜಲನೀಗಳು
ನುಡುಗಿತಿನು[2]ಹ[2] ಪಾತಕವನು ಪವಣಿಡಬಹುದೇ ನೀವಿದಕೆ ॥೯॥

ಸೊಗಸುವ ರಾಜ್ಯದ ಲಕ್ಷ್ಮೀ ಧರ್ಮಗ
ಳಗಲುವಳಿಹಪರವಿಲ್ಲಾತನ ಕಾ
ಳ್ಬಗೆಗೇಳ್ದದ ಪರಿಹರಿಸದುಪೇಕ್ಷಿಸೆ ಕ್ಷತ್ರಿಯರನ್ವಯಕೆ ।
ನಗೆಗೆಡೆ ನರಕವೆನಲು ಮನದಲಿ ಖತಿ
ಮಿಗಿಲೇಱಾತನನಾತನು ಪೂಜಿ
ಪ್ಪಘಕುಲದನ ಕರೆಯೆಂದರಸು ಕರೆಸಿದನೇನೆಂಬೆ ॥೧೦॥

ಸಕಳಸುನಿಷ್ಕಳತತ್ವಗಳೆರಡರ
ಪ್ರಕೃತಿಯ ಪಾರಂಪರೆಯ ಪದಾರ್ಥದ
ಸಕಲೆಯ ಸಾರೋದ್ಧಾರವೆ ಮೂರ್ತ್ಯಾದಂತಿರಲತ್ತಂಡ ॥
ಅಕುಟಿಲರೈತರಲರಸನು ಕಾಣಾತ
ಸಕುಟಿಲರೋಜೆಯ ನೋಜಿಸಿ ಬಸವರ
ಸಕಟಕಟಿಂತನ್ಯಾಯಕ್ಕೆಱಗುವ ಜಾತಿಯ ನೀತಿಯನು ॥೧೧॥

ನಡೆ[3]ವ[3]ಡೆ ನೀವೇ ಬಲ್ಲರಿ ಸಾರೆಂ
ದಡಸೆಡಸಾಕ್ಷೇಪಿಸಿ ನಿಷ್ಠುರದಿಂ
ನುಡಿಯಲು ಬೋಯೆಂದೆದ್ದುದು ಭೂಸುರವಡೆಯವಿಧಾಯೆನುತ ।
ಕೆಡಿಸಿದ ಬ್ರಾಹ್ಮಣ್ಯವ ಕುಲಗೇಡಿಯ
ಕಡೆಗಣಿಸೆನುತಿಹ ನಿಂದಕರೆದೆಯದು
ಸುಡುವಂತಿರೆ ಬಸವೇಶ್ವರನೆಂದನು ಪೊಡವಿಪತಿಯು ಕೂಡೆ ॥೧೨॥

ದ್ವಿಜಸಭೆಗ್ಯೋಗ್ಯತೆವಡೆದ ಮಹಾಪ್ರಭು
ವಜಮಿಳಹೊಲತಿಯ ಸಂಗದಿ ಹೊಲೆಗುಲ
ನಿಜವಾಗಧಮನು ನಾರಿಯ ಪೆಸರಿಟ್ಟಾಗವನಿರುತಿರಲು ।
ತ್ಯಜಕಾಲದ ಪ್ರಾಣದ ಸಂಕಟವಾ
ಗಜಬಜಿಸುತ ನಾರಣ ನಾರುಗಯೆನೆ
ನಿಜಪದಕ್ಕೈದಿದ ಯೆಂಬರು ಹೊಲೆ ವೈಕುಂಠಗಳೆಂದುಂಟೆ ॥೧೩॥

---

[1] ಪ್ಪು (ಗ.ಘ.ಥ). [2] ತಿಹ (ಕ.ಖ). [3] ದ (ಕ.ಖ).

ಎತ್ತರ ತತ್ತರ ನುಡಿವನ್ನಾಯಿಗ
ಳೆತ್ತಣಕುಲಜರು ಕೇಳಾ ಮತ್ತೊಂ
ದುತ್ತಮಕಥೆಯನು ಶಿವರಾಘವಸಂಪಾದನೆಯೊಳಗೊಬ್ಬ ।
ಪೃಥ್ವೀಶನ ಮಗ ದುರ್ವ್ಯಸನದಿ ಕೆಲ
ಭೃತ್ಯರ ಕೂಡ್ಯಾಡವನಡವಿಯು ಮ
ಚ್ಚುತ್ತಲೆ ಖಗಮೃಗವಧೆಗೈದವ ತಿಂದಿರ ಕಲಿತವ ಮತ್ತೆ ॥೧೪॥

ಅತ್ಯಧಮಾಚಾರಿತದೊಳ್ನಾಯ್ನರಿ
ಕತ್ತೆಗಳಂ ಕರುಗಳ ಪಶುಗಳ ವಧಿ
ಸುತ್ತವಭಕ್ಷಿಸ ಕಲಿತನ್ನಾಮೃತ ಪಾನಗಳನು ತೊಱೆದು ।
ನೆತ್ತರು ನೆಣನಾಹರರಾಗಿರುತವೆ
ಮರ್ತ್ಯರ ತಿನತೊಡಗೀ ಜನ್ಮವನಿಂ
ತುತ್ತರಿಸುತ್ತಿರಲಂತ್ಯಪದಂದೋಱಿತ್ತಾ ಪಾತಕಗೆ ॥೧೫॥

ಕಾಲಯಮನ ಕಲಿಯಾಳ್ಗಳು ಬಂದವ
ನಾಲಯಹೊಕ್ಕಾ ಅಧಮನ ಪಾಶದಿ
ಮೇಳೆಯ ಬಿಗಿವವಸರದೊಳಗವನ ಪ್ರಧಾನಂ ಬಂದಳುತ ।
ಪಾಲಿಪರಾರಿನ್ನೆನಗಾಹಾರನು
ಕೂಲತೆಯೇನೆನೆ ಪ್ರಹರಾಹರಯನು
ತಾಲಿಗಳಡಿಮೇಲಾಗಲಧೋಗತಿಗೆಳೆದವರೊಯ್ಯುತಿರೆ ॥೧೬॥

ಶೂಲಿಯ ಶರಣರ ದೂತರು ಬಂದೆಡೆ
ಗೋಲಿಕ್ಕೆಲೆ[1]ಲಿ[1]ವನೆಮ್ಮವ ಬಿಡಿ ಬಿಡಿ
ಕಾಲನಕರ್ಮಟಹೊಗಸಲ್ಲೆನತ[2]ಲು[2] ಸೆಳೆಯುಲ್ಕವರೆಳೆಯೆ ।
ಊಳಿಗಘನವಾಗೊಬ್ಬರಿಗೊಬ್ಬರು
ಸೋಲದೆ ಹೊಡೆಕುಟ್ಟಾಡಲು ಮಸಗಿತು
ಕಾಳಗಕೈದುಗಳೊರೆಯುಗಿದಿಬ್ಬಲವಿಱಿದಾಡುತ್ತವನ ॥೧೭॥

ಮೇಲಿಂಗಿವರೆಳೆಯಲ್ಕ[3]ಬಲಬಯೆಂ[3]
ದಾಳುತ್ತೆಮದೂತರು ಕವಿದರು ಬಹು
ಮಾ[4]ಲೆಯ[4] ಪಾತಕ ನಿಮಗೆಂತಹದೆಂದವರವನಸುಗೊಂಡು ।
ಆಳುದನಲ್ಲಿಂಗೊಯ್ಯೆನುತಲು ಕೆಲ
ವಾಳಿನ ಕೈಯಲಿ ಕೊಟ್ಟಲ್ಲಿಯು ಬಿ
ಲ್ಲಾಳುಗಳೊಡ್ಡೊಡ್ಡಿರಿದಾಡಲ್ಕಿವಗಣವವದಿರ ತರಿದು ॥೧೮॥

---

[1] ಯಿ (ಕ.ಚ). [2] ಖಿ (ಗ). [3] ಬಬಬಯೆಂ (ಫ.ಧ). [4] ಲಹ (ಖ.ಕ).

ಅಸುಗೊಂಡಾ ಯಮದೂತರ ತಲೆಗೊಂ
ಡಸವಮಾಕ್ಷನ ಗಣವಾತನ ಸೆಳೆಯ
ಲ್ಕಸಮಬಲು ಬಂದೊಡ್ಡಿತು ಕಾಲನ ಕಣುಸನ್ನೆಯ ಭಟರು ।
ದೆಸೆಗುಬ್ಬಸವೆನೆ ಚಂಡಕರಾಳರ
ವಿಸರಮಹಾಬಲ ಕವಿಯಲು ಕಂಡಾ
ಶಶಿಧರನಾಜ್ಞಾಧಾರರುದರಮುಖಮುಖ್ಯರು ಕೈಗೊಂಡು ॥೧೯॥

ಉದರಮುಖೋರ್ಧ್ವಮುಖರು ದಿಙ್ಮುಖರೆ
ಲ್ಲದ್ಭುತಮುಖದೊಳ್ಕವಿಯಲು ಕಂಗೆ
ಟ್ಟದು ಬೆಂಗೊಡೆ ಕಡಿದೊಟ್ಟವವಂ ಕೊಂಡೆಯ್ದರು ಶಿವಪುರಕೆ ।
ಬದಱಿತ್ತೀ ಬಲಕೋಲಾಹಲಮಂ
ಕೆದರುತ ಕೆಂಡದ ಹೊಡೆಯೊಳ್ಕಂಡದ
ರುಧಿರದ ರೂಪುಗಳೊಳ್ಸೆಮಿಪುರದರಸಿನ ಎಡೆಯೊಳ್ಬಂದು ॥೨೦॥

ಮಡಿಯಿತು ಕಾಲನ ಬಲವೆಂದವತ
ಮ್ಮೊಡೆಯನಿಗೂಳಿಗಗೊಡಲಾ ಧರ್ಮನು
ಘುಡುಘುಡಿಸುತ ಬಂದೀಶನ ಮುಂದತಿಕೋಪೋದ್ರೇಕದೊಳು ।
ಕಡಿಸೀ ದಂಡವ ಮುದ್ರೆಯ ಶಿವುಡಿಯ
ಸುಡಿಸಿದೆ ಕೊಳ್ಳೆಂದೊಪ್ಪಿಸೆ ಧರ್ಮದೊ
ಳೊಡೆಯರು ನಡೆವಡದೇಕೆಮಗಾ ಸದ್ಧರ್ಮದ ಗೊಡವೆತ್ತ ॥೨೧॥

ಕಡುಪಾತಕನಂ ತರಲೆಡೆವಕ್ಕೆ
ಮ್ಮೊಡವೆಂದವನಂ ಸೆಳೆಕೊಂಡೆಮ್ಮಯ
ಪಡೆಯ ಕೆಡಹಿದವರುದ್ದಂಡದಿ ಗಣವರರೆನೆ ಶಿವನವರ ।
ನುಡಿಸಲ್ಕಿವರುಪಟಳಕವ ಪ್ರಾಣವ
ಬಿಡುತಲು ಹರಹರ ಎನಲಾವ್ವರಲಿವ
ರೆಡೆವಕ್ಕೇರುವಡೆದರೆನೆ ಶಿವನಾ ಧರ್ಮನ ಮೊಗನೋಡಿ ॥೨೨॥

ಇಂತಿವರುತ್ತರ ನಿಮ್ಮಯ ಶಿವುಡಿಯ
ಅಂತರವೇನೆನಲಾ ವಹಿಯಂ ಬಿ
ಟ್ಟಂತವನೋಲೆಯ ತೆಗದೀಯಲು ಶಿವ ತಾನೇ ನೋಡುತಿರೆ ।
ಎಂತೆಂತನ್ಯಾಯವ ವರ್ತಿಸಿ ನರ
ಕಾಂತರಕೈದುವದಲ್ಲದೆ ಶಿವಧ
ರ್ಮಾಂತರವಣುವಿಲ್ಲದೆ ಕಡೆಯಲಿ ಪ್ರಹರಾಹರಯೆನಿಪುದಿದೆ ॥೨೩॥

ಕೇಳಿದ ಶಿವನೆಮೆಕರಣದ ಕಾರಣ
ಚಾಳಕರನು ಈ ನುಡಿಯೆಂತಾಯ್ತೆನೆ
ಕಾಲಂತುಂಬಿವನಳಿವಾಗಿವನ ಪ್ರಧಾನಂ ಬಂದಳುತ ।
ಆಳುದಯೆನಗೆಂತಾಹರಗತೆಯೆಂ
ದಾಲಿಸಿ ಪ್ರಹರಾಹರ ಯೆಂದವ ತ
ನ್ನಾಳಾಪದ ಕಳವಳವಾಕ್ಯಾರ್ಥವಾದೆನಲಭವಂ ನಗುತ ॥೨೪॥

ಅಱಿದಾಗಲಿ ಮಱೆದಾಗಲಿ ಪ್ರಾಣವ
ತೊಱೆವಾಗಲಿ ತಡಬಡದಿಂದಂ ಮೈ
ಮಱೆದಾದಡು ಹರಹರಯೆನೆ ದುರಿತಂ ಹರೆಯಲ್ಗಣನಿವಹ ।
ವಱಿದೀತನ ತಂದರು ನೀನವರಿಗೆ
ಕೊಱತೆಯ ಹೊರಿಸಲುಬಾರದು ಭೇದವ
ನಱಿಯದೆ ತಡೆದಿರಿ ಪ್ರಹರಾಹರವಾಗ್ವಿಷಯವೆಮಗೆ ತಿಳುಪಿ ॥೨೫॥

ಧರ್ಮಾಧರ್ಮದ ದಂಡದ ಶಿವುಡಿಯ
ಧರ್ಮಂಗೀಶ್ವರ ಮರಳಿತ್ತೀ ಪರಿ
ಮರ್ಮವನರಿಯದಧರ್ಮವ ಶರಣರು ಸೋಂಕುವುದಿಲ್ಲಾಗಿ ।
ನಮ್ಮವರಾಕ್ಕೆವಿಡಿದವರಂ ಬಿಡು
ಬ್ರಹ್ಮಾದಿಗಳೊಳು ಘಾತಕವುಳ್ಳೊಡೆ
ಕರ್ಮದ ಕಡಲೊಳಗದ್ದೆನೆ ಕೈಗೊಂಡೆಮ ಸುಮ್ಮನೆ ಪೋದ ॥೨೬॥

ಸೌರಪುರಾಣೇ—

ಅಹರಪ್ರಹರೇತ್ಯಾದಿ ನಾಮಸಂಕೀರ್ತನಂ ಸದಾ ।
ಕರೋತಿ ತೇನ ಪುಣ್ಯೇನ ದುಷ್ಕೃತಂ ಭಸ್ಮಸಾತ್ಕೃತಂ ॥೧॥

ಕಾಕತಾಳನ್ಯಾಯದಿ ಹರನಾ
ಮಾಕಾಶಂ ಗಣಮುಖದೋರಿಸಿತಾ
ಸೋಂಕೇ ಶಿವಪುರಗಾಣಿಸಿತಾ ಶಿವಪುರವಕ್ಕುದರಿಂದ ।
ಶ್ರೀಕಂಠನ ಕಾಣಿಸಿತಾ ಫಲವದ
ನೇಕವ ಮಾಡಿ ಗಣೇಶ್ವರಪದವಾ
ಈ ಕಥೆಯಂತರಕಿಂತಾ ಫಲ ನೃಪಕೇಳಿನ್ನೊಂದನಿದ ॥೨೭॥

ಸಾಕ್ಷಿ—

ಪುರಾ ತ್ರೇತಾಯುಗೇ ರಾಜಾ ವಿದಳೋ ನಾಮ ವೀರ್ಯವಾನ್ ।
ಅಥ ಮೃತ್ಯುದಿನೇ ಪ್ರಾಪ್ತೇ ಅಜ್ಞಾತಸ್ಯ ದುರಾತ್ಮನಃ ॥

ಸುರಾಪಸಚಿವಃ ಪ್ರಾಹ ಕಿಂ ಕಾರ್ಯಂ ಮಮ ಚಾದಿಶ ।
ತಂ [1]ವ್ಯತ್ಯು[1] ಕಾಲೇ ದೈತ್ಯೇಂದ್ರ ಆಹರಪ್ರಹರಾಹರ ॥
ಇತ್ಯುಕ್ತ್ವಾಥ ಮಮಾರಾಸೌ ಯಮದೂತಸ್ಸಮಾಗತಃ ।
ಪ್ರಮಾದಾತ್ಕ್ಷುತಕಾಲ್ಲೋಭಾದ್ಭಯಾದಜ್ಞಾನತೋಽಪಿ ವಾ ॥
ಹರ ಇತ್ಯುಚ್ಚರನ್ಮರ್ತ್ಯಸ್ಸರ್ವಪಾಪೈಃ ಪ್ರಮುಚ್ಯತೇ ।
ಗುರುರಾತ್ಮವತಾಂ ಶಾಸ್ತಾ ಶಾಸ್ತಾ ರಾಜಾ ದುರಾತ್ಮನಃ ।
ಅಥ ಪ್ರಚ್ಛನ್ನಪಾಪಾನಾಂ ಶಾಸ್ತಾ ವೈವಸ್ವತೋ ಯಮಃ ।

ಸತ್ಯಮುನೀಶ ಪುರೂರವನಂ ನೋ
ಳ್ಪರ್ತಿಯೊಳ್ಪೈತರಲರ್ಘ್ಯಸುಪಾದ್ಯವ
ನಿತ್ತಾಸನಗೊಟ್ಟಿನ್ನ ಕೃತಾರ್ಥನ ಮಾಳ್ಪ ಕೃತೋತ್ತರವ।
ನಿತ್ತೊಂದುನ್ನತನೋಂಪಿಯ ಕರುಣಿಸೆ
ನುತ್ತಿರೆ ಕೇಳಾದಡೆಯಾದಿಯಲ
ತ್ಯುತ್ತರದಿಗ್ಭಾಗದಿ ಭದ್ರಾವತಿಪುರಮುಂಟದನಾಳ್ವ ॥೨೮॥

ಭದ್ರಾಯುಷ್ಯನೆ ನಿಪ್ಪತಿಭಾಗ್ಯಸ
ಮೃದ್ಧಿಗೆ ಪಟ್ಟಮಹಾದೇವಿನಿಪಳು
ಸದ್ಧರ್ಮಿಣಿಸಹ ಸುಖಮಿರ್ಪುರ್ವಿೀಪಾಲಕನಾಲಯಕೆ।
ರುದ್ರವತಾರದ ದುರ್ವಾಸಂ ಬರ
ಲೆದ್ದಿದಿರ್ಗೊಂಡಾನಂದದೊಳೆಱಗಿ ಸು
ಭದ್ರಾಸನಗೊಟ್ಟುತ್ಯುತ್ಸಾಹದೊಳವರೊಡನಿಂತೆಂದ ॥೨೯॥

ದೇವರು ಬಿಜಯಂಗೈದಚ್ಚರಿ ಸ
ರ್ವಾವನಿಪಾಲತೆ ಸಕಲೈಶ್ವರ್ಯ [2]ಶು
ಭಾವಹ[2] ಭೋಗಸಭಾಗ್ಯತೆ ನೆಲೆಗೊಂ[3]ಡಿ[3]ದೆ ಇದಕಾಂಮುನ್ನ।
ಆವ ಸುಕೃತವನು ಮಾಡಿದೆನೆ ಜ್ಞಾ
ನಾವನಲೋಕನದಿಂದ ನಿರೀಕ್ಷಿತ
ಭಾವದಿ ಕಂಡಾ ಮುನಿಕಂದೆಱೆದು ನಗುತ್ತಾತಂಗೆಂದ ॥೩೦॥

ಕೇಳಾದಡೆ ನೀಮಾಡಿದ ಸುಕೃತದ
ಮೂಲವನುತ್ತರ ಭಾಗದೊಳಧಿಕ ವಿ
ಶಾಲೆಯನಿಪ್ಪನ್ನತಪುರಮುಂಟಾ ಪುರ[4]ಮೆಸೆದಿರುತಿರಲು[4] ।

---

[1] ನ್ನಿತ್ಯ (ಕ.ಖ.ಗ.ಥ). [2] ಸುಖಾವಹ. [3] ಡ (ಘ). [4] ಹೆಸೆವದಿರೆನು (ಕ.ಖ.ಘ.ಥ).

ವಾಳಿಸಿ ಹೊಱಗಿಕ್ಕಿದೊಲಿಹ ವ್ಯಾಧಕು
ಲಾಲಯಗಳ ಕಡೆಗುಡಿಸಿಲೊಳೆಂದುಂ
ಕೂಳಗುಳಱಿಯದ ಲುಬ್ಧಕನಿಹ ತನ್ನವನೊಬ್ಬಳು ತಾನು ॥೩೧॥

ಆವ ಖಗ ಮೃಗ ಜಲಚರ ಪ್ರಾಣಿಯ ಕೊಂ
ದವಳಿಗೆ ತಂದಿತ್ತದಱಿಂ ಜೀವಿಸು
ವವನೊಂದಿನ ಬೆಳಗಹ ಜಾವದೊಳೆದ್ದವಳೊಡನಿಂತೆಂದ ।
ಸವಿಮೃಗ[1]ವನು[1]ಕೊಂಡೀಗಳೆ ಬಹೆ ನೀ
ನವರಂಗವನಳವಡಿಸೆನುತಾಗ್ರದಿ
ಕವಲಂಬನು ಧನು ಬಲೆ ಬಡಿಕೋಲನು ಕೊಂಡವ ಪೋಪಾಗ ॥೩೨॥

ಶಂಖಧ್ವನಿ ಭೇರೀನಾದಂಗಳು
ಶಂಕರನಾಲಯದಲ್ಲೆಸೆವುತ್ತಿರೆ
ಕಂಕುಳ ಬಡಿಕೊಳುತೀ ಶಕುನಂ ಲೇಸೆನುತಾಲಿಸಿದ ಫಲ।
ದಂಕೆಯಕೇಳರಸಾ ಆ ವ್ಯಾಧನು
ಭೋಂಕನೆ ಬರುತಾರಣ್ಯವ ಹೊಕ್ಕು ಭ
ಯಂಕರರೂಪಿಂದಱಸುತ ಬರುತೊಂದೇನುವ ಕಾಣದವ ॥೩೩॥

ಅಡವಿಯ ತಿರುಗಿದನಿನನಸ್ತಾದ್ರಿಯ
ಕಡೆಗಾಂಬನ್ನವರೇನುವ ಕಾಣದೆ
ಕಡುಬಳಲವ ಬರುತೊಂದು ಪುರಾಣಸರೋವರವಿರೆ ನೀರ ।
ಕುಡಿದವ ತಿತ್ತಿಯತುಂಬ್ಯಾ ಸರಸಿಯ
ತಡಿಯ ಮರನನೇಱ್ಯಾ ಮರದೊಳು ತೋ
ಹಿಡಲಾ ಸರಿತದೊಳಿರ್ದುದು ಲಿಂಗಾಕಾರವನಾದ್ಯೆಂದ ॥೩೪॥

ಆದಿನ ಮಾಘದ ಕಡೆಯ ಚತುರ್ದಶಿ
ಯಾದುದು ತೋಹಿನೊಳಿರ್ದವ ಕಣ್ಮರೆ
ಯಾದೆಲೆಗಳಹರಿದಾ ಕರವಿ[2]ಸು[2]ಗೆಯ ಸರಿತದೊಳಿಳಿವಿಡಲು ।
ಆ ದ್ರವಜಲ[3]ಬಿಂ[3]ದೀಯೆಲೆ ಲಿಂಗಶಿ
ರಾದಿಗೆ ಸೂತ್ರಿಸಿ ಬಿಲ್ಲುಂಬೆಱಗಿನ
ಭೇದವೆ ಜಾಗರವೆನೆ ಬೆಳಗಾಗಲ್ಕಿಳಿದಾ ಮರನಡಿಯ ॥೩೫॥

[1] ಮಂ (ಗ.ಫ.ಛ.ಕ). [2] ಡಿ (ಛ). [3] ಬಂ (ಕ.ಖ.ಚ).

ಸಾದಿತಲಿಂಗದ ಪೂಜೆಯೊಳಿರೆ ಕಂ
ಡಾದರಿಸವ ಬೇಂಟೆಯೊಳೇನುಂ ತನ
ಗಾದುದ ಕಾಣದೆ ಕಂದಫಲಂಗಳ ತಂದೇಱಿಸಿಕೊಂಡು ।
ಪೋದನವಂ ಮನೆಗೈಸಲ್ಕಂತಾ
ವ್ಯಾಧನ ಸತಿಯುಂ ಬಂದಳು ಇಱುಳು ಶಿ
ವಾಧವನಾಲಯದೊಳು ಶಿವರಾತ್ರಿಯ ಜಾಗರವನು ನೋಡಿ ॥೩೬॥

ತಂದಪ್ರಸಾದದ ಕಂದಫಲಂಗೊಡ
ಬಂದವ ಕಂಡವಳೆಂತಾಯ್ತೀ ಬೇ
ಟೆಂದಡೆಥಾರ್ಥವ ಪೇಳಲು ತಾನಿರ್ದಂದವನವಳುಸುರಿ ।
ಎಂದೆಂದೀದಿನವೀ ಪರಿ ಮಾಡುವೆ
ವೆಂದವರಿಬ್ಬರು ಕಲ್ಪಿಸಿಕೊಂಡಾ
ನಂದದೊಳಾ ಶಿವಲಿಂಗಪ್ರಸಾದವ ಪಾರಣೆಮಾಡ್ಯವರು ॥೩೭॥

ಮತ್ತೆಂದಿನ ಪರಿಯಲಿ ಬೇಂಟೆಯನಾ
ಡ್ಯತ್ಯಧಮಾಚಾರದಿ ನಡೆವುತ್ತಿರೆ
ಮೃತ್ಯುಮುಖಂದೋಱಿತಃ ಕಲ್ಪನೆ ತೀರವಗೆಯುದೇನೆಂಬೆ ।
ಮತ್ತಿತ್ತೆಮಧೂತರು ಕೈಕಾಲ್ಗಳ
ನೊತ್ತಿಮುಱಿದ[1]ರೆ[1]ದೆ ಬದಿಬಾಯ್ಬುಸುರೊಳು
ಕತ್ತರಿಯಂ ಕೈಗೊಳಿಸುತ ಕೊರಳಿಗೆ ಪಾಶವನಿಕ್ಕವರು ॥೩೮॥

ತಲೆಪಱಿಯಲ್ಕೆಳೆವುತ್ತಲಧೋಗತಿ
ಗಿಳಿಯಲು ನೂಂಕುತ್ತಿರೆ ಶಿವಗಣ ಬಂ
ದೆಲೆಲವನೆಮ್ಮವ ಬಿಡಿ ಬಿಡದೊಡೆ ಕಡಿವಡೆವಿರೆನುತ್ತವನ ।
ಸೆಳೆಯಲ್ಕಿವರೆಳೆಯಲ್ಮಥನಂ ಮಸ
ಗಳಿಯಿತು ಕಾಲನ ಪಡೆಯಾ ಶಿವಗಣ
ನಲದಾಡುತ್ತೊಯ್ಯಲು ಹುಯ್ಯಲು ಮುಟ್ಟಲ್ಕೆಮರಾಜೇಂದ್ರ ॥೩೯॥

ಭುಗಿಲೆಂದುರಿದೆದ್ದೇಳುತ ದಂಡವ
ನೆಗವುತಲವುಡಂ ಔಂಕುತರೌದ್ರದ
ನಗ ನಡೆಗೊಂಡೊಲು ನಡೆದ ಸದಾಶಿವನೆಡೆಗೆಮ ಕೋಪದೊಳು ।

---

[1] ರೈ (ಕ).

ಹೊಗೆಮುಖದಿಂ ಕೈಮುಗಿವುತ ಬೇಱೊಂ
ದಘಕುಲವೇಕೀ ಶಿವಲೋಕವೆ ತಾ
ನಗಣಿತ ಪಾಪಿಗಳಾಶ್ರಯವಾಯ್ತೀ ಗಣಪರ ದೆಸೆಯಿಂದ ॥೪೦॥

ಸಾಕಾ ನರಕವನವರಿಗೆ ಕೊಡಿ ಮು
* ದ್ರಾಕರಣವ ದಂಡವನೊಡೆಯರ್ನೀವ್ *
ಸ್ವೀಕರಿಸಂಜುವೆನವರುಪಟಳಕಾ ಕಲ್ಪಾಂತರ ನರಕಿ ।
ನಾಕ್ಕೈದರ್ಬುದಪ್ರಾಣಿಯ ಹತಿಸಿದ
ಕೀಕಟಬೇಡನ ತರೆ ಬಲವೆಲ್ಲವ
ಕಾಕಟಕಡಿದೊಟ್ಟಿದರೆನಲಭವ ನಿರೀಕ್ಷಿಸಿದನು ಗಣರ ॥೪೧॥

ಏಕನ್ಯಾಯವ ನೆಗಳ್ದಿರಿ ನಂದಿಮು
ಹಾಕಾಳಾದಿಗಳೆನೆ ಶಿವಧರ್ಮದ
ಲೇಖನವನು ಚಿತ್ತೈಸಿರೆ ಶೂನ್ಯತರಾಲಯಲಿಂಗಕ್ಕೆ ।
ಶೀಕರಜಲಕಿಂಚಿದ್ದಳವಾಯ್ಕಲ
ನೇಕ ಫಲಂಗಳವಂತಲ್ಲೀತನು
ಭೀಕರಗಹನದಿ ಕಲ್ಪಾಂತರನಿ[1]ಷ್ಪೂಜಿ[1]ತ ಲಿಂಗಕ್ಕೆ ॥೪೨॥

ಏಕೀಭಾವಮದೆಡೆವಱಿಯದೆ ಕುಜ
ಶಾಖಾಗ್ರದಿ ನಿಂದಗ್ರೋದಕಥಾ
ರಾಕೃತಿ ಬಿಲ್ವದಳಂಗಳಶೇಷದಿ ಒಂದಿರುಳನವರತ ।
ಶ್ರೀಕಂಠನ ಶ್ರೀಮಕುಟಾರ್ಚನೆಗೈ
ದಾಕಥನಾರ್ಥದಿ ದಿವ್ಯಾಂಗವನಿವ
ರಾಕರಿಸನುಗೊಂಡೊಯ್ಯಲು ಸೆಳೆತಂದುದು ಗಣವೆನುತಂತಾ ॥೪೩॥

ಶಿವಧರ್ಮೇ—

ಕಿಂಚಿದ್ದಳಂ ವಾ ಚುಳಕೋದಕಂ ವಾ ದೇವೇಂದ್ರಲಕ್ಷ್ಮೀಂ ದಧತೇ ದಧಾತು ಆದಾನದಾನೇ ಜಗದೇಕಬಂಧು ಮೂರ್ಖೋ ಭವೇತ್ ಸರ್ವವಿದೇವ ದೇವಃ ॥

ಬೇಡನನಭವಂಗೆಱಗಿಸಲಾತನ
ನೋಡುತಲೆಂತೆಂತೆನುತಾ ವ್ಯಾಧನು
ಮಾಡಿದ ಪೂಜೆಯ ಮಗುಳ್ದಾದರಿಸ್ಯದರಾದ್ಯಂತಂಗೇಳ್ದು ।

---

* ಮುದ್ರಾಕಾರಣವುದ್ದಂಡವಂ ನೊಡಯರನೀವ್. [1] ಷ್ಪೂಚಿ (ಕ.ಖ).

ಗಾಡಿಗತನವನು ಮಾಡೂಳಿಗವನು
ಈಡೇರಿಸಬಂದೆಯಯನುತೆಮನ ವಿ
ಭಾಡಿಸಿ ಶಿವನುಡಿದೀತನ ಮಡದಿಯ ಕಡೆಗೈದದಿರೆಂದು ॥೪೪॥

ಕೋಪಿಸಿ ಯಮುನನು ಕಳುಪ್ಯಾ ಲುಬ್ಧಕ
ನಾ ಪತ್ನಿಯ ತರಿಸ್ಯಾ ಪೂಜಾಫಲ
ದೀಪಕವನು ನೋಡೊಲಿದೀ ತಿಥಿಯೊಳು ಶಿವಗಣ ನೀವೆಲ್ಲ।
ಈ ಪರಿಯಲಿ ಶಿವರಾತ್ರಿಯು ಮಾಡಿದ
ಗಾಪದವನು ನಾವಿತ್ತೆವೆನುತ್ತ ನಿ
ರೂಪಣಗೈದವರಿಗೆ ಗಣಪದವಿಯು ಕೊಟ್ಟ ಸದಾಶಿವನು ॥ ೪೫ ॥

ಪಾಲಿಸಿಕೊಂಡಿರುತೊಂದಿನಲವರನು
ಶೂಲಿ ಕರೆದು ಶಿವರಾತ್ರಿಯ ಫಲವನು
ಭೂಲೋಕಕ್ಕುಸುಹೆಂದೊಲಿದಭಯವ ಕೊಟ್ಟಟ್ಟಿದನಂತಾ।
ಮೂಲಿಗ ಬೇಡನು ನೀ ನಿನ್ನರಸ್ಯಾ
ಕಾಲದ ಬೇಡಿತಿ ಶಿವಪೂಜೆಯ ಫಲ
ದೇಳಿಗೆಯೆಂದಾ ಭದ್ರಾಯುಷ್ಯಂಗಜುಪಿದ ದೂರ್ವಾಸ ॥ ೪೬ ॥

* ಅದಕಚ್ಚರಿಗೊಂಡಾನ್ನಪ ವ್ರತದ
ಭ್ಯುದಯವ ಪಡೆದೊಲು ನೀನುಂ ಮಾಘದ
ತುದಿಯ ತ್ರಯೋದಶಿಮಿಶ್ರಚತುರ್ದಶಿಯೊಳು ಸತಿ ಸುತಮಿತ್ರ।
ವಿಧಿಸಹಿತಿರುಳು ನಿರಂತರ ಲಿಂಗದ
ಪದವಿಡಿದರ್ಚಿಸಲಾ ಫಲವಗಣಿತ
ದೊದಹೆಂದಜುಹಿದ ನಿತ್ಯಪುರೂರವಗಂತಾ ಸತ್ಯಮುನಿ ॥ ೪೭ ॥

ಶಿವಧರ್ಮದಲ್ಲಿ —

ಅಶ್ವಮೇಧಸಹಸ್ರಾಣಾಂ ಶತಂ ಕೃತ್ವಾ ತು ಯತ್ಫಲಂ ।
ಶಿವರಾತ್ರಿವ್ರತಂ ಕೃತ್ವಾ ತತ್ಫಲಂ ಸಮವಾಪ್ಯತೇ ॥

ರಾಜಸೂಯಾಯುತಂ ಕೃತ್ವಾ ಯತ್ಫಲಂ ಲಭತೇ ನರಃ ।
ಶಿವರಾತ್ರಿವ್ರತಂ ಕೃತ್ವಾ ತತ್ಫಲಂ ಸಮವಾಪ್ಯತೇ ॥

ಬ್ರಹ್ಮಹತ್ಯಾಯುತಂ ಕೃತ್ವಾ ಸ್ತೇಯಾನಾಂ ಪ್ರಯುತಂತಥಾ ।
ಶಿವರಾತ್ರಿವ್ರತಂ ದೃಷ್ಟ್ವಾ ಸದ್ಯೋ ಮುಚ್ಯೇತ ಪಾತಕೈಃ ॥

---

* ಅದಕವರಚ್ಚರಿಗೊಂಡಾವ್ರತವ । ಭ್ಯುದಯ.

ಸುರಾಪಾನಸಹಸ್ರಾಣಿ ಭ್ರೂಣಹತ್ಯಾಯುತಾನಿ ಚ ।
ವೀರಹತ್ಯಸಹಸ್ರಾಣಿ ನಶ್ಯಂತಿ ವ್ರತದರ್ಶನಾತ್ ॥

ವೇದಸಾರೇಣ ಸಂಪೂಜ್ಯ ಸರ್ವೇ ದೇವತ್ವಮಾಗತಾಃ ।
ವಿದ್ಯಾಸಾರೇಣ ಮಂತ್ರೇಣ ಶಿವರಾತ್ರಂ ಮಹೇಶ್ವರಂ ॥

ಶಿವರಾತ್ರವ್ರತಂ ಕೃತ್ವಾ ವಿಷ್ಣುರ್ವಿಷ್ಣುತ್ವಮಾಗತಃ ।
ಅಷ್ಟೌ ಚ ವಸವಃ ಪೂರ್ವಂ ರುದ್ರ ಏಕಾದಶಸ್ಮೃತಃ ॥

ವೇದಸಾರೇಣ ಸಂಪೂಜ್ಯ ಸರ್ವೇ ದೇವತ್ವಮಾಗತಾಃ
ಮಾಘಕೃಷ್ಣಚತುರ್ದಶ್ಯಾಂ ರಾತ್ರೌ ಜಾಗರಣಾನ್ವಿತಂ॥
ವ್ರತಂ ಕುರ್ಯಾನ್ಮಹಾಪ್ರಾಜ್ಞೈಃ ಪ್ರಾಜಾಪತ್ಯಪದಪ್ರದಂ ।

ಪೂರ್ವಾರ್ಜಿತಮಿಂತಿರುವದುಯೆಂದಾ
ದೂರ್ವಾಸ ಮುನೀಶ್ವರ ಕಲ್ಪಿಸಿದನು
ಪಾರ್ವತಿಪತಿಯನು ಒಲಿದರ್ಚಿಸಿದವ ದೇವನೊ ಮಾನವನೊ ।
ಗೀರ್ವಾಣನೊ ಯೆಂಬುದ ನೀನೇ ತಿಳಿ
ಪಾರ್ವರ ಪಾತಕನುಡಿಗೇಕೆ ವೃಥಾ
ಚಾರ್ವಾಕತೆ ಬಿಜ್ಜಳನೃಪಯೆನುತಂ ಮತ್ತೆಂದನು ಬಸವ ॥ ೪೮ ॥

ಪಾತಕಜಾತದೊಳೊರ್ವ ದರಿದ್ರಂ
ಪ್ರೇತಸ್ಥಾನದೊಳಱೆವೆಣನಾಗಿರೆ
ಭೂತಿಯ ಹೊರಳಿದನಾಯಾಕ್ಷಣಬಂದವನಾ ಹಣೆಯ ।
ತಾ ತುಳಿಯಲ್ಕಾ ಭಸ್ಮವ ಕಂಡೆಮ
ದೂತರು ಮುಟ್ಟಲ್ಕಂಜಿರೆ ಶಿವಗಣ
ವಾತನ ಶಿವಪುರಕೊಯ್ದರು ನಿಜಭಸ್ಮಾಂಗಾಧಾರಿಯನು ॥ ೪೯ ॥

ಶಿವರಹಸ್ಯ—
ಕಶ್ಚಿತ್ಕಂಠಗತಪ್ರಾಣಃ ಕಾಲಪ್ರಾಪ್ತೋ ಮೃತೋಪಮಃ।
ಶೇತೇ ಶ್ಮಶಾನೇ ವಿವಶೋ ದಸ್ಯು ಶ್ರಮವಿಶೋಧಿತಃ ॥
ಭಸ್ಮೋದ್ಧೂಳಿತ ಸರ್ವಾಂಗಮಾಪಾದತಲಮಸ್ತಕಂ।
ರೋಮರೋಮಭವೇಲ್ಲಿಂಗಂ ಸಕಾಯಂ ಲಿಂಗಮುಚ್ಯತೇ ॥

ಮತ್ತೊಂದಂ ಕೇಳಾದಿಯೊಳೊರ್ವ ನೃ
ಪೋತ್ತಮನಾಯ್ಗಳ ಹಾಸಕೆ ರತ್ನವ
ಕೆತ್ತಿಸಿ ಬೇಂಟೆಗೆ ಹೋಗಲ್ಕೊಡನೊಬ್ಬಾಧಮ ಬೇಡರವ।

ಸುತ್ತಿ ಬಳಲಿ ಸಾರಿದಮರಗಾ[1]ಯ್ಮ[1]ರ
ವಿತು ಗಳೊಕ್ಕಿರ ಲಂಬಿನಲವ ಹೊಸ
ದುತ್ತಮರತ್ನಮಿದೆನ್ನಯ ನಾಯ್ಗೆಸುತವ ಕೊರಳೊಳು ಕಟ್ಟಿ ॥ ೫೦ ॥

[2]ತ್ರ[2]ಸ್ತರಿಯಂ ಮಾಡ್ತಿನುತಿರುತಾ ನಾ
ಯ್ಸತ್ತಡೆ ಕುಂಭೀಪಾತಕ ಹೊಗಿಸುವ
ಮೃತ್ಯುವಿನವರಂ ನೂಂಕಿ ಸದಾಶಿವಭೃತ್ಯರು ಎಳೆದದನು ।
ಉತ್ತರಮುಖಗೈಯಲು ಕುಲಕೋಟಿಯ
ಮೊತ್ತವ ಬಿಡುತದು ಧ್ವನಿಗೆಯ್ಯಲು ಕೇ
ಳುತ್ತೆಮಪಾಶದ ಹಾಸುಹರಿಯೆ ಸ್ವರ್ಗಕ್ಕೊಡನೈದಿದವು ॥ ೫೧ ॥

ಸಿಗ್ಗಾಗ್ಯಮ ಶಿವನಲ್ಲಿಗೆ ಬಂದಾ
ಸಗ್ಗಮದಾರ್ನಾಯ್ನರಕಮದಾರ್ಶರ
ಣರ್ಗಳ ದುರ್ಗುಣಕಂಜುವೆ ಪಾಶದ ಹಾಸವ ಹರಿಗೊಯ್ದು ।
ವೆಗ್ಗಳನರಕದ ನಾಯ್ಗಳನೆಲ್ಲವ
ಸಗ್ಗಕೆ ತಂದರೆನಲ್ನಗುತಂತಾ
ಭರ್ಗನವರ್ಗಳ ಕೇಳಲು ಶಿವಗಣವೆಂದುದೆಥಾರ್ಥವನು ॥ ೫೨ ॥

ಮೂಢತೆಯಿಂದೆ ಕುಜಾತನು ಬೇಟೆಯ
ನಾಡುವ ಕುನ್ನಿಯ ಕೊರಳೊಳ್ಕಟ್ಟಲು
ಕೂಡಿತು ಶಿವಪುರಮಂ ರುದ್ರಾಕ್ಷಿಯ ಸೋಂಕಿನ ಸುಲಭನೃಪ।
ಗೂಢಷಡಕ್ಷರ ಮಂತ್ರದಿ ಶ್ರೀಗುರು
ಮಾಡಿದ ದಿವ್ಯಶರೀರಾಗಮದಾ
ರೂಢದ ಭಸಿತದ ರುದ್ರಾಕ್ಷಿಯ ಲಿಂಗಾಂಗಿಗಳಾರ್ನೋಡ ॥ ೫೩ ॥

ಮಾನವಪುರಾಣೇ—

ರುದ್ರಾಕ್ಷಂ ಕಂಠಮಾಶ್ರಿತ್ಯ ಶ್ವಾನೋಽಪಿ ಮ್ರಿಯತೇ ಯದಿ ।
ಸೋಽಪಿ ರುದ್ರತ್ವಮಾಪ್ನೋತಿ ಕಿಂಪುನರ್ಮಾನುಷಾಧಮಃ ॥ ೩ ॥

ಉತ್ತಮಾಂ ವೃತ್ತಿಮಾಶ್ರಿತ್ಯ ನೀಚವೃತ್ತಿ ಸಮಾಶ್ರಿತಃ ।
ಆರೂಢಪತಿತೋ ಜ್ಞೇಯಸ್ಸರ್ವಕರ್ಮ ಬಹಿಷ್ಕೃತಃ ॥ ೪ ॥

ಲುಲುಂಬಲಾದಯಸ್ಸರ್ವೇ ಶೃಣುಧ್ವಂ ಮಮ ಭಾಷಿತಂ ।
ರುದ್ರಾಕ್ಷಧಾರಣಂ ದೃಷ್ಟ್ವಾ ದೂರಾನ್ನಮತೆ ಭಟಃ ॥ ೫ ॥

---

[1] ಮ (ಗ,ಘ.ಛ). [2] ಕ (ಗ), ತ (ಕ.ಖ).

ರುದ್ರಾಕ್ಷಂ ಕಂಠಮಾಶ್ರಿತ್ಯ ಸ್ವಾನುಗಃ ಕಸ್ಥಿತೋ ಭಯೇ ।
ಸೋಽಪಿ ರುದ್ರತ್ವಮಾಪ್ನೋತಿ ಕುಲಕೋಟಿ ಸ್ಸಗಚ್ಛತಿ ॥ ೬ ॥

ಏಡುಳ್ಳಾವಿನ ಹಾಲನು ಹೊಲೆಯರ
ಪೀಡೆ ಕುನಾಯ್ದ್ವೈವಂಗಳು ಹಳಿವೊಲು
ರೂಢದ ನಿಜಶಿವಯೋಗಿಯ ಘನತೆಯನಱಿಯದ ಕಪಿಕಟಕ ।
ಏಡಿಸಿದಂತೇಡಿಸಿ ನರಕದೊಳ
ಕ್ಕಾಡುವ ಬುದ್ಧಿಯ ಬಿಡು ಕ್ಷತ್ರಿಯರಿಗೆ
ಖೋಡಿಕಣಾ ಬಿಜ್ಜಳನೃಪ ಶಿವಸಮಯಕೆ ಸೀವರಿಸಿಹವು ॥ ೫೪ ॥

ಇಂದ್ರಗೆ ದೂರ್ವಾಸ ಮಹಾಮುನಿರಾ
ಜೇಂದ್ರನು ನಲ್ಮೆಯೊಳೀಶಪ್ರಸಾದದ
ಮಂದಾರದ ಮಾಲೆಯ ಕೊಡಲಾತನುದಾಸೀನದೊಳದನು ।
ಗಂಧಗಜದ ಕೋಡಿನೊಳಿಕ್ಕಲ್ಕಾ
ಸಿಂದುರಹರಿದೀಡಾಡಲು ಮುನಿ ಕಂ
ಡಂದವನೈಶ್ವರ್ಯವ ಕಡಲೊಳು ಕಲಸಿದನುಳಿದವರೇನು ॥ ೫೫ ॥

ಸಾಕ್ಷಿ—

ಲಿಂಗಭಕ್ತಸಕೃದ್ದ್ವೇಷೀ ಸಕೃಲ್ಲಿಂಗಸ್ಯ ದೂಷಕಃ ।
ಯುಗಕೋಟಿ ಕ್ರಿಮಿರ್ಭೂತ್ವಾ ವಿಷ್ಟಾಯಾಂ ಜಾಯತೇ ಪುನಃ ॥ ೭ ॥

ಶಿವಭಕ್ತಸ್ಯ ನಿಂದಾಯಾಂ ನರಃ ಪಾಪೌಘಸಂಯುತಃ ।
ಶ್ವಾನಯೋನಿಶತಂ ಗತ್ವಾ ಚಂಡಾಲಗೃಹಮಾಚರೇತ್ ॥ ೮ ॥

ದಕ್ಷನು ಹರನಿಂದೆಯ ಮಾಡಲು ನೊಸ
ಲಕ್ಷರದೊಡೆಯಿತು ಆಮುಖಮುಖಸಂ
ರಕ್ಷಣದೈವಗಳಳಿದಭಿಮಾನಂ ಗೆಟ್ಟುರೆ ಕಟ್ಟೊಡೆದು ।
ನಿಕ್ಷೇತ್ರಕೆ ನೆರೆಯಿತು ಭೃಗುಶಾಪ ತ
ಪಕ್ಷಯಮಾಡಿತು ಪಾತಕಮುನಿಗಳ
ಪಕ್ಷೀಕರಿಸದಿರರಸ ಶಿವೈಕ್ಯರ ನಿಂದೆಯನಂತಾಗಿ ॥ ೫೬ ॥

ಸಾಕ್ಷಿ—

ದಕ್ಷಯಜ್ಞವಿನಾಶೋಽಪಿ ವೀರಭದ್ರೇಣ ತಾಡಿತಃ ॥
ಭಸ್ಮರಾಶಿನಿಮಗ್ನಾಂಗಃ ವಿಷ್ಣೋ ರಕ್ಷಿತ ಶ್ರಿವಾತ್ ॥ ೯ ॥

ಎನಲಳುಕ್ಕರಸನು ವಿಪ್ರಸಭೆಯು ಮುಖ
ವನು ನೋಡಲ್ಕೆಂದರು ಕಥೆವಾತುಗ
ಳನುಕೂಲತೆಯಿದು ಮಂತ್ರನೆವದಿ ವೋರೆಯ ಮೇಲುಗುಳಹವು।
ಕನಸಿನ ಕನ್ನಡಿ ನೋಡಲ್ಕಿಲ್ಲಹಿ
ಗೆನಿಸುದಿನಂ ಹಾಲೆಱೆದಡೆ ವಿಷಮಂ
ತಿನಿದಹುದೇ ಪಶುವಂ ತಿಂದಾ ಹುಲಿ ಕಱೆವುದೆ ಕೊಡವಾಲ ॥೫೭॥

ಬಚ್ಚಲನೀರೊಳು ತಾವರೆ ಬೆಳೆವುದೆ
ಉಚ್ಛಿಷ್ಟಾನ್ನವುಪಾರಕೆ ಸಲುವುದೆ
ಕುಚ್ಛಿತಕುಲಜನ ಭಕ್ತಿಯನೀಶನು ಮೆಚ್ಚಿದ ಮರುಳೊಡನೆ।
ಕಿಚ್ಚಹಾಯ್ವ ಪರಿಯಲ್ಲದೆ ಬಾಹ್ಯದ
ಹೆಚ್ಚಿಗೆ ಹೊಲೆ[1]ವೆರೆಗಡೆ[1]ಯಲ್ಕೈಕಾ
ಲ್ಬಿಚ್ಚಿಕೊಳುವವೈಶ್ಯಂತ್ಯಜಸಂಕರವಳಿವುದ ಯೆನುತಿರಲು ॥೫೮॥

ಉತ್ತಮನಧಮವನಾಚರಿಸುವುದಧ
ಮೋತ್ತಮದಾಚಾರದಿ ನಡೆಯುತ್ತಮ
ಉತ್ತಮ ಕೋಕರಿಸನ್ನೃತದ ಕರ್ಮದ ಹಿಂಸೆಯು ಮಧುಪಿಶಿತ।
ಮಿತ್ತರ ಹೊಲೆಹೊಲೆಮಾತಿಗೆ ಎಲೆ ಭೂ
ಪೋತ್ತಮ ನಿಂದೆಯ ಬಂಧನಕೇಕೆ ನಿ
ಮಿತ್ತಕನಹೆ ನಿಜನಿರ್ಮಲಶಿವನಾಗೈಯ್ಯನೆ ಶಿವ ಕೇಳ ॥೫೯॥

ಹೊಲೆಯರು ಮುಟ್ಟಿದ ಹಾರವ ಜಲದಿಂ
ಹೊಲೆದೊಳೆದುತ್ತಮನಹನೋ ಮೇಣವ
ಹೊಲೆಯನಹನೋ ಪೇಳಾ ಪರಿ ನಮ್ಮಾಗಮದಲಿ ಶ್ರೀಶಿವನ।
ಕೆಳೆಗಣ್ಣಾಗರ್ಚಿಸುವೊಲ ದೀಕ್ಷಿತ
ಸುಳಿದಡೆ ಕಂದಫಲಂ ಕೆಲಜನ್ಮಗ
ಳೊಳು ಚರಿಸುವುದದ ಶಿವಸೋಂಕಿಂದಲೆ ಕಳೆದನೆ ಶಿವ ಕೇಳ ॥೬೦॥

ಸಾಕ್ಷಿ—

ಅರ್ಚನಾದಿಕ್ರಿಯಾಕಾಲೇ ಪ್ರಚ್ಛನ್ನಪಟಮುತ್ತಮಂ
ಪಾಪೀ ಕೋಽಪಿ ಪರಿಭ್ರಷ್ಟಃ ನಾಸ್ತಿ ಕೋಽನ್ಯತದೂಷಕಃ।
ದುರ್ಮುಖಶ್ಚ ದುರಾಚಾರೀ ಮೂರ್ಖಶ್ಚಗುರುನಿಂದಿತಃ
ಪ್ರಮಾದಾದ್ದರ್ಶನಂ ಕೃತ್ವಾ ಪೂಜಾಹೀನಂ ತು ನಿಷ್ಫಲಂ॥

[1] ವರೆಗಡೆ (ಧ.ಗ).

ಕುಲವೆರಡಿಹಪರವೆರಡಱೊಳಗಡಗಿಹ
ನೆಲೆಯಱಿವಡೆ ಋಷಿ ನದಿಮೂಲಂಗಳ
ಬಳಕೆಯೊಳಱಿ ಭವಿಽಽಂತ್ಯಜ ಶಿವಭಕ್ತನೆಯುಗ್ರಜನೆಂದು।
ತಿಳಿವುದು ಮೃಗಮದಪಯವಧಮಸ್ಥಳ
ದೊಳು ಜನಿಸವು ಗುಣದಿಂ ಶುದ್ಧತೆಯಂ
ತಳೆದುವು ಗಡ ದುಷ್ಕುಲಕರ್ಮಗಳಂ ಕಳೆಯದೆ ಶಿವಸೋಂಕು ॥೬೧॥

ಎತ್ತಣ ಕುಲಗಿಲಜದರವಿಯಧಮರು
ಹೊತ್ತಿಹ ಕುಂಭದ ಜಲದೊಳು ಬಿಂಬವ
ವಿಸ್ತರಿಸಲು ಕುಲಹೀನನೆತರೆಗಲ್ಲಂತಿಹುದೇ ಪರುಷ।
ಉತ್ತಮವಜ್ರವನುಗುರಿಂ ಚಿವುಟಿದ
ಡಿತ್ತಂಡಹುದೇ ಮೇರುವ ಹೆಳವನು
ಕಿತ್ತಿಡಬಹುದೇ ನಿಜಲಿಂಗಾಂಗಿಗೆ ನಿಂದೆಗಳೊಂದುವವೆ ॥೬೨॥

ನೀರ ಕ್ಷೀರವ ಬೆರೆಸಿರೆ ಹಂಸೆ ಸು
ಧಾರಸವಱಿವೊಲು ಕುಕ್ಕುಟ ಹೊಱಸುವಿ
ಚಾರವ ಬಲ್ಲವೆ ಲಿಂಗಾಂಗಿಗಳಂಗವೆ ಸಂಗಮನೆಂಬ ।
ಕಾರಣವವರೊಡೆಯರು ನಾವ್ ಭೃತ್ಯಾ
ಚಾರದ ಕಿಂಕರರಲ್ಲಿಯು ಇವರೆ
ಮ್ಮಾರಾಧ್ಯರು ಶುದ್ಧಮೃತಾಂಗದ ಸುರಧೇನು ಕರಸ್ಥಲರು ॥೬೩॥

ಅಂತಾಗಿವರೇ ಮಾತಾಪಿತರೆಮ
ಗಂತಾಗಿವರೇ ಶಿಷ್ಟವಿಶಿಷ್ಟರು
ಅಂತಾಗಿವರೇ ಗುರುಲಿಂಗವು ಜಂಗಮ ಪರತತ್ವಮುಖ।
ಅಂತಾಗಮರರ ಹಯನಂತಿವರ
ಭ್ಯಂತರದಮೃತಪ್ರಸಾದಗೊಡುವ ಕೈ
ಯಾಂತುವನೋಡಾ ನೃಪ ನಿನ್ನಂತಸ್ತಾಪವ ಬಿಡಿಸುವೆನು ॥೬೪॥

ವಚನ––

ತಂದೆ ನೀನು, ತಾಯಿ ನೀನು, ಬಂಧು ನೀನು, ನೀನಲ್ಲದೆ ಮತ್ತಾರು ಇಲ್ಲವಯ್ಯ ಎನಗೆ ಕೂಡಲಸಂಗಮದೇವಾ ಹಾಲಲ್ಲದ್ದು, ನೀರಲ್ಲದ್ದು ॥೧॥

ಪುನರಪಿ ವಚನ—

ಚತುರ್ವೇದಿಯಾದಡೇನು, ಲಿಂಗವಿಲ್ಲದವ ಹೊಲೆಯನು; ಶ್ವಪಚನಾದರೇನು, ಲಿಂಗವಿದ್ದವನೆ ಕುಲಜನು, ಆತನ ನುಡಿಗಡಣವೆ ಲೇಸು, ಆತನ ಪ್ರಸಾದವೆನಗಮೃತಸೇವನೆ.

ಗ್ರಂಥ:—

ನ ಮೇ ಪ್ರಿಯಶ್ಚತುರ್ವೇದೀ ಮದ್ಭಕ್ತಶ್ಶ್ವಪಚೋಽಪಿ ವಾ।
ತಸ್ಮೈದೇಯಂ ತತೋ ಗ್ರಾಹ್ಯಂ ಸ ಚ ಪೂಜ್ಯೋ ಯಥಾಸ್ಮ್ಯಹಂ ॥

ಕೂಡಲಸಂಗಮದೇವಾ, ನಿಮ್ಮ ಪೂಜಿಸುವಾತನೆ ಉತ್ತಮನು, ನಿಮ್ಮ ಪೂಜೆಯ ಮಾಡದಾತನೆ ಶುದ್ಧಹೊಲೆಯನು ॥೨॥

ಎನುತಂತಾಡುತ ಹಾಡುತ ಬಸವನು
ನೆನೆದನೆನಹ[1]ದಾ[1]ಗಮನಿಗಮಂಗಳಿ
ಗನುಪಮವಖಿಳಪ್ರಾಣಿಗಳಡಿ ಗಜದಡಿಯೊಳಡಗುವಂತೆ।
ದನುಜ ಮನುಜ ದಿವಿಜರ ಬಗೆವಜ್ಜೆಗ
ಳನಿತುವನಡಿಯೊಳು ಮಡಗಿಪ ಭಕ್ತಿಯ
ಘನಗಜವಾಹಕಮುನ್ನತಭಾವದ ಬಲುಮೆಯ ಬಲ್ಲಹನು ॥೬೫॥

ಕಾರಣಮೇರು ಕಳಾನಿಧಿಚಂದ್ರನು
ಚಾರಿತ್ರದ ಚಕ್ರೇಶ್ವರ ನಿಷ್ಠೆಯ
ಧರುಣಿ ನಿಜದ ನಿಧಾನ ಸದಾಚಾರದ ಕಲ್ಪದ್ರುಮವು।
ಧೀರದ ದಿಗ್ಗಜ ಶಿವಭಕ್ತಿಯ ಮದ
ವಾರಣ ಭಾವದ ಬ್ರಹ್ಮನು ಭಕ್ತ್ಯಾವ
ತಾರದ ರುದ್ರನು ಶಿವನಾಗಯ್ಯಗಳಿದಿರೊತ್ತಿಗೆ ಸಾರ್ದು ॥೬೬॥

ಅಂಗಸುರಕ್ಷಣಮೇಖಳೆಯಂ ತೆಗೆ
ದಂಗಜಹರಗಾಸನಗೊಡುವಲು ಚೌ
ಕಂಗೈಯ್ದಯ್ಯನ ಪದಯುಗಳಕೆ ಸಾಷ್ಟಾಂಗ ಸೈಗೆಡೆದೆದ್ದು।
ಸಂಗಸನಾಥಸರಕ್ಷಾಮಣಿ ಕರು
ಣಂಗೈಯೆನುತ ಪ್ರದಕ್ಷಿಣ ಬರುತಮ್ಮ
ತಾಂಗವ ಕಲ್ಪಿಸಿ ಕೈಮುಗಿವುತ್ತೈಯ್ಯನ ಕರಗಳ ಪಿಡಿದು ॥೬೭॥

[1] ವಾ (ಗ.ಫ.ಛ).

ನಾಗಯ್ಯನ ಕೈಯಂ ಭಕ್ತಿಯ ಭಾ
ಗ್ಯಾಂಗನೆ ಪಿಡಿವೊಲು ಪಿಡಿಯಲು ರಾಜನಿ
ಯೋಗಸಮಸ್ತಸಭಾಸಭೆಯೇನೆಂದಚ್ಚರಿವಡುತಿರಲು।
ಮೇಗಣ ಲೋಕದ ಧೇನುವಿನ ಸ್ತನ
ಭೋಗಿತ ವೃಷಭನು ತುಡುಕಲು ತೊಱೆವಂ
ತಾ ಗುರುರೂಪನ ಕರಶಾಖೆಗಳು ಸುಧಾಪೂರಿತವಾಗಿ ॥೭೮॥

ತೊಱೆದ ಪಯೋಧರದೊಲು ಕರುಣಾಮೃತ
ಶರಧಿಯ ಕಾಲುವೆ ಕವಲಾದಂತಿರೆ
ಕರಶಾಖೆಗಳೆರಡೆರಡಂ ಸವಡಿಸುತಾತನವುಕಲೊಡನೆ।
ಧರೆಗಭಿಷೇಕವ ಮಾಡಲಿಕಿಂದ್ರನು
ಸುರಧೇನುವ ಕಳುಹಿದವೋಲಂತಿರೆ
ಸುರಿವ ಸುಧಾಧಾರೆಗಳೊಗುವಂತಿರೆ ಪಱಿದುದು ಪಾಲ್ಗಡಲು ॥೭೯॥

ಕ್ಷೀರಸಮುದ್ರಾಹ್ವಾನಿತ ಮಂತ್ರದ
ಕಾರಣಕರವೆನಲಮೃತಕರನ ಕರ
ಧಾರೆಗಳೆನೆ ಕಾಮಿತಫಲಸಿದ್ಧಿಗಳಭಯಕರಾಯುವೆನೆ।
ಭೋರನೆ ಕಱೆವ ಸುಧಾಧಾರೆಗಳೊಳು
ತಾರೇಶನ ಕಳೆಗೂಡಿಳಿದುನ್ನತ
ಮೂರುತಿಗೊಂಡೊಲು ಫೇನಪ್ರಭಾ ರಂಜಿಸುತಿರೆ ಮಗುಳ್ದಂತೆ ॥೭೦॥

ಕಱೆವುತ ಕಱೆವುತ ಕಂಡೈ ಉತ್ತಮ
ರೆಱೆಯನನೆಲೆ ರಾಜೇಂದ್ರಶಿರೋಮಣಿ
ನೆಱೆಯದೊಡಿನ್ನುಂ ಕೊಯ್ಯಂದಂಗುಲಿಯೆಲ್ಲವ ಪಿಡಿದೊತ್ತೆ।
ಎಱಗಿತು ದಶಧಾರೆಗಳಿಂದಮೃತದ
ಬಱುವಳೆಯುದ ಕಂಡರಸು ಮಹಾದ್ಭುತ
ವೆರಸುತ ಬಂದುಯಿದೇನೆಂದಚ್ಚರಿವಡುತೆದ್ದೈತಂದು ॥೭೧॥

ಬಿಡಿಬಿಡಿಯಯ್ಯನ ಕರಗಳನನೃತವ
ನುಡಿದವರೇ ಈ ಪಾತಕದ್ವಿಜಪೆ
ಗಡೆಗಳ ಮಾತಿಂಗಱಿಯದೆ ಕರೆಸಿದೆವಪರಾಧಿಗಳಾವು।
ಒಡೆಯರ ನೋಡಲ್ಕೆಮ್ಮಳವೇ ಈ
ದೃಢಶುದ್ಧೋತ್ತಮಭಕ್ತನ ನಿಂದಿಸಿ
ಗೆಡದ ದುರಾತ್ಮರ ಕಡೆಗಣಿಸೆನುತಾ ಪೊಡವೀಶ್ವರನೆಱಗೆ ॥೭೨॥

ಕುಲದೆದೆ ಬಿರಿಯಿತು ಕುಗ್ಗಿದವೆತ್ತಿದ
ತಲೆಗಳು ನಿಂದೆಯ ಮಂದಿರ ಬೆಂದವು
ಛಲದೊಡಲೊಡೆದವು ತರ್ಕದ ಬಾಯ್ಗಳಿಗಿಕ್ಕಿದ ವಗುಳಿಗಳು।
ಒಳಗೊಡೆದವು ಕರ್ಮದ ಕರುಬಲ್ಮೆಗ
ಳಳಿದವು ಕೊಂಡೆಯರಂಡ[1]ಲೆ[1]ಗರ್ಭಗ
ಳಳಿದವು ಬಸವನ ಭಕ್ತಿಯ ಭಾವದ ಭಾಳನಯನ ಕಂಡು ॥೭೩॥

ಅಂಗುಲವಿಡಿದಮೃತವ ಕಱೆವತಿಶಯ
ವಂಗಜಹರಗಾಗದು ಈಯ್ಯೆಯಗ
ಳಂಗವನಱಿದೆಂತೊಯ್ಯಾರಿಸಿದನೊ ನಿಷ್ಠೆಯ ನಿಜರೂಪೆ।
ಜಂಗಮವಾಯ್ತೋ ಜಾಣರಿಗತಿತೊಡ
ಕಂಗೀಕರಿಸಿದುದೆನುತಾ ಸಭೆ ರಾ
ಜಂಗೊರೆಯಲ್ಕಾ ರಾಜನವರ್ಗಂತೊರೆವುತ ಮತ್ತೆಱಗೆ ॥೭೪॥

ಒಡೆಸೋರೆಯ ನೂಱಡಿ ಮಾಡುವ ಬಗೆ
ಗೊಡೆಯರು ನೀವಾಗಿರೆ ಕೊಳ್ಳಿದನೊ
ಕ್ಕೊಡಹಾಲದ ಕ್ರೀ ಕಡೆಗಾಣಿಸಿ ಘೃತವಡೆವುದು ಸಂದೇಹ।
ಬಿಡಲಾಗದು ಯೆನುತ್ಯೆಯನ ಕೈಯಂ
ಬಿಡೆ ಧಾರೆಗಳಡಗಲು ಕಂಡಂತಾ
ಪೊಡವೀಶ್ವರನೆಳಗಾಗಿ ವಿಚಿತ್ರದ ಭಿತ್ತಿಯ ರೂಪಾಗಿ ॥೭೫॥

ಕಂಡಿರೆ ನೋಡಿನ್ನಾರ್ಕ್ಬೊಲೆಯರು ಬಹು
ಕೊಂಡೆಯರಿರೆ ಯೆನುತಾಕ್ಷೇಪಿಸಿ ಹಿಡಿ
ಖಂಡವ ಕೊಯ್ಯುವೆ ನಿಂದೆಯೊಳೊಂದಿಸದಿರಿ ನಿಜರೂಪನನು।
ದಂಡಾಧಿಪನೆಮಗೆಡೆಗೆಸರಿಕ್ಕುವ
ತೊಂಡುಗಳಿರ ಮೇಲಱಿಯದೆ ಕುಲಪಾ
ಷಂಡಿಗಳಿರ ಛೀ ಎನುತಾಯಯ್ಯಂಗಗ್ರಪೂಜೆಯಗೊಟ್ಟು ॥೭೬॥

ವಂದಿಸಿ ಕಳುಹಲು ಬಸವಗೆ ಕೈಮುಗಿ
ದೆಂದನು ಭಕ್ತಿಯ ಭಾಗ್ಯಾಧಿಕ ನೀ
ನೆಂದಂತಾಯ್ತವರಗ್ರಜರವರಂತ್ಯಜರೆಂಬುದ ಕಾಣ।
ಬಂದುದು ಬಿಜಯಂಗ್ಯೆಯೆನೆ ಬೀಳ್ಕೊಂ
ಡಂದಳದೊಳಗ್ಯೆಯನ ಕುಳ್ಳಿರಿಸಾ
ನಂದದೊಳಾಡುತ ಹಾಡುತ ಭಕ್ತಿಯ ಸಿಂಧು ತಿರುಗಿತಿತ್ತ ॥೭೭॥

---

[1] ತಿ (ಥ).

ಹೊಸಯುಕ್ತಿಯ ಭಕ್ತಾನಂದಾಬ್ಧಿಗೆ
ಮಸಗಿತು ಧರೆಯನೆಲಖಿಳಶಿವಾರ್ಚಕ
ರೊಸಗೆಯು ಗುಡಿ ತೋರಣ ಪಂಚ [1]ಮ[1]ಹಾವಾದ್ಯಗಳೊಗ್ಗಿನೊಳು ।
ಎಸೆವನಿ[2] ದಿಗೋ[2]ಂಬುತ್ಸಹಮಂಗಳ
ರಸದಾವೇಶದಿ ಭಾವಕಳಾನ್ವಿತ
ಬಸವೇಶ್ವರ ನಿಷ್ಠೆಯನಿಧಿ ಬಂದನು ನಿಜಭವನೋನ್ನತಕೆ ॥೭೮॥

ಏನುಪಮಾನವ ಸ್ಥಲವಿಡುವೆನು ಶಿವ
ತಾನುಪಮಿಸಲಱಿಯದ ಮಹಿಮೋನ್ನತ
ಭಾನುವಿನುದಯವಿದೆನ್ನುತ ನಂದೀಶ್ವರ ಪ್ರಮಥರ್ಗೊರೆದ ।
ಆನುತಿಯಂ ಭೂನುತ ಸದ್ಭಕ್ತಿವಿ
ತಾನಕೆ ವಿಶ್ವೇಶ್ವರಪದಪದ್ಮರ
ಜಾನಂದಾಳಿಯು ಸಿಂಗಿರಾಜಭೂಶಾಸನಕೃತಿಯೊರೆದ ॥೭೯॥

ಮೃತ್ಯುಂಜಯಮೂರುತಿ ಬಸವನುಚಾ
ರಿತ್ರಾಂಬುಧಿಯೊಳಗೊಗೆದುರೆಮೆಱೆದಱು
ವತ್ಸಾಲ್ಕಾ[3]ಱಾಂತ[3]ವನುಳ್ಳ ಪ್ರಮಥರ ಪಾವಾಡದೊಳು ।
ಅತ್ಯುತ್ಸಾಹದಿ ಶಿವನಾಗಯ್ಯನ
ನಿತ್ಯಕರಾಂಗುಲಿಗಳೊಳೋರಂತಿರೆ
ಸತ್ಯಾಮೃತವಂ ಸದ್ಗುರು ಬಸವಂ ಕಱೆದು ಮೆಱೆದ ಸಂಧಿ ॥೮೦॥

---

[1] ಮಮ (ಕ.ಗ.ಥ.ಫ). [2] ವುತಯಿ (ಖ). [3] ರಾಂಕ (ಕ.ಗ.ಫ).

ಇಪ್ಪತ್ತೊಂಭತ್ತನೆಯ ಸಂಧಿ

ಸೂಚನೆ—

ಬಾಹಿರಂ ವೈಷ್ಣವಾಂಗದ ಗುಪ್ತಮಾಹೇಶ
ಸಹಜಲಿಂಗಾರ್ಚನೆಯನನ್ಯರಱಿಯಲು ಮಡದಿ
ಸಹ ಪ್ರಾಣಗಳೆದ ಧೂಪದ ಮಂಚಿಮರಸರಸು ಪಡೆದ ಸಂಗನಬಸವನು॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶಪ್ರಮಥರ್ಗಮಲವಚನರಚ
ನಾಮಹಾವಸ್ತು ವಿಸ್ತೀರ್ಣಮ್ ಸ್ಥಲವಿಟ್ಟನಾಮಂತ್ರರಹಸ್ಯಾದಿಯ।
ಭೂಮಿಯಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಪರಮಾರ್ಥದಾನಂದಸ್ಥಾನಾಧಿಪತ್ಯಪ್ರಮ
ಥರು ಸುಚಿತ್ತದಿ ಕೇಳ್ವುದೊಂದು ವಿಸ್ಮಯಕಥಾ
ಉರುತರದ ಕಲ್ಯಾಣಪುರವಾಳ್ವ ಬಿಜ್ಜಳ[1]ಮಹೀಶನೈಶ್ವರ್ಯಕಭವ[1]।
ನರರೂಪನಾಗುದಿಸಿ ದಂಡಾಧಿನಾಥ ಬಸ
ವರಸರೆಂಬಭಿಧಾನದಿಂದಾದಿಕ್ರೀಭಾವ
ವೆರಸಿರ್ಪರರಸು ಮಂತ್ರಿಗಳಾಗಿರಲ್ನಡುವೆ ನೆಗಳ್ದ ಕಥನವ ಪೇಳ್ವೆನು ॥೨॥

ಆದಿಯಲಿ ವೃಷಭನೊಡೆನೇಳುನೂಱಿಪ್ಪತ್ತು
ಆದಿಗಣ ಶಿವಬೆಸನದಿಂದೆ ಕೈಲಾಸದಿಂ
ಮೇದಿನಿಗೆ ಬಪ್ಪಲ್ಲಿ ಹಿಂದುಳಿದ ಸಿದ್ಧನಹ ಗುಪ್ತಗಣನಾಥನೊಬ್ಬ।
ತಾ ದುರಾಗ್ರದಿ ಜನಿಸುವಾಂದೋಳದಿಂದಲಾ
ಭೂದಿವಿ ಸುಕಲ್ಯಾಣಪತಿಯ ಶ್ರೀಕರಣ ದಾ
ಮೋದರನೆನಿಪ್ಪ ವೈಷ್ಣವಗೆ ವಧುವಾಗಿಹಳು ಮಾಯವಾದೊಬ್ಬನ ಸುತೆ ॥೩॥

ಆದಿನಕ್ಕಾಕೆ ಋತುಗಂಡು ಕಡೆನೀರ್ಮಿಂದು
ಸಾದರದಿ ಪುತ್ರಾರ್ಥ ರುದ್ರಪಿಂಡಿತಗೊಂಡಿ
ರಾದಿನವೆ ಶಿವಯೋಗಗೂಢವಾ ಗುಪ್ತಗಣನಾ ಗರ್ಭವೊಗು[2]ತಿಹಾಗ[2]।

---

[1] ನ ಐಶ್ವರ್ಯನೇಕಭಾವ (ಖ). [2] ವಾಗಲೆ (ಖ).

ಆದುದಾ ಕಾಲಕಾ ಸ್ತ್ರೀಗೆ ನಿಜಪತಿಯೋಗ
ವಾದಿಯೊಳು ಸಂಸಾರಸಂಗ ಕೆಸರ್ಜಲದೊಳಗೆ
ಭೇದಿಸಿ ಬೆಳೆದ ಪದ್ಮದಂತುಭಯಪಕ್ಷಮಂ ಹೊದ್ದಿಹೊದ್ದ ದೊಲುದಿಸಿದ ‖೪‖

ಪುತ್ರಂಗೆ ಜನ್ಮನಾಮವೆ ನಾಮವೆಂಬರ್ಥ
ವೃತ್ತಿಯಿಂ ಮಂಚಣ್ಣನೆಂದು ಪೆಸರಿಟ್ಟು ದಾ
ಲ್ಯಾಂತರಾಂತರಕರ್ಮದಿಂದಾತಗುಪನಯನತತ್ವವಾದನುಗ್ರಹವನು।
ಇತ್ತಂಗದೊಳು ಶಂಖ ಚಕ್ರ ಮುದ್ರೆಗಳ ಕಾ
ಸೊತ್ತಿ ಪಿತೃವರ್ತನೆಯ ವೀರವೈಷ್ಣವತರ್ಕ
ದುತ್ತರೋತ್ತರದಿಳುಹಿ ವೇದಾಗಮಾಕ್ಷರ ಸಲಕ್ಷಣಂಗಳನಱುಹಿಸಿ ‖೫‖

ಯೋಗ್ಯನಂ ಮಾಡಿ ತನ್ಮಾತೃಪಕ್ಷದೊಳು ಶೈ
ವಾಗಮನಿರತರಲ್ಲಿ ಕನ್ನಿಕೆಯ ತಂದತಿಸ
ರಾಗದಿಂ[1]ದುದ್ವಾ[1]ಹಗೈದು ತತ್ಪುತ್ರಕನ ಗಣಕಗಂಭೀರದ ಮಹಾ।
ಸಾಗರವ ಶಶಿಗಿದಿರ್ಚಿದಂತೆ ನೃಪತಿಗೆ ತೋಱ
ಲಾಗಲುತ್ಸಹಬೋಗೆ ಮುದ್ರೆರಾಯಸದ ನಿಜ
ಯೋಗಕರಣಂಗೊಟ್ಟು ವಿಶ್ವಾಸಶ್ರೀಹಸ್ತಮಂತ್ರಪದಪೀಯಲಾತ ‖೬‖

ರಾಯನಂತರ್ಭೂತಿ ಮೂರ್ತಿಗೊಂಡಂತುಭಯ
ಕಾಯೆ[2]ವೈಸಾ[2]ತ್ಮವೊಂದೆಂಬಂತಿರಿಪ್ಪನಾ
ರಾಯತತ್ಪ್ರಾಣನೊಲು ಮಂಚರಸನಿರುತಿರಲ್ಸತ್ಕ್ರಿಯಾಂಗದೊಳು ಭಾವ।
ಕಾಯಕ್ಕೆ ಶಕ್ತಿ ವೇದದೀಕ್ಷೆ ಪೂರ್ವಜ
ನ್ಮಾಯತವ ಸಂಸ್ಕಾರದಿಂದಾದಿಶಿವಫಲಪ್ರ
ದಾಯದ ಹೊಲಕ್ಕೆ ಮುಳುಬೇಲಿಗೆತ್ತಂತೆ ವೈಷ್ಣವರೂಪ ವಹಿಸಿಪ್ಪನು ‖೭‖

ಬಲಿ ವಿಭೀಷಣ ಭೀಷ್ಮ ನಾರದ ಪ್ರಹ್ಲಾದ
ಫಲುಗುಣ ಮಹಾವೈಷ್ಣವಾದಿಗಳ ಸಾಮರ್ಥ್ಯ
ಕಳೆಯ ಕರುವಿಟ್ಟಳೆಗೆ ತೋಱಲೆಂದಬ್ಜಾಕ್ಷ ಕಳುಹಿದಾಚಾರ್ಯನಂತೆ।
ತುಳಸಿವಣಿಗಳ ತುಳಿಸಿವನಮಾಲೆಗಳನೂರ್ಧ್ವ
ದೊಳಗು ಸೀಳ್ದ[3]ಸಿದೆಸೆವ[3] ಮಟ್ಟಿನಾಮಗಳಂಗ
ಸ್ಥಳದೊ[4]ಳೆಱ[4]ಡಾಱೆಸೆವುತೇಳ್ತಂದು ಅರಸನೋಲೈಸುತಿಹ ಮಂಚಣ್ಣನು ‖೮‖

---

[1] ದಂದಿ (ಖ). [2] ವೆರಡಾ (ಕ.ಖ). [3] ಸಿದ್ದೆಸೆವ (ಚ.ಗ). [4] ದ್ವಾದಶವು (ಕ), ೪ (ಘ).

ನಾರದಿಯ ಭಾಗವತ ಮತ್ಸ್ಯಕೂರ್ಮಂ ವಿಷ್ಣು
ವಾರಾಹ ಗರುಡ ವಾಮನ ಪುರಾಣಾಷ್ಟಕದೊ
ಳೀರೈದು ಶೈವದೊಳು ಬ್ರಹ್ಮಾಂಡ ಬ್ರಹ್ಮ ಕೈವರ್ತ ಭವಿಷತ್ಪುರಾಣ।
ಸೌರ ಮಾರ್ಕಂಡೇಯ ವಗ್ನಿವಾಯುರ್ಲೈಂಗ್ಯ
ಸಾರಪದ್ಮ ಸ್ಕಂದ ದಶವುಭಯ ಪದಿನೆಂಟು
ಪೌರಾಣದೊಳ್ವಿಚಾರಿಸಿ ಮುಕ್ತಿ ಶಿವಮುಖದೊಳಲ್ಲದಿಲ್ಲೆಂಬುದಱಿದು ॥೯॥

ವ್ಯಾಸ ಗೌತಮ ಬೃಹಸ್ಪತಿ ವಿಷ್ಣುಮನ್ವಂತ
ವಾಸಿಷ್ಟ ಹರಿತನಯನಾಂಗಿರಸ ಲಿಖಿತ ಪಾ
ರಾಶರಾಪಸ್ತಂಭ ಸಂವರ್ತ ಶಂಖ ಶಾತಾತಪಂ ಕಾತ್ಯಾಯನ।
ಕೌಶಲಂಗಳ ದಕ್ಷಯಾಜ್ಞವಲ್ಕ್ಯಾದ್ಯರಿತಿ
ಹಾಸೋಪಪೌರಾಣ ಪದಿನೆಂಟಱೊಳಗುಳಿದ
ಶೇಷಾಗಮ ಸ್ಮೃತಿಗಳೊಳಗೆ ಶಿವನಿಂದಲ್ಲದಿಲ್ಲ ಮುಕ್ತ್ಯೆಂಬುದಱಿದು ॥೧೦॥

ವೇದಾಗಮ ಸ್ಮೃತಿ ಪುರಾಣಶಾಸ್ತ್ರಾದಿಗಳ
ನಾದರಿಸಿ ತಾ ಕೇಳುವಲ್ಲಲ್ಲಿ ನೋಡಿ ವಿ
ಷ್ಣ್ವಾದಿಗಳು ಮೋಕ್ಷಾರ್ಥ ಶಿವಪೂಜೆಗೈದುಗ್ರತಪವಟ್ಟು ಪಡೆದರೆಂಬ।
ಹಾದಿಯಲ್ಲದೆ ತಾವು ಮೋಕ್ಷಗೊಡಲಱಿಯರೆಂ
ಬೋದು ಮನವುಟ್ಟಿ ವೇದಾದೀಕ್ಷೆಯಿಂದೆ ಜ್ಞಾ
ನೋದಯಂತಮುಖದಿ ಲಿಂಗಸಂಗಿತಭಕ್ತಿ ಭಾವಾತ್ಮ ಬಲಿದಿಪ್ಪುದು ॥೧೧॥

ಮುತ್ತುಮಲಶುಕ್ತ್ಯಮೃತ ಸ್ತನವ ಪೀನೋದಯವ
[1]ಛ[1]ತ್ತಗಳ ಕಿಂಸಾರ ರತ್ನವಂ ಶಿಲೆ ವಸುವ
ಮೃತ್ತಿಕೆ ಸುತ್ತೈಲವಂ ತಿಲ ಜ್ವಲನದಿಂದಲೆವ್ಯಾತ್ಮಸ್ವರೂಪಿಗಂಗ।
ವರ್ತಿಪುದದೆಂತಂತೆ ಸ್ವಾನುಭವ ಶಿವಜ್ಞಾನ
ತತ್ವಮಂಚರಸರೊಳು ಗೋಪ್ಯಕ್ಕೆ ಹೊಱವೇಲಿ
ಗೆತ್ತಂತಿಹುದು ವೈಷ್ಣವವಳಕೆಯು ಜಗದ ಕಣ್ಮನಕೆ ಮಱೆಗಟ್ಟಿದಂತೆ ॥೧೨॥

ಸೇವಂತಿ ಪದ್ಮ ಕೇತಕಿಗೆ ಕುಸುಮಾದಿಗಳ
ಭಾವಿಸಲು ಕಂಟಕಂ ಬಲಿದು ಕುಸುಮಿಸಿ ಪರಿಮ
ಳಾವರಿಸಿ ಶಿವನ ಸಿರಿಮುಡಿಗೇಱುವಂತಾತನುತ್ಪತ್ತಿ ಸ್ಥಿತಿಗುಪ್ತಕ।
ಸಾವಧಾನಿತ ಸಮ್ಯಜ್ಞಾನ ವೇದಾದೀಕ್ಷೆ
ಭಾವ ಬಲಿಬಲಿದೊಳಗೆ ಶಿವಲಿಂಗಧ್ಯಾನಪ್ರ
ಭಾವಿಸ್ಯವನಮುಕ್ಕೈಕ್ಯಲಿಂಗಗ್ರಾಹಿಕನಾಗಿರುವ ಸತ್ಯ ತಿಳಿಯಗೊಡದು ॥೧೩॥

---

[1] ವ್ರ (ಕ.ಚ.ಖ).

ಈ ಪರಿಯ ಕೊಱಗ ಮಱೆದೊಳಗುಪಮದೀಕ್ಷೆಯಾ
ಳಾಪಲಿಂಗಾವಧಾನದೊಳು ಮಣಿಹಂ ತೀರ್ಚಿ
ಗೋಪ್ಯತರದಂತರಗೃಹಕ್ಕೆ ರಾತ್ರಿಯೊಳೈದೆ ಕರ್ಮಕಪಟವತಾರದ ।
ರೂಪುದೊಳೆಯಲು ಸಚೇಲಸ್ನಾನಗೈದು ಭ
ಸ್ಮೋಪಮಂತ್ರದೊಳು ಶೋಷಣ ದಹನ ಪ್ಲಾವನ ಕ
ಳಾಪವ್ಯಾಸಂಗಳಿಂದುದ್ಧೂಳಿಸುತ್ತ ಸರ್ವಾಂಗಮುಖ ಶುದ್ಧಮಾಡಿ ॥೧೪॥

ಶ್ರೀರುದ್ರಮಂತ್ರ ಜಪಮೂಲದಿಂ ರುದ್ರಾಕ್ಷಿ
ಸೇರುವೆಯ ಸ್ಥಾನಸ್ಥಾನಂಗಳೊಳು ಧರಿಸಿ ಷಡು
ಸಾರಣೆಯ ಭೂಶುದ್ಧಿರಂಗವಾಳಿಕೆಯಿಕ್ಕಿ ಲಿಂಗೋಪಕರಣಂಗಳ ।
ಕಾರಣಸ್ಥಲದೊಳಳವಡಿಸುತ್ತ ಷೋಡಶುಪ
ಚಾರ ಕ್ರೀದ್ರವ್ಯಗಳ ಸತಿ ಪತಿಯ ಮುಂದೆ ತಂ
ದೋರಣಂಗೊಳಿಸೆ ಅವುಳೈಕ್ಯಲಿಂಗವ ಕರಸ್ಥಲದಲ್ಲಿ ಮೂರ್ತಿಗೊಳಿಸಿ ॥೧೫॥

ಮೂಲಮಂತ್ರ ಧ್ಯಾನ ಮೌನಮಾನಸ ಜಪಸು
ಶೀಲಾವಧಾನಚಿತ್ತದೊಳು ಲಿಂಗಾರ್ಚನಾ
ಲೀಲಾಪರಾಯಣಾಗಮವಿಧಾನಾರತದೊಳರ್ಚನಂಗೈದು ಪುಳಕ ।
ಜಾಲ ಹರುಷದೊಳು ಗದ್ಗದಕಂಠನಾಗಿ ಯು
ನ್ಮೀಲತಾಕ್ಷಿಗಳ ಬಿಂದೊಸರುತ್ತ ಕರ್ಮನಿ
ರ್ಮೂಲ ಮು[1]ಖ[1]ದೆಗೆದಂತೆ ಚಿದ್ಘನಾನಂದವಿಧ ತತ್ವ ತನ್ಮಯನಾಗಿಹ ॥೧೬॥

ಗೋಪ್ಯತರ ಲಿಂಗಾರ್ಚನಾರತಗೆ ಗೋಪ್ಯಕ್ಕೆ
ಗೋಪ್ಯಶಕ್ತಿಯೊಳಿಪ್ಪ ಸತಿ ಶುಶ್ರೂಷೆಯ ಮಾಡ
ಲೀಪರಿಯ ನಿಜನಿತ್ಯನೇಮಲಿಂಗಾರ್ಚನಂಗೈದುಭಯಶಿವಸುಖಿಗಳು ।
ರೂಪಾದಿ ರುಚಿದ್ರವ್ಯಗಳ ಸಕಲಭೋಗಭು
ಕ್ತ್ಯೋಪಚಾರಗಳ ಲಿಂಗಕ್ಕೆ ಸಲಿಸುತ ಪ್ರಸಾ
ದೋಪಭೋಕ್ತೃಗಳಾಗಿಹಾಂಗಮಂ ಲಿಂಗವೇ ಬಲ್ಲನುಳಿದರ್ಗಸಾಧ್ಯ ॥೧೭॥

ಒಂದಿನೆಲವಱೆಯೊಳಿಪ್ಪುನ್ನತದ್ರವ್ಯಮಂ
ಕಂಗೊಳಿಸಿ ಜಗಕಿದಿರ್ಚಿ ತೋಱುವಂತನುಪಮಾ
ನಂದಶಿವಭಕ್ತಿರಸಸಿದ್ಧಘುಟಿಕೆಯಸಿದ್ಧಿಯಂ ಪ್ರಸಿದ್ಧಿಯ ಮಾಳ್ಪೊಲು ।
ಇಂದುಧರಗುಪ್ತಗಣನಾಥನ ಮಹತ್ತತೆಯ
ಮುಂದುವಱಿಯಿಸಿ ಬಸವ ಮೊದಲಾದಸಂಖ್ಯಾತ
ವೃಂದದೊಳ್ಪ್ರಕಟಗೈದಿಳೆಗೆ ಮೆಱೆಯಲ್ಕೆಗಳ್ದ ಸೂಚನೆಯಭೇದ್ಯತರವು ॥೧೮॥

---

[1] ಮುರಿ (ಗ.ಫ).

ನಿತ್ಯದಿರುಳೀಪರಿ ಶಿವಾರ್ಚನಂಗೈದುದಯ
ಕತ್ತ ನಾಲ್ಕೆರಡುಗಳಿಗೆಯೊಳೆದ್ದು ಗೋಪ್ಯಗಣ
ಮರ್ತ್ಯಂಗರೂಪವೈಷ್ಣವವಳಕೆದೊಟ್ಟೆಂದಿನಂತೋಲಗಕ್ಕೆ ಬರುತ।
ಸತ್ಯಶರಣರ ಕಂಡು ಮತ್ತೆ ಮಾನಸದೊಳೆಱ
ಗುತ್ತ ತನ್ನಯ ರಾಜಸೇವೆ ಶ್ರೀಕರಣದ ಪ್ರ
ವರ್ತ[1]ನಂ[1]ಗೈದಂತು ಸುಕಮಿರುತ ಕೆಲವುಕಾಲಾಂತರ[2]ದ ಮೇಲೊಂದಿನ[2] ॥೧೯॥

ಎಂದಿನಂದದೊಳಿರುಳು ಶಿವಪೂಜೆಗೈಯುತಾ
ನಂದದಿಂದಿರಲಾ ಗೃಹಾಭ್ಯಂತರದಿ ಧೂಪ
ಗಂಧವಾಸನೆ ಗವಾಕ್ಷದಿ ಸೂಸೆ ನೆರಮನೆಯ ವಿಪ್ರನಾಲಯದೊಳೆಸೆಯೆ।
ಮಂದಿರಕ್ಕಪರಾತ್ರಿಯಲಿ ಧೂಪಧೂ[3]ಮ[3] ತಾ
ಬಂದಪರಿಯೇನ್ಯೆಕ್ಷಭೂತಸುಳುಹಲ್ಲವ
ಲ್ಲೆಂದೆದ್ದು ನೋಡುತಾ ವಿಪ್ರನಾ ಧೂಪಬಹ ವಾತಾಯನವ ಕಂಡನು ॥೨೦॥

ಸಂದೇಹದೇಹಿ ಬಂದಾಗವಾಕ್ಷಕೆ ಮುಖವ
ಸಂದಿಸೊಳನೋಡಲವರ್ಪರಮಾರ್ಥಶಿವಭಕ್ತಿ
ಯಂದದೊಳಿರಲ್ಕಂಡು ವಂದಿಸಾ ವೈದಿಕನು ವೈಷ್ಣವದ ಮಂಚರಸಗೆ।
ಮಂದಿರದೊಳವತರಿಸಿದರ್ಥವೇನೆನುತ ಚೋ
ದ್ಯಾಂದೋಳದಿಂದೀಕ್ಷಿಸುತ್ತಿರಲು ಅವರ್ಗಳಾ
ನಂದ ಸಮ್ಯಜ್ಞಾನ ಲಿಂಗಪೂಜನದೊಳಿರೆ ಭಾವಿಸೇಱಿದ ವಿಪ್ರನು ॥೨೧॥

ತನ್ನಮನದೊಳು ತಳವೆಳಗುಗೊಂಡು ನಂಜಾಮ್ಯ
ತಾನ್ನವಾಗುವಚೋದ್ಯ ವೀರವೈಷ್ಣವ ಲಿಂಗ
ಸನ್ನಿಹಿತನಾಗುವದನನ್ವಿಕವಿದಱಭೇದ ಎನ್ನಯುಕ್ತಿಗೆ ನಿಲುಕದು।
ಇನ್ನೊಂದೆರಡು ಮೂಱು ದಿನ ನೋಳ್ಪೆನಿಹಿಗೆಶಿವ
ಸನ್ನದ್ಧನಾಗಿರ್ದ ಪಕ್ಷ ಇದನಾ ಬಸವ
ದಣ್ಣಾಯಿಕಾದ್ಯರ್ಗೆ ಪೇಳ್ದೀತನಂ ವರ್ಮವಱವೆನೆಂದಾ ವಿಪ್ರನು ॥೨೨॥

ಈಪರಿಯ ನಾಲ್ಕೆರಡುದಿನ ಬೇಹಸಲಿಸೆಯಾ
ಧೂಪಂ ಗವಾಕ್ಷದಿಂದೆಸೆವಾಗಲೆದ್ದೆದ್ದು
ತಾ ಪರೀಕ್ಷಿಸಿ ದಿನದಿನಕ್ಕೆದ್ದು ಲಿಂಗಾವಧಾನಿತಾಂಗವದು ನೂರ್ಮಡಿಸಿರೆ।

---

[1] ಕಂ (ಖ). [2] ಕೆ ಮೇಣೊಂದಿನ (ಖ), ದ ಮೇಲಣೊಂದಿನ (ಕ). [3] ಮ್ನ (ಕ.ಗ.ಘ).

ಈಪುರುಷನಂಗವೇನೋ ಎನುತ ಮನಸಿನನು
ತಾಪದಿಂ ಬಸವರಾಜಾಲಯಕೆ ಬಂದವರ
ಶ್ರೀಪದವಿಡಿದು ಬಿನ್ನವಿಸಿದ ಧೂಪದಮಂಚಿಮರಸಯ್ಯನಂತಸ್ತವ ॥೨೩॥

ಗೋಪ್ಯತರ[1]ದೊಂ[1]ದು ಬಿನ್ನಪ ಜೀಯ ರಾಜನ ನಿ
ರೂಪರಾಯಸದ ಮಂಚಿಮನು ವೈಷ್ಣವರರಸ
ನಾಪರಿಯರೂಪನಳಿದಿರುಳು ಸಾಕ್ಷಾದ್ರುದ್ರರೂಪಾಗಿ ಶಿವಪೂಜೆಗೆ।
ಧೂಪಮಿಕ್ಕಲ್ಗವಾಕ್ಷದಿ ಪರಿಮಳಂ ಸೂಸ
ಲಾಪಥವಿಡಿದು ನೋಡಿ ಕಂಡೆನದಱಿಂತರವ
ನಾ ಪರೀಕ್ಷಿಸಲಱಿಯದೊಡೆಯರ್ಗಱುಪ ಬಂದೆನೆನೆ ಬಸವನಿಂತೆಂದನು ॥೨೪॥

ವಚನ—

ಓಡೆತ್ತ ಬಲ್ಲದೊ ಅವಲಕ್ಕಿಯ ರುಚಿಯ? ಕೋಡಗ ಬಲ್ಲುದೆ ಸೆಳೆಮಂಚದ ಸುಖವ? ಕಾಗೆ ನಂದನವನದೊಳಿರ್ದಡೆ ಕೋಗಿಲೆಯಾಗಬಲ್ಲುದೆ? ಕೊಳನ ತಡಿಯಲೊಂದು ಬಕ ಕುಳ್ಳಿರ್ದಡೆ ಕಲಹಂಸವಾಗಬಲ್ಲುದೆ? ಕೂಡಲಸಂಗಮ ದೇವಯ್ಯ ॥೧॥

ಹುತ್ತವ ಕಂಡಲ್ಲಿ ಹಾವಾಗಿ ನೀರ ಕಂಡಲ್ಲಿ ಹೊಳೆಯಾದವನ ಮಚ್ಚುವನೆ? ಬಾರದ ಭವಕ್ಕೆ ಬರಿಸುವನಲ್ಲದೆ ಮಚ್ಚುವನೆ? ಅಘೋರನರಕವನುಣಿಸುವನಲ್ಲದೆ ಮಚ್ಚುವನೆ? ಅಟಮಟದ ಭಕ್ತರ ಕಂಡಡೆ ಕೋಟಲೆಗೊಳಿಸುವನು ಕೂಡಲಸಂಗಯ್ಯನು ॥೨॥

ಗೀಜಗನ ಗೂ[1]ಡು[1] ಕೋಡಗದಣಲಸಂಚ ಬಾಧಮನಮುದವೆ ಬಾವುಲಿ ಬಿದ್ದಿನಂತೆ ಜೂಜುಗಾರನಮಾತು, ಬೀದಿಗುಂಡನ ಸೊಬಗು ಓಡಿನೊಳಗಗೆ ಹೊಯ್ದಂತೆ ಕಾಣಿಲವೊ ಶಿವನಾದಿಯನಱಿಯದನ ಭಕ್ತಿ ಶೋಧನೆಗೆ ಮದ್ದುಗೊಂಡಂತೆ ಕೂಡಲಸಂಗಯ್ಯನು ॥೩॥

ಹುಲಿಯ ಕವಿಲೆನೆ ವಿಷವನಮೃತವೆನೆ ಕೈಪೆಸೊರೆ
ಯೊಳುದಿರುಳಿನಿದುವಡೆದುದೆನೆ ಶಾಲ್ಮಲೀಕಲ್ಪ
ಫಲವಿಡಿದುದೆನಲಜಂ ಗಜವಾಯಿತೆನಲು ಅಂತ್ಯಜನೆತಿಪನಾದನೆನಲು।
ನೆರಯೆನಲ್ಬಹುದೆ ನಿಮ್ಮಯ ಮಾತಿದೇನು ಕಾ
ಳ್ಬಳಕೆ ವೈಷ್ಣವವಿಕಳನಾವಭಕ್ತರನೆಳಲು
ಸುಳಿಯಲಿರದೇಳ್ವ ಶಿವಶಬ್ದ ಕೇಳಿಡುವ ಕಿವಿಯೊಳು ಬೆರಳನೆನಲೆಂದನು ॥೨೫॥

[1] ವೊಂ (ಗ).

ಅಂತ[1]ದೆ[1]ಲ್ಲಾಕಾಂಬ ಬಳಕೆಯಾತಂಗೆ ನಿಜ
ವಂತಲಾ ಚೋದ್ಯವಿದನೆಂಬ ಕಾರಣದಿ ಪರಿ
ದಂತಸ್ಥಮಂ ಬಿನ್ನವಿಸಿದೆ ದೇವಾ ಪರೀಕ್ಷಾನಿರೀಕ್ಷಣೆಯು ನಿಮ್ಮ।
ಮಂತ್ರಿಯೊಬ್ಬನ ಕೊಟ್ಟೊಡಿಂದಿರುಳು ತೋರ್ಪೆನಾ
ಗಂತುಕವ ನೀವೆ ನಿರ್ಧರಿಸೆನಲೊಡಂಬಟ್ಟಿ
ದಂ ತಿಳಿವೆವೆಂದಾ ಸಮಯಕಾಲಕೊರ್ವ ವಿಶ್ವಾಸಯುಕ್ತನ ಕಳುಹಲು ॥೨೬॥

ಬಂದಾದ್ವಿಜೋತ್ತಮನ ಮನೆಯೊಳಗೆ ಬೇಹಿರಲು
ಎಂದಿನಂದದಿ ಮಂಚಿಮರಸರರಮನೆಗೆಲಸ
ದಂದುಗವತೀರ್ಚಿ ಬಂದಂಗಶುದ್ಧಿಸ್ನಾನಗೈದು ತಮ್ಮೇಕಾಂತದ।
ಮಂದಿರವ ಹೊಕ್ಕಾ ಕವಾಟಮಂ ಬಲಿದು ತ
ನ್ನೊಂದು ಶೀಲದ ರಾಣಿಸಹಿತ ಶಿವಪೂಜೆಗಾ
ನಂದಾವತಾರವಳವಟ್ಟಾಗಮೋಕ್ತಲಿಂಗಾರ್ಚನಾರತನಾಗಿರೆ ॥೨೭॥

ತೋಱಿದನೆಥಾಕಥನವೆಲ್ಲವನು ಬಂದ ಪರಿ
ಚಾರಗಾ ವಿಪ್ರನು ಗವಾಕ್ಷಗಂಡಿಯೊಳವರ
ಚಾರಿತ್ರಮಂ ಮನದೊಳಿಂಬಿಟ್ಟುಕೊಂಡು ಬಂದಾಗ ಬಸವೇಶಗಂತಾ।
ವಾರತೆಯ ವ್ಯಕ್ತೀಕರಿಸಿ ಲಿಂಗನಿಷ್ಠೆಯ ಸು
ಮೇರುವಲ್ಲದೆ ಮನುಜನಲ್ಲೀತ ನಿಮ್ಮ ಪದ
ಸಾರಸಿಗಳಾಣೆ ಶಿವ ಶಿವ ಮಹಾದೇವ ತಾ ಕಾರಣಿಕನೆಂದು ಹೊಗಳೆ ॥೨೮॥

ಏನು ವಿಸ್ಮಯ ಶಿವನ ಮಹಿಮಾಪ್ರಲಂಬದನು
ಮಾನವನು ಸಂಗನೇ ಬಲ್ಲನೆನುತಾ ಭಕ್ತಿ
ಸಾನು ಸೊಡ್ಡಳಬಾಚಿರಾಜ ಮಧುವರಸ ಜಗದೇವಯ್ಯ ಚನ್ನಬಸವ।
ಈ ನಾಲ್ವರಿಗೆ ಅಱುಪಬೇಕೆಂದವರ ಕರೆಸಿ
ಮಾನವಮಹಾದೇವ ಬಸವನಂತಸ್ತಿಗ
ಳೀ ನವೀನವನುಸುರಲವರು ಬೆಡಗಿನ ಬೆಱಗಿಗಿಟ್ಟ ಮ್ಯ[2]ಗ[2]ದಂತಿರ್ದರು ॥೨೯॥

ಎಕ್ಕ[3]ಸೆಕ್ಕ[3]ದ ಭೇದವಾದಿ ಮೇಲರಸಿಗಿವ
ಮಿಕ್ಕವಿಶ್ವಾಸಿ ನಾವೆಲ್ಲ ಮಂತ್ರಿಗಳು ಭ
ಕ್ತರ್ಕಳೆಂದೊಡ್ಡಿದ ಪ್ರತಿ[4]ಬ್ರಹ್ಮ[4]ವೆಂದಿತ್ತ ತಿರುಗಿತೀ ಕಡೆಗಂತದ।

[1] ದ (ಖ.ಗ.ಘ.ಚ). [2] ತ (ಗ.ಛ). [3] ಶೆಕ್ಯ (ಗ.ಘ.ಛ). [4] ಚಿನ್ಹ (ಗ.ಘ.ಛ).

ಮುಕ್ಕಣ್ಣನೆಯು ಬಲ್ಲ ಭಕ್ತ ವೈಷ್ಣವಹಾಸು
ಹೊಕ್ಕಾಗಿ ನಡೆಸುವ ವಿಡಂಬ ವಿಭ್ರಮಭ್ರಾಂತಿ
ಸಕ್ಕಜದ ಸರಣಿಗಾಣಲ್ಕೋಪವಲ್ಲಿಗಿಂದಿರುಳೆಂದು ಮಥಿಸ್ಯೆವರು ॥೩೦॥

ಆದಿನಿರುಳೋಲಗಂ ಹರೆದ ಬಳಿಕಾಗಣೇ
ಶಾದಿಯೈಯ್ವರು ವೊಂದುಗೂಡಿ ಮಧ್ಯಮರಾತ್ರಿ
ಹೋದ ಹೊತ್ತಿಂಗೆ ಗುಪ್ತದಗುಪ್ತಮಾಹೇಶ ಮಂಚಣ್ಣನಿಪ್ಪ ನೆರೆಯ।
ಸಾಧಕದ್ವಿಜಾಲಯಕೆ ಬಂದಾಯುಮಂ ಪೇಳ್ದ
ಬಾದಣದೊಳಾರ್ಯೆದು ನೋಡುತಿರಲಾ ಭೇದ
ವಾದಮಟ್ಟಿಯನು ನಿಟ್ಟೊರಸಿ ಸತ್ತೃಣವ ಪಂಚಾಕ್ಷರಿಯನುರೆ ಜಪಿಸುತ ॥೩೧॥

ಮಲಿನಮನದೊಳೆದಂಗಮಲದೊಳೆದು ಶಿವಪಾದ
ಜಲಮಿಶ್ರಿತುದಕದಿಂ ವೈಷ್ಣವವತಾರದೊಳೆ
ದೊ[1]ಳು[1]ದಳಿಲು ಕಾಶಿಥೋವತಿಯುಟ್ಟು ಸತಿಸಹಂತರ್ಗೇಹವೊಕ್ಕು ಕದವ।
ಬಲಿದರ್ಗಳುಮನಿಕ್ಕಿ ಬಂದು ಲಿಂಗಾರ್ಚನೆಯ
ಸ್ಥಳದಲಿ ಶುಚಿರ್ಭೂತನಾಗಿ ಕುಳ್ಳಿರ್ದು [2]ವಂ
ಜು[2]ಲವಿಭೂತಿಸ್ನಾನರುದ್ರಾಕ್ಷಿಯಿಂದಲಂಕರಿಸಿ ರುದ್ರತ್ವವಡೆದು ॥೩೨॥

ಮೂಲಮಂತ್ರಾಧಾರಚಕ್ರವಾಜಿಜಿ ಕಮಲ
ನಾಳದಳ ಬಲಿದೂರ್ಧ್ವಮುಖವೆತ್ತುತಮಳೈಕ್ಯ
ದಾಲಯದೊಳಿರ್ದ ಲಿಂಗವ ಕರಸ್ಥಲಕೆ ತಂದಾನಂದದಶ್ರುಮೇಘ॥
ಜಾಳಗಟ್ಟಿಯ್ಯಲು ಹರುಷಪುಳಕ ಪುಳುಕಿಸಿ ಕಂಠ
ತಾಳಗದ್ಗದಿಸಿ ಸ್ನೇಹಾಮೃತವನಿಂಟುತುಮೆ
ಯಾಳ್ದನಂಘ್ರಿಧ್ಯಾನದೊಳು ಭ್ರಮರಿಸುತ್ತೆ ನಿಜಕರಣೋಪಕರಣಾರ್ಥಕೆ ॥೩೩॥

ಅಗ್ರೋದಕಭಿಷೇಕ ಪಂಚಾಮೃತಾಗಮಸ
ಮಗ್ರಪೂಜಾವಿಧಾನದೊಳು ಮಾರ್ಗಕ್ರಿಯಾ
ನುಗ್ರಪಾನಿಯನೇಮದವರಗಳೆಲ್ಲಮಂ ನಡೆಸಕ್ಷಮಾಲೆವಿಡಿದು।
ಅಗ್ರಪದ್ಮಾಸನವ ಬಲಿದು ಲಿಂಗಧ್ಯಾನ
ಸಗ್ರಾಹಿಕತ್ವ ಪಂಚಾಕ್ಷರೀಮಂತ್ರ ನಾ
ಮಗ್ರಹಣಮೂರ್ತಿಯಾಗಿರೆ ಕಂಡು ಕಂಬೇಟಗೊಂಡು ಬಸವೇಶಾದ್ಯರು ॥೩೪॥

---

[1] ಳ (ಧ). [2] ವಿಮ (ಚ).

ಮಂಚಣ್ಣಗಳ ಲಿಂಗನಿಷ್ಠೆಗಾ ಶಿವಮೆಚ್ಚಿ
ಪಂಚವದನಂದೋಱುವಂತಿರಾನಂದರೋ
ಮಾಂಚಹರುಷದೊಳಾಗಣೇಶರ್ವೈವರು ಭಕ್ತಿರಸವಿವೇಶಾಂತರಾಗಿ।
ಸಂಚಿತಸದಾಚಾರಸಂಪನ್ನ ಬಾಹ್ಯಪ್ರ
ಪಂಚೋರವರೆಯ ಶಿವನ ಸಾಮರ್ಥ್ಯಖಡ್ಗವೀ
ಮಂಚಣ್ಣನೆಂದು ಶರಣ್ಬೊಗುವಾರ್ಥದಿಂದ ಶರಣೆನುತ ಬಾಗಿಲಿಗೆ ಬಂದು ॥೩೫॥

ಶರಣು ಸಾಮರ್ಥ್ಯ ಮರ್ತ್ಯಾವತಾರ ಕದದೆಗೆಸು
ಶರಣು ಶರಣಾಗತ ಶಿವಜ್ಞಾನಿ ಕದದೆಗೆಸು
ಶರಣು ಶಂಕರ ಸಂಗ ಲಿಂಗ ನಿಷ್ಠಾಪ್ರತಿಷ್ಠಿತತತ್ವ ಕದವದೆಗೆಸು।
ವರಗುಪ್ತಗಣನಾಥ ನಿಮ್ಮ ಶ್ರೀಪದಪದ್ಮ
ದರುಶನಾ ಹರುಷರಾವೆಂಬ ಶಬ್ದಂಗೇಳು
ತರೆಮುಗಿದ ಕಣ್ದೆಱದು ನಾಲ್ದೆಸೆಯ ನಾಲಿಸುತ್ತಿರಲಾ ಗವಾಕ್ಷದಿಂದ ॥೩೬॥

ನೆರೆಮನೆಯ ಪಾರ್ವನುತ್ಸಾಹಾರ್ಭಟಂಗೈಯ್ವು
ತುರವಣೆಯ ಸಂಭ್ರಮದಿ ಕದದೆಗೆಯೆ ಬಾಗಿಲೊಳು
ಶರಣಿಡುವ [1]ಚ[1]ನ್ನಬಸವಯ್ಯ ಜಗದೇವಯ್ಯ ಮಧುವರಸ ಬಾಚರಸರು।
ಹಿರಿಯ ದಣ್ಣಾಯಕರೆನುತ್ತಲಬ್ಬರಿಪ ಭೂ
ಸುರನ ಕಂಡೋಹೋ ನಮಃ ಶಿವಾಯೆಂದುಭಯ
ಕರದಿ ಲಿಂಗವ ಹೃದಯಕಮರ್ಚ ಗೋಪ್ಯವಗೋಪ್ಯವಾಯ್ತು ವ್ರತದ್ರೋಹವೆಂದು ॥೩೭॥

ಸತಿಯೊಳು ನಿರೂಪಿಸಾ ಲಿಂಗಪ್ರಾಣವನೂರ್ಧ್ವ
ಗತಿಯೆತ್ತಿ ತಲ್ಲೀಯವಾಗಿ ಭಕ್ತಿಯ ಮಲಗು
ವತಿಚಮತ್ಕಾರಗಂಡಾ ಭಕ್ತಿಯುಕ್ತೆ ತನ್ನಯ ಕರಸ್ಥಲವ ಮುಗಿದು।
ಪತಿಪದಾಂಬುಜವಿಡಿದು ಪ್ರಾಣಮಂ ಪರಮಾರ್ಥ
ಗತಿಪದಕೆ ಕಳುಹಂತೆ ತಾ ನಿಷ್ಕಳಬ್ರಹ್ಮ
ವ್ರತೆಯಾದಳೇನೆಂಬೆನುಭಯಗುಪ್ತಗಣೇಶ ಲಿಂಗಪ್ರಾಣಾನ್ವಿಗಳನು ॥೩೮॥

ಇಬ್ಬರಸು ದೇಹಮಂ ಬಿಟ್ಟುದಱಿಯದೆ ಮತ್ತೆ
[2]ಗು[2]ರ್ಬಿನಿಂ ಪಾರ್ವ ವಾತಾಯನದಿ ಕರೆವ ಹೊಱ
ಗುಬ್ಬುಬ್ಬಿ ಬಾಗಿಲೊಳು ಬಸವಾದ್ಯರೆಲ್ಲ ಶರಣಿನ ಸಾರಗಟ್ಟುತಿರಲು।

---

[1] ರ್ಚ (ಕ.ಖ). [2] ರು (ಕ.ಖ).

ಅಬ್ಬರಂ ಘನವಾದುದತ್ತ ಪೂರ್ವ ಪ್ರಾಚಿ
ಮಬ್ಬೋಡಿ ರವಿ ಪ್ರಭಾ ಪಂಜರಿಸುತಿರಲತ್ತ
ಬೆಬ್ಬಳಿಸುತಿರಲಾಪ್ತ ಜನವೊದರೆ ಕಾಕುರದ ಪ[1]ಬ್ಬರ್[1] ಮಸಗಿತು ಮ[2]ನೆ[2]ಯಲಿ ॥೩೯॥

ವಸುದೇಶ್ವರನ ಸಮಾನದ ಮಂತ್ರಿಪತಿಗಳೀ
ನಿಶಿಯೊಳೈತಪ್ಪ ಕಾರಣಮದೇಂ ವೈಷ್ಣವರ
ವಸದಕ್ಕೆ ಭಕ್ತಗಳು ನೆರೆಯಲೇನೀತ ನೃಪಗಾಪ್ತನಾಗಿವ[3]ರಿಗೊಂದು[3]।
ಅಸಮಾನವನ್ಯಮಂ ತೀರ್ಚುಬಂದರೊ ಪತಿಯ
ಬೆಸನದಿಂ ರಾಜಕಾರ್ಯಕೆ ಹಿಡಿಯುಬಂದರೋ
ಹೊಸಪರಿದು ಮನೆಯ ಮುತ್ತಿರುವರೆಂದಾ ಬಂಧುವರ್ಗ ಗಜಬಜಿಸುತಿರಲು ॥೪೦॥

ಕೂಡೆ ಗುಜುಗುಜುಗುಟ್ಟಿ ಕಲ್ಯಾಣ ಪುರದೊಳೆಡೆ
ಯಾಡತೊಡಗಿತು ಸುದ್ದಿ ಕರ್ನಜಾಪ್ಯರಜಿಹ್ವೆ
ನೀಡತೊಡಗಿದವು ಬಿದ್ದ[4]ಲಗ[4] ಬಿಜ್ಜಳನೃಪನ ಶ್ರೋತ್ರ ಭುಜಬಲಶಾಖೆಗೆ।
ಹೂಡಿದರು ಹೋರಟೆಯ ರಥವ ದುರ್ಜನರರ್ಕ
ಮೂಡಿನಾಲ್ಕೆರಡು ಘಳಿಗೆಯೊಳು ಸಿಂಹಾಸನಾ
ರೂಢನಾಗಿಹ ನೃಪತಿಗಾಸಮಯಕೊಂದು ಬಿನ್ನಹದೋಲೆ ಬಂದಿಳಿಯಲು ॥೪೧॥

ರಾಜನೋಲೆಯಮುದ್ರೆಪದೆಗೆದು ಮಂಚರಸ ಕೋ
ಬಾಜಿಸಿದನೆಂದು ನಿಂದಿಹಕಡೆಗೆ ನೀಡುವ ವಿ
ರಾಜಮಾನದಿ ನೋಡಲಲ್ಲಿಲ್ಲದಿರಲೇಕೆ ಬಾರ ಶ್ರೀಹಸ್ತಕನೆನೆ।
ವ್ಯಾಜಮುಖವೇನೊ ದಣ್ನಾಯಕಾದ್ಯರು ಮಂಚ
ರಾಜನಾಲಯುವ ಹೊಕ್ಕೊಳಹೊಗಿಸಿ ಹಡಿಗೆತ್ತಿ
ರಾಜಿಕವ ನೆಗಳ್ದರಿನ್ನೇಕದಱ ಚಿಂತೆ ನಿಮಗೆನುತೆ ಪಿಸುಣರ್ನುಡಿಯಿಡೆ ॥೪೨॥

ಪಾವಮೆಟ್ಟಿದನಂತೆ ಹಣೆಗೋಲುಗೊಂಡನೊಲು
ಪಾವಕನ ಮೇಲೆ ಪದವೂರಿದವನೊಲು ಕಾದ
ಕಾವಲಿಯ ಮೇಲೆ ಕೈಯಿಟ್ಟನೊಲು ನೃಪಬೆಚ್ಚು[5]ತೇನೇನು[5] ಯೆನುತಕೋಪ।
ಗಾವಳಿಯ ಗರುಡಿವೊಕ್ಕಂತುರಿಯನುಗುಳುತಂ
ತಾವಸದಕೊಬ್ಬ ಚಾರನ ಕಳುಹಲವ ಹೋಗಿ
ತಾ ವಹಿಲದಿಂ ಬಂದೆಥಾಕಥನವೇಳೆ ಭುಗಿಲೆನುತೆದ್ದು ಭೂನಾಥನು ॥೪೩॥

---

[1] ಜರ್ (ಖ). [2] ರೆ (ಗ), ಕ್ತ್ಯ (ಕ.ಥ.ಗ). [3] ರೆ ಗೊಂಡು (ಕ). [4] ಗಲ್ಗ (ಖ).
[5] ತೆನ್ನೇನೊ (ಕ), ತೇನೇನೊ (ಗ.ಘ.ಥ).

ಬಂದನೆಮಕಿಂಕರರ ಕೀಳಾಳಿನಂತೆಯಾ
ಮಂದಿರಕೆ ಘರ್ಜಿಸುತಿದೇನು ಮಂತ್ರಿಗಳೈವ
ರೊಂದುಗೂಡೈತಂದು ಮಾಡುವುಪಸರ್ಗ ಬಸವರಸರೇ ನಿಮ್ಮ ಮನೆಯ।
ಬಂಧುಗಳೊ ಪೇಣು ನಿಮ್ಮಾಚಾರದೊಳಗಿಪ್ಪ
ಸಂದಿಗರೊದೇನು ದುರ್ಗುಣವೆನುತ ನೃಪ ಕೋಪ
ದಿಂದ ಬಸವಾದ್ಯರಂ ದಟ್ಟಿಸುತ ಉಗ್ರದಿಂ ನಿಟ್ಟಿಸಲ್ಕವರೆಂದರು ॥೪೪॥

ಕಾರಣದ ಕಣ್ದೆಱವೆಯಲ್ಲದಿಲ್ಲಿಂಗೆ ನಿ
ಷ್ಕಾರಣವು ಬಂದುದಿಲ್ಲವನೀಶ ಕೇಳ್ಸದಾ
ಚಾರಸಜ್ಜನಶುದ್ಧಲಿಂಗಾರ್ಚಕರು ಮಂಚಿಮರಸರಂತಾಗಿಯುವರ।
ದ್ವಾರಮಂ ಕಾಯ್ದವರ ಸದ್ಗತಿಪದಕ್ಕೆ ನಮ
ಸ್ಕಾರವಾಡಲ್ಬಂದೆವೆನಲು ಮುನ್ನುರಿವ ನಿ
ಷ್ಠೂರಾಗ್ನಿಮುಖಕಾಜ್ಯವೊಯ್ದೊಲುರಿದೆದ್ದು ನೂರ್ವ೯ಡಿಸಿತು ನೃಪೋದ್ರೇಕವು ॥೪೫॥

ಕರಚರಣ ಕುಂ[1]ಭಿ[1]ಕ್ಕುತಂಗವುಬ್ಬುತ್ತ ಕಾ
ಹುರಚಿತ್ತ ಕೈದೋಱುತಾಕ್ಷೇಪ ಹೂಂಕಾರ
ಗಱವುತ್ತ ಕೋಪಕೋಳಾಹಳಗಳು ಭಯನೇತ್ರದಿ ನಿಂದು ನಿಟ್ಟಿಪಂತೆ।
ಉರಿವುಕ್ಕುಗಳ ಬೆಟ್ಟನಿಟ್ಟಂತಿವರ ನೋಡು
ತೆರಡು ಕೈಹೊಯ್ದು ಬೆಳುನಗೆಗೊಳಿಕ್ಕೆಲದೊಳಿಹ
ಕೆಲ ವೀರವೈಷ್ಣವರ ಮೊಗನೋಡಿ ನೋಡೀತಗಳ ಧೂರ್ತದುರ್ಬೋಧೆಯ ॥೪೬॥

ಭಕ್ತ ಗಡ ಮಂಚರಸ ತಾವವರ್ಗೆ ಶರಣೆಂದು
ಮುಕ್ತಿವಡೆವರ್ಗಡಾ ಹಾ ಠಕ್ಕ ನೋಡಿ ಪೂ
ರ್ವೋಕ್ತದ ಮಹಾವೀರ ವೈಷ್ಣವನು ಜಗವೆಲ್ಲವಱಿಯಲಿನ್ನಾವುದು ನಿಜ।
ಯುಕ್ತಿಶೂನ್ಯರ ಮಾತಗೇಳಲಾಗದು ಯಿವರ್ಗ
ಳುಕ್ತಿಯ ಬಗೆಯದೇನು ತಿಳಿವೆ ಕದದೆಗೆಸೆನಲು
ದಿಕ್ತಟಂ ಘೀಳಿಡಲ್ಕೊದರೆ ಪರಿಜನ ಪ[2]ಡೆವಳ ಕರ್ಾಹುರದಿ ಕರೆಯಲು ॥೪೭॥

ಅಟ್ಟಾಸುರಂಗಟ್ಟುತಿರೆ ನುಡಿವರಿಲ್ಲೊಳಗೆ
ಹೆಟ್ಟಿದರ್ಗಳದೆಗೆವರಿಲ್ಲದಿರೆ ಕದವನೊಡೆ
ಗುಟ್ಟೆಂದು ನೃಪ ನಿರವಿಸಲು ಕದವನೊಡಬಡಿದು ತೆಗೆದೊಳಗೆ ನಿಲುಕಿ ನೋಡೆ।

---

[1] ಕಿ (ಖ). [2] ಡೆದವ (ಕ.ಖ.ಗ).

ಮಟ್ಟಿಮರುಳ್ತನವಳಿದು ಭಸಿತರುದ್ರಾಕ್ಷಿಯಳ
ವಟ್ಟಕ್ಷಮಾಲೆ ಕರದೊಳು ಲಿಂಗಪೂಜೆ ನಿಜ
ಹೆಟ್ಟುಗೆ ಸಮೇತಸುವ ಬಿಟ್ಟು ಭಿತ್ತಿಯನೆಮ್ಮಿ ಪರಮಕಾಷ್ಠದೊಲಿರಲ್ಕೆ ॥೪೮॥

ಕಂಡು ಕಾಹುರ ಮನಕ ಕಳವಳಾರ್ಭಟಿದೊಡಗೆ
ಮಂಡಲಾಧಿಪ ತಾನೆ ನೋಡಿ ಹಣೆಯಂ ಕೋಲು
ಕೊಂಡಂತೆ ಮಱುಕ ಮೊನೆಗೊಂಡು ಹರಣಂ ಹವ್ವನೆಯೆ ಹಾರಿ ಹೂಂಕರಿಸುತ।
ದಂಡನಾಯಕ ಪಾಪ್ಯಸಂಹಿತೋಪಾಯದೊಳು
ಕೊಂಡ ಹರಣವನನ್ಯಶ್ರೀಹಸ್ತಹಸ್ತವಂ
ಖಂಡಿಸಿದನನ್ವಯುವ ತುಂಡಿಸುವ ಹಿಡಿಕಟ್ಟೆನಲು ಬಸವನುಸುರ್ದ ವಚನ ॥೪೯॥

ವಚನ :—

ನೀ ಹುಟ್ಟಿಸಿದಲ್ಲಿ ಹುಟ್ಟಿ, ನೀ ಕೊಂದಲ್ಲಿ ನಾ ಸಾಯದಿರ್ದರೆನ್ನ ವಶವೆ ಅಯ್ಯ? ನೀನಿರಿಸಿದಂತಾನಿರದೆನ್ನ ವಶವೆ ಅಯ್ಯ? ನೀ ಮಾಡಿದಂತಾನಾಗದೆನ್ನ ವಶವೆ ಅಯ್ಯ? ಅಕಟೆನ್ನವನೆನ್ನವನೆನಿಸಯ್ಯ ಕೂಡಲಸಂಗಮದೇವ ॥೧॥

ಎಂದು ನಿರ್ಬಂಧದೊಳು ಪಾಡುತಿರಲಾ ನೃಪನು
ಮುಂದುಗಾಣದೆ ಕೋಪದುಃಖಮುಖದೊಳು ಮುನಿದು
ಸಂದುಗಡಿಸುವೆನಿವರ್ಗಳನ್ಯಾಯಮಂದೋರ್ಪ ಕರೆ ಪುರಜನವ ಪಾತಕ।
ವೃಂದವರ್ಚಿಸುವ ಜಂಗಮಭಕ್ತರೆಂಬ ಕ
ರ್ಮಾಂಧರೊಳಗಾದವರನೆನೆ ಚರರು ಪರಿದು ಕರ
ತಂದು ನೆರಹಿದರು ನಾನಾನರರ ದರ್ಶನಾದಿಗಳನಾ ತತ್ಕ್ಷಣದೊಳು ॥೫೦॥

ನಾನಾಜನಕ್ಕಿದಿರ್ಚಿ ನಿಂದಟ್ಟಹಾಸದಿಂ
ದೇನಮಾಡಿದಡಿವನೊರ್ಡಿರುದ್ದಂಡಪ್ರ
ಧಾನರೀ ವೈಷ್ಣವಗೆ ದುರ್ಬೋಧೆಭಸಿತವಿಡಲೊಲ್ಲದೊಡೆ ಗುದ್ದಿ ಕೊಂದ।
ರೇನೊ ತಮ್ಮಯ ಮಂತ್ರವೇಳೆಗಲಯದೊಡೀತ
ನಾನನವನೊತ್ತಿದರೊ ರುದ್ರಾಕ್ಷಲಿಂಗವಂ
ದೇ[1]ನಕೆಯೆ[1] ಕಟ್ಟಲೊಲ್ಲದೊಡೆ ಮುಱಿದರೊ ಕೊರಳ ಕೊಂದರೋ ಏಷವ ನೂಡಿ ॥೫೧॥

ಬಂದರ್ಗೆ ನಿಂದರ್ಗೆ ಕಂಡರ್ಗೆ ಕೇಳದ
ರ್ಗೆಂದೆಂದು ತೋಱಿ ನೃಪ ತಾನೆ ಕೊಲೆ ಹೊಲೆಪಾಪ
ದ್ವಂದ್ವ ವೈರವಿರುದ್ಧ ಪ್ರಭುಮತ್ಸರಕೆ ಸಮಯಸಂಕಲ್ಪ ನಾನಾಮುಖ।

---

[1] ನಕಿಯ (ಗ.ಫ.ಛ).

ಒಂದೊಂದನಣಿಯೆತ್ತಿಯಪರಾಧಶತವ ಜಗ
ವಂದ್ಯರ್ಗೆ ಸಭೆ ಮು[1]ಚ್ಚಿ[1] ಹೊಱಿಸಿ ಮಂಚರಸರಂ
ಕೊಂದರ್ಗೆ ಕೊಲೆಪ್ರಾಪ್ತಿಯೆನೆ ಸರ್ವಜನ ಬಸವರಾಜಯೆಂತೆನಲೆಂದರು ॥೫೨॥

ವಚನ : —

ನಾಳೆ ಬಹುದು ನಮಗಿಂದೇ ಬರಲಿ, ಇಂದು ಬಹುದು ನಮಗೀಗಲೇ ಬರಲಿ, ಇದಕಾರಂಜುವರಯ್ಯ? ಎಲೆ ಮನವೆ 'ಜಾತಸ್ಯ ಮರಣಂ ಧ್ರುವಂ' ಪುಣ್ಯದ ಫಲವು, ಇದಕಾರಂಜುವರು ಕರ್ತೃ ಕೂಡಲಸಂಗಮದೇವ, ಇದ ತಪ್ಪಿಸುವಡೆ ಹರಿಹರಬ್ರಹ್ಮಾದಿಗಳಿಗಳವಲ್ಲ ॥೨॥

ಹಾಡಿಂಗೆ ಹಾಡಬಿಡು ಹಮ್ಮ[2]ಗುಳ್ದು[2] ಮಗುಳ್ದು ಮಾ
ತಾಡಲನ್ನೇತಕ್ಕೆ ಕೊಂಡು ನಡೆಯಿರೊ ಮಸಣ
ಗಾಡಿಂಗೆ ಹೆಣಗೊಂಡೆನುತ್ತಲಾ ದೆಸೆಯವರ ಕರೆದು ಶ್ರವದೆಗೆಸೆಂದೊಡೆ।
ನೋಡಲಾಗದು ಮುಟ್ಟಲಾಗದದು ದುಷ್ಕರ್ಮ
ದೊಡಲಾಯ್ತು ವೈಷ್ಣವಮಹತ್ತಳಿದು ಪಾಷಂಡ
ಮೂಢತೆಯ ಭಸ್ಮಗಿಸ್ಮಂ ಅಂಗಲಿಂಗವೆಂದಸ್ಪೃಶ್ಯಶ್ರವವಾದುದು ॥೫೩॥

ಆಸೆಯಿನ್ನೇಕದಱಿ ನಮ್ಮ ಭಾಗ್ಯದ ಬೆಳೆಯು
ರಾಶಿಯಂ ಸೂರೆಗೊಂಡವರು ತಾವೇ ಪಿತೃಪ್ರ
ದೇಶಗೊಡನೊಕ್ಕಲಾಗೊಯ್ಯಲೆಂದರಸಿನಡಿಯೊಳ್ಪೊರಳಿ ಗೋಳಿಡುತಲಿ।
ಆಸುರದೊಳವರ ಮಾತಾಪಿತಸಹೋದರವಿ
ಶೇಷಬಂಧುಸಮೂಹವವಿಧಾ ಯೆನುತ್ತಲವ
ನೀಶಂಗೆ ಮಱುಕ ಮಱುಕಳಿಸಿ ಬಸವಾದ್ಯರಂ ಬಾಷ್ಪಳದಿ ನುಡಿವುತೆಂದ ॥೫೪॥

ವಧಿಸಧೋಗತಿಕನೆಂದೆನಿಸಿಹಪರಕ್ಕೆ ಸ
ಲ್ಲದ ಶವವ ಮಾಡಿದ[3]ರ್ನಿರ್ೀವೆ ಹೊಱು ಹೆಣನನೆಂ[3]
ದದುಹುತೊಳನೂಂಕಲೊಳಹೊಕ್ಕು ಮಂಚರಸರಿಹ ಮಹಿಮೆಗಂಡವರ್ರೈವರು।
ಪದಕೆ ಸಾಷ್ಟಾಂಗಪ್ರಣುತರಾಗಿ ಮುಕ್ತಿಪಥ
ದೊದವಿನ ತ್ರಿಪುಂಡ್ರವಮಂ ಹಸ್ತಪರುಷನಗ್ಗೈದು
ಸದಮಳಾಂಗನ ಭಾಳದೊಳು ಬಸವನಿಡುತೊರೆದ ವಾಕ್ಸಿದ್ಧರಸವಚನವು ॥೫೫॥

---

[1] ಚ್ಚ (ಗ). [2] ಗೇಳ್ದು (ಕ.ಘ). [3] ರಿದೇಹೊರಿರಿಹೆಣನನೆಂ (ಖ).

ವಚನ :—

ಈ ಕಯ್ಯಲೇ ಸುಖವು, ಈ ಕಯ್ಯಲೇ ದುಃಖವು, ಏಕಯ್ಯ ನೀ ನಮ್ಮ ಬರಿದೆ ಬಳಲಿಸುವೆ? ನಾನಾರ ಸೇರುವೆನಯ್ಯ? ಆರು ಇಲ್ಲದ ದೇಸಿಗ ನಾನು ಕಣಾ ಕೂಡಲಸಂಗಮದೇವ ॥೩॥

ಬಲೆಗೆ ಸಿಕ್ಕಿದ ಮೃಗದಂತೆ ನಾನಯ್ಯ, ಮಱಿದಪ್ಪಿದ ಹುಲ್ಲೆಯಂತೆ ದೆಸೆ ದೆಸೆಗೆ ಬಾಯಬಿಡುತಿರುವೆನಯ್ಯ? ನಾನಾರ ಸಾರುವೆನಯ್ಯ, ತಾಯಾಗಿ ತಂದೆ ಯಾಗಿ ನೀನೆ ಸಕಲ ಬಂಧು ಬಳಗವು ನೀನೆ ಕೂಡಲಸಂಗಮದೇವ ॥೪॥

ಎಂದು ಭಸಿತವ ನೊಸಲೊಳಿಡೆ ಪೂರ್ವಜನ್ಮಜಡ
ದಂಧಕಾರೊಡಲು ಮುಡುಹಿನಸುಡುಗೆ ಗತಿಮಟ್ಟಿ
ಮಣ್ದೋಷಲೌಕಿಕನು ಸಂಕಲ್ಪಭವಬಾಧೆಕರ್ಮಲಿಖಿತಾಕ್ಷರಗಳ।
ಸಂದೇಹದೇಹಾದಿ ಗುಣಗಳೆಲ್ಲಳಿದುವದ
[1]ಱಿ[1]ಂದಲಾ ಪರುಷಹಸ್ತವನಾತನಾ ಬ್ರಹ್ಮ
ರಂಧ್ರದೊಳಗಿಡಲಮೃತಬಿಂದೊಸರ್ದು ಒಳಗಾತ್ಮಜ್ಯೋತಿಪ್ರಭಾವ ತೋಱಿ ॥೫೭॥

ಪ್ರಾಣ ಪ್ರಭಾವಿಸಿ ದಶೋವಾಯುಗಳು ನಿಜ
ಸ್ಥಾನದೊಳು ನಿಲಲು ಚೇತರಿಸಿ ಕಣ್ದೆಱಿದಿವರ
ಕಾಣುತ್ತ ಕರಸ್ಥಲದ ಲಿಂಗಮಂ ದೃಷವಿಡುವುತೆದ್ದು ಮಂಚರಸಯ್ಯನು।
ಮಾಣದೆ ನಮಃಶಿವಾಯೆನುತೆಱಗಿ ಸಂತೋಷ
ಕೇಣಿಗೊಂಡಂತಿವರನಾಲಿಂಗಿಸಾ ತನ್ನ
ರಾಣಿವಾಸಕ್ಕಂತೆ ಸಂಸ್ಕಾರಮಾಡೆ ಶರಣೆನುತೇಳುವಾಶ್ಚರ್ಯವ ॥೫೭॥

ಕಂಡು ಕಣುನೀರಿಕ್ಕತೊಡಗಿತಾ ಭೂವರನ
ಮಂಡೆಗೇಱಿದ ಕೋಪದುದ್ದಂಡವನಮೂಲ
ಖಂಡಿಸಿತಸಹ್ಯಗಿರಿ ಬಿರಿಯಿತ್ತಹಂಕಾರ ಶಿರಧರಾತಳಕಿಳಿದುದು।
ತುಂಡಿಸಿತು ದುರ್ಭಾವದುಶ್ಶಬ್ದಮು[2]ನ[2]ಘಾಯ
ಗಂಡಿತಿದಿರುತ್ತರಂ ಧೂಳಿಪಟವಾಯ್ತು ನಡೆ
ಗೊಂಡವರ್ಬಹ ವ[3]ಜ್ರ[3]ದಂಡದಿಂ ಕಡಿವಡೆದುದಾ ನೃಪನ ಗರ್ವಶೈಲ ॥೫೮॥

ಆದಿಶಿವಭಕ್ತಿಯಿಂತುಭಯುಗಣಸಹಿತೆ ಬಸ
ವಾದ್ಯರೈತರೆ ಕಂಡು ಸರ್ವಜನವಾಶ್ಚರ್ಯ
ಭೇದವಱಿಸುತ್ತಿರ್ದುದಖಿಲಶಿವಭಕ್ತರೆಲ್ಲಾನಂದಿಸಲ್ಕೆ ನೃಪನು।

---

[1] ದಿಂ (ಚ). [2] ನು (ಕ.ಖ). [3] ಜ್ರ (ಗ.)

ಚೋದ್ಯ ಚೋಹಂದೊಟ್ಟೊಲವರವರ ಮೊಗನೋಡಿ
ನಾ ದುರಾಗ್ರದೊಳೇಕೆ ಅಡಿದೆನೊ ಯೆನುತಲತಿ
ಖೇದಗೊಳುತಿರಲವರ್ಬಂದು [1]ನಿಲೆ[1] ನುಡಿ ಭಾವ ಮುಖಭಂಗಬಟ್ಟಿರ್ದನು ‖೫೯‖

ಆ ಮಹಾಮಹಿಮನವರಂ ತಂದು ನಿ[2]ಲಿಸಲೆಲೆ[2]
ಭೂಮಿಪತಿ ಇವರ್ಗೆಮ[3]ಗದೇನು[3] ಪ್ರಾಪ್ತೆಂಬುದದ
ನೇಮಿಸಾ ನಿನ್ನರ್ಥಿ ಸಲುವನ್ನಕೆನಲು ತಲೆಗುತ್ತವರೊಳಿಂತೆಂದನು।
ತಾಮಸದ ತತ್ವವಾದೆತ್ತ ಭಕ್ತಿತ್ತ ಮೇ
ಲಾಮಡದಿ ಸಹ ಸಾವುದೆತ್ತ ನೀವೆ[4]ಲ್ಲ[4]ರುಹ
ನಾ ಮೊದಲನನ್ವಿತವದನ್ಯಾಯಪದವಗಿಸಲುಂ ನ್ಯಾಯಪದವೊಗಿಸಿತು ‖೬೦‖

ನೀವೆ ಬಲ್ಲಿರಿಯಿದೆಮಗರಿದು ಹರಿಬ್ರಹ್ಮಾದಿ
ದೇವತಾದಿಗೆ ತಿಳಿವ ಬಡಗಲ್ಲ ರಾಜಸದೊ
ಳಾವಹಿತರಾದೆವೆಂಬಾ ಪ್ರಪಂಚನನಿಷ್ಪ್ರಪಂಚಿಗಳು ತಿಳುಹ[[5]ಲೆಂದು][5]।
ಆ ವಿಧಾನವನೆಲ್ಲವನು ತಮಗೆ ಮುಂ ಪೇಳ್ದ
ಆ ವಿಪ್ರಮುಖದಿಂದಲಱಿಪರ್ನಿರಪರಾಧಿ
ಪಾವನರ ಮೇಲೆ ಪಾಪಪರಾಧಹೊಱಿಸಿ ಮುಳಿದಪರಾಧಿಯಾನೆನುತ್ತ ‖೬೧‖

ಕರಯುಗವ ಮುಗಿದು ಮನನೋಯಬೇಡಿಂತಿವರ
ತಿರುಹುಮುರುಹಱಿಯದಜ್ಞಾನಿಯಾನಾರಾವ
ಪರಿಂಗಲಿಹ ಪರಿಯ ಪರಮೇಶ್ವರನೆ ಬಲ್ಲನಲ್ಲದೆ ನೀವೆ ಬಲ್ಲಿರೆನುತ।
ಅರಸು ತಲೆವಾಗಿ ಬೀಳ್ಕೊಟ್ಟು ಕಳುಹಲು ಮಂಚಿ
ಮರಸರ ಸದಾಚಾರಕೊಲಿದು ಶಿವಕೈಲಾಸ
ಪುರಕೊಯ್ಯಲಾ ಬಸವ ಪುರದತ್ತ ತಿರುಗಿತಾ ಭಕ್ತಿ ಶ್ರೀಭಾಗ್ಯಮುಖವು ‖೬೨‖

ಸಕಲ ಸಂಭ್ರಮಸದಾಚಾರದೇಳ್ಗೆಯೊಳಖಿಳ
ಭಕುತರೊಗ್ಗಿನೊಳು ಧೂಪದ ಮಂಚಿಮರಸರೆಂ
ಬಕಳಂಕಚರಿತನಂ ಗಣತಿಂಥಿಣಿಗೆ ತಂದು ಬಸವಭರ್ಗನ ಮಹಿಮೆಯ।
ಪ್ರಕಟಿಸುವೊಡೆನ್ನಳವೆ ಯೆನುತ ಪ್ರಮಥರ್ಗೆ ಕರ
ಮುಕುಳನಾಗೊರೆದ ನಂದೀಶವಾಕ್ಯ ಪ್ರಸಾ
ದ್ಯಕುತಿಯ ಸದಾಚಾರ ಸಂಪನ್ನರವಧರಿಸಿ ಲಾಲಿಪುದು ಲೀಲೆಯಿಂದ ‖೬೩‖

---

[1] ನೀತಿ (ಪು). [2] ಸುತೆಲೆ (ಖ.ಕ). [3] ನಮೇಣು (ಕ.ಖ). [4] ಲ್ಲಿ (ಪು).
[5] ಲೋಸುಗ (ಸ.ಪ್ರ).

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಗುಪ್ತಮಂಚರಸರಂ ಬಸವ ಮೆಱೆದ ಸಂಧಿ ॥೬೪॥

ಮೂವತ್ತನೆಯ ಸಂಧಿ

ಸೂಚನೆ—

ಕುಟಿಲದಿಂ ನೃಪ ಜಂಗಮವ ನಟಿಸೆ ವಿಪುಲತರ
ನಟವಿಯೊಳು ಪುಲಿವಾಲ ಬೇಡಿಸಲ್ಕೊಡನೆ ಹೃ
ತ್ಕಟದಿ ಸದ್ಭಾವ ಭಕ್ತಿಯೊಳ್ನಿದೆ ಪುಲಿಯ ಕಱಿದೆಱಿದ ತಪಸಿಗೆ ಬಸವನು॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾ ಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಹಾರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಕುಧರಾತಪತ್ರ ಪದ್ಮಜ ಶತಕ್ರತುವೃಷ
ರ್ಬುದನು ಹರಿ [1]ಕೋ[1]ಣಪ ವರುಣ ಜಗತ್ಪ್ರಾಣ ಉಪ
ನಿಧಿಪ ಈಶಾನ್ಯಾದಿ ದೇವಕುಲವಂದ್ಯಪದದಗಣಿತ ಪ್ರಮಥಜಗಕೆ।
ಅಧಿಪನಿರ್ಮಾಯನದ್ವಯದೂರ ದುಷ್ಕರ್ಮ
ವಿಧಿನಿಷೇಧಂ ಪುಣ್ಯಪಾಪನಿರ್ಲೇಪ ಷ
ಡ್ವಿಧಭಕ್ತಿಲೋಲ ಶಿವನವತಾರ ಬಸವದಂಡಾಧೀಶ ಸಲಹೆಮ್ಮನು ॥೨॥

ಒಂದುದಿನ ರಾತ್ರಿಯೋಲಗಗಳೆವುತರಸು ನಲ
ವಿಂದಲೇಕಾಂತವಾಸದೊಳಾಪ್ತಮಂತ್ರಿಗಳೊ
ಳೆಂದನತಿಸರಸಪ್ರಸಂಗದಿಂ ಬಸವಮಂತ್ರೀಶನ ಸುಚಾರಿತ್ರವ।
ಒಂದೊಂದನಣಿಯೆತ್ತಿ ತೋರ್ವನು ಕರಾಂಗುಲಿಗ
ಳಿಂದ ಪಾಲ್ಗಱೆದೆಮಗೆ ತೋಱಿದ ಮಹಾಪುರುಷ
ನೆಂದು ನೃಪ ಕಟಕಿಯೊಳು ನುತಿಸುತೆಂದನು ಕುಟಿಲ ಕುಲತಿಲಕ ಮಂಚರಸನು ॥೩॥

ಎನುತಲಾ ಕಾಳಿಮ ಕರಿಯ ಕೇಶವನು ಚೋಳಿ
ಮನು ಪೆದ್ದಿಭಟ್ಟನೊಳಗಾದಾಢ್ಯ ಮಂಚರಸ
ರನುಮತದೊಳೊರ್ವಗೀಶ್ವರ ಲಾಂಛನಂಗಳನಮರ್ಚಿ ಧೂರ್ತಪ್ರಕರವು।

[1] ಕೊ (ಘ).

ಜನಪತಿಗೆ ತೋಱುೞ ಹಾಸ್ಯಕ್ಕೆ ಪಕ್ಕಾಯ್ತು ಬಸ
ವನ ಭಕ್ತಿ ಯೆಂದು ಮಿಗೆ ನಗುತ ಕೌಶಿಕ ವಿಕ
ರ್ತನ ಪಳಿವ ತೆಱದಿ ಅಜ್ಞಾನಾಂಧಕಾರದಿಂದಿರುತಲಾ ಮರುದಿನದೊಳು ॥೪॥

ಗೋತ್ರಪಾಲಕನೇಕಛತ್ರದೊಳು ತಾನಾಳ್ವ
ಗೋತ್ರದೊಳಗುಳ್ಳ ಧೀವರರನೆಲ್ಲರ ಕರೆಸಿ
ಗೋತ್ರ ಪಾರ್ಶ್ವದೊಳು ಬೇಂಟೆಯನಾಡಬೇಕೆಂದೆನಲ್ಕವರ್ತಮ್ಮ ಜಾತಿ।
ಗೋತ್ರದೊಳು ಮೂರ್ಕೋಟಿವರೆ ಶಬರನಾಯಕರು
ಗೋತ್ರಬೆಸಲಾದಂತೆ ಬರಲರಿನೃಪರ ಗರ್ವ
ಗೋತ್ರಪವಿ ಬಿಜ್ಜಳನರೇಂದ್ರ ತೆರಳ್ದನು ಕುಟಿಲ ಬೇಂಟೆಗಾ ಬಸವಸಹಿತ ॥೫॥

ಎಕ್ಕಟಿಗರೆಂಭತ್ತು ಲಕ್ಷ ಮೂವತ್ತಾಱು
ಲಕ್ಷವಾನ್ನೆಯವರ್ಗದಂತರದ ಈರೆಂಟು
ಲಕ್ಷನಾಯಕರು ಬಾರಹಕೋಟಿ ಸಾವಂತರುಗಳೊಗ್ಗಿನಿಂ[1]ಸಾಣವ[1]।
ಲಕ್ಷತೊಂಭತ್ತಾಱು ಜಾತ್ಯಶ್ವಯೆಡಬಲದಿ
ಉಕ್ಕಿ ಕವಿದುದು ಸಾವಿರದಯೇಳುನೂಱು ಕರಿ
ಲಕ್ಕ ತೊಂಬತ್ತಾಱುಕೋಟಿ ಕಾಲಾಳುಗಳೊಳಡಗಿದ ಜನಮದಗಣಿತ ॥೬॥

ಏನನುಸುರ್ವೆನು ಬಿಜ್ಜಳೇಶ್ವರ ಸಂಪದವ-
ನೂನತೆಯ ಹಿಂದೆ ಮುಂದಿಕ್ಕೆಲದಿ ಬಹಳ ಪ್ರ
ಧಾನರುಪಮಂತ್ರಿಗಳು ಮಕುಟವರ್ಧನರುಭಯಕುಲರಾಜಸಂತತಿಯೊಳು।
ಸಾ ನಡೆಯೆನುತಲುಘ್ಘಡಿಪ ದಂಡಧರರೊಡನೆ
ಯಾನ[2]ಕಿ[2]ಯವಕರ್ೂಡೆ ಲಕ್ಕವರೆಯುಲಿಯುಲಸ
ಮಾನದಕ್ಕರಿಗ ಭಟ್ಟರ್ಕವಿದು ಕೀರ್ತಿಸಲು ನೃಪ ಪುರವ ಹೊಱವಂಟನು ॥೭॥

ಜಡಧಿಯ ರವವನೊಡಬನುಗ್ರಘೋಷವನು ಬರ
ಸಿಡಿಲ ಘನಘರ್ಜನೆಯ ನಿಲಿಸುವಂತಾರ್ಭಟಿಸಿ
ಜಡದಡಸಿ ಹೊಡೆವ ನಿಸ್ಸಾಳ ತಮ್ಮಟೆ ಭೇರಿ ಡೋಳ್ಗಳ ಮಹಾಧ್ವಾನದ।
ಗಡಣದೊಳಗುಲಿವ ರಣವಾರಿಗಳು ಗಿಡಿಬಿಡಿಗ
ಳಡಸಿ ಭೋರ್ಗರೆದು ಬೊಂಬುಳಿಕೊಂಬುಗಳ ರಭಸ
ದೊಡನೆ ರವಿಕುಲತಿಲಕ ಬಿಜ್ಜಳನರೇಂದ್ರನೈತಂದ ಘೋರಾರಣ್ಯಕೆ ॥೮॥

---

[1] ಸಾರ್ವ (ಫ), ನಡೆವ (ಐ), [2] ಕೀ (ಗ).

ಎಸೆವ ಶಿರ ಸಂಕೋಲೆ ತದಕುತರಿತಾರಿ ತಂ
ಡಸದಿಂಡ ಪೆರ್ಬೂರ ಕಪಿಥ ಸಾಲಸುಬೇಲ
ಬಸುರಿ ಬಿಳುನೆತ್ತಿ ತುಂಬುರ ಬಿಕ್ಕ ನೆಲ್ಲ ಚಂದಣವತ್ತಿ ಬಸುರಿ ನಿಂಬೆ।
ಹಸುವರಂ ತಡಸು ಗೆಟ್ಟಕ್ಕಿತಳ ಪಿಚುಮಂದ
ನೆಸರೆ ಬಲುಕುಣಿಕೆ ಪಾದರಿ ಹಾಲೆ ಶೇಗುಗಳ
ವಿಸರ ನಾನಾವೃಕ್ಷಜಾತಿಯಿಂದೆಸೆವ ಘೋರಾರಣ್ಯ ಕಣ್ಗೆಸೆದುದು ॥೯॥

ಹರಿತಲ್ಪದಂತೆ ಮನ್ಮಥನಂತೆ ಸಿಡಿಲಂತೆ
ನೆರೆ ಬಂದರಂತೆ ವಾಸವನಂತೆ ಬಲಿಯಂತೆ
ನರನಂತೆ ವೃಷಭನಂತಗ್ನಿಯಂತಭವನಂತಮಲ ಪುರುಷಾಶ್ವದಂತೆ।
ವರಮುನಿಗಳಂತರಸಿನಂತಪ್ರವರದಂತೆ
ಪಿರಿಯುರಂ ಕರೆವಂತೆ ಪಾಪದೊಳ್ಮಯ್ಯೂರ
ಚರಣನಾಮಂಗಳಿಂದೆಸೆವ ಕುಜಕುಲದ ಕಾನನವೊಕ್ಕ ಚಕ್ರೇಶನು ॥೧೦॥

ಕಾನನದೊಳುರೆ ಚಾರಿವರಿದು ಮಿಗೆ ತನತನಗೆ
ಕಾನನಾಂತಕರು ನಲಿದಲ್ಲಲ್ಲಿಗೆಲ್ಲ ಬಲು
ಬೋನುಗಳ ಗಿರಿಗಹ್ವರದೊಳೊಡ್ಡಿ ಬಲುಬಲೆಗಳನು ಚಾಚಿ ಸರುಹಗಟ್ಟಿ।
ಭಾನುಕುಲತಿಲಕ ನೋಡಲ್ಕೆ ಮೃಗದಿಕ್ಕೆಗಳ
ಮೌನದಿ ಕೆಲಬೈಂಟುಕೋಟಿವರೆನಾಯ್ಗಳ ಸು
ಮಾನಸದಿ ಬಿಡುವಾರ್ಭಟೆಗೆ ವಿಪುಳತರದಿ ಕಾನನವೆಯ್ದೆ ಗೋಳಿಟ್ಟುದು ॥೧೧॥

ಇಕ್ಕೆಗೆಟ್ಟವು ಹರಿಣ ಕರಡಿ ಕಾಡ್ಕೋಣ ಮುಱೆ
ಸಿಕ್ಕಿದವು ಬಲುವಂದಿ ವಿಪುಲತರಮೃಗವಿಸರ
ದಿಕ್ಕೆಗೆಟ್ಟಿರಲಾಗಳೀದ ಪೆರ್ಬುಲಿ ಗವಿಯ ಪೊಱಮಟ್ಟು ಶಬರಬಲವ।
ಲೆಕ್ಕಿಸದೆ ನಾಲ್ದೆಸೆಯನೀಕ್ಷಿಸುತ ಘುಡುಘುಡಿಸ
ಲಕ್ಕೆಲದ ಸುಭಟರೋಡಲ್ಕರಸು ಹೆದರಿ ಹಿಂ
ದಕ್ಕೆ ಬರೆ ಬಸವನಂ ಪರಸುತಿದ್ದರು ಕುಟಿಲಕುಲದ ಬಹುಲಾಂಥನಿಕರು ॥೧೨॥

ಎಲೆ ಮಂತ್ರಿ ಲೇಸಾಗಲೆನುತ ಜಂಗಮು ಹಸಿದು
ಬಳಲುತ್ತೈತರೆಯುವೇಳೆಂಬುದಿಲ್ಲಾರೇನ
ಒಲದು ಬೇಡಿದ ನೀನು ಕೊಡುವನೆಂಬುದ ಕೇಳಿ ಬಂದೆನೆನ್ನಯ ಶೀಲವ।
ನೆಲೆಗೇಳು ಬಹಳತರವಿನಿತಲ್ಲವೀಗೀದ
ಪುಲಿವಾಲ ನೇಮವೆನೆ ಆಗಲ ಹಸಾದವೆನು
ತಲ ನಮಿಸಿ ತೇಜಿಯಿಂದಿಳಿದು ನಡೆತಂದ ಪುಲಿಯಿದ್ದೆಡೆಗೆ ನಿರ್ಭೀತನು ॥೧೩॥

ಅಕಟಕಟ ಮಂತ್ರಿಯೀ ಬೂದಿಗನ ಮಾತಿಂಗೆ
ವಿಕಳಗೊಂಬರೆ ಚಿತ್ರಕಾಯನಾನನಕೆ ನೀ
ಭುಕುತಿಯಹರೇ ಎಂಬ ಭೂಪತಿಯ ಕುಟಿಲಮನವನದಹನದಾವಾನಲ।
ಪ್ರಕಟತರ ಮಂತ್ರಯಂತ್ರಾದಿ ನಾನಾಕುಟಿಲ
ನಿಕರಗಿರಿ ವಜ್ರದಂಡೇಶನಾ ಪೆರ್ಬುಲಿಯ
ನಿಕಟಕ್ಕೆ ಸಾರ್ದಮೃತದೃಷ್ಟಿಯಿಂ ನೋಡಲದು ರುದ್ರತ್ವವಡಗಿ ನಡುಗೆ ॥ ೧೪॥

ಕಮಲಸಂಭವನ ಶಿರಪಾತ್ರೆವಿಡಿದೀಶನತಿ
ಗಮಕಸತ್ಕಲೆಮೋಹನಂ ಬದರಿಕಾಶ್ರಮದೊ
ಳಮರ್ದು ಭಿಕ್ಷಾಂದೇಹಿ ಯೆನೆ ಕೇಳಿ ಬಂದೀಕ್ಷಿಸುತ್ತ ಋಷಿಯರ ಸತಿಯರು।
ಭ್ರಮಿಸಲಾತಾಪಸನು ವ್ಯಾಘ್ರನಂ ಸೃಜಿಸೆ ತ
ತ್ಕ್ರಮದಿಂದ ಪೆರ್ಬುಲಿಯ ಸೀಳಿ ಚರ್ಮವ ತಾಳ್ದ
ಉಮೆವರನ ಮೂರ್ತಿ ತಾನೀ ಬಸವದಂಡೇಶನೆಂದಱಿದು ಪುಲಿ ನಡುಗಲು ॥೧೫॥

ಅಂಜದಿರೆನುತ್ತ ಮಸ್ತಕವಿಡಿಯೆ ಅತ್ಯುಗ್ರ
ನಂಜಳಿಯೆ ಪಂಚಾಕ್ಷರಿಯ ಮಂತ್ರಕಂ ಭೂತ
ವಂಜುವೊಲು ಮೈದಡಹೆ ಪುಲಿ ನಡುಗೆ ಹಡಪದಪ್ಪಣ್ಣನ ಕರಾಬ್ಜದಲ್ಲಿ।
ರಂಜಿಪ ಸುವರ್ಣಬಟ್ಟಲಗೆ ಕೈಯಾಂತು ಮೃ
ತ್ಯುಂಜಯನೆ ಗತಿಯೆನುತ ನೃಪನ ಸಂದೇಹಮಂ
ಭಂಜಿಸುವ ತೆಱದಿ ನಡೆತಂದು ಪೆರ್ಬುಲಿಯ ಕಱೆದೆಱೆದ ತಪಸಿಗೆ ಬಸವನು ॥೧೬॥

ವರಕುಲಚ್ಛಲ ವಿತ್ತ ವಿದ್ಯೆ ಯೌವನ ರೂಪು
ಉರುತಪಂ ರಾಜ್ಯವಿಂತಷ್ಟಮದವೆನಿಪ ಸಂ
ಚರಣಜಡದಲಿ ಮಾಸಿತ್ತೆ ನಿಮ್ಮ ಮನದಿಳಿದು ನೋಡೀತನಾರೆಂಬುದ।
ಪುರ ಕಾಲ ಕಾಮಸಂಹರಣ ವ್ಯಾಘ್ರಾಜಿನಾಂ
ಬರ ನಿತ್ಯದಿವ್ಯಾಂಗ ಶಿವನು ಸ್ವಲೀಲೆಯೊಳು
ನರಜನ್ಮದಲ ಬಸವನಾಮದಿ ಧರೆಯೊಳುದಿಸಿದನೊಳೆಸಗುವರೆ ಕೃತಕವ ॥ ೧೭॥

ಎಂದು ಬಸವೇಶ್ವರನ ಕೀರ್ತಿಸುತ ಬಿಜ್ಜಳ ನ
ರೇಂದ್ರ ನೋಡಿದು ಚೋದ್ಯವೆಂದೆನುತ ಈ ಪುಲಿಯ
ಕೊಂದು ಹಾಕಿದ ಕರಡಿ ಕಾಡ್ಕೋಣ ಮ[1]ಱೆ[1] ತುರಗ ಶಬರ ಬೇಂಟೆಯ ಜಾಯಿಲ।

[1] ೦ (ಕ.ಖ).

ಸಂದೋಹಗಳನೆಲ್ಲ ತಿಂದುಹಾಯ್ಕಿದ ಪುಲಿಯ
ಇಂದುಧರನಪರಾವತಾರ ಬಸವಣ್ಣ ನೀ
ಮುಂದೆ ಪುಲಿಗಱೆದು ತಪಸಿಗೆ ಹಾಲ ಸಲಿಸಿದನುಯೆಂದು ನೃಪ ಬೆಱಗಾದನು ॥೧೮॥

ದುರ್ಬಗೆಗಳಿಂದ ಘೋರಾರಣ್ಯದಲಿಯುಗ್ರ
ಪೆರ್ಬುಲಿಯ ತೋಱು ಕಱೆಸಿದ ಕುಟಿಲತರದ ಬಲು
ಗರ್ಬಿಗಳೆದೆಯನಟ್ಟಿ ಮೆಟ್ಟಿ ತುಳಿಸುವೊಲು ಕುಣಿಸುತ ವೀಧಿಯೊಳ್ತೇಜಿಯು।
ಸರ್ಬಶರಣಸಮೂಹ ಸಹ ಬಂದು ಪರಮಕಳೆ
ಪರ್ಬಿ ಬಸವೇಶ ನಿಜಗೃಹವೊಕ್ಕನೆಂದೀಶ
ಹಿರ್ಬುದ್ಧನವತಾರನೆಂದು ನಂದೀಶ ಪ್ರಮಥರ್ಗೊರೆದೊರೆಯು ಕೇಳ್ವುದು ॥೧೯॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು [1]ಪುಲಿಯ ಪಾಲ ಜಂಗಮಕಿತ್ತು[1]ಮೆಱೆದಸಂಧಿ॥೨೦॥

---

[1] ತಾಬಸವ ಪುಲಿವಾಲ ಕಱೆದು (ಕ.ಖ.ಗ.ಚ).

ಮೂವತ್ತೊಂದನೆಯ ಸಂಧಿ

ಸೂಚನೆ —

ಅರಸಸಹ್ಯರ ಮಾತ ಕೇಳಿ ಸಂಪದದೆಗೆದು
ಪುರವ ಹೊಱವಡಿಸೆ ಹೋದಲ್ಲಡವಿಯೊತ್ತಿನೊಳು
ವರಸುತನ ಕೈ[1]ಸು[1]ತ್ತಿ ಸಹಿದೆಗೆ[2]ಸ[2]ನಘ್ರ್ಯಪದಕವ ಕಲ್ಪಿಸಿದ ಬಸವನು॥

ಶ್ರೀಮದಖಿಳಾಗಮಾರ್ಣವ ಮಥನಗೈದುನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಕೇಳಿ ಪ್ರಮಥಪ್ರಮುಖರೊಂದು ನಿಯಮದ ಕಥಾ
ರ್ಥಾಳಾಪಕಲ್ಪಕಂದೆಱವಿಯ ಮಹಾಭೂಮಿ
ಪಾಲ ಬಿಜ್ಜಳನ ಸಾಮ್ರಾಜ್ಯಲಕ್ಷ್ಮಿಯ ಭುಜಬಲಶ್ರೀವಧುದ್ವೈವವೆನಿಪ।
ಮೂಲಭಂಡಾರಮುಖ ದಂಡನಾಯಕ ಭಕ್ತಿ
ಭಾಳಾಕ್ಷ ಕಲ್ಯಾಣಕಲ್ಪತರು ಶಿವಗಣಸ
ಮೇಳಸಾಯುಜ್ಯಪದದಾಸ್ಥಾನ ನೀಲಲೋಹಿತ ಭಾವಸಿದ್ಧ ಬಸವ ॥೨॥

ಲಿಂಗಜಂಗಮಪ್ರಾಣಿ ಸಂಗಸುಖಿಯಾಗಾಗ
ಣಂಗಳಿಚ್ಛೈಸಿದುದನುತ್ತಮೋಕ್ತಿಯೊಳು ಮಾ
ಳ್ಪಂಗವಱಿದೊಂದಿನಾಚರಲಿಂಗಸ್ತೋಮವಾನಂದಪರ್ವೋದ್ಯೋಗವ।
ಸಂಗನಬಸವ ಮಾಡಬೇಕೆನಲ್ಕೈಗೊಂಡು
ಸಾಂಗಸ್ಯೈದಾನವ ಪ್ರಯತ್ನಿಸಿಚ್ಛಾಕ್ರಿಯಾ
ರ್ಥಂಗಳಿಂ ಕಲ್ಪಿಸಿದ ಕಲ್ಪಸಂಗ್ರಹಮಹೋತ್ಸಹದಿ ಗಣಪರ್ವೋಕ್ತವ ॥೩॥

ನೆಗಳ್ದ ಪೃಥ್ವಿಯ ಮಹೇಶಾನಂದ [3]ಪರ್ವದೊಳು[3]
[4]ಸೊಗಸು[4]ಸೊಂಪೇಱಿ ಕೆಲಮಾಹೇಶ್ವರಸ್ತೋಮ
ವಗಣಿತದ ಪೂಜಂಪ ಪೂಪಜಂಪಂ ಪಲಸನೇಕವಿಧ ಜಂಪನೊಲ್ದು।

---

[1] ಗು (ಪ.ಜ). [2] ದ (ಖ). [3] ಪರಮಪದ (ಜ). [4] ಮಿಗಿಲು (ಜ).

ನಗರವೀಧಿಯೊಳೆಲ್ಲ ತೀವಿ ಕುಣಿವುತ ಮಂಗ
ಳಗಳ ಪಾಡುತ್ತ ನಿಸ್ಸಾಳ ತಮ್ಮಟೆ ಭೇರಿ
ಜಗಳೆ ಪೇರ್ಬೇರಿ ಶಂಖ ಕಹಳಾ ನಿನದದೊಳು ಗಂಭೀರಘೋಷದೊಳಗೆ ॥೪॥

ಉಬ್ಬುವಱೆವೀರವಲಗೆಗಳ ಮುಂದುಘ್ಘಡಿಪ
ಬೊಬ್ಬೆಗಳ ಕೋಳಾಹಳಾರ್ಭಟೆಯ ದನಿ ಗಗನ
ಗರ್ಭಮಂ ತೀವಿದಂತಾಗೆ ನೃಪ ನಿದ್ದೆತಿಳಿದೆದ್ದು ಹರ್ಮ್ಯಾಗ್ರಕಡರೆ।
ಅಬ್ಬರ[1]ವದೇನೆನಲ್ಕಾ[1] ಕಡೆಯು ನೋಡಲ್ಕೆ
ಸರ್ಬಧನ ಪುರದಂತೆ ವೀಧಿವೀಧಿಯೊಳೆಲ್ಲ
ಹಬ್ಬಿತು ಮಹಾತೇಜವೆನಲಸಂಖ್ಯಾತ ಕೈದೀವಿಗೆಯ ಕಾಂತಿಗಂಡು ॥೫॥

ಕವಿಯೆ ಕಾಳಗಕೆ ಕವಿದಷ್ಟಭೂಮೀಶ್ವರರು
ಕವಿದುದೋ ಮೇಣು ಉತ್ಪಾತಭೂತಾನಂದ
ವವನಿಯಿಂದವತರಿಸಿತೋ ಎನುತ್ತಾಕ್ಷೇಪಿಸರಪಿಯಿಂದರಂತಸ್ಥವ।
ವಿವರವೇಳಿದನೊಳಗನಱಿದು ಚರನಿದು ಮಂತ್ರಿ
ಭುವನದಿಂದೊಗೆದ ಜಂಗಮಸಮಾರಾಧನೋ
ತ್ಸವದೊಸಗೆ [2]ತ್ರಿಪುರಾಂತಕಾಲಯಕೆ[2] ಬಹ ಜಂಪಜಾತ್ರೆಯ ಮಹೋನ್ನತೆನಲು
॥೬॥

ಮಱುವೊನೆಯ ಘಾಯಗೊಂಡಂತಿರುಪ್ಪೆನುತಿದಱ
ಪರಿಯೆಲ್ಲಮಂ ಕೇಳಿ ಮತ್ತೊಂದು ನೆಲೆಗಡರೆ
ಬೆಱಗಿನೊಳಗಱಿವ ಬೇಹುಗನಂತಿರೀಕ್ಷಿಸಲು ತೆಱಹಿಲ್ಲದಾಪುರದೊಳು।
ಹರಲಾಂಛನಿಕರಮಯ ನಾದಮಯ ನೃತ್ಯಮಯ
ಸುರುಚಿರಸುದೀಪ್ತಿಮಯ ವಾದ್ಯಮಯ ಸಂಭ್ರಮಸು
ಚರಿತಮಯ ಚಾರಿವರಿವುತ್ತಿರ್ದುದಗಲಕ್ಕೆ [3]ಮುಕ್ತಿ ಸೂ[3]ರಿಗೆವೊಡೆವೊಲು ॥೭॥

ಕಂಡು [4]ಕಣ್ಬೇನೆ[4]ಗೊಂಡಂತಸಂಪಿತನ ಕೂ
ಡುಂಡವನ ತೆಱದಿ ಮನಮಱುಗಿ ಸೌಧವನಿಳಿದು
ಚಂಡಕರನುದಯದಿಂ ಮುನ್ನ ಬಂದೋಲಗದಿ ಕುಳ್ಳಿರ್ದು ಕೃತಕನೃಪನು ।
ಕೊಂಡೆಯಪ್ರಮುಖ ಮಂಚರಸರಂ ಕಾಳಿಮರು
ದಂಡನಾಯಕ ಕರಿಯಕೇಶವಾದ್ಯರ ಕರೆ[5]ದು[5]
ಕೊಂಡಿದೇನಿರುಳೂರೊಳಾರ್ಭಟ್ಯಾಗಿದ್ದುದಿದರಂತಸ್ಥವೇನೆಂದೊಡೆ ॥೮॥

---

[1] ವಿದೇನೆನುತ್ತೀ (ಜ). [2] ತ್ರಿಜಗಕ್ಕಿದಾಶ್ಚರ್ಯ (ಜ). [3] ಕೀಸು (ಖ.ಗ.ಘ).
[4] ಕಡುಬೇನೆ (ಜ). [5] ಯ (ಕ.ಖ).

ಮತ್ತಾವುದಿಲ್ಲ ಬಸವರಸದಣ್ಣಾಯಕರು
ಹತ್ತೆಂಟು ಲಕ್ಕಜಂಗಮವ ನೆರೆದವರ್ಗಳನು
ಮರ್ತ್ಯಕೇನೇನು ಬೇಹರ್ಥಪಿತ್ತಶನವಸನಂಬೆಸನಕಿಚ್ಛೈಸಿ ತಾ।
ನಿತ್ತಡಾನಂದವ್ಯಸನೆತ್ತಿ ಕುಂಭಿಕ್ಕಿ ಕುಣಿ
ವುತ್ತ ಕೂಗಿಟ್ಟು ಹರಿಗುಟ್ಟಲವದಿರ ಭಾರ
ಹೊತ್ತು ಗೋಣ್ಕುಸಿದವನಿ ನಿನ್ನಿರುಳು ನಿಮಗೆ ಮೊಱೆಯಿಟ್ಟಳವನಿಪಯೆಂದರು ॥೯॥

ಎಂದಡಂತಹುದವನಿ ಹೊಱಲಿ ಹೊಱದಿರಲಾತ
ಗೊಂದು ಸಾವಿರಹೊನ್ನ ಪ್ರತಿಮಾಸವಿಕ್ಕುವೆವ
ದೊಂದುದಿನಕರ್ಥಕಹ ಬಟ್ಟಿಲ್ಲದೆಂತಿದಱ ಕಾರಣದ ಸಾಮಭೇದ।
ದಿಂದಱಿಯದಡೆ ರಾಜಧನಹಾನಿಯೆಂದಱುವ
ಚಂದವಿನ್ನೆಹಗೆನಲು ರಾಜಧನವೆಂಬುದಕೆ
ಸಂದೇಹವೇ ಸೈರಿಸಿರುಹ [1]ವೈಸ್ಯಾ[1]ದಾಯಕ[2]ರ್ಥ[2]ಧನ ನಿಮ್ಮದೆಂದು ॥೧೦॥

ಎಂದತಿಕುಮಂತ್ರಕೀಲಗಳ ರಾಯನ ಚಿತ್ತ
ಕೊಂದೊಂದು ಹೊಸಬಗೆಯ ಹೊಲಬುದೋಱುವ ಬಸವ
ನೆಂದಡೆ ಭುಗಿಲುಧಗಿಲನುರಿದೇಳುವಂತೆ ಬೋಧಿಸಿದರವದಿರು ನೃಪತಿಯ।
ಒಂದು ದೃಷ್ಟವ ನೋಡಿ ಮಣಿಹವನೆವಾರ್ತೆ ತೆಗ
ಸೊಂದಿನೀತ ಜಂಗಮ ಲಿಂಗವೆಂಬುವರಿ
ಗಂದಿನಂತನ್ನವಿಕ್ಕರ್ಥಗೊಡಲಾ ಮುಖದೊಳಱಿಯಬಹುದರಸ ಯೆನಲು ॥೧೧॥

ಅಂತದಹುದಾಲೋಚನೆಯ ಮಂತ್ರವೆಂದು ತ
ನ್ನಂತಸ್ಥಿಗರು ಸಹಿತ ಕುಳ್ಳಿದಿಹ ಸಮಯಕ್ಕೆ
ಮಂತ್ರಿಮಾರ್ತಾಂಡ ಬಸವೇಶ ಬರಲೆಂದಿನಂತಿತ್ತ ಬನ್ನೆಂದು ಕರೆದು।
ಸಂತೋಷವಾರ್ತೆಗೇಳಿದೆ ನಿಮ್ಮಗೇಹದೊಳ
ನಂತಸಂಭ್ರಮದಿಂದನೇಕ ಜಂಗಮ ಉಂಡಿ
ತೆಂತಱಿದು.ನಾವಿಕ್ಕುವರ್ಥ ನಿಮಗೊಂದುದಿನ ಹೂವೀಳಯಕೆ ನೆರೆಯದು ॥೧೨॥

ಎಂತಿದಂ ಸಂತೃಪ್ತೆ ಬಹುಮುಖದ ಬಳಕೆಯ ಸ್ವ
ತಂತ್ರಶೀಲರು ಮೂವತ್ತಾಱು ಸಾಸಿರ ಕರ್ನ
ನಂ[3]ತಿರೆ[3]ಸುವರ್ಣದಕ್ಷಿಣೆಗೊಡುವ ಧನಕೆ ಧನ ಧನದನರಮನೆಯೊಳಿಲ್ಲ।

---

[1] ವಸ್ಯಾ (ಕ.ಖ.ಗ.ಚ). [2] ರ್ಥ (ಗ.ಥ.ಫ). [3] ತರ (ಕ.ಖ ಗ.ಫ).

ಭ್ರಾಂತಾಗಿದೆಮಗೆ ನಿನ್ನಂತಸ್ಥವೇನೇನ
ದಂ ತಿಳಿಯಪೇಳೆನಲು ಸಂಗಕೊಡುವನು ಸಂಗ
ನಂತೀಶರಣಮುಖದಿ ಕೊಂಬ ಲೀಲೆಗೆ ಸಾಕ್ಷಿಭೂತ[1]ತಾನೆಂದ ವಚನ[1] ‖೧೩‖

ವಚನ—

ಕೊಡುವಾತ ಸಂಗ, ಕೊಂಬಾತ ಸಂಗ, ಕಾಣಿರೆಲವೊ ನರಮಾನವರು ಕೊಡುವರೆಂಬವನ ಬಾಯಲಿ ಬಾಲಹುಳುಗಳು ಸುರಿಯವೇ, ಮೂಱು ಲೋಕಕ್ಕೆ ನಮ್ಮ ಕೂಡಲಸಂಗಯ್ಯ ಕೊಡುವ ಕಾಣಿರೆಲವೋ ‖೧‖

ಕೊಡುವಾತ ಸಂಗ ಕೊಂಬಾತ ಸಂಗಮನೆಂಬ
ನುಡಿಯದಂತಿರಲಿ ಸ್ವಭಾವ ನಿಮಗದು ತ್ಯಾಗ
ಗೊಡುವ ಧನದಾದಾಯಮುಖವೇನು ತಿಳುಹಿದಡೆ ನೀವೆಮ್ಮ ಕೋಶಕೆಲ್ಲ।
ಒಡೆಯರಾಗಿಹಿರಾಗಿ ಸಂಶಯಾಸ್ಪದಪದವ
ನಿಡುತಿದಿದಕೇನು ನಿಷ್ಕೃತಿಯೆನಲು ಸಂದೇಹ
ಬಡಲೇಕಮಾತ್ಯಕರಣಾಧ್ಯಕ್ಷವಿಶ್ವಾಸವಿಧವದದೆ ಕೇಳೆಂದಡೆ ‖೧೪‖

ಕಾಳದೆಲ್ಲಂ ಮುನ್ನ ಲೆಖ್ಖವ ವಿಚಾರಿಸಲು
ಹೇಳಿ ತಡೆಸಿದೆ ರವಿಯ ಹನ್ನೊಂದುದಿನ ಭ್ರಮೆಯ
ಬೇಳುವೆಯನಿಕ್ಕಿ ಬೆದಱಿಸಿದೆ ಮತ್ತಂತಿಂದ್ರಜಾಲವಂ ಬೀಸಿ ನಮ್ಮ।
ನಾಳಿಗೊಳುಹಕ್ಕೆ ಕಾರಣವೇಕೆ ಬೇಡಾವು
ಹೇಳಿದಂತಿರಬಾರದೇ ನಾಡಿಗಿಕ್ಕಿ ಬಱಿ
ಉಳಿಗವೊಱಲ್ಕೇಕದಂ ತೆಜಿಸಿ ಸುಖಮಿರೆಮ್ಮರ್ಥವ ನಿರರ್ಥಿಸದಿರು ‖೧೫‖

ಜಂಗಮಜನಂಗಳೆಂಬವರಿಗರ್ಥವನಿಕ್ಕಿ
ಭಂಗ ಹೊಱಲೇಕೆ ಚಾವಡಿಯ ಮಧ್ಯದೊಳವರ್ಗ
ಳಂಗಸಂಗವ ಬಿಟ್ಟು ತಗುಳ್ದು ಸುಖಮಿರು ವೃಥಾ ಬದುಕ ಹೊಱಕಳೆದು ಬಯಲ್ಗೆ।
ಸಂಗ ಕೊಟ್ಟನು ಸಂಗ ಕೊಂಡನೆಂದೆಂದೆಮ್ಮ
ಕಂಗೆ ಭ್ರಮೆಯೊಡ್ಡಿ ಭಂಡಾರಮಂ ಹಾಳುಹರಿ
ಲಿಂಗಿಗಳಿಗಿಕ್ಕುಹಂ ಮಾಣು ಮಾಣ್ದೊಡೆ ಮುದ್ರೆಯುಂಗುರಗೊಡೆಂಬನೃಪನ‖೧೬‖

ಮಾತ ಕೇಳುತ್ತ ವಿಸ್ಮೃತಾಂಗುಲಿಯುಗದಿ ಬಸವ
ಶ್ರೋತ್ರದ್ವಯಾಂದ್ರಗೆಯ್ದೋಹೊ ಸಂಗೈಯ ತ
ತ್ಪಾತಕವಚನಗೇಳಿಸುವರೆ ಜಂಗಮಲಿಂಗಪಿರಹಿತೀ ನರಕಾರ್ಣವ।

[1] ವಾದ್ಯಾಂತಬಸವ (ಕ.ಖ.ಘ).

ಗಾತ್ರವಂ ಪೋಷಿಪಜ್ಞಾನಕೃತಕಾರಣ್ಯ
ಪಾತ್ರಮಣಿಹಮದೇಕೆ ನೃಪತಿ ನಿನ್ನಯ ಮನ
ಪ್ರೀತಮುದ್ರಿಕೆಯ ಕೊಳ್ಳೆನುತೆದ್ದು ತೆಗೆದಿತ್ತ ದಂಡನಾಯಕ ಮುದ್ರೆಯ ॥೧೭॥

ಉದ್ರೇಕ ಬೇಡವರಸಿನ ಮುನಿಸು ಹೊಲ್ಲರಸು
ಬುದ್ಧಿಹೇಳಲು ಹಸಾದಿಸಿ ಸುಖದೊಳಿರದ ಪ್ರ
ಬುದ್ಧಿಬಲಿದ[1]ಲ್ಲಕೆ[1]ಯ ಭಿಕ್ಷುಕರ ಬಿಡದೇಕೆ ದಂಡನಾಯ.ಕ ಬಸವ ನೀಂ।
ನಿರ್ದೈವಿಕದಿ[2]ನೀಗದೀ[2]ಸಿಕೊಂಡರಸಿಗೆ ವಿ
ರುದ್ಧವಾದಶನಧಾರಿಗಳ ತೆಜಿಸೆಂದಹಿತ
ಬದ್ಧವೈರಕುಮಂತ್ರಿಗಳ್ಕೆಲರು ಸಾಱೆ ಸಂಗನ ಬಸವನಿಂತೆಂದನು ॥೧೮॥

ವಚನ—

ಕಾಯದ ಕಳವಳಕ್ಕಂಜಿ ಕಾಯಯ್ಯ ಎನ್ನೆನು, ಜೀವನೋಪಾಯಕ್ಕಂಜಿ ಈಯಯ್ಯ ಎನ್ನೆನು, "ಯದ್ಭಾವಂ ತದ್ಭವತಿ". ಉರಿಬರಲಿ ಸಿರಿಬರಲಿ ಬೇಕು ಬೇಡೆನ್ನೆನಯ್ಯ. ಆನು ನಿಮ್ಮ ಹಾರೆ, ಮಾನವರ ಬೇಡೆನಯ್ಯ, ಆಣೆ ನಿಮ್ಮಾಣೆ ಕೂಡಲಸಂಗಮದೇವ ॥೨॥

ಸಂಗನ ನಿರೂಪ ಕೊಟ್ಟುದು ಮುಗುಳ್ದು ಕೊಂಡುದದು
ಸಂಗನ ನಿರೂಪವೈಸಲೆ ಸೂತ್ರದಾಟ ನರ
ಜಂಗುಳಿಯ ಕಾವನಂ ಬೇಡಲೇಕೆದ್ಭಾವಿ ತದ್ಭವತಿ ಶಿವಕಲ್ಪನೆ।
ಕಂಗಾಣದಾಡುವವರಾಡಲೆಮಗೆಮ್ಮ ಚರ
ಲಿಂಗವೇ ಪ್ರಾಣವೆನಲಾದಡೀಯಣ್ಣನಾ
ಸಂಗನಲ್ಲೀಸಿಕೊಂಡಾ ಜಂಗಮಕ್ಕೆಂದಿನಂತೆ ಮಾಡದೆ ಮಾಣ್ಬನೇ ॥೧೯॥

ಎಂದು ದುರ್ಮಂತ್ರಿಗಳು ಛಾಯಗೊಂಡೆಯಮುಖದೊ
ಳೆಂದಡರಸಂ ನಗುತಲೆಂದೀತ ತಾನಿಪ್ಪ
ಮಂದಿರವದೆಮ್ಮದದ ಮುದ್ರಿಸೀತನ ಸತಿ ಸುತಗ್ರಜೆ ಸಹಿತಲಾತನ।
ಕಂದನಹಿತಱುವರಾಭರಣವಸ್ತ್ರಂಗೊಂಡು
ಒಂದೊಂದು ಜೀರ್ಣಗಪ್ಪಡಗೊಟ್ಟು ಇವರನವ
ರಂದದೊಳಲಂಕರಿಸಿ ಪುರವ ಪೊಱಮಡಿಸೆಂಬ ನೃಪನಿರೂಪಣವಚನಕೆ ॥೨೦॥

ಅವಯವಂ ಮೂಡಿದಂತಜ್ಞಾನಚರರುಬ್ಬಿ
ತವಕದಿಂ ಪಱಿದರಮನೆಯ ಹೊಕ್ಕು ಭಂಡಾರ
ಭವನಧಾನ್ಯಾದಿ ನಾನಾಕೋಶಗೃಹಗಳಂ ಮುದ್ರಿಸಾ ಬಸವೇಶನ।

---

[1] ಲ್ಲಕೆ (ಕ.ಘ.ಛ.ಚ). [2] ನೀಸವೀ (ಕ.ಖ), ನಿಸಾದಿ (ಗ).

ಯುವತಿ ಗಂಗಾಂಬೆಯರ ನೀಲಲೋಚನೆಯುವರ
ಕುವರಸಂಗಮನಕ್ಕನಾಗಾಯುನವರ ಪತಿ
ಶಿವಸ್ವಾಮಿಗಳ ಚೆನ್ನಬಸವನಿವರಾಭರಣ ವಸ್ತ್ರಾದಿಗಳನು ತೆಗಿಸಿ ॥೨೧॥

ಶತಖಂಡಮಲಿನಾಂಬರಗಳನೊಂದೊಂದ ಕೊ
ಟ್ಟತಿಭಂಗಿತರ ಮಾಡಿ ಬಸವನಂ ಚಾವಡಿಂ
ದುತ್ಕ್ರೋಚಿಗಳು ತರುತಲಾ ಪರಿಯ ಚೋದ್ಯಗೊಂಡಂತೊಂದು ವಸನಗೊಟ್ಟು।
ಗತಿಯನವಗತಿನೂಂಕುವಂತೆ ಭಾಗ್ಯವನಭಾ
ಗ್ಯ[1]ತೆ[1] ತಗುಳುವಂತೆ ಬಿಜ್ಜಳನ ಭಾಷೆಯ ಪುರೋ
ನ್ನತಿಯ ಬಹಿಷ್ಕರಿಸುವೊಲ್ಬಸವನ ವಿಸರ್ಜಿಸಿದರಾಬಂಧುವರ್ಗಸಹಿತ ॥೨೨॥

ವಚನ—

ಧನಧಾನ್ಯ ಹೋಯಿತೆಂದಡೆ, ಮನ ಬೆದಱಿತೆಂದಡೆ, ಚಿತ್ತ ಹೆದಱಿದಡೆ ತನು ತೆರಳಿದಡೆ, ಭಾವ ಮೋಸರಿಸಿದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ, ತನುಮನಧನವನಲ್ಲಾಡಿ ನೋಡುವ ಒಡೆಯನು ನೀನೆ, ಹರಣವ ಮೇಲೆ[2]ತ್ತೊಡೆ ಕಳವಳವೆ[2] ಕೂಡಲಸಂಗಮದೇವ ॥೩॥

ಎಡೆವೊಕ್ಕು ಮತ್ತೆ ಕಾಳಿಮ ಕಪಟವಾತೊಂದ
ನುಡಿದ ಕಂಡ್ಯೆ ನಿನ್ನ ಭಕ್ತಿಗಡಸಿದ ಭಾಗ್ಯ
ದೊಡಕಿಗಾಸ್ಪದವಾಯ್ತು ಅರಸು ಮುನಿದರೆ ಅಡ್ಡಬೀಳ್ವರಂತಾಗಿ ನಾವು।
ಒಡನೊಡನೆ ಪೇಳೆ ಕೇಳಿನ್ನಾದೊಡಾ ನಿನ್ನ
ಕಿಡುಗೇಡಗಳ ಮಾಟಕೂಟವೆಂಬುದ ಮಾಣ್ದೊ
ಡೊಡೆಯರ್ಗೆ ಬಿನ್ನೈಸಿ ಮುನಿಸು ತಿಳಿಹಿರಿಸುವೆನು ಮುನ್ನಿನಂತೆನಲೆಂದನು ॥೨೩॥

ವಚನ—

ಆರು ಮುನಿದೆಮ್ಮನೇನು ಮಾಡುವರಯ್ಯ, ಊರು ಮುನಿದು ಎಮ್ಮನೆಂತು ಮಾಡುವರಯ್ಯ, ಕೊಡಬೇಡ ನಮ್ಮ ಕುನ್ನಿಗೆ ಕೂಸ, ಇಡಬೇಡ ನಮ್ಮ ಶುನಕಗೆ ತಳಿಗೆಯ, ಆನೆಯ [3]ಮೇಲೆ[3] ಹೋಹವನ ಶ್ವಾನ ಕಚ್ಚಬಲ್ಲುದೆ ಅಯ್ಯ! ಎಮಗೆಮ್ಮ ಕೂಡಲಸಂಗಮದೇವನುಳ್ಳನಕ ॥೪॥

ಎನುತ[4]ಲಿ ತಿರಸ್ಕರಿಸಿ ಸಂಗ ಗತಿಯೆನುತ ತ[4]
ಮ್ಮನಿತು ತಾವ್ಪೋಗುತಿರಲಾಮಾತ್ಯಬಂದರಸಿ
ಗನಿತಗಿಮ್ಮಡಿಯಾಗಿ ಪೇಳೆ ನೃಪ ಕೋಪಾನುತಾಪದಿಂ ನೆನೆದನೊಂದ।

---

[1] ತ (ಘ). [2] ತಡೆಕವಳವ್ಯೆ (ಕ), ತ್ತಿಡಲಳವೆ (ಖ). [3] ನೇರಿ (ಕ,ಜ). [4] ತಿರಸ್ಕರಿಸಿ ಸಂಗಮದ ಶ್ರುತಿವಿಡಿದುತ (ಜ).

ಇನಿತುದಿನ ಪ್ರಾಪ್ತವಾಗಿದ್ದುದಕೆ ಪ್ರಾಪ್ತಪುರ
ಜನರುಚಿತಕೇನೇನ ನೀವರವರೀಯುದಂ
ತನಿ[1]ತಯುವದೊಳ್ಕಾ[1]ಪ ಗೊಡಿಸಿದ ಬಸವನೆಡೆಗೆ ಧನಿಕರುರ್ರ್ಸಳಿಯುದಂತೆ ॥೨೪॥

ಇನ್ನುಱಿಯುಬಱುದಣ್ಣನಾಚರಣೆ ಭಕ್ತಿಸಂ
ಪನ್ನತೆಯ ಜಂಗಮದ ಮೇಲಣಕ್ಕಱ ಸಂಗ
ಹೊನ್ನುಕೊಡುವುನ್ನತಿಯ ತನ್ನ ನಿತ್ಯವ್ರತದ ನೇಮಸಂಪೂರ್ಣತೆಯನು।
ಗನ್ನಗತಕಂ ತೋಱಿ ಪೆಟ್ಟಿಗೆಗಳಂ ಬಾಚಿ
ಕನ್ನವಿಕ್ಕಿಸಿ ಕೌತುಕಂದೋಱುವಟವಾಟದ
ಬಿನ್ನಣಕೆ ಬಿನ್ನಣವಿದೆನುತರಸು ದುರ್ಜನರ ಮನಮಥಿಸಲಿತ್ತಲತ್ತ ॥೨೫॥

ಸತಿಸುತರ್ಸಹಿತ ಕಾಲ್ನಡೆಯಲ್ಲಿ ಸಂಗಯ್ಯ
ಗತಿಯೆನುತ ತತ್ಪಥಿಕರಾಗುಪಾಸುಗ್ರದ್ಯುತಿ
ಯತಿರಂಜಿಪಾ[2] ತಪನತಾಪದಿಂದಳಲುತ್ತಲ[2]ಡಿಯಿಡಲು ಸುಡುವವನಿಯು।
ಶತದಳಸದೃಶ ಮೃದುಪದಂ ಸೋಂಕೆ ಸ್ಫೋಟಕ
ಪ್ರತತಿಗಳ್ಪೊಣ್ಮೆ ಸುಯ್ಯೂಸುತ್ತ ನಾರಿ ತ
ತ್ಸುತರೆಲ್ಲ ಬಳಲುತೊಂದೆರಡು ಯೋಜನ ಪೋಪ ಪೇರಡವಿಯೊಳ್ಬಸವಗೆ ॥೨೬॥

ಇದಿರ್ವಂದ ಶಿವನೆಂಬೊಲೊಬ್ಬಯ್ಯ ಶಿವಲೀಲ
ದೊದವಿಂಗೆ ಸುಯಿಧಾನ ಭಾಂಡತಂಡುಲಪದಾ
ರ್ಥದ ಸಾಂಗಸುಯಿಧಾನ ಮೇಳಗಂಟಣೆಯು ಹಳೆ ಒಱಡುಗೋವೊಂದು ಸಹಿತ।
ಇದಿರಿನೊಳ್ಬರಲಾಯು ಬಂದಂತಿರಿವರೆಲ್ಲ
ಪದಕೆಱಗಲಾಯ್ತೈಯನೆತ್ತಿ ಶಿವಮಸ್ತೀವು
ತಿದು ಬಸವನಿಹ ಪಟ್ಟಣದ ಪ್ರಾಂತ್ಯವಾಗೆಲ್ಲ ಭಕ್ತಿಯುತರಾಹಯೆನುತ ॥೨೭॥

ಸಂತೋಷತೀವಿವರ್ಗಳಾನನವ ನೋಡುತ
ತ್ಯಂತಸುಖಿಸಾವು ಪರದೇಶದಿಂ ಭಕ್ತಿಶ್ರೀ
ಮಂತ ಬಸವನ ಕಾಣಬಂದ ಫಲಗೊಂಡೊಲಾಯ್ತುಮಗಿಂದು ನಿಮ್ಮಕಂಡು।
ಇಂತಹ ಸದಾಚಾರಯುತ ಸುಖಿಸಮೂಹವೀ
ಕಾಂತಾರದೊಳ್ಕಾಲದುಗ್ರಾತಪಾಗ್ನಿದುಃ
ಖಾಂತರವನೇಕೆ ಶಿವ ಮಾಡಿದಂ ನಿಮಗೆ ನೀವಾರಿದೆಲ್ಲಿಂದೆಲ್ಲಿಗೆ ॥೨೮॥

---

[1] ನಿತಾಂತಲಯಕೆ ಕಾ (ಖ). [2] ತಪದಿಂದಳುತ್ತಲ (ಚ), ತಾಪದಿಂದಾಳುತ (ಖ), ಪಾತಪನುತಾಪದಿಂದಾಳುತ (ಗ).

ಪೋಪ ಪರಿಯೆನೆ ಶರಣರಾನಂದ ಪರ್ವಗಣ
ವ್ಯೂಹಮಂ ಕಂಡು ಬಿಜ್ಜಳನಸಹ್ಯದೊಳು ದಾ
ಸೋಹಮಂ ಬಿಡು ಬಿಡದೊಡೆಮ್ಮ ಮುದ್ರಿಕೆಯ ತಾರೆನೆ ಹಾಕಿ ಕಲ್ಯಾಣವ।
ನಾಯ್ಸುಣನೃಪ ಹೊಱವಡಿಸೆ ಸಂಗಮೇಶ್ವರಕೆ
ಪೋ[1]ಪ[1]ಬರ ನಿಮ್ಮ ಪ್ರಸಾದ ಪಾದೋದಕ
ಗ್ರಾಹಿ ಭೃತ್ಯರ ಭೃತ್ಯ ಬಸವನೆಂಬುವನಾಂ ಹಸಾದವೆನುತಡಿಗೆಱಗಲು ॥೨೯॥

ಬಂದನೋಹೋ ಶಿವಶಿವನುತಲಾಯ್ಯೆಯ ಮನ
ನೊಂದು ದುಃಖಾಂಬುಸಂತಧಾರೆಗಳನು ನೇ
ತ್ರಾಂಬುದಧಿ ಕಱೆವುತಯ್ಯೋ ಯೆನುತಲಂತಪ್ಪಿ ಮುಂಡಾಡಿ ಮುಖ ನೋಡುತ।
ತಂದೆ ನೀವಿಂತು ಕರುಣಿಪರೆ ಕರುಣಾಕ್ಷಿಜಲ
ಬಿಂದುಗಳನೆನುತ ತನ್ನಯ ನೇತ್ರವಾನೇತ್ರ
ದಿಂದಲುಪದೇಶವಡೆದಂತವರ ಪದಕಮಲಕೆಱಗೆಱಗಿ ನೇತ್ರಾಂಬುವ ॥೩೦॥

ಶಿವಭಕ್ತಿಯ ಪ್ರತಿಷ್ಠೆಗೆ ವಜ್ರಬಂಧಗೊ
ಟ್ಟವೊಲು ಜಂಗಮಭಕ್ತರು ಭಯಸಂಕೀರ್ಣಾನು
ಭವದೊಳಳಲುತ್ತಲ್ಲಿ ಒಡೆಯರವಸರಕಿಲ್ಲ ನಿಮ್ಮ ದಾಸೋಹಕಾನು।
ಅವಲಕ್ಷಣಿಕನಾದೆನೆಂಬಳಲ ನಿಲಿಸಯ್ಯ
ನವರೆಲ್ಲರನು ತಲೆದಡಹಿ ತಾ ಬರುತ ಲಿಂ
ಗವಸರವ ಮಾಡಿದಡವಿಯ ಹಳ್ಳಹತ್ತಿರಿದೆ ಬನ್ನೆನುತ್ತಲ್ಲಿಗೊಯ್ದು ॥೩೧॥

ಮತ್ತಿಘಟ್ಟವೆನಿಪ್ಪ ಪಾಳ್ಗಾ[1]ನ[1]ತತ್ವದ [2]ಪ್ರ
ಯುಕ್ತಿ[2]ವಳ್ಳದ ದಕ್ಷಿಣಾಂಗದೊಳು ಹಳೆವುತ್ತಿ
ನೊತ್ತಿನೊಳು ತಳಿತು ತಂಪೆಸೆವ ನ್ಯಗ್ರೋಧಕುಜವಿರಲವರನಲ್ಲಿಗೊಯ್ದು।
ಕರ್ತನವರಲ್ಲಿ ಕುಳ್ಳಿರಿಸಿ ಕಂಠಣಿಯನಿಳು
ಹುತ್ತ ಭಾಂಡವ ಕೊಂಡು ಹರಿದು ಸುಯಿಧಾನಜಲ
ಹೊತ್ತು ತಂದಿಳುಹೆಲ್ಲರಾಸಱಡಗಿಸಲು ಬಸವೇಶನಲ್ಲಿಂತೆಂದನು ॥೩೨॥

ವಚನ—

ಒಡೆಯರುಳ್ಳಾಳಿಂಗೆ ಕೇಡಿಲ್ಲ ಕಾಣಿರೊ, ಊರೆನ್ನದೆ ಅಡವಿಯೆನ್ನದೆ ಆಳನರಸಿಬಹ ಆಳಿದರುಂಟೆ? ಜೋಳವಾಳಿಂಗೆ ಬಿಜ್ಜಳಂಗೆ ಆಳಾದರೇನು ವೇಳೆವಾಳಿಂಗೆ ಕೂಡಿಕೊಂಡಿಪ್ಪ ಕೂಡಲ ಸಂಗಮದೇವ ॥೫॥

---

[1] ನು (ಗ.ಫ.ಥ), ಹ (ಫ). [2] ಪ್ರವೃತ್ತಿ (ಜ).

ಎನುತಿರಲ್ಕಾ ಸಮಯಕೀಶ್ವರನೆ ಪ್ರತ್ಯಕ್ಷ
ವನುಗೊಂಡೊಲೇಕಜಡೆ ಸರ್ವಾಂಗಭಸಿತಸಂ
ಜನಿಸಿತಾರುದ್ರಾಕ್ಷಿಫಲವೃಕ್ಷ ನಡೆವೊಲು ಕರಸ್ಥಲದ ಕಾ[1]ಪ[1]ಸಹಿತ।
ತನು ಬೆವರಿಡುತ ತವಕಿಸುತ ಹಾಲಸರ್ವೇಶ
ನೆನಿಪಯ್ಯ ಕಲ್ಯಾಣಪುರಮಹತ್ತಿನ ನಿರೂ
ಪಣದಿಂದ ಬಸವನಿದ್ದೆಡೆಯನಱಸುತ ಬಂದ ಬಂದ ಬಳಿವಾದಿವಿಡಿದು ॥೩೩॥

ಕಾಣುತ್ತ ಕಣ್ಬೇಟ ಕೈಗೂಡಿದಂತೆದ್ದು
ಪ್ರಾಣಾಂಗವರಳುತ್ತ ಸಾಷ್ಟಾಂಗವೆಱಗಿ ಪದ
ರೇಣುದಳಿದಾಸನಂಗೊಟ್ಟಂಘ್ರಿದೊಳೆದಂಬುಗೊಂಡಮೃತ ಶಿಶಿರವಚನ।
ಕಾಣಿಕೆಯನಿತ್ತಿಂತು ಬಳಲ್ವರೆ ಶಿಶು ಕೂರ್ಮ
ತಾಣಕ್ಕೆ ಬಾರದೊಡೆ ವಿಸ್ನೇಹಿಯೇ ಕಱುವ
ಕಾಣದಱಸುವ ತಾಯೊಲ್ಮೆತಂದೆ ಕರುಣಿ ಕರುಣವ ಕರುಣಿಸೆಂದ ಬಸವ ॥೩೪॥

ಪಾತಕರು ಭಕ್ತಗೃಹವೊಕ್ಕೆಲ್ಲ ಧನಧಾನ್ಯ
ವ್ರಾತಕ್ಕೆ ಮುದ್ರೆಯಿಕ್ಕಿದಡೆ ಜಂಗಮಲಿಂಗ
ತಾತಳಿಸಿ ತಮತಮಗೆ ಹರೆದು ನಿಮ್ಮತ್ತ ಹಂಬಲಿಸಿ ನೀವಾವ ಕಡೆಗೆ।
ಏತೆಱದೊಳೈದಿದರೆನಿಪ್ಪುದನ್ನಾರೈವ
ಪ್ರೀತ್ಯರ್ಥಬಂದೆವೆನುತಂ ಬಳಲ್ದಂಗವುಂ
ಭೂತಳದೊಳೊಱಗಿಸಾಹಾರಾನುಕೂಲತೆಯ ವ್ರತಕಿನ್ನದೇನೆಂಬೆನು ॥೩೫॥

ಹೊಸಹಾಲನೇಮವೆಮ್ಮಯ ಲಿಂಗದಾಳಿಯದ
ನುಸುರ್ದು ಮಾಡುವುದೇನು ನೀನಱಿಯದನುವಲ್ಲ
ಬಸವಣ್ಣ ಬಳಲ್ದೆವೈ ನಿಮ್ಮ ಕಂಡೆವು ಲಿಂಗವಶವಾದಡಾಗಲಿನ್ನು।
ಶಶಿಧರನೆ ಬಲ್ಲನೆನುತಾಯಯ್ಯ ಮೂರ್ಛೆಗತ
ದಸುದೋಱೆ ಕಂಟಣಿಯ ಗೊಡ್ಡಾವ ಮೈದಡವಿ
ಪಶುಪ ಭಾವಿಸಲು ಕೆಚ್ಚಲ್ದೊಱೆದು ಪಾಲಿಳಿಯೆ ಕರೆವೈಯುಗೆಱೆದ ಬಸವ ॥೩೬॥

ವಚನ—

* ನೀನೊಲಿದಡೆ ಕೊರಡು ಕೊನರುವುದು, ಬರಡು ಹಯನಹುದು; ನೀ ನೊಲಿದಡೆ ವಿಷವು ಅಮೃತವಹುದು; ನೀನೊಲಿದಡೆ ಪಡಿಪದಾರ್ಥವೆಲ್ಲವು ಇದಿರ ಲಪ್ಪವು ಕೂಡಲಸಂಗಮದೇವ ॥೬॥

[1] ಗೌಪು (ಜ). * ಇದು ಜ ಪ್ರತಿಯಲ್ಲಿ ಮಾತ್ರವಿದೆ.

ಆ ಪಶುವಿನೊಡೆಯರಿದ ಕಂಡು ವಿಸ್ಮಯಗೊಳು
ತ್ತೀಪರಿಯಭವಗಾಗದೀತನು ಕೃತಾರ್ಥತೆಯ
ರೂಪಲಾ ಕಂಡೆವೈ ಬಸವಭಾವಜ್ಞ ಸಿದ್ಧಾಂತಶಿವತತ್ವಮುಖದ|
ದೀಪಕನೆನುತ್ತ ಹೃತ್ಕಮಲಮಧ್ಯದೊಳು ತ
ದ್ರೂಪಕವ ಸಂಗ್ರಹಿಸಿ ತಚ್ಛಿವಾರ್ಚನೆ ವ್ರತಾ
ರೋಪಣಂಗೈವಂತೆ ಸುಯಿಧಾನಸಂಗ್ರಹಾದಿಗಳ ಸತ್ಕ್ರಿಯೆಯೊಳಿತ್ತು ||೩೭||

ಕಿಡಿಗಲ್ಲ ತಾಟಿಸಗ್ನಿಯ ಪ್ರಭಾವಿಸುತಿರ
ಲ್ಕೆಡೆವಾಯ್ದು ದಾಸೋಹಿಗಳು ಬೋನವಮಾಡಲಾ
ಒಡೆಯರೆಡೆಮಾಡೆಲ್ಲರಂ ಕುಳ್ಳಿರಿಸಿ ಬಸವರಾಜ ಬನ್ನಿನಲೆಂದಡೆ|
ತುಡುಗುಣಿತನವದ್ಯೈಸೆ ಸಂಗನಾರೋಗಿಸೂ
ವಡೆ ಬಾಯಿ ಬೇಕಲ್ಲ ಚರಲಿಂಗದೊಡಲಿ ತ
ನ್ನೊಡಲಾರಿಗರ್ಪಿಸಲಿ ಒಡೆಯಃಗಟ್ಟುಡಿಗೆ ತಿಂಬುವ ಸಿಂಬಕನೊಲೆಂದನು ||೩೮||

ವಚನ—

ಕಂಗಳಿಲ್ಲದ ನೋಟ ಲಿಂಗವಿಲ್ಲದ ಮಾಟ ಜಂಗಮವಿಲ್ಲದ ಊಟ ಪ್ರಸಾದ ವಿಲ್ಲದೆ ಪರ ಹಿಂಗಿತ್ತು ಶಿವಲೋಕವಿನ್ನೆಲ್ಲಿಯದೊ? ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ. ಹಿಂಗಿತ್ತು ಶಿವಲೋಕ, ಇನ್ನೆಲ್ಲಿಯದೊ? ಬಂದ ಸಮ ಯವ ನೆಱಿಯದೆ ಉದರವ ಹೊರೆವರ ಕೂಗಿಡೆ ನರಕದಲ್ಲಿಕ್ಕನೆ ಕೂಡಲಸಂಗಮ ದೇವ ||೭||

ಅಹುದು ಬಳಿಕೇನು ಜಂಗಮಮುಖವೆ ಲಿಂಗವದು
ವಿಹಿತವೆನುತಾಯಯ್ಯ ಲಿಂಗಾರ್ಚನಂಗೈದು
ಗೃಹಿತಪ್ರಸಾದಮನದೆಲ್ಲರಿಗೆ ಕರುಣಿಸಾ ದಿನ ದಿವಂ ಕಡೆ[1]ದೋಱಿತು[1]|
ಬಹಳಶಿವಧರ್ಮಕಂಟಕನಾದ ನೃಪಮುಖವ
ಮಿಹಿರನೋಡಲ್ದೋಷವೆಂಬೊಲತಿತೀವ್ರದಿಂ
ಮಹಿಧರದ ಮಱೆಗಿಳಿಯೆ ತಮಪರ್ಬಿತರಸನಜ್ಞಾನಾಂಧಕಾರದಂತೆ ||೩೯||

ಗಣಸಮೇಳದ ಸದಾಚಾರದೇಳ್ಗೆಯ ಭಕ್ತಿ
ಯಣಿವರಿಯ ದಾಸೋಹದನುಭವಾನಂದಗಳ
ನೆಣಿಸುತಿಹ ಬಸವಂಗೆ ಶಿವನೊಲಿದು ಪ್ರತ್ಯಕ್ಷಮುಖದೋರ್ಪ ಮುಂಗುಡಿಯೊಲು|
ಅಣುವೆದ್ದು ಥಳಥಳಿಸಿ ಕುಣಿವಮೃತಕಿರಣಪ್ರ
ಗಣವೆನಲುಃ ಬಿಂಬಿಸುವ ಭವನಗ್ರಕೋಟೀರ
ಮಣಿವೆಳಗುದೋರ್ಪಂತೆ ಉದಯಿಸಿದ ಶಶಿ ಬಸವಭಾವಮುಖದೀಪ್ತಿಯಂತೆ ||೪೦||

[1] ಗಂಡಿತು (ಜ).

ಶಿವಮುಖಾನಂದಜಂಗಮಲಿಂಗರತಿಸೂತ್ರ
ದವಧಾನದಪ್ಪಿದಾಂದೋಳಚಿಂತೆಯ ಭಾವ
ಭವನದಳವಾರನೊಲು ತೊಳಲುತಿರೆ ಬೆಳಗರ್ಘರ್ಝಾಪವೆನೆ ಕಿಂಚಿದಶ್ರು।
ಗವಸಣಿಗೆ ಮುಗಿಯೆ ತಾಪಸರೂಪನಿಂದು ನ
ಮ್ಮವಯವಕೆ ಮುಖಹೀನವೆಂದನರ್ಪಿಸಿದ ಯಿಂ
ದವಸರವ ಮಾಡಿಸಾ ಮುಖಸಹಿತ ಬಹೆವೆಂಬ ವಚನಕೆಚ್ಚೆತ್ತೆಂದನು ॥೪೧॥

ವಚನ—

ಕಂಡ ಕನಸು ನಿಧಾನವ ಕಂಡೆನಯ್ಯ, ಬಿಡಲಾರದ ನಿಧಾನವ ಕಂಡೆನಯ್ಯ, ಕಂಡು ಬಿಡಲಾರೆನಯ್ಯ, ಕೂಡಲಸಂಗಯ್ಯನೆಂಬ ನಿಧಿನಿಧಾನವ ಕಂಡೆನಯ್ಯ, ಕಂಡುಕಂಡು ಬಿಡಲಾರೆನಯ್ಯ ॥೮॥

ಅಂಗಯ್ಯಲೆಂದುದೆನ್ನ ಕಂಗಳು ಕೆತ್ತುವದಿಂದು [1]ಬಂದರೇಕೆ[1] ಪ್ರಮಥರು ಎನ್ನ ಮನೆಗೆ? [1]ಬಂದರೇಕೆ[1] ಪುರಾತನರು ಎನ್ನ ಮನೆಗೆ? ಕಂಡಕನಸು ದಿಟವಾಗಿ ಜಂಗಮ ಮನೆಗೆ ಬಂದಡೆ ಹಿಂಡರ್ಚನೆಯು ಕೂಡಲಸಂಗೈಯ್ಯ ನಿನ್ನ ಮುಂದೆ॥೯॥

ಮುಂಗುಡಿಯ ಕಟ್ಟಿದಂತೆನುತಿರ್ದು ಭಾವಭಾ
ಗ್ಯಾಂಗನೆಯ ಮುಖಕಮಲವಲರುವೊಲು ಪೂರ್ವರುಣ
ರಂಗುದೋಱಲು ಮಹಾತಮವೈರಿದೀಪ್ತಿಯೊಲು ರವಿಯುದಯ ರಂಜಿಪಾಗ।
ಲಿಂಗವಸರವಸರದೊಳಾ ಬಸವಸುತ ಚಿಕ್ಕ
ಸಂಗ ತಂದೆಯೊಳೆಂದ ಲಿಪಿಯೋಲೆ ನಾನೊಂದ
ನಂಗಧನ ಮುಖದೋಱಲರಸು ಛಲಕೊಡೆಯರ್ಗೆ ಮಾಡುವೆವೆನುತ್ತ ಮಲಗೆ ॥೪೨॥

ಕೆಂಜೆಡೆ ತಪಸಿ ಬಂದು ಬಸವನಱಕೆಯೊಳಱುಹಿ
ನಂಜುಮುಖಗೃಹದೊಳೆನ್ನಯ ಗ್ರೈವಿಕಂ ಬಿದ್ದಿ
ದಂಜದೆಯೆ ತೆಗೆದೆನ್ನ ಕೈಗುತ್ತಿಸದೆ ತೆಗೆನಲದು ದಿವ್ಯಪದಕವಾಗಿ।
ರಂಜಿಸಲ್ನಿಮಗೆ ಕೊಡಿಸಲ್ಕೆ ನೀವಂತದಱ
ಭಂಜಿತದಿ ಕಲ್ಯಾಣದಿಂದಧಿಕದಾಸೋಹ
ಸಂಜನಿಸಿತಲ್ಲಾಗಿರಲ್ಕಂಡು ಕಣುದೆಗೆದು ನಿಜಸ್ವಪ್ನವಾಯ್ತು ಕಟನೆ ॥೪೩॥

ಸಂಗಯ್ಯ ಸಂಗ ತಾ ತಪಸಿ ಗ್ರೈವೇಯಕಭು
ಜಂಗಪೆಡೆವಣಿಯ ಭಯಕಥಯು ತನ್ನಯ ನಾಮ
ಡಿಂಗರನ ಕರೆವ ಕರೆದೀ ಜಯಾರ್ಥದ ಕರುಣದೃಷ್ಟವೆಂದೆಮ್ಮ ಭಾವ ।

---

[1] ಬಾರರೇಕೆ (ಗ.ಥ).

ಕೆಂಗೆ ಕಾಣಿಸುತೇಳು ಬಾ ಯೆನುತಲಲ್ಲರ್ದ
ಜಂಗಮದ ಪಾದೋದಕಂಗೊಟ್ಟು ಇದನೀ ಭು
ಜಂಗಗೇಹದೊಳೆರಡು ಕೈದುಡುಕು ಸ್ವಪ್ನಫಲವಿದೆ ಮಗನೆ ಠೆಗೆ ಯೆಂದೆನೆ॥೪೪॥

ಹರನಿರೂಪಣ ಗುರುನಿರೂಪಣ ಜಂಗಮದ
ಚರಣಾಂಬುವಂ ಕೊಂಡು ಬಂದು ಹುತ್ತಿನ ಬಾಯೊ
ಳೆಱೆದು ಶಿವಸಂಕಲ್ಪಸಿದ್ಧನುತ ಕೈದುಡುಕುವವಸರದೊಳುಗ್ರೋರಗ।
ಮೊಱೆದೇಳುತಂ ಪೆಡೆಗಳಂ ಪಸರಿಸುತ್ತ ದಾಂ
ಷ್ಟ್ರಗಳ ಗವಸಣಿಗೆದೆಗೆವುತಮೆಲಜಿಹ್ವೆಗಳ
ಛರಿಛರಿನುಗಿದು ಛಡಾಳಿಸುತ ಕೆಂಗಣ್ಗೆದರೆ ತೆಕ್ಕೆಯೊಡೆದುಕ್ಕೇಳುತ ॥೪೫॥

ಶತಸಂಖ್ಯವರುಷದ ಪುರಾಣಸಿಂಗೋರಗನು
ಕ್ಷತಜಕಲ್ಪಾವನಿಯನೊಡೆದು ಮೂಡಿದ ಕೆಂಡ
ಲತೆಯಂತಿರಿರ್ದಡ್ಡೈಪೆಡೆವಣಿಗಳಾದೀಪ್ತಿಯಡರಿತು ಕುಮಾರಮುಖವ।
ಪಿತನತ್ತ ನೋಡಲಹುದಹುದು ಸಂಗನ ನಿರೂ
ಪತೆಯು ಪದಕಮದೀಗ ಪಿಡಿಯೆನೆ ಹಸಾದ ನೀ
ವ್ಯಗ್ತಿಯೆನುತ ಪಿಡಿಪಿಡಿದು ತೆಗೆಯಲಾ ಫಣಿಪುಚ್ಛ ಫಣಿಗಳವ ಸುತ್ತಿತಮಮಾ॥೪೬॥

ಹರನವರ ಪರುಷ ಜಂಗಮಪಾದಜಲಪರುಷ
ಗುರುಚರಣಪರುಷ ತದ್ಬಸವಭಾವನುನೋಟ
ಕರಪರುಷ ವಾಕು ಮನಭಲಭಕ್ತಿ ನಂಬುಗೆಯ ಶಿವಪರುಷಸೋಂಕಿನಿಂದ।
ಮರುದಶನಕ್ರೀಯಳಿದು ಛಕಛಕಿತ ಕಾರ್ತಸ್ವರ
ದುರುತರಸುವರ್ಣತೇಜೋಪುಂಜರಂಜಿತೋ
ತ್ಕರನರ್ಘ್ಯನವರತ್ನ ಖಚಿತ ಪದಕಮದಾಗಿರಲ್ತಂದು ತಂದೆಗಿತ್ತ ॥೪೭॥

ಭಕ್ತಿಭಾಗ್ಯಪ್ರಸಾದಕ್ಕೆ ಕೈಯಾನುವ ಪ್ರ
ಯುಕ್ತಿಯಿಂದಲಿ ಪಿಡಿದು ಲಿಂಗಜಂಗಮಕೀಗ
ಭುಕ್ತಿಗಾಸ್ಪದವಾಯ್ತು ಬಿಜ್ಜಳನ ಸಂಹತೆಯ ಮೂಗಕೊಯ್ವುಲಗಿದಾಯ್ತು।
ಮುಕ್ತಿ ಮೂಲಸ್ಥಾನದೇವತೆಯ ಪರದಾದಿ
ಶಕ್ತಿಯೆಂದದಕೆ ಶರಣೆಂದು ಹರುಷದೊಳು ಭಾ
ವೋಕ್ತ ಬಸವಣ್ಣನಲ್ಲಿರ್ದೊಡೆಯರಿಂಗೆ ತೋಜ್ಯಾಪದಕವನು ಮುದ್ರಿಸಿ ॥೪೮॥

ಸ್ವಸ್ತಿಶ್ರೀಮನ್ಮಹಾಬಸವದಂಡೇಶನು ಸ
ಮಸ್ತವ್ಯವಹಾರಿಸಿದ್ಧಿಗಶೆಟ್ಟಿಗಟ್ಟಿದ ಸು
ವಸ್ತು ಶಿವನ ಸುಪದಕ ಫಣಿವಣಿಗಳೈದ್ನೆದುಕೋಟಿಯಿಂದಧಿಕವಡೆವ।

ವಸ್ತುಗಳಿಹಿದೆವದಂಪಿಡಿದು ಕಾಲೋಚಿತ
ಪ್ರಸ್ತಕೆ ಕದಂಬಲಕ್ಕವನು ಶಿವಸ್ವಾಮಿಗಳ
ಹಸ್ತಕ್ಕೆ ಕೊಡು ಬೇಗವೆಂಬ ಲೇಖನಸಹಿತ ತತ್ಪಥವಿಡಿದ ಬಸವನು ‖೪೯‖

ಕಲ್ಯಾಣದಗ್ರನಾರಭ್ಯಸಿದ್ಧಿಗಶೆಟ್ಟಿ
ಯಲ್ಲಿದಂ ಕೊಟ್ಟೊಂದು ಲಕ್ಷ ಹೊಂಡೆಗೆದುಕೊಂ
ಡಲ್ಲೊಡೆಯರಿಂಗೆ ಸೂಚಿಸಿ ಸರ್ವಸುಯಿಧಾನಕರ್ಧಧನ ಕೊಟ್ಟು ಕೊಂಡು ।
ಇಲ್ಲಿಗೀಕ್ಷಣ ಹೇೞು ಹೆಡಗೆನಡೆಗೈದುವಂ
ತಲ್ಲಲ್ಲಿ ಹರಿಕೊಳಿಸಿ ಬನ್ನೆಂದು ನಾಗಾಯ
ವಲ್ಲಭ ಶಿವಸ್ವಾಮಿ ಪಾಲಸರ್ವೇಶನ ವಶಕ್ಕೆ ಕೊಟ್ಟಟ್ಟುವಾಗ ‖೫೦‖

ಮುನ್ನಕೀಲಾರವುಂ ಕದ್ದವರ ಕಾಯ್ದು ಸಮ
ಯನ್ವ[1]ಯು[1]ತರಂ ಮಾಡಿದಾ ಕಾಲುಗಾಪಿನ ಗ
ಣಂ ನೂರ್ವರ್ರೈತಂದು ಕಾಣಲವರೊಳ್ಕೆರನವರಿಗಿತ್ತುಳಿದವರ್ಗೆ ।
ಚೆನ್ನಬಸವನನಾಧಿಕಂಗೊಟ್ಟು ಸಾಸಿರದ
ಇನ್ನೂರ ಕಂಭದ ಮಹಾಶ್ಚೈತ್ಯಚಪ್ಪರವ
ಹಣ್ಣಿಸಲೊಡಗಲೀ ಕಡೆಯಲಾ ಕಲ್ಯಾಣಪುರಕ್ಕೈದುವರ್ಗಿದಿರೊಳು ‖೫೧‖

ಸರ್ವಸರ್ವತ್ರಮುಖಮೂರ್ತಿನಹಿತೀ ಬಸವ
ಪರ್ವಕ್ಕೆ ಬಹ[2]ಡಿಳೆಗಗುರ್ವೆಂದು[2] ಪ್ರತ್ಯಕ್ಷ
ನಿರ್ವಾಣತತ್ವಪುರುಷಾಕಾರಚರಲಿಂಗ ಬಹುನಾಮಬಳಕೆದಳೆದ ।
ನಿರ್ವಿಕಲ್ಪದ ವೇಷಲಾಂಛನಸಮೂಹವಾ
ಭವ್ಯಬಸವನನಱಸಿ ಬರುತಿವರ ಕಂಡೆಥಾ
ಪೂರ್ವವಾರ್ತೆಯ ಕೇಳುತಲ್ಲಲ್ಲಿಗೆಡೆದೆರಹುಗೊಡದೆ ಬರುತಿರಲತ್ತಲು ‖೫೨‖

ಉರವಣಿಸಿ ಹೋಗವರು ಪುರಹೊಕ್ಕು ಲೇಖನವ
ದೊರೆಗಿಕ್ಕೆ ಶಿರದೊಳಾಂತೋದಿಕೊಳುತಲಿ ಪದಕ
ಪರಿಕೆಗೋಸುಗ ಮುದ್ರೆಡೆಗೆದೀಕ್ಷಿಸಲು ಕನಕಮಣಿ ದಿವ್ಯದೀಪ್ತಿ ಬೆಳಗು।
ವರಿಯೆ ತನ್ನಂಗವಸ್ತ್ರಾಭರಣಮಾಣಿಕ್ಯ
ಸುರುಚಿರಕಳಾಮಯ ಗೃಹಪ್ರಪಂಚುಗಳೆಲ್ಲ
ವರಕಾಂತಿಮಯವಾಗಿ [3]ಕಣ್ಕೆಕ್ಕರಿಸುತ[3] ಮನ ಮಂಗಳವನಿಂಬುಗೊಂಡು ‖೫೩‖

---

[1] ಯಿ (ಚ). [2] ಡೇಳಿಗುರುವೆಂದು (ಕ), ದಿಳಿಗುಸುರ್ವೆಂದು (ಪು). [3] ಕಣ್ಕೋರೈಸುತ (ಜ).

ಸರಿಯಲ್ಲ ಮೂಲೋಕವೊಂದು ಮಣಿಗೆನುತ ತನು
ಶಿರದೂಗಿ ಪೆಟ್ಟಿಗೆಯ ತರಿಸಿರಿಸಿಕೊಂಡು ಬಂದ
ವರ ಕೈಯುಲಿ ಮಗುಳೆ ಮುದ್ರೆಗೊಳಿಸೆನಿತು ಧನ ಬೇಕಾದುದನಿತನೀವೆ ।
ತರಿಸಿಕೊಳ್ಳೆಂದೊಡೆಯರಿಂಗೆ ಬಿನ್ನಹದೋಲೆ
ವೆರಸಿ ತತ್ಕಾಲೋಚಿತಕೆ ಲಕ್ಕಿ ಹೊಂಗೊಂಡು
ಕರವೆರಡ ಮುಗಿದು ಕಳುಪಲು ಅರ್ಧಧನವನಲ್ಲಿಗೆ ಕಳುಪಿ ಅರ್ಧಧನಕೆ ॥೫೪॥

ಬೇಕಾದ ವಸ್ತ್ರಗಂಧಾದಿ ನಾನಾದ್ರವ್ಯ
ನೇಕ ಸೈಧಾನಸಂಖ್ಯಾತಮುಖದಲಿ ಕಳುಪೆ
ನೂಕಿತ್ತು ಬಂದು ನಾಲ್ದೆಸೆಯಲ್ಲಿ ಹೇಱು ಹೆಡಗಾ ಬಸವ ಶಿವಪುರದೊಳು ।
ಈ ಕಡೆಯೊಳವರ ಕೀಲಾರದಿಂದೆತ್ತಿ ಬಂ
ದಾಕೊಳ್ಳದಲಿ ಬಿಟ್ಟುದಾ ದಿನದಿ ಕಂಡು ಗೋ
ನೀಕವರ್ಧದಿ ಮಥಿತ ಘೃತ ದುಗ್ಧಸಾರಗಟ್ಟಿಸಿದರಮೃತಾಬ್ಧಿಯಂತೆ ॥೫೫॥

ಅಲ್ಲಿಗಲ್ಲಿಗೆ ಸುದ್ದಿ ಪಲ್ಲವಿಸಿ ಸದ್ಭಕ್ತ
ರೆಲ್ಲ ಜಂಗಮಲಿಂಗವಾಪ್ತಪರಿವಾರಜನ
ರುಲ್ಲಾಸದಿಂದೈದುತಿರ್ದುದಾ ಸುತ್ತಣ ಸದಾಚಾರಸಂಪನ್ನರು ।
ಕೊಲ್ಲಣಿಗೆ ದರಿಹ ಗುಡಿತೋರಣಂಗಳ ನೆಗಳ್ವ
ವಲ್ಲಲ್ಲಿಗಿದಿರ್ಗೊಳುಹ ಗೀತವಾದ್ಯ ಸುನೃತ್ಯ
ಸಲ್ಲೀಲೆಗಱೆವ ಷಡುಸಾರಣೆಗಳಂ ಮಾಳ್ಪ ಸಂಭ್ರಮ ಸನಾಗರಿಸಿತು ॥೫೬॥

ಶೀಲಸಿದ್ಧಾಂತಗಳ ಸತ್ಕರಿಪ ಚರಲಿಂಗ
ಜಾಳಕರ್ಘ್ಯಾಚಮನಪಾದ್ಯಗಳ ಪರುಠವಿಪ
ಲಾಲಿಸಿ ವಿಭೂತಿವೀಳೆಯಗೊಡುಹ ವೆಡೆಮಾಳ್ಪ ರಂಗಮಾಲಿಕೆ ತುಂಬುವ।
ಲೀಲೆ ಮಿಗೆ ಬಸವಲಿಂಗಾಂಕೊನಕೆವಾಡುಗಳ
ಬಾಲೆಯರ್ಬಣ್ಣಿಸುಹ ಸಯಿಧಾನಬೋನವ ಸ
ಮೇಳದಿಂ ಮಾಳ್ಪ ನಾನಾಮಹೋತ್ಸಹದ ಮನೆ ದೈವಮನೆಯಾಗಿರ್ದುದು ॥೫೭॥

ವಚನ—

ಸೂರ್ಯನುದಯವು ತಾವರೆಗೆ ಜೀವಾಳ, ಚಂದ್ರನುದಯವು ನೈದಿಲೆಗೆ ಜೀವಾಳ, ಕೂಪರ ಠಾವಿನಲ್ಲಿ ಕೂಟ ಜೀವಾಳ, ಒಲಿದವರ ಠಾವಿನಲ್ಲಿ ನೋಟ ಜೀವಾಳ, ಕೂಡಲ ಸಂಗನ ಶರಣರ ಬರವೆನ್ನ ಪ್ರಾಣದ ಜೀವಾಳ ॥೧೦॥

ಒಲಿದಲ್ಲಿ ಬಸವ ತಾನಿರ್ದುದೇ ಕೈಲಾಸ
ಸ್ಥಳವೆನಿಪ ತಾತ್ಪರ್ಯದರ್ಥರಸಭರಿತಹೊಂ
ಗಳಸಹೊತ್ತಾನಂದದಿಂದಾಡುತಿಹ ಕೀರ್ತಿದೇವತೆಯ ರಂಗದಂತೆ।
ಹಲವೆಡೆಯ ರಂಗವಾಲಿಕೆಯಗ್ರದಲಿ ಪೂರ್ಣ
ಗಲಶಭಕ್ತಾಂಗನೆಯ ಬಾಯ್ದೆಱೆವಿಯೊಲು ಸ್ನಾನ
ಜಲಪಾತ್ರೆಯೊಳು ಮುಕ್ತಿದೇವತೆಯು ಕಣ್ದೆಱೆವೆಯೆನೆ ದೀಪ್ತಿಗಳ್ಮೆಱೆದುವು ॥೫೮॥

ಹರಿಹರಿದು ಲಿಂಗಜಂಗಮವನಾಹ್ವಾನಿಸುತ
ತರತರದೊಳಾಸನಂಗೊಡುವರ್ಘ್ಯಪಾದ್ಯ ಸ
ಚ್ಚರಿತಾಚಮನ ಸ್ನಾನವಸ್ತ್ರೋಪವೀತವಾಭರಣ ಗಂಧಾಕ್ಷತೆ ಮಹಾ।
ಪರಿಮಳ ಕುಸುಮ ಧೂಪ ದೀಪ ನೈವೇದ್ಯ ಸ
ತ್ಕರ ಸುತಾಂಬೂಲಸಹ ಷೋಡಶುಪಚಾರಗಳ
ಪರುಠವದ ಪರಿಚರರ್ಭಕ್ತಿಶಶಿಬಿಂಬ ಬಸವನ ಕಳೆಯೊಳತಿ ಮೆಱೆದರು ॥೫೯॥

ಪರಶಕ್ತಿಯಾನಂದವಾತಿಶಯದಾ ವಾಂಛಿ
ತುರವಣಿಚ್ಛಾಶಕ್ತಿಯುತ್ಸಹಕ್ರಿಯಾಶಕ್ತಿ
ವರಸನಾತನ ಜ್ಞಾನಶಕ್ತಿಯ ಮನೋಹರತೆ ಭಾಗ್ಯಾಂಗನೆಯ ವಿಲಾಸ।
ಸ್ಥಿರದೇವತೆಯ ನಿತ್ಯಪದಪುಣ್ಯದೇವತೆಯ
ಭರ ಮಂಗಳಾಂಗನೆಯ ಲೀಲೆ ಜಯಶ್ರೀಮುಖದ
ಹರದರೆನೆ ಹಗರಣಸಮಾಜ ಮಾರಾರಿಯೊರೆದೊರೆಪಂಕ್ತಿ ಪರುಠವಿಸಲು ॥೬೦॥

ವಚನ—

ನಿಮ್ಮನೋಡಲೆನ್ನ ಹರಣವಿದ್ದುದು ನಿಮ್ಮನಗಲಲೊಡನೆ ಎನ್ನ ಹರಣವೆಲ್ಲಿಯದೊ? ಇರುಳಿಹುದು ಒಂದು ಜುಗ ಮೇಲೆ ಕೆಡೆದಂತೆ ಹಗಲನಾವಪರಿಯೊಳಾಳವಾಡುವೆನಯ್ಯ? ಕೂಡಲಸಂಗನ ಶರಣರನಗಲುವ ಧಾವತೆಗಿಂತ ಮರಣವೇಲೇಸಯ್ಯ ॥೧೧॥

ನಳನಳಿಪ ಪುಳಕಾಂಗಲಿಂಗರಾಜಗೆ ಹರುಷ
ಜಲ ಶಾಂತಿ ಗಂಧ ನಿತ್ಯಾಕ್ಷತೆಸುಮನ ಸುಮನ
ದಳಭೇದಧೂಪವಾನಂದಜ್ಯೋತಿ ಜ್ಞಾನ ನೈವೇದ್ಯ ಪರಿಣಾಮದ।
ಕಳೆ ಪ್ರೇಮತಾಂಬೂಲ ನಿರ್ವಂಚನೆಯ ಮಂತ್ರ
ಛಲವಾದ್ಯ ಗೀತ ಸ್ಥಿರರಾಗ ನೃತ್ಯಸುಭಾವ
ದಲಿ ಬಸವಲಿಂಗ ಜಂಗಮಪೂಜೆ ಸಂಗಸುಖಯೋಗನದಿಯೊಳ್ನಲವುತ ॥೬೧॥

ತರತರಂಗಾವಳಿಯೊಳಿಪ್ಪಲಿಂಗಕ್ಕಂಗ
ಗುರುಲಿಂಗಕರ್ಥವಾಚಾರಲಿಂಗಕೆ ಬಯಕೆ
ಚರಲಿಂಗಕಭಿಮಾನ ಪ್ರಾಣಲಿಂಗಕ್ಕೆ ಮನ ಭಾವಲಿಂಗಕ್ಕೆ ತೃಪ್ತಿ।
ನಿರುತಪ್ರಸಾದಲಿಂಗಕ್ಕೆ ಶಬ್ದಾರ್ಥ ಘನ
ತರಮಹಾಲಿಂಗಕವಧಾನ ಶಿವಲಿಂಗಕ್ಕೆ
ಸುರುಚಿರಸುಪ್ರಾಣಾರ್ಪಣಂಗೈವುತೆಸೆದಿರ್ದನಮೃತಾನುಭಾವಿ ಬಸವ ॥೬೨॥

ಹರಭಕ್ತಸಂಕುಲಕೆ ವರಮಹೇಶ್ವರವ್ರಜ
ಕ್ಕುರುಪ್ರಸಾದಿಯ ಕುಲಕೆ ಪ್ರಾಣಲಿಂಗಸ್ಥಳೋ
ತ್ಕರಶರಣ[1]ಸಂಚಯ[1]ಕ್ಕೈಕ್ಯ ನಾನಾಶೀಲನಿಕುರುಂಬಕೆ।
ಚರಲಿಂಗಶ್ರೇಣಿಗಿಷ್ಟಾರ್ಥದಾಸೋಹ ಸುರ
ತರು ಕಾಮಧೇನು ಕಲ್ಪಿತರತ್ನ ಸಿದ್ಧರಸ
ಪರುಷಪುರುಷಾಕಾರ ಬಸವ ಮಗುಳ್ದಾನಂದಪರ್ವಸಹಸ್ರವ ನೆಗಟ್ದನು ॥೬೩॥

ನಾನಾವಿಧಾನಪರಮೋತ್ಸಹದ ಭಕ್ತಿಸ
ನ್ಮಾನಭರಿತಾವೇ[2]ಶ[2]ದಿಂದೆ ಜಂಗಮಲಿಂಗ
ಕಾನಂದಕುಸುಮಮಂಜರಿದೊಟ್ಟು ಮೆಱೆದುದು ವಸಂತಕುಲಸಂತಾನಕೆ।
ಸ್ವಾನುಭಾನೋಪದೇಶವನುಳಿದು ಮಾಳ್ಪ ಗುರು
ಸ್ಥಾನದೇವತೆಯು ನವರಸನೃತ್ಯದಧಿದೈವ
ಧ್ಯಾನಕಳೆಗಳ ನಲಿವೊಲಾಡಿ ಹಾಡುತ್ತಸಂಖ್ಯಾತರಿರೆ ಬಳಿಕತ್ತಲು ॥೬೪॥

ಕತ್ತಲೆ ಬೆಳಗಿನೊಳು ಕಳಂಕನಱಿಸುವೊಲಾ ಕು
ಚಿತ್ತನೃಪನೆಂದ ಬಸವಗೆ ಭಕ್ತಿತಲೆಗೇಱಿ
ಎತ್ತಲೆಳೆದೊಯ್ದುದೇನಾದುದೇನೆಂದು ದುರ್ಮಂತ್ರಿಮುಖ ಮಂಚರಸರ।
ಭೃತ್ಯರು ಕೆಲರು ನಿಂದು ಬಿನ್ನೈಸಿದರನರ್ಘ್ಯ
ದುತ್ತಮಪದಕವೊಂದನೊಯ್ದು ಸಿದ್ಧಿಗಶೆಟ್ಟಿ
ಗೊತ್ತಿಟ್ಟು ಲಕ್ಷಸಂಖ್ಯೆಯ ಧನವನೊಯ್ದಿಲ್ಲಗೆಂಟುಮಡಿ ಸಂಭ್ರಮದೊಳು ॥೬೫॥

ಮತ್ತೆ ಘಟ್ಟವೆನಿಪ್ಪ ಪಾಳೊಳಗೆ ಜಂಗಮದ
ಮೊತ್ತಸಂಖ್ಯಾತಕಿಕ್ಕುಂಡುಟ್ಟು ಇಲ್ಲಿಗಿಂ
ದುತ್ತಮದ ಪರ್ವಗಳೆನಿಪ್ಪವಂ ಮಾಡುತ್ತೈದನೆಯೆನಲ್ ನೃಪನ ಚಿತ್ತ।

---

[1] ಸಂಕುಳ (ಜ). [2] ಷ (ಗ.ಘ.ಥ).

ಹೊತ್ತಿಹೊಗೆವುತ್ತ ಚಾರ್ವಾಕನೃಪ ನೋಡಲವ
ಸತ್ಯವೆನಲುರಿದೇಳುತಾ ಶೆಟ್ಟಿಯುಂ ಕರೆಸಿ
ವೃತ್ತಾಂತಗೇಳಲುಂಟದೆ ಪದಕ ಪೆಟ್ಟಿಗೆಯೊಳೆನಲದಂ ತರಿಸೆಂದೊಡೆ ॥೬೬॥

ಚಿತ್ತೈಸನರ್ಘ್ಯವರಪದಕವನು ತಂದೆನ್ನೊ
ಳೊತ್ತಿಡುತ ಮುದ್ರಿಸಿದನದನವರೆ ಬಂದೊಡೆಯು
ಗಿತ್ತಡೆನಗದ[1]ಲಂಘ್ಯ[1]ವ್ಯವಹಾರಿಕಾಂಗಕ್ಕೆ ಮೇಲೆ ದಿವ್ಯಾ[2]ಭ[2]ರಣಕೆ।
ಕೆತ್ತಿಸಿದ ರತ್ನಪಲ್ಲಟವೆಂಬರೋ ಜೀಯ
ಎತ್ತ ಪೋಗುವುದವರ ಕರೆಸವರ ಮುಂದಿಟ್ಟು
ಇತ್ತಪೆನೆನಲಿಕಾಕ್ಷಣಾಗ್ರಚರರಂ ಕಳುಪೆ ಬಂದವರು ಬಸವನಿದಿರ ॥೬೭॥

ನಿಂದು ಬಿನ್ನೈಸಿದರೆಥಾರ್ಥವನು ರಾಜದ್ರೋ
ಹೆಂದರಸು ನೀವು ಪದಕವನಿರಿಸಿದಂಗೆ ನಿ
ರ್ಬಂಧಮುಖನಾಗುಗ್ರದಿಂ ನಿಮ್ಮ ಕರೆಯಲಟ್ಟಿದರೇಳಿ ಶೀಘ್ರದಿಂದ।
ಬಂದದಱ ಭರಭಾರದೊಡೆದು ಬನ್ನೆನಲಾದಿ
ನಂದಿಕೇಶ್ವರ ಬಸವರಾಜನೆದ್ದಿದು ಹರಾ
ನಂದವದಕೇನೆನು[3]ತ್ತೇಳ್ತಂ[3]ದ ಕಲ್ಯಾಣಪುರಕೆ ಪೂರ್ವಾಚಾರ್ಯನು ॥೬೮॥

ಪ್ರತಿವಾದಿಮತ್ತಮಾತಂಗಪಂಚಾಸ್ಯ ಸಂ
ಹಿತಮಂತ್ರಿಕುಲತೀವ್ರಕುಲತಿಮಿರಭಾಸ್ಕರ ದೀ-
ಧಿತಿದೋಱಿದನು ನರೇಶ್ವರನ ಮುಖಕ್ಕೈರವಕೆ ಭಕ್ತಜನಸರಸಿಜಸಖ।
ಕೃತಕಮೂಲಾಧಾರಕುದ್ದಾಲ ಬಂದುನಿಲ
ಲುತ್ಕೋಚನೃಪನು ಕೋಪಿಸುತ ವಿಶ್ವಾಸಾವ
ಗತಿಕ ನಿನ್ನಯ ರಾಜದ್ರೋಹದಾಟವಿದೇನು ಸತ್ತು ಸ್ವಭಾವ ಬಿಡದು ॥೬೯॥

ಕಾಟಕಾವಾಱದಪದಸ್ಥನಂ ಮಾಡಿ ನಿ
ನ್ನಾಟವಿಕತನಕಂಜಿ ಹೊಱವಡಿಸೆ ಮತ್ತೆ ಮೊಗ
ಮೋಟತನದಿಂದೆಮ್ಮ ಪಡಕಮಂ ಕದ್ದೊಯ್ದದಂ ಮಾಱುಕೊಂಡು ನಿನ್ನ।
ಕೂಟಾಟದವರ್ಗಿಕ್ಕಿ ತೀರ್ಚುಹವೆ ತಾ ವೃಥಾ
ಗೇಟಾಕದೆನೆ ನಿಮ್ಮದಲ್ಲವದು ವಿಶ್ವನಟ
ನಾಟಕನ ಪದಕವೆನೆ ನೋಡಿ ಗದ್ದಳಿಗನಿದಿರುತ್ತರವೆನುತಲರಸನು ॥೭೦॥

---

[1] ಲಗ್ಯ (ಖ), ಗ್ಗ (ಗ.ಫ.ಥ.ಜ). [2] ವ (ಖ). [3] ತ್ತೈತಂ (ಖ).

ತಾ ಪದಕಪೆಟ್ಟಿಗೆಯನೆನುತ ವ್ಯವಹಾರಿಯನು
ಕೋಪದಿಂ ನೃಪನವುಡುಗಚ್ಚುತೀಕ್ಷಿಸೆ ತಂದು
ಆ ಪೆಟ್ಟಿಗೆಯ ಮುದ್ರೆದೋಱು ಬಸವಂಗೀಯಲೀಸಿಕೊಂಡದಕೆ ನಮಿಸಿ।
ಭೂಪನಿದಿರೊಳು ಗದ್ದುಗೆಯ ಮೇಲಿರಿಸಿ ಶಿವನ
ದೀ ಪದಕ ನಿನ್ನದಾದಡೆ ತೆಗೆದುಕೊಳ್ಳೆನಲು
ತಾ ಪ್ರೌಢಿಯೆಮ್ಮೊಳೇಕೆನುತೆಳೆದುಕೊಂಡು ಮುದ್ರೆಯನೊಡೆದು ಮುಖದೆಗೆಯಲು ॥೭೧॥

ಕೋಳಾಹಳದಿ ಮೊಱೆವುತೆದ್ದು ಪೆಡೆತೆಗೆದುಗ್ರ
ಹಾಲಾಹಲವನ್ನೆಮುಖದಿನುಗುಳುತುರುಜಿಹ್ವೆ
ಜಾಳಗಳ ಝುಳಪಿಸುತಲುರಿಗಂಗಳಿಂ ನೋಡಿ ಕಿಡಿಗೆದರಿ ವಿದ್ಯುತ್ಪ್ರಭಾ।
ಜಾಳದಂಗಚ್ಛವಿಯಲುಗ್ರಸಿಂಗೋರಗ ನೃ
ಪಾಲಕನ ಮೊಗನೋಡುತಿದಿರ್ಚ ನಿಂದಪ್ಪಳಿಸ
ಲೇಳುತಲೆ ಹಮ್ಮದಂಬೋಗಿ ಗದ್ದುಗೆಯಿಂದ ಬಿದ್ದನವನಿಗೆ ನೃಪಾಲ ॥೭೨॥

ಕಾಳುಮೇಳೆಂದು ಸಭೆ ಕಂಗೆಟ್ಟುರಗವಿಷದ
ಘಾಳಿಗೊಂಡೊಲು ನಡುಗುತರಸು ಭಯಭಂಗದಿಂ
ಕಳೆಭಗ್ನನಾಗಿ ಬಸವೇಶ್ವರನ ಹಿಂಗಡೆಗೆ ಸಾರ್ದು ಸಂಗನ ಪದಕವ।
ಹೇಳಿಗೆಯ ಹೊಗಿಸೀಕ್ಷಿ[1]ಸ್ಯ[1]ದು ನಮ್ಮದಲ್ಲಲ್ಲ
ಹೇಳುವರ ನುಡಿಗೆ ಬೇಳಾದೆವೆನುತಂ ದೈನ್ಯ
ದಾಳಾಪದೋಱಲುರಗನ ನಡುವಿಡಿದು ಬಸವ ಮಗುಳ್ದು ಪೆಟ್ಟಿಗೆಯೊಳಿಕ್ಕೆ ॥೭೩॥

ಆವುದುಪಮಾನವದನೇನೆಂಬೆನಾವಭಾ
ವಾವನಿಜನ್ಯೈಷ್ಮೆ ನವರತ್ನಖಚಿತೋಜ್ವಲಪ್ರ
ಭಾವಜ್ಯೋತಿರ್ಮಯಸ್ವಯಂಪ್ರಕಾಶಿತ ದಿವ್ಯಪದಕವಾಯ್ತಾವ[2]ಚ್ಚರಿ[2] ।
ಭೂವರಾದ್ಯಖಿಳಸಭೆ ನೋಡೆ ಜಗಮೋಹನಕ
ಳಾವಿಳಾಸಿತತೇಜಪುಂಜರಂಜಿತಪದಕ
ದೇವರದಿದಹುದಹುದೆನುತ್ತ ದೇವರದೇವ ಬಸವಜಯಯೆನುತಿರ್ದುದು ॥೭೪॥

ಆ ದಿವ್ಯಪದಕಮಂಜೂಷವನು ಮುದ್ರಿಸದ
ನಾಧಿಕ್ಯರಿಂಗಿತ್ತು ಗಮನಮುಖವಾಗಲಿಪ
ಹೋದಾಗ ಹೋಹಳೊಡನೆನ್ನ ಭಾಗ್ಯಾಂಗನೆಂದರಸು ತಾ ತಿಳಿದುನೋಡಿ।

---

[1] ಸಿ (ಖ.ಗ). [2] ಬ್ಬರಿ (ಕ.ಖ), ಚ್ಚರಿಯೊನೆ (ಘ).

ಸಾದರದೊಳು ಭಯಕರಸಂಪುಟಂಗೈದು ದಿ
ವ್ಯೋದರದಿ ತಲೆಯಿಟ್ಟು ನಾ ಶತಪರಾಧಿ ಪ್ರತಿ
ಪಾದಿಸದಿರೆಂದು ಪ್ರಾರ್ಥನೆಗೈದು ನಿಮ್ಮ ನಿಜವಾರ್ಗ ಱಿಯಬಹುದೆನುತ್ತ ॥೭೫॥

ಅಲ್ಲಿಗಲ್ಲಿಗೆ ನೋಡಲದಕದೇ ನ್ಯಾಯವಾ
ಗಲ್ಲಿಗಲ್ಲಿಗೆ ಸಸಿನವಾಗಿಹುದು ಲೋಕೋಕ್ತ
[1]ದೆ[1]ಲ್ಲ ಕದನಲ್ಲೆನಿಸಿ ನಿಮ್ಮ ನಿಜ ಬೇಱೊಂದು ಪದದಿ ಬರೆ ತಿಳಿವುದಾರ್ಗೆ ।
ಎಲ್ಲರಂತನ್ಯಧನಕಳುಪು[2]ವಿರೆ[2] ನೀ[3]ವಿನ್ನು[3]
ಬಲ್ಲಂತೆ ಮಾಡೆಂದು ಭಂಡಾರ ಮೊದಲಾದ
ವೆಲ್ಲವಱ ಮುದ್ರೆಯಂ ಮರಳಿತ್ತ ನೃಪನೆಮ್ಮ ಬಸವದಣ್ಣಾಯಕರಿಗೆ ॥೭೬॥

ನಿಜಭುಜಶ್ರೀಯ ಭಾಗ್ಯಶ್ರೀಯ ವೈರಿಜನ
ವಿಜಯಶ್ರೀ[4]ಯಯ್ಯ ಕೀರ್ತಿಶ್ರೀಯ ಸಾಮ್ರಾಜ್ಯ[4]
[5]ವ[5]ಜಮಾನಶ್ರೀಯನೈಶ್ವರ್ಯದ ಮಹಾಶ್ರೀಯ ಮಂಗಳದ ಶ್ರೀಪುರಕ್ಕೆ ।
ಬಿಜಯಗೈಸುವ ತೆಱದಿ ತೂರ್ಯತ್ರಯಾಂದೋಳ
ಧ್ವಜತೋರಣಾದಿ ನಾನಾಮಹೋತ್ಸಹದಿ ಭೂ
ಭುಜನಿದಿರ್ಗೊಂಡು ಬಸವನ ಕಳತ್ರಾದಿಗಳ ಗೃಹಪ್ರವೇಶಂಗೈಸಿದ ॥೭೭॥

ಅನ್ಯಯಾನನ್ವಿತವ ನಟಿಸಿ ಸಂಪದದೆಗೆಸಿ
ಬನ್ನಬಡಿಸಾರಣ್ಯವಾಸಕ್ಕೆ ಕಳುಹಿಸಿದ
ಬಿನ್ನಣಿಗರೆದೆಯ ಮೇಲಡಿಯಿಡುವೋಲಾ ಸತಿಸುತಾದಿ ಜಂಗಮಸಮೇತ ।
ಉನ್ನತೋನ್ನತವಿಭವದಿಂ ಬಂದು ಗೃಹಹೊಕ್ಕು
ಮುನ್ನಿನಿಂದಧಿಕದಾಸೊಹಪದಭಕ್ತಿಸಂ
ಪನ್ನಬಸವೇಶನ ಮಹಾತ್ಮೆಯಿಂತೆಂದು ನಂದೀಶ ಪ್ರಮಥರ್ಗೊರೆದನು ॥೭೮॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಹಿಯ ಲೇವಣಿಮಾಡಿ ಬಸವೇಶ ಮೆಱೆದ ಸಂಧಿ ॥೭೯॥

———

[1] ರೆ (ಖ). [2] ವರೆ (ಘ,ಗ.ಧ). [3] ವಿಂತು (ಕ.ಖ). [4] ಯಂಕೀರ್ತಿಶ್ರೀಯ ಸಾಮ್ರಾಜ್ಯದಾ (ಖ). [5] ಎ (ಖ).

ಮೂವತ್ತೆರಡನೆಯ ಸಂಧಿ

(ಕುಸುಮಷಟ್ಪದಿ)

ಸೂಚನೆ—

ಏಱುದ್ದ ತೇಜಿಯನು
ನೀರತಾಪಸಗಿತ್ತು
ತೋಱುದನು ಬಸವ ರಾಯದೊಳಶ್ವವ ।

ಪರಮದಾಕ್ಷಾಯಿಣೀ
ವರನಗಣ್ಯದಪುಣ್ಯ
ಸಿ೯ವನಿತೆ ಜನಿಸಿದಮೃತಾಗವಾಬ್ಧಿ ।
ಶಿರದೊಳಾಂತಿಹ ಬಹಳ
ತರತರಂಗಳ ಬಣ್ಪ
ನೊರೆದೊರೆನಲೆಸೆವ ಪ್ರಮಥರ್ಕೇಳ್ವುದು ॥೧॥

ಅವನಿಯರ್ಥತೆಯಿಂದ
ನವ ತಪಂಬಟ್ಟು ತ
ಟ್ಟವಲೋಕದಿಂ ಮರ್ತ್ಯಕಿಳುಹಿದಂತೆ।
ಕುವಲಯಕೆ ಕುಂದಣವ
ಪವಣಿಡುವ ಭಕ್ತರ
ತ್ನವ ತೆತ್ತಿಸಿ[1]ದೊಲಿಹುದು[1] ಮಂಗಳಪುರ ॥೨॥

ಆ ಪು[2]ರಕ್ಕಧಿ[2]ಪನು ಸು
ಗೋಪಗಣ ವರಮನುಜ
ರೂಪಿನಿಂ ಜನಿಸಿ ತದ್ದಿಗ್ವಲಯದ।
ಭೂಪ ಬಜ್ಜಳನ ಪದ
ರೂಪಿತ ಪ್ರಧಾನನಾ
ಗಾ ಪರಮಬಸವೇಶನಿಧಿಯಿರಲ್ಕೆ ॥೩॥

ಒಂದಿನರಸಬಿಳದಳ
ವೃಂದಮಂ ನೋಡೆ ನಲ
ವಿಂದೆ ವೈಹಾಳಿಯಂ ಪೋಪರ್ಥಿಯಿಂ।

[1] ದನೋಲಹುದು (ಕ.ಚ), ದ ವೊಲಿಹೆ (ಖ). [3] ರಕ್ಕ ಧಿ (ಖ.ಕ), ರಾತಾಧಿ (ಘ). ತತ್ವನಿಧಿಯಿರುತಿರಲ್ಕೆ (ಜ).

ಇಂದ್ರನುಚ್ಚೈಶ್ರವವ
ಹಿಂದಿಕ್ಕಿ ಪಾಯ್ವಶ್ವ
ಸಂದೋಹ ತೊಂಭತಾರ್ಲಕ್ಷದೊಳಗೆ ||೪||

ಉತ್ತಮಪ್ರಧಾನಂಗೆ
ಉತ್ತುಂಗತರವೆನಿ
ಪ್ಪತ್ಯಧಿಕರಾಜವಾಹನವೊಂದನು ।
ಚಿತ್ರತರನವರತ್ನ
ತೆತ್ತಿಸಿದ ಹೊಸಹೊನ್ನ
ಕೀರ್ತಿಮುಖ ಹಲ್ಲಣವ ಬಿಗಿದು ಸಾರ್ಚಿ ।೫||

ವೇದದ ಶಿರಕ್ಕಡರ್ವ
ನಾದಿಸಿದ್ಧಾಂತ ಸುರ
ರಾದಿತ್ಯರೋಹಣಾದ್ರಿಯನಡರ್ದೊಲು ।
ಮಾದೇವನವತಾರ
ಭೇದದ ಗಣೇಶ ಬಸ
ವಾದಯುಧಿ[1]ತೇಜಿಯೇ[1]ಱುತ [2]ಮೊ[2]ಱೆವೃತ ||೬||

ಪಾಯದಳಪತಿಮುಖಾ
ದಾಯದಾಯುಷ್ಯದ
ಣ್ಣಾಯಕ ಬಸವರಾಜ ಬಹುದ ಕಂಡು ।
ರಾಯಬಿಜ್ಜಳ ಹರುಷ
ಶ್ರೀಯ ಮುಖಗಂಡಂತೆ
ಆಯನುತ್ತಧಿಕಪಡೆ[3]ದೊ[3]ಡವೆಗೊಡಲು ।೭||

ಕೀರ್ತಿಕಡೆಗಂಡುದೆಂ
ದಾರ್ಥಿಗ[4]ಳು[4] ಹೊಗಳುತ್ತೆ
ಥಾರ್ಥಭಾಷೆಯ ಬಿರುದಿನೊಳು ವಚನದ ।
ಸ್ವಾರ್ಥವಿಲಾಸಚರ
ರಾರ್ಥದಿಂ ಬೇಡಿದ್ದ
ಕೊರ್ತೀವ ನಮ್ಮ ಕೂಗಿನ ಬಳಿಯಲಿ ।೮||

---

[1] ಹರಿಯನೇ (ಜ). [2] ಮೊ (ಫ). ಗೋ (ಕ.ಖ). [4] ಳ (ಕ.ಖ).

ಕೀರ್ತ್ಯಂಗನಾಧವನು
ಮೂರ್ತಿಗೊಂಡೀತನಂ
ಸ್ಫೂರ್ತಿಯಿಂ ನೋಳ್ಪಂತೆ ಶಿವನು ತಾನೆ।
ಮಾರ್ತಾಂಡಮಂಡನದ
ತೀರ್ಥವಾಸನೆ ಕಳಾ
ಕೀರ್ತಿಮುಖತಾಪಸೇಂದ್ರನದೊರ್ವನು ॥೯॥

ಬಂದು ಬಸವನ ಮುಂದೆ
ನಿಂದು ನಗುತಂ ಬೇಡಿ
ದಂದವಂ ಕೊಡುವನೆನೆ ಕೇಳಿ ನಾವು।
ಬಂದವೆನೆ ದೇವ ಬೇ
ಹಂದಮಂ ನಿರವಿಸೆನೆ
ಚಂದ್ರಧರನಲ್ಲಿಗೆಡೆಯಾಡಿ [1]ನ[1]ಮಗೆ ॥೧೦॥

ನೊಂದಾವು ಕಾಲುಕೊಡು
ತಂದೆ ನೀನೇಱಿದ್ದ
ದೊಂದು ಕುದುರೆಯನೆನಲು ಧಿಮ್ಮನಿಳಿದು।
ವಂದಿಸಾ ವಾಘೆಗೊಡ
ಲಂದುಮಾವರನೇಱಿ
ದಂದದಿಂದೇರ್ವ್ಯಂಕಿ ಪಾಯ್ದು ತಪಸಿ ॥೧೧॥

ಬೆಱಗು ಬೆಳೆಯಿತು ಸಭೆಗೆ
ಉರುವ ತೇಜಿಯನು ಹೊ
ನ್ನೆರಕವಲ್ಲಣದ ಸಮಕಟ್ಟು ಸಹಿತ।
ಅಱಗುಲಿ ಗೊರವಗಿತ್ತ
ನಱಿ ಮರುಳಮಂತ್ರ ಮೇ
ಲಱಿಯನರಸೊಡವ [2]ಗೋ[2]ಡೆಯೊಳಿಕ್ಕದೆ ॥೧೨॥

ಸಸಿನೆಗೊಡುವುದೆ ಯಿದಕೆ
ವಸುಧೆ ಬೆಲೆಯಿಲ್ಲರಸಿ
ಗುಸಿರ್ದರೆ ಪ್ರಮಾದವೆನುತಿರಲಿತ್ತಲು ।

---

[1] ಯು (ಕ.ಗ.ಫ.ಚ.ಜ). [2] ಗೊ (ಚ.ಗ.), ಗ (ಕ.ಖ).

ಅಸಮಾನ ರಾಜಕೆಯ
ರೆಸಗಿದರು ಕೊಂಡೆಯರ
ವಿಸರಾದ್ಯಮಂಚರಸರೊಳಗಾದರು ॥೧೩॥

ಭಂಡಾರವೆಲ್ಲವಂ
ಕಂಡಕಂಡರಿಗಿತ್ತು
ದಂಡನಾಯಕನದರಿ ದಣಿಯನರಸ ।
ಕಂಡಿರಾ ಮತ್ತೆ ಉ
ದ್ದಂಡಕಿಯು ಮಣಿಮಯದ
ಖಂಡಣಿಯ ಹೊಂಬಲ್ಲಣದ ತೇಜಿಯ ॥೧೪॥

ನೀಗಿದನು ನಿಮ್ಮಾಣ
ಈಗೊಬ್ಬ ಗೊರವಂಗೆ
ಚಾಗಿತನದಿಂದಿತ್ತೊಡಾ[1]ಯು[1] ಕೊಂಡು।
ಆಗಳೇ ದಾಂಟದನು
ಸಾಗರವನೆನೆ ನೃಪತಿ
ಮೂಗಿಂಗೆ ಬೆರಳಿಟ್ಟು ಬೆಱಗ[2]ನಾ[2]ಳ್ದು ॥೧೫॥

ಅಚ್ಚರಿಯನರ್ಚಿಸಿದ
ಉಚ್ಚಿಷ್ಟ ಚಂಡಾಳಿ
ಬೆಚ್ಚಳೋ ಬೆಱಗನೆನೆ ನರನಾಥನು।
ಕಿಚ್ಚು ಕುಡಿದಂತೆ ಕಣು
ಕೆಚ್ಚನಾದವು ಕೋಪ
ಉಚ್ಚಳಿಸಿತೊಡಲ ಮಱುಮೊನೆದೋಱಲು ॥೧೬॥

ಪಾಲು ವೀಳೆಯನಾರ್ಗೆ
ಖೂಳ ಮಂತ್ರಿಯೆ ಕೊಟ್ಟೆ
ಚಾಳೋಕ್ಯರನ್ವಯದ ರತ್ನಖಚಿತ ।
ನೀಲವಜ್ರದ ಕನಕ
ಕೀಲಣದ ಹಲ್ಲಣವ
ಚಾಳೈಸಬೇಡ ತಾ ತ್ರಪಕದೊಳಗೆ ॥೧೭॥

---

[1] ಯಯ್ಯ (ಕ), [2] ತಾ (ಖ).

ಕುದುರೆಯನು ಹಲ್ಲಣವ
ಚದುರಿನಿಂ ಶಿವನೊಯ್ಯೆ
ಬೆದಱಿ ಬೆಂಬೀಳದಿಂತೆಂದ ಬಸವ ।
ಅದೆ ಲಾಯದೊಳು ನಿನ್ನ
ಕುದುರೆ ಹಲ್ಲಣ ಸಹಿತ
ಇದಕೇಕೆ ಖತಿಯೆನಲು ಮುಗುಳ್ದರಸನು ॥೧೮॥

ಕೋಪದಿಂ [1]ತಾಪಿಸುತ[1]
ಭೂಪನುರಿದೆದ್ದೆಮ್ಮ
ನೀ ಪರಿಯ ಚಾಳೈಸಬಂದೆ ನಿನ್ನ ।
ತಾಪತ್ರಯಂಗಳವ
ರೂಪಿಸದಿರಟಮಟವ
ನೀ ಪಾಶುಪತಗಿತ್ತು ಠಕ್ಕುಠವಣ ॥೧೯॥

ಜೋಕುಳಿಸಿ ಲಾಯದಲ
ನೀ ಕುದುರೆ ಯದೆಯೆಂಬ
ಕಾಕುವಾತೇ[2]ಕೆ[2]ನುತ ಧಟಿಸುತಿರೆ।
ಲೋಕವೆರಡೇಳ[ದ]ಕೆ
[3]ಏಕೊಡೇವರದೊಂದು[3]
ಕೀಕಟದ ಕುದುರೆಯುಂ [4]ಭೇಕೊಂಬರೆ[4] ॥೨೦॥

ದೇವರೂಪಿಂದೊಯ್ದು
ದೇವದೇವಾಶ್ವವದು
ನೀ ವೃಥಾ ಕ್ಲೇಶಗೊಳದಿರು [5]ನ[5]ಮ್ಮಯ।
ಕೋವಿದರು ಕೊಂಡಾಡು
ವಾ ವಾಜಿ ಮಂದಿರದ
ಓವರಿಯೊಳಿದೆ ನೃಪತಿ ನೋಡಿಸೆನಲು ॥೨೧॥

ಪಡೆವಳರ ಹಲವರಂ
ಪೊಡವೀಶ ಕಳುಪಲಾ
ಎಡೆಯುನೀಕ್ಷಿಸೆ ಭಾವವಮೃತಾಬ್ಧಿಯ।

---

[1] ದಟ್ಟಿಸುತ (ಜ). [2] ನೆ (ಕ.ಪು.ಗ.ಚ.ಜ). [3] ಕೋದೇವನವರೊಂದು (ಕ.ಗ.ಜ.ಝ.)
[4] ದೇಕೆಂಬರೆ (ಖ), ದೇಕೆಂದರೆ (ಕ). [5] ನಿ (ಗ).

ಕಡೆದು ದೇವಾಶ್ವಮಂ
ಪಡೆದಂತೆ ವಾಕ್ಪುರುಷ
ದೊಡನೆ ಜನಿಸಿದ ತೇಜಿಯಿರೆ ಕಂಡರು ॥೨೨॥

ಭೂತಳೇಶಂಗೆ ಮಗು
ಳ್ದಾತಳ್ತು ಪೇಳ್ದ[1]ಪ್ರ್ಪ[1]
ಭೂತವಾಗಿದೆ ವಾಜಿಯೆನಲಾತನು।
ಕೌತುಕಂ ಬಡುತಲೆ—
ದ್ದಾತುರದಿ ಮಂದಿರಕೆ
ತಾ ತವಕದಿಂ ಬಂದು ಲಾಯ ಹೊಗಲು ॥೨೩॥

ಕೃತ್ರಿಮವ ಕುಸುಕಿರಿವ
ಮೃತ್ಯುಂಜಯನ ಮಂತ್ರ
ಭಿತ್ತಿಯೆನೆ ಬಸವಭಾವಾಂತರಂಗ।
ದುತ್ಪತ್ಯದಶ್ವಮುಖ
ವೆತ್ತಿ ಗರ್ಜಿಸಲು ತಲೆ
ಗುತ್ತುವ ದುರಿತದೊಳಾಯ್ತುರಸಮುಖವು ॥೨೪॥

ಕರ್ಮನಿರ್ಮೂಲನಂ
ಪರ್ಮವ ನಿರೀಕ್ಷಿಸುವೆ
ನಿರ್ಮಳತ್ವದ ಗುರುಕಟಾಕ್ಷದ ಪದ।
ಬ್ರಹ್ಮ ಕಣುದೆಗೆದಂತೆ
ಧರ್ಮಮೂರುತಿ ಬಸವ
ನಿರ್ಮಿಸಿದ ಕುದುರೆ ನಿಟ್ಟಿಸಿತರಸನ ॥೨೫॥

ಕುಟಿಲಕೋ[2]ಟಿ[2]ಗಳ ಶಿರ
ಪಟಲವಂ ತುಳಿ[3]ವ[3] ಶಿವ
ಕಟಕಾದ್ಯ ಗೋಪಪದಚಮತ್ಕೃತಿಯೊಳು।
ನಟಿಸುವ ಖುರಾಗ್ರದೊಳು
ಕಟಕಿಗಳೆದೆಯು ತುಳಿವ
ಪಟುತರಚರಣ ಚಲನದೋಜು ಮತ್ತೆ ॥೨೬॥

---

[1] ಪ್ರ (ಕ.ಖ). [2] ಟಿರೆ (ಕ.ಖ). [3] ದ (ಕ.ಖ).

ಧಿಕ್ಕರಿಸಿ ನಿಂದಕರ
ಲೆಕ್ಕಿಸದ ಪುಣ್ಯಮೃಗ
ದಿಕ್ಕಯೊಡಲಿಂಗೆ ಪದಮೂಡಿದಂತೆ ।
ಪೆಕ್ಕ[1]ಣಕೆ ರಂಭೆ[1]ತಾ
ಹೊಕ್ಕಂತೆ ಚಿತ್ರಗತಿ
ಚಕ್ರವರ್ತಿಯು ಮನವ ಮೆಟ್ಟಿ ತುಳಿಯೆ ॥೨೭॥

ಹೊಂಗನ್ನಡಿಯನು ರವಿ
ಹಿಂಗದೀಕ್ಷಿಪೊಲ್ ನವ
ರಂಗರತ್ನಾವಳಿ ಖಚಿತ ವಿರಚಿತ ।
ಭಂಗಾರ ಪಲ್ಲಣ
ಸ್ವಾಂಗದಿಂದಳವಟ್ಟು
ಕಂಗೆ ಸೊಗಸಿರಲರಸು ಹರುಷವೇಱಿ ॥೨೮॥

ದ್ವಾರಕರ ಗೋಪರಧಿ
ಕಾರಿಗಳ ಸಾಹಣವಿ
ಚಾರಕರ ವಾಹಕರ ರಾವುತರನು ।
ಧಾರುಣೀಶ್ವರ ಕರೆದು
ತೋಱಿ ನಿಸ್ಸಂದೇಹ
ವಾರುವನಿದರಮನೆಯುದಹುದೆನುತಿರೆ ॥೨೯॥

ಅಂತು ನೋಡಿದಡಿದೇ
ಯುಂತಸ್ಥವಾಗಿರ್ದ
ಡಿಂತು ನೋಡಿದಡೆ ದೃಷ್ಟಾಂತವಾಗಿ ।
ಭ್ರಾಂತಿಲ್ಲದಿಪ್ಪ ವಿ
ಭ್ರಾಂತಿಯೇನಿದು ಮಂತ್ರಿ
ಕಾಂತನೇ ಬಲ್ಲನೆನುತರಸು ತಿರುಗಿ ॥೩೦॥

ಅಂತಸ್ಥಿಗರ[2]ಕನಲ್ದು[2]
ಮಂತ್ರಿ ಮಾರ್ಗಂ ತಪ್ಪ
ವಂತಾತನೇ ಕುಜನಭಜನೆಗೆ ವೃಥಾ ।

---

[1] ಜಿಕೆರಂಜಿ (ಪ) ; ಣೆರಂಭೆ (ಕ.ಖ); ಣೆರಂಚೆ (ಗ). [2] ಕರೆದು (ಗ.ಘ.ಥ).

ಖಾತಿಯಂ ಕೈವಿಡಿದ
ಭ್ರಾಂತರಾವೆನುತರನು
ಮಂತ್ರಿಗಿಕ್ಕೈಯೆತ್ತಿ ಪೊಡಮಡುತ್ತ ॥೬೧॥

ಕಳುಹೆ ಬಸವನ ಭಕ್ತಿ
ಬೆಳೆಯೆ ಶರಣವರ್ಗನೆಗ
ಳೊಳಯಿಕಡಕುವ ತೆಱದೊಳಂತರಂಗ ।
ಕುಲಸ್ಥಲದೊಳಂಬಿಟ್ಟು
ಬಳಿಕ ಧರ್ಮಾರ್ಥಕ್ಕೆ
ಒಳಸುವೊಲು ಭಕ್ತಿಯುತ್ಸಹದಿಂದಲು ॥೩೨॥

ಗುಡಿತೋರಣಂಗಳು
ಒಡನೊಡನೆ ಮಂಗಳದ
ಸಡಗರಸಕಲಸುಖಾನಂದದೊಳಗೆ ।
ನಡೆತಂದ [1]ನಿಜ[1]ಭವನ
ದೆಡೆಗೆ ಬಸವಾಂಕನೆಂ
ದೊಡರಿಸಿದ ನಂದೀಶ ಪ್ರಮಥಕುಲಕೆ ॥೩೩॥

ಈ ಕಥಾರ್ಥವನು ಭೂ
ಲೋಕದ ಶರಣಚಯಕೆ
ಶ್ರೀಕಾಶಿಕಾವಿಶ್ವನಾಥನ ಪದ ।
ಕೋಕನಭ್ರಮರ ಶಿವ
ನಾಕಾರಬ್ರಹ್ಮದ ಕ
ಳಾಕಾರವೆನೆ ಸಿಂಗಿರಾಜನೊರೆದ ॥೩೪॥

ಚಿತ್ರವೆನೆ ಬಸವಚಾ
ರಿತ್ರದೊಳ್ಪನಿಸಿದಟು
ವತ್ತುನಾಲ್ಕುಂ ಪವಾಡಂಗಳೊಳಗೆ ।
ಅತ್ಯಮಲಚರಲಿಂಗ
ಕಿತ್ತು ಲಾಯುದೊಳು ತಾ
ಮತ್ತಶ್ವಮಂ ತೋಱಿ ಮೆಱೆದ ಸಂಧಿ ॥೩೫॥

---

[1] ಶಿವ (ಕ.ಖ).

ಮೂವತ್ತುಮೂರನೆಯ ಸಂಧಿ

ಸೂಚನೆ—

ಹಾಲಾಹಲವನು ಪ್ರಸಾದವೆಂದೊಡ್ಡಿ ಭೂ
ಲೋಲ ಪ್ರತಿವಾದಮಂ ಬೆಳಸಿ ಪೂರ್ವಮ್ರುತಮಥ
ನಾಳಾಪವೇಳ್ದು ತಂಡಾಯಿಲರ ಗೆಲದು ವಿಷಮಂ ಬಸವರಾಜ ಮೆಱೆದ ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟಸಾ ಮಂತ್ರರಹಸ್ಯಾದಿಯು ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಸಾಕಾರಬ್ರಹ್ಮಸ್ವರೂಪವಹ ಚಿತ್ಕಳಾ
ನೇಕಪ್ರಮಥರು ಸುಚಿತ್ತದಿ ಕೇಳ್ವುದೀ ರುದ್ರ
ಲೋಕಮಂಗಳತೆ ಭೂಲೋಕದೊಳು ಕಲ್ಯಾಣಪುರವೆಸರೊಳಿಪ್ಪುದಲ್ಲಿ।
ಈ ಕಳಾಪ್ರಕೃತಿಭಕ್ತಿಯ ಭಾಗ್ಯಲಕ್ಷ್ಮಿ ಪುರು
ಷಾಕಾರದಿಂ ಜನಿಸಿ ಭಂಡಾರಿವೆಸರೆಸೆದು
ತಾ ಕಪಟಮನುಜತೆಯ ಮಱೆಯೊಳಿಹ ಶ್ರೀರುದ್ರ ಭೂರುದ್ರ ಬಸವಾಂಕನು ॥೨॥

ಅಮೃತ ಕೆಚ್ಚಲೊಳಡಗಿದಂತೆ ಶತಸಹಸ್ರ ಲಿ
ಕ್ಕಮವೇದಿಸುವ ಸಿದ್ಧರಸಪೂರಗಳಸದಂ
ತಮಳಸುಜ್ಞಾನದೀಪ್ತಿಯು ಗರ್ಭಗಾರದಂತಿರೆ ರಸಾಯಸದೊಱತೆಯು ।
ಕ್ರಮದಿ ಶಿವಯೋಗನಿಕ್ಷೇಪಭೂಮಾನದಂ
ತಮಮ ಪಂಚಾಕ್ಷರಿಯ ತೀವಿದ ಕರಂಡದಂ
ತಮರತರುಫಲಕೆ ಬಂದಂತಿರಿಹ ಸದ್ಭಕ್ತಿನಿಜಚರ್ಮದೇಹವಿಡಿದು ॥೩॥

ಆ ಮಹಾತ್ಮಕನ ನಿಷ್ಠೆಯ ನಿಜವ ಲಿಂಗನ
ಪ್ರೇಮಪಾದೋದಕೋದ್ದಾಮಜಂಗಮಭಕ್ತಿ
ನೇಮ[1]ಸದ್ಗತಿ[1] ಸದಾಚಾರ ಶಿವತತ್ವಾಗಮಾರ್ಥಸತ್ಕ್ರಿಯೆಕಳೆಗಳ ।

---

[1] ಸದ್ಭಕ್ತಿ (ಕ.ಗ.ಥ.ಖ).

ಕಾಮಿತಫಲಪ್ರದಾಯಕರೂಪನಾಗಿ ನಿ
ಸ್ಸೀಮನಾ ಕಲ್ಯಾಣಪುರದ ಮಾಹೇಶ್ವರ
ಸ್ತೋಮಕ್ಕೆ ದಾಸೋಹಪರಮಪ್ರಸಾದಸ್ಥಳಮಱಿಪಿ ಸುಖಮಿರಲೊಂದಿನ ॥೪॥

ರಾಜಿಸುವ ಕಲ್ಯಾಣಪುರಮಹಾಮನೆಯಲ್ಲಿ
ರಾಜಶೇಖರನ ಭಕ್ತರ ಮನೆಮನೆಗೆ ಪೋಗಿ
ರಾಜಬೋವನೆನಿಪ್ಪ ತಂಡಾಯಿಲನ ಚರರನೆಂದಿನಂದದೊಳು ನಿಂದು।
ಮಾಜಹರನಮಳಪ್ರಸಾದವನು ಬೇಡುತಿ
ಪ್ಪಾ ಜನರಿಗೀಯಲೊಲ್ಲದೆ ಕೆಲರು ಭಕ್ತರು ವಿ
ರಾಜಿತಪ್ರಸಾದ ಸ್ವೀಕಾರಮಾಡಲ್ಕವರ್ಯ್ಯಾಜ್ಯಮುಖದಿಂದ ತಿರುಗಿ ।೫॥

ಹೋಗಿ ತನ್ನೊಡೆಯಂಗೆ ಹೇಳಲವನತಿಕ್ರುದ್ಧ
ನಾಗೆದ್ದು ಕಳಿಕರೆ ಸಮಸ್ತಸಾಮ್ಯದಬೋವ
ಕಾಗೆವಳಯಿ.ಗೆಯ ಸಾವಂತ[1]ಸಂಕೇತಸಂಖ್ಯಾತಮನ್ನೆರಪೆನುತ್ತ[1] ।
ಆಗಳೈತಂದಾಱುಸಹಸ್ರ ಸಂಖ್ಯಾವಿನಿ
ಯೋಗದೀರಾನೆ ಬಲಭುಕ್ಷತಾಣಗಳಕದ
ನಾಗರದ ಬಿಲ್ಲ ಬಿರಣಿಗರಬ್ಬರಂದುಬ್ಬರದೊಳವಂ ಪೊಱಮಟ್ಟನು ॥೬॥

ಸಮಯಸಂಕೇತವಂ ಮಾಡಿಕೊಂಡಾರ್ಭಟಿಯು
ಸಮರವಾದ್ಯಗಳ ಹೆಗ್ಗಾಳೆ ಗೊಂಬುಗಳ ಸಂ
ಭ್ರಮದಲವ ತೆರಳ್ದರಸುಗಂಡಾ ಪ್ರಸಾದ ಕೊಡದರ ಪ್ರಾಣಗೊಂಬೆನೆನುತ।
ತಮತಮಗೆ ಘರ್ಜಿಸುತ ಗಜಱುತ್ತಲಾ ಪುರ
ಕ್ಕೆಮಧೂತಧಾಳಿ ಕವಿದಂತೆ ಬಂದರು ಭೂಮಿ
ರಮಣನೋಲಗದವಸರದಿ ಕಾಣಿಕೆಯ ಖಗಮೃಗ [2]ವ್ಯೂಹ[2]ಭೀಕರದೊಳು ॥೭॥

ಪಿಡಿ ಮೊಲನ ಮೃಗಶಾಬಕಂಗಳಂ ಸಿಂಗಳಿಕ
ಗಿಡುಗನಂ ಹುಲೆವೆಕ್ಕ ರಾಯ್ಗಿಳಿ[3]ಮರಾಳಗಳ[3]
[4]ಗ[4]ಡುವಿಳವಿ ನವಿಲ ನಕುಲಂ ಕಪೋತಗಳ ಜಾಯಿಲ ದೀಹ ಖಗಮೃಗಗಳ ।
ಬಡಿ ಕೋಲ ಹೊಸಬಲೆಯ ಗಜದಂತ ಗರಿಚಮರಿ
ಕಡಹುಗೊಂಬೈಸರಳು ಪುಲಿಚರ್ಮನಖ ಜೇನು
ಗೊಡ ಮೀನಚಿಪ್ಪುಗಳ ನೃಪಗೆ ಕಾಣಿಕೆಯಿತ್ತು ಕಂಡೆಂದರಾ ವ್ಯಾಧರು ॥೮॥

---

[1] ರಂಕೇಳಸಂಖ್ಯಾತವನ್ನಱಪೆವೆನುತ (ಕ.ಖ.ಛ). [2] ಬ್ಯೂಹ್ವ (ಕ.ಖ). [3] ಹಂಸಗಳ (ಗ.ಘ.ಛ.ಜ). [4] ನಿ (ಗ.ಘ.ಛ).

ದೇವಚಿತ್ತ್ರಸಾಧ್ಯನಾದಿಯಿಂದಿಂದುವರ
ಸ್ಥಾವರದ ಭಕ್ತರಂಗಣದ ರಜರೇಣುಗಳ
ತಾವು ಪರಿಹರಿಸಿ ಶಿವನ ಪ್ರಸಾದಂಬಡೆದು ಬಾಳ್ದಿಹ ವಿಶೇಷಸಾಮ್ಯ।
ದೇವತಾವರವು ಚಂಡೇಶಕಿಂಕರ ಪಿ[1]ರೆ[1]ಯು
ಬೋನಾವೆಮಗೆ ಸಲ್ಲದೆಂದು ಮಾಹೇಶ್ವರರು
ತಾವುಂಡು ದುರ್ಗುಣದಿ ನೂಂಕತೊಡಗಿದರೆಮ್ಮನೇತಕವಧರಿಸೆಂದೆನೆ ॥೯॥

ವಿದ್ವಾಂಸರಂ ಪುರೋಹಿತರ ಕೇಳಲ್ಕವರೊ
ಳಧ್ವರಿಗರೆದ್ದರಭಿನಮಿಸುತೇಂ ಸಂದೇಹ
ವಿದ್ದುದಿಲ್ಲೆಮ್ಮೆಜ್ಞಕರ್ಮದಲಿ ಮುಂತಾ ಗಿರೀಶ್ವರ ಹವಿರ್ಭಾಗೆಯು।
ಸದ್ವಿಧಿವಿಧಾನ ಚಂಡೇಶಗಾಗಿಹುದು ವಿಪ
ಮದ್ವೈ[2]ರ[2]ವೇತಕೆ ಸಲುವುದು ಸಲದೆಂಬ ಬಲು
ಪ ದ್ವಿಜರು ಬಲ್ಲರೇ ಭಕ್ತರಂಗವ ಬಸವರಾಜನ ಪರೀಕ್ಷಿಸಿಯೆನೆ ॥೧೦॥

ಎಂತಿದಱ ಪೂರ್ವೋಕ್ತ[3]ವೇನೆನ[3]ಲಿತರದೊಳೊಂ
ದಂತಿಂತು ಪ್ರತಿವಾದಮಂ ಮಾಡಿ ಕೊಂಡಿಹಾ
ಭ್ಯಂತರವಱಿಯದಿಹಿರೊ ಉತ್ತರೋತ್ತರಗಳ ವಿಕಲ್ಪವೂ ದಂಡನಾಥಯೆಂದು।
ಅಂತರಾಂತರವ ಭೂವರ ಕೇಳಿ ಶಿವಭಕ್ತಿ
ಯಂತರವದಗ್ನಿಯೊಲು ಸರ್ವತೋಮುಖವೊಬ್ಬ
ನಂತರವೆ ಮಾಹೇಶ್ವರಸ್ತೋಮವ[4]ಲ್ಲಯಿದ[4] ಸದ್ವಿಚಾರದಿ ಕೇಳೆನೆ ॥೧೧॥

ಆದಿ ವೃಷಭೇಶ ಮಾನವಮಹಾದೇವ ಜನ
ನಾದಿಕಾಲದೊಳೊಡನೆ ಏಳುನೂಱೆಪ್ಪತಮು
ರಾದಿಗಣ ಜನಿಸಿ ತನ್ನರಮನೆಯ ಸಕಲವಿನಿಯೋಗಕೆಲ್ಲೊಗ್ಗಾಗಿಹ।
ಭೇದ ನಿಲುಕ[5]ದ[5] ಚೆನ್ನಬಸವ ಜಗದೇವದಂ
ಡಾಧೀಶ ಸಂಗಮೇಶಪ್ಪಣ್ಣ ಮಧುವರಸ
ರಾದಿ ಸೊಡ್ಡಳ ಬಾಚರಾಜ ಸಹ ಸಭೆಯ ನೃಪ ಕೇಳಲು ಪ್ರಸಾದದನುವ ॥೧೨॥

ಜಾತ್ಯಂಧರಿಂಗಱುಪಬಹುದೆ ಷಡ್ವರ್ಣವಿ
ಭ್ರಾಂತಿಯಂ ಬಧಿರರ್ಗೆ ಪಕ್ವಧನಶಬ್ದಸಂ
ಗೀತವನೊಡಂಬಡಿಸಬಹುದೆ ರಸವನು ಸವಿವ ರಸನೆ ಉಳದಿಂದ್ರಿಯಕ್ಕೆ।

---

[1] ಸಿ (ಥ). [2] ತವೇ (ಕ.ಖ). [3] ವೆ ನೆನಂತ (ಗ.ಘ.ಥ). [4] ಲ್ಲದೆ (ಕ). [5] ? (ಗ.ಘ.ಥ).

ತಾ ತಿಳುಹಲಳವೆ ಪ್ರಸಾದಮಹಿಮೆಯ ಮಾತ
ದೇತಕಂತಿರಲ[1]ಮ[1]ರ ಲಿಂಗಮೃತದಾಹಾರ
[2]ನೀತವೈ[2]ನಹಿಗೇಕೆ ಲಿಂಗಪ್ರಸಾದವೆಮಗಲ್ಲದಿತರರ್ಗಸಾಧ್ಯ ॥೧೩॥

ಪ್ರೇತಭೂಮಿಯೊಳಿಜ್ಞಕರ್ಮವೇ ಶ್ವಪಚಗುಪ
ವೀತವೇ ಕಿಲ್ಬಿಷದ ಕುಂಡದೊಳು ಪುಣ್ಯಸಂ
ಜಾತಂಗೆ ಜಲಕ್ರೀಡೆಯೇ ಬಿನುಗು ಭೂತಬೇತಾಳರ್ಗೆ ನೊಸಲಕಣ್ಣೆ ।
ಮಾತಂಗ ಪಿತೃಕೃತ್ಯಕಟುಹನೇ ಕೇಳ್ಮಹಾ
ಧಾತ್ರಿಪತಿ ವ್ಯಾಧರ್ಗೆ ಲಿಂಗಪ್ರಸಾದವದ
ನೀತ ಪಾತಿ[3]ಕವೆಂದು ಶರಣರೊರೆದರು ಚಂಡಗಾದಿಯೊಳು ಸಲುಕೆಯಹುದು ॥೧೪॥

ಭೃಂಗಿನಾಟ್ಯಾಂತದೊಳು ಶಿವಗೆಂದಿನಂದದಿಂ
ದಂಗಪ್ರದಕ್ಷಿಣಂ ಬರುತ ಮಾದೇವಿ ವಾ
ಮಾಂಗದೊಳಿರಲ್ಕಂಡು ಮುಗುಳ್ದು ಮನದಂದೊಲ್ಲದಣುವಾಗುಭಯಮಧ್ಯವ ।
ಸಾಂಗದಿಂ ನುಸುಳ್ದುದಂ ಕಂಡಾ ಜಗನ್ಮಾತೆ
ಯಂಗಗೇಳಲ್ಕಭವನೆಂದನಾತನು ಏಕ
ಲಿಂಗಗ್ರಾಹಕ ಶಕ್ತಿರಹಿತನೆನೆ ತಪವಟ್ಟು ಪಡೆದಳರ್ಧಾಂಗಮನುಮೆ ॥೧೫॥

ಆ ಮಹಾರ್ಧಾಂಗಿಯೋಲಗದೊಳಿರೆ ಕಂಡ ಬಳಿ
ಕಾ ಮಹಾಭೃಂಗಿ ಪ್ರದಕ್ಷಿಣಾರ್ಧದಿ ತಿರುಗೆ
ಹೈಮವತಿ ಕಂಡು ಕರೆದಿನ್ನುಂ ವಿಭೇದವೇ ಆದಡೆನ್ನಂಗಂಗಳ ।
ತಾ ಮಗನೆಯೆನೆ ಶಲ್ಯವುಳಿಯೆ ತ್ವಗ್ಮಾಂಸಶ
ಕ್ತ್ಯಮಯಂಗಳ ತೆಗೆದು ಹಾಯ್ಕಲಾ ಮತದವರು
ಮಾಮಹೇಶ್ವರರ ಪ್ರಸಾದಗೊಳ್ಳದೆ ಚಂಡಗಿತ್ತುದೊಂದಾಗನುವದು ॥೧೬॥

ಋಷಿಮಾನವಪ್ರತಿಷ್ಠೆಯ ಪ್ರೇತವಾಮಾಂಕ
ವಿಷಯ ಪ್ರಥುಮಾದಿಗಳೊಳಿಜ್ಞ ಕರ್ಮಪೋಳೀಶ
ಗೆ[4]ಸೆವ[4] ಹವಿ[5]ಭಾಗೆ[5] ಪರಿವಾರದೇವತೆಯ ಕಾಳಾಪುರಿಯ ಭುಕ್ತಶೇಷ ।
ವಿಷಮಾನ ವಿಧಿಚಂಡಗಾಗಿ ತಮಗದು ಸಲುವು
ದೆಸೆಯದಿದು ಕೇಳೆಮ್ಮ ಗುರುಲಿಂಗಜಂಗಮದ
[6]ವಿಸರ[6]ಪ್ರಸಾದಕ್ಕೆ ಕಾಂಕ್ಷಿಪುದಮಾರ್ಗವರಸಾ ಯೆನಲು ಕೇಳ್ದವದಿರು ॥೧೭॥

---

[1] ಹ (ಚ). [2] ನೀ ತವ್ಯೆಯ (ಕ.ಖ). [3] ಠ (ಘ.ಗ.ಛ). [4] ಸೆಗು (ಖ). ಸಮ (ಚ.ಕ). [5] ಭಾಗೆ (ಖ), ಭಾವ (ಕ). [6] ವಿಷಮ (ಜ).

ಸಾರುಸಾರೇತರವಿಚಾರ ಚಂಡೇಶ್ವರನ
ಪಾರಂಪರೆಯ ಕಿಂಕರರ್ಗೆ ಕೊಡದೊಡೆ ಶಿವಗು
ಪಾರಮಂ ಮಾಡಲೇಸೆವು ಮೀಱಿ ಮಾಡಿದಡೆ ಸೆಳೆದೆಳೆದುಕೊಂಬೆವು ವೃಥಾ ।
ಹೋಱಿದಡದಕೆ ತಕ್ಕ ಹಱುಗಾಂಬೆವೆಮ್ಮಗಿವ
ರಾಱಿಡಿಗೊಳಲ್ಬಱಿದೆ ಬ[1]ಡೆ[1]ವೊಳಗಕ್ಕೆಯವ
ಧಾರಿಸದಿರೆಲೆ ಭೂಮಿಪತಿಯೆಂದು [2]ಕೆಲರು[2] ಬೋಯೆನುತ ಕೈಯೆತ್ತುತೊದರಿ
॥೧೮॥

ಎಂತಿದಕುಪಾಯವ್ಯಾಧಪುಣ್ಯಾಪಾಪಂಗ
ಳಂತರವಱಿಯದಕೃತ್ಯದಿ ವಿಕರ್ಮದ ಬಗೆಯ
ಲೆಂತುಹುದೊ ಎಂದರಸು ಬಸವದಂಡಾಧಿಪನ ಕೇಳಲವರಿಂತೆಂದರು।
ಪಿಂತಮೃತಮಥನದೊಳು ಶೇಷ ನೂಸಿದ ವಿಷವ
ದಂತಕಾರಿಯ ಗಳದೊಳದೆ ಉಭಯವಾದಿಗಳ
ದಂ ತೀರ್ಚತಿಲ್ಲ ಪ್ರತಿವಿಷಪ್ರಸಾದವ ಗೇದರಾರ[3]ವರಿಗಾಗಲೆನಲು ॥೧೯॥

ತನ್ನಮನದೊಳ್ನೃಪತಿ ನಲಿದು ಬಸವನ ಮಹಿಮೆ
ಯುನ್ನತಿಯನಿಟ್ಟಿಸಲ್ಕಜ ಹರಿಗಳಳವಲ್ಲ
ತನ್ನಭಕ್ತಿಯು ತಾನುಗೂಡಿ ಬಿದ್ದೇಳದೊಲ್ಬಲು ಸಿಲ್ಕುವಲೆಯನೊಲಿದು।
ತನ್ನ ತಾ ಮಾಡಿಕೊಂಡುದು ಲೇಸು ಲೇಸಾಯ್ತು
ದಿನ್ನು ನುಸುಳಲ್ಬರದದೆಂತೆನಲ್ತೆರಳಿಪುಳು
ತನ್ನನೂಲಿಂ ತಾನೆ ಕಟ್ಟುವಡೆದದ್ವೊಲಾಯಿತೆನುತ ಸಹ್ಯೋಪಾಯದಿಂ ॥೨೦॥*

ಅಂತಹುದು ಉಚಿತೋಕ್ತಿ ಭೂಮಿಯೊಳಗೆನಿತುಳ್ಳ
ನಂತವಿಷ ವಿಷಮತಂತ್ರಪ್ರಯೋಗವನು ತ್ರಿಪು
ರಾಂತಕನ ಮುಂದೆ ಕೊಡಲ್ಕರಸು ನಿರವಿಸಲು ಬಸವ ಕಾಲರುದ್ರ ।
ನಂತಖಿಳ ಕಾಳಕೂಟವನು ಹಾಲಾಹಲವ
ಮಂಥಣಿಯೊಳಂತರಂಗೊಳಿಸಿ ಭೂರ್ಭುಗಿಲೆನುತ
ನಂತಕ್ಕಡರುವನಲನಂತೆ ಘುಳುಘುಳಿಸಿ ನೊರೆತೆರೆಯುಕ್ಕಿ ಮೊಱೆವುತಿರಲು ॥೨೧॥

ಗಾಳಿ ಸೋಂಕಿದಡೆ ತನು ಬೀಳುವಂತಹುದು ವಿಷ
ಜ್ವಾಲೆ ತಾಗಿದಡೆ ಹರಣಂಗಳೆವೊಲಹುದು ಕೈ
ಕಾಲೊಡಲೊಳಡಗುವುವು ನೋಡೆ ಕಣ್ಕರಗಿ ಯೆವೆ ಸೀವುವದಱುಗ್ರತರವ ।

---

[1] ಡು (ಪ). [2] ಪಲರು. [3] ದರಗಾಗದೆ (ಕ). * ಇದು (ಜ) ಪ್ರತಿಯಲ್ಲಿಲ್ಲ.

ಹೇಳುವಡೆ ನಾಲಗೆಯ ನರಕೆಗೆದು [1]ಮಿಾಸೆ[1] ಕೌ
ರೇಳುವವು ಎನಲಿಕೀ ನಂಜನಂಜುವನದಟ
ನಾಳಾಪಗಾಣಲರಿದೆಂದೆಲ್ಲ ಮಱುಗುತೊಂದೆಸೆಗೊಡ್ಡಿತೀ ಪ್ರಳಯವು ॥೨೨॥

ವಸುಧೆ ಮಂಥಣಿ ವನಧಿಪಯರತ್ನಸಾನುವದ
ಕೆಸೆವ ಮಂದರ ಶೇಷ ತೆಗೆನೇಣು ಸುರರಸುರ
ರೊಸೆದು ಮಥಿಸಲ್ಕೊಗೆದನರ್ಘ್ಯಗಳನವರವರು ಕೊಂಡೊಯ್ಯಲುಳಿದವರನು ।
ವಿಷವಟ್ಟಿದಂತೆಮ್ಮನಟ್ಟಲಿದ ಪರಿಹರಿಪ
ಶಶಿಮೌಳಿಯಿಲ್ಲೆಲ್ಲವೆನಿಪ ಬಗೆ[2]ಯಿಂ[2] ಭೂಮಿ
ವಶದನೊಳಗಾದವರ್ನಡುಗುತಿರಲೆದ್ದು ನಿಂದಿರ್ದನಂದಿನ ರುದ್ರನು ॥೨೩॥

ಉಕ್ಕುತಿದೆ ವಿಷ ಉರಿವುತಿದೆ [3]ಧರಾ[3]ಧೀಶನೆಲ
ಕೈಕ್ಕೊಡೆ ಪ್ರಮಾದವೆಂದೆನುತ ಬಸವೇಶ ಭ
ಕ್ತರ್ಕಳೊಗ್ಗಿನಲಿ ನಿಂದಿದೆಯಿದಂ ಕೊಂಬ ಪ್ರಸಾದಿತಂಡಾಯಿಲರೊಳು ।
ತಕ್ಕವರನೆಬ್ಬಿಸೆನೆ ರಾಜನಾ ರಾಜಿಬೆಃೀ
ವರ್ಕಳೊಳಗಾದರಂ ಕರೆದುಕೊಳ್ಳೆನೆ ಮಾರಿ
ಗಿಕ್ಕಿದ ನೋಡಬಾರದು ಕುಡಿಸುಪಾಯದಿಂದೆಮ್ಮ ಕೊಲೆದೊಟ್ಟವರ್ಗಳೆ ॥೨೪॥

ಉಕ್ಕಲಿಸುವನುಗಾಂಬ ಕೂಗಿ ಮಾರಿಯನು ಕರೆ
ದೆಕ್ಕಸ[4]ಕ್ಯಕೆ ನಗುತ್ತೈತಂದ ಹಾಳಹಳ
ದ[4]ಕ್ಕಿಸಿದಡವರವರ ಲಿಂಗಪ್ರಸಾದವವರಿಗೆಯಾಗಲೆಮಗೆ ಬೇಡ ।
ಲಕ್ಕ ಹುಟ್ಟುವಡಂಜುವೆವು ರಾಯ ಯೆನುತ ಮೈ
ಯಿಕ್ಕವದಿರೊಂದೆಸೆಗೆ ಸಾರೆ ಬಸವೇಶ್ವರನ
ದಕ್ಕೆ ನಗುತ್ತೈತಂದ ಹಾಳಾಹಳಕ್ಕೆ ಕೋಳಾಹಳಮಹಾರುದ್ರನು ॥೨೫॥

ಕಿತು ಕೊಂಡವ ಕುತ್ತಿಕೊಳಬೇಕೆನಿಪ ಗಾದೆ
ಸತ್ಯವಾಯ್ತವರೊಳೀ ಕೀಲಿಂಗೆ ದೇಗುಲವ
[5]ಕಿತ್ತು[5] ಹಾಯ್ಕುವ ಬಗೆಯದೀ ವಿಷಂಗೊಳೆ ಹಾರಿ ಬಿದ್ದು ಸಾವುವೆ ನಿಶ್ಚಯ ।
ಎತ್ತಣ ಪ್ರಸಾದ ಹಾಳಾಯ್ತುದೊಮ್ಮಿಂಗೆ ಹೋ
ದತ್ತಹೋಗಲಿ ಭಕ್ಷದಟ್ಟೋಗರದ ಛಲಕೆ
ಸತ್ತು ಕಾಂಬುದದೇನು ಬೇಡ ಬೇ[6]ಡಿನ್ನೆ[6]ಂದು ನೆರವಿ ತನ ತನಗೆನುತಿರೆ ॥೨೬॥

---

[1] ನಾರು (ಗ). [2] ಯಂ (ಗ.ಫ.ಥ). [3] ಧೀರ (ಗ.ಥ.ಚ). [4] ಕ್ಕಗೆಮಾಡಿ ದಾತುಗಳೆತಾವೆಕೊಂಡ (ಗ). [5] ನಂತು (ಗ). [6] ಡೇನೊಂ (ಖ). ಡಿನ್ನೊರ (ಫ).

ಹಾಲಾಹಲವನು ಹರ ಧರಿಸುವಂದಹಿಯುಗುಳ್ದ
ಕೋಳಾಹಳಕೆ ತಪ್ಪಿ ಸಿಡಿದ ಬಿಂದುವು ಜನಿಸಿ
ಮೂಲತ್ರಯೋದ[1]ಶಮವಾದವಾ[1]ವತ್ಸನಾಭಾದಿವಿಷ ನಂಜುಕೂ[2]ಪ[2]।
ದೇಳಿಗೆಯ ಭಯವೆ ಹರನ ಪ್ರಸಾದವನುಂಗೊಂ
ಬಾಳಿಕಾಜಿರ್ಪ್ಪರಿಹರಿಸಿಕೊಳ್ಳದಿಹರೆ ಬಯ
ಲಾಳಾಪ ಗಜಬಜೆ[3]ಯದೇಕೆ ನಿಲ್ಲಿರೊ ನೋಡಿ[3] ಎಂಬ ಕೆಲ ಪ್ರೌಢಜನರ ॥೨೭॥

ನೋಡುತ್ತ ರುದ್ರಪಶುಪತಿ ನೆಗಳ್ದ ಪರ್ವಕಿದು
ಪಾಡ್ಯದಗ್ಗಳಗಳದವರು ನಾವು ಲಿಂಗಕಿದ
ನೂಡುಹವೆನುತ್ತಮೃತಭಾವದಿ ನಿರೀಕ್ಷಿಸಾ ವಿಷದ ಪೂರ್ವಾಶ್ರಯವ ಕಳೆದು।
ಕೂಡೆ ಹಡಪಾಳಿ ಬರೆ ಹೊಂಬಟ್ಟಲಿಂಗೆ ಕೈ
ನೀಡೀಸಿಕೊಂಡು ಸಂಗಮನಾಥ ಶರಣೆನುತ
ನೋಡಿರಾ ಪ್ರತಿವಾದಿಗಳಿರೆನುತ ವಿಷವ ಮೊಗೆದಂ ಬಸವನೇನೆಂಬೆನು ॥೨೮॥

ದುರಿ[4]ತಜ್ಞ ಶ[4]ರಧಿವಾಡಬನು ದುರಿತಾಂತಕಂ
ದುರಿತ[5]ಕುಲಸಾ[5]ನ್ಬಿದುರ ದುರಿತವನಕೃಂತಕಂ
ದುರಿತಮದನಾಗನಾಗಾರಿ ದುರಿ[6]ತವ್ಯೂಹ[6] ಭೀಕರಾಕಾರ ವೀರ।
ದುರಿತದಲ್ಲಣ ದುರಿತವಿಪಿನಘನದಾವನಂ
ದುರಿತಮದದುರ್ಗಧೂಳೀಪಟಮಹೋಗ್ರತರ
ದುರಿತಾದಿಮೂಲಕುದ್ದಾಲ ವಿಷದುರಿತಶಿವಮಂತ್ರಗಾರುಡಗರುಡನು ॥೨೯॥

ವಚನ :—

ನಂಬಿದಡೆ ಪ್ರಸಾದ, ನಂಬದಿರ್ದಡೆ ವಿಷವು, ತುಡುಕಬಾರದು ನೋಡ ಲಿಂಗಪ್ರಸಾದ ಕೂಡಲಸಂಗಮನ ಪ್ರಸಾದ ಸಿಂಗಿಕಾಳಕೂಟವಿಷವು ॥೧॥

ಮೇಘದಂತಹಿಯಂತೆ ಹರನಂತೆ ವಿಷಧರಪ್ರ
ಯೋಗಕ್ಕಿದೊಂದಧಿಕ ಕೊಡಿತೆನೆ ಸರಕದಿಂ
ದಾಗರಳವಂ ತೀವಿ ಪಿಡಿದೆತ್ತಿ ಲಿಂಗಕವಧಾರಿಸಾರೋಗಿಸಿದನು।
ಮೇಗಣ ಪ್ರಯುಕ್ತಿ ಪ್ರತಿವಾದ ಬಾಯ್ಬಿಗೆಯದಂ
ತಾಗ ಪೆರ್ಮೆಗಗೆ ಪರಿಜನಕೆ ತನ್ನಯ ಗೃಹನಿ
ಯೋಗಕಿಷ್ಟರ್ಶಿಷ್ಟರಖಿಳಭಕ್ತರ್ಗೆ ಮೊಗೆಮೊಗೆದೆಱೆದ ವಿಷವ ಬಸವ ॥೩೦॥

---

[1] ಶಡಾವಾವ (ಕ.ಖ). [2] ಟ (ಗ.ಘ.ಛ). [3] ಯುವೇಕಿತ್ತಿರೋನೋಡಿ (ಖ), ದೇಕೆನಿಂತಿರೊನೋಡಿರಾ (ಕ). [4] ತಶಂಬ (ಗ.ಘ.ಛ), ಗ್ನಂಬ (ಚ). [5] ಕುಲಶಾ (ಘ). [6] ತಜಿಂಹ್ವಾ (ಕ), ಬಿಹ್ವ (ಗ).

ಏನೆನಲ್ಬಹುದಮೃತಕರನ ಕರಸೋಂಕಿನಿಂ
ತಾನದಮೃತಾಹಾರವಾಯ್ತದೆಲ್ಲರ್ಗೆ ಸು
ಜ್ಞಾನಿ ಪ್ರಸಾದವಂ ಗೆಲಿದವನಿಯುಗಲಂತರಾಳಂತ್ಯ[1]ತ[1]ನ್ನಾಮಧ।
ಮಾನಿತ ಜಯಸ್ತಂಭವೆತ್ತೆಲ್ಲ ಲಿಂಗಾವ
ಧಾನಿಗಳಿಗಮಳಪ್ರಸಾದನೆಲಕೆಯು ಧ್ರುವಪ
ನೂನಶಾಸನ ಹೊಯಿದ ಬಸವೇಶ್ವರನ ಮತಕ್ಕವನಿಪಂ ಬೆಱಗಾದನು ॥೩೧॥

ಮುಗಿಲ ಚಿತ್ರವನನಿಲ ಲೆಕ್ಕಿಪುದೆ ರವಿರಥವು
ಮುಗುಳ್ವುದೆ ಪತಂಗಧಾಳಿಗೆ ಹುಲುಮರುಳ್ಗಳವರ
ನಗವೇಱೆ ಜಡಿಯೆ ತಗ್ಗುವುದೆ ತೃಣಭಾರಕ್ಕೆ ಗಿರಿ ಜಱಿವುದೇ ವ್ಯಾಧರ।
ಬಗೆ ನಿಲುವುದೇ ಬಸವನಿದಿ[2]ರಿನೊಳು[2] ವಿಷ ವಿಷವ
ನಗಿವುದೇ ಅಗ್ನಿಯಗ್ನಿಯ ಸುಡುವುದೇನೆಂಬ
ಬಗೆಯಾಯಿತಾಶ್ಚರ್ಯವೆನುತೆಲ್ಲ ತನತನಗೆ ಕೈಯೆತ್ತಿ ಪೊಡಮಡುತಿರೆ ॥೩೨॥

ಲಪಿಯನೋದನೆ ಲೆಖ್ಬಪನೆ ಗಗನದೊಳು ರವಿಯು
ಕ್ಷಪಿಸಿದೊಲು ತಡೆಯನೇ ಪಾವ ಲೇವಣಮಾಡಿ
ಉಪಯೋಗಕಿಕ್ಕನೇ ಪುಲಿಗಱೆಯನೇ ಹ[3]ಗರ[3]ಣದೊಳು ಹಲವಕ್ಕುಲಿಜರ।
ತಪಸಿಗಳ ಮಾಡನೇ ಹಿರಿಯಭಕ್ತನ ಕೈಯ
ಲಪರಿಮಿತ ಹಾಲ್ದೊಱನೇನಿವ ಮಾಳ್ಪುದೇಂ
ವಿಪರೀತವೀತಗೆನುತರಸು ಕೈಮುಗಿವುತ್ತಲೆದ್ದ ನಿಜನಿಳಯಕೆತ್ತ ॥೩೩॥

ಎತ್ತಿದ ಗುಡಿಯ ತಳಿತೋರಣದ ಮಂಗಳನ
ಮಸ್ತಪಾಠಕರುಘೋರವದ ಜಯಘೋಷ ತೂ
ರ್ಯತ್ರಯಾದ್ಯಖಿಳವಾದ್ಯಾಡಂಬರದ ವಿಳಾಸದಿ ನಿತ್ಯವಿಜಯನಾಮ।
ಮುಕ್ತಿಕಾಂತೆಯ ಮುಸುಕುತೆಗೆದಂತಿರಾನಂದ
ಭಕ್ತಿರಸಭರಿತಬಸವೇಶ್ವರನು ಮೆಱೆದು ತ
ನ್ನುತ್ತಮಾಲಯಹೊಕ್ಕನೆಂದು ನಂದೀಶ ಪ್ರಮಥಗೊರೆದ ಚಿತ್ತವಿಪುದು ॥೩೪॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡನೆಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ವಿಷಾಮೃತಪ್ರಸಾದವ ಮಾಡಿ ಮೆಱೆದ ಸಂಧಿ॥೩೫॥

---

[1] ಕ (ಕ.ಖ). [2] ರೊಳುರವಿಯುಕ್ಕೈ (ಕ). [3] ರಗ (ಕ.ಖ).

ಮೂವತ್ತುನಾಲ್ಕನೆಯ ಸಂಧಿ

ಸೂಚನೆ—.

ಧಾವಧ್ರವಿತದ ಕ್ರಿಯಾರೂಪ ನೃಪ ಸರಸದೊ
ಳ್ಭಾವಜ್ಞ ಬಸವನೊಡಹುಟ್ಟಿದಳ ನಂಗಯ್ಯ
ದೇವನ ಪ್ರಸಾದವಡೆ ಕೊಳ್ಳೆನಲು ಬಾಲಯೋಗ್ಯಾಗಿ ಮೊಲೆಯುಂಡ ಬಸವ ||

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶಪ್ರಮಥರ್ಗಮಲವಚನರಚ
ನಾ ಮಹಾವಸ್ತುವಿಸ್ತೀರ್ಣಮಂ ಸ್ಥಲಪಿಟ್ಟನಾ ಮಂತ್ರರಹಸ್ಯಾದಿಯ |
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ||೧||

ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಿಸ್ಥಳದ
ಸಿದ್ಧಾಂತತಾತ್ಪರ್ಯ ಸಚ್ಚಿದಾನಂದದ ಸ
ಮುದ್ಧರಣ ಸಾಕ್ಷಾತ್ಪರಂಜ್ಯೋತಿ ಸಾರೂಪ್ಯ ಕಾರಣಕಳಾಂಗಶಕ್ತಿ |
ನಿರ್ಧಾರತತ್ವನಿಷ್ಠೆಯ ನಿರಂಜನ್ಯವರ
ವರ್ಧನಾಂಗದ ಭಕ್ತಿ ಗಾಂಭೀರ್ಯವಾರ್ಧಿಳೆಯ
ನುದ್ಧರಿಸಲುದಯಗೈದಿಹನು ಕಲ್ಯಾಣಕೈವಲ್ಯಪುರದೊಳ್ಬಸವನು ||೨||

ಆ ಮಹಾಪರಮಕಲ್ಯಾಣಪುರವಾಳ್ದನಭಿ
ರಾಮಬಿಜ್ಜಳನೃಪನ ಸಕಲಸಂಪದರಾಜ್ಯ
ಕಾ ಮಹೇಶ್ವರದಂಡನಾಥನಾಗೊಳ್ಪಿನಿಂದಿರುತಲಿರಲೊಂದು ದಿವಸ |
ಸಾಮಜವ್ಯೂಹಾಶ್ವ[1]ಪೇಟಕ[1] ಪದಾತಿ ಭಟ
ಸ್ತೋಮ ನಾನಾರಾಜ್ಯಲಕ್ಷ್ಮಿಯ ವಿರಾಜಿಪ
[2]ಶ್ರಾ[2]ಮಸ್ಥಳಕ್ಕೈದಿ ವೈಹಾಳಿವಿಭವ ಸಂಪದದೊಳೋಲಾಡಿ ತಿರುಗಿ ||೩||

ಮಂಗಳಪುರಿಯ ಗೋಮಿನಿಪ ಪೊಗುವಧಿಕ ಶ್ರೀ
ರಂಗನರ್ತನ ಪದ ಪ್ರವ[3]ಹ[3]ಣದ ಪರಿವಿಡಿಗ
ಳಿಂಗೆ [4]ನೂ[4]ರ್ಮಡಿಯೆನಿಸಿಪ ಬಹಳಸಂಪದ ಕೀರ್ತಿಶ್ರೀಭಾವಿತುಭಯಸ್ಥಲವು |

---

[1] ಪೆರಕಂ (ಖ), ಪೆರತಂ (ಕ). [2] ಭ್ರಾ (ಗ). [3] ರ (ಖ). [4] ಮಾ (ಖ).

ಸಂಗವಾದೊಲ್ಪುರಂದೊಗುತರಸು ಮಂತ್ರಿಗಳು
ಸಂಗದುಜ್ವಲಿಸಿತಶ್ವಾರೂಢರಾಗಿ ಬರು
ತಂಗಡಿಯ ಮಧ್ಯದೊಳ್ತ್ರಿಪುರಾಂತಕಾಲಯಪ್ರದೇಶವುಬಕ್ಕೈದುವಾಗ ॥೪॥

ಸಂಗನ ನಿರೂಪಲೀಲಾವಿಲಾಸವದೊಂದ
ನಂಗದಿಂದಂಗಗೊಂಡಂತಿರಾ ವೀಧಿಮುಖ
ದಂಗಡಿಮನೆಯೊಳಿಹ ಮಹೇಶ ಮೂಲಗಸಿದ್ಧಿರಾಜನಾತನ ಮನೆಯೊಳು ।
ಸಂಗನ ಬಸವನಾಮುದೊಂದು ಶಿಶು ತ್ರಿಪುರಾರಿ
ಲಿಂಗನಾಮುದದೊಂದು ಪೆಣ್ಮ[1]ಗಳು[1]ಭಯುಬಾಲ
ರಿಂಗೆ ಗಳದೊಳು ಲಿಂಗ ಭಾಳದೊಳ್ಭಸಿತ ಭಕ್ತ್ಯಂದೋಳದಿಂದೊಪ್ಪಿಹ ॥೫॥

ಮಕ್ಕಳಿರಡಕ್ಕೊಂದು ಪಕ್ವಾನ್ನಗೊಟ್ಟು ತ್ರಿಪು
ರಕ್ಕಬಸವಣ್ಣಗರ್ಧಂಗೊಡೆನೆ ಮಾತೃವಚ
ನಕ್ಕೆ ಮುದ್ದಿನ ಮುನಿಸುದೋಱುತ್ತ ಕೊಡದಂಗಣಕ್ಕೆ ಬಂದಂತಾ ಶಿಶು ।
ಚಕ್ಕನದ ಲಿಂಗಕವಧಾರಿಸಿ ಪ್ರಸಾದಗೊಳು
ವಕ್ಕರವಧಾನಗಾಣುತ ಬಸವರಾಜ ಮನ
ಮಿಕ್ಕುನೋಡುತ್ತ ಬರಲೊಳಗತ್ತ[2]ಲವರವ್ವೆ ಸ್ನೇಹಿತಾಪೇಕ್ಷೆಯಿಂದ[2] ॥೬॥

ಮಗಳೆ ಕರೆ ಜಂಗಮಪ್ರೇಮಿ ಬಸವಣ್ಣನನು
ಮಗಳೆ ಕರೆ ಜಂಗಮಪ್ರಸಾದಿ ಬಸವಣ್ಣನನು
ಮಗಳೆ ಕರೆ ಕಾಡುತ್ತೈದನೆ ಬೇಡಲಱಿಯದಪ್ರತಿಮಸಂಗನ ಬಸವನು ।
ಜಗವಂದ್ಯನಂ ಕರೆ ಕೊಡರ್ಧಪಕ್ವಾನ್ನಮಂ
ಮಗಳೆಯೆನಲಾ ಬಾಲೆ ಎಲೆ ಭಕ್ತಿನಿಧಿಯೆ ಬಸ
ವಗಣನಾಥೇಶ ಬಾ ಕೊಳ್ಳು ಪ್ರಸಾದಮನ್ನೆನುತರ್ಥಿಸುತ್ತ ಕರೆಯೆ ॥೭॥

ಉಭಯಾರ್ಥವಚನಪ್ರಸಾದತತ್ಕಾಲೋಚಿ
ತಭಿಮತಂಗೊಡಲದ ಕೇಳುತ್ತ ಬಸವೇಶ
ವಿಭು ತುರಂಗಮನಿಳಿದು ಬಂದೆಱಗಿ ಕೈಯಾಂತು ಕರುಣಿಸಿ ಪ್ರಸಾದವನೆನೆ ।
ಅಭವನಾಜ್ಞಾಶಕ್ತಿ ಬಾಲಾಂಗದಿಂ ಭುಕ್ತ
ಪ್ರಭೃತಿ ಪ್ರಸಾದಗೊಡಲದ ತನ್ನ ಹೃದಯುಸ
ನ್ನಿಭಬೊಕ್ಕಿ[3]ಲೊ[3]ಳು ಸ್ವಾಯ[4]ತಿ[4]ಸುತ ವಹಿಲದೊಳು ಮಾಗುಳ್ದೈದಿ ಬಂದಾ ಬಸ
ವನು ॥೮॥

---

[1] ಗುಲು (ಕ.ಖ). [2] ನೋಡುತವರವ್ವೆಸಹಿತಾಕ್ಷೇಪವೆ (ಕ.ಖ). [3] ನೇ (ಧ.ಗ), ನೊ (ಪ). [4] ತಿರಿ (ಕ.ಖ).

ನಿಜವಾಹನವನಡರುತಿರಲಿದೆಲ್ಲಮನರಸು
ಕುಜನಪರಿವಾರ ಕಂಡತಿ ತಿರಸ್ಕರಿಸುತೀ
ಯಜಮಾನ ಮಂತ್ರ್ಯಣ್ಣ ಬಾಲರೆಂಜಲ್ಗ[1]ಡು[1]ಬಿಗರಕೆವಟ್ಟೀಸಿಕೊಂಡ।
ನಿಜವೇನೆನುತ್ತ ನಿಂದ್ಯಾಂದೋಳದಿಂದೆಲ್ಲ
ಗುಜುಗುಜುಗೊಳುತ್ತಿರಲು ಬಿಜ್ಜಳಮಹೀಶ ದು
[2]ರ್ಜನವಿರಸಂ ಸ[2]ರಸದಾಕ್ಷೇಪದಿಂ ನಗುತ ನಾಸ್ತಿಕದೊಳಿಂತೆಂದನು ॥೯॥

ದಂಡನಾಯಕ[3]ರೇ[3]ನಿದಾರಮುಗ[4]ಳುಚ್ಛಿಷ್ಟ[4]
ಗೊಂಡ್ಯದೇಂ ಕಾರಣಂ ದಾರಿದ್ರ[5]ದಳವೊ[5] ಕ್ಷು
ತ್ತ್ರಂಡಲೆಸು ಕಳವಳವೊ ಮಕ್ಕಳಾಟದ ಮರು[6]ಳ್ತ[6]ಂಡದೊಳು ನೀನೊಬ್ಬನು।
ಕಂಡು ಕೇಳಿದುದಲ್ಲ ಕುಲಪರಂಪರೆಗೆ ಪಾ
ಷಂಡವೆಂಬುದನಱಿಯೆ ಯೆನಲಿದಂತಲ್ಲಲ್ಲ
ಖಂಡಿತಶಿವಪ್ರಸಾದಪ್ರಾಣಿ ಕರುಣಿಸಿದ ಪರಮಾರ್ಥಸಿದ್ಧಘುಟಿಕೆ ॥೧೦॥

ಎನಲಿದೆಲ್ಲಂ ಕಾಳುಮಾತು ಸಾರಂಗಡಿಯ
ಮನೆಮಕ್ಕಳೆಂಜಲದ ಮಾತಿನ ಪ್ರಸಾದದಿಂ
ದನರುಹಂಗೊಂಡದಂ ಪರಮಾರ್ಥಸಿದ್ಧಘುಟಿಕೆಂದು ಠಕ್ಕಂ ಠವಣಿಪ।
ಅನುಲೇಸುಲೇಸುಚಿಷ್ಟವ [7]ಶುದ್ಧ[7]ಮಾಳ್ಪಂಗೆ
ಸುನುತನುಚ್ಛಿಷ್ಟ ಸಂಗನ ಪ್ರಸಾದವ ನಾವು
ನಿನಗೀವೆವೆನುತಂಗಡಿಯೊಳಿಟ್ಟು ಮಾಱುತಿಹ ಭಕ್ಷವನರಕ್ಕೆ ನೃಪನು ॥೧೧॥

ತುರಗಮಂ ನೂಂಕಿ ಸೆಲ್ಲಹಕಟ್ಟಿಗೆಯೊಳು ನಾ
ಲ್ಕೆರಡೊಡೆಯ ತಿವಿದು ತೆಗೆದೆಲೆ ಬಸವಮಂತ್ರೀಶ
ಹರನ ಪ್ರಸಾದವಿದೆ ಕೊಳ್ಳೆನಲು ವಾಕ್ಶುದ್ಧಸಿದ್ಧಪ್ರಸಾದವಾದ।
[8]ತೆಱನಱಿದವಂ ಈಸಿ[8]ಕೊಳಲರಸು ನಗುತಲಾ
ಸರಳುಗೋಲಿಂ[9]ಮತ್ತ[9]ಪೂಪಗಳನಿಱಿದೆತ್ತಿ
ನೆ[10]ರೆಯದಡೆ[10] ಕೋ ಮಂತ್ರಿಯೆನಲೊಲ್ಲದಿರಲು ಪ್ರತಿಪಾದಿಸುತ ನೃಪತಿ ಬಂದು
॥೧೨॥

ಅರಮನೆಯ ಹೊಕ್ಕೋಲಗದಿ ಕುಳ್ಳಿರೆಂದ ಬಸ
ವರಸನನಱುಹವನಕ್ಕರಿಂ ಕೊಳಲ್ಕಂಡಾವು
ಪರದರಂಗಡಿವಾ[11]ರೆ[11]ನೊಡೆಗೊಡಲ್ಕೊಂಡು ಮತ್ತಿತ್ತಡದನೇತಕೊಲ್ಲ।

---

[1] ದು (ಕ.ಖ.ಚ). [2] ರ್ಜನಸಂಸಾ (ಫ). [3] ರೇ (ಖ), ನಿದೇ (ಗ.ಚ). [4] ಳೆಂಜಲಂ (ಗ.ಫ.ಚ.ಥ). [5] ದಳದೊ (ಕ.ಖ). [6] ತಂ (ಗ.ಫ.ಥ) [7] ಲೇಸು (ಖ). [8] ಪರತರವೆನಿಸಿ (ಜ), ವಹಿಸಿ (ಚ). [9] ಮತ್ತೆ (ಕ), [10] ರಿಯದದ (ಚ), ರೆಯದೊಡೆ (ಗ.ಫ.ಥ), ರೆಯದಿದೆ (ಖ). [11] ರಿ (ಗ.ಫ.ಥ).

ದಿರುಹ ಬಂದಿತ್ತೆನಲು ಸಂಗಮೇಶ್ವರಲಿಂಗ
ವರಪ್ರಸಾದವೆನಲ್ಕೆ ಕೊಂಡೆವೈಶ್ಯಂಗಡಿಯ
ಪರವಡೆಯ ಭವಿನಿರೀಕ್ಷಣದ ಭಕ್ಷ್ಯಗಳೆಮಗಭೋಜ್ಯವಾಗೊಲ್ಲೆವೆನಲು ॥೧೩॥

ಆದಡಿವಲಾಭೋಜ್ಯಭೋಜ್ಯಂಗಳೆಂದು ನೀ
ವಾದಿಸುವ ಭಕ್ಷಂಗಳಿದಱೊಳೇಂ ದೋಷ ನೀ
ವಾದರಿಸಿಕೊಂಡ ಪ್ರಸಾದವೆಂಬವರೊಳೇನಧಿಕವೆಂದರಸು ನುಡಿದು ।
ಮೊದಲಿಸೆ ತಾನಿತ್ತ ವಚನಪ್ರಸಾದದ್ಯ
ಷ್ಟೋದಯಂದೋಱಲ್ಕೆ ಬಸವನಾ ದ್ರವ್ಯದಿ
ವ್ಯೋದರವ ಬಗಿದು ತೋಱಲು ಸುಧಾ[1]ಫಲ[1]ಪೂರಸಾರ ಸಂಗ್ರಹಿಸಿರ್ದುದು ॥೧೪॥

ಆ ಪ್ರಸಾದದ ಪರೀಕ್ಷೆಗೆ ನೃಪತಿ ನೀನೆಮಗ
ನುತ್ಪ್ರೇಕ್ಷೆಯಿಂದೀಯ ಬಂದ ಭಕ್ಷೋದರದೊ
ಳಿಪ್ಪುದೇನದ ನೋಡೆನಲ್ಕೊಂದ ಬಿಚ್ಚೆ ಕ್ರಿಮಿಕಿಕ್ಕಿರಿದಿರಲ್ಕೆ ಕಂಡು ।
ದೊಪ್ಪನೀಡಾಡಿ ತನು ಕಂಟಣಿಸಿ ಕೈಕೊಡಹಿ
ದುಷ್ಪ್ರಾಪ್ತ ಛೀ ಯೆಂದುಗುಳ್ದು ಸೆಲ್ಲೆಹಮುಖದೊ
ಳಿಪ್ಪವೆಲ್ಲಂತೆ ಕ್ರಿಮಿ ಕುಪ್ಪಳಿಸೆ ನೃಪಜಿಹ್ವೆಸರ್ಪ ಗರುಡಂಗಂಡುದು ॥೧೫॥

[2]ಅತ್ಯದ್ಭುತವಿದೇನೆನುತ್ತ[2]ಲಾ ಕೋಮಟಿಗ
[3]ಳಿ[3]ತ್ತಂಡದಂಗಡಿಯ ಭಕ್ಷ್ಯಗಳ ತರಿಸಾ ನಿ
ಮಿತ್ತಕರ ಕೈಯಲವ ಹಿಕ್ಕೊಳಗನೋಡಲವು ಪೂರ್ವೋಕ್ತಪಾಕಕ್ರಮ ।
ಭಿತ್ತಿ[4]ವೊಲ[4]ಶುದ್ಧವಾಗಿರೆ ಕಂಡು ಭೂಮಿಪನ
ಚಿತ್ತ ಚಿತೆಯಂತೆ ಸೈವೆಱಗಾಗಿದೇನತಿವಿ
ಚಿತ್ರವೆನುತೆಮ್ಮ ಬಸವಣ್ಣನತ್ತಲು ನೋಡಿ ಕೈಮುಗಿದು ಕಳಃಪುತೆಂದ ॥೧೬॥

ತಪ್ಪುವಿರೆ ಬಸವದಂಡಾಧೀಶ ನಿಮ್ಮ ನಿಜ
ದಪ್ರತಿಮತೆಯ ನೀವೆ ಬಲ್ಲಿರಿಂತಿ[5]ದು ಲೌಕಿ[5]
ಕಪ್ರಪಂಚವ ಮಿಱಿದಾರೂಢಮತದ ಗೋಚರವಾಙ್ಮನಾತೀತದ।
ಅರ್ಪಿತವಧಾನಿ ಪ್ರಸಾದಭಾಷೆಯ ಶಬ್ದ
ಸತ್ಪ್ರಾಣಸಂಗಿ ಸಂಗನ ಬಸವನೆಂಬುದ
ಕ್ಕೊಪ್ಪುವುದು [6]ನಿಜ[6] ನಿಮಗೆನುತ ನೃಪತಿ ಬೀಳ್ಕೊಟ್ಟು ಮತ್ತೊಂದೆರಡು ದಿನಕ್ಕೆ ॥೧೭॥

---

[1] ಪುಳಕ (ಖ.ಕ). [2] ಅತಿವಿಚಿತ್ರವೆನುತ ಲಾಗ (ಖ), ಆತ್ಯಾಶ್ಚರ್ಯವಿದೇನೆನುತ (ಕ.ಜ). [3] ರಿ (ಗ.ಘ.ಛ). [4] ಯೊಲು (ಕ). [5] ವೆಲ್ಲವುರೆ (ಕ.ನ), ದಲೌಕಿ (ಗ). [6] ಮತ್ತೆ (ಗ.ಘ.ಛ).

ಚಿತ್ತದ ಸ್ಥಿರಭ್ರಮೆಯೊಳಾ ಚೋದ್ಯದೊಳು ಮನಂ
ಸುತ್ತಿಸುಳಿದಾಂದೋಳಿಸುತ್ತೊಂದುಪಾಯಮ ನಿ
ಮಿತ್ತ[1]ಸಿದನಾ[1]ದಿಕ್ರೀಢಾವಸಂಪಾದನೆಯ ಚೇಷ್ಟಾಪ್ರವೃತ್ತಿಯಿಂದ ।
ಸತ್ಯದೊಳು [2]ಮಿಥ್ಯೆ[2]ಪ್ರತಿಪಾದಿಸುವೊ[3]ಲಾ[3] ಕರ್ಪುರ
ಭೃತ್ಯ ನೃಪನೊಂದುದಿನ ಪಗಲೊಳಗಣೋಲಗವು
ನಿತ್ತಿರಲ್ಕಾ ಸಮಯಕೆಂದಿನಂದದಿ ಬಸವರಾಜನಗ್ರಜೆ ಬರಲ್ಕೆ ॥೧೮॥

ಹತ್ತಿರೆ ಕರೆದು ನಗೆನುಡಿಗಳ ನಟಿಸೆಮ್ಮ ಸಾ
ವಿತ್ರಿ ಮತ್ಪಿತನೊಡನೆ ದಿಃಗ್ಗೈದುವಂದಿಗೆ
ಮ್ಮೊತ್ತಿನನುಜಂ ಬಾಲನಾಗಿರಲು ಸಿದ್ಧರಸಮಂತ್ರಿವಧು ಪದ್ಮಗಂಧಿ।
ಎತ್ತಿಮೊಲೆಗೊಟ್ಟು ಸಲಹಿದ ಮಾತೆಯುದರದೊಳು
ಮತ್ತೆ ಪುಟ್ಟಿದ ನೀಲಲೋಚನೆಯ ಬಸವರಸ
ಗಿತ್ತೆ ಯೆನಗಾತ ಮೈದುನ ಹಿರಿಯಳಾಗಿ ನೀನತ್ತಿಗೆಮಗೆನುತಲರಸು ॥೧೯॥

ಮಿಕ್ಕುನಗೆನುಡಿಗಳಂ ನಟಿಸಿಯಾ ನಾಗಾಂಬೆ
ಅಕ್ಕಗಳಿಗಾಭರಣವೆಲ್ಲವಂ ತಾನೆ ತರಿ
ಸಿಕ್ಕುಡಲ್ಕೊಟ್ಟು ಶೃಂಗಾರಲಂಕಾರದಧಿ ದೇವತೆಯೆನಲು ರೂಪಿಸಿ ।
ಠಕ್ಕುಠವಣಿಸಿ ಧೂರ್ತದ್ವಿಗುಣಿಸೆಲೆಯಕ್ಕ ನೀ
ನಕ್ಕನಮ್ಮರಸಿಯರ್ಗಂತಾಗಿ ನಿ[4]ನ್ನ[4] ವಿಭ
ವಕ್ಕೆ ಮುಯ್ಯಾನುವರ ಕರೆಸಿ ತೋರ್ಪೆವು ಯೆನುತ್ತೊ[5]ಳಚರಾಧಿಕ[5]ನೊಬ್ಬನ॥೨೦॥

ಕರೆದವಗೆ ಕರ್ಣಜಪಗೈದು ಕಾಳಿಮ ಮಂಚಿ
ಮರಸಮುಖ್ಯರ ತತ್‌ಕ್ಷಣದಿ ಬರಿಸೆನಲು ಶೀಘ್ರ
ಚರರನಟ್ಟ್ಯಾಗ್ರದಿಂ ಕರೆತರಲ್ಕವರ ಬರಗಾಣುತಾ ರಾಜೇಂದ್ರನು ।
ಕರಸಂಜ್ಞೆಯಿಂದವರ ತೋರಿಲಾಯವ್ವೆಯ
ಲ್ಲರದೆಯಾ ಮಂಟಪದ ಒಳಗಣೋವರಿಯುಗಲು
ಪರುಠವಿಸಿ ಮುನ್ನಿರ್ದ ಹಂಸತಲ್ಪದ ಮೇಲೆ ಸ್ಥಾಪಿಸಿದಳಲ್ಲೊಬ್ಬಳೆ ॥೨೧॥

ವೈಯಾರದಿಂದೊಳಗೆ ಹಂಸಪರಿಯಂಕದ
ಲ್ಲಾಯಕ್ಕನಂ ಸ್ಥಾಪಿಸಾಗೃಹಚರ್ರ್ಯೋ[6]ಚಿತೋ[6]
ಪಾಯಸಂಜ್ಞಿಂದ ಪೊಱಮಡಲು ಆಯುವ್ವೆಗಾಲಸ್ಯವಂಕುರದೋಱಲು ।

---

[1] ಸುತವಾ (ಖ). [2] ನಿಂದ್ಯ (ಕ). [3] ಲು (ಕ.ಖ). [4] ನ್ನೀ (ಕ.ಚ). [5] ತ್ತೊಳನಾಡಿಕ (ಜ). [6] ಜಿತಾ (ಕ), ಜಿತೋ (ಚ).

ರಾಯನಾಳೋಚನೆಯ ಕೇಳ್ದಿಪಾತಕಮಹಾ
ನ್ಯಾಯವೆಂದಾ[1]ದಿಶಿವಶಕ್ತಿ[1] ಕಣ್ಮುಚ್ಚುವ ನಿ
ಜಾಯತದಿ ಮುಸುಕಿಟ್ಟು ಕಣ್ಮುಚ್ಚಿರಲ್ಕಿತ್ತ ಪಾತಕಪರಿಸ್ಪಂದವು ॥೨೨॥

ನೆರೆಯಿತಾ ಪಾರ್ಥಿವನವ್ರತಕಲ್ಪನರಕದಾ
ಗರವೆನಿಪ್ಪೋಲೆವೆಗ್ಗಡೆ ಖಚಪ ಗೋಪಾಲ
ಹರಿಭಟ್ಟ ನೇಮಿ ರಾಘವ ಕುಂದ ಚೋಳಿಮಂ ಕಾಳಿಮಂ ಮಂಚಮರಸ।
ಕರಿಯಕೇಶವ ಸಮಂತನು ತಮ್ಮಿಗಂ ನಾಚಿ
ಮರಸರೊಳಗಾದ ನಾಯಕಮರ್ಜನಸ್ತೋಮ
ಕರಸು ತನ್ನಾಲೋಚನೆಯ ಕುಮಂತ್ರವ ಕುಣಿಸಲವರೆಲ್ಲ ಹಾಯೆಂದರು ॥೨೩॥

ಅನ್ಯ[2]ರ್ಭಕಿಯ ಭುಕ್ತಶೇಷಗೊಂಡಂತೆ ತಾಂ
ತನ್ನಗ್ರಜೆಯ ತನ್ನಲಿಂಗಕರ್ಪಿಸಿ ಕೊಂಬು
ದಿನ್ನಱಿಯಬಹುದು ಕೇಳಿದು ತನ್ನ ಭಕ್ತಿಯುಕ್ತಿಗೆ [3]ಮಾರಿ[3]ಮುಖದೆಗೆದುದು।
ಮುನ್ನಕೆಲವೇನಾನು ಬುದ್ಧಿಚಕ್ರದೊಳು [4]ಹುಲು[4]
ವಿನ್ನಣಂಗಳಿವಂತಿರಿದು ಹೋಹುದಲ್ಲವ
ರ್ನೆನೆದ ಮಂತ್ರವನು ಆಹಾಯೆನುತ ನೃಪನ ಕೊಂಡಾಡಿದರ್ನಾರಕಿಗಳು ॥೨೪॥

ಗೋಮಾಯುಗ[5]ಳ[5]ಗರುವವಚನದಿಂ ಕೊಬ್ಬಿಸಾ
ಸಾಮಜಾರಿಯ ಕರೆದೊಲಾ ಪಾರ್ಥಿವಂ ಬಸವ
ನಾಮದ ಸದಾಶಿವನ ಕರೆಸೆ ಬಂದನು ಕಪಟಕುಲಶರಭಭೇರುಂಡನು।
ಪ್ರೇಮಸ್ತುತಿನಿಂದೆ[6]ಯ[6] ಮಹಾದಂಡನಾಥ ಬ
ನ್ನೀ ಮಹಾಸನಕೆಂದು ಸಾರೂಪ್ಯ ಸ್ಥಳಗೊಟ್ಟು
ಸೋಮಶೇಖರನ ಪ್ರಸಾದಸೇವನೆ[7]ಯಾ ತನೆ[7]ನುತ ಮತ್ತಿಂತೆಂದನು ॥೨೫॥

ಗುರುಚರಸುಲಿಂಗಪ್ರಸಾದ ವೆಂದೆಂ[8]ಬ[8]ರಾ
ಚರಣೆ[9]ಯಿದ[9]ಕೆಂತೆನಲು ಗುರುಮುಖಕೆ ರಸರುಚ್ಯಾ
ಚರಲಿಂಗಮುಖಕೆ[10] ಸ್ಪರುಶನ[10]ಮುಖದೊಳುಂಟಾದ ದ್ರವ್ಯ ಶಿವಲಿಂಗಮುಖಕೆ।
ನಿರುತಭಾವಾಭಾವ ಸಾಧ್ಯಸಾಧ್ಯ[11]ಣು[11]ಬಂದು
ಸುರತಸೋಂಕೆಲ್ಲೆ ಲ್ಲುವಲ್ಲಿಯು[12]ಶ್ರುಕೇಂ[12]ದ್ರಿಯದ
ಕರದಿಂದ ಶಬ್ದ ಪ್ರಸಾದಲಿಂಗಾರ್ಪಿತ ಸುಭೋಕ್ತೃಗಳ ಮತ[13]ವಿ[13]ಂತೆನೆ ॥೨೬॥

---

[1] ದಿಶಿವಭಕ್ತೆ (ಕ.ಖ), ದಿಶಿವಭಕ್ತಿ (ಧ). [2] ಧಕ್ತಿ (ಚ). ರ್ಭಕ್ತಿ (ಖ). [3] ಮೂರ್ತಿ (ಕ.ಖ). [4] ಹಲ (ಕ.ಖ.ಚ). [5] ಳು (ಗ). [6] ಯಿಂ (ಕ), ಯು (ಗ.ಧ.ಫ.ಚ). [7] ಯಾಯಿತೆ (ಕ), ಯಾಂತನೆ (ಫ). [8] ಬಗ.ಫ.ಧ). [9] ಯವ (ಗ.ಫ.ಚ). [10] ಪರುಷನ (ಕ.ಖ). [11] ಣಲ (ಗ). [12] ಶ್ರೋತ್ರೇ ಖ). [13] ವೆಂ (ಗ.ಫ.ಧ).

ಅಂತಲಾ ಪಿಚುಮಂದಕೇತಕ್ಕೈ ವಿಷ ಶಿಶುಗ
[1]ಳಂ[1]ತರಂಗೊಳ್ಳಿರಾವಿತ್ತಂಗಡಿಯ ಪದಾ
ರ್ಥಾಂತರಂದೋಱುದಿರಿ ಸಾವಧಾನಿತಪ್ರಸಾದ[2]ಪ್ರೌಢಿ[2]ಗಾದ್ಯರಾಗಿ।
ಸಂತಾನವೆಂಬುದಕೆ ಶಿವಸ್ವಾಮಿಸಂಗತಾಂ
ಸಂತೃಪ್ತಿ ಶಬ್ದಪ್ರಸಾದಪ್ರತ್ಯಕ್ಷಕಳೆ
ಕಾಂತಿರತ್ನವನೊಂದ ಕರುಣಿಸಿದ ನಿಮಗದೇ ತದ್ಗೃಹಾಭ್ಯಂತರದೊಳು ॥೨೭॥

ಹಂಸತಲ್ಪಾಗ್ರದಿ ಪ್ರಸಾದರೂಪಕವಡೆದ
[3]ದುಂ ಸನಿಯವ[3]ದು ನಿಮ್ಮಲಿಂಗದಾಳಿಯ ಮೆಚ್ಚ
ದಂ ಸ್ವೀಕರಿಸಿ ಶಿವನಿರೂಪಣವಿದೆನಲು ಕರಲೇಸೇನುತ್ತೆದ್ದು ಹೋಗಿ।
ಸಂಶಯಾರ್ಣವವಡಬ ಶಿಖಿ ಪ್ರಸಾದಸ್ಥಲ
ಭ್ರಂಶುವಶ[4]ನ್ಪ್ರ[4]ತಿವಾದವನದವಾನಲ ಭಕ್ತಿ
ಸಂಶಿರೋಮಣಿದೀಪ್ತಿ ನಿಷ್ಠಾಪ್ರತಿಷ್ಠಿತಾಚಾರ್ಯನೊಳಹೊಕ್ಕು ನೋಡೆ ॥೨೮॥

ಪರಿಯಂಕದೊಳು ಪರಮಸುಖದಿ ಮಲಗಿಹ ವನಿತೆ
ಯಿರೆ ಕಾಣುತಿದು ಕ್ರಿಯಾಪ್ರಕೃತಿನಾಟಕವೆಂದು
ವರಭಾವವಱಿದಂತೆ ಭಾವಜ್ಞ ಬಸವ ಭಾವಿಸಿದುದಭವಂಗಸಾಧ್ಯ ।
ಪರಶಕ್ತಿ ಹರನಿರೂಪಣಸೋಂಕಿನಿಂದಾ[5]ದಿ[5]
ಪರಶಕ್ತಿಯಾದಳಾಗಿಲ್ಲ ಸಂದೇಹಮನ
ತಿರುಗಿದಡೆ ದ್ರೋಹನೆ[6]ತ್ತಾ[6] ಪ್ರತಿಜ್ಞಾಪ್ರತಿಷ್ಠೆಯ ವಚನಮುವನೊರೆದನು ॥೨೯॥

ವಚನ—

ಹೋಗಬಿಟ್ಟು ಹಿಂತಿರುಗಿನೋಡಿ ಆಗಬೇಕೆಂಬ ಸಂದೇಹವುಳ್ಳಡೆ ಪರದಾರ ನಾಯಕನರಕ ಪರದಾರಪಂಚಮಹಾಪಾತಕ, ಅನ್ಯಸ್ತ್ರೀಯೆಂಬುದೆ ನಿಮ್ಮರಾಣಿವಾಸ ಎನಗಿದೇ [7]ದಿವ್ಯ[7] ಕೂಡಲಸಂಗಮದೇವಾ ॥೧॥

ಎನುತಲು ಪ್ರಸಾದಕ್ಕೆ ಬಾಯ್ದೆಱೆವು[8]ತ್ತೈತ[8]ಂದು
ತನುಜಭಾವದೊಳು ಬಂದಗ್ರಜೆಯ ಮಗ್ಗುಲೊಳು
ಸ್ತನಚೂಚಕವ ವದನದೊಳ್ಧರಿಸಮೃತಪ್ರಸಾದಾಹಾರಗೊಳುತಿರಲ್ಕೆ।
ವನಿತೆ ನಿದ್ರಾಮುದ್ರೆ ಸಡಲಿ ಬೆದರೆದ್ದು ನೋ
ಡನುಜಬಸವಣ್ಣದಂಡನಾಯಕನ ಮೂರ್ತಿಗಂ
ಡನುಪಮೋಪಮಬಾಲ ಶಿವಗೆ ಕೈಡೊಟ್ಟಿಲಿಕ್ಕಪ್ಪಿ ಮೊಲೆಯೂಡುತಿರಲು ॥೩೦॥

---

[1] ರಂ (ಖ). [2] ಪ್ರಧಿ (ಕ.ಖ). [3] ರಂಸನಿಮಗ (ಖ), ರಂಸನೀವ (ಘ.ಗ.ಥ). ತ್ಪ್ರ (ಕ.ಖ). [5] ದ (ಘ.ಗ.ಚ). [6] ತಸು (ಗ.ಘ.ಥ). [7] ಬೇಕು (ಗ.ಘ.ಥ.ಚ). ತಲುಬಂ (ಗ.ಘ.ಥ).

ಇತ್ತ ಬಿಜ್ಜಳನ ಮನ ನಾಸ್ತಿಕದ ನಗೆಗೊಡಲು
ಕುತ್ತಿರಿವುತಾ ದ್ವಾರವೇದಿಕೆಯ ಸಾರ್ದರ್ಥಿ
ಗರ್ತಿಸುಖದಾನಂದ ರಾಶಿಕೂಡಿದವೆ ಪೇಳೆನ್ನಾಣೆನುತ್ತ ನಗಲು ।
ಸತ್ಯೆಸಾಹಿತ್ಯಮುಖಸೆಜ್ಜೆಯಿಂದೊಗೆದ ಭಾ
ವೋತ್ತಮ ಬಸವಭಕ್ತಿರಾಶಿಕೂಟದ ಸುಖದ
ನಿತ್ಯರೂಪಕವಿದೆನುತೆತ್ತಿ ಮುದ್ದಾಡಿಸುತ್ತಾ ತಾಯೊರೆದ ವಚನವು ॥೩೧॥

ವಚನ—

ಬಸವನೇ ಮುಖಸೆಜ್ಜೆ, ಬಸವನೇ ಆಮಳೈಕ್ಯ, [1]ಬಸವಣ್ಣನನೆತ್ತಿ[1] ಮುದ್ದಾಡುವೆ ನಾನಯ್ಯ, ಬಸವ ಸಂಗನಬಸವ, ಜಯತು ಸಂಗನಬಸವ ಬಸವಲಿಂಗ ॥೨॥

ಬಸವಗೆಯು ನಮಗೆಯು ಭಾವಬೇಧಗಳಿಲ್ಲ, ಬಸವಗೆಯು ನಮಗೆಯು ರಾಶಿಕೂಟ; ಭಸವಣ್ಣಪ್ರಿಯಕೂಡಲಸಂಗನಲ್ಲಿ ಬಸವಣ್ಣನ ಬೆಸಲಾದ ಬಾಣಂತಿ ನಾನಯ್ಯ ಬಸವ ॥೩॥

ಲೀಲೆಯಂಕುರಿಸಿ ಸಂತೋಷ ಕೋರಕದೋಱಿ
ಜಾಳಕಂ ಜನಿಸಿ ದಳದಳೆದು ವಿಸ್ತಾರ ಪ್ರ
ವಾಳಿಸಾನಂದ ಮುಗುಳೊತ್ತಿ ಭಾವಸ್ಮಿತಸುಸ್ನೇಹಮಂಜಿರಿ ರಂಜಿಸಿ।
ಲಾಲನೆ ಶಲಾಟು ಸಂಗ್ರಹಿತ ಪುಳುಕಿತ ವಾನ
ಮೇಳೈಸಿ ಪಕ್ವಫಲವಾದ ಬಸವನ ಭಕ್ತಿ
ಬಾಲಾಂಗ ವನಕ್ರೀಡೆಯಾಡೆ ಜೋಗುಳವಾಡಿದಳು ವಸಂತದಿ ಬಸವನ ॥೩೨॥

ಪದ—

ರಾಗ : ವಸಂತ

ಬಸವ ಜೋ ಜೋ ಕರುಣಿ ಬಸವಯ್ಯ ಜೋ ಕಂದ
ಬಸವ ಜೋ ಜೋ ಸಂಗನ ಬಸವ ಜಯತು ॥ಪ॥

ಮೂಱುನೂಱುಱುವತ್ತು ಸತ್ತ ಪ್ರಾಣವನೆತ್ತಿ
ಮಿಾಱಿದಿರಿ ಮೂವತ್ತಾಱು ಕೊಂಡೆಯರನು
ತೋಱಿದಿರಿ ಎಂಭತ್ತು ಎಂಟು ಪವಾಡವನು
ಕರುಣಾಂಬುನಿಧಿ ಸಂಗನಬಸವ ಜಯತು ॥೧॥

---

1 ಬಸವನೆತ್ತಿ (ಜ).

ನೀಲಲೋಹಿತನಾಗಿ [1]ಅಂಧಾ[1]ಸುರನ ಕೊಂದೆ
ಕಾಳಕೂಟದ ವಿಷವ ಧರಿಸಿದಿರಿ
ಕಾಲಹರಣದಲಿ ನೀನುಪಕಂಠನಾದ್ಯೈಯು
ಶೂಲಿರುದ್ರನೆ ಜಯತು ಜಯ ಬಸವಲಿಂಗ ||೧||

ಪುರವನುರುಪುವಲಿ [2]ನೀ ಸ್ಕಂದನಾದ್ಯೈ[2] ಬಸವ
ಹರಿಯ ಕಂಕಾಳವನೆ ಮಾಡಿ ಬ್ರಹ್ಮ
ಶಿರವನರಿವಲಿ ನೀಲಕಂಠನಾದ್ಯೈ ತಂದೆ
ಪರಮಭಕ್ತರ ಸಲಹುತಿಹ ಬಸವಲಿಂಗ ||೨||

ಪ್ರಾಣಲಿಂಗಾಂಗದಲಿ ವೃಷಭನಾದ್ಯೈ ತಂದೆ
ಕಾರುಣ್ಯದಿಂದ ನೀವು ಸಲಹಿದಿರಿ
ಆರೈದು ಆಚಾರ ಉದ್ಧರಿಸಿ ಭಕ್ತಿಯನು
ತೋಱಿದಿರಿ ಶ್ರೀಗುರುವೆ ಜಯಬಸವಲಿಂಗ ||೩||

ಕಲ್ಯಾಣದಾ ಕಡೆಯ [3]ಕಾಣ್ಬಾರದಾರಿಗೆಯು[3]
ಕಲ್ಯಾಣವೆಂಬುದನು ತೋಱಿದಿರಿ
ಎಲ್ಲಾ ಪುರಾತರನು ತಂದು ಮೆಱೆದಾ ಧರ್ಮಿ
ಸಲ್ಲಲಿತ ಸಂಗ[4]ನಾ ಬಸವ[4]ಜಯತು ||೪||

ಆನಂದವಚನಾಮೃತಾರ್ಣವತರಂಗ ಸಿತ
ಭಾನುಮಂಡಲಕಡರುವಂತಿರುತ್ತುಂಗಘನ
ಪೀನಸ್ತನಂ ತೊಱೆದಿದಿರ್ಚ ಬಾಲ್ಯವತಾರ ಲೀಲಾಪ್ರಸಾದ ಸೋಮ ।
ಪಾನವಂ ಪರಿಣಾಮ ತೃಪ್ತಿಗೈದಿಸುತಕ್ಕ
ನಾನನ ನಿರೀಕ್ಷೆಗೈದಪ್ರತಿಮಬಾಲನ ನ
ವೀನನರ್ತಿಸುತಿತ್ತಲಿರೆ‌ಇತ್ತ ದುರ್ಜನಸಮೂಹ ದುಶ್ಚರಿತ ನೃಪನು ||೨೨||

ಬಾಗಿಲೊಳು ನಿಂದು ನಿಂದ್ಯಾನಂದ ಭಾವಪ್ರ
ಯೋಗಗಳ ನಿರ್ಮಿಸುತ ಹಾಸ್ಯರಸವೀಂಟಲನು
ವಾಗುತ್ತ ಪಾತಕದ ಪರಮಸೀಮೆಯ ಶಿಲಾಶಾಸನಾಕ್ಷರವಾಗುತ ।
ರಾಗದ್ವೇಷಂಗಳಾ[5]ಗರ[5]ವಹ ಮನಂಗಳಿಂ
ತೂಗಿ ನೋಡುತ್ತಿಪ್ಪ ಬಹಿರಾತ್ಮಸಂತತಿಯು
ಮೂಗನಿಳುಹಿತ್ತೆಮ್ಮ ಬಸವೇಶ್ವರನ ಬಾಲಲೀಲಾವಿಲಾಸಶಾಸ್ತ್ರ ||೨೩||

---

[1] ಅಂಧಕ (ಪ). [2] ನೀಲಕಂಧರನಾದೆ (ಜ). [3] ಕಾಣಬಾರದ ದಾರಿಗೆ (ಖ).
[4] ನ ಬಸವಜಯು (ಖ). [5] ರಾಗ (ಖ).

ಹಾಸ್ಯದೊಡಲಂ ಹರುಷದೆದೆಯು ಮತ್ಸರದ ಮನ
ನಾಸಿಕಮನಸ್ತರಿಯು ತಲೆಯಃ ಚೇಷ್ಟಾಪದಮು
ದ್ವೇಷದಿಬ್ಬದಿಯು ಕಪಟದ ಕಣ್ಣ ವೈಮನಸ್ಯದ [1]ಹಂತಸಂತತಿಗಳ[1] ।
ದೂಷಿಸುವ ಜಿಹ್ವೆಯು ದುರಾತ್ಮತೆಯ ಪೇರುರಮು
ವಾಸಿಯಕಟಿಯು ವಾದದಂಗ ಸಂಧಿಗಳ ನಿ
ಶ್ಶೇಷವಾಗಲ್ತಱಿದು ಕೊಱೆದು ಹಾಯ್ಕಿತು ಬಸವಲೀಲಾವಿಲಾಸಖಡ್ಗ ॥೩೫॥

ವಾತಾಯನದಿ ಗೃಹದ್ವಾರ [2]ಕದವಱೆಯೊಳ್[2]
ದ್ದಾ [3]ತುರದಿ[3]ನಿಕ್ಷಿಪ್ತ ಜ್ಞಾನಾಂಧಕುಜ[4]ದ[4] ದು
ರ್ನೀತನೃಪವರನ ಮುಖರಸವಱತುದಾಶ್ಚರ್ಯದಾತಪಾರ್ಕೋದಯಕ್ಕೆ ।
ಭೂತಳದೊಳಿಲ್ಲದದ್ಭುತ ಸರಸ ವಿರಸವಾ
ಯ್ತೀ ತೆಱಂ ದೇವಾದಿಗಳೊಳಿಲ್ಲನಾವಪ
ಖ್ಯಾತಿಯಂ ಕೂಗಿ ಕರೆದಂತಾಯಿತೆನುತ ನೃಪತಾ ತವಕಿಸೈದೆ ಬಂದು ॥೩೬॥

ಕಂಜಮಿತ್ರನ ಗಭಸ್ತಿಯಃ ಗಮ[5]ಕಕುಲಕಾ[5]ಕ್ಷಿ
ಗಂಜನವೆ ಬಸವಮಂತ್ರೀಶನ ಮಹತ್ತತೆ ನಿ
ರಂಜನ್ಯರಂಜನೆಗೆ [6]ತ್ರಾ[6]ಣ[7]ಗಣ್ಣೆಮ್ಮವಜ್ಞಾನಕೃತವದ[7] ನೋಡದೆ ।
ಪಂಜ[8]ರಂ[8] ದೋಱ ಹೇಳ[9]ವ್ವ ಭ[9]ಕ್ತಿಯ ಬಾಲ
ಪಂಜರಂದೆಗೆ[10]ಸೆ[10]ನುತ್ತಾ ನರಾಧೀಶ್ವರ ಕ
ರಾಂಜುಳಿಯ ನಾಗಾಯಿತಾಯಿಗೆತ್ತಲ್ಕೆಲ್ಲರಂತೆ ತಲೆವಾಗಿರಲ್ಕೆ ॥೩೭॥

ಆನಂದದಮೃತಜೋಗುಳಪದವನೆತ್ತಿತ್ತ
ನೂನ ನವರಸಭರಿತಮಾಗಿ ಪಾಡುತ್ತಿರ
ಲ್ಕಾ ನರಾಧೀಶನಂತಃಪುರಾಂಗನೆಯರಖಿಳಾಪ್ತಜನಸ್ತೋಮ ನೆರೆದು ।
ಮಾನನಿಧಿ ಬಸವೇಶ್ವರನ ಬಾಲಕ್ರೀಡೆಯ ನ
ವೀನಮಂ ನೋಡಿ ನೋಡಾಹಾ ಯೆನುತ್ತೆಲ್ಲ
ಮಾನಿನಿಯರರಸಿನ ಕುಮಂತ್ರಕ್ಕೆ ನಗುತ ಜಯ ಜಯ ಬಸವ ಯೆನುತಿದ್ದರು ॥೩೮॥

ಖುಲ್ಲರೊಯ್ಯನೆ ಸರಿಯಲರಸಿನಜ್ಞಾನತೆಯು
ನೆಲ್ಲರಸಿಯರು ಜಱಿದು ಜಗವಂದ್ಯ ಬಸವಣ್ಣ
ನೆಲ್ಲೀಲೆ ಸಾಕು ಶರಣೆನುತ ನಾಗಾಯವ್ವೆಗಳಿಗೆ ನಮಿಸುತ್ತ ಬಸವ ।

---

[1] ದಮಂತ್ರಸ್ತುತಿಯು (ಖ). [2] ಕಾದರಿಯೊಳಿ (ಖ). [3] ತೆರದಿ (ಖ). [4] ನ (ಖ.ಗ.ಪ). [5] ಕುಳುತಾ (ಚ.ಖ). [6] ಕಾ (ಗ.ಫ.ಛ). [7] ಗಾಣೆಮ್ಮವಜ್ಞಾನಕೃತಕವ (ಕ), ಗಾಣಲ್ಕೆಮ್ಮಜ್ಞಾನಕೃತವದ (ಜ). [8] ಳಂ (ಖ). [9] ಧ್ವ (ಖ). [10] ದೆ (ಖ).

ವಲ್ಲಭನ ಬಾಲ್ಯವ ವಿಸರ್ಜನಾಗಮಮಂತ್ರ
ದಲ್ಲಿ ದಯಗೈಯೆನಲು ಸತ್ಪ್ರಸಾದಿಯ ವಕ್ತ್ರ
ದಲ್ಲಿರ್ದ ಕುಚಚೂಚಕಂದೆಗೆಯೆ ಪೂರ್ವಪುಣ್ಯೋದಯಸುಮೂರ್ತಿಸೆಯಲು ॥೩೯॥

ಮತ್ತೆ ವಿಸ್ಮಯ ಬೀದಿವಱಿಯಿತಾರಾಜನ ಕ
ಳತ್ರಾದಿಗಳು ಜಯಯೆನುತ್ತೆಱಗಿ ಬಿಜ್ಜಳ ನೃ
ಪೋತ್ತಮನು ನೆಲನ ನೆಲೆನೋಡುವೊಲು ತಲೆಗುತ್ತಿ ಕರಕಮಲವೆರಡನೆತ್ತಿ ।
ಹೊತ್ತು ಸಿಗ್ಗಾಗಿ ಕಳುಪಲು ಭಕ್ತಿ ಭಾಗ್ಯಸಂ
ಪತ್ತು ಲಕ್ಷ್ಮಿಯ ವರವನಿದಿರ್ಗೊಂಡು [1]ಬರುವ[1] ಗ್ರ
ಜೋತ್ತಮೆಯ ದಂಡಿಗೆಯ ಮುಂದೆ ಬಸವನ ಕೀರ್ತಿಧ್ವಜಗಳೆತ್ತು ಘೆಯೆನುತ್ತ ॥೪೦॥

ಮಂಗಳಮಹೋತ್ಸವದ ಭಕ್ತಿವಾರ್ಧಿಯ ಘನತ
ರಂಗದೇಳ್ಗೆಯ ಸಸಿಯ ಸಕಲಭಕ್ತವ್ರಾದ್ಯ
ಹೊಂಗಳಸ ತೋರಣ ಸದಾಚಾರ ಸಂಪದದ ಸರ್ವಸಾಂಗಂಗಳಿಂದ
ಲಿಂಗಜಂಗಮಪ್ರಸಾದಪ್ರಾಣಿ ಮೂರ್ತಿಯ ನಿ
ಜಾಂಗವನಿದಿರ್ಗೊಳಲು ನಿಜವಾಸಕ್ಕೈದಿ ಗಣ
ಸಂಗಸೇವಾರತದಿ ಸುಖಮಿರ್ದನೆಂದು ನಂದೀಶ ಪ್ರಮಥರ್ಗೊರೆದನು ॥೪೧॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಸಮಲ ಬಸವ ।
ರಾಜ ಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪಪವಾಡದಱುವತ್ತು ನಾಲ್ಕಱೊಳು ವಿ
ಭ್ರಾಜಿತ ಪ್ರಸಾದನೈಷ್ಠಿಕ ಬಸವ ಶಿಶುವಾಗಿ ಮೊಲೆಯುಂಡು ಮೆಱೆದ ಸಂಧಿ ॥೪೨॥

---

[1] ಬಾಹೊ ಗ.ಫು.ಛ).

ಮೂವತ್ತೈದನೆಯ ಸಂಧಿ

ಸೂಚನೆ—

ಮೂಲಿಗಬಸವನೆತ್ತುಗೆಲ್ಲದಿರಲಳಲು ಭೂ
ಲೋಲ ಪ್ರತಿಪಾದಿಸುತಿರಲ್ಕೆ ಬಸವೇಶ ಸ
ಲ್ಲೀಲೆಯೊಳ್ಕಣ್ಣಿತ್ತ ಹರಿಸಿ ಗೆಲಿಸಿದನಖಿಳಲೋಕಂಗಳೆಲ್ಲಱಿಯಲು॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಸರ್ವಗುಣರತ್ನಪ್ರಭಾಕ[1]ರೋರ್ಜಿ[1]ತಭೂಷ
ರ್ವಸಿದ್ಧಿಸಮಗ್ರ ಸುಪ್ರದಾಯಕಭಾಷ
ಸರ್ವಶಾಸ್ತ್ರಕಳಾ[2]ಭಿಜ್ಞಾನವಾಸಾ ಬಹಿರಂತರ್ನಿಶಾದಿನೇಶ।
ಸರ್ವಭಕ್ತಿಕ್ರಿಯಾರ್ಥೋಕ್ತಿ[3]ಕ್ರಮಾ[3]ಕೋಶ
ಸರ್ವಕರಣೇಂದ್ರಿಯ[4]ಪ್ರಕೃತಿ[4]ರ್ಲತಾನಾಶ
ಸರ್ವಜೀವಸ್ಥಿತೋತ್ಪತ್ತಿಲಯ ಕಾರಣ ಸದರ್ಥ ಬಸವೇಶನೀಶ ॥೨॥

ಸತ್ಯರೊಲಿದಾಲಿಸಿ ಸದಾಚಾರನಿಷ್ಠಾಪ್ರ
ವೃತ್ತಿಯಂ ಪ್ರಕಟಿಸಲ್ಕೆಂದಾದಿನಂದೀಶ
ಮರ್ತ್ಯದೊಳ್ಚರಲಿಂಗಸುಸ್ಥಳೋರ್ವಿಯೊಳು ದಾಸೋಹಮೆಂಬ ಸುಬೀಜವ।
ಬಿತ್ತಿ ಷಟ್ಸ್ಥಲಮಾರ್ಗಸುಫಲಷಡ್ವಿಧರುಚಿಯ
ನಿತ್ಯಮುಕ್ತರಿಗೀಯಲೆಂದು ಬಸವ ಸುನಾಮ
ವೆತ್ತು ಕಲ್ಯಾಣಕೈವಲ್ಯಪುರದೊಳ್ ಸ್ವಭಾವದೊಳಿರಲ್ಕೊಂದುದಿವಸ ॥೩॥

ಚಾರುತರ ಕಲ್ಯಾಣಪುರಜನಮನೋಂಬುಧಿಯ
ಸಿರಿ ಪೆರ್ಚಿಪಾ ಶಶಾಂಕನನಿದಿರ್ಗೊಂಬ ಶೃಂ
ಗಾರಾಂಗನೆಯರುಟ್ಟ ನೆಱಿಯಂತೆನಲ್ಕೆತ್ತಲೊಪ್ಪಿದವು ಗುಡಿತೋರಣ।

---

[1] ರಾರ್ಜ (ಗ.ಥ.ಚ). [2] ವಿಭಗ್ನನು (ಗ.ಘ.ಥ), ಭಿಜ್ಞಾನು (ಕ.ಖ). [3] ಕ್ರಿಯಾ (ಖ). [4] ಪ್ರತತಿ (ಜ).

ಭೋರನೆಸಗುವ ಸುವಾದ್ಯದ ಘೋಷಣಪ್ರತತಿ
ಪೂರಿತಾಖಿಳಸುಪ್ರಶಸ್ತಶುಭಕಳೆಯು ವಿ
ಸ್ತಾರ ಕರಿಗಟ್ಟಿದಂತಾಕಾರಪರ್ವಪರ್ಬಿತ್ತು ಕಲ್ಯಾಣದೊಳಗೆ ||೪||

ಕಾರಪರ್ವಪ್ರಭೋತ್ಸ[1]ವ[1]ವೆಸೆವ ಕಲ್ಯಾಣ
ಪಾರವಾರಾಂತರದೊಳುಭಯ ಸತ್ಕುಲನೃಪಾ
ಗಾರವೊಳಗಾದಖಿಳ ಶೂದ್ರವೈಶ್ಯಕ್ಷತ್ರಿಯಾದಿ ಬ್ರಾಹ್ಮಣವರ್ಗದ।
ಸೇರುವೆಯ ಹದಿನೆಂಟುಕುಲಜಾತಿವರ್ಣದೊಳ್
ಕೇರಿ ಕೇರಿಯ ನೆರೆಗೃಹಂಗಳೊಳ್ಪೊಱಮಡುವ
ಕಾರಿಮೂವತ್ತಾಱುಲಕ್ಷಮತ್ತೊಳಗುಳಿದ ಎತ್ತ ನಿನ್ನಾರೆಣಿಪರು ||೫||

ಕೋಡಬಳೆ ಝುಲ್ಲ ಯಱ[2]ರಗೆ[2]ಜ್ಜೆ ಹೊಕ್ಕುಳಗಂಟೆ
ಸೂಡಿದ ಸುವರ್ಣಗನ್ನಡಿ ಮೌಕ್ತಿಕಾವಳಿಯ
ಜೋಡು ನವರತ್ನದಂದುಗೆ ಕರ್ಣಪತ್ರ ಚಿತ್ರಾಂಗದಿಂದೆಸೆವ ಪೂವ[3] ।
ಕೋಡಿದ ಸುಗಂಧ ಪನ್ನೀರು ಕುಂಕುಮದೊಳ
ಕ್ಕಾಡಿ ನಾನಾಪುಷ್ಪಮಿಶ್ರಿತೋತ್ಸವದ ಕಳೆ
ಗೂಡಿ ಕಲ್ಯಾಣ ಮೋಕ್ಷಶ್ರೀಯ ಸೊಬಗ ನೆರೆ ಸೂರೆಗೊಂಬಂತಿರ್ದುವು ||೬||

ಕೆಲವ ಕೇಸಿಗ ನಿಱುವ ಹಂಡ ಹಾರುವ ಚಂಚ
ಮಲೆವ ಪುಲ್ಲೋರಿ ಬೆಚ್ಚುವಬೆಳ್ಳೆ ಬೆದರಿಸುವ
ಚೆಲುವ ಮೈಲ್ಹೋರಿ ಪುಟನೆಗೆವ ಕೆಂದನು ಪಱುವ ಕಾರಿ ಮೊದಲಾದವರೊಳು।
ನಿಲುವಸಂಪನು ಬೋಳ ಬಟ್ಟ ಕರಿವಾಸ ಮುಂ
ದೊಲೆವ ನಾನಾಪರಿಯ ಕಬ್ಬಸಿಗಳೊಳಗಾದ
ಪಲವುಪರಿ ಯೆತ್ತು ತೊಂಭತ್ತಾಱು ಲಕ್ಷಮೇಳೈಸಿ ಪಿಡಿದುವು ಗೆಲ್ಲಕೆ ||೭||

ಹರಿಣನಂ ಮೀಱಿ ಮಾರುತನ ಹಿಂದಿಕ್ಕಿ ದಿ
ಕ್ಕರಿಯನೆಡಕೊತ್ತಿ ರಥಮಂ ದಾಂಟಿಬಿಡುವ ತ
ತ್ಸರಳನೇಳಿಸುತಲಶ್ವವನಣೆವುತಂ ಮನವ ಬಗೆಗೊಳ್ಳದುರವಣಿಸುತ।
ಕರಿಯುದ್ಧಬಾಕನೆಕ್ಕಲಮರ್ದನಪ್ರಿಯ
ಕ್ಕರಡಿಕಲಹಕ್ರೂರವಿಗ್ರಹತರಕ್ಷುಮದ
ಹರಘೋರದುಗ್ರಪ್ರತಾಪ ಬಿರುದುಗಳೆತ್ತು ಸುತ್ತಿ ಪಿಡಿದವು [4]ಗೆಲ್ಲಕೆ[4] ||೮||

---

[1] ಹ (ಗ.ಫು.ಛ). [2] ರು (ಖ). [3] ವವಪುವ (ಖ), ದೋಪುವ (ಚ) [4] ಲಗ್ಗಗೆ (ಫು).

ಬಡಿವ ಗಿಡಿಬಿಡಿ ಕರಡೆ ನಿಸ್ಸಾಳೆ ಬೊಂಬುಳು
ಘ್ಹುಡಿಪ ಕಹಳೆಗಳ ತಮ್ಮಟೆ ಭೇರಿ ಮೊಳಗುಪತಿ
ನಡಗರದೊಳುಲಿವ ಹೆಗ್ಗಾಳೆ ಮೌರಿಗಳ ಘೋಷಪ್ರಭಾಡಂಬರದೊಳು।
ನಡೆದೊಬ್ಬೆಗೊಡುತಿಹಬ್ಬರ [1]ಹಬ್ಬ[1] ಕೈವಲ್ಯ
ದೆಡೆಗಡರುವಂತಿರಲ್ಕಾ ನೃಪೋತ್ತಮ ಕೇಳು
ತೊಡನೆ ಸತ್ಪ್ರೌಢಪ್ರಧಾನರಾಜಪ್ರಮುಖರೈದೀಕ್ಷಿಸುತ್ತಿರಲ್ಕೆ ॥೯॥

ಊರಮೂಲಗ ಸಿದ್ಧಿಶೆಟ್ಟಿಸುತ ಬಸವ ತ
ನ್ನೊರೆಮಕ್ಕಳ್ಸಹಿತ ಮಣ್ಣೆತ್ತ ಪಿಡಿದು ತ
ತ್ಕೇರಿಕೇರಿಯೊಳು ತತ್ಸುಖರಸೋತ್ಸಹದೊಳುರವಣಿಸಿ ಪರಿದಾಡಲೊಡನೆ।
[2]ಕ್ರೂರ[2]ದುರ್ಜನಪ್ರತತಿಯುಪಹಾಸ್ಯದೊ[3]ಳ್ನೊತ್ತಿ[3]
ಕಟು[4]ಗಲ್ಲಗೆ[4]ಲ್ಲಕ್ಕೆ ಬಸವಮುಖ್ಯ [5]ನುಯೆನು[5]
ತ್ತಾರ್ತೈದು ಸಾಮದೊಳ್ಕರೆನಲೈತಂದ ಮೂಲಗ ಬಾಲಲಿಂಗೈಕ್ಯನು ॥೧೦॥

ನೊಸಲತ್ರಿಪುಂಡ್ರ ಗಳದಲಿ ಲಿಂಗರುದ್ರಾಕ್ಷಿ
ಎಸೆವ ಪಾಣಿಸ್ಥಳಾಗ್ರದಿ ಪರಮಮೃತ್ತಿಕಾ
ಬಸವ ಸಹಿತುರವಣಿಸಿ ಬರುತಿರಲ್ಪರಮಕಲ್ಯಾಣದಭ್ಯಂತರದೊಳು।
ಪಸರಿಸದುಪೆಲ್ಲೆಡೆಯೊಳಖಿಳವಾದ್ಯಪ್ರತತಿ
ದೆಸೆದೆಸೆಗೆ ಘೋಷಿಸುತಿರಲ್ಕೆನಡುವಹ ನಿಕರ
ಕುಸುಮಾದ್ರಿಗಳ್ಚರಿಸುವಂತೆ ಗೆಲ್ಲಕ್ಕೆ ಬಹ ಸಂಭ್ರಮೈಶ್ವರ್ಯದೊಳಗೆ ॥೧೧॥

ಹೆಬ್ಬೊಬ್ಬೆ ಘೋಷಪ್ರಭಾರ್ಘಟಾಡಂಬರದೊ
ಳಬ್ಬರಿಸೆ ಬಿಜ್ಜಳೋರ್ವೀಪನೆತ್ತ ಕಟುಗಲ್ಲ
ಹಬ್ಬಗೆದ್ದುಗ್ರಮಾಗಲ್ಕಂಡು ಬಾಲಮುಗ್ಧಪ್ರಮುಖನಳುತಿರಲ್ಕೆ।
ಕುಬ್ಬರಿದು ಹಾಸ್ಯದೊಳ್ಬಸವ ನೆರೆ ಸೋತನೆಂ
ದುಬ್ಬುತರಿಗೊಂಡೆಯುರು ನೃಪಗೆ ಕುಹಕಾಗ್ನಿಯುನು
ಹಬ್ಬನಲ್ಕಟಿದು ದುರ್ಬೋಧಪ್ರರೂಪ ಕರೆಸಿದನಾದಿ ವರ್ಮಜ್ಞನ ॥೧೨॥

ಅಸಮಾಕ್ಷ ಬಸವಂಗೆ ಲಿಂಗ ರುದ್ರಾಕ್ಷಿವರ
ಭಸಿತ ಪ್ರಸಾದ ಪಾದೋದಕದ ನಿಷ್ಠೆಯೊ
ಪ್ಪೆಸೆವ ಜಿಹ್ವಾಗ್ರದೊಳ್ಪ್ರಣವಮಪಂಚಾಕ್ಷರೋರ್ಜಿತ ಶುದ್ಧಬೊಬ್ಬೆಗೊಡುತ।

---

[1] ತುಂಬಿ (ಕ.ಖ). [2] ರಾರಿ ಘ), ರರೀ ಗ.ಥ). [3] ಳ್ಕಾರಿ (ಘ), ದಿಂದೊತ್ತಿ
[4] ಗೆಲ್ಲಕೆ (ಖ . [5] ನೆನು (ಗ.ಘ.ಕ.ಥ).

ವಿಷಮನೇತ್ರನ ಬಹಿಷ್ಕರಿಪ ಬಾಹಿ[1]ರ[1]ರೆದೆಯ
ಮಸೆದು ತುಳಿವಂತಡಿಯನಿಡುತ ನಾಲ್ದೆಸೆಯೊಳು
ಬ್ಬಸದನಡುವ[2]ತೃಣಾವಳಿ[2]ಯುಗೆಲುವಾದಿಸ್ಥಳಜ್ಞ ಬಂದನು ಗೆಲ್ಲಕೆ ॥೧೩॥

ಎತ್ತು ಗೆಲ್ಲದೊಡೆ ಶಿಶು ಬಿಕ್ಕಿಬಿಕ್ಕಳುತ ಮನ
ಚಿತ್ತಜಾರಿಯ ಹಲುಬಿ ಹಂಬಲಿಸಿ ಕಂಬನಿಯ
ನೊತ್ತಿಸೂಸುತ್ತಿಹನದೇಂ ಮಂತ್ರಿ ನಿಮ್ಮರ್ತಿಯೋ ನಿಷ್ಠೆಯೋ ಕಪಟವೊ।
ಕೃತ್ರಿಮಾಟವೊ ಬಾಲಚೇಷ್ಟೆಯೋ ದತ್ತೂರ
ನೆತ್ತಿಗೇಱಿತೊ ಬಸವಯೆನಲಾದಿಪರಶಿವನ
ಹೊತ್ತು ಬಹ ವೃಷಭಗೆಲ್ಲದೊಡಳುವ ವರಶಿಶುವ ಹಸುಳೆನಲ್ಬಹುದೆಯರಸ ॥೧೪॥

ನಿತ್ಯಂಗೆ ತುತ್ತಾದವನ ಸೂಕ್ಷ್ಮನೆನಬಹುದೆ
ಸತ್ಯದಿಂ ಹಾಲೂಡಿದಳ ಬಾಲೆಯೆನಬಹುದೆ
ಮೃತ್ಯುವಂ ಗೆಲಿದ ಪ್ರಸಿದ್ಧಮುಗ್ಧರನಱಿಯದಜ್ಞರಂ ತಿಳುಪಲೆಂದು।
ಅತ್ಯತಿಷ್ಠದ್ದಶಾಂಗುಲನ ಘನಮಹಿಮಾಪ್ರ
ವೃತ್ತಿಯಂ ನೋಡೆನುತ್ತಾದಿಮರ್ಮಜ್ಞ ಮ
ಣ್ಣೆತ್ತಪಿಡಿದಾನಂದಭಾವದೊಳ್ಬಾಳಾಕ್ಷಬಸವನೊಲಿದೊರೆದ ವಚನ ॥೧೫॥

ವಚನ—

ಸದಾಚಾರವ ಕಂಡು ಲಾಂಛನಪಕ್ಷವ [3]ನೋ[3]ಡದವರಿಗೆ ಇಹದೊಳು ಪರದೊಳು ಗತಿಯಿಲ್ಲ; ಗತಿಯಿಲ್ಲ ಕಾಣಿರೋ ಮಣ್ಣೆತ್ತಾದಡೇನು? ತನ್ನೆತ್ತ ಗೆಲಬೇಕೆಂಬುದಕ್ಕೊಲವನು ನಮ್ಮ ಕೂಡಲಸಂಗಮದೇವಯ್ಯನು ॥೧॥

ಹತ್ತುಸಾವಿರಗೀತವನು ಪಸರಿಸಾ ಬ್ರಹ್ಮ
ದುಕ್ತಿಯಂ ನುಡಿಯುಬಹುದೆಲೆ ಬಸವಮಂತ್ರಿ ಮ
ಣ್ಣೆತ್ತ ಹಱಿಸಲಬ್ಬರದೆಂಬ ದುರ್ಭಾವಪ್ರವೃತ್ತಿಯಂ ಕೇಳುತೊಡನೆ।
ಮುಕ್ತಿಮೂಲಸ್ಥಾನ ಕರ್ಮನಿರ್ಮೂಲಾಸ್ತ್ರ
ಭಕ್ತಿಮಹಿಮಪ್ರಭಾವಿತನರಸಿನಜ್ಞಾನ
ಕುತ್ತಭೇಷಜನಪ್ರತಿಮನಾದಿಬಸವ ಮಣ್ಣೆತ್ತನೆತ್ತಿದನಾಗಳು ॥೧೬॥

---

[1] ಕ (ಕ.ಖ). [2] ನೃಣವ (ಕ), ನೃಣಾವ (ಖ), ನೃಪಾವ (ಗ.ಘ). [3] ನಾಡ (ಖ.ಗ.ಘ), ನಾಡಿ (ಛ)

ಅದಕ್ಕೆ ಲಕ್ಷಣಸೂತ್ರ :

ಸ್ಕಾಂದೇ—

ಪಾದಂ ಚತುರ್ವೇದರೂಪಂ ಅಗ್ನಿರೂಪಂ ಚ ಶೃಂಗಕಂ ।
ಆದಿತ್ಯಂ ಚೈವ ಗೋಪಾಲಂ ಮುಖಂ ರುದ್ರತ್ವಮೇವ ಚ ॥
ಬ್ರಹ್ಮವಿಷ್ಣುಮಹೇಶಾನಾಂ ಗಾತ್ರಂ ವೃಷಭಲಕ್ಷಣಂ ।

ನಿತ್ಯದಿವ್ಯವೃಷಭಗಾತ್ರಕೆ ಸುಸತ್ಯದಕುಕ್ಷಿ
ಗತರ್ಯ್ಯೂರ್ಧ್ವತತ್ವಸ್ವರೂಪು ಮುಖ ಶಿವ ಶಕ್ತಿ
ಯುತ್ತುಂಗಕೋಡುವಿಹಪರಕರ್ನಸುಜ್ಞಾನಭಾವಿತದ್ವಯನಯನದ ।
ಮುಕ್ತಿ ಶಿರ ಭಕ್ತಿ ಪೇರ್ಬೆನ್ನುವಜಡ ಸುಬಾಲ
ವೆತ್ತಿಯುಗ್ರೋತ್ಸಾಹದೊಳ್ನಿರೀಕ್ಷಿಪ ಬ್ರಹ್ಮ
ದೆತ್ತುಮೃತಿಕೆಯ ತಚ್ಚರ್ಮಸ್ಥಲಾಗ್ರದೊಳ್ನಿಕ್ಷಿಪ್ತವಾದಂತಿಹ ॥೧೭॥

ಧರ್ಮಾರ್ಥಕಾಮಮೋಕ್ಷವೆ ಚರಣ ನಾಲ್ಕಕ್ಕೆ
ಕರ್ಮವುಚತುರ್ವೇದ ಕಡೆಯ ಷೋಡಶಶಾಸ್ತ್ರ
ವರ್ಮದಂದುಗ ಪುರಾಣಪ್ರತತಿ ಗೆಜ್ಜೆಯಾಗಮಪ್ರಕರಘಂಟಾವಳಿ ।
ನಿರ್ಮಳಸುಪಂಚಾಕ್ಷರಿಯ ಝಲ್ಲಿಯುಪನಿಷ
ದ್ಧರ್ಮಕೋಡ್ಬಳೆ ಸುಪ್ರಣವದಂಡೆಯೊಳ್ಮಿತೇ
ಜೋಮಯದೊಳೆಸೆವ ಬಾಸಿಗವೊಪ್ಪಲಂಕರಿಸಿದನು ವೃಷಭನ ॥೧೮॥

ಆದಿಯನನಾದಿ ಗ್ರಹಿಪೊಲ್ಕಾಯುಮಂ ಜೀವ
ವೇದಿಸುವೊಲಾ ಮೃತ್ತಿಕೆತ್ತ ತದ್ಬಸವಾಂಕ
ನಾ ದಿವ್ಯದೃಷ್ಟಿಯಿಂದೀಕ್ಷಿಸುತ ಕರವರುಷನಂಗೈದು ಭಾವಿಸಲ್ಕೆ ।
ಪಾದವೂರೆದ್ದುಗ ದೊಳ್ನಿರೀಕ್ಷಿಸಿಕೋಡ
ಕ್ರೋಧದಿಂದೆತ್ತಿ ಖುರದಿಂ ಕೆರೆದು ಠಣಕರಿಸು
ತ್ತೈದೆ ಬ್ರಹ್ಮಾಂಡ[1]ಕಡರಲ್ಕೆ[1]ವಿಶ್ವಾಸೋಗ್ರ ಕೆದಱಿ ಕಂಗೆಟ್ಟೋಡಲು ॥೧೯॥

ಘುಡುಘುಡಿಸಿ ರಥವನಿಱಿದೆತ್ತಿ ಕರಿಘಟೆಗಳಂ
ಕೆಡಹಿ ಬ[2]ಲ[2]ವಾಜಿಗಳತುಳಿದ ನ[3]ಡ[3]ವ ಪಡೆಯ
ನೊಡೆವೆಟ್ಟಿ ವೀದಿಯೊಳ್ಪರಿದು ಹಮ್ಮಾರ್ಯಗ್ರಕಡರಲ್ಕರಸು [4]ಬೆದಱಿ[4]ಬಸವ ।

---

[1] ಕೈದಲ್ಕ (ಗ.ಘ.ಥ). [2] ಲು (ಕ). [3] ಡ್ಡು (ಗ.ಘ,ಥ). [4] ನಡುಗಿ (ಕ.ಖ.).

ನಡಿಗೆಱಗಿ ಸಿಡಿಲು ಹೊಡೆಯಲ್ಪಡಿಕೊಡೆಯೆನ್ನ
ನಡಸಿಕಾಯ್ವು[1]ದೆ[1]ಕೃತ್ರಿಮದ ಶಠಾಳೋಚನೆಯ
ಸೊಡರು ನಿಲುವುದೆ ಷಡಾಕ್ಷರವಾಯಿಗೆ ಬ್ರಧ್ನಗೇನಿದಿರೆ ಖದ್ಯೋತಪ್ರಭೆ ॥೧೦॥

ಭೂಮಿನಭಗೂಡಲುಳಿವರೆ ಖಗ ನರಾದಿಮೃಗ
ಹೇಮಾದ್ರಿ ಚರಿಸೆ ಪಿಡಿಯಲ್ಕೆ ನರರಳವೆ ನಿ
ಸ್ಸೀಮದಂಡಾಧೀಶ್ವರನಭಕ್ತಿನಿಷ್ಠಾಗ್ನಿಗಿ[2]ದಿರೆಮ್ಮ[2]ಕುಹಕಾನನ ।
ತ್ರೈಮಮಹೋಗ್ರಾಕ್ಷನಂ ನಿಲಿಸೆಮ್ಮ ರಕ್ಷಿಸೆಂ
ದಾ ಮಹಿಪ ಬಸವೇಶ್ವರಂಗೆಱಗಲಾ ಕ್ಷಣಂ
ಕ್ಷೇಮದೊಳ್ಜಯವೆನುತಾತ್ತದಿವ್ಯಪಥಂಗೆ ನಮಿಸುತ್ತ ನಿಲಿಸಿದನುಗ್ರವ ॥೧೧॥

ಈಕ್ಷಿಸಿ ಕುಮಂತ್ರಿಯತಿಭಕ್ತಿಯುದ್ರೇಕದ ತ
ರಕ್ಷುವಲ್ಲವೆ ನಿಜೆತ್ತಾದಡ ತೃಣಾಂಬುವನು
ಭಕ್ಷಿಸಿದಡದು ನಿಮ್ಮನಿಷ್ಠೆ ನಿಜವಹುದಲ್ಲದಡೆ ಸಲ್ಲದೆನಲು ಬಸವ ।
ನಾಕ್ಷಣದೊಳೊಪ್ಪಿ ನೆನೆಗಡಲೆಯರಳಕ್ಕಿಗಳ
ಲಕ್ಷಸಂಖ್ಯೆಯಖಂಡುಗವತರಿಸಿ ರಾಶಿವೊಯಿ
ಸಿಕ್ಷುಸಂಫಲಸದ್ರವ್ಯದ ಬಣಬೆಗಳನೊಟ್ಟಿಸಲ್ಕೆ ಮೇಯಿತ್ತೆಲ್ಲವ ॥೧೨॥

ಏನಿದೇನಾಶ್ಚರ್ಯವೆನುತ ಬೆಱಗಾಗಿ ಸಭೆ
ಮೌನಗೊಂಡಿರಲು ಬಸವೇಶ ಸ್ಮಿತಾನನದಿ
ಮಾನಿನಿಯ ನೋಂಪಿಯರ್ಥಕೆ ಸುಪುತ್ರಪ್ರಕರನೆರೆದು ವ್ರತಿಕೆಯ ತಂದು ।
ಆನೆಯೆಂದರ್ಚಿಸದು ದೈವಗತಿಯೆಂದು ಸ
ನ್ಮಾನದಿಂ ಕೇಳ್ವಿರಿದಕೇಕೆ ಬೆಱಗಾಗಿ ದು
ರ್ಮ್ಮಾನಗೊಂಡಿಹಿರೆಂಬ ಮರ್ಕಕರ್ಮೋತ್ಪಾಟನಕ್ಕರಸು ತಲೆವಾಗಿದ ॥೧೩॥

ನಿಂದಕರ ಗಿರಿ ಕೊಂಡೆಯದ ಕೋಂಟೆ ಕುಹಕದಗ
ಳಿಂದ ಸಂಧಿಸಿದ ತೆನೆ ವಿಥ್ಯದಾಳ್ವೇರಿ ಶಠೆ
ವೊಂದಿದಟ್ಟಳೆ ಕುಚಿತ್ತದ ಮಕರ ಬಿಬ್ಬಿಹಾಸ್ಯಪ್ರವರ್ತನೆಯ ದುರ್ಗ ।
ಬೆಂದು ಕೋಳ್ವೋಗಿ ಕಂಗೆಟ್ಟೋಡುತಿರೆ ಬಸವ
ನಿಂದು ನಸುನಗುತ ಕೊಂಡೆಯರ ಮನದಜ್ಞಾನ
ದಂಧಕಾರವ ತೊಡೆವುತಭಯವೀಯಲ್ಕೆಲ್ಲರುಬ್ಬಿ ಕೊಂಡಾಡುತ್ತಿರೆ . ॥೧೪॥

ಕೊಱಡ ಕೋನರಿಸಿ ಬಱಡ ಹಯನೆನಿಸಿ ಗದ್ದುಗೆಯ
ನುರುಪಿ ವಿಷವಂ ಧರಿಸಿ ಹುಲಿಯಂಕಱೆದು ದಧಿಯ
ಹರವಿಯಂ ನಿಲಿಸಿ ತೃಣಮಂ ನುಡಿಸಿ ಶಿಶುವಾಗಿ ಅಹಿವಿಡಿದು ಪದಕವೆನಿಸಿ ।

---

[1] ದು (ಕ.ಖ). [2] ರೆಂದು. [3] ಳಪ್ಪು (ಕ.ಖ.ಚ).

ಹರಿಯನಭದೊಳ್ನಲಿಸಿ ಚರಲಿಂಗಕೇಱಿದ್ದ
ತುರಗಮನ್ನಿತ್ತಕ್ಷಯಾತ್ಮಕನು ಮಣ್ಣಿತ್ತ
ಹರಿಸಿ ಗೆಲಿಸಿದನು ವಿಸ್ಮಯ[1]ಚೋಹದೊಟ್ಟೆಲ್ಲ[1]ಶಿರದೂಗಿ ಕಾಣಿವುತಿರಲು ॥೨೫॥

ವಸುಧೀಶ ಕೌತುಕಂಬಡುತೆದ್ದು ಬಸವೇಶ
ಗೆಸೆವರತ್ನಾಭರಣದಿಂದಲಂಕರಿಸಿ ಕರ
ವಿಸರುಹಂಗಳ ಸಂಪುಟಂಗೈದು ಬೀಳ್ಕೊಡಲ್ಕಾದಿರುದ್ರಾವತಾರ ।
ಅಸಮಮ್ಮೃಣ್ಮಯದಸಂಜೀವನ ವೃಷಭಸಹಿತ
[2]ಲೊ[2]ಸೆದು ಪರಮಾತ್ಮದಾನಂದಗೃಹಕ್ಕೈದಿಸಂ
ತಸದಿ ಜಂಗಮಪೂಜೆಗೈವುತಿಹನೆಂದು ನಂದೀಶಪ್ರಮಥಗೊರೆದನು ॥೨೬॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳದು ಬಸವ ಮಣ್ಣಿತ್ತ ಪಿಗೆ ಹರಿಸಿ ಮೆಱೆದ ಸಂಧಿ ॥೨೭॥

---

[1] ಹೇಮದೊಟ್ಟಲ್ಲಿ (ಕ), ಹೇಮದೊಟ್ಟಿಲಲ್ಲಿ (ಖ.ಚ). [2] ಲೊ (ಖ), ವ (ಗ.ಚ.ಛ).

ಮೂವತ್ತಾರನೆಯ ಸಂಧಿ

ಸೂಚನೆ—

ಎಸೆವ ಹರ್ಮ್ಯಗಳ ಧವಳಾರಿಸುವ ಚೂರ್ಣ ಭಾ
ವಿಸೆ ದುಗ್ಧದಂತಿರಲ್ಕರಸು ಹಾಸ್ಯದೊಳು ಪಾ
ಯಸವಿದಹುದೇ ಯೆನಲ್ಪ್ರತ್ಯಕ್ಷತುಯ್ಯಲಂ ಮಾಡಿ ತೋಱಿದ ಬಸವನು ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಅಕ್ಷರಾಕ್ಷರಮಂತ್ರಸಿದ್ಧನಚಲಿತಭಕ್ತಿ
ಸಾಕ್ಷಾದ್ವಯಂ ಅನಘನಜ್ಞಾನವೃತ್ತಿರ್ವಿ
ಪಕ್ಷ ದಕ್ಷಮಖರ್ಕ್ಷಯಕ್ಷೇಶಸಖ ದಕ್ಷನುತಗಾತ್ರ [1]ಮೋಕ್ಷದಕ್ಷ[1] ।
ಯ[2]ಕ್ಷಂದ[2]ಜಿನವಸನ ನುಕ್ಷಗಮನಾಧ್ಯಕ್ಷ
ರಕ್ಷೇಶ ಕರ್ಮಸಾಕ್ಷ್ಯಾಶುಶುಕ್ಷಣಿನಯನ
ಅಕ್ಷನಿಲಭಕ್ಷಭೂಷಣನದ್ವಿತಿಯ ಬಸವ ರಕ್ಷಿಸಲ್ನಿಮ್ಮ ಮುದದಿ * ॥೨॥

ಇಂದುಧರಶರಣರವಧರಿಸಿ ಬಿಜ್ಜಳಭೂಪ
ನೊಂದುದಿನ ಸಕಲಸಂಪದದಿನೋಲಗದೊಳಿರೆ
ಎಂದಿನಂತಲ್ಲಭವನವತಾರ ಬಸವೇಶ ಬರೆ ಕಂಡು ಚಿತ್ರತರದ ।
ಮಂದಿರ ಪ್ರಸಾದಗಳನಿರದೆ ಧವಳಾರಿಸುವ
ಛಂದಮಂ ನೋಳ್ಪ ಬನ್ನೆನುತಲೆದ್ದತಿಹರುಷ
ದಿಂದಲಾ ನೃಪತಿ ದಂಡಾಧೀಶನೊಳ್ಪಸಂಗಂಗೈವುತೈತರಲ್ಕೆ ॥೩॥

ಭೋಗದಾಗರವೊ ಸೊಬಗಿನಸೀಮೆಯೋ ಸುಖದ
ಸಾಗರವೊ ಸಿರಿಯ ನೆಲೆವನೆಯೊ [3]ಮಿಗೆ[3] ಸೌಭಾಗ್ಯ
ದಾಗಿನೊಬ್ಬುಳಿಯೊ ಚದುರಿನ ಬೀಡೊ ಮನ್ಮಥನ ಗರುಡಿಯೊ [4]ಸು[4]ದತಿರತ್ನ ।

---

[1] ದತ್ತಮೋಕ್ಷ (ಘ.ಗ). [2] ಕ್ಷವಾ (ಕ.ಖ). * ಇದು (ಜ) ಪ್ರತಿಯಲ್ಲಿಲ್ಲ.
[3] ಘನ (ಜ). [4] ಸುರರತ್ನದಾ.

ಪೂಗ ತೀವಿದ ಕರಂಡಗೆಯೊ ವಾಗ್ದೇವಿಯುನು
ರಾಗದಾಶ್ರಯವೊ ಭಾವಿಸಿ ಪೊಗಳ್ವಡತಿಚೋದ್ಯ
ಮಾಗಿ ಪೆಂಪೇಱಿ ಸೊಂಪಂಬೀಱುತಾ ರಾಜಸದನ ಕಣ್ಗೆಸೆದಿರ್ದುದು ॥೪॥

ಚಂಡಕರನುಗ್ರಕಿರಣಂಗಳುರವಣೆಯ ಮುಂ
ಕೊಂಡು ತಗುಳ್ವಂತೆ ಪ್ರಕಾಶಿಪ ಪ್ರಭೆಯನೊಳ
ಕೊಂಡೆಸೆವ ರತ್ನಗಳಸಂಗಳೆಂಭತ್ತೆಂಟುಸಾಹಸ್ರದಿಂದೊಪ್ಪುವ ।
ತಂಡದುಪ್ಪರಿಗೆಗಳು ಥಳಥಳಿಸುತಿರೆ ಚಿತ್ರ
ಖಂಡಣೆಯ ಮಾಕ್ತಿಕಸ್ತಂಭಮಂಟಪದೊಳೆಡೆ
ಗೊಂಡ [1]ರಜತ[1]ಪ್ರಕರವೇದಿಕೆಗಳಂ ಪರೀಕ್ಷಿಸುತ ಬರಲೊಂದೆಡೆಯೊಳು ॥೫॥

ಮಿಸುಪ [2]ಪೊಸ ಮಿಸುನಿಯಲಿ ಸಸಿನೆಸೆವ ರತ್ನಗಳ[2]
ಎಸರವನು ಕೇವಣಿಪ ಮಿಸುಪ ಚಿತ್ರದ ಭಿತ್ತಿ
ಎಸೆವ ಸಜ್ಜಾಗೃಹದ ಸೌಧಮಂ ಧವಳಾರಿಸುವ ಚೂರ್ಣಸಾರಸಿತವು ।
ಪೊಸಬಿಸಿಲಬಿಸಿಯ ಪಿಂಡಿದ ರಸವೊ ಕಲ್ಲೋಲ
ಮಸಗಿದಮೃತಾಬ್ಧಿಯೊಳ್ಬೆಳೆದ ಫೇನಪ್ರಕರ
ದೆಸಕವೆನಲೆಂಟುಸಾಸಿರ ರಜತಕೊಪ್ಪರಿಗೆಯೊಳ್ಸಾರಪೂ[3]ರಿ[3]ರಲ್ಕೆ ॥೬॥

ಭೂಪ ನಿಟ್ಟಿಸುತಚ್ಚರಿವಡುತ್ತೀಚೂರ್ಣ
ಏಪರಿಯೆನುತ ಬುಧಜನರ ಕೇಳಲವರು ಸ
ಲ್ಲಾಪದೊಳು ನಿಮ್ಮ ಸಿರಿವನಿತೆ[4]ಸ್ವ[4]ಮೋಹದಾತ್ಮಜೆಯಾಗಿ ವಿಪುಳತರದ ।
ರೂಪನೀಕ್ಷಿಪೆನೆನಲ್ಬಂದಮೃತಶರಧಿಯೆನ
ಲಾ ಪರಿಯ ನುಡಿಗೆ ಮನಗೊಡದೊಂದು ಕೃತ್ರಿಮಾ
ಳಾಪದಿಂದರಸು ಬಸವ[5]ನ ಸಿಕ್ಕಿಸು[5]ವೆನೆಂಬುಪಾಯ ದ್ಯೋಚನೆಯೊಳಿರ್ದ ॥೭॥

ಮಾತಿನ ಕುಚೇಷ್ಟೆಯಂ ಬೆಳೆಸುವತಿಕುಹಕಾನ್ವ
ಯಿತರು ಮಂಚರಸರೊಡನಾಡಿಗಳ್ನೆರೆದು ದು
ರ್ನೀತಭಾವದೊಳೆಲ್ಲರುಬ್ಬುಬ್ಬಿ ಭುಜಹೊಯ್ಯುವುತುರವಣಿಸಿ ಬಂದರಸಿಗೆ ।
ಏತ ತಲೆವಾಗುವೊಲ್ಲ ಮಿಸಿಕ್ಷುವಾಟಿಯ ಕು
ಜಾತಿಜಂಬುಕನಿವಹ ಹೊ[6]ಕ್ಕು[6] ರಸಗೊಂಡೊಳು
ವಾತುರದಿ ತಡಬಡಿಸಿಕೊಂಡು ನಾಚದ ತೆಱದಿ ಖಳನಿಕರ ನಿಂದಿರ್ದುದು ॥೮॥

---

[1] ರತ್ನ (ಜ). [2] ವರರಶ್ಮಿಯು ಜ್ವಲಿಪನವರತ್ನಗಳ (ಜ). [3] ದಿ (ಗ.ಪ.ಧ).
[4] ಶ್ವರ (ಚ.ಕ), ಸ್ವರ (ಖ). [5] ನಂಬರಿಸು (ಕ). [6] ಕ್ಕ (ಧ).

ಭೂಪ ಮೇಣಪಹಾಸ್ಯದಿಂ ಚೂರ್ಣಸಾರಸಿತ
ಏಪರಿಯೊಳಿರ್ದಪುದು ಮಂಚಿಮರಸರೆ ಎನ
ಲ್ರೂಪಿಸಲ್ಕ[1]ವಿ[1]ಗಳಾಗೆಲ್ಲೆಥಾರ್ಥವ ಚಿತ್ತಗೊಡು ಬಸವರಾಜ ತನ್ನ ।
ಕೂಪರಂಗುಲಿಗಜಿದಮೃತದೊಲಿರಲಹುದೆಂಬ
ಕಾಪಥರ ನುಡಿಗೇಳುತರಸು ಬಸವನ ನೋಡು
ತಾ ಪಯವಿದಹುದೆ ಎನಲಹುದು ತಪ್ಪದದೆಂದ ಭಾವಜ್ಞಬೊಮ್ಮಬಸವ ॥೯॥

ಪುಲಿಗೋಣನಂ ವೃಷಭರೂಪುಗೈದತ್ಯುಗ್ರ
ಪುಲಿಗಜಿದು ಸುರೆಯನಮೃತವಮಾಡಿ ತೊಗರಿಯಂ
ಸಲೆ ರತ್ನವೆನಿಸಿ ಹಾಲಾಹಲವ ನೆರೆ ಸುಧೆಯ ಮಾಡಿದ ಮಹಾತ್ಮ ನಿನಗೆ ।
ಕುಲವಲ್ಲದನ ಬೆರಳು ಪಯವಾದಡಿದನು ತು
ಯ್ಯಲಮಾಡು ಮಾಡದಿರ್ದಡೆ ಹಿಂದೆ ನೀನಡೆದ
ಕಳೆಯೆಲ್ಲ ಸಟೆಯರಾಶೆನುತರಸು ಬಸವದಂಡಾಧಿಪನ ಮೂದಲಿಸಿದ ॥೧೦॥

ದುಸ್ತರಕುಮಂತ್ರೋಗ್ರತರ ಭೂಮಿಪನ ಗರ್ಭ
ಹಸ್ತಿಮಸ್ತಕಸಿಂಹ ಬಸವಭಾಳಾಂಬಕಂ
ಹಸ್ತಪರುಷಂಗೈಯ್ಯಲೊಡನೆ ಪೂರ್ವಳಿದು ನಂಜಮೃತವಾದೊಲ್ಸುಣ್ಣವು ।
ಸ್ವಸ್ತಪಾಯಸವಾಗಿರಲ್ಕಂಡು ನೃಪನುಭಯ
ಹಸ್ತದಿಂ ವಿನಮಿಸುತ್ತಿರೆ ಸರ್ವಜನರು ನಲಿ
ದು ಸ್ತುತಿಸೆ ಮಂಚರಸ ತಲೆಗುತ್ತಿ ತುಯ್ಯಲ ಪರೀಕ್ಷಿಸಿ ನಿರೀಕ್ಷಿಸುತಿರೆ ॥೧೧॥

ಮೃದುನಯಸುಧಾಳವಾಸನೆ ಸೊಂಪು ಪೆಂಪದಟಿ
ಹದನತಿವಿಶೇಷಗುಣ [2]ಗದಗಡಿಕೆ[2]ಸಿತಬಂಧ
ಮಧುರರಸರೂಪೊಳಹುದಪ್ಪ ಕಳೆಯಂತಿವಜೊಳೇನುವುಂ ಕುಂದಿಲ್ಲದೆ ।
ಸುಧೆಯ ಸ[3]ವ್ವ ತಿ[3] ಪರಡಿ ಚಲಿಪಾಲು ಮೊದಲಾದ
ವಿದಿತಬಹುಪಾಯಸಕ್ಕೆಲ್ಲ ಧಿಕತರವೆನಿಸಿ
[4]ಮುದದಿ ಬಸವನ ಹಸ್ತಪರುಷದಿಂದೊಗೆದ ತುಯ್ಯಲನೆಲ್ಲರಾರೋಗಿಸೆ[4] ॥೧೨॥

ಕರೆಸಿದನು ತನ್ನಸೇವಕರ ಸಂದೋಹಮಂ
ತರತರದಿ ಕುಳ್ಳಿರಿಸಿ ನಿಜಭಕ್ತಿನಿಷ್ಠೆಯಾ
ತುರದೊಳತ್ಯಧಿಕ ಪಾಂಡುವಿನಿಂದೆ ರಂಜಿಸುವ ವಿಮಲ ಚೂರ್ಣದ ತುಯ್ಯಲ ।

---

[1] ಲಿ (ಫ). [2] ಗಂಧಗಧಿಕೆ (ಕ), ಗಧಗಧಿಕೆ(ಫ). [3] ವಟ್ಟು (ಫ), ವ್ವಳೆ (ಕ).
[4] ದುದ ಕಂಡು ಜನರಿಗುಣಬಡಿಸೆಂಬ ನೃಪನ ಸಂದೇಹ ತಿಮಿರಾರ್ಕ ಬಸವ (ಜ).

ವರಕರದಿ ಮೊಗೆಮೊಗೆದು ಪರಿಪರಿದು ನೀಡಲಾ
ಉರುತರಶಿವಾಂಕಿತರ್ಸ್ವೀಕರಿಸುತಾ ಸವಿಗೆ
ಪಿರಿದೊಲಿದು ಶಿರದೂಗುತಿರಲದಂ ಕಂಡು ಭೂಮೀಶನಿ'ನಿದೆಹಗೆಹಗನೆ[1] ॥೧೩॥

ಇನಿದು ಶಿವಗವ್ವೆಯಿತ್ತ ಮೊಲೆವಾಲಿಗಿಂ
ತಿನಿದು ಕೊಡಗೂಸು ಶಿವಗಿತ್ತ ಚಿಲಿಪಾಲಿಗಿಂ
ತಿನಿದೀಶ್ವರಂಗೆ ಚೋಳವ್ವೆ ತಾ ಸವಿವುತಟ್ಟಾ ಬಿಸಿಯ ಹೊಸಹುಗ್ಗಿಗಿಂ ।
ತಿನಿದು ನಿಂಬವ್ವೆ ಹರಗಿಕ್ಕಿದ ಸುಭೋಜ್ಯಕಿಂ
ದಿನಿದು ಚೋಳಂ ಮೃಡಗೆ ಯಿತ್ತ ಮೃಷ್ಟಾನ್ನಕಿಂ
ದಿನಿದು ಮಾದರ ಚೆನ್ನನೊಡನುಂಡ ಸವಿಗೆ ಸರಿಮಿಗಿಲೆನಲ್ಕಹುದರಸನು ॥೧೪॥

ಅಂತುಮಲ್ಲಿದುವಪಕ್ಷವೆನುತ ತನ್ನಾತ್ಮಜರ
ಸಂತತಿಯ ಯೋಗ್ಯರಂ ಕರೆಸಿ ಕುಳ್ಳಿರಿಸಿ ಪರಿ
ಪಂಕ್ತಿವಿಡಿದೋರಣಂಗೊಳಿಸಿ ನೀಡಿಸುತಿರಲ್ಕಂಡು ಸವಿಗೊಂಡು ಶಿರವ ।
ಸಂತಸದಿ ತೂಗಿ ತುಯ್ಯಲ ಸವಿಗೆ ಸರಿಯಲ್ಲ
ಪಿಂತಮರರಾಹಾರಕೈದೆ ಸರಿಮಿಗಿಲೆನ
ಲ್ಕಂತವರ ನುಡಿಗೇಳುತರಸು ಶಿರದೂಗುತಚ್ಚರಿವಡುತ ನುತಿಸುತೆಂದ ॥೧೫॥

ಹಿಂದೆ ಹಾಲಾಹಲವನಮೃತವಂ ಮಾಡಿ ಗಣ
ವೃಂದಕುಣಬಡಿಸಿದಂತೀ ಚೂರ್ಣಗುಣವನಳಿ
ದಿಂದು ಪಾಯಸವ ಮಾಡೆಲ್ಲರಂ ತೃಪ್ತಿವಡಿಸಿದ ಮಹಾಮಹಿಮ ನಿನಗೆ ।
ಇಂದುಧರ ಸರಿಯಲ್ಲಪೆನುತರಸು ಬಸವಂಗೆ
ವಂದಿಸುತ ಬೀಳ್ಕೊಟ್ಟು ಕಳುಪಲಾ ಶರಣಗಣ
ವೃಂದದೊಳ್ಗೃಹ ಹೊಕ್ಕನೆಂದು ನಂದೀಶ ಮುದದಿಂದ ಪ್ರಮಥರ್ಗೊರೆದನು ॥೧೬॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಬಸವ ಸುಣ್ಣ ಪಾಯಸ ಮಾಡಿ ಮೆಱೆದ ಸಂಧಿ ॥೧೭॥

———

[1] ನದೆಹೆಂಗೆಹೆಂಗೆನೆ (ಗ.ಘ.ಥ), ನಿದೆಹೊಗೆಹೊಗೆನೆ (ಕ.ಖ).

ಮೂವತ್ತೇಳನೆಯ ಸಂಧಿ

ಸೂಚನೆ—

ಕಟಿಕಿಯಿಂ ಧರಣೀಶ ಪರಮುಂಡನಪ್ಪ ವಾ
ಕ್ಪಟುತರಾನ್ವಯಿತಭಟ್ಟಂಗೆ ಶಿವಲಾಂಛನವ
ನಟಿಸಿ ದಂಡೇಶನಂ ಕರೆಸಿತೋಱಲ್ಕವಯವಗಳಿತ್ತು ಮೆಱೆದ ಬಸವ ||

ಶ್ರೀಮದಖಿಳಾಗಮಾರ್ಣವಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ |
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ||೧||

ಪುತ್ರನಂ ಪ್ರಹರಿಸಿದ ಪಿತಗಿತ್ತ ಪದವ ಸ
ತ್ಪುತ್ರಪಿತನಂ ವಧಿಸಲಿತ್ತಗಣಪದವ ತಾ
ಪುತ್ರನಾಗಿತ್ತನೀರೇಳು ಭುವನಂಗಳಱಿಯಲು ಸುಮುಕ್ತಿಯ ಪದವನು
ಪತ್ರವಾಹನನ ಪುತ್ರನ ವಪುವ ದಹಿಸಿ ಶತ
ಪತ್ರಪುತ್ರನ ಮೂರ್ಧ್ನಪಾತ್ರೆಯಂ ಸಲೆ ತಾಳ್ದ
ಮಿತ್ರ ಕೈರವಮಿತ್ರ ಹರಿಮಿತ್ರನೇತ್ರನವತಾರ ಬಸವೇಶ ಶರಣು * ||೨||

ಅವಧರಿಸಿ ಪ್ರಮಥನಾಯಕರು ಸದ್ಭಕ್ತಿಯಿಂ
ನವಕಥಾಳಾಪದಿಂ ಭೂಪತೀಶರೊಳೆಸೆವ
ರವಿಸೋಮಕುಲದಖಿಳರಾಜರ ಯಶಾಂಗನೆಯ ಮುಖವನಜ ಹಂಸನೆನಿಪ |
ವಿವಿಧಪ್ರತಾಪಾಂಕಿತದ ಬಿರುದಿನಿಂ ಮೆಱೆವು
ತವೆ ರಾಜಠಕ್ಕುರನೆನಿಪ್ಪೊರ್ವ ಭಟ್ಟ ಮಾ
ಳವದೇಶದರಸಿನಿಂ ಪರಮುಂಡನಾಗಿ ಕಲ್ಯಾಣಪುರಕೈತಂದನು ||೩||

ಕನಕದಂಡಿಗೆ ಛತ್ರಚಾಮರಗಳೊಪ್ಪದಿಂ
ಘನರಾಜಸೇವ್ಯರೀರಾರುಸಾವಿರಭಟ್ಟ
ಜನರೊಗ್ಗಿನಿಂ ಬಿಜ್ಜಳೇಂದ್ರನೋಲಗದಿದಿರ ಭಿತ್ತಿಮಱೆಯಲ್ಲಿ ನಿಂದು |

---

* ಇದು (ಜ) ಪ್ರತಿಯಲ್ಲಿಲ್ಲ.

ಅನುನಯದಿ ಚಾಳೋಕ್ಯರಾಜರಾಜಾನ್ವಯದ
ಜನನವಾಧಿಕ್ಯಮನಶೇಷಮಾಗ್ಯೆದೆ ಭೋ
ರೆನೆ ಬಿಂಕಬಿರುದುಗಳನೆತ್ತಿ ಕೈವಾರಿಸಲ್ತೊಡಗಿದನದೇನೆಂಬೆನು ॥೪॥

ಧೀರಬಿಜ್ಜಳನ ಸ್ವರೂಪಮಂ [1]ವಿಮಲಶೃಂ
ಗಾರಮಂ ವೀರಮಂ ವಿತರಣಮನಧಿಕಗಾಂ
ಭೀರ್ಯಮಂ ಮೆಱೆವ ಷಣ್ಣವರಾಜಲಕ್ಷಣದ ಚೌಷಷ್ಠಿಭೇದಂಗಳ[1] ।
ಚಾರುತರ ಛತ್ತೀಸರಾಜಪಾತ್ರೆಗಳ ವಿ
ಸ್ತಾರಸಪ್ತೋಪಾಯಮಂ ಪಂಚತಂತ್ರಗಳ
ಸೇರುವೆಯ ರಾಜಷೋಡಶಕಳಾಭೇದಗಳನೆತ್ತಿ ಹೊಗಳುತ್ತಿರ್ದನು ॥೫॥

ಪಿಂಗದೆ ಸುಲಕ್ಷಣಾರ್ಥಂಗಳಿಂದೆಸೆವ ಕಂ
ದಂಗಳಿಂ ಛಂದಪೂರಿತವಾದ ಗದ್ಯಪ
ದ್ಯಂಗಳಿಂ ಚೂರ್ಣಿಕೆಗಳಿಂದಲಂಕಾರಸಂಯುಕ್ತಭಾಷಾಂತರಗಳ ।
ಸಾಂಗದಿಂ ಮೆಱೆವ ವಸ್ತುಕ ವರ್ಣಕಪ್ರಬಂ
ಧಂಗಳಿಂ ನವರಸದಿನಕ್ಷರಬ್ರಹ್ಮವೇ
ಅಂಗಗೊಂಡಂತೆಯಾ ರಾಜಠಕ್ಕುರ ಬಿಜ್ಜಳೇಂದ್ರನಂ ಕೀರ್ತಿಸುತಿರೆ ॥೬॥

ಶ್ರೋತ್ರರಸ ಕರ್ನಮಂ ತೀವಲರಸೊಲಿದು ಸ್ವ
ಗಾತ್ರದಿಂದೆಸೆವ ರತ್ನಾಭರಣಗಳನುಚಿತ
ಪಾತ್ರವೆಂದಾ ಭಟ್ಟನಂ ಕರೆಸಲೋರ್ವನ ಭುಜಾಗ್ರದಿಂ ಬರೆ ಕಾಣುತ।
ಧಾತ್ರಿಪತಿ ವಿಸ್ಮಯಂಬಡುತಿದೇನ್ಯೆ ನಿನ್ನ
ನೇತ್ರ ನಾಸಿಕ ಕರ್ಣ ಕರ ಚರಣವಿಲ್ಲವೆನೆ
ಧಾತ್ರವಿಗೆ ರಾಜಠಕ್ಕುರ ತನ್ನ ಪರಿಭವವ ಪೇಳಿದನದೆಂತೆಂದೊಡೆ ॥೭॥

ಅವನಿಪಾಲಕ ಬಿಜ್ಜಳೇಂದ್ರ ಚಿತ್ತೈಸು ಮಾ
ಳವದೇಶದಧಿಪ ಮಾಳವರಾಯ ತನ್ನ ಸ
ದ್ವಿವಿಧಪ್ರತಾಪಾನ್ವಯವ ಕೀರ್ತಿಸಲ್ಕೊಲಿದು ನಲದು ಸಪ್ತಾಂಗವಿತ್ತು।
ಹವಣಿಸದೆ ಸಹಭೋಜನಕೆ ಕರೆಯಲೊಲ್ಲೆನೆನೆ
ಎವಗಿಂತಲಧಿಕನೇ ಯೆನ್ನಲಹುದು ಭಟ್ಟ ಸ
ರುವರ ನುತಿಸಿ ಕೈಯೊಡ್ಡಿ ಬೇಡುವವನೆಂತಧಿಕನೊ ಎಂದು ನೃಪತಿ ಕೇಳೆ ॥೮॥

---

[1] ವಿಪುಲಗಾಂಭೀರ್ಯಮಂ ವೀರಮಂ ವಿತರಣಮನಖಿಳ ಶೃಂಗಾರಮಂ ರಾಜಷಾ-
ಡ್ಗುಣ್ಯಮಂ ಮೆಱೆವ ಸಾಂಗಿಕರಾಜಲಕ್ಷಣಗಳ (ಜ).

ಆದಿಯಲ್ಲೀಶಂ ಪುರತ್ರಯವ ಜಯಿಸಿ ಸಂ
ಮ್ಮೋದದಿಂ ನಾಲ್ದೆಸೆಯ ನಿಟ್ಟಿಸೆ ಚತುರ್ಮುಖದೊ
ಳಾದ ಚಂಡವಿಡಂಗವಾಣೀವಿಲಾಸರಭವನ ನುತಿಪ ರಸನೆಯಲ್ಲಿ।
ಸಾದರದಿ ಹರಿಯಜರುಗಳ ನುತಿಸೆ ಶಿವ ಶಪಿಸೆ
ಮೇದಿನಿಗೆ ಭಟ್ಟರಾದಗ್ರಾಂಶರಾವೆನಲ್
ಕ್ರೋಧಿಸೆನ್ನವಯವವ ಮಾಳವೇಂದ್ರಂ ಖಂಡಿಸಿದನೆಂದು ಬಿನ್ನೈಸಲು ॥೯॥

ಧರಣಿಪತಿ ಕೇಳ್ದು ಚಿಂತಾಂಗನೆಯೊಳೊಱಗೆ ಮಂ
ಚರಸ ಕೈಮುಗಿದದೇಂ ಜೀಯಯೆನಲೀ ಭಟ್ಟ
ನಿರವಗಂಡತಿಕ್ಲೇಶಮೂಡಿತೆನೆ ಚಿಂತೆ ಬೇಡಿದಕೊಂದುಮಂತ್ರೋಕ್ತಿಯ।
ವಿರಚಿಪೆನದೆಂತೆಂದೆನಲ್ಕೆ ಬಸವರಸರಂ
ಕರೆಸಿ ತೋಱಲ್ಕೆ ತನ್ನಯ ಮಹಿಮೆಗಾಣ್ಬುದೆನ
ಲರಸೆಂದನೀತ ಜಂಗಮವಲ್ಲದಾತನಂಗೀಕರಿಪ ಪರಿಯೆಂತೆನೆ ॥೧೦॥

ಅರಿದೇನು ನೃಪತಿ ಬಹುಧನ ಮುಟ್ಟದೆಮ್ಮ ಭೂ
ಸುರನ ಮಾಳ್ಪೊಲು ವೇದಮಂತ್ರಗಳ ಗೊಡವಿಲ್ಲ
ಮರಗಾಯ್ಗಳಿಡಿದ ತಿಪ್ಪೆಯಬೂದಿ ಮುಱಿದಕೋಲೊಡೆದೋಡು ಸಾಕೀತಗೆ।
ಅರೆವೀಸಮುಟ್ಟದೆನಲರಸು ನಸುನಗುತ ಚಾ
ತುರ್ಯದಿಂ ನಿನ್ನಮನ ಬಂದಂತೆ ಮಂಚರಸ
ವಿರಚಿಸೆಂದೆನಲು ಮರ್ಕಟಗೆ ಬೆಸನಿತ್ತಂತೆ ಕೃತ್ರಿಮಕೆ ಮನದಂದನು ॥೧೧॥

ಓಡುಗಟ್ಟಿಗೆ ಮುಱುಕಿಗೆಡೆಯಿಲ್ಲದೊಂದಿನಿಸು
ತೀಡಿ ಬೂದಿಯನು ಎಡೆಯೆಡೆಗೆ ಮರಗಾಯ್ಗಳಂ
ಜೋಡಿಸಿ ಶಿಲಾಲಿಂಗಮಂ ಕೊರಳೊಳುಱಿಬಿಗಿದು ಕುಳ್ಳಿರಿಸಿ ದಂಡೇಶನ।
ನಾಡೊಡೆಯ ಕರೆಸಿ ತೋಱಲ್ಕೆ ಶಿವಲಾಂಛನಾ
ರೂಢತೆಯ ಕಾಣುತ್ತ ಭಾವಜ್ಞ ಭಕ್ತಿರತಿ
ಗೂಡಿ ಮಿಗೆ ಸಾಷ್ಟಾಂಗನತ್ಪ್ರೇಮದಿಂದ ನಮಿಸಲ್ಕೆ ನಸುನಗುತ ನೃಪನು ॥೧೨॥

ಎಲೆ ಮಂತ್ರಿದೇನು ನಿನ್ನಧಿಕತ್ವಮಂ ಬಿಟ್ಟು
ಹಲಬರಂ ಕೀರ್ತಿಸುವ ಹೀನಾಂಗಭಟ್ಟಗಿಂ
ತೊಲಿದು ಮಿಗೆ ಅತಿರೇಕಭಕ್ತಿಯಿಂತೆಱಗಬಹುದೇ ಎನಲ್ಬಸವೇಶನು।
ನೆಲದೊಡೆಯ ಕೇಳ್ ಜ್ಞಾನಹೀನಾಂಗಿಗಳ್ಗೆ ನಿ
ರ್ಮಲಿತಶಿವಲಾಂಛನದ ನಿಜದೋಱಬಂದ ಸ
ಲ್ಲಲಿತಗೂಢಾಂಗದಭವನ ನೋಡು ನೀನೆನುತ್ತೈಯ್ಯನ ಸಮೀಪಕ್ಕೈದಿ ॥೧೩॥

ಗುರುಮೂರ್ತಿದೇನಯ್ಯ ನಿನ್ನ ಬೆಡಗಿನ ಸೂತ್ರ
ದಿರವ ಮಿಗೆ ನಟಿಸುವೆನೆನುತ್ತೆ ಬಾಹ್ಯದಿ ತೋರ್ಪ
ಕರಣಗಳನಭ್ಯಂತರದೊಳಿಟ್ಟು ಎನ್ನಮನಮಂ ನೋಡ ಬಂದೆ ನಿನ್ನ
ಎರವಿನ ಕೃತಕ ಕಿಂಕರನೊಳೇಕೆನುತ ಮಗುಳ್ದು
ಶರಣೆನುತ ಕರಪರುಷನಂಗೆಯ್ಯಲಾಕ್ಷಣಂ
ಕರಚರಣ ಕರ್ಣ ನಾಸಿಕ ನೇತ್ರಗಳ್ಜನಿಸಿ ತೊಳಗಿ ಬೆಳಗುತ್ತಿರ್ದವು ॥೧೪॥

ಕೇಡಿಗತನದಿ ಬಿಡದೆ ನೆಗಳ್ದ ಬಲುಕೃತ್ರಿಮದ
ಜೋಡಣೆಯು ಪಟಲಮಂ ಪಱಿದವಯವಂಗಳಂ
ಕೂಡಿಪುಟ್ಟಿಸಿ ತಪಸ್ವಿಯ ಮಾಡಿದುದ ಕಂಡು ನೃಪನ ಚಿತ್ತಕ್ಕೆ ಬೆಱಗು ।
ಮೂಡೆ ದುರ್ಜನರ ಮುಖ ಬಾಡೆ ಸಜ್ಜನರು ನಲಿ
ದಾಡೆ ಭಕ್ತರ್ಗೆ ರತಿಗೂಡೆ ಅರಿಸಮಯ ಕೊಂ
ಡಾಡೆ ಶಿವಸಮಯ ಮುಂಡಾಡೆ ಆ ಸಭೆಯ ಜನನೋಡೆ ನಾಡೊಡೆಯ ನಮಿಸೆ ॥೧೫॥

ಭಾಪುರೇ ನೃಪನತಿಕುಚೇಷ್ಟಾದ್ರಿಶತಕೋಟಿ
ಭಾಪುರೇ ತ್ರಿಪುರಹರನತ್ಯುಗ್ರತರಪಾಟಿ
ಭಾಪುರೇ ಅಭವನಂದಕರ ಶಿರದೋಟಿ ಲಾವಕರುಗಳ ಬೆನ್ನಚಾಟಿ ।
ಭಾಪುರೇ ಪರಮಸದ್ಭಕ್ತಿಯ ಸುಫಲವಾಟಿ
ಭಾಪುರೇ ಶರಣಸನ್ಮಾರ್ಗ ದುತ್ಸಹನಾಟಿ
ಭಾಪುರೇ ಹರಿಯಜರ್ಸುರರಸುರರಿಗೆ ಮೇಟಿ ನರಮೃಗೋತ್ಕುಲ ವಿಘಾಟಿ ॥೧೬॥

ನೇತ್ರಮಂ ಕಾಳಿದಾಸಗೆ ಮಯೂರಂಗೆಸೆವ
ಗಾತ್ರಮಂ ಬಾಣಂಗೆ ಶೋಭಿತಕರಂಗಳಂ
ಸ್ತೋತ್ರಕೊಲಿದಿತ್ತಭವನಂತ[1]ಲ್ಲ ಯೋ[1]ಚಿತದೊಳೀವಮಳಭಸ್ಮಾಂಗಿಗೆ ।
ಶ್ರೋತ್ರಪದ ಕಣ್ಕರಂ ಘ್ರಾಣಗಳನಿತ್ತ ಸ
ತ್ಪಾತ್ರದಾನವಿನೋದಿ ಭಕ್ತಸಂಜೀವ[2]ನಂ[2]
ಸೂತ್ರಧಾರೀ ಬಸವಗೆಣೆಯಿಲ್ಲವೆಂದೆನುತ ಚೆನ್ನಬಸವಾಂಕನುಸುರ್ದ ॥೧೭॥

ಅಂಬಿಕಾವರರೂಪ ಬಸವನಲ್ಲದೊಡೀತ
ಗಿಂಬುಗೊಂಬುವೆ ಅವಯವಂಗಳೆನುತ ವಿಭೂಷ
ಣಾಂಬರಗಳಿತ್ತು ನೃಪ ಸಚಿವನಂ ಬೀಳ್ಕೊಡಲ್ಕವಗೆ ಲಿಂಗಾಂಗಕಳೆಯ ।
ತುಂಬಿ ಮಾಳವದೇಶದಾದಿಭಟ್ಟಯ್ಯನವ
ರೆಂಬ ಹೊಸನಾಮಗೊಟ್ಟಯ್ಯಸಹಿತಾ ಬಸವ
ಡಂಬರದಿ ಗೃಹಪೊಕ್ಕನೆಂದು ನಂದೀಶ ಮುದದಿಂದ ಪ್ರಮಥರ್ಗೊರೆದನು ॥೧೮॥

---

[1] ಲ್ಲಯಾ (ಘ). [2] ನದ (ಖ.ಕ), ಘನ (ಗ).

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದ ಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಬಸವ ಭಟ್ಟಗವಯುವವಿತ್ತು ಮೆಱೆದ ಸಂಧಿ ॥೧೯॥

ಮೂವತ್ತೆಂಟನೆಯ ಸಂಧಿ

ಸೂಚನೆ—

ಅರಸುಸುತನ್ನರಸಿಯರ ಚರರೂಪಗೈಸಿ ಬಸ
ವರಸರಂ ಕರೆಸಿತೋಱಲ್ಕೆ ಸದ್ಭಾವಕಳೆ
ವೆರಸಿ ನಮಿಸುತ್ತವರ್ಗಳಂ ಜಡೆಯ ಬೇರ್ವಱುಸಿ ನಿಜಜಂಗಮವ ಮಾಡಿದ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣವಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಕಂಜನೇತ್ರನ ನೇತ್ರಕಂಜಪೂಜಿತಪದಂ
ಕಂಜಹಿತ ಪವನಹಿತ ಕಂಜಾಹಿತಾಂಬಕಂ
ಕಂಜಜೋಪರಿಮೂರ್ಧ್ನಿ ಕಂಜಾಂಕಪಾಣಿ ಕಂಜಾಲಯಾಪತ್ಯದಹನ ।
ಕಂಜಮಿತ್ರಾರ್ಭಕ ಮದಾಪಹರ ಸುರವರ್ತ್ಮ
ಕಂಜಕುಂಜರ ದೈತ್ಯಭಂಜನ ಸುಭಕ್ತಹೃ
ತ್ಕಂಜಲಸಿತನೆ ಮೃಡವತಾರ ಮೃತ್ಯುಂಜಯು ನಿರಂಜನ ಬಸವ ಪಾಹಿ ಮಾಂ॥೨॥

ಸಾರಸದ್ವೀರಮಾಹೇಶ್ವರಸ್ಥಳದ ನಿಜ
ಕಾರಣಿಕಶರಣನಿಕುರುಂಬ ಲಾಲಿಪುದು ಮಾ
ರಾರಿಯವತಾರ ಮೃತ್ಯುಂಜಯು ನಿರಂಜನ ಜಗತ್ರಯಾಧಾರ ಧರ್ಮಸ್ವರೂಪ ।
ಪಾರಮಾರ್ಥಿಕ ದಿವ್ಯಮೂರ್ತಿಯಹ ಭಕ್ತಿಭಂ
ಡಾರಿ ಬಸವಣ್ಣದಂಡನಾಯಕನು ಸತ್ಕ್ರಿಯಾ
ಚಾರಮಾರ್ಗದಿ ವಿರಾಜಿಸುತಿರ್ಪನತಿಶಯುವೆನಿಪ ವಿಮಲಶುಭಪುರಿಯೊಳು ॥೩॥

ಧೀರನಚಲಿತಗುಣಾಭರಣಪ್ರಸನ್ನ ಶೃಂ
ಗಾರಸಾಹಿತ್ಯವಿದ್ಯಾಪ್ರೌಢನಸಹಾಯ
ಶೂರ ದಾನಕಳಾಭಿರಾಮನಾತ್ಮಜರೂಪ ಸಾರಸಂಗೀತಲೋಲ ।

ಸೂರಿಜನಮುಖವನಜಹಂಸ ಸತ್ಸುಖಕಳಾ
ಪೂರಸಾಗರ ಸನಾಗರಸತ್ಯಸಲ್ಲಾಪ
ಚಾರುರವಿಕುಲತಿಲಕನೆಂದೆನಿಪ ವೀರಬಿಜ್ಜಳನೃಪತಿ ಪೆಂಪೆಸೆವುತ ॥೪॥

ಒಂದು ದಿವಸಂ ಸ್ವಭಾವದಿ [1]ರಾತ್ರಿಯೊಳ್ಕಪಟ[1]
ದಿಂದ ನೃತ್ಯವ ನಿರೀಕ್ಷಿಪತಿಶಯಸುಖಲಹರಿ
ಮುಂದುವಱಿಯಲ್ಸುವರ್ಣದ ಭಿತ್ತಿ ರತ್ನಗಳಸದ ನಾಟಕಾಲಯಕ್ಕೆ ।
ಬಂದು ಕರೆಸಿದ [2]ಕುಚೇಷ್ಟರನಖಿಲ ವಿನಿಯೋಗ[2]
ವೃಂದಮಧ್ಯದಿ ಸುವಿದ್ಯಾಪ್ರೌಢಿಯೊಳ್ಕಳಾ
ನಂದಪೀಠಾಗ್ರದಿಂದೆಸೆವ ಸಂಗೀತಾಮೃತಾಬ್ಧಿವರ್ಧನಚಂದ್ರನು ॥೫॥

ಕವಿಗಳ ಸಮೂಹ ಗಮಕಿಗಳ ಕುಳ ವಾದಿಗಳ
ನಿವಹ ವಾಗ್ಮಿಗಳ ಪ್ರಕರ ವೇದಶಾಸ್ತ್ರಾಗ
ಮವ ಬಲ್ಲವರ ಪುಂಜ ದತ್ತಿಲಮತಂಗಕೋಹಳರಾದಿ ಭರತಂಗಳ ।
ವಿವರಿಸುವ ಚತುರಾಂಗನೆಯರಾದಿಯಾದಿವರ್
ಪ್ರವರನೂತನಭೂರಿವಿದ್ಯೆಗಳ ನೆರೆ ಬಲ್ಲ
ನವರಸಂಗಳ ಸಮೇತದೊಳೆಸೆವುತಿಹ ವಿಳಾಸಿನಿಯರ ಸಮೂಹದೊಳಗೆ ॥೬॥

ವೀಣೆ ತುಂಬುರವೀಣೆ ಗಜವೀಣೆ ಕೈಲಾಸ
ವೀಣೆಯಂಬರವೀಣೆ ಪೆರ್ಬೀಣೆ ಸಾರಂಗ
ವೀಣೆ ಕಿನ್ನರವೀಣೆಯುಂ ರುದ್ರವೀಣೆ ಕಚ್ಛಪವೀಣೆಯರ್ಧನಾರಿ ।
ವೀಣೆ ಮೊಲ್ಲೆಯವೀಣೆ ದ್ರುಹಿಣವೀಣೆ ಪಿನಾಕಿ
ವೀಣೆ ರಾವಣಹಸ್ತ ಮಹತಿ ಮೊದಲಾದ ಬಹು
ವೀಣೆಯಿಂದೆಸೆವ ವೀಣಾವಾದ್ಯದೇಣಾಕ್ಷಿಯರುಗಳೋಲೈಸುತಿರಲು ॥೭॥

ಚತುರಶ್ರಮಿಶ್ರಖಂಡಂತ್ಯಶ್ರನಾಲ್ಕರೊಳು
ದ್ರುತ ಲಘು ಗುರು [3]ಪ್ಲುತ ಚತುಷ್ಟ[3] ಯಾದಿಕ್ರಮೋ
ನ್ನತಕಾಲಮಾರ್ಗಕ್ರಿಯಾಂಗ ಕಳೆ ಮೊದಲಾದ ದಶವಿಧಪ್ರಾಣಂಗಳ ।
ಮತದೊಳು ಪ್ರಸ್ತಾರಜಾತಿಯುಪಜಾತಿಗಳ
ನತಿವಿವೇಕದೊಳಱಿದು ನೂಱೊಂದು ತಾಳಮಂ
ಶತಸಹಸ್ರ ಮುಖದಿಂದಲೊತ್ತುತಿಹ ತಾಳಧರಾಂಗನೆಯರೊಪ್ಪಿರ್ದರು ॥೮॥

---

[1] ಕೃತ್ರಿಮಾಳಾಪ (ಜ). [2] ಕುಮಂತ್ರಿಗಳ ಭೋಗಾಂಗನೆಯ (ಜ). [3] ಅಪ್ಲುತ ನುಷ್ಪಿ (ಖ), ಅಪ್ಲುತಚುಷ್ಪಿ (ಕ).

ಮಿಸುಪ ನವರತ್ನಖಚಿತೋನ್ನತಮೃದಂಗಗಳ
ವಿಸರದೊಳ್ಕನಕವಾಸಂಗಳ ಸಮೂಹದೊ
ಳ್ಪಸರಿಸುವ ವರ್ನಗಹಳೆಗಳುಪಾಂಗಗಳಿಂದ ಮೋಹನಕಳಾಭೇದದಿಂ ।
ದೆಸೆವ ಪಣಹಪಟಾವುಜಂ ಚಂದ್ರಮಂಡಲ
ಪ್ರಸರದೊಳ್ತಾಳ ದಂಡಿಗೆ ಸರ್ವಮೇಳದೊ
ಳ್ಸೊಪಸತೆನಿಸಿ ವಿತತ ಘನಸುಷಿರವಾದ್ಯಗಳ ಶಶಿಮುಖಿಯರುಗಳೆಸೆದಿರ್ದರು ॥೯॥

ಸಾರನಾದದ ಜನನತಾಣಮಂ ನೆರೆಯಱಿದು
ತಾರಮಂದ್ರದ ಮಧ್ಯ ಸಪ್ತಸ್ವರಂಗಳಂ
ತೋಱಿ ಯಿಪ್ಪತ್ತೆರಡು ಶ್ರುತಿಷಾಡವಾದಿ ಶ್ರುತಿಪೂರ್ಣದೇಶೀಮಾರ್ಗದ।
ಸಾರಮಂ ತಿಳಿದವನಿಬದ್ಧಂ ವಿಬದ್ಧಗಳ
ಸೇರುವೆಯೊಳತಿ ಶುದ್ಧ ಮಿಶ್ರ ಸಂಕೀರ್ಣಗಳ
ನಾರೈದು ನವರಸದಿ ಪಾಡುವ ವಿದಗ್ಧ ಗಾನಾಂಗನೆಯರೊಪ್ಪಿರ್ದರು ॥೧೦॥

ಮಾಳವ ಶ್ರೀ ತೋಡಿ ಧನ್ಯಾಸಿ ನಾಟಿ ಬಂ
ಗಾಳ ಭೈರವಿ ಸಿಂಧು ದೇಶಿ ದೇಶಾಳಿ ಹಿಂ
ದೋಳ ನಾರಣಿ ಗೌಳ ಸೌರಾಷ್ಟ್ರ ಗುರ್ಜರಿ ವಸಂತ ಸಾವೇರಿ ಛಾಯ ।
ಗೌಳ ಮಲಹರಿ ಲಳಿತೆ ಬಹುಳಿ ಗುರ್ಜರಿ [1]ಲಲಿತೆ[1]
ಗೌಳ [2]ಮಂಗಳ[2] ಕೌಸಿ ಮೇಘರಂಜನಿಯು ಭೂ
ಪಾಳಿ ಮೊದಲಾದ [3]ಬತ್ತೀಸ[3] ರಾಗಂಗಳಿಂ ಪಾಡುತಿರ್ದರು ಸತಿಯರು ॥೧೧॥

ಶ್ರುತಿಬಾಹ್ಯವಪಸರವಮಾರ್ಗ ವತಿಕಠಿಣವಹ
ಶ್ರುತಿ ದಂತ[4]ಖಾದ[4]ವನುನಾಸಿಕಂನಯನಮೀ
ಳಿತ ಗಾತ್ರ ಪಾಣಿ ಶಿರ ಭುಜಚಕಿತ ಮೊದಲಾದ ಗಾಯಕವಿಕಾರವಳಿದು ।
ಗತಿ ಗಮಕ ವಳಿ ವಹಣಿ ಸರಳಿ ಸುಠಿಮಾರ್ಗ ಕಂ
ಪಿತೆದಿಂಪು ಸೊಂಪು ಲಯ ಸುಪ್[5]ತಿ[5] ಮೂರ್ಛನೆಯು ಲಂ
ಘಿತ ಠಾಯೆ ಠವಣೆ ರಂಗು ರಸಾಳದಿಂದ ಪಾಡುವ ಸುಲಕ್ಷಣೆಯರೆಸೆಯೆ* ॥೧೨॥

ಇಂತು ನಾನಾಕಳೆಯೊಳೆಸೆವುತಿಹ ಸತಿಯರೊಳ
ಗಂತಃಪುರಾಂಗನೆಯರೇಳುನೂಱವರೊಳತಿ
ಕಾಂತಿ ಸ್ವರೂಪು ಲಾವಣ್ಯದಿಂದೆಸೆವ ಶತವನಿತೆಯರ ನೃಪನೀಕ್ಷಿಸೆ ।

---

1 ರೀತಿ (ಗ.ಫ.ಖ), ಲೀರೆ (ಚ), ಲಿವೆ (ಕ). 2 ಬಂಗಾಳ (ಕ.ಗ). 3 ನೂ ಱೊಂದು (ಕ). 4 ಭಾವ (ಛ). 5 ರಿ (ಖ.ಗಥ.ಫ). * ಈ ಪದ್ಯವು (ಜ) ಪ್ರತಿಯಲ್ಲಿಲ್ಲ.

ಕಂತುಹರನಾಟಕವ ನಟಿಸೆಂದು ನಿರವಿಸ
ಲ್ಕಂತವರು ಶಿವಲಾಂಛನಗಳ ತಮತಮಗೆಲ್ಲ
ರಂತರಂತರವೞಿದು ಮಿಗೆ ಚೋದ್ಯವಾಗಳವಡಿಸಿಕೊಂಬ ತತ್ಸಮಯಕೆ ॥೧೩॥

ನಿಂದು ಮಂಚಿಗನುಭಯಕರಮುಗಿದು ದುರ್ಮಂತ್ರ
ದಿಂದ ದೇವರಿದಾವಬಹುರೂಪವೆನಲು ಋಷಿ
ಮಂದಿರಕ್ಕಭವನಜಶಿರವಿಡಿದು ಭಿಕ್ಷೆಗೈವಾ ಕ್ರಮದ ನಾಟಕವೆನೆ ।
ಛಂದಮಾಯ್ತೆನುತ ನಿಂದಕನುಬ್ಬಿ ಬಸವರಸ
ಹಿಂದೆ ಹರಗಣತಪಸಿಗಳಮಾಡಿದಾ ಗರ್ವ
ದೊಂದಸಮುಲತೆಗಿದು ಲವಿತ್ರವಾಯ್ತೆನುತ ಭುಜವೊಯ್ದು ನಗುತೆಂದ ಮತ್ತೆ ॥೧೪॥

ನೆಟ್ಟನದ್ವೈತಿ ನಿಮ್ಮೊಲುಮೆ ಮೇಲಾತನೀ
ಪಟ್ಟಣಕ್ಕೊಡೆಯ[1]ನಂ[1]ತಲ್ಲದೆಲ್ಲರ ಬಾಯ
ಕಟ್ಟಿ ಕಣುಗಟ್ಟುವನದಾಗಿ ಜನರಾತನಾಜ್ಞೆಯ ಮೀಱರಾಗಾತನು ।
ಮುಟ್ಟಿ ಗೆಲ್ವ ಪವಾಡಕೆಲ್ಲ ಕವಡಿದು ನೀವು
ನಿಟ್ಟಿಸುವ ನಾಟಕಾಂಗನೆಯರಿಗೆ ಶಿವರೂಪ
ಘಟ್ಟಿಗೊಳಿಸಿದೊಡಾತ ಮುನ್ನ ಮೆಱೆದಿಹ ಮಹಿಮೆಗಳಿಗೆಲ್ಲ ಕಲಶವೆನಲು ॥೧೫॥

ಅಕ್ಕಕ್ಕು ಬಸವಮಾತ್ಯನ ಭಕ್ತಿ ಹಾಸ್ಯಕ್ಕೆ
ಪಕ್ಕಾಗಿ ಬಕ್ಕಬಯಲಾಯಿತೆಂದೆನುತ ನೃಪ
ನುಕ್ಕಿ ಗಹಗಹಿಸುತಿಕ್ಕೈಹೊಯ್ದು ದುಶ್ಚೇಷ್ಟಕನ ಮೊಗಂ ನೋಡಲೊಡನೆ ।
ಸೊಕ್ಕಿದೆಕ್ಕಲನಂತೆ ಮುಂದಱಿಯದೀ ಮಂತ್ರಿ
ಸಿಕ್ಕಿದನು ದೇವರಿಕ್ಕಿದ ಬಲೆಯೊಳೆನುತ ಮೈ
ಯಿಕ್ಕಿ ಮಂಚರಸನರಸಂ ಸರಸದಿಂ ಬಸವರಸರ ಕರೆಸಲ್ಕುಸುರಿದ ॥೧೬॥

ತಿಮಿರನರ್ಕನ ಕರೆಸುವೊಲ್ಬರರ ಕಳುಪಲಾ
ಕ್ರಮದಿ ರಾತ್ರಿಯೊಳಾ ಮಂತ್ರಿಯ ಕರೆಯಬರಲು ಭೂ
ರಮಣಸಂಗೀತಾಮೃತಾರ್ಣವದ ಸುಖಲಹರಿಯೊಳ್ಪ್ರವರ್ತಿಸುತಿರಲ್ಕೆ ।
ತ್ರಿಮಲವಿರಹಿತ ದುರಾತ್ಮಕವೈರಿಬಲಕೆ ವಿ
ಕ್ರಮವೀರಶೈವಸಿದ್ಧಾಂತಸಂಪನ್ನ ಸಂ
ಭ್ರಮದಲುಪಚರಿಸಿ ಕುಳ್ಳಿರ್ದ ಕ್ರಿಯಾರೂಪನೃಪನ ಬಲಗದ್ದುಗೆಯೊಳು ॥೧೭॥

---

[1] ವಂ (ಗ.ಘ).

ತಿಮಿರನರ್ಕನ ಕರೆಸುವೊಲ್ಸುಪರ್ಣನ ಭುಜಂ
ಗಮ ಕರೆಸುವೊಲ್ಘನವನಿಲನ ಕರೆಸುವೊಲ್ ಭೂ
ರಮಣ ಚಾರರನಟ್ಟಿ ಕರೆಸೆ ಸಂಸಾರನಾಟಕಸೂತ್ರಧಾರಿಯೆನಿಪ ।
ತ್ರಿಮಲವಿರಹಿತ ಕಪಟಕುಲಗಜಮೃಗಾರಿ ವಿ
ಕ್ರಮಬಸವನೈತಂದು ನೃಪನ ಬಲಗದ್ದುಗೆಯೊ
ಳಮರ್ದು ಕುಳ್ಳಿರ್ದ ಸಮಯದೊಳಖಿಳಮೇಳವಾಡಲ್ಕೊತ್ತಗಿತ್ತೇಂವಗಳ್ವಿನು ॥೧೮॥

ಗುರುಕುಚದ ಹಸ್ತಿನಿ ಮೃದಂಗಚಿತ್ತಿನಿ ತಾಳ
ಧರಿ ಗಾಯ[1]ಕಾತ್ಮೆ[1] ಶಂಕಿನಿ ನೃತ್ಯಸತ್ಕಳೆಯ
ವಿರಚಿಸುವ ಪದ್ಮಿನೀವರಪ್ರಸನ್ನಸುಭಾವಲಕ್ಷಿತಾದಿ ಕ್ರಮವನು ।
ಸ್ವರಗೈವ ಬಾಲೆಯೌವನದತಿಪ್ರೌಢೆಯರ
ತರದಿ ಜವನಿಕೆಯ ಪ್ರಗಲ್ಭೆಯರ ಮಧ್ಯದೊಳು
ವರಲಾಸ್ಯಮಂ ನಟಿಪ ನಟ್ಟುವಾಂಗನೆಯರೆದ್ದುಗ್ಘಡಿಸುತಿರಲು ಮುಂದೆ ॥೧೯॥

ಅತಿಶಯಸುಶಬ್ದವಿಸ್ತರಸಮೇತದದ್ಭುತಾಳ
ಮೆತದೊಳ್ಸನಾದ ವಾದ್ಯಪ್ರತತಿಯೊಳ್ಕ್ರಿಯಾ
ಶ್ರಿತಸಲಕ್ಷಣಲಕ್ಷಿತಾದಿ ಪದಹಸ್ತದೃಷ್ಟಿಗಳೊಳಭಿನಯಕಳೆಗಳ ।
ಶತಸಹಸ್ರದಿ ತೋಱುವತಿಚಮತ್ಕೃತಿಭಾವ
ರತಿಯೊಳ್ಸುಪಾತ್ರವಾಡುವ ನವರಸಂಗಳಂ
ಕ್ಷಿತಿಪ ಮೋಹಿಸಿ ಕಪಟದಿಂದೀಕ್ಷಿಸುತಿರಲ್ಪಿಡಿದ ಜವನಿಕೆ ಮಱೆಯೊಳು ॥೨೦॥

ತೊಟ್ಟುಬಹುರೂಪಿನೊಳ್ಕುಟಿಲಪಲ್ಲವದ ಜಡೆ
ಬಿಟ್ಟು ನವರತ್ನಕೀಲಿಸಿದ ಪಾದುಕೆಗಳಂ
ಮೆಟ್ಟಿ ಕರದಲ್ಲಿ ಕಕ್ಷದಲಿ ಉರದಲ್ಲಿ ಗಳದಲ್ಲಿ ಶಿವಲಿಂಗಂಗಳ ।
ಕಟ್ಟಿ ಕುಂಡಲ ಕಮಂಡಲದಂಡ ಮಿಂಚ್ಯೋಗ
ವಟ್ಟಿಗೆ ಸುಭಸ್ಮ ಘಂಟಿಗೆ ಯಜ್ಞಸೂತ್ರವಳ
ವಟ್ಟು ಹರಲಾಂಛನದ ರೂಪ ಸಲೆ ತಾಳ್ದೆಸೆವುತಿರ್ದರಂತಾ ಸತಿಯರು ॥೨೧॥

ಭಾರಿಗಪ್ಪಡ ಕೊರಳಕಂಥೆ ಲಾಕುಳಪಾತ್ರೆ
ಭೂರಿರುದ್ರಾಕ್ಷೆಗಳ ಮುರುಹು ಮುದ್ರಾಂಕಿತದ
ನಾರಕೌಪರ್ಧಾಸನಂಗಳೊಪ್ಪುವಮಾನ ಸಿತಮಿಸುಪ ಭಸ್ಮಾಂಗದ ।

---

[1] ಕೋಪ್ಷೆ (ಚ).

ನಾರಿಯರು ಜಂಗಮಸ್ಥಲವಿಡಿದು ಶಂಖಗಳ
ಭೋರಯಿಸಿ ಹರಹರ ನಮಃಶ್ಶಿವಾಯೆನುತ ತೆಱೆ
ಯೋರೆಯೊಳ್ಬರೆ ಕಾಣುತೆದ್ದು ಬಸವೇಶ ಸದ್ಭಾವದಿಂ ಶರಣೆನಲ್ಕೆ ॥೨೨॥

ಕಂಡು ನೃಪಹಾಸ್ಯದೊಳ್ಕೈಹೊಯ್ದು ಗಹಗಹಿಸಿ
ದಂಡನಾಯಕಿದೇನಿದಾರಿದೆತ್ತಣಭಕ್ತಿ
ಹಿಂಡುಬಹುರೂಪಿಗೆಱಗುವರೆ ನಿಜಜಂಗಮವೆ ಪೇಳು ಬಸವೇಶಯೆನಲು ।
ಮಂಡಲಾಧಿಪ ನಿನ್ನ ಸಕಲಸಂಪದಕೆ ಮುಂ
ಕೊಂಡು ಪರಸಲ್ಬಂದ ತನುವರೆಯ ಸಹಜಪ್ರ
ಚಂಡಸಾಕ್ಷಾತ್ಪರಬ್ರಹ್ಮವಹ ಶಿವಮೂರ್ತಿಗಳನು ಬಹುರೂಪೆಂಬರೆ ॥೨೩॥

ಸಾಕ್ಷಿ—

ಭಾಳೇ ತ್ರಿಪುಂಡ್ರಕಶ್ಚೈವ ಗಳೇ ರುದ್ರಾಕ್ಷಮಾಲಿಕಾ ।
ವಕ್ತ್ರೇ ಷಡಕ್ಷರೀಮಂತ್ರಂ ಸ ರುದ್ರೋ ನಾತ್ರಸಂಶಯಃ ॥

ಹರಿ ಹರಿಯೆ ಅರ್ಕನರ್ಕನೆ ಅಜಂ ಅಜನೆ ಯಂ
ಬರಮಂಬರವೆ ಕನಕ ಕನಕವೇ ಶಿವ ಶಿವನೆ
ಯುರುಕೌಶಿಕಂ ಕೌಶಿಕನೆ ಸಿಂಧು ಸಿಂಧುವೆ ಶಶಿ ಶಶಿಯೆಯಿಂತಿವೆಲ್ಲಾ ।
ಸರಿನಾಮಕರುಹವಲ್ಲದೆ ಯೋಗ್ಯವಹವೆಯಾ
ಪರಿಯಲ್ಲಿ ಶಿವವೇಷದಳೆದ ಕಾಂತೆಯರುಮಾ
ವರಗೆ ಸರಿಯಹರೆಯುಂದರಸ ಚೇಷ್ಟಿಸಲು ಬಸವೇಶ ನಲಿದೊರೆದ ವಚನ ॥೨೪॥

ವಚನ—

ಕುಂಡಲಿಗನೊಂದು ಕೀಟೆಯ ತಂದು ತನ್ನಂತೆ 'ಮಾಡಿತಲ್ಲಾ' ಎಲೆ ಮಾನವ ಕೇಳಿ ನಂಬಯ್ಯ ನೋಡಿ ನಂಬಯ್ಯ ಎಲೆ ಮಾನವ॥

ತ್ವಚ್ಚಿಂತಯಾ ಮಹಾದೇವ ತ್ವಮೇವಾಸ್ಮಿ ನ ಸಂಶಯಃ।
ಭ್ರಮದ್ಭ್ರಮರ ಚಿಂತಾಯಾಂ ಕೀಟೋಪಿ ಭ್ರಮರಾಯತೇ॥

ಕೂಡಲಸಂಗನ ಶರಣರ ಅನುಭಾವ ಇದಱಿಂದ ಕಿಱುಕುಳವೆ ಎಲೆ ಮಾನವ ॥೧॥

ಮೇರುಃಗುಣವಱಿಸುವುದೆ ಕರಟನಲಿಯಾ ಶುಷ್ಕ
ದಾರುವಿನ ಗುಣವನಱಿಸುವುದೆ ಬಾವನ್ನ ಸ
ತ್ಕಾರಣದ ಪರುಷ ಕಾಳಾಯಸದ ಗುಣವನಱಿಸುವುದೆ ಯಾ ಪರಿಯಲಿ ಶಿವಾ।
ಚಾರಸತಿ ಪುರುಷರೋಳ್ಗುಣವನಱಿಸುವರೆ ಕೇಳ್
ಭೂರಮಣ ಪಶುದಾರು ಶಿಲೆಗೆ ಮೃಡಮುದ್ರೆಗಳ
ಸೇರಿಸಲು ಲಿಂಗಕಳೆ ತೀವವೇ ಎನೆ ನೃಪಂ ನಗುತ ಕೈಹೊಯ್ದು ಮತ್ತೆ ॥೨೫॥

ನಾಟಕದ ಬಹುರೂಪಿನಂಗನೆಯರುಗಳ ಶಶಿ
ಜೂಟನೆಂದೆಱಗಿದಲ್ಲೇನಾಯ್ತು ಬಿಡು ಬಱಿಯ
ಕೋಟಲೇಕೈ ಬಸವರಾಜ ಯೆನುತಣಕಗಳ ಬೀಱುತ್ತಲಪಹಾಸ್ಯದ ।
ಚಾಟುತನದಿಂದಮಾತ್ಯನ ಭಕ್ತಿಯುರವಣೆಯ
ಬೇಟವಡಗಿತು ಮಂಚಿಮರಸ ನೋಡೆಂದಾ ವ
ಧೂಟಿಕಾವಳಿ ತಾಳ್ದ ಶಿವರೂಪ ನೃಪತಿ ತೆಗೆಸಲ್ಕೆಲ್ಲ ನಿಜವಾದವು ॥೨೬॥

ನಿಡುಜಡೆಗಳಡಸಿ ಬೇರ್ವಱಿದು ರುದ್ರಾಕ್ಷಿಗಳು
ಕಡುಬಿಗಿದು ಭಸ್ಮಲೇಪಿಸಿ ಭೂರಿಗಪ್ಪುರಗ
ಳಡಸಿ ಹತ್ತುತ್ತುತ್ತಮಾಂಗದಲಿ ಲಿಂಗ[1]ವಚ್ಚೊತ್ತ[2]ಜಿನಗಂಥೆಕೌಪು ।
ಒಡೆದು ಮೂಡಿದ ಮಾಳ್ಕೆಯರ್ಧಾಸನಂ ಯೋಗ
ಬಿಡದೆ ಕೆಲಬರುಘೋ ನಮಶ್ಶಿವಾಯೆನೆ ಕೇಳಿ
ಪೊಡವಿಪಂ ನಡುಗಿ ಬೆಡಗಡಗಿ ಮುಖರಸವಱಿತು ಬಸವೇಶ್ವರನ ನೋಡುತ ॥೨೭॥

ನೋಡಿದೇನಾಶ್ಚರ್ಯ ನಿಮ್ಮ ಭಕ್ತಿಯಪ್ರಮೆಯ
ರೂಢಿಯೊಳ್ಕಂಡುಕೇಳಿದುದಿಲ್ಲವರ ನೀವು
ನೋಡಿದಾಕ್ಷಣ ಚರಾಂಗದ ಪುರುಷತತ್ವಸ್ವರೂಪಾದರೆಮಗೆಂತೆನೆ ।
ನಾಡೊಡೆಯ ಕೇಳ್ಶಿವನ ಲಾಂಛನದೊಡನೆ ಸರಸ
ವಾಡದಿರು ನಿನ್ನ ಸೌಭಾಗ್ಯಲಕ್ಷ್ಮಿಗೆ ಕಲ್ಪ
ಮೂಡದಿರದೆಂದೆನುತ್ತೊಲಿದು ಬಸವೇಶ್ವರತತ್ಕಾಲದಲ್ಲುಸುರ್ದ ವಚನ ॥೨೮॥

ವಚನ—

ಮಣ್ಣು ಮಡಕೆಯಾಗಿ ಮರಳಿ ಮಣ್ಣಾಯಿತೆ ಕ್ರೀಯಳಿದು ? ಬೆಣ್ಣೆ ತುಪ್ಪವಾಗಿ ಮರಳಿ ಬೆಣ್ಣೆಯಾಯಿತೆ ಕ್ರೀಯಳಿದು ? ನೀರು ಮುತ್ತಾಗಿ ಮರಳಿ ನೀರಾಯಿತೆ ಕ್ರೀಯಳಿದು ? ಕಬ್ಬಿಣ ಹೊನ್ನಾಗಿ ಮರಳಿ ಕಬ್ಬಿಣವಾಯಿತೆ ಕ್ರೀಯಳಿದು ? ನಮ್ಮ ಕೂಡಲಸಂಗನ ಶರಣರಾಗಿ ಮರಳಿ ಮಾನವರಹರೆ ಕ್ರೀಯಳಿದು ? ॥೨॥

ಮತ್ತೆ ಬಿಜ್ಜಳನೃಪಂ ಬೆಱಗಿನೆರಕದೊಳಿರ
ಲ್ಕುತ್ತರಾದಿಯೊಳೊರ್ವ ಸತಿ ಭವಿಗೆ ಕೊಟ್ಟರೆಂ
ದತ್ತು ಶಿವನಾಲಯಂಬೊಕ್ಕು ದುಃಖಾಂದೋಳದಿಂ ಭಜಿಸಿ ನಮಿಸಿ ನಿಷ್ಠಾ ।

---

1 ಜ್ಯೋತಿತ್ಯ (ಕ.ಚ).

ಭಕ್ತಿಯಿಂ ಹೇರೂರ ಹೆಣ್ಣು ಗಂಡಾದಳು ಗ
ಡಿತ್ತ ಬಸವೇಶ ಭಾವಿಸಿ ನೋಡೆ ಶಿವವೇಷ
ವೊತ್ತವರ್ಶಿವನಹುದಿದೇನಱುದು ನೃಪಯೆನುತ ಚೆನ್ನಬಸವೇಶನುಸುರೆ ॥೨೯॥

ಆದಡೀಶಿವಲಾಂಛನಗಳ ತಳೆದವರ್ಗಳಾ
ರಾದಡೇನವರ್ಗೆ ಜಂಗಮಲಿಂಗವೆಂತೆಂಬ
ಭೇದಭಾವಬ್ರಹ್ಮ ಬಸವೇಶಗಲ್ಲದಜಹರಿಗಳಳವಲ್ಲವೆನುತ ।
ಸಾದರದಿ ಪೂಜೆಗೈದಾತಪಸಿಗಳಿಗೆಱಗು
ತಾದಿವೃಷಭೇಶ್ವರನನೊಲ್ದು ಕೀರ್ತಿಸುತಲೀ
ಮೇದಿನಿಯೊಳತಿಚೋದ್ಯವೆನುತಿವರ ನಿಮ್ಮ ನಿಜಭವನಕೊಯ್ಯೆಂದೆನುತ್ತ ॥೩೦॥

ಕಂತುಹರರೂಪ ಬಸವೇಶ್ವರನ ಮಹಿಮೆಯನ
ದಂತಿಂತುಟೆಂದುಪಮಿಸಲ್ಬಾರದೆನುತ ಭೂ
ಕಾಂತ ಶರಣೆಂದು ಬೀಳ್ಕೊಡಲು ಬಸವೇಶ ಶಿವನಾಟಕಮುಹತ್ತುಸಹಿತ ।
ಸಂತಸದಿ ಹರಗಣಂಗಳ್ವೆರಸಿ ಬರಲು ರವಿ
ಮುಂತೆ ಗುಡಿಗಟ್ಟಿದಂತುದಯಾಚಲಮನಡರ
ಲಿಂತು ಬಸವೇಶ ನಿಜಗೃಹವೊಕ್ಕನೆಂದು ನಂದೀಶ ಪ್ರಮಥರ್ಗೊರೆದನು ॥೩೧॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದ ಷಟ್ಚರಣಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದಿ ಬಹುರೂಪಿಗಳ ಜಡೆಯ ಬೇರ್ವೆರಸಿ ಮೆಱೆದ ಸಂಧಿ ॥೩೨॥

ಮೂವತ್ತೊಂಬತ್ತನೆಯ ಸಂಧಿ

ಸೂಚನೆ—

ಚೇಷ್ಟಾಪ್ರವೃತ್ತಿಯಿಂ ಬಿಜ್ಜಳಮಹಿಪನೊಂದು
ಕಾಷ್ಠದ ತಪಸ್ವಿಯಂ ರಚಿಸಿ ಜಂಗಮವೆಂದು
ನೈಷ್ಠಾಪರಂಗಱುಪಲದ ನಿಜತಪಸ್ವಿಯಂ ಮಾಡಿ ತೋಱಿದ ಬಸವನು ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತು ॥೧॥

ನೂತನಕಥಾಕಲ್ಪದೊಳಗೊಂದು ಚಿತ್ರತರ
ಜೋತಿಯಾ ಚಮತ್ಕೃತಿಯ ಲಹರಿಯ ಶಿವಜ್ಞಾನ
ನೀತರವಧರಿಸೀಶನೋಲಗದೊಳಂದು ಕ್ರೀಭಾವಸಂಪಾದನೆಯೊಳು ।
ಭೂತಳದಿ ಜನಿಸರಸುಮಂತ್ರಿಮಾರ್ಗದೊಳವರಿ
ಳಾತಳಕ್ಕೆ ಯಶವಡೆದು ಕಲ್ಯಾಣದಲಿ ಪ್ರ
ಖ್ಯಾತಬಿಜ್ಜಳನೃಪತಿ ಬಸವದಂಡಾಧೀಶರೊಪ್ಪಿನಿಂದಿರುತೊಂದಿನ ॥೨॥

ನೆಗಳ್ದ ವೃತ್ತಾಂತಮನದೇಂವೊಗಳ್ವೆ ಚೋದ್ಯ ಹೊಸ
ಬಗೆ ಭಾರವೊತ್ತಂತಿರಾ ನೃಪಾಲಕ ತನ್ನ
ಹಗಲನೋಲಗ ಹರೆದ ಬಳಿಕೊಳಗೆ ಹತ್ತೆಂಟು ಹಳವೆಯಾಪ್ತರು ಸಮೇತ ।
ಸೊಗಸುವಾತುಗಳ ಸೋಹೆಯ ಸೋಂಪಿನಿಚ್ಚಕರು
ನಗೆನುಡಿಯೊಳೆಲ್ಲರೋರೊರ್ವರ ಗುಣಪ್ರಯೋ
ಗಗಳ ಪ್ರಸಂಗಿಸುತ್ತಂಪುವಿಸಿದರು ಬಸವನಂಗದ ವಿಚಿತ್ರಗುಣಕೆ ॥೩॥

ಹಗರಣಿಗರಂ ಶುದ್ಧಶೈವರ್ಕಳೆನಿಸಿ ವಾ
ಸುಗಿಯ ಲೇವಳಮಾಡಿ ಬಹುರೂಪಿಗಳ ಜಡೆಯ
ಮಿಗೆ ಬೇರುವಱಿಸಿ ತಮ್ಮಡಿಗಿತ್ತ ವಾಜಿಯಂ ಮಗುಳೆ ಲಾಯದೊಳು ತೋರ್ಪ।
ಅಗಣಿತದ ಭಂಡಾರಮಂ ತೀರ್ಚಿ ದೃಷ್ಟಕ್ಕೆ
ಮಿಗಿಲುದೋಱುವ ಚಂದ್ರಸೂರ್ಯರಂ ಗಗನದೊಳ್
ತಗೆವನಕ್ಕುಲಜನಂ ಕೈವಿಡಿದಮೃತಗಱೆವನಲ್ಲದುದನಹುದುಮಾಳ್ಪ ॥೪॥

ಮಣ್ಣಿತ್ತ ಹಱಿಸುವಂ ಮೃತಕೆಯಸುವೆತ್ತುಹಂ
ಕಣ್ಣು ಕಾಲ್ಗಳ ಕೆಲಿರ್ಗೆ ಕೊಡುವ ಬಾಲಕನಾಗಿ
ಹೆಣ್ಣುಸೋದರದ ಮೊಲೆಯುಣುವ ಶಿವಲಿಂಗಶಿರದಲ್ಲಿ ಹೊಸಕೇಶದೋರ್ಪ |
ಬಿನ್ನಣವನೇಕವಾವಂಗವೋ ಬಸವೇಶ
ದಣ್ಣಾಯಕನ ಸಾಮಭೇದೋಪತಂತ್ರಭಾ
ಗ್ಯೋನ್ನತಿಕೆಯೆಂದರಸನನ್ಯೋಪದೇಶದಿ ಯೆನಲ್ಮಂಚಿಮರಸ ನುಡಿದ ||೫||

ಇಂದ್ರಜಾಲದಿ ನರೋತ್ತಮ ಗಗನಗಾಮಿಕ ಮ
ಹೇಂದ್ರದೊಳು ಜಿನದತ್ತ ತರ್ಕದಲ್ಲಕಳಂಕ
ನಂದಸ್ವಾಮಿಗಳು ಮಂತ್ರದಿ ಪೂಜ್ಯಪಾದ ತಂತ್ರದಿ ವಾಸುಪೂಜ್ಯಮುನಿಪ |
ವಂದ್ಯರಂ ವಚನಿಸದೆ ಕಾಳುಬಗೆ ಕೀಳುಬಗೆ
ಒಂದೆರಡ ಕಲಿತೆಸಗಲದಕಚ್ಚರಿಸಿ ಹೊಗಳು
ವಂ ಧರಾಧೀಶನಿಮ್ಮೊಲುಮೆಯಾತನ ಭಾಗ್ಯಬೇಱೆ ಭಾಗ್ಯಮದೇವುದು ||೬||

ದೇಶದೇಶಾಂತರದಿ ಬಂದ ಹಲಕುಲದ ಕೆಲ
ವೇಷಧಾರಕರಿಗೊಲಿದಿತ್ತ ವರ್ಗಳಶನ ವ್ಯಸ
ನಾಶಯಂ ಸಲಿಸಿ ಕಿಂಕಿರಕ್ರೀಡೆದೋಱೊಬ್ಬರಿಂದಲೊಂದೊಂದು ಕಪಟ |
ಭೂಷಣ ವಿಚಿತ್ರವಿದ್ಯೆಗಳ ಜೋಡಿಸಿ ನಿಮಗೆ
ತಾಸಮರ್ಥಿಕೆ ದೋಱಲದು ನಿಜಮೆ ಹರಿಮೇಖ
ಳಾಸುರಂ ಸತ್ಯವೇನರಸು ಕೊಂಡಾಡೆ ಕೊಂಡಾಡದಿಹರಾರಿಳೆಯೊಳು ||೭||

ಜೀಯ ನಿಮಗಾತನಂ ಸಾಮಭೇದದಿ ಗೆಲ್ವ
ದಾಯಬೇಹಾಡೆ[1] ಬಿನ್ನಹಕೆ ನೇಮವೆಂದವಂ
ಕೈಯೆರಡ ಮುಗಿದುಪಾಯವನೊಂದನ್ಯೋಚಿಸಿದ ಶೈವಸಿದ್ಧಾಂತಸಿಲುಕ |
ರೈಯು[2]ವೋ[2]ಜನಕರೆಸಿ ಮುಂದಿಟ್ಟು ಮರದಾಪ
ಸೈಯನಾಕೃತಿಗೈದು ವೈಡಂಬಿಸಿರಿಸಿಯಾ
ಸೈಯಮಿಯ ಬಸವಮಂತ್ರಿಗೆ ತೋಱಲಲ್ಲಿ ನಿಜವಱಿಯಬಹುದರಸ ಯೆನಲು ||೮||

ಪಾದಪಚರಂಗೆ ಚೇಷ್ಟಾಂಗೋಪದೇಶಿಸಿದೊ
ಲಾದರಿಸಿ ತತ್ಕ್ಷಣಾವರ್ಧಕಿಯ ಕರೆಸಿ ತ
ದ್ಭೇದವನವಂಗೊರೆದು ನಿರ್ಮಿಸಿದನರಸು ಕಾಷ್ಠದ ತಪಸ್ವಿಯ ರೂಪನು |

[1] ಡ ದೆ (ಚ). [2] ಯೊ (ಘ.ಗ.ಧ).

ಚೋದ್ಯತರ ಚಿತ್ರ ಸಿದ್ಧಾಂತಶೈವಾಡಂಬ
ರೋದಯದ ಸೊಮ್ಮುಬಿಮ್ಮುಗಳ ಲಾಂಛನಸಹ ತ
ಪೋಧನನ ತದ್ರೂಪಗೈಸಿ ಮೀಮಾಂಸಕ ಕುತರ್ಕಿಗಳ ಕೆಲರ ಕರೆಸಿ ॥೯॥

ಆ ಕಾಷ್ಠತಾಪಸಗೆ ಶುಶ್ರೂಷಕರೊಲು ಮಾಡಿ
ಕಾಕುಚೇಷ್ಟೆಗಳೊರೆದು ನಾಳೆಯೋಲಗಶಾಲೆ
ಯಾ ಕಡೆಯ ಬಾಗಿಲೊಳು ತಂದಿಳುಹಿಕೊಂಡಿರೆಂದರಸು ನೇಮಿಸಿ ಮಱುದಿನ।
ಲೋಕಬಾಂಧವನುದಯದಿಂ ಮುನ್ನ ವೈಹಾಳಿ
ಗಾ ಕಾಕುಬುದ್ಧಿಯಿಂ ಪೊಱಮಡಲು ಮಂತ್ರಿಗಳ
ನೇಕಪರಿವಾರವಾರಾಸಿ ಸೈವಱಿದುದಕಳಂಕನೃಪಚಂದ್ರನೊಡನೆ ॥೧೦॥

ಸ್ವರ್ಭಾನುವಿದ್ದೆಡೆಗೆ ಬ್ರಧ್ನಬಪ್ಪೊಲು ಶರಧಿ
ಯುಬ್ಬರಂಬೊಗುವ ವಾಡಬನೊಲು ತಮಪ್ರಕೃತಿ
ಪರ್ಬುಗೆವೊಗುವ ಜ್ಯೋತಿಯೊಲು ವ್ಯಾಧಿಬಾಧೆವೊಗುವಮೃತಕರನೌಷಧಿಯೊಲು।
ಪೆಬ್ಬುಲಂಬೊಗುವ ಸುಭಟನೊಲು ಶಿವಭಕ್ತಕುಲ
ಪರ್ಬು[1]ತಂ[1] ಬಸವದಂಡಾಧೀಶನಾ ಕಪಟ
ದುರ್ಬೋಧಕವನೀಶನೆಡೆಗೈದಿ ಬಂದ ರಾಜೋಪಚಾರಪ್ರಮುಖನು ॥೧೧॥

ರಾಜರಚನಾಪ್ರಯೋಗಕ್ಕೆ ತತ್ಕಾಲೋಚಿ
ತೋಜೆಗಳನಲ್ಲಲ್ಲಿ ರಚಿಸಿ ಸಂಭ್ರಮಪಟಲ
ವಾಜಿಗಜರಥಪದಾತಿಗಳ ಪರುಠವ ಪ್ರಪಂಚಪರಾಕ್ರಮ ಪ್ರೌಢಿಯ ।
ನಾ [2]ಜನಪತಿಯ[2] ಮನೋಮೂರ್ತಿಗೊಂಡೊಲು ಬಸವ
ರಾಜನೊಡ್ಡಣೆದೋಱೆ ಪರಿಣಮಿಸುತಾಯಪ್ರ
ಯೋಜಕನೃಪತಿ ನೆಗಳ್ದ ಕೃತ್ರಿಮದ ಕುಣಿತಕ್ಕೆ ತಿರುಗಿದ ಪುರಾಂತರಕ್ಕೆ ॥೧೨॥

ಕುಣಿವ ಕುದುರೆಗಳ ಕುಂಬಿಡುವ ಕುಂಭಿಗಳ ಮುಂ
ದಣಿವಱಿವ ಪದಚರರ ಪಱಿವ ರಥಪಂಕ್ತಿ ಸಂ
ದಣಿಪ ಸಿಂಧುಗಳ ಗೊಂದಣದಂದಣಂಗಳೊಗ್ಗಿನ ವೀರಸುಭಟರ್ಕಳು।
ಪ್ರ[3]ಣಮ[3]ಪಾಠಕರ ಬಿರಿದೊಗೆವ ಕಹಳೆಗಳ ಸಂ
ದಣಿಯಱಿದು ಪೊಯ್ವ ಭೇರಿಗಳ ಪ್ರಬಂಧಗಳ
ನೆಣಿಪ ಮೌರಿಗಳ ಪಲವುಪಲಾಲನಾಕದಂಬದೊಳರಸು ಪುರವೊಕ್ಕನು ॥೧೩॥

---

[1] ಕಂ (ಕ). [2] ಜನಪನಂ (ಜ). [3] ಣಿಮ (ಚ.ಗ.ಘ.ಫ), ಣಿತ (ಜ).

ನಿಜರಾಜಭವನವೊಗುವವಸರದೊಳೆತ್ತಲಾ
ಕುಜನರ್ಕಳಾ ಕಾಷ್ಠತಾಪಸನ ತಂದು ನಿಜ
ಭಜಕರಂತರಮನೆಯ ಬಾಗಿಲೊಳವೇದಿಕೆಯೊಳಾಸನಮನಿಕ್ಕಿ ತರಕ್ಷು।
ಅಜಿನಭಸ್ಮವನಲಂಕರಿಸಿ ಕೃತ್ರಿಮಜಡೆಯ
ಸೃಜಿಸಿ ಮರಗಡಹ ರುದ್ರಾಕ್ಷಿ ಕಿಸುಗಾಸೆ ಕೆಲ
ಗಜಬಜೆಯ ಛಾಯಲಾಂಛನದೊಡಿಸುಭಯ ಪಾರ್ಶ್ವದೊಳುಘೆಚಾಂಗುಭಲ
ಯೆನುತ್ತ ॥೧೪॥

ಶಂಖಗಳ[1]ನೊದುತ್ತ[1] ಚಮರಿಸುತ ಕೆಲರು ಕೈ
ವಾಂಕಮಾಲೆಯ ಸರಕಟಿಸುತ ನಲಿದಾನಂದ
ಬಿಂಕಗಳ ಬೀಱುತ್ತ ತತ್ತಾಪಸನ ಸುತ್ತಿ ಮುತ್ತ್ಯಘೋಯೆನುತಿರೆ ನೃಪ।
ಭೋಂಕನೇಳ್ತರುತಲಾ ತಾಪಸ ವಿಡಂಬಗಂ
ಡಂಕುರಿತಹಾಸ್ಯದಿಂ ದಿಟಭೃತ್ಯಭಾವದೋ
ರ್ಪಂಕೆಯಿಂದರಸು ದುರ್ಭಾವದೊಳ್ಕೈಮುಗಿವುತಾದಿವೃಷಭನನೋಡಲು॥೧೫॥

ಶಿವಲಾಂಛನದ ಸೀಮೆಗಾಣುತ್ತ ಭಕ್ತಿರತಿ
ತವಕದಿಂ ದಂಡಿಗೆಯನಿಳಿದು ನಮಸ್ಕರಿಸಲದ
ನವನಿಪತಿ ಕಂಡು ಕಣ್ಸನ್ನೆಯಿಂ ನಗುತ ನಾಸ್ತಿಕಸಭೆಗೆ ಸಂಜ್ಞೆಗೊಡುತ।
ಅವಸರಂಗೊಟ್ಟನೋಲಗಶಾಲೆಗೈದಿ ಕಡು
ಗೆವಳಗೊಂಡಂತೆ [2]ಕಾ[2]ಹುರಚಿತ್ತನಾಗಿ ತ
ನ್ನವದಿರ ಸಮೇಳಿಸೊಳ್ನುಡಿಯೇರೆವಾತಿನಿಂತೆಂದ ವೃಷಭನೊಳು ನೃಪತಿ ॥೧೬॥

ಕುರುಕಾಹಳದ ಮಗಧ ಮಧ್ಯನೇಪಾಳ ಬ
ರ್ಬರನಂಗ ವಂಗ ಕೊಂಕಣ ಲಾಳ ಭೋಟ ಗು
ರ್ಜರ ಸಿಂಧು ಮಾಳವ ಕಳಿಂಗ ಗೌಡಂಜಿನಂತರ್ವೇದಿ ಶೂರಸೇನ।
[3]ಮರುತ[3] ಕೀರಾತ ಶಕ ಸೌರಾಷ್ಟ್ರ ಲೋಹಪ್ರ
ಪುರ ಮಳೆಯ ಸಿಂಗಣಾಂಧ್ರಂ ವಿಂಧ್ಯ ಕಾಂಭೋಜ
ತುರುಷ್ಕ ಮಾಳವ ಚೋಳ ಪಾಂಡ್ಯ ಕೋಸಲ ಮಹಾರಾಷ್ಟ್ರಾದಿ ಭೇದಂಗಳ॥೧೭॥

ಒಳಗಾಡುತಿಹ ಮಹಾತ್ಮಕರೊಳಿಂತಹ ಪಿರಿಯ
ರೊಳುರೆ ಓಹೋ ಪೂರ್ವಿಗರು ನಿಮ್ಮದೆಂದೆಮ್ಮ
ನಿಳಯಕ್ಕೆ ಬಂದಹೊಲಬಾಗಬೇಕವರ ಭಕ್ತಿ ಸಭಾಷೆದೇಶಿಕವನು।

---

[1] ನೊತ್ತುತ್ತ (ಕ.ಗ.ಫ). [2] ನಾ (ಚ). [3] ಮೂರುತರ (ಫ).

ತಿಳಿವಡೆಮಗರಿದು ಜಂಗಮಭಕ್ತಿ ನಿಮಗೆ ಸ
ಲ್ಲಲಿತವಾಗಿಹುದಯ್ಯನವರಿಲ್ಲಿಗೈತಂದ
ಬಳಿಕಯೇನೆಂದಱಿವ ಕರೆಸಿಮೆನೆ ಕೈಕೊಂಡು ಪರಬ್ರಹ್ಮ ಪಂಚಾಸ್ಯನು ॥೧೮॥

ಪರಿಚಾರಕರನಟ್ಟಲವರೊಡೆಯರಂ ಕರೆಯೆ
ಮರವಟ್ಟಿರಲ್ಕಂಡೆಥಾರ್ಥವಱಿದೇಕೆಂದು
ಕರವೆರಡ ಮುಗಿದವರ್ಬಹರಲ್ಲ ಸ್ಥಾವರವೆ ಜಂಗಮಾಕಾರವಾಗಿ।
ಇರುಹವಲ್ಲದೆ ಬರುಹವಿಲ್ಲ ನಿಮ್ಮಡಿಗಳಿಂ
ಬರವಹಡೆ ಬರಲುವ್ಯೆಸೆನಲ್ಯೆಸೆ ಮತ್ತೇನು
ಹರನಿರೂಪಣವಿದಕ್ಕಿನ್ನಾರನಟ್ಟುವೆನೆನುತ್ತಿದ್ದು ಬರುತಿರ್ದನು ॥೧೯॥

ವಚನ—

ಬಂದೆನೆಂದು ಬಾರದಿರ್ದಡೆ ಬಟ್ಟೆಗಳ ನೋಡುತಿರ್ದೆ ಆರನಟ್ಟುವೆನಯ್ಯ, ಆರಕಾಲ ಪಿಡಿವೆನಿನ್ನಾರನಟ್ಟುವೆನಯ್ಯ, ಕೂಡಲಸಂಗಯ್ಯ ಬಾರದಿರ್ದಡೆ ಅಟ್ಟುವೆನೆನ್ನ ಪ್ರಾಣವನು ॥೧॥

ಎನುತ ಭಕ್ತ್ಯಾತುರದಿ ಶಿವವೇಷಲಾಂಛನದ
ತನುವ ತಕ್ಕೈಸಿ ಬಹ ಶಕ್ತಿಪದದೊಳ್ಬೀಜ
ಒಣನೆಲದ ಮೇಲಿಪ್ಪ ಠಾವಿಂಗೆ ಸದ್ವೃಷ್ಟಿಬಪ್ಪೊಲಾ ತತ್ವದೆಡೆಗೆ।
ಅನುಪಮೋಪಮಚರಿತ ಬಸವದಂಡಾಧೀಶ್ವ
ರನು ಪೋಗುತಿರೆ ಕಂಡು ನಾಸ್ತಿಕರ್ಕಳ್ನಗೆಯು
ಹೊನಲೊಳ್ಪೊರಳಿ ಬೇಗ ಕರೆ ತಾರದಿಹನೆ ತಮ್ಮಯ್ಯಗಳನೆಂದೆನುತಿರೆ ॥೨೦॥

ತಪನನಿರ್ದೆಡೆಗಂಶು ಚಂದ್ರಮನೆಡೆಗೆ ಶಾಂತಿ
ಕೃಪಿಟಯೋನಿರ್ದೆಡೆಗೆ ತೇಜ ವಾಗೀಶಮುಖ
ಉಪನಿಷತ್ತಿವನೆಡೆಗೆ ವರನಿಷ್ಕಳವು ತತ್ವದೆಡೆಗೆ ಸತ್ಕಳೆಬ್ರಹ್ಮವು।
ಸುಪದವಿಡಿದಂತೆ ಸದ್ಭಕ್ತಭಾವಿತಬ್ರಹ್ಮ
ಲಿಪಿರೂಪ ಬಸವದಂಡಾಧೀಶನಾ ಕಾಷ್ಠ
ತಪಸಿಯ ಸಮೀಪಕ್ಕೆ ನಡೆದ ಜಂಗಮಜೀವಜೀವನೀಯಕಳೆಂಕನು ॥೨೧॥

ಮಂತ್ರಿಗಳು ಹೆಗ್ಗಡೆ ಪುರೋಹಿತಪ್ರಧಾನಚಯ
ತಂತ್ರಾಧಿಪರ್ಕರಣಯುವರಾಜರಧ್ಯಕ್ಷ
ಸಂತತಧಿಕಾರಿ ಭಂಡಾರಿ ಕೊಠಾರಿ ಪ್ರತಿಹಾರಿಯುಗ್ರಾಣಿವರ್ಗ।

ಸಂತಮುಖವಿಗ್ರಹತಳಾಧಿಪರ್ಪಡೆವಳರ
ಪಂತಿ ದಣ್ಣಾಯಕರ್ಸಹಿತ ಪದಿನೆಂಟುಮಹ
ಮಂತ್ರಿಪ್ರಮುಖರೊಳಾ ನಾಸ್ತಿಕನರೇಂದ್ರನೊಳಗಳ್ಕಿರಿವುತಿರಲತ್ತಲು ॥೨೨॥

ಸಂದೇಹಮಂ ದೇಹಿಗಳಿಗಿತ್ತುನಿಷ್ಠಾಬ್ಧಿ
ಚಂದ್ರ ಜಂಗಮಜೀವರಾಜೀವರವಿ ಭರ್ಗ
ನಂದದಗಣೇಶ್ವರ ಮಹತ್ತತೆಯಪರುಷ ಪಂಚಬ್ರಹ್ಮ ಪರಮಾರ್ಥದ।
ಕಂದೆಱವೆ ಕೈಮುಗಿವುತಾ ತಪಸ್ವಿಯ ಪದಕೆ
ವಂದಿಸೊಡೆಯರೆ ಕರುಣಿಸರಸು ನಿಮ್ಮಂಘ್ರಿಯುರ
ವಿಂದದಾಹ್ವಾನಮುಖನಾಗೈದೆನೆಂದು ಭಯಭಕ್ತಿಯಿಂ ಭಜಿಸುತ್ತಿರೆ ॥೨೩॥

ನಿರ್ಜೀವಿ ನಿಷ್ಕಳಾಮೂರ್ತಿ ಚೈತನ್ಯಗುಣ
ವರ್ಜಿತದಕಾಷ್ಠಕರು ನಿಶ್ಶಬ್ದವಾಗಿರಲು
ಕಜ್ಜವೇನೈ ಯೆನ್ನೊಳೀಮುಗ್ಧಭಾವವೇನೆಂದಯ್ಯನಿದಿರು ನಿಂದು।
ಸಜ್ಜನಸದಾಚಾರಸಂಪನ್ನನೆಂದನೆಲೆ
ಮಜ್ಜನಕ ಸಂಗಯ್ಯ ಮೌನವೇ ಮಗನೊಡನೆ
ಬಿಜ್ಜಳಬಿಜಯಗೈಸಿತರವೇಳ್ದನೇಳೆಂದು ಮತ್ತೆ ಸಾಷ್ಟಾಂಗವೆಱಗಿ ॥೨೪॥

ವಚನ—

ಅಂಜದಿರು, ಅಳುಕದಿರು, ಕುಂದದಿರ, ಕುಸಿಯದಿರು, [1]ಏನೋ[1] ಎಂತೋ ಎಂದುಏನಲಾಗದೆ ಅಯ್ಯ, ಕೂಡಲಸಂಗಮದೇವ, ಮೌನವೇ ಮಗನೊಡನೆ? ಅಯ್ಯ ಅಯ್ಯ ಎಂದು ಕರೆವುತಿದ್ದೇನೆ; ಓಯೆನಲಾಗದೇಅಯ್ಯ? ಆವಾಗಲೂ ನಿಮ್ಮ ಅಯ್ಯ ಎಂದು ಒರಲುತ್ತಲಿದ್ದೇನೆ; ನೆನಹಿನಲಪ್ಪವಂಗೆ ಮೌನವೇ ಕೂಡಲ ಸಂಗಯ್ಯ ॥೨॥

ಎಂದು ಸದ್ಭಾವಪರುಷಮೃತವಚನಾಳಾಪ
ದಿಂದವಿಶ್ವಾಸನಿಧಿ ಚರಣಯುಗವಿಡಿದು ಬಾ
ಲೇಂದುಮೌಳಿಂತ ನಿಷ್ಕಳೆದಳೆವರೇ ಭೃತ್ಯರೇಳು ಕೃತ್ರಿಮಾಳಾಪವೆ।
ತಂದೆ ದಯೆಗೈಯೆನುತ್ತುಭಯಪದಮಂ ಬ್ರಹ್ಮ
ರಂದ್ರಸ್ಥಲದಿ ತಳೆಯೆ ಭಕ್ತಜೀವಮಲಕಳೆ
[2]ಬ[2]ಂದು ಸೋಂಕಲ್ಪಾಣವಾಯು ಪರಿಯಿತ್ತುಗುರುಲಿಂಗಕ್ಕೆಕಳೆಯಿಡುವೊಲು ॥೨೫॥

---

[1] ಎನ್ನೊಡೆಯ (ಕ.ಚ), ಬ (ಚ.ಕ.ಜ).

ಪ್ರಾಣಾರ್ಪಣಂಗೆಯ್ಯೆ ಜಂಗಮಸ್ಥಲದ ಪದ
ಮ್ರುಣಾಳದಿಂ ಜೀವರಾಜೀವಕಡರ್ವಂತೆಯಾ
ಸ್ಥಾಣು ಸ್ಥಾಣುವಿನ ವೇಷಾಂತರಂಗಕೆ ಪ್ರಾಣಪ್ರಭೆ ತೀವಲಾ ಮೂರ್ತಿಯ।
ಕ್ಷೀಣ ಕೃತ್ರಿಮತಂತ್ರವಳಿದು ನಿಜಲಿಂಗನಿ
ರ್ವಾಣ ನೆಲೆಗೊಂಡು ಕಣ್ದೆಱೆದು ನೋಡಲ್ಕೆ ಜನ
ಶ್ರೇಣಿಭೀತಾತುರದಿ ಪಱಿದು ನೃಪವರಗಚ್ಚರಿಯನನುಷ್ಠಿಸುತಿರ್ದರು ॥೨೬॥

ಜೀಯದೇನಾಶ್ಚರ್ಯ ಓ ಬಸವದಣ್ನಾಯ
ಕಯ್ಯ ಬಂದಾ ಕಾಷ್ಠರೂಪಿಗೆಱಗಲ್ಕೆಯದು
ಮೆಯ್ಯ ಮಱುವುತ ನೋಡೆ ಭಯಸೋಂಕಿತಾತ [1]ದಿಟ[1] ಹೊಯ್ಯೆನಲು ಹೊಯ್ಯು ದೆಂದು।
ಒಯ್ಯನೆ ಸರಿದುಬಂದೆವೆನಲಿದೆಲ್ಲಂ ಕ[2]ಪಟ[2]
ಉಯ್ಯಲಹುದದಱ ಕಾಲ್ಕೀಲಱಿಯಶಠೆಗೆ ಶಠೆ
ಯಯ್ಯಯ್ಯ ಸೊರಹುಸೊಬಗಾಯ್ತೆನುತಲರಸನಿಕ್ಕೈಹೊಲ್ದ ನಗಲವದಿರು ॥೨೭॥

ಮತ್ತೆ ಬಿನ್ನಹಗೈದರೊಡೆಯರೊಳು ಹುಸಿ[3]ನು[3]ಸುಳಿ
ನುತ್ತರಂಗೊಡಬಹುದೆ ನಿಮ್ಮಡಿಗಳಾಣೆ ಯಿದು
ತಥ್ಯವೆನಲೇನೇನು ಬಹುಚೋದ್ಯವೆನುತ ಬೆಱಗಂ ಬೆಟ್ಟಿದಟ್ಟನಂತೆ
ಚಿತ್ತಚಿತ್ರದ ರೂಪುದಳೆದು ಮೊಗಗೈಯಿಟ್ಟು
ಮತ್ತೆ ಕೆಲಚರರ ನೋಡಲ್ಕಳುಪಲಾ ಸಮಯ
ಕಿತ್ತಲಾ ಭಕ್ತನಿಧಿ ಕೈಗೊಡಲ್ತಾಪಸಂ ನಿಂದು ನಡೆತಹುದ ಕಂಡು ॥೨೮॥

ಉರವಣಿಸಿ ಪಱಿದೈದುತುಘ್ಘಡಿಸುತಾ ಬಹರೆ
ಚರಲಿಂಗಸಹಿತ ದಣ್ನಾಯಕರೆನಲ್ಕದೇ
ನಱಿದಿಗರಿದೆನುತಲಿದಕುಪಮಾತ್ಯಗೊಟ್ಟಾದಿ ಖಳರ ನೋಡಿತ್ತನೋಡೆ।
ಹರಲಾಂಛನದ ಕರುವ ಹರನ ಮಾಡದ ಹಸ್ತ
ಪರುಷಪುರುಷಂ ಕೈಗೊಡಲ್ಕಮರಿಸುತ್ತವರ
ಗುರುಮೂರ್ತಿ ಉದಯದೋಱಲ್ಕೆ ನೃಪಮುಖದ ಜಯದಪಹರಾರ್ಥಂ ಬಪ್ಪೊಲು ॥೨೯॥

ವರಜಟಾಜೂಟವಲುಗುತ್ತ ಭಾಳದ ಭಸಿತ
ಸಿರಿ ತುಳುಕುತುರಗಕುಂಡಲಗಳೊಲೆವುತ ಗಳದ
ಗರುವಲಿಂಗಂ ಮೆಱೆಯೆ ರುದ್ರಾಕ್ಷಿಗಳ ಹಾರ ಗಮನಕ್ಕೆ ಗಮಕಿಸುತ್ತ।

---

[1] ಹಾಯೆನಲುಹಾಯು (ಗ.ಘ.ಚ). [2] ಟಕಿ (ಕ.ಚ). [3] ಮ (ಕ.ಚ).

ಕರುಣಾವಲೋಕನಂ ಹೊಳೆವುತಾಧಾರವ
ಚ್ಚರಿದೋಱುತಕ್ಷಮಾಲಣಿಯೆತ್ತ್ತಡಿಯಿಟ್ಟು
ತರಕ್ಷುತ್ವವುಲಿವುತ್ತ ಪಾವುಗೆಗಳಾನಂದ ಪರೀಕ್ಷೆಗೊಡುತ್ತೈತರುತಿರೆ ॥೩೦॥

ಹಾಱಿತ್ತು ಹಂಸನೃಪವ[1]ದನ[1] ಮುನ್ನಿದನೆಗಳ್ದ
ಗಾಱುಗಳೆ ಗಳ ಸಂಕಲಿಕ್ಕಿದುವು ಕರ್ಣಜಪ
ವೇಱುವಡೆಯಿತ್ತು ಮತ್ಸರಮ[2]ನಂ[2]ಗೆಟ್ಟುಬಿಳುಪೇಱಿತ್ತು ಧೂರ್ತರೊಡಲ।
ಡೋಱುಗಳೆಯಿತ್ತು ದೂಷಕರ ದುರ್ಬಗೆ ರುಧಿರ
ಗಾಱಿತ್ತು ನಮ್ಮ ಬಸವೇಶ್ವರನ ಭಕ್ತಿ ನಿಜ
ಮಱಿನೆಯು ಕಂಡೆಱೆದುಬಾ ಸಭಾಂತರಕೆ ಶಿವಯೋಗಿ ಬಙ ಗಮಕ ಗಂಡು ॥೩೧॥

ಕಾಳಿಮನ ಕಣ್ಬೇನೆ ಮಂಚಿಗನ ಕರ್ಣವ್ಯಥೆ
ಚೋಳಿಮನ ಮುಖರೋಗ ಕರಿಯಕೇಶವನ ಶಿರ
ಶೂಲೆ ಕುಂದಂ ಖಚಪ ಹರಿಭಟ್ಟರಾಜಿಹ್ವ ಸ್ತಂಭ ವಿಷಮೋಗ್ರವಾತ ।
ಓಲೆವೆಗ್ಗಡೆಯಗಳ ಗ್ರಂಥಿ ನೇಮಯ್ಯಗೋ
ಪಾಳಪೆದ್ದಿಗಳ ಹೃದಯಾವರ್ತಜಠರಪೆ
ಜಾರ್ಜ್ವಲಾಮುಖದೊಲಿದುದಾದಿವೃಷಭನ ಭಕ್ತಿಲೀಲಾವಿಲಾಸಗಮಕ ॥೩೨॥

ಉಚ್ಚವಂ ಗುಡಿಗಟ್ಟುತಾನಂದವಂಕುರಿಸು
ತಾಶ್ಚರ್ಯ[3]ಳಾ[3]ಪಿಸುತ ಹರುಷಹಱವಱವುತ್ತ
ಸಚ್ಚರಿತ ಸುಳಿದಾಡ[4]ತೊಡ[4]ಗಿತ್ತು ಸಂತೋಷದಂತುಕಂ ನಲಿದಾಡುತ ।
ಹೆಚ್ಚುಹೆಂಪೇಱುತ್ತ ಮನಮಹತ್ವಡೆವುತ್ತ
ನಿಶ್ಚಯಂ ನಿಜಗಾಣುತಾ ಸಭೆಯೊಳಿಹ ಭಕ್ತ
ವಚ್ಚಲರ ಭಾಗ್ಯಾಧಿದೈವ ನರ್ತಿಸುತ್ತೈಯ್ಯನಡಿಯೊಡನೆ [5]ಧರೆ [5]ರಂಜಿಸೆ ॥೩೩॥

ಮೃಡನಾಪರಾವತಾರದ ಮೂರ್ತಿ ಬರೆ ಕಂಡು
ಪೊಡವಿಪತಿ ಭೀತಾತುರದೊಳೆದ್ದು ಮಂಟಪದ
ನಡುಗಂಭವರೆಗೈಯಲಾ ಗದ್ದುಗೆಯುನಾ ಮಹಾತ್ಮಕಂ ಬಂದೇಱುತ।
ಬಿಡದೆ ಪದಪದ್ಮಗಳ ದಂಡನಾಯಕಬಸವ
ಪಿಡಿದು ಜಯಯೆನುತಿರಲು ಭಕ್ತಜನವೆಲ್ಲುಘೋ
ಗೊಡುತಿರಲಿಕಾ ನೃಪತಿಯೊಡನೆ ಪೆರ್ಮಂತ್ರಿ ಸಿದ್ದರಸಾಂಕನಿಂತೆಂದನು ॥೩೪॥

---

[1] ರ (ಗ.ಪು.ಥ). [2] ನಲ (ಕ.ಚ). [3] ರಾಳಾ (ಕ). [4] ಲೊದ (ಕ.ಚ). [5] ರತಿ (ಗ.ಪು.ಥ).

ಕನಕ ತಾ ತನ್ನ ಬೇಳುವೆಯಿಂದ ಕ್ಷಯವಾದ
ವನಕೆ ಗರ್ಭಂಗಟ್ಟಿ ಯಾದವರ್ಮುಡಿದರ
ತೃಣಕದಿಂ ಕಂಭಹೊಯ್ದೇನಕಂಡನು ಹಿರಣ್ಯಕ ಮಗನ ಮತ್ಸರದಲಿ।
ಅಣಿಯಲ್ಲದುದ ನೆಗಳೆ ತಾನಿಟ್ಟ ಬೇತಾಳ
ತನಗೆ ಬಪ್ಪಂತೆ ಬರಲಡಗಿದಡೆ ಪೋಪುದೇ
ನನುಪಮದ ದೈವಿಕವಿದೆ[1]ನುತೊರೆದು ನೃಪನ ತಂದೆಱಗಿಸಿದ ಮುನಿಪದಕ್ಕೆ[1]॥೩೫॥

ವಿನಯದಿಂದೆತ್ತಾ ನಂ ಕ್ಷೇಮಕುಶಲತೆಯ
ನನುನಯದೊಳಾದರಿಸಿ ಪರಕೆಗೊಡೆ ಮತ್ತೆ ಭಯ
ವನುಕರಿಸಲಾಕಂಪಿಸುತ್ತ ವಿನಮಿತಭೀತಿಯಿಂದೀಕ್ಷಿಸುತ್ತ ಬಸವ।
ಮನುಜನೆಂಬನ ಬಾಯಿ ಹುಳಿಯದೇ ನಿಂದೆನ್ನ
ಹಣಿಯಕ್ಕರವ ತೊಡೆಯಪೇಳ್ದಡೀ ಶಿವಮೂರ್ತಿ
ಕ್ಷಣದೊಳೊರೆಸುವ ನಾನು ಮರನೇಱ ಮಾರಿಯಂ ಕರೆಯಲದ ಪರಿಹರಿಸಿದ॥೩೬॥

ಎಂದು ಮನದೊಳು ಮನಕ್ಕುಪದೇಶಿಸೊಡೆಯರ್ಗೆ
ವಂದಿಸರ್ಚನೆಗೈದು ಪರಮವಿಶ್ವಾಸಿಗಳ
ತಂದೆ ನಾನಿವರ ನೋಡಲ್ಕಮ್ಮೆ ನಿಮ್ಮನಿಜನಿಳಯಕೊಯ್ದೇವರೆಮ್ಮ।
ಮಂದಿರದೊಳಿರತಕ್ಕವರೆ ಎನುತ್ತೆದ್ದು ಕರ
ದ್ವಂದ್ವಮಂ ಮುಗಿದು ಕಳುಪಲು ಶೈವಸಿದ್ಧಾಂತ
ಸಿಂಧುತಿರುಗಿತ್ತತ್ತಲಾ ನರೇಶ್ವರಭ್ರಮೆ ಱುಬಳಗವಂದಿಗನಾಗಿರೆ ॥೩೭॥

ಆರುಹತಶಾಸ್ತ್ರದೊಳೆಸೋದರನೃಪಗೆ ವ್ಯಾಧಿ
ತೋಱದಡೆ ಪರಿಹರಾರ್ಥಕ್ಕೆ ಕೆಲ ಪ್ರಾಣಿವಧೆ
ಕಾರಣವಱಿಯೆ ಹಿಂಸೆ ವ್ರತದ್ರೋಹವೆಂದೊಂದು ಹಿಟ್ಟುಗೋಳಿಯ ಕಲ್ಪಿಸಿ।
ಕೂರಲಗಿನಿಂ ಕೊರಳನರಿಯೆ ಕೂಗಿಡುತಲದು
ಧಾರುಣಿಗೊಱಗಲಾ ಫಲದೊಳಾ ನರೇಂದ್ರಂಗೆ
ಕ್ರೂರಜನ್ಮಗಳೇಳು ಬಂದವೆದ್ಭಾವಿ ತದ್ಭವತಿ ಕೇಳ್ಳೊ ವಿಶ್ವರ ॥೩೮॥

ಆರಾರು ತಮತಮ್ಮ ದೈವಸ್ವರೂಪಗಳ
[2]ದಾರಶ್ಮಚಿತ್ರ ಮೃತ್ತಿಕೆ[2]ಲೋಹದಿಂ ಕಲ್ಪಿ
ಸಾರಾಧಿಸಲ್ಕಳಾಂಗಿಗಳಹವು ನೀಂ ಕಲ್ಪಿಸಿಟ್ಟ ತಾಪಸನ ನಿನ್ನ।

---

[1] ನೆನುತ್ತೊರೆನುತನ್ನನೃಪನತಂದೆ ಯಗೆಸಿದಸು (ಖ.ಗ.ಛ). [2] ವಾರಾಶಿಚಿತ್ರದಾ (ಖ.ಕ.ಗ).

ಕಾರಣಿಕ ಮಂತ್ರತಂತ್ರಿಯಮುಖದಿ ಕರೆಸಲು ಸ
ಮಾರಭುಗ್ಭರಣಬರಲೇಕಚ್ಚರಾದಿ[1]ರೆಲೆ[1]
ಧಾರುಣಿಪ ನಾರಿಸ್ತನ ರಜ ಮೞಲ್ಬಳ್ಳದೊಳು ಲಿಂಗನಿಜಮಂ ತೋಱೆ ||೩೯||

ಎಂದು ಸಿದ್ಧರಸ ಮಂತ್ರೀಶ ಬಿಜ್ಜಳನ ಮನ
ಸಂದೇಹಬೞಿಗು ಬೆಂಕೊಳಲೊಡಂಬಟ್ಟೆಮ್ಮ
ತಂದೆ ತೀರಲ್ತಾಯಿಸಹಗಮನವಾಡೆ ಬಾಲ್ಯದೊಳು ನಿಮ್ಮರಸಿ ಪದ್ಮ।
ಗಂಧಿ ಮೊಲೆಯೂಡೆಮ್ಮ ಬೆಳಸಿ ಪಟ್ಟಂ ಕಟ್ಟಿ
ಮುಂದಿಟ್ಟುಕೊಂಡಿರ್ದ ತಂದೆ ನೀ ಬುದ್ಧಿವೇ
ಳ್ವಂದಹುದಹುದೆನುತವರ್ಗೆ ಪೊಡಮಟ್ಟರಸು ಮಂದಿರಕ್ಕೇಳುತೆಂದ ||೪೦||

ಮಾದೇವತೆಗಳ ಮುಖಮೂರ್ತಿಯೋ ಮೇಣು ಪರ
ದಾದಿದೇವತೆಯೊ ಸಿದ್ಧಾಂತಶಿಕ್ಷಾಗುರುವೊ
ನಾದಬಿಂದುಕಳಾಗಮಶ್ರೀಯಸ್ಥಾನವೋ ಮಾಮಾಮಹಾಚೋದ್ಯದ।
ಸಾಧನಸ್ಥಳವೊ ಶ್ರೀಬಸವದಣ್ಣಾಯಕನ
ಪಾದಕ್ಕೆ ಶರಣು ಮರದಾಪಸನ ಮಾಡಿ ಪ್ರತಿ
ವಾದಮನ್ನೊಡ್ಡೆ ಖಂಡಿಸಿದನೆಂದರಸು ಪರವಾದಿಗಳು ಜಯಯೆನುತಿರೆ ||೪೧||

ಭಕ್ತರುತ್ಸಹ ಮಹೇಶ್ವರರ ಮಹಿಮಾನದಪ್ರ
ಯುಕ್ತ ಪ್ರಸಾದಿಗಳಪರಿಣಾಮ ಪ್ರಾಣಲಿಂ
ಗೋಕ್ತರವಧಾನ ಶರಣರ ಪರಮ ಲೀಲೈಕ್ಯರಾನಂದವಡಿಯಿಡುವೋಲು।
ವ್ಯಕ್ತತರಗತಿಗಮಕಕಳೆವಿಲಾಸವನು ಲೋ
ಕೋಕ್ತಮಂ ಮಾಡುತಾ ಲಿಂಗಜಂಗಮದ ನಿಜ
ಭಕ್ತಿಗೃಹಕ್ಕೈತಂದ ಸಕಲಮಂಗಳಮಹೋನ್ನತಸತ್ಕ್ರಿಯೋಕ್ತಿಗಳಲಿ ||೪೨||

ಪಾಣಪ್ರತಿಷ್ಠೆಯಂ ಮಾಡಿ ತಂದಾ ಲಿಂಗ
ಪ್ರಾಣಿಯನುದಾರಸಂಗಮನೆಂದು ಗುಣನಾಮ
ಗಾಣಿಸವರನು ಗಣಸಮೂಹದೊಳ್ವೈರಸರ್ಚಿಸುತ್ತಿಹನುಪಮಚರಿತನ।
ವಾಣೀಶಕೋಟಿಗಳು ಹೊಗಳಲಳವಲ್ಲ ನಿ
ಮ್ಮಾಣೆಂದು ಪ್ರಮಥರ್ಗೆಪರಿಕ್ಷಿತ್ತ ನಂದೀಶ
ನಾಣಿತಿಯೊಳೊರೆದರಿ[2]ನಿ[2]ದ ಶರಣರವಧರಿಸಿ ಬಸವಾಂಕಮಂತ್ರೋಚ್ಚರಣೆಯ
||೪೩||

---

[1] ಯಲಿ (ಜ). [2] ರಿ (ಕ).

ಬಸವಯೆಂದೊಮ್ಮೆ ಸ್ವಯ ಬಸವಯೇಂದೊಮ್ಮೆ ಚರ
ಬಸವಯೆಂದೊಮ್ಮೆ ಪರ ಬಸವಯೆಂದೊಮ್ಮೆ ಹರ
ಬಸವಯೆಂದೊಮ್ಮೆ ಶಿವ ಬಸವಯೇಂದೊಮ್ಮೆ ಸದ್ಬಸವಯೆಂದೊಮ್ಮೆ ಚಿತ್ತು ।
ಬಸವಯೆಂದೊಮ್ಮೆಯಾನಂದಮಯ ಘನಮೂರ್ತಿ
ಬಸವಯೆಂದೊಮ್ಮೆ ನಿಜಸತ್ಯಪರಿಪೂರ್ಣಾತ್ಮ
ಬಸವಯೆಂದೊಮ್ಮೆ ಗುರು ಬಸವಯೆಂದನವರತ ಜಪಿಸಲಿಷ್ಟಾರ್ಥಸಿದ್ಧಿ ॥೪೪॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗರದೊಳಿದು ಕಾಷ್ಠತಾಪಸನ ದಿಟಮಾಡಿ ಮೆಱೆದ ಸಂಧಿ ॥೪೫॥

ನಲವತ್ತನೆಯ ಸಂಧಿ

ಸೂಚನೆ—

ಧಾರುಣಿಪ ಬಿಜ್ಜಳನ ಪಟ್ಟದಾನೆಯ ಕೊಂದ
ವೀರಮಡಿವಾಳನ ಮಹಾತ್ಮೆಯಂ ಪೇಳುತ್ತ
ಲೋರಂತೆ ನೃಪನ ತಂದೆಱಗಿಸಾನೆಯ ಪ್ರಾಣವಡೆದ ಸಂಗನ ಬಸವನು।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತು ವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತು ॥೧॥

ಗೋಕರ್ನನಾಹಾರ ಮಿತ್ರಮಿತ್ರಾಬ್ಜಗೋ
ಗೋಕರ್ನನಾಕಲಿತ ಕರ್ನಯುಗಳಸಮಗೋ
ಗೋಕರ್ನಶಯನ ಗೋಗೋಜಪೂಜಿತಪದಂ [1]ಗೋ[1]ವಸನ ಗೋಗೋಧರ॥
ಗೋಕರ್ನವೈರಿವಾಹನಪಿತಂಗೋಕಂಜ
ಗೋಕರ್ನರಾಜಕಟಕಂ ಗೋಪಕಂಧರಂ
ಗೋಕರ್ನಸಿಂಜಿನೀಚಾಪಧರನವತಾರ ಬಸವಕೊಡು ಗೋಸಿದ್ಧಿಯ ॥೨॥

ಅವಧರಿಸಿ ಪ್ರಮಥನಾಯಕರು ನಿಮ್ಮಯ ಬಸವ
ನವನಿದೇವಿಯ ಮುಖದಮುಕುರವೆಂದೆನಿಸಿ ಒ
ಪ್ಪುವ ಪರಮಕಲ್ಯಾಣಪುರವಾಳ್ವ ಬಿಜ್ಜಳಕ್ಷಿತಿಪಗೆ ಪ್ರಧಾನನಾಗಿ।
ಭುವನಮಂ ಪಾಲಿಸುತ್ತರಸುಮಂತ್ರಿಗಳ್ವೈದೆ
ಸುವಿಚಾರದಿಂದ ಸಾಮ್ರಾಜ್ಯಗೈಯಲ್ಕೊಂದು
ದಿವಸದೊಳ್ನಡುವೆ ನಡೆದಾ ಮಹಾಕಥನಮಂ ಪೇಳ್ವೆನತ್ಯುತ್ಸಹದೊಳು ॥೩॥

ಸುಖಸಂಕಥಾನಂದದಿಂದ ಬಿಜ್ಜಳರಾಯ
ನಖಿಳಪ್ರಧಾನಿಗಳು ಮಂಡಲಿಕ ಸಾವಂತ
ಸಕಲಸೇನಾಧಿಪರ್ಮನ್ನೆಯರ್ಮಕುಟವರ್ಧನರೆಸೆವ ರಾಜಪುತ್ರ।

---

[1] ಗಾ (ಖ.ಕ).

ನಿಕರವೆಡವಂಕ ಬಲವಂಕ ಬಂದೋಲೈಸೆ
ಪ್ರಕಟತರದಲಿ ರಾಯ ಗಜಸಿಂಹವಿಷ್ಟರದ
ಶಿಖರದಲಿ ಮೂರ್ತಿಗೊಂಡಿಪ್ಪವನಿಪಾಲಕನ[1]ನೇ[1]ನನಭಿವರ್ಣಿಸುವೆನು ‖೪‖

ಬಿಸಜಸಖಗಾಕಿರಣ ಪಸರಿಸಿದ ಮಾಳ್ಕೆಯಿಂ
ಸಸಿಗಮೃತಕಳೆಗೂಡಿದಂತೆ ನವರತ್ನಗಳ
ವಿಸರಕ್ಕೆ ಲಹರಿಪುಟ್ಟಿದ ತೆಱದಿ ಬಿಜ್ಜಳಗೆ ಬಸವಪ್ರಧಾನರತ್ನ।
ಪಸರಿಸಿದ ಸಕಲಸೇನಾತಂತ್ರವೆರಸಿ ಮಿಗೆ
ಮಿಸುಪ ಸಿಂಹಾಸನದ ಭೂಪಾಲಕನ ಬಲದೊ
ಳೆಸೆವ ಗದ್ದುಗೆಯ ಮೇಲೊಪ್ಪಿರ್ದನಪ್ರತಿಮ ಭೂರುದ್ರಬಸವೇಶನು ‖೫‖

ಝಡಿವ ಪಡಿಹಾರರುಘ್ಘಡಿಪ ಕಂಬಿಯ ಚರರ
ನಡುವೆ ಕ್ಯಾವಾರಿಸುವ ಭಟ್ಟರಕ್ಕರಿಗರೊಡ
ನೊಡನೆ ಕವಿ ಗಮಕಿಗಳ ವಾದಿಗಳ ವಾಗ್ವಿಲಾಸದ ಸಂಭ್ರಮದ ವಿಭವದ।
ಸಡಗರದ ಸಕಲಶಾಸ್ತ್ರಾಗಮೀಕರ್ವೆರಸಿ
ಪೊಡವೀಶನಿಂತು ಸೌರಂಭದಿಂದೊಪ್ಪಿರಲ್
ಮೃಡಶರಣನುಭಯಲೋಕಾಚಾರ್ಯ ವೀರಮಡಿವಾಳನಾ ಪುರದೊಳಿಹನು ‖೬‖

ಹರನಾಪರಾವತಾರದಮೂರ್ತಿ ಮಾಚಯ್ಯ
ಧುರಧೀರದೂಷಕಕುಲಾರ್ಣವವಡಬನಿಂತು
ದುರಿತಮಾತಂಗಕಂಠೀರವಂ ದಕ್ಷಾಧ್ವರಧ್ವಂಸಕನ ಸ್ವರೂಪಂ।
ಶರಣಪದಪಂಕಜಭ್ರಮರ ಮಲೆವರಗಂಡ
ಶರಣಾಗತಮಲರಕ್ಷಾಮಣಿ ಮಹಾವೀರ
ಶರಣಗಣವಜ್ರಪಂಜರನು ತಾ ಛಲದಂಕಮಲ್ಲ ಮಡಿವಳದೇವನು ‖೭‖

ಲಿಂಗಿ ಭವಿಗಳ ಕಾಣುತಾಕ್ಷಣದಿ ಶಿರವರಿವ
ಭಂಗಹೊತ್ತವರು ಮಱೆಹೊಗೆ ಕಾಯ್ವ ಮಾಱಾಂತ
ರಂಗಮಂ ಸಂಹರಿಪ ಕದನಪ್ರಚಂಡ ಸಮರದ ಶರಧಿಯೆಂಬತಿಬಳ।
ತುಂಗವಿಕ್ರಮನಹಿತರೆನಿಪ ರಾಯರಗಂಡ
ಹಿಂಗದರಿನಿಕುರುಂಬಗಳಿಗೆ ತೊಲಗದ ಕಂಭ
ಜಂಗುಳಿದರುಶನಗಳ ಲೆಕ್ಕಿಸದ ಮಡಿವಾಳ ವೀರಭದ್ರಾವತಾರ ‖೮‖

---

[1] ದೇ (ಚ.ಕ).

ಪರಮಮಂಗಳಮೂರ್ತಿ ಮಾಚಿದೇವಯ ತಮ್ಮ
ಗುರುತರದ ಕಾಯಕವ ಶರಣರಂಬರಗಳನು
ಹರುಷಪ್ರವಾಹದಿಂ ತೊಳೆದಾತ್ಮದುಬ್ಬೆಯಲಿ ಸ್ತುತ್ಯಪ್ಪಮದ ಸಮಿದೆಯ।
ನಿರಿಸಿ ಜ್ಞಾನಾಗ್ನಿಯ ಪ್ರಭಾವಿಸಾ ವಸ್ತ್ರಗಳ
ಹಿರಿದು ಮೋಳಿಗೆಗಟ್ಟಿ ಕೊಂಡೊಯ್ದು ಗಂಗೆಯೊಳು
ಹರುಷದಿಂದೊಳೆದು ಶಿವರಸದ ಗಂಜಿಯನಿಕ್ಕಿ ಗಳಿಗೆಯಂ ಮಾಡಿ ಮತ್ತೆ ||೯||

ತೊಳಪ ಬಿಳಿದುಗಳ ಪಟ್ಟೆಳೆಯ ನೀಲಿಯನೊಲಿದು
ಹಳದಿ [1]ಮಂಜಿಷ್ಟ[1] ಮಾಣಿಕವಟ್ಟೆ ಚಂದ್ರಿಕೆಯ
ಹೊಳೆವ[2] ಜೀ[2]ಬಿಗಳ ಮಾಂದಳಿರ ಕಾವಿಯ ಮದಾದಿಯ ತೋಪು ಚೆಲ್ಲಾರನ।
ಮಳಲು[3]ಗಂಟಿಕಿ[3]ಯ [4]ಪುಷ್ಪಾವ[4]ಳಿ ಗಜಾವಳಿಯ
ನಳನಳಿಪ ಸಿಂಹಾವಳಿಯನು ತು[5]ರ[5]ಗಾವಳಿಯ
ನೊಲಿದು ಮನುಜಾವಳಿಯ ವಸ್ತ್ರಗಳ ತೊಳೆವ ಮಡಿವಳ ಮಾಚಿದೇವಯ್ಯನು ||೧೦||

ಕರಪರುಷದಿಂ ಪಿಡಿದು ವಸ್ತ್ರವನು ಕಲ್ಲಿನೊಳು
ಹರುಷದಿಂದಪ್ಪಳಿಸಿ ಒಗೆದು ಚೆಲ್ಲಿದ ನೀರು
ಸುರಸಮೌಕ್ತಿಕ ಮಾಣಿಕವು ನೀಲ ವಜ್ರ ವೈಡೂರ್ಯ ಮರಕತವೊಪ್ಪುವ।
ಪರಿಪರಿಯ ನವರತ್ನವಾಗಿ ಮಿಗೆ ಸುರಿವುತ್ತ
ಉರುತರಕಳಾಕಾಂತಿ ಥಾಳ ರಂಜಿಸೆ[6]ನ[6]ಲಿದು
ಪರದರಂಗಡಿಯಿಕ್ಕಿ ಮಾಱುವರು ಮಡಿವಾಳನಿಂದೊಗೆದ ಪೊಸರತ್ನವ ||೧೧||

ನಿತ್ಯದಡೆಯೊಳ್ವಿಮಲವಸ್ತ್ರಗಳಿಗೆಯನೊಡೆದು
ಭೃತ್ಯಜಲಮಂ ತಳಿದು ಸತ್ಯಕೊಡತಿಯಕೊಂಡು
ಒತ್ತಿ ಘಟ್ಟಿಸಿ ರಜತಪರ್ವತದ ತೆಱದಿ ರಾಶಿಯಮಾಡುತಿರೆ ಮಡಿಯನು।
ಕರ್ತ ಗುರುಲಿಂಗಜಂಗಮವೊಲಿದು ಹರುಷದಿಂ
ದರ್ಥಿಸಿದ ವಸ್ತ್ರಂಗಳಂ ಇತ್ತು ಶರಣೆಂಬ
ವಸ್ತ್ರದವರ್ಗಳು ಬೇಡೆ ತಡೆಯದವರವರ ವಸ್ತ್ರವನೀವ ಮಾಚಯ್ಯನು ||೧೨||

ಎಂದಿನಂದದಿ ರಾಜಬೀದಿಯಲಿ ಮಡಿವಾಳ
ತಂದೆಗಳು ಎಡಗೈಯ್ಯ ಘಂಟೆ ಬಲಗೈಯಲಗು।
ಪೊಂದಿಸಿಯೆ ಮಡಿವಸ್ತ್ರಮೋಳಿಗೆಯು ಬೆನ್ನೊಳಗೆ ನಿಂದುನಿಂದಲ್ಲಲ್ಲಿಗೆ।

---

[1] ಮುಂಚಟಿಗೆ (ಕ.ಚ). [2] ಜೇ (ಕ.ಖ.ಚ). [3] ಗಂಟಿಕ್ಕಿ (ಘ). [4] ಪೊಪುಳಿ (ಕ.ಚ). [5] ರು (ಕ.ಚ.ಖ). [6] ಪೊ (ಕ.ಚ.ಗ).

ಸಂದಿಸದಿರಿದಿರಾಗದಿರಿರೊ ಜಡಭವಿಗಳಿರ
ಕೊಂದಪೆನು ಸಾಱಿಲಿಕೊಂದಡೆ ದೋಷವಿಲ್ಲೆನುತ
ಮುಂದಕಡಿಯಿಡಲೊಬ್ಬ ವಿಪ್ರನಿದಿರಾಗಿಬರಲಿಱಿದು ಚಿಮ್ಮಿದ ಗಗನಕೆ ॥೧೩॥

ತಡೆಯದಾ ಪುರದ ವಿಪ್ರರ್ನೆರೆದು ತಮತಮಗೆ
ಕಡುಖತಿಯೊಳೆಲ್ಲ ಶಿವದಿಡುತ ಮೊಱೆಯಿಡುತ್ತೈದಿ
ಬಿಡಿಮುಡಿಯ ಬಱಿವೈಯ ಕೈಹುಲ್ಲ ಹಿಡಿದುಬೊಬ್ಬಿಡುತ ಹುರಿಗಟ್ಟಿಕೊಂಡ।
ಧೃಢವೀರ ಮಡಿವಳ್ಳಯನ ದೂರಿ ಭೂಸುರರು
ಪೊಡವೀಶನೋಲಗಕ್ಕೈದಿ ಖೋ ಖೋ ಯೆಂದು
ಘುಡುಘುಡಿಸುತವಿಧಾಯೆನುತ್ತ ಬಂದೋಲಗದ ಮುಂದೆ ವಿಪ್ರರ್ಮೊಱೆಯಿಡೆ ॥೧೪॥

ಏನಿದೇನೆತ್ತಣದೊ ಪಾರ್ವರದ್ಭುತಮೊಱೆಯು
ಏನೆಂದು ರಾಜಪಿಸುಣರ್ಮಂಚಯುಂ ನೋಡೆ
ತಾನೆದ್ದು ಅವರ ಒಕ್ಕಣೆಗೇಳಿ ಒಂದಕೊಂಬತ್ತಾಗಿ ಸಂದನಿಕ್ಕಿ ।
ಭೂನಾಥ ಚಿತ್ತೈಸು ಮಾನಿತಮಹೋತ್ತಮಂ
ಜ್ಞಾನನಿಧಿ ಸದ್ಬ್ರಾಹ್ಮಣಂ ರಾಜಬೀದಿಯಲಿ
ತಾನು ಸಹಜದಿ ಬರಲ್ಕೊಬ್ಬಸಗನಿಱಿದು ಕೊಂದಂ ಭಕ್ತನೆಂದು ಕೊಬ್ಬಿ ॥೧೫॥

ಚಿತ್ತೈಸಿದಿರೆ ಜೀಯ ಅಸಗನಂತಸ್ಥಮಂ
ಭಕ್ತ ತಾನೆಂದು ಮಡಿವರ್ಗಮಂ ಬೆನ್ನಿನೊಳು
ತೆತ್ತಿಸೆಡಗೈಯಲ್ಲಿ ಜಯಘಂಟೆ ಡಂಗುರಂ ಕಿತ್ತಲಗು ಬಲಗೈಯಲಿ।
ಅತ್ತತೊಲಗಿರೊ ಲಿಂಗಬಾಹ್ಯಭವಿಗಳು ಮರಳ
ದಿತ್ತಲದಿರಾದಡಿಱುವೆನು ಯೆಂಬ ವೇಳೆಯಲಿ
ಮತ್ತೆಯಾ ವಿಪ್ರ ಸುಳಿಯಲ್ಕಿರಿದು ಕೊಂದನೆಂದಾ ಮಂಚಿಮರಸನೊದರೆ ॥೧೬॥

ಕಾದಾಜ್ಯದೊಳು ನೀರನೆಱೆದಂತೆ ಘುಳುಘುಳಿಸಿ
ಬೀದಿವಱಿದುಗ್ರಕೋಪದೊಳು ಬಿಜ್ಜಳಕ್ಷಿತಿಪ
ತಾ ದುರಾಗ್ರದೊಳು ಬ್ರಹ್ಮೇತಿಯಸಗನನು ಹಿಡಿತನ್ನೆಂದು ಪರಿವಾರವ ।
ಮೂದಲಿಸೆ ಮನ್ನೆಯರು ಭುಜಬಳರು ಸುಭಟರಿಂ
ತೈದಿತಂದಾ ರಾಜಬೀದಿಯಲಿ ದಳಮಾಡಿ
ಕಾದಿರಲ್ಕಾದಿರುದ್ರಪರಾವತಾರಮಡಿವಾಳ[1]ನಿನ್ನ[1]ತ್ತಲಿತ್ತ ॥೧೭॥

---

[1] ನಂ ಅ (ಕ.ಖ.ಬ).

ತೆಱಿನಱಿಯದುದ್ರೇಕದಿಂದೆ ಪರಿವಾರಮಂ
ದುಱುದುಂಬಿಗಳ ಮಾತ ಕೇಳಿ ಕಳುಪಲ್ಸುಖವೆ
ಕಱಿಕಂಠನಾಮೂರ್ತಿ ಕಲ್ಪಾಂತದಾದಿರುದ್ರವತಾರ ವೀರಭದ್ರ ।
ಮಱೆವೊಗಲ್ಕಾಯ್ವ ಮಾಱಾಂತವರ ಸಂಹರಿಪ
ಕೊಱಿತೆವೊಱಬೇಡೆಂದು ಬಸವದಂಡಾಧೀಶ
ರಱುಪಲ್ಕೆ ಬಿಜ್ಜಳಕ್ಷಿತಿಪ ಭವಿಭಕ್ತರೇನೆಂದು ಸಂವಾದಿಸುತಿರೆ ॥೧೮॥

ಹರಿಗೆ ಖೇಡೆಯ ಬಿಲ್ಲು ಲೌಡೀಟಿ ಶಲ್ಯಹಂ
ಪಿರಿ [1]ಯಬಾ[1] ಣಂ ಖಡ್ಗ ನಾರಾಚ ಪಿಂಡ್ವಾಳ
ಸುರಗಿ ಕಕ್ಕಡೆ ತೋಮರಂ ಮುಸಲ ಸಬಳ ಭಲ್ಲೆಹ ಕಡಿತಲೆಯ ಸುಭಟರು ।
ಭರದಿ ಹಿಡಿ ಕಟ್ಟು ಕೆಡಹಿರಿ ತಲೆಯ ಕುಟ್ಟೆಂದು
ನೆರೆದ ಪರಿವಾರ ಮುಳಿದೊಟ್ಟೈಸಿ ಬರೆ ನೋಡಿ
ಪರವಾದಿದುರಿತಗಜಪಂಚಾಸ್ಯ ವೀರಮಡಿವಳದೇವ ಕಂಡು ನಗುತ ॥೧೯॥

ಫಡ ತೊಲಗಿ ತೊಲಗಿ ಕೆಡಬೇಡ ಜಡಭವಿಗಳಿರ
ತಡೆಗಡಿವೆ ಸಾಱಿಕೊಂಡಡೆ ದೋಷವಿಲ್ಲೆಂದು
ಪಿಡಿದ ಜಯಘಂಟೆಯಂ ಪೊಡೆದು ಗಗನದಿ ತೊಡರ್ಚಿಮಡಿವಸ್ತ್ರಮೋಳಿಗೆಯ।
ಖಡುಗಮಂ ಜಡಿದು ದಕ್ಷನ ತಲೆಯ ವೀರೇಶ
ಕೆಡಹಿ ದಿವಿಜರ ಶಿರವ ಹೊಡೆ ಚೆಂಡನಾಡಿದೊಲು
ಘುಡುಘುಡಿಸಿ ಪರಿವಾರ ಕವಿಯೆ ಕೈಮಾಡಿ ಕಡಿಖಂಡಮಾಡಿಯೆ ಕೊಂದನು
॥೨೦॥

ಝುಣಝುಣಿಸುವೆಡಗಾಲ ತೊಡರುಲಿಯೆ ಖಡ್ಗದಿಂ
ಖಣಿಖಣಿಲು ನೆಗ್ಗುನಿರಿಲೆಂಬ ರವ ಪುರದೊಳಗೆ
ಹಣಿದವಾಡಿದ ರಾಜಬೀದಿಯಲಿ ತ್ರಿಣಯನಪರಾವತಾರದ ಶರಣನು।
ಕೆಣಕಿ ಮಾಱಾಂತವರ ಕೊಂದಟ್ಟಿಯಾಡಿದಂ
ಮಣಿದು ಮಱೆವೊಕ್ಕು ಬೆರಳಗಚ್ಚಿ ಕಿವಿ ವಿ[2]ಡಿ[2]ದೋಡಿ
ತೃಣಗಚ್ಚಿ ದೈನ್ಯಬಡುತಂ ಕೈದುಗಳ ಹಾಯ್ಕಿದವರ್ಗಭಯವಿತ್ತು ಬಿಟ್ಟ ॥೨೧॥

ಕೆದಱುದಲೆಗಳಲೋಡಿ ಬದುಕಿದರ್ಕೆಲಕೆಲ
[3]ವರ್ಮದಮುಖ[3] ರು ಕೆಟ್ಟು ಧೈರ್ಯವ ಮಱೆದು ನಡುಗುತ್ತ
ಬದುಕಿದೆವು ತಲೆಗಾಯ್ದುನೆನುತ ತಲೆಯಂ ತಡಹಿಕೊಳುತ ಚಾವಡಿಗೆ ಬಂದು ।

---

[1] ಯುಬ್ಬ (ಕ.ಚ), ಯುಬ್ಬಣ (ಗ.ಘ.ಥ). [2] ೦ (ಗ.ಘ.ಥ). [3] ದುರ್ಮದ ಮೂರ್ಖ (ಘ).

ಹೊದರಳ್ಳೆಹೊಯ್ಯುತುಬ್ಬಸಗೊಳುತ ಭೀಕರಾ
ಕದನಕಲ್ಪಾಂತರುದ್ರನು ಸದೆದ ಪರಿವೇಳೆ
ಕುಡಿದು ಕೋಪೋದ್ರೇಕವಿಮ್ಮಡಿಸಿ ಮದಗಜವ ತರಿಸು ತರಿಸೆಂದ ನೃಪನು
॥೨೨॥

ಪಟ್ಟಮದಗಜವ ತರಿಸೆಂದೊಡಾ ಯಂತ್ರಗಳು
ಬಿ[1]ಟ್ಟು[1]ಚರಣದ ನಿಗಳಮಂ ಮದವನೇಱಿಸಿಯೆ
ಕಟ್ಟಿ ವಜ್ರಾಂಗಿವಕ್ಕರಿಕೆಗಳನಳವಡಿಸಿ ಕೊಟ್ಟು ಭರಿಕೈಗಲಗನು ।
ಹೆಟ್ಟಿ ದಂತಕ್ಕೆ ಸೂಲಂಗಿಗಳ ನೆಡೆವಿಡದೆ
ಕಟ್ಟಿ ಮುಖರಂಭಬಾಸಿಗತಿಲಕ ಹೊರಜೆಗಳ
[2]ಲಿ[2]ಟ್ಟು[3]ರೆಂಚೆ[3] ಯ ಬಲದು ಘಂಟೆಚಮರಗಳಿಟ್ಟು ನಿಂದ ಮದಗಜಕೊಪ್ಪುವ
॥೨೩॥

ತೊಳಪ ಮುತ್ತಿನ ಸತ್ತಿಗೆಗಳ ಪಲ್ಲವವೆಸೆಯೆ
ನಳನಳಿಪ ಚಮರಚಾಮರ ಸಿಂದುಸೀಗುರಿಯ
ಹೊಳೆವ ಸುಪತಾಕೆಗಳನಳವಡಿಸಿ ಘುಳುಘುಳಿಸಿ ಜೋಧರುಗಳನುವಾಗಲು ।
ಇಳೆಯೊಡೆಯನವರ್ಗೆ ಬೆಸನೀವುತಾ ರಜಕನಂ
ತುಳಿದು ತಲೆ ಚೆಂಡಾಡಿ ನೀವೆಂದು ಕಳುಪಲ್ಕೆ
ಮುಳಿದು ಮಲೆವುತ್ತ ಬಹ ಮದಗಜವ ನೋಡಿ ಗಹಗಹಿಸಿ ಮಡಿವಳದೇವನು ॥೨೪॥

ನರಪತಿಯ ಗಜವನಂಕುಶದಿ ಮಾವುತರೊತ್ತೆ
ಕೆರಳಿ ಭರಿ ಕೈಯೆತ್ತುತುರವಣಿಸಿ ಒರೆ ನೋಡಿ
ಹರನಮ[4]ನೆ[4]ಯಾನೆ ತೊಲಗದೆ ನಾದಮಂ ಪೊಯ್ದು ಸ್ಫಡಂಗುರವ ನಭದ ।
ಲರಿಸಿ ಭರದಿಂದ ತಿವಿದೊದೆದು ಭರಿಕೈವಿಡಿದು
ಒರಸೆಳೆದು ಗಗನಕ್ಕೆ ತಿರುಹಿ ಘೀಳಿಡೆ ಬೀಸಿ
ಧರೆಯುಲಪ್ಪಳಿಸಿ ಕೊಂದನು ವೀರಮಡಿವಾಳದೇವನಾಕ್ಷಣ ಹಸ್ತಿಯ ॥೨೫॥

ಮಾವುತರು ಜೋಧರುಳಿದವರು ಬೊಬ್ಬಿಡುತೈದಿ
ಭೂವರಗೆ ಮೊಱೆಯಿಟ್ಟು ಬಿನ್ನೈಸಿದರು ಮತ್ತೆ
ದೇವ ಚಿತ್ತೈಸು ಮದವಾರಣವ ಸಂಹರಿಸಿ ಚಾವಡಿಯ ಬೀದಿಗಾಗಿ ।
ತಾವಕಿಲದಲ್ಲಿ ತಿರುಗಿದನೆನಲು ಭೀತಿ ಮ
ತ್ತಾವರಿಸಿ ಭಾವಜ್ಞ ಬಸವದಂಡಾಧಿಪನ
ಶ್ರೀವದನಮಂ ನೋಡೆ ಜಱಿಜಱಿದು ನಗುತ ಕ್ರೀಭಾವ ನೃಪಗಿಂತೆಂದನು ॥೨೬॥

---

[1] ಟ್ಟ (ಗ.ಫ.ಥ.ಖ). [2] ವಿ (ಗ.ಫ.ಥ.ಖ). [3] ಹೊರಜೆ (ಕ.ಚ). [4] ದ (ಖ).

ಆಡಿ ತೋಱುವೆನೆ ಭೂಮಿಪಾಲ ನಿನಗಾಂ ಮುನ್ನ
ನಾಡಾಡಿಯಲ್ಲವೈ ವೀರಮಡಿವಳದೇವ
ಗೂಢಪರಬ್ರಹ್ಮತಾನಾದ ಸಾವಯಸದಾಶಿವ ಮಹೇಶ್ವರನಾದನು ।
ರೂಢಿಸಿದ ಕಾಲಾಗ್ನಿರುದ್ರನಾದಂ ತಾನೆ
ಕೂಡಿದ ಜ್ಞಾನಸಂಹಾರಕಾರಣನಾದ
ಮೂಢದಕ್ಷನ ಯಜ್ಞಮುಮನುರುಪಿದಾತ ತಾನೀತ ಕೇಳೆಂದ ನೃಪಗೆ ॥೨೭॥

ಪುರಮಥನನಾಗಂಧಕಾರಿಯಾದಂ ತಾನೆ
ಹರಿ ಮತ್ಸ್ಯನಾಗೆ ಬಕ ರುದ್ರನಾಗರಿದಾತ
ನುರುಕೂರ್ಮ್ಮ ಹಾರಮಂ ಧರಿಸಿದಾತಂ ತಾ ವರಾಹನಂ ಸಂಹರಿಸಿದ ।
ನರಸಿಂಹನುರಶಿರಚ್ಛೇದ ಶರಭಂತಾನೆ
ಧರೆಯ ಮನುಜರ ಮನದ ಮೈಲಿಗೆಯ ತೊಳೆಯಲ್ಕೆ
ಹರಮೂರ್ತಿ ವೀರಮಡಿವಳದೇವನೆಂದರಸಗೊರೆದ ದಂಡಾಧೀಶನು ॥೨೮॥

ಆವುದಾವುದನುಸುರ್ವೆ ನೃಪ ನಿನಗೆ ಮಡಿವಾಳ
ದೇವನವತಾರ ಹಲವುಂಟು ಸಂಕೋಚದಿಂ
ದೀವಿಧದ ಮಹಿಮೆಯನ್ನುಸುರ್ದೆನಾಗಜ್ಞಾನಭಾವಮಂ ಬಿಟ್ಟು ನೀನು ।
ಕಾವುದೆನ್ನುವನು ಸರ್ವಪರಾಧಿತಾನೆಂದು
ಓವಿ ಶರಣ್ಬೊಗೆ ಕಾಯ್ವನೆಂದು ಬಿಜ್ಜಳರಾಯ
ಗೀ ವಿಮಲಬುದ್ಧಿವೇಳಲ್ಕೊಡಂಬಟ್ಟನಾ ಭಾವಜ್ಞನುಪದೇಶವ[1] ॥೨೯॥

ಮೃಡನ ಶರಣರ ಮಹಿಮೆಕೇಳ್ದಂತು ಮಱೆದು ನೀಂ
ಕೆಡಬೇಡ ಪೊಡವೀಶ ಬಾಯೆಂದು ಕೈವಿಡಿದು
ಒಡಗೊಂಡು ಬಂದು ಮಡಿವಳದೇವನಂಘ್ರಿಯಲಿ ಕೆಡಹಿದನು ಭೂಪತಿಯನು ।
ಪಿಡಿದೆರಡು ಚರಣಮಂ ತಳೆದು ಭಾಳದಿ ಶಿರದಿ
ಬಿಡು ಖತಿಯ ತ್ರಾಹಿ ತ್ರಾಹ್ಯಭಯಕರ ವರದಾನಿ
ಪಿಡದೆತ್ತಿ ರಾಯನಂ ಮನ್ನಿಸಲ್ವೇಕೆಂಬ ನುಡಿಗೇಳ್ದು ಕರುಣದಿಂದ ॥೩೦॥

ಬಸವದಣ್ಣಾಯಕನ ವಾಕ್ಸರುಪವಿಂತು ತಾ
ನೆಸಗೆ ಮಡಿವಳತಂದೆಯುಗ್ರಕೋಪವ ಮಱೆದು
ವಸುಮತೀಶನ ಮಕುಟವಿಡಿದೆತ್ತಿ ಕರುಣಮಂ ಪಸರಿಸುತಭಯಕರವನು ।
ಕಿಸುಗುಳಿಗ ಬಾಹಿರರ ಮಾತಕೇಳದೆ ನೃಪತಿ
ಪಶುಪತಿಯ ಶರಣರಂ ಶಿವನೆಂದು ನಂಬುವುದು
ಉಸುರಿದೆವು ನಿನಗೆ ಮತ್ತೆಮಗೆ ದೋಷಮದಿಲ್ಲವೆಂದು ಬೆಸಸಿದ ಭೂಪಗೆ ॥೩೧॥

---

[1] ಶಕೆ (ಚ).

ಮನದು[1]೦ಬ[1] ಮಡಿವಳಯ್ಯಗಳ ಉಪದೇಶವಾ
ಜನಪತಿಯ ಭಯಮುಡಗಿ ಮತ್ತೆ ವಿನಮಿತನಾಗಿ
ಅನುವಱಿಯದಜ್ಞಾನಕೃತಕನ ಗುಣವ ನೋಡಬೇಡೆಂದು ಮತ್ತೆ ಮಣಿದು।
ಘನಕರಾಂಬುಜಸಂಪುಟಂಗೈದು ಭಕ್ತಿಯಿಂ
ಮನಸಿಜಾಂತಕಮೂರ್ತಿ ತ್ರಾಹಿ ಜಯಜಯ ಎನಲು
ವಿನಯದಿಂ ಬಸವದಂಡಾಧೀಶ ಮಡಿವಳಯ್ಯಗಳಿಗಿಂತೆಂದನಾಗ ॥೩೨॥

ಪರುಷದೊಳು ಹೋರಿ ಕಬ್ಬುನ ಸುವರ್ಣಮಾದ
[2]ಪರಿಯಾ[2]ಯ್ತು ತಂದೆ ನಿಮಗಿದಿರಾದ ನರರಿಂಗೆ
ಕರುಣಿಸಲ್ವೇಕೆಂದು ಬಸವಾಂಕನಾ ವೀರಮಡಿವಾಳದೇವಯ್ಯನ।
ಚರಣರಜರೇಣುವಂ ತನ್ನಕರಪರುಷದಿಂ
ದಿರದೆ ತಾನೆತ್ತೆತ್ತೆಥಾಪೂರ್ವಕಲ್ಪೆಂಬ
ಪರಮಮಂತ್ರಾಹ್ವಾನದಿಂ ತಳಿಯೆ ತಮತಮ್ಮ ಪೂರ್ವರೂಪಾಗೇಳಲು ॥೩೩॥

ಸೃಷ್ಟೀಶ್ವರನ ಪಟ್ಟಮದಗಜಕ್ಕೆ ಪರಿಯೆ
ಕೊಟ್ಟ ಪ್ರಾಣವನು ಮಡಿವಳನಾಜ್ಞೆಯಿಂ ಬಸವ
ನಿಷ್ಠೆಯನಿಧಾನಚಿಂತಾರತ್ನ ಪಂಚಪರುಷದ ಪರಬ್ರಹ್ಮರೂಪ।
ಪಟ್ಟವರ್ಧನನೆ ನೋಡೆನಲು ಸಂತೋಷದಿಂ
ಶಿಷ್ಟಪ್ರಧಾನಿಗಳು ಬೆಱಗಾಗೆ ಪುರಜನಗ
ಳಿಟ್ಟಣಿಸಿ ಕವಿದು ಮೂವತ್ತಾಱು ಕೊಂಡೆಯರು ಮುಟ್ಟಿ ವಂದಿಸುತಿರ್ದರು ॥೩೪॥

ಭೂಮೀಶ ನೋಡು ನೀ ಗಗನದೊಳು ಮಡಿವಳ
ಸ್ವಾಮಿ ಮುನ್ನಿಱಿದ ವಿಪ್ರನ ಶವವ ಖೇಚರರು
ಹೇಮಪುಷ್ಪಕವೇಱಿಸಮರಕನ್ನೆಯ[3]ರ್ಗಳಾರತಿ[3]ಕಳಶ ಕನ್ನಡಿಯಲ।
ಪ್ರೇಮದಿಂದಿದಿರ್ಚಿ ತುಂಬುರನಾರದಾದಿಗಳು
ವ್ಯೋಮಕೇಶನ ಪಾಡೆ ಪುಷ್ಪವೃಷ್ಟಿಯ ಸುರಿಯು
ಲಾ ಮಹಾನಂದಿ ಮಾಕಾಳರುಗ್ಘಡಿಸುತ್ತ ಹೇಮಾಚಲಕೆ ನೆಗೆದನು ॥೩೫॥

ಅರಸು ವಿಸ್ಮಯನಾಗಿ ಕರಸರೋರುಹವೆತ್ತಿ
ಶರಣೆಂದು ಬಸವೇಶ್ವರನ ಕೇಳಿ ಮನವುಕ್ಕಿ
ಹರುಷದಿಂ ವೀರಮಡಿವಳದೇವನಿಂದಳಿದವರ್ಗೆ ಶಿವಗಣಪದವನು।
ಕರುಣದಿಂದಿತ್ತನಿದುಕಾರಣದಲೀ ವಿಪ್ರ
ಪರಮಪಾವನನಾದ ನಿನ್ನ ಪರಿವಾರಗಜ
ವಿರಬೇಕು ನಿನಗೆ ಬಲವೆಂದು ಪ್ರಾಣವನಿತ್ತ ವೀರಮಡಿವಳದೇವನು ॥೩೬॥

---

[1] ಬ್ಬೆ (ಕ.ಚ), ೦ಬೆ (ಘ). [2] ತೆರನಾ (ಕ.ಚ). [3] ರುವಾರತಿ (ಘ.ಕ.ಗ.ಧ).

ಪುರಜನಂ ಪರಿಜನಂ ಪರಮಪ್ರಧಾನಿಗಳು
ನೆರೆದ ಮೂವತ್ತಾಱು ಕೊಂಡೆಯರು ನೋಡುತಿರೆ
ಹರುಷದಿಂ ಖೇಚರರು ಪುರಮಥನನಿಪ್ಪ ಸಿರಿಕೈಲಾಸಪುರಕೊಯ್ಯಲು।
ಉರುತರದ ರುದ್ರಕನ್ನಿಕೆಯರಾರತಿಯೆತ್ತಿ
ಹರಗಣಂಗಳು ಇದಿರ್ವಂದು ಒಡಗೊಂಡೊಯ್ದು
ಗಿರಿಜಾವರನ ಕಾಣಿಸಲ್ಕೊಲಿದು ಹರುಷದಿಂ ಸಾಮೀಪ್ಯಪದವನಿತ್ತ ॥೩೭॥

ಮತ್ತೆ ಬಿಜ್ಜಳರಾಯ ಪರಮಸಂತೋಷದಿಂ
ದುತ್ತಮದ ವಸ್ತ್ರರತ್ನಾಭರಣನಿಚಯಮುಮ
ನಿತ್ತು ಮಡಿವಳತಂದೆ ಬಸವದಣ್ಣಾಯಕಗೆ ಮೌಕ್ತಿಕದ ಛತ್ರಂಗಳ।
ಧೂರ್ತಪರವಾದಿಗಜಸಿಂಹವೆಂಬಾ ಬಿರುದ
ಕೀರ್ತಿಸುವ [1]ಚಿಹ್ನ[1]ಮಂ ಶಂಖಮಂ ಜಯಘಂಟೆ
ಚಿತ್ತಿಸಿದ ವೃಷಭಕೇತನ ಸಬಳ [2]ಸಿಂಧು[2]ಗಳ ವರ್ತಿಸಿದನರ್ತಿಯಿಂದ ॥೩೮॥

ಅರಸನರ್ಚನೆಗೆಯ್ದು ವಂದಿಸುತ ಭಕ್ತಿಯಿಂ
ಹರುಷದಿಂ ಬೀಳ್ಕೊಂಡು ಪೊಕ್ಕನಂತಃಪುರವ
ತಿರುಗುತಿತ್ತಲು ಭಕ್ತವಾರಾಶಿ ಬಸವೇಶ್ವರನ ಮನೆಗೆ ಭಕ್ತಿಕುಲದ।
ಪರಮಸಂತೋಷದೆರೆ ಉತ್ಸಾಹಬುದ್ಬುದದ
ಶರಧಿಯೊಳು ವೃಷಭಾಂಕ ಮಡಿವಳಯ್ಯಗಳೊಲಿದು
ಚರಲಿಂಗಪೂಜೆಯಂ ಮಾಡುತಿಹನೆಂದಾದಿನಂದಿ ಪ್ರಮಥರ್ಗೊರೆದನು ॥೩೯॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಬಸವಮಡಿವಳಯ್ಯಗಳು ತಾಂ ಮೆಱೆದ ಸಂಧಿ ॥೪೦॥

---

[1] ಚಿನ್ನ (ಘ). [2] ಸಿಂದ (ಚ.ಕ.ಗ).

ನಲವತ್ತೊಂದನೆಯ ಸಂಧಿ

ಸೂಚನೆ --

ಹನುಮಂತನಗತತಿಯ ಮುನ್ನಲೆತ್ತಿದನೆಂದು
ಜನಪಬಿಜ್ಜಳ ದಂಡನಾಥಕೇಳೆನೆ ನಗುತ
ಮನಮುಕ್ಕಿ ಹಡಪಿಗನ ಕೈಯಿಂದಲದ್ರಿಯಂ ಕಿತ್ತಿಡಿಸಿದಂ ಬಸವನು।

ಶ್ರೀಮದಖಿಳಾಗಮಾರ್ಣವಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತು ॥೧॥

ಶ್ರೀಮದಮೃತಾಂಶುಪ್ರಮೌಳಿ ಶಿವಗಣನಿವಹ
ಪ್ರೇಮದಿಂದವಧರಿಪುದೀ ಕಥಾಸೂಚನೆಯ
ನೀ ಮಹಾಕೈಲಾಸವಿಳಿಗೆಸೆವ ಕಲ್ಯಾಣವೆಂಬ ನಿಜಶಿವಪುರಕ್ಕೆ।
ಭೂಮಿಪತಿಯಭಿರಾಮ ಬಿಜ್ಜಳಕ್ರೀರೂಪ
ನಾ ಮಹಾಭಾವಜ್ಞ ಬಸವದಂಡಾಧೀಶ
ಕ್ಷೇಮದಿಂದುಭಯವಾದಂಗಳೊಂದಾಗಿರುತಲರಸು ಪ್ರಧಾನರಾಗಿ ॥೨॥

ನೀಗಿ ಭ್ರಮೆಗಳನು ಕ್ರೀಭಾವಂಗಳೊಂದಾಗಿ
ಭೋಗಭೂಮಿಯೊಳೊಂದುಕೂಡರಸು ಮಂತ್ರಿ ತಾ
ವಾಗಿ ಸುಖಸಂಕಥಾನಂದದಿಂದೋಲಗಂಗೊಟ್ಟಿರಲ್ಕಲ್ಲಿ ಮೆಱೆವ।
ಹೋಗು ಸಾರ್ನಡೆಯೆಂದು ಝಡಿವ ಪಡಿಹಾರರಿಂ
ಜಾಗು ಝಣರೇ ಎಂದು ಕೈವಾರಿಸುವ ಭಟ್ಟ
ರಾಗ ಜಯಜೀಯೆಂದು ಬಿನ್ನೈಪ ಮಂತ್ರಿಗಳು ಒಪ್ಪುವಾಸ್ಥಾನದಲ್ಲಿ ॥೩॥

ಮಕುಟವರ್ಧನರ ಮಂಡಲೇಶ್ವರರ ತಿಂತಿಣಿಯ
ಸಕಲಸಾವಂತಮನ್ನೆಯರ ಕರಣಿಕರುಗಳ
ನಿಕರವೆಡವಂಕ ಬಲವಂಕವೆಲ್ಲೋಲೈಸಲೊಪ್ಪುವ ಸಭಾಂತರದೊಳು।
ಸಕಲಶಾಸ್ತ್ರಾಗಮಪುರಾಣಿಕನು ಭೂವರನ
ಮುಖದ ಕಳೆಯಂ ನೋಡಿ ಮಾನವಪುರಾಣದೊಳು
ಪ್ರಕಟದಿಂ ರಘುಚರಿತೆಯನ್ನೆತ್ತಿ ರಾಯಂಗೆ ಪೇಳಿದನು ತತ್ಕಥಿಕನು ॥೪॥

ವಾಲಿಯಂ ಮಡಿಹಿ ರಘುರಾಮ ಸುಗ್ರೀವನಂ
ಪಾಲಿಸೆಪ್ಪತ್ತೇಳುಕೋಟಿ ಕಪಿನಾಯಕರ
ಮೇಳೈಸಿ ತನತನಗೆ ಸುಮನದಿಂ ಪರಿವಾರಸೇತುವಂ ಕಟ್ಟಲೆಂದು ।
ಮೇಲಂಗದನು ಮುಖ್ಯ ಹನುಮನಂ ಸುಗ್ರೀವ
ನೀಳ ನಳ ಮಾಧಾಂತರೊಳಗಾದ ಕಪಿಕಟಕ
ಲೀಲೆಯಿಂದದ್ರಿಗಳ ಕಿತ್ತಿತ್ತಿ ಹೊತ್ತಡಕಿದವು ಎನಲು ನೃಪತಿ ಕೇಳ್ದು ॥೫॥

ಮೇಲೆಮೇಲರಸು ವಿಸ್ಮಯದಿ ಪೌರಾಣಿಕನ
ಕೇಳಿ ಮಗುಳ್ದಾದರಿಸಿಯುತ್ಸಹದಿ ಮಂತ್ರಿಪತಿ
ಹೇಳಿದನು ರಾಯನು ಸುಮಾನದಿಂ ತಾ ಕೇಳ್ದ ರಾಮಾಯಣದ ಕಥನವ ।
ಬಾಳಲೋಚನನೊಲಿದರಿಂಗಱಿದೆಯುರಸ ಯೆನೆ
ಕೇಳುತಿಕ್ಕೈಹೊಯ್ದು ನಗುತ ನಾಸ್ತಿಕಸಭೆಯ
ಮೇಳದತ್ತಲು ನೋಡೆ ನಲಿದೆದ್ದು ಬಿನ್ನಹಕೆ ನಡೆತಂದ ಮಂಚಿಮರಸ ॥೬॥

ಚಿತ್ತೈಸಿದಿರೆ ಜೀಯ ಬಿನ್ನಹವನಿಂತು ನಿ
ಮ್ಮುತ್ತಮಪ್ರಧಾನ ಬಸವೇಶ್ವರನ ವಾಕ್ಯವದು
ಸತ್ಯಶಿವನೊಲಿದವರಿಗೇನಱಿದು ಎಂದೆಂಬ ಉತ್ತರೋತ್ತರದ ನುಡಿಯ ।
ವ್ಯರ್ಥಮಂಚರಸ ಹಾಸ್ಯಂಗೈದು ಭ್ರಷ್ಟಿಸಲು
ಪೃಥ್ವೀಶ್ವರಂ ನಸುನಗುತ್ತೆಯಹುದಹುದಿಂತು
ತಥ್ಯವೇ ಎನ್ನಾಣೆಯೆಂದಿಂತು ಭಂಡಾರಿ ದಂಡಾಧಿಪನೊಳೆಂದನು ॥೭॥

ತಪ್ಪಿ ನುಡಿದಿರಿ ಬಸವದಂಡೇಶ ನಿಮಗಿಂತು
ಸರ್ಪಭೂಷಣತಾನೆಯೊಲಿದಿಪ್ಪುದದು ತಥ್ಯ
ವಪ್ಪಡದ ನಮಗೆ ದೃಷ್ಟಂದೋಱಬೇಕೆಂಬ ರಾಜೋತ್ತರೋದ್ರೇಕಕೆ ।
ಹೆಪ್ಪಳಿಸಿ ಹೇಡಾಡಿ ಹಿಮ್ಮೆಟ್ಟಿದನೆ ಮನದ
ದರ್ಪಗುಂದಿದನೆ ತಪ್ಪದೆ ನೋಡು ನೃಪ ಎನುತ
ಬೇರ್ಪಡಿಸಿ ತೋರ್ಪೆನೆನುತಾಗ ಭಾವಜ್ಞ ಪಂಚಮಪುರುಷ ಬಸವಾಂಕನು ॥೮॥

ಕರಪರುಷ ನಯನಪರುಷಂ ಶಬ್ದಪರುಷವಾ
ಚರಣಪರುಷಂ ಭಾವಪರುಷ ಪಂಚಮಪರುಷ
ಸ್ಫುರಿತ ಸರ್ವಾಂಗಪರುಷಗಳಾಗಿ ಮನಭಾವಲಿಂಗಾಂಗವಿಡಿದು ಮೆಱೆವ ।
ಪರಮಪ್ರಧಾನಬಸವೇಶ್ವರನೆ ಶಿವನೆಂಬ
ಪರಿಯಱಿಯದಜ್ಞಾನದಿಂದ ಸಂಪಾದಿಸಲು
ನೆರೆದ ಸಭೆ ನೋಡೆ ತನ್ನಯ ಮಹಾತ್ಮೆಯನು ಅನುಗೊಳಿಸಿದನು ಹಡಪಿಗನಲಿ ॥೯॥

ನೀಚತನ ಬೇಡ ಬಿಜ್ಜಳಕ್ಷಿತಿಪ ನೋಡು ಮಿಗೆ
ವಾಚಕರು ನೋಡಿ ಸಭೆ ನೋಡೆಂದು ಹರುಷದಿಂ
ಆಚಾರವಂತರಿಂಗಱಿದೇನೆನುತ್ತ ತನ್ನಯ ಕರಾಂಬುಜ ಪರುಷವ ।
ಯೋಚಿಸುತ ಸದ್ಭಾವಪರುಷನಂಗೈದಿಂತು
ವಾಂಛಿತದ ಹಸ್ತಾಂಗುಲಿಗಳಗ್ರದಿಂದಿಱಿದು
ಆಚೆಗಾಗಿರಿಯ ಕಿತ್ತಿಡು ಎನಲು ವಿಶ್ವಾಸದಾಚಾರ್ಯನಾಗಿ ನಿಂದು ॥೧೦॥

ನಿಷ್ಠಾಬ್ಧಿಚಂದ್ರ ಶಿವಶರಣಹೃತ್ಕಮಲರವಿ
ದುಷ್ಟಸಂಚಲದೂರ ಪರಮಾರ್ಥತದ್ರೂಪ
ಇಷ್ಟಸಂತುಷ್ಟಭಾವಬ್ರಹ್ಮನೆನಿಪ ಬಸವೇಶ್ವರನ ಶ್ರೀಮೊಗವನು ।
ನಿಟ್ಟಿಸಲು ಹಡಪಿಗಗೆ ಹೂಂಕರಿಸಲಾತ ಮನ
ಮುಟ್ಟಿ ದಂಡಾಧಿಪನ ಪದಕೆಱಗೆ ಭಾವಪರಿ
ಪುಷ್ಟವಿಡಿದೆತ್ತಿ ಹಾಯ್ಕಿದ ರಾಯನಾಸ್ಥಾನಕಿದಿರಾದ ಪರ್ವತವನು ॥೧೧॥

ಹರನೋಲಗದೊಳನಿಲನುರಗರತಿಮಥನದಿಂ
ಪಿರಿದು ದ್ವೇಷಗಳಿಂದ ಹೋರಿ ಘನಮೇರುವಂ
ಭರದಿ ಸರ್ಪಂ ಸುತ್ತೆ ವಾಯು ಮುಱಿದಿಡಲು ಶ್ರೀಗಿರಿಯಾಗಿ ಮೆಱೆದ ತೆಱದಿಂ ।
ಶರಣ ಬಸವೇಶ್ವರನು ಹಡಪಿಗನ ಕೈಯಿಂದ
ಗಿರಿಯು ಕಿತ್ತಿಡಿಸಲದು ಧರೆಯಱಿಯೆ ಯೋಜನಾಂ
ತರದಿ ಶಿರವಡಿಯಾಗಿ ಬೀಳೆ ಕಂಡರಸು ವಿಸ್ಮಯದಿ ಬಸವನ ನುತಿಸಿದ ॥೧೨॥

ಏನನಭಿವರ್ಣಿಸಲುಬಹುದು ಬಸವೇಶ್ವರನ
ಜ್ಞಾನಾತಿಶಯಭಾವ ಪರುಷದೇಹಿಯ ಘನವ
ನೇನಬಲ್ಲೆವು ತಾನೆ ಬಲ್ಲ ತನ್ನನುವನೆಂದರಸು ಸಭೆ ಕೊಂಡಾಡುತ ।
ಮಾನಿತೋತ್ತಮ[1]ನಿಗಾ ಪಟ್ಟದಾನೆಯ ತರಿಸಿ
ಯಾನಂದದಿಂ ಬಿಜ್ಜಳಕ್ಷಿತಿಪ ಸಂಭ್ರಮದಿ
ತಾನತಿವಿಶೇಷದಿ ಪ್ರಧಾನಂಗೆ ಸಕಲವಸ್ತ್ರಾಭರಣವಿತ್ತು ತಂದು ॥೧೩॥

ಭದ್ರಮದಗಜಕೆ ಹೊರಜೆಯ ಬಿಗಿದು ರೆಂಚೆಗಳ
ಚೋದ್ಯತರ ಮೊಗರಂಭ ಪಂಚಘಂಟೆಗಳೆಸೆಯೆ
ರೌದ್ರದಂತಕ್ಕೆ ಹೊಂಬಳೆದೊಡಿಸಿ ಕರ್ದಮವ ಭಾಳ ಭರಿಕೈಗೆ [1]ತಿಗುರಿ[1] ।
ಸದ್ಯಮುತ್ತಿನಛತ್ರ ಚಮರಿ ಝುಲ್ಲರಿ [2]ಸಿಂಧು
ಮುದ್ಧಾರ [2]ಗಂಧವಾರಣವ ಬಸವೇಶ್ವರನು
ಬದ್ರುದ್ರಸಂಗ ಶರಣೆನುತಡರೆ ನಡೆಗೊಂಡುದವನದೇನೆಂದೊಗಳ್ವೆನು ॥೧೪॥

---

[1] ತಿರುಗಿ (ಗ.ಘ.ಛ). [2] ಸಿಂಧದುದ್ಧಾರ (ಜ).

ಜಡಿವ ಪಡಿಹಾರರುಗ್ಘಡಿಪ ಕಂಬಿಯ ಚರರ
ನಡುವೆ ಭಟ್ಟರು ಭೇರಿಗಳ ಕೊಂಬು ಕಹಳೆಗಳ
ಗಡಣ ನಿಸ್ಸಾಳ ಮೌರಿಗಳ ವೀರಣ ಶಂಖ ನಾಗಸರ ಬಹುವಾದ್ಯದಿ।
ಸಡಗರದಿ ಮೆಱೆಸಿ ಬಸವೇಶ್ವರನ ಪೊಡವೀಶ
ನುಡುಗೊರೆಗಳಿತ್ತು ಲಕ್ಷಾಂತರಾಭರಣಗಳ
ತೊಡಿಸಿ ಬೀಳ್ಕೊಟ್ಟು ಪೊಡವಟ್ಟು ಕಳುಪಲು ನಡೆದು ಬಂದ ನಿಜಸದನಕಾಗಿ॥೧೫॥

ಭಕ್ತರುತ್ಸವ ಮಹೇಶ್ವರರ ಸವ್ಯೈಜ್ಞಾನ
ಯುಕ್ತಪ್ರಸಾದಿಗಳ ಪರಿಣಾಮ ಪ್ರಾಣಲಿಂ
ಗೋತ್ತಮರ ಲೀಲೆ ಶರಣರ ಮಹಾಮಹಿಮೆ ನಿಜನಿತ್ಯನಿರ್ಮಳದ್ಯೈಕ್ಯರ।
ಯುಕ್ತಿ ನಡೆವಂತೆ ನಡೆತಂದು ಭಕ್ತರ್ವೆರಸಿ
ನಿತ್ಯಲಿಂಗಾರ್ಚನೆಯ ಮಾಡುತಿಹ ಬಸವನೆಂ
ದತ್ತ ನಂದೀಶ ಪ್ರಮಥಗೊರೆದೆಥಾರ್ಥಮಂ ಚಿತ್ತೈಸಿ ಭಕ್ತನಿವಹ ॥೧೬॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಬಸವ ಹಡಪಿಗನಿಂದ ಬೆಟ್ಟವಮಂ ಕಿತ್ತಿಡಿಸಿ ಮೆಱೆದ ಸಂಧಿ ॥೧೭॥

ನಲವತ್ತೆರಡನೆಯ ಸಂಧಿ

ಸೂಚನೆ—

ಲಿಂಗವನರದೊಳು ಸತ್ತಿಗೆವಿಡಿದನಂ ಭೂಪ
ಜಂಗಮವ ಮಾಡಿ ಕಳುಪಲ್ಕುಱಿದು ಭಕ್ತಿಯಿಂ
ಲಿಂಗವೆಂದೆಱಗಿ ಸದ್ಭಾವದೊಳ್ಚರಲಿಂಗಮಂ ಮಾಡಿ ಮೆಱೆದ ಬಸವ।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತು ವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತು ॥೧॥

ಸರ್ವಗುಣರತ್ನಪ್ರಭಾಕರೋರ್ಜಿತಭೂಷ
ಸರ್ವಸಿದ್ಧಿಸಮಗ್ರಸುಪ್ರದಾಯಕ[1]ಭೂ[1]ಷ
ಸರ್ವಶಾಸ್ತ್ರಕಳಾವಿಲಾಸಜ್ಞಾನ್ಯಾಸ ಬಹಿರಂತರ್ನಿಶಾದಿನೇಶ।
ಸರ್ವಭಕ್ತಿಕ್ರಿಯಾರ್ಥೋಕ್ತಿಕ್ರಮಾಕೋಶ
ಸರ್ವಕರಣೇಂದ್ರಿಯಪ್ರತತಿರ್ಲತಾನಾಶ
ಸರ್ವಜೀವಸ್ಥಿತೋತ್ಪತ್ತಿಲಯಕಾರಣ ಸದರ್ಥ ಬಸವೇಶನೀಶ ॥೨॥

ಮತ್ತೊಂದುದಿನಮರ್ತಿಯಿಂದ ಪೂ[2]ರ್ವಾ[2]ಪರದ
ವಿತ್ತವೆಲ್ಲವ ತೆಗೆಸಿ ಉಪದೃಷ್ಟಗಾಣುಹವೆ
ನುತ್ತ ಬಸವರಸರಂ ಕರೆಯೆಂದೆನಲ್ಕವಾರ್ಚನೆಯ ಕಾಲದೊಳು ಭವಿಯ।
ಚಿತ್ತದೊಳ್ಕಿನೆಯ ನೋಡಂ ಮುಟ್ಟನೆಂದತಿಕು
ಚಿತ್ತರು ಕುಚೇಷ್ಟೆಗೈಯಲು ನೃಪತಿ ಹಾಸ್ಯದು
ನ್ಮತ್ತಚಿತ್ತದೊಳಕೃತ್ಯಾನುಮತವೊಂದ ನೆನೆದಂ ಕುಹಕಕುಲಚಿತ್ತನು ॥೩॥

ಕಾಪಾರ್ಸ ಸಲೆ ಶಿಖಿಪುರುಷನೊಳ್ಸರಸಗೈ[3]ವ
ವೋಲ್ಪಾ[3]ವು ಗರುಡನೊಳು ಕದನಕೆಳಸುವವೋಲುಂ
ಸರ್ಪಶವಾ[4]ಹನ[4]ಗ್ರಜನ ಪಿತನಂ ವಿಮಳನಿಟಿಲಾಕ್ಷಿಯೊಳ್ಸೆಣೆಸುವ।

---

[1] ಭಾ (ಕ.ಚ). [2] ಣಾರ್ (ಘ). [3] ಯಲ್ಪಾ (ಕ.ಚ), ವೋಲಪಾರ್ (ಗ.ಘ).
[4] ದನ (ಕ.ಚ.ಖ).

ಸೂರ್ಪಕಾರಾತಿಯೊಲ್ಬುಜ್ಜಳಾಧಿಪನು ಕಂ
ದರ್ಪಾರಿಯರ ರೂಪುಗೈಸ್ಯಾತಪತ್ರಕನ
ದರ್ಪಾರಿ ಬಸವನರಮನೆಗೆ ಕಳುಪಲ್ಬಂದ ಶಿವಪೂಜೆಗೈವ ಮನೆಗೆ ॥೪॥

ಬಂದಭವಲಾಂಛಾನಾಂಕಿತನ ಕಂಡುಭಯ ಕರ
ದಿಂದೆಱಗಲೊಡನೆ ನಡನಡುಗಿ ತಡಬಡಿಸಲಱು
ದಿಂದುಧರ ಬಿಜಯಗೈಯೆಂದು ಬಸವೇಶನಾಸನಗೊಡಲ್ಕಾ ಚೆಸದನು।
ಹಂದೆಮೊಗದಿಂ ನಿಂದಿರಲ್ಕಂಡು ಸಂಗಯ್ಯ
ನಂದು ಸಂಶಯವೇಕೆನುತ್ತ ಪದಕಮಲದೊಳೆ
ಗೊಂದಿ ಲಿಂಗಾರ್ಚನಂಗೈಸಿ ಪ್ರಸಾದ ಕೊಂಡಾಗ ನಲಿವೊರೆದ ವಚನ ॥೫॥

ವಚನ—

ದರ್ಪಣವು ಬೇರೆಕಂಚಿಲ್ಲ, ಬಟ್ಟಲವು ಬೇರೆಕಂಚಿಲ್ಲ : ಛಾಂಡ ಒಂದೆ, ಭಾಜನ ಬೇರೆ, ಬೆಳಗೆ ಕನ್ನಡಿಯೆನಿಸಿತಯ್ಯ ಅಱಿದಡೆ ಶರಣನು, ಮಱೆದಡೆ ಮಾನವ, ಮಱೆಯದೆ ಪೂಜಿಸು ಕೂಡಲಸಂಗನ ॥೧॥

ಆ ವಚನರಚನೋಪದೇಶವಾತನ ತನುವ
ನಾವರಿಸಲಾತನ ಗುಣಗಳೋಡುತಿರಲು ಸ
ದ್ಭಾವಸುಜ್ಞಾನಪ್ರಕಾಶಿಸಲ್ತಾನೆ ಶಿವನಾಗಿರಲ್ಕಾ ಸಮಯಕೆ ।
ಭೂವರಂ ಚರರ ಕಳುಪಲ್ಕಾತಪತ್ರಕದ
ದೇವಯ್ಯಗಳು ಸಹಿತ ಬಸವೇಶ ಬರೆ ನೃಪತಿ
ದಾವನೆನೆ ಮಂಚರಸ ನಿಮ್ಮಸತ್ತಿಗೆಯ ಬೋವುಗನೆನಲ್ಮೊರೆದ ವಚನ ॥೬॥

ವಚನ—

ಕೋಡಗನೇಡಿಸಬೇಡವೆಂದರೆ ಮಾಣದು, ತೋಡುವ ಹೆಗ್ಗಣ ಮಾಳಿಗೆ ಯಂದರೆ ಮಾಣದು, ಗಾಡಿಗದೂಷಕರಾಡಬೇಡವೆಂದಡೆ ಮಾಣರು, ಕೂಡಲ ಸಂಗಮದೇವ ಕೇಡುಗ ತಾನಲ್ಲ ಆಡುವ ಅಜ್ಞಾನಿಗಳಿಗೆಕಾಯಕವಯ್ಯ ॥೨॥

ಚಾರುಶಿವಲಿಂಗಸಂಯುತನ ಪೂರ್ವೋತ್ತರ ವಿ
ಚಾರಿಸಲ್ಕಧಮನೇಕೆನಲು ಶಿವಲಿಂಗದಾ
ಕಾರವಂ ಶಿಲೆಯೆಂಬನಾರಕಿಯೊಳತಿಘೋರತರನಿರಯವಹುದು ।
ಮೇರುವಂ ಸೇರಿದರೆ ಕಾಕ ಹೊಂಬಣ್ಣದವ
ತಾರವಾದೊಲು ಲೋಹ ಪರುಷಮುಟ್ಟಲ್ಕೆ ತ
ದ್ದೂರೀಸುವರ್ನಮಯವಾಯ್ತದ ವಿಚಾರಿಪರೆ ಭಕ್ತಕುಲವಱಿಸಲಹುದೆ ॥೭॥

ಪುಣ್ಯಹೀನನ ಕೈಯಲಿರುತ ಉರುತರವಹ ಹಿ
ರಣ್ಯತಾನಾವವಂ ಪರಿಕಿಸಲವನ ಕಣ್ಗೆ
ಮಣ್ಣಾಗಿ ತೋಱುವಂತಾ ಮಹಾತ್ಮಕಭಕ್ತರಿರವು ಜಡಕರ್ಮಭವಿಯ ।
ಕಣ್ಣಿಂಗೆ ನರರ್ಗಳಂತಿಹರರಸ ಪಾಪದಾ
ಕಣ್ಣಿನಿಂ ನೋಡದೆಯೆ[1]ನೀನೀ[1]ಕ್ಷಿಸಲ್ಕೆ ಮು
ಕ್ಕಣ್ಣನಿವರೆನುತ ಮತ್ತೆಱಗಿದನು ಭವಿಕುಲಾರಣ್ಯದಾವಾನಲ ॥೮॥

ಆದಿಬಿಂದುವೆ ಬೀಜವಲ್ಲ ಕುಲವಿಹುದದಱ
ಭೇದಮುಮನಱಿಯದೆ ಕುಲಾಕುಲಗಳೆಂಬ ಬಡ
ಹಾದಿಯೊಳ್ನಡವೆಯಲ್ಲದೆ ಅಜಾತನ ಸೋಂಕಲೊಡೆ ಅಕುಲಭವಿಜನ್ಮವು ।
ಹೋದುದಱಿಯದೆ ನಿಮ್ಮ ಛತ್ರದವನೆನುತ ಲಘು
ಬಾಧೆಗೊಳಗಾಗಬೇಡೆಲೆ ನೃಪತಿ ಎನುತ ಋ
ಗ್ವೇದದೊಳ್ಸೂತಸಂಹಿತೆಯನೆತ್ತಿದನು ತತ್ಸೂರಿಸಭೆಯೊಳ್ಬಸವನು ॥೯॥

ಸಾಕ್ಷಿ—

ಆದಿಬಿಂದೌ ಭವೇದ್ಬೀಜಂ ಬೀಜಮಧ್ಯೇ ಸ್ಥಿತಂ ಕುಲಂ
ಬೀಜಂ ನಾಸ್ತಿ ಕುಲಂ ನಾಸ್ತಿ ತಸ್ಮಾಚ್ಛಿವಕುಲಂ ಭವೇತ್ ।

ಎಂದು ಶಿವಮಹಿಮೆಯಾಗಮ ಹೇಳಲಾಯಯ್ಯ
ನಿಂದುಧರನಂಗನಿಜಗೊಂಡು ಕುಲಗೋತ್ರಾಭಿ
ವೃಂದಮಂ ಅತಿಗಳೆದು ತತ್ಕಳತ್ರಾದಿಯಂ ಜಱೆದು ನಿರ್ವಾಣಪದವು ।
ನಿಂದಿರಲ್ಕಂಡರಸ ಶಿರದೂಗಿ ಬಸವನೊಡ
ನೆಂದ ಶಿವ ನಿಮ್ಮ ಹಂಗಿಗನೊ ನೀವೇ ಶಿವನೊ
ಎಂದೆನಗಭೇದ್ಯವೆನುತುಭಯಕರವೊತ್ತಿ ಕಳುಪಲ್ಕೊಡನೆ ಬಸವೇಶನು ॥೧೦॥

ಬಂದು ನಿಜಮಂದಿರಕ್ಕಾಯಯ್ಯ ಸಹಿತ ಗಣ
ವೃಂದದೊಳ್ಸಲಿಸಿ ಕೈವಲ್ಯಪಟ್ಟಣದೊಳಗೆ
ಸಂದ ಹೊನ್ನಿಗೆವಟ್ಟವಿಲ್ಲೆಂಬ ತೆಱದಿ ಸತ್ತಿಗೆಯದೇವಯ್ಯಗಳನು ।
ತಂದು ಮೌಕ್ತಿಕಪದವ ತೋಱಿಲಾಯಯ್ಯ ಮುದ
ದಿಂದ ನಿಜಜಂಗಮಾಂಕಿತನಾಗಿ ಸುಖಮಿರ್ದ
ನೆಂದು ನಂದೀಶಪ್ರಮಥರ್ಗೊರೆದ ಶರಣರಾನಂದದಿಂದವಧರಿಪುದು ॥೧೧॥

---

[1] ನಿರೀ (ನ.ಪ್ರ).

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿ ಸತ್ತಿಗೆಯ ಬೋವನ ಜಂಗಮವ ಮಾಡಿ ಬಸವೇಶ ಮೆಱೆದ ಸಂಧಿ ॥೧೨॥

ನಲವತ್ತುಮೂರನೆಯ ಸಂಧಿ

ಸೂಚನೆ—

ಸಲ್ಲಲಿತನಸಮಸಂಗನ ಬಸವನೊಲಿದು ಭೂ
ವಲ್ಲಭನ ಮುಂಬೆ ಸದ್ಭಾವದಿಂ ನಿಷ್ಠೆಯೊ
ಳ್ಕಲ್ಲನಂದಿಯನು ಭುಲ್ಲವಿಸಿ ಕವಣವ ಪೋಯ್ಸಿದಂ ಕಟಕವೆಲ್ಲಱಿಯಲು।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತು ॥೧॥

ಕುಧರಾತಪತ್ರ ಪದ್ಮಜ ಶತಕ್ರತುವೃಷ
ಬುರ್ಧನು ಹರಿ ಕೋಣಪ ವರುಣ ಜಗತ್ಪ್ರಾಣೋಪ
ನಿಧಿಯೀಶನಾದ್ಯಷ್ಟಕುಲದೇವವಂದ್ಯಪದದಗಣಿತ ಪ್ರಮಥಟಯುಕೆ।
ಅಧಿಪ ನಿರ್ಮಾಯನದ್ವಯ ದೂರದುಷ್ಕರ್ಮ
ವಿಧಿನಿಷೇಧಂ ಪುಣ್ಯಪಾಪನಿರ್ಲೇಪ ಪ
ದ್ವಿಧಭಕ್ತಿಲೋಲ ಶಿವನವತಾರ ಬಸವದಂಡಾಧೀಶ ಸಲಹೆಮ್ಮನು ॥೨॥

ಶ್ರೇಷ್ಠನಘಸಂಹಾರಿ ರಸೆಪಾಲಕತ್ವನ ಕು
ಚೇಷ್ಠನಗಪವಿಯನ್ಯದೈವಮದಮಾತಂಗ
ನೈಷ್ಠಿಕಾಹರಿಪೃಥುಲಕೊಂಡೆಯರ ಕೃತಕದಜ್ಞಾನೋಕ್ತಿತತ್ಪ್ರಕೃತಿಯ।
ಕೋಷ್ಠಭೇಷಜರೂಪ ಪರಮಸದ್ವಿಮಲಜನ
ಜೇಷ್ಠ ಪ್ರಪಂಚಾದಿಗರ್ವಿಕಾರ ಕದಂಬ
ಕಾಷ್ಠವಸು ಬಸವದಂಡೇಶನಂ ನೃಪ ಕರೆಸಿ ಶುಭಪುರಿಯ ನೋಳ್ಪರ್ಥಿಯಿಂ ॥೩॥

ವಿಷಧರಾಧರರಮಣನಖಿಳಸಂಪದವೆರಸಿ
ವಿಷಧರನ ತಾಳ್ದಾತಸಹಿತುಭಯವೀಧಿಯೊ
ಳ್ವಿಷಧರವರೂಥನ ಸ್ವರೂಪಿನರಸುಗಳ ಮಧ್ಯದೊಳು ಬರಲೊಂದೆಡೆಯೊಳು।

ವಿಷಧರಾರಿಯಗಮನಪಿತನ ಶರಣರ್ನೆರೆದು
ವಿಷಧರಾಂಕಿತ ಶಿಲಾಸ್ತಂಭ ಪೊಸ ನಂದಿಯಂ
ವಿಷಧರನೊಳೊಗೆದ ಪೂಮಾಲೆಯಂ ಪೂಜೆಯನೊಡರ್ಚುತುಘೆಯೆನಲರಸನು
॥೪॥

ಎತ್ತಣದು ಪುಯ್ಯಲೆಂದರಸು ಲಾಲಿಸಿ ಬಸವ
ನತ್ತನೋಡಲ್ನಿಮ್ಮಪುರಿಯೊಳಿಹ ಪರಮಶಿವ
ಭಕ್ತರೆಲ್ಲರ್ಶಿಲಾನಂದಿಗೆ ಮಹೋತ್ಸಾಹದೊಳ್ಪರಕೆಪುಣ್ಯಾಹವ ।
ಭಿತ್ತಿಯೆನಲಾದಡದ ನೋಳ್ಪೆನೆನುತ್ತೈದಲೆಂ
ಭತ್ತುಸಾಹಸ್ರಖಂಡುಗರಾಶಿಗಡಲೆಗಂ
ಡುತ್ತಮಾಂಗಂದೂಗಲೊಡೆ ಕುಮಂತ್ರವ ಬಿತ್ತಿದರು ಕರ್ನಕಾಶ್ಯಪಿಯೊಳು ॥೫॥

ನಾಡೆಲ್ಲ ಮುಗಿದು ಪಾಳ್ಗೈವುದದಱಿಂ ಬಹಳ
ಜೋಡಿನಶ್ವಾಳಿಗಿಕ್ಕಲ್ಯಾವಹದಿ ನೃಪರ
ನೋಡಿಪುದು ಕ್ಷತ್ರಿಯರ ಮತವೆನಲ್ಕರಸುಬ್ಬಿ ನಗುತ ಕೈವೀಸಲೊಡನೆ ।
ಪಾಡಿ ಪರಿವಾರ ಖೋಯೆನುತ ರಾಶಿಗೆ ಕವಿದು
ಕೂಡೆಲ್ಲ ಮೊಗೆದು ಕಳ್ತುವ ಸವ ಯದೊಳ್ಬಸವ
ನೋಡರಸಿನಾನನವದೇನದೇನವಿವೇಕವೇಕೆ ಬೇಡೆನುತ ಮತ್ತೆ ॥೬॥

ಹೆತ್ತತಾಯಂ ಮಾಱಿ ತೊತ್ತ ಕೊಂಬನವೊಲ್ಸು
ಮುತ್ತಯಿನ ಕವರಿ ಮುಕ್ಕುಡಿಗೊತ್ತೆಗೊಡುವನೊಲು
ಸತ್ಯಮನ್ನೊತ್ತಿಟ್ಟಸತ್ಯಮನ್ನೊರೆದು ಬಾಳುವನಂತೆ ಕಲ್ಪತರುವ ।
ಕಿತ್ತು ಕಡಿದಡುಗಬ್ಬಮಾಡಿ ದತ್ತೂರಮಂ
ಬಿತ್ತಿ ಬೆಳೆವವನ ಪ್ರಬುದ್ಧಿ ಬೇಡೈ ನಮ್ಮ
ನಿತ್ಯಭಕ್ತಾಳಿನಿಂದೆಯೊಳೊಂದುತ್ತೈದಿದಲು ವೈವಸ್ವತನ ನಗರಿಗೆ ॥೭॥

ಶಿವಧರ್ಮದಲ್ಲಿ—

ಶಿವಶಬ್ದಪರಿತ್ಯಾಗೀ ಶಿವಭಕ್ತಸ್ಯ ನಿಂದಕಃ
ಸಪ್ತಜನ್ಮಭವೇತ್ಕ್ರೋಷ್ಟಾ ದಾಸೀಗರ್ಭೇ ಚ ಜಾಯತೇ ।

ಮೇಲಱಿಯದುಲಿವ ದುರ್ಭಾವವಿಕಳಾತ್ಮಕರ
ಹಾಳುನುಡಿಗಳಿಗೆ ಬೇಳಾಗಿ ಕಿಳಿಂಗ[1]ದೇ
ವಾಲಯವನಳಿವವೋಲ್ಬಸಿರಕಿಚ್ಚಿಂಗೆ ಬಣಬೆಯು ದಹಿಪನಂತೆ ನೀನು ।

---

[1] ಲಂಗ (ಗ.ಪು.ಥ).

ಶೂಲಯುವತಾರಶೀಲರ ರಾಗದೇಳ್ಗೆಯ ಸ
ಕೀಲಲಾಲಿಸಿ ಕಲ್ಲನಂದಿ ಕವಣವನು ಸ
ಲ್ಲೀಲೆಯಿಂ ಮೇವುದಱಿಯದೆ ರಾಶಿಯಂ ತೆಗೆಸಬೇಕೆಂದಪೇಕ್ಷಿಸುವರೆ ॥೮॥

ಎನೆಕೇಳೆ ನೃಪಗೆ ಪೇಳಿಗಾವರಿಸಿ ದುರ್ಮಂತ್ರಿ
ಗನ ನಿರೀಕ್ಷಿಸಲ್ಕಾತ ನೀವಪೇಕ್ಷಿಸುವರೆಂ
ದೆನುತೊಂದುವಾಗ್ವಶ್ಯದುತ್ಪ್ರೇಕ್ಷೆಯಲ್ಲದೀ ಕಲ್ಲು ಕವಣವ ಮೇವುದೆ।
ಮನಮು ವಸನದಿ ಕಟ್ಟಿಹೊಱಿಸೆ ಗೋಣ್ಮುಕಿಸುವುದೆ
ತೃಣಕವ[1]ದು[1] ನುಡಿಗಂಜಬೇಡವೀ ಕಲು ಕವಣ
ವನು ಮೆಲಿದಡಹುದಲ್ಲದಿರಲವರ ನುಡಿಯೆಲ್ಲ ಸಟೆಯೆಂಬ ಕುಟಿಲಾತ್ಮರ ॥೯॥

ಜೋತಿದಂಡೇಶನಾ ನಂದಿಗೆಱಗಲ್ಭಕ್ತಿ
ಯಾತುರಕ್ಕಾ ನಂದಿ ಭುಲ್ಲವಿಸಲೊಡೆ ಬಸವ
ನೀತನೃಪನೋಡೆನುತ್ತಭಯಪಾಣಿಂ ಕವಣಮುವಮೊಗೆವುತಸಮಭಕ್ತಿ।
ಪ್ರೀತಚಿತ್ತೈಸೆನಲ್ಕೊಗನೋಡಿ ರಾಶಿಗೆ ಸ
ನಾತನಂ ಸಾರುತ ಶಿಲಾಸ್ತಂಭನಂದಿ ಸಂ
ಪ್ರೀತಿಯಿಂದೆಂಭತ್ತುಸಹಸ್ರಖಂಡುಗ ಕವಣಮಂ ನಿಮಿಷ ಮೆಯ್ಯಲೊಡನೆ ॥೧೦॥

ಜನಪ ತಲೆಗುತ್ತಿ ಖಳರಡಿಗದ್ದಿ ಸರ್ವಪರಿ
ಜನ ನಲಿಯೆ ಸಾತ್ವೀಕರುಬ್ಬಿ ಷಡುದರುಶನರ
ಮನಮುಚ್ಚುತೊಡನೆ ಗುಡಿತೋರಣಂ ಛತ್ರಚಾಮರಪತಾಕಪ್ರಕರವ।
ಅನುನಯದೊಳೆತ್ತಿ ಬಹುವಾದ್ಯಘೋಷೋತ್ಸಹಗ
ಳನು ರಚಿಸಿ ಭಾಳನೇತ್ರನ ಭಕ್ತರೆಲ್ಲ ತನ
ತನಗುಘೋಯೆನುತುಭಯಕರ[2]ವೊತ್ತು[2] ಬಸವೇಶಗೆಱಗಿ ಮಿಗೆ ಕೀರ್ತಿಸುತಿರೆ॥೧೧॥

ಮಂಗಳಂಗಳ ಸಾಲು ಎಸೆವ ನಿಜಭಕ್ತಿಯ ಜ
ನಂಗಳಿಗೆ ಬಲದೋಳು ಕಲ್ಯಾಣಪುರದ ಗುರು
ಲಿಂಗಜಂಗಮದಾಳು ದುರುಳಪ್ರಪಂಚಮಂ ಗೆಲುವುಗ್ರತರದ ಬಾಳು।
ಅಂಗಲಿಂಗದ ಕೀಲು ವರಸಜ್ಜನಾತ್ಮಕರ
ಸಂಗತಂಗಳ ಸೂಳು ಶಶಿಧರನ ಕರವಾಳು
ಭಂಗವಿಲ್ಲದೆ ಜೈಸುವಾದಿಶಿವತತ್ವಾರ್ಥಭಕ್ತಿಯುಕ್ತಿಗಳ ಮೇಲು ॥೧೨॥

[1] ರು (ಕ.ಚ). [2] ವೆತ್ತಿ (ಗ.ಪ.ಛ).

ಎಂದು ರಸೆಪನು ನುತಿಸಿ ಮೌಳಿದೂಗುತ ಶಿಲೆಯ
ನಂದಿಗೆ ವಿನಮಿತ ಬಸವಂಗೆಱಗಲೊಡನೆ ಮುದ
ದಿಂದರಸು ನಲಿದು ತನ್ನರಮನೆಗೆ ತಿರುಗಿಪೋ‌ಗಲ್ಭಾವಬ್ರಹ್ಮಜ್ಞನ।
ಮುಂದೆ ಮಂಗಳಪಾಠಕರ್ಪೊಗಳುತಾನಂದ
ದಿಂದ ಮಹಕಲ್ಲನಂದಿಯನು ಕವಣವ ಮೆಯ್ಸಿ
ಬಂದ ತನ್ನರಮನೆಗೆ ಬಸವಾಂಕನೆಂದು ನಂದೀಶ ಪ್ರಮಥಗೊರೆದನು ॥೧೩॥

ರಾಜಶೇಖರ ಪಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳಃ ವಿ
ಭ್ರಾಜಿತಂ ಕಲ್ಲನಂದಿಗೆ ಕವಣಮಂ ಮೆಯ್ಸಿ ಬಸವೇಶ ಮೆಱೆದ ಸಂಧಿ ॥೧೪॥

ನಲವತ್ತುನಾಲ್ಕನೆಯ ಸಂಧಿ

ಸೂಚನೆ—

ಬಳಸಿದೊಡ್ಡೋಲಗಂಗೊಟ್ಟು ಮಿಗಿಲೆಸೆವ ಭೂ
ತಳಪತಿಯನೊಂದುಗ್ರಸಿಡಿಲೆಱಗಲೊಡನೆ ಕರ
ತಳದಿ ಸಭೆಯೊಳ್ಪಿಡಿವುತಾ ನೃಪನ ಕಾಯ್ದುಭಯವಿತ್ತ ಸಂಗನಬಸವನು॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಪ್ರಕೃತಿಯು ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಕೀನಾಶದಹನಾವತಾರ ಚರಸೋಹದೊ
ಳ್ಕೀನಾಶಮನಸಪರವನಿತೆಗೊಪ್ಪಿಸದೆಡಿಗೆ
ಕೀನಾಶವರವಧುಸುಪುತ್ರಪೌತ್ರಾದಿಸದ್ಭಕ್ತಿಸೌಭಾಗ್ಯದೊದವಿಂ।
ಕೀನಾಶವಾಗ್ದತ್ತದಱಿವ ಕಡೆಗಾಣಿಪತಿ
ಕೀನಾಶ[1]ರೋ[1]ಚಿಯಿಂದೆಸೆವಾಬ್ಜ ಮರುತಸಖ
ಕೀನಾಶಜನಕ ಗೋತ್ರಯನಪ್ರಭಾಮೂರ್ತಿ ಬಸವದಂಡೇಶ ಶರಣು ॥೨॥

ಗೋಪತಿಯಕಿರಣವಿಡಿದುಡುವ ಜೋಯಿಸರು ಸ್ವ
ಹಾಪತಿಯ ಸರವಮಾಡೀಂಟುವ ಬುಧರ್ವಿರಿಂಚ
ಚಾಪಮೆಂದುದ್ಧೂಳಿಸುವ ಸಿದ್ಧರುಗಳು ಮೊದಲಾದಭಿಜ್ಞಾನೋತ್ತರು।
ಶಾಪವರವೀವ ತ್ರಿಕಾಲಜ್ಞರುಗಳು ಬಹು
ಕೂಪದುರ್ಮಂತ್ರಿಗಳ್ವೆರಸಿಪ್ಪ ಬಿಜ್ಜಳಮ
ಹೀಪನೊಡ್ಡೋಲಗದೊಳೊಪ್ಪುವಪ್ರತಿಮದಂಡೇಶನಿರವೆಂತೆನಲ್ಕೆ ॥೩॥

ಪಾಪದೊಳ್ಪುಣ್ಯ ಸಟೆಯೊಳ್ದಿಟಂ ಮೆಱೆವ ಕಡು
ಗೋಪದೊಳ್ಶಾಂತಿ[2]ಹ[2]ಜ್ಞಾನ ನಿಶ್ಶಂಕರೊ
ಳ್ದೀಪದಂತೆಸೆವ ಬಸವೇಶ ರಸೆಪನೊಳಗೇಕಾಂತಗೆಯ್ವಾ ಸಮಯಕೆ।

---

1 ಧೋ (ಗ.ಪು.ಛ). 2 ಮಹಾ (ಪು).

ವ್ಯಾಪಿಸಿದ ಕಾರ್ಮುಗಿಲ ಘರ್ಜನಾಡಂಬರವು
ಮಾಪತಿ ಪುರತ್ರಯವನುರುಪಲೆಂದುರುಮೇರು
ಚಾಪಜೇವಡೆಗೈವ ದನಿಗೇಳ್ದು ಭುವನರೌದ್ರಾರ್ಭಟೆಂತಂತೆ ಮಸಗಿ ||೪||

ಕಡಲಕಡೆಯಲ್ಕಸುರಸುರರು ಮೇರುವನು ಕಿ
ತ್ತಿಡುವಾರ್ಭಟೆಯೊ ಮಹಾಗರಳವಜ ಹರಿ ಸುರರ
ಸುಡಲು ಕಂಗೆಟ್ಟೋಡುತೆಲ್ಲ ಶಿವಧೋಯೆನುತ್ತುಲಿವಾರ್ಭಟೆಯೊಲಲ್ಲದೆ।
ಮೃಡನಂಜುವಿಡಿಯಲುಡುಗಿದ ದನಿಯೊ ವಿಷಧರನ
ತೊಡೆಯಮೇಲಣ ಗೌರಿ ಜಡೆಯಮೇಲಣ ಗಂಗೆ
ಹೊಡೆದಾಡುವಬ್ಬರದ ಬೊಬ್ಬೆಯಂತಾ ಮೇಘ ಘರ್ಜಿಪ ಘನಧ್ವಾನವು ||೫||

ಉಗ್ರನತ್ಯುಗ್ರದಿಂದಂಧಕಾಸುರನ ಮು
ಟ್ಟುಗ್ರದಿಂ ಪಿಡಿದೆತ್ತಿ ಸೀಳ್ದಾರ್ಭಟೆಯೋ ಮೇ
ಣುಗ್ರನತ್ಯುಗ್ರದಿಂದಾ ಗಜಾಸುರನ ಮುಱಿದೊಟ್ಟುವಬ್ಬರವಲ್ಲದೆ।
ಉಗ್ರನತ್ಯುಗ್ರದಿಂದಾ ತ್ರಿವಿಕ್ರಮನೆಲುವ
ನುಗ್ರದಿಂ ಮುಱಿವ ಘರ್ಜನೆಯಂತೆ ಸಿಡಿಲು ಜಗ
ವ ಗ್ರಹಿಸಲೆಂದು ಘುಡುಘುಡಿಸಿ ಘೂರ್ಮಿಸುತ ಬಹ ವಿಸ್ಫೂರ್ಜಿತಾಡಂಬರ ||೬||

ತೊಡಗೆ ವಿದ್ಯುತ್ಕಳೆ ಸುಳಿವ ಚಮತ್ಕಾರಪ್ರಭೆ
ಕಡೆಗಾಲದಗ್ನಿ ಥಳಥಳಿಪಂತೆ ಮೇಘದೋ
ಳ್ಘುಡುಘುಡಿಸಿ ಬಂದೋಲಗದೊಳಿಹ ನೃಪಾಲನಂ ಪೊಡೆದ ಬರಸಿಡಿಲಕಿಡಿಯಂ।
ಪಿಡಿದೆಳೆದು ಹಾಯ್ಕಿ ದಂಡೇಶನರಸಿನ ವಪುವ
ನೋಡುತೆತ್ತೀಕ್ಷಿಸಲ್ಸರ್ವಸಭೆ ವಿಸ್ಮಯದೊ
ಳೊಡಗೂಡುತೆಲ್ಲ ತನತನಗೆ ಸೈವೆಱಗಾಗಿ ಧರೆಗೊಱಗಿತೇವೇಳ್ವೆನು ||೭||

[1]ಬು[1]ದ್ಧರುಬ್ಬಡ[2]ಗ್ಯ[2]ಹಂಕಾರತೆಯು ಒಡೆದು ಪ್ರ
ಸಿದ್ಧರಱಿವಱಿತು ಕಾಲಜ್ಞಾನಿಗಳ ಬಗೆಯು
ಬದ್ಧವಾಯ್ತರಸಿನಜ್ಞಾನದುರಿ ತಗ್ಗಿ ಶಠರಗ್ಗಳ ಮುಳುಗಿ ಬಲದೊಳು ।
ಸಿದ್ಧರದ್ವೈತ ಬಱಿಕೈದು ಬಲುತಾಪಸರ
ಶ್ರದ್ಧೆ ಬಿಱುಗಾಳಿಗೊಡ್ಡಿದ ಸೊಡರಿನಂತಾ ವಿ
ರುದ್ಧಬಯಲಾಯ್ತೆಂದು ಬಸವರಾಜನ ನೈಷ್ಠಿಕಬ್ರಹ್ಮಘೋಷದೊಳಗೆ ||೮||

---

[1] ಬ (ಫ). [2] ಗ (ಕ.ಗ.ಘ.ಢ).

ಮಲಗಿದಾ ಶ್ರೀರಾಮುಪಡೆಯು ರಾವಣನು ವಧಿ
ಸಲಗಸಿ ಹರಿಭೃತ್ಯ ಮರುಜೀವಣಿಗೆಯಂಜನವ
ನೊಲಿದೆಬ್ಬಿಸೇಳ್ವ ಪರಿಯಂತಲ್ಲವಲ್ಲೆಮ್ಮ ನಿಸ್ಸೀಮಬಸವಾದ್ಯನು ।
ನಲಿದು ಶಿವಮಂತ್ರದಿಂ ಭಸ್ಮದಳೆಯಲ್ಭೀತಿ
ತೊಲಗೇಳುತೆಲ್ಲುಭಯಕರಮುಗಿವುತೆಮ್ಮಱಿವು
ಜಲದಕ್ಕರಂ ಮೇಘಚಾಪವೆಂದೆನುತೆಲ್ಲರೆಱಗಿ ಬಸವನ ಕೀರ್ತಿಸೆ ॥೯॥

ಗರುಡಗಹಿಪಾಶವೇ ಪಾವಕಂಗಾಪುಲ್ಲ
ಸರವಿ ಕಾಲ್ತೊಡಕೆ ಪಂಚಾನನಂಗರಿ ಮತ್ತ
ಕರಿ ಭಯವೆ ದುರಿತಕ್ಕೆ ದುರಿತಭಯಮುಂಟೆಯಾ ಮಹಘೋರದುರಿತಾರಿಯು ।
ಪರಮೂರ್ತಿಬಸವಂಗೆ ಸಿಡಿಲಭಯಮುಂಟೆ ನ
ಮ್ಮುರವಣಿಂದಾದಹಂಕಾರಮದವೆಲ್ಲವ
ನ್ನುರುಹುವನೆನುತ್ತ ಶಿರದೂಗಿ ತನತನಗೆ ಕೊಂಡಾಡಲ್ಕೆ ಭೂಪತೀಶಂ ॥೧೦॥

ನಗುತ ತೊಱೆವಾಯ್ದುಂಬಿಗರ ಗಂಡನೆಂಬ ಕೀ
ಳ್ಬಗೆ ನಿನಗೆ ನೈಜವಱಿದುಂ ಮಱೆವುದದು ವಿಪ್ರ
ರಿಗೆ ಸಹಜ ಹೊಡೆದ ಬರಸಿಡಿಲ ಪಿಡಿದೆಮ್ಮನುಳುಹಿದನೆನುತ್ತುಭಯಕರಮಂ ।
ಮುಗಿದೀತ ಶಿವನೆನುತ್ತೆದ್ದು ಗುಡಿತೋರಣವ
ಬಗೆಬಗೆಯೊಳೆತ್ತುತತ್ಯುತ್ಸಾಹ ಸುಪ್ರಘೋ
ಷಗಳ ನುಡಿವಪ್ರತಿಮಬಸವನಂ ನೃಪಕಳುಪೆ ಬಂದ ಭಕ್ತರಭಾಗ್ಯನು ॥೧೧॥

ಅಹಿತರ ವಿಚಾರೋಕ್ತಿಯಿಂ ನಡೆವ ದುರ್ಮದ
ಪ್ರಹರಣಾರ್ಥದಿ ಸಮರ್ಥನನಾದಿ ಕುಲಕರ್ಮ
ವಿಹಿತಭೂಕಂಪಪ್ರಳಯಕಾಲಕಲ್ಪಾಂತ ನಿರ್ಘಾತಘೋರತರದ ।
ಗಹನಕೃಶಾನುನೇತ್ರಂ ಬಸವ ದಂಡೇಶ
ಬಹುಶರಣಸಂದೋಹದೊಳ್ನಗುತ ಬಂದು ಸ್ವ
ಗೃಹವೊಕ್ಕನೆಂದು ನಂದೀಶ ಪ್ರಮಥರ್ಗೊರೆದೆಥಾರ್ಥವಿದು ಚಿತ್ತವಿಪುದು ॥೧೨॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತ ವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ಸಿಡಿಲ[1][ಪಿಡಿದು ಬಸವೇಶತಾ ಮೆಱೆದ ಸಂಧಿ][1] ॥೧೩

———

[1] ಪಿಡಿದು ಬಸವ ಮೆಱೆದ ಸಂಧಿ ಸಂಪೂರ್ಣ (ಕ.ಚ), ಸಂಧಿಸ್ಸಮಾಪ್ತಂ ನಮಃ ಶಿವಾಯ (ಖ).

ನಲವತ್ತೈದನೆಯ ಸಂಧಿ

ಸೂಚನೆ—

ಅಂಗದೊಳು ಲಿಂಗ ಲಿಂಗದೊಳಂಗವಿಂತುಭಯ
ಸಂಗತವ ಪೇಳಿರಾ ಕ್ರಮವನೆಂತೆಂಬ ಭೂ
ಪಂಗೆ ಲಿಂಗಾಂಗಮಂ ಬೆರೆದು ತೋಱಿದ ಲಿಂಗವಂಗಿ ಸಂಗನಬಸವನು ।

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಕೇಳಿ ಲಿಂಗಾಂಗದವಿರಳಸಂಗಯುತರು ಸ
ಲ್ಲೀಲೆಯಿಂ ಬಿಜ್ಜಳೋರ್ವಿಪನೊಂದುದಿನ ಭದ್ರ
ಶಾಲೆಯೊಳ್ಕವಿ ಗಮಕಿವಾದಿವಾಗ್ಮಿಪ್ರಕರದಿಂ ವಿರಾಜಿಸುತ ರಾಜ ।
ಲೋಲನಕ್ಕರಿಗ ಗಾಯಕ ಭೇಷಜಂ ಗಣಕ
ರೋಳಿಮೇ[1]ಣ[1]ಚಿರ ಶೋಭಿತ ಸುವಿದ್ವಜ್ಜನಸ
ಮೇಳದಿಂದಿರಲೊರ್ವಭಿಜ್ಞವರಶೈವಾಗಮಜ್ಞನೊರೆದಾಗಮೋಕ್ತಿ ॥೨॥

ಸ್ಕಾಂದೇ ॥ ಶಿವ ಉವಾಚ—

ಲಿಂಗರೂಪೋ ಮಹಾದೇವ ಸ್ಸಚ್ಚಿದಾನಂದಲಕ್ಷಣಃ
ಅಂಗರೂಪೋ ಹಿ ಜೀವಾತ್ಮಾ ಭವಭಾವನಿಯಂತ್ರಿತಃ ॥೧॥

ಎನೆ ನರಪ ಲಾಲಿಸುತ್ತೀ ವಿವಿಧಮಂತ್ರೋಕ್ತ
ದನುವೆಂತೆನಲ್ಕೆಥಾ ತ್ವಂಪದದ ವರ್ತನದ
ಘನಲಿಂಗತ್ರಯದೊಳನ್ವಯಿಸುತುಂ ತೀವಿ ಬುಧನಿದು ಷಟ್ಸ್ಥಲಬ್ರಹ್ಮದ ।
ಘನಮಂಗಲಿಂಗಮಿಂತುಭಯಸಂಗಸಕೀಲ
ದನುಭಾವವೆನೆ ರಾಜ ಕೇ[2]ಳೆ[2] ಕರ್ಣಾಮೃತ
ಕ್ಕನುವಱಿಯದಾ[3]ಮ್ರ[3] ವಿಡಿದೋಲ್ಮಂಚಿಮರಸನೆಸಗಿದನಿದು ಮೃಷಾಲಾಪವು ॥೩॥

[1] ಗ್ರ (ಕ.ಚ.) [2] ಳ್ವ (ಗ.ಘ.ವ). [3] ಮ (ಚ).

ಶ್ರುತವಿರಲ್ಕಶ್ರುತಮನಾಶ್ರೈಸುವಾ ಮೂಢ
ಪತಿತನೊಲ್ಮಾಂಸವಿರೆ ಚರ್ಮಖಂಡನ ಭಕ್ಷ
ಣತಿಹೀನಜಿಹ್ವಾಪನೊ[1]ಲ್ಕ[1]ಲಹಭೋಜನಂ ನಗುತ ಶಿವಭಕ್ತಿಕುಲದ ।
ಗತಿಮೇಘಚಾಪದಂತೆನಲು ಬಸವರಸ ನೀ
ಮತಕಾದ್ಯನೆನುತ ಗೇ[2]ಯ[2]ದೊಳು ವಿದ್ವಜ್ಜನಾ
ಶ್ರಿತಸಹಿತಲಾಡಂಬರದೊಳು ಬಂದೋಲಗದಿ ರಾಜರಾಜಿಸುತಿರಲ್ಕೆ ॥೪॥

ಭೂಮಿಪನ ಆಜ್ಞಾನತಿಮಿರದೀಧಿತಿ ಬಸವ
ಜಾತನೈತಂದಾಸನದೊಳಿರಲ್ಕಾ ಪರಂ
ಜ್ಯೋತಿಗೆ ನೃಪಸ್ವಯಂಮುಖಮುಕುರವಂ ತೋಱುವಂತೀಕ್ಷಿಸುತ್ತ ನಮಿಸಿ।
ನೀತಿವಿಧವನು ವಿಸ್ತರಿಸುವಾಗವಾರ್ಥ ವಿಪ
ರೀತವಾಗಿದೆ ನೀವು ಬಲ್ಲರಥೋಕ್ತಿ[3]ಯಂ[3]
ನೀ ತಿಳುಹೆನಲ್ಕೆಮಗನುಕ್ತ [4]ಮೆನ[4]ಲೆತ್ತಿದ ಶಿವಾಗಮೋಕ್ತವ ಬಸವನು ॥೫॥

ಸ್ಕಾಂದೇ—
ತತ್ಪದೇನೋಚ್ಯತೇ ಲಿಂಗಂ ತ್ವಂಪದೇನಾಂಗಮೀರಿತಂ
ಅನಯೋರೈಕ್ಯಭಾವೋಽಯಂ ಸಂಬಂಧೋಽಸಿಪದೇನ ಚ ॥೨॥

ಮಾತಿನದ್ವೈತದಲಿ ಹೊ[5]ಯ್ಯೆಂ[5]ಬ ಬಾಹ್ಯೋಪ
ನೀತಿಯಂಗದ ಲಿಂಗದೃಷ್ಟಮೆನಗೆನೆ ತಮ್ಮ
ನೀತಿಯೆಂದಾ ಕುಮಂತ್ರೀಶನೆಸಗಲ್ಕಾ ನೃಪಾಲ ಹಾಸ್ಯದೊಳು ನಿಮ್ಮ ।
ರೀತಿ ಲಿಂಗದೊಳಂಗವಂಗದೊಳು ಲಿಂಗಮಂ
ಬಾತೆಱಂ ತೋಱಲ್ಲದೊಡೆ ನಿಮ್ಮನುಡಿ ಸುಧಾ
ಸೂತಿಯಂ ಬ[6]ಳಸು[6]ವಾತೆಱನೆನಲ್ಕಾ ಲಿಂಗಸಂಗಿ ನಲಿದೊರೆದ ವಚನ ॥೬॥

ವಚನ—

ಅಂತರಂಗ ಬಹಿರಂಗ ಆತುಮಸಂಗ ಒಂದೆಯಯ್ಯ; ನಾದಬಿಂದು ಕಳಾತೀತ ಆದಿ ಆಧಾರ ಒಂದೆಯಯ್ಯ; ಆರೂಢರೂಢದಲ್ಲಿ ಕೂಡಿದ ಸುಖವನು ಕೂಡಲಸಂಗಯ್ಯ ತಾನೆ ಬಲ್ಲ ॥೧॥

ಎನುತುಭಯಕರದೊಳಂಗವ ಬಗೆಯಲೊಡಲೊಳಗೆ
ಘನಮಹಾಲಿಂಗ ಬೆಳಗುತ್ತಿರಲ್ಕಂಡರಸು
ಯಿನಿತಲ್ಲವಾ ಲಿಂಗದೊಳಗಂಗಮೆಲ್ಲಿ ತೋಱನೆ ಲಿಂಗಸಂಗಿ ತನ್ನ।

---

[1] ತ್ಕ (ಕ.ಚ.ಖ). [2] ಹ (ಕ.ಚ). [3] ಯಿಂ (ಕ.ಚ). [4] ಮೇಳ (ಕ.ಚ).
[5] ಯ್ಯ (ಗ.ಘ.ಛ). [6] ಳೆಸೆವ (ಕ.ಚ.ಘ.ಗ).

ತನುವನಾ ಲಿಂಗದೊಳು ತೋಱಲೊಡನೆದ್ದರಸು
ವಿನಯದಿಂ ಮಣಿಮಕುಟಮಂ ಚಾಚಿ ಚರಣಕ್ಕೆ
ವಿನಮಿಸುತ್ತಾಶ್ಚರ್ಯಚಿತ್ತನಾಗುತ್ತಿರಲ್ಕಾ ರಾಜಸಭೆ ಭ್ರಮಿಸಲು ॥೭॥

ಕೊಂಡೆಯದ ಕೋಂಟೆ ನಿಂದಕದಗಳಿನಡಿಗಡಿಗೆ
ತೊಂಡಿನಟ್ಟಳೆ ಕುಚಿತ್ತದ ಕೊತ್ತಳಂ ಸಟೆಯೊ
ಳೊಂದಿದಾಳ್ವೇರಿ ಕುಹಕದ ತೆನೆಗಳಟಮಟದ ಡೆಂಕಣಿಗಳಿಂದೊಪ್ಪುವ।
ತಂಡದುರ್ವಾರ್ಗರ್ದುರ್ಗವ ಬಸವರಾಜೇಂದ್ರ
ಕೊಂಡು ಖಳರಾಜನಂ ಕೊಲಲವನ ಹೇಡಿಸತಿ
ಮುಂಡೆಮುಸುಕಿಕ್ಕಿ ಗೂಳೆಯನೆತ್ತಿದಂತೆ ಕೊಂಡೆಯರ ಮುಖರಸವಱತುದು ॥೮॥

ಭಕ್ತಿಯಿಂ ಬಸವಚಾರಿತ್ರಮಂ ಕೇಳ್ವವ
ರ್ಗೆತ್ತಣದು ವಿಷ ಸರ್ಪ ನೃಪ ಚೋರ ಭೂತವಪ
ಮೃತ್ಯು ಮಾರಣ ಮೋಹನೋಚ್ಚಾಟನ ದ್ವೇಷಣ ಪ್ರೇತ ಪೈಶಾಚಿಕ।
ಕುತ್ತ ಜಲಶಸ್ತ್ರ ಸಂಗಟ ಶತ್ರು ದಾರಿದ್ರ
ಸುತ್ತಿ ಮುಚ್ಚಿದ ಕಿಚ್ಚು ಭಯುಗಳಿವು ಪೊದಲಾಗಿ
ಪೊತ್ತವೆಂದಱುವುದಿದ ತಿಳಿದು ಬಸವೇಶ್ವರನ ಭಜಿಸಿ ಬದುಕುವುದೆಲ್ಲರು ॥೯॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದಿ ಲಿಂಗಾಂಗಮಂ ತೋಱು ಬಸವೇಶ ಮೆಱೆದ ಸಂಧಿ ॥೧೦॥

ನಲವತ್ತಾರನೆಯ ಸಂಧಿ

ಸೂಚನೆ—

ವೇಶಿ ವಿಟನಿತ್ತ ನಿಂಬೆಯ ಹಣ್ಣ ಭಕ್ತಿಯಿಂ
ದೀಶನೆಂದರ್ಚಿಸಲ್ಕೇಳಿ ನೃಪ ನಗಲು ಬಸ
ವೇಶನಾ ಪಣ್ಣ ನಿಜಲಿಂಗಮಂ ಮಾಡಿ ತೋಱಿದನು ಜಗವೆಲ್ಲಱಿಯಲು ‖

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ಶಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ‖೧‖

ವಿಜಿತವೈರಿಯುದಾರಿ ಧೀರ ಕಾರಣರೂಪ
ಸುಜನಸಂಗಂ ಲಿಂಗಭರಿತಾಂತರಂಗ ವರ
ಭಜಕಜನಭಕ್ತಿಮುಕ್ತಿಪ್ರದಾಯಕನಮಲಸಚ್ಚಿದಾನಂದರೂಪ ।
ವೃಜಿನರಹಿತಂ ಮಲತ್ರಯಮೂಲಕುದ್ದಾಲ
ನಿಜಶೀಲಭಾಷಾನುಪಾಲ ಶಿವಸಮಯಾಬ್ಧಿ
ರಜನೀಕರಂ ಪರಮಪಾವನಾತ್ಮಕ ಜಗದ್ಗುರು ಬಸವಲಿಂಗ ಶರಣು ‖೨‖

ಲಾಲಿಪುದು ಶರಣರ್ಕಳೆಸೆವ ಕಲ್ಯಾಣದೊಳು
ಸ್ಥೂಲಕಠಿಣಸ್ತನದ ನೀಲಕಚಭರದ ಕುಟಿ
ಲಾಳಕಂಗಳ ಪದ್ಮಿನಿಯರೇಳುಸಾಹಸ್ರಚತುರಪಣ್ಯಾಂಗನೆಯರ ।
ಜಾಳವನಿತಲ್ಲದೆ ಸುವಿಟರ ಹೃದಯವನಲೆವ
ಬಾಲೆ ಯೌವನೆ ಘನಪ್ರೌಢೆಯರ್ಮೊದಲಹ ವಿ
ಶಾಲನೇತ್ರೆಯರೆಂಟುಸಾಹಸ್ರವವರೊಳೆಸೆದಿಹಳೊರ್ವ[1]ಭೋ[1]ಗಾಂಗನೆ ‖೩‖

ಕಾಮಬಾಣಸಮಾನನೇತ್ರೆ ವಿಟಸಂಧಾನ
ನೇಮಸೂಚನೆನಿಪುಣೆ ಚಿತ್ತವಿರಹಾನಲದ
ಸೀಮೆ ಚತುರಿನಭೂಮಿ ಮೋಹನದ ಮಡು ಕಲಹದಿಕ್ಕೆ [2]ಹುರುಡಿನ[2] ಚಾವಡಿ

---

[1] ಯೋ (ಕ.ಚ). [2] ಚದುರಿನ (ಕ.ಚ).

ಕಾಮಶಾಸ್ತ್ರಕಳಾವಿಲಾಸೆ ಸುಗುಣಶ್ರೇಣಿ
ಕಾಮಯೋಗಿಗಳಮುಖಮುಕುರವೆನೆ ಶುಭಪುರಿಯ
ಕೋಮಲೆಯರತಿಸೊಬಗ ಸೂರೆಗೊಂಡಂತಿಹಳು ವೇಶಿಯಾಡಂಬರದೊಳು ॥೪॥

ಶತಕೋಟಿವಿತ್ತಸಂಪನ್ನೆಯತಿಲಾವಣ್ಯ
ವತಿವಿಮಲಸಂಗೀತಸಾಹಿತ್ಯರಸಕಳಾ
ನ್ವಿತೆ ನೃಪನನೃತ್ಯಾಧಿರಂಗದೇವತೆ ರಂಭೆಯೂರ್ವಶಿ ತಿಲೋತ್ತಮೆಯರ
ಚತುರತೆ ಸುಕಳೆಗಳಂ ಕೇಣಿ[1]ಗೊಂಡಂ[1]ತೊಪ್ಪು
ತಿತರರಂ ಬೆರಸಿ ಬೆರಸದೆಯೊಲಿಸಿಕೊಳ್ವ ಜಾ
ಣತೆಯಿಂದಲೆಸೆವ ಸತ್ಪ್ರೌಢಪ್ರತಾಪೆ ಮಾಯಾದೇವಿ ಪೆಸರುವೊತ್ತು ॥೫॥

ಇರುತೊಂದುದಿವಸದೊಳು ತುಂಗಕುಚೆ ಕೆಳದಿಯ
ರ್ವೆರಸೂರ್ವಿಪಾಲನೋಲಗಕೆ ಬರಲೊಂದೆಡೆಯೊ
ಳರವಿಂದಸಖಕೋಟಿತೇಜನಾಲಯದೊಳ್ಪುರಾಣಿಕಂ ಶಿವಕಥನಮಂ।
ಒರೆಯಲಾ ಸುದತಿ ಕೇಳುತ್ತಲ್ಲಿಗೈದಿ ಸು
ಸ್ಥಿರಚಿತ್ತದಿಂ ನಲಿದು ಮಂಡಿಸಲ್ಕಾ ಕಥಿಕ
ವಿರಚಿಸುತ್ತಿದ್ದನಾ ಶೈವಪೌರಾಣದೊಳ್ ಶಿವಭಕ್ತಿಮಾಹಾತ್ಮೆಯ ॥೬॥

ನರಜನ್ಮ ಕಷ್ಟವದಱಿಂ ಪರರ ನಿಂದಿಪುದು
ನೆರೆ ಕಷ್ಟಮಾ ಪರರ ನಿಂದೆಯಿಂ ದಾನಮಾ
ಳ್ಪರಿಗಡ್ಡಬಪ್ಪುದತಿಕಷ್ಟವದಱಿಂ ಕಷ್ಟ ಪರರ ವಧುವಂ ನೆರೆವುದು ।
ಕರಕಷ್ಟ ಜನನಿಜನಕರ ನಿಂದಿಪುದು ಮೇಣು
ಹರನಿಂದೆಯದಱಿಂದೆ ಕಷ್ಟವದಱಿಂದೆಯ್ದೆ
ಗುರುನಿಂದೆ ಕಷ್ಟದೊಳ್ಕಷ್ಟಮಿಂತಿವಕೆಲ್ಲ ಕಷ್ಟವಾ ಭವಿಜನ್ಮವು ॥೭॥

ಈರೈದು ಸೂನೆಗಾಱರ ಸಮ ಕುಲಾಲ ಮ
ತ್ತೀರೈದು ನರಕಿಜೀವರ ಸಮ [2]ಧ್ವಜನು ಮೇ
ಣೀರೈದು ತಿಲಘಾತಕರ ಸಮಂ ವೇಶಿ ದಶವೇಶಿಯರ ಸಮ ನೃಪಾಲ ।
ಹಾರೈಸುತಾ ನೃಪರೊಳಾಡುವರಿಗತಿನಿರಯ
ವೀರೇಳು ಜನ್ಮ ತಪ್ಪದುಮವರಿಗಿಂ ನರಕಿ
ಯಾರೆನಲ್ಕಾತ್ಯಾಯನೀಮನೋವಲ್ಲಭನನಱಿಯದಿಹ ಭವಿಜನ್ಮವು ॥೮॥

---

[1] ವಿಡಿದಂ (ಕ.ಚ). [2] ದ್ವಿ (ಫ).

ಶ್ಲೋಕ—

ದಶಸೂನುಸಮಶ್ಚಕ್ರೀ ದಶಚಕ್ರಸಮೋ ಧ್ವಜೀ ।
ದಶಧ್ವಜಿಸಮಾ ವೇಶ್ಯಾ ದಶವೇಶ್ಯಾಸಮೋ ನೃಪಃ ॥೧॥

ಅತಿರೂಪು ಸೌಭಾಗ್ಯ ವಿವಿಧವಿದ್ಯಾಕಳೋ
ನ್ನತಿ ವೀರವಿಕ್ರಮಂ ಸತ್ಕುಲಂ ಸಾಮ್ರಾಜ್ಯ
ರತನಾಗಿಯಬ್ಜಸಂಭವಕಲ್ಪಸಾಹಸ್ರಭವಿಯಾಗಿ ಬಾಳುವುದಱಿಂ ।
ಶ್ರುತಿಮತದಿ ಗುರುವಿನಿಂದಾಚಾರಮಾರ್ಗಸ
ನ್ಮತವಱಿದು ಲಿಂಗಮಂ ಧರಿಸಿ ಪಂಚಾಕ್ಷರಿಯ
ನುತಿಸುತ್ತಲೈದು ದಿವಸಂ ಬಾಳ್ವನೇ ಸತ್ಯಸುಕೃತಾತ್ಮ ನಿತ್ಯಮುಕ್ತ ॥೯॥

ಸಾಕ್ಷಿ—

ಜೀವಿತಂ ಶಿವಭಕ್ತಾನಾಂ ವರಂ ಪಂಚದಿನಾನಿ ಚ
ಅಜಕಲ್ಪಸಹಸ್ರೇಷು ಭಕ್ತಿಹೀನಂ ತು [1]ಶಂಕರೇ[1] ॥೨॥

ಎನೆ ಲಾಲಿಸೀ ಜನ್ಮಕಷ್ಟಮೇಲೆನಗೆ ಭವಿ
ತನಮದಲ್ಲದೆ ವೇಶಿಯೆನುತ ತನ್ನಯ ನಿಕೇ
ತನಕೆ ಮಗುಳ್ದೈದಿ ಮಿಂದೊಸೆದು ಮಡಿವರ್ಗದಿಂದತಿಶುಚಿರ್ಭೂತೆಯಾಗಿ ।
ತನುವಿನೊಳ್ಭಸಿತರುದ್ರಾಕ್ಷಿಗಳ ತಾಳ್ದೆನ್ನ
ಮನೆಗಾರು ಬಂದೇನನಿತ್ತಡೆನಗದು ಲಿಂಗ
ವೆನುತಾತ್ಮದೊಳ್ವಿಕಾರೋಕ್ತಿಯಳಿದಿರುತಿರಲ್ವರಮಿಂಡನಾಗಯ್ಯನು ॥೧೦॥

ಕಿಱುಜಡೆ ವಿಚಿತ್ರವಸ್ತ್ರದ ಲಿಂಗ ಭಾಳದೊ
ಳ್ಮೆಱೆವ ನಸುತಿಲಕ ದಿವ್ಯಾನುಲೇಪನಮುಟ್ಟ
ನಿಱುಗಾಸೆ ಹೊಂಗ[2]ಠಾರಿ[2]ಯ ಕೋಲುವಿಡಿದು ಮೆಲ್ಲನೆ ಜಾಱಿಲಡಿಯಿಡುತ್ತ ।
ಮುಱುಕದಿಂ ಮುಂಗೈಯದಂಡೆಗೊಳುತಂಗಮಂ
ಬೆಱಗಿನಿಂ[3]ದಿಳೆ[3]ಯ ನೋಡುತ್ತಾ ವಿದಗ್ಧಯರ
ನಱಸುತ್ತ ಜಿತಕುಸುಮಕೋದಂಡ ಸೂಳೆಗೇರಿಯನೀಕ್ಷಿಸುತ್ತ ಬರಲು ॥೧೧॥

ವೇಶಿಯರು ಜನಮೋಹಪಾಶೆಯರು ಸರಸಕು
ಲ್ಲಾಸೆಯರು ಚಪಲತೆಯ ಕೋಶೆಯರು ಸತ್ಕುಲವಿ
ನಾಶೆಯರು ಮನ್ಮಥವಿಲಾಸೆಯರು ಹಣವೀಸದಾಸೆಯರು ಕುಟಿಲತರರದ ।

---

[1] ಶಾಂಭವೀ (ಫ), ಶಾಂಕರಿ (ಕ.ಖ.ಗ.ಚ). [2] ದಾರಿ (ಫ). [3] ದೇರಿಳಿ (ಗ.ಫ).

ರಾಸಿಯರು ಚದುರಿನೆಡೆಭಾಷೆಯರು ಹುರುಡಿನತಿ
ವಾಸೆಯರು ಮುನಿಸಿನಭಿಲಾಷೆಯರು ಸೌರತಿವಿ
ಕಾಸೆಯರು ಸುಖದವಾರಾಶಿಯರೆನಿಪ್ಪ ಪಣ್ಯಾಂಗನಾಜನವೆಸೆದುದು ॥೧೨॥

ಬಿಡುವ ನಿಡುಮುಡಿ ತಿಲಕವಳಿವಲಕ ನಸುಗೆಂಪು
ವಡೆದಕ್ಷಿ ಕೆದರಿದಳಕಂ ಬಿಗುಹುಗುಂದಿ[1]ಜಿ[1]ಗಿ
ವಡೆದ ಕುಚ ಬೆಳುಪಡಸಿದಧರ ಬೆಮರಿಡುವ ತನು ತವಕದಿಂ ನಿಱಿಸಡಿಲದ ।
ಉಡಿಗೆ ಥಳಥಳಿಸುವಾಭರಣನಕಿತೆಲ್ಲ ಪೊಱ
ಮಡುತ ತಮತಮ್ಮ ಗೃಹಗೃಹದ ವೇದಿಕೆಗಳೊಳು
ಸಡಗರದಿ ಸುರತಶ್ರಮವ ಕಳೆವ ಕಾಮುಕಿಯರುಗಳ ನಿಟ್ಟಿಸುತ ಬರಲು ॥೧೩॥

[2]ವಾರಿಜಾನನೆಯ ಸದನದ ಕನಕವಾಗಿಲುಗ
ಳೋರಣಂಗಳ ರತ್ನಗಳಸಗಳ್ವೊಳೆವ ವಿ
ಸ್ತಾರದುಪ್ಪರಿಗೆಗಳ ಚಿತ್ರಖಂಡಣೆಗಳಿಂದೆಸೆವ ಧವಳಾರಂಗಳ[2]।
ತೋರಮುತ್ತಿನ ಮೇಲುಕಟ್ಟುಗಳ ದಿವ್ಯಘನ
ಸಾರಕುಂಕುಮದ ಸಮ್ಮಿಶ್ರಚಂದನದ ಪ
ನ್ನೀರಸಾರಣೆಯ ಶಯ್ಯಾಗಾರಮಂ ನೋಡುತಚ್ಚರಿವಡುತ್ತ ವಿಟನು ॥೧೪॥

ಪುಳಕಿಸುತ್ತಂಗವಿಭ್ರಮವಿಲಾಸದ ನೋಟ
ಗಳ ಬೀಱುತಾ ಭೋಗನಾರಿಯ ನಿಕೇತನವ
ನೊಳಪೊಗಲ್ಸಂಧ್ಯಾಸತಿಯ ಪಯೋಧರರತ್ನವೆನಿಸುವಿನನಸ್ತಾದ್ರಿಗೆ ।
ಇಳಿಯೆ ನಳಿನವ ಭ್ರಮರ ಸೇರೆ ಕೈರವದ ಸಂ
ಕುಳಕೆ ಮಿಗೆ ಸಂತೋಷ ದೊರೆಯೆ ಕುಜಕೋಟರಂ
ಗಳ ಪಕ್ಷಿಗಳ್ಸೇರಲಾ ಮಿಂಡನಾಗಯ್ಯ ಸೇರಲುರು ಪೀಠಗೊಳಿಸಿ ॥೧೫॥

ನಲಿವುತೆನ್ನರಕೆ ಕೈಗೂಡಿತೆಂದಾವೋದ
ಸಲಲದಿಂದುಭಯಾಂಘ್ರಿದೊಳೆದಂಬುಗೊಂಡು ಸ
ಲ್ಲಲಿತಾಂಗಿ ಭೂತಿವೀಳೆಯವೀಯಲಾ ವಿಟೋನ್ನತ ನಗುತಲಾಲಲನೆಯ ।

---

[1] ಬಿ (ಕ.ಚ).

[2] ವಾರಿಜಾನನೆಯ ಗೃಹದಮಲರನ್ನದ ಖಚಿ
ಚಾರುತರದ್ವಾರ ಬಂಧಂಗಳಿಂದೆಸೆವ ವಿ
ಸ್ತಾರದುಪ್ಪರಿಗೆಯಿಂ ಪೊಂಗಳಸಗಳ ವಿರಾಜಿಸುವ ಧವಳಾರಂಗಳ ॥ (ಜ)

ನಿಲವನೀಕ್ಷಿಸುತ ಕಾಮಾತುರಾಪೇಕ್ಷೆಯಿಂ
ಬಲಗೈಯೊಳಾಗ ಪಿಡಿದಿರ್ದ ನಿಂಬೆಯ ಹಣ್ಣ
ನಲಿದು ವಾಸಿಸುತಿಡಲ್ಕುಭಯಕರದಿಂ ಪಿಡಿವುತೊಡನೆ ಮತ್ತಡಿಗೆಱಗುತ ॥೧೬॥

ವರಮೂರ್ತಿ ಮಿಂಡನಾಗಯ್ಯಂಗ ಸದ್ಭಾವ
ಭರಿತೆತಾಂ ಮೈಮಜ್ಜನಂಗೈಸಿ ಪಾದುಕೆಗ
ಳಿರಿಸಿ ಕೈಗೊಟ್ಟು ಕೊಂಡೊಯ್ದು ಸೆವ ಹಂಸತಲ್ಪಾಗ್ರದಲ ಮೂರ್ತಿಗೊಳಿಸಿ।
ವರದುಕೂಲಂಗಳಿತ್ತಾಭರಣಗಳನಲಂ
ಕರಸಿ ದಿವ್ಯಾಮೋದಮಂ ಲೇಪನಂಗೈದು
ಪರಿಮಳಪ್ರಸರಮಂ ತುಱುಬುತ್ತ ಭಕ್ತಿಶುಶ್ರೂಷೆಯಿಂ ಪೊತ್ತುಗಳೆಯೆ ॥೧೭॥

ಶತದಳಾಕ್ಷಿಯ ರೂಪನೀಕ್ಷಿಸುತ್ತು ಪತಾಪಿ
ಸುತ ಧೃತಿಯ ನಿಲಿಸಲಾರದೆ ವಿಟಾಚಾರ್ಯನೂ
ರ್ಜಿತಕಾಮದಿಂದಸಮರತಿ ವಿಷಮರತಿಯೂರ್ಧ್ವರತಿಯ ಶಕ್ತಿತ್ರಯುವನು।
ಸತಿಕೇಳು ಚೌರಾಶಿಬಂಧಸುರತದ ಕಳೆಯ
ಮತವನಾನಱಿಯೆನೆಂದೆನಬೇಡ ನೋಡೆನಲ್
ಚತುರೆ ಕೈಮುಗಿವುತಿನ್ನೇಕೆನಗೆ ಕಾಮ ಕಾಮಾರಿ ನೀವೆನುತ ನಮಿಸೆ ॥೧೮॥

ವೃತ್ತಕುಚೆಯಾಯಯ್ಯನುರವಣಿಯನಿಲಿಸೇಕ
ಚಿತ್ತದಿಂ ಷೋಡಶುಪಚಾರದೊಳ್ದೇಶಿಕನೆ
ನುತ್ತ ಲಿಂಗಾರ್ಚನಂಗೈಸಿ ಷಡುರಸರಸಾಯನದಿ ಸಂತುಷ್ಟಿವಡಿಪ।
ಉತ್ತಮಾಂಗನೆಯ ಸದ್ಭಕ್ತಿಯಿಂ ದೇವದೇ
ವೋತ್ತಮಂ ನೋಳ್ಪಾರ್ಥದಿಂದ ಕಣ್ದೆಗೆದೊಲಾ
ದಿತ್ಯಪೂರ್ವಾದ್ರಿಗಡರಲ್ಮಾಯಿದೇವಿ ಸಾಷ್ಟಾಂಗಪ್ರಣುತೆಯಾಗುತ ॥೧೯॥

ಬದುಕಿದೆನಭೀಷ್ಟಾರ್ಥಸಿದ್ಧಿ ಸಿದ್ಧಿಸಿತೆನ್ನ
ಸದುಗೌರವರ್ನೀವೆನುತ್ತ ಸಾವಿರಹೊನ್ನ
ಮುದದೊಳಿತ್ತಡಿಗೆಱಗಲೊಡನಾ ವಿಟಂ ಭೂರಿ ಪಣಗೊಂಡು ಪೋಗಲೊಡನಾ।
ಸುದತಿ ಪಣ್ವಿಡಿದು ಪೂಜಿಸೆ ಹಾಸ್ಯಲತೆ ಪರ್ಬಿ
ತುದಿ ಕವಲ್ತು ಮಿಗೆ ಕುಡಿವಱಿದು ಕೇಳ್ದು ಮಂಚಿಗನ
ಹೃದಯವಾಂದೋಳಿಸುತ ಮದುಗೊಂಡ ಮೃಗಧೂರ್ತನಂತೋಲಗಕ್ಕೆ ಬಂದ
॥೨೦॥

ಧರಣೀಶ ನಾಟ್ಯಾಲಯದೊಳು ನೃತ್ಯವ ನೋಡು
ತಿರುತೋಲಗಕ್ಕೆ ಭೋಗದ ಮಾಯೆ ಬಾರದಿಹ
ಪರಿಯೇನೆನುತ್ತೀಕ್ಷಿಸಲ್ಬೀಯಯೆನುತೆದ್ದ ಲಾವಕಶಿರೋರತ್ನನು।
ಕರಯುಗವ ಮುಗಿದು ಬಸವರಸನೊಡನಾಡಿಗಳ್
ವೆರಸಿ ಬೂದಿಯಾ ಬರೆದುಕೊಂಡು ಮರಗಾಯಿಗಳ
ಕೊರಳೊಳಿಕ್ಕಿಡಗೈಯೊಳೊಂದು ನಿಂಬೆಯ ಹಣ್ಣ ಲಿಂಗವಂದೆಱಗಿದಪಳು ॥೨೧॥

ಎನಲು ದುರುಳಾತ್ಮ ಕಿವಿಗೊಟ್ಟಧಿಕಕೋಪದಿಂ
ದನಘಾತ್ಮನಂ ಕರೆಸಿದೇನೆಮ್ಮ ಭೋಗದಂ
ಗನೆಯ ಮರುಳ್ಗೊಳಿಸಿ ಬೂದಿಯನು ವೈದುಂಬಿ ಮಗುಳ್ದೊಂದು ನಿಂಬೆಯ ಹಣ್ಣನು।
ಘನಲಿಂಗವೆಂದೆಱಗಿಸುವರೆ ವೇಶಿಗೆ ಭಕ್ತಿ
ಯನುಗೊಂಬುದೇ ಬಹಳತರ ನಿರಯವೆಂದು ನೃಪ
ನೆನೆ ನರಕ ಉರಿಗೊಡ್ಡಿದರಗಿನಂತಾಗದೇ ಹರಪೂಜೆಗೆನುತೆ ಮತ್ತೆ ॥೨೨॥

ಲೋಕಪಾವನಮೂರ್ತಿ ಬಸವದಂಡೇಶ ಭೂ
ಲೋಕಪಾಲಕ ಬಿಜ್ಜಳೇಶನಾನನವನಾ
ಲೋಕಿಸುತ್ತೆಂದನಾದಿಯೊಳೊರ್ವ ವೇಶಿ ವರಕಾಳಹಸ್ತೀಪುರದೊಳು।
ಲೋಕವಱಿಯಲ್ತ್ರಿಸಾಹಸ್ರವಿಪ್ರೋತ್ತಮರ
ಸೋಂಕಿಯಸುಗೊಂಡವಳದೊಂದುದಿನ ವೊಬ್ಬಲಿಂ
ಗೈಕ್ಯನಂ ಸೋಂಕಲಘವಳಿದು ವೇಶಿಗೆ ಮುಕ್ತಿಯಾಯ್ತೆಂದುದಾ ಸ್ಕಂದವು ॥೨೩॥

ಸ್ಕಾಂದೇ—

ಪುರಾ ಕಾಚಿತ್ತು ವೇಶ್ಯಾ ಸ್ತ್ರೀ ಬಭೂವಾತ್ಯಂತಸುಂದರೀ
ಸಾ ಸಹಸ್ರತ್ರಯಂ ಹತ್ವಾ ವಿಪ್ರಾಣಾಮರ್ಥವಾಂಛಯಾ ॥೩॥

ಶ್ರೀಕಾಳಹಸ್ತೀಶಪುರೀಷು ಕಿಲ್ಬಿಷಾ
ಮಹೇಶ್ವರಂ ಪ್ರಾಪ್ತವತೀ ಸುಶೋಭನಂ।
ತದಂಗಸಂಸ್ಪರ್ಶನಪುಣ್ಯಗೌರವಾ
[1]ವಿ[1]ನಷ್ಟಪಾ[2]ಪಾ[2] ತ್ರಿಪುರಾರಿಮಾಚ್ಛ್ರತ್ ॥೪॥

ಕೇಳು ನೃಪ ಮತ್ತೊಂದು ಸತ್ಕಥಾಲಾಪನೆಯ
ಸೂಳೆಕಮಲಾಯಿ ವಿಟರಂ ನೆರೆವ ಕಾಲದೊಳು
ಜಾಳಿಗೆಯ ಲಿಂಗವಂ ತೆಗೆದಷ್ಟಕಾಷ್ಟದುರುಕಾಲೊಳಿರಿಸೊಂದು ಕರವ।

---

[1] ದ್ವಿ (ಘ). [2] ಪಾರಿ (ಘ).

ಮೇಲಿಟ್ಟು ನೆರೆವಳೆಂಬುದ ಕೇಳಿ ಭಾಳಾಕ್ಷ
ಲೀಲೆಯಿಂ ವಿಟತನದಿ ಬಂದು ಲಿಂಗವ ಕೊಂಡು
ತೇಲಲ್ಕೆಯಾಕೆಯಸು ಲಿಂಗದೊಳ್ಪೋಗಿ ಪುಗುಳ್ದೈತರಲ್ಬಂದುದಱಿಯ ॥೨೪॥

ಸಾಕ್ಷಿ—

ಯದ್ದೇಹೇ ನಾಸ್ತಿ, ವಿಶ್ವಾಸಸ್ತದ್ದೇಹೋ ಲಿಂಗದೇಹಿನಾಂ
ಯದ್ದೇಹೇಪ್ಯಸ್ತಿ, ವಿಶ್ವಾಸಸ್ತದ್ದೇಹೋ ದೈವಶೂನ್ಯಕಃ ॥೫॥

ಸೂನೆಗಾಱ ಕುಲಾಲ ವೇಶಿ ಚಕ್ರೇಶ ಮಧು
ಪಾನಿ ಪಾರದ್ವಾರಿ ತಿಲಘಾತಕಂ ಪಿಸುಣ
ಹೀನಗುಲ ಸದ್ಬ್ರಹ್ಮಹತ್ಯನೊಳಗಾದ ಬಲುಘೋರತರನಿರಯಾತ್ಮರು।
ಮೇನಕಾತ್ಮಜೆಯರಸನಂ ಸ್ಮರಿಸಿ ಪೂಜಿಸಲು
ಹೀನತರದತಿಪಾಪವೆಲ್ಲ ಲಯವಾಗಿ ಸೌ
ಖ್ಯಾನುಭವಸುಕೃತಾತ್ಮರಹರೆಂಬ ತಚ್ಛ್ರುತಿಗಳಂ ಕೇಳು ನರಪಾಲಕ ॥೨೫॥

ಸಾಕ್ಷಿ॥ ಲೈಂಗೇ—

ಬ್ರಹ್ಮಹತ್ಯಸಹಸ್ರಾಣಿ ಭ್ರೂಣಹತ್ಯಶತಾನಿ ಚ
ಕುರ್ವನ್ನಪಿ ನ ಲಿಪ್ಯೇತ ಪ್ರಾಣಲಿಂಗಾರ್ಚನಾ ಪರಃ ॥೬॥

ವೀರಾಗಮದಲ್ಲಿ—

ಭಿತ್ವಾ ಭಿತ್ವಾ ಚ ಭೂತಾನಿ ಹತ್ವಾ ಸರ್ವಮಿದಂ ಜಗತ್
ಯಜೇದೇಕಂ ವಿರೂಪಾಕ್ಷಂ ನ ಸ ಪಾಪೈಃ ಪ್ರಲಿಪ್ಯತೇ ॥೭॥

ಸ್ಕಾಂದೇ—

ಮೇರುಮಂದರಸಾಮ್ಯೇಪಿ ರಾಶಿಃ ಪಾಪಸ್ಯ ಕರ್ಮಣಃ
ಈಶ್ವರಂ ವೈದ್ಯಮಾಸಾದ್ಯ ನಶ್ಯತೇ ದುಷ್ಟರೋಗವತ್ ॥೮॥

ಎಂಬಾಗಮಗಳಂತಿರಲಿ ನಿಮ್ಮ ಮರುಳೆನ್ನ
ಬಿಂಬಾಧರೆಯ ಸೋಂಕಿತಾಕೆ ಪಿಡಿದಿಹುದು ಹೊಸ
ಜಂಬೀರಫಲಮದಲ್ಲದೆ ಲಿಂಗವೇ ಅನೃತ ಪೊಲ್ಲೆನಲ್ಬಸವೇಶನು।
ಜಂಬೀರಫಲವಲ್ಲರಸ ಕೇಳ್ವಿರಿಂಚಿ ಹರಿ
ಜಮ್ಭಾರಿಗಳ್ ಪೂಜಿಸುವ ಲಿಂಗವೆನೆ ನೃಪಂ
ಕಂಬೇಟಗೊಂಡು ಭೋಗಾಂಗನೆಯನಾಗ ಕರೆಸಲ್ಬಂದಳೇಂವೊಗಳ್ವೆನು ॥೨೬॥

ನಡೆ ಗಜನಡೆಗಳಡಿಯಲಕ್ತಕವ ಪದನಖಗ
ಳುಡುಗಡಣ ಜಂಘೆಗಳ್ಮದನದೊಣೆಗಳ ತೊಡೆಗ
ಳೆಡೆ ಕದಳಿಗಳ ನಿತಂಬಗಳು ಪುಳಿನಗಳ ವರನಾಭಿ ಗಂಗಾವರ್ತದ ।
ನಡು ಹರಿಯ ಕುಚ ಚಕ್ರವಾಕವಧರಂ ತಳಿರ
ನುಡಿ ಗಿಳಿಯ ನಯನಂಗಳಂಗಜಾಸ್ತ್ರಗಳ ಸೋ
ರ್ಮುಡಿ ನವಿಲನಣೆವಂತಿರೆಸೆವ ಚೆಲ್ವಿನ ಭಕ್ತಿಸಿರಿವನಿತೆ ನಡೆತಂದಳು ॥೨೭॥

ಬಂದಬಲೆಯಂ ನೋಡುತರಸು ನಿನ್ನಯ ಲಿಂಗ
ದಂದವಾವುದು ತೋಱುತೋಱೆನಲ್ಪನಿತೆ ಭಯ
ದಿಂದ ದಂಡೇಶನ ನಿರೀಕ್ಷಿಸಲ್ಕತಿಕೃಪಾವನಧಿ ಭಾವಬ್ರಹ್ಮನು ।
ಹಿಂದೆ ಗುರುಕುಚದೊಳೊಯ್ದಂದಭವ ನಿನ್ನಲ್ಲಿ
ಬಂದಹನೆ ತೋಱೆನಲೊಡನೆಱಗಿ ವಸ್ತ್ರದೊ
ಳ್ಬಂಧಿಸಿಹ ಪಣ್ಗಿದು ತೋಱಲದು ನಿಜಲಿಂಗವಾಗಿ ಥಕಥಕಿಸುತಿರಲು ॥೨೮॥

ನೃತ್ಯಾಲಯದೊಳೊಪ್ಪುತಿರ್ದ ವಿದ್ಯಾಪಂಡಿ
ತೋತ್ತಮಾದ್ಯರು ಮೌಳಿದೂಗೆ ನೃಪನಾಶ್ಚರ್ಯ
ಚಿತ್ತನಾಗುತ್ತಿರಲ್ಕುನ್ಮತ್ತಚಿತ್ತಭವ ವೈರಿಯಾಂಕಿತರು ತಮ್ಮ ।
ಸತ್ಯದಿಂದಜದ ಹಿಕ್ಕಿಯನು ನಿಜಬಳ್ಳಮಂ
ಮತ್ತವಾರಣಚರ್ಮಧಾರಿಯಂ ಮಾಡರೇ
ನಿತ್ಯನಹ ಬಸವೇಶಗೇನಱಿದೆನುತ್ತರಸಿಗೊರೆದನಾ ಚನ್ನಬಸವ ॥೨೯॥

ಪೊಡವೀಶನಾ ಲಿಂಗಮಂ ಕಂಡು ಖಳರೆದೆಯ
ಸುಡುವನಲ ಹೊಳೆವ ತೇಜದಿಂ ನೋಡುತಿಕ್ಷುವಂ
ಕಡಿದಡಸಿ ದಹಿಸಲತಿಮಧುರವಾದಂತೀ ಮಹಾಲಿಂಗನಿಷ್ಠೈಕ್ಯನ।
[1]ನೊ[1]ಡನೊರೆಯಲತಿಭಕ್ತಿಮಿಗಿಲಾಗುತಿದೆ ನಮ್ಮ
ಬಡಬುದ್ಧಿಮಾನದೊಳಗಜಡೋಗ್ರಭಕ್ತಿಕರಿ
ಯಡಗುವುದೆ ಎನುತರಸು ಬಸವದಂಡಾಧಿಪಂಗೆಱಗುತ್ತ ಕಳುಪಲೊಡನೆ ॥೩೦॥

ಅಂಬಕತ್ರಯನಪರಮೂರ್ತ್ಯನಘಮಾಯಾಪಿ
ಡಂಬಕ ಮಹಾಮಹಿಮ ಬಸವದಂಡೇಶನಾ
ಅಂಬುಜಾನನೆಯ ಸದ್ಭಕ್ತಿವಿಶ್ವಾಸಕ್ಕೆ ಮೆಚ್ಚಿ ಕಾರುಣ್ಯದಿಂದ।
ನಿಂಬೆಕ್ಕನೆಂದು ಪೆಸರಿಟ್ಟು ಕಲ್ಯಾಣದೊಳ
ಗಂಬಿಕಾವರನನರ್ಚಿಪ ಭಕ್ತಸಂತತಿಯ
ಬೆಂಬಳಿಗೆ ಭಿನ್ನವಿಲ್ಲದೆ ಬೆರೆದನೆಂದು ನಂದೀಶ ಪ್ರಮಥರ್ಗೊರೆದನು ॥೩೧॥

---

[1] ಗೊ (ಗ).

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೊಳಿದು ನಿಂಬೆವಣ್ಣ ಲಿಂಗವ ಮಾಡಿ ಮೆಱೆದ ಸಂಧಿ ॥೩೨॥

———

ನಲವತ್ತೇಳನೆಯ ಸಂಧಿ

ಸೂಚನೆ—

ಓಲಗವನೊಳಗಣರಮನೆಯ ನೋಳ್ಪರ್ತಿಯಿಂ
ಲೀಲೆ ತಲೆಗೇಱೊಬ್ಬ ಮಿಂಡಜಂಗಮವರಸಿ
ನಾಲಯಂಪೊಕ್ಕೊರ್ವ ಸತಿಯೊಡನೆ ಕಡಿವಡೆಯ ಪಡೆದಪ್ರಾಣವ ಬಸವನು॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಅಚ್ಚರಿಯಪ್ರಮಥರ್ಕಳಾಲಿಸಾಶ್ಚರಿಯಕ್ಕೆ
ನಿಚ್ಚಣಿಕೆಯನ್ನಿಕ್ಕಿ ಬಸವೇಶ್ವರನ ಭಕ್ತಿ
ಯಚ್ಚರಿಕೆಯನ್ನೇಱಿಸಲ್ಬಂದ ಕೌತುಕದ ಕಣ್ದೆಱೆದ ಹರನಂತಿರೆ।
ನಿಚ್ಚಟಶಿವೈಕ್ಯಸ್ಥಳದ ಬಣ್ಣದೊಡನೊರೆವ
ಮಚ್ಚಕ್ಕೆ ಮಚ್ಚರಂ ಪುಸಗಿದಂತಿಹಪರಕಿ
ದಚ್ಚೆಂಬ ಪಾಳ್ಕೆಯಿಂದಿಹ ಮಿಂಡಮಲ್ಲಿನಾಥಯ್ಯನೆನಲವರೊಳಭವ ॥೨॥

ಲೀಲಾಪ್ರಕೃತಿಯಿಂ ಪ್ರವೇಶಿಸಿ ಸದಾಚಾರ
ದೇಳಿಗೆಯ ನೋಳ್ಪರ್ತಿ[1]ಯಿಂ[1]ತವರ್ಗರ್ತಿಮನ
ದಾಳಾಪದೆಱಕದೋಱಲ್ಕವರನೊಂದುದಿನ ಸೊಗಸು ಸೋಂಕಿನೊಳು ರಾಜ।
ಆಲಯಂ ಹೊಕ್ಕು ನೋಳ್ಪರ್ತಿಯಂ ಕೈಕೊಂಡು
ಹೇಳಿದರು ಬಸವನಾಜ್ಞೆಯ ರಾಜವಿಶ್ವಾಸ
ದಾಳುಗಳೊಳವರೊಳತಿಸಲುಗೆಯವನೊಬ್ಬನೊಡಗೊಂಡೊಯ್ದು ವಿಟರೂಪಗೆ॥೩॥

ತೋಱಿದನು ಒಡ್ಡೋಲಗವ ರಾಜಲಕ್ಷ್ಮಿಯವ
ತಾರವಿದು ಸ್ವಾಮಿತ್ವಮಾತ್ಯತ್ವಭಂಡಾರ
ಗಾರವಿದು ದುರ್ಗಜನಪದಬಲಂ ಮಿತ್ರಸಪ್ತಾಂಗಸಂಪದವಿಧಿಯಿದು।
ಆರೈವರಷ್ಟಾದಶಸ್ಥಾನ ತೊಂಭತ್ತು
ಆಱುಗಣ ಷಟ್ತ್ರಿಕವಿನೋದಷಟ್ತ್ರಿಕಪಾತ್ರ
ಬೇಱೆಬೇಱಿವು ರಾಜಯೋಗಾಂಗವೆಂದಯ್ಯಗಱುಪಲವರುತ್ಸವದೊಳು ॥೪॥

---

[1] ಯಂ (ಗ.ಛ).

ಅಲಿಸುತ ಲಾಲಿಸುತ ಭಾವಿಸುತ ಬಣ್ಣಿಸುತ
ಮೇಲೆಮೇಲರ್ತಿಯರ್ಥತೆಯಿಂದ ಚಿತ್ರತರ
ದಾಲಯಂಗಳ ನೋಡುತಾಡುತ್ತಭಂಡಾರಗಾರವಮಂ ಕಳೆದುವಂತ್ರ।
ಶಾಲೆಗೈತರಲಿಕಾ ಸಮಯದೊಳಗಿಂದೊರ್ವ
ಬಾಲಕಿಯು ಶುಕ ನೋಡಿ ಬರೆ ಬೆನ್ನಬಂದೀ ತ್ರಿ
ಶೂಲಿಯಪರಾವತಾರನ ಕಂಡು ಕಣ್ಬೇಟ ಕೊಂಡು ವಿಟಪೇಂದ್ರಗೆಱಗೆ ॥೫॥

ಸೋಲವಮಂ ಸಂಜ್ಞೆಗೊಟ್ಟನ್ಯರ್ಗೆ ವೈಸಿಕದ
ಜಾಲವಮಂ ಬೀಸಿ ಬಂದವರ್ಗಳೆತಿಪತಿಗಳೆ
ವ್ಮಾಳುದರೆನುತ್ತೊಳಯಿಕೊಯ್ದು ಗೋಪ್ಯಾಂತರ್ಗೃಹದೊಳತಿರತಿಯೊಳಿರಲ್ಕೆ।
ಲೀಲೆಯಿಂ ಮೂಲಶಕ್ತಿಯನು ಪರಶಿವನೆ ಈ
ಬಾಲಕಿಯ ಮಾಡಿರಿಸಿದಂತಾಯಿತೆನುತ ವಿಟ
ಭಾಳಾಕ್ಷ ಮನಸಿಜಮನೋರಥದ ಮೂರ್ತಿಯಾಲಿಂಗಲಿಂಗನದೊಳಿರಲು ॥೬॥

ವೃದ್ಧಶ್ರವನ್ನಹಲ್ಯೆಗೆ ಹೊಕ್ಕೊಲಾಯ್ತೆನುತ
ಬ್ರಧ್ನನೋಹೋ ನೋಡೆ ನರಕವೆನಿಪೊಲು ಪೋಗಿ
ಬಿದ್ದನಪರಾಬ್ಧಿಯನಿವರ್ಗೆ ಪಾತಕ ಪರ್ಬುವೊಲು ತಮಂ ಪಸರಿಸುತಿರೆ।
ಮಧ್ಯರಾತ್ರಿಯೊಳು ಬಿಜ್ಜಳಕ್ಷಿತಿಪ ಕಾವಿನಿಸ
ಮುದ್ರಕ್ಕೆ ಶಶಿ ಉದಿಸಿದಂತೆ ರಾಣೀವಾಸ
ದಧ್ಯಕ್ಷನಾಯಕಿಯ ಕೈವಿಡಿದು ಬಂದನಂತಃಪುರಾಡಂಬರದೊಳು ॥೭॥

ಹಾವುಗೆಯನಿಡಿ ಪಡಿಗವಮಂ ಪ್ರಯತ್ನಿಸು ಜಲವ
ತೀವಿರಿಸು ಹೊಂಗಳಸದಲಿ ಕನ್ನಡಿಯ ಬೆಳಗು
ದೀವಿಗೆಗಳಂ ಪ್ರಭಾವಿಸು ಹಾಸ ಹಚ್ಚವಡಿಸಮಳ ಸೌರಭ್ಯವೆಸೆವ।
ಹುವ್ವನೊಯ್ಯಾರಿಸನುಲೇಪನಕೆ ಕತ್ತುರಿಯ
ಭಾವಿಸಾರತಿಯನನುಮಾಡರಸು ಬಹ ಹೊತ್ತು
ಭಾವೆ ತಾಂಬೂಲದಾಯೆಂಬರಸಿಯರ ಹರುಷರಭಸ ಮನೆಮನೆಗೆಸೆದಿರೆ ॥೮॥

ಅಲ್ಲಲ್ಲಿಗಲ್ಲಿಯ ವಿಲಾಸಮನ್ನಾರೈವು
ತೆಲ್ಲರಸಿಯರ ಗೃಹಗೃಹಾಂತರದಿ ನಿಲುತ ನಿಲು
ತಲ್ಲಿಗೈತರಲೆಥಾಕಥನಶೂನ್ಯವನ್ನೈದಿರಲ್ಕಂಡು ರಾಜೇಂದ್ರನು।
ಇಲ್ಲಿದೇನೀಗ್ರೃಹಾಭ್ಯಂತರದಿ ಮನ್ಮಥನ
ಬಿಲ್ಲು ಮುಱಿಯಿತ್ತೊ ಹರನುರಿಗಣ್ಣು ಕನಸುಮನ
ದಲ್ಲೆಱಗಿತೋ ಎನುತ ಬಂದು ಬಾಗಿಲೊಳು ನಿಂದಾಲಿಸುತಿರಲ್ಕೆ ಒಳಗೆ ॥೯॥

ಸಂಯೋಗಲೀಲಾಲ್ಲಲಿತಶಬ್ದ ಸ್ತ್ರೀಪುರುಷ
ರೊಯ್ಯನುಸುರ್ವನುಮಾನಸರಳಗೇಳುತ್ತ ರಸು
ಬೀಯುಗದ ಮುದ್ರೆಗಳಚೊಳಪೊಗುತ ಕಂಡಿದಾರೆಲೊ ಸ್ವಾಮಿದ್ರೋಹವೆನುತ।
ಕೈಯಲಗನುಗಿದು ಝಳಪಿಸಲು ನಿಟ್ಟಿಸುತೇಳು
ವಯ್ಯ ನೆದೆಬದಿ ಬೆನ್ನು ಬಸುಱ ಬಾದಣಗೊಱವು
ತಯ್ಯೆಲೆಲೆಪಾತಕೆನುತಾ ವಿಳಾಸಿನಿಯನರಸರವರಿಸಲಿಱಿದು ಕೆಡಹಿ ‖೧೦‖

ಒದೆದೊದೆದು ಮಗುಳ್ಚಿಮಗುಳ್ಚಿಱಿದು ಹರಣಂಗೊಂಡು
ವಿಧಿಗೆರಡು ಬಲಿಗೊಡುವೊಲಿತ್ತಂಡವಮಂ ಹೊಱಯಿ
ಕದುಭುತವನೆಳೆವೊಲೆಳೆಯಲುತ್ತುಱುಬುವಿಡಿಯಲ್ಕೆ ಜಡೆ ಕೈಯಸಾರ್ದಡರಸ।
ಇದು ಮಂತ್ರಿಯನುಮಂತ್ರವಾಗದಿರದಭಿಮಾನ
ದೊದವಿಂಗೆ ಮೂಲವಾದನ ವಂಶವಂ ವಧಿಸು
ವದೆನುತ್ತಲಂತಃಪುರೋತ್ತರದ್ವಾರಕ್ಕೈಯ್ತಂದು ಕರೆಸಿದನಾಪ್ತರ ‖೧೧‖

ಕರಿಯಕೇಶವ ಖಚಪ ಕಾಳಿಮಪ್ರಭು ಮಂಚಿ
ಮರಸ ರಾಘವ ಚೋಳಿಮಾಂಕವೆಗ್ಗಡೆ ಕುಂದ
ಭರತರಾದ್ಯಾಪ್ತಮಂತ್ರಿಗಳ ಕರೆಸಲ್ಬಂದಡವರ್ಗೆ ಥಾವೃತ್ತಾಂತವ।
ನರಸನುಸಿರ್ದಿವೆಪಾತಕರ್ಕಳಿಂದವಸೆಳೆದು
ತರಿಸಿ ತೋಱಲ್ಕೆ ವಿಸ್ಮಯಗೊಂಡನಾಚಾರ
ಸುರೆಗುಡಿದಮಾಳ್ಕೆಯಿಂ ನಿಂದಿಸುತ ದುರ್ಮಂತ್ರಮುಸುಕುದೆಗೆದಂತವದಿರು ‖೧೨‖

ಉರಿದೇಳ್ವ ಕಿಚ್ಚಿಂಗೆ ಘಾಳಿಗೂಡಿದ ತೆಱದೊ
ಳರಿರಾಯರಂ ವಿಭಾಡಿಸಿ ರಾಯರಾಣಿಯರ
ತರಸಿರಿಸಿಕೊಂಬ ರಾಯನ ರಾಣಿವಾಸಮಂ ಕೊಂಬ ಬಲ್ಮೆವನೊಳುಂತೆ।
ಗುರಿಯನೆಚ್ಚವನಿರಲ್ಕಲಗಿಟ್ಟದೀ ಪಾಪಿ
ಗೊರವರೇಗುವರೆನುತ್ತುಬ್ಬುಗವಳವನಿಕ್ಕಿ
ಹರಿಯಬಿಡುವನ್ಯಾಯಿಯನ್ವಯವ ಕಡಿದಡಸಬೇಡವೇ ವಿಧಿಯೊಡಲಲಿ ‖೧೩‖

ಚಾಳೋಕ್ಯ ಸೈಂಧವ ನಿಕುಂಭ ಲಬ್ಧಕ ಧಾನ್ಯ
ಪಾಳ ಪ್ರತಿಹಾರ ಸೆಲ್ಲಾರ ಸೇಕ ಕರಾಟ
ಮಾಳವ ಕ[1]ಳಾ[1]ಚೂರ ಮೊರಕ [2]ನಾ[2] ಕುಂತಾನ ರಾಷ್ಟ್ರಕೂಟಂ [3]ಬಂ[3]ದಿಳ।

---

[1] ರಾ (ಕ.ಖ.ಗ.ಘ.ಚ). [2] ನ (ಸ.ಪ್ರ). [3] ಬಾ (ಗ.ಘ.ಛ).

ಲಾಳಭಂದ[ಂ] ಹರಿತ ಹೂಣ ಗೋಹಿಲ ರಾಜ
ಪಾಳರೆನಿಪರಸುಗುಲಗಿರಿವಜ್ರವೆಂಬ ಕೀ
ರ್ತ್ಯಾಳಾಪಷಳ್ಗಲಗಿಗಪಕೀರ್ತಿದರಲು ನೆಗಳ್ದಾತನಾತನ ಕರೆಸೆನೆ ॥೧೪॥

ಎಂದವಭೂಪಗತಿಖತಿಯನಿಕ್ಕಲ್ಕಾದಿ
ನಂದೀಶ ಬಸವಣ್ಣದಂಡನಾಯಕನು ಮನು
ಜೇಂದ್ರಕರೆಸಲ್ಬಂದು ನಿಂದಡೆ ನಿರೀಕ್ಷಿಸುತ ನಿಯತವಲ್ಲದ ನುಡಿಗಳ ।
ಸಂಧಿಸುತ ಸಂವರಿಸಿಕೊಂಡ ಚಿತ್ತವ ಮನಂ
ಬಂಧಿಸಿ ವಿಚಾರವರಸಿಂಗೆ ಲಕ್ಷಣಹೀನ
ವೆಂದುಪೇಳುವ ನೀತಿವಾತಿನೋಜೆಯ ಮಱೆಯೊಳೆಂದನಾ ಮಂತ್ರಿಯೊಡನೆ॥೧೫॥

ಒಂದನನ್ವಿತ ನೆಗಳ್ದುದರಮನೆಯೊಳೆನಲದೇ
ನೆಂದು ಕೇಳಲ್ಕೇನಪೇಳ್ವೆನದು ನಿಮ್ಮ ಹೊಲ
ಬಿಂದಾದ ಹೊಟ್ಟೆಯೊಳಗಣ ಶೂಲೆ ಕಳೆವಂಗವಾವುದೊಳಹೊಱಗೆನ್ನದೆ ।
ಸಂದಿಲ್ಲದಿಹ ಲೇಸಿನೊಳಗೆ ಹುಳುಕಂ ಹುಟ್ಟಿ
ಸೊಂದೊಂದುಪಪ್ರವಂ ಮಾಳ್ಪರ್ಥಿ ನಿಮಗೆಯಾ
ನಂದವೆಮಗಪಕೀರ್ತಿವಧುವಿತ್ತು ಕೀರ್ತಿವಧುಗೊಂಬುಪಾಯವ ನೆನೆವರೆ ॥೧೬॥

ಮಾನಾಭಿಮಾನವಂ ಕೊಂಬ ಮಂತ್ರಿಗಳಾವ
ಕ್ಷೋಣೀಶರಲ್ಲುಂಟು ಎಮಗಲ್ಲದೆನುತೆಂದು
ನೀನಱಿಯದಂತೆಮ್ಮ ಕೇಳ್ವರೇ ಕಿಚ್ಚಿಟ್ಟು ತಾನೆ ಹುಯ್ಯಲುಗೊಡುವರೆ ।
ಕೇಣದೊಳ್ಕಿಣಕದಿರ್ದರುಶನವಾಱೆಯ ಭಂಡ
ಸೂನೆಗಾರರ ಜಾರ ಜೂರೆಗರ ಕಳ್ಳರನು
ನೀ ನೆರಹಿಕೊಂಡು ಕೊಂಡಾಡಿ ಹೊಗಳಿದ ಸ್ವಾಮಿಹಿತಫಲೋನ್ನತವ ನೋಡ ॥೧೭॥

ಎಂದು ನಿಂದಾಕ್ಷೇಪದಿಂದ ಬಿದ್ದಿಹ ತವಸಿ
ಯಂದವಂ ತೋಱೆ ಶಿವ ಶಿವ ಶಿವಾ ಎನುತೆಲೆ ನೃ
ಪೇಂದ್ರದೇನದ್ಭುತವಿದಾಕರ್ೊಂದರೇಕೆನಲಿಕೆಮ್ಮಯ ವಿಳಾಸಿನಿವನ ।
ಒಂದುಗೂಡಿರೆ ತಱಿದೆ ನಾನೆನಲ್ಕೋಹೋಹೊ
ಬಂದುದು ಮಹಾದ್ರೋಹವೆನಲೇಕೆನಲ್ಕ್ಯೋಗಿ
ನಿಂದೆ ಕುಲಕ್ಷಯ ಮಾಳ್ಪುದಂತಲ್ಲದಪಹರಿಸಿದಪರಾಧಕಾವುದು ಕಡೆ ॥೧೮॥

ಹತ್ತುರಥದವನು ಗುರುಭಕ್ತನುಮನೆಚ್ಚುತಲೆ
ಹತ್ತುಸಾವಿರಹೋಳದಾಗಳಿದ ಪಾಂಡು ಮೃಗ
ವೆತ್ತುಋಷಿಮಿಥುನಮನ್ನೆಚ್ಚು ಶಿರ ಸಾಸಿರಂ ಭಾಗವಾಗಳಿದುಹೋದ ।

ಕ್ಷತ್ರಿಯಾನ್ವಯ ಮಡಿಯಿತಂದು ಜಮದಾಗ್ನನ ನಿ
ಮಿತ್ತ ಮೂಢತೆ ಕೇಡ ತಾರದಿಹುದೇ ನೀ ಸ
ಮರ್ಥೆಶಿವಯೋಗಿಯುಳಿದಳಿವತಾರದೆ ಬಿಡದೆನಲ್ಕು ಮಂತ್ರಿಗಳೆಂದರು ॥೧೯॥

ಆವುದಕ್ಕಾವ ನುಡಿ ಮಂತ್ರತಪ್ಪಿದ ಮಾತಿ
ದೇವುದಪರಾಧಗಳೆಯಲ್ಕಾರದೇಕೆಯಾ
ದೇವಋಷಿಗಳ ಮಾತು ಪಾತಕಗೆ ಪವಣಿಸುವೆ ಇವನೊಲವರಾವರಸಿನ ।
ಭಾವೆಗಳುಪಿದರು ರಾಯನ ರಾಣಿಯುಂ ಕೂಡೆ
ಗಾವಿಲನಿರಲ್ಕೊಂದಡದಕೇನಕೇನಕಿಯ
[1]ಹೋ[1] ಹ ಹೇಳುತ್ತಿಹಿರಿ ಯನ್ಯವಧುವ್ಯಸನಿಯುಂ ವಧಿಸಲೇಂ ದೋಷವೆನಲು
॥೨೦॥

ಹೇಳುವಿರಿ ನೀವೆ ಶ್ರೀರಾಮನರಸಿಗೆ ಲಂಕೆ
ಯಾಳುದನು ಸೋತು ಕಪಟಾಂಗದಿಂ ಬಂದು ಆ
ಬಾಲಕಿಯನೊಯ್ಯೆ ವಿಕಳತೆಯಿಂದೆ ಸಮರಮುಖದೊಳು ಕೊಂದ ಬ್ರಹ್ಮೇತಿಗೆ ।
ಪ್ರಾಲೆಯಾದ್ರಿಂದಿತ್ತ ಮುಕ್ಕೋಟಿವರೆ ದೇವ
ತಾಲಯಂಗಳ ರಚಿಸಿ ಲಿಂಗಪ್ರತಿಷ್ಠೆಗೈ
ವಾಲಂಬವಾಯ್ತು ಮಹೇಶವಧೆ ರಾಮಗಿದನೆಂತೀ ನೃಪೇಂದ್ರ ಕಳಿವ ॥೨೧॥

ಭಾಳಲೋಚನಮೂರ್ತಿ ಬ್ರಹ್ಮಚರ್ಯದ ಮೇರು
ಜಾಳಾಂಧ್ರದೇಶದವರೀ ಸತಿಯು ತವರುಮನೆ
ಯಾಳುದರ್ನಿರ್ವಂಚಕ ಸ್ತ್ರೀಪುರುಷರೆಂಬ ಹಾಳಿಹರುಬಗಳಱಿಯದ ।
ಲೀಲಾಪ್ರಮುಗ್ಧರೀ ಕಾಂತೆಗಾಶೀರ್ವಾದ
ಪಾಲಕನಿಮಿತ್ತ ಬಂದಿರುಳಾದಡಿರಲು ಕಾ
ಮಾಳುಪವಿಕ್ಕಿ ವಧಿಸಿದ ಪಾತಕಕ್ಕೆ ಪ್ರಾಯಶ್ಚಿತ್ತಮುಸುರ್ವುದೆನುತ ॥೨೨

ದಂಡನಾಯಕ ಭ[2]ಕ್ತ[2]ಖಂಡಿತೈಶ್ವರ್ಯಮಂ
ಕೊಂಡಾಡುತಿರಲಿಕಾಮಾತ್ಯರ್ಕಳೆಲ್ಲ ಮಾ
ರ್ಕೊಂಡರೆ [3]ಹಗೆಹಗೆ[3]ತ್ತ ಕದ್ದ ಕಳ್ಳಂ ಬಾಯಸುಟ್ಟನೆಂಬಪಹಾಸ್ಯದ ।
ಭಂಡತನವ್ಯೆಸೆ ಮಾಡಿದ ತಪ್ಪ ತಡವಿಡುತ
ಗಂಡಿಗತನ ಲೇಸು ಕ್ಷತ್ರಿಯರು ಧರ್ಮಕು
ದ್ದಂಡಿಸರೆನಿಪ್ಪುದಂ ಬಲ್ಲೆಯಾಗಡಕೆ ತಕ್ಕೌಚಿತ್ಯಭೀತಿಗೊಟ್ಟು ॥೨೩॥

---

[1] ಹೇ (ಕ.ಚ). [2] ಕ್ತ್ಯ (ಖ.ಫ.ಗ). [3] ಹಗೆಗೆ (ಖ.ಗ.ಕ.ಚ), ಹಗೆಹ (ಫ).

ನ್ಯಾಯಮುವನನ್ಯಾಯಮುಖಕಿಕ್ಕಿ ಬಲ್ಲೆಯ
ನ್ಯಾಯಮಂ ನ್ಯಾಯಮಂ ಮಾಡುವಿರಿ ಬೇರೆ ಕಲಿ
ನಾಯಕತ್ವಂ ಸತ್ವಮುಳ್ಳಾತ ಮೇಲೆ ಜಂಗಮಲಿಂಗ ನಿನ್ನಪ್ರಾಣ ।
ವಾಯುಗೂಡಿಹುದಂಬೆ ಬಿದ್ದಿಹುದು ಜಂಗಮುದ
ಕಾಯವಲ್ಲಾ ನಿನ್ನ ಭಕ್ತಿಯುಕ್ತದೊಳೆತ್ತಿ
ರಾಯಗಪರಾಧ[1]ವೊಱ[1]ಸದೆ ತೊಡೆದೊಡ[2]ದಕದೇ[2] ಪ್ರಾ[3]ಶ್ಚಿ[3]ತ್ತವೆಂದಣಕಿಸೆ ॥೨೪॥

ಸತ್ತಹೆಣನಂ ಎತ್ತಬಹುದೆ ಭಕ್ತಿಯ ಘನತೆ
ಯತ್ಯುಪಮೆಯುಂ ಹೇಳಬಹುದಲ್ಲವೆಂಬ ಬಗೆ
ಚಿತ್ತದತ್ತಲು ಸುಳಿಯಿತೇ ಭಕ್ತಿಭಾಗ್ಯಾಂತರವನು ಶಿವನೀ ಮುಖದೊಳು ।
ಇತ್ತನೆನುತೆದ್ದೆರಡು ಕರಮುಗಿದು ಪದವಿಡಿವು
ತುತ್ತಮಾಂಗವನಾ ತಪಸ್ವಿಯು ಪದಾಂಬುಜಕೆ
ತೆತ್ತಿಸಲು ಬ್ರಹ್ಮನಾಳದಸೂತ್ರ ಪರುಷಮುಖದಿಂ ಪ್ರಾಣಪದವಿಡಿದುದು ॥೨೫॥

ಪದದಿಂದ ಊರ್ಧ್ವಮುಖವಾದ ಪ್ರಾಣಾನಿಲನು
ಉದಯಿಸಿದನಾಧಾರ ಸ್ವಾದಿಷ್ಠನಾಹತಮ
ನೊದೆವುತಾಗ್ನೇಯ ಮಣಿಪೂರಕ ವಿಶುದ್ಧಿಗಳ ವಳವೇಱ ಘ್ರಾಣಪುಟದಿಂ ।
ಸುಧೆಯ ಸೂಸುತ್ತ ಪೊಱಮಡಲಯ್ಯನೇಳುತ್ತ
ಮದನವೈರಿಯನಾವುಸ್ಮರಣೆಗೈವುತ್ತ ತ
ನ್ನುದರದ ರುಧಿರದೊಡೆದುಗೊಳುತ ಮುಡಿದೊಡಚುತ್ತ ಪಿಂಗಲ ಜಟಿಲನೊಲೇಳೆ ॥೨೬॥

ಅಂಗಜಾಂತಕನೆದ್ದನದೆ ಮದನಮತ್ತಮಾ
ತಂಗಪಂಚಾಸ್ಯನೆದ್ದಂ ಎದ್ದನದೆ ಮನ್ಮ
ಥಾಂಗನಗಪವಿಯೆದ್ದನದೆ ಶಫರಕೇತನೋತ್ಪಾಟನಿರ್ಘಾತನೆದ್ದ ।
ಪಿಂಗಳಜಟಾಜೂಟನೆದ್ದನದೆ ನೋಡಿ ನಿ
ಸ್ಸಂಗಿ ಸಂಗಮನಾಥನೆದ್ದನಿ[4]ದೆ ಯಿದೆಯೆಂ[4]ದು
ಜಂಗಮುಜನಾರ್ದನಂ ಬಸವಕ್ಕೈಯೆತ್ತಿಯ್ಯನತ್ತ ನಲಿನಲಿದು ತೋಱೆ ॥೨೭॥

ಬೆನ್ನ[5]ಹುಡಿಯಂಕೊಡಹು[5]ತಯ್ಯನಂಗವ ತನ್ನ
ಸನ್ನಿಹಿತಕರಪರುಷನಂಗೆಯ್ಯೆ ಘಾಯಗಳ
ಚಿಹ್ನತೀರಿದವಾಗಲಾ ಮಹೇಶ್ವರನ ಪದದಡಿವಣ್ಣ ತೆಗೆದುಕೊಂಡು ।

---

[1] ವರಿ (ಕ.ಚ). [2] ದಕಡೆ (ಕ.ಚ), ದುಕಷೆಯ (ಖ). [3] ಯಶ್ಚಿ (ಖ.ಗ.ಫ).
[4] ನಿದನಿದನೆಂ (ಗ.ಚ.ಫ.ಕ). [5] ಹ ಡಿಗೊಡಹುವಂ (ಜ).

ಎನ್ನಕ್ಕ ಏಳೆಂದು ತಳೆಯಲಾ ಲಲನೇಳೆ
ಬೆನ್ನಲೊಂದಾಕಸ್ಮಿಕದ ರೂಪೊಗೆಯೆ ಕಂಡು
ಕನ್ನೆ ನೀನಾರೆನಲಿಕೆಕ್ಷ್ಯಾಂಗನೆನಲೇಕೆ ಬಂದೆಯೆನಲಿಂತೆಂದಳು ॥೨೮॥

ಅರಸನಾಕ್ಷೇಪದಿಂದಿಱಿದಡೀಕೆಯ ಪ್ರಾಣ
ಬರುತಿರಲ್ಗಗನಗಾಮಿಕದೊಳೊಳಕೊಂಡೆನಾಂ
ನಿರುತವಿದ ಬಿಡೆ ನಿನ್ನ ಲಿಂಗನೈಷ್ಠಿಕದ ಬಲುಹಿಳುಹಿತರೆ ಬಳಿವಂದೆನು।
ಕರುಣಿ[1]ಪುದಿ[1]ವಳ ಹರಣವೆನ್ನಸೋಂಕೆನೆ ನಿನ್ನ
ವರನಾಮವೇನೆನಲು ಲೋಹಿತಾಂಬ[2]ರೆ[2]ಯೆನಲು
ಕರೆಸುವೆವು ನಿನ್ನಹೆಸರಿಂದ ನೀನಾಕೆಯೊಳು ಬೆರಸಿರೆಂದಾಜ್ಞಾಪಿಸಿ ॥೨೯॥

ಸಂಜೀವನಿಯುವ ತಳಿವಂತಿರಯ್ಯನ ಪಾದ
ಕಂಜರೇಣುವ ತಳಿಯಲೆಕ್ಷಕನ್ನೆಯ ಸೋಂಕಿ
ನಿಂ ಜಗನ್ಮೋಹನಾಸ್ತ್ರವ ಮದನ[3]ನಸ್ತ್ರ[3]ದಿಂ ರಂಗಿಸಿದೊಲವಳೇಳುತೆ ।
ಮುಂಜೆಱಗ ಸಂವರಿಸಿಕೊಳುತ ರುಧಿರದಿ ನೆನೆದ
ಕಂಜಮಂ ಕಬರಿಸುತ ಲೋಹಿತಾಂಬರಮುಸುಕ
ರಂಜಿಸುತ ನಿಂದಳು ಧನಂಜಯಪುರಾಧಿದೇವತೆ ಹೊಲಬುದಪ್ಪಿದಂತೆ ॥೩೦॥

ಹೊಲಬುಹೋಗದೆ ನೆಲೆಯ ತಪ್ಪಿರ್ದ ಮತ್ಸ್ಯಸಂ
ಚಲದಂತೆ ಸಂಚಲಾಕ್ಷೀಕ್ಷಿಸಲ್ಕಾ ರಾಜ
ಕುಲತಿಲಕನೆದೆಯು ವಿದ್ಯುತ್ಪ್ರಭಾಶರವೆರಡು ಸಂಗಡಿಸಿ ನಟ್ಟೊಲಾಗೆ ।
ನಳಿನಾಕ್ಷಿಯಂ ತಾಪಸನ ಪ್ರಾಣಮಂ ಪಡೆದು
ದಿಳೆಗಚ್ಚರಿಯವಹ ಬಹಳಪವಾಡದಿ ಕೀಲ
ನಳಿದನೆಮ್ಮಯ್ಯನೆಂದರಸು ಬಸವೇಶಂಗೆ ಕೈಮುಗಿವುತೆದ್ದು ಬರಲು ॥೩೧॥

ಲಜ್ಜಾತಿರೇಕವೊಳೆತಾ ವನಿತೆ ಬಸವನ ಪ
ದಾಬ್ಜಕಾತಾಪಸಂಗೆಱಗಿ ನಿಜಭವನಕೆ ವಿ
ಸರ್ಜನವಡೆದು ಹೋಗುತಿಹ ರಾಣಿಯಂ ಮಂತ್ರಿಮದನಾರಿ ಮದಮುಖರ್ಗೆ ।
ದುರ್ಜನರ್ಗಜ್ಞರ್ಗೆ ಮಧ್ಯರ್ಗೆ ಮಾತ್ಯರ್ಗೆ
ಬಿಜ್ಜಳಕ್ಷಿತಿಪನೊಳಗಾದವರ್ನೋಡದೆಯೆ
ಸಜ್ಜನಮನೋರಥದ ರತಿರಂಗ ಲೋಹಿತಾಂಬ[4]ರೆ[4]ಯೆಂದು ತೋಱುತೆಂದ ॥೩೨॥

---

[1] ಮಡಿ (ಗ.ಪು.ಖ). [2] ಕಿ (ಕ.ಪು). [3] ರಕ್ಷ (ಪು.ಕ.ಖ), ರತ್ನ (ಧ).
[4] ಕಿ (ಪು).

ಅರಸ ನೀನೀಕೆಯಸುಗೊಂಬಾಗ ಯಕ್ಷಚೇ
ಚರಿಯೊಬ್ಬಳಾಶ್ರೈಸಿದಳು ಮೇಲೆ ಸ್ವರ್ಗಪಥ
ಚರಿತೆಯಾದಳು ಬಾಳುಸೋಂಕರಸಿಗನರ್ಹಂ ದೇವಸ್ತ್ರೀಯಾದಳಾಗಿ ।
ನೆರೆಯದುಳಿದಾದ ಭೋಗಂಗೊಟ್ಟು ಲೋಹಿತಾಂ
ಬರಿದೇವಿಯೆಂದರಸಿಯರ್ಗಾದಿಶಕ್ತಿಯಾ
ಗಿರಿಸಲ್ ಶುಭೋದಯಮುದೆಂದನಯ್ಯನ ಕೂಡಿದವಳರಸ ಬೆರಸದಂತೆ ॥೩೩॥

ಕ್ಷಿತಿಪನದ ಕೈಕೊಳುತಮೃತಕರನ ದರುಶನಕೆ
ಶತಪತ್ರಗಳು ಮುಗಿವೊಲುಭಯಕರಕಮಲವಂ
ದಿತಗೆಯ್ವುತಂ ತಮತವೋಘ್ನದುರ್ಧರದುರಿತ ಸಂಗ್ರಾಮ ಸಮರಧೀರ ।
ಉತಕೋಚ ದುಷ್ಕೃತವ ದೂರಗೈದವರಿಗಾಂ
ಸತುಕರಿಪುದೇನುಂಟದಂತಿರಲಿ ಎಲೆಮಂತ್ರಿ
ಪತಿಯೆ ಈಯತಿಯುಂಗಶಸ್ತ್ರದೊಳೆಯಲ್ಕೇನುಪಥವದಂ ಪತಿಕರಿಸೆನೆ ॥೩೪॥

ತಾಪಸನ ರುಧಿರವೀಂಟಿದ ಶಸ್ತ್ರದೋಷಕ್ಕೆ
ತಾಪಸೇಶ್ವರರು ಮೂವತ್ತಾಱುಸಾಸಿರವ
ದೀಪುರದೊಳುಂಟವರ್ಗೆ ಕಂಥೆಕಾಷಾಂಬರಗಳಿತ್ತು ರತ್ನಾಂಬರವನು ।
ಭೂಪ ತೆಗಸೆತಿಯಂಗದೊಳೆದು ಶಸ್ತ್ರಂದೊಳೆದೊ
ಡಾ ಪಾಪಪಂಜರಂದೆಗೆವುದೆನೆ ಕೈಕೊಳು
ತ್ತಾ ಪವಿತ್ರೀಕೃತರ ನೆರೆಸಿ ಸಿಂಹಾಸನಂಗೊಟ್ಟು ಕರೆಸೆನ್ನನೆನುತ ॥೩೫॥

ಧಾತ್ರೀಶ್ವರನು ಶರಣುಗೊಟ್ಟು ಕಳುಪಲ್ಕೆ ವರ
ಖ್ಯಾತಿಯಂ ಜ್ಯೋತಿತಾಪಸನ ತದ್ರೂಪಾದ
ಖಾತಿಯಿಂದರುಣಪ್ರಭಾಪಟಲಪಂಜರವು ರಂಜಿಸಿತು ಪೂರ್ವಾಶೆಯ ।
ಶೀತಕರನೇತ್ರವೊಂದಾತಪಾಕ್ಷೊಂದಿವರೊ
ಳೀತ ಕಂಡಂತಾತ ಕಾಣಬೇಕೀದಂಡ
ನಾಥನೋನ್ನತಮಹಾತ್ಮೆಯನೆಂದಭವ ಕಂದೆಗೆದವೊಲುದಿಸಿದ ದಿನಪನು ॥೩೬॥

ಆದಿಶಿವತತ್ವವೈದಱೊಳು ತತ್ಪುರುಷ ತ
ತ್ವೋದಯಂಗೈದುದೆಂಬೊಲು ಲೋಹಿತಾಂಗದ ತ
ಪೋಧನಗೆ ಕೈಗೊಟ್ಟು ಕೈವಲ್ಯನಾಥ ನಂದೀಶ ಬಪ್ಪೊಲು ಬಸವನು ।
ಸಾದರದಿ ಬರುತಿರಲ್ಕಂಡವರ್ಕೇಳಿದ
ಚೋದ್ಯಗೊಳುತಾನಂದಿ[1]ಸಲ್ಭಕ್ತಿಯೋಳ್ದದಾ[1]
ವಾದ್ಯ ತ್ರಿಪುಂಡ್ರ ಗುಡಿ ತೋರಣ ಮಹೋತ್ಸಾಹದೊಸಗೆಗಳಿದಿರ್ಚೆ ಕೂಡೆ ॥೩೭॥

---

[1] ಸಲುಭಕ್ತಜನಕೇಳ್ವ (ಜ).

ಭಕ್ತಿಸೌಭಾಗ್ಯಮೂರುತಿಯ ಮಂಗಳದಾದಿ
ಶಕ್ತಿದೇವತೆ ಮುತ್ತಿದಂತೆಯಾ ಪುರದ ಶಿವ
ಭಕ್ತರೆಲ್ಲರ್ಮಹೋತ್ಸಾಹದೇಳ್ಗೆಯ ಸಿರಿಯ ಲೀಲಾಪ್ರಲೋಲರಾಗಿ।
ಯುಕ್ತಿ[1]ಗ[1]ಕ್ತಿಲ್ಲೇನಪೊಗಳ್ವೆವೀ ಬಹಳಭಾ
ವೋಕ್ತನಪಥವ ಸುಪಥವಂ ಮಾಡಿದಾಚಾರ
ಮುಕ್ತಕದ ಮೂರ್ತಿಜಯತೆಂದಸಂಖ್ಯಾತದಾನಂದದ ಸುಪರ್ವದೊಳಗೆ ॥೩೮॥

ಬಂದ ನಿಜವಾಸಕ್ಕೆ ಬಸವಗಣನಾಥನಾ
ನಂದದ ಪದಾರ್ಥಗಳ ಪರಮತುಷ್ಟಿಯು ಭಕ್ತ
ವೃಂದಕ್ಕೆ ಮಾಡುತಾಯಯ್ಯನಂಗವ ಪೇಳುತದಱ ದೆಸೆಯಿಂದಲೊಂದು।
ಕುಂದುವೊಱಸಿದೆವರಸು ಸಿಂಹಾಸನಕ್ಕಿಂದು
ಬಂದು ಶರಣೆಂದಪನು ಲಿಂಗಜಂಗಮವ ಕರೆ
ಸೆಂದು ಪರುತವಿಸಿದನು ಬಸವನೆಂದಾನಂದಿನಾಥ ಪ್ರಮಥರ್ಗೊರೆದನು ॥೩೯॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಷಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಡಂಗುರದೋಳದು ಮಿಂಡಮಲ್ಲಿನಾಥಯ್ಯನಂ ಮೆಱೆದ ಸಂಧಿ ॥೪೦॥

---

[1] ಗು (ಫ).

ನಲವತ್ತೆಂಟನೆಯ ಸಂಧಿ

ಸೂಚನೆ—

ಶಿವಗಣಸಮೂಹಕ್ಕ[1]ಸಹ್ಯಭಾವಿ[1]ತ ಬಿಜ್ಜ
ಳವನಿಪಾಲನ ತಂದುಪಾಯದಿಂದೆಜಗಿಸೆಂ
ದವರ ಪಾದೋದಕವೆ ಪರುಷವೆಂದಚ್ಚರಿಯ ತೋಱಿದನವರ್ಗೆ ಬಸವ ॥

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾ ಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ ।
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥೧॥

ಸಾಕಾರಬ್ರಹ್ಮಸ್ವರೂಪ ಶಿವಲಿಂಗದೊಳ
ಗೇಕೀಕರಿಸಿದಮಲತತ್ವಸ್ವಮೂರ್ತಿಪ್ರ
ಭಾಕರಿರದಾಕಾರ ಪ್ರಮಥರವಧರಿಸಿ ನಿಮ್ಮುತ್ಸಾಹದಚ್ಚಿನೆಸೆವ ।
ಏಕಏವೋರುದ್ರನದ್ವಿತೀಯೆಂಬ ಶ್ರುತಿ
ವಾಕ್ಯಾರ್ಥ[2]ದಂತೆ ಏಕೋದೇವ ಭಕ್ತಗೆನಿ
ಪಾ[2] ಕ್ರಿಯಾಪ್ರಕೃತಿಪಲ್ಲಟವೆ ತಾ [3]ಬಸವವೆಸರೆಸೆದು ವಸುಧಾತಳದಲಿ[3] ॥೨॥

ಶ್ರೀಕಾರದಾಕಾರವಾಗಿ ಕಲ್ಯಾಣಭೂ
ನಾಕೇಶ್ವರನ ಪದಸ್ಥದ ಹಸ್ತ ತಾನಾಗಿ
ವಾಕು ಮನ ನಯನ ಕರ ಚರಣದ್ವೈಮುಖಪುರುಷ ತನ್ನರಮನೆಯೊಳು ।
ಪಾಕಶಾಸನ ಪ್ರಶಸ್ತದೊಳು ಮಯನಿರ್ಮಿತನಿ
ಜಾಕಾರ ಕೈವಲ್ಯನಾಮಜಂಗಮಲಿಂಗ
ವಾಕರುಷಣದ ಮಹಾಮಂಟಪಸ್ಥಳವ ಸ್ಥಳಗೊಳಿಸಿಪ್ಪನಂತದಱೊಳು ॥೩॥

ಭಾವಬ್ರಹ್ಮಸ್ವರೂಪಿತತತ್ವ ನಿಜಮಹಾ
ಕೇವಲಜ್ಞಾನ ಜ್ಯೋತಿರ್ಲಿಂಗ ಲಿಂಗದೇ
ಹಾವಯವ ನಿರ್ದೇಹದೇಹಿಕದಿ ಬಂದೆನ್ನ ದಾಸೋಹ ಕ್ರೀವರ್ಮವ ।

---

[1] ಸಂಖ್ಯಾತವೀ (ಕ.ಚ.ಖ). [2] ದರ್ಥ ಏಕೋ ಏವ ಭಕ್ತನೆನಿಸಾ (ಕ.ಖ.ಗ.ಘ.ಚ.ಛ.) [3] ಬಸವೇಶನಾದನು ಧರಾತಳದೊಳು (ಜ).

ತಾವವಗ್ರಹಿಸೆನಗೆ ಸೋಹಾಮೃತವ[1]ನೂಡಿ[1]
ದಾ ವಿಭು ಪ್ರಸನ್ನೋತ್ತರದಿ ಮೂರ್ತಿಗೊಳಲಱಿವ
ಭಾವಕಿಕ್ಕಿದ ಪ್ರತಿಷ್ಠಿತವೆನಲು ಶೂನ್ಯಸಿಂಹಾಸನಮನಲ್ಲಿ ನೆಗಳ್ದ ||೪||

ಆ ಮಂಟಪದ ಪಶ್ಚಿಮಾಂಗಭಿತ್ತಿಯ ಮಧ್ಯ
ಭೂಮಿಯೊಳು ತ್ರೈಪುರುಷಚತುರಾಶ್ರಯದಿ ಜ್ಞಾನ
ಹೋಮ ಶೋಷಣ ದಹನ ಪ್ಲಾವನ ಪರೀಕ್ಷೆಯಿಂ ಶೋಧಿಸಂತಾ ಸ್ಥಳದೊಳು ।
ನೇಮಿಸಿದ ಷಟ್ಕೋಣೆಯಂತ್ರಕೆ ಷಡಾಧಾರ
ತಾಮರಸಭೇದಗಳನವಕೆ ಐವತ್ತೆರಡು
ನಾಮಾಕ್ಷರಧಿದೇವತಾದಿಗಳ ಕಳೆವೆಳಗ ತೀವಿ ಮುಸುಕಿಹ ಚಕ್ರವು ||೫||

ಭಾವಶೂನ್ಯರ್ಗೆ ಭ್ರಮೆಯಾಗಿಹುದು ಮುಸುಕುದೆಗೆ
ದಾವ ನೋಡಲ್ಕವನ ಕಣ್ಗೆ ಭಯದೇವತೆಯು
ನಾವರಿಸಿದೊಲು ಭ್ರಾಂತಿವಿಭ್ರಾಂತಿಗಹಿವ್ಯಾಘ್ರಮಸೆದ ಹೊಸಹೊಗರಲಗನು ।
ನೇವರಿಸಿದಂತೆ ಶತಸಹಸ್ರವೊನೆ ಮುಖದೋರ್ವ
ದೇವೇಳ್ವೆನುರಿಯುಕ್ಕುವಟ್ಟುಗಳೆ ಪ್ರಳಯದವ
ದಾವ ಮುಗುಳ್ದೊಲು ಕದಳಿ ಕೈಗೈದೊಲಿಹುದಮಳತರ ಶೂನ್ಯ ಸಿಂಹಾಸನ ||೬||

ಯೋಗರೂಪಕವಕ್ಷರಬ್ರಹ್ಮಭಾವಸಂ
ಯೋಗಚಕ್ರದ ದಿವ್ಯಸಿದ್ಧಸಿಂಹಾಸನವಿ
ಹಾ ಗಣಸಮೂಹಮಂಟಪಕೆ ಭಾಗ್ಯಂ ಬಪ್ಪೊಲೈತಂದು ಬಸವಾರ್ಯನು ।
ಸಾಗರಕೆ ಸಂಜ್ಞೆಗೊಡುವಮೃತಕರನಂತೆ ಶ್ರೈ
ವಾಗಮಾಹ್ವಾನಮಂತ್ರದ ಮಹಿಮೆಯೊಲ್ಗಣೇ
ಶಾಗ್ರಗಣ್ಯರ್ಗೆಥಾಕಥನಸೂಚಿತ ಡಂಗುರಕೆ ನಿಯಾಮಿಸಲು ಚರರು ||೭||

ಪೊಡವೀಶ ತನ್ನ ಮಡದಿಯ ಕೂಡೆ ಎಮ್ಮೊಳೊ
ಬ್ಬೊಡೆಯರ್ಗೆ ಕೈತಪ್ಪ ಮಾಡಿದುದರಿಂ ನಿಮಗೆ
ಪೊಡಮಡಲ್ಬಂದಪನು ಬನ್ನಿ ಸಿಂಹಾಸನಕೆ ಶಿವಗಣಾಧೀಶರೆಂಬ ।
ನಿಡುಸರದ ನುಡಿ ನಿಗುರಿ ಡಂಗುರಂಬೊಯ್ಯಲ್ಕೆ
ತೊಡಗಿತ್ತು ಪನ್ನೆರಡು ಯೋಜನಾಂತರದ ಪುರ
ದೆಡೆಯೆಡೆಯ ಕೇರಿಕೇರಿಗಳಲ್ಲಿ ಪಡಿವಳರ ಪರಿವಾರ ಪರಿಚಾರರ ||೮||

---

[1] ಡು (ಗ.ಚ.ಛ.).

ಸಮಯಡಂಗುರಭಕ್ತಿರಸವಾಕ್ಯ ಕರ್ಣಪೂ
ರಮುದಾಗಲಲ್ಲಲ್ಲಿಗೆಲ್ಲ ಮಾಹೇಶ್ವರ
ರ್ತಮತಮಗೆ ಭೋರ್ಗರೆದು ಬರುತಿರ್ದುದಖಿಳಮುಖನದಿ ಜಲಧಿಗೈದುವಂತೆ।
ಅಮರರಂತರದಿಂದ ಕೈನೀಡಿ ಬಸವ ನೆಗ
ಳ್ದಮಲಚಾರಿತ್ರಮೃತಫಲದೊಸಗೆಗೈದುವಂ
ತಮದೋರ್ಪಿದವು ವ್ಯಾಸತೋಳ್ಗಳೆತ್ತಾ ಗಣಾಧಿಪರ ಮುಂಗುಡಿಗಳೊಳಗೆ ॥೯॥

ವಾದ್ಯಘೋಷದಿ ಕೆಲರ್ಶಂಖಾಸುನಾದದಿಂ
ದಾದ್ಯನಾದ್ಯರ್ವಚನವಾಗ್ವಿಲಾಸದಿ ಕೆಲ
ರ್ನಾದನರ್ತನದಿ ಕೆಲರಾಗಮೋಕ್ತಿದಿ ಕೆಲರ್ಲೀಲೆಯಿಂ ಪಾಲಿಸುತ್ತ।
ಸಾದರದಿ ಸಂಗಸುಖಮೇಳದಿ ಮಹಾಪ್ರಭೆಯ
ಭೇದದಿ ಗಣಸ್ತೋಮ ಸ್ತೋಮಗೊಂಡೀಶನ ಘ
ನೋದಯಂಗೈದಂತೆ ಲಿಂಗಜಂಗಮಕೀರ್ತಿಮೂರ್ತಿ ಮುಖದಿರುಗಿತಿತ್ತ ॥೧೦॥

ಭಕ್ತರಾ ಭಕ್ತರಿಂ ಮುಂದೆ ಮಾಹೇಶ್ವರು
ಭಕ್ತಮಾಹೇಶ್ವರರ್ಮುಂದೆ ಪ್ರಸಾದಿಗಳು
ಭಕ್ತ ಮಾಹೇಶ ಪ್ರಸಾದಿ ಚಯದಿಂ ಮುಂದೆ ಪ್ರಾಣಲಿಂಗಿಗಳು ಮುಂತಾ।
ಭಕ್ತ ಮಾಹೇಶ ಪ್ರಸಾದಿಗಳ್ಪ್ರಾಣಲಿಂ
ಗೋಕ್ತರಿಂ ಮುಂದೆ ಶರಣರ್ಕಳಂತಾ ಮಹಾ
ಭಕ್ತ ಮಾಹೇಶ ಪ್ರಸಾದಿ ಲಿಂಗಪ್ರಾಣಿ ಶರಣರಿಂ ಮುಂದೈಕ್ಯರು ॥೧೧॥

ತರತರಂಗೊಂಡು ಕೈಲಾಸಾದ್ರಿಯಿಂದಿಳಿದು
ಹರಗಣಂಗಳು ಮರ್ತ್ಯಕವತರಿಸಿದಂತೆ ನಿ
ಮ್ಮರುತರದದಿವ್ಯತೇಜೋಮೂರ್ತಿಸ್ಫೂರ್ತಿಯಮಹತ್ತತೆಯಮಹ[1]ತ್ವೆ[1]ಸರೊಳು।
ಬರತೊಡಗಿತಾ ಗಣಸಮೂಹ ಮಂಟಪಕೆ ಬಸ
ವರಸನಾನಂದದಧಿದೇವತೆಯ ಮುಖಕಮಲ
ಸರಸಿರುಹಸಖಕಿರಣಕರಣಗೊಂಡುದಯಿಸುವ ಮಾಳ್ಕೆಯ ಮಹೇಶಕುಲವು ॥೧೨॥

ಸುರರಂತೆ ಸುಮನಸರ್ವಾಚಸ್ಪತಿಯೊಲಮಳ
ಗುರುರೂಪರಾತ್ಮನೊಲು ಕ್ಷೇತ್ರಜ್ಞರಾದಿತ್ಯ
ಕಿರಣದಂತುಗ್ರರಗ್ನಿಯೊಲು ಶುಚಿಗಳು ಶುಕ್ಲಪಕ್ಷದೊಲು ಶುದ್ಧಾಂಗರು।
ಹರಿಯೊಲು ಸುದರ್ಶನಿಕರತ್ರಿಜಾತನೊಲಮೃತ
ಕರರನಿಲನೊಲು ಸದಾಗತಿ[2]ಕರ್[2] ಶುಭಾವಹದ
ಪರಿಯೊಲ್ಸುವಾಕ್ಯರಹಿಯುಂತನಂತರು ದ್ರುಹಿಣನಂದದಿ ಜಗತ್ಕರ್ತರು ॥೧೩॥

[1] ತ್ಯೆ (ಛ). [2] ಯೊಳು (ಕ.ಖ.ಗ.ಘ.ಚ.ಛ).

* ಭಾರತಿಯೊಲಖಿಳಭಾಷರ್ಗುಹನವೊಲು ಬ್ರಹ್ಮ
ಚಾರಿಗಳು ನಿತ್ಯವಸ್ತುವಿನೊಲು ಸನಾಥಿತರು
ಚಾರುಕೈವಲ್ಯದೊಲು ನಿರ್ವಾಣರುರ್ವಿಧರನೋಲೇಕಗೋತ್ರಜ್ಞರು ।
ಮಾರಾರಿಯೊಲು ಕಪರ್ದಕರು ವಟಮೂಲದಾ
ಕಾರದೊಲು ಜಟಿಲರು ತಪಸ್ವಿಗಳು ಮಾಘದೊಲು
ವಾರಿನಿಧಿಯೊಲು ಗಭೀರರರು ಕಲ್ಪವೃಕ್ಷದೊಲ್ದೇವತಾಸಂತಾನರು ॥೧೪॥

* ಸಿದ್ಧಾಂತದಂತೆ ಸಮಯಿಗಳು ದೇವಾಶ್ವದೊಲು
ಶುದ್ಧಸುಳುಹಿನೊಳು ಋಗ್ಯಜುಸಾಮದಂತೆಂತ್ರ
ತದ್ಧ್ಯಾತ್ಮಸಾರರರು ಪೌಲಸ್ತ್ಯನೊಲು ಶ್ರೀಕಂಠಸಖರು ಸುಕೃತದೊಲು ಪುಣ್ಯ।
ವರ್ಧನರು ಪಾವನದೊಲುತ್ತಮಾಂಗರು ಶಮನ
ಮುದ್ರೆಯೊಲು ಧರ್ಮವಿದ್ಯಾಧಿಕನೊಲತಿಭಾವ
ದುದಯಿತರು ನವರಸದ ಭೇದಂಗಳಂತೆ ಸದ್ವೀರಸಶಾಂತಮುಖರು ॥೧೫॥

ಮೇಘದಂತಿರೆ ಕಮಂಡಲಧರರು ಪರಬೊಮ್ಮ
ಯೋಗದೊಲ್ದಂಡಧರರೈಶ್ವರ್ಯದಂತೆ ಭ
ಸ್ಮಾಂಗಿಗಳು ನಿತ್ಯದಂತಕ್ಷಮಾಲಾಧರರು ದಿಗ್ಭಾಗದಳಿದಿಹಷ್ಟ।
ನಾಗದಂತಾಧಾರಿಕರು ಶ್ವೇತಪದ್ಮಪ್ರ
ಯೋಗದೊಲು ಪುಂಡರೀಕಾಜಿನಾಂಬರರು ಗು
ಹ್ಯಾಗಮದವೊಲ್ಕೌಪಕಂಥಾತಪೈಕ್ಯಕುಂಡಲರು ಬಲರಾಮನಂತೆ ॥೧೬॥

ಶತಮುಖನವೊಲು ವೃಷಾಂಕರು ಪಾಕಶಾಸನನೊ
ಲತಿಜಯಂತರು ಮದೇಭದೊಲು ದಾನಿಗಳಮಲ
ಧೃತಿಯೊಲ್ಚಪಲರತಿಶಯಾರ್ಥದೊಲು ವಿ[1]ಭವ[1]ರು ನಿಧಾನದೊಲು ವಿಧಿಪುರುಷರು।
ಪೃಥುಲತಾರಾದ್ರಿಯೊಲು ಲಿಂಗಾವಧಾರಿತರು
ಕೃತಕರ್ಮವಿಲ್ಲದ ಕೃತಾರ್ಥತೆಯ ಮಂತ್ರಾಕ್ಷ
ರತಿಶೋಭೆ ನಡೆದಂತೆ ಲಿಂಗಜಂಗಮಸ್ವರೂಪಿತ ಮಹತ್ತ್ವತಂದರು ॥೧೭॥

ಪಾವನಾಬ್ಧಿಯೊಳು ಪುಟ್ಟಿದ ಪವಿತ್ರದ ತೆರೆಗ
ಳಾವನಧಿಯೊಳ್ಪುಟ್ಟಿ [2]ಯಾ ವನಧಿ[2]ಯೊಗುವಂತೆ
ಭಾವಜ್ಞ ಬಸವನಾಹ್ವಾನಮಂತ್ರಾರಂಭಫಲ ಮನೆಯ ತುಂಬುವಂತೆ ।

---

[1] ಬುಧ (ಕ.ಚ). [2] ತಾವೆನದಿ (ಜ). * ಈ ಪದ್ಯಗಳು ‘ ಜ ’ ಪ್ರತಿಯಲ್ಲಿಲ್ಲ.

ದೇವಗಣಗಳ ಸಮೂಹಾಲಯಕೆ ಮಹತೆಯ ಪ್ರ
ಭಾವಕಾವಿಶ್ವತೋಮುಖ ಮೂರ್ತಿಗೊಂಡು ಬರೆ
ಸಾವಧಾನಿತಮಂತ್ರಿ ಸರ್ವಪ್ರಯತ್ನಸಿಂಹಾಸನಾಗಮಗೊಳಿಸಲು ॥೧೮॥

ಬೆಳಗು ಚಂದನ ಚೆಂದನದಿ ಕುಂದ ಕುಂದದಿಂ
ಪಳುಕು ಪಳುಕಿಂದ ಕಲಧೌತ ಕಲಧೌತದಿಂ
ಬೆಳಗು ಕೌಮುದಿ ಕೌಮುದಿಂ ಚಂದ್ರ ಚಂದ್ರನಿಂ ಬೆಳಗು ರವಿ ರವಿಯಿಂದಲು।
ಬೆಳಗುಪರತತ್ವ ಪರತತ್ವಪ್ರಭಾ ಪ್ರಭೆಗೆ
ಬೆಳಗು ಶಿವ ಶಿವನಿಂದ ಬಸವ ಬಸವನ ಭಾವ
ಬೆಳಗು ಬೆಳಗಿಂದ ಬೆಳೆದಾನಂದಫಲವೃಕ್ಷ ಕೈಗೈದೊಲಿರೆ ಶಿವಗಣ ॥೧೯॥

ನ್ಯಾಯಸ್ಥಳರು ವಿಶೇಷಸ್ಥಳರು ಶೈವಪ್ರ
ದಾಯಕಸ್ಥಲರ್ಯುಕ್ತಿಸ್ಥಲರು ಕಾಳಾಮುಖ
ಸ್ವಾಯತಸ್ಥರು ಪಾಶ್ವತಸ್ಥಲರು ಶಿವಧರ್ಮಸ್ಥಲಮಹಾವ್ರತಸ್ಥಲರು।
ಕಾಯಗೊಂಡಿಂತೆಂಟುಸ್ಥಲ ಬಸವನಷ್ಟತನು
[1]ವಾಯಿತಾ[1] ಗೋಮುಖದಿ ಮೂರ್ತಿ[2]ಸಿತು[2]ಸ್ಥಲಸಂಪ್ರ
ದಾಯಸಂಖ್ಯಾತಗಣತಿಂಥಿಣಿಯ ಮಹಿಮಾಮಹತ್ತೋಲಗದೊಳೆಸೆದಿರೆ ॥೨೦॥

ಆಗಣೇಶ್ವರರೊಳಾರೇನ ಬಯಸಿತ [3]ತರಿಸು[3]
ತಾ ಗಣಾರ್ಚನೆಯ ಮಾಡುತ್ತಿರಲು ಮಧ್ಯಾಹ್ನ
ವಾಗೆ ತತ್ಕಾಲಲಿಂಗಾರ್ಚನಾರತರತಿಯ ಗೇಹಕಾಂತರಸಿನೆಡೆಗೆ।
ಹೋಗೆಂದು ಚೆನ್ನಬಸವನ ಕಳುಪೆ ಕೈಕೊಂಡು
ಹೋಗಿ ಬಿಜ್ಜಳಮಹಾರಾಜ ಮಹದೇವಸಭೆ
ಯೋಗಮೂರುತಿಗೊಂಡುದಯ್ಯ ನಿಮಗಟುಪಲಟ್ಟಿದನೆಂದು ಪೇಳಲೊಡನೆ॥೨೧॥

ದಂಡನಾಯಕ ನಮಗೆ ಪೇಳ್ದ ಕಾಷಾಂಬರದ
ದಿಂಡುಗಳ ನಡೆಸೆನುತ ವಸ್ತ್ರಭಂಡಾರಕ್ಕೆ
ದಂಡಧರರಂ ಕಳುಹುತೇಳಲೊಡನೆದ್ದಖಿಳ[4]ಮಾತ್ಯರಾಜ[4]ಪ್ರಮುಖರ।
ದಂಡಿಗೆಗಳೀರಾಟು ಸಾವಿರದ ಮಧ್ಯದೊಳ
ಖಂಡಿತೈಶ್ವರ್ಯಲಕ್ಷ್ಮೀಲೋಲ ಲಕ್ಷ್ಮಿಪತಿ
ಖಂಡೇಂದುಧರನೋಲಗಕ್ಕೆ ಬಪ್ಪೊಲ್ಪಹಾಡಂಬರವನೇವೊಗಳ್ವೆನು ॥೨೨॥

[1] ವಾಯಸಂ (ಜ). [2] ಸಲು (ಜ). [3] ಸಲಿಸು (ಜ). [4] ರಾಪ್ತಮಂತ್ರಿ (ಜ).

ಪೊಡೆವ ಭೇರಿಗಳು ಗತಿಯಿಡುವ ರಣಭೇರಿಗಳು
ನುಡಿಯತೊಡಗಿದವೊಡನೆ ಕಹಳಾನಿನಾದಗಳು
ಗಡಣ ಗಡಣದೊಳುಣ್ಮೆ ರಾಯಗಿಡಿಬಿಡಿಯು ಚಂಪಕ ವೀರಡೌಡೆಶಬ್ದ।
ಗೊಡತೊಡಗಿದವು ಮಹಾಭೇರಿ ನಿಸ್ಸಾಳ ಸಂ
ಗಡಿಸಿ ಸನ್ನೆಯೊಳೊಗೆಯೆ ತೊಡಗಿದವು ಸಾರೆಂಬ
ದಡಿಯ ದಳವುಳಿಗಳಬ್ಬರ ಮಸಗಿತುರ್ವರೇಶ್ವರನುನ್ನತೆಯ ಕರೆವೊಲು ॥೨೩॥

ಪಟ್ಟಮಕುಟಗಳ ಖಚರರ್ಗಗನದಿಂದ ಬಂ
ದೊಟ್ಟೈಸಿ ಕೊಂಡೆಯ್ವರೆಂದಂಬರಕ್ಕೆ ಮಱೆ
ಗಟ್ಟಿದಂಬರದಂತೆ [1]ತಳ್ದಿರಿದ ಛತ್ರಗಳ ಮುತ್ತಿಗೆಯ ಬೆಳುಮುಗಿಲೊಳು[1]।
ಹುಟ್ಟಿರ್ದ ಮಿಂಚುಗಳೊ ಪರಮಲಕ್ಷ್ಮಿಯನು ಕೈ
ಗೊಟ್ಟು ಕರೆವಮಲಭಾಗ್ಯಾಂಗನೆಯ ಭುಜವ್ರಾತ
ದೊಟ್ಟಜಗಳೋಯೆನಲು ಕನಕದಂಡದ ಚಮರಗಳ ಚಡಾಳಿತವೆಸೆದುದು ॥೨೪॥

ಪರಮವೈಭವದ ವಾರಿಧಿಯು ಭರ ತನ್ನ ಮೇ
ಲ್ವರಿದಂತೆ ಬಿಜ್ಜಳನರೇಶ ಬಂದಾ ಶರಣ
ಚರಣದಲಿ ನಿಲುವವಸರಕೆ ಬಸವಲಿಂಗಾರ್ಚನಂಗೈದುಪಾರವಿಡದು।
ಹರನಪ್ರಸಾದವಂ ಕೊಳ್ಳಲಂಗೈಸೆ ಗೃಹ
ಚರರು ಬಂದರಸು ಬಂದಪನೆನಲು ಕೇಳುತದ
ನಿರಿಸಿ ಪೞಿತಂದು ಕಾಣಿಕೆ ಸಹಿತ ನೃಪನನೆಱಗಿಸಿದನಾ ಗಣಕುಲಕ್ಕೆ ॥೨೫॥

ಆಸನಂಗೊಟ್ಟು ಸಿಂಹಾಸನದ ಕೆಳಗೆ ಸಿಂ
ಹಾಸನಮನಿಕ್ಕಿ ಕುಳ್ಳಿರಿಸುತ್ತ ಕ್ಲುಪ್ತನವ
ಕಾಷಾಂಬರದ ದಿಂಡುಧರಿಸಿ ಮೂವತ್ತಾಱುಲಕ್ಷ ಸಮಕಟ್ಟುಗಳನು।
ಈಶನವರ್ಗರ್ಪಿಸುತ ಶಾಂತ್ಯರ್ಥವೈನೂಱು
ಸಾಸಿರಂ ಹೊನ್ನಿತ್ತು ತಾ ನೆಗಳ್ದ ದುಷ್ಕರ್ಮ
ದಾ ಸರಣಿವೇಳೆಱಗಿ ತಾಪಸನ ಲೋಹಿತಾಂಬರದೆಗೆಸಲಗ ತೊಳೆದನು ॥೨೬॥

ಅವಿಚಾರತೆಯನು ಸುವಿಚಾರ ಮುಖಗೊಳಿಸಿಂತು
ಶಿವಸಮಯದೇಳ್ಗೆಧೋಱುವ ಸಮರ್ಥಿಕೆಯುಮಾ
ಧವಗಿಲ್ಲ ಭಕ್ತಭಾಳಾಕ್ಷ ಬಸವನ ಭಕ್ತಿ ಭವಿಯ ಭವಗೆಡಿಸುವಂತೆ।
ಅವನಿಪನ [2]ಸಂಹರಿಪ[2] ಭೂತಗಳ ತಲೆಗುತ್ತಿ
ಸವನ ಧನಮಂ ಉಪಾಯದಿ ಲಿಂಗಜಂಗಮ
ಪ್ರವರಕ್ಕೈದಿಪ ಪ್ರೌಢನೆಂದತ್ತ ನಂದೀಶಪೇಳುತಿರೆ ಮತ್ತಿತ್ತಲು ॥೨೭॥

---

[1] ತಳರ್ವಮಲಸತ್ತಿಗೆಯ ಮುತ್ತಿಗೆಯ ಮೋಡದೊಳಗೆ (ಜ). [2] ಸಂಪ್ವರಿಪು (ಛ).

ಪಾಪಪಂಜರದೆಗೆದುದೆಂದೆನಿಸಿ ಕೊಂಡಿರಿ ಸ
ಭಾಪತಿಗಳಾರೆಂದು ನೃಪ ಬಸವಗೆನಲಿಕೆಲೆ
ಭೂಪ ಕೇಳಂಬರನಿಲಗ್ನಿ ಜಲಪೃಥ್ವಿಗಳ ಮುಖ್ಯಮುಖಬೇರಾವುದು।
ಆಪರಿಯೆ ಸರ್ವತೋಮುಖರಿವರು ಪುಷ್ಕರನ
ವ್ಯಾಪಿಸಿಹ ಕಡೆಹಲವರೊಳಗಾವುದಧಿಕ ಶಿವ
ರೂಪನೇಕಂಕೋಟಿರವಿತೇಜಮಂಡಲದೊಳಡಗಿಹ ಕಳಾಂಗರಿವರು ॥೨೮॥

ಎನುತೆನುತ ಬೆಚ್ಚಿದಂದದಲಿ ಚುಃಚುಃಯೆನುತ
ಕನವರಿಸಿದಂತೆ ಕೈವಱೆಗುಟ್ಟಲರಸು ಕಂ
ಡನಿಮಿತ್ತ [1]ಬಯಲಿದೇನೆನುತಿರಲು ರಾಜಸಭೆ ಹಾಸ್ಯರಸಗುಡಿವೊಲೆಲ್ಲ[1]।
ತನತನಗೆ ನಾಸ್ತಿಕಂಗ್ಯೆಯೆ ಮಗುಳ್ದರಸಿದೇ
ನೆನಲೆಂದ ಮತ್ತೆ ಬೆಱಗಾವುದಿಲ್ಲಾ ನಿಮ್ಮ
ದನಿಗೇಳುತವಸರಕೆ ತವಕದಿಂ ಲಿಂಗಪ್ರಸಾದಮುವನಿರಿಸಿ ಬರಲು ॥೨೯॥

ಬಂದೊಂದು ಸಿತಮಂಜರನು ತುಡುಕೆ ಜಱಿದೆನೆನ
ಲೆಂದನಚ್ಚರಿದೇನು ಮಂತ್ರೀಶ ನೀನೆಮ್ಮ
ಮುಂದಿರ್ದದೆಂತೊಳಗಣೊಳುಹಗಂಡ್ಯೆಯದಂ ಸೋಹುವೊಡೆ ನಿಮ್ಮಯ ಮಹಾ।
ಮಂದಿರದೊಳಾರು ಇಲ್ಲವೆ ಎನಲು ನೀವು ಬಂ
ದಂದಮಂ ನೋಳ್ಪರ್ತಿಯರ್ಥತೆಗೆ ಸ್ತ್ರೀಬಾಲ
ವೃಂದದಾನಂದವಖವಿತ್ತಲಿರೆ ತುಡುಕಲನುಗ್ಯೆದುದು ಬಿಡಾಲವೆನಲು ॥೩೦॥

ಎಂತೆಂತುವುಂ ಚೋದ್ಯವೆನುತ ಬೆಱಗಂ ಬೀಱ
ಲಂತೆ ಮತ್ತಾ ಮಂಜರಂ ಮಗುಳ್ದು ತುಡುಕಬರ
ಲಂತೆ ಚುಃಚುಃ ಎನುತ [2]ಕೈಗುಟ್ಟಿ[2] ಝುಂಕಿಸಲು ಮತ್ತೆ ವಿಸ್ಮಯಗೊಳುತ್ತ।
ಮಂತಿರ್ದನೊಬ್ಬ ವಿಶ್ವಾಸಿಯಂ ಕರೆದು ಇದ
ರಂತಸ್ಥವನು ನೋಡಿ ಬಾ ಎಂದು ಕಳುಪೆ ಬಂ
ದುತ್ತರಿಸಿ ನೋಡುತಿರಲಾ ಮಂಜರಂ ಸಾರ್ದುದೊಯ್ಯನೊಯ್ಯನೆ ನೂಂಕುತ ॥೩೧॥

ಮುಟ್ಟಿತೋ ಮುಟ್ಟಿತೆಂಬವಸರಕೆ ಇಲ್ಲಿ ಕೈ
ಗುಟ್ಟಂತೆ ಝುಂಕಿಸಲ್ಕಲ್ಲಿ ಮಂಜರನು ಹಿ
ಮ್ಮೆಟ್ಟೆ ಕಂಡವ ಬಂದೆಥಾರ್ಥವಂ ಬಿನ್ನಪಂಗೆಯ್ಯಲರಸಚ್ಚರೆನುತ।

---

[1] ಝುಂಕಿಸಿದಿದೇನೆನುತಾಗಸಭೆಹಾಸ್ಯರಸಮಯದೊಳೆಲ್ಲಾ (ಜ). [2] ಕೈವಿಡಿದು (ಕ.ಚ.ಥ).

ನೆಟ್ಟಾಲಿಗೊಂಡು ರಾಜ ಪ್ರಮುಖರಂ ಮುಖವ
ನಿಟ್ಟಿಸಲ್ಕಂಚಿಗಂಗೆಡದ ಮಂತ್ರಿಪ ಸಟೆಯು
ಮೊಟ್ಟೆಹೊಱಿಸಿ[1]ಲ್ದೊರಳುಕುಸಿಯಿ[1]ತರಸಾ ನಿಮಗೆ ನೈಜವೆನೆ ಭೂನಾಥನು ॥೩೨॥

ದೃಷ್ಟವಂ ನೋಳ್ಪೆನೆನುತೇಳೆ ಬಸವಣ್ಣ ಕೈ
ಗೊಟ್ಟಡಾತನ ನಿಲಿಸಿ ತಾನೆಯಾ ಗೃಹವೊಕ್ಕು
ಕಟ್ಟಪಂಜರದ ಮಱೆಯಿಂದೆ ನೋಡುತ್ತಿರಲು ಆ ಕರಿಯ ಬೆಕ್ಕು ಬಂದು।
ಇಟ್ಟಗಲಿಗಂಗವಿಸುತಂಜಿ ಹೆರೆ ಸಾರುತ್ತೆ
ಮುಟ್ಟುವವಸರಕೆ ಲಿಂಗಾವಧಾನಿತನು ಕೈ
ದಟ್ಟಲಿಕೆ ಬೆದಱುತ್ತ ಬೆಚ್ಚುತೋಡುತ ಬರಲು ನಾಲ್ಕೆರಡು ಸನ್ನೆಗಂಡು ॥೩೩॥

ತಲೆದೂಗಿ ತನುದೂಗಿ ಮನದೂಗಿ ನಿಶ್ಚಯದ
ನೆಲೆಯಗಂಡುತ್ಸಾಹಬೋಗಿ ಪೊಡಮಡುತ ನುಡಿ
ಹಲವೇನು ಸತ್ಯಕ್ಕಸತ್ಯಮುಂಟೇ ಎನುತ್ತರಸು ಕೈಮುಗಿದೀತನ।
ಹೊಲಬಾರ್ಗೆ ಹೋಗದೆಂದಾನಂದದಿಂದ ಮುಖ
ಜಲಜಮಂ ಪಸರಿಸುತೆಥಾಕಥನಮಂ ಸಭೆಗೆ
ನೆಲದೊಡೆಯ ಹೇಳುತಾಗೃಹದೊತ್ತಿನಮಿತಸರಸಿಯ ಕಂಡು ಬಂದು ನಿಂದು॥೩೪॥

ಬಳಸಿನೋಡಿದನು ಚತುರಾಶ್ರಯುವ ಕಲುಸರಣಿ
ಗಳ ಸೊಡೆಯು ಬಿಗಿ[2]ದು[2] ತುಂಬಿದ ಧವಳಿತದ ಚಿತ್ರ
ನಳಿನಖಂಡಣದ ಕರು ಪತ್ರಜಾತಿದಳಪಂಕ್ತಿಯು ವಿಸ್ತರದೊಳೊಪ್ಪುವ।
ಕೊಳನಾಕೃತಿಯೊಳಮಳಪಾದಾಂಬುವಿರೆ ಖೇಡ
ಕುಳಿಯೋ ಇದೇನೆಂದರಸು ಬಸವನಂ ಕೇಳ
ಲಿಳೆಯೊಡೆಯ ಜಂಗಮದ ಪದಪರುಷಪಾದರಸವೆನೆ ವಿನೋದದೊಳರಸನು ॥೩೫॥

ಶತವೇದಿಯೋ ಸಹಸ್ರವೇದಿಯೋ ಎನಲದ
ಕ್ಕತಿಶಯಂ ಭಾವವೆಂದೆಂದೆನಲು ಚೋದ್ಯಫಲ
ಶ್ರುತಿ ನಿನಗೆ ಸಿದ್ಧಿಸದೊಡೀ ಮಾಟಕೂಟಕಾವಿಕ್ಕುವ ಧನಂ ನೆರೆವುದೆ।
ಮತವಿದಹುದೆನುತ ಮುಗುಳ್ನಗೆಯಿಂದಲಿದು ಬಱಿಯ
ಶ್ರುತಬಲುಹೊ ದೃಷ್ಟವೋ ಎಂದು ನೃಪ ದೂಷಿಸವ
ಗತಿಗನೆದೆಗಲಗಬಡಿವಂತೆ ಹತ್ತೆಂಟು ಕಬ್ಬುನದ ಮೊಟ್ಟೆಗಳ ತರಿಸಿ ॥೩೬॥

---

[1] ಲ್ದೋಣುಮುಱಿಯಿ (ಜ). [2] ದ (ಗ.ಥ.ಚ).

ಮಂತ್ರಸಿದ್ಧನು ನಿಷ್ಠೆಯೆಂಬ ಮೂಲಿಕೆಯೊಳವ
ತಂತ್ರಿಸಿ ಹಿರಣ್ಯಬಾಹವೆ ನಮೋ ಎಂಬ ಶ್ರುತಿ
ಮಂತ್ರತಾರ್ಕಣ್ಯಗೊಡಲಾಗಿ ಪಾದೋದಕದ ಕುಂಡದೊಳು ಹಾಯ್ಕೆ ಪರುಷ।
ಇಂತಿದಹುದೇ ಎನುತ ಶಬ್ದಪರುಷದ ಕೈಗ
ಳಿಂ ತೆಗೆದು ಕರಪರುಷಸೋಂಕಿಂದ ಭಾವಪರು
ಷಂ ತುಳುಕಿ ಥಳಥಳಿಪ ಹೊಸಹೊನ್ನ ಮುದ್ದೆಗಳಮಾಡಿ ಹಾಯ್ಕಿದ ಬಸವನು॥೩೭॥

ಬೆಬ್ಬಳಂ ಬೆಳೆದುದರಸಿನ ಭಾವದೊಳು ಮಹಾ
ಗುಬ್ಬುರ್ಗುಡಿಗಟ್ಟಿ ತಾಶ್ಚರ್ಯವಾಂದೋಳಿಸಿತು
ಗರ್ಭವಳ್ಕಿತು ಸರ್ಬಸರಸ ವಿರಸಿಸಿತು ನಗೆ ನಾಯ್ಗೆ ಶೋಭಿತವಾದುದು।
ಅಬ್ಬಳಿಕೆ ಅಡಿಗದ್ದಿ ತಣಕಸಣಕದ ಶಿರಕೆ
ಪಬ್ಬಿರ್ತು ಪೆರ್ಗಿಚ್ಚು ದೂಷಿಸುವ ನಾಲಗೆಯು
ಜಬ್ಬಿತೆಮ್ಮೆಯ ಬಸವನಾಗಮದ ಹೊಂಗೊಂಡ ಹೊಳ್ಳುಮಾಡಿತು ಕಟಕಿಯ॥೩೮॥

ಅರಸಂಗೆ ಬೆಱಗು ಬೀಱಲಿಕೆ ಸಂದೇಹಮು
ನ್ನೊರಸುವೆನೆನುತ್ತ ಹೊಂಗಾರುಕರ ಕರೆಸಿ ಕಡಿ
ದೊರಸಿ ಕರಗಿಸಿ ಕಾಸಿ ಕಲ್ಪಿತಾಭರಣಕ್ಕೆ ಸಲಿಸಿದನು ಪಾದೋದಕ।
ಪರುಷದಿಂದಾದ ಸ್ವರ್ನದ ವರ್ನಜಾಂಬೂನ
ದೊರೆಗೆ ಮಿಗಿಲಾಗಲೀತನೆ ಪಾದರಸಸಿದ್ಧ
ಗುರುವೆಂದು ರಾಯ ಸಾಷ್ಟಾಂಗಪ್ರಣುತನಾದ ಮಹಿಮಾವಿಲಾಸವಱಿದು ॥೩೯॥

ಉಪಮೆ ನಿಲುಕದ ಮಹಿಮನಾವಾವ ತೊಡಕುಗಳ
ನಪಹರಿಸಿ ಲಿಪಿ ಲೇಖ[1]ಭಂಡಾರ[1]ವಾದಿಯಾ
ದಪರಿಮಿತ ದೃಷ್ಟಗಳ ಘಟ್ಟಿಗೊಳಿಸಿದನು ನಿಷ್ಠೆಯ ನಿಜಗಲಿತ ದೇವನು।
ಸುಪಥವಾಗಿಹ ನಿಶ್ಚಯಾತ್ಮನೇನಾನೊಂದು
ಉಪಕರಣ ಕರಣವಿಡಿದಂಗವೈಸಲೆ ಎಂದು
ನೃಪಗೆ ಜಾತಿಸ್ಮರತೆಯಾದೊಲಾಯ್ತಾ ಕ್ಷೇತ್ರಮಹಿಮಾವಿಲಾಸದಿಂದ ॥೪೦॥

ಮುನ್ನಕಪಟಾಂಗದಿಂ ಬಂದು ಬಸವೇಶ ಪ್ರ
ಸನ್ನಗೃಹವೊಕ್ಕರೆಲ್ಲರು ಭಕ್ತಿ ಜ್ಞಾನ ಸಂ
ಪನ್ನರಾದಂತೆ ನೃಪನಜ್ಞಾನಸಹ್ಯಪರ್ವತ ಶಾಪವೈರಂಗಳ।
ಬಿನ್ನಣಂ ಬೀತೆದ್ದು ಕೈಮುಗಿವುತೂಳಿಗವ
ಚೆನ್ನಬಸವಣ್ಣಂಗೆ ಕರುಣಿಸಿಲ್ಲಿದ್ದು ನೀ
ವೆನ್ನಪಾಲಿಪುದಲ್ಲದೋಲಗಕೆ ಬರಬೇಡ ಬೇಹ ಪ್ರಸ್ತಗಳುಳ್ಳಡೆ ॥೪೧॥

---

1 ಲೆಕ್ಕಭಂಡಾರಶ್ವ (ಜ).

ಬಿನ್ನಪಂ ಮಾಡಿ ಕಳುಹುವೆ ಮೇಣು ನಾ ಬಪ್ಪೆ
ನಿನ್ನನೋಲೈಸಿ ಕಳುಹುವೆ ವಾರಣಾಸಿವೊಗು
ವನ್ನಕರವೈಹಾಳಿಯುಂಟೆ ಸುಖಮಿರಿ ಗಣಸಮೇಳದೊಳು ವೆಚ್ಚಮುಖಕೆ।
ಮುನ್ನನಡೆವುದಕಿಮ್ಮಡಿಯ ತರಿಸಿ ಕೊಂಬುದೆ
ಮ್ಮುನ್ನತೋನ್ನತಿಕೆಯಧಿದೈವಸ್ವರೂಪಾಗ
ಹರ್ನಿಶಂ ಕಾರುಣ್ಯಚಿತ್ತರಾಗಿಹುದೆಂದು ಮತ್ತರಸು ಪ್ರಣುತಗೈಯೆ ॥೪೨॥

ಕಷ್ಟವಂ ಕಡೆತನಕ ಮಾಡ್ಯನಾಚಾರದು
ತ್ಕೃಷ್ಟದೊಳು ಕುಕ್ಕುಳಂಗುದಿದು ಪಾತಕದ ಪರ
ಮೇಷ್ಟಿಗಳು ತಾ[1]ವೆನಿಸಿ[1]ಕೊಂಡುಳ್ಳುದಿಲ್ಲದುದ ಕೂಡಿಕ್ಕಿ ಪಾಪರೂಪ।
ಸೃಷ್ಟಿಸುವ ಶಿವದ್ರೋಹಿಗಳ ನಿಂದೆಯತಿನಿಜವಿ
ಶಿಷ್ಟಕೊಂಡೆಯರು ಮೂವತ್ತಱುವರಂ ಶಾಪ
ಬಿಟ್ಟಿತ್ತು ಸ್ವಾಮಿಯೊಲು ಪರಿವಾರವೆಂಬೊಲವರೆಱಗಿದರು ಸುಜನರಾಗಿ ॥೪೩॥

ಪಾದೋದಕದ ಪರುಷ ಕಬ್ಬುನವ ಮುಟ್ಟಲಿಕೆ
ಹೋದುದವಲೋಹವದು ಹೊನ್ನಾಯ್ತು ದರುಶನದಿ
ಹೋದುದರಸನ ನಿಂದಕರ ಶಾಪವಾದಿಯಲಿ ಶಿವನ ಮುಂದಿಹಪರಗಳು।
ವಾದಿಸಿದ ವಾದ ಮುಡಿಯಿತ್ತು ಕ್ರೀಭಾವದಿಂ
ಪಾದಕೆಱಗಿದೊಲೆಱಗಲಿಹವ ಪರವೆತ್ತುವಂ
ತಾ ದಯಾಂಬುಧಿ ಬಸವರಾಜ ಬಿಜ್ಜಳನರೇಂದ್ರನ ಮಕುಟವಿಡಿದೆತ್ತಿದ ॥೪೪॥

* ವಚನ—

ಕರ್ಮವೆಂಬ ಕಳನೊಳು ತೊಡರಿದೆ. ಬಿನ್ನಪವನವಧಾರು, ನಿಮ್ಮಾಳಿನ ಭಾಷೆಯ. ಕಡೆಗಳಕೆ ನೂಕುವೆನು ಕೆಡಹುವೆನು ; ಅಂಕವನು ನಡುವೆ ಓಸರಿಸಿದಡೆ ನಿಮ್ಮಾಳಾನಲ್ಲ ; ಕರೆದಡೆ ಓ ಎನಿಸದಿದ್ದಡೆ ನಿಮ್ಮಾಳಾನಲ್ಲ. ಶಿವನೆಂಬ ದಂಡೆಯನೊಡ್ಡಿ ಗಣಮೇಳಾಪವೆಂಬಲಗಿನಲ್ಲಿಱುವೆ ಕೂಡಲಸಂಗಮದೇವ.

ಎಂದು ಭಾಷಾವಚನಮಂ ಪಾಡುತ ಕ್ರಿಯಾ
ದ್ವಂದಮುಖದಿಂ ನೆಗಳ್ದ ಪ್ರತಿವಾದ ಸಮರಪ್ರ
ಬಂಧದಱುವತ್ತುನಾಲ್ಕಂ[2]ಕೆಗೆಡಹಾ ರಾಜಮುಖಚೇಷ್ಟಿತರಿರಾಯರ[2]।
ಕೊಂದು ಕೊಂಡೆಯರ ವಾಗ್ವಱೆಯ ಪರಿವಾರಮಂ
ಸಂದುಗಡಿದಜ್ಞಾನಭೂತಕ್ಕಸಹ್ಯಬಲಿ
ವೃಂದಮುವನಿತ್ತು ರಣವೂಡಿದನು ನಿಷ್ಠಾಪರತ್ವಖಡ್ಗೋನ್ನತಿಯಲಿ ॥೪೫॥

---

[1] ವರಸಿ (ಕ.ಚ.ಖ). [2] ಗೆಲಿದ ದೂಸಕರಿರಾಜರಾಜಂ ಪಿಸುಣರ (ಜ). * ಈ ವಚನ 'ಜ' ಪ್ರತಿಯಲ್ಲಿಲ್ಲ

ಚಾರುಭಟ ಬಸವ ಪ್ರತಿವಾದಮುಖದಿಂ ನೆಗಳ್ದ
ಕಾರಣ ಪವಾಡದಱುವತ್ತುನಾಲ್ಕನು ಭಕ್ತಿ
ಚಾರಿತ್ರಭಾವನಿಷ್ಠಾಪವಾಡಗಳ[1]ನಿ[1]ಪ್ಪತ್ತುನಾಲ್ಕುಭಯಸ್ಥಳಕೆ।
ಸೇರಿದೆಂಬತ್ತೆಂಟು ದಿವ್ಯವಾದಂಗಳು
ತ್ತಾರಕಭವಂ ಸೋಲ್ತು ತಲೆಗುತ್ತಿಕೈದು ಭಂ
ಡಾರಿಸಲೆನುತ್ತ ಕೈಮುಗಿದಂತೆ ಕೈಮುಗಿದ ಭೂನಾಥಗೆಂದ ಬಸವ ॥೪೬॥

ಎಂತು ನೀವಿರಹೇಳಿದಂತಿಹೆವೆನುತ್ತಾ ಮ
ಹಂತಿನ ಸಮಕ್ಷದಲಿ ಚೆನ್ನಬಸವಣ್ಣಂಗೆ
ಮಂತ್ರಿಮುದ್ರೆಯನಿತ್ತು ಕೈವರ್ತಿಸಲ್ಕರಸು ಕೈವಿಡಿವುತೆನ್ನಭಾಗ್ಯ।
ಮಂತ್ರದೇವತೆ ಕೊಟ್ಟ ವರವೆ ಬಾ ನಿಮಗೆಯುವ
ರಂತೆ ಪೆಸರ್ಚಿಕ್ಕದಣ್ನಾಯಕರೆನುತ್ತರಸ
ನಂತವಚನುಚಿತೋಕ್ತಿಯಿಂದಪ್ಪಿಕೊಂಡನುತ್ಸಾಹಚಿತ್ರದ ಚಿತ್ತದಿ ॥೪೭॥

ದಂಡನಾಯಕ ಪದಸ್ಥಿತವೆಸರದಾ ಚಿಕ್ಕ
ದಂಡನಾಯಕನಾಗಲರಸು ಗಣಮುಖದಲ್ಲಿ
ಕೊಂಡಾಡಿದನು ಬಸವರಾಜದೇವರಿಗೆ ದೇವಂ ನಾಮುಸಾಮ್ಯವೆಂದು।
ಮಂಡೆಯಾ ಮೇಲೆರಡು ಕೈಗಳಸವಿಡಲುಳಿದ
ಮಂಡಲೇಶ್ವರ ಮಂತ್ರಿತಂತ್ರಮೂವತ್ತಾಱು
ಕೊಂಡೆಯರ ನಿವಹವೆಲ್ಲೆದ್ದು ಜಯಜಯುವೆನುತ್ತಿರ್ದುದೆಮ್ಮಯ ಬಸವಗೆ ॥೪೮॥

ಪಾದತೀರ್ಥವೆ ಪರುಷವೆಂದು ತಾ ಪರುಷವಾ
ದಾದಿಗಣನಾಥನಿಂ ಬೀಳ್ಕೊಂಡು ಸಿಂಹಾಸ
ನೋದಯುವ ನೋಡ್ಯರಸು ತೆರಳ್ದನು ಕ್ರಿಯಾಪಾದಬೋಧೆ ಬೆಂಕೊಂಡಂತಿರೆ।
ಮೇದಿನಿಯೊಳಚ್ಚರಿಯ ಚಾರಿತ್ರವೀಪರಿದ
ನಾದರಿಸಿ ಪ್ರಮಥರೆಂದೊರೆದ ನಂದೀಶ್ವರನಿ
ನಾದ ಕಥನಾಬ್ಧಿಯೊಳ್ಪುಟ್ಟಿದ ಪವಾಡರತ್ನಪ್ರಕೀರ್ಣಕ ಮುಗಿದುದು ॥೪೯॥

ರಾಜಶೇಖರ ವಿಶ್ವನಾಥಪದಪಂಕೇಜ
ರಾಜಿತಾನಂದಪಟ್ಚರಣ ಶಿವಕವಿ ಸಿಂಗಿ
ರಾಜವಿರಚಿತ ಹರಕಥಾಶರಧಿಗೆಸೆವ ದ್ವಿಜರಾಜನೆನಿಪಮಲಬಸವ।
ರಾಜಚಾರಿತ್ರದೊಳು ಸದ್ಭಕ್ತಿಯುನ್ನತವಿ
ರಾಜಿಪ ಪವಾಡದಱುವತ್ತುನಾಲ್ಕಱೊಳು ವಿ
ಭ್ರಾಜಿತಂ ಕ್ರೀಭಾವವಾದಮುಕ್ತಕ ಪಾದತೀರ್ಥಮಂ ಮೆಱೆದ ಸಂಧಿ ॥೫೦॥

---

[1] ವಿ (ಫ).

ಅನುಬಂಧ ೧.

* (ಪ್ರಕ್ಷಿಪ್ತವಿರಬಹುದಾದ ಪದ್ಯಗಳು)

ಆದಿಯನನಾದಿಗಳನಂಗಗಳ ಮಾಡಿ ಸಲೆ
ಸಾಧಿತ ಕ್ರಿಯಾದ್ವೈತ ಭಾವದ್ವೈತವು ಎರಡು
ವಾದಿಸಿ ಸದಾಶಿವನ ಮುಂದೆ ನಿಂದೊಂದ[1]ಕೊಂದಧಿಕಪದವೆನಲಿ[1]ಹಪರ।
ಭೇದಲೀಲಾಪ್ರಕೃತಿ ಪುರುಷ ಪುರುಷಂ ಘನವಿ
ನೋದವನಭವ ನೋಡಿ ಧರ್ಮಾರ್ಥಮುಖ ವೃಷಭ
ನಾದೆಸೆಯ ತೋಱೆ ಭಾವ ಪ್ರವೇಶಿಸಲೊಡನೆ ಕ್ರಿಯೆ ಸುರರ್ಗಳ[2]ನೈದಿತು[2] ‖೧‖

ಇಹನಾಮ[3]ವೊ[3]ತ್ತುದು ಕ್ರಿಯಾದ್ವೈತ ಪರನಾಮ
ಗ್ರಹಿತವಾಯ್ತಾಭಾವತತ್ವವಿಂತಿಹಪರದ
ಮಹಿ[4]ಮನಾ[4]ಮುಖಮುಭಯಮುಖವಾಗಿರುತ್ತಲಾ ದ್ವಂದ್ವಜಮುಖಾಂತರದೊಳು।
ಮಿಹಿರಕಿರಣ ಪ್ರಕೃತಿ ಭೇದದೊಲು ಸಂಕಲ್ಪ
ಬಹಿರಂಗವಳ[5]ಕೆ[5]ಸೂಚನೆದೋರ್ಪ ಮಾರ್ಗಕ್ಕೆ
ಬ[6]ಹೊಲು[6] ವೃಷಭೇಶ್ವರನು ಬಂದನೀಶ್ವರನ ಬಹಳಸ್ಥಾನ ನಿರ್ದೇಶಕೆ ‖೨‖

ಸಲೆ ಜಗವನೊಳಕೊಂಡು ಜನಿತವಿಲ್ಲದೆಯಾ[7]ವ[7]
ನಿಲಲನಾದೆನಿಪ ಪರಶಿವನಿರ್ಮಿತೋದ್ಧಾರ
ಫಲಿಸಿತೆಂತೆನಲು ತಾನಾಧಾರಕಾಶ್ರಯಮದಾಗಿ ಶಾಕ್ವರಮೂರ್ತಿಯ।
ಸಲೆ ಮತ್ಸ್ಯ ಚರಣತಳ ಕೂರ್ಮ ಖುರದಿಗುದಂತಿ
ಕುಳಕೊಳ[8]ಗನ[8]ಷ್ಟನಾಗರ್ಕ[9]ಳಿಂ ಕಂ[9]ಗೊಳಿಸಿ
ತೊಳಗೆ ನವನಿಧಿಗಳಡಗಿದವು ಚತುರಾಂಘ್ರಿಗಳ್ಕುಭಯನಾಯಕರಾದ[10]ರು[10] ‖೩‖

ತೊಳಪ ಕೂರ್ಪಾಂಘ್ರಿ ವರಪಾತಾಳವೇಳು ಮೇ
ಲುಳಿದೇಳು ಭೂರ್ಭುವರ್ಲೋಕಾದಿಗಳೆಯುದರ
[11]ದೊಳಗೆ[11] ಪೃಥ್ವ್ಯಾದ್ಯಷ್ಟತನುವೆ ತನುವಾಗಿ ನಿರ್ಮಿತವೆ ಭೂತಂಗಳಾಗಿ।

---

[1] ಧಿಕಪದವೆನ್ನುತಿರೆಇಹ(ಕ.ಗ.ಥ). [2] ಮುಖವೊಗೆ (ಕ.ಗ.ಥ). [3] ವೆ (ಖ). [4] ಮಾನ (ಕ.ಗ.ಥ). [5] ಗೆ (ಖ). [6] ಹವ್ರೊಲೀ (ಖ). [7] ದಿ (ಗ.ಥ). [8] ಗುಮ (ಗ.ಜ.ಥ). [9] ಳ್ಕಿರಂ (ಕ.ಥ). ಳ್ಕಿಕಂ (ಗ). [10] ವು (ಕ.ಗ.ಥ). [11] ತೊಳಪ (ಖ).

* ಈ ಪದ್ಯಗಳು ಎರಡನೇ ಸಂಧಿಯ ೪೨,೪೩ನೇ ಪದ್ಯಗಳನಡುವೆ ಇವೆ. ಇವು 'ಘ' ಪ್ರತಿಯಲ್ಲಿ ಮಾತ್ರ ಇಲ್ಲ.

ಬೆಳಗುತಿಹ ಚಂದ್ರಸೂರ್ಯರೆ ನೆಯನಶ್ರೋ[1]ತ್ರ[1]ಂಗ
[2]ಳೊ[2]ಳಗು ವೇದಾಂತಹೇಮಾಚಲಸ್ಕಂಧಸ್ಸು
ಗಳವೆ ಮೋ[3]ಕ್ಷಂವಿಷಾ[3]ಣಂಗಳಾಗಪುದಮೃತಕಳೆಗಳು ವಿಲಾ[4]ಸನಯನ[4] ||೪||

ಗಳಕಂಬಳವೆ ಗಂಗವಾಳುಕ ಸುಮನರುದ್ರ
ನಿಳಯರೋಮಂ ಋಷಿಸ್ಥಾನ ತ್ರಿಭುವನವಂಡ
ವಳಯ ತ್ರಿಸ್ಥಾನಲಾಂಗೂಲಷಡ್ದರ್ಶನಾದಿಗಳಾಶ್ರಮಸ್ಥಾನವು।
ಒಳಗು ಹೊಱಗೆನಲಿಲ್ಲವೀರೇಳು ಭುವನಂಗ
ಳೊಳಗೆ ತಾ ತನ್ನೊಳಗೆ ಭುವನಂಗಳಿಂತು ಪ್ರ
ಜ್ವಲಿತ ಪ್ರಭಾಕರನಭವನೋಲಗಕ್ಕೆ ವೃಷಭೇಶ ಬರುತೊಂದು ದಿವಸ ||೫||

ಪನ್ನಗಾಶನ ಮರಾಳೇಶ ಮೇಷಂ ಲುಲಾ
ಯಂ ನರಮಕರಸುಪ್ಪೃಷದಶ್ವಶಾಕ್ವರವಾಹ
ನೋನ್ನತೈಶ್ವರ್ಯಪದಪಂಕ್ತಿಪೀಠಕಪೂರ್ವ ನಿರ್ಜರೇಶ್ವರರಾದಿಯ।
ಮನ್ನಿಸದೆ ಮನ್ಮಥಮತಂಗಮಂ ಸೀ[5]ಳ್ದು[5] ಸಿಂ
ಹಂ ನಡೆದು ಬಂದುದೆಂಬಂತೆ ಬಂದೀಶ್ವರನ
ಸನ್ನಿಧಿಯೊಳಿರೆ ಸುರಸಮೂಹದೊಳಗಾದಿಯನಿಮಿಷನೆಂಬನೋರ್ವಮರನು ||೬||

ತನ್ನತ್ತ ಶೋಭಿಸುತ್ತಿರೆ ವಾಲದಂಡವದ
ರುನ್ನತಿಯನಱಿಯದಾ ಕ್ರೀಚೇಷ್ಟಿತಾಮುಖೋ
ತ್ಪನ್ನಕ್ಕೆ ಒಂದು ರೋಮವ ಪಿಡಿದಲುಗೆ ಕೊಡಹೆ ಶಕ್ರಮುಖ್ಯರ ಮುಖವನು।
ಛಿನ್ನಗೈದಿತ್ತು ಹೊ[6]ಯ್ದೊ[6]ಗೆದು ಸೆಳೆಯಲ್ಕೆ ಜಲ
ಜಂನಿಕರ ಶುಭ್ರಾಂಶುವಿಂಗೆ ತಲೆವಾಗುವೊಲ್
ಬನ್ನಬಡಿಸಲ್ಕೆ ಮಳೆ[7]ಸು[7]ಧ್ವವಿಸಲುದ್ಧೃತದಿ ಕೆರಳ್ದಮರರಿಂತೆಂದರು ||೭||

---

[1] ತ್ರಾಂ (ಕ.ಗ). [2] ಗಳೊ (ಗ.ಕ). [3] ಕ್ಷವಿಷಾ (ಕ.ಗ.ಥ). [4] ಸಾನನ (ಕ.ಗ.ಥ). [5] ಳ್ದ (ಕ.ಥ). [6] ಯ್ದೊ (ಕ). [7] ದು (ಖ).

ಅನುಬಂಧ ೨*

ಕುಚ್ಛಿತ ಕುಮಂತ್ರ ಕುಜನರ್ಕಳೆಲ್ಲರ ಬಾಯಿ
ಮುಚ್ಚಿದವು ಕೊಂಡೆಯರು ದಿಂಡೆಯರು ತುಟಿಗಳಂ
ಬಿಚ್ಚಲಮ್ಮದೆ ನಿಂದು ಬೆಱಗಾದರಲ್ಲಿ ಮತ್ತಿರ್ದಾ ಕುತರ್ಕಯುತರ।
ಹೆಚ್ಚಿರ್ದ ನಾಲಗೆಯು ಕುಡಿ ಮುರುಟಿದವು ನೃಪನ
ಹೆಚ್ಚಳದ ಚೇಷ್ಟೆ ನಿಂದುದು ರಾಜಠಕ್ಕುರಂ
ನಿಚ್ಚಯಾಂಗಂಬಡೆದ ಸಮಯದೊಳಗರಸ ಸಂದೇಹದಿಂದಿಂತೆಂದನು ॥೧॥

ಎಲ್ಲರಱಿವಂತೆ ಕರ ಚರಣ ನಾಸಿಕ ನೇತ್ರ
ವಿಲ್ಲದಿಹ ಭಟ್ಟಗಿಂತವಯವಂಗಳು ಬರಲ್
ಬಲ್ಲವೆ ಇದೆಲ್ಲಯದು ಶಠೆ ದೃಷ್ಟಿಬಂಧನವಿದೆಂದೆಂಬ ರಾಜೇಂದ್ರನ ।
ಖುಲ್ಲಬುದ್ಧಿಯ ತಿಳುಪಲೆಂದು ಪೂರ್ವದ ಕಥನ
ದಲ್ಲೊರ್ವ ರಾಜನರಸಿಯ ಮಹಿಮೆ ಇರವ ಭೂ
ವಲ್ಲಭನ ಮನಕೆ ಬಪ್ಪಂತೆ ತಿಳುಪಿದ ಚನ್ನಬಸವೇಶನೆಂತೆಂದಡೆ ॥೨॥

ಧರಣಿಪತಿ ಕೇಳು ಮಹಿಮಾವಲಂಬದ ಕಥಾಂ
ತರವ ಜಯಭದ್ರಸೇನ ಸುಭದ್ರಸೇನ ಮು
ನ್ನೆರೆಕಪಟದಿಂ ಸಹ್ಯಗಿರಿರಾಜನುಂ ದೇವತೆಗೆ ಬಲಿಯನಿತ್ತು ತನ್ನ।
ಕರವಿತ್ತು ಪೋಗಲಾ ಭದ್ರಸೇನನ ಪತ್ನಿ
ವರಧರ್ಮಪಾಲೆ ವೃಷಭಪ್ರಸಾದದಿ ತನ್ನ
ವರಪುತ್ರನಸುವಡೆದು ನೃಪಗೆ ಕರವೀಯಳೇ ತ್ರೈಭುವನ ವಱಿಯಲು ॥೩॥

---

* ಈ ಮೂರು ಪದ್ಯಗಳು ೩೭ನೆಯ ಸಂಧಿಯ ೧೬ ೧೭ನೇ ಪದ್ಯಗಳಿಗೆ ಬದಲಾಗಿ 'ಜ' ಪ್ರತಿಯಲ್ಲಿ ಮಾತ್ರ ದೊರೆಯುತ್ತವೆ.

ಅನುಬಂಧ ೩*

ಸೂಚನೆ : —

ವರತಿರುಜ್ಞಾನಿ ಕಲ್ಯಾಣಕ್ಕೆಬರೆ ಶಿರವ
ನಱುದೊಯ್ಯಲಾ ಶರೀರಕೆ ಶಿರವನಿತ್ತು ತ
ಚ್ಛಿರಕೆ ಮುಂಡವನಿತ್ತು ಮೆಱೆದ ನನ್ನಯ್ಯಗೀಶ್ವರ ಮೆಚ್ಚಿ ನಿಜದೋಱಿದ।

ವರಭವಾನಿಯ ಯೌವನಾಭ್ಯುದಯವನಜವನ
ಹರುಷಿತಮರಾಳ ಗೌರೀ ಮಹೋತ್ಸಾಹ ಶಂ
ಬರನಿಧಿಸುಧಾಂಶು ಗಿರಿಜಾಘನಸ್ತನಘುಸೃಣ ಪಂಕಾಂಕಿತೋರಸ್ಥಲ ।
ಪರಮಕಲ್ಯಾಣೀಕಲೇವರ ಲತಾ ಮನೋ
ಹರಕಲ್ಪವೃಕ್ಷ ಶಂಕರನ ಸಾಕಾರ ಸುರು
ಚಿರಭವತಿ ಭದ್ರಮಹಿಮಾಗುಣಸಮುದ್ರ ಭಾಸುರ ಬಸವರುದ್ರ ಜಯತು ॥ ೧ ॥

ತವೆ ಶಿವಾದ್ವೈತ ಮೂರುತಿವೆತ್ತ ಶರಣರೊ
ಲ್ದವಧರಿಸಿ ಭೂಕಾಮಿನೀವದನಮುಕುರ ಪರ
ಮವಿಲಾಸ ಭಕ್ತಿವೆಳಸಿನ ಹೊಲ ಸಮಸ್ತಕಲೆಗಳ ತಾಣ ಸಕಲಸುಖದ ।
ತವರೆನಿಸಿ ತೋರ್ಪ ಹೊಯ್ಸಳದೇಶದಿಂದೆ ವರ
ಶಿವಯೋಗಿ ಪಾವನಚರಿತ್ರ ಕಂದರ್ಪಹರ
ನವತಾರನುರುತಿರುಜ್ಞಾನಸಂಬಂಧಿ ಕಲ್ಯಾಣ ಪುರಮಂ ನೋಡಲು ॥ ೨ ॥

ಹರುಷದಿಂದೋವೊ ಲಿಂಗಾಂಗ ಸಂಬಂಧದಾ
ಚರಣೆಯಂ ಪೆತ್ತ ದೇಶಿಕ ಪರಾದ್ವೈತ ವಿ
ಸ್ತರನಖಂಡಾತೀತ ಚಿದ್ಘನಾನಂದದೊಳಹೊಱಗೆ ಬೆರೆದಾಡುತಿರ್ಪ ।
ಚರಮೂರ್ತಿ ತಳೆದಿಪ್ಪುದಿಂದೆ ರುದ್ರಾಕ್ಷೆಗಳ
ಸರದೀದ ಬಸಿತಲೇಪನದಿಂದೆ ಕಾವಿಯಂ
ಬರದಿಂದೆ ದಂಡದಿ ಕಮಂಡಲದಿ ಕಂಗೆಸೆದು ನಡೆತರುತ್ತಿರಲು ಮುಂದೆ ॥ ೩ ॥

---

* ಇಲ್ಲಿ ಕೊಟ್ಟಿರುವ ಎರಡು ಸಂಧಿಗಳೂ ' ಜ ' ಪ್ರತಿಯಲ್ಲಿ ಮಾತ್ರ ದೊರೆಯುತ್ತವೆ. ಸಂಧಿಗಳ ಆದಿಯಲ್ಲಿಯೂ ಅಂತ್ಯದಲ್ಲಿಯೂ ಇನ್ನುಳಿದ ಸಂಧಿಗಳಲ್ಲಿರುವಂತೆ ಕ್ರಮವಾಗಿ ' ಶ್ರೀ ಮದಖಿಲಾರ್ಣವ ಮಥನಗೈದು ' ಎಂದೂ ' ರಾಜಶೇಖರ ವಿಶ್ವನಾಥ ಪದ ಪಂಕೇಜ' ಎಂದೂ ಮೊದಲಾಗುವ ಪದ್ಯಗಳು ದೊರೆಯುವುದಿಲ್ಲ. ಈ ಸಂಧಿಗಳು ಬಹುಶಃ ಪ್ರಕ್ಷಿಪ್ತವೆಂದು ತೋರುತ್ತದೆ. ಆವರಣದೊಳಗೆ ಕೊಟ್ಟಿರುವ ಪಾಠ ನಾವು ಊಹಿಸಿದುದು. ಪಾಠವನ್ನು ತಿದ್ದುವ ಗೋಜಿಗೆ ಹೋಗಿರುವುದಿಲ್ಲ.

ಆಲವಂಕೊಲೆ ಕಕ್ಕೆ ಬಿಕ್ಕೆ ತರಿತದಿಕಾರು
ಬೇಲ ನೆರನೆಲವ ಕಾನುಗ್ಗಿ ತಗ್ಗಿಲ್ಕಡವ
ಜಾಲಿ ಬೊಬ್ಬುಲಿ ಹೊನ್ನೆ ಚೆನ್ನಂಗಿ ತಡಸು ತಂಡಸು ದಿಂಡು ಹೆದ್ದುಂಬರ।
ಹಾಲೆ ಬೆಳಲಣಿಲೆ ಚಿಲ್ಲಬ್ಬಿಡೆಯು ಭಾರಂಗಿ
ನೂಲಿ ತೆಲಸಿಪ್ಪಿ ಗೋನಂದಿ ಕಮ್ಮರನರಳಿ
ಹೀಲಿ ವಂಬಚೆಗೊರವಿ ಗೊದ್ದಲಿಂದುಲೆ ಗುರುಬುವೆತ್ತೆಸೆಯಲಾರಣ್ಯವು ‖ ೪ ‖

ಮತ್ತಿ ಕೊಂಡಸು ಬೆಂಡೆ ದುಂಡುಚಿ ಬಿದಿರ್ಬನ್ನಿ
ಬೆತ್ತ ಎಂಚಲು ಗುಂಜಿ ನೆಲ್ಲಿ ನೇಱಿಲು ತಾಱಿ
ಮುತ್ತಮಂಗಾರೆ ಕೇರಂ ಕೌಲು ಕಾಬಾಳೆ ಹುಣಿಸೆ ಹುನುವಲು ಹಾರಗ।
ಅತ್ತಿ ಕೊಡಸಿಗ ಸೀಗೆ ಸೆಳ್ಳು ಸಿರಸಂ ಬೆಲ್ಲ
ವತ್ತ ಬಾಳಿಗೆ ದೇವದಾರು ಬೆಳ್ಳಾಲ ಬೇ
ವೆತ್ತೇಗ ತಪಸಿ ಮೊದಲಾದ ಮರವೆಳೆಗಳಿಂ ತ[1]ದ್ವಿ[1]ಶಾಲಾಗಹನವು ‖ ೫ ‖

ಉಲಿಯನಿದ್ಬಾಯ ಪಾರಿವನಂಚೆ ಕೊಂಚೆ ಕೋ
ಗಿಲೆ ಕೌಜು ಗುಬ್ಬಿ ಕಬ್ಬಕ್ಕಿ ಗಿಳಿ ಗಿಡುಗ ಮಿಾಂ
ಬುಲಿಗ ಲಾವಗೆ ಗೂಗೆ ಕಾಗೆ ಮರಕುಟಿಗ ತುಪ್ಪಳ್ಮೊಗ ಹಂಗ ಹಸುಬ।
ಸಲೆನಲಿವ ಬೆಳುವ ಬೆಳ್ಳಕ್ಕಿ ಬಕ ಗೊರವ ಬಾ
ವುಲಿ ಜಕ್ಕವಕ್ಕಿ ಹೆಬ್ಬಕ್ಕಿ ಕಿಱುವಕ್ಕಿ ಪಿಂ
ಗಲಿ ಟೀವ ಕಕ್ಕರಂ ಮೊದಲಾದ ಪಲವಕ್ಕಿಗಳಿನೆಸೆಯಲಾ ವಿಪಿನವು ‖ ೬ ‖

ನೆಗೆವೆರಳೆ ಲಾಗಿಸುವ ಹುಲ್ಲೆ ಬಿಱುವೇಗದೊ
ಳ್ಚಿಗಿವ ಮರೆ ಗಜರಿ ಘರ್ಜಿಸುವ ಪುಲಿ ಮದಸೊಕ್ಕಿ
ಮಿಗೆ ಮೆಱೆವ ಕಾಡ್ಕೋಣ ಕೆಲವ ಭಲ್ಲೂಕ ಕುತ್ತುರೊಳಡಕಗೊಂಬ ಶಶಕ।
ಮೊಗಮನಡ್ಡೈಸಿ ಘುಡುಘುಡಿಸುವೆಕ್ಕಲ ಚೆಕ್ಕ
ನಗಿದು ಹಾಱುವ ನರಿ ಕರಂಮೊಱೆವ ತೋಳ ಕೂ
ಗೊಗೆವ ಸಾರಂಗ ಮೊದಲಾದ ಮೃಗಕುಲದಿಂದೆ ಕಾನನ ಭಯಂಕರಿಸಿತು ‖೭‖

ಉರಗಂಗಳನ್ನಟ್ಟಿ ಮುಟ್ಟಿ ಮುಂಬರಿವ ಮುಂ
ಗುರಿ ಮೂಷಕಂಗಳನಡರ್ದು ಚೆಲ್ಲಾಟದುಬ್ಬರದಿ ಪಿಡಿ
ದುಱೆನಲಿವ ಕಾಡಬೆಕ್ಕುಗಳು ತರುಕೋಟರಂಬುಗುವುಡುಗಳು।
ಮರದಿಂದ ಮರಕೆ ಲಾಗಿಸುವ ವನಚರ ಮುಸುಕ
ಳಿರದೆ ಪಟದಾಡುತಿರ್ಪ ಣಿಲೆ ಹೇರಣಿಲೆಗಳು
ಪರಿವಿಡಿಯಲೆಸೆಯೆ ನೋಡುತ ತಿರುಜ್ಞಾನಸಂಬಂಧಿ ನಡೆತರುತಿರ್ದನು ‖ ೮ ‖

---

[1] ತ್ವವಿ (ಜ).

ಘುಡುಘುಡಿಸುತಡರುವೆಕ್ಕಲ ಜಡಿವುತಬ್ಬರಿಸಿ
ಹೊಡೆವ ಹೆಬ್ಬುಲಿಯೆರಡಱಡೆಯೊಳತಿಬಳ ಶಬರ
ಕಡುಹೊಯ್ದು ದಾಡೆಯಂ ಕಿತ್ತೆತ್ತಿತೆಡಗಯ್ಯ ಕಡವಾಯೊಳಿಕ್ಕಿ ಮೆಟ್ಟಿ।
ಪಿಡಿದು ಸರ್ಪನೆ ಸೀಳಲಾ ಶಬರಿ ಕಾಣುತೆ
ನ್ನೊಡೆಯ ಕಾನನಧೀರ ಕೌಮಾರರುದ್ರನೆಂ
ದೊಡನೆ ಕೊಂಡಾಡಿ ತೆಗೆದಪ್ಪಿ ತೂಪಿಱದ ಮಚ್ಚಿನ ಭಾವಮಂ ಕಂಡನು ॥೯॥

ಬೆಬ್ಬಳಿಪಿನೊಳ್ಪೆ ಕಳೆಗಂಡುಱೆಪ್ಪಳಿಂದ ಮನ
ಉಬ್ಬಿ ಬಿಲ್ದಿರುವಿಗೆಂಬಂ ತೊಡರ್ಚಿ ಕೆನ್ನೈವರೆ
ನಿಬ್ಬರದಿ ಸೇದಿ ಹೆಮ್ಮೆಳೆಯ ಮಱಗೊಳಲವಂ ಪುಲ್ಲೆ ಕಂಡಡ್ಡನಿಲಲು।
ಉಬ್ಬರಿಗ ನೀನೆಚ್ಚಡೆನ್ನಾಣೆ ಎಂದವನ
ತಬ್ಬಿ ಕಾಲ್ಗೆತ್ತುಗಂಡನನಪ್ಪಿ ಪೂಣ್ಜೆಯವ
ರಿಬ್ಬರೊಪ್ಪಿನ ಭಾವಮಂ ತಿರುಜ್ಞಾನಿ ನೋಡುತ್ತೆ ನಡೆತರುತಿರ್ದನು ॥೧೦॥

ಇಂತನೇಕ ಪ್ರಕಾರದ ಬೇಂಟೆಯೊಳ್ಬರ
ಲ್ತಿಂಥಿಣಿಯ ಕೋಳಾಹಳಂಗಳಂ ನೋಡುತ್ತೆ
ಕಾಂತಾರದೊಳ್ತಿರುಜ್ಞಾನಸಂಬಂಧಿಗಳು ನಡೆತರುತ್ತಿರಲು ಮುಂದೆ।
ಅಂತಕಾಕಾರನ ಪದಸ್ಥಪಾತಕ ಕರುಣ
ವಿಂತಿಲ್ಲದಧಮ ಬಲುಗಳ್ಳ ಮಾತಂಗ ಕಡು
ಪಂ ತಳೆದ ಕೋಪದುಬ್ಬರದಿ ಘುಡುಘುಡುತೆಂದೆನುತ್ತಡ್ಡಗಟ್ಟಿ ನಿಂದು ॥೧೧॥

ಕಡುಬೇಗ ನಿನ್ನೊಳುಳ್ಳೊಡವೆಯಂ ಕೊಡದಿರ
ಲ್ಪಿಡೆ ಕೊರಳ ಕೊಯ್ವೆ ಕಡಿಖಂಡಮಂ ಮಾಳ್ಪೆ ನಿ
ನ್ನೊಡಲ ಬಿಗಿದುಱೆ ನೋಳ್ಪೆನೆಂದು ಮಾತಂಗ ನುಡಿಯಲ್ತಿರುಜ್ಞಾನಿ ನಗುತ।
ನುಡಿದ ನಮಗೇನುಂಟು ಮಗನೆ ಕೇಳ್ನಿನ್ನ ಮನ
ಗಡುಪೆಂತುಟಂತು ಮಾಡೆನೆ ನಿನ್ನ ಪೇರುರದೊ
ಳುಡಿದು ಕಟ್ಟಿದ ದೊಡ್ಡಗಂಟಿದೇನೆಂದತಿಕ್ರಮಿಸಿ ಕೇಳಿದಡೆಂದನು ॥೧೨॥

ಹುಟ್ಟುಗುರುಡಂಗಾರು ಬಣ್ಣಮಂ ಜಗವಱಯೆ
ಕೆಟ್ಟಬಧಿರಗೆ ಪುಣ್ಯಕಥನಮಂ ರಸನಮಱ
ವಿಟ್ಟಾಱಪೋದ ಜೀವಂಗೆ ಷಡುರುಚಿಯ ಕೋವಿದರದೆಂತಱಸಲಹುದು।
ಬಟ್ಟೆಯಂ ಕಟ್ಟಿ ಪಲರಂ ಕೊಂದು ಜೀವಿಸುವ
ಕೊಟ್ಟಗಾಱನು ಪೇಳಲೆಂತಱವೆನಲು ಮನ
ಮುಟ್ಟಿಪೇಳೆನೆ ಶಿವಾಣತಿಯೆಂಬುದಱದು ತಿರುಜ್ಞಾನಮುನಿ ನುಡಿದನಂದು ॥೧೩॥

ಇದು ಮಹಾಲಿಂಗವೆನೆ ಲಿಂಗವೆಂದೇನು ನಾ
ನದ ಬಲ್ಲೆ ಕೇಳ್ಚರಾಚರದ ಲಯುಗಮನವೆಂ
ಬುದಱ ಜನ್ಮಸ್ಥಾನವೀ ಮಾತು ಬಚ್ಚಬಱ ಹುಸಿಗೆ ನೆಲೆಮಾತೆಂದೆನೆ।
ಅದುಬೇಡ ಬಾಲರಾಡುತ್ತೆ ಮೃಣ್ಮಯದಿ ಪುಳಿ
ನದಲಾಗಲೊಂದು ಲಿಂಗಂ ಮಾಡಿ ಯಜಿಸಲೊದ
ವಿದ ಮಹಾಭೂಭುಜತ್ವದಿ ಬಾಳ್ದರೆನೆ ಮಚ್ಚುತಿದು ದಿಟದ ಮಾತೆಂದನು ॥೧೪॥

ಸಾಕ್ಷಿ—

ಕ್ರೀಡಂತಿ ಶಿಶವೋ ಯತ್ರ ಲಿಂಗಂ ಕೃತ್ವಾ ಯಜಂತಿ ಯೇ ।
ಸೈಕತಂ ಮೃಣ್ಮಯಂ ವಾಪಿ ತೇ ಭವಂತಿ ಚ ಭೂಭುಜಃ ॥

ನಿನ್ನ ಪೆಸರೆವುಗಱಿಸದೆನಲು ಮಾತಂಗನೆಂ
ದೆನ್ನೆ ಕೇಳ್ಮಾತಂಗ ತಮ್ಮ ಮೇದಿನಿಯೊಳ್ಮ
ದೋನ್ಮತ್ತ ಮಾತಂಗ ಮರುತವೇಗವೆನಿಪ ಹಯ ಸಂಪೂರ್ಣಚಂದ್ರನಂತೆ ।
ಚೆನ್ನೆಸೆವ ಮುದ್ದುಮೊಗದಾ ಸತಿಯು ಲಿಂಗಮಂ
ನನ್ನಿಯಿಂದರ್ಚಿಸಿದ ಫಲದಿಂದಲಹರೆಂದು
ಸನ್ನುತ ತಿರುಜ್ಞಾನಿ ನುಡಿಯಲಾ ಖಳಶಿರೋಮಣಿ ವಿನಯದಿಂದಲಂದು ॥೧೫॥

ಸಾಕ್ಷಿ—

ಯದ್ವಾರೇ ಮತ್ತ ಮಾತಂಗೋ ವಾಯುವೇಗ ತುರಂಗಮಃ ।
ಪೂರ್ಣೇಂದುವದನಾ ನಾರೀ ಶಿವಪೂಜಾ ವಿಧಿರ್ಯತಃ ॥

ಒಂದು ತಾಣದೊಳು ಕುಳ್ಳಿತು ಮಾತನಾಡ ವೇ
ಳ್ಕೆಂದು ಮಾತಂಗ ಬಲಗೊಳ್ಳಕ್ಕೆ ತಪಸಿಯಂ
ತಂದು ಕೆಂದಳಿರ ತಱಿತಱಿದೊಟ್ಟಿ ಪಚ್ಚವಡಿಸುತ್ತಲಾ ಹಸೆಯ ಮೇಲೆ ।
ಇಂದುಧರನಪರಾವತಾರನದ್ವಯನಿಜಾ
ನಂದನು ತಿರುಜ್ಞಾನಿಯಂ ಮೂರ್ತಿಗೊಳಿಸಿ ತಾ
ನೊಂದಿ ಕುಳ್ಳಿತು ಜಂಗಮಯ್ಯ ಹೇಳಾ ನಿನ್ನ ಮೊದಲ ಮಾತಿನ ಮುಂದನು ॥೧೬॥

ಸಾಕ್ಷಿ—

ಬ್ರಹ್ಮಣಃ ಸೃಷ್ಟಿಕರ್ತೃತ್ವಂ ವಿಷ್ಣೋರ್ದಾನವಮರ್ದನಂ ।
ಸ್ವರ್ಗೇ ಚ ರಾಜ್ಯಮಿಂದ್ರಸ್ಯ ಶಿವಪೂಜಾವಿಧೇಃ ಫಲಂ ॥

ಒಂದಿನಿತು ದಳ ಒಕ್ಕುಡಿತೆ ನೀರಿನಿಂದೆ ಮನ
ಸಂದಿಂದ್ರ ಪದವಿಯಂ ಬಯಸಿ ಪೂಜಿಸೆನಲೊಡ
ವಿಂಡಲದನಂತಿಂತುಟೆನ್ನದಾ ಪದವೀವುದಿಂತು ಲಿಂಗದ ಮಹಾತ್ಮೆ ।

ಸಂದ ಮುನಿವರರ ಪ್ರಮಥಪ್ರಚೆಯ ಮೊದಲಾದ
ರೊಂದಿ ಜಾನಿಸಿ ಯಜಿಸಿ ಧರಿಸಿ ಶೇಷಣಂತು [ಶೇಷವನಾಂತು]
ಕುಂದದತ್ಯಧಿಕ ದೇವತ್ವಮಂ ಪಡೆದರಿದು ಶ್ರುತಿಪುರಾಣೋಕ್ತಮೆನಲು ॥೧೮॥

ಸಾಕ್ಷಿ—

ಕಿಂಚಿದ್ದಳಂ ವಾ ಚುಳಕೋದಕಂ ವಾ ದೇವೇಂದ್ರಲಕ್ಷ್ಮೀಂ ದದತೇ
[ಚ ದಾತುಃ] ಚ ದಾಸೀಂ
ಅದಾನದಾನೇ ಜಗದೇಕ ಬಂಧೋ ಮುಗ್ಧೋ [ಮೂಕೋ] ಭವಾ೯
ಸರ್ವವಿದೇವ ದೇವಃ ॥

*ಪಾಣಿನಿಶ್ಚಕಣಾದಶ್ಚ ಕಪಿಲೋ ಗೌತಮಾದಯಃ
ಪ್ರಸಾದಸೇವನಾಧ್ಯಾನಾದರ್ಚನಾದ್ಧಾರಣಾದಪಿ ॥

ಲೇಸಾದುದೀಲಿಂಗದಂತು ರುದ್ರಾಕ್ಷೆಗಳ
ನ್ಯೆಸುವಂ ತಳೆದುಕೊಂಡಿರ್ಪಿರಿಂತಿದಟಿ ವಿ
ಶ್ವಾಸಗುಣವೇನು ಪೇಳೆನೆ ಸುರೆಯನೀಂಟುವರು ಪಿಶಿತಹಾರಂಗೊಂಬರು ।
ಹೇಸದಲನಾಮಿಾಕಸಂಗಸುಖವೆ ಸದಾ
ವಾಸವಾಗಿರ್ಪ ಜೀವಿಯ ಶಿರದಿ ರುದ್ರಾಕ್ಷೆ
ಸಾಸಿರವದೇಕೆ ಕೇಳೊಂದಿರಲು ಕಳವುದವ ಮಾಳ್ಪ ಕಡುಪಾತಕವನು ॥೧೯॥

ಸಾಕ್ಷಿ—

ಖಾದನ್ಮಾಂಸಂ ಪಿಬನ್ಮದ್ಯಂ ಸಂಗತ್ಯಾಂತ್ಯಜಜಾತಿಭಿಃ
ಸದ್ಯೋ ಭವತಿ ಪೂತಾತ್ಮಾ ರುದ್ರಾಕ್ಷೇ ಶಿರಸಿ ಸ್ಥಿತೇ ॥

ಮಾತಂಗ ಕೇಳೊಂದು ರುದ್ರಾಕ್ಷೆಯಂ ಬಲುಕಿ
ರಾತ ತನ್ನಯ ಸಾರಮೇಯನ ಕೊರಲ್ಗೆ ಸಲೆ
ಕೂತು ಕಟ್ಟಿರುತಿರಲು ಮೃತವಾಗಲದಕಂದು ರುದ್ರತ್ವವಾದುದು ಗಡ ।
ಭೂತಳದೊಳೆಸೆವ ಮನುಜಾಳಿಗಳಿಗಪ್ಪುದಿದು
ನೀತ ಹುಸಿಯಲ್ಲ ತಥ್ಯದ ಮಾತಿದೆಂದು ಮನ
ವೋತು ಸಂತೋಷದಿ ತಿರುಜ್ಞಾನ ಸಂಬಂಧಿ ಬೋಧಿಸುತ್ತಿರಲು ಮತ್ತೆ ॥೨೦॥

ಸಾಕ್ಷಿ—

ಕಂಠೇ ರುದ್ರಾಕ್ಷಮಾಶ್ರಿತ್ಯ ಶ್ವಾಪಿ ವಾ ಮ್ರಿಯತೇ ಯದಿ
ಸೋಪಿ ರುದ್ರತ್ವಮಾಪ್ನೋತಿ ಕಿಂಪುನರ್ಮಾನುಷಾದಯಃ ॥

---

* ಈ ಶ್ಲೋಕ ಅಸಂಪೂರ್ಣವಾಗಿದೆ

ಅಂತಹುದು ರುದ್ರಾಕ್ಷೆ ಮಹಿಮೆವೇಳಲ್ಕೆನಗೆ
ಸಂತಸಮದಾದುದು ವಿಭೂತಿಯಂ ಧರಿಸಿರ್ಪ
ರೆಂತದಱ ಫಲವೇನು ಬ್ರಹ್ಮಚಾರಿ ಗೃಹಸ್ಥ ತಪಸಿ ವಾನಪ್ರಸ್ಥನು ।
ಮುಂತಾದರೆಲ್ಲರಿಡಲವರ ಘನ ಪಾತಕಗ
ಳಂತೆ ಪರಿಶುದ್ಧಾತ್ಮರಂ ಮಾಡಿ ರಾಜಿಪುದಿ
ದಂ ತಿಳಿಯೆನುತ್ತುಱೆ ತಿರುಜ್ಞಾನಸಂಬಂಧಿ ಮಾತಂಗನೊಡನೊರೆದನು ॥೨೧॥

ಕಾಲಗ್ನಿರುದ್ರೋಪನಿಷತ್––

ಬ್ರಹ್ಮಚಾರೀ ಗೃಹಸ್ಥೋ [ವಾ] ವಾನಪ್ರಸ್ಥೋ ಯತಿ ರ್ಯದಿ
ಉಪಪಾತಕ ಕೋಟಿಭ್ಯೋ ಮುಕ್ತೋಮುಕ್ತೋ ನ ಸಂಶಯಃ ॥

ಸುರೆಯನೀಂಟುವರು ಗುರುದಾರಕ್ಕೆ ಗಮಿಸುವರು
ನರಕಹೇತುಗಳು ಬ್ರಹ್ಮೇತಿಕಾರರುಗಳೆಂ
ಬರು ವಿಭೂತಿಯನಲ್ಪಮಂ ಧರಿಸೆ ಮತ್ತದಱೊಳೊರಗಿಕ್ಕುವವರ ಪಾಪ ।
ಹರದು ರುದ್ರತ್ವವಹುದೆಂದು ಸರ್ವೋಕ್ತದಿಂ
ದೊರೆವುತದು ನನ್ನಿ ನಿಶ್ಚಯಿಸು ಮಾತಂಗ ಬಿ
ತ್ತರಿಸಿ ಮತ್ತೇನನುಸುರಲ್ವೇಳ್ವೆ ನುಡಿಯೆಂದನುರುತಿರುಜ್ಞಾನಿಯಂದು ॥೨೨॥

ಶಾತಾತಪಸ್ಮೃತಿಯಲ್ಲಿ––

ಸುರಾಂ ಪೀತ್ವಾ ಗುರುದಾರಾಂ ಶ್ಚ ಗತ್ವಾ
ಸ್ತೇಯೋ(ಯೀ) ಭೂತ್ವಾ ಬ್ರಹ್ಮಹತ್ಯಾಂ ಚ ಕೃತ್ವಾ।
ಭಸ್ಮಚ್ಛನ್ನೋ ಭಸ್ಮಶಯ್ಯಾಶಯಾನೋ
ರುದ್ರಂ ಧ್ಯಾಯೇನ್ಮುಚ್ಯತೇ ಸರ್ವಪಾಪೈಃ ॥

ಏನ ಪೇಳುವೆನೆನ್ನ ಗುರುವೆ ನಿಮ್ಮಿಂದಲ
ಜ್ಞಾನವೆನ್ನಂ ಬಿಟ್ಟುದಾಸುರತ್ವದಿ ಬೆರೆದ
ಮಾನಪೆ ದಯಾಗುಣದೊಳೊಗ್ಗಿ ನಿಮ್ಮಡಿಗೆಸಲುಸಂದುದದನೇನೆಂಬೆನು ।
ಮಾನಿನಿಯರಂ ಪುತ್ರ ಮಿತ್ರ ತಾಯ್ತಂದೆಗಳ
ನೇನೆಂದು ಬಗೆಯದೀ ಚಿತ್ತ ನಿಮ್ಮಂ ಬಿಡದ
ಲಾನಿರ್ಪುದೊಂದು ಸುಖಪದನೀವುದೆಂದು ಮೈಯಿಕ್ಕಲಾಮಾತಂಗನು ॥೨೩॥

ಏಳೇಳು ಮಾತಂಗ ಎನಲೆನ್ನ ಬಿನ್ನಪಂ
ಗೇಳಲೆದ್ದಪೆ ಕೇಳಿದಪೆವೀಗಲೀಗಲೆನೆ
ಬಾಳಿದೆನೆನುತ್ತೆದ್ದು ನಿಂದು ಕೈಮುಗಿದು ಗುರುನಾಥ ನೀನೀಗಲೆನ್ನ

ಕೀಳುಭವರೋಗಮಂ ಪಱಿದು ದುಃಕರ್ಮಪದ
ದಾಳಿಯಂ ಬಿಡಿಸಿ ಲಿಂಗವನಿತ್ತು ನಿಜಪದನ
ಮೇಳದೊಳಗಿರ್ಪ ಪದವೀವುದೆಂದೆನೆ ತಿರುಜ್ಞಾನಸಂಬಂಧಿಯೊಲಿದು ॥೨೪॥

ಕರುಣ ವೇಧಾದೀಕ್ಷೆಯಿಂ ನಿರೀಕ್ಷಿಸಲಖಿಳ
ಕರಣೇಂದ್ರಿಯಂಗಳರಿಷಡುವರ್ಗವೆಣಿಕೆಗು
ಬ್ಬಳ(ರ)ವಿಕಾರಂಗಳಿತ್ಯಾದಿ ನಾನಾವಿಧದ ಜೀವತ್ವದವಗುಣಗಳು ।
ಹರದು ಪರಮಾತ್ಮಮಯನಾಗಿ ಶುದ್ಧಾಂಗವೆ
ತ್ತಿರೆ ಕಂಡು ವರತಿರುಜ್ಞಾನಿ ಮಾತಂಗನಂ
ಕರದು ಕುಳ್ಳಿರಿಸಿ ಭೂತಿಯ ಧರಿಸಿ ಶಿರದಿ ಕರವಿಟ್ಟು ಸದ್ಭಾವದಿಂದ ॥೨೫॥

ಉತ್ತರೋತ್ತರ ಚಿತ್ಕಲೆಯನು ಲಿಂಗದೊಳು ಬೆರ
ವುತ್ತೆ ಸತ್ಕ್ರಮವಿಧಾನಂಗಳಿಂ ಯಜಿಸಿ ಬಲ
ವೆತ್ತ ಮಾತಂಗಂಗೆ ಪರಮಹರುಷದೊಳಿಟ್ಟು ಮಂಥರಿಸಿ ವರಮಂತ್ರವ ।
ಚಿತ್ತ ಕೂರ್ತುಭಯ ಕರ್ಣದೊಳೊಯ್ಯನುಸುರಿಸಲೆ
ಬಿತ್ತರಿಸಿ ಪರಮಾನುಭವವಿಲಾಸಮನಱಿಪಿ
ಸತ್ತುಚಿತ್ತಾನಂದಮಯ ತಿರುಜ್ಞಾನಸಂಬಂಧಿ ಮತ್ತಿಂತೆಂದನು ॥೨೬॥

ಪೋಗವೇಳ್ಕಿನ್ನಾವು ಮಾತಂಗ ತಮ್ಮ ಎನ
ಲಾಗ ಜಯ ಜಯ ಜೀಯ ಯೆಂದು ಬಿಲ್ಲಂಬನೊ
ಕ್ಕೆಗೊಂಡು ಕಟ್ಟಿದ ಸುರಗಿವೆರಸಿ ಬಲಗಯ್ಯಲಯ್ಯನ ಕಮಂಡಲವನು ।
ರಾಗದಿಂ ಪಿಡಿದು ಗುರುನಾಥ ಚಿತ್ತೈಸೆಂದ
ನಾ ಗುಣಾಗ್ರಣಿ ತಿರುಜ್ಞಾನ ಸಂಬಂಧಿಗಳು
ಬೇಗನೆದ್ದೆಲ್ಲ ಖಳರಂ ಕಳುಪಿ ಭೋರನೈತರುತಿರ್ದರೇಂಪೊಗಳ್ವೆನು ॥೨೭॥

ಕುಂದದುಱೆ ಪಲಯೋಜನಂಗಳಂ ಕಳಿದು ನಲ
ವಿಂದವಿರ್ವರು ಬರುತಿರಲ್ಕಾಲುವಾದಿಯಿಂ
ಮುಂದೆ ತತ್ಕಾಲಗುರ್ವಿಸೆ ತಿರುಜ್ಞಾನಿ ಕಣ್ಣಿಡೆ ಬೀಳಲಾಗಿ ಬೆಳದು ।
ಅಂದವೆತ್ತಿರಲೂದುದಂಬೆಲರಿನೊಗ್ಗುಗಂ
ಡೆಂದ ಮಾತಂಗ ಮದ್ಗುರುನಾಥ ನಿಮ್ಮಡಿಗ
ಳೊಂದಿ ಚಿತ್ತೈಸುವರಿದೇ ತಾಣವೆಂದಾ ಕಮಂಡಲವನಿಳುಹಿ ಪರಿದು ॥೨೮॥

ತಳಿರ ತಿಱಿತಂದು ಹಾಸೆಯ ಹಾಸಿ ಮೇಲೆ ನಿ
ರ್ಮಳಗುರುವ ಮೂರ್ತಿಗೊಳಿಸುತ್ತೆ ವರ ಪರಮಹೋ
ತ್ಪಲಮುಮಂ ಪ್ರಕ್ಷಾಲನಂಗೈದು ತೀರ್ಥಮಂ ಧರಿಸಿ ದೇಶಿಕ ನೀವಿರೆ ।

ಘಳಿಲನಾ ಪಳ್ಳಿಯಂ ಪೊಕ್ಕು ಭಕ್ತರ ಮಠಂ
ಗಳಲಿ ಬೋನವನನುವಿನಿಂ ತಪ್ಪೆನೆಂದು ಮಂ
ಗಳಕಾರ್ಯಬಿನ್ನೈಸೆ ಪೋಗೆನಲ್ಬಿಲ್ಲಂಬನಿರಿಸಿ ತಾ ಸುರಗಿವೆರಸಿ ॥೨೯॥

ಭರದಿ ಬಂದಾ ಪಳ್ಳಿಯಂ ಪೊಕ್ಕು ಮಾತಂಗ
ನಿರಗಿ (ಲಿ) ತ್ತವಂ ತಿರುಜ್ಞಾನಿಗಳಿಗಾದ ದು
ಸ್ತರಮದೇನೆಂಬೆನೋವೋವೋ (+ವೊ) ಶಿವಮಹಾ[1]ದೇವನೆ[1] ಕಳ್ಳರ ಹಜ್ಜೆಯ ।
ಪರಿಕಿಸುತ ಬೆಂಬುಯ್ಯಲೊತ್ತಿ ನಡೆತಂದಯ್ಯ
ನಿರವನಾ ಬಿಲ್ಲಂಬುಗಂಡು ಭಾವಿಸದೆ ಶಿರ
ವಱಿದೊಯ್ದರಕಟಕಟ ನಿಃಕರುಣ ಪಾತಕರನೇಕೆ ಹುಟ್ಟಿಸಿದೆ ಶಿವನೆ ॥೩೦॥

ಇಂತಾಗಲೆನ್ನಯ್ಯ ಕಡುಹಸಿದ ಬಳಲಿ ತಾ
ನೆಂತಿರ್ದನೋ ಬಳಿಯಲಾರಿಲ್ಲವೆನ್ನ ಮನ
ಮುಂತುಗೆಟ್ಟಾಂದೋಳಿಸುತ್ತಿದೆ ಮಹಾದೇವ ಬಲ್ಲನೆನುತತಿವೇಗದಿ ।
ಅಂತಕಾಂತಕರೂಪನೆಡೆಗೈದೆ ಬಂದು ಕಂ
ಡಂತೆ ಹವ್ವನೆ ಹರಣಹಾರಿ ಮೈಮಱೆವಟ್ಟು
ನಿಂತ ನಿಲವಿಂದೆ ಮಾತಂಗನಪ್ಪಳಿಸಿ ಬಿರ್ದಳುತಿರ್ದನೇವೊಗಳ್ವೆನು ॥೩೧॥

ಏನಾದುದಯ್ಯ ಮದ್ಗುರುವೆ ನಿನ್ನಂ ಬಿಟ್ಟು
ನಾನತ್ತ ಹೋದೆನಯ್ಯೋ ಬೆಂದೆನಯ್ಯಯ್ಯೊ
ಹಾನಿಯೆನಗಾದುದಾನೆಂತು ಸೈರಿಸಲಕ್ಕುವೆಂದೆಯಾನಿಲ್ಲಿರ್ದಡೆ ।
ಮಾನವಾಸುರದೇವರಡರೆ ನಿಮ್ಮಯ ಪದ
ಧ್ಯಾನದಿಂದಱೆಯಟ್ಟಿ ಕೊಲುವೆನಕಟಕಟ ನಾ
ಹೀನತರಪಾಪಿಯಾದೆಂ ಗುರುವೆ ಗುರುವೆ ಎಂದಳುತಿರ್ದ ಮಾತಂಗನು ॥೩೨॥

ಅಯ್ಯ ಪಾತಕರು ಬರುತಿರೆ ಕಾಣುತೇನೆಂದೆ
ನ (ಯ) ಯ್ಯ ಕೈದುಱೆಹೊಯ್ದೆಳೆಯುವಾಗಲೆಂತಿರ್ದೆ
ಯಯ್ಯ ಬಾಯಿಗೆ ಬಂದ ಪರಿಯ ಕಾಳ್ಗೆಡದು ಜಡಿವಾಗಲೆಂತಾದೆಯಯ್ಯ ।
ಅಯ್ಯೋ ಮಹಾದೇವ ಶಿರವರಿಯೆ ತಾಳಿದೆಂ
ತಯ್ಯ ನಾನಿದ ಕಾಣುತೆಂತು ಸೈರಿಸುವೆನೆಂ
ದಯ್ಯ ಅಯ್ಯಾ ಗುರುವೆ ಗುರುವೆ ಎಂದತ್ತು ಹೊರಳುತ್ತಿರ್ದ[2]ನವನು[2] ॥೩೩॥

ಆರೋಗಿಸುವರನ್ನವಂ ತಂದೆನೆಲೆ ಗುರುವೆ
ತಾರೆಂಬಡೆಲ್ಲಿ ಮದ್ಗುರುವೆ ನಿಮ್ಮುದರ ಬೆಂ
ಗೋರಂತೆ ಪತ್ತಿತಯ್ಯೋಶಿವಾ ಎಂದೆನುತ್ತಳಲಿ ಸಂತೈಸಿಕೊಂಡು ।

---

[1] ದೇವ (?) [2] ನು (?)

ಸಾರತರಮಪ್ಪ ಮೃಣ್ಮಯದಿ ಶಿರಮಂ ರಚಿಸು
ತಾರೈದು ಮುಂಡಮಂ ಕುಳ್ಳಿರಿಸುತಂ ಶಿರವ
ಸೇರಿಸುತ್ತೋವೊ ಪೇಳತೊಲಗಿ ನಿತ್ತಲಗುಗೊಂಡೆಂದನಾ ಮಾತಂಗನು ॥೩೪॥

ಗುರುನಾಥ ಪರಿಪೂರ್ಣಮಯಮಪ್ಪ ವಸ್ತುವಿ
ನ್ನಿರಲೊಂದು ತಾಣವೆಂದುಂಟೆ ನಿಮ್ಮಂಗವೀ
ಶಿರಪದಕ್ಕೆಡೆದೆಱಪೆ ನೀವು ಕಾಣಿಸಿದ ಕಾಣ್ಕೆಯ ಭಾವ ಹುಸಿಯಾದರೆ ।
ಇರೆನಿಲ್ಲಿ ನಿಮ್ಮಡಿಗಳಾಣೆ ಎಂದುಱೆ ತನ್ನ
ಕೊರಳಿಗಲಗನ್ನಿಕ್ಕಲಸು ಗಮ್ಮನೈದಿ ಬರೆ
ವರತಿರುಜ್ಞಾನಿ ನಿಜಮುಖದೋಱಿ ಹೋ ನಿಲ್ಲು ನಿಲ್ಲು ಮಾತಂಗ ಎನಲು ॥೩೫॥

ಕಂಡು ಕಡುತವಕದಿಂದಡಿಗೆಱಗಿ ನಿಲೆ ಶಿರವ
ಕೊಂಡೊಯ್ದು ಖಿಳಜಾತಿಗಳಿಗಪಜಯ (೦) ದೋಱು
ತಂಡಲೆಯಲಿದಱಿಂದಲಾದುದೆಂದಱಿದು ತತ್ಕ್ಷಣದಿ ಶಿರವನು ಸುರಿಗೆಯು ।
ಮುಂಡವಿದ್ದೆಡೆಯಲಿರಿಸುವೆನೆಂದು ಬಂದು ತಲೆ
ಗಂಡಿದಿರೊಳಿರಿಸಿ ಜಾಱಿದೊಡೆ ಮಾತಂಗ ಖತಿ
ಗೊಂಡೈದಿ ಬಂದುತ್ತಮಾಂಗಮಂ ಕಂಡು ಶರಣೆನುತ ಸದ್ಭಾವದಿಂದ ॥೩೬॥

ತಂದು ಗುರುನಾಥ ನಿಮ್ಮುತ್ತಮಾಂಗಂ ಬಂದು
ದೊಂದುಪಾಯವನು ಚಿತ್ತೈಸೆನಲ್ಮಾತಂಗ
ಗೆಂದ ಕೇಳ್ಮಗನೆ ನಿನ್ನಿಂದಲೆನ್ನಸುಶಿರಂ ಬಂದುದಿನ್ನೇತಕಿದಱ ।
ದಂದುಗವೆನುತ್ತೊಂದು ಬಳಿಯ ಭೂಗತವ ಮಾ
ಡೆಂದು ನುಡಿಯಲು ಮಹಾನೊಂದು ಶೋಕಾಗ್ನಿಯಿಂ
ಬೆಂದನೆಲೆ ದೇಶಿಕೋತ್ತಮನೆಮ್ಮ ಪದದ ಮಹಿಮೆಯನು ಚಿತ್ತೈಸೆನುತ್ತ ॥೩೭॥

ಭರದಿ ಮೇಲ್ಮಣ್ಣ ತಂದೊಪ್ಪದಿಂ ಮಾತಂಗ
ಶರಿರಮಂ ಮಾಡಿ ಕುಳ್ಳಿರಿಸಿ ವರ ಶಿರಸಮಂ
ನಿರತದಿಂದಂದು ಹೊಂದಿಸಿ ಗುರುವಿಗೆಱಗಿ ಕಿತ್ತಲುಗುಗೊಂಡುಬ್ಬಿ ಕೊಬ್ಬಿ ।
ಪರಪರಂಚಿತ್ತದೇಶಿಕನೈದೆನನುವ ಬಿ
ತ್ತರಿಸಲೆಡೆಯಿಲ್ಲ ನೀ ಬಲ್ಲೆ ಮತ್ತೇಳದಂ
ತಿರಲೆನ್ನ ತಲೆಯು ನಿಮ್ಮಡಿಗೀವೆನೆಂದು ಮಿಗೆ ಮಾತಂಗ ನುಡಿಯಲೊಡನೆ ॥೩೮॥

ಹರಣಬಂದಯ್ಯನೊಪ್ಪಂಬೆತ್ತು ನಿಲಲು ಕಂ
ಡರರೆ ಗುರುರಾಯ ಮಝು ಭಾಪು ಕರುಣಾಕರನೆ
ಶರಣು ಶರಣೆನುತಲಾನಂದಾಶ್ರು ಸುರಿಯೆ ಪುಳಕಗಳೇಳಲರ್ವ ರಡಿಗೆ ।

ಪರಮಹರುಷದಿ ಮಗುಳೆ ಮಗುಳೆಬಿಗಿ ಹೊರಳಿ ಮ
ತ್ತಿರದೆ ಕೊಂಡಾಡಿ ಕುಣಿದಾಡುತ್ತ ಮಾತಂಗ
ನಿರೆ ತಿರುಜ್ಞಾನಸಂಬಧಿಗಳು ತಾವಿರ್ವರೊಲ್ದು ನುಡಿದರದೆಂತೆನೆ ॥೩೯॥

ಎನ್ನ ಶಿರಮಂ ಪಡೆದ ನನ್ನಯ್ಯನೀತನೆಂ
ದೆನ್ನ ಚೇತನವಿತ್ತ ನನ್ನಯ್ಯನೀತನೆಂ
ದೆನ್ನಹರಣವನು ಕೊಟ್ಟಾ . . . . ।
ನನ್ನಯ್ಯನೀತ ನನ್ನಯ್ಯ ನನ್ನಯ್ಯನೆಂ
ದುನ್ನತೋತ್ಸಾಹದಿಂ ಪೆಸರಿಟ್ಟು ಕರವುತಿರೆ
ನನ್ನಿಯಾಯ್ತಿರೇಳು ಜಗದೊಳದು ಮೊದಲಾಗಿ ನನ್ನಯ್ಯ ಪೆಸರಾದುದು ॥೪೦॥

ಗುರುಕರುಣವಡೆದುಱೆ ಸನಾಮಮಂ ಪಡೆವುತಿ
ರ್ವರ ಪಾದಪೂಜೆಗೈದೆಬಿಗಿ ವರತೀರ್ಥಮಂ
ಧರಿಸಿ ಬೋನವನು ತಂದೆಡೆಮಾಡಿ ಲಿಂಗಕರ್ಪಿಸುತಲಾರೋಗಣೆಯನು ।
ಹರುಷದಿಂ ಮಾಡಲುಳಿದಿರ್ದ ಪ್ರಸಾದಮಂ
ಪರಮಾನುರಾಗದಿಂದಾರೋಗಿಸುತ್ತೆ ಕರ
ಸರಸಿರುಹಮಂ ತೊಳೆದು ನನ್ನಯ್ಯ ಶರಣೆಂದು ನಿಂದಿರಲ್ಕಂತೆಂದರು ॥೪೧॥

ಕೇಳು ನನ್ನಯ್ಯ ಪಯಣಂಗೈವುದೆಂದೀರ್ವ
ರೇಳಲು ಹಸಾದವೆಂದೆನುತೆ ಸಂವರಿಸಿಕೊಂ
ಡಾಳುಗಳ ದೇವನೊಡಗೂಡಿ ಭರದಿಂದಿರದೆಯೆಯ್ತರುತ್ತಿರಲು ಮುಂದೆ।
ಹೇಳಲಗಣಿತಮಹಿಮೆವೆತ್ತ ಕಲ್ಯಾಣದೊಳು
ಭಾಳಾಕ್ಷಬಸವೇಶ ಶಿವಗಣಂಗಳುವೆರಸಿ
ಮೇಳದಿಂ ತನ್ನ ಗೇಹದೊಳು ಶಿವಪೂಜೆಯಂ ಮಾಡುತಿರಲೇವೇಳ್ವೆನು ॥೪೨॥

ವರತಿರುಜ್ಞಾನಿಗಳು ನನ್ನಯ್ಯನಿವರುಮೂ
ವರು ಲಿಂಗದೊಳ್ತೊಳಗಿ ಬೆಳಗಿ ತೋಱಲ್ಕಂಡು
ಹರಹರಾ ಶಿವಮಹಾದೇವ ಸಂಗಮನಾಥ ನಿನ್ನ ಭಾವದ ಲೀಲೆಯ ।
ಪರಿ ವಾಗ್ಮನಾತೀತನೆಂದು ಮಿಗೆ ಕೊಂಡಾಡು
ತಿರಲು ಸರ್ವಗಣಂಗಳಿಷ್ಟಸಂದೋಹದೊ
ಳ್ಭರಿತರಾಗಿರಲೊರ್ವರೊರ್ವರ ಮೊಗಂ ನೋಡಿ ಬಸವೇಶನೊಡನೆಂದರು ॥೪೩॥

ಬಸವದಂಡೇಶ ನೀವೇನ ಕಂಡಾಶ್ಚರ್ಯ
ದೆಸಕಬಟ್ಟಪಿರೆನಲ್ನೀವು ಕಂಡಿರ್ಪಿರಿಂ
ದೊಸದಿಲ್ಲಗೈತಪ್ಪ ಮೂವರೊಳಗೊರ್ವನ ಮೊಗಂ ಕರಿದು ಮತ್ತೊರ್ವನ ।

ಎಸಕ ಮ್ಮೆ ಕರಿದವರ ಭಾವಿಸಿದರೊರ್ವನೆಂ
ದುಸುರಲಂತಹುದು ಜಯಜಯ ಎನುತ್ತೈದೆ ನಂ
ದಿಸಲು ವಂದಿಸಿ ದಂಡನಾಥನಿದಿರ್ಗೈತಪ್ಪ ಸಂಭ್ರಮವನೇವೊಗಳ್ವೆನು ॥೪೪॥

ಕರಡೆ ಕೌಸಾಳ ನಿಸ್ಸಾಳ ತಮ್ಮಟೆ ಭೇರಿ
ಮುರಜ ಗಿಡಿಬಿಡಿ ಕೊಂಬು ಕಹಳೆ ಮೊದಲಾದ ವಿ
ಸ್ತರದ ನಾನಾವಾದ್ಯಸಂಭ್ರಮಾಡಂಬರದೊಳುರು ಪುರಾತನರು ಸಹಿತ।
ಎರಡನೆಯ ಶಂಭು ಬಸವೇಶನಾನಂದದಿಂ
ಬರುತಲಿದಿರೊಳ್ಮೊವರಂ ಕಂಡು ಶಿವಗಣಂ
ವೆರಸಿ ವಂದಿಸಿ ನಿಂದು ಕೈಮುಗಿದು ಕೊಂಡಾಡುತವರೊಳೊಲಿದಿಂತೆಂದನು ॥೪೫॥

ದೇವರೆಲ್ಲಿಂದ ಚಿತ್ತೈಸಿದಿರಿ ನಿಮ್ಮಿರದ
ಭಾವವನೊಡರ್ಚವೇಳ್ಕೆನ್ನೊಡನೆ ಎಂದುಸುರ
ಲಾವು ಹೊಯ್ಸಣದೇಶದಿಂ ಬರುತ್ತಿರಲೆಡೆಯೊಳೆಮ್ಮ ಶಿರವಜಿದೊಯ್ಯಲು।
ಓವಿ ಮುಂಡಕ್ಕೆ ಶಿರಮಂ ಪಡೆದ ಮಚ್ಛರ
ಕ್ಕೋವೊ ಮುಂಡವ ಪಡೆದ ನನ್ನಯ್ಯನೀತನೆಂ
ದಾ ವರ ತಿರುಜ್ಞಾನಿ ನುಡಿಯೆ ಬಸವೇಶ ಶಿವಗಣವೃಂದಸಂತಸದೊಳು ॥೪೬॥

ಇತ್ತ ಬಾ ನನ್ನಯ್ಯ ನನ್ನಯ್ಯ ಎಂದು ಪಲ
ರಿತ್ತ ನನ್ನಪ್ಪ ಬಾ ನನ್ನಪ್ಪ ಎಂದು ಕೆಲ
ರಿತ್ತ ಬಾ ನನ್ನಣ್ಣ ನನ್ನಣ್ಣ ಎಂದೆಲ್ಲರೆತ್ತಿ ಮುದ್ದಾಡುತಿರಲು।
ಉತ್ತರದಿಶಾಭಾಗದಿಂದ ಪುಷ್ಪಕವಿಳಿಕೆ
ವೆತ್ತು ಬರಲೊಡನೆ ಹೂಮಳೆ ಸುರಿಯಲಭವಗಣ
ಚಿತ್ತಗೊಟ್ಟಿರೆ ಬಸವಭದ್ರನುಂ ಬೆರಸಿ ತತ್ಸಮಯದೊಳದೇನೆಂಬೆನು ॥೪೭॥

ಗಗನದಿಂದುಗಿದು ಛರಿ ಛರಿ ಛಟ ಛಟೆಂದು ಧ್ವನಿ
ಯೊಗೆದು ಕೆಂಗಿಡಿಗೆದಱಿ ಘುಡುಘುಡೆಂದೆಱಗಿ ನೋ
ಳ್ಪೊಗುಮಿಗಿಲ ನೋಟದ ಜನಂಗಳಸುಗಳೆಯೆ ದಿವ್ಯಪ್ರಭಾಪುಂಜ ಮುಸುಕೆ।
ಸಗುಣ ಬಸವೇಶ ಮೊದಲಾದ ಶಿವಗಣವೃಂದ
ನಗೆಮೊಗದಿ ಕೊರ್ಬುತುರ್ಬುತ್ತೆ ತಾವೆಲ್ಲ ಕೈ
ಮುಗಿಮುಗಿದು ಜಯಶರಣು ಶರಣೆನುತಲಾನಂದದಿಂದೊಂದಿರಲ್ಕೆ ಬಳಿಕ ॥೪೮॥

ವರಜಟಾಜೂಟ ಶಶಿಕಳೆ ನಿಟಿಲನೇತ್ರ ಭಾ
ಸುರಪಂಚವದನ ಫಣಿಗುಂಡಲಂ ಕರಿಗೊರಳ
ಸುರಶಿರೋಮಾಲೆ ದಶಭುಜ ಭಸಿತಲೇಪನಂ ಪುಲಿಚರ್ಮದುಡಿಗೆವೆರಸಿ।

ಅರರೆ ದೇವರದೇವ ನಿಜರೂಪಮಂ ತೋಱ
ವರತಿರುಜ್ಞಾನಿಗಳ ಪುಷ್ಪಕದೊಳಿರಿಸಿ ನಿ
ತ್ತಿರಲು ನನ್ನಯ್ಯ ಧರಣಿಯೊಳಡಂಗೆಡದು ಬಂದಡಿಗೆಱಗಲಭವನೆಂದ ॥೪೯॥

ಹಿರಿದು ಬಳಲಿದೆಯಲಾ ನನ್ನಯ್ಯ ಕೇಳಿನ್ನ
ಪರಿ ಲೇಸು ಲೇಸು ಮೆಚ್ಚಿದೆವೆನುತ್ತಾನಂದ
ಕರನು ತೆಗೆದಪ್ಪಿ ಮುಂಡಾಡಿ ಕೊಂಡಾಡಿ ಪೊಗಲೊಳ್ತುಳಿಯೆ ಶಿವಗಣಕ್ಕೆ।
ಶರಣೆನಲು ಪುಷ್ಪಕಂಗೂಡಿ ಕೈಲಾಸಕಂ
ದಿರಲೊಯ್ಯಲಿತ್ತ ಬಸವೇಶ ಮೊದಲಹ ಪುರಾ
ತನರು ಸಂತಸವೆತ್ತುಘೋ ಉಘೋ ನನ್ನಯ್ಯ ಶರಣುಶರಣೆನುತಿರ್ದರು ॥೫೦॥

ಕಂಡಿರೇ ಬಸವದಂಡಾಧೀಶ ಲೋಕದೊಳು
ಖಂಡೇಂದುಧರನ ಭರವೆತ್ತ ಮಾನವರಳಿದು
ದಿಂಡುಗೆಡವುದಿದೆತ್ತಲೆನೆ ಪುರಾತನರದಂತಲ್ಲ ತನ್ನಯ ಲೀಲೆಯು।
ಕಂಡು ಕಂಡವರಱಿವರೆಂದು ಮರಪಿಟ್ಟನಸು
ಗೊಂಡುದಿಲ್ಲೆನುತವೆಲ್ಲರ ನಿ[1]ರೀ[1]ಕ್ಷಿಸಲ್ಕೆದ್ದು
ತಂಡತಂಡದಿ ನಿಂದುಘೋಉಘೋ ಶರಣು ಶರಣೆನುತಿರ್ದುದಖಿಳಜನರು ॥೫೧॥

ಪಲವಾದ್ಯವೊಸಗೆ ಶಿವಗಣ ವೊಲ್ದು ನಡದು ಬರೆ
ಸಲೆ ಶರಣರೆಲ್ಲ ಕಲ್ಯಾಣದೊಳ್ಗುಡಿಗಟ್ಟಿ
ನಲಿದು ಪುರಜನವಿದಿರ್ಗೊಳೆ ನಿಂದಕರ್ಕುಂದೆ ಪರಸಮಯ ಸೋಜಿಗವೆನೆ।
ಸುಲಲಿತ ಸದಾಚಾರ ಶರಧಿವರ್ಧನನು ನಿ
ರ್ಮಳಚಂದ್ರ ಬಸವೇಶ ತನ್ನ ನಿಜಮಂದಿರವ
ನೊಲವಿನಿಂ ಪೊಕ್ಕನಾನಂದದಿಂದೆಂದು ನಂದೀಶ ಪ್ರಮಥರ್ಗೊರೆದನು ॥೫೨॥

---

[1] ರಿಕಿ (?)

ಅನುಬಂಧ ೪

ಸೂಚನೆ.—

ತೊನಸಿ ಸೌಗಂಧಿನಿಯ ನೊತ್ತಿತೆಂದಿಪ್ಪವಂ
ಘನ ಬಸವಗೀಯೆ ಚರಲಿಂಗವಾಪೇಕ್ಷಿಸಲ್
ವಿನುತ ಲಿಂಗಂಗೂಡಿ ದಂಡೇಶನೊಳ್ಬೆರೆದ ಸತ್ಯನಾಥನದೆಂತೆನೆ ।

ವರವೀರಶೈವಸಿದ್ಧಾಂತಸಾಕಾರವೆ
ತ್ತರು ಶರಣರವಧರಿಸಿ ಧರೆಗಧಿಕಕಲ್ಯಾಣ
ಪುರದ ಮಹಿಮಾಮಹೋನ್ನತೆಯ ರಚನಾವಿಲಾಸದ ಸೊಬಗಿಗೆ ।
ಹರುಷ ಮಿಗೆ ಹೊಗಳಲಹಿರಾಜಗರಿದಿರದೆ ನೋ
ಳ್ಪರೆ ಸುರಪಗರಿದು ಕೈವೊಯ್ದೆಣಿಸೆ ಸಹಸ್ರಕರ
ಗರಿದೆನಲ್ಚಾತುರ್ದಶಂ ಭುವನದೊಳು ಕೀರ್ತಿವಡೆದು ರಾಜಿಸುತಿಪ್ಪುದು ॥೧॥

ಆ ಪುರದೊಳೆಸೆವ ಜಂಗಮದೊಳತ್ಯಧಿಕ ನಿ
ರ್ಲೇಪ ಸೂಳೆಗ ಸತ್ಯನಾಥನೆಂದೆಂಬ ಘನ
ರೂಪನಖಿಳಕಲಾಪ ಸಲೆ ಸೌಖ್ಯಸಾಮ್ರಾಜ್ಯಲಕ್ಷ್ಮೀವಿನೋದಸದನ ।
ಚಾಪಲಾಕ್ಷಿಯರ ಸೋಲಿಪ ಗೆಲ್ಲಗಾಱ ವರ
ಮಾಪಸುತವಿಜಯಸಾಕಾರನುಱೆಭಕ್ತಿಕುಲ
ದೀಪ ಬಸವೇಶನಿಂ ಪಡಿಹೊನ್ನ ಪಡೆದು ಗಣಿಕೆಯರೊಳಿರುತೊಂದು ದಿವಸ ॥೨॥

ಸೂಳೆಸೌಗಂಧಿನಿಯನೆಂದಱಿಯೆ ನಿಂದವಳ
ಮೇಳಗಾಣುವೆನೆಂದು ನಱುವೂಗಳಂ ತುಱುಬ
ಭಾಳದೊಳ್ಬಸಿತವಿಟ್ಟಿರದೆ ಸರ್ವಾಭರಣವಿಕ್ಕಿ ಕಸ್ತುರಿಪುಣುಗನು ।
ತೋಳವೊದಲಿಂಗೊರೆದು ಕಿವಿಗೌಕಿ ಚಂದನವ
ನೋಳಿಯಿಂ ಪೂಸಿ ವಾಲಂಸುತ್ತಿ ಮೇಲುದಂ
ತಾಳಿ ಸಿಂಗರಿಸಿ ಹಡಪಾಳಿವೆರಸುತೆ ಬಂದನಂದು ನಲ್ಲರದೇವನು ॥೩॥

ಕರುವಾಡದಿಂದೆಸೆವ ಬಾಗಿಲಿಂದೊಳಪೊಕ್ಕು
ಬರೆ ಮದನಮಂತ್ರಶಾಲೆಯ ಮುಂದೆ ಕೆಳದಿಯ
ರ್ವೆರಸಿ ಸೌಗಂಧಿನಿಯುಂ ಇರಲವಳ ಹಾವ ಭಾವ ವಿಲಾಸ ವಿಭ್ರಮವನು ।
ಪರಿಕಿಸುತ್ತುಱೆ ಕಂಡು ಸೋಜಿಗಂಬೆತ್ತು ಶಂ
ಕರ ಬಲ್ಲನೋವೋ ಎನುತ್ತೆ ಬೆಱಗಾಗಿ ನಿಂ
ತಿರುತಿರಲ್ಸತ್ಯಣ್ಣ ಘನಲಿಂಗ ಸಂಯೋಗವಾಗಿ ಸಂಧಾನವಿಡಿದು ॥೪॥

ನೋಡಿಕೊಂಡಾ ಸುಗಂಧಿನಿಯೆಂದಳೆಲೆ ಚೆಲುವ
ರೂಡಿಸಿದ ಸವಿವಿಲ್ಲುಗಾಱನೆಂಬುದ ಕಂತು
ಮಾಡಿ ಮೋಹನದೇಳ್ಗೆಯಂ ಮೆಱೆವ ಮತವಸಂತವನಾವಡೀಗಲಣಿವ ।
ಕೂಡೆ ರೂವಿಗ ಜಯಂತನವ ಪೆಸರ್ಗೊಂಡು ಮಾ
ತಾಡಗುಡದುಱೆ ಮುಂದೆ ನಿಂದೆನ್ನಮನವನಲು
ಗಾಡತೊಚ್ಚತಗೊಂಡ ಸಿಂಗರಿಗನಿವನಾವನೆನೆ ಸತ್ಯನಾಥ ನುಡಿದ ॥೫॥

ಎಲೆ ಸುಗಂಧಿನಿ ನಿನ್ನಜಸಗಳ್ಕಿಬಂದು ನಾ
ನಿಲಬಿದ್ದೆ ನಿನ್ನಲರುಗಣ್ಣಂಬಿನಿಂದಲ
ಗ್ಗಲಿಪ ಕಬ್ಬಿನ ಬಿಲ್ಲವೀರ ಮೂಲೋಕಮಂ ಗೆಲುವುದೇನಾಶ್ಚರ್ಯವೆ ।
ಒಲವರವಿದಲ್ಲ ಕಂಗಳ್ಸ್ನೇಹದತಿ ಕೂರ
ಸಲೆ ಕಾವನಿಱಿಯುದುಱೆಕೊಲುವನೆಂದೆಂಬ ಬಲು
ಗೆಲಗಾಱತನವವಗೆ ನಿನ್ನಲಾಯ್ತಲ್ಲದೊಡೆ ಸುಡುಗಗುಂಟೇ ಸಹಸವು ॥೬॥

ಎಸೆವ ನಿನ್ನಯ ಮೋಹನಾಮೃತತರಂಗಿಣಿಯೊ
ಳೊಸೆದೆನ್ನ ನೇತ್ರಪಾಠೀನದಂಪತಿಗಳಂ
ದೆಸಕಗೊಂಡತಿವಿಲಾಸದೊಳೋಗಿ ಬೆರೆದಾಡುತ್ತೈದೆ ನೆಲಸಿರ್ಪವೆನಗೆ ।
ಬಸವಾಗದೆಯು ಮನಂಗಳುಪಲತ್ತಂ ಹೋದು
ದಸುವ ಬೆಂಬಿಡದಟ್ಟಿದಪೆನೆನ್ನ ಕಾಯ ಜೀ
ವಿಸುವಂತೆ ಮಾಡು ನೀನೆನೆ ಮೆಚ್ಚುತೊಚ್ಚತದಿ ನುಡಿದಳಾ ಸೌಗಂಧಿನಿ ॥೭॥

ಅಂತಹುದು ಜಾಣ ನಲ್ಲರದೇವ ನೀನಾಡಿ
ದಂತೆನ್ನ ಕಾಣ್ಬಂದುದೇ ದಿಟಮನಸ್ಸೆಂಬ
ಡೆಂತುಬಂದು(ದು) ದಿಟ(ಟಂ)ಪರಕಿಸಲ್ಕಸುವೀಗ ತೀವಿಬಂದುದು ಕೇಳ್ವಿಟ ।
ಕಂತುವಿಂಗಧಿಕರೂಪನೆ ಸೂಜಿಗಲ್ಲುಗಂ
ಡಂತೆ ಕಾಬ್ಬೊರ್ನನ್ನಾಡುವಂತೆ ನಿಮ್ಮಡಿಗಳೊ
ಲ್ದಿಂತು ಬಂದಿರಲೆನ್ನ ಮನ ಭಾವ ಕರಣ ನಲಿದಾಡಿ ನಿಮ್ಮೊಳತಾದವು ॥೮॥

ಇನಿಯಳೊಸದುಸುರ್ದ ಜಾಣ್ನುಡಿಗೊಲ್ದು ಸತ್ಯನಾ
ಥನು ಹಿಗ್ಗುತೊಣ(ತೋವೋ)ಲತಾಂಗಿ ಮಾತಿನ ಭಾವ
ವನುವಾದುದೆನೆ ಸುಗಂಧಿನಿಯೆಂದಳಿನ್ನಾಡಲೆಡೆಯಿಲ್ಲ ಕಂದರ್ಪನು ।
ಇನಿಗೋಲವಿಲ್ಗೆನಗೆ ಗಣೆದೊಡಚುತೆಸಲಿನ್ನ
ಮನವ ಮುಕ್ಕುರುಕೆ ಬೇಳಾದೆನೆಂದಡಿಗೆಱಗಿ
ಘನತವಕ ಮಿಗೆ ಸೆಱಗುವಿಡಿದು ಸೆಜ್ಜೆಯ ಮನೆಗೆ ತಂದಳಂದಾ ನಲ್ಲನ ॥೯॥

ತರಲೊಡನೆ ಬರ್ಪ ಸಖಿಯರ್ನೆವದಿ ಮೆಲ್ಲನೋ
ಸರಿಸೆ ಸಿರಿಮಂಚದೊಳು ಹಂಸತಳ್ಪದ ಮೇಲೆ
ಪರಮವಿಟಕುಲಚಕ್ರವರ್ತಿ ಸತ್ಯಣ್ಣ ಕುಳ್ಳಿರಲೆಸೆವ ಮೆಲ್ಲಡಿಗಳ ।
ನೊರಸಿ ತೊಳದುಱುವೊಗಕ್ಕೆಱೆದು ವೀಳೆಯಗೊಟ್ಟು
ಭರದಿ ಝುಮ್ಮನೆ ಪುಳಕವೇಱೆ ಕಳೆಯು ರವಣಿಸ
ನೆರೆದ ನಿಱು ಝುಲ್ಲನೆ ಬಿಡಲ್ತವಕದಿನಿಯನನು ಸಾರಿದಳು ಸೌಗಂಧಿನಿ ॥೧೦॥

ಕಾಮಕೇಳೀವಿಲಾಸೋದಯಕ್ಕನುರಾಗ
ತಾಮರಸವಲರೆ ತೀವೆಂಬ ನೈದಿಲ್ಮುಗಿಯೆ
ಕೋಮಲಮನಂಗಳೆಂದೆಂಬ ದಂಪತಿವಕ್ಕಿಗಳ್ನಲಿಯಲಿಂದ್ರಿಯಗಳ ।
ಸ್ತೋಮಾಂಶುಗಳ್ತವಕಗಱೆಯಲತಿ ಭೀತಿ ಜಾ
ರಾಮನುಜರೋಡೆ ಸಂದೇಹಗತ್ತಲೆ ಪರಿಯೆ
ರಾಮಗುಣಸತ್ಯಣ್ಣ ಸೌಗಂಧಿನಿಯ ಕೂಟವೆಸೆಯೆ ರವಿಯುದಯದಂತೆ ॥೧೧॥

ನಗೆವೆಳಗು(ಬೆಳಗು)ಬೆಳುದಿಂಗಳೊಳು ನೋಟದೊ
ಗ್ಗಿಗೆ ಜೊನ್ನವಕ್ಕಿಬೆಳತುಗ್ರದಳಪಿನಳವು ತಾ
ರಗೆ ಮೆಱೆವ ಕಿವಿಯೋಲೆಯೋಲೆಲಗಲಿದ ಜಕ್ಕವಕ್ಕಿಯೊಸರ್ವಿಂದುಕಾಂತ ।
ಮಿಗೆ ಬೆಳ್ಪುವೆತ್ತ ಚಂದನಲೇಪದಂಗ ಕ
ಮ್ಮಗೆ ತೋಱಲುಸುರು ತಂಗಾಳಿಯೆನಲಿಹ ಸುಗಂ
ಧಿಗೆ ಹರಣವೆನಿಸಿ ಸತ್ಯಣ್ಣ ಚಂದ್ರನೊಲಿರ್ದ ಭಾವ ಮೂಜಗಕೆ ಹೊಸತು॥೧೨॥

ಅನುವಱಿದು ಕಣ್ಬಳಕದಳವಱಿದು ತಳಿದ ಚಿಂ
ತನೆಯಱಿದು ನಿರ್ಮಿತಾಶೆಯನಱಿದು ಬಗೆಯಱಿದು
ಘನತವಕವಱಿದು ಸ್ವೈರಣೆಯಱಿದು ನಯವಱಿದು ಭಾವವಱಿದಿಚ್ಛೆಯಱಿದು ।
ಮನವಱಿದು ಬಲುಹುಮೆಲುಪಱಿದು ಲಾಲನೆಯಱಿದು
ನೆನಹಱಿದು ಲಲ್ಲೆಯಱಿದೆಚ್ಚಱೊಚ್ಚತನಱಿದು
ಬಿನದಮಿಗೆ ನೆರೆದು ಸತ್ಯಣ್ಣ ಸೌಗಂಧಿನಿಯೊಳಿರ್ದನದನೇವೇಳ್ವೆನು ॥೧೩॥

ಬಲಿಕೆ ಬೈಸಿಕೆ ಸಂಚುಲವಂಚನೆ ವಿಲಾಸವ
ಗ್ಗಲಿಕೆ ತಾಡನ ತರ್ಜನಾಂಗುಲಿಕ್ಷೇಪ ಸಂ
ಚಲಯೋನಿದಂತ ಮುದ್ರಾಭೇದ ಷೋಡಶಕಳಾಸ್ಥಾನ ಮೊದಲೆನಿಸುವ ।
ಸಲೆ ಕಾಮತಂತ್ರಪ್ರಯೋಗವಾರುಧಿಯೊಳು
ಜ್ವಲಿಪ ದಂಪತಿ ತೆರೆಗಳೆನಿಸುತಿರ್ವರ ಮನಂ
ಗೆಲವಾಗಿ ಸುರತಸುಖವಿಶ್ರಾಂತಿಯಿಂದಲಿರುತೊಂದು ದಿವಸ ॥೧೪॥

ಪರಮಲಿಂಗಾನುಸಂಧಾನಿ ಸತ್ಯಣ್ಣನೊಲು
ಸುರಸುಗಂಧಿನಿಯ ಗಾಢಾಲಿಂಗನಂ ಮಾಡು
ತಿರಲೆಡದ ತೋಳಿನೊಳು ಧರಿಸಿರ್ದ ಲಿಂಗವಾಕೆಯನೊತ್ತೆ ನ್ಯೈದೆಗೆವುತ ।
ತರಹರಿಸಲಱಿಯದಲಿರ್ದೇನೆನಲ್ಪ್ರಾಲಿಂಗ
ವಿರಿಸಲೊಂಡೆಡೆಯಿಲ್ಲವೇ ಇಲ್ಲ ನೀವಿದಿಂ
ತೆರೆಡ ನಡಸುವರಿದಱ ದೆಸೆಯಿಂದಲೆನ್ನ ತನು ಕಡುನೊಂದುದಿಂತೆಂದಳು ॥೧೫॥

ಎನಲು ಕೇಳುತ ಸತ್ಯನಾಥನಿಂತೆಂದನೆಲೆ
ವನಜಮುಖಿ ನಿನ್ನತನು ನೊಂದುದೆನಲೆನ್ನ ಮನ
ದನುರಾಗವಱತುದಿದಕೆಂತು ಮಾಡುವೆನೆಂದು ತಾನು ತನ್ನೊಳು ಜಾನಿಸಿ ।
ಅನುವಪ್ಪುದೊಂದು ದಾಯಂದೋಱಲುಬ್ಬಿ ನೀ
ನೆನದ ಕಜ್ಜವ ನಿನ್ನ ಮನಕೆ ಬಪ್ಪಂತೆ ಮಾ
ಳ್ಪೆನೆನುತ್ತಲೆದ್ದು ನಿಲೆ ಸೆಱಗುವಿಡಿವುತ್ತೊಡನೆ ನುಡಿದಳಾ ಸೌಗಂಧಿನಿ ॥೧೬॥

ಲಿಂಗವಂಗವ ಪೊತ್ತಿತೆನಲು ನೀನೊಂದುಸರಿ
ನಂಗವೋ ಕಾಮಕೇಳಿಯೊಳು ಮೋಹನಕಳೆಗ
ಳಿಂಗಿತವನಱಿದೊದಗುದಿರಲೆಗ್ಗು ಮಾಡೆ ನೆವದಿಂ ಪೋಪ ಜಾಣತನವೊ ।
ಸಿಂಗರಿಗ ಪೇಳೆನಲದಂತಲ್ಲ ನಿನ್ನಾಣೆ
ತುಂಗ ಬಸವೇಶ್ವರನ ಕೈಯೊಳೀ ಲಿಂಗಮಂ
ಸಂಗೊಳಿಸಿ ಬಪ್ಪೆನೆಂದಭಯವಿತ್ತಿರದೆ ನಡೆತಂದ ಸತ್ಯಣ್ಣನಂದು ॥೧೭॥

ಬಂದು ಬಸವೇಶ್ವರನ ಮನೆವೊಕ್ಕು ಮಂಟಪದೊ
ಳೊಂದಿರಲ್ಕೈದಿ ಬರಲದಿರೇಳುತಾನಂದ
ದಿಂದ ಕೈಮುಗಿದು ಮೆಲ್ಲಡಿಗೆಱಗಿ ಗದ್ದುಗೆಯನಿಕ್ಕಿ ಹೊಱತೊಲಗಿ ನಿಂದು ।
ತಂದೆ ಬಿಜಯಂಗೈದ ಕಾರಣವನೆನ್ನೊಳುಸು
ರೆಂದು ದಂಡಾಧೀಶ ಬಿನ್ನಪಂಗೆಯ್ಯಲೊಲ
ವಿಂದ ಜಂಗಮಲಿಂಗ ಸತ್ಯನಾಥನು ನುಡಿದ ಬೆಡಗನಿಂತೇಪೇಳ್ವೆನು ॥೧೮॥

ಸಂತಸ ಮಿಗಲ್ಸುಗಂಧಿನಿಯೊಳಿರುತಿರಲೀಯ
ಚಿಂತ್ಯ ಘನಲಿಂಗವಂಗವನೊತ್ತಲವಳು ಕಡು
ತಂತಿಗೊಂಡುಱೆ ಬಳಲಿ ನುಡಿಯಲೆಮ್ಮಯ ಮನಂ ನೊಂದುದದನೇನೆಂಬೆನು ।
ಅಂತು ಕಾರಣ ಸುರತನಂಗಸುಖವಿಡಱೆ ನಿಂ
ದುಂತೆ ಬಯಲಾಗೆ ಕೆಡವೆಮಗದೇಕಡೆ ನಿಮಗ
ದಂ ತಿಳುಪಿ ಲಿಂಗಗೊಟ್ಟಿರಿಸ ಬಂದಪೆನೆಂದಡಾ ಬಸವಭದ್ರ ನುಡಿದ ॥೧೯॥

ಶಿವಶಿವ ಮಹಾದೇವ ಸತ್ಯಸಂಗಮನಾಥ
ತವೆ ವರಬ್ರಹ್ಮಾಂಡಕೋಟಿಗಳನಂತವೆಂ
ಬವನೊಳತುಗೊಂಡತ್ಯತಿಷ್ಠದ್ದಶಾಂಗುಲಾತೀತಸಾಕ್ಷಿಕ ಲಿಂಗವ ।
ವಿವರಿಸುವಡೆಸೆವ ಬಳ್ಳಿಗೆ ಕಾಯಿ ದಿಮ್ಮಿತ
ಲ್ಲವೆನಿಪ್ಪ ನಾಡ ಗಾದೆಯ ಮಾತಿನಂತೆ ನೀ
ವವಧರಿಸಿರಲ್ನಿಮಗೆ ತಥ್ಯವೆಮಗಲ್ಲವಣುವೆಂತು ಬೆಟ್ಟವ ತಾಳ್ವುದು ॥೨೦॥

ಲೇಸನಾಡಿದೆ ಬಸವದಂಡನಾಯಕ ನಮ್ಮೊ
ಳೇಸು ಕರಲಿಂಗವೆಂತಿಹುದಿದಂ ತಾಳ್ದುಋವಿ
ಶೇಷಜಂಗಮ ಜಂಗಮಪ್ರಾಣಿ ನಿನ್ನ ಸತ್ಪ್ರಾಣವೀ ಲಿಂಗದಿರವ ।
ಸೂಸಂಚಲಿತದಿಷ್ಟವೆನಿಸಿ ಕರತಳದೊಳಾ
ವಾಸಗೊಳಿಸುತೆ ಸದಾ ಪೂಜೆಗೈವಧಿಕವಿ
ಶ್ವಾಸಮೂರುತಿ ಬಸವಭದ್ರ ನೀನಾದ ಕಾರಣವಿದಕ್ಕತ್ಯಾಶ್ರಯ ॥೨೧॥

ಆದಿಲಿಂಗವನಾದಿ ಬಸವ ತಾನೆಂದು ಘನ
ವೇದಶಾಸ್ತ್ರಾಗಮಃಪುರಾಣೋಪನಿಷದಿಂದ
ಲಾದರಿಸಿ ಕೇಳಿಹೆವದಲ್ಲದಭವನ ಸರ್ವಲೀಲೆಗಾಧಾರವಾದ ।
ಭೇದವೆನಿಸಿದವಿರಳತತ್ವ ಮೂರ್ತಿಯೆಂ
ದೋದುತಿರೆ ಸತ್ಪ್ರಾಣಲಿಂಗಕನ್ಯನೆ ನೀನು
ಪೋದಪೆನಿದಂ ಪಿಡಿ ಸುಗಂಧಿ ನೊ ದಪಳೆಮಗೆ ತಳುವಾದುದೆಂದುಸುರಲು॥೨೨॥

ಅಯ್ಯ ವಿಟರೂಪ ಸಂಗಮನಾಥ ಕಾಮಂಗೆ
ರಯ್ಯವೆನಿಸಿದ ಕಾಮ ರೂಢಿಸಿದ ಪರಸತಿಯ
ಕಯ್ಯಕನ್ನಡಿಯೆ ಲಿಂಗೇಂದ್ರಿಯಂಗಳ ನಿಜಾಂಗವೆ ಜಯ ಹಸಾದವೆನುತ ।
ಮುಯ್ಯಾನುತಿದಿರೊಳ್ಳೈತಂದು ಭಯಭಕ್ತಿಯಿಂ
ದೊಯ್ಯನೆ ಕರಂದೊಳೆವುತಾಂತಿರಲ್ಸತ್ಯನಾ
ಥಯ್ಯ ಲಿಂಗಂಗೊಡಲ್ಪಿಡಿದೆಬಿಗಿ ನಿಂದು ಬಸವೇಶ (ರ್ಗೆ) ಮತ್ತೆಂದರು ॥೨೩॥

ಬಿಡದಲನುಪಮಲಿಂಗಮಂ ಪೂಜೆಗೈದು ನೀ
ನೊಡನೆ ನೀನರ್ಪಿಸಿದ ಪರಮಪ್ರಸಾದಮಂ
ತಡೆಯದೆಮ್ಮಲ್ಲಿಗನುದಿನ ಕಳುಪೆನುತ್ತ ಬೀಳ್ಕೊಟ್ಟು ಘನತವಕದಿಂದ।
ಮೃಡಮೂರ್ತಿ ಸತ್ಯನಾಥನು ಬಂದು ಸೌಗಂಧಿ
ಯೊಡಗೂಡಿ ಸುಖಸಂಕಥಾವಿನೋದದೊಳು ತ
ತ್ತೊಡೆಯದೊಂದೆರಡು ಬರಿಸಂಗಳೆದು ಲಿಂಗಶೇಷಂಗೊಂಡಿರುತ್ತಿರಲ್ಕೆ ॥೨೪॥

ಇತ್ತ ಕಲ್ಯಾಣಪುರದೊಳಗೆಲ್ಲ ಸತ್ಯನಾ
ಥೋತ್ತಮನ ಕೀರ್ತಿಲತೆ ಬೆಳೆಯಿತಲ್ಲಿಯ ವರವು
ಹತ್ತು ಪದವೆತ್ತ ಚರಲಿಂಗದೊಳು ಸದ್ಭಕ್ತಸಂಕುಳದೊಳಂತಲ್ಲದ ।
ಮತ್ತದೂಷಕರ ತಾಣಂಗಳೊಳು ಹರದು ಹ
ಬ್ಬಿತ್ತು ಜಂಗಮವದಟಿ ಬೇರಿಂಗೆ ಹಾರೆಗೊಂ
ಬುತ್ತರಂ ತೋರ್ಪ ವೆನುತೆಲ್ಲ ತ್ರಿಪುರಾಂತಕಾಗಾರದೊಳು ಮೂರ್ತಿಗೊಂಡು
‖೨೫‖

ಕಂಡಿರೇ ಶರಣ ಸಂದೋಹವೀ ಪುರದೊಳು
ದ್ದಂಡಜಂಗಮನೊಬ್ಬ ತನ್ನ ಲಿಂಗವ ಬಿಟ್ಟು
ದಂಡೇಶಗೀಯೆ ಕೈಕೊಂಡದಟಿ ಶೇಷವೆನುತನುದಿನಂ ಕಳುಪಲುಂಬ ।
ಭಂಡದಿಂಡೆಯನಿರವ ಬಸವನೆಂಬವನು ಬಗೆ
ಗಂಡುಗೊಂಡಿತ್ತೆಮ್ಮ ಮನವೆನಲ್ಕದಕೆ ಮುಂ
ಕೊಂಡೋರ್ವ ಶಿವರೂಪನೆದ್ದು ಬಿಱುಗೋಪವೆಂದಾ ನುಡಿದನೆಂತೆಂದೆನೆ ‖೨೬‖

ಜಗದೊಳಗೆ ಭಂಡಗುರುವಿಗೆ ಭಂಡಶಿಷ್ಯನೆಂ
ಬೊಗುಮಿಗಿಲ ಗಾದೆಗೆಡೆಯಾಯ್ತಲಾ ಸತ್ಯಣ್ಣ
ಮಿಗಿಲು ಸೂಳೆಯರಡಿಗನವನಡಿಗ ಬಸವನವ ಕುಡಲು ತಾ ಕೊಳಲಪ್ಪುದೆ !
ತಗದೀಗ ಕರಸಿ ಭಂಗಿಸಿ ಲಿಂಗಮಂ ಕೊಂಡ
ಬಗೆಯ ಕೇಳುವೆವೆಂದೆನಲ್ಕಂತದಹುದೆಂದು
ಮೃಗಧರಸ್ವರೂಪ ಜಂಗಮಮೂರ್ತಿಯಂ ಕಳುಪಲ್ಕೈತಂದು ಮುಂದೆ ನಿಲಲು
‖೨೭‖

ಕಾಣುತನುಭವಮಂಟಪದೊಳಿರ್ದ ಜಂಗಮ
ಪ್ರಾಣಿ ಬಸವೇಶ ಬಂದಡಿಗೆಱಗಿ ನಿಂದು ನಿ
ರ್ವಾಣಸಾಕಾರಂಗೆ ಕೈಮುಗಿದು ಭದ್ರಾಸನಮನಿತ್ತು ಸಂತಸದಲಿ ।
ಹೂಣಿಸುತಿದೆ ನೀಬಿಜಯಂಗೈದಿರೆನಗೆ ನಿ
ರ್ಮ್ಮಾಣತಿಯದಾವುದೆನಗೆಂದ ಕೇಳ್ಫನಲಿಂಗ
ಜಾಣ ನೀನಾದ ದೆಸೆಯಿಂದ ಚರಲಿಂಗ ನಿನ್ನಂ ನೋಡೆ ಬರವೇಳ್ದರು ‖೨೮‖

ಎಂದು ಜಂಗಮಲಿಂಗ ನುಡಿಯಲಾನಂದದಿಂ
ದೊಂದಿೀಚೆಹನೆ ಚನ್ನಬಸವೇಶ ಜಗದೇವ
ತಂದೆ ಸೊಡ್ಡಳಬಾಚಿರಾಜಯ್ಯ ಮಧುವರಸಗಳು ಹಡಪದಪ್ಪರಸರು ।
ಅಂದು ಕೇಶವರಾಜ ಮೊದಲಾದ ಸರ್ವಗಣ
ಸಂದೋಹವೆರಸಿ ಶಿವರೂಪಬಸವೇಶ ನಡೆ
ತಂದು ತ್ರಿಪುರಾಂತಕಾಲಯವೆಯ್ದಿ ಚರಲಿಂಗದೆಡೆಗೆ ಸಾಷ್ಟಾಂಗವೆಱಗಿ ‖೨೯‖

ಹರುಷದಿಂದೆದ್ದು ಕೈಮುಗಿದು ಕೊಂಡಾಡಿ ಧಿ(ನಿಂ)
ಧಿರ ನಿ(ಲೆ)ಲೇ ದಂಡನಾಯಕ ಲೋಕದೊಳು ನಿನ್ನ
ಪರಿ ಹೊಸತು ಹರಿಸುರೇಂದ್ರಾದಿಗಳಿಗಳವಡದ ವೀರಶೈವಾಚರಣೆಯು ।
ನಿರತ ನಿನ್ನಲ್ಲಿ ಬೆಳಗಿತ್ತು ನೀವಂತಪ್ಪ
ವರನರಸಲೆಣ್ದಿಸೆಯೊಳಿಲ್ಲವೆಂದಣಕದಲಿ
ಚರಲಿಂಗವಾಡುತಿರಲಾ ಸಮಯದೊಳಗೊರ್ವ ಪರಿತಂದು ಮುಂದೆ ನಿಂದು ॥೩೦॥

ಕರಯುಗಳ ಮುಗಿಯುತಿಂತೆಂದನೀ ಪುರದೊಳ
ಚ್ಚರಿಗಂಡೆ ಬಸವದಂಡಾಧಿಪ (ಧೀಶ) ಕಮ್ಮತದ
ಹಿರಿಯಮಾರಯ್ಯ ಹೊಲದಲಿ ಸಂದನಿತ್ತ ಮಾರಬ್ಬೆ ಮನೆಯಲಿ ಸಂದಳು ।
ಅಱಿವಱಿದು ನೀರಹೊಳೆಯಲಿ ಗೌಡಿ ಸಂದಳೀ
ಪರಿಯಾಯ್ತು ರೋಗವಿನಿತಿಲ್ಲ ಮತ್ತೇನಿಲ್ಲ
ಹರ ಬಲ್ಲನೆನಲು ಜಂಗಮಮೂರ್ತಿಗಳ್ಬಸವಭದ್ರನಂ ಕೇಳಲೊಡನೆ ॥೩೧॥

ನಾನೆತ್ತ ಬಲ್ಲೆನವರಸುವ ಸಂಗಮನಾಥ
ನೀನಱಿವೆ ನಿನ್ನ ಶರಣರ್ಬಲ್ಲರದಱ ಸಂ
ಧಾನಮನದೆಂತೆನಲ್ಘನಲಿಂಗಯೋಗಿ ಸುಖಸಾಕಾರಸತ್ಯನಾಥ ।
ತಾನೈದೆ ಬಲ್ಲನವ ರತಿಗಳೆಡೆ ಚೆನ್ನಿಗನು
ಮಾನಿಸದನೊರ್ವನಂ ಕಳುಪಲೊಡನೀ ಹದನ
ನಾನಂದದಿಂದ ಪೇಳುವರೆಂಬೆನಲ್ನೆಗೆದ ಕೋಪಮಂ ಮನದೆಗೊಂಡು ॥೩೨॥

ಅಂತಾಗಲಲ್ಲೊರ್ವ ಭಕ್ತನಂ ಕಳುಪಲತಿ
ಸಂತಸದೆ ನಡೆತಂದು ಸತ್ಯನಾಥಯ್ಯನ ಗೃ
ಹಾಂತರಮನೆಯ್ದಿ ಕಂಡಡಿಗೆಱಗಿ ನಿಂದು ತತ್ಕಥನಮಂ ಪೇಳೆ ನಗುತ ।
ಅಂತು ಸತ್ಪ್ರಾಣಲಿಂಗಸ್ಥಲಂ ಮೂವಿಧಿಗೆ
ಬಂತಲಾ ಎಂದೋರ್ವರಂತಿರಲಿ ದಾಸಿ ನಿ
ಶ್ಚಿಂತಲಿಂಗಪ್ರಾಣಿ ಹೋಹೋ ಎನುತ್ತ ಕೊಂಡಾಡಿ ಮತ್ತಿಂತೆಂದನು ॥೩೩॥

ಆದೊಡಿರ್ವರ ಲಿಂಗಪಲ್ಲಟದಿ ಬಂದ ತ
ದ್ಭೇದಮಂ ಬಿಡಿಸಿಕೊಳಲೆದ್ದಪರು ದಂಪತಿಗ
ಳಾದರದೊಳವರ ಮನೆಯೊಳು ದಾಸಿ ತಾನೆದ್ದು ಬಪ್ಪಳೀ ಹದನ ನೀನು ।
ಹೋದ ಪರಿಯಲಿ ಪೇಳೆನುತ್ತ ಕಳುಪಲ್ಬಂದು
ಮೈದೆರೆಯದಭಿನಮಿಸಿ ನಿಂದು ಬಸವೇಶ ಮೊದ
ಲಾದವರ್ಕೇಳಲಾ ಪರಿಯ ಬಿನ್ನೈಸೆ ಚರಲಿಂಗ ನಸುನಗುತೆಂದರು ॥೩೪॥

ಕೇಳುಬಸವಾಂಕ ಸತ್ಯನ ಲಿಂಗಸಂಬಂಧ
ರಾಳಿಯಂ ನೀ ಬಲ್ಲೆ ನಿನ್ನೊಳಂಗಪ್ರಾಣ
ಮೇಳವಾದಂತೆ ಬೆರಸಿರ್ಪನಂತಲ್ಲದಾತನ ನಿಜಾಂತಸ್ಥ ನೀನು ।
ಸೂಳೆಗೊಲಿದಿಪ್ಪಮಂ ಬಿಟ್ಟು ನಿನ್ನಲ್ಲಿಟ್ಟು
ಹಾಳೊಡಲನಾಡದಾತನ ಬಿಡದೆ ಸರ್ವಯೋ
ಗಾಳಿಯಂ ನಡಸಿಕೊಂಡಿಪ್ಪ ಕಾರಣದಿ ನೀಬಲ್ಲೆ ನಿನ್ನಾತನನುವ ॥೩೫॥

ಏನೆಂಬೆನವನಿಗೀ ಪುರದ ಗಣಿಕಾವಾಟ
ತಾನೆ ಕೈಲಾಸವದಱೊಳಗೆ ಸಲೆ ನೆಲಸಿರ್ಪ
ರಾ ನಾಕವಧುಗಳವರೊಡಗೂಟವಮೃತರತಿಮೇಳ ಶಿವಯೋಗವೆನಿಸಿ ।
ಭೂನುತಮದಾದುದಂತಿಕ್ಕೆ ತನಗೇಕೆ ನಿ
ತ್ಯಾನಂದಲಿಂಗಸಂಧಾನ ವಾಗದ್ವೈತ
ಮಾನಗೆಟ್ಟಧಿಕ ಜಗಭಂಡಗೆಂದೆನೆ ಚೆನ್ನಬಸವೇಶನುಸುರ್ದ ವಚನ ॥೩೬॥

ವಚನ :—

ಬೊಬ್ಬೆಯ ಬಾಯಿ, ಬಾಚದ ಮಂಡೆ, ಮಿಾಱಿದ ಶರಣಂಗಲ್ಲದೆ ಇಲ್ಲ.
ಓಡಿನ ಊಟ, ಕಾಡಿನ ಲಕ್ಕೆ, ಮಿಾಱಿದ ಶರಣಂಗಲ್ಲದೆ ಇಲ್ಲ.
ವಿರಕ್ತೋವಾಥಯುಕ್ತೋ ವಾ ಸಸ್ತ್ರ್ಯಯಾದಿ ವಿಷಯೇಷ್ವಪಿ
ಪಾಪೈರ್ನೈವ ಪ್ರಲಿಪ್ಯೇತ ಪದ್ಮಪತ್ರಮಿವಾಂಭಸಾ ॥

ಎಂಬುದಾಗಿ ಕೂಡಲಚೆನ್ನಸಂಗಮದೇವ, ನಿಮ್ಮ ಶರಣರು ಮಲೆಯೊಳಗಿರ್ದಡೇನು? ಮೊಲೆಯೊಳಗಿರ್ದಡೇನು ?

ಘನಬೊಬ್ಬೆ ಬಾಯಿ ಬಾಚದ ಮಂಡೆಯೋಡಿಲುಂ
ಬನು ಕಾಡಿಲಕ್ಕೆ ಮಿಾಱಿದ ಮಹಿಮಗಲ್ಲದಿ
ಲ್ಲೆನಿಪುದು ವಿರಕ್ತಯುಕ್ತಂಗಂಗನಾದಿವಿಷಯೇಂದ್ರಿಯಾಲಾಪವಡಕೆ ।
ಇನಿತು ಪಾಪಮದಿಲ್ಲ ಕಂಜಪತ್ರೋದಕದೊ
ಲೆನಿಸಿರ್ಪಕೂಡಲಾ ಚೆನ್ನಸಂಗನಶರಣ
ನನುಮಿತ್ತಮಾಗಿ ಮಲೆಯೊಳು ಮೊಲೆಯೊಳಿರಲು ತಲೆವಿಡಿಯಿಲ್ಲ ನಿಗಮಾವಱಿಯೆ ॥೩೭॥

ಅಂತು ಹುತ್ತದಡೊಂಕು ಹಾವಿಂಗೆ ಸಸಿನವೆಂ
ಬಂತೆ ಸತ್ಯಗೆ ನಿಮಗೆ ಮೇಳವಲ್ಲದ ನಮ್ಮೊ
ಳಿಂತು ಮೆಚ್ಚರು ಲೋಕವೇನೆಂದು ೭ ಗೆಯದೆನೆ ಲೋಕವಿರಹಿತನು ಶರಣ ।

ನಂತೆ ಗಡ ಮತ್ತಪರ ಮಾತೇನು ಜೀಯ ಎನ
ಲಿಂತಿರಲು ಚೆನ್ನಬಸವಾಂಕ ದಂಡಾಧಿಪನ
ವಂತವಂ ಬಲ್ಲನಱಿಯದುದಿಲ್ಲವೆನೆ ಬಸವಭದ್ರ ಕೈಮುಗಿದೆಂದನು ॥೩೮॥

ಎಲ್ಲರಱಿವಂ ಬಲ್ಲತನವನೆನ್ನೊಳ್ಪುಟಿಸ
ಲಿಲ್ಲ ಘನಮೂರ್ತಿಸಂಗಮನಾಥ ನಿಮ್ಮಡಿಗ
ಳಲ್ಲಿ ಬೆರೆದಿಪ್ಪ ಕಿಂಕರರ ಕಿಂಕರ ನಾನೆನಲ್ಸತ್ಯಪೇಳ್ದ ಪರಿಯ।
ನೆಲ್ಲವಂ ನೀ ಬಲ್ಲೆ ಸಂದ ಮೂವರ ತರಿಸ
ಲಿಲ್ಲಿ ಕಂಡಪೆವದಱ ಬಗೆಯನೆನೆ ಬಸವೇಶ
ನಿಲ್ಲದುಱೆ ಹೊಱೆವಾಳರಂ ಕಳುಪಿ ತರಿಸಿ ಮುಂದಿಳುಪಿಸುತ್ತೇವೇಳ್ವೆನು ॥೩೯॥

ಅರರೆ ಸತ್ಯರದೇವನೊಲಿದು ಕಳುಪೀ ಭಾವ
ದಿರಕೆ ವಂದಿಸುತಲಾತುರದೊಳಿರ್ಪರಿಲಿಂಗ
ಪರಿಪಲ್ಲಟಂದಿಳುಪಿ ಧರಿಸಲವರೆದ್ದು ನಿಲ್ಲಿರಲೊಡನೆ ಮನೆಯ ದಾಸಿ।
ಹರುಷದಿಂದೆದ್ದು ತಮ್ಮಡಿಗೆವಂದಿಸಿ ನೋಟ
ಕರು ಕಂಡು ಜಯ ಜೀಯ ಶರಣು ಶರಣೆನುತಲ
ಬ್ಬರಿಸಿ ಬಸವೇಶಮೂವರುವೆರಸಿ ಚರಣಕೆಱಗುತ್ತಿರಲು ಮತ್ತೆಂದರು ॥೪೦॥

ಕಂಡೆವಱಿದೆಲೆ ಬಸವದಂಡನಾಯಕ ಫಣಿಪ
ಕುಂಡಲಂ ಬಲ್ಲನೀ ಗಂಡಪೆಂಡಿರನೀಗ
ಉಂಡಿಯಿಂ ಕಡೆ ನಿನ್ನಖಂಡಸತ್ಯನು ಕೇಳಖಂಡಲಿಂಗವನು ಬಿಟ್ಟು।
ಉಂಡುಂಡು ಸಟೆಯದಿಂಡೆಯನಂದದಿಂ ಪೊಱೆದು
ಕೊಂಡು ಜೀವಿಸದನೀ ಕಂಡುದೈ ಸಲೆ ದೋಷ
ವಂಡಲೆಯದಿಹುದೆ ಮುಂಕೊಂಡು ನುಡಿಯೆನಲು ಮನಗೊಂಡೊರೆದನೊಡೆಯ
ರೊಡನೆ ॥೪೧॥

ದೇವರವದಾರು ಲಿಂಗಪ್ರಸಾದಂಗೊಂಡು
ಜೀವಿಸಿದನೆನ್ನ ಚೆನ್ನಿಗ ಸತ್ಯನಾಥ ನೋ
ವೋವೊ ಲಿಂಗಪ್ರಾಣಿ ನಿಜಸಮಾಧಿಯೊಳು ಬೆರೆದಿರ್ಪ ಶಿವಯೋಗಿವಿಷಯ।
ಭಾವದೋಱದ ನಿರ್ವಿಕಾರಿಲೋಕದ ಬಿಱುಬು
ಗಾವಳಿಯ ನೇನಱಿಯದೇಕಾಂತವಾಸಿ ನಾ
ನೇವೆ ನಿನ್ನೊಮ್ಮೆ ತೋಱುವೆನವರ ಮಹಿಮಾವಿಲಾಸೋನ್ನತಿಯನೆನುತ್ತ ॥೪೨॥

ಬಸವದಂಡೇಶ ತನ್ನಯ ನಿಜಾಗಾರದಿಂ
ದೊಸದು ಚೆನನೆ (ಜೇನನೆಯ್) ರಸಾಂಗಾದಿ ಫಲ ಶಾಕಪಾ
ಕಸಮೇತವೆರಸಿ ಹೊಱೆವಾಳರಂತಿರಿಸಿ ಘನಲಿಂಗಕಿಯ್ಯದೆಯಂತದ ।
ನೊಸದು ನಿಜಲಿಂಗಕ್ಕೆ ತೋಱೆ ಸತ್ಯಣ್ಣಗಂ
ದೆಸಕದಿಂ ಕಳುಪಲದಿರೊಳ್ಕಂಡು ಮನದೊಳಾ
ಯಸಬಟ್ಟು ಬಸವ ಬಳಲಿದನಲಾ ಭಿನ್ನವಾಯ್ತೆನ್ನೇತಕೆನುತೇಳಲು ॥೪೩॥

ಕೆಟ್ಟೆನೇನಾದುದೊಚ್ಚತವಾದ ಪಾಪಿಯಂ
ಬಿಟ್ಟೆದ್ದೆ ಹತ್ತುವಸ್ಥೆಗಳಿಗೇಕಿಂ ಮಾಱು
ಗೊಟ್ಟೆ ಮಿಗೆ ಕಾವನ್ನೈಸರಲೊದಗಲೆನ್ನೊಳ್ಳೈದಾಣಂಗಳೆಂಬ ಗುರಿಯು ।
ನಿಷ್ಠೆಕೇಳಿನ್ನ ಹರಣಾಧೀಶ ನನಗೇನು
ಬಟ್ಟೆಯೆಂದಳುವ ಸೌಗಂಧಿನಿಯು ವೊಗದಿ ವೊಗ
ವಿಟ್ಟು ಮುಂಡಾಡಿ ಸೈತಿಟ್ಟು ನಿನಗಾ ರುದ್ರಕನ್ನಿಕಾಪದವಪ್ಪುದು ॥೪೪॥

ಎಂದು ಬೀಳ್ಕೊಟ್ಟು ಪರಮಾನಂದದಿಂದಲ್ಲೈ
ತಂದನೆನೇಂಬೆ ಕಾಮಾಗಮಸ್ಥಾನದೊಳು
ಸಂದ ನಖಪದವೆಂಟುತೆರದಿನಿರೆ ದಂತಕ್ಷತಂಗಳಂಗದಿ ರಂಜಿಸೆ ।
ಚೆಂದುಟಿ ಪೊದಳ್ದು ಮಿಗೆ ಪೊಸರಂಗು ಕಂಗೆಸೆಯೆ
ಬಂದುಮೌನದಿಂ ಚರಲಿಂಗಕೆಱಗುತ ಬಸವ
ನಂದು ಕೇಳ್ನಿನ್ನಭಕ್ತಿಗೆ ಬೇಸಱಾಯ್ತೆಂದ ವಿಟರೂಪ ಸತ್ಯನಾಥ ॥೪೫॥

ಎನಗೆ ಬೇಸಱು ತೋಱಿತೆಂತು ಚಿತ್ತೈಸು ಬೇ
ಗನೆ ಸತ್ಯನಾಥ ನೀನೆಂದಿನಂದದಿ ಲಿಂಗ
ಕನುವಿನಿಂದಿತ್ತು ಶೇಷಂಗಳುಪದಿಂದೆಮಗೆ ಬೋನಮಂ ಕಳುಪಲಹುದೆ ।
ಘನವೆನಿಸುವಂತೆಸ್ಥ ನಿನ್ನಿಂದ ತೋಱಿತೇ
ನೆನಲಕ್ಕು ಬಸವದಂಡಾಧೀಶ ಮರ್ತ್ಯದೊಳ
ಗಿನಿಸಿರಲ್ಬಾರದಿರೆ ನಿಲ್ಲಿ ನಿನ್ನಾಣೆ ಕೇಳೆಂದು ಮತ್ತಿಂತೆಂದನು ॥೪೬॥

ನಿನ್ನ ಕಯ್ಯೆಡೆಯೊಳಪ್ಪೆನ್ನ ಕಣ್ಣೆನ್ನ ಮನ
ವೆನ್ನ ಹರಣವನೆನ್ನ ಸುಖವನೆನ್ನೈಸಿರಿಯ
ನೆನ್ನ ನಿತ್ಯಾನಂದಮಯಲಿಂಗಮಂ ತೋಱಿಸೆನ್ನೆ ಸನುಮತಬಸವನು ।
ತನ್ನ ಕರತಳದೊಳೊಯ್ಯನೆ ತೋಱಲೀಕ್ಷಿಸುವ
ಲಿನ್ನು ನಾವೀ ಲಿಂಗದೊಳು ಪೊಕ್ಕಡೀ ಲಿಂಗ
ವಿನ್ನೋಡೆ ಕಂಗೊಂಬುದಱಿಯೆನುತ ಸತ್ಯಣ್ಣನುನ್ನತೋತ್ಸಾಹದಿಂದ ॥೪೭॥

ಬೀಜದೊಳಗಿಡಿದಿರದೆ ನವಕುಜಂ ಪೊಗುವಂತೆ
ರಾಜಿಸುವ ಸತ್ಯನಾಥನು ಮಹಾಲಿಂಗದೊಳು
ನೈಜಸುಖದಿಂದಡಗಲಾ ಲಿಂಗಶರಧಿಯೊಳು ಬೆಱಗಾಗಿವರಲಿನಂತೆ ।
ಮಾಜಹರರೂಪ ಬಸವನ ಬೆರಸಲಾ ಸುರಸ
ಮಾಜ ಹೂಮಳೆಗಱೆಯೆ ದೇವದುಂದುಭಿ ಮೊಳಗೆ
ಬಾಜಿಸುವ ಸಕಲವಾದ್ಯಾಡಂಬರದೊಳು ಜನರೈದೆ ಜಯ ಜಯ ಎನುತಿರೆ ॥೪೮॥

ಘನಹರುಷದಿಂದುಬ್ಬಿ ಚರಲಿಂಗವಂದು ಬಸ
ವನನಪ್ಪಿ ಮುಂಡಾಡಿ ಕೊಂಡಾಡಿ ಭಸಿತವಿ
ಟ್ಟನಘ ಮಾರಯ್ಯನವರಿಗೆ ವಿಭೂತಿಯ ಧರಿಸಿ ವರಸತ್ಯನಾಥನಡಿಗೆ ।
ಮನವೊಸೆದು ಶರಣು ಶರಣೆನುತಲುಱೆ ದಂಡಾಧಿ
ಪನ ಕಳುಪೆ ಶಿವಗಣಂಗಳುವೆರಸಿ ಸಂಭ್ರಮದೊ
ಳನುನಯದಿ ತನ್ನರಮನೆಗೆ ಬಂದನೆಂದು ನಂದೀಶ ಪ್ರಮಥರ್ಗೊರೆದನು ॥೪೯॥

ಅನುಬಂಧ ೫

ಈ ಗ್ರಂಥದಲ್ಲಿ ಉಲ್ಲೇಖವಾಗಿರುವ ವಚನಗಳ ಆಕರ.

[**ಸಂಕೇತ**:–ಬ. ವ.––ಬಸವೇಶ್ವರನ ವಚನಗಳು, ಮೂರನೆಯ ಮುದ್ರಣ; ಶೂ. ಸಂ. ಸಿ.––ಗೂಳೂರು ಸಿದ್ಧವೀರಣಾರ್ಯನ ಶೂನ್ಯಸಂಪಾದನೆ; ಶೂ. ಸಂ. ಕೆಂ.––ಕೆಂಚವೀರಣ್ಣೊಡೆಯಾದಿಗಳು ಸಂಗ್ರಹಿಸಿದ ಶೂನ್ಯ ಸಂಪಾದನೆ;

ಶೂ. ಸಂ. ಗು.––ಗುಮ್ಮಳಾಪುರದ ಸಿದ್ಧಲಿಂಗಯತಿಗಳು ಸಂಗ್ರಹಿಸಿದ ಶೂನ್ಯಸಂಪಾದನೆ. (ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಬಳಿ ಇರುವ ಓಲೆಯ ಪ್ರತಿ.) ; ಪ್ರ. ದೇ.––ಪ್ರಭುದೇವರ ವಚನಗಳು.]

ಸಂಧಿ	ವಚನಸಂಖ್ಯೆ	ಆಕರ
೨	೧	ಪ್ರ. ದೇ. ಪು ೮
,,	೨	ಬ. ವ. ಪು ೧
,,	೩	ಶೂ. ಸಂ. ಕೆಂ. ಪ ೨೩೩
,,	,,	ಶೂ. ಸಂ. ಸಿ. ಪು ೩೫೧
,,	೪	ಬ. ವ. ಪು ೧
,,	,,	ಶೂ. ಸಂ. ಕೆಂ. ಪ ೨೨೧
,,	೫	ಶೂ. ಸಂ. ಕೆಂ. ಪ ೨೩೨
,,	೬	ಬ. ವ. ಪು ೧
,,	೭	ಪ್ರ. ದೇ. ಪು ೬
,,	೮	ಶೂ. ಸಂ. ಸಿ. ಪು ೧೫೨
,,	,,	ಶೂ. ಸಂ. ಕೆಂ. ಪ ೧೦೦
,,	೯	?
,,	೧೦	ಶೂ. ಸಂ. ಕೆಂ. ಪ ೨೧೫ ಮತ್ತು ೧೮೧ ರಲ್ಲಿ ದೊರೆಯುವ ವಚನಗಳನ್ನು ಹೋಲಿಸಿ.
,,	ಪುಟ ೧೮ ಮತ್ತು ೧೯ ಹಾಡುಗಳು	?
,,	೧೧	ಬ. ವ. ಪು ೧೦೮
೪	೧	ಶೂ. ಸಂ. ಕೆಂ. ಪ ೫೨
,,	,,	ಶೂ. ಸಂ. ಗು. ಪು ೨೩
,,	,,	ಶೂ. ಸಂ. ಸಿ. ಪು ೭೩
,,	೨	ಬ. ವ. ಪು ೭೯ ?
,,	,,	ಶೂ. ಸಂ. ಕೆಂ. ಪ ೨೪೨
,,	೩	ಶೂ. ಸಂ. ಕೆಂ. ಪು ೨೪೩

ಸಂಧಿ	ವಚನಸಂಖ್ಯೆ	ಆಕರ
೫	೧	ಬ. ವ. ಪು ೬೭
೮	೧	ಬ. ವ. ಪು ೧೨೩
,,	೨	ಬ. ವ. ಪು ೧೩೬
,,	೩	,, ಪು ೫೫
,,	೪	,, ಪು ೧೨೧
,,	೫	,, ಪು ೬೪
,,	,,	ಶೂ. ಸಂ. ಕೆಂ. ಪ ೮೩
,,	೬	ಬ. ವ. ಪು ೧೧೦
,,	೭	,, ,,
,,	೮	,, ಪು ೭೭
,,	೯	,, ಪು ೬೫
,,	೧೦	ಶೂ. ಸಂ. ಕೆಂ. ಪ ೨೨೪
,,	೧೧	ಬ. ವ. ಪು ೧೦೯
,,	,,	ಶೂ. ಸಂ. ಗು. ಪ ೯೩
,,	೧೨	ಬ. ವ. ಪು ೬೫
,,	೧೩	?
,,	೧೪	ಬ. ವ. ಪು ೬೫
,,	೧೫	,, ಪು ೫೮
,,	೧೬	,, ಪು ೫೯
,,	೧೭	,, ಪು ೩೨
,,	೧೮	,, ಪು ೧೨೨
೯	೧	,, ಪು ೧೨೬
,,	೨	?
,,	೩	?
,,	೪	?
೧೦	೧	ಬ. ವ. ಪು ೧೨೮
,,	೨	?
೧೧	೧	?
,,	೨	?
೧೭	೧	ಬ. ವ. ಪು ೧೦೮
೧೯	೧	,, ಪು ೧೪
,,	೨	,, ಪು ೬೮
೨೨	೧	,, ಪು ೭೪
,,	೨	,, ?
೨೫	೧	,, ಪು ೮೭
೨೭	೧	,, ಪು ೧೧೬
,,	೨	,, ,,
,,	೩	,, ಪು ೧೧೫
೨೮	೧	,, ಪು ೭೨

ಸಂಧಿ	ವಚನಸಂಖ್ಯೆ	ಆಕರ
೨೮	೧	ಶೂ. ಸಂ. ಕೆಂ. ಪ ೭೯
,,	೨	ಬ. ವ. ಪು ೯೩
೨೯	೧	,, ಪು ೧೫
,,	೨	?
,,	೩	ಬ. ವ. ಪು ೯೮
,,	೪	,, ಪು ೯
,,	೫	,, ಪು ೧೦೮
,,	೬	?
,,	೭	?
೩೧	೧	?
,,	೨	ಬ. ವ. ಪು ೧೦೭
,,	೩	?
,,	೪	ಬ. ವ. ಪು ೧೧೬
,,	೫	?
೩೧	೬	ಬ. ವ. ಪು ೧೦
,,	೭	?
,,	೮	ಬ. ವ. ಪು ೭೫
,,	೯	,, ಪು ೫೫
,,	೧೦	,, ಪು ೫೪
,,	,,	ಶೂ. ಸಂ. ಕೆಂ. ಪ ೨೧೩
,,	೧೧	ಶೂ. ಸಂ. ಗು. ಪ ೮೬
೩೩	೧	ಬ. ವ. ಪು ೧೨೦
೩೪	೧	,, ಪು ೧೧೭
,,	೨ ಮತ್ತು ೩	ಚನ್ನಂಜೇದೇವರ ಬಸವಸ್ತೋತ್ರದ ವಚನಗಳು ಸಂ. ೧೦೫
,,	ಹಾಡುಗಳು ಪು ೩೫೮-೩೫೯	?
೩೫	೧	?
೩೮	೧	?
,,	೨	ಬ. ವ. ಪು ೧೩೫
೩೯	೧	?
,,	೨	ಬ. ವ. ಪು ೯
೪೨	೧	,, ಪು ೧೩೪
,,	೨	?
,,	,,	ಶೂ. ಸಂ. ಕೆಂ. ಪ ೫೦
೪೫	೧	ಬ. ವ. ಪು ೧೫೦
೪೮	೧	,, ಪು ೧೦೮

WD 4005—GBPM—500—19-10-49.